ಜಯಂತಿ

ಜನವರಿ ೫ ೧೯೪೨

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ ...... ವ್ಹಿ. ಪಿ. ಯಿಂದ ೩–೫–೦ ...... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮರು ಪಾಟೀಲ ಮಾಧವರಾಯರು

೪ನೆಯ ವರ್ಷ	ಜನವರಿ ೧೯೪೨	೮ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಬಾಳಗುರಿ (ಕವಿತೆ)	ಶ್ರೀಮತಿ ಎಲ್. ವಿ. ಕಾವೇರಮ್ಮ, ಮೈಸೂರು	೩೩೭
ಸಂಪಾದಕೀಯ	ಸಂಪಾದಕರು	೩೩೮
ಮಂಗನ ಮಲ್ಲಿನಾಥತನ	' ಮಲ್ಲಿನಾಥ '	೩೩೯
ಕಳೆದ ಮಹಾಯುದ್ಧದಲ್ಲಿ ಭಾರತೀಯರ ಸಹಾಯ (ರಾಜಕೀಯ)	ಶ್ರೀ. ವಾಳ್ವೇಕರ್ ಗುರುರಾಯರು, ಎಲ್‌ಎಲ್. ಬಿ.	೩೪೧
ರಾಷ್ಟ್ರ-ಯೋಗಿನಿ (ಕವನ)	ಶ್ರೀ. ' ವಿಜಯ ' ಗುಲಬುರ್ಗಾ	೩೪೪
ಶೀತದ ಕಳ್ಳ (ಸಣ್ಣಕತೆ)	ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ, ಕೊಡಗನೂರು	೩೪೫
ಒಮ್ಮೆಯೊ.. ಭಾವನೆಯೊ ? (ಉತ್ತರಪಕ್ಷ)	ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ	೩೪೭
ಅಳಿವಿನ ಅಳ (ಒಂದು ಹರಟೆ)	ಶ್ರೀ. ಕೋ. ರಾ. ಕೃಷ್ಣಮೂರ್ತಿ, ಬಿ. ಎ.	೩೫೩
ಸುಳಿಯುದಿರು ಪವನ (ಕವನ)	ಶ್ರೀ. ಕೊಟ್ಟೂರಗಿ ರಾಮಚಂದ್ರ, ವಿಜಾಪುರ	೩೫೫
ನನ್ನ ತಪ (ಕವನ)	ಶ್ರೀ. ಬಿ. ಎಚ್. ಶ್ರೀಧರಶರ್ಮ, ಬಿ. ಎ. (ಆನರ್ಸ್)	೩೫೫
ಧ್ರುವಬಾಬು (ಪ್ರವಾಸ ಕಥೆ)	ಶ್ರೀ. ಎಚ್. ಕೆ. ನಾಗಭೂಷಣರಾವ್, ಜಾವಗಲ್ಲು	೩೫೬
ಕೈ ತುತ್ತು ಬಾಯಿಗಿಲ್ಲ (ಸಣ್ಣ ಕಥೆ)	ಪಂಡಿತ ವಿಶ್ವೇಶ್ವರಶರ್ಮ, ಗೋಕರ್ಣ	೩೬೧
ಲಿಂಗಸೂಚಕ ಆನುವಂಶ್ಯ ಲಕ್ಷಣಗಳು (ವೈಜ್ಞಾನಿಕ) ..	ಶ್ರೀ. ಮಹಾಲೇಶ್ವರ ನಾಯಕ ತೊರ್ಕೆ, ಬಿ.ಎಸ್‌ಸಿ., ಬಿ.ಟಿ.	೩೬೫
ನನ್ನ ಪಶ್ಚಿಮ ಪ್ರವಾಸಾನುಭವದ ಯಾತ್ರೆ	ಶ್ರೀ. ಎಚ್. ಎಸ್. ಪಾಟೀಲ, ಎಂ.ಎ., ಬಿ.ಕಾಮ್.	೩೬೭
ನಮ್ಮ ಪ್ರಿಯರು—ಪ್ರಭಾವಿಗಳು (ಪುಂಡ ಪ್ರಭಾವಿಣ್ಯ) ..	' ಶ್ರೀರಂಗ '	೩೭೩
ರಾಶಿಂಬಕಳ ಕಥಾ ನಿರೂಪಣೆ (ವಿಮರ್ಶಾತ್ಮಕ)	ವಿದ್ವಾನ್ ಕೆ. ಎಲ್. ಎಸ್. ಉಪಾಧ್ಯಾಯ, ಕಾರ್ಕಳ	೩೭೫
ಸಾದರಸ್ವೀಕಾರ	.. ..	೩೭೭
ಅಖಿಲ ಭಾರತ ಸಾಹಿತ್ಯ ಸಮಿತಿ (ಒಂದು ಅವಲೋಕನ)	.. ..	೩೭೮
ನಗೀಗೆ ನೇವಿದ್ಯ	' ಸಕಲೀ ನಾರಾಯಣಾಚಾರ್ರು '	೩೮೦
ನಾಲ್ಕಾ ಸಿಟ್ಟಿನ ನೋಟ	' ನಿರೀಕ್ಷಕರು '	೩೮೧

ಹೊಸವರ್ಷದಲ್ಲಿ "ಜಯಂತಿಗೆ" ಚಂದಾದಾರರಾಗಿರಿ ; ಆನಂದ ಹೊಂದಿರಿ!

ಬರುವದು! ಕನ್ನಡನಾಡಿನ ಪ್ರತಿಯೊಂದು ಪಟ್ಟಣಕ್ಕೂ ಬರುವದು!!



ಸೊಲ್ಲಾಪುರದ ಪ್ಲಾಝಾ ಥಿಯೇಟರಿನಲ್ಲಿಯೂ ★ ಧಾರವಾಡದ ರೀಗಲ್ ಟಾಕೀಜಿನಲ್ಲಿಯೂ

★ ಜನೆವರಿಯ ಮೊದಲನೆಯ ವಾರದಲ್ಲಿ ತೋರಿಸಲ್ಪಡುವದು. ★

ನೋಡಿದವರೆಲ್ಲ ಆನಂದದಿಂದ ರೋಮಾಂಚಿತರಾಗಿ ಹೆಮ್ಮೆಹೊಂದಿದ ಕನ್ನಡ ಚಿತ್ರ !

ಧಾರವಾಡ, ಬೆಳಗಾಂವ, ಕಾರವಾರ, ಬಿಜಾಪುರ, ಸೊಲ್ಲಾಪುರ, ಮುಂಬೈ, ಪೂನಾ, ಸಾತಾರಾ,
ಕೊಲ್ಹಾಪುರ, ಸಾಂಗಲಿ ಮುಂತಾದ ಪ್ರಾಂತಗಳ

ಪ್ರಕಾಶಕರು:— ಕರ್ನಾಟಕ ಫಿಲ್ಮ ಡಿಸ್ಟ್ರಿಬ್ಯೂಟರ್ಸ್, ಬಾಗಲಕೋಟೆ.

ಸುದರ್ಶನ

(ತಿದ್ದಿ ಬೆಳೆಯಿಸಿದ ಎರಡನೆಯ ಆವೃತ್ತಿ)

ಈ ಸ್ವತಂತ್ರವಾದ ಸಾಮಾಜಿಕ ಕಾದಂಬರಿಯನ್ನು
ಬರೆದವರಾರು ಗೊತ್ತೆ?

'ಆನಂದಕಂದ!'

ಮೊದಲನೆಯ ಆವೃತ್ತಿಯ ಪ್ರತಿಗಳು
ಹೊರಹೊರಡುವುದರಲ್ಲಿಯೆ ಮುಗಿದುಹೋದುವು.
ಈಗಿನ ಈ ಎರಡನೆಯ ಆವೃತ್ತಿಯಲ್ಲಿ, ಅಲ್ಲಿ ಇಲ್ಲಿಯ ಬರೆಹದ
ಕೊರತೆ-ಕುಂದುಗಳನ್ನು ಸರಿಪಡಿಸಲಾಗಿದೆಯಲ್ಲದೆ,

ಒಂದು ಪ್ರಕರಣವನ್ನು

ಹೊಸತಾಗಿ ಬರೆದು ಸೇರಿಸಲಾಗಿದೆ. ರಸಘಟ್ಟಿಯಿದೊಂದು!
ಕೈಯಲ್ಲಿ ಒಂದು ಸಲ ಹಿಡಿದರೆ ಮುಗಿಸದೆ ಕೆಳಕ್ಕೆ ಇರಿಸ
ದಂತಹ ಅನುಭವ ಅನೇಕರದು. ಇಪ್ಪತ್ತು ಮೂವತ್ತು
ಸಲ ಓದಿಯೂ ತೃಪ್ತಿಪಡದ ಅನುಭವ ಇನ್ನು ಅನೇಕರದು!

ಸಾದಾ ಪ್ರ. ಬೆಲೆ ೦-೧೪-೦ ● ಕ್ಯಾಲಿಕೊ ಪ್ರ. ಬೆಲೆ ೧-೪-೦.

ಬೇಕಾದವರು ಜಯಂತಿ ಕಾರ್ಯಾಲಯಕ್ಕೆ ಬರೆಯಿರಿ!

ಕನ್ನಡ

ಸಾರ್ಥ ಜ್ಞಾನೇಶ್ವರೀ

ಸಚಿತ್ರ

೧ನೆಯ ಭಾಗ

೧ ರಿಂದ ೯ ಅಧ್ಯಾಯಗಳು

ಶ್ರೀಮದ್ಭಗವದ್ಗೀತೆಯ ಮೇಲೆ "ಜ್ಞಾನೇಶ್ವರರು"
ಮಹಾರಾಷ್ಟ್ರ ಭಾಷೆಯಲ್ಲಿ ಬರೆದ ಭಾವಾರ್ಥ-
ದೀಪಿಕೆ ಎಂಬ ಟೀಕೆಯ ಕನ್ನಡ ಅನುವಾದವು.

ಲೇಖಕರು

ಶ್ರೀನಿವಾಸ ಕೃಷ್ಣ ಕುಲಕರ್ಣಿ, ಸುನಗ

ಬೆಲೆ ೩ ರೂಪಾಯಿಗಳು. ಅಂಚೆಯವೆಚ್ಚ ಬೇರೆ

ಠೋಕ ಮತ್ತು ಕಿರುಕುಳ ಬೇಕಾದವರು ಕೆಳಗಿನ
ವಿಳಾಸಕ್ಕೆ ಪತ್ರ ಬರೆದು ಕೇಳಿಕೊಳ್ಳಬೇಕು.

ವಿಳಾಸ:—

ಮ್ಯಾನೇಜರ್
ಕರ್ನಾಟಕ ಪ್ರಿಂಟಿಂಗ್ ವರ್ಕ್ಸ್,
ಧಾರವಾಡ

ವೈ. ರಾ. ಸಾ. ಭೀಮರಾವ ಕಲಕೋಟಿ,
ರಿ. ಪೋಲೀಸ್ ಇನ್ಸ್‌ಪೆಕ್ಟರ್ ಇವರು ತಯಾರಿಸಿದ

मराठी पोलीस गाईड

सुधारून वाढविलेली मराठी आवृत्ति

★

**डिस्ट्रिक्ट, रेल्वे पोलीस, अबकारी पोलीस व
पोलीस पाटील यांना**

● अत्यंत उपयुक्त ●

रॉयल अष्टपत्री पृष्ठे ४२१.

किंमत फक्त २॥ रुपये.

★

ಕಿಮ್ಮತ್ತಿನ ಹೊರತಾಗಿ ವ್ಹಿ. ಪಿ. ಮತ್ತು ಟ. ಖ. ಪಟ್ಟೀಲ.

ಪುಸ್ತಕ ಸಿಕ್ಕತಕ್ಕ ಸ್ಥಳ:

ಮ್ಯಾನೇಜರ್,
ಕರ್ನಾಟಕ ಪ್ರಿಂಟಿಂಗ್ ವರ್ಕ್ಸ್, ಧಾರವಾಡ.

ಮಾರಾಟಕ್ಕೆ ತಯಾರಿದ್ದ ಪುಸ್ತಕಗಳು

ಶ್ರೀ. ಚಿಂತಾಮಣಿ ರಾಮಚಂದ್ರ ಸಹಸ್ರಬುದ್ಧೆ ಕೃತ

महागीता	संस्कृत	..	०- ८-०
काकदूतम्	,,	..	०- ६-०
राष्ट्रीयोपनिषत्	,,	..	०- २-६
राष्ट्रीय मोहमुद्गरम्	,,	..	०- १-०
प्रतिकार नाटकम्	,,	..	१- ०-०
अबदल-मर्दन-नाटकम्	,,	..	१- ०-०
राष्ट्रीय मंगलाष्टकम्	,,	..	०- ०-६
तिलक सूक्ति शतकम्	,,	..	०- ४-०
पन्हाळगडचा किल्लेदार	मराठी	..	०- ६-०
गड आला पण सिंह गेला	,,	..	०-१२-०
देशी दुमदुमे शतक	,,	..	०- २-०

ಕಿಮ್ಮತ್ತಿನ ಹೊರತಾಗಿ ಟ. ಖ. ವೆಚ್ಚಗೆ ಬೀಳುವುದು.

ವಿಳಾಸ:— ಮ್ಯಾನೇಜರ್,

ಕರ್ನಾಟಕ ಪ್ರಿಂಟಿಂಗ್ ವರ್ಕ್ಸ್, ಧಾರವಾಡ.

ಜಯಂತಿ

ಸಂಪುಟ ೪ | ೧ನೆಯ ಜನವರಿ ೧೯೪೨ | ಸಂಚಿಕೆ ೮

ಬಾಳಗುರಿ

★

ಶ್ರೀಮತಿ ಎಲ್. ವಿ. ಕಾವೇರಮ್ಮ, ಮೈಸೂರು

೧

ಕುಗ್ಗುತಿದೆ ದೇಹವಿದು, ಬಗ್ಗುತಿದೆ ನೆಲದೆಡೆಗೆ
ಸುತ್ತಿರುವ ಬನ್ನ-ಬೇಗುದಿಗಳಿಂದ ;
ಕಗ್ಗತ್ತಲೆಯು ನಿಡಿದು ಬಾಳಬಯಲಿನ ತುಂಬ
ಹಿಗ್ಗುತಿದೆ ವಿಧಿಯೆನ್ನ ನೋಡಿ ನೋಡಿ !

೨

ಕ್ಷಣಕೊಂದು ಬಗೆಬಗೆದು, ಕ್ಷಣಕೊಂದು ನುಡಿನುಡಿದು,
ಹೆಣ್ತನಕೆ ಮಣ್ಣೆರಚಿ ಕಣ್ಣಿದ್ದರೂ ;
ನಂಜುನಗೆ ಹರಿಸಿಹರು—ಹುಚ್ಚುಜನ ಕಂಡೆನ್ನ
ತಿಳಿತಿಳಿದು ನೊಂದಿರುವ ನನ್ನಿರವನು !

೩

ನಂಜುನಗೆ ಹರಿದಿರಲಿ, ಜಗವೆನ್ನದೂಡಿರಲಿ,
ನರನರಕು ಕಿಡಿನುಡಿಯು ಮುಳ್ಳೆಳೆಯಲಿ ;
ಮೇರುಪರ್ವತದಂಥ ಸ್ಥಿರತೆಯನು ನನ್ನೊಳಗೆ
ಶ್ರೀರಮಣನನುದಿನವು ತುಂಬುತಿರಲಿ !

೪

ಬೆದರುವೆನೆ ನಾ ಜಗಕೆ ? ಅದಿರುವೆನೆ ಜನರಿಂದೆ
ಬಹನಿಂದೆ-ಸಂದೆಯಾದ ಬಿರುಗಾಳಿಗೆ ?
ಬೆದರುವೆನು ಕಡೆತನಕ ಒಳನುಡಿಗೆ ; ಸತ್ಯಕ್ಕೆ
ಬಗ್ಗಿಸುತೆ, ತಗ್ಗಿಸುತೆ ಬಾಳನೆಲ್ಲಾ !

೫

ಬಿಸಿಯಿಲ್ಲ ಜೀವದಲಿ, ರಸವಿಲ್ಲ ಜೀವನದಿ,
ತನುವಿನಲಿ ಬಲವಿಲ್ಲದಿದ್ದರೇನು ?
ಹೇಡಿಯಂತಿರದೆದ್ದು ಕರ್ತವ್ಯಸಾಗರದಿ
ಈಸುತೀಸುತಲೆಂತೊ—ಕೊನೆಗಾಣುವೆ !

೬

ಮೇಲ್ಮಣ್ಣ ಮುಚ್ಚಿಹಾಕಿ ಒಳಗೊಂದು ಮಡುವಾಗಿ
ನೆಚ್ಚಿದರನೊಳಗೆಳೆವ ಜೌಗಿನಂತೆ
ನಾನಲ್ಲ ನನ್ನಾಣ್ಮ ! ನನ್ನ ನುಡಿನುಡಿಯೊಳಗು
ಕನ್ನಡಿಸಿದಂತಿಹುದು ನನ್ನ ಮನವೆ !

೭

ಕರ್ತವ್ಯದುಡಿಗೆಯನು ಕತ್ತರಿಸಿದ ನಿಮ್ಮೊಡಲ-
ನದರಿಂದಲೇ ಬಿಡದೆ ಸಿಂಗರಿಸಲು
ಜನ್ಮವಿದ ಮುಡಿಪಿಟ್ಟು ಕಡೆತನಕ ಹೋರುವೆನು,
ಇದೆ ಎನ್ನ ಬಾಳುವೆಯ ಹಿರಿಯ ಗುರಿಯು !



ಸಂಪಾದಕೀಯ

ಕರ್ನಾಟಕ ವಿದ್ಯಾವರ್ಧಕ ಸಂಘದ ಸುವರ್ಣ ಮಹೋತ್ಸವ

ಕಳೆದ ಡಿಸೆಂಬರ್ ೨೭ನೆಯ ದಿನ ಧಾರವಾಡದ ವಿದ್ಯಾವರ್ಧಕ ಸಂಘವು, ಅಖಿಲ ಕರ್ನಾಟಕದಿಂದ ನಿಜವಾಗಿಯೂ ಸುವರ್ಣಮಹೋತ್ಸವವನ್ನು ಜರುಗಿಸಿಕೊಂಡಿತು. ಕಳೆದ ಡಿಸೆಂಬರಿನಲ್ಲಿಯೆ ಈ ಉತ್ಸವ ನೆರವೇರಬೇಕಾಗಿತ್ತು; ಆದರೆ ಇದನ್ನು ಬರಿಯ ಉತ್ಸವವನ್ನಾಗಿಸದೆ 'ಸುವರ್ಣಯುಕ್ತ' ಉತ್ಸವವನ್ನಾಗಿಸಬೇಕೆಂದು ಸಂಘದ ಕಾರ್ಯಕರ್ತರೆಲ್ಲರ ಸಂಕಲ್ಪವಾದುದರಿಂದ, ಒಂದು ವರ್ಷ ಮುಂದೆ ಬಿದ್ದಿತು. ಸಂಕಲ್ಪದಂತೆ ಕಾರ್ಯವೇನೋ ಕೈಗೂಡಿತು. ಇಂತಹ ವಿಪರೀತ ಕಾಲದಲ್ಲಿಯೂ ಕನ್ನಡಿಗರ ಕೊಡುಗೈಗಳು ತುಂಬುಗೈಯಿಂದ ನೆರವನ್ನು ಕೊಟ್ಟವು; ಸಾಲದ ಶಿಂಶುಮಾರನ ಗಂಟಲೊಳಗಿದ್ದ ಸಂಘದ ಜೀವವನ್ನು ಹೊರಕ್ಕೆಳೆದುವು. ನಿಜವಾದ ಸುವರ್ಣಮಹೋತ್ಸವವಾಯಿತು.

ಐವತ್ತೊಂದು ವರ್ಷದ ಹಿಂದಣ ನಮ್ಮ ನಾಡಿನ ಪರಿಸ್ಥಿತಿಯನ್ನು ಕುರಿತು ವಿಚಾರ ಮಾಡಿದರೆ, ಅಂದು ಜನಮನದಲ್ಲಿ 'ಕರ್ನಾಟಕ' ಎಂಬ ಭಾವನೆಗೆ ಎಡೆಯೆ ಇರಲಿಲ್ಲ. ವಿಜಯನಗರ ರಾಜ್ಯದ ಪತನದೊಂದಿಗೆ ಕನ್ನಡಿಗರ ಆತ್ಮಜಾಗೃತಿಯೂ, ಸ್ವಸ್ವರೂಪ ಪರಿಜ್ಞಾನವೂ, ಸಂಘಟನಾಶಕ್ತಿಯೂ ಪತನವಾಗಿ ಹೋಗಿದ್ದುವು. ಆಳುವವರಾಗಿ ಬಾಳಬಲ್ಲೆವೆಂಬ ಭಾವನೆ ನಷ್ಟವಾಗಿಬಿಟ್ಟಿದ್ದಿತು. ಆಳಾಗಿ ಬಾಳುವುದೇ ನಮ್ಮ ಅದೃಷ್ಟದಲ್ಲಿದೆಯೆಂಬ ಕುರುಡುನಂಬಿಗೆ ಕಾಲಾಟ ನಡೆಯಿಸಿಬಿಟ್ಟಿದ್ದಿತು. 'ಮುಸಲ್ಮಾನೀಯ ದೊರೆಗಳೇನು, ಮರಾಠ ದೊರೆಗಳೇನು! ಪೇಶವೆಗಳಾದರೇನು, ಇಂಗ್ಲಿಷರಾದರೇನು! ಬಗ್ಗಿ ಸಲಾಮು ಮಾಡಿ ಬದುಕಿಕೊಂಡರಾಯಿತು' ಎಂಬ ನಿರಾಶಾಭಾವ ನೆಲೆಮಾಡಿಬಿಟ್ಟಿದ್ದಿತು. ಎಂತಲೆ ಸಾಮಾಜಿಕ ಸಂಘಟನೆಯನ್ನು ಮರೆತರು; ಸ್ವಭಾಷೆಯ ಶಿಕ್ಷಣದಿಂದ ದೂರವಾದರು; ಇದ್ದ ಇತಿಹಾಸ ಶಿಲಾಶಾಸನ-ತಾಮ್ರಶಾಸನಗಳಲ್ಲಿ ಉಳಿಯಿತು; ಹೆಸರು ಹೊಂದಿದ ಸಾಹಿತ್ಯ, ತಾಳೆಗರಿಯ ಕಡತಗಳಲ್ಲಿ ಕುಳಿತು ಗೆದ್ದಲುಗಳ ಪಾಲಾಗತೊಡಗಿದ್ದಿತು. ಮುನ್ನೂರು ವರ್ಷಗಳವರೆಗೂ ನಮ್ಮ ನಾಡಿನಲ್ಲಿ— ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ— ಇದೇ ಪರಿಸ್ಥಿತಿ ಅಖಂಡವಾಗಿ ನಡೆದುಕೊಂಡು ಬಂದಿದ್ದಿತು.

ಭಾರತದ ಪಕ್ಕ ಪ್ರಾಂತ್ಯಗಳಿಗೆ ದೇಶಭಕ್ತಿಯ ಪಾಠ ಕಲಿಸಿದ ಪಾಶ್ಚಾತ್ಯ ಶಿಕ್ಷಣ—ತಡ ಮಾಡಿಯೇ ಆಗಲಿ—ಕನ್ನಡಿಗರಿಗೂ ಅದನ್ನು ಕಲಿಸಿತು. ಪಕ್ಕ ಪ್ರಾಂತ್ಯಗಳಲ್ಲಿ ಹಬ್ಬುಗೆಯಿದ್ದಷ್ಟು ಆ ಶಿಕ್ಷಣ ನಮ್ಮಲ್ಲಿ ಇರುವುದಕ್ಕೆ ಅನುಕೂಲ ಪರಿಸ್ಥಿತಿಯಾಗ ಇರಲಿಲ್ಲವಾದುದರಿಂದ, ಎಲ್ಲಿಯೊ ಕೈ ಬೆರಳಿನಿಂದ ಎಣಿಸಲು ಬರುವಷ್ಟು ತರುಣರು ಮಾತ್ರ ಇಂಗ್ಲಿಷ್ ಉಚ್ಚಶಿಕ್ಷಣವನ್ನು ಅಂದು ಪಡೆದುಕೊಂಡರು. ಅದರಿಂದಲೆ ಅವರಲ್ಲಿ ದೇಶಾಭಿಮಾನ ಮೂಡಿತು; ಆ ದೇಶಾಭಿಮಾನದ ಗರ್ಭದಲ್ಲಿ ಹುದುಗಿದ್ದ ಕರ್ನಾಟಕತ್ವದ ಭಾವನೆಯು ಬಳ್ಳಿಯೂ ಒಳಗೊಳಗೆಯೆ ಕುಡಿಯಿಟ್ಟಿತು. ಆ ಭಾವನೆಯ ಬಳ್ಳಿಯ ಫಲವೇ 'ಕರ್ನಾಟಕ ವಿದ್ಯಾವರ್ಧಕ ಸಂಘ'! ಈ ಸಂಘದ ಕನಸುಗಾರರೆಂದರೆ ಅಂದಿನ ಕನ್ನಡ ತರುಣರ ಪ್ರತಿನಿಧಿಗಳಾದ ದಿವಂಗತ **ರಾಮಚಂದ್ರ ಹನುಮಂತ ದೇಶಪಾಂಡೆ ಎಂ. ಎ. ಅವರು.** ಕರ್ನಾಟಕದಲ್ಲಿಯ ಎಂ. ಎ. ಪದವೀಧರರಲ್ಲಿ ಅವರು ಮೊದಲನೆಯವರಾದುದರಿಂದ 'ಎಂ. ಎ. ದೇಶಪಾಂಡೆ' ಎಂಬ ಹೆಸರಿನಿಂದಲೆ ಅವರು ಗುರುತಿಸಲ್ಪಡುತ್ತಿದ್ದರು. ೧೮೯೦ರಲ್ಲಿ ಅವರ ಕನಸು ನನಸಾಗಿ ಸಂಘದ ಸ್ಥಾಪನೆಯಾಯಿತು. ಹೊಸ ಕನ್ನಡ ನಾಡಿನ ಕಟ್ಟಡದ ಕೋಣ ಶಿಲಾಪ್ರತಿಷ್ಠಾಪನೆಯೆ ಈ ಕಾರ್ಯವೆಂದು ಹೇಳಬಹುದು. ಸಂಘದ ಸ್ಥಾಪನೆಯ ಕಾಲದಲ್ಲಿಯೂ ಬೇರೆ ಬೇರೆ ಸಂಘದ ಕಾರ್ಯಸಂದರ್ಭದಲ್ಲಿಯೂ ದಿವಂಗತ ರಾ. ಹ. ದೇಶಪಾಂಡೆಯವರು ಆಡಿದ ಮಾತುಗಳನ್ನು ನೋಡಿದರೆ, ನಿಜವಾದ 'ಕರ್ನಾಟಕತ್ವದ ದ್ರಷ್ಟಾರರು' ಅವರೇ ಎಂದು ಯಾರೂ ಒಪ್ಪುವಂತಿದೆ.

ವಿದ್ಯಾವರ್ಧಕ ಸಂಘ ಅಖಿಲ ಕನ್ನಡದ ಉನ್ನತಿಯ— ಅಖಿಲ ಕನ್ನಡದ ಸಂಘಟನೆಯ— ಮಹೋದ್ದೇಶದಿಂದಲೆ ಹೊರಟುದು. ಕ್ರಮವರಿತು ನಿರಂತರವಾದ ಉತ್ಸಾಹದಿಂದ ಅದು ಕಾರ್ಯ ಮಾಡುತ್ತ ಬಂದಿದ್ದರೆ 'ಕನ್ನಡ ಸಾಹಿತ್ಯ ಪರಿಷತ್ತು' ಎಂಬ ಬೇರೆಯ ಸಂಸ್ಥೆಯ ಆವಶ್ಯಕತೆ ಕನ್ನಡಿಗರಿಗೆ ಎನಿಸುತ್ತಿದ್ದಿತೊ ಇಲ್ಲವೊ! ಆದರೆ ಉಚ್ಚಶಿಕ್ಷಣ ಪಡೆದ ಕನ್ನಡ ತರುಣರೆಲ್ಲರೂ, ಅಂದಿನ ಯುಗಧರ್ಮಕ್ಕನುಸರಿಸಿ ಸರಕಾರದ ನೌಕರಿಗಳಲ್ಲಿ ಸೇರಿಕೊಳ್ಳತೊಡಗಿದುದರಿಂದ, ಸಂಘದ ಪ್ರಾರಂಭದ ಹುರುಪು ಬಹಳ ಕಾಲ ಬಾಳಲಿಲ್ಲ. ಅಂದಿನ ಒಬ್ಬಿಬ್ಬರ ಉತ್ಸಾಹ ಸಂಘಸ್ಥಾಪನೆಗೆ ಕಾರಣವಾಯಿತು; ಮುಂದೆ ಮತ್ತೆ ನಾಲ್ವರ ಉತ್ಸಾಹ—ಸಾಲಮಾಡಿಯಾದರೂ—ಸಂಘಕ್ಕೊಂದು ಕಟ್ಟಡವನ್ನೊದವಿಸಲು ಕಾರಣವಾಯಿತು. ಅಷ್ಟರಲ್ಲಿಯೆ ದೇಶದಲ್ಲಿ, ಭಾರತ ಸ್ವಾತಂತ್ರ್ಯದ ಬಗೆಗೆ ಹೂಡಿದ ಅಸಹಕಾರ ಚಳವಳಿಯು ಕಡೆಗೆ ಕನ್ನಡ ತರುಣರ ಕಣ್ಣು-ಮನಸ್ಸು ಕೇಂದ್ರೀಕರಿಸಿದುದರಿಂದ, ಅದರ ಹುಯಿಲಿನಲ್ಲಿ ಸಂಘದಂತಹ ಸಾಂಸ್ಕೃತಿಕ ಸಂಸ್ಥೆಯ ಕಾರ್ಯವು ನಿಸ್ತೇಜವಾಗಿ ಹೋಯಿತು. ಸಾಲದ ಹೊರೆ-ಜನತೆಯ ದುರ್ಲಕ್ಷ್ಯಗಳಿಂದ, ಸಂಘದ ಚಟುವಟಿಕೆ ಕೆಲವು ದಿನಗಳ ವರೆಗೆ ಕುಂಠಿತವಾಯಿತು. ಕೇವಲ ಕಟ್ಟಡವೊಂದಿದೆಯೆಂದೂ, ಸಾಲ ಕೊಟ್ಟ ಸಾಹುಕಾರರು ಸಹಾನುಭೂತಿಯಿಂದ ನೋಡಿದರೆಂದೂ, ಸಂಘ ಐವತ್ತು ವರ್ಷಗಳ ತನ್ನ ಆಯುಷ್ಯವನ್ನು ದಾಟಿ ಬದುಕಿಕೊಂಡಿತೆಂದು ಹೇಳಿದರೆ ಸ್ವಲ್ಪವೂ ಅತಿಶಯೋಕ್ತಿಯೆನಿಸದು.

(೩೪೦ನೆಯ ಪುಟದ ಅಡಿಯಲ್ಲಿ ನೋಡಿರಿ.)

೧. ಮಂಗಸಂಗ್ರಹ

ಡಿಸೆಂಬರ್ ತಿಂಗಳಲ್ಲಿ ನೋಡಿದಲ್ಲೆಲ್ಲ ಸಮ್ಮೇಳನಗಳೆ ಜರುಗುವುವಷ್ಟೆ. ಈ ಸಮ್ಮೇಳನಗಳ ಗೂಢವೇನು—ಎಂದು ಅನೇಕ ವಾಚಕರು, ವಾಡಿಕೆಯಂತೆ ಮಂಗರಾಯನಿಗೆಯೆ ಕೈಮುಗಿದು, ಕರುಣಿಸಬೇಕೆಂದಿದ್ದಾರೆ. ಅದಕಾಗಿ ಮಂಗರಾಯನು ಈ ಕೆಳಗೆ ಕಾಣಿಸಿದಂತೆ ಸಮ್ಮೇಳನ ಕೋಶವನ್ನು ಕೊಡುತ್ತಲಿದ್ದಾನೆ—ಚಿತ್ತೈಸಬೇಕು.

ಅಧ್ಯಕ್ಷ— ಮಂದಿ ಕೇಳಲಿ ಕೇಳದಿರಲಿ, ಎಲ್ಲರಿಗಿಂತ ಹೆಚ್ಚು ಉದ್ದುದ್ದ ಮಾತನಾಡುವವ

ಸ್ವಾಗತಾಧ್ಯಕ್ಷ— ಮಂದಿಗೆ ಕೇಳಿಕೊಂಡು ಮುಂಚೆಯೆ ಮಾತನಾಡುವ ಅನ್ಯಜ್ಞಾನವೃದ್ಧ ಅರ್ಥಾತ್ ತನ್ನ ವಯೋವೃದ್ಧ.

ಪ್ರತಿನಿಧಿ— ಪ್ರತಿಸಲವೂ ಸಿದ್ಧಮಾಡುವ ಮಹಾಪ್ರಾಣರು; ಅಥವಾ ನಿಧಿಗೆ ಪ್ರತಿಯಾಗಿ ಎಂದರೆ ಠಕ್ಕಟಿಯಾಗಿ ಬಂದವರು.

ಪ್ರೇಕ್ಷಕರು— ಕೇಳಿಸದಿದ್ದುದಕ್ಕೆ ಏಕಾಗ್ರತೆಯಿಂದ ಕಣ್ಣುಮುಚ್ಚಿ ನೋಡುವವರು.

ಗಠ್ರಾವಳಿ— ಕೆಳಗೆ 'ಗೊತ್ತುವಳಿ' ಯನ್ನು ನೋಡಿರಿ.

ಗೊತ್ತುವಳಿ— ಗೊತ್ತಾಗಿ ಗೊತ್ತಾಗಿ ಅಳಿಯುವಂತಹದು.

ವಿಷಯನಿರ್ಧಾರಕ ಸಮಿತಿ— ಹೋದ ವರ್ಷದ ವಿಷಯಗಳನ್ನು ಪರಿಶೋಧಿಸುವ ಪಂಡಿತರ ಕೂಟ.

(ಟೀಪು:— ಒಮ್ಮೊಮ್ಮೆ ಇದಕ್ಕೆ subjects committee ಎನ್ನುವುದುಂಟು; ಆದರರ್ಥ, committee with no objects ಎಂದು ತಿಳಿಯತಕ್ಕದ್ದು.)

ಆಭಾರಮನ್ನಣೆ— ಅಹೋರೂಪ ಮಹೋಧ್ವನಿ.

ಸಂತೋಷಕೂಟ— ಮಿಕ್ಕವರನ್ನು ಬಿಟ್ಟೆವಲ್ಲಾ ಎಂಬ ಸಂತೋಷಕ್ಕಾಗಿ ಮಾಡುವ ಊಟ.

ಸಮಾರೋಪ— ಪ್ರೇಕ್ಷಕರ ಪಶ್ಚಾತ್ತಾಪ.

ಈ ಸೂತ್ರದಶಿಯನ್ನರಿತವರಿಗೆ ಸಮ್ಮೇಳನ ಮೋಕ್ಷ ದೊರೆವುದು. ಮುಂತಾಗಿ ಇತ್ಯಾದಿ ಇತಿ ಶ್ರೀ ಶ್ರೀ ಶ್ರೀ.

* * *

೨. ಬೋಸರ ಭೂತ-ಭವಿಷ್ಯ

ಇತ್ತಿತ್ತಲಾಗಿ ಮಂಗರಾಯನು ವಾಚಕರಿಗೆ ಫೆಡರಲ್ ಕೋರ್ಟು ಎನಿಸಿದ್ದಾನೊ ಏನೊ? ಯಾಕೆಂದರೆ, ಗಾಂಧೀ ಸರಕಾರ ಮತ್ತು ಕೇಂದ್ರ ಸರಕಾರ ಇವೆರಡರ ವಿರುದ್ಧ ತಕರಾರುಗಳನ್ನು ಮಂಗರಾಯನೆದುರಿಗೆ ಕಳುಹಿಸತೊಡಗಿದ್ದಾರೆ ಈ ವಾಚಕಮಹಾಶಯರು! ಉದಾಹರಣಾರ್ಥವಾಗಿ, ಬಾಬು ಸುಭಾಸ ಬೋಸರ ವಿಷಯ. ಕೇಂದ್ರ ಸರಕಾರದವರು, ಬೋಸರು ಬರ್ಲಿನ್‌ನಲ್ಲಾಗಲಿ ರೋಮದಲ್ಲಾಗಲಿ ಇದ್ದಾರೆಂದು ಹೇಳಿಲ್ಲವೆ? ಆದರೆ 'ಸತ್ಯವನ್ನೆ ಅಹಿಂಸೆಯಿಂದ ನೋಡುವ ವಾನರವೀರಾ, ಮಂಗಮತಿಧೀರಾ, ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು?' ಎಂದು ವಾಚಕರ ಹಂಬಲದ ಪ್ರಶ್ನೆ. ವಾಚಕಮಹಾಶಯಾ, ಮಂಗರಾಯನಿಗೆ ಡಿಫೆನ್ಸ್ ಆಫ್ ಇಂಡಿಯಾ ಕಾಯಿದೆ ಗೊತ್ತಿಲ್ಲವೆಂದು ತಿಳಿದಿರುವೆಯಾ? ಅಥವಾ—ಪಾಪ!— ನಿನ್ನ ಕುತೂಹಲವಾಗಲಿ ತೃಪ್ತಿಯಾಗಲಿ ಅಷ್ಟೊಂದು ಘನವಾಗಿದ್ದರೆ ಕೇಳು! ಫಾರ್ವರ್ಡ್ ಬ್ಲಾಕ್ ಪಕ್ಷದ ನಾಯಕನು ಪಶ್ಚಿಮಗಾಮಿಯಾಗಬಹುದೆ? ಅಥವಾ—ಹೀಗಿರಬಹುದೆ? ಬ್ರಿಟಿಶರ ದಂಡನೆಯಿಂದ ಇಂದಿಲ್ಲ ನಾಳೆ ಪಾರಾಗಬಹುದು, ಆದರೆ ಮಹಾತ್ಮರ ದಂಡನೆಯಿಂದ ಬಿಡುಗಡೆಯೆ ಇಲ್ಲ ಎಂಬ ಹೆದರಿಕೆಯಿಂದ ಸುಭಾಷರು—ಅಥವಾ, ಮಹಾತ್ಮರ ಅನುಗ್ರಹವನ್ನು ಮರಳಿ ಸಂಪಾದಿಸುವುದಕ್ಕೆ ಬೋಸರು ಹೃದಯಪರಿವರ್ತನದ ಪ್ರಯೋಗ (experiment in change of heart) ವನ್ನು ಹಿಟ್ಲರನ ಮೇಲೆ ಮಾಡಲು ಹೋಗಿರಬಹುದೆ? ಅಥವಾ—ಸುಭಾಷರು ಸ್ತ್ರೀವೇಷದಲ್ಲಿ ಪಾರಾದರೆಂಬ ಸುದ್ದಿ ಇದೆಯಷ್ಟೆ! ಅದೇ ಸತ್ಯದ ದ್ಯೋತಕವಾಗಿರಬಹುದೆ? ಅಥವಾ, ಸತ್ಯಾಗ್ರಹಿಯಾದರೆ ಇಂದಿಲ್ಲ ನಾಳೆ ಬಿಡುಗಡೆಯಾದೀತೆಂಬ ಬೇಜಾರದಿಂದ ಸದ್ದಿಲ್ಲದೆ ಸರಕಾರದೊಡನೆಯೆ ಸಂಚುಮಾಡಿ ಸುಭಾಷರು ಅಜ್ಞಾತ ಬಂಧವಾಸವನ್ನು ಭಾರತದಲ್ಲಿಯೆ ಭೋಗಿಸುತ್ತಿರಬಹುದೆ? ಅಥವಾ—ತಲೆ ತುರಿಸುವುದು ಮಾನವ ಸ್ವಭಾವವಾದ್ದರಿಂದ, ಈ ಎಲ್ಲ ಗೊಡವೆಯನ್ನೆ ಬಿಟ್ಟು ಮೈತುರಿಸಬಹುದೆ ಮಂಗರಾಯ? ಅಷ್ಟೇಯಾಗಲಿ—ಎಂದರೆ ಚಪ್ಪಾಳೆ ಹೊಡೆಯಿರಿ!

* * *

೩ 'ಮಂಗ-ಕೊಂಚ-ತಂತ್ರ'

ಬಕಾಸುರನು ಬಹಳೇ ಬುದ್ಧಿವಂತನಾಗಿದ್ದನು. ಅವನ ಹಾವಳಿಗೆ ಭಯಭೀತರಾದ ಜನರು

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,
೬ ಆಣೆಗೆ ಒಂದು ಸೆಟ್ಟು.

ಮಿಕ್ಕ ಬ್ಲೇಡುಗಳಿಗಿಂತ ಚೊಕ್ಕಟ!
ಚರ್ಮ ಉರಿಯುವುದಿಲ್ಲ. ಕಪ್ಪಾಗುವುದಿಲ್ಲ.

‘ ಬಕೋತ್ತಮಾ, ನೀನು ಮಾಡಿದರೆ ನಿನ್ನ ಹಾವಳಿಯಿಂದ ಮುಕ್ತರಾಗುವೆವು ? ’ ಎಂದು ಮೊರೆ ಇಟ್ಟರೆ, ‘ ಬಾಂಧವರೆ, ಬೆದರಬೇಡಿರಿ. ನಾನು ನನಗಾಗಿ ತಿನ್ನುವುದಿಲ್ಲ. ನನ್ನ ದೇಶದವರು ಕೂಳು ಇಲ್ಲದೆ ಎಷ್ಟು ಕಂಗಾಲರಾಗಿದ್ದಾರೆಂಬುದನ್ನು ತೋರಿಸುವುದಕ್ಕೆ ನಾನು ಕಂಡದ್ದನ್ನು ತಿನ್ನುತ್ತಲಿದ್ದೇನೆ. ನಿಮ್ಮ ಅನ್ನವನ್ನು ಕಸಿದುಕೊಳ್ಳಬೇಕೆಂಬ ಸ್ವಾರ್ಥವೃತ್ತಿ ನನಗಿಲ್ಲ, ನೀವೂ ನನ್ನ ಹೊಟ್ಟೆಯಲ್ಲಿಯೆ ಇರುವಿರಿ ಎಂಬ ಪರಮಾರ್ಥವೃತ್ತಿಯಿಂದ ನಾನು ನಿಮ್ಮ ಬಂಡಿಯನ್ನವನ್ನು ಬಕ್ಷರಿಸುತ್ತಿದ್ದೇನೆ ’ ಎಂದು ನಯವಾಗಿ ಸಮಾಧಾನ ಹೇಳುತ್ತಿದ್ದ ಬಕಾಸುರ. ಒಂದು ದಿನ ‘ ಬಕಾಸುರಾ, ಬಂಡಿಯನ್ನಶೂರಾ, ನಮ್ಮ ನಗರವನ್ನು ಇನ್ನಾದರೂ ಬಿಟ್ಟು ಮತ್ತೊಂದು ನಗರದಲ್ಲಿ ನಿನ್ನ ತತ್ತ್ವದ ಪ್ರಚಾರ ಮಾಡಬಾರದೆ?’ ಎಂದು ಪ್ರಜೆಗಳು ಬೇಡಿಕೊಂಡರು. ಆಗ ಬಕಾಸುರನು ಗಹಗಹಿಸಿ ನಕ್ಕು, ‘ ಎಲವೊ ಹೇಡಿಗಳಿರಾ ! ಈ ಬಕಾಸುರನು ನಿಮ್ಮ ಮೇಲೆಯೆ ಅವಲಂಬಿಸಿದ್ದಾನೆಂದು ತಿಳಿಯಬೇಡಿರಿ, ಹೆದರಬೇಡಿರಿ ನಿಮ್ಮ ನಗರವೂ ಬೇಡ, ಬೇರೆ ನಗರವೂ ಬೇಡ. ನಿಮ್ಮಂತಹ ಹೇಡಿಗಳ ನೆರಳು ಕೂಡ ಇಲ್ಲದಲ್ಲಿ ನಾನು ಹೋಗುವವನಿದ್ದೇನೆ ’ ಎಂದನು. ಅಂತಹ ನಗರ ಯಾವುದೆಂದರೆ ‘ ಸೆರೆಮನೆ ನಗರ ’ ಎಂದನು ; ‘ಅದಕ್ಕೆ ದಾರಿ ಯಾವುದು’ ಎಂದರೆ ‘ ಸತ್ಯಾಗ್ರಹ ’ ಎಂದನು. ಅಂತೂ ಕೊನೆಗೊಮ್ಮೆ ದಿನಾಲು ಒಬ್ಬೊಬ್ಬನಾಗಿ ಆಹುತಿಯಾಗುವ ದುರ್ಮರಣ ತಪ್ಪಿತೆಂದು ನಾಗರಿಕರು ಉಬ್ಬಿನಲ್ಲಿದ್ದಾಗ ‘ ಸತ್ಯಾಗ್ರಹಿಗಳನ್ನು ಸೆರೆಮನೆಗೆ ಕಳುಹಿಸುವುದಿಲ್ಲ ’ ಎಂದು ಹುಕುಂ ಮಾಡಿತು ಸರಕಾರ. ‘ ಅಯ್ಯೊ ! ’ ಎಂದಿತು ನಗರಜನ. ದಿನಾಲು ಒಬ್ಬೊಬ್ಬರ ಬದಲಾಗಿ ಅದೇ ದಿನ! ಎಲ್ಲರೂ ಪ್ರಾಣಬಿಟ್ಟರು !

* * *

ಆ ಆಚಾರ್ಯರ ಮೇಲೆ ಪ್ರಕಾಶ

ಅರ್ಥಾತ್, ಆಂಧ್ರರ ಆಂಧಃಕರಣ. ಇದೇನೊ ಒಂದು ‘ ಜಂಗೀ ಮಾರಾಮಾರಿಯ ಸಿನೇಮಾ ’ ಎಂದು, ವಾಚಕರೆ, ಮೂಗು ಮುರಿಯಬೇಡಿರಿ. ಯಾಕೆಂದರೆ, ಈ ಸಿನೆಮಾದಲ್ಲಿ ‘ ಜಂಗೀ ’ ಸತ್ಯವಿದೆ, ಅಹಿಂಸೆಯ ‘ ಮಾರಾಮಾರಿ ’ ಇದೆ ; ಕೊನೆಗೆ ಒಂದು ಶೀಕ್ಷಾಪಾಠವು ಇದೆ. ಅದೆಂದರೆ ಕಾಂಗ್ರೆಸಿನ ಹಿರಿಯ ಮುದ್ದರಿಗಳಲ್ಲಿ ಪ್ರಾಂತೀಕರಣಕ್ಕಾಗಿ ಎರಡು ತರದ ಸತ್ಯಗಳಿವೆ ; ಒಂದು, ‘ಭಾಷಾನುಗುಣ ಪ್ರಾಂತರಚನೆ ಬೇಕು’ ಎಂದು ಸಭೆಗಳಲ್ಲಿ ಆಗ್ರಹದಿಂದ ಗದ್ದರಿಸುವ ಸತ್ಯ ; ಇನ್ನೊಂದು, ‘ ಇಂತಹ ಪ್ರಾಂತೀಕರಣದಿಂದ ಅಶಾಂತಿ ಹಬ್ಬುವುದರಿಂದ ಅದು ಬೇಡ’ ಎಂದು ಸರಕಾರದಲ್ಲಿ ಗದ್ದರಿಸುವ ಸತ್ಯಾಗ್ರಹ. ಪ್ರಾಂತೀಕರಣದಿಂದ ಅಶಾಂತಿ, ಹಿಂಸೆಯೆಂದೇ ಕರ್ನಾಟಕದ ಕಾಂಗ್ರೆಸ್ ಮುಂದಾಳುಗಳು ಏಕೀಕರಣ ಪರಿಷತ್ತಿಗೆ ‘ನಾಕೀಕರಣ’ವನ್ನು ಕೊಟ್ಟಿರಬಹುದೆ? ಆ ಪರಿಷತ್ತಿನ ವಾರಪತ್ರಿಕೆ ದುಷ್ಟ ಇಂಗ್ಲಿಶ ಭಾಷೆಯದೆಂದು ಹಳ್ಳಕ್ಕೆ ಅದರ ನೂಕೀಕರಣವನ್ನು ಮಾಡಿರಬಹುದೆ ? ಮದ್ರಾಸಿನ ಮುಖ್ಯ ಆಚಾರ್ಯ (ಸಿರಾಜಗೋಪಾಲಾಚಾರ್ಯ) ರ ಮೇಲೆ ಪ್ರಕಾಶ (ಪ್ರಕಾಶಂ ಎಂಬವರು) ಬಿದ್ದರೆ, ಕರ್ನಾಟಕದಲ್ಲಿ ಪ್ರಕಾಶದ ಮೇಲೆಯೆ ಆಚಾರ್ಯರು ಬಿದ್ದಿದ್ದಾರೆ ; ಅರ್ಥಾತ್, ಪ್ರಕಾಶ ಮುಚ್ಚಲು ಆಗ್ಗಲೇಖದ-ಅಲ್ಲ ಅಗ್ರಲೇಖದ ಆಚಾರ ಹೇಳುತ್ತಾರೆ.

(೧೬೮ನೆಯ ಪುಟದಿಂದ ಮುಂದುವರಿದದು.)

ಕನ್ನಡಿಗರಿಗೀಗ, ರಾಜಕೀಯ ಚಟುವಟಿಕೆಗಿಂತ ಯಾವ ರೀತಿಯಿಂದಲೂ ಕಡಿಮೆಯಲ್ಲದಷ್ಟು ಸಾಂಸ್ಕೃತಿಕ ಚಟುವಟಿಕೆಗೂ ಮಹತ್ತ್ವವಿದೆಯೆಂಬ ಮಾತಿನ ಮನವರಿಕೆಯಾಗಿದೆ. ಎಂತಲೆ ಉನ್ನತವಾದ ಉದ್ದೇಶವನ್ನಿಟ್ಟುಕೊಂಡು ಹೊರಟ ಸಂಘವನ್ನು ಪುನರುಜ್ಜೀವನಗೊಳಿಸಬೇಕೆಂಬ ವಿಚಾರ ಕನ್ನಡಿಗರ ತಲೆಯಲ್ಲಿ ಸುಳಿಯಿತು. ಉತ್ಸಾಹಶಾಲಿಯಾದ ಕಾರ್ಯಕಾರಿ ಮಂಡಲಿಯೂ ಅಧಿಕಾರಿವರ್ಗವೂ ಆಯ್ಕೆ ಹೊಂದಿ ಬಂದು, ಬೇರೆ ಬೇರೆ ಮಹನೀಯರ ನೆರವನ್ನು ಪಡೆದುಕೊಂಡು, ಒಳ್ಳೆಯ ರೀತಿಯಿಂದ ಕಾರ್ಯವನ್ನು ಪ್ರಾರಂಭಿಸಿತು; ಸಂಕಲ್ಪಸಿದ್ಧಿಯ ಮೊದಲನೆಯ ಮೆಟ್ಟಿಲನ್ನೇರಿ ನಿಂತಂತೆ— ಸುವರ್ಣ ಮಹೋತ್ಸವದ ನಿಮಿತ್ತದಿಂದ— ಸಂಘದ ತಲೆಯ ಮೇಲಿನ ಸಾಲದ ಹೊರೆಯನ್ನು ತೀರಿಸಿತು. ಸಂಘವೀಗ ಚೇತರಿಸಿಕೊಂಡು, ಬಗ್ಗಿದ ನಡುವನ್ನು ನೇರವಾಗಿಸಿಕೊಂಡು ನಿಂತಂತಾಯಿತು. ಇನ್ನು ಅದರಿಂದ ಒಳ್ಳೆಯ ರೀತಿಯಿಂದ ಕೆಲಸ ತೆಗೆದುಕೊಳ್ಳುವ ಹೊಣೆಗಾರಿಕೆ ಕನ್ನಡಿಗರ ತಲೆಯ ಮೇಲೆ ಇದೆ. ಸಂಘದ ಕಣ್ಣೆದುರು ಕಾರ್ಯಕ್ರಮಪಟವೊಂದನ್ನು ಚಿತ್ರಿಸಿ ಇಟ್ಟು, ಆ ಕಾರ್ಯಕ್ರಮವನ್ನು ಸಿದ್ಧಿಗೊಯ್ಯಲು ಸಮರ್ಥವಾಗುವಂತಹ ಕಾರ್ಯಕರ್ತರ ಕೈಗೆ ಸಂಘದ ಆಡಳಿತ ಕೊಟ್ಟು, ಕಾಲಕಾಲಕ್ಕೆ ಬೇಕಾಗುವ ಸಹಕಾರ-ಸಹಾನುಭೂತಿಗಳನ್ನು ಸಲ್ಲಿಸುತ್ತ ಹೋದರೆ, ವಿದ್ಯಾವರ್ಧಕ ಸಂಘದಿಂದ ಎಂತೆಂತಹ ಕಾರ್ಯಗಳನ್ನೂ ಮಾಡಲಿಕ್ಕಾದೀತು; ಆ ಕಾರ್ಯದಿಂದ ಕನ್ನಡ ನಾಡಿನ ಶಕ್ತಿ-ಕೀರ್ತಿ-ಸಂಸ್ಕೃತಿ ಸಂಪತ್ತು ಹೆಚ್ಚೀತು !

ಸುವರ್ಣಮಹೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ, ಉತ್ಸವವನ್ನು ಪ್ರಾರಂಭಿಸಿಕೊಟ್ಟ ಶ್ರೀಮಂತ ಬಸವಪ್ರಭು ರಾಜಾಲಖಮಗೌಡ ದೇಸಾಯಿ ವಂಟಮುರಿ ಅವರು ಆಡಿದ ಮಾತು ತುಂಬ ಬೆಲೆಯುಳ್ಳದಾಗಿದೆ. ಅವರ ಸದಾಶಯವು ಅವರ ಕರ್ನಾಟಕಾಭಿಮಾನಕ್ಕೆ ತಕ್ಕುದಾಗಿ ಇದೆ. ಕನ್ನಡಿಗರಿಂದ ಸಂಘ, ಸಂಘದಿಂದ ಕನ್ನಡಿಗರು ಪ್ರಯೋಜನ ಪಡೆದು ಬೆಳೆದುಬಾಳಲಿ !

— ಸಂಪಾದಕರು

ಗೀತಾಗಾಂಭೀರ್ಯ
ಶ್ರೀಕೃಷ್ಣನ ಸಮಾಜಧರ್ಮ

ಬರೆದವರು : ‘ ಶ್ರೀರಂಗ ’

ಅಚ್ಚಾಗಿ ಬೆಳಕಿಗೆ ಬಂದಿದೆ. ಈಗಾಗಲೆ ಹಲವು ವಾಚಕರ ಮನವನ್ನು ಕೂಡ ಮುಟ್ಟಿದೆ.

ಡೆಮಿ ಅಷ್ಟಪತ್ರದ ೩೫೦ ಕ್ಕಿಂತ ಹೆಚ್ಚು ಪುಟ

ಬೆಲೆ ಸಾದಾ ಪ್ರತಿಗೆ ೩-೦-೦
ಕ್ಯಾಲಿಕೋ ಪ್ರತಿಗೆ ೩-೮-೦

ಧಾರವಾಡದ ರಂಗಮಂಗ ರಂಜನೋದ್ಯಾನದ ಪ್ರಕಟನೆಯಿದು.

ಬೇಕಾದವರು ಲೇಖಕರೊಂದಿಗಾಗಲಿ
ಜಯಂತಿಯ ಕಾರ್ಯಾಲಯಕ್ಕಾಗಲಿ
ಪತ್ರ ಬರೆದು ತರಿಸಿಕೊಳ್ಳಬೇಕು.

ಕಳೆದ ಮಹಾಯುದ್ಧದಲ್ಲಿ ★ (ಪೂರ್ವಭಾಗ)

★ ಭಾರತೀಯರ ಸಹಾಯ

ಶ್ರೀ. ವಾಳ್ವೇಕರ ಗುರುರಾಯರು, ಬಿ.ಎ., ಎಲ್ ಎಲ್. ಬಿ. ಹುಬ್ಬಳ್ಳಿ

★

ಕಳೆದ ಮಹಾಯುದ್ಧದಲ್ಲಿ ಫ್ರಾನ್ಸಿನ ರಣಭೂಮಿಯಲ್ಲಿ ತಮ್ಮ ಬಿಸಿನೆತ್ತರನ್ನು ಹರಿಸಿ, ಫ್ರಾನ್ಸ್ ಸಾಮ್ರಾಜ್ಯವನ್ನು ಉಳಿಸಿದವರೂ ಪರ್ಯಾಯದಿಂದ ಬ್ರಿಟಿಷರಿಗೆ ಜಯವನ್ನು ತಂದುಕೊಟ್ಟವರೂ ಭಾರತದ ವೀರ ಸೈನಿಕರು. ಇಂತಹ ಮರೆಯಲಾರದಂತಹ ನೆರವಿಗೆ ಭಾರತೀಯರು ಹೊಂದಿದ ಪ್ರತಿಫಲವೇನು?

★

ಪ್ರಾಸ್ತಾವಿಕ

೧೯೧೪-೧೯೧೮ರ ಮಹಾಯುದ್ಧವನ್ನು ಬ್ರಿಟಿಶರು ಹಾಗೂ ಅವರ ಮಿತ್ರರಾಷ್ಟ್ರಗಳು ಗೆದ್ದ ನಂತರ, ಅಮೇರಿಕೆಯ ಆಗಿನ ಕಾಲದ ಪ್ರೆಸಿಡೆಂಟರಾದ **ಉಡ್ರೋ ವಿಲ್ಸನರ** ಹದಿನಾಲ್ಕು ದೇದೀಪ್ಯಮಾನ ರತ್ನಗಳ (Fourteen points) ಬೆಳಕಿನಲ್ಲಿ, ಪ್ರಪಂಚವೆಲ್ಲವೂ ಸುಖದಿಂದ ಕಾಲಕಳೆಯುವುದೆಂದು ಸಾಮಾನ್ಯ ಜನರ ತಿಳಿವಳಿಕೆಯಾಗಿತ್ತು. ಜಯವನ್ನು ಸಂಪಾದಿಸಿದವರು ಸ್ವರ್ಗಸುಖವನ್ನನುಭವಿಸುವೆವೆಂದು ತಿಳಿದುಕೊಂಡಿದ್ದರು. ವಿಲ್ಸನ್ನರ 'ಸ್ವಯಂನಿರ್ಣಯ'ವನ್ನೊಡಗೊಂಡ ಹದಿನಾಲ್ಕು ತತ್ತ್ವಗಳು ರಾಜ್ಯತೃಷ್ಣೆಯ ಕಾವಿನಿಂದ ಕಮರಿಹೋದುವು. ಕಾಲಕ್ಕನುಸರಿಸಿ ಅನೇಕ ರೂಪಗಳನ್ನು ತಾಳುವ ಬುದ್ಧಿಯಿಲ್ಲದ ರಾಜಕಾರಣದಲ್ಲಿ ಚೆನ್ನಾಗಿ ಸುರಿಯದ ವಿಲ್ಸನ್ನರು, ವ್ಹರ್ಸಾಯದ ಒಪ್ಪಂದದನಂತರ ಬಹುದಿವಸ ಬದುಕಿರಲಿಲ್ಲ. Sphers of Influnce, mandıted territory ಮೊದಲಾದ ವಿಕೃತ ರೂಪದ ರೋಗುಗಳು ರಾಜಕೀಯ ರಂಗಭೂಮಿಯ ಮೇಲೆ ಕುಣಿಯಹತ್ತಿದುವು. 'ಚಿಕ್ಕರಾಷ್ಟ್ರಗಳ ಸಂರಕ್ಷಣೆಗಾಗಿ, ಪ್ರಜಾಪ್ರಭುತ್ವದ ಪ್ರಸಾರಕ್ಕಾಗಿ, ಸ್ವಯಂನಿರ್ಣಯದ ಸ್ಥಾಪನೆಗಾಗಿ ಯುದ್ಧವನ್ನು ಹೂಡಿದ್ದೇವೆ, ರಾಜ್ಯವಿಸ್ತಾರದ ಅಭಿಲಾಷೆ ನಮಗಿಲ್ಲ' ಎಂಬ ಘೋಷಣೆಯು ವ್ಹರ್ಸಾಯದ ಒಪ್ಪಂದದ ಕಾಲಕ್ಕೆ ಅಡಗಿ ಹೋಯಿತು. ಭಾರತೀಯರು ತನು-ಮನೋ-ಧನದಿಂದ ಸಹಾಯ ಮಾಡದಿದ್ದರೆ, ೧೯೧೪-೧೯೧೫ರಲ್ಲಿ ಫ್ರಾನ್ಸದ ಅವಸ್ಥೆಯು, ಈಗಾಗಿದ್ದುದಕ್ಕಿಂತ ಹೆಚ್ಚು ಕೀಳಾಗುತ್ತಿತ್ತು. ಜರ್ಮನ್ ಕಡೆಗಳ ಸೇನಾಸಾಗರವನ್ನು ಅಂದು ತಡೆದು ನಿಲ್ಲಿಸಿದ ಸಂಪೂರ್ಣ ಶ್ರೇಯಸ್ಸು ಭಾರತೀಯ ಸೈನಿಕರಿಗಿದೆ. ಅವರು ಯುರೋಪ ಖಂಡದ ಚಳಿಯನ್ನು ಲೆಕ್ಕಿಸದೆ ಶತ್ರುಸೈನ್ಯವನ್ನು ಹಿಂದೂಡಿದರು.

ಹಿಂದೀ ಸೈನಿಕರ ಕಾರ್ಯ, ಧೈರ್ಯ, ಸಾಹಸಾದಿ ಗುಣಗಳ ಪವಾಡವನ್ನು ಬ್ರಿಟಿಶ ಸೇನಾನಾಯಕರೂ, ರಾಜಕಾರಣ ಧುರಂಧರರೂ ಪತ್ರಿಕಾಕಾರರೂ ಮುಕ್ತಕಂಠದಿಂದ ವರ್ಣಿಸಿದ್ದಾರೆ. ಹಿಂದೀ ಜನರ ರಾಜಭಕ್ತಿ, ನಂಬುಗೆ, ವಿಶ್ವಾಸ ಮೊದಲಾದುವುಗಳ ಪರೀಕ್ಷೆಯಾಯಿತು. ಹಿಂದೀ ರಾಷ್ಟ್ರವು ಮೊದಲನೆಯ ತರಗತಿಯಲ್ಲಿ ತೇರ್ಗಡೆ ಹೊಂದಿತು. ಭಾರತೀಯರು ರಾಜಭಕ್ತಿಪ್ರೇರಿತರೂ, ನಂಬಿಗಸ್ಥರೂ ಇದ್ದುದರಿಂದ, ಆಗಿನ ಕಾಲದ ವೈಸ್‌ರಾಯರಾದ **ಲಾರ್ಡ ಹಾರ್ಡಿಂಜರು**, ಹಿಂದುಸ್ಥಾನದಲ್ಲಿ ಕೇವಲ ೧೫ ಸಾವಿರ ಬ್ರಿಟಿಶ್ ಸೈನಿಕರನ್ನಿಟ್ಟುಕೊಂಡು ಬೇರೆ ಎಲ್ಲ ಸೈನ್ಯವನ್ನೂ ಬೇರೆ ಬೇರೆ ಕ್ಷೇತ್ರಗಳಿಗೆ ಕಳಿಸಿಕೊಟ್ಟರು. ಭಾರತೀಯರು ಪರಿಪರಿಯಿಂದ—ತುಂಬ ಹುರುಪಿನಿಂದ—ಮಾಡಿದ ಸಹಾಯದ ಮರೆವು ಬ್ರಿಟಿಷರಿಗೆ ಸ್ವಲ್ಪ ಕಾಲದಲ್ಲಿಯೆ ಆಯಿತು. ನೀತಿಯ, ನ್ಯಾಯದ, ಧರ್ಮದ ತಳಹದಿಯ ಮೇಲೆ ನಿಂತ ಬ್ರಿಟಿಶ್ ಸಾಮ್ರಾಜ್ಯವು ಹೂಡಿದ ಯುದ್ಧದಲ್ಲಿ, ಸ್ವರಾಜ್ಯಾಭಿಲಾಷಿಯಾದ ಬಡ ಭಾರತವು ಮಾಡಿದ ಅಂದಿನ ಅನೇಕ ತರದ ಸಾಹಾಯ್ಯವನ್ನು, ಸದ್ಯದ ಸಂಕಟ ಸಮಯದಲ್ಲಿ ಬ್ರಿಟಿಶರು ಮರೆಯಲಿಕ್ಕಿಲ್ಲವೆಂಬ ಆಶೆ ಇದೆ. ಅಂದಿನ ಸಹಾಯದ ಕೆಲವು ವಿವರಗಳನ್ನು ಮಾತ್ರ ಇಲ್ಲಿ ಕೊಡುತ್ತೇನೆ, ನೋಡಿರಿ!

ದಂಡಿನ ವೆಚ್ಚ

ವರ್ಷ	ಹಿಂದುಸ್ಥಾನದಲ್ಲಿ ರೂಪಾಯಿ	ಇಂಗ್ಲಂಡಿನಲ್ಲಿ ಪೌಂಡು	ಒಟ್ಟು (ಸುಮಾರು) ಕೋ. ರೂ.
೧೯೧೩-೧೪	೨೩,೭೮,೪೪,೨೧೯	೫೪,೬೨,೮೧೭	೩೨
೧೯೧೪-೧೫	೨೫,೦೪,೬೪,೯೭೮	೫೦,೮೫,೦೭೦	೩೨½
೧೯೧೫-೧೬	೨೭,೫೫,೪೩,೭೭೭	೫೧,೨೩,೫೦೯	೩೫½
೧೯೧೬-೧೭	೩೧,೦೪,೨೬,೬೨೩	೫೮,೭೧,೬೪೯	೪೦
೧೯೧೭-೧೮	೩೬,೪೯,೩೫,೦೧೦	೬೩,೪೩,೬೪೯	೪೬
೧೯೧೮-೧೯	೬೧,೯೨,೦೧,೧೧೯	೫೫,೫೦,೧೩೬	೭೦½
೧೯೧೯-೨೦	೭೯,೬೯,೯೬,೦೬೩	೭೫,೫೩,೬೨೮	೯೧ / ೮೭½

ಮೇಲಿನ ಕೋಷ್ಟಕದ ಕೊನೆಯ ಭಾಗದಲ್ಲಿ, ೧೯೧೯-೨೦ರಲ್ಲಿ ಒಂದು ಪೌಂಡಿನ (1£) ದರ ೧೦ ರೂಪಾಯಿಯಂತೆ ಹಿಡಿದು ಲೆಕ್ಕ ಮಾಡಿದರೆ ಆಗುವ ರಕಮು ಹಾಗೂ ಒಂದು ಪೌಂಡಿಗೆ ೧೫ ರೂಪಾಯಿ ದರ ತಕ್ಕೊಂಡು ಆಗುವ ರಕಮು ಹೀಗೆ ಎರಡು ರಕಮುಗಳನ್ನೂ ಕೊಟ್ಟಿದೆ. ಹಿಂದುಸ್ಥಾನವು ಕೊಡಬೇಕಾದ, ವೆಚ್ಚ ಮಾಡಬೇಕಾದ ಹಣವನ್ನು ರೂಪಾಯಿಗಳ ರೂಪದಿಂದ ಕೊಡಬೇಕಾಗುತ್ತದೆ. ಹಿಂದುಸ್ಥಾನವು ಒಂದು ಪೌಂಡಿಗೆ ೧೫ ರೂಪಾಯಿಯಂತೆ ಹಣ ಸಲ್ಲಿಸಿದರೂ ಕೂಡ ೧೦ ರೂಪಾಯಿಯಂತೆ ಲೆಕ್ಕ ಹಿಡಿಯುವುದು ಅನ್ಯಾಯವಲ್ಲವೇ ? ಪ್ರೊಫೇಸರ್ ಕೆ. ಟಿ ಶಹಾ ಅವರು ' This is a fraud ' (ಇದು ಮೋಸಗಾರಿಕೆ) ಎಂದು ಹೇಳಿದ್ದಾರೆ. ಕೊಟ್ಟದ್ದು ೧೫ ರೂಪಾಯಿ, ಲೆಕ್ಕದಲ್ಲಿ ಕಂಡದ್ದು ೧೦ ರೂಪಾಯಿ. ಉಳಿದ ೫ ರೂಪಾಯಿಗಳ ಗತಿ ಏನು ಈ ೫ ರೂಪಾಯಿಗಳ ವೆಚ್ಚವನ್ನು ' Exchang ' (ವಿನಿಮಯ) ಸದರಿನಲ್ಲಿ ತೋರಿಸುವುದರಲ್ಲಿ ಬರುತ್ತದೆ. ' ಯಾವ ಖಾತೆಗಾದರೂ ವೆಚ್ಚ ಬಿದ್ದರಾಯಿತಲ್ಲ ' ಎಂದು ಕೆಲವರು ಹೇಳಬಹುದು. ಕಲ್ಲಪ್ಪನ ಖಾತೆಗೆ ಹಾಕತಕ್ಕ ಖರ್ಚನ್ನು ಮಲ್ಲಪ್ಪನ ಖಾತೆಗೆ ಖರ್ಚು ಹಾಕಲಿಕ್ಕಾದೀತೋ ? ದಂಡಿನ ಖಾತೆಗೆ ಬೀಳತಕ್ಕ ಖರ್ಚನ್ನು ಎಕ್ಸ್‌ಚೆಂಜ್ (ವಿನಿಮಯ) ಖಾತೆಗೆ ಹಾಕುವುದರಿಂದ, ದಂಡಿಗಾಗಿ ಆದ ವೆಚ್ಚ ಕಡಿಮೆ ಕಾಣುತ್ತದೆ. ಹಿಂದುಸ್ಥಾನದಲ್ಲಿ ದಂಡಿನ ವೆಚ್ಚ ಮಿತಿಮೀರಿ ಬೆಳೆದಿದೆಯೆಂದು ಭಾರತೀಯರ ಅಭಿಪ್ರಾಯ. ಹೀಗಿದ್ದಾಗ, ನಿಜಸ್ಥಿತಿಯ ಸಮ್ಯಗ್‌ಜ್ಞಾನವಾಗಬೇಕಾದರೆ ಯಾವ ಖಾತೆಗೆ ಎಷ್ಟು ವೆಚ್ಚವಾಗಿದೆಯೊ ಅದನ್ನೆಲ್ಲ ಅದೇ ಖಾತೆಯಲ್ಲಿ ಕಾಣಿಸುವುದು ಹಿತವಲ್ಲವೆ ?

ಪಾರ್ಲಮೆಂಟಿನ ಒಪ್ಪಿಗೆ

ಹಿಂದುಸ್ಥಾನ್ ಸರಕಾರದವರು ಸ್ವಲ್ಪ ಕೂಡ ವಿಳಂಬ ಮಾಡದೆ, ಹಿಂದುಸ್ಥಾನದಲ್ಲಿಯ ಸೈನ್ಯವನ್ನು ಫ್ರಾನ್ಸದ ಸಮರಭೂಮಿಗೆ ಕಳುಹಿದರು. ಹಿಂದೀ ಸೈನ್ಯವು ಸಕಾಲದಲ್ಲಿ ಫ್ರಾನ್ಸಕ್ಕೆ ಬಂದು ಮುಟ್ಟದಿದ್ದರೆ, ಜರ್ಮನರು ಪಾರೀಸ್ ಪಟ್ಟಣವನ್ನು ಮುತ್ತುತ್ತಿದ್ದರು. ಸಾಮ್ರಾಜ್ಯ ಸರಕಾರಕ್ಕಾಗಿ ಹೋರಾಡುವ ಸೈನ್ಯದ ವೆಚ್ಚವನ್ನು ಸಾಮ್ರಾಜ್ಯ ಸರಕಾರವು ಕೊಡುವುದು ನ್ಯಾಯವಾದದ್ದೆಂದು ಎಲ್ಲರೂ ಒಪ್ಪಬೇಕಾದ ಮಾತಾಗಿದೆ. ಈ ನ್ಯಾಯವಾದ ಮಾತಿಗನುಸರಿಸಿ, ಹಿಂದುಸ್ಥಾನದ ಸೀಮೆದಾಟಿ ಹೋರಾಟಕ್ಕೆ ಹೋದ ಹಿಂದೀ ಸೈನ್ಯದ ವೆಚ್ಚವನ್ನು ಹಿಂದುಸ್ಥಾನವು ಕೊಡಬಾರದೆಂದು ಗವ್ಹರ್ನಮೆಂಟ್ ಆಫ್ ಇಂಡಿಯಾ ಆಕ್ಟಿನಲ್ಲಿದೆ. ಈ ಕಾನೂನು ಬ್ರಿಟಿಷ್ ಪಾರ್ಲಮೆಂಟಿನವರು ಪಾಸುಮಾಡಿದ್ದುಂಟು. ಹಿಂದುಸ್ಥಾನದ ಸೀಮಾಂತರದಿಂದ ಆಚೆಗೆ ಹೋದ ಸೈನ್ಯದ ವೆಚ್ಚವನ್ನು ಭಾರತದ ಬೊಕ್ಕಸದಿಂದ ಕೊಡಬೇಕಾದರೆ ಬ್ರಿಟಿಶ್ ಪಾರ್ಲಮೆಂಟಿನ ಒಪ್ಪಿಗೆ ದೊರಕಿಸಬೇಕಾಗುತ್ತದೆ. ಹಿಂದುಸ್ಥಾನ್ ಸರಕಾರದವರು, ಈ ಒಪ್ಪಿಗೆಯನ್ನು ದಯಪಾಲಿಸಬೇಕಾಗಿ, ಬ್ರಿಟಿಶ್ ಪಾರ್ಲಮೆಂಟಿಗೆ ಅರಿಕೆಮಾಡಿಕೊಂಡರು. ಬ್ರಿಟಿಶ್ ಪಾರ್ಲಮೆಂಟಿನವರು ಈ ಸಂದರ್ಭದಲ್ಲಿ ಒಂದು ಗೊತ್ತುವಳಿಯನ್ನು ಪಾಸುಮಾಡಿದರು: 'ಹಿಂದುಸ್ಥಾನದಿಂದ ಸೀಮಾಂತರಕ್ಕೆ ಹೋದ ಸೈನಕ್ಕೆ ಹಿಂದುಸ್ಥಾನವು ಸಾಮಾನ್ಯವಾಗಿ (normal) ಕೊಡತಕ್ಕಷ್ಟೇ ವೆಚ್ಚವನ್ನು ಅದು ಕೊಡಬೇಕು" ಎಂದು ಈ ಗೊತ್ತುವಳಿಯ ಮಥಿತಾರ್ಥವಿದೆ. ಹಿಂದುಸ್ಥಾನದಲ್ಲಿ ಹಿಂದುಸ್ಥಾನದ ಖರ್ಚಿನಿಂದ ಅನೇಕ ವರ್ಷಗಳವರೆಗೆ ದಂಡಿನ ಶಿಕ್ಷಣ ಪಡೆದು, ಸಮರಕ್ಕೆ ಸಿದ್ಧವಾದ ಸೈನ್ಯವನ್ನು ಸಾಮ್ರಾಜ್ಯ ಸಂರಕ್ಷಣೆಗಾಗಿ ಕಳಿಸುವಾಗ, ಹಿಂದುಸ್ಥಾನಕ್ಕೆ ತನ್ನ ರಕ್ಷಣೆಯ ಅರಿವು ಸಹ ಇದ್ದಿಲ್ಲ. ಇಂತಹ ನುರಿತ ಸೈನಿಕರನ್ನು ಕಳುಹಿಸಿದ ಹಿಂದುಸ್ಥಾನವು ಆಗ, ದಂಡಿನ ಶಿಕ್ಷಣ ಹೊಂದದ (untrained) ಟೆರಿಟೋರಿಯಲ್ ಸೈನಿಕರಿಂದ ಸಂತುಷ್ಟವಾಗಬೇಕಾಯಿತು. ಆದರೆ ಸಾಮ್ರಾಜ್ಯಕ್ಕೆ ನೀಡಿದ ಈ ಸಹಾಯದಿಂದಲೆ ಸಂತುಷ್ಟರಾಗದ ಕೆಲವು ಮಹಾನುಭಾವರು, ಹಿಂದುಸ್ಥಾನದಿಂದ ಹೊರಗೆ ಕಳಿಸಿದ ಸೈನ್ಯಕ್ಕೆ ತಗಲುವ ಎಲ್ಲ ವೆಚ್ಚವನ್ನು, ಹಾಗೂ ' ಬ್ರಿಟಿಶ್ ಟೆರಿಟೋರಿಯಲ್ ಟ್ರುಪ್ಸ್ ' ಎಂಬ ಟಾಪುಜುಗಳ ಹಿಂದುಸ್ಥಾನದಲ್ಲಿಯ ವೆಚ್ಚವನ್ನೂ ಭಾರತೀಯರೇ ಹೊರಬೇಕೆಂದು ಅಭಿಪ್ರಾಯಪಟ್ಟರು. ಬ್ರಿಟಿಶ್ ಪಾರ್ಲಿಮೆಂಟಿಗಿಂತ ಈ ಮಹಾನುಭಾವರ ಅಂತಃಕರಣವು ಹೆಚ್ಚು ಕಲಕಹತ್ತಿತು. ಅವರ ಸಾಮ್ರಾಜ್ಯಾಭಿಮಾನವೂ ಅದರ ಮೇಲಿನ ಮಮತೆಯೂ ಹೆಚ್ಚು ಉಕ್ಕೇರಹತ್ತಿತು. ಬ್ರಿಟಿಷರ ಬರಿ ಬಿರುದುಗಳಿಗೆ ಬಲಿಬಿದ್ದ ಭಾರತೀಯರ ಮತಕ್ಕೆ ಮನ್ನಣೆಯನ್ನೀಯದೆ, ಸಾರಾಸಾರ ವಿಚಾರವನ್ನು ತೀರಬದಿಗಿಡದ ಬ್ರಿಟಿಶ್ ಪಾರ್ಲಮೆಂಟಿನವರು ಹೀಗೆ ಅಭಿಪ್ರಾಯಪಟ್ಟರು: " ಹಿಂದುಸ್ಥಾನದಿಂದ ಹೊರಗೆ ಹೋದ ಸೈನ್ಯವು ಹಿಂದುಸ್ಥಾನದಲ್ಲಿದ್ದರೆ ಅದಕ್ಕಾಗಿ ಎಷ್ಟು ವೆಚ್ಚವಾಗುತ್ತಿತ್ತೋ ಅಷ್ಟೇ ಹಣವನ್ನು ಹಿಂದುಸ್ಥಾನವು ಕೊಡಬೇಕು. ಫ್ರಾನ್ಸಿನಲ್ಲಿ ಅಥವಾ ಬೇರೆ ಸಮರಭೂಮಿಯಲ್ಲಿ ಈ ಹಿಂದೀ ಸೈನ್ಯಕ್ಕಾಗಿ ಆದ ಹೆಚ್ಚಿನ ವೆಚ್ಚವನ್ನು ಸಾಮ್ರಾಜ್ಯಸರಕಾರವು ಕೊಡಬೇಕು. ಮತ್ತು ಟೆರಿಟೋರಿಯಲ್ಲಿನ ಹಿಂದುಸ್ಥಾನದಲ್ಲಿಯ ವೆಚ್ಚವನ್ನೂ ಬ್ರಿಟಿಶ್ ಸರಕಾರವು ಕೊಡಬೇಕು. " ' ಹಡೆದವ್ವನಿ

ಗಿಂತ ಧಿಬಲ್ಲವ್ವನೇ ಹೆಚ್ಚು ಕುಣಿಯುತ್ತಾಳೆ' ಎಂದು ನಮ್ಮ ಹಳ್ಳಿಗರು ಹೇಳುವ ಮಾತಿನಲ್ಲಿ ಬಹು ಹುರುಳಿದೆ. ಭಾರತದ ಬ್ರಿಟಿಶರ ಆಡಳಿತದಲ್ಲಿ ಈ ಅಂದವಾದ ನೋಟವು ಅನೇಕ ಸಾರೆ ಕಣ್ಣಿಗೆ ಬೀಳುತ್ತದೆ. ಸ್ವಾತಂತ್ರ್ಯವನ್ನು ಕಳಕೊಂಡ ನರನ ಅಧಃಪಾತವು ಎಷ್ಟಾಗುತ್ತದೆ ನೋಡಿರಿ! ಅವನು ಸ್ವಪ್ರತಿಷ್ಠೆಗಾಗಿ ಸ್ವಾತಂತ್ರ್ಯದ ಮೇಲೆ— ಸ್ವಾಭಿಮಾನದಮೇಲೆ— ತಿಲಾಂಜಲಿಯನ್ನು ಬಿಡಲೂ ಸಿದ್ಧನಾಗುತ್ತಾನೆ. ಬಹುದಿವಸಗಳವರೆಗೆ ದಾಸ್ಯದಲ್ಲಿ ಇದ್ದುದರ ಪರಿಣಾಮವಿದು. ಬ್ರಿಟಿಶ್ ಪಾರ್ಲಮೆಂಟಿನವರೇ ಮೇಲೆ ಬರೆದಂತೆ ನಿರ್ಣಯಮಾಡಿದ್ದರಿಂದ 'ಹಿಂದೀ ಧಿಬಲ್ಲವ್ವ'ನಿಗೂ ಸುಮ್ಮನೆ ಕೂಡಬೇಕಾಯಿತು. ಇನ್ನು ಸಾಮಾನ್ಯವೆಚ್ಚ (normal charges) ಯಾವುದು, ಹೆಚ್ಚಿನ ವೆಚ್ಚ ಯಾವುದು.. ಎಂಬ ತೊಡಕಿನ ಪ್ರಶ್ನೆಯ ನಿರ್ಣಯವು ಸಾಮ್ರಾಜ್ಯ ಸರಕಾರಕ್ಕೆ ಲಾಭಕರವಾಗುವಂತೆಯೆ ಆಗತಕ್ಕದ್ದೆಂದು ಬೇರೆ ಹೇಳಬೇಕಾಗಿಲ್ಲ.

ಆದರೂ ವೆಚ್ಚ ಹೆಚ್ಚಾಯಿತು.

ಮೇಲಿನಂತೆ ದಂಡಿನ ವೆಚ್ಚದ ವ್ಯವಸ್ಥೆಯಾದರೂ ಹಿಂದುಸ್ಥಾನ ಸರಕಾರದ ದಂಡಿನ ವೆಚ್ಚ ಹೆಚ್ಚಾಯಿತು. ದಂಡಿನ ವೆಚ್ಚ ಯಾಕೆ ಮತ್ತು ಹೇಗೆ ಹೆಚ್ಚಾಯಿತೆಂಬ ಮಾತಿನ ವಿವೇಚನೆಯನ್ನು ಈ ಬರೆಹದಲ್ಲಿ ಹೆಚ್ಚು ವಿಸ್ತಾರದಿಂದ ಮಾಡುವುದಕ್ಕೆ ಶಕ್ಯವಿಲ್ಲ. ವಾಯುವ್ಯ ಮೇರೆಯ ಮೇಲೆ ಹಾಗೂ ಈಶಾನ್ಯ ಮೇರೆಯ ಮೇಲೆ ವಾಸವಾಗಿರುವ ತಂಡಗಳು ಶಾಂತತೆಯನ್ನು ಭಂಗಮಾಡಿದುವು. ಈ ಗಲಭೆಯನ್ನು ತಗ್ಗಿಸಲಿಕ್ಕೆ ಸೈನಿಕರ ಸಹಾಯ ತಕೊಳ್ಳಬೇಕಾಯಿತು. ಆದರಿಂದ ಹಣ ಹೆಚ್ಚು ವೆಚ್ಚಮಾಡಬೇಕಾಯಿತು. ಇದಲ್ಲದೆ ಜರ್ಮನರು ಮುನ್ನುಗ್ಗುವ ಭಯವಿತ್ತೇ ಇತ್ತು. ಹಿಂದಿನ ಯುದ್ಧದಲ್ಲಿ ತುರ್ಕಸ್ಥಾನವು ಜರ್ಮನರ ಪಕ್ಷವಹಿಸಿದ್ದರಿಂದ, ಅವರು ಇರಾಣಕ್ಕೆ ನುಗ್ಗುವ ಸಂಭವವಿತ್ತು. ಇರಾಣವು ಸ್ವಸಂರಕ್ಷಣೆ ಮಾಡಿಕೊಳ್ಳಲು ಅಸಮರ್ಥವಿದ್ದುದರಿಂದ, ಮತ್ತು ಅಂತಹ ಬಲಹೀನ ರಾಷ್ಟ್ರಗಳಿಗೆ ನೆರವಾಗುವುದೇ ಬ್ರಿಟಿಶರ ಧ್ಯೇಯವಿದ್ದುದರಿಂದ, ಬ್ರಿಟಿಶ್ ಹಾಗೂ ಹಿಂದೀ ಸರಕಾರಗಳು ಇರಾಣದ ಸಹಾಯಕ್ಕಾಗಿ ಮುಂದುವರಿದುವು. ಹಿಂದುಸ್ಥಾನದ ಮೇರೆಯು ಕಾಲಬಂದಂತೆ ಮೆಸೊಪೊಟೇಮಿಯಾದವರೆಗೆ ಮುಂದೆ ಸರಿಯುತ್ತಿದೆ. ಈಗ ಪರ್ಸಿಯಾದವರೆಗೆ ಹೋಗಿದೆಯೆಂದು ಹೇಳುವುದರಲ್ಲಿ ಬರುತ್ತದೆ. ಇರಾಣಕ್ಕೆ ಕಳಿಸಿದ ದಂಡಿನ ವೆಚ್ಚವನ್ನು ಯಾರು ತೆರಬೇಕು ? ಹಿಂದುಸ್ಥಾನವು ಈ ಸಂದರ್ಭದಲ್ಲಿ ೧೨ ಲಕ್ಷ ಪೌಂಡು ಹಣ ವೆಚ್ಚಮಾಡಬೇಕಾಯಿತು.

ಮನುಷ್ಯಬಲಿ

ಹಿಂದುಸ್ಥಾನದಲ್ಲಿ ಸೈನ್ಯಭರತಿಯ ಕೆಲಸ ಬಹಳ ಭರದಿಂದ ಸಾಗಿತ್ತು. ಏಶಿಯಾ, ಯುರೋಪ ಹಾಗು ಆಫ್ರಿಕಾ ಖಂಡಗಳಲ್ಲಿ ರಣಕ್ಷೇತ್ರಗಳಿದ್ದುವು. **ಮೆಸೊಪೊಟೆಮಿಯಾ, ಪೆಲೆಸ್ಟಾಯಿನ್, ಏಡನ್, ಇರಾಣದ ಆಖಾತ, ಫ್ರಾನ್ಸ್, ತುರ್ಕಸ್ತಾನ್, ಪೂರ್ವ ಆಫ್ರಿಕಾ** ಮೊದಲಾದ ಕಡೆಗೆ ಘನಘೋರ ಸಂಗ್ರಾಮಗಳು ನಡೆದಿದ್ದುವು. ಈ ಎಲ್ಲ ಸಮರಭೂಮಿಗಳಲ್ಲಿ ಹಿಂದೀಸೈನಿಕರು ಕಲಿತನದಿಂದ ಹೋರಾಡಿ ಕೀರ್ತಿಪಡೆದು, ಬ್ರಿಟಿಶರಿಗೆ ಯಶಸಂಪಾದಿಸಿ ಕೊಟ್ಟರು. ಮಹಾಯುದ್ಧದ ಪ್ರಾರಂಭಕ್ಕೆ ಹಿಂದುಸ್ಥಾನದಲ್ಲಿ, ೮೦೦೦ ಬ್ರಿಟಿಶ್ ಹಾಗು ೨ ಲಕ್ಷ ೩೦ ಸಾವಿರ ಹಿಂದೀ ಸೈನ್ಯವಿತ್ತು. ಯುದ್ಧ ಪ್ರಾರಂಭವಾದ ಎರಡು ವರ್ಷಗಳಲ್ಲಿ ೮೦ ಸಾವಿರ ಬ್ರಿಟಿಶ್ ಹಾಗು ೨ ಲಕ್ಷ ೧೦ ಸಾವಿರ ಹಿಂದೀ ಸೈನ್ಯವು ಸಾಮ್ರಾಜ್ಯಸೇವೆಗಾಗಿ ಹಿಂದುಸ್ಥಾನದಿಂದ ಹೊರಗೆ ಹೋಯಿತು. ಅನೇಕ ವರ್ಷಗಳಿಂದ ಶಿಕ್ಷಣ ಪಡೆದುಕೊಂಡ, ಸುಸಜ್ಜಿತವಾದ, ಎಲ್ಲ ಶಸ್ತ್ರಾಸ್ತ್ರಗಳಿಂದ ಸನ್ನದ್ಧವಾದ, ಜೀವದ ಹಂಗುದೊರೆದು ಕಾದುವ ಈ ಹಿಂದೀಸೈನ್ಯವನ್ನು ಸಾಮ್ರಾಜ್ಯದ ಸಹಾಯಕ್ಕಾಗಿ ಕಳಿಸಿದುದರ ಪ್ರತಿಫಲವಾಗಿ, ಭಾರತೀಯರಿಗೆ ದಂಡಿನಲ್ಲಿ ಬ್ರಿಟಿಶರಿಗಿರುವ ಸ್ಥಾನಗಳು ಈ ವರೆಗೂ ದೊರೆತಿಲ್ಲ. ಪಕ್ಷಪ್ರಪಂಚವು ಅಚ್ಚಳಿಯದೆ ಉಳಿದಿದೆ. ಹಿಂದೀ ಸೈನ್ಯಗಳಲ್ಲಿ ಅಧಿಕಾರಿಗಳಾಗಲು ಯೋಗ್ಯರಿದ್ದ ಹಿಂದೀಯುವಕರಿಗೆ, ಆ ತರದ ಶಿಕ್ಷಣ ಕೊಡುವ ಶಾಲೆಗಳನ್ನು ತೆಗೆಯಲು ಆಳರಸರಿಗೆ ೨೫ ವರ್ಷಗಳ ಕಾಲವು ಸಾಕಾಗಿದ್ದಿಲ್ಲವೋ! ಭಾರತೀಯರು ಅಧಿಕಾರಿಗಳಾಗಬಾರದೆಂಬ ದುರ್ಬುದ್ಧಿ ಆಳರಸರಿಗೆ ಬಂದದ್ದು ದೇಶದ ದುರ್ದೈವವೇ ಸರಿ. ಹಿಂದುಸ್ಥಾನದಿಂದ ಅಂದು ಕಳಿಸಿದ ಸೈನಿಕರು ಕಲಿತು ನುರಿತವರಿದ್ದರು. ಆ ಕಾಲಕ್ಕನುಸರಿಸಿ ಹಿಂದೀ ಸೈನ್ಯವು ಎಲ್ಲ ಶಸ್ತ್ರಾಸ್ತ್ರಗಳಿಂದ ಯುಕ್ತವಾದದ್ದಿತ್ತೆಂಬುದನ್ನು ಓದುಗರು ಮರೆಯಬಾರದು. ಇಂತಹ ಬಲವಾದ ಸೈನ್ಯವನ್ನು, ರಣಭೇರಿಯ ಧ್ವನಿ ಕೇಳಿದ ಕೂಡಲೆ ಹಡಗುಗಳನ್ನು ಹತ್ತಿಸಿದ ಹಿಂದುಸ್ಥಾನದ ಮರೆವು, ಯುದ್ಧ ಮುಗಿದ ವರ್ಷಾರು ತಿಂಗಳಲ್ಲಿಯೆ—ಹಿಂದೀ ಸೈನ್ಯದ ಸಹಾಯದಿಂದ ಬದುಕಿದ—ಬ್ರಿಟಿಶರಿಗಾಯಿತು. ಮುಂದೆ ಆಳರಸರು ಅದರಂತೆಯೆ ನಡಕೊಳ್ಳುತ್ತ ಬಂದಿದ್ದಾರೆ. **ಆಯ್. ಎಮ್. ಎಸ್.** (ದಂಡಿನ ಡಾಕ್ಟರ್) ಜನರಲ್ಲಿ ಸಹ ಪಕ್ಷಪ್ರಪಂಚವಿದೆ. ಕೆಂಪು ಕರಿ ಬಣ್ಣಕ್ಕನುಸರಿಸಿದ ಭೇದವಿದೆ. ಈ ಅಸತ್ಯವಾದ, ಅನ್ಯಾಯದ, ಅನೀತಿಯ ಭೇದದ ಬಗ್ಗೆ ಇನ್ನೊಂದು ಬರೆಹದಲ್ಲಿ ಹೆಚ್ಚಾಗಿ ಬರೆಯುವೆ. ಮಹಾಯುದ್ಧದ ಕಾಲದಲ್ಲಿ ರಣರಂಗಕ್ಕೆ ಹೋಗುವ ಸೈನಿಕರ Combatants) ಮತ್ತು ಅವರಿಗೆ ಸಹಾಯಕಾರಿಗಳ (non-combatants) ಭರತಿಯ ಕೆಲಸವು ಸಾಗಿತ್ತು. ಹೀಗೆ ಭರತಿಯಾದ ಸೈನಿಕರ ಸಂಖ್ಯೆಯು ೮ ಲಕ್ಷದ ವರೆಗೆ ಇತ್ತು ; ಹಾಗು ಸೈನಿಕರ ಸಹಾಯಕರ ಸಂಖ್ಯೆ ೪ ಲಕ್ಷದ ವರೆಗೆ ಇತ್ತು. ಹೀಗೆ ಒಟ್ಟು ೧೨ ಲಕ್ಷ ಹೊಸ ಮನುಷ್ಯಬಲವನ್ನು ಹಿಂದುಸ್ಥಾನವು ಪೂರಯಿಸಿಕೊಟ್ಟಿತು. ಮಹಾಯುದ್ಧಕ್ಕಿಂತ ಮೊದಲು ಪ್ರತಿವರ್ಷ ಸೈನ್ಯದಲ್ಲಿ ೧೫ ಸಾವಿರ ಜನರ ಭರತಿಯಾಗುತ್ತಿತ್ತು. ಕಳೆದ ಮಹಾಯುದ್ಧದಲ್ಲಿ, ಬ್ರಿಟಿಶರ ಮೇಲೆ ಅನೇಕ ದುರ್ಧರ ಪ್ರಸಂಗಗಳು ಬಂದೊದಗಿದುವು. ಅಂತಹ ಪ್ರಸಂಗಗಳಲ್ಲಿ ಹಿಂದುಸ್ಥಾನವು ಎಲ್ಲ ತರದ ಸಹಾಯವನ್ನು ಮಾಡಿತು. ಈ ಎಲ್ಲ ಪ್ರಸಂಗಗಳ

ಕತೆಗಳನ್ನು ನಿವೇದಿಸುವುದಾದರೆ ಕಳೆದ ಮಹಾಯುದ್ಧದ ಇತಿಹಾಸದ ನಿರೂಪಣೆ ಮಾಡಬೇಕಾದೀತು. ಅಂತಹ ಒಂದೇ ಪ್ರಸಂಗದ ಕತೆಯನ್ನು ಇಲ್ಲಿ ಹೇಳುವೆ. ೧೯೧೭ರಲ್ಲಿ ರಶಿಯದ **ಝಾರನ** ದುರ್ವರ್ತನವೂ, ಅವರ ಗುರುವಾದ **ರಾಸಪುಟಿನನ** ದುರಾಗ್ರಹ ದುರ್ನೀತಿ-ದುಷ್ಟತನಗಳೂ ಪರಮಾವಧಿಗೇರಿದುವು. ರಣಕ್ಷೇತ್ರದಲ್ಲಿ ರಶಿಯನ್ ದಂಡುಗಳ ನಾಶವಾಯಿತು. **ಲುಡೆನ್‌ಡಾರ್ಫ** ಮತ್ತು **ಹಿಂಡನ್‌ಬರ್ಗ**ರಂತಹ ಅತಿರಥ-ಮಹಾರಥಿಗಳು ಲಕ್ಷಾವಧಿ ರಶಿಯನ್ನರನ್ನು ಯಮಸದನಕ್ಕೆ ಕಳಿಸಿದರು. ಇದರಿಂದ ರಶಿಯನ್ ದಂಡಿನಲ್ಲಿ ಅಸಂತೋಷವು ಬೇರೂರಹತ್ತಿತು. ೧೯೧೭ರಲ್ಲಿ ಪಶ್ಚಿಮ ರಣಭೂಮಿಯಲ್ಲಿ ರಶಿಯನ್ನರಿಗೆ ಅಪಯಶಸ್ಸು ಒದಗಹತ್ತಿತು. ಕ್ರಾಂತಿಯ ಚಿಹ್ನಗಳು ತಲೆದೋರಹತ್ತಿದುವು. ಈಗ **ಆಂಟಿ ಕಾಮಿಂಟಾರ್ನ್**ದ (Anti-comentorn) ಧ್ವಜ ಮೆರೆಯಿಸುವ ಜರ್ಮನ್ನರು, ಮಾರ್ಕ್ಸನ ಹೆಸರಾದ ಅನುಯಾಯಿಯೂ, ಕೆಲಸಗಾರರ ಮುಖಂಡನೂ, ಸಮತಾವಾದಿಗಳ ಅಗ್ರಗಣಿಯೂ, ಕ್ರಾಂತಿವೀರನೂ ಆದ ಲೇನಿನನನ್ನು ಸ್ವಿಜ್ಜರ್‌ಲಂಡಿನಿಂದ ಯಾರಿಗೂ ತಿಳಿಯದಂತೆ ಒಂದು ರೇಲ್ವೆ ವಾಗೀನಿನಲ್ಲಿ ಹಾಕಿ, ಸದ್ದಿಲ್ಲದೆ ರಶಿಯಾದಲ್ಲಿ ತಂದುಬಿಟ್ಟರು. ಪ್ಲೇಗ್ ಜಂತುವು ಅಥವಾ ಬೇರೆ ಸಾಂಸರ್ಗಿಕ ರೋಗದ ಜಂತುವು ಹಬ್ಬುವಂತೆ ಈ ಕ್ರಾಂತಿಯ ಹುಳುವು ರಶಿಯದಲ್ಲೆಲ್ಲ ಹರಡಬೇಕೆಂದು ಜರ್ಮನ್ನರ ಇಚ್ಛೆಯಿದ್ದಿತು. ೧೯೧೮ರ ಪ್ರಾರಂಭಕ್ಕೆ ಬ್ರಿಟಿಶರಿಗೆ, ಗಂಭೀರ ಪರಿಸ್ಥಿತಿಯನ್ನು ಎದುರಿಸಬೇಕಾಗುವುದೆಂದು ಎನಿಸಿತು. ಕೂಡಲೆ ಸ್ವತಃ ಬ್ರಿಟಿಶ್ ಚಕ್ರವರ್ತಿಗಳು ಹಾಗು ಅವರ ಮುಖ್ಯ ಸಚಿವರು ಹಿಂದುಸ್ಥಾನಕ್ಕೆ 'ಸೈನ್ಯ ಭರತಿಯ ಕೆಲಸವನ್ನು ಹೆಚ್ಚಾಗಿ ಬೆಳೆಯಿಸಬೇಕು. ಆದಷ್ಟು ಹೆಚ್ಚು ಸೈನಿಕರನ್ನು ಕೂಡಿಸಬೇಕು' ಎಂದು ಆಗ್ರಹದ ಸಂದೇಶಗಳನ್ನು ಕಳಿಸಿದರು. ೧೯೧೮ನೆಯ ಎಪ್ರಿಲ್‌ನಲ್ಲಿ ದಿಲ್ಲಿಯಲ್ಲಿ ವಾರ್ ಕಾನ್ಫರನ್ಸ್ ಕೂಡಿತು. ೫ ಲಕ್ಷ ಸೈನಿಕರನ್ನು ಕಳೆಹಾಕುವ ನಿರ್ಣಯವಾಯಿತು. ೪-೫ ತಿಂಗಳುಗಳಲ್ಲಿ ೨ ಲಕ್ಷ ಸೈನಿಕರನ್ನು ಕೂಡಿಸಲಾಯಿತು. ಉಳಿದ ಮೂರು ಲಕ್ಷ ಸೈನಿಕರು ಉಳಿದ ಕಾಲಾವಧಿಯಲ್ಲಿ ಸಮರಕ್ಕೆ ಸಿದ್ಧರಾಗುವರೆಂಬ ಭರವಸೆ ಹುಟ್ಟಿತು. ಆದರೆ ಅಷ್ಟರಲ್ಲಿಯೆ ಹಿಂಸಾತ್ಮಕ ಕಲೆಯಲ್ಲಿ ಪ್ರಾವೀಣ್ಯವನ್ನು ಪಡೆದ—ಮಾನವಕುಲದ ಸಂಹಾರದಲ್ಲಿ ತತ್ಪರತೆಯಿಂದ ತೊಡಗಿದ—ಯುರೋಪಿಯನರಿಗೆ ಸದ್ಬುದ್ಧಿ ಹುಟ್ಟಿ. ಮಹಾಯುದ್ಧವನ್ನು ನಿಲ್ಲಿಸುವ ಸಂಧಾನದ ಮಾತು-ಕತೆಗಳು ಅವರಲ್ಲಿ ಪ್ರಾರಂಭವಾದುವು. ಕೊನೆಗೆ ಒಪ್ಪಂದವಾಯಿತು. ಆದರೆ ತಮೋಗುಣ ಪರಿಪೂರ್ಣರಾದವರ ನಡುವಿನ ಒಪ್ಪಂದವದು. ರಾಜ್ಯತೃಷ್ಣೆಯಿಂದ ಆಸುರಿ ಮಹತ್ವಾಕಾಂಕ್ಷೆಯಿಂದ ಪ್ರೇರಿತರಾದ ಯುರೋಪಿಯನರ ನಡುವಿನ ಒಪ್ಪಂದವದು. ಸದ್ಯದ ಮಹಾಯುದ್ಧದ ಬೀಜದ ಬಿತ್ತಿಗೆಯು ಆ ಕಾಲಕ್ಕೇ ಆಯಿತು. ಆದರ ಬೆಳೆ ಒಂದು ಈಗ ಸುಗ್ಗಿ ನಡೆದಿದೆ. ಹೆಚ್ಚಿನ ಸಂಗತಿ ಇನ್ನೊಂದು ಭಾಗದಲ್ಲಿ ಒರಲಿದೆ. ಓದಿನೋಡಿರಿ !

ರಾಜ್ಞಿ-ಯೋಗಿನಿ

" ವಿಜಯ "

(ಒಂದು ಬೆಳ್ದಿಂಗಳ ರಾತ್ರಿಯಲ್ಲಿ ' ಇರುಳುರಾಣಿ ' ಹೂಗಿಡದ ಹತ್ತಿರವಿದ್ದಾಗ ಬಂದ ಭಾವನೆ)

ಮಂದಗಮನದಿ ಬಂದು ಗಂಧವಹ ಮೈದಡವಿ—
ಮುಂದು ಮುಂದಕೆ ಒಯ್ಯೆ ಬಂದಾಯ್ತು ಇಲ್ಲಿ ;
ಗಗನವೀಜುವ ಚಂದ್ರ ಹೊಳೆದು ಪಡಿನೆಳಲಾಗಿ
ಹೂಗಳಲಿ ಮೂಡಿಹನು ಆಹಹಹ, ಅಲ್ಲಿ ! ೧

ಇರುಳಿನಲಿ ಎಚ್ಚತ್ತು ತೂಕಹಾಕುತಲಿಹಳು,
ರಾತ್ರಿ ರಾಜ್ಞಿಯೊ ಇವಳು? ಅಹುದಹುದು ತಿಳಿದೆ !
ಈ ಧುರೀಣ ಬಾಳನ್ನು ಓಗೆತ್ತ ಬೇಕೆಂದು
ನಸುನಗಲು ಮೊಗವರಳಿಕೊಂಡಿಹುದು ; ಅರಿದೆ ? ೨

ತುಂಬಿಗಿಂಬಿಗಳಿಂದ ತುಟಿಯ ಕಚ್ಚಿಸಿಕೊಳದ
ಕಲಿಸವ್ರತವನು ತಳೆದ ಸಂಯಮಿನಿ ತಾಯೆ !
ಅಂಬರದಿ ತುಂಬಿಹುದು ನಿನ್ನೊಡಲ ಸೌಗಂಧ
ಮೈಮನದಿ ತುಂಬುತಿಹೆ ; ಎಣೆಸದೆಯ ತಾಯಿ ! ೩

ಹಗಲು ಹುಚ್ಚಿಯ ಪಾಗೆ, ಇರುಳು ರಾಣಿಯು ಹೀಗೆ,
ಅರಸುಗೆಯ್ತದ ಒಗಟ ಒಡೆಯುವಿಯೆ ?— ಏನು ?
ನಮ್ಮ ಕೋಶದ ಇರುಳು ನಿನ್ನ ಕೋಶದಿ ಹಗಲು,
ತತ್ತ್ವದರ್ಶಿನಿ ನೀನು, ಕಂಡಿಹುದು ಏನು ? ೪

ನಿನ್ನಾತ್ಮದಾನಂದ ಹೂವಾಗಿ ಅರಳುವುದೆ—
ನಿಶಾಂತವಾತದೀ ಇರುಳಾಳದಲ್ಲಿ ?
ಅರಸಿ ಬಂದರೆ ಮಾತ್ರ ಅರಸಿ ಕಾಣುವೆ ನೀನು,
ಕಂಪುಗೈಗಳನೆತ್ತಿ ಹರಸುವೆಯ ಇಲ್ಲಿ ! ೫

ಅರಳಿಸಿದೆ ಹೃದಯವನು, ಕರುಣಿಸಿದೆ ತಿಳಿವನ್ನು ;
ಯೋಗ-ಭೋಗದ ಚೆಲುವ ಹೊಂಜೀವನವನು—
ತೆರೆದಿಟ್ಟೆ ನನ್ನೆದುರು; ಯೋಗಿನಿಯೆ ನೀನಹುದು !
ನೀಡಿರುವೆ ನೀಹಡೆದ ಸಂಜೀವನವನು! ೬

ನೀರಿನ ಕಳ್ಳ ★

(ಸಣ್ಣ ಕತೆ)

ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ, ಕೊಡಗನೂರು

★

ಜನಸಾಮಾನ್ಯರ ಜೀವನಾನುಕೂಲಕ್ಕಾಗಿ ಎಷ್ಟೊಂದು ವೆಚ್ಚಮಾಡಿ ಆಸ್ಪತ್ರೆಗಳನ್ನು ನಡೆಯಿಸುತ್ತಾರೆ. ಕೈತುಂಬ ಸಂಬಳ ತೆಗೆದುಕೊಂಡರೂ ಕರ್ತವ್ಯವನ್ನರಿಯದ ನರ್ಸ-ಡಾಕ್ಟರ್ ಜನರು, ಶಿವಪ್ಪನಂತಹ ಫ್ರೀವಾರ್ಡಿನ ಬಡವನನ್ನು ನೀರುಕೊಡದೆ ಕೊಲ್ಲುತ್ತಾರೆ. ಮೇಲೆ ತಮ್ಮ ಕಳ್ಳತನವನ್ನು ಮುಚ್ಚಿಕೊಳ್ಳಲಿಕ್ಕೆ, ನಿಷ್ಪಾಪಿಯಾದ ಶಿವಪ್ಪನ ಮೇಲೆ ಕಳ್ಳನೆಂದು ಆರೋಪ ಹೊರಿಸುತ್ತಾರೆ. ಕಳ್ಳನ ಮರುಬೊಬ್ಬೆ!

★

ಆಸ್ಪತ್ರೆಯ (Free Ward) ಫ್ರೀ ವಾರ್ಡಿನಲ್ಲಿ ೩೪ನೆಯ ನಂಬರ್ ರೋಗಿಯು ವಿಷಮಶೀತಜ್ವರದಿಂದ ನರಳುತ್ತಿದ್ದಾನೆ. ನಾಲ್ಕೂ ಕಡೆಗಳಲ್ಲಿಯೂ ರಾತ್ರಿಯ ನಿಶ್ಶಬ್ದವಾದ ಅಂಧಕಾರವು ಮುಸುಕಿದೆ. ಇತರ ರೋಗಿಗಳೂ ಕಂಬಳಿಯನ್ನು ಹೊದ್ದುಕೊಂಡು ವಿಶ್ರಾಂತಿಯನ್ನನುಭವಿಸುತ್ತಲಿದ್ದಾರೆ. ಒಂದು ವಿಧವಾದ ಭಯಾನಕತೆಯ ವಾತಾವರಣವಿದೆ ಎಲ್ಲೆಲ್ಲಿಯೂ. ವಾರ್ಡಿನ ಒಂದು ಮೂಲೆಯಲ್ಲಿದ್ದ ಈ ರೋಗಿಯು ಬಹಳವಾಗಿ ನರಳುತ್ತಿದ್ದಾನೆ. ಶ್ವಾಸವು ತೀವ್ರವಾಗಿದೆ. ಅವನ ಎದೆಯು ವೇದನೆಯಿಂದ ಒಡೆದು ಹೋಗುತ್ತಿದೆ. ಕಳೆದ ಮೂರು ದಿನಗಳಿಂದಲೂ ಇವನು ಇದೇ ರೀತಿ ಮೃತ್ಯುವಿನೊಡನೆ ಯುದ್ಧಮಾಡುತ್ತಿದ್ದಾನೆ.

ರೋಗಿಗೆ ನೀರಡಿಕೆಯಾಗಿ ಬಾಯಾರಿ, ಅವನು ನೀರನ್ನು ಅಪೇಕ್ಷಿಸುತ್ತಿದ್ದಾನೆ. ನೀರನ್ನು ಕುಡಿದು ದೇಹಕ್ಕೆ ಸ್ವಲ್ಪ ಶಕ್ತಿಯನ್ನೂ ಶಾಂತಿಯನ್ನೂ ಉಂಟುಮಾಡಿಕೊಳ್ಳಬೇಕೆಂದಿದ್ದಾನೆ. ಆದುದರಿಂದ ಈಗವನು, ನೀರಿನ ರೂಪದಲ್ಲಿ ಪ್ರಾಣವನ್ನೇ ಬೇಡುತ್ತಿದ್ದಾನೆಂದು ಹೇಳುವಂತಿದೆ.

ರೋಗಿಯು ಬಹಳ ಕಷ್ಟಪಟ್ಟು ಹತ್ತಿರವಿದ್ದ ಬೀರು—ಪೆಟ್ಟಿಗೆ—ಯಿನಲ್ಲಿ ನೀರಿನ ಲೋಟವನ್ನು ಹುಡುಕಿದನು. ಪೆಟ್ಟಿಗೆಗೆ ತಗಲಿ, ಲೋಟದಿಂದ 'ಟನ್' ಎಂಬ ಶಬ್ದವಾಯಿತು. ರೋಗಿಯು ನಡುಗುವ ಧ್ವನಿಯಲ್ಲಿ "ನೀರು, ನೀರು!" ಎಂದು ಕೂಗಿದನು! ಹೊರಗಿನ ಗಾಳಿಯು ಈ ಶಬ್ದವನ್ನು ಹಾರಿಸಿಕೊಂಡು ಹೊರಟು ಹೋಯಿತು!

ಆ ವಾರ್ಡಿಗೆ ಹತ್ತಿರದ ಕೋಣೆಯಲ್ಲಿ ನರ್ಸ್ ಒಬ್ಬಳು ಕುಳಿತು, ರಾತ್ರಿಯ ಸುಂದರ ಸ್ವಪ್ನಗಳ ಅವಲೋಕನದಲ್ಲಿದ್ದಳು. ಕೈಯಲ್ಲಿ ಸುಂದರವಾದೊಂದು ಕಾದಂಬರಿ; ಬಾಯಲ್ಲಿ ಸಿಗರೆಟ್ ಇದ್ದುವು.

ರೋಗಿಗೆ ಈಗ ಜ್ವರಕ್ಕಿಂತ ನೀರಡಿಕೆಯ ಬಾಧೆಯೇ ಅಸಹನೀಯವಾಗಿದ್ದಿತು. ಆಸ್ಪತ್ರೆಯಲ್ಲಿ ೩೦ ಮಂದಿ ನರ್ಸ್ ಮತ್ತು ಇಪ್ಪತ್ತು ಮಂದಿ ಡಾಕ್ಟರ್‌ಗಳು ಇದ್ದರೂ, ಇವನಿಗೆ ನೀರು ಕೊಡುವವರು ಯಾರೂ ಇರಲಿಲ್ಲ. ರಾತ್ರಿಯ ಸಮಯ; ಮನುಷ್ಯನು ರಸಮಯ ಜೀವನವನ್ನೂ ವಿಶ್ರಾಂತಿಯನ್ನೂ ಕಳೆದುಕೊಳ್ಳಲು ಬಯಸುವುದಕ್ಕೆ ಸಾಧ್ಯವಿದೆಯೆ?

* * *

ಕೆಲವೇ ದಿನಗಳ ಹಿಂದೆ ಶಿವಪ್ಪನು ಹೊಟ್ಟೆಯ ಪಾಡಿಗಾಗಿ ನಗರಕ್ಕೆ ಬಂದು ಕೆಲಸವನ್ನು ಹುಡುಕುತ್ತಿದ್ದನು. ಆತನ ಪತ್ನಿಯ ಮೈಮೇಲೆ ಒಂದೇ ಒಂದು ಹರಿದ ಸೀರೆ ಇದ್ದಿತು. ಆರು ತಿಂಗಳ ಅವನ ಶಿಶುವು ತಾಯಿಯ ಶುಷ್ಕಸ್ತನವನ್ನು ಉಣ್ಣುತ್ತಿತ್ತು. ಒಂದು ಸುಳ್ಳು ವ್ಯವಹಾರದಲ್ಲಿ ಇವನ ಆಸ್ತಿಯೆಲ್ಲವೂ ಒಬ್ಬ ಸಾಹುಕಾರನ ವಶವಾಗಿ ಹೋಗಿದ್ದಿತು. ಹಿಂದಿನ ವರ್ಷವೆ ಶಿವಪ್ಪನು ತನ್ನ ಪತ್ನಿಗೆ ಬೆಳ್ಳಿಯ ಒಳೆಯನ್ನು ಮಾಡಿಸುವುದಾಗಿ ಹೇಳಿದ್ದನು. ಆದರೆ ಈಗ ಅವನ ಸ್ಥಿತಿಯು ಈ ರೀತಿ ಆಗಿದೆ.

ಆದರೆ ಶಿವಪ್ಪನಲ್ಲಿ ಧೈರ್ಯವಿದೆ. ಕಾಲದೊಡನೆ ಯುದ್ಧಮಾಡುವುದನ್ನು ಅರಿತಿದ್ದಾನೆ. ಭಗವಂತನು ಜೀವನದೊಡನೆ ಭೋಜನವನ್ನು ಕೊಡಲಿಲ್ಲ, ಆದರ ಸಾಧನೆಯನ್ನು ಮಾತ್ರ ಕೊಟ್ಟಿದ್ದಾನೆ—ಅದನ್ನು ಸಹ ಪ್ರಯತ್ನಮಾಡಿ ದೊರಕಿಸಿಕೊಳ್ಳಬೇಕಾಗುತ್ತದೆ—ಅವನು ಒಂದು ದಿನ ತನ್ನ ಪತ್ನಿಯನ್ನು ಸಂತಯಿಸಿ, ನಗರಕ್ಕೆ ಹೋಗಿ ಕೆಲಸಮಾಡಿ ಆಕೆಯ ಜೀವನಕ್ಕೂ ಹಣ ಕಳುಹಿಸುವುದಲ್ಲದೆ ಸಾಹುಕಾರನು ವಶಪಡಿಸಿಕೊಂಡಿರುವ ಆಸ್ತಿಯನ್ನೂ ಬಿಡಿಸಿಕೊಳ್ಳುವುದಾಗಿ ಹೇಳಿ, ನಗರಕ್ಕೆ ಬಂದುಬಿಟ್ಟನು.

* * *

ನಗರದಲ್ಲಿ ಕೆಲಸವನ್ನು ಮಾಡುತ್ತಿರುವಾಗಲೆ ಶಿವಪ್ಪನು ಜ್ವರಪೀಡಿತನಾದನು. ನೂರಾರು ಮೈಲಿ ದೂರದಲ್ಲಿ ಅವನ ಪತ್ನಿಯು ಎದೆಗೆ ಕೂಸನ್ನು ಅಪ್ಪಿಕೊಂಡು, ಶೂನ್ಯವಾದ ಆಕಾಶವನ್ನು ನೋಡುತ್ತಿದ್ದಾಳೆ. ಆಕಾಶದಿಂದ ಒಂದು ತಾರೆಯು ಕೆಳಕ್ಕೆ ಬಿದ್ದು ಅಂತರ್ಧಾನವಾದುದು ಅವಳ ದೃಷ್ಟಿಗೆ ಬಿದ್ದಿತು.

* * *

ಶಿವಪ್ಪನಿಗೆ ಈಗ ಪ್ರಜ್ಞೆ ಬಂದಿದೆ. ವಿಚಾರಮಾಡಬಲ್ಲವನಾಗಿದ್ದಾನೆ. ರೋಗಿಗಳ ಮಧ್ಯದಲ್ಲಿ ಅವನು ನೀರಿಗಾಗಿ ಹಾತೊರೆಯುತ್ತಿದ್ದಾನೆ. ಆತನ ಹಾಸಿಗೆಯ ಹಿಂಬದಿಯಲ್ಲಿಯೇ ಯಾರೋ ತಿರುಗಿಸಿಬಿಟ್ಟ—ನಿಲ್ಲಿಸದೆ ಇದ್ದ—ನಲ್ಲಿಯಿಂದ ನೀರು ಸುಮ್ಮನೆ ಸುರಿಯುವ ಶಬ್ದವನ್ನು ಇವನು ಕೇಳುತ್ತಿದ್ದಾನೆ. ಆದರೆ ಇವನು ಮಾತ್ರ ನೀರಿಲ್ಲದೆ ಪ್ರಾಣಬಿಡುತ್ತಿದ್ದಾನೆ.

ಊರಲ್ಲಿ ಅವನ ಪತ್ನಿ—ಪತಿಯ ರೋಗದ ವಿಷಯವು ತಿಳಿದಿದೆಯೋ ಎಂಬಂತೆ—ಎಡೆಬಿಡದೆ ಸಂಕಟಪಡುತ್ತಿದ್ದಾಳೆ. ಇತ್ತ

ಆಸ್ಪತ್ರೆಯಲ್ಲಿ ಶಿವಪ್ಪನು "ನೀರು! ನೀರು!" ಎಂದು ಚೀರಿದನು. ಮನೆಯಲ್ಲಿ ಪತ್ನಿಯು "ದೇವರೇ" ಎಂದಳು. ಬಡತನವು ಆಕೆಯ ಪತಿಯನ್ನು ಆಕೆಯಿಂದ ದೂರ ಅಗಲಿಸಿಬಿಟ್ಟಿದ್ದಿತು.

ಶಿವಪ್ಪನ ಸ್ವರದಲ್ಲಿ—ದೀಪವು ಆರುವುದಕ್ಕೆ ಮೊದಲು ಪ್ರಕಾಶಮಾನವಾಗುವಂತೆ—ತೀವ್ರತೆಯುಂಟಾಗಿದೆ. ಆತನ ಶಬ್ದವನ್ನು ಕೇಳಿ ನರ್ಸಳು "ಪ್ರಸಾದ್, ಏನದು, ನೋಡು!" ಎಂದಳು.

ಆದರೆ ತನ್ನ ಸುಖವನ್ನು ತ್ಯಜಿಸಲು ಯಾರಿಗೆ ತಾನೇ ಮನಸ್ಸು ಬರುವುದು? ಪ್ರಸಾದನಿಗೆ ಗೊತ್ತು, ಜಗತ್ತು ಹಣದ ಮೇಲಿದೆ ಎಂಬುದು. ಫ್ರೀವಾರ್ಡಿನ ರೋಗಿಯು ಸತ್ತರೂ ಸರಿ, ಇವನಿಗೇನು? ಕೆಳಗಡೆ ಇರುವ "**ಪೇಡ್ ವಾರ್ಡ್**"ನ ರೋಗಿಗಳ ಶುಶ್ರೂಷೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಸರಿ, ಕೆಲಸಕ್ಕೇ ಕೊಡಲಿಬರಬಹುದು. ಆದುದರಿಂದ, ಕೂಡಲೆ ಅವನು ಅಲ್ಲಿಂದ ಎದ್ದು "ಪೇಡ್ ವಾರ್ಡಿನಲ್ಲಿ ಯಾರೋ ಕೂಗಿದರು!" ಎಂದ.

'ಪೇಡ್‌ವಾರ್ಡ್" ಎಂಬ ಶಬ್ದವನ್ನು ಕೇಳಿದೊಡನೆಯೆ ನರ್ಸಳು ಬೆಚ್ಚಿಬಿದ್ದು, ಆ ವಾರ್ಡಿಗೆ ಹೋದಳು. ಅಲ್ಲಿ ಎಲ್ಲರೂ ಸುಖವಾಗಿ ನಿದ್ರಿಸುತ್ತಿದ್ದರು. ಕೂಡಲೆ ಆಕೆಗೆ ಸಿಟ್ಟು ಬಂದಿತು. ಪೇಡ್‌ವಾರ್ಡಿನ ರೋಗಿಯು ಅವಳನ್ನು ಕರೆಯದೆ ಇದ್ದ ಮೇಲೆ, ಇತರ ರೋಗಿಗಳಿಗೆ ಆಕೆಯ ನಿದ್ದೆಯನ್ನು ಭಂಗಗೊಳಿಸಲು ಏನು ಅಧಿಕಾರ? ಆಸ್ಪತ್ರೆಯಲ್ಲಿ ಪುಕ್ಕಟೆ ಸೇವೆ ಪಡೆದೂ ಇವರಿಗೆ ಈ ಜಂಭವೆ! ಆದರೆ ಅಂತಹವರಿಂದಲೇ ತನ್ನ ಜೀವನ ನಡೆಯುತ್ತಿದೆ ಎಂಬುದನ್ನು ಮಾತ್ರ ಅವಳು ವಿಚಾರಿಸಲಿಲ್ಲ.

ನೀರು ಬೇಕೆಂಬ ಶಬ್ದವು ಮಾತ್ರ ಕಡಿಮೆಯಾಗಲೇ ಇಲ್ಲ. "ಪ್ರಸಾದ್, ನೋಡು, ಆ ಮೂಲೆಯಲ್ಲಿರುವ ರೋಗಿಗೆ ಸ್ವಲ್ಪ ನೀರು ಕೊಡು!" ಎಂದಳು ನರ್ಸ್. ಪ್ರಸಾದನು ಎದ್ದು, ಒಂದು ಲೋಟದಲ್ಲಿ ನೀರು ತುಂಬಿ, ಶಿವಪ್ಪನ ಪಕ್ಕದ ರೋಗಿಯ ಬಳಿ ಇಟ್ಟು ಹೊರಟು ಹೋದ. ಅಯ್ಯೋ, ಅಷ್ಟು ಕೂಗಿಕೊಂಡರೂ ಶಿವಪ್ಪನಿಗೆ ನೀರು ದೊರೆಯಲೇ ಇಲ್ಲ!

ಅವನ ಸಣ್ಣ ಕಣ್ಣುಗಳು ಆತನ ಬಳಿ ಇದ್ದ ರೋಗಿಯ ಪೆಟ್ಟಿಗೆಯ ಮೇಲಿದ್ದ ಲೋಟವನ್ನು ನೋಡಿದುವು. ಆ ರೋಗಿಯು—ನೀರು ಬೇಕೆಂದು ಒಂದು ಸಾರಿಯಾದರೂ ಕೇಳದೆ ಇದ್ದ ಆ ರೋಗಿಯು—ಸುಖವಾಗಿ ನಿದ್ರಿಸುತ್ತಿದ್ದಾನೆ.

"ಜಗತ್ತು ಎಷ್ಟು ಸ್ವಾರ್ಥಿ! ಸತ್ಕಾರ್ಯದ ಒಳ್ಳೆಯ ಯಶಸ್ಸಿನ ಹೆಸರಿನಲ್ಲಿ ಎಂತಹ ಅನ್ಯಾಯ! ಹಣವಿಲ್ಲದಿದ್ದರೆ ಜೀವಿಸುವುದಕ್ಕಾಗುವುದೇ ಇಲ್ಲವೇ? ಹಣವಿಲ್ಲದೆ ಭೂಮಿಯ ಮೇಲೆ ನೀರು ಸಹ ದೊರೆಯುವುದಿಲ್ಲವೇ? ಉಚಿತ ವೈದ್ಯಶಾಲೆಗಳ ಹೆಸರಿನಲ್ಲಿ ರೋಗಿಗಳ ಸೇವೆಯು ಹೀಗೆಯೇ ನಡೆಯುವುದು?.." ಹೀಗೆಂದು ಶಿವಪ್ಪನು ಯೋಚಿಸಲಾರಂಭಿಸಿದನು. ಅವನಿಗೆ ಬದುಕಬೇಕೆಂಬ ಆಶೆ ಬಹಳವಾಗಿತ್ತು—ಕೇವಲ ಒಂದು ಸ್ವಲ್ಪ ನೀರು ದೊರೆತಿದ್ದರೆ ಮಾತ್ರ!

ವಾರ್ಡಿನಲ್ಲಿ ಸಣ್ಣಗೆ ಉರಿಯುತ್ತಿದ್ದ ಒಂದು ದೀಪವನ್ನು ಒಂದು ನೊಳ್ಳೆಯು ಮುತ್ತುತ್ತಿತ್ತು. ಅದನ್ನು ನೋಡಿ ಶಿವಪ್ಪನು ಈ ರೀತಿ ಹೇಳಿಕೊಂಡನು:— "ಅಯ್ಯೋ! ಹುಚ್ಚು ನೊಳ್ಳೆಯೆ, ಬಣಗಿದ ಹೃದಯದಲ್ಲಿ ನೀನು ನೀರಿನ ಆಸೆಯನ್ನಿಟ್ಟಿದ್ದೀಯಲ್ಲ! ಬೆಳಗಾಗುವುದರೊಳಗೆ ನೀನು ನೀರಿಲ್ಲದೆ ಸಾಯುವೆಯಲ್ಲ!"

* * *

ಪ್ರಸಾದನು ಬೆಚ್ಚಗೆ ಹೊದೆದುಕೊಂಡು ನಿದ್ರಿಸುತ್ತಿದ್ದಾನೆ; ನರ್ಸ್ ಕಾದಂಬರಿಯನ್ನು ಮುಗಿಸಿದ್ದಾಳೆ. ಹಿಂಭಾಗದ ನಲ್ಲಿಯಲ್ಲಿ ನೀರು ಹರಿದುಹೋಗುತ್ತಿರುವ ಶಬ್ದವು ಶಿವಪ್ಪನಿಗೆ ಕೇಳಿಸುತ್ತಲೇ ಇದೆ.

ಪ್ರಾಣ ಹೋಗುವುದು ಸುಲಭವಲ್ಲ. ಶರೀರವು ಪ್ರಾಣದ ಮೋಹವನ್ನು ತ್ಯಜಿಸುವುದಿಲ್ಲ. ಕೈ, ಕಾಲು, ಕಣ್ಣು, ಕಿವಿಗಳಿಲ್ಲದ ಕುಷ್ಠರೋಗಿಯ ಮಾಂಸಪಿಂಡವು ಕೂಡ ಜೀವನಕ್ಕಾಗಿ ಕಾಸನ್ನು ಕೇಳುತ್ತದೆ! ಶಿವಪ್ಪನು ತನ್ನ ಶರೀರವನ್ನು ತಾನಲ್ಲದೆ ಇತರರಾರೂ ರಕ್ಷಿಸಲಾರರೆಂದು ತಿಳಿದಿದ್ದನು. ತನ್ನ ಶಕ್ತಿಯಿಂದಲೇ ಅವನು ನಗರಕ್ಕೆ ಬಂದಿದ್ದುದು. ಎಂದಮೇಲೆ, ತನ್ನ ಶಕ್ತಿಯಿಂದ ತಾನೇ ನೀರನ್ನೇಕೆ ಕುಡಿಯಬಾರದು? 'ನೀರಿಲ್ಲದೆ ಪ್ರಾಣವನ್ನೇಕೆ ಬಿಡಬೇಕು?' ಎಂದು ಯೋಚಿಸಿ ಎದ್ದನು. ಬಹಳ ಹತ್ತಿರದಲ್ಲೇ ನೀರಿನ ಲೋಟವಿದ್ದಿತು. ಆದರೆ ಮರುಕ್ಷಣದಲ್ಲಿಯೇ ಅವನಿಗೆ ವಿಶೇಷವಾಗಿ ಕೆಮ್ಮಲು ಬಂದು, ಬಾಯಿಂದ ವಿಪರೀತವಾದ ರಕ್ತದ ಪ್ರವಾಹವು ಹರಿಯಿತು!

ಆದರೂ ಅವನು ಧೈರ್ಯಗುಂದಲಿಲ್ಲ. ಕಾಲುಗಳಲ್ಲಿ ಬಲವಿರಲಿಲ್ಲ. ಆದರೂ ಕಷ್ಟದಿಂದ ಎದ್ದನು. ಆದರೆ ಸಾಧ್ಯವಾಗದಿರಲು ನೆಲದ ಮೇಲೆ ಕುಳಿತುಬಿಟ್ಟನು; ಹೇಗಾದರೂ ಅವನು ಜೀವನವನ್ನು ದೊರಕಿಸಿಕೊಳ್ಳಬೇಕಾಗಿತ್ತು! ಹಾಗೂ ಹೀಗೂ ತೆವಳುತ್ತ ಪೆಟ್ಟಿಗೆಯ ಬಳಿ ಬಂದನು. ಇನ್ನೇನು ಮನಃಪೂರ್ತಿಯಾಗಿ ನೀರು ಕುಡಿದು ಬಿಡುವೆನೆಂದಿದ್ದಾನೆ ಶಿವಪ್ಪ. ಆದರೆ..!

ನಡುಗುವ ಕೈಯನ್ನು ಲೋಟದ ಮೇಲಿಡುತ್ತಾನೆ; ಆದರೆ ಅವನ ಹೃದಯವು ವೇಗದಿಂದ ದಡಬಡಿಸಿತು. ಲೋಟವು ಕೈಯಿಂದ ಜಾರಿತು! ಶಿವಪ್ಪನ ತುಟಿಗಳು ಲೋಟವನ್ನು ಮುಟ್ಟಲೇ ಇಲ್ಲ; ಅವನು ಪ್ರಜ್ಞಾಶೂನ್ಯನಾಗಿ ನೆಲದ ಮೇಲೆ ಉರುಳಿದನು!

* * *

ಮಾರನೆಯ ದಿನ ಆ ವಾರ್ಡಿನ ಡಾಕ್ಟರರು ಅತ್ಯಂತ ತಿರಸ್ಕಾರದಿಂದ ಈ ರೀತಿ ಹೇಳುತ್ತಿದ್ದರು:

"ಜಗತ್ತಿನಲ್ಲಿ ಸತ್ಯವೇ ಇಲ್ಲದಂತಾಯಿತು. ನಿಸ್ಪೃಹತೆಯು ದೂರವಾಯಿತು. ತನ್ನ ಎದುರಿನಲ್ಲಿಯೆ ಮೃತ್ಯುವಿರುವುದನ್ನು ನೋಡಿಯೂ ಕೂಡ ಮನುಷ್ಯನು ಕಳ್ಳತನ ಮಾಡುವುದಕ್ಕೂ ಹಿಂಜರಿಯುವುದಿಲ್ಲ. ನೋಡಿ, ಆ ಹಳನೆಯ ನಂಬರಿನ ರೋಗಿಗೆ ವಿಷಮಶೀತಜ್ವರವಿತ್ತು. ಆದರೂ ಆ ಬದ್ಮಾಷನು ಇನ್ನೊಬ್ಬ ರೋಗಿಯ ಪೆಟ್ಟಿಗೆಯಿಂದ ವಸ್ತುಗಳನ್ನು ಕದಿಯಬೇಕೆಂದು ಹೋಗಿದ್ದನು. ಆದರೆ ಸಾಧ್ಯವಾಗಲಿಲ್ಲ; ಹೃದಯವೇ ನಿಂತು ಹೋಯಿತು! (Heart Failure)!

ಬುದ್ಧಿಯೊ…ಭಾವನೆಯೊ?

(ವಿಷಯದ ಇನ್ನೊಂದು ಬದಿ)

★

ಶ್ರೀ. ಗೌರೀಶ ಕಾಯ್ಕಿಣಿ, ಸಿರಸಿ- ಗೋಕರ್ಣ

★

ಜನರು 'ಭಾವನಾಪ್ರಧಾನ' ಎಂದು ತೆಗಳುವ ಮಾತಿನಲ್ಲಿ ಅಭಿಪ್ರೇತವಾದ 'ಭಾವನೆ (Sentiment) ಯೂ, ಬುದ್ಧಿಯ ವಿರುದ್ಧವಾಗಿ ಅಧಿಕಾರದ ಹಕ್ಕಿಗಾಗಿ ನಿಂತ ಸಹಜಸ್ಫೂರ್ತಿಯ—ಪ್ರೇರಣಾಶಕ್ತಿಯ ಭಾವನೆ (Emotion)ಯೂ ಬೇರೆಯಾಗಿವೆ. 'ಶ್ರದ್ಧೆ' ಎಂಬುದು ಇವೆರಡರಿಂದಲೂ ತೀರ ಬೇರೆ ವೈಶಿಷ್ಟ್ಯದಿಂದ ಕೂಡಿದುದಾಗಿದೆ!

★

'ಜಯಂತಿ'ಯ ಇದೇ ಕಳೆದ ನವ್ಹೆಂಬರ್ ಸಂಚಿಕೆಯಲ್ಲಿ, ಮೇಲಿನ ತಲೆಬರೆಹದ ಒಂದು ಲೇಖನವನ್ನು **ಶ್ರೀವರಾನ್ ಬುರ್ಲಿ ಬಿಂದುಮಾಧವಾಚಾರ್ಯ**ರು ಬರೆದಿರುವರಷ್ಟೇ! ಆ ಲೇಖನದ ಪರ್ಯಾಲೋಚನೆಯನ್ನು—ಅವರ ವಾದವಿಧಾನಗಳ ಪರಾಮರ್ಷವನ್ನು—ತಾತ್ತ್ವಿಕವಾಗಿಯೂ ಸಾತ್ತ್ವಿಕವಾಗಿಯೂ ಇಲ್ಲಿ ಮಾಡಬೇಕೆಂದಿದ್ದೇವೆ. ಸಂಪಾದಕರು, ಲೇಖನದ ವಿಷಯವನ್ನು ಕುರಿತು ಪೋಷಕ ಇಲ್ಲವೇ ವಿರೋಧಕ ಬರೆಹಗಳಿಗೆ ಅವಶ್ಯವಾಗಿ ಎಡೆ ಕೊಡುವಂತೆ ಆಶ್ವಾಸನ ಕೊಡುವ ಔದಾರ್ಯವನ್ನು ತೋರಿಸಿದುದರಿಂದ, ಈ ಲೇಖದ 'ಚಾಪಲ'ಕ್ಕೆ 'ಪ್ರಚೋದಿತ'ನಾದೆನು. ಬುರ್ಲಿಯವರ ಲೇಖನದಲ್ಲಿ ಅಡಿಗಡಿಗೆ ಹಲವೆಡೆಗಳಲ್ಲಿ ಒಡಮೂಡುವ ವಿಚಾರವಿಧಾನಗಳ ವಿಸಂಗತತೆಯನ್ನೂ ಲೇಖನದ ಹಿನ್ನೆಲೆಯಾದ ಅವರ ಮನೋಭೂಮಿಕೆಯಲ್ಲಿಯ ಗೊಂದಲವನ್ನೂ ಬಿಡಿಸಿ ಕಾಣಿಸಿ, ಬುದ್ಧಿ-ಭಾವನೆಗಳನ್ನು ಕುರಿತು ಅವರು ಧ್ವನಿತ ಮಾಡುವ ನಿರ್ಣಯಗಳು ಸಮರ್ಪಕವಲ್ಲವೆಂತಲೂ, ಅಂತಹ ಅಸಮರ್ಪಕ ನಿರ್ಣಯಗಳಿಗೆ ತಂದು ತಲ್ಪಿಸಿದ ಅವರ ವಿಚಾರದ ಹೆಜ್ಜೆಗಳು ಕೂಡ ಸರಿಯಾದ ನಿಟ್ಟಿನಲ್ಲಿ ಬಿದ್ದಿಲ್ಲವೆಂತಲೂ ತೋರಿಸುವುದೇ ನನ್ನ ಉದ್ದೇಶ. ಬುರ್ಲಿಯವರ ಬರೆಹದಲ್ಲಿ ಇಂತಹ ವಿಸಂಗತತೆಯೂ ತರ್ಕದುಷ್ಟತೆಯೂ ಇರಬಹುದೆಂಬ ಶಂಕೆಯು, ಸಂಪಾದಕರ ಮನಸ್ಸಿಗೂ ಒಮ್ಮೆ ಸುಳಿದು ಹೋಗಿರಲೂ ಸಾಕು. ಏಕೆಂದರೆ, ಲೇಖನದಲ್ಲಿ ಮಂಡಿಸಿದ ಒಂದು ಪಕ್ಷದ ಕುರಿತು—ಕ್ರಮಪ್ರಾಪ್ತವಾಗಬೇಕಾದ ಪ್ರತಿಪಕ್ಷವು ಮಾಡುವ ಖಂಡನೆಯನ್ನಷ್ಟೇ ಬಯಸುವ ಬದಲು -ಬಯಸುವ **ಮೊದಲು**—ಲೇಖನಕ್ಕೆ ಪೋಷಕವಾದ ಬರೆಹಗಳನ್ನೂ ಬೇರೆಯವರಿಂದ ಅಪೇಕ್ಷಿಸಿದುದನ್ನು ನೋಡಿದರೆ, ಲೇಖನ ವಿಷಯದ ಪ್ರತಿಪಾದನೆಯು ಸಾಕಷ್ಟು ಸಬಲವಾಗಿಲ್ಲವೆಂತಲೇ ಸಂಪಾದಕರು ತಿಳಿದಂತೆ ಭಾಸವಾಗುತ್ತದೆ.

ಮೊತ್ತದಲ್ಲಿ ಒಪ್ಪಿಕೊಳ್ಳಬೇಕಾದ ಮಾತೇನೆಂದರೆ: ಬಿಂದುಮಾಧವರು ತಮ್ಮ ಲೇಖನದ ಎರಡನೆಯ ಪರಿಚ್ಛೇದದಲ್ಲಿ, ಬುದ್ಧಿ-ಭಾವನೆಗಳ ಅನ್ಯೋನ್ಯಾವಲಂಬನದ ಆವಶ್ಯಕತೆಯ ಮತ್ತು ಔಚಿತ್ಯದ ಕುರಿತು ಕೊಟ್ಟ—ಲೇಖನದ ಮಧಿತಾರ್ಥದಂತೆ ತೋರುವ—ಅಭಿಪ್ರಾಯದ ಅಂಶವು ಮತಭೇದಕ್ಕೆ ಎಡೆಗೊಡುವುದಿಲ್ಲ. ಆದರೆ ಈ "ಮಧಿತಾ"ರ್ಥವು ಕಡೆದ ಮಜ್ಜಿಗೆಯಲ್ಲಿ ತೇಲುವ ಬೆಣ್ಣೆಯಂತೆ, ಲೇಖನದ ಮಿಕ್ಕ ಭಾಗದೊಂದಿಗೆ ಸಂಪರ್ಕವಿಲ್ಲದೆ, ಸ್ವತಂತ್ರವಾದ ವಿವೇಚನೆಯ ನಡುವೆ ಒಡೆದೆದ್ದು ಕಾಣುವುದನ್ನು ನೋಡಿದರೆ, ಭಾವನಾಪ್ರಧಾನತೆಯನ್ನು ಸಮರ್ಥಿಸುವ ಏಕಪಕ್ಷೀಯವಾದ— ತಮ್ಮ ಬಾವಾವಿಷ್ಟ—ಮನೋವೃತ್ತಿಯ ಕುರಿತು ಓದುಗರನ್ನು ಒಲಿಸಿಕೊಳ್ಳಲೆಂತಲೇ, ನಡುವೆ ಈ ಸರ್ವಸಮ್ಮತವಾದ ವಿಧಾನಗಳನ್ನು ಸೇರಿಸಿದಂತಿದೆ. ಏಕೆಂದರೆ ಬುದ್ಧಿ-ಭಾವನೆಗಳಲ್ಲಿ ಕೀಳು-ಮೇಲುಗಳನ್ನು ಅಳೆಯುವುದು ಕಠಿನವೆಂದು ಅಭಿಪ್ರಾಯಪಟ್ಟರೂ, ಅವುಗಳಲ್ಲಿಯ "**ತಾರತಮ್ಯ**"ವನ್ನು ತೋರಿಸುವ ವಿಚಾರವಂತಿಕೆಯ ಭರದಲ್ಲಿ, ತಮ್ಮ ಮಟ್ಟಿಗೆ ಭಾವನೆಯನ್ನೇ ಬುದ್ಧಿಗಿಂತ ಮೇಲಿರಿಸಿ ಬುದ್ಧಿಯನ್ನು ಕೀಳೆಣಿಸುವ ಅದೇ ಕಠಿನ ಕೆಲಸವನ್ನೇ ಆಚಾರ್ಯರು ಕೈಕೊಂಡಂತಿದೆ—ಇಷ್ಟೇ ಅಲ್ಲ, ಆ ಸಂದಿಗ್ಧಶ್ರೀಯದ ಕೆಲಸವನ್ನು ತಮಗೆ ತೃಪ್ತಿಯಾಗುವಂತೆ ಕೈಗೂಡಿಸಿದಂತಿದೆ! ಹೀಗೆ ಬುದ್ಧಿ-ಭಾವನೆಗಳ ಸಮಸ್ಯೆಯನ್ನು ತಮಗೆ ತೋಚಿದಂತೆ—ತಮ್ಮ ತೋಷಕ್ಕಾಗಿ—ಬಗೆಹರಿಸುವುದರಲ್ಲಿ ಬಿಂದುಮಾಧವರು ಕೊಟ್ಟ ಯುಕ್ತಿವಾದಗಳು ಎಷ್ಟರ ಮಟ್ಟಿಗೆ ಯುಕ್ತವಾದುವುಗಳಿರುತ್ತವೆಂಬುದನ್ನು ನೋಡೋಣ.

ಲೇಖನದಲ್ಲಿ ಶ್ರೀ. ಬುರ್ಲಿಯವರು, ತಮ್ಮ ವಿಷಯವನ್ನು ಸಾಧಿಸುವ ಮಹತ್ತ್ವದುವೆನಿಸುವ ಸುಮಾರು ೩೦ ವಿಧಾನಗಳನ್ನು ಮಾಡಿರುವರು. ಲೇಖನದ ಉಳಿದ ಬಹಳ ಅಂಶವು, ಈ ವಿಧಾನಗಳಿಂದ ಹೊರಬೀಳುವ ಉಪಸಿದ್ಧಾಂತಗಳಿಂದಲೂ ಪುನರುಕ್ತಿಗಳಿಂದಲೂ ತುಂಬಿವೆ. ಇನ್ನು ಈ ವಿಧಾನಗಳನ್ನು ಅನುಕ್ರಮವಾಗಿ ವಿಮರ್ಶಿಸುವುದು ಇಲ್ಲಿ ಕರ್ತವ್ಯವಾಗಿದೆ.

ವ್ಯವಹಾರವು ಭಾವನೆಯನ್ನು ತೆಗಳಿಕೆಯಲ್ಲಿ ತಳ್ಳಿಬಿಟ್ಟಿದೆಯೆಂಬ

ಅಭಿಯೋಗದಿಂದ ಲೇಖನವು ಮೊದಲಾಗಿದೆ. ಹೀಗೆ ಲೇಖಕರು ಭಾವನೆಯ ಪಕ್ಷವಹಿಸಿಯೆ ರಾಜಬುದ್ಧಿಯ ರಾಯಸ ಪಡೆದು ನಿಂತಿರುವರೆಂಬುದನ್ನು ಸೂಚಿಸುತ್ತದೆ. ಆದರೆ ಈ ಅಭಿಯೋಗಕ್ಕೆ ಆಧಾರವಾಗಿ "ಅವನೇನು ಭಾವನಾಪ್ರಧಾನ ಮನುಷ್ಯ!" ಎಂಬ ಜನರ ಮಾತನ್ನು ಉದಾಹರಿಸಿದುದನ್ನು ನೋಡಿದರೆ, ಭಾವನೆಯೆಂಬ ಶಬ್ದದ ಕುರಿತೇ ಅವರು ಬಹಳ ಗೊಂದಲ ಮಾಡಿಕೊಂಡಂತೆ ಇದೆ. ಈ ಗೊಂದಲವೇ ಲೇಖನದ ಒಂದು ವೈಶಿಷ್ಟ್ಯ. ಇಡಿಯ ಲೇಖನದಲ್ಲಿ ಇದು ಮೂಡಿದೆ. ಭಾವನೆ, ಶ್ರದ್ಧೆ, ಅಂತಃಪ್ರೇರಣೆ ಇವೆಲ್ಲ ಶಬ್ದಗಳನ್ನು ಲೇಖಕರು ಪರ್ಯಾಯವಾಚಿಯಾಗಿ ಉಪಯೋಗಿಸಿದುದನ್ನು ನೋಡಿದರೆ, ಒಂದೇ ಉಡಿಗೆ-ತೊಡಿಗೆ ತೊಟ್ಟ ಹಲವು ಜನರನ್ನು ಒಮ್ಮೆಲೆ ಕಂಡು ಭ್ರಮೆಗೊಳ್ಳುವಂತೆ—ಓದುಗನು ದಿಗ್ಭ್ರಮೆಗೊಳ್ಳುವನು! ಏಕೆಂದರೆ ವಸ್ತುತಃ ಜನರು ಯಾವ ನೊಬ್ಬನನ್ನು ಭಾವನಾಪ್ರಧಾನನೆಂದು ತೆಗಳು(?) ವುದರಲ್ಲಿ ಅಭಿಪ್ರೇತವಾದ "ಭಾವನೆ"ಯೂ, ಬುದ್ಧಿಯ ವಿರುದ್ಧ ಅಧಿಕಾರದ ಪಕ್ಷಿಗಾಗಿ ನಿಂತ ಸಹಜಸ್ಫೂರ್ತಿಯ—ಪ್ರೇರಣಾಶಕ್ತಿಯ—"ಭಾವನೆ"ಯೂ ಬೇರೆಯಾಗಿವೆ. ಇವೆರಡರಿಂದಲೂ "ಶ್ರದ್ಧೆ"ಯು ತನ್ನದೇ ಆದ ಒಂದು ವೈಶಿಷ್ಟ್ಯವನ್ನು ಇಟ್ಟುಕೊಂಡು ಬೇರೆ ಯಾಗಿದೆ. ಬಿಂದುಮಾಧವರು ಸಿಂಹಾಸನವನ್ನೇರಿಸಬೇಕೆಂದಿರುವುದು ಯಾವುದನ್ನು? ಒಬ್ಬನನ್ನು ಭಾವನಾಪ್ರಧಾನನೆಂದು ವರ್ಣಿಸುವಾಗ, ನಮ್ಮ ದೃಷ್ಟಿಯು ಆತನು ಬೆಳಸಿಕೊಂಡ 'Sentiment'ನ್ನು ಕುರಿತು ಇರುತ್ತದೆ. ಮಾನವನಲ್ಲಿ ಕಾರ್ಯ ಪ್ರೇರಣೆಯನ್ನು ಉಂಟುಮಾಡುವ ಭಾವನೆಗೆ 'Emotion' ಎಂದು ಹೆಸರು. ಬುರ್ಲಿಯವರು ಯಾವುದರ ಬದಿಯನ್ನೆತ್ತಿ ಮಾತಾಡುವರು? ಮೊದಲನೆಯದರದೊ, ಎರಡನೆಯದರದೋ ಲೇಖನದಲ್ಲಿ ಈ ಮಹತ್ತ್ವದ ವಿಷಯವೇ ಸ್ಪಷ್ಟವಾಗಿಲ್ಲ. ಇನ್ನು ಎರಡನೆಯ ಮಾತು: ಜನರು ಒಬ್ಬನನ್ನು ಭಾವನಾಪ್ರಧಾನನೆಂದು ಕರೆದರೆ, ಅವರು ಭಾವನೆಯನ್ನೇ ತೆಗಳಿದಂತೆ ಆಗುವುದೇ, ಅಥವಾ ಭಾವನೆಯ "ಪ್ರಧಾನತೆ"ಯನ್ನಷ್ಟೆ ಟೀಕಿಸಿದಂತೆ ಆಗುವುದೇ? ಬಹುಜನ ಸಮುದಾಯವು ಯಾವಾಗಲೂ ಮಧ್ಯಮಮಾರ್ಗವನ್ನೇ ಹಿಡಿಯುತ್ತದೆ. ಯಾವುದೇ ಅತಿವಾದದ ಕುರಿತು ಅವರಿಗೆ ಸ್ವಭಾವತಃ ಸಾಶಂಕವೃತ್ತಿಯಿರುತ್ತದೆ. "ಜಗತ್ತಿನ ಜೀವನವೇ (ಎಂದರೆ ಮನುಷ್ಯಪ್ರಪಂಚವೇ ಇಲ್ಲಿ ಜಗತ್ತೆಂದು ಕಲ್ಪಿಸಿರ ಬಹುದು.) ಭಾವನೆಯ ಸಾಗರದಲ್ಲಿ ತೇಲಾಡುತ್ತಲಿದೆ!" ಎಂದು ಬುರ್ಲಿಯವರು ಒಪ್ಪಿದ್ದಾರೆ. ಎಂದಮೇಲೆ ಜನತೆಯು ತಮ್ಮ ಜೀವನದ ಆಧಾರವಾಗಿರುವ ವಸ್ತುವನ್ನೇ ತೆಗಳುವುದೆಂತು? ಜನರು ತೆಗಳುವುದು ಭಾವನೆಯನ್ನಲ್ಲ; ಅದರ ಅತಿರಿಕ್ತವಾದ ಸ್ವರೂಪವನ್ನು—ಅದರ "ಪ್ರಧಾನ"ತೆಯನ್ನು. ಎಂದಮೇಲೆ 'ವ್ಯವಹಾರವು ಭಾವನೆಯನ್ನು ತೆಗಳಿಕೆಯಲ್ಲಿ ತಳ್ಳಿಬಿಟ್ಟಿದೆ' ಎಂಬ ಸಿದ್ಧಾಂತವು, ಬುರ್ಲಿಯವರು ಜನರದೆಂದು ಉದಾಹರಿಸಿದ ಮಾತಿನಿಂದ ಸಿದ್ಧವಾಗುವುದೇ ಇಲ್ಲ. ಜನರು ಭಾವನೆಯ ಪ್ರಧಾನತೆಯನ್ನು ಟೀಕಿಸುವಂತೆ, ಬುದ್ಧಿಯ ಪ್ರಧಾನತೆಯನ್ನೂ ಟೀಕಿಸುತ್ತಾರೆ. "ವಿತಂಡವಾದಿ, ಮುಂಡನ್ಯಾಯ ಮಾಡುವವ, ತೃತೀಯಃ ಪಂಥದವ" ಮೊದಲಾದ ಆಯ್ದ ಬಿರುದುಗಳನ್ನು ಅತಿಬುದ್ಧಿವಾದಿಗೆ ಅರ್ಪಿಸುವುದರಲ್ಲಿಯೂ ಜನತೆ ಹಿಂಜರಿಯುವುದಿಲ್ಲ.

ಇನ್ನು ಎರಡನೆಯ ವಿಧಾನ: "ಎಲ್ಲಿ ನೋಡಿದಲ್ಲಿ ಸಾಮಾನ್ಯವಾಗಿ ಬುದ್ಧಿಯ ಸಾಮ್ರಾಜ್ಯವೇ ಆಗಿದೆ!" ಎಂದು ಬಿಂದುಮಾಧವರು ನೊಂದುಕೊಂಡಂತಿದೆ. ಇದು ನಿಜವೇ? ನಿಜವಾಗಿಯೂ ಇಂತಹ ಅಭಿನಂದನೀಯವಾದ ಸ್ಥಿತಿಯು ಇದ್ದುದೇ ಆದರೆ—ಸಮಾಜದಲ್ಲಿ "ಸಾಮಾನ್ಯ"ವಾಗುವಷ್ಟು ಬುದ್ಧಿಯ ಆಳಿಕೆಯು ನಡೆದುದಾದರೆ - ಭಾರತದ ಉದ್ಧಾರವೂ ಜಗತ್ತಿನ ಅಭ್ಯುದಯವೂ ಎಂದೋ ಆಗಿಬಿಡುತ್ತಿತ್ತು. "ಜಗದ ಜಡತೆಯ ಹಲವು ಕ್ಲೇಶಾ" ಎಂದು ಶ್ರೀ. ಶಿವರಾಮಕಾರಂತರ ಒಂದು ನಾಟಕದಲ್ಲಿ ಒಬ್ಬ ಜೋಗಿಯು ಹಾಡುತ್ತ ಇರುತ್ತಾನೆ. ಜಗತ್ತಿನ ಜಾಡ್ಯಕ್ಕೆ ಮೂರ್ಖತನವೇ ಮುಳುವಾಗಿದೆ. ಹೀಗಿರುವಾಗ 'ನೋಡಿದಲ್ಲೆಲ್ಲ ಬುದ್ಧಿಯ ಸಾಮ್ರಾಜ್ಯವಾಗಿದೆ' ಎಂದು ನುಡಿಯುವುದು ಒಂದು ಮೇಲ್ನೋಟದ ಬೀಸುಮಾತು (Sweeping Generalisation). ಈ ಮಾತನ್ನು ಲೇಖಕರೇ ಒಂದೆರಡು ಸಾಲು ಕೆಳಗೆ ಮರೆತುಹೋದಂತಿದೆ. ಏಕೆಂದರೆ ಬುದ್ಧಿಯ ಸಾಮ್ರಾಜ್ಯ ನಡೆಯುವ ಜಗಜ್ಜೀವನವೆಲ್ಲ "ನಿಜವಾಗಿಯೂ ನೋಡಿದರೆ" ಭಾವನೆಯ ಸಾಗರದಲ್ಲಿ ತೇಲುತ್ತಿದೆಯೆಂದು ಅವರು ಹೇಳುತ್ತಾರೆ! ಇನ್ನು ಯಾವುದು ನಿಜ? ಲೇಖಕರೇ ಭಾವನೆಯ ಸಾಗರವನ್ನು ನಿಜವೆಂದು ಹೇಳುವರು; ಎಂದಮೇಲೆ ಬುದ್ಧಿಯ ಸಾಮ್ರಾಜ್ಯವು ಸುಳ್ಳೆಂದು ಅವರೇ ಒಪ್ಪಿದಂತಾಯಿತು. "ಹೀಗೆ ಜಗತ್ತು ಅಸಹಾಯವಾಗಿ ಭಾವನೆಯ ಸಾಗರದಲ್ಲಿ 'ತೇಲಾಡು'ವುದಕ್ಕಿಂತ, ಬುದ್ಧಿಯ ಸಾಮ್ರಾಜ್ಯಕ್ಕೆ ಅದು ಒಳಪಡಲಿ; ಲೋಭ-ಮೋಹಗಳ ಕ್ಷೋಭದಲ್ಲಿ ಕಂಗೆಡುವ ಲೋಕವು ವ್ಯವಸಾಯಾತ್ಮಿಕವಾದ ಬುದ್ಧಿಯ ಆಳಿಕೆಗೇ ಶರಣು ಹೋಗಲಿ!" ಎಂದು ಹಾರಯಿಸಿ ಮುಂದುವರಿಯುವಾ!

ಮೂರನೆಯ ವಿಧಾನವು ಹೀಗಿದೆ: "ಭಾವನೆಯಲ್ಲಿಯೆ ಕ್ರಾಂತಿ ಹಾಗೂ ಪ್ರಗತಿಯ ಬೀಜವಿದೆ." ಈ ಮಾತು—ಸಾಮಾನ್ಯ ವಾಚಕರು ಒಪ್ಪಬಹುದಾದರೂ—ವಿಮರ್ಶಕರು ಉಪಚಾರಕ್ಕೆಂದು ಇಟ್ಟುಕೊಳ್ಳಬಹುದಾದರೂ—ಸತ್ಯವಲ್ಲ. ಇದರಲ್ಲಿ ಒಂದು ಅರ್ಧ ಸತ್ಯವೂ ಒಂದು ಅಸತ್ಯವೂ ಒಳಗೊಂಡಿವೆ. ಕ್ರಾಂತಿಯ ಬೀಜವು ಭಾವನೆಯಲ್ಲಿ ಇರುವುದಿಲ್ಲ. ಏಕೆಂದರೆ ಭಾವನೆಯು ಒಂದು ಪರಿಣಾಮ. ಕ್ರಾಂತಿಪ್ರವಣತೆಯೂ ಒಂದು ಎನಿಸಿಕೆಯೇ—ಭಾವನೆಯೇ ಸರಿ. ಎಂದಮೇಲೆ ಭಾವನೆಯು ಭಾವನೆಯಿಂದ ಹೇಗೆ ಉಂಟಾದೀತು? ಮನುಷ್ಯನ ಮೂಲಪ್ರವೃತ್ತಿ (Instincts)ಗಳಿಗೆ ಹೊಂದಿಕೊಂಡು ಅವುಗಳ ಪರಿಣಾಮವಾಗಿ ಬೇರೆ ಬೇರೆ ಭಾವನೆಗಳಿರುತ್ತವೆ. ಕ್ರಾಂತಿಯ ಬೀಜವೂ— ಪ್ರತಿಯೊಂದು ಚಟುವಟಿಕೆಯ ಬೀಜವೂ—ಮನುಷ್ಯನ ಪ್ರವೃತ್ತಿಗಳ ಹಸಿವೆಯಲ್ಲಿ

ಇರುತ್ತದೆ. ಪರಿಸ್ಥಿತಿ ಪ್ರವೃತ್ತಿಗಳ ಪ್ರತಿಕ್ರಿಯೆಯಲ್ಲಿರುತ್ತದೆ. ಅಂಬಿಕಾತನಯರು ಹೊಗಳಿ ಹಾಡಿದ ಸ್ವಾತಂತ್ರ್ಯದಂತೆಯೆ ಕ್ರಾಂತಿಯೂ '' **ಹಸಿದ ಚೇತನೆಯ ತಿನಿಸು** ''. ಭಾವನೆಯು ಕ್ರಾಂತಿಗೆ-ಅದೇಕೆ ಪ್ರತಿಯೊಂದು ಕ್ರಿಯೆಗೆ—ಬಲಿ ಕೊಡುವ ಶಕ್ತಿಕೇಂದ್ರ (Dynemo) ಅಹುದು. ಆದರೆ ಅದರ ಬೀಜವು ಮೂಲ ಪ್ರವೃತ್ತಿಗಳಲ್ಲಿಯೇ ಇರುತ್ತದೆ. ಇದು ಅರ್ಧ ಸತ್ಯದ ಮಾತು. ಇನ್ನು ಅಸತ್ಯದ ಭಾಗದ ವಿಷಯ: '' ಭಾವನೆಯಲ್ಲಿಯೇ ಪ್ರಗತಿಯ ಬೀಜವಿರುತ್ತದೆ ! '' ಇದು ಸತ್ಯವಲ್ಲ. ಯಾವುದೊಂದು ಕ್ರಿಯೆಯನ್ನು ಪ್ರೇರಿಸುವ ಸ್ಫೂರ್ತಿ ಭಾವನೆಯು. ಆ ಕ್ರಿಯೆಯ ಸುಷ್ಟು-ದುಷ್ಟತೆಯನ್ನೂ ಪ್ರಗತಿ-ಅಧೋಗತಿಯನ್ನೂ ನಿರ್ಣಯಿಸಿ, ಆ ದಿಶೆಯಲ್ಲಿ ಕೃತಿಯನ್ನು ನಿಯಂತ್ರಿಸುವುದು ಕೇವಲ ಬುದ್ಧಿಯ ಕೆಲಸ. ಭಾವನೆಯು ಅಂಧವಾಗಿರುತ್ತದೆ. ಬುದ್ಧಿಯೇ ಅದರ ಕೈಪಿಡಿ. ಮಾನವಸಮಾಜದ ಇಂದಿನ ವರೆಗಿನ ಪ್ರಗತಿಯೆಲ್ಲ ಬುದ್ಧಿಪುರಸ್ಸರವಾಗಿ ಕೈಕೊಂಡ ಕಾರ್ಯದಿಂದಲೇ ಆಗಿದೆ. ಮೂಲಪ್ರವೃತ್ತಿಗಳ ಉದಾತ್ತೀಕರಣ (Sublimation) ವೇ ಎಲ್ಲ ಪ್ರಗತಿಯ ನೆಲೆ. ಪ್ರವೃತ್ತಿಗಳನ್ನು ಹೀಗೆ ಶುದ್ಧಮಾಡುವ—ತಜ್ಜನ್ಯ ಭಾವನೆಗಳನ್ನು ವಿಶಾಲ—ವಿಶುದ್ಧ—ಮಾಡುವ ಕುಶಲ-ಕರ್ಮವು ಕೇವಲ ಬುದ್ಧಿಗೆ ಒಪ್ಪಿದ ವಿಷಯವು. ಆದ್ದರಿಂದ ಬರೇ ಗತಿಯ ಪ್ರಚೋದನೆಯು ಭಾವನೆಯಿಂದ್ದರೂ "ಪ್ರ''ಗತಿಯ ಪ್ರತೋದನು (Whip) ಬುದ್ಧಿಯೇ. ಎಂದಮೇಲೆ ಪ್ರಗತಿಯ ಬೀಜವು ಭಾವನೆಯಲ್ಲಿದೆ ಎಂಬ ಮಾತು ಸುಳ್ಳಲ್ಲವೇ !

ಶ್ರೀ. ಬುರ್ಲಿಯವರು 'ತರ್ಕ' ಮತ್ತು 'ಬುದ್ಧಿ' ಇವೆರಡರ ಸಮೀಕರಣ ಮಾಡಿದಂತಿದೆ. ಎರಡೂ ಶಬ್ದಗಳನ್ನು ಪರ್ಯಾಯವಾಗಿ ಉಪಯೋಗಿಸಿರುವರು; ಆದರೆ ಇದು ಅಷ್ಟೊಂದು ಸಮರ್ಪಕವಲ್ಲ. ಬುದ್ಧಿಯು ಒಂದು ಶಕ್ತಿ. ಅದರ ಕೃತಿಯು ವಿಚಾರ; ಅನುಮಾನ. ಈ ಕೆಲಸವನ್ನು ನಿಯಂತ್ರಿಸುವ ಕಟ್ಟಳೆಯು ತರ್ಕ (Logic). ಸಂಗೀತವನ್ನು ತಾಲವು ನಿಯಂತ್ರಿಸುವುದು ; ಆದರೆ ಅಷ್ಟಕ್ಕೇ ಸಂಗೀತವೇ ತಾಲವೆಂದು ಸಾಧಿಸಬಹುದೇ ? ಅದೇ ಮೇರೆಗೆ ತರ್ಕವನ್ನೇ ಬುದ್ಧಿಯೆಂದು ತಿಳಿದು ಹಾಗೆ ಶಬ್ದಗಳನ್ನು ಬಳಸುವುದು ಯುಕ್ತವೇ ?

ಬುದ್ಧಿ-ಭಾವನೆಗಳ ಪರಸ್ಪರ ಸಹಕಾರವನ್ನು ಹೇಳುವಾಗ, ಬಿಂದುಮಾಧವರು ಕೃಷ್ಣಾರ್ಜುನರ ಒಂದು ಉಪಮೆಯನ್ನು ಕೊಟ್ಟಿರುವರು. ಆದರೆ ಆ ಉಪಮೆಯಲ್ಲಿ ಅವರ ಪಕ್ಷಪಾತಿಯಾದ ವೃತ್ತಿಯು, ಉಪಮಾನಗಳನ್ನು ಅದಲುಬದಲು ಮಾಡಿದೆ. ಕೃಷ್ಣಾರ್ಜುನರ ಉಪಮೆಯನ್ನೇ ಕೊಡುವುದಿದ್ದರೆ, ಕೃಷ್ಣನ ಉಪಮೆಯು ನಿಯಾಮಕ ನಿರ್ಣಾಯಕವಾದ ಬುದ್ಧಿಶಕ್ತಿಗೇ ಉಚಿತವಾಗಿ ಹೋಲುವುದು. ಭಾವಾವಿಷ್ಟವಾದ ಸಂಶಯ-ವಿಮೂಢನಾದ ವಿಕಾರಪರವಶನಾದ ಅರ್ಜುನನ ಉಪಮಾನವು ಕೇವಲ ಭಾವನೆಯ ದಾಸರಾದವರಿಗೆ ಯೋಗ್ಯವಾಗಿ ಅನ್ವಯಿಸುವುದು. ಹೀಗಿರುವಲ್ಲಿ ಭಾವನೆಯನ್ನು ಕೃಷ್ಣನಿಗೆ ಹೋಲಿಸುವುದರಿಂದ ಬುರ್ಲಿಯವರು ಕೆಲಮಟ್ಟಿಗೆ ಓದುಗರಲ್ಲಿ ಬುದ್ಧಿಭೇದ ಮಾಡುವ ಆರೋಪಕ್ಕೆ ಗುರಿಯಾಗುವುದಿಲ್ಲವೇ ?

ಆಮೇಲೆ ಬುರ್ಲಿಯವರು, ಬುದ್ಧಿ-ಭಾವನೆಗಳ ಕೀಳು ಮೇಲುಗಳನ್ನು ತಾನು ಅಳೆಯುವವನಲ್ಲವೆಂದು ಸೂಚಿಸಿ, ಅವುಗಳ "ತಾರತಮ್ಯ''ವನ್ನು ತೂಗಿ ತೋರಿಸಲು ಅಣಿಯಾಗಿದ್ದಾರೆ. ಆದರೆ ಇದು ಬರಿಯ ಮಾತಿನ ಮಾಟವೇ ಸರಿ. ಹೆಬ್ಬಾಗಿಲಿನಿಂದ ಹೊರಗೆ ಒಗೆದ ವಸ್ತುವನ್ನು ಹಿತ್ತಲುಬಾಗಿಲಿನಿಂದ ಒಳಗೆ ತಂದಂತೆ ಆಗಿದೆ ! ಏಕೆಂದರೆ ತಾರತಮ್ಯವು ಯಾವಾಗಲೂ ಒಂದೇ ಗುಣ—ಒಂದೇ ವಿಷಯ—ಕುರಿತು ಸಂಭವಿಸುತ್ತದೆ. ಅದು ಹೆಚ್ಚುಕಡಿಮೆ ಅಂಶವನ್ನು ತೋರಿಸುವ ಬಗೆಯು. ಎರಡು ಭಿನ್ನವಿಷಯಗಳಲ್ಲಿ ಹೆಚ್ಚುಕಡಿಮೆ (ತಾರತಮ್ಯ) ತೋರಿಸುವುದೆಂದರೆ, ಪರ್ಯಾಯವಾಗಿ ಅವುಗಳಲ್ಲಿಯ ಕೀಳು ಮೇಲು ಕಾಣಿಸಿದಂತೆಯೆ. ಶ್ರೀ. ಬುರ್ಲಿಯವರೂ ಅದೇ ಕೆಲಸ ಮಾಡಿದ್ದಾರೆ. ಬುದ್ಧಿಗೆ ಶರಣು ಹೋಗುವುದರಿಂದ ಆಗುವ ಅನರ್ಥಗಳನ್ನು ಬಣ್ಣಿಸಿ, ಭಾವನೆಯ ಕೈಯಲ್ಲಿ ಜೀವನದ ಕಡಿವಾಣವನ್ನು ಕೊಡುವುದು ಲೇಸೆಂಬ ತಮ್ಮ ಪ್ರೀತಿಯ ಅಭಿಪ್ರಾಯವನ್ನು ಅವರು ಮುಂದೆ ಹೆಚ್ಚು ಹೆಚ್ಚು ಸ್ಪಷ್ಟವಾಗಿ ಸೂಚಿಸಿದ್ದಾರೆ. ಆದರೂ ನಡುನಡುವೆ—ಕದಾಚಿತ್ ನಿರುಪಾಯವಾಗಿ-ಬುದ್ಧಿಗೆ ಔಪಚಾರಿಕ ಸ್ತುತಿಸುಮಗಳನ್ನು ತೂರಿದ್ದಾರೆ. ಹೀಗಾಗಿ ಲೇಖನವು ಪರಸ್ಪರ ವಿಸಂಗತ-ವಿಧಾನಗಳ ಒಂದು ಪ್ರದರ್ಶನವಾಗಿದೆ.

ಮುಂದಿನ ಸಂದಿಗ್ಧ ವಿಧಾನವೆಂದರೆ '' ಮಾನವತೆಯ ಬುಡದಲ್ಲಿ ಭಾವದ ಅಧಿಷ್ಠಾನವೇ ಹೆಚ್ಚು.'' ಎಂಬುದು. ಇದರ ಪುಷ್ಟಿಗಾಗಿ '' ಶ್ರದ್ಧಾಮಯೋಽಯಂ ಪುರುಷಃ '' ಎಂಬ ಗೀತಾವಾಕ್ಯವು ಕೊಡಲ್ಪಟ್ಟಿದೆ. ಮಾನವನು ಒಂದು ಪಶುವು ; ಆದರೆ ಬುದ್ಧಿಯುಳ್ಳ ಪಶುವು. ಎಂದ ಮೇಲೆ, ಮಾನವತೆಯ ಅನನ್ಯಸಾಮಾನ್ಯ ಲಕ್ಷಣವು ಬುದ್ಧಿಯು ; ಭಾವನೆಯಲ್ಲ. ಇನ್ನು ಅಧಿಷ್ಠಾನವೆಂದ ಮೇಲೆ ಮಾನವತೆಗೆ ಅದೊಂದೇ ಇರಬೇಕು; ಸಮವಾಗಿರಬೇಕು. ಆದರೆ ಬುರ್ಲಿಯವರು ಅದರಲ್ಲಿಯೂ ಹೆಚ್ಚು-ಕಡಿಮೆಯನ್ನು ಕಲ್ಪಿಸಿದ್ದಾರೆ. ' ಭಾವದ ಅಧಿಷ್ಠಾನವೇ ಹೆಚ್ಚು '' ಎಂಬ ಮಾತಿನ ಹುರುಳೇನು ? ಯಾತರ ಅಧಿಷ್ಠಾನವು ಎಷ್ಟರಮಟ್ಟಿಗೆ ಕಡಿಮೆ ಇರುತ್ತದೆ ? ಇಲ್ಲಿ ಭಾವವೆಂದರೇನು ? ಮುಂದಿನ ಗೀತಾವಾಕ್ಯದಿಂದ ಅದು ಶ್ರದ್ಧೆಯೆಂದು ಬುರ್ಲಿಯವರು ತಿಳಿದುಕೊಂಡಂತಿದೆ. ಆದರೆ ಇದು ಸರಿಯೇ ? ಮಾನವನು ಶ್ರದ್ಧಾಮಯನೆಂಬುದು ನಿಸ್ಸಂದೇಹ; ಆದರೆ ಶ್ರದ್ಧೆಯು ಒಂದು ಭಾವನೆಯೇ, ಪ್ರವೃತ್ತಿ-ಜನ್ಯ ಎನಿಸಿಕೆಯೇ ? ಗೀತೆಯು ಮನುಷ್ಯನಲ್ಲಿ ಮನ, ಬುದ್ಧಿ, ಮತ್ತು ಅಹಂಕಾರವೆಂದು ಮೂರು ತತ್ತ್ವಗಳನ್ನು ನಿರೂಪಿಸಿದೆ. ಶ್ರದ್ಧೆಯು ಮನಸ್ತತ್ತ್ವದ ವೈಶಿಷ್ಟ್ಯವಲ್ಲ ; ಅದು ಅಹಂಕಾರದ ಪರಿಣಾಮ. ಶ್ರದ್ಧೆಯಲ್ಲಿ ಇಚ್ಛಾಶಕ್ತಿಯು (willing) ಪ್ರಧಾನವಾಗಿರುತ್ತದೆ. ಬದುಕುವ ಇಚ್ಛೆ, ಆ ಇಚ್ಛೆಯನ್ನು ಬಿಡಬಾರದೆಂಬ ಹಟ. . ಇವೆಲ್ಲ ಶ್ರದ್ಧೆಯಲ್ಲಿ ಅಡಗಿರುತ್ತವೆ. ತಾತ್ಪರ್ಯ

ವೇನೆಂದರೆ ಪುರುಷನು ಶ್ರದ್ಧಾಮಯನಿರುವನೆಂಬ ಮಾತನ್ನು ಭಾವನೆಯ ದೃಷ್ಟಿಯಿಂದ ಗೀತಾಕಾರರು ಹೇಳಿದುದಿಲ್ಲ. ಮತ್ತೆ ಮೇಲಾಗಿ ಈ ಶ್ರದ್ಧಾಮಯತೆಯು ಜ್ಞಾನಕ್ಕೇ— ಬುದ್ಧಿಜನ್ಯ ಅನುಭವಕ್ಕೇ— ಹೆಚ್ಚು ಹೊಂದಿರುತ್ತದೆಂಬುದನ್ನು ಗೀತೆಯೇ ಸಾರುತ್ತದೆ. 'ಶ್ರದ್ಧಾವಂತನು ಜ್ಞಾನವನ್ನು ಪಡೆಯುತ್ತಾನೆ. ಅಶ್ರದ್ಧಧಾನನು ಅಜ್ಞಾನಿಯಾಗುತ್ತಾನೆ' ಇವೇ ಮುಂತಾದ ಉಲ್ಲೇಖಗಳ ಮೇಲಿಂದ, ಶ್ರದ್ಧೆಯು ಬುದ್ಧಿಯ ಚಟುವಟಿಕೆಗೆ ಅನುವು ಮಾಡಿಕೊಡುತ್ತದೆ—ಧೀಪ್ರಚೋದಕವಾಗಿಯೇ ಇರುತ್ತದೆ. ಎಂದ ಮೇಲೆ, ಶ್ರದ್ಧೆಯೇ ಭಾವನೆಯೆಂದು ಕಲ್ಪಿಸಿ ಅದಕ್ಕೂ ಬುದ್ಧಿಗೂ ಇರುವ ತಾರತಮ್ಯವನ್ನು ತೋರಿಸಲು ಹೊರಡುವುದು ಸಮಂಜಸವಾದುದೆ?

ಈ ಮುಂದೆ, ಬುದ್ಧಿ-ಭಾವನೆಗಳಲ್ಲಿಯ ಭೇದ-ಮಹತ್ತ್ವಗಳನ್ನು ಸಿದ್ಧಮಾಡಲು ಬಿಂದುಮಾಧವರು, ಯುಕ್ತಿವಾದಕ್ಕಿಂತ ದೃಷ್ಟಾಂತಗಳನ್ನೇ ಹೆಚ್ಚು ಅನುಸರಿಸಿದಂತಿದೆ. ಇಲ್ಲಿ ಸೋಜಿಗದ ಸಂಗತಿಯೇನೆಂದರೆ, ಅವರು ಕೊಟ್ಟ ದೃಷ್ಟಾಂತಗಳೆಲ್ಲ ಪರಸ್ಪರ ಅನುಕೂಲವಾಗಿಲ್ಲ. ಅದೆಂತೆಂಬುದನ್ನು ನೋಡುವಾ. ಭಾವನೆಯು ಅಪ್ರಾಪ್ತವಯಸ್ಕ ರಾಜಕುಮಾರನಂತೆ; ಬುದ್ಧಿಯು ಕೆಲವು ನಿಶ್ಚಿತ ಅವಧಿಯ ತನಕ (ಕುಮಾರನು ವಯಸ್ಸಿಗೆ ಬರುವ ತನಕ) ಅವನ ಪರವಾಗಿ ರಾಜ್ಯ ನಡೆಯಿಸುವ ರಾಜ್ಯರಕ್ಷಕನಂತೆ! ಈ ದೃಷ್ಟಾಂತದಲ್ಲಿ ಬಚ್ಚಿಕೊಂಡಿರುವ— ಅಧ್ಯಾಹೃತವಾದ— ವಿಚಾರಭೂಮಿಕೆಯನ್ನು ಪರಾಮರ್ಶಿಸೋಣ. "ಮಾನವ ಜೀವನದಲ್ಲಿ ನಿಯಂತ್ರಣ-ನಿರ್ಣಯಗಳನ್ನು ಮಾಡುವ ಶಕ್ತಿ ಭಾವನೆಯದೇ ಸರಿ— ಆದರೆ ಅದು ವಿಶಿಷ್ಟ ಅವಧಿಯಲ್ಲಿ ತಲೆದೋರಿ ಕೊನೆಯ ವರೆಗೆ ಕಾರ್ಯಕಾರಿಯಾಗುತ್ತದೆ! ಅಷ್ಟಿಂದು ಆ ವಧಿಯ ತನಕವೇ ನೈಮಿತ್ತಿಕವಾಗಿ (Intrim) ಬುದ್ಧಿಯ ಕೈಯಲ್ಲಿ ಅಧಿಕಾರ ಸೂತ್ರಗಳು ಬರುತ್ತವೆ— ಇರುವುದು ಯುಕ್ತವು." ಈ ವಿಚಾರಸರಣಿಯೇ ಸಂಪೂರ್ಣ ತಪ್ಪಾದುದು. "ಭಾವನೆಯು ಬಲಿತು ಶುದ್ಧವಾಗಿ ಪರಿಣಮಿಸುವವರೆಗೆ ಮಾತ್ರ ಬುದ್ಧಿಯ ಬುದ್ಧಿಯ ಆವಶ್ಯಕತೆ"ಯಂತೆ! ಇದೆಂತಹ ವಿಪರ್ಯಸ್ತವಾದ ವಿಧಾನ! ಭಾವನೆಯು ಬಲಿಯುವುದು— ಭಾವನೆಯು ಪ್ರೇರಣೆಮಾಡ ಮೂಲಪ್ರವೃತ್ತಿಯ ಉತ್ಕಟತೆಯ ಮೇಲೆ ಅವಲಂಬಿಸಿರುತ್ತದೆ. ಬುದ್ಧಿಯ ನಿಯಂತ್ರಣದಲ್ಲಿ ಬಂದ ಭಾವನೆಯು, ಬಲಿಯುವ ಬದಲು ಸ್ವಲ್ಪ ಕ್ಷೀಣವೇ ಆಗುತ್ತದೆ. ಒಂದು ಉದಾಹರಣೆಯನ್ನು ನೋಡಿರಿ. ಕೂಸು ನಿಚ್ಚಣಿಕೆಯ ಮೇಲಿಂದ ಕೆಳಕ್ಕೆ ಬಿತ್ತು. ಅಪಾಯವು ಒಪಳವಾಯಿತು. ತಂದೆ-ತಾಯಿಗಳು ಗಾಬರಿಗೊಂಡು, ಭಾವಾವಿಷ್ಟರಾಗಿ, ಮುಂದುಗಾಣದೆ (ಬುದ್ಧಿಗೆ ಮಂಕು ಬಡಿದು) ಒದ್ದಾಡುವರು. ಅಷ್ಟರಲ್ಲಿ ನೆರೆಮನೆಯ ಡಾಕ್ಟರರೊಬ್ಬರು ಬರುವರು; ಅವರೂ ಕೂಸನ್ನು ನೋಡುವರು. ಆದರೆ ಭಾವಾವಿಷ್ಟರಾಗುವರೇ ಇಲ್ಲ, ಅವರಿಗೆ ಇಂತಹ ಸಂದರ್ಭದಲ್ಲಿ ಏನು ಮಾಡುವುದೆಂಬುದರ ಅರಿವು ಚೆನ್ನಾಗಿದೆ. ಸನ್ನಿವೇಶವನ್ನು ತನ್ನ ದೃಷ್ಟಿಪಾತದಿಂದ ಬುದ್ಧಿಯ ಕಡಿವಾಣದ ಕೆಳಗೆ ಅವರು ತರಬಲ್ಲರು. ಎಂತಲೇ ಅವರು ಸ್ಥಿತಪ್ರಜ್ಞರಂತೆ ವರ್ತಿಸುವರು. ಈ ಮಾತಿನಿಂದ ಸ್ಪಷ್ಟವಾಗುವುದೇನೆಂದರೆ, ಮೂಲಪ್ರವೃತ್ತಿಯು ಮನಃಶಕ್ತಿಯನ್ನು ಕೆರಳಿಸಿ ಕೆಣಕಿಸಿ, ತನ್ನ ಪೂರಯಿಕೆಗೆ ಸಹಾಯಕವಾಗುವ ಭಾವನೆಯನ್ನು ಉಂಟುಮಾಡಿತೆಂದರೆ, ಆ ಪೂರಯಿಕೆಯ ರೀತಿಯನ್ನು, ಎಷ್ಟೆಷ್ಟು ಬುದ್ಧಿಯು ತೋರಿಸಲು ತಡಮಾಡುವುದೋ ಅಷ್ಟಷ್ಟು ಆ ಭಾವನೆಯು ಉತ್ಕಟವಾಗಿ (ಬಲಿಷ್ಠವಾಗಿ) ಬೆಳೆಯುವುದು. ಆದ್ದರಿಂದ ಯಾವುದೊಂದು ಭಾವನೆಯನ್ನು ಬಲಿಸುವ ಕೆಲಸ ಬುದ್ಧಿಯದಲ್ಲ—ಎಂದರೆ ಬುದ್ಧಿಯ ಸಹಜ ಕಾರ್ಯವಲ್ಲ. ಭಾವನೆಯನ್ನು ಶುದ್ಧಮಾಡುವುದೆಂದರೇನು? ಭಾವನೆಯು ಒಂದು ಶಕ್ತಿ. ಶುದ್ಧಾ-ಶುದ್ಧತೆಯು ಯಾವುದೊಂದು ಹೇತುಮೂಲಕವಾಗಿರುತ್ತದೆ. ಅದು ಶಕ್ತಿಯ ವಿನಿಯೋಗಕ್ಕೆ ಒಪ್ಪಿದ ಸಂಗತಿಯೇ ವಿನಾ ನೇರವಾದ ಶಕ್ತಿಗಲ್ಲ. ವಿದ್ಯುಚ್ಛಕ್ತಿಯ ವಿನಿಯೋಗವನ್ನು ದೇಹಾಂತ ಶಿಕ್ಷೆಗೂ ಮಾಡಬಹುದು; ದೇವಾಲಯದಲ್ಲಿ ದೀಪಾರಾಧನೆಗೂ ಮಾಡಬಹುದು. ಈ ವಿನಿಯೋಗದ ಅರಿಕೆಯು ಬುದ್ಧಿಗೆ ಒಪ್ಪಿದ ವಿಷಯ. ಬುದ್ಧಿಯೇ ಶುದ್ಧ ಇಲ್ಲವೇ ಅಶುದ್ಧವಿರಬಹುದು; ಭಾವನೆಯು ಅಲ್ಲ. ಭಾವನೆಯು ಸ್ವತಃ ನೀತಿಬಾಹಿರವಾದುದು (Amoral). ಆಚಾರ್ಯರ ವಿಧಾನದಲ್ಲಿ ಇನ್ನೂ ಒಂದು ಗೊಂದಲವಿದೆ. ಭಾವನೆಯನ್ನು ಒಮ್ಮೆ ಶುದ್ಧವಾಗಿಸಿದ ಮಾತ್ರಕ್ಕೆ—ಸೇವಾನಿವೃತ್ತನಾಗುವ ರಾಜರಕ್ಷಕನಂತೆ—ಬುದ್ಧಿಯ ಆವಶ್ಯಕತೆ ಮುಗಿಯಿತು. ಆದರೆ ಈ ಮಾತು ಶಾಸ್ತ್ರಶುದ್ಧವಲ್ಲ. ವಿಷಯ ಸನ್ನಿಕರ್ಷದಿಂದ ಉಂಟಾದ ಭಾವನೆಯು ಸದಾಕಾಲವಾಗಿ ಇರುವಂತಹದಲ್ಲ. ಎಂದ ಮೇಲೆ, ಭಾವನೆಯನ್ನು ಶುದ್ಧಮಾಡುವ ಕೆಲಸವಷ್ಟೇ ಬುದ್ಧಿಯದೆಂದು ಒಪ್ಪಿದರೂ, ಈ ಆವಶ್ಯಕತೆಯು ಅಡಿಗಡಿಗೆ ಬಾಳುವೆಯಲ್ಲಿ ಇದ್ದೇ ಇರುತ್ತದೆ. ಒಮ್ಮೆಲೆ ಬುದ್ಧಿಯ ಆವಶ್ಯಕತೆಯು ಅಳಿಯುವುದಿಲ್ಲ.

ರಾಜ್ಯರಕ್ಷಕನ ಉಪಮೆಯನ್ನು ಪುಷ್ಟಿಗೊಳಿಸಲು ಬುದ್ಧಿಯನ್ನು, ಮತ್ತೆ ಕಾಯುವ ಕಾವಲುಗಾರನಿಗೆ ಹೋಲಿಸಿದ್ದಾರೆ! ಈ ಮೂಲಕ ಮೊದಲನೆಯ ದೃಷ್ಟಾಂತದಲ್ಲಿ ಬುದ್ಧಿಯ ಪಾಲಿಗಿಟ್ಟ— ತಾತ್ಕಾಲಿಕವಾದರೂ ಮಹತ್ತ್ವದ— ಹೊಣೆಗಾರಿಕೆಯನ್ನು ಈ ಎರಡನೆಯ ಉಪಮೆಯಲ್ಲಿ ಅಲ್ಲಗಳೆದಿದ್ದಾರೆ. ಕಾವಲುಗಾರನ ಕೆಲಸವು ಅಭಾವಾತ್ಮಕ (Negative) ವಾಗುವುದು; ಬುದ್ಧಿಯ ಕೆಲಸವು ವಸ್ತುತಃ ಭಾವಾತ್ಮಕವಾದುದು (Positive). ಇವೆರಡರಲ್ಲಿ ಯಾವುದು ನಿಜ?

ಅನಂತರ ಬುದ್ಧಿ-ಭಾವನೆಯ ಕುರಿತು ಬುರ್ಲಿಯವರು ಕೊಟ್ಟ ಉಪಮೆಯೆಂದರೆ ಒರೆಗಲ್ಲು-ಚಿನ್ನಗಳದು. ನಿಜವಾಗಿಯೂ ಈ ಹೋಲಿಕೆಯು ಕೆಲಮಟ್ಟಿಗಾದರೂ ಸಮರ್ಪಕವಿದೆ. ಆದರೆ ಮೇಲಿನ ರಾಜರಕ್ಷಕ-ಕಾವಲುಗಾರರಿಗೂ ಈ ಒರೆಗಲ್ಲಿಗೂ ಎಲ್ಲಿಯ ಹೊಂದಿಕೆ? ಆದರೆ ಈ ಉಪಮೆಯಿಂದ ಲೇಖಕರು ಒಂದು ಮಾತನ್ನು ಒಪ್ಪಿದಂತಿದೆ; ಬೇರೆ ಬೇರೆ ಚಿನ್ನದ ಒಡವೆಗಳನ್ನು ಒರೆ-

ಹಾಕಿ ನೋಡಲು ಒರೆಗಲ್ಲಿನ ಆವಶ್ಯಕತೆಯು ಯಾವಾಗಲೂ ಇರುವಂತೆ, ಬುದ್ಧಿಯ ಆವಶ್ಯಕತೆಯು ಯಾವಾಗಲೂ—ಮಾನವನಲ್ಲಿ ಭಾವನೆಗಳು ಏಳುತ್ತಿರುವವರೆಗೂ—ಇರುತ್ತದೆ. ಆದರೆ ಈ ಮಾತು, ರಾಜರತ್ನಕರ ಹೋಲಿಕೆಯಲ್ಲಿ ಸೂಚಿತವಾದ, ನಿರ್ದಿಷ್ಟ ಅವಧಿಯವರೆಗೇ ಬುದ್ಧಿಯ ಅಧಿಕಾರವೆಂಬ ಅಭಿಪ್ರಾಯಕ್ಕೆ ಎಷ್ಟರಮಟ್ಟಿಗೆ ಸರಿಹೋಗುತ್ತದೆ? "ಭಾವನೆಗೆ ಪುಟಹಾಕಲು ಬುದ್ಧಿಯ ಆವಶ್ಯಕತೆ ಇರುವುದೆಂದು ಒಪ್ಪಿದ ಮೇಲೆ, ಬುದ್ಧಿ-ಭಾವನೆಗಳೆರಡೂ ಮಹತ್ತ್ವದುವು—ಪರಸ್ಪರ ಪೂರಕವಾದುವು" ಎಂದು ಅರ್ಥವಾಗುತ್ತದೆ. ಅಲ್ಲಿಯೆ ಮುಂದೆ "ಶುದ್ಧಭಾವನೆಯ ಮುಂದೆ ತರ್ಕವು (ಎಂದರೆ ಬುದ್ಧಿ) ಅಸಮರ್ಥವಿರುತ್ತದೆ." ಎಂಬ ವಿಧಾನ ಮಾಡುವುದರಲ್ಲಿ ಹುರುಳೇನು? ಸಾಮರ್ಥ್ಯ-ಅಸಾಮರ್ಥ್ಯದ ಪ್ರಶ್ನೆಯು ಇರ್ವರು ಪ್ರತಿದ್ವಂದ್ವಿಗಳಲ್ಲಿ ಉದ್ಭವಿಸುವುದು. ಈ ಸಂದರ್ಭದಲ್ಲಿ ಬುದ್ಧಿ-ಭಾವನೆಗಳಲ್ಲಿ ಅಂತಹ ಪ್ರತಿದ್ವಂದ್ವಿತ್ವ ಇದೆಯೇ? ಚಿನ್ನ ಚಿನ್ನಗಳಲ್ಲಿ ಶುದ್ಧತೆಯ ಕುರಿತು ಸ್ಪರ್ಧೆಯಿರಬಹುದು (ಎಂದರೆ ಲಾಕ್ಷಣಿಕವಾಗಿ). ಆದರೆ ಒರೆಗಲ್ಲು-ಚಿನ್ನದಲ್ಲಿ ಯಾವ ಸ್ಪರ್ಧೆ? ಭಿನ್ನ ಭಿನ್ನ ಭಾವನೆಗಳಲ್ಲಿ ಪ್ರತಿದ್ವಂದ್ವತೆ ಇರಬಹುದು: ಉದಾ: ಲೋಭ-ದಯೆ, ಭೀತಿ, ಪ್ರೀತಿ. ಆದರೆ ಬುದ್ಧಿ-ಭಾವನೆಗಳಲ್ಲಿ ಪ್ರತಿದ್ವಂದ್ವತೆಯನ್ನು ಕಲ್ಪಿಸಿ, ಅವುಗಳಲ್ಲಿ ಒಂದು ಇನ್ನೊಂದರೆದುರು ಅಸಮರ್ಥವೆಂದು ಸಾರುವುದು ಸರಿಯೆ?

ಮೇಲೆ ವಿವೇಚಿಸಿದ—ಬುದ್ಧಿಯನ್ನು ಹೋಲಿಸಿದ—ಮೂರು ಉಪಮಾನಗಳಲ್ಲಿ ಕಂಡುಬರುವ ವಿಚಾರವಿಭ್ರಮವು ವಾಚಕರಿಗೆ ಸಾಕಷ್ಟು ಮನದಟ್ಟಾಗಿರಬಹುದೆಂದು ತಿಳಿದು, ಲೇಖಕರ ಮಿಕ್ಕ ವಿಧಾನ (ಸಿದ್ಧಾಂತ?)ಗಳ ಕಡೆಗೆ ಹೊರಳುವಾ!

"ಜೀವನದಲ್ಲಿ ತರ್ಕಕ್ಕೆ ಅಷ್ಟೊಂದು ಪ್ರತಿಷ್ಠೆಯಿಲ್ಲ; ಭಾವನೆಗೆ ಮಾತ್ರ ಸ್ವತಂತ್ರ ಅಧಿಷ್ಠಾನವಿದೆ" ಎಂದು ಬರೆಯುವವರ ಮತ. ಇಲ್ಲಿ "ಜೀವನದಲ್ಲಿ" ಎಂಬ ಮಾತು ಬಹಳೇ ವ್ಯಾಪಕವಾಗಿದ್ದುದರಿಂದ ಅಸ್ಪಷ್ಟವಿದೆ (Vague). ನಮ್ಮ ಅನುಭವದ ಮಟ್ಟಿಗೆ ತರ್ಕಶುದ್ಧವಾದ ಬುದ್ಧಿವಾದದ ಮೊದಲನೆಯ ಪ್ರತಿಕ್ರಿಯೆಯು ಜೀವನದಲ್ಲಿ (ಎಂದರೆ ಜನರಲ್ಲಿ) ಆಶ್ಚರ್ಯದ್ದು; ಎರಡನೆಯ ಪ್ರತಿಕ್ರಿಯೆಯು ಪ್ರಶಂಸೆಯದು. ಆದರೆ ಇವೆರಡೂ ಪರಿಣಾಮಗಳಾಗಬೇಕಾದರೂ, ಕೇಳುವವರಲ್ಲಿ ಮನವರಿಕೆ ಮಾಡಿಕೊಳ್ಳುವ ಒಲವು ಇರಬೇಕು. ಇದಿಲ್ಲವಾದಲ್ಲಿ—ಪೂರ್ವಗ್ರಹದೂಷಿತವಾದ ತಿಳಿವಳಿಕೆಯವರಲ್ಲಿ—ಬುದ್ಧಿವಾದಿಯು ಎಷ್ಟೇ ಮನಗಾಣಿಸಿದರೂ ಆತನ ಯುಕ್ತಿವಾದಗಳನ್ನು ಅವರು ಒಪ್ಪುವುದಿಲ್ಲ. ಇದು ಅವರ ಹಟದ ಪ್ರಶ್ನೆ. (A man convinced against his will; is of the same opinion still!) ತರ್ಕಕ್ಕೆ ಪ್ರತಿಷ್ಠೆಯಿಲ್ಲವೆಂಬುದು ಇಂತಹ ಮಂದಿಯ ಮಂದೆಯಲ್ಲ. ಬರೆಯುವರಿಗೆ ಇಂಥವರ ಮಾತೇ ಪ್ರಮಾಣವೇ! ಭಾವನೆಗೆ ಸ್ವತಂತ್ರ ಅಧಿಷ್ಠಾನವಿದೆಯೆಂದರೇನು? ಇಲ್ಲಿ ಅಧಿಷ್ಠಾನ ಮತ್ತು ಪ್ರತಿಷ್ಠೆ ಪರ್ಯಾಯವಾಚಿಗಳೇ? ಅದನೂ ಸ್ವತಂತ್ರವೆಂದರೇನು? ಬುದ್ಧಿ ಇರಲಿ, ಭಾವನೆಯಿರಲಿ, ಮನಃಶಕ್ತಿಯಿಂದ ಮಾರ್ಪಡುವ ರೂಪಗಳು. ಅದಕ್ಕೂ ಪರಿಸ್ಥಿತಿ, ಅನುಭವದ ಸ್ಮೃತಿ ಇವೆಲ್ಲ ಕಾರಣ. ಬುದ್ಧಿ-ಭಾವನೆಗಳ ಪ್ರಭಾವವೂ ಜನರ ಮನಃಸ್ಥಿತಿಗೆ ಸಾಪೇಕ್ಷವಾಗಿಯೇ ಇರುತ್ತದೆ. ಎಂದಮೇಲೆ ಭಾವನೆಗೆ ಸ್ವಾತಂತ್ರ್ಯವೆಂತಹದು? ಎಲ್ಲಿಯದು? ತರ್ಕದ ಪ್ರತಿಷ್ಠೆಗೆ ಮಾನವನ ಇತಿಹಾಸವೇ ಸಾಕ್ಷಿ. ಯಾವುದೇ ಕ್ರಾಂತಿಯ ಮೊತ್ತದಲ್ಲಿ ವಿಚಾರಕ್ರಾಂತಿಯಾಗಬೇಕಾಗುತ್ತದೆ. ಯಾವುದೇ ಸಾಂಸ್ಕೃತಿಕ ವಿಜಯಕ್ಕಾಗಿ ಆಗುವ ಹೋರಾಟದ ಕೊನೆಯ ಕಾದಾಟವು, ವೈಚಾರಿಕ ಭೂಮಿಕೆಯಲ್ಲಿ ನಡೆಯಬೇಕಾಗುತ್ತದೆ. ಬೌದ್ಧಧರ್ಮದ ವಿರುದ್ಧ ಕುಮಾರಿಲಭಟ್ಟರು ಹೂಡಿದ ಪ್ರತಿಕ್ರಾಂತಿಯ ಕೊನೆಯ ನಿರ್ಣಾಯಕ ಯುದ್ಧವನ್ನು, ಶಂಕರಾಚಾರ್ಯರು ತಾತ್ತ್ವಿಕವಾಗಿ ತಾರ್ಕಿಕವಾಗಿ ಗೆಲ್ಲಬೇಕಾಯಿತು. ಪ್ರತಿಯೊಮ್ಮೆ ಮನುಷ್ಯಕೋಟಿಯು ಐತಿಹಾಸಿಕ ಪ್ರಗತಿಯ ಸೀಳುದಾರಿಗಳೆದುರು ನಿಂತಾಗ, ಬುದ್ಧಿಯೇ ಮಾರ್ಗದರ್ಶಕವಾಗಿದೆ. ಎಂದಮೇಲೆ ತರ್ಕಕ್ಕೆ ಪ್ರತಿಷ್ಠೆಯಿಲ್ಲವೆಂದು ಸಾರುವುದು ಜಾಣತನವೇ?

ಇನ್ನು ಚಿಕಿತ್ಸಕ ವೃತ್ತಿಯು ತಂದೊಡ್ಡುವ ಅನಾಹುತಗಳ ವರದಿಯನ್ನು ಒಪ್ಪಿಸುತ್ತ ಬರೆಯುವರು 'ಅದು ಭೀತಿಯ ಬಲೆಯಲ್ಲಿ ಕೆಡಹುತ್ತದೆ, ಹೃದಯವನ್ನು ನಡುಗಿಸುತ್ತದೆ' ಎಂದು ಮುಂತಾಗಿ ಹೇಳುವರು! ಈ ಎಲ್ಲ ಪರಿಣಾಮಗಳ ವರ್ಣನೆಯು ಬುದ್ಧಿಯೋಗಕ್ಕಿಂತ "ಕೃಪಯಾಪರ್ಯಾವಿಷ್ಟ" ವಾದ ವಿಷಾದಯೋಗವನ್ನೇ ಹೋಲುತ್ತದೆ! ಈ ದೃಷ್ಟಿಯಿಂದ ಮೇಲೊಮ್ಮೆ ಬುದ್ಧಿಗೆ ಅರ್ಜುನನ ಉಪಯೋಗವನ್ನು ಒರೆದು ಹೋದ ಕೈಯು, ಅರ್ಜುನನ ಅವಸ್ಥೆಯನ್ನು ಬುದ್ಧಿಗೆ ಅನ್ವಯಿಸುವ ಮೋಹಕ್ಕೆ ಒಳಗಾಯಿತು! ಬುದ್ಧಿಯದೆಂದುಕೊಟ್ಟ ಬರೆಯುವರ ವರ್ಣನೆಯೂ ಕೇವಲ ಭಾವಾವೇಶದ್ದು—ತರ್ಕಶೂನ್ಯವಾದ ವಿಕಾರವಶತೆಯದು. ಅದೇ ಮೇರೆಗೆ ಭಾವನೆಯನ್ನು ಪುಟಕೊಡುವ ಬುದ್ಧಿಯು ಅದನ್ನು "ಹತ್ತಿಕ್ಕಿ ರಸಾತಳಕ್ಕೆ" ಒಯ್ಯುವುದೆಂದು ಬರೆದಲ್ಲಿ ಯಾವಮಾತನ್ನು ನಂಬಬೇಕು? ಅದೇ ಮೇರೆಗೆ ಭಾವನೆಗೆ ಬುದ್ಧಿಯ ರಕ್ಷಣೆ-ಕಾವಲು ಅವಶ್ಯವೆಂದು ಬರೆದವರೇ, ಭಾವನೆಯ ಸರಳತೆಯೇ (ಪ್ರತಿಯೊಂದು ಭಾವನೆಯೂ ಸರಳವಾಗಿರುತ್ತದೆ. ಮಿಶ್ರಭಾವನೆಯು ಒಂದು ಮನೋಗಂಡ) ಅದರ ರಕ್ಷಾಕವಚವೆಂದು ಬರೆದಲ್ಲಿ ಯಾವ ಮಾತು ಸತ್ಯವೆಂದು ತಿಳಿಯಬೇಕು?

ಇದಕ್ಕಿಂತ ಮೋಜಿನ ಮಾತು ಮತ್ತೊಂದಿದೆ. ಬುದ್ಧಿಪ್ರಧಾನನಾದ ವ್ಯಕ್ತಿಯು "ಧೂರ್ತನೂ, ವಿದ್ವಾಂಸನೂ, ದೀರ್ಘಸೂತ್ರಿಯೂ, ನಿರ್ದಯನೂ ಪಶುವೂ" ಆಗುವನಂತೆ! ಇನ್ನು ಧೂರ್ತನೆಂದರೆ ಯಾರು? ದೂರದರ್ಶಿಯೋ ಸಂಧಿಸಾಧುವಾದ ಠಕ್ಕನೊ! ಬರಿಯ ತರ್ಕವು ಬೆಳೆದರೆ ಮನುಷ್ಯನು ಹೀಗಾಗುವನೇ! ತರ್ಕವು ಒಂದು ಅಸ್ತ್ರ. ಲೋಭಮೂಲಕವಾದ ಇಚ್ಛಾಶಕ್ತಿಯು ತರ್ಕದ ಆಧಾರ ತೆಗೆದುಕೊಂಡರೆ ಆಗುವ ದೋಷಗಳನ್ನು ತರ್ಕದ ತಲೆಗೆ ಎಸೆಯುವುದು ಭ್ರಮೆಯಲ್ಲವೇ? ದೀರ್ಘಸೂತ್ರಿಯಾಗು-

ವನೆಂದರೇನು ? ಸೋಮಾರಿಯಾಗುವನೆಂದಲ್ಲವೇ ? ಅಥವಾ ಒಂದು ಸಮಸ್ಯೆಯ ಹಲವು ಮುಖಗಳನ್ನು ಒಮ್ಮೆಲೇ ನೋಡಿದ ಮೂಲಕ ತಟಸ್ಥನಾಗುವನೆಂತಲೊ ? ಇನ್ನು ನಿರ್ದಯತೆಯೂ ಚಟುವಟಿಕೆಯದೊಂದು ಕುರುಹು. ಸೋಮಾರಿಯದು ಹೆಚ್ಚಾಗಿ 'Live and let live' ಧೋರಣವಿರುತ್ತದೆ. ಇಂಥವನು ನಿರ್ದಯನಾಗಬಹುದೇ ? ಮೇಲಾಗಿ ಆತನು ಪಶುವಾಗುವನಂತೆ ! ಇದು ವದತೋವ್ಯಾಘಾತವಲ್ಲವೇ ? ಪಶುತ್ವದಿಂದ ಮನುಷ್ಯತ್ವವನ್ನು ತಳ್ಳಿದ್ದು ಬುದ್ಧಿಲಕ್ಷಣದಿಂದ; ಎಂದಮೇಲೆ ಆ ಬುದ್ಧಿಯೇ ಪಶುತ್ವದ ಲಕ್ಷಣವಾಗುವುದೇ ? ಈ 'ರಾಜಗುಹ್ಯ' ವನ್ನು ಹೇಗೆ ತಿಳಿಯಬೇಕು ? ಇನ್ನು ಈ ವಾಕ್ಯವನ್ನು ಅತಿಶಯೋಕ್ತಿಯ ಅಲಂಕಾರವನ್ನು ಸಾಧಿಸಲು ಬರೆದಿದ್ದರೆ ಆ ಮಾತು ಬೇರೆ. ಆದರೆ ಸತ್ಯದ ನಿಕಷಕ್ಕೆ ಹಚ್ಚಿ, ತತ್ತ್ವನಿಷ್ಕರ್ಷವನ್ನು ಮಾಡಲು ಹೊರಟ ಲೇಖನದಲ್ಲಿ ಇಂತಹ ವಿಧಾನಗಳು ಕ್ಷಮ್ಯವಲ್ಲ. "ತರ್ಕದಲ್ಲಿ ತ್ಯಾಗವಂತೂ ದೂರದ ಮಾತು" ಎಂಬ ಅಭಿಪ್ರಾಯವು ಒಂದು ಬಿಸಿ ಸುಮಾತಲ್ಲವೇ ? ಸ್ವಾರ್ಥವು ಸಹಜಪ್ರವೃತ್ತಿ. ಅದು ಬುದ್ಧಿಯ ನಿಯಂತ್ರಣದಿಂದಲೇ ಪರಾರ್ಥ ಭಾವನೆಯಲ್ಲಿ ಪರಿಣಮಿಸಿರುತ್ತದೆ. ಎಂದಮೇಲೆ ತರ್ಕ (ಬುದ್ಧಿ) ದಲ್ಲಿ ತ್ಯಾಗವಿಲ್ಲವೆಂಬುದರ ಸ್ವಾರಸ್ಯವೇನು ? ಬುದ್ಧಿಪ್ರಧಾನರೆಲ್ಲರೂ ಸ್ವಾರ್ಥಿಗಳಾಗುವರೆಂಬ ಅಭಿಪ್ರಾಯವನ್ನು ಬರೆಯುವರು ಸಮರ್ಥಿಸಬಲ್ಲರೇ ?

ಅದೇ ಮಾತು ನಿರ್ದಯತೆಯದು. ಬುದ್ಧಿಪ್ರಧಾನರು—ಯಾರ ಭಾವನೆಯನ್ನು ಬುದ್ಧಿಯು ಆಳುತ್ತದೆಯೊ ಅಂಥವರು—ನಿರ್ದಯರಾಗುವರೆಂಬ ವಿಧಾನವೇ ಅನ್ಯಾಯದ್ದು; ನಿರ್ದಯತೆಯದು. ಬುದ್ಧಿಪ್ರಧಾನತೆ ಬಲಿತಂತೆ ಮಮತ್ವದ ಮೋಹವು ಕಡಿಮೆಯಾಗಿ ಸಮತ್ವದ ದೃಷ್ಟಿ ಬರಬಹುದು. ಏಕದೇಶೀಯವಾದ ಸ್ನೇಹವು ವಿಶಾಲವಾಗಿ, ಸಹಾನುಭೂತಿಯ ಪರಿಘವು ಬೆಳೆಯಬಹುದು. ಬುದ್ಧಿಪ್ರಧಾನರು ಭಾವನೆಗಳನ್ನು ಉದ್ರಿಕ್ತವಾಗಗೊಡಲಿಕ್ಕಿಲ್ಲ. ಆದರೆ ಅವರು ಕ್ರೂರರಾಗುವರೆಂಬ ಮಾತು ಹಾಸ್ಯಾಸ್ಪದವು. ಏಕೆಂದರೆ ನಿರ್ದಯತೆಯು—ಕ್ರೂರತೆಯು—ಭೀರುತನದ ಪ್ರತಿಕ್ರಿಯೆಯು. ಬುದ್ಧಿಬಲಿತಲ್ಲಿ ಭಯವು ಕಡಿಮೆಯಾಗುತ್ತದೆ. ಬುದ್ಧಿಪ್ರಧಾನನು ಯಾವುದೇ ಪರಿಸ್ಥಿತಿಯನ್ನು ತನ್ನ ಅಂಕೆಯಲ್ಲಿ ತರಬಲ್ಲನು. ಅಂಥವನು ಕ್ರೂರನಾಗಲಾರನು. ಇಲ್ಲಿ ಇನ್ನೊಂದು ವಿಸಂಗತತೆಯಿದೆ. ನಿರ್ದಯತೆಯೆಂದರೆ ಕ್ರೂರತೆಯು. ಇದು ಒಂದು ಭಾವನೆ. ಬುದ್ಧಿಯು ಭಾವನೆಗಳನ್ನು ಹತ್ತಿಕ್ಕುವುದೆಂದು ಬರೆಯುವರು ಒಮ್ಮೆ ಒಪ್ಪಿಕೊಂಡಿದ್ದಾರೆ. ಅಂತಹ ಬುದ್ಧಿಯೇ ಹೊಸದೊಂದು ಭಾವನೆಯನ್ನು ಹೇಗೆ ಉಂಟುಮಾಡೀತು ? ಕೇವಲ ಬುದ್ಧಿಪ್ರಧಾನರಾದ ವಿಜ್ಞಾನಿಗಳು ಹೆಚ್ಚಾಗಿ ಸಾತ್ತ್ವಿಕ ಮನೋವೃತ್ತಿಯವರಾಗಿರುತ್ತಾರೆಂಬುದು, ಅವರ ಚರಿತ್ರದಿಂದ ಸ್ಪಷ್ಟವಾಗುತ್ತದೆ.

ಭಾವನಾಪ್ರಧಾನರ ಮೇಲೆ ಸಹಸಾ ಬುದ್ಧಿಯ ಪ್ರಭಾವವಾಗುವುದಿಲ್ಲ. ಆದರೆ ಬರೆಯುವರು ಒಂದು ವಿಚಿತ್ರ ವಿಧಾನ ಮಾಡಿದ್ದಾರೆ. "**ಭಾವನೆಗೆ ಪಟ್ಟ**" ಕಟ್ಟಿದ ಪೌರ್ವಾತ್ಯ ಸಂಸ್ಕೃತಿಯ ಮೇಲೆ (ಭಾರತದ ಮೇಲೆ), ಬುದ್ಧಿಪ್ರಧಾನವಾದ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವವು **ಭರದಿಂದ** ಆಗುತ್ತಲಿದೆಯಂತೆ ! ಸಂಸ್ಕೃತಿಯಲ್ಲಿ ದಿಕ್ಕಿನಂತೆ ಭೇದಕಲ್ಪಿಸುವುದು ಶಾಸ್ತ್ರೀಯವಲ್ಲ. ಕೆಲವು ಅಧಿಕಾರಾರೂಢ ವರ್ಗಗಳ ಹಿಂಸಾಮಯ ಯುಯುತ್ಸುವೃತ್ತಿಯ ಬಗ್ಗೆ, ಲೋಭಲೋಲುಪ ನೀತಿಭ್ರಷ್ಟತೆಯ ಬಗ್ಗೆ, ಇಡಿ ರಾಷ್ಟ್ರಗಳನ್ನೇ ಹಳಿಯುವುದು ಜಾಣತನದ ಲಕ್ಷಣವೂ ಅಲ್ಲ. ಈ ಉಭಯ ಸಂಸ್ಕೃತಿಗಳನ್ನು ಕುರಿತು ಬರೆಯುವರು ಬರೆದ ಪರಿಚ್ಛೇದದ ಹಿಂದೆ, ಪೂರ್ವಗ್ರಹ ದುಷ್ಟವಾದ ವೈಚಾರಿಕ ಗೊಂದಲವಿದೆ. ಈ ಸಂಸ್ಕೃತಿ ಭೇದದ ಇತ್ಯರ್ಥವನ್ನು ಮಾಡಲು ಬೇರೊಂದು ಲೇಖನವನ್ನೇ ಬರೆಯಬೇಕಾದೀತು.

"ಭಾವನಾತಿರೇಕದ ಕೇಡುಗಳು ಕ್ಷಣಿಕವಾದುವು, ತರ್ಕಾತಿರೇಕದ ಹಾನಿ ಭಯಂಕರವಾದುವು !" ಎಂದು ಬರೆಯುವರು ಎನ್ನುವರು. ತಮ್ಮ ಈ ಯುಕ್ತಿವಾದವನ್ನು ಪೋಷಿಸಲು ಅವರು ಒಂದೂ ಉದಾಹರಣೆಯನ್ನು ಕೊಟ್ಟಿಲ್ಲ. ನಮ್ಮ ಅನುಭವವಂತೂ ಇದಕ್ಕೆ ವಿಪರೀತವಾಗಿದೆ. ಭಾವನಾತಿರೇಕದಿಂದ ಕುರುಡನಾದ ಮನುಷ್ಯನು, ತಾನು ಮಾಡಿದ ಕೇಡನ್ನು ಕಾಣದೆ ಅನನ್ವಿತ ಅನರ್ಥಕ್ಕೆ ಹೊಣೆಯಾಗಬಹುದು. ಆದರೆ ತಪ್ಪುತಿದ್ದುವುದೇ ತರ್ಕಬುದ್ಧಿಯ ಒಂದು ಲಕ್ಷಣವಾದ ಮೂಲಕ, ಬುದ್ಧಿವಿಪರ್ಯಾಸದಿಂದ ಆದ ಹಾನಿಯನ್ನು ಮನುಷ್ಯನು ಅರಿತುಕೊಳ್ಳುವ ಸಂಭವ ಹೆಚ್ಚು. ಅದ್ದರಿಂದ ತಿದ್ದುವ ಸಂಭವ ಹೆಚ್ಚು ; ಅಪಾಯದ ಭಯಂಕರತೆ ಕಡಿಮೆ.

ನನ್ನ ಬುದ್ಧಿಗೆ ನಿಲುಕುವ ಮಟ್ಟಿಗೆ ಶ್ರೀ. ಬಿಂದುಮಾಧವರ ಮುಖ್ಯ ವಿಧಾನಗಳ ಪರಾಮರ್ಶೆಯನ್ನು ಮಾಡಿದುದಾಯಿತು. ಆದಷ್ಟು ಸಂಕ್ಷೇಪದಲ್ಲಿ ಬರೆಯಬಯಸಿದರೂ ಲೇಖನವು ಬಹಳ ಬೆಳೆಯಿತು. ಇದಕ್ಕೆ ಮೂಲ ಲೇಖನದ ವಿಷಯದ ಗುರುತ್ವವೂ, ಮೂಲಲೇಖಕರ ವ್ಯಕ್ತಿತ್ವದ ಗೌರವವೂ ಕಾರಣ.

ಶರಣಸಂದೇಶ

(ವಾರಪತ್ರಿಕೆ)

ಸಂಪಾದಕರು: **ಶ್ರೀ. ಹರ್ಡೇಕರ್ ಮಂಜಪ್ಪನವರು**

ಹಿಂದೂ ಸಂಘಟನೆಯ ಗುರಿಯನ್ನಿಟ್ಟುಕೊಂಡು ಯಶಸ್ವಿಯಾಗಿ ಕಾರ್ಯಮಾಡುತ್ತಿರುವ ಕನ್ನಡ ವೃತ್ತಪತ್ರಿಕೆಯೆಂದರೆ ಇದೊಂದೆ. ದೇಶ-ವಿದೇಶದ ವರ್ತಮಾನಗಳನ್ನೂ ವಿಚಾರಪೂರ್ಣ ಲೇಖನಗಳನ್ನೂ ಇದರಲ್ಲಿ ಓದಬಹುದು.

ವಾರ್ಷಿಕ ವರ್ಗಣಿ ಅಂಚೆಯ ವೆಚ್ಚ ಸೇರಿ ೩–೦–೦ ಗಳು.

'ಶರಣಸಂದೇಶ'

ಪೋಸ್ಟ್ : ಆಲಮಟ್ಟಿ, ಜಿಲ್ಲಾ ವಿಜಾಪೂರ.

ಅಳುವಿನ ಆಳ

(ಒಂದು ಹರಟೆ)

ಶ್ರೀ. ಕೋ. ರಾ. ಕೃಷ್ಣಮೂರ್ತಿ, ಬಿ. ಎ. ಚಿಂತಾಮಣಿ

★

"ಅಳಬಲ್ಲವ ಆಳಬಲ್ಲ!"

"ಸ್ತ್ರೀಧನವೇ ರೋದನ!"

—ಉಕಲ್ಪಿತ

ಉತ್ತರದಿಕ್ಕಿನಲ್ಲಿ ದಿವ್ಯಪ್ರಭೆಯಿಂದ ಬೆಳಗುತ್ತ, ನಾವಿಕರಿಗೆ ಮಾರ್ಗದರ್ಶಕವಾಗಿರುವ ಧ್ರುವನಕ್ಷತ್ರದ ಇರುವಿಕೆಗೆ ಕಾರಣವೇನು? ಸರ್ವರಿಗೂ ಆದರ್ಶನಾಗಿರುವ ಶ್ರೀರಾಮನ ಪ್ರಸಿದ್ಧಿಗೆ ಕಾರಣವೇನು?....ಈ ಪ್ರಶ್ನೆಗಳಿಗೆ ಉತ್ತರ—**ಅಳು.** ಸುರುಚಿಯು ತನ್ನ ಮಗನಿಗೇ ರಾಜ್ಯಬೇಕೆಂದು ಹಟಹಿಡಿದು ಅಳುವಿನ ಸೋಗು ಹಾಕದಿದ್ದರೆ ಧ್ರುವನನ್ನು ಕೇಳುವವರಾರಿದ್ದರು? ಭರತನು ಅಯೋಧ್ಯಾಧಿಪತಿಯಾಗಬೇಕೆಂದೂ ರಾಮನು ವನಕ್ಕೆ ತೆರಳಬೇಕೆಂದೂ ಕೈಕೇಯಿಯು ದಶರಥನೆದುರು ಅಳದಿದ್ದರೆ, ಶ್ರೀರಾಮನಿಗೆಲ್ಲಿತ್ತು— ಪಿತೃವಾಕ್ಯಪರಿಪಾಲನಮಾಡಿ — ಆದರ್ಶನಾಗುವ ಸುದೈವ?

'ಅಳು'– ಎರಡಕ್ಷರದ ಶಬ್ದವಾದರೆ ತಾನೆ ಏನು? ಅದರಿಂದ ಆಗದ ಕಾರ್ಯವಿಲ್ಲ; ಕಟ್ಟದ ಕಾವ್ಯವಿಲ್ಲ!

ಎಲ್ಲದಕ್ಕೂ ಮೂಲ ಅಳು. ಮಗುವಿನ ಭಾಷೆ ಅಳು— ಮಾನವನ ಮೊದಲ ಭಾಷೆ ಅಳು. ಮಗು ಅತ್ತಿತೆಂದರೆ ಪ್ರಾಯಶಃ ಅದಕ್ಕೆ ಹಸಿವಾಗಿರಬೇಕು ಇಲ್ಲವೆ ನಿದ್ರೆ ಬರುತ್ತಿರಬೇಕೆಂದು ತಾಯಿಯ ಜೀವ ಚಡಪಡಿಸುತ್ತದೆ. ಅದರ ಮುಖದಲ್ಲಿ ನಗುವಿನ ಲಹರಿ ಕಾಣಬೇಕೆಂದು ತಾಯಿಯ ಹಂಬಲ. ಅಳುವಿನಲ್ಲಿ ಅಷ್ಟು ಆಕರ್ಷಣಶಕ್ತಿ ಇದೆ. ಮಗು ಅಳತೊಡಗಿದರೆ ಕೂಡಲೆ ತಾಯಿ ಅದರ ಬಳಿಸಾರಿ, ಏನು ಕೊರತೆಯೋ ಅದನ್ನು ಸರಿಪಡಿಸಿ, ಅದಕ್ಕೆ ಬೇಕೆನಿಸಿದ ತಿಂಡಿ ಪದಾರ್ಥ, ಆಟದ ಸಾಮಾನು ಕೊಡುವಳು—ಕೆಲವು ಬಾರಿ ಪ್ರೀತಿಯಿಂದ, ಅನೇಕ ಬಾರಿ ಅದು ಅಳು ನಿಲ್ಲಿಸಲೆಂದು.

ದೊಡ್ಡವರಾದ ಮೇಲೂ ಅಳು ತಪ್ಪಿದ್ದಲ್ಲ. ಅನ್ಯರ ಮುಂದೆ ನಮ್ಮ ಕಷ್ಟ ಸುಖ ಅಳುವಿನ ಮೂಲಕ ತೋಡಿಕೊಂಡಷ್ಟೂ ನಮಗೆ ಹಾಯೆನಿಸುತ್ತದೆ; ಅವರ ಸಹಾನುಭೂತಿ ಸಿಕ್ಕುತ್ತದೆ. ನಮ್ಮ ಗೋಳನ್ನು ಇನ್ನೊಬ್ಬರೆದುರು ತೋಡಿಕೊಳ್ಳುವುದು ಅಳುವಿನ ಒಂದು ರೂಪಾಂತರ. ನಾಲ್ಕು ರೂಪಾಯಿ ಸಾಲಬೇಕೆಂದು ಗೆಳೆಯನನ್ನು ಕೇಳಿದರೆ ಅವನು ಇಲ್ಲವೆಂದಾನು. ಸ್ವಲ್ಪ ತಲೆ ತಗ್ಗಿಸಿ, ಕಣ್ಣೀರ ಕರೆದು— ಎಂದರೆ ಅಳುಮೋರೆ ಹಾಕಿ— ತಾಪತ್ರಯ ವಿವರಿಸಿದರೆ, ನಾಲ್ಕಲ್ಲ ಎಂಟು ರೂಪಾಯಿ ಕೊಡುವನು. ಅವನ ಹೃದಯವನ್ನು–ಅದು ಎಷ್ಟೇ ಕಲ್ಲಾಗಿದ್ದರೂ— ನಮ್ಮ ಅಳು ಕರಗಿಸುತ್ತದೆ.

ಅಳುವಿದು ದುಃಖದ ದ್ಯೋತಕ; ಕೊರತೆಯ ಕುರುಹು; ಗೋಳಿನ ಗುರುತು. ಎಲ್ಲ ಕಷ್ಟಗಳೂ ನಮ್ಮನ್ನೇ ಬೆನ್ನುಹತ್ತಿದ್ದರೆ, ಪ್ರಯತ್ನಗಳೆಲ್ಲಾ ವಿಫಲವಾದರೆ, ಮನೆಯಲ್ಲಿ ಸುಖ-ಶಾಂತಿ ಶೂನ್ಯವಾದರೆ, ಯಾರಾದರೂ ಅನುಬಂಧಿಗಳು ಮೃತರಾದರೆ ಕೂಡಲೆ ಅಳು ಬರುತ್ತದೆ. ಅಳು ನುಂಗಲಾರದ ನೋವು. ನಮ್ಮ ಅಳು ಇನ್ನೊಬ್ಬರಿಗೆ ಕೇಳಿಸಿದರೆ ಸಾಕು—ನಮ್ಮ ನೋವಿನ ಭಾರ ಕೊಂಚ ಇಳಿದಂತೆ ಎನಿಸುತ್ತದೆ.

★

ಅಳುವು ಮಾನವಚರಿತ್ರೆಯಲ್ಲಿ ಎಂತೆಂತಹ ಕ್ರಾಂತಿಗಳನ್ನು ಮಾಡಿದೆ....ಮಾಡುತ್ತಲಿದೆ! ಭಾರತಯುದ್ಧಕ್ಕೆಮೂಲ ದ್ರೌಪದಿಯ ಅಳು. ರಾವಣವಧೆಗೆ ಮೂಲ ಕೈಕೇಯಿಯ ಅಳು. ಒಬ್ಬರ ಅಳುವು ಇನ್ನೊಬ್ಬರ ಕೀರ್ತಿಯನ್ನು ಹೆಚ್ಚಿಸಲಿಕ್ಕೆ ಕಾರಣವಾಗುವುದು. ನಗೆಗಿಂತ ಅಳುವಿನಲ್ಲಿ ಆಕರ್ಷಣೆ ಹೆಚ್ಚು. ಯಾರಾದರೂ ನಗುತ್ತಲಿದ್ದರೆ ಅಲ್ಲಿಗಾರೂ ಹೋಗರು; ಅಳುತ್ತಲಿದ್ದರೆ ಹಿಂಡುಗಟ್ಟಿಹೋಗಿ ಗುಂಪುಗೂಡುವರು!

★

ಅಳು ಅಪಶಕುನ ಎಂದು ಪರಿಗಣಿಸಲ್ಪಟ್ಟಿದೆ. ಮದುವೆ-ಮುಂಜಿಗಳ ವಿಚಾರ ಮಾತನಾಡುವಾಗ ತಿಳಿಯದ ಎಳಹಸುಳೆ ಅತ್ತರೂ ಕೂಡ ಅಮಂಗಲ ಎನ್ನುವವರಿರುವರು.

ಕೆಲವರಿಗೆ ಬೇರೆಯವರು—ಹೆಚ್ಚಾಗಿ ಮಕ್ಕಳು—ಅತ್ತುದನ್ನು ಕಂಡರೆ ಒಂದು ಆನಂದ. ಇದೊಂದು ಹುಚ್ಚು. ಮಕ್ಕಳಿಗೆ ಬೇಕೆಂದು ಕಿರುಕುಳಕೊಟ್ಟು ಅಳಿಸಿ, ಅನಂತರ ಸಮಾಧಾನಪಡಿಸಿ ನಗಿಸಿ ನಲಿಯುತ್ತಾರೆ. ಅಳು, ನಗು ಎರಡೂ ಮಕ್ಕಳ ಮುದ್ದುಮುಖಕ್ಕೆ ಭೂಷಣ.

ಸಂಗೀತ, ಭಾಷಣ ನಡೆವ ಸಭೆಗಳಿಗೆ, ನಾಟಕ-ಸಿನಿಮಾಗಳಿಗೆ ಮಾತ್ರ ಅಳುವ ಮಕ್ಕಳನ್ನು ಕರೆದೊಯ್ಯಬಾರದು. ಅವು ಅತ್ತರೆ ಇತರೇಯವರಿಗೆ ತೊಂದರೆ. ಅವರೆಲ್ಲರೂ ಮೊದಲು ಮಗುವನ್ನು ಶಪಿಸಿ, ಅನಂತರ ಆ ಅಳುವ ಮಗುವನ್ನು ಹೆತ್ತ ತಾಯಿ-ತಂದೆ



ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಗಳನ್ನು ಕಿವಿಸುತ್ತಾರೆ. ಕೆಲವು ವೇಳೆ ತಾಯಿಯ ಸಾಂತ್ವನಕ್ಕೆ ಮಗು ಒಲಿಯದಿದ್ದರೆ ತಾಯಿ ಹೊರಗೆ ಹೊರಡಲೇ ಬೇಕು—ಜೊತೆಗೆ ತಂದೆಯೂ ಹೊರಡಬೇಕು, ಪಾಪ!

ಕೆಲವು ಮಕ್ಕಳು ರಾತ್ರಿಯ ಕಾಲದಲ್ಲಿ ನಿಯಮಿತ ವೇಳೆಗೆ ಅಳುವ ಅಭ್ಯಾಸವಿಟ್ಟುಕೊಂಡು "ಅಲಾರಂ" ಗಡಿಯಾರದ ಕೆಲಸಮಾಡುವುವು. ಇದರ ಈ ಅಲಾರಂ ನಿಲ್ಲಿಸಲು ಬಲು ಹೊತ್ತು ಹಿಡಿದು, ಅಕ್ಕಪಕ್ಕದ ಮನೆಯವರ ನಿದ್ರಾಭಂಗವಾಗುವುದೂ ಉಂಟು.

'ಅತ್ತರೇನೂ ಮುತ್ತು ಸುರಿಯುವುದಿಲ್ಲ' ಎಂಬದೊಂದು ಗಾದೆಯ ಮಾತಿದೆ. ಮುತ್ತು ಸುರಿದರೆ ನಷ್ಟವಾದೀತು; ಮಗು ಅತ್ತರೆ ಏನು ನಷ್ಟ? ಸದಾ ಅಳುವ ಮಕ್ಕಳು ಕೆಲವಿವೆ. ಹಿಡಿದುದಕ್ಕೆ ಅಳು, ಮುಟ್ಟಿದುದಕ್ಕೆ ಅಳು! ಅಳು ಅವುಗಳ ಸೊಲ್ಲು! ಪಾಪ! ಆ ತಾಯಿಯ ಗೋಳು ಅವರ್ಣನೀಯ. ಬೇಸರದಿಂದ ಆಕೆ "ಅತ್ತರೇನು ಮುತ್ತು ಸುರಿಯುವುದಿಲ್ಲ" ಎನ್ನುತ್ತಾಳೆ.

ಕೆಲವು ಹಟಮಾರಿ ಮಕ್ಕಳಿಗೆ ಅಳು ಒಂದು ದೊಡ್ಡ ಅಸ್ತ್ರ, ದೊಡ್ಡ ಸಾಧನ, ತಮ್ಮ ಇಷ್ಟಾರ್ಥಸಿದ್ಧಿಗೆ. ಅವು ಅಳತೊಡಗಿದರೆ ಹರಿಹರ ಬ್ರಹ್ಮಾದಿಗಳೂ ಶರಣಾಗಬೇಕು. "ಅತ್ತು ಹೆದರಿಸಿದ, ಸತ್ತು ಹೆದರಿಸಿದ" ಎಂಬುದು ಈ ಕಾರಣದಿಂದಲೆ.

ಅಂತ್ಯವಿಲ್ಲದ, ತನ್ನದೇ ಆದ ಒಂದು ಕರ್ಕಶರಾಗ ಹೊಂದಿ ಹೊರಬರುವ ಅಳುವಿಗೆ "**ರೋಕೆ**" ಅಳು ಎಂದು ಹೆಸರು. ದುಃಖದ ಆಳವನ್ನು ಅಳೆದು ತೋರಿಸುವುದು ಬಿಕ್ಕಿ ಬಿಕ್ಕಿ ಅಳುವುದು. ಆಂಗ್ಲ ಭಾಷೆಯಲ್ಲಿ "Weeping" ಮತ್ತು "Sobbing" ಇದ್ದಂತೆ, ನಮ್ಮಲ್ಲಿ **ಬರಿ ಅಳು, ಬಿಕ್ಕಿ ಬಿಕ್ಕಿ ಅಳು** ಇವೆ.

ಸ್ವಲ್ಪ ಅತ್ತಮೇಲೆ ಹಿರಿಯರು ಗದರಿಸುತ್ತಾರೆ; ನಿಲ್ಲಿಸದಿದ್ದರೆ ಹೊಡೆಯುತ್ತಾರೆ. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಜಾಗರೂಕತೆಯಿಂದ ಮುಸುಕುಹಾಕಿ ಮರೆಯಲ್ಲಿ ರೋದಿಸುವುದು "**ಮುಳು ಮುಳು ಅಳು**".

"**ಕಳ್ಳ ಅಳು**" ಅಥವಾ "**ಸುಳ್ಳು ಅಳು**" ಬೇರೆ ಇದೆ. ಇದನ್ನು ಮುಗಿಸುವುದು ಬಲು ಸುಲಭ.

ದೊಡ್ಡವರು ಅತ್ತರೆ "ಏನು ಹೆಂಗಸಿನಂತೆ ಅಳುವೆ?" ಎನ್ನುತ್ತಾರೆ, ಮೂದಲಿಸುತ್ತ. ಹೆಂಗುಸು ಅಳುವುದರಲ್ಲಿ ನಿಸ್ಸೀಮತೆ ಹೊಂದಿರಬೇಕು. ಹೆಂಗುಸಿನ ಬಾಳು ಕಷ್ಟಮಯವಾದುದು. ಪರಾಧೀನೆ, ಸ್ವಾತಂತ್ರ್ಯವಿಲ್ಲದ ಜೀವಿ, ಜನ್ಮಾರಭ್ಯ ಎಲ್ಲರಿಗೂ ಹೆದರಿ ನಡೆಯಬೇಕು. ಆಕೆಯ ದುಃಖ ವಿಪರೀತ. ಅದರ ಪರಿಣಾಮ ಅಳು. "For men must work and women must weep" ಎಂದು ಆಂಗ್ಲಕವಿ ಹೇಳಿದ್ದಾನೆ.

ಅಳದವರು ಯಾರೂ ಇಲ್ಲ. ಎಷ್ಟೇ ಗಟ್ಟಿಮನಸ್ಸು ಮಾಡಿದರೂ ಅಳು ಬಂದೇ ಬರುತ್ತದೆ.

ಮದರಾಸು ಪ್ರಾಂತ್ಯದಲ್ಲಿ ಒಂದು ಜಾತಿಯವರು, ಮನೆಯಲ್ಲಾರಾದರೂ ಸತ್ತರೆ, ತಾವು ಅಳುವ ಜೊತೆಗೆ ದುಡ್ಡುಕೊಟ್ಟು ಬೇರೆಯವರಿಂದ ಅಳಿಸುತ್ತಾರಂತೆ. ಕಣ್ಣೀರ ಕೋಡಿಹರಿದರೆ ಪ್ರಾಯಶಃ ಮೃತರು ಸ್ವರ್ಗಕ್ಕೇರುತ್ತಾರೋ ಏನೊ! ಸಂಬಳ ಪಡೆದು ಅತ್ತವರ ಹೃದಯದಲ್ಲಿ ದುಃಖಕ್ಕೆ ಸ್ಥಾನವೆಲ್ಲಿ ಬಂದೀತು.

ದುಃಖವನ್ನೇ ಹೊಂದಿಕೊಂಡು ಅಳು ಇರಬೇಕೆಂಬ ನಿಯಮವಿಲ್ಲ. ಅಳು ಆನಂದವನ್ನೂ ಸೂಚಿಸುತ್ತದೆ. ಮೊಮ್ಮಗನ ಜನನದ ವಾರ್ತೆ ಮೊದಲು ಆನಂದ ಬಾಷ್ಪವನ್ನು ತರುತ್ತದೆ.

ಶುದ್ಧಾಂತಃಕರಣ ಇರುವವರಿಗೆ ಅಳು ತಪ್ಪಿದ್ದಲ್ಲ. ಅವರು ತಮ್ಮ ಕಷ್ಟ-ಸುಖದೊಡನೆ ಊರ ಕಷ್ಟ ಸುಖ ಹಚ್ಚಿಕೊಳ್ಳುತ್ತಾರೆ.

ಸದಾ ಗೋಗರೆಯುವವನಿಗೆ ನಾವೇನು ಕನಿಕರ ತೋರಿಸೇವು! "ನಿತ್ಯ ಸಾಯುವವನಿಗೆ ಅಳುವವರಾರು?"

"ಕಾನೂರು ಸುಬ್ಬಮ್ಮ ಹೆಗ್ಗಡಿತಿ" ಕಾದಂಬರಿಯಲ್ಲಿ ಅಳುವಿನ ವ್ಯಾಖ್ಯಾನವಿದ್ದು, ರೋದನವು ಒಂದು ಸಾಧನವೆಂದು ಪ್ರತಿಪಾದನೆ ಇದೆ. ಆನಂದವನ್ನು ನಾವು ಸವಿದಾಗ, ಪ್ರಕೃತಿ ಮಾತೆಯ ದಿವ್ಯ ದರ್ಶನದಿಂದ ಪುಲಕಿತರಾದಾಗ, "ನನ್ನಕೃತಿ ಸಣ್ಣದು, ಆ ಮಹಾಮಹಿಮ ದೇವನ ಕೃತಿ ಅದ್ಭುತವಾದುದು" ಎಂಬ ಭಾವನೆ ಉದಯಿಸುತ್ತದೆ; ಆಗ ಅಳು ಬರುತ್ತದೆ.

ಅಂತಹ ಅಳು ಎಲ್ಲರಿಗಿರಲಿ,—ಮೋಕ್ಷ ಸಾಧಿಸಲು!

ಸುಳಿಯದಿರು ಪವನ!

★

ಶ್ರೀ. ಕೊಟ್ಟಲಗಿ ರಾಮಚಂದ್ರ

ಈ ಮಿಣುಕುದೀಪದೆಡೆ
ಸುಳಿಯದಿರು ಪವನ!
ಅಲೆಯೊಲಾಡುತ ಬಂದು
ಹೀರದಿರು ಹರಣ!
ಆವ ತಾನಕೊ ಶ್ರುತಿಯ
ಹಿಡಿವ ಗಾಯಕನಂತೆ
ಪರಮಾತ್ಮ ಚಿಂತನೆಯ-
ಲಿರುವ ಮುನಿವರನಂತೆ,
ನಿಶ್ಚಲತೆ, ನೀರವತೆ,
ಕುಡಿಯುಲಿಹವು;
ಯಾರ ಬರವಿಗೊ ಭಾವ
ಮಿಡಿಯುತಿಹವು!

ಈ ಮನೆಯ ಮೂಲೆಗಿದೆ
ರವಿ, ಚಂದ್ರ, ತಾರೆ;
ನಕ್ಷತ್ರಪುಂಜವಿದೆ
ಅರಿಯೆಯಾ ನಾರೆ!
ನಿಬಿಡತಮವನು ಸೀಳಿ
ಮಿಂಚಿನೋಲ್ ಹೊಳೆದು,
ಬಾಳಬಟ್ಟೆಯಲೆನಗೆ
ಕೈದೀಪವಿಹುದು!
ಈ ಕುರುಡುಬೆಳಕಿನಲಿ
ಹರಿದಾರಿ ದೂರ,
ಸಾಗಿದರು ನಾ ಸವೆಯ-
ದಂತಿಹುದು ತೀರ!

ಇದು ಬೆಳಗುತಿರುವನಕ
ದಾರಿಯನು ನಡೆವೆ;
ನಿಮಿಷವೂ ತಂಗದೆಯೆ
ಮುನ್ನಡಿಯನಿಡುವೆ!
ಅನಿತರೊಳು ಯಮನಾಗಿ
ಎಸೆಯದಿರು ಶೂಲ;
ಕೊನೆಯ ಗಳಿಗೆಯು ಫಲಿಸೆ
ಕುಡಿ, ಗಾಳಿಸಾಲ!
ಅದಕಿಂದೆ ದೀಪದೆಡೆ
ಸುಳಿಯದಿರು ಪವನ;
ಅಲೆಯೊಲಾಡುತ ಬಂದು
ಹೀರದಿರು ಹರಣ!

ನನ್ನ ತಪ

★

ಶ್ರೀ. ಬಿ. ಎಚ್. ಶ್ರೀಧರ ಬಿ. ಎ. (ಆನರ್ಸ್)

ನನಗಾಗಿ—ನನ್ನ ನಯನೋತ್ಸವದ ಸಲುವಾಗಿ—
ನವಚೂತಪಲ್ಲವವ ಚಿವುಟಿದೆನೆ ಹಾ!
ಕೆನೆವಾಲು ಘನವಾಗಿ ಮೈವೆತ್ತಹಾಗಿರುವ
ಎಳಮಲ್ಲಿಗೆಯ ಮುಗುಳ ಕೊಯ್ದೆನೇನು!

ನನ್ನ ಮೈಗಿಂಪಾಗಲೆಂದು ಚಂದನಲತೆಯ
ಮುರಿದು ತಂದೆನೆ, ನನ್ನ ಮೂಗಿಗಾಗಿ
ಚಿನ್ನದಂತಿರುವ ಚಂಪಕವ ಕಿತ್ತಾರಯ್ದು
ಮಣ್ಣು ಬಣ್ಣಕೆ ತಂದು ನಿಲ್ಲಿಸಿದೆನೆ!

ನಾಲಗೆಯ ನಲುಮೆಯನು ಬೆಳೆಸಬಗೆದೆಳಗಬ್ಬ
ಸೀಳಿದೆನೆ, ಕೆಯ್‌ಹೊಡೆಯ ಸೆಳೆದು ಚೀಪಿ,
ಹಾಳುಗೈದೆನೆ ಮುಂದೆ ಪೂರ್ಣವಾಗುವ ಫಲವ,
ಬೀಳುಗಳೆದೆನೆ ಅನ್ಯರಳಿಪನಕಟ!

ನನಗೆ ಕರ್ಣಾಮೃತವದೆಂದು ತಿಳಿದೋರಂತೆ
ಬಿನದದೊಂದರೆಮಾಯೆಯಿಂದ ಮುಸಗಿ
ನನೆಯ ಹನಿಯಂತಿರುವ ನಿರ್ಮಲಾಂತಃಕರಣ-
ದೆಳಗೂಸುಗಳ ನುಡಿಸಿ ದಣಿಸಿರುವೆನೆ!

ನನ್ನ ಬಗೆಬಗೆಗೊಳಲಿ, ನನ್ನ ನಗೆ ಮಿಗೆ ಮಿನುಗ-
ಲೆನ್ನೊಡಲು ಸುಖಿಸಲೆಂಬಾಶೆಯಿಂದ—
ಅನ್ಯವನು ಹಿಂಸಿಸಿದೆನರರೆ ನನಗೆಂದು ನಾ
ಬ್ರಹ್ಮನನೆ ಹರಿದು ಹಂಚಲು ಹೋದೆನೆ!

ನನ್ನದಲ್ಲದುದಿಲ್ಲವೆನ್ನುವರಿವಿರದೆ ‘ಓ
ನನ್ನದದು ನನ್ನದಿದು' ಎಂದು ಕೂಗಿ,
ಬನ್ನಬಟ್ಟೆನು ಬನ್ನಬಡಿಸಿ ಬಡಜೀವಿಗಳ
ಕಣ್ಣೊಳಗೆ ಕೈಯಿಟ್ಟು ಕಾಣದಾಗಿ!

ಧ್ರುವ ವಿಜಯ

ಶ್ರೀ. ಎಚ್. ಕೆ. ನಾಗಭೂಷಣರಾವ್,
ಜಾವಗಲ್ಲು

೪ *

ಸುಖವಾಗಿ ಪ್ರಯಾಣಮಾಡಿಸುತ್ತಿರುವ ಉಗಿಬಂಡಿಯ ಪ್ರಯಾಣಕ್ಕೂ ಹೆದರಿ ಹಿಂಜರಿಯುವ ನಮ್ಮಲ್ಲಿಯ ಬಹುಜನರಿಗೆ, ಸ್ಕಾಟನ ಪ್ರಯಾಣದ ಕಥೆಯೊಂದು ಮಾದರಿಯಾಗಬೇಕು. ಅಬ್ಬಾ, ಎಂತಹ ಸಾಹಸ, ಎಂತಹ ಆಶಾವಾದ, ಎಂತಹ ಶಾಂತ ಮರಣ! ಸ್ಕಾಟ್, ಓಟ್ಸ್, ವಿಲ್ಸನ್ ಇವರನ್ನು ಸ್ಥಿತಪ್ರಜ್ಞರೆಂದು ಕರೆದರೆ ತಪ್ಪೇನಿದೆ ?

★

"ನಿಜವಾದ ಮನುಷ್ಯನ ಆತ್ಮವು, ಆತನಿಗೆ ಸಂಭವಿಸಬಹುದಾದ ಎಲ್ಲಕ್ಕಿಂತಲೂ ಬಲಯುಕ್ತವಾದುದು" ಎಂದು, ದಕ್ಷಿಣ ಧ್ರುವವನ್ನು ಜಯಿಸಲು ಮೊದಲು ಹೊರಟು ಎರಡನೆಯವನಾಗಿ ಗೆದ್ದ ಸ್ಕಾಟನು ಹೇಳಿರುತ್ತಾನೆ. ಧ್ರುವಗಳ, ಅದರಲ್ಲೂ ದಕ್ಷಿಣಧ್ರುವದ ವೈಚಿತ್ರ್ಯವನ್ನು ತಿಳಿಯಲು ಈತನ ಚರಿತ್ರೆಯು ಅವಶ್ಯಕ. ಈತನು ಧ್ರುವವನ್ನು ಜಯಿಸಿ ಹಿಂದಿರುಗುವಾಗ, ಧ್ರುವದಿಂದ ಸುಮಾರು ೨೦೦ ಮೈಲು ದೂರದಲ್ಲಿ ಸತ್ತನು. ನಿಜವಾದ ಯೋಧರ ಸೋಲು ಸೋಲಲ್ಲ—ಸಾವು ಸಾವಲ್ಲ. ಅವರ ಕೀರ್ತಿಯು ಸೂರ್ಯ-ಚಂದ್ರರಿರುವವರೆಗೆ, ಈ ಮಾನವ ಕುಲವಿರುವವರೆಗೆ ಸ್ಥಿರವಾಗಿರುವುದು. ನಿಜವಾದ ವೀರನು ಸಾವನ್ನು ಹೇಗೆ ಧೈರ್ಯದಿಂದ ಅಪ್ಪಿಕೊಳ್ಳುವನೆಂಬುದನ್ನು ಈತನ ಚರಿತ್ರೆಯಲ್ಲಿ ನೋಡಬಹುದು. ಅಷ್ಟಲ್ಲದೆ ಹೇಳಿರುವರೇ ಹಿರಿಯರು "ಮಹಾತ್ಮರನ್ನು ಸಾವಿನಲ್ಲಿ ತಿಳಿ" ಎಂದು.

ಪಿಯರಿಯು ಉತ್ತರಧ್ರುವವನ್ನು ಜಯಿಸಿ ಬಂದ ವಿಚಾರವು ಪ್ರಪಂಚಕ್ಕೆಲ್ಲಾ ತಿಳಿಯಿತು ; ಆದರೆ 'ಭೂಮಿಯ ಮತ್ತೊಂದು ದಿಕ್ಕಿನಲ್ಲಿ ಏನಿದೆ, ಅದು ಹೇಗಿದೆ!' ಎಂಬುದೂ ತಿಳಿಯಬೇಕಲ್ಲವೇ? ಆದರೆ ಅದು ಯಾರೂ ಕಾಣದ ಕೇಳದ ಪ್ರದೇಶವಾಗಿದೆ. ಪಿಯರಿ ಜಯಿಸುವವರೆಗೆ ಉತ್ತರಧ್ರುವವೂ ಹಾಗೆಯೆ ಇತ್ತಲ್ಲವೆ! ಯುಗಾಂತರಗಳಿಂದಲೂ ಜನರು 'ಭೂಮಿಯ ದೊಡ್ಡ ಭಾಗ ಪೂರಾ ಕತ್ತಲೆಯಾಗಿದೆ' ಎಂಬ ಕಾಲ್ಪನಿಕ ಕಥೆಯೊಂದನ್ನು ಹೇಳುತ್ತಾ ಇದ್ದರು. ಅದನ್ನು ಕಾಣಬೇಕೆಂಬಾಶೆಯಿಂದ ಹದಿನೆಂಟನೆಯ ಶತಮಾನದಲ್ಲಿ ಆಂಗ್ಲೇಯ ನಾವಿಕನೊಬ್ಬನು ದಕ್ಷಿಣಮುಖವಾಗಿ ಪ್ರಯಾಣಮಾಡಿದನು. ದಕ್ಷಿಣಧ್ರುವರೇಖೆಯನ್ನು ದಾಟಿ, ಸಮುದ್ರದಲ್ಲಿ ತೇಲುವ ಹಿಮಗಿರಿಯೊಂದನ್ನು ಕಂಡು ಹಿಂದಿರುಗಿದನು. ೧೮೪೧ ರಲ್ಲಿ ಮತ್ತೊಬ್ಬ ಆಂಗ್ಲೇಯನು ಹೊರಟು, ಆ ಹಿಮಗಿರಿಯನ್ನು ದಾಟಿ, ಪುನಃ ಸಮುದ್ರದಲ್ಲಿ ಪ್ರಯಾಣಮಾಡಿ, ಎದುರಿಗೆ ನಿಂತಿದ್ದ ಹಿಮಪರ್ವತಗಳ ಸಾಲನ್ನು ಕಂಡು, ಅದೇ ಕಳೆದುಹೋದ ಭೂಭಾಗವಿರಬೇಕೆಂದುಕೊಂಡು ಹಿಂದಿರುಗಿದನು. ೧೯೦೯ ರಲ್ಲಿ **ಅರ್ನೆಸ್ಟ್ ಷಾಕಲ್ಟನ್** ಎಂಬ ಮೂರನೆಯ ನಾವಿಕನೊಬ್ಬನು ಹೊರಟು, ಪರ್ವತಗಳನ್ನು ಹತ್ತಿ, ಮೇಲಿನ ಪ್ರಸ್ಥಭೂಮಿಯಲ್ಲೂ ಕೆಲ ದೂರ ಸಾಗಿ ಹಿಂದಿರುಗಿದನು.

೧೯೧೦ರಲ್ಲಿ ಮತ್ತೊಬ್ಬ ಆಂಗ್ಲೇಯನಾದ **ಸ್ಕಾಟ್** ಎಂಬವನು, ಕಂಡು ಹಿಡಿಯಲ್ಪಟ್ಟಿರುವ ಭೂಭಾಗಕ್ಕೂ ಧ್ರುವಕ್ಕೂ ಮಧ್ಯೆ ಇರುವ ಸ್ಥಳವನ್ನು ಪರಿಶೋಧಿಸಲು ಹೊರಟನು.

ದಕ್ಷಿಣಧ್ರುವವು ಸಮುದ್ರಮಟ್ಟದಿಂದ ೧೦೫೦೦ ಅಡಿ ಎತ್ತರದ ಮೇಲೆ, ಅಗ್ನಿಪರ್ವತಗಳ ನಡುವೆ, ಅಮೇರಿಕಾ ಸಂಯುಕ್ತ ಸಂಸ್ಥಾನದಷ್ಟು ವಿಶಾಲವಾದ ಖಂಡವೊಂದರ ನಡುವೆ ಇದೆ. ದಕ್ಷಿಣ ಧ್ರುವವನ್ನು ತಲ್ಪಲು ಸ್ಕಾಟನು ಪರ್ವತಶ್ರೇಣಿಗಳನ್ನೂ ಹಿಮಮುಚ್ಚಿದ ಜ್ವಾಲಾಮುಖಿಗಳನ್ನೂ ಹತ್ತಿಹೋಗಬೇಕಾಗಿತ್ತು. ಸಮುದ್ರದಡದಿಂದ ಪ್ರಸ್ಥಭೂಮಿಗೆ ಸುಮಾರು ೮೦೦ ಮೈಲುಗಳ ಅಂತರ. ಈ ಪ್ರದೇಶದಲ್ಲಿ ಬೇಸಗೆಯಲ್ಲಿ ಮಾತ್ರ "**ಸೀಲ್**" ಮತ್ತು "**ಪೆನ್‌ಗಿನ್**" ಎಂಬ ಪ್ರಾಣಿಗಳಷ್ಟೆ ವಾಸಿಸುವುವು.

ಕ್ಯಾಪ್ಟನ್ ಸ್ಕಾಟನು '**ಟೆರಾನೋವ್**' ಎಂಬ ಹಡಗಿನಲ್ಲಿ ನ್ಯೂಜಿಲೆಂಡಿನಿಂದ ನವಂಬರ್ ತಿಂಗಳಲ್ಲಿ ಹೊರಟನು. ಆತನ ಬಳಿ ಮೂರು ಯಂತ್ರದ ಜಾರುಬಂಡಿಗಳೂ (Motor Sledges), ೧೯ ತಟ್ಟುಗಳೂ (Ponies), ೩೩ ಸೈಬೀರಿಯದ ನಾಯಿಗಳೂ ಇದ್ದುವು. ಈತನು ಗ್ರೇಟ್‌ಬ್ರಿಟನ್ನಿನ ಹಡಗುಪಡೆಯ ಮುಖ್ಯಸ್ಥರಲ್ಲೊಬ್ಬನು. ಈತನ ಜೊತೆಯಲ್ಲಿ ಬೇರೆ ಏಳು ಜನ ಹಡಗುಪಡೆಯ ಅಧಿಕಾರಿಗಳಿದ್ದರು; ೧೨ ಜನ ವಿಜ್ಞಾನಿಗಳಿದ್ದರು. ಇಬ್ಬರು ಸೈಬೇರಿಯನ್ನರು ನಾಯಿಗಳ ಮೇಲ್ವಿಚಾರಣೆಗಾಗಿ ಇದ್ದರು. ಅಲ್ಲದೆ ಬೇರೆ ೧೬ ಜನ ಹೆಸರು ಪಡೆದ ಅಧಿಕಾರಿಗಳಿದ್ದರು ; ಅನೇಕ ಕೆಲಸಗಾರರಿದ್ದರು. ಎಚ್ಚರಿಕೆಯಿಂದ ಆ ಹಡಗು ಸಮುದ್ರದಲ್ಲಿ ತೇಲುತ್ತಿದ್ದ ಹಿಮಮೈದಾನವನ್ನು ದಾಟಿತು.

---

* ಈ ನಾಲ್ಕು ಲೇಖಾಂಶಗಳನ್ನೂ 'ಮೇರಿ ಲೀ' ಅವರ ಇಂಗ್ಲಿಷ್ ಲೇಖನಗಳ ಆಧಾರದಿಂದ ಬರೆಯಲಾಗಿದೆ. —ಲೇಖಕ.

ಡಿಸೆಂಬರು ೧೩ನೆಯ ತಾರೀಖಿನ ದಿನ ಪುನಃ ಆ ಹಡಗು ಸಮುದ್ರಕ್ಕಿಳಿಯಿತು. ಡಿಸೆಂಬರು ೩೧ನೆಯ ತಾರೀಖಿನ ಸಾಯಂ-ಸೂರ್ಯನ ಬೆಳಕನ್ನು ಅವರು ದಕ್ಷಿಣಧ್ರುವಪರ್ವತಗಳ ಮೇಲೆ ನೋಡಿದರು. ೧೯೧೧ನೆಯ ಇಸವಿ ಜನವರಿ ೧ನೆಯ ತಾರೀಖಿನ ದಿನ ಆ ಹಡಗು, ತನ್ನ ಹಿಮಲಂಗರನ್ನು '**ಎರ್ಬಸ್**' ಎಂಬ ಅಗ್ನಿ-ಪರ್ವತದ ತಪ್ಪಲಲ್ಲಿ ಊರಿತು. ಮೂರು ವಾರಗಳ ಅವಧಿಯಲ್ಲಿ ಆ ಪರಿಶೋಧಕರು ಒಂದು ಗುಡಿಸಿಲನ್ನು ಕಟ್ಟಿ, ಸಾಮಾನುಗಳನ್ನೆಲ್ಲ ಅದಕ್ಕೆ ಸಾಗಿಸಿದರು. ಮುಂದಿನ ಧ್ರುವರಾತ್ರಿಯಲ್ಲಿ ಅವರು ಆ ಹಿಮಗುಡ್ಡದ ಆಚೆ ಕೋಠಿ ಕಟ್ಟಿ, ಅಲ್ಲಿಗೂ ಸಾಮಾನುಗಳನ್ನು ಸಾಗಿಸಿದರು. ಒಂದು ದಿನ ಕೋಠಿಯೊಂದರಿಂದ ಹಿಂದಿರುಗುತ್ತಿದ್ದಾಗ ಸ್ಕಾಟನ ಅನುಯಾಯಿಯೊಬ್ಬನು, ಅಮುಂಡ್ಸನನೆಂಬ (ಸ್ಕಾಟನಿಗೆ ಚೆನ್ನಾಗಿ ಈತನ ಪರಿಚಯವಿತ್ತು) ನಾರ್ವೇ ದೇಶಸ್ಥನೊಬ್ಬನು ದಕ್ಷಿಣ ಧ್ರುವವನ್ನು ಜಯಿಸಲು **ವ್ಹೇಲ್ಸ್** ಕೊಲ್ಲಿಯಲ್ಲಿ ಬಂದಿಳಿದಿರುವನೆಂಬ ಸುದ್ದಿಯನ್ನು ತಿಳಿಸಿದನು. ಸ್ಕಾಟನು ಎದೆಗುಂದದೆ "ನಮ್ಮ ಮುಂದಿರುವ ಈಗಿನ ನ್ಯಾಯವಾದ ಮಾರ್ಗವೆಂದರೆ, ಅಮುಂಡ್ಸನನು ಬಂದಿರದಿದ್ದರೆ ನಾವು ಯಾವ ರೀತಿ ಮುಂದುವರಿಯುತ್ತಿದ್ದೆವೋ ಅದೇ ರೀತಿ ಮುಂದುವರಿಯುವುದು. ನಮ್ಮ ದೇಶದ ಗೌರವಕ್ಕಾಗಿ ನಾವು ಹೆದರದೆ, ಬೇಸರಿಯದೆ, ನಮ್ಮ ಕರ್ತವ್ಯವನ್ನು ಆತ್ಮಸಾಕ್ಷಿಯಿಂದ ಉತ್ತಮರೀತಿಯಲ್ಲಿ ಮಾಡುವುದು!" ಎಂದನು. ಇದಲ್ಲವೆ ನಿರ್ಮಲ ಮನಸ್ಸಿನ ಧೀರರ ಲಕ್ಷಣ;

ಧ್ರುವರಾತ್ರಿಯನ್ನು ಅವರು ಸುಖವಾಗಿ ಕಳೆದರು. ಕುದುರೆಗಳು ಉತ್ಸಾಹಿಗಳಾಗಿದ್ದುವು; ಬಲಶಾಲಿಗಳಾಗಿದ್ದುವು. ತಿಂಗಳುಗಳು ಕಳೆದುವು. ಆಗಸ್ಟ್ ೨೩ನೆಯ ತಾರೀಖಿನ ದಿನ ಸೂರ್ಯನು ಕಾಣಿಸಿದನು. ಆ ಬೆಳಕಿನಲ್ಲಿ ಅವರೆಲ್ಲಾ ನಲಿದಾಡಿದರು. ತಿಂಗಳುಗಳು ಕಳೆದುವು. ನವಂಬರಿನ ಮೊದಲನೆಯ ವಾರದಲ್ಲಿ ಅವರು ಹೊರಟರು. ಮರಳಿ ಬರುವ ಪ್ರಯಾಣಕ್ಕಾಗಿ ಅಲ್ಲಲ್ಲಿ ಆಹಾರದ ಕೋಠಿಗಳನ್ನು ಕಟ್ಟಿದರು. ತಣ್ಣನೆಯ ಮಂಜಿನ ಮೇಲೆ ಕಡುಕಷ್ಟದಿಂದ ಪ್ರಯಾಣಮಾಡುವ ದಿನಗಳು ಬಂದುವು. ಕೊನೆಗೆ ಅವರು **ಬೇರ್ಡ್ಮೋರ್** ಎಂಬ ಹಿಮನದಿಯ ಹತ್ತಿರಕ್ಕೆ ಬಂದರು. ಅಲ್ಲಿ ಕುದುರೆಗಳನ್ನು ಬಿಟ್ಟು, ಜಾರುಬಂಡಿಗಳನ್ನು ಎಳೆಯುತ್ತ ಕಷ್ಟದಿಂದ ನಿಧಾನವಾಗಿ, ಅವರು ಆ ಇಳಿಜಾರು ಪ್ರದೇಶವನ್ನು ಹತ್ತಿದರು. ಕ್ರಿಸ್‌ಮಸ್ ಹೊತ್ತಿಗೆ ಅವರು ೮೦೦೦ ಅಡಿಗಳನ್ನು ಹತ್ತಿದ್ದರು. ಹೊಸ ವರ್ಷಾರಂಭದ ಹೊತ್ತಿಗೆ ಕೊನೆಯ ಸಹಾಯಕ ಗುಂಪಿನವರು, **ಸ್ಕಾಟ್** ಆತನ ಸ್ನೇಹಿತ **ಡಾ. ವಿಲ್ಸನ್** ಮತ್ತು ಮತ್ತು ಇತರೇ ಮೂರು ಜನರನ್ನು ಬಿಟ್ಟು ಹಿಂದಿರುಗಿದರು. ಅವರು ೧೦೪೦೦ ಅಡಿ ಎತ್ತರದ ಆ ಪ್ರಸ್ಥಭೂಮಿಯನ್ನು ಹತ್ತಿದರು. ಅನಂತರ ನಾಲ್ಕು ಜನರು ತಮ್ಮ ಜಾರುಜೋಡುಗಳನ್ನು ಜಾರುಬಂಡಿಗೆ ತಗುಲಿಸಿದನು; ಒಬ್ಬನು ಹಾಗೆಯೆ ನಡೆದನು. ಅವರು ದೊಡ್ಡ ಹಿಮಪ್ರವಾಹಗಳನ್ನು ಅತಿ ಪ್ರಯಾಸಪಟ್ಟು ಸಾಹಸದಿಂದ ದಾಟಿದರು. ೯ನೆಯ ಜನವರಿ ಹೊತ್ತಿಗೆ ಅವರು ಧ್ರುವದಿಂದ ೨೭ ಮೈಲಿಗಳ ದೂರದಲ್ಲಿದ್ದರು. ಆಶೆಯ ಆವೇಗದಲ್ಲಿ, ಆ ದಿನ ಸ್ಕಾಟನು ತನ್ನ ದಿನಚರಿಯಲ್ಲಿ ಈ ರೀತಿ ಬರೆದಿದ್ದಾನೆ: "ಅದನ್ನು (ಧ್ರುವವನ್ನು ಪ್ರಥಮತಃ ತಲ್ಪಲು ೧೦೪೦೦ ಅಡಿ ಎತ್ತರದ ಪರ್ವತ ಹತ್ತಿದುದನ್ನು) ನಾವು ಮಾಡಲೇ ಬೇಕಾಗಿತ್ತು' ಎಂದು. ಆದರೆ ಅನಂತರ ಅವರ ಕೊನೆಯ ಆಶಾಕಿರಣವನ್ನು ನಾಶಗೊಳಿಸುವ ಸಂಗತಿಯೊಂದು ನಡೆಯಿತು. ದೂರದಲ್ಲಿ ಕರಿಯ ಚುಕ್ಕೆಯಂತಹ ಪದಾರ್ಥವೊಂದು ಕಾಣಿಸಿತು.

ಸ್ಕಾಟಿನ ದಿನಚರಿ (ಜನವರಿ ೧೬):— ನಾವು ಮುಂದೆ ನಡೆದೆವು. ಆ ಚುಕ್ಕೆಯು ಒಂದು ಬಾವುಟವಾಗಿತ್ತು. ಅದನ್ನು ಅಲ್ಲಿ ಈ ಹಿಂದೆ ಬೀಡು ಬಿಟ್ಟಿದ್ದವರು ನೆಟ್ಟಿದ್ದರೂ ಅಲ್ಲಿ ಸ್ಪಷ್ಟವಾಗಿ ಜಾರುಬಂಡಿಯು ಹಿಂತಿರುಗಿದ, ಜಾರುಜೋಡನ್ನು ಧರಿಸಿ ಹಿಂದೆ ಮುಂದೆ ನಡೆದ, ಅನೇಕ ನಾಯಿಗಳ ಹೆಜ್ಜೆಯ ಗುರುತುಗಳು ಮೂಡಿದ್ದುವು. ಇವು ಸ್ಪಷ್ಟವಾಗಿ ಎಲ್ಲವನ್ನೂ ನಮಗೆ ಹೇಳಿದುವು: ನಾರ್ವೆಯವರು ನಮ್ಮನ್ನು ಹಿಂದೆ ಹಾಕಿ ಪ್ರಥಮತಃ ಧ್ರುವವನ್ನು



ಎಲ್ಲಕ್ಕಿಂತ ಅಗ್ಗ! ಎಲ್ಲಕ್ಕಿಂತ ಉತ್ತಮ!
ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ.

ಚರ್ಮವು ಉರಿಯುವುದಿಲ್ಲ—ಕಪ್ಪಾಗುವುದಿಲ್ಲ!

ಜಯಿಸಿದ್ದರು. ಇದು ಅತ್ಯಂತ ಭಯಂಕರ ನಿರಾಶೆಯು. ನಾನು ನನ್ನ ನಂಬುಗೆಯ ಅತ್ಯಂತ ಉತ್ಸಾಹಶಾಲಿಗಳಾದ ಹಿಂಬಾಲಕರಿಗಾಗಿ ದುಃಖಿತನಾಗಿದ್ದೇನೆ.......ನಾಳೆಯ ದಿನ ನಾವು ಧ್ರುವವನ್ನು ತಲ್ಪುವೆವು. ಅನಂತರ ಹಿಂದಿರುಗುವೆವು. ನಮ್ಮ ಹಗಲುಗನಸುಗಳೆಲ್ಲಾ ಮಾಯವಾಗುವುವು. **ಆದರಿಂದ ಆ ಪ್ರಯಾಣವು ಕಷ್ಟತಮವಾಗುವುದರಲ್ಲಿ ಸಂದೇಹವಿಲ್ಲ..."**

ಇಂತಹ ಕಷ್ಟತಮವಾದ ಪ್ರಯಾಣವನ್ನು ಮಾಡಲು ಮನುಷ್ಯನಲ್ಲಿ ಎರಡು ಸ್ಥಿತಿಗಳಿರಬೇಕು. ಒಂದು ಉತ್ಸಾಹ; ಎರಡನೆಯದು ದೇಹಶಕ್ತಿ. ಆಗಲೇ ಈ ಜನರ ಉತ್ಸಾಹವು ಇಳಿಮೊಗವಾಗಿತ್ತು. ಅವರಿಗೆ ಅವರ ಹೃದಯವೇ ಭಾರವಾಗಿತ್ತು. ಚಳಿಯು ಸಹಿಸಲಸಾಧ್ಯವಾಯಿತು. ಆ ನಿರಾಶಾಮಯ ಪರಿಸ್ಥಿತಿಯಲ್ಲಿಯೆ ಅವರು ೧೮ನೆಯ ತಾರೀಖಿನ ದಿನ ಧ್ರುವವನ್ನು ತಲ್ಪಿದರು. ಅಲ್ಲಿ ಅವರು ಒಂದು ಗುಡಾರವನ್ನೂ ಅದರ ಮೇಲೆ ಕೆಂಪು ಮೈಯ—ನೀಲ ಮತ್ತು ಬಿಳಿಯ ಅಡ್ಡಗೆರೆಗಳನ್ನು ಹೊಂದಿದ ನಾರ್ವೇ ಬಾವುಟವನ್ನೂ ಕಂಡರು. ಕೆಳಗೆ ಬೀಳ ಬಾವುಟದ ಮೇಲೆ "ಫ್ರ್ಯಾಮ್" ಎಂದಿದ್ದಿತು (ಇದು ಅಮುಂಡ್ಸನನ ಹಡಗಿನ ಹೆಸರು). ಗುಡಾರದೊಳಗೆ ತಾನು ಧ್ರುವವನ್ನು ತಲ್ಪಿದ ದಿನವನ್ನು ಬರೆದ ಚೀಟಿಯೊಂದನ್ನು ಅಮುಂಡ್ಸನನು ಇಟ್ಟಿದ್ದನು. ಅಲ್ಲಿಯೆ ಅವರು ತಮ್ಮ "ಯೂನಿಯನ್ ಜಾಕ್" ಒಂದನ್ನು ನೆಟ್ಟರು. ಹೀಗೆ ಮಾನವನ ದಕ್ಷಿಣಧ್ರುವ ಸಂಶೋಧನೆಯ ಜೂಜಿನಲ್ಲಿ ಇಂಗ್ಲೆಂಡು ಎರಡನೆಯದಾಯಿತು.

ಇನ್ನು ಹಿಂದಿರುಗಬೇಕು. "ಇವ್ಯಾನ್ಸ್" ಭೂಶಿರದ ಗುಡಿಸಿಲಿಗೂ ಇವರಿಗೂ ಮಧ್ಯೆ ಎಂಟುನೂರು ಮೈಲಿಗಳ ಹಿಮಪರ್ವತ. ಅಬ್ಬಾ! ಆಹಾರವು ಬೇರೆ ದಿನದಿನಕ್ಕೆ ಕಡಿಮೆಯಾಗುತ್ತಿದೆ. ಮಧ್ಯೆ ಮಧ್ಯೆ ಹೊಸ ವಿಪತ್ತುಗಳುಂಟಾಗಿ ನಿರಾಶೆಯನ್ನು ಹೆಚ್ಚಿಸುತ್ತಲಿವೆ. ಅವರು ದಾರಿ ತಪ್ಪಿದರು. ಬರ್ಫಿನ ಬಿರುಕುಗಳಲ್ಲಿ ಬಿದ್ದರು. ಅಗಾಧ ಹಿಮಪ್ರವಾಹಗಳಿಗೆ ಸಿಕ್ಕಿ ಮುಂಗಾಣದಾದರು. ದೈವವಶಾತ್ ಸ್ಕಾಟನು ಇವುಗಳನ್ನೆಲ್ಲಾ ವಿವರವಾಗಿ ಬರೆದಿಟ್ಟಿದ್ದಾನೆ:

"ಆ ಕಷ್ಟಗಳನ್ನೆಲ್ಲಾ ಕುರಿತು ಬೇಕಾದಷ್ಟು ಬರೆಯಬಹುದು. ಹದಿನಾಲ್ಕು ವಾರಗಳ ನಿರಂತರ ಕಷ್ಟದನಂತರ ಬಂಡೆಯಮೇಲೆ ಕಾಲಿಟ್ಟಾಗ, ನಮಗಾದ ಆನಂದವನ್ನು ವರ್ಣಿಸುವುದಸಾಧ್ಯ. ವರ್ಷಗಟ್ಲೆ ಸಮುದ್ರಯಾನ ಮಾಡಿ, ಮಾತೃಭೂಮಿಯಲ್ಲಿ ಕಾಲಿಟ್ಟಾಗ ಉಂಟಾಗುವ ಆನಂದವು ಅಂದು ನಮಗಾಯಿತು."

ಪ್ರಕೃತಿಯೊಡನೆ ಮಾಡಿದ ಈ ಅಗಾಧ ಹೋರಾಟದಿಂದ ಅವರ ಲೊಲ್ಬನ ಶಕ್ತಿಯು ತೀರಾ ಕುಗ್ಗಿ ಹೋಗಿ, ಅವನ ಆತ್ಮವು ಒಂದು ದಿನ ಆರಿಹೋಯಿತು. ಮಿಕ್ಕ ನಾಲ್ವರು ಮುಂದುವರಿದರು. ಇನ್ನು ಮುಂದೆ ಸ್ಕಾಟನ ದಿನಚರಿಯನ್ನೇ ಬರೆದರೆ ಉತ್ತಮ.

"**ಮಾರ್ಚ್ ೧**:— ನಿನ್ನೆಯ ರಾತ್ರಿ ಪೂರಾ ಚಳಿ, ಸೊನ್ನೆಯಿಂದ ೪೧° ಕೆಳಗೆ.....ನಿನ್ನೆಯ ಪ್ರಯಾಣವು ತುಂಬಾ ಕಷ್ಟಕರ. ಈ ದಿನ ಬೆಳಿಗಿನಲ್ಲಿ ಮತ್ತೂ ಕಷ್ಟ.

ಮಾರ್ಚ್ ೩:— ಒಟ್ಟಿನಲ್ಲಿ ಎಲ್ಲರೂ ಕೊನೆಯಿಲ್ಲದ ಆನಂದದಿಂದ ಇದ್ದೇವೆ. ಆದರೆ ಪ್ರತಿಯೊಬ್ಬನೂ ತನ್ನ ಹೃದಯದಲ್ಲಿ ಏನನ್ನು ಅನುಭವಿಸುತ್ತಿರುವನೆಂಬುದನ್ನು ನಾನು ಸುಮ್ಮನೆ ಊಹಿಸಬಲ್ಲೆ. ಪ್ರಯಾಣವು ದಿನದಿನಕ್ಕೆ ಮಂದವಾಗುತ್ತಲಿದೆ.

ಮಾರ್ಚ್ ೪:— ಜಾರುಬಂಡಿಯು ಹಿಮಪ್ರವಾಹವೊಂದರ ಎದುರಿಗೆ ಫಕ್ಕನೆ ನಿಂತಾಗ, ಅದರ ಹಿಂದಿರುವ ಹಿಮರಾಶಿಯನ್ನು ನೆನೆದು, ಪ್ರತಿಯೊಬ್ಬನ ಹೃದಯವೂ ಒಡೆದುಹೋದಂತೆ ಭಾಸವಾಗುತ್ತಿತ್ತು. **ಡಾ॥ ವಿಲ್ಸನ್** ಮತ್ತು **ಬೋವರ್ಸ್** ಇವರಿರ್ವರ ದೃಢಮನಸ್ಸಿನ ಆನಂದವು ಇಲ್ಲದಿದ್ದರೆ, ನಾನೇನು ಮಾಡಬೇಕಾಗಿತ್ತೋ ನಾನು ಬೇರೆ ಕಾಣೆ.

ಮಾರ್ಚ್ ೫:— ನಮ್ಮಲ್ಲಿ ಒಬ್ಬರು ಸಹ, ಹವೆಯು ಇಷ್ಟರಮಟ್ಟಿಗೆ ತಗ್ಗುವುದೆಂದು ತಿಳಿದಿರಲಿಲ್ಲ. ವಿಲ್ಸನನು—ಅಷ್ಟುಕಷ್ಟಪೊಂದಿದ್ದರೂ—ತನ್ನ ಗಮನವನ್ನೆಲ್ಲಾ ಓಟ್ಸನ ಕಾಲುಗಳ ರಕ್ಷಣೆಗಾಗಿ ಉಪಯೋಗಿಸುವುದನ್ನು ನೋಡಿ ನನಗೆ ಗಾಬರಿಯಾಗುತ್ತಿದೆ. ನಾವು ನಮ್ಮ ಪಾತ್ರವನ್ನು ಸರಿಯಾದ ಆತ್ಮಶಕ್ತಿಯಿಂದ ನಿರ್ವಹಿಸುತ್ತಿದ್ದೇವೆ. ಆದರೂ ಮಾಡುವುದೇನು? ಸಮಯವು ಕಠಿನತಮ! "ದೇವರೇಗತಿ" ಎಂದು ಪ್ರತಿಕ್ಷಣ ಉದ್ಗಾರ ತೆಗೆದು, ಅತಿ ಆಯಾಸದಿಂದ ಮುಂದುವರಿಯುತ್ತಾ, ಚಳಿ ತಡೆಯಲಾರದೆ ನಡುಗುತ್ತಾ, ಹೃದಯವು ಮ್ಲಾನವಾಗಿದ್ದರೂ ಬಾಹ್ಯದಲ್ಲಿ ಮಾತ್ರ ಆನಂದವನ್ನೇ ನಟಿಸುತ್ತಿದ್ದೇವೆ. ಇನ್ನೂ ಕೂಡ ನಾವು, ಮನೆ ಸೇರಿದನಂತರ ಏನುಮಾಡಬೇಕೆಂಬುದನ್ನು ಕುರಿತು ಚರ್ಚೆ

ಮಾಡುತ್ತಿದ್ದೇವೆ. ಪ್ರಯಾಣವು ಕ್ಲಿಪ್ತದಲ್ಲಿಯೆ ಕೊನೆಗಾಣಲೆಂದು ನಾನು **ಬಹುವಾಗಿ** ಹಂಬಲಿಸುತ್ತೇನೆ.

ಮಾರ್ಚ್ ೧೦ :— ಓಟ್ಸನ ಕಾಲುಗಳು ಅತಿಯಾಗಿ ಘಾಸಿಗೊಂಡಿವೆ. ಆತನ ಧೈರ್ಯವೆಲ್ಲಾ ಹರಿದು ಹೋಗಿದೆ. ಮತ್ತು ಆತನು, ತಾನು ಇಲ್ಲಿಂದ ಎಂದೂ ಕಡೆಹಾಯಲಾರನೆಂಬುದನ್ನು ಅರಿತಿರುವಂತಿದೆ. ಈ ದಿನ ಬೆಳಗಿನಲ್ಲಿ ಆತನು ವಿಲ್ಸನನನ್ನು "ಮಾರ್ಗ ಸಿಕ್ಕಿತೇ?" ಎಂದು ಕೇಳಿದನು. ವಿಲ್ಸನನು **ಸಹಜವಾಗಿ** "ಇಲ್ಲ" ಎಂದು ಉತ್ತರಿಸಲೇ ಬೇಕಾಯಿತು. ಆತನೊಬ್ಬನೆ ಅಲ್ಲ, ನಾವೂ ಸಹ ಇದರಿಂದ ಪಾರಾಗುವೆವೋ?......ಹೇಗೋ?..

ಮಾರ್ಚ್ ೧೬ :—ಓಟ್ಸನ ಧೈರ್ಯವನ್ನು ನಾವು ಅಗತ್ಯವಾಗಿ ಹೊಗಳಲೇಬೇಕು. ಆತನು ವಾರಾನುವಾರ (weeks together) ಈ ಕಷ್ಟವನ್ನು ಮರುಮಾತಾಡದೆ ಸಹಿಸಿದ್ದಾನೆ. ಆತನು (ಮನೆ ಸೇರುವ) ಆಶೆಯನ್ನು ಬಿಡುವುದಿಲ್ಲ; ಕಡೆತನಕ ಬಿಡಲೂ ಇಲ್ಲ. ಆತನದು ಅತ್ಯಂತ ಧೈರ್ಯಶಾಲಿಯಾದ ಆತ್ಮ. ನಿನ್ನೆ ರಾತ್ರಿ ಆತನು ಈ ದಿನ ಏಳುವ ಆಶೆಯನ್ನೇ ಬಿಟ್ಟು ಮಲಗಿದ್ದನು. ಆದರೂ ಎದ್ದನು. ಹಿಮದ ಬಿರುಗಾಳಿ ಬೀಸುತ್ತಿತ್ತು. ಅವನು "ನಾನು ಸ್ವಲ್ಪ ಹೊರಗೆ ಹೋಗಿ ಬರುವೆನು" ಎಂದು, ಹೊರಗೆ ಆ ಹಿಮ-ಬಿರುಗಾಳಿಯ ಮಧ್ಯೆ ಹೋದನು. ಪುನಃ ಆತನನ್ನು ನಾವು ನೋಡಲೇ ಇಲ್ಲ. ......ನಾವು ಆತನು ಮರಣಕ್ಕೆ ಧಾವಿಸುತ್ತಿರುವನೆಂಬುದನ್ನು ಅರಿತು ತಡೆದರೂ, ಆತನ ಆ ಧೈರ್ಯಶಾಲಿಯಾದ ಆತ್ಮವು, ತನ್ನ ಮನಸ್ಸಿನ ನಿರ್ಧಾರವನ್ನು ಬಿಡಲಿಲ್ಲ. ನಾವು ಸಹ ಇದೇ ತರದ ಅಂತ್ಯವನ್ನೇ ಒಯುಸುತ್ತಿರುವೆವು. ಅದೂ ಬಹುದೂರದಲ್ಲೇನೂ ಇಲ್ಲ...... ನಿರಂತರವಾಗಿ ನಾವು ಮನೆಯನ್ನು ತಲುಪುವ ಮಾತನ್ನೇ ಆಡುತ್ತಿರುವುವೆವಾದರೂ, ಒಬ್ಬರ ಹೃದಯದಲ್ಲಾದರೂ ಅದನ್ನು ತಲುಪುವ ಆಶೆ ಮಾತ್ರ **ಖಂಡಿತವಾಗಿ** ಇಲ್ಲ."

ಓಟ್ಸನು ಸತ್ತ ನಂತರ ಅವರು ಎರಡು ಪ್ರಯಾಣಮಾಡಿದರು. ಮುಂದಿನ ಕೋಠಿಯು ಅವರಿಂದ ಕೇವಲ ೧೧ ಮೈಲು ದೂರದಲ್ಲಿತ್ತು, ಆ ಕೋಠಿಗೆ ಇವ್ಯಾನ್ಸಿನಿಂದ ಬಂದಿದ್ದ ಅವರ ಸ್ನೇಹಿತನೊಬ್ಬನು ಐದು ದಿನಗಳವರೆಗೆ ಕಾಯ್ದು ಇವರನ್ನು ಕಾಣದೆ (ಮಾರ್ಚ್ ೯) ಹಿಂದಿರುಗಿದನು— ಹಿಮಗಾಳಿಯಲ್ಲಿ ಅವರು ಅಲ್ಲಿಯೆ ಮಲಗಿದರು. ಸ್ಕಾಟನ ಎಡಗಾಲು ಹಿಮಗಟ್ಟಿ ಹರಿಯಿತು.

"**ಮಾರ್ಚ್ ೨೩** :— ಎಂದಿನಂತೆಯೇ ಕೆಡುಕಿನ ಹಿಮದ ಬಿರುಗಾಳಿ! ವಿಲ್ಸನನೂ ಬೋವರ್ಸನೂ ಹೊರಡಲು ತೀರಾ ಅಶಕ್ತರು! ನಾಳೆಯು ಕೊನೆಯ ಅವಕಾಶ. ಉರಿಸಲು ಏನೂ ಇಲ್ಲ! ಒಪ್ಪತ್ತಿಗೆ ಇಬ್ಬರಿಗಾಗುವಷ್ಟು ಮಾತ್ರ ಆಹಾರವು ಇದೆ."

ಹಿಮದ ಬಿರುಗಾಳಿಯು ಹಾಗೆಯೇ ಮುಂದುವರಿಯಿತು. **ಅವರು** ತಮ್ಮ ಗೂಡಾರಗಳನ್ನು ಬಿಟ್ಟು ಹೊರಕ್ಕೆ ಹೊರಡಲೆ ಇಲ್ಲ.

ಮಾರ್ಚ್ ೨೯ :— ೨೧ನೆಯ ತಾರೀಖಿನಿಂದ ತಡೆಯಲಸಾಧ್ಯವಾದ **ಅಖಂಡ** ಹಿಮದ ಬಿರುಗಾಳಿ ... .. . ಎರಡರ್ಥ ಓ ಮಾಡಲು ಸಹ ಸಾಧನವಿಲ್ಲ. ಪ್ರತಿ ದಿನ ಹೊರಡುವುದು; ಹೊರಗಿನ ವಾತಾವರಣ ನೋಡಿ ಸುಮ್ಮನಾಗುವುದು— ಇದೇ ಆಗಿದೆ. ನಾವು ಕೊನೆಯವರೆಗೂ ಹೀಗೆಯೆ ಇರಬೇಕೆಂದು ನಿರ್ಧರಿಸಿದ್ದೇವೆ. ಆದರೂ ನಿಶ್ಶಕ್ತರಾಗುತ್ತಿದ್ದೇವೆ. ಇನ್ನು ಮುಂದೆ ನಾನು ದಿನಚರಿಯನ್ನು ಬರೆಯಲಿಕ್ಕೂ ಅಶಕ್ತನಾಗಿರುವೆನೆಂಬುದೇ ಶೋಚನೀಯವಾದ ವಿಷಯ."

*   *   *

ಎಂಟು ತಿಂಗಳ ನಂತರ ಅವರ ಸ್ನೇಹಿತರು **ಇವ್ಯಾನ್ಸಿನಿಂದ** ಬಂದು, ಆ ಗೂಡಾರದಲ್ಲಿ ಮೃತದೇಹಗಳನ್ನು **ನೋಡಿದರು.** ಇನ್ನೂ ನಿದ್ದೆಯಲ್ಲಿರುವವರೋ ಎಂಬಷ್ಟು ಅಚ್ಚುಕಟ್ಟಾಗಿದ್ದುವು ಆ ದೇಹಗಳು. ಸ್ಕಾಟನ ತೋಳ ಕೆಳಗೆ **ಅವನ ದಿನಚರಿಯೂ,** ಪತ್ನೀ-ಪುತ್ರರಿಗೂ, ಇತರ ಮಿತ್ರರಿಗೂ ಬರೆದ **ಕಾಗದಗಳೂ** ಇದ್ದುವು. ಅವನ ಪ್ರಿಯಮಿತ್ರನಾದ ವಿಲ್ಸನನ ಪತ್ನಿಗೆ ಬರೆದ ಕಾಗದ ಇದು :

PHOTO
ENLARGEMENT

16" by 20" Size ★ Rs. 6/- Only

12" by 18" Size ★ Rs. 5/- Only

HIGH CLASS WORK
EXECUTED BY
SPECIALIZED ARTISTS
Equipment Most Modern!
Entire Satisfaction Guaranteed.
Wanted agents to canvass for enlargements throughout Karnataka on pay or commission basis
National Photo Art Studio,
Radha-Krishna Peth, HUBLI.

“ ಪ್ರಿಯಮಿತ್ರೆ ಶ್ರೀಮತಿ ವಿಲ್ಸನ್‌,

ಈ ಕಾಗದವು ನಿನ್ನನ್ನು ತಲ್ಪುವುದಾದರೆ ಅದು ತಲ್ಪುವುದಕ್ಕೆ ಎಷ್ಟೋ ಮುಂಚೆಯೆ ನಾನೂ ಮತ್ತೂ ಬಿಲ್‌ನೂ (ವಿಲ್ಸನ್ ಎಂಬುದರ ಪ್ರೀತಿಯ ರೂಪ. ನಮ್ಮಲ್ಲಿ ‘ ನಾರಾಯಣ ’ ಎಂಬುದನ್ನು ‘ ನಾಣಿ ’ ಎನ್ನುವುದಿಲ್ಲವೇ ಹಾಗೆ.) ಜೊತೆಯಲ್ಲಿ ಸತ್ತುಹೋಗಿರುವೆವು. ಈಗ ನಾವು ಸಾವಿಗೆ ತುಂಬಾ ಸಮೀಪದಲ್ಲಿದ್ದೇವೆ. ಆತನು ತನ್ನ ಅಂತ್ಯ-ಕಾಲದಲ್ಲಿ ಎಷ್ಟು ಶಾಂತನಾಗಿದ್ದನೆಂಬುದನ್ನು ತಿಳುಹಲು ಇಚ್ಛಿಸುತ್ತೇನೆ. ಆತನು ತನ್ನ ದುರ್ದಶೆಯನ್ನು ಮರೆತು, ಸದಾ ಇತರರಿಗೆ ಸಹಾಯ ಮಾಡಲು ಹಾತೊರೆಯುತ್ತಾ, ಇಂತಹ ಪ್ರಾಣಾಪಾಯಕ್ಕೆ ಸಿಕ್ಕಿಸಿದ ನನ್ನನ್ನು ಕುರಿತು ಒಂದೇ ಒಂದು ನಿಷ್ಠುರದ ಮಾತನ್ನು ಕೂಡ ಆಡದೆ ಎಲ್ಲವನ್ನೂ ಮೌನದಿಂದ ಸಹಿಸಿ, ಆನಂದದಿಂದಿದ್ದನು. ಸುದೈವದಿಂದ ಆತನ ಆರೋಗ್ಯವು ಯಾವ ವಿಧದಲ್ಲೂ ಕೆಟ್ಟಿಲ್ಲ. ಆತನ ಕಣ್ಣುಗಳು ನೀಲವರ್ಣದಿಂದ ಶೋಭಿಸುತ್ತಿವೆ. ಆಶೆಯು ತುಂಬಿ ತುಳುಕುತ್ತಿದೆ. ಸರ್ವಶಕ್ತನಾದ ಭಗವಂತನ ನಾಟಕವೊಂದರಲ್ಲಿ, ತನಗೆ ಇಂತಹ ಉತ್ತಮ ಪಾತ್ರವೊಂದನ್ನು ಅಭಿನಯಿಸಲು ಅವಕಾಶ ದೊರಕಿತಲ್ಲಾ ಎಂದು ಆನಂದಿಸುತ್ತಾನೆ. ಆತನು ನನ್ನ ನಿಜಸ್ನೇಹಿತನಾಗಿ ಜೀವಿಸಿದ್ದಂತೆಯೆ, ಧೈರ್ಯದಿಂದ—ನಿರ್ಮಲ, ಶಾಂತ ಮನಸ್ಸಿನಿಂದ ಸತ್ತನೆಂಬುದಕ್ಕಿಂತಲೂ ಹೆಚ್ಚಿಗೆ ಏನನ್ನೂ ನಿನ್ನ ಮನಸ್ತೃಪ್ತಿಗಾಗಿ ಹೇಳಲಾರೆ...... ”

“ ಪೀಟರ್ ಪ್ಯಾನ್ ಅಂಡ್ ವೆಂಡಿ ” ಎಂಬುದರ ಲೇಖಕನಾದ ಸರ್ ಜೇಮ್ಸ್ ಬ್ಯಾರಿ ಎಂಬವನಿಗೆ ಬರೆದ ಪತ್ರವಿದು :

“ ಮಿತ್ರಾ ! ನಾವು ಅತ್ಯಂತ ಅನಾನುಕೂಲ ಪ್ರದೇಶವೊಂದರಲ್ಲಿ ಸಿಕ್ಕು ಹಾಕಿಕೊಂಡಿದ್ದೇವೆ........ ನಾವು, ಆಂಗ್ಲೇಯರು, ಈಗಲೂ ಸಹ ಕಾರ್ಯವೊಂದನ್ನು ಕೊನೆಗಾಣಿಸಲು ಹೇಗೆ ಧೈರ್ಯದಿಂದ ನಮ್ಮ ಆತ್ಮವನ್ನೇ ಬಲಿಗೊಡಬಲ್ಲೆನೆಂಬುದನ್ನು ತೋರಿಸಲು ಪ್ರಯತ್ನಿಸುತ್ತಿದ್ದೇವೆ. ನಾವು ಧ್ರುವವನ್ನು ತಲ್ಪಿರುವುದೂ ಮತ್ತು ನಿಸ್ಸಹಾಯಕ ಸ್ನೇಹಿತರ ಸೇವೆ ಮಾಡಿರುವುದೂ ಕ್ರಮೇಣ ಜಗತ್ತಿಗೆ ತಿಳಿಯದಿರದು. ನಿಸ್ವಾರ್ಥ-ಸೇವೆಗಾಗಿ ನಮ್ಮ ಜೀವನವನ್ನೇ ಬಲಿಗೊಟ್ಟಿದ್ದೇವೆ. ಇದು ನಮ್ಮ ಮುಂದಿನ ಪೀಳಿಗೆಯವರಿಗೆ ಒಂದು ಮಾದರಿಯಾಗಲೆಂದು ನನ್ನ ಆಶೆ. .... ಅಂತ್ಯ ವಂದನೆಗಳು. ನಾನು ಅಂತ್ಯಕ್ಕಾಗಿ ವ್ಯಾಕುಲಗೊಳ್ಳುತ್ತಿಲ್ಲ ; ಆದರೆ ನನ್ನ ಮುಂದಿನ ಯೋಜನೆಗಳೆಲ್ಲಾ ಹಾಳಾದುದಕ್ಕಾಗಿ ವ್ಯಥೆಗೊಳ್ಳುತ್ತಿರುವೆನು. ನಾವು ಅಂತಹ ಭಾರಿ ಪರಿಶೋಧಕರಾಗಿಲ್ಲದಿರಬಹುದು ; ಆದರೆ ಹಿರಿದಾದ ಸಾಹಸಕಾರ್ಯವೊಂದನ್ನು ಮಾಡಿ ಜಯಿಸುವುದರಲ್ಲಿದ್ದೆವು.”

* * *

ಅಲ್ಲಿಯೆ ಮಂಜಿನ ಸಮಾಧಿಯೊಂದನ್ನು ಮಾಡಿ, ಜಾರು-ಜೋಡಿನಿಂದ ಶಿಲುಬೆಯೊಂದನ್ನು ತಯಾರಿಸಿ ಅದರ ಮೇಲೆ ನೆಟ್ಟು, ಬೈಬಲಿನ ಅಧ್ಯಾಯವೊಂದನ್ನು ಅವರ ಆತ್ಮಶಾಂತಿಗಾಗಿ ಓದಿ, ಆ ಧೀರರನ್ನು ಅಂತ್ಯದ ವರೆಗೂ ಹೊಡೆದಾಡಲು “ಆ ನೀಲವರ್ಣದ ಬಾನಡಿಯಲ್ಲಿ ” ಬೀಭತ್ಸ ಮಂಜಿನ ಮೈದಾನದ ಮೇಲೆ ಬಿಟ್ಟು, ಎಲ್ಲರೂ ಹಿಂದಿರುಗಿದರು.

ವಾಚಕರೇ, ಧ್ರುವವಿಜಯವು ಮುಗಿಯಿತು! ಆದರೆ ಮಾನವನ ಪರಿಶೋಧಕ ಬುದ್ಧಿಯು ಇಷ್ಟಕ್ಕೆ ಸುಮ್ಮನಿರಬಲ್ಲದೇ ? ಇಲ್ಲ, ಈಗ ನಮ್ಮ ಇಂಡಿಯಾ ದೇಶದಲ್ಲಿ ಒಂದು ಪರಿಶೋಧನೆಗಾಗಿ ಜಗತ್ತಿನ ಜನ—ಮುಖ್ಯವಾಗಿ ಜರ್ಮನರು—ಪ್ರಯತ್ನಿಸುತ್ತಿದ್ದಾರೆ. ಅದು **ಗೌರೀಶಂಕರ ಶಿಖರಾರೋಹಣ.** ೧೯೪೧ರಲ್ಲಿ ಸುಮಾರು ೨೮೦೦೦ ಅಡಿಗಳ ತನಕ ಹತ್ತಿ ಹಿಂದಿರುಗಿದ್ದಾರೆ. ಅವರು (ಜರ್ಮನರು) ನಾಲ್ಕು ವರ್ಷಕ್ಕೊಂದು ಬಾರಿ ಹಿಮಾಲಯ ಯಾತ್ರೆ ಜರುಗಿಸಲು ಯೋಚಿಸಿದ್ದರು. ಅದರಂತೆ ಬರುವ ವರ್ಷ (೧೯೪೨) ಹಿಮಾಲಯಾ-ರೋಹಣ ನಡೆಯಿಸಬೇಕು ; ಆದರೆ ಜರ್ಮನಿಯು ಈಗ ಯುದ್ಧದ ದಾವಾಗ್ನಿಯಲ್ಲಿ ಬಿದ್ದು ಬೇಯುತ್ತಿದೆ “ ತನಗೆ ಇಲ್ಲದೆ ತಡಕಾಡುತ್ತಿರುವಾಗ ಮೊಮ್ಮಗಳಿಗೆಲ್ಲಿಂದ ಕೊಡಿಕೆತರಲಿ” ಎಂಬಂತೆ, ಅದರ ತಾಪತ್ರಯವೇ ಅದಕ್ಕಾಗಿರುವಾಗ, ಈ ಪ್ರಯತ್ನವು ಹಿಂದೆ ಬೀಳಬಹುದು. ನಮ್ಮ ದೇಶದ ಮೇರೆಯಾಗಿರುವ, ನಮ್ಮದಾಗಿರುವ, ನಮ್ಮ ದೇವರಾದ ಪರಮೇಶ್ವರನು ವಾಸಿಸುತ್ತಿರುವನೆಂದು ನಾವು ಹೇಳುವ ಗೌರೀಶಂಕರಕ್ಕೆ, ನಮ್ಮ ಸಹೋದರರಾದ (ಒಂದೇದೇಶದಲ್ಲಿ ಹುಟ್ಟಿ ಬೆಳೆದವರು) ಹರಿಜನರನ್ನು ಸುಲಭವಾಗಿ ದೇವಸ್ಥಾನಗಳಿಗೆ ಸೇರಿಸದಿರುವ ನಾವು, ಅನ್ಯರನ್ನು ಹತ್ತಲು ಬಿಡಬಹುದೆ ? ಯೋಚಿಸಿ !

ಸ್ವತಂತ್ರರಾಷ್ಟ್ರವಾಗಿದ್ದರೆ ಪುರೋಭಿವೃದ್ಧಿಗಾಗಿ ನಾವೇ ಪ್ರಯತ್ನಿಸುತ್ತಿದ್ದೆವು. ನಮ್ಮ ಪರಿಶೋಧಕ ಬುದ್ಧಿಯು ಜಾಗೃತವಾಗುತ್ತಿತ್ತು. ಸಾಹಸಕಾರ್ಯಗಳನ್ನು ಮಾಡಲು ನಮ್ಮ ಮನಸ್ಸೂ ಹಾತೊರೆಯುತ್ತಿತ್ತು. ಆದರೆ ಈಗ ನಾವು ಕುರಿಮಂದೆಯಲ್ಲಿ ಬೆಳೆದ ಸಿಂಹದ ಮರಿಗಳಾಗಿದ್ದೇವೆ. ಸ್ಕಾಟ್ ನಂತಹ ಸಿಂಹಗಳ ಗರ್ಜನೆಯನ್ನು ಕೇಳಿ ನಮ್ಮ ಚೈತನ್ಯವು ಜಾಗೃತಿಗೊಳ್ಳಬೇಕಾಗಿದೆ. ಜಾಗೃತಿಯನ್ನು ಹೊಂದುತ್ತಲಿದೆ.

ಸ್ಕಾಟನು ತನ್ನ ಜನಾಂಗದವರಿಗೆ ಮಾದರಿಯಾಗಿರಲೆಂದು ಹೇಳಿರುವ (ಅಂತ್ಯಕಾಲದಲ್ಲಿ) ವಾಕ್ಯವನ್ನಾದರೂ ಸ್ವಲ್ಪ ನೋಡಿ- “ ನಮ್ಮ ನಿಸ್ಸಹಾಯಕ ಸ್ನೇಹಿತರಿಗೆ ಸೇವೆಗೈಯಲು ನಿಸ್ವಾರ್ಥಬುದ್ಧಿಯಿಂದ ನಮ್ಮ ಪ್ರಾಣವನ್ನೇ ಬಲಿಗೊಡಲೂ ನಾವು ಹಿಂಜರಿಯುತ್ತಿಲ್ಲ !” ಆದರೆ ಆತನ ಪೀಳಿಗೆಯವರಾದರೊ (ಆತನ ಮಾದರಿಯನ್ನನುಸರಿಸ ಬೇಕಾದವರು) ಸ್ವಾರ್ಥಕ್ಕಾಗಿ ಅನ್ಯರನ್ನು ನಿಸ್ಸಹಾಯಕರನ್ನಾಗಿ ಮಾಡಿ, ಅವರ ಪ್ರಾಣ, ಮಾನ, ಧನಗಳನ್ನು ಸ್ವಲ್ಪವೂ ಹಿಂಜರಿಯದೆ ಬಲಿ ತೆಗೆದುಕೊಳ್ಳುತ್ತಿರುವರು. ನಾವಾ ಸ್ವಾರ್ಥಕ್ಕಾಗಿ ಎಲ್ಲವನ್ನೂ ಬಲಿಗೊಡುವೆವು. ಸಾಕು ಈ ಸ್ವಾರ್ಥ ! ಈ ಮೌಢ್ಯ ! ಎಲ್ಲವನ್ನೂ ಹರಿದೊಗೆದು ಮಾತೆಯನ್ನು ಸೇವಿಸಿ ಪೂರ್ವದಂತೆ ಆಕೆಯನ್ನು ಅಗ್ರಪೂಜಾರ್ಹಗಳನ್ನಾಗಿ ಮಾಡೋಣ।

———o———

ಕೈತುತ್ತು ಬಾಯಿಗಿಲ್ಲ! ★ (ಸಣ್ಣ ಕತೆ)

ಪಂಡಿತ ವಿಘ್ನೇಶ್ವರ ಶರ್ಮ, ಗೋಕರ್ಣ

★

ಪ್ರೀತಿಯ ಸಾಮ್ರಾಜ್ಯದಲ್ಲಿ ಸಂದೇಹಶತ್ರುವಿನ ಹಾವಳಿ ಹೆಚ್ಚು; ಪ್ರೀತಿಯ ಅತ್ಯಾಪೇಕ್ಷೆಯ ಅತೃಪ್ತಿ ದ್ವೇಷದಲ್ಲಿ ಪರಿಣಮಿಸುವುದು. ರಾಮಯ್ಯ ದೇವಮ್ಮನನ್ನು ಪ್ರೀತಿಸುತ್ತಿರಲಿಲ್ಲವೇನು? ಪ್ರೀತಿಸುತಿದ್ದನೆಂತಲೆ ಕೈಯಲ್ಲಿಯ ಕವಳವನ್ನು ಕಳೆದುಕೊಂಡ!

★

ಹೆಣ್ಣು ಗಂಡು ಒಬ್ಬರನ್ನೊಬ್ಬರು ಪ್ರೀತಿಸುವ ರೀತಿಯಲ್ಲಿಯೇ ಆದೊಂದು ವಿಧವಾದ ಶಂಕೆಯನ್ನು—ತಪ್ಪುಕಲ್ಪನೆಯನ್ನು— ತಂದುಕೊಂಡು, ಸುಖಮಯವಾಗಬೇಕಾಗಿದ್ದ ಸಂಸಾರವನ್ನು ತೀರ ವಿರಸಮಾಡಿಕೊಂಡು, ಜೀವಮಾನವೆಲ್ಲ ಕಳವಳ-ಪಶ್ಚಾತ್ತಾಪಗಳಿಂದ ನರಳುವ ಸಂದರ್ಭಗಳನ್ನು ನಾವೆಷ್ಟೋ ಕಾಣುತ್ತೇವೆ.

ನನ್ನ ಸ್ನೇಹಿತ ರಾಮಯ್ಯ ಇಂತಹ ಸಂದೇಹಜೀವಿಗಳಲ್ಲಿ ಒಬ್ಬ! ಅವನ ಹೆಂಡತಿ ದೇವಮ್ಮನೊ, ಒಳ್ಳೆಯ ಸ್ವಭಾವದವಳು. ರೂಪು ನಡತೆ ಎಲ್ಲಾ ಇರುವವಳು. ಅಡಿಗೆ ಮಾಡುವುದರಲ್ಲಿ ಅವಳ ನೈಪುಣ್ಯ ಹಿರಿದು. ಆಕೆ ಮಾಡಿದ ತಿಂಡಿ—ಕಾಫಿಗಳನ್ನು ಸೇವಿಸುವ ಸುಯೋಗವನ್ನು ರಾಮಯ್ಯನ ಮಿತ್ರರು ನಿರಂತರವೂ ಹಾರೈಸುತ್ತಿರುವರು. ರಾಮಯ್ಯನೂ ತಿನಿಸುಗೂಳಿ! ಹೀಗಾಗಿ ವಾರದಲ್ಲಿ ಮೂರು ದಿನವಾದರೂ ಆತನ ಮನೆಯಲ್ಲಿ 'ಮೇಜವಾನಿ' ಇದ್ದೇ ಇರುವುದು.

ಮೊದ ಮೊದಲು ರಾಮಯ್ಯ ತುಂಬ ಉದ್ಯೋಗಶೀಲನಾಗಿದ್ದ. ನಾಲ್ಕಾರು ಖಂಡಿ ಅಡಿಕೆ ಹುಟ್ಟುವಳಿಯಿರುವ ತೋಟ, ಇಪ್ಪತ್ತು ಖಂಡುಗ ಭತ್ತ ಬೆಳೆಯುವ ಹೊಲ ಇವೆ. ಚಳಿಗಾಲದಲ್ಲಿ ರಾಮಯ್ಯ ಕಬ್ಬು ಬೇರೆ ಬೆಳೆಯುತ್ತಾನೆ. ಗಂಡ, ಹೆಂಡತಿ ಇಬ್ಬರ ನಿರ್ವಾಹಕ್ಕೆ ಯಥೇಷ್ಟವಾಗಿದೆ ಅವನ ದುಡಿಮೆ.

ಹೆಂಡತಿ ದೇವಮ್ಮ ಮನೆಗೆ ಬಂದಮೇಲೆ, ಐದಾರು ತಿಂಗಳುಗಳವರೆಗೂ ರಾಮಯ್ಯನಲ್ಲಿ ಯಾವ ವಿಧದ ಬದಲಾವಣೆಯೂ ಆಗಿರಲಿಲ್ಲ! ಮುಂದೆ ಸಾಧಾರಣವಾಗಿಯೇ ಮೊದಲಿಹರೆಯದಲ್ಲಿ ಬರಬಹುದಾದ ಆ ಸ್ವಭಾವ, ಆ ಭ್ರಮೆ ಅವನಲ್ಲಿಯೂ ಹುಟ್ಟಿಕೊಳ್ಳಬೇಕೆ? ಇದರಿಂದ ರಾಮಯ್ಯನಿಗೆ ಉದ್ಯೋಗದಲ್ಲಿ ಆಸಕ್ತಿ ಕಡಿಮೆಯಾಯಿತು. ಹಗಲೂ ಇರುಳೂ ಹೆಂಡತಿಯ ಬೆನ್ನು ಕಾಯುವುದೊಂದೆ ಅವನ ಕೆಲಸವಾಯಿತು. ಹಿತ್ತಲು ಕಡೆಗೆ ಹೋಗಿದ್ದರೆ ಅಲ್ಲಿ ನೆರೆಮನೆಯ ಭೀಮಣ್ಣ—ಉಂಡು ಕೈತೊಳೆಯಲು ಬಂದವನು—ಕೆಮ್ಮಿದಂತೆ ಭಾಸವಾಗುವುದು. ಹೊರಜಗುಲಿಗೆ ಬಂದರೆ ಅಲ್ಲಿ, ಉಡುಪಿಯಿಂದ ಓದಿಕೊಂಡು ಬಂದಿದ್ದ ತುದಿಮನೆ ವೆಂಕಟ್ರಮಣಯ್ಯ "ಏನು ದೇವಮ್ಮಾ, ತಾಂಬೂಲದ ಬಟ್ಟಲು ಎಲ್ಲಿ?" ಎಂದು — ಸಹಜವಾಗಿಯೆ ಎನ್ನುವಂತೆ— ಪೇಟೆಗೆ ಹೋಗುವವನು ಮಧ್ಯದಲ್ಲಿಯೆ ನಿಂತು ಕೇಳುತ್ತಾನೆ. ಅಂತೂ ರಾಮಯ್ಯನಿಗೆ ನೆಮ್ಮದಿಯಿಲ್ಲ! ಅವನ ದುರದೃಷ್ಟಕ್ಕೆ ಆ ಹೆಂಡತಿ ಬೇರೆ ರೂಪವನ್ನು ತಂದಿದ್ದಾಳೆ. ತನ್ನದೋ, ಗುಂಜು-ಗುಂಜಲಾದ ಕಪ್ಪುಬಣ್ಣದ ಕೂದಲುಗಟ್ಟಿದ ಆಕಾರ! ಮಾತಾಡುವಾಗ ಉಗ್ಗು ಬೇರೆ ಬರುವುದು. ತನ್ನಲ್ಲಿ ಹೆಂಡತಿಯನ್ನು ವಿಧೇಯಳನ್ನಾಗಿಸಿಕೊಳ್ಳುವ ಯಾವ ಸಾಮಗ್ರಿಯೂ ಇಲ್ಲ! ಸೌಜನ್ಯದಿಂದಲೂ ಹೆಣ್ಣನ್ನು ಒಲಿಸಿಕೊಳ್ಳಬಹುದೆಂಬುದು, ಆತನ ಮನಸ್ಸು-ಬುದ್ಧಿಗಳಿಗೆ ನಿಲುಕದ ಮಾತು! ರಾಮಯ್ಯ ಆಗ ಅವಲಂಬಿಸಿದ ನೀತಿಯೆಂದರೆ ತಾಡನೆಯೊಂದೇ! ಹೆಣ್ಣನ್ನು ಹಾದಿಗೆ ತರಲು ಅದೇ ಮದ್ದು! ಹೊಡೆಯುವ ಹಕ್ಕು ಗಂಡನಾದ ತನಗಿದೆ; ಆ ಹಕ್ಕನ್ನು ಸದುಪಯೋಗ ಮಾಡಿಕೊಂಡರೆ ಅಭ್ಯಂತರವೇನು!

ಸ್ನೇಹಿತ ರಾಮಯ್ಯನ ಈ ವರ್ತನೆಯನ್ನು ನೋಡಿ ನನ್ನಂತಹನಿಗೆ ಕಳವಳವಾಗುವುದು ಸಹಜ; ಒಂದೆರಡು ಬಾರಿ ಬುದ್ಧಿವಾದ ಹೇಳಿದೆ; ಆದರೆ ಅದೇನೂ ಉಪಯೋಗವಾಗಲಿಲ್ಲ. ಹಾಗೆ ನಾನು ಉಪದೇಶ ಹೇಳಿದ ದಿನ, ಆ ದುರ್ದೈವಿಯಾದ ಹೆಂಗುಸಿಗೆ ಇನ್ನೆರಡು ಪ್ರಹಾರ ಹೆಚ್ಚು ತಿನ್ನಬೇಕಾಗುತ್ತಿತ್ತು. ಆ ಸಮಯದಲ್ಲಿ ರಾಮಯ್ಯ, ಸಂಪನ್ನನಾದ ತಾನು ಅನನ್ಯಗತಿಕನಾಗಲಾರೆನೆಂಬ ಒಣ ಜಂಭ ಬೇರೆ ಬೀರುತ್ತಾನೆ.

(೨)

ಬರುಬರುತ್ತ ರಾಮಯ್ಯನ ಆದಾಯ ಕಡಿಮೆಯಾಯಿತು. ಮಿತ್ರರ ಮೇಜವಾನಿಯಿಂದಾಗಿ ಖರ್ಚು ಬೆಳೆಯಿತು. ಒಮ್ಮೆ ತೀರ್ಥಹಳ್ಳಿಯಿಂದ ವೆಂಕೋಬರಾಯರೆಂಬವರು ರಾಮಯ್ಯನ ಮನೆಗೆ ಬಂದರು. ತೀರ್ಥಹಳ್ಳಿ ನಮ್ಮೂರಿಗೆ ನಾಲ್ಕು ಮೈಲು ದೂರದಲ್ಲಿದೆ. ರಾಯರು ಅಲ್ಲಿ ದೊಡ್ಡ ಕಿರಾಣಿ ಅಂಗಡಿ ಇಟ್ಟಿದ್ದಾರೆ. ನಾವೆಲ್ಲ ಅವರಲ್ಲಿಯೇ ಸಾಮಾನು ಕೊಳ್ಳುತ್ತೇವೆ. ಒಳ್ಳೆ ಪ್ರಾಮಾಣಿಕರು, ಅಲ್ಲದೆ ಉದಾರಿಗಳು. ರಾಮಯ್ಯನು ಅವರಿಗೆ

ಇನ್ನೂರು ರೂಪಾಯಿ ಕೊಡಬೇಕಾಗಿತ್ತು. ಎರಡು ವರ್ಷಗಳಿಂದ ಒಡ್ಡಿಯ ಹಣ ಕೂಡ ಕೊಡಲಾಗಿರಲಿಲ್ಲ! ಅವರು ಈಗ ವಸೂಲಿಗೆ ಬಂದಿದ್ದಾರೆ. ದೇವಮ್ಮನು ಅಂದು ರಾಯರಿಗಾಗಿ ಒಳ್ಳೊಳ್ಳೆಯ ತಿನಿಸನ್ನು ಅಣಿಮಾಡಿಸಿದ್ದರು. ರಾಯರು ರುಚಿಕರವಾದ ತಿಂಡಿಯನ್ನು ತಿಂದು, ಕಾಫಿ ಕುಡಿದು, ತಮಗಾದ ತೃಪ್ತಿಯನ್ನು ಮುಖಭಾವದಿಂದಲೇ ವ್ಯಕ್ತಮಾಡಿದರು.

ಸಂದರ್ಭ ನೋಡಿ ರಾಮಯ್ಯ ಹೇಳಿದ:

"ಸಾವುಕಾರರೆ, ಅಡಿಕೆಯಿನ್ನೂ ಮಾರಾಟವಾಗಿಲ್ಲ; ಧಾರಣೆ ತೀರಾ ಇಳಿದಿದೆ. ಹುಟ್ಟುವಳಿ ಮೊದಲಿನಂತಿಲ್ಲ! ನೀವು ಸ್ವಲ್ಪ ಹಣ ಬಿಡಬೇಕಾಗುವುದು!"

ದೇವಮ್ಮ ಬಾಗಿಲುಪಟ್ಟಿಯನ್ನು ಹಿಡಿದು ನಿಂತಿದ್ದಾಳೆ. ರಾಯರು ಅವಳ ಆತಿಥ್ಯದಿಂದ ಸಂತುಷ್ಟರಾಗಿದ್ದಾರೆ.

"ಹಾಂ, ಆಗಲಿ ರಾಮಯ್ಯನವರೇ, ಈ ಸಾಲಿನ ಅಡಿಕೆ ಕೊಟ್ಟು ಪರೇ ನಮ್ಮ ಸಾಲ ತೀರಿಸಿ ಬಿಡಿರಿ. ನೂರಾ ಐವತ್ತು ರೂಪಾಯಿ ಒಂದೇ ಸಲ ಕೊಟ್ಟಲ್ಲಿ ಚುಕ್ತಾ ಮಾಡಿಕೊಂಡು ಬಿಡುತ್ತೇನೆ. ಆಗಬಹುದೇ! ಬಡ್ಡಿಯ ಮಾತೇ ಬೇಡ!"

"ನಿಮ್ಮಂಥವರು ದಯೆಮಾಡದೇ ಇನ್ನಾರು ಮಾಡಬೇಕು? ಆಗಲಿ, ನಾನು ತಿಂಗಳೊಪ್ಪತ್ತಿನಲ್ಲಿ ಪೇಟೆಗೆ ಬರುತ್ತೇನೆ; ಆಗ ಎಲ್ಲ ವ್ಯವಸ್ಥೆ ಮಾಡುತ್ತೇನೆ!"

"ಸರಿ!" ಎನ್ನುವಾಗ ರಾಯರು ದೇವಮ್ಮನನ್ನೊಮ್ಮೆ ನೋಡಿದರು.

"ದೇವಮ್ಮಾ! ಮಾಸಲುಬಟ್ಟೆ ಉಟ್ಟಿದ್ದೀರಲ್ಲ! ಒಂದು ಒಳ್ಳೆಯ ಸೀರೆ ತರಿಸಿ ಕೊಡಲು ಯಜಮಾನರಿಗೆ ಹೇಳಬಾರದೇ? ರಾಮಯ್ಯನವರೇ, ಪೇಟೆಗೆ ಬಂದವರು ನನ್ನನ್ನು ಎಚ್ಚರಿಸಿ! ಜವಳೀ ಪದ್ಮನಾಭಯ್ಯನಲ್ಲಿ ಒಳ್ಳೆಯ ಸೀರೆ ಒಂದಿವೆ; ವಿಚಾರಿಸೋಣ!"

ರಾಯರನ್ನು ಬಿಡಲು ರಾಮಯ್ಯ ಹೊರಬಾಗಿಲಿಗೆ ಬಂದ; ಅವರು ಮತ್ತೊಮ್ಮೆ ತಿರುಗಿ "ಬರುತ್ತೇನೆ; ನಿಮ್ಮಲ್ಲಿಯ ಆತಿಥ್ಯವನ್ನು ನಾನೆಂದೂ ಮರೆಯುವಂತಿಲ್ಲ!" ಎಂದು ಮುಗುಳು ನಗೆಯಿಂದ ಹೊರಬಿದ್ದರು. ಅವರು ಮನೆ ದಾಟುತ್ತಲೇ, ಅಷ್ಟು ಹೊತ್ತಿನ ವರೆಗೂ ತಡೆದು ನಿಂತಿದ್ದ ರಾಮಯ್ಯ ಹೆಂಡತಿಯನ್ನು ಗದ್ದರಿಸಿದ:

"ನಾಚಿಕೆಯಿಲ್ಲದವಳು! ಯಾರು ಬಂದರೂ ಬಾಗಿಲಿಗೆ ಹೀಗೆ ಮೈ ತೆರೆದುಕೊಂಡು ನಿಲ್ಲುವುದು! ಇಂದು ಇದು ಏನೆಲ್ಲಾ ತಿಂಡಿ ತಿನಿಸು! ಛೀತ್! ನಾನು ಮನೆ ಇಟ್ಟುಕೊಳ್ಳುವಂತೆಯೇ ಇಲ್ಲ!"

ಮಾತಿನೊಡನೆಯೇ ರಾಮಯ್ಯ, ಕೈಗೆ ಸಿಕ್ಕಿದ ಬಿದಿರುದೆಬ್ಬೆಯಿಂದ ಪಶುವಿಗೆ ಒಡಿದಂತೆ ಬಡಿದ. ಪಾಪ! ದೇವಮ್ಮನು ಮಾಡಿದ ಉಪಚಾರದಿಂದಾಗಿ ರಾಯರು ಐವತ್ತು ರೂಪಾಯಿ ಸೂಟು ಬಿಡಲು ಸಿದ್ಧರಾದರು. ರಾಮಯ್ಯ ಅದಕ್ಕೆ ಬೇರೆಯೇ ಅರ್ಥ ಮಾಡಿದ. ದಿನದ ಬಡಿತಕ್ಕಿಂತ ಇಂದಿನದರಲ್ಲಿ ಕಸುವು ಹೆಚ್ಚಾಗಿದ್ದುದರಿಂದ, ದೇವಮ್ಮ ತಡೆಯಲಾರದೆ ಬವಳಿಬಂದಂತಾಗಿ ನೆಲಕ್ಕೆ ಬಿದ್ದಳು.

(೪)

ರಾಮಯ್ಯನ ಮನೆಯಲ್ಲಿ ಮಿತ್ರರ ಮೇಜವಾನಿ ಎಂದಿನಂತೆಯೆ ನಡೆದಿತ್ತು. ಹೆಚ್ಚಾಗಿ ವೆಚ್ಚದ ಹೊರೆ ಬೀಳುವುದು ರಾಮಯ್ಯನ ಮೇಲೆಯೆ. ಈಗಿತ್ತ ಅವನು ಸ್ವಲ್ಪಮಟ್ಟಿಗೆ ಸಾಲ ಮಾಡಿಕೊಂಡಿದ್ದರಿಂದ, ನಾನೇ ಸರತಿಯಂತೆ ವೆಚ್ಚ ವಹಿಸಿಕೊಳ್ಳಬೇಕೆಂದು ಮಿತ್ರರಲ್ಲಿ ಕಟ್ಟುಮಾಡಿದ್ದೆ. ಹೀಗೆಯೆ ಒಂದು ಆದಿತ್ಯವಾರ ನನ್ನ ಪಾಳಿ ಬಂದಿತು. ನಮ್ಮ ತೋಟದಲ್ಲಿ ಒಳ್ಳೆಯ ಬೇರುಹಲಸಿನಕಾಯಿ ಬೆಳೆದುಕೊಂಡಿತ್ತು. ಚೆನ್ನಾದುವುಗಳನ್ನೇ ಆರಿಸಿ, ನಾಲ್ಕು ಕಾಯಿ ಕೊಯಿಸಿದೆ!

ಮನೆಗೆ ನಾನು ಹೋದಾಗ ರಾಮಯ್ಯ ತೋಟಕ್ಕೆ ಹೋಗಿದ್ದ. ದೇವಮ್ಮ ಬಚ್ಚಲುಮನೆಯಲ್ಲಿ ಮುಸುರೆ ಪಾತ್ರೆ ತಿಕ್ಕುತ್ತಿದ್ದಳು.

"ದೇವಮ್ಮಾ, ಸ್ವಲ್ಪ ಮಾತಾಡಬೇಕು!" ಎಂದೆ.

ಆಕೆ ತಿರುಗಿ ನೋಡಿದಳು; ಆ ಮೋರೆ ಆತ್ತಂತಿತ್ತು.

"ನೋಡು, ನಾಳೆಯ ಖಬಾತಿಗೆ (ಮೇಜವಾನಿಗೆ ನಾವು "ಖಬಾತು" ಎಂದು ಸಂಜ್ಞೆಯಿಟ್ಟುಕೊಂಡಿದ್ದೆವು) ವಡೆ ಮಾಡಬೇಕು! ಬೇರುಹಲಸಿನಕಾಯಿ ತರುತ್ತೇನೆ. ಕಡಲೆ ಹಿಟ್ಟು ಎಷ್ಟು ಬೇಕಾದೀತು, ಕೇಳೋಣ.. ಎಂದು ಬಂದೆ."

"ಏ, ಶ್ರೀನಿವಾಸ, ನಿಮ್ಮ ಖಬಾತು ಗಿಬಾತು ಎಲ್ಲಾ ಹಾಳಾಗಲಿ! ನೀವಾದೂ ಇನ್ನು ಮುಂದೆ ನಮ್ಮ ಮನೆಗೆ ಬರಬೇಡಿ! ನನಗೆ ಸಾಕಾಯಿತು!'

ದೇವಮ್ಮನು ಅಷ್ಟು ಅನಾದರವಾಗಿ ಮಾತನಾಡುತ್ತಾಳೆ, ಎಂದು ನಾನು ಊಹಿಸಿರಲಿಲ್ಲ?

"ಯಾಕೆ ದೇವಮ್ಮಾ, ಏನಾಯಿತು?"

"ಏನಿಲ್ಲ! ನೀವೆಲ್ಲ ಗಂಡಸರಾಗಿ ಹುಟ್ಟಬಾರದಿತ್ತು!"

"ಹಾಂ, ನಿನ್ನ ಗಂಡನಿಗೆ ಬುದ್ಧಿಯಿಲ್ಲ! ಅವನೊಬ್ಬ ಪಶು! ನೀನೂ ಸ್ವಲ್ಪ ಬಿರುಸಾಗಬೇಕು, ನೋಡು! ಅಂದರೇ ಹಾದಿಗೆ ಬರುತ್ತಾನೆ!"

"ಎಲ್ಲ ನೋಡಿಯಾಯಿತು ಶ್ರೀನಿವಾಸ! ಈ ಜೀವ ಯಾಕೆ ಹೋಗುವುದಿಲ್ಲಾ ಎನ್ನುವಂತಾಗಿದೆ ನನಗೆ! ಹೂಂ..ನಮ್ಮವರು ಬರುವ ಹೊತ್ತಾಯಿತು, ನಡೆ ಆಚೆಗೆ! ಇನ್ನು ಮಾತುಬೇಡ!"

ದೇವಮ್ಮ ನನ್ನನ್ನು ಕಣ್ಣೆತ್ತಿ ನೋಡದೆ, ಮತ್ತೆ ತನ್ನ ಕೆಲಸದಲ್ಲಿ ಮಗ್ನಳಾದಂತಾಗಿ ಬಿಟ್ಟಳು. ನಾನು ಅವಮಾನಿತನಾದಂತೆ ಹಾಗೆಯೆ ತಿರುಗಿದೆ.

ಹಾದಿಯಲ್ಲಿ ರಾಮಯ್ಯ ಸಿಕ್ಕಿದ.

"ಸಾಕು ಮಹಾರಾಯಾ, ಇನ್ನು ನಿಮ್ಮ ಮನೆಗೆ ಬರುವುದೇ ಉಳಿಯಲಿಲ್ಲ! ಆ ಪ್ರಾಣಿಯನ್ನು ಯಾಕೆ ಅಷ್ಟು ಗೋಳುಹೊಯ್ದುಕೊಳ್ಳುತ್ತೀಯೆ? ಇನ್ನಾದರೂ ಬಿಡು ಈ ಹುಚ್ಚು!"

ನನ್ನ ಗದ್ದರಿಕೆಗೆ ರಾಮಯ್ಯ ಅಳುಕಲಿಲ್ಲ!

"ಏನು ಶ್ರೀನಿವಾಸ! ಆ ನೋಗಲಾಡಿ ಹೇಳಿದ್ದೆಲ್ಲ ನಿಜವೆಂದು ನಂಬುತ್ತೀಯೋ ನೀನು?"

ರಾಮಯ್ಯನ ತಾಳ್ಮೆ ಹೋಗಿ ಎಷ್ಟೋ ದಿನಗಳಾಗಿವೆ. ಈಗ ಎಲ್ಲಿಯೇ ಇರಲಿ; ಹೆಂಡತಿಯ ಬಗ್ಗೆ ದುರಾಲೋಚನೆ ಮಾಡುವುದೊಂದೇ ಆತನ ನಿತ್ಯದ ಉದ್ಯಮವೆಂಬುದು ಖಚಿತವಾಯಿತು. ಇನ್ನು ಅವನೊಡನೆ ಮಾತನಾಡುವುದರಲ್ಲಿ ಅರ್ಥವಿರಲಿಲ್ಲ! ನಾನು ಬಾಯಿ ಬಿಡದೆ ಇದ್ದಿದ್ದರೆ, ಆ ದಿನ ಮಟ್ಟಿಗಾದರೂ ಆಕೆ ಹೊಡೆತ ವಿಲ್ಲದೇ ಇರುತ್ತಿದ್ದಳೇನೊ! ರಾಮಯ್ಯ ಹಾಗೆಯೆ ಬಿಡುವಂತಿಲ್ಲ!

ನನ್ನ ಕೃತಿಗೆ ನಾನೇ ಪಶ್ಚಾತ್ತಾಪ ಪಟ್ಟುಕೊಳ್ಳುವಂತಾಯಿತು.

(೪)

ಇಲ್ಲಿ ನನ್ನದೊಂದು ರೀತಿಯನ್ನು ಸ್ವಲ್ಪ ಹೇಳಬೇಕಾಗಿದೆ. ರಾಮಯ್ಯನ ಕಥೆಗೂ ನನ್ನ ಕಥೆಗೂ ಭೇದವಿಷ್ಟೇ: ಅಲ್ಲಿ ಗಂಡು ಹೆಣ್ಣನ್ನು ಅನುಮಾನದಿಂದ ನೋಡುತ್ತಿದೆ; ಇಲ್ಲಿಯೋ, ಅದಕ್ಕೆ ವಿರೋಧವಾಗಿ ಹೆಣ್ಣಿನ ಅನುಮಾನ ನನಗೆ ಗಂಟುಬಿದ್ದಿದೆ.

ನೆರೆಹೊರೆಯ ಯಾವಳೊಬ್ಬ ಹೆಣ್ಣಿನೊಡನೆ ಮಾತನಾಡಿದರೂ ಬಂತು ಮನೆಯಲ್ಲಿ ವರ್ಷಾಕಾಲ! ಈಗೊಬ್ಬ ಕ್ರಿಶ್ಚನ್ ಮೇಸ್ತ್ರಿ ಶಹರದಿಂದ ಬಂದಿದ್ದಾನೆ. ಸಂಗಡ ಹದಿನೈದೋ ಹದಿನಾರೋ ವಯಸ್ಸಿನ ಮಗಳು ಇದ್ದಾಳೆ. ನನಗೆ ಒಂದೆರಡು ಕಪಾಟು, ಕಿಡಕಿ, ಬಾಗಿಲುಪಟ್ಟಿ ಮೊದಲಾದದ್ದನ್ನು ಮಾಡಿಸುವುದಿತ್ತು. ಆತ ನಮ್ಮ ಮನೆಯ ಹತ್ತಿರವೇ ಬೀಡಾರ ಹೂಡಿದ್ದು, ಆ ಮಗಳು ಆಗಾಗ ನಾನಿರುವಲ್ಲಿ ಬರುತ್ತಾಳೆ. "ಏನಾದರೂ ಓದಲು ಕೊಡಿ" ಎಂದು ಕೇಳುತ್ತಾಳೆ. ನಾನು ಅಂತಹ ಸಮಯದಲ್ಲೆಲ್ಲ ಆ ಹುಡುಗಿಯೊಡನೆ ಒಳ್ಳೆ ಸಲುಗೆಯಿಂದ ಮಾತನಾಡುತ್ತಿದ್ದೆ.

ನನ್ನಲ್ಲಿ ಅಂತಹ ದುರುದ್ದೇಶವೇನೂ ಇರಲಿಲ್ಲ; ಆದರೂ ಅಂದು ನಾನು ಕ್ರಿಶ್ಚನ್ ಬಾಲಿಕೆಯೊಡನೆ ನಡೆದುಕೊಂಡ ರೀತಿ, ನನ್ನಾಕೆಗೆ—ಅದೇಕೋ—ವಿಪರೀತವಾಗಿ ಕಂಡಿತು. ಸರಿ, ತಡಮಾಡಲೇ ಇಲ್ಲ! "ನಿನಗೆ ಇಲ್ಲೇನು ಕೆಲಸ? ಹೀಗೆ ನೀನು ಪದೇಪದೇ ನಮ್ಮ ಮನೆಗೆ ಬಂದರೆ ನೋಡು!" ಎಂದು ಆ ಹುಡುಗಿಯನ್ನು ಗದ್ದರಿಸಿಯೇ ಬಿಟ್ಟಳು. "ತನ್ನ ಮಾನಸಿಕ ದೌರ್ಬಲ್ಯವನ್ನು ಹತ್ತಿಕ್ಕಿಕೊಳ್ಳಲಾಗದೆ, ಮನೆಬಾಗಿಲಿಗೆ ಬಂದವರಿಗೂ ಅಪಮಾನ ಮಾಡಲು ಹೇಸುವುದಿಲ್ಲ ಈ ಪ್ರಾಣಿ!" ನನಗೆ ತಲೆ ಕಾದು ಹೋಯಿತು. ಅಂದು ಮಧ್ಯಾಹ್ನ ಹೇಗೆ ಊಟ ಮಾಡಿದೆನೇನೊ! ಒಂದೆಡೆ ಮುಸುಕು ಹಾಕಿ ಮಲಗಿ ಬಿಟ್ಟೆ!

ಮೂರು ಘಂಟೆಯ ಸುಮಾರಿಗೆ ನನಗೆ ಕಣ್ಣು ತೆರೆಯುವಂತಾಯಿತು. ಹೊರಗೆ ಬಿಸಿಲು ರಣಗುಡುತ್ತಿತ್ತು. ಅದೇಕೋ, ಈಗಿತ್ತ ನಮ್ಮ ಮನೆಯ ಕಡೆಗೆ ಸುಳಿಯದಿದ್ದ ರಾಮಯ್ಯ, ಆ ಬಿಸಿಲಿನಲ್ಲಿಯೇ ಅಕಸ್ಮಾತ್ತಾಗಿ ಬಂದ. ನನಗೆ ಆಶ್ಚರ್ಯ! ಅಲ್ಲದೆ ಆತನ ನಿಮಿತ್ತವಾಗಿಯಾದರೂ ಮಧ್ಯಾಹ್ನದ ಕಾಫಿಗೆ ನನ್ನಾಕೆ ನೊಸ್ಸೆ ಹಾಕಲಾರಳೆಂದು ಸ್ವಲ್ಪಮಟ್ಟಿಗೆ ಸಮಾಧಾನವೂ ಆಯಿತು.

"ಏನು ರಾಮಯ್ಯಾ, ಬಹಳ ಅಪರೂಪ! ಬಿಸಿಲಿನಲ್ಲಿ ಬಂತಲ್ಲ ಸವಾರಿ?"

"ಹೀಗೇ ಮನಸ್ಸಿಗೆ ಬೇಸರವಾಯಿತು; ಬಂದುಬಿಟ್ಟೆ!"

"ಮನೆಯಲ್ಲಿ ಮತ್ತೆನಾದರೂ ಅನಾಹುತ ಬಂತೇನು?"

"ಎಂದು ಕಡಿಮೆಯಾಗಿದೆ ಹೇಳು ಶ್ರೀನಿವಾಸ! ಆ ಬಜಾರಿಗೆ ಜಾತ್ರೆಗೆ ಹೋಗಬೇಡವೆಂದು ಎಷ್ಟು ಹೇಳಿದೆ! ಥುತ್! ಮರ್ಯಾದೆಯಿಲ್ಲದವಳು, ಇಂಥ ಹೆಣ್ಣು ಸತ್ತರೇನು ಹಾಳು!"

"ಏನು ಒಬ್ಬಳೇ ಹೋದಳೇ?"

"ಇಲ್ಲ! ಅಣ್ಣ ಕರೆಯಲು ಬಂದಿದ್ದ! ಅವನೆದುರಿಗೆ ಸೌಜನ್ಯ ಬಿಡಲಾಗುವುದೋ? ಅವಳು ಬಂದರೆ ಕರೆದುಕೊಂಡು ಹೋಗು!—ಎಂದೆ! ಹೊರಟೇಬಿಟ್ಟಳು, ಗಂಡುಬೀರಿ!"

"ಇದರಲ್ಲಿ ಅನಾಹುತವೇನು ಬಂತು ರಾಮಯ್ಯಾ? ಹೇಗೂ ಅಣ್ಣ ಸಂಗಡ ಇರುತ್ತಾನೆ!"

"ಥೇ, ನಿನಗೆ ತಿಳಿಯದೊ! ಇನ್ನು 'ನನ್ನ ಗಂಡ ಹಾಗೆ, ಹೀಗೆ! ಒಂದು ಆಭರಣ ಇಲ್ಲ! ಒಂದು ಸೀರೆ ಇಲ್ಲ! ಬರೇ ಹಿಂಸೆ ಕೊಡೋದು!' ಹೀಗೆ ನೂರು ದೂರು ಅಣ್ಣನೆದುರು ಹೇಳುತ್ತಾಳೆ. ಹಾಳಾದ ಜಾತಿ! ಥುತ್! ಆ ನೀಚಳ ಮುಸುಡು ನೋಡಲಾಗದು!"

ತೋರಿಕೆಗೆ ರಾಮಯ್ಯ ಈ ಮಾತು ಹೇಳಿದನಾದರೂ ಮನಸ್ಸಿನಲ್ಲಿ ಅನುಮಾನಿಸಿಕೊಂಡಿದ್ದುದು ಬೇರೆಯೆ! ಇಷ್ಟು ಹೊತ್ತಿಗೆ ನನ್ನಾಕೆ ಹೊರಗೆ ಬಂದಳು. ಅವಳಿಗೆ ರಾಮಯ್ಯನೆಂದದ್ದು ಕೇಳಿಸಿರಬೇಕು.

"ಸಾಕು ಸಾಕು ರಾಮಯ್ಯ! ನಿಮ್ಮದು ಒಳ್ಳೇ ಸಂಭಾವಿತ ಜಾತಿ! ಅಂಥಾ ಹೆಂಡತಿ ದೊರಕಿದ್ದು ನಿನ್ನ ಪುಣ್ಯ! ದಿನಾ ಆಕೆಯ ಪಾದತೊಳೆದು ನೀನು ತೀರ್ಥ ತೆಗೆದುಕೊಳ್ಳಬೇಕು!"

ನನಗೆ ದಿಗಿಲಾಯಿತು.. ಇನ್ನೂ ಏನೇನು ಹೇಳುತ್ತಾಳೆಯೋ ಎಂದು. ರಾಮಯ್ಯನೆಂದ:

"ನೋಡು ಪದ್ದೂ, ನೀನಂದಂತೆ ನನಗೂ ಒಮ್ಮೊಮ್ಮೆ, ಅವಳು ಅಷ್ಟೇನೂ ದುರಾಚಾರಿಣಿಯಲ್ಲವೆಂಬ ಭಾವನೆ ಬರುತ್ತದೆ! ಒಂದೆರಡು ಬಾರಿ ಕಾಲು ಹಿಡಿದುಕೊಳ್ಳುವಷ್ಟು ಪಶ್ಚಾತ್ತಾಪ ಪಟ್ಟಿದ್ದೇನೆ. ಆದರೆ ನೀನೇ ಹೇಳು, ಮನೆಯಲ್ಲಿ ಹೇಳಿದಂತೆ ಕೇಳಿಕೊಂಡು ಇರಲು ಏನಾಗುತ್ತದೆ ಇವಳಿಗೆ? ಈಗ ಜಾತ್ರೆಗೆ ಹೋಗದೆ ಇದ್ದರೆ ನಡೆಯುತ್ತಿದ್ದಿಲ್ಲವೋ?"

"ಇಷ್ಟು ಮಾತ್ರಕ್ಕೆ ಏನಾಯಿತು? ಚಾಪಲ್ಯ ಬಂತು, ಹೋದಳು; ಅಷ್ಟೇ!"

"ನೀನೂ ಹೆಣ್ಣು! ನಿನಗೆ ಚಾಪಲ್ಯವಿಲ್ಲವೋ! ನೀನೇಕೆ ಹೋಗಲಿಲ್ಲ ಪದ್ದೂ!"

"ನಿನ್ನಂತೆ ನಮ್ಮವರೂ ತಡೆಹಾಕುವವರಾಗಿದ್ದರೆ ನಾನು ಎಷ್ಟೊಂದು ಕಡೆಗೆ ಹೋಗುವ ಮನಸ್ಸು ಮಾಡುತ್ತಿದ್ದೆನೊ! ಮನೆಯಲ್ಲಿ ನಾನು ಇದ್ದುಬಿಟ್ಟು ತನ್ನ ಅನಾಚಾರ ಗೊತ್ತಾಗಿ ಹೋಗುತ್ತಿದೆಯಲ್ಲಾ.. ಅಂತ ನಮ್ಮವರಿಗೆ! ಗಂಡಸರಿಗೆ ಹೆಚ್ಚಾಗಿ ಹೋಗಿದ್ದೇನಲ್ಲಾ ನಾನು!"

ನನ್ನಾಕೆಯ ಕಣ್ಣುಗಳಿಂದ ಒಂದೆರಡು ಹನಿ ಉದುರಿತು. ರಾಮಯ್ಯ ನನ್ನನ್ನು ನೋಡಿದ:

"ಏನಯ್ಯಾ, ಶ್ರೀನಿವಾಸ! ಇಂದು ನಿನ್ನ ಮನೆಯಲ್ಲಿಯೂ ಲಕ್ಷಣ ಚೆನ್ನಾಗಿಲ್ಲಾ..ಅಂತ ಕಾಣುತ್ತೆ!"

"ಎಲ್ಲ ಚೆನ್ನಾಗಿರುತ್ತೆ! ನೀನೇ ಹೇಳು ರಾಮಯ್ಯ, ಯಾರೋ ಕುಲಗೋತ್ರವಿಲ್ಲದ ಕಿರಸ್ತಾನರ ಹುಡುಗಿ! ಅವಳೊಡನೆ ಏನು ಮಾತು; ಏನು ನಗೆ! ಒಂದು ದಿನವಾದರೂ ಮನೆಯಲ್ಲಿ ಹಾಗೆ ಇದ್ದಿದ್ದರೆ ಆಣೆ!"

ನನ್ನಾಕೆ ಒಮ್ಮೆ ದುರುಗುಟ್ಟಿಕೊಂಡು ನನ್ನನ್ನು ನೋಡಿದಳು. ಆ ಅವತಾರ ನೋಡುವಂತಿಲ್ಲ. ಮೋರೆಯಲ್ಲಿ ಅದೇನು ರೌದ್ರ! ಏನು ಕಣ್ಣೀರು! ಕೊರಳುಬ್ಬಿಸಿಕೊಂಡು ಬಿಡುವ...ಏನಾ ಬಿಸಿಯುಸಿರು! ಒಮ್ಮೆಲೇ ಸಿಡಿಲು, ಮಳೆ, ಗಾಳಿ, ಎಲ್ಲಾ ಒಂದು ಬಿಟ್ಟಿದೆ.

"ಹೀಗೊ....! ಮನೆಯಲ್ಲಿ ಇಷ್ಟು ದೊಡ್ಡ ತುಫಾನು! ನನಗೆ ಬುದ್ಧಿ ಹೇಳುತ್ತಾನೆ ಬೃಹಸ್ಪತಿ!"

ರಾಮಯ್ಯ ಗಡಗಡಿಸಿದ; ನನ್ನ ಅವಸ್ಥೆ ಯಾರಿಗೂ ಬೇಡ!

"ಹಾಂ! ರಾಮಯ್ಯ, ನೀನೇ ತೀರ್ಮಾನ ಹೇಳು! ದನಕ್ಕೆ ಹೊಡೆದ ಹಾಗೆ ಹೊಡೆಯುತ್ತಿದ್ದೀಯಲ್ಲ ಹೆಂಡತೀನ! ಈಗ ನನ್ನಾಕೆಯ ಕೈಯಲ್ಲಿ ಒಂದು ದೊಣ್ಣೆ ಕೊಡು! ಏನು ಶಿಕ್ಷೆ ಆಗುತ್ತದೆಯೋ ಆಗಲಿ!" ನಾನೆಂದೆ.

"ಅದು ನಿಮ್ಮ ಜಾತಿಗೇ ಇರಲಿ! ನೀವು ಹೀಗೆಲ್ಲ ನಡೆದುಕೊಂಡರೆ, ನನಗೆ ಈ ಮನೆಯಲ್ಲಿ ಬಾಳುವೆ ಮಾಡುವುದು ಎಷ್ಟಕ್ಕೂ ಸಾಧ್ಯವಿಲ್ಲ!" ನನ್ನಾಕೆಯ ಸಿದ್ಧಾಂತದ ನುಡಿ.

"ಹಾಗಿದ್ದರೆ ನಾನು ಕುತ್ತಿಗೆಗೆ ಕಲ್ಲುಕಟ್ಟಿಕೊಂಡು ಬಾವಿಗೆ ಬೀಳುತ್ತೇನೆ; ಆ ಮೇಲೆ ಸಾಧ್ಯವಾಗಬಹುದು!" ನನಗೆ ಎಂದೂ ಇಲ್ಲದ ದಾರುಣ ಕೋಪ ಬಂದಿತ್ತು. ನನ್ನಾಕೆ ಹೆದರಿದಳು.

"ದಮ್ಮಯ್ಯ! ನಿಮ್ಮ ಕಾಲು ಬೀಳುತ್ತೇನೆ! ನಿಮ್ಮೊಡನೆ ಮಾತನಾಡಲಾರೆ! ಏನು ಬೇಕಾದದ್ದು ಮಾಡಿಕೊಳ್ಳಿ! ರಾಮಯ್ಯ, ತಡ ಹೋಗಬೇಡ! ಈಗ ಕಾಫಿಗೆ ಇಡುತ್ತೇನೆ!"

ನಾನಷ್ಟು ಬಿಮ್ಮಗೆ ವರ್ತಿಸದಿದ್ದರೆ ಆ ಜಂಡಿ ಕೇಳುತ್ತಿದ್ದಳೇ! ರಾಮಯ್ಯ ಕಾಫೀ ಕುಡಿದು ಹೊರಡುವಾಗ "ನನ್ನ ಮನೆಗೆ ಬರುವುದನ್ನು ನೀವೆಲ್ಲ ಬಿಟ್ಟೇ ಬಿಟ್ಟಿರಿ! ಅಂದಿನ ಮಾತು ಮರೆತು ಬಿಡು ಶ್ರೀನಿವಾಸ! ಇನ್ನು ಹಾಗಾಗಬಾರದು; ನಾಳೆ ಬಾ ಮತ್ತೆ!" ಎಂದು ಮೃದುವಾಗಿ ಹೇಳಿದ.

(೫)

ನನ್ನಾಕೆ ಪದ್ಮೆಯ ಮಾತಿನಿಂದ ರಾಮಯ್ಯ ಸ್ವಲ್ಪ ಮೆತ್ತಗಾಗಿದ್ದ! ಮೊದಲು ನಹ ಆತ ಒಂದೆರಡು ಬಾರಿ ಪಶ್ಚಾತ್ತಾಪ ಹೊಂದಿ ಹೆಂಡತಿಯ ಕಾಲು ಹಿಡಿದುಕೊಳ್ಳುವ ಮನಸ್ಸು ಮಾಡಿದ್ದೂ ನಿಜ ಎನ್ನಿ. ಆದರೆ ಆ ಬುದ್ಧಿ ಒಂದೇ ಕ್ಷಣ; ಮುಂದೆ ಆ ರೂಪ ಬೇರೆಯೇ. ಈಗಲೂ ಹಾಗೆ! ದಾರಿಯುದ್ದಕ್ಕೂ ರಾಮಯ್ಯನಿಗೆ ಒಂದೇ ಆಲೋಚನೆ. "ತನ್ನ ಹೆಂಡತಿ ನನ್ನ ಪದ್ಮೆಯಂತೆ ಒಂದು ದಿನವಾದರೂ ತನ್ನ ಬಗ್ಗೆ ಅನುಮಾನಪಡುವುದಿಲ್ಲವೇಕೆ..? ಅವಳಿಗೆ ತಾನು ಬೇಕಾಗಿಲ್ಲ! ತಾನೆಷ್ಟು ತಡೆ ಹಾಕಿದರೂ ಅವಳು ಅಣ್ಣನ ಬೆನ್ನು ಹತ್ತಿ ಜಾತ್ರೆಗೆ ಹೋದಳು. ಹಾಂ, ಅಲ್ಲಿ ಆ ವೆಂಕೋಬರಾಯನಿದ್ದಾನೆ. ಥುತ್! ಹಾಳು ಮುಂಡೆ! ಮನೆಗೊಂದು ಬರಲಿ!"

ಕ್ಷಣಕ್ಷಣಕ್ಕೂ ಜ್ವಾಲೆ ಅವನ ಎದೆಯಲ್ಲಿ ಭುಗಿಲ್ ಎಂದು ಹೊತ್ತಿಕೊಳ್ಳುತ್ತಿದೆ.

* * *

ದೇವಮ್ಮನ ಅಣ್ಣನು ಅವಳನ್ನು ಗಾಡಿಯಲ್ಲಿ ತಂದು ಬಿಟ್ಟು ಹೋದ. ಬರುವಾಗ ಪದ್ಮನಾಭಯ್ಯನ ಅಂಗಡಿಯಿಂದ ಒಂದು ಸೀರೆ, ಹಾಗೂ ನಾಲ್ಕು ವಾರು ಸಿಲ್ಕುಬಟ್ಟೆ ತೆಗೆಸಿಕೊಟ್ಟಿದ್ದಾನೆ ಆ ಪುಣ್ಯಾತ್ಮ! ರಾಮಯ್ಯನು ತನ್ನ ಭಾವ ಹೊರಟು ಹೋಗುವುದನ್ನೇ ಕಾಯುತ್ತಿದ್ದ. ಒಳಗೆ ದೇವಮ್ಮ ಮೊದಲಿನ ಪಚ್ಚಿ ಎಂಜಲು ಸಾರಿಸಿ, ಈಗಷ್ಟೇ ಊಟಕ್ಕೆ ಕುಳಿತಿದ್ದಳು. ಅಡಿಕೆ ಪುಡಿ ಮಾಡುವ ನೆಪಮಾಡಿ ರಾಮಯ್ಯ ಒಳಗೆ ಬಂದ! ಒರಳಿನ ಮೇಲೊಂದು ಉರುಟಾದ ಗುಂಡು ಇಟ್ಟಿತ್ತು. ಆತನ ಮೋರೆ ಈಗ ಕಾದ ಕಾವಲಿಯ ಹಾಗೆ—ಹೊಗೆ ಚಿಮ್ಮುತ್ತಿದೆ.

"ಕೊನೆಗೂ ನನ್ನ ಮಾತು ಕಸದ ಬುಟ್ಟಿಗೆ ಹಾಕಿದೆಯಲ್ಲವೇ? ತೀರ್ಥಹಳ್ಳಿ ಪೇಟೆಯಲ್ಲಿ ಎಷ್ಟು ಕಡೆಗೆ ತಿರುಗಾಡಿದೆ? ಆ ವೆಂಕೋಬರಾಯ, ಸೀರೆ-ಸಿಲ್ಕು ಇಷ್ಟೆಯೋ; ಇನ್ನೇನನಾದರೂ ಕೊಟ್ಟನೊ?"

"ನಿಮ್ಮ ಭ್ರಾಂತಿ ಹಾಳಾಯಿತು! ಸೀರೆ ಅಣ್ಣ ತೆಗೆಸಿಕೊಟ್ಟಿದ್ದಾನೆ. ನಿಮ್ಮ ವೆಂಕೋಬರಾಯ ಯಾರೋ! ಏನೆಲ್ಲಾ ಆಲೋಚಿಸೋದು; ಹೋಗಿ ಆಚೆ!"

"ಮುಚ್ಚು ಬಾಯಿ ಮುಂಡೆ! ಸುಳ್ಳು ಬೇರೆ ಹೇಳೋದು. ವೆಂಕೋಬರಾಯನೆಂದರೆ ಗೊತ್ತಿಲ್ಲವೋ ನಿನಗೆ? ಐವತ್ತು ರೂಪಾಯಿ ನೋಟು ಬಿಟ್ಟಿದ್ದನಲ್ಲ!"

"ಇರಬಹುದು. ಈಗ ನಾನು ಊಟ ಮಾಡಬೇಕೋ, ಹೀಗೆಯೇ ಏಳಬೇಕೋ? ಏನು ಹೇಳಿ!

([illegible]ನೆಯ ಪುಟದ ಅಡಿಯಲ್ಲಿ)

ಲಿಂಗಸೂಚಕವಾದ ಅಮುಖ್ಯಲಕ್ಷಣಗಳು

(Secondary Sexual Characters)

ಶ್ರೀ. ಜ್ಞಾನೇಶ್ವರ ನಾಯಕ ತೊರ್ಕೆ, ಬಿ. ಎಸ್ಸಿ., ಬಿ. ಟಿ. ಕಾರವಾರ

★

ಗಂಡಿಗೆ ಸಮಾನವಾದ ಸ್ಥಾನವನ್ನು ಹೆಣ್ಣು ಬಯಸಿದರೆ ವಿಜ್ಞಾನವು ಒಪ್ಪುವುದೆ? ನಿಸರ್ಗಧರ್ಮದ ಸತ್ಯಸ್ಥಿತಿಯನ್ನು ಹೇಳುವಂತಹದು ವಿಜ್ಞಾನ. ನಿಸರ್ಗ ಗಂಡಿಗೆ ಸ್ವಾಭಾವಿಕವಾಗಿ ಹೆಚ್ಚಿನ ಬಲವನ್ನೂ ಉತ್ಸಾಹವನ್ನೂ ಕೊಟ್ಟು 'ಹೆಣ್ಣಿಗಿಂತ ಗಂಡು ಮೇಲುಗೈ' ಎಂಬುದನ್ನು ಎಂದೋ ನಿರ್ಣಯಿಸಿ ಬಿಟ್ಟಿದೆ.

★

ಎಲ್ಲ ಪ್ರಾಣಿಗಳಲ್ಲಿಯೂ ಗಂಡು-ಹೆಣ್ಣುಗಳೆಂಬ ಭೇದಗಳಿರುವುದಿಲ್ಲ. ಈ ಲಿಂಗಭೇದವು ವಿಕಾಸದ (Evolution) ಉತ್ತರೋತ್ತರದ ಫಲವಾಗಿದೆಯೆಂದು ಹೇಳಬಹುದು.

ತಿರ್ಯಕ್ (ಕೆಳತರಗತಿಯ) ಪ್ರಾಣಿಗಳಲ್ಲಿ ಲಿಂಗಭೇದವೇ ಇರುವುದಿಲ್ಲ. ಅಮಿಬಾ, ಪೆರೆಮೀಸಿಯಮ್ ಮೊದಲಾದ ಬರಿಗಣ್ಣಿಗೆ ಕಾಣದ ಪ್ರಾಣಿಗಳು ಈ ಜಾತಿಗೆ ಸೇರುವವು.

ಮಧ್ಯಮತರಗತಿ ಪ್ರಾಣಿಗಳಲ್ಲಿ ಹೆಣ್ಣು-ಗಂಡಿನ ಲಿಂಗಸೂಚಕ ಅವಯವಗಳಲ್ಲಿ (Sexual organs) ಅಂತರವಿದ್ದರೂ, ಅವೆರಡೂ ಅವಯವಗಳು ಒಂದೇ ಜೀವಿಗೆ ಸಂಬಂಧಿಸಿರುವುದರಿಂದ, ಅವನ್ನು ಗಂಡು ಅಥವಾ ಹೆಣ್ಣೆಂದು ಕರೆಯಲು ಬರುವಂತಿಲ್ಲ. ಮಳೆಯ ಹುಳುವು (Earthworm) ಈ ಜಾತಿಯಲ್ಲಿ ಸೇರುವುದು.

ಮೇಲ್ತರಗತಿಯ ಪ್ರಾಣಿಗಳಲ್ಲಿ, ಒಂದೇ ಜೀವಿಯಲ್ಲಿ ಒಂದಕ್ಕಿಂತ ಹೆಚ್ಚು ಪ್ರಕಾರದ ಲಿಂಗಸೂಚಕ ಅವಯವಗಳಿರುವುದಿಲ್ಲ. ಇವುಗಳಲ್ಲಿ ಗಂಡು ಮತ್ತು ಹೆಣ್ಣೆಂಬ ಎರಡು ಜಾತಿಯ ಪ್ರಾಣಿಗಳು ಬೇರೆಬೇರೆಯಾಗಿ ಕಂಡುಬರುವವು. ಪ್ರತಿನಿತ್ಯದಲ್ಲಿ ನಮ್ಮ ಕಣ್ಣಿಗೆ ಬೀಳುವ ಎಲ್ಲ ಪ್ರಾಣಿಗಳನ್ನೂ ಈ ಉಚ್ಚಜಾತಿಯ ಪ್ರಾಣಿಗಳ ಗುಂಪಿಗೆ ಸೇರಿಸಬಹುದಾಗಿದೆ. ಈ ಪ್ರಾಣಿಗಳಲ್ಲಿ ನಾವು ಎರಡು ತರದ ಲಿಂಗಸೂಚಕ ಲಕ್ಷಣಗಳನ್ನು ನೋಡಬಹುದು. ಈ ಲಕ್ಷಣಗಳನ್ನು ಅವುಗಳ ಬೆಳೆಯ ಕಾಲಪರಿಸ್ಥಿತಿಗಳ ಮೇಲಿಂದ (೧) ಲಿಂಗಸೂಚಕ ಮುಖ್ಯ ಲಕ್ಷಣಗಳು ಮತ್ತು (೨) ಲಿಂಗಸೂಚಕ ಅಮುಖ್ಯ ಲಕ್ಷಣಗಳು ಎಂದು ವಿಭಾಗಿಸಬಹುದು.

ಯಾವುದೊಂದು ಪ್ರಾಣಿಯು ಹುಟ್ಟಿದ ಕೂಡಲೆ ಅದರ ಯಾವ ಲಕ್ಷಣಗಳನ್ನು ಕಂಡು, ಗಂಡು ಅಥವಾ ಹೆಣ್ಣೆಂಬ ತಿಳಿವಳಿಕೆಗೆ ನಾವು ಬರುವೆವೋ, ಅವುಗಳಿಗೆಲ್ಲ ಲಿಂಗಸೂಚಕ ಮುಖ್ಯಲಕ್ಷಣಗಳೆನ್ನಬಹುದು. ಲೈಂಗಿಕ ಅವಯವಗಳೂ, ಅವುಗಳಿಗೆ ಸಂಬಂಧಿಸಿದ ಗ್ರಂಥಿಗಳೂ (glands) ಮುಖ್ಯ ಲಕ್ಷಣಗಳಲ್ಲಿ ಸಮಾವೇಶವಾಗುವವು. ಅವು ಗರ್ಭಧಾರಣೆಗಾಗಿ ಜೀವಿಗಳಿಗೆ ಉಪಯೋಗವಾಗುವವು.

ಈ ಮುಖ್ಯ ಲಕ್ಷಣಗಳನ್ನನುಸರಿಸಿಯೇ ಲಿಂಗಸೂಚಕ ಅಮುಖ್ಯ ಲಕ್ಷಣಗಳೂ ಬೆಳೆಯತೊಡಗುವವು. ಅವು ಗರ್ಭಧಾರಣೆಯ ಕಾರ್ಯದಲ್ಲಿ ಅಪ್ರತ್ಯಕ್ಷವಾಗಿ ಸಹಾಯಮಾಡುವಂತಹವೂ, ಜೀವಿಗಳ ಜೀವನಕ್ಕೆ ಅನುಕೂಲ್ಯವಾದಂತಹವೂ ಇರುವವು. ಜೀವಿಯು ಪ್ರೌಢಾವಸ್ಥೆಗೆ ಬಂದಿತೆಂದರೆ, ಆ ಲಕ್ಷಣಗಳು ವಿಕಾಸಸ್ಥಿತಿಗೆ ಬರುವವು; ಅಲ್ಲದೆ ಹೊರಕ್ಕೆ ಕಾಣಿಸಿಕೊಳ್ಳುವವು. ಅವು ಹೀಗೆ ವಿಕಾಸಾವಸ್ಥೆಗೆ ಬಂದಾಗ, ಜೀವಿಯ ಲಿಂಗವನ್ನು ಅರಿತುಕೊಳ್ಳುವದಕ್ಕೆ ನಮಗೆ ತುಂಬ ಸಹಾಯವಾಗುವುದು.

ಮನಮೋಹಕವಾದ ಗರಿಗಳು, ಆಕಾಶವನ್ನು ಭೇದಿಸುವ ಅಹಂಕಾರದ ಕೂಗು, ಬಿಲ್ಲಿನಂತೆ ಬಾಗಿದ ಪುಚ್ಛದಗರಿ, ಕಿರೀಟದಂತೊಪ್ಪುವ ಕೆಂಪನೆಯ ತುರಾಯಿ, ಹದನಾದ ದಬ್ಬಣದಂತಹ ಮುಂಗಾಲ ಮುಳ್ಳು, ಎತ್ತರವಾದ ನಿಲುವಿಕೆ ಮೊದಲಾದುವುಗಳ ಸಹಾಯದಿಂದ, ಹುಂಜವನ್ನು ಸಹಜವಾಗಿ ಹೇಟೆಗಳಿಂದ ಬೇರೆ ಮಾಡಿ ತೋರಿಸಬಹುದು.

ಸಸ್ತನಿಗಳಲ್ಲಿ (In animals) ಪಕ್ಷಿಗಳಿಗಿಂತ ಗಂಡು-ಹೆಣ್ಣುಗಳ ಸಡುವಣ ಭೇದಗಳು ಹೆಚ್ಚು ಒಡೆದು ಕಾಣಿಸುವುವು. ಎದ್ದುಕಾಣಿಸುವ ಬಣ್ಣ, ಕೂದಲಿನ ಗುಚ್ಛಗಳು ಇವು ಗಂಡಿನ ಸೊತ್ತಾಗಿವೆಯೆಂದರೂ ಸಲ್ಲಬಹುದು. ಇವು ಗಂಡು-ಹೆಣ್ಣುಗಳೆರಡರಲ್ಲಿಯೂ ಇದ್ದರೆ, ಹೆಣ್ಣಿಗಿಂತ ಗಂಡಿನಲ್ಲಿ ಪ್ರಾಮುಖ್ಯವಾಗಿ ಇರುವವು. ಆಡಿನ ಗಡ್ಡ, ಗಂಡುಸಿಂಹದ ಆಯಾಲು, ಮೆಂಡ್ರಿಲ್

ಜಾತಿಯ ಗಂಡು ಮಂಗನ ಕೂದಲಿಲ್ಲದ ಕೆಂಪು ಮೋರೆ ಇವೆಲ್ಲ ಮೇಲಿನ ಮಾತಿಗೆ ಸಾಕ್ಷಿಗಳಾಗಿವೆ. ಆನೆ, ಆನೆಸೀಲುಗಳಂತಹ ಕೋರೆಹಲ್ಲು(Tusk)ಗಳಿರುವ ಪ್ರಾಣಿಗಳಲ್ಲಿ, ಹೆಣ್ಣಿಗಿಂತ ಗಂಡುಗಳಲ್ಲಿಯೇ ಅವು ಒಪ್ಪುವುವು. ಕವಲೊಡೆದ ಕೊಂಬುಗಳು ಗಂಡು ಸಾರಂಗಗಳ ಆಸ್ತಿ. ಕೂಗುವಿಕೆಯಲ್ಲಿ ಕೂಡ ಗಂಡೇ ಹೆಣ್ಣಿಗಿಂತ ಮೇಲಾಗಿರುವುದೆಂದು ಬೇರೆ ಹೇಳಬೇಕಾಗಿಲ್ಲ. "**ಗಂಡು ಕಂಠ**" ಎಂಬ ವಾಡಿಕೆಯ ಮಾತು ಈ ದೃಷ್ಟಿಯಿಂದ ಅಶಾಸ್ತ್ರೀಯವಲ್ಲ. ಇವಲ್ಲದೆ ಹೆಣ್ಣಿಗಿಂತ ಗಂಡು ಸಸ್ತನಿಗಳು ಹೆಚ್ಚು ಸಾಮರ್ಥ್ಯವುಳ್ಳವೂ, ಆವೇಶವುಳ್ಳವೂ ಇರುವುವು.

ಮನುಷ್ಯರಲ್ಲಿ ಕಂಡುಬರುವ ಈ ಗುಣಧರ್ಮಗಳನ್ನು ಪ್ರೊ. ನಾಥನ್ ಫಾಸನ್‌ರ ಮಾತಿನಲ್ಲಿ, ಸ್ವಲ್ಪದರಲ್ಲಿ ಹೇಳಿದರೆ ಅಪ್ರಸ್ತುತವಾಗಲಿಕ್ಕಿಲ್ಲ: "ಹುಡುಗನು ಪ್ರಾಯಸ್ಥನಾದ ಕೂಡಲೆ ಕಂಠವು ಗಡುಸಾಗುವುದು, ಎದೆಯು ಹಿಗ್ಗುವುದು, ಗಡ್ಡವು ಭರದಿಂದ ಬೆಳೆಯತೊಡಗುವುದು, ಸ್ನಾಯುಗಳು ಸಬಲವಾಗುವುವು, ಮತ್ತು ಆಕಾರಮಾನದಿಂದ ದೇಹವು ದೊಡ್ಡದಾಗುವುದು. ಈ ಶಾರೀರಿಕ ಬದಲಾವಣೆಗಳ ಜೊತೆಯಲ್ಲಿಯೇ ಮಾನಸಿಕ ಬದಲಾವಣೆಗಳೆಷ್ಟೋ ತೋರಿಬರುವುವು. ಅಂತೆಯೇ ಹುಡುಗಿಯಲ್ಲಿ ಸಹ ಮಾರ್ಪಾಡುಗಳಾಗುವುವು. ದೇಹವು ದುಂಡನ್ನಾಕಾರವನ್ನು ಹೊಂದುವುದು, ಟೊಂಕ ಮತ್ತು ಎದೆಯ ಭಾಗಗಳು ವಿಶಾಲವಾಗುವುವು, ಹಾಲಿನ ಗ್ರಂಥಿಗಳು ಹಿರಿದಾಗುವುವು. ಅದೇ ಕಾಲಕ್ಕೆ ಮಾನಸಿಕ ಬದಲಾವಣೆಗಳೂ ಕಂಡುಬರುವುವು."

ಸಸ್ತನಿಗಳಲ್ಲದ ಪ್ರಾಣಿಗಳಲ್ಲಿ ಸಹ ಈ ಗುಣಧರ್ಮಗಳಿಗೆ ಕೊರತೆಯಿಲ್ಲ. ಪಕ್ಷಿಗಳಲ್ಲಿ, ಸಸ್ತನಿಗಳಂತೆಯೇ ಗಂಡುಗಳೇ ಹೆಣ್ಣುಗಳಿಗಿಂತ ಹೆಚ್ಚಿನ ಬಣ್ಣಗಾರಿಕೆಯುಳ್ಳವಿರುವುವು. ಗಂಡು ನವಿಲಿನ ಕಲೆಯ ಮೇಲಿನ 'ಗರಿ-ಕುಂಚ'ವನ್ನು ನೋಡದವರು ವಿರಳ. ಅಂತೆಯೇ ಕುರಾಪು, ಕಾಲ್ಮುಳ್ಳು ಮತ್ತು ಕೇಗು ಹಾಕುವುದು ಇವೆಲ್ಲ ಹೆಣ್ಣಿಗಿಂತ ಗಂಡುಗಳಲ್ಲಿ ಎದ್ದು ಕಾಣಿಸುವುವು. ಓತಿಕಾಟ, ಆಮೆ, ಹಾವು, ವಿಮಾನಗಳಲ್ಲಿ ಹೆಣ್ಣಿಗಿಂತ ಗಂಡು ಬಲವುಳ್ಳವೂ, ದೊಡ್ಡವೂ ಇರುವುವು.. ಕೀಟಕಗಳು ಕೂಡ ಇದಕ್ಕೆ ಅಪವಾದವಲ್ಲ. ಗಂಡು ಪಾತರಗಿತ್ತಿಯ ಪಕ್ಕಗಳ ಬಣ್ಣಗಳನ್ನು ನೋಡಿ ಮನಸೋಲದವರು.. ಯಾರಿರುವರು? ಏಡಿಗಳಲ್ಲಿಯೂ ಈ ಲಿಂಗಸಂಬಂಧಿಕ ಅಮುಖ್ಯ ಭೇದಗಳನ್ನು ನಾವು ಕಾಣಬಹುದು. ತಂತುವಾದ್ಯದ ಏಡಿ (Fiddler-crab) ಯ ಜಾತಿಯಲ್ಲಿ, ಗಂಡಿಗಿರುವ ಒಂದು ಕೊಂಬು ಅದರ ದೇಹದಷ್ಟೇ ದೊಡ್ಡದಾಗಿರುತ್ತದೆ.

ವಿಕಾಸದ ನಿಚ್ಚಣಿಕೆಯನ್ನು ಕೆಳಗೆ ಕೆಳಗೆ ಇಳಿದಂತೆ, ಈ ಲಕ್ಷಣಗಳು ಮಸಮಸಕಾಗಿ ಕಾಣುವುವು. ಮತ್ತು ಕೆಲವು ಜಾತಿಯ ಜೀವಿಗಳಲ್ಲಿ ಗಂಡು ಅಥವಾ ಹೆಣ್ಣೆಂಬುದನ್ನು ಸೂಕ್ಷ್ಮದರ್ಶಕ ಯಂತ್ರದ ಸಹಾಯವಿಲ್ಲದೆ ಹೇಳಲಿಕ್ಕೆ ಸಾಧ್ಯವೇ ಇಲ್ಲ.

ಇನ್ನೂ ಕೀಳ್ತರಗತಿಯ ಪ್ರಾಣಿಗಳಲ್ಲಿ, ಈ ಮೊದಲು ಹೇಳಿದಂತೆ ಲಿಂಗಭೇದಗಳ ಅಭಾವದಿಂದ ಈ ಗುಣಧರ್ಮಗಳು ಇರುವುದಿಲ್ಲ; ಅವುಗಳಿಗೆ ಆಸ್ಪದವೂ ಇಲ್ಲ.

ಆಧಾರಗ್ರಂಥಗಳು

(i) Animal colour and adornment
by Hingsten

(ii) Organic Evolution
by Lull

(iii) Outlines of Evolutionary Biology
by Dendy

(iv) Principles of Genetics and Engenetics
by Natheu Fasten

(v) Genetics and Engenetics
by Castle

— o —

(೩೬೪ ನೆಯ ಪುಟದಿಂದ ಮುಂದುವರಿದದ್ದು)

"ಎದ್ದು ಹೋಗೋದು ಎಲ್ಲಿಗೆ? ಸಾಯಿ ಹಾಗೆಯೆ ರಂಡೆ!"

ಅಡಿಕೆಮಣೆಯನ್ನು ಪಡಸಾಲೆಯಿಂದ ಎತ್ತಿ ಹಿಡಿದಿದ್ದ ಗುಂಡನನ್ನು ಆ ರಾಕ್ಷಸ ಬೀಸಿ ಒಗೆದ! ಗುಂಡು ನೇರವಾಗಿ ದೇವಮ್ಮನ ಎದೆಗೆ ಬಡಿಯಿತು. "ಅಯ್ಯೋ, ಸತ್ತೆ" ಎನ್ನುತ್ತ ಆ ಬಡಪ್ರಾಣಿ ನೆಲಕ್ಕೆ ಬಿತ್ತು; ಕೈಯೊಳಗಿನ ತುತ್ತು ಹಾಗೆಯೇ ಇತ್ತು. ಅದನ್ನು ಬಾಯೊಳಗೆ ಇಟ್ಟುಕೊಳ್ಳಲಿಕ್ಕೆ ದೇವಮ್ಮನ ಪ್ರಾಣ ಹೊರಟು ಹೋಯಿತು.

ಆ ಗುಂಡು ದೇವಮ್ಮನಿಗೆ ತಾಗಬೇಕೆಂದಾಗಲಿ, ಆಕೆ ಸಾಯಬೇಕೆಂದಾಗಲಿ, ರಾಮಯ್ಯನಿಗೆ ಲೇಶವೂ ಅಪೇಕ್ಷೆ ಇರಲಿಲ್ಲ. ಆದರೇನು! ಎಲ್ಲ ಕೈಮೀರಿ ಹೋಯಿತು.

ರಾಮಯ್ಯ ತನ್ನ ಪ್ರಮಾದಕ್ಕಾಗಿ ಹೊಟ್ಟೆ ಹೊಟ್ಟೆ ಬಡಿದುಕೊಂಡು ಗೋಳಾಡಿದ. "ಅಯ್ಯೋ ದೇವಿ!.. ಹೋಗಿಯೇ ಬಿಟ್ಟೆಯಾ.. ನಾನು ಕೊಲೆಗಡುಕ! ಪತಿವ್ರತೆಯಾದ ನಿನ್ನನ್ನು ಕೊಂದೆ! ನನ್ನ ಮನೆ ಹಾಳು ಮಾಡಿಕೊಂಡೆ..!" ಎಂದು ಬೊಬ್ಬಿಟ್ಟ!

ಪೋಲಿಸರಿಗೆ ವರದಿ ಹೋಗಿ ಪಂಚನಾಮೆ ಮುಂತಾದದ್ದು ನಡೆಯಬಾರದೆಂದು ನಾವೆಲ್ಲ ಸೇರಿ "ದೇವಮ್ಮನಿಗೆ ಒಮ್ಮೆಲೇ ಹೃದಕ್ರಿಯೆ ಒಂದಾಗಿ ಪ್ರಾಣಬಿಟ್ಟಳು!" ಎಂದು ಊರತುಂಬ ಹೇಳಿಕೊಂಡು ತಿರುಗಿದೆವು.

ಅಂತಹ ಭಂಗಾರದಂತಹ ಹೆಣ್ಣನ್ನು ಬಳಸಿಕೊಳ್ಳುವ ಭಾಗ್ಯ ರಾಮಯ್ಯನಿಗಿರಲಿಲ್ಲ! "ಕೈತುತ್ತು ಬಾಯಿಗಿಲ್ಲದೆ ಹೋಯಿತು"

ನನ್ನ ದಕ್ಷಿಣ ಹೈದರಾಬಾದಿನ ಯಾತ್ರೆ!

ಶ್ರೀ. ಎಚ್. ಎಸ್. ಪಾಟೀಲ, ಎಂ. ಎ., ಬಿ. ಕಾಮ್. ಮುಂಬಯಿ

★

ಗೋವಳಕೊಂಡ ಕೋಟೆ, ಗಂಡಿಪೇಟೆಯ 'ಉಸ್ಮಾನ್‌ಸಾಗರ' ಎಂಬ ಕಡಲಿನಂತಹ ಕೆರೆ, ನೃಪತುಂಗ ಕನ್ನಡಶಾಲೆಯ ವಾರ್ಷಿಕೋತ್ಸವ, ಆಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಾಟ ಇವೆಲ್ಲವುಗಳನ್ನು ಕಂಡ ಮನೋರಂಜಕ ಅನುಭವ ಈ ಬರೆಹದಲ್ಲಿ ಅಡಕಗೊಂಡಿದೆ.

ಪ್ರಕಾಶದಲ್ಲಿ *

ಎತ್ತ ನೋಡಿದತ್ತ ವಿಸ್ತಾರವಾದ ಬಣನೆಲ. ಅಲ್ಲಲ್ಲಿ ಚಿಕ್ಕಪುಟ್ಟ ಕಲ್ಲುಬಂಡೆಗಳು. ನಡುವೆ ಒಂದು ಚಕ್ಕಡಿಯು ಹಾಯುವ ಅಗಲಕತೆಯ ದಾರಿ. ಅಲ್ಲಿ ಕೇವಲ ಚಕ್ಕಡಿಗಳೆ ಓಡಾಡುತ್ತಿರುವುವು ಎಂಬುದನ್ನು ನಿಚ್ಚಳವಾಗಿ ತೋರಿಸುವ ಗಾಲಿಯ ಗುರುತಿನ ಹರಿಗಳು. ದಾರಿಯನ್ನು ಬಿಟ್ಟು ತುಸು ಆಚೆ ಈಚೆ ಸರಿದರೆ, ಬೂದಿಯ ಇಲ್ಲವೆ ಹಾಳುಮಣ್ಣಿನ ಮುದ್ದೆಯಲ್ಲಿಯೆ—ನಾವು ಕುಸಿದು ಬೀಳುವುದು. ಇಂತಹ ದಾರಿಯಲ್ಲಿ ನಡೆದಿದ್ದುವು ನಾಲ್ಕು 'ಇಗ್ಗಾಲಿ (Bicycle)'ಗಳು. 'ಎಲ್ಲಿಗೆ?' ಎನ್ನಬಹುದು ಯಾರಾದರೂ; ಹಾಗೆ ಅಂದರೆ 'ಅದು ಹೀಗಾಯಿತು' ಎಂದು ಹೇಳಬೇಕಾಗುವುದು :

ಆ ದಿನ ನಾನು ಸಂಜೆಯ ಸುತ್ತಾಟ ಮುಗಿಸಿಕೊಂಡು ಒಂದು ಕುಳಿತಿದ್ದೆ—ನಾನಿಳಿದ ಮನೆಯಲ್ಲಿ; ಅಷ್ಟರಲ್ಲಿಯೆ, ಮೂರು ನಾಲ್ಕು ಜನರು ನನ್ನ ಸಂಗಡ ಮಾತನಾಡಲಿಕ್ಕಾರಂಭಿಸಬಹುದು ಎಂದೇನೂ ನಾನು ಎಣಿಸಿರಲಿಲ್ಲ. ಅಂತೆಯೆ ಅಲ್ಲಿಯ ನನ್ನ ಕಾರ್ಯಕ್ರಮದಲ್ಲಿ ಒಂದು ವಿಷಯವಾದ ಪತ್ರ ಬರೆಹವನ್ನು ನಡೆಯಿಸಿದ್ದೆ. ಅಲ್ಲಿದ್ದ ನನ್ನ ಸುತ್ತಲಿನ ಕುರ್ಚಿಗಳಲ್ಲಿ ಅವರು ಯಾವಾಗಲೋ ಬಂದು ಕುಳಿತು,ಆಗಲೆ ತಮ್ಮತಮ್ಮಲ್ಲಿಮಾತುಗಳನ್ನು ನಡೆಯಿಸಿದ್ದರು. ನನ್ನ ಬರೆಹವು ಕೊನೆಗಾಣಬಹುದೇನೋ ಎಂದು ಅವರು ದಾರಿಕಾಯ್ದುದು ತುಸು ವೇಳೆ. ಅದನ್ನು ಕಂಡು, ಮುಗಿಯದ ಪತ್ರವನ್ನು ಅಷ್ಟಕ್ಕೆ ಬಿಟ್ಟು, ನಾನೂ ಕೊಂಚ ಬಿಡುವನ್ನು ತೋರಿಸಿದೆನು.

"ಈ ದಿನ ಎಲ್ಲೆಲ್ಲಿ ಆಯಿತು— ಫಿರ್ತಿ?" ಎಂದರು ಒಬ್ಬರು.

"ಇಂದು '**ಚಾರ್‌ಮಿನಾರ್**' ನೋಡಿ ಬಂದೆ" ಎಂದುಸಿರಿದೆ ನಾನು,

"ನಾಳೆ ಎಲ್ಲಿಗಾದರೂ ಹೋಗುವುದಿದೆಯೇನು ನಿಮಗೆ?" ಎಂದು ಮೆಲ್ಲಗೆ ಕೇಳಿದರು ಇನ್ನೊಬ್ಬರು.

"ಹಾಗೆ ನಿಶ್ಚಿತವಾಗಿ ಹೋಗುವ ಸ್ಥಲ ಯಾವುದೂ ಇಲ್ಲ. ಆದರೆ ಇಲ್ಲಿಯೆ ಕುಳಿತುಕೊಳ್ಳಲಿಕ್ಕೂ ನಾನೇನು ಬಂದಿಲ್ಲ..ಏಕೆ?" ಎಂದು ನಾನು ಕೊಂಚ ಅನುಮಾನದಿಂದ ಮುಂದಿನ ಪ್ರಶ್ನೆಯನ್ನೆತ್ತಿದೆ.

"ಅಂತು..ನಾಳೆ ನಾವೇ ಮೂರು ನಾಲ್ಕು ಜನರು ಸೇರಿ.. ಗಂಡೀಪೇಟೆಗೆ ಹೋಗಬೇಕೆಂದು ಮಾಡಿರುವೆವು.."

"ಎಲ್ಲಿಗೆ? ಗಂಡೀಪೇಟೆಯೆ? ಅಂದರೇನಿವೆ ಅಲ್ಲಿ?"

"ಗಂಡೀಪೇಟೆ ಎಂದರೇನೂ ಅಲ್ಲಿ ಪೇಟೆಯಿಲ್ಲ; ಆದರೆ ಅಲ್ಲಿ ಹೈದರಾಬಾದ್ ನಗರಕ್ಕೆ ಪೂರಯಿಕೆಯಾಗುವ ನೀರಿನ ಕೆರೆಯಿದೆ. ಚೆಲುವಾದ ಒಂದು ತೋಟವಿದೆ. ನಾವು ಸೈಕಲ್ಲಿನ ಮೇಲೆ ಹೋಗಬೇಕೆಂದು ಮಾಡಿರುವೆವು..ನೀವೂ ಬರುವಿರೇನು?" ಎಂದರವರು. ಹೀಗೆ ಪ್ರಸ್ತಾವಿಕ ಮಾತುಗಳಾದುದೇ ಮರುದಿನ ನಮ್ಮನ್ನು ಆ ದಾರಿಗೆ ಹಚ್ಚಿದುದು.

"ಹುಡಿ ಎಷ್ಟಿದೆಯಲ್ಲಪಾ!..ನಮ್ಮ ಸೈಕಲ್ಲು ಬಗ್ಗಾಲಿಯಾಗ ಹತ್ತಿದೆ!" ಎಂದು ನನ್ನ ಹಾಗೆಯೆ ಹೊಸಬನಾದವನೊಬ್ಬ ಉದ್ಗಾರತೆಗೆದ. ಅದು ನೋಡಿದರೆ ಎಲ್ಲರ ಮನಸ್ಸಿನಲ್ಲಿಯೂ ಬಂದ ವಿಚಾರ. ಕೆಲವರು ಅರಿತವರಿದ್ದ ಕಾರಣ, ಅದನ್ನು ಹೊರಗೆಡಹಿದ್ದಿಲ್ಲ. ಒಬ್ಬರು ನಮ್ಮೆಲ್ಲರಿಗೆ ಮಾರ್ಗದರ್ಶಕರೂ ಆ ಪ್ರವಾಸದ ವಿಚಾರದ ಉತ್ಪಾದಕರೂ ಆದುದರಿಂದ, ಆ ದಾರಿಯ ದೋಷಗಳನ್ನು ಅವರೇನು ಎತ್ತುವಂತಿರಲಿಲ್ಲ. ಆದರೆ ನಡುವೆ ಈ ಗೃಹಸ್ಥರು ಆ ತೊಂದರೆಯನ್ನು ತೋರಿಸಿದ ಕೂಡಲೆ, ಅದೇ ವಿಷಯಸೂತ್ರದಿಂದ ದೊಡ್ಡದೊಂದು ಚರ್ಚೆಗೆ ಆರಂಭವಾಯಿತು.

'ಇದೊಂದು ದಾರಿ ಹೀಗೆಯೆ ಹುಡಿ, ಬೂದಿ, ಮಣ್ಣಿನಿಂದ ತುಂಬಿದೆ. ಇಡಿಯ ಮೊಗಲಾಯಿಯಲ್ಲಿ ಇಂತಹ ಬೀಕಲು—

* ಈ ಪ್ರವಾಸಕಥೆಯ ಮೊದಲನೆಯ ಭಾಗವಾದ 'ಪ್ರವಾಸದಲ್ಲಿ' ಎಂಬ ಭಾಗವು ೧೯೪೧ನೆಯ ಜನವರಿ ಸಂಚಿಕೆಯಲ್ಲೂ 'ಪ್ರಯಾಸದಲ್ಲಿ' ಎಂಬ ಭಾಗವು ೧೯೪೧ನೆಯ ಜೂಲೈ ಸಂಚಿಕೆಯಲ್ಲೂ ಪ್ರಕಟವಾಗಿವೆ —ಲೇಖಕ

ಒಡಕಲು ಹಾದಿಗಳೇ ಇರುತ್ತವೆಯೆಂದೇನೂ ತಿಳಿಯಬೇಡಿರಿ — ಮತ್ತೆ!'' ಎಂದರು ಇನ್ನೊಬ್ಬರು.

“ಅದು ಗೊತ್ತಿದೆ ಬಿಡಿರಿ ನಮಗೆ.. ದಿನಂಪ್ರತಿ ಹೈದರಾಬಾದಿನ ಸಿಮೆಂಟ್ ಬೀದಿಗಳ ಮೇಲೆ ತಿರುಗಾಡುವುದಿಲ್ಲವೇನು?'' ಎಂದು ಮತ್ತೊಂದು ಮಾತನ್ನು ಆರಂಭಿಸಿದರು ಮೊದಲಿನವರು.

“ಹಾಗೆ ಹೇಳಬೇಡಿರಿ ನೀವು! ಒಂದು ಹೈದರಾಬಾದ್ ಊರಿನಿಂದ ಇಡಿಯ ದೇಶದ ಪ್ರಗತಿಯ ಚಿತ್ರವನ್ನೇನೂ ತೆಗೆಯಬೇಡಿರಿ! ಹೈದರಾಬಾದು ರಾಜಧಾನಿ. ಒಳದೇಶದಲ್ಲಿ ಕೂಡ ಅಂತಹ ಒಳ್ಳೆಯ ದಾರಿಗಳೇ ಇರುವುವೇನು ಹೇಳಿರಿ!'' ಎಂದು ಕೆಣಕಿದ ಎರಡನೆಯವ.

“ಹಾಂ, ತಡೆಯಿರಿ.. ಬಂಧುಗಳೆ..!” ಎಂದು ನಾಯಕಲ್ಲ ಮೇಲಿಂದ ಕೆಳಕ್ಕೆ ಜಿಗಿದರು — ಅಲ್ಲ ಇಳಿದರು — ಒರ್ವರು. ತಟ್ಟನೆ ಅವರನ್ನು ಅನುಕರಿಸಿದೆವು ನಾವೆಲ್ಲರೂ.

“ಆಹಾ, ಇಲ್ಲಿಯ ನೋಟ (ಅವರೆಂದ ಶಬ್ದ ‘ಸೀನು’) ಚೆಂದ ಇಲ್ಲವೆ? ಹಾಂ, ಹೀಗೆ ಸಾಲಾಗಿ ನಿಲ್ಲಿರಿಲ್ಲಿ.. ನಾನು ನಿಮ್ಮನ್ನೆಲ್ಲ ರನ್ನೂ ಕೈವಶ ಮಾಡುವೆ'' ಎಂದವರೆ, ತಮ್ಮ ಹೆಗಲಿಗೆ ಹಾಕಿದ ಕ್ಯಾಮರಾ ತೆಗೆದರು. ಎಲ್ಲರೂ ಅವರು ಹೇಳಿದಂತೆ ನಿಂತೆವು. ಫೋಟೋ ಆಯಿತು. ನನಗೆ ದಿಗಿಲು: ಅಂತಹ ಹಾಳುನೆಲದಲ್ಲಿ ಏನು ಸೌಂದರ್ಯವನ್ನು ಕಂಡಿರಬಹುದು ಈ ‘ಲುಬ್ಧ’ ಎಂದು. ಆದರೂ ಇದು ‘ಆಧುನಿಕ ಚಿತ್ರಗಾರಿಕೆ’ ಇರಬೇಕು ಎಂದುಕೊಂಡು ಹಿಂದೆ ಹೊರಳಿದೆ. ದೊಡ್ಡದೊಂದು ಕೋಟೆಯ ಬಳಸುಗೋಡೆಯು ಗೋಚರವಾಯಿತು.

“ಇದಾವ ಕೋಟೆ? ಬಹಳ ದೊಡ್ಡದಾಗಿ ಕಾಣುತ್ತದೆ?'' ಎಂದು ನನ್ನ ಒದಿಯಲ್ಲಿಯೆ ಬರುತ್ತಿದ್ದ — ಆದರೂ ದೂರದೂರ ಇದ್ದ — ಎಂದರೆ ಟಕ್ಕರ್ ಆಗಬಾರದೆಂದು ದೂರದೂರ ಬರುತ್ತಿದ್ದ — ‘ಕ್ಯಾಮರಾದವ’ರನ್ನು ಕೇಳಿದೆ. ಅವರು ನಕ್ಕುಬಿಟ್ಟರು.

“ಇದು ಗೊತ್ತಿಲ್ಲವೆ?.. **ಗೋವಳಕೊಂಡ ಕೋಟೆ!**'' ಎಂದು ಆಶ್ಚರ್ಯದಿಂದ ತಿಳಿಸಿದವರು. ‘ಓಹೊ, ಗೋವಳಕೊಂಡ ಕೋಟೆಯು!.. ಇತಿಹಾಸದಲ್ಲಿ ಓದಿ ನೆನಪಿದೆ.. ಆದರೆ ಇದೇ ಅದು ಎಂದೂ, ಅದೂ ಇಲ್ಲಿಯೆ ಇದೆಯೆಂದೂ ಗೊತ್ತಿರಲಿಲ್ಲ!’ ಎಂದು ಕೊಳ್ಳುತ್ತಿದ್ದೆ — ನಾನು. ಅಷ್ಟರಲ್ಲಿ ನನಗೇ ಏನೋ ತಪ್ಪಿದಂತೆ ಎನಿಸಹತ್ತಿತು, ಮತ್ತೇನೋ ನೆನಪಾದಂತೆ ಆಗಹತ್ತಿತು: ‘ಗೋವಳಕೊಂಡ.. ಗೋವಳಕೊಂಡ..! ಹಾಂ, ಹೌದು ಗೋವಳಕೊಂಡ!’ ಎಂದು ಪ್ರಕಾಶವಾಗಿ ಹೇಳಿದೆ. ಅವರೆಲ್ಲರೂ ನನ್ನ ಕಡೆಗೆ ನೋಡುತ್ತಿರಬಹುದು ಆ ವೇಳೆಗೆ. ಯಾಕೆಂದರೆ ಹಾಗೆ ನಾನು ಆ ನಂದಿನಲ್ಲಿ ಇದ್ದಾಗ, ಅರಿವಿಲ್ಲದೆ ಒಂದು ಚಿಕ್ಕ ಬಂಡೆಗಲ್ಲಿಗೆ ನನ್ನ ಇಗ್ಗಾಲಿಯನ್ನು ಹಾಯಿಸಿದ್ದರಿಂದ, ಅದು ನನ್ನನ್ನು ಪುಟಿಯಿಸಿತು.. ಕಡಹಲಿಲ್ಲ.

“ಕೊಂಡ.. ಅಂದರೇನರೀ?'' ಎಂದು ಕೇಳಿದರು ಎರಡನೆಯವರು.

“ಗೋವಳ.. ಅಂದರೇನರೀ?'' ಎಂದರು ಇನ್ನೊಬ್ಬರು.

“ಗೋವಳ ಅಂದರೆ ದನಗಾಹಿ'' ಎಂದು ಉತ್ತರಿಸಿದರು ಎರಡನೆಯವರು.

“ಹಾಗಾದರೆ ‘ಕೊಂಡ’ ಎಂದರೆ ತೆಗೆದುಕೊಂಡ” ಎಂದರು ಆ ಇನ್ನೊಬ್ಬರು.

“ಛೆ, ‘ಕೊಂಡ’ ಎಂದರೆ ಮಾಲಿಕ್ಕೆ ತೆಗೆದುಕೊಂಡ'' ಎಂದರು ಕ್ಯಾಮರಾದವರು.

“ದನಗಾಹಿಗಳನ್ನು ಮಾಲಿಕ್ಕೆ ತೆಗೆದುಕೊಂಡ ಎಂದರೇನು ಅರ್ಥವಾಗುವುದು? ಇಲ್ಲಿಯೇನು ಹಿಂದಿನ ಗೋಕುಲದಂತೆ ಗೋವಳರ ರಾಜ್ಯವಿದ್ದು, ಅವರು ಈ ಕೋಟೆಯನ್ನು ಕಟ್ಟಿದರೋ?” ಎಂದು ನಕ್ಕರು ಆ ಇನ್ನೊಬ್ಬರು.

“ಕೊಂಡ ಎಂದರೆ ಕಟ್ಟಿಹಾಕಿದ.. ಹಿಡಿದಿಟ್ಟ.. ಕೊಂಡವಾಡೆಗಳಿರುವವು ನಮ್ಮ ಪ್ರತಿಯೊಂದು ಹಳ್ಳಿಯಲ್ಲಿ, ಗೊತ್ತಿಲ್ಲವೆ? ಕೊಂಡ ಅಂದರೆ ಹಿಡಿದು ಹಾಕಿದ, ವಾಡೆ ಎಂದರೆ ಆವಾರ ಇಲ್ಲವೆ ಜಾಗ. ಅದರಂತೆಯೆ ಹಿಂದಿನ ಉತ್ತರ ಗೋಗ್ರಹಣದಂತೆ ದನಗಾಹಿಗಳನ್ನೂ ದನಗಳನ್ನೂ ಯಾರೋ ಯಾವಾಗಲೋ ಹಿಡಿದು ಹಾಕಿರಬಹುದು; ಅಂತೆಯೆ ಇದಕ್ಕೆ ‘ಗೋವಳಕೊಂಡ’ ಕೋಟೆ ಎಂದು ಹೆಸರು ಬಿದ್ದಿದೆ'' ಎಂದು ಸ್ಪಷ್ಟೀಕರಿಸಿದರು ಅವರು.

ನನಗೆ ಒಮ್ಮೆಲೆ ಎಲ್ಲಿಯೊ ಒಂದು ಅದ್ಭುತ ಬೆಳಕನ್ನು ಚೆಲ್ಲಿದಂತಾಯಿತು. ನಮ್ಮ ನುತ್ತಲೂ ಹಿಂದೆ ಎಂದೂ ಕಾಣದ, ಮುಂದೆ ಕಾಣಲಾಗದ, ಒಂದು ದಿವ್ಯವಿಭೂತಿಯು—ಮಂಗಲಮೂರ್ತಿಯು—ಗೋಚರವಾದಂತೆ ಎನಿಸಹತ್ತಿತು. ಒಳಗೊಳಗೆ ವಿಚಾರಚಕ್ರವು ಹಾಗೆಯೆ ತಿರುಗಹತ್ತಿತು. ಆದಾಗ ಇತಿಹಾಸ ಸಂಶೋಧನೆಯು ಬೆನ್ನನ್ನು ಹತ್ತಿದ್ದಿತು.

“ಗೋವಳಕೊಂಡ ಕೋಟೆ ಎಂದರೆ ಗೋಪಾಲಕರನ್ನೂ ಗೋವುಗಳನ್ನೂ ಕಟ್ಟಿಹಾಕಿದ ಕೋಟೆ. ಆಹಾ! ಮಹಾಭಾರತ ಕಾಲದ ಉತ್ತರ ಗೋಗ್ರಹಣದ ಸ್ಥಳವು ಇದೇ ಇರಲಿಕ್ಕೆ ಸಾಕು. ಕನ್ನಡ ಅರಸನಾದ ವಿರಾಟನು ಹಾನಗಲ್ಲನ್ನು ತನ್ನ ರಾಜಧಾನಿಯನ್ನಾಗಿ ಮಾಡಿದ್ದನೆಂದು ತಿಳಿಯುತ್ತದೆ. ಈಗ ಸಹ ಅಲ್ಲಿ ಕೀಚಕನ ಗರಡಿಯಿರುತ್ತದೆ.. ಎಂದಮೇಲೆ, ದಕ್ಷಿಣದಲ್ಲಿ ಮಹಾಪರಾಕ್ರಮಿಯೆಂದು ಹೆಸರಾದ ವಿ ರಾ ಟ ರಾ ಜ ನು, ತನ್ನ ರಾಜ್ಯವನ್ನು ಹೈದರಾಬಾದಿನ ವರೆಗೆ ಹಬ್ಬಿಸಿರಲಿಕ್ಕೆ ಬೇಕು. ಅದರಲ್ಲಿಯೂ ಆತನಿಗೆ ಕೀಚಕನಂತಹ ಅಪ್ರನೂ ಬಲಾಢ್ಯನೂ ಆದ ಯೋಧನ ಬಲ; ಎಂದಮೇಲೆ ಆತನ ರಾಜ್ಯವು ಇಲ್ಲಿಯ ವರೆಗೆ ಹಬ್ಬಿರಲೇಬೇಕು. ಆಗ ಆತನ ರಾಜ್ಯವೆಂದೆನಿಸಿದ ಈ ಭಾಗದೊಳಗಿನ ಗೋಕುಲವು, ಬಳಿಯಲ್ಲಿಯೆ ಇರುವ ಯಾವುದಾದರೊಂದು ಗುಡ್ಡದ ಓರೆಗೆ ಮೇಯಲಿಕ್ಕೆಂದು ಹೋದಾಗ, ಕೌರವನ ಸೈನಿಕರು ಗೋವಳರನ್ನು ಹೊಡೆದೋಡಿಸಿಕೊಂಡೊಯ್ದು — ಈ ಕೋಟೆಯಲ್ಲಿ ಹಿಡಿದುಹಾಕಿರಲಿಕ್ಕೆಬೇಕು.. ಆಹಾಹಾ! ಅಭಿವಾದಯಾಮಿ ನಿನಗೆ ಹೈದರಾಬಾದ್!

ನೀನಿನ್ನು ಎಳ್ಳಷ್ಟೂ ಹೆದರಬೇಡ! ನಮಸ್ತೇ ಗೋವಳಕೊಂಡ ಕೋಟೆಯೆ! ನೀನು ಇತಿಹಾಸದಲ್ಲಿ ಒಮ್ಮೆ, ಪುರಾಣದಲ್ಲಿ ಒಮ್ಮೆ ಉತ್ತರ–ದಕ್ಷಿಣಗಳ ಪರಾಕ್ರಮವನ್ನೂ ಕಾರ್ಯವನ್ನೂ ಒರೆಗೆ ಹಚ್ಚಿ, ಉತ್ತರದವರ ದಬ್ಬಾಳಿಕೆಯನ್ನು ತಡೆದು, ದಕ್ಷಿಣದ ಧ್ವಜವನ್ನು ಎತ್ತಿಹಿಡಿದೆ. ಹಿಂದೊಮ್ಮೆ ಕೌರವನು ಓಡಿಹೋದನು. ಅಂದೊಮ್ಮೆ ಔರಂಗಜೇಬನು ಹಣ್ಣಾದನು. ಇಂದು ಸಹ ನೀನೇ ದಕ್ಷಿಣದ, ಅದರಲ್ಲಿಯೂ ಹೆಚ್ಚಾಗಿ ಕನ್ನಡದ ಕೀರ್ತಿಯನ್ನು ಮೊಳಗಿಸಲು ಸಮರ್ಥ; ಯೋಗ್ಯ!.. ಸರಿಯಾಯಿತು ಈಗ ಹೈದರಾಬಾದ್ ಊರಿನಲ್ಲಿರುವ '**ಗೌಳೀ ಗುಡ್ಡ**'ದ ಮೇಲೆ, ವಿರಾಟನ ಆಡಳಿತದಲ್ಲಿರುವ ಭಾಗದ ಗೋವುಗಳು ಮೇಯಲಿಕ್ಕೆ ಬಂದಿರಬಹುದು; ಅವುಗಳನ್ನು ಓಡಿಸಿಕೊಂಡು ಹೋಗಿ, ವಿರಾಟನ ರಾಜ್ಯದ ಮೇರೆಯನ್ನು ದಾಟಿ, ಈ ಕೋಟೆಯಲ್ಲಿ ಕೊಂಡಿಸಿರಲಿಕ್ಕೆ ಬೇಕು—ಆ ಗೋವುಗಳನ್ನು. ಅಂದು ಕನ್ನಡದ ಮಾನ ಉಳಿದು, ತತ್ಪರಿಣಾಮವಾಗಿ ಭಾರತದ ನ್ಯಾಯ, ಸತ್ಯ–ಶಾಂತಿಗಳ–ರಾಜ್ಯವು ಮೆರೆಯಲು, ಈ ಗೋವಳಕೊಂಡ ಕೋಟೆಯೆ ಕಾರಣವಾಯಿತು. ಇಂದು ಸಹ.."

"ಏ ಖಡೆ ರಹೋ.." ಎಂದು ಒಂದು ದನಿಯು ಕೇಳಿಸಿತು. ನನ್ನ ಸಂಗಡಿಗರೆಲ್ಲರೂ ನಗಹತ್ತಿದ್ದರು. ಆಗ ನೋಡುತ್ತೇನೆ.. ಅವರೆಲ್ಲ ನನಗಿಂತ ಎಷ್ಟೋ ಅಂತರದ ಹಿಂದೆ ಇದ್ದರು. ನನ್ನನ್ನು ಒಬ್ಬ ಕರಿಯ ವೇಷದ ಸಿಪಾಯಿಯು ತಡೆದಿದ್ದಾನೆ. ನನಗೇನೂ ಅರ್ಥವಾಗದೆ ಸುತ್ತಲೂ ನೋಡುತ್ತೇನೆ! ನಾನು ಎರಡು ದೊಡ್ಡ ಬಾಗಿಲುಗಳ ನಡುವೆ; ಒಂದು ಪೋಲಿಸ್ ಪಥಕದ ಎರಡು ತುಂಡುಗಳ ಮಧ್ಯದಲ್ಲಿ! ಹಾಗೆಯೆ ನಿಂತಿದ್ದೆ– ಕೈಯಲ್ಲಿ ಇಗ್ಗಾಲಿಯನ್ನು ಹಿಡಿದುಕೊಂಡು. ಅಷ್ಟರಲ್ಲಿ ನನ್ನ ಜೊತೆಗಾರರೂ ನನ್ನ ಬಳಿಯಲ್ಲಿ ಬಂದರು.

"ಅಂದರ್ ಜಾನೇಕಾ ಮನಾಯಿ ಹೈ! ಆಪಕೋ ಮಾಲೂಮ್ ನಹಿಂ?" ಎಂದು ಗದ್ದರಿಸಿದ ಒಬ್ಬ ದಪ್ಪ ಸಿಪಾಯಿ.

"ನಹಿಂ!" ಎಂದು ನಾನು ಅಲಕ್ಷ್ಯದಿಂದ ಹೇಳಿದೆ.

"ಏ ಬೋಕಡ! ದೇಖತಾ ಹೈ ಕ್ಯಾ!" ಎಂದು ನನ್ನನ್ನುದ್ದೇಶಿಸಿ ಮಾತನಾಡಿ, ಇನ್ನೊಬ್ಬನು ಆ ಮೊದಲಿನ 'ಕರಿಯ'ನಿಗೆ ಹೇಳಿದ: "ದೇಖಾತೊ ಪಢಾ-ಲಿಖೇಲಾ ಮಾಲೂಮ್ ಹೋತಾಹೈ" ಎಂದು.

"ಹಾಂ" ಎಂದೆ ನಾನು, ಅವನ ಮಾತು ಮುಗಿದ ಕೂಡಲೆ. ನನ್ನ ಬದಿಯಲ್ಲಿ ನಿಂತವರೆಲ್ಲರೂ ಘೊಳ್ಳನೆ ನಗಹತ್ತಿದರು. ಆದರಿಂದ ಆ "ಸೀರ" ಸಿಪಾಯಿಗೆ ರೇಗು. ಅವರ ಆಜ್ಞೆಯನ್ನು ಮೀರಿದುದು ಅವನಿಗೇನು ಅಪರಾಧ ಎನಿಸಲಿಲ್ಲ; ಆದರೆ ನಾಲ್ಕು ಜನರಲ್ಲಿ ಅವನನ್ನು ನಗೆಗೀಡು ಮಾಡಿದೆನಲ್ಲ ಎಂಬುದು ಅವನನ್ನು ಸಿಟ್ಟಿಗೆ ಎಬ್ಬಿಸಿತು. ಆದರ ಸೇಡು ತೀರಿಸಿಕೊಳ್ಳುವ ಉದ್ಯೋಗದಿಂದಲೆ ಎನ್ನುವಂತೆ ಅವನು,

"ತುಮ್ ಇದರ್ ಖಡೇರಹೊ! ಕ್ಯಾಜೀ ಹವಾಲ್‌ದಾರ್?" ಎಂದು ಅರ್ಧ ಅಧಿಕಾರದಿಂದಲೂ, ಅರ್ಧ ಅಹಂಕಾರದಿಂದಲೂ ಗುಡುಗಿದ. ನನಗಾಗ 'ಒಳ್ಳೆ ಪೇಚು ಬಂದಿತಲ್ಲ' ಎನ್ನಿಸಿತು. 'ಇದೇನು ಬಂದಿತಪ್ಪ! ಹೊರಗಷ್ಟೇ ಮೊಗಲಾಯಿಯ ಮಾತು ಕೇಳಿದ್ದೆ. ಆಗ ಅಷ್ಟೇನೂ ಆಶ್ಚರ್ಯ ಎನಿಸಲಿಲ್ಲ; ಆದರೆ ಇಲ್ಲಿ ಪ್ರತ್ಯಕ್ಷ ಅನುಭವ ಇದೇನೋ ಬಂದಿತಲ್ಲ!' ಎಂದುಕೊಂಡೆ. ಅಷ್ಟರಲ್ಲಿ ಆ ಹವಾಲದಾರನು ನನ್ನ ವಿಮೋಚನೆಗೆ ಅವತಾರ ತಾಳಿದ. ಆತನು ನಾವು ಎಲ್ಲಿಂದ ಬಂದೆವು, ಎಲ್ಲಿಯವರು, ಎಲ್ಲಿಗೆ ಹೊರಟಿರುವೆವು ಎಂಬುದನ್ನೆಲ್ಲ ಕೇಳಿದ್ದರಿಂದ, ನಾವು ಹೊಸಬರು—ಅರಿಯದವರು—ಎಂಬುದು ಅವರೆಲ್ಲರಿಗೂ ಗೊತ್ತಾಯಿತು. ಅಲ್ಲಿ ಸಹ ನಾನು ಇಗ್ಗಾಲಿಯ ಮೇಲೆ ಹಾಗೆಯೇ ಸಾಗಿದಾಗ ಅಲಕ್ಷ್ಯದಿಂದದ್ದೆ—ಎಂಬುದನ್ನು ಎಷ್ಟು ಸರಲವಾಗಿಯೂ ಸ್ಪಷ್ಟವಾಗಿಯೂ ಹೇಳಿದರೂ ಆತನಿಗೆ ನಂಬಿಕೆಯನಿಸಲಿಲ್ಲ. ಆದರೂ 'ಅಚ್ಛಾ ತುಮ್ ಜಾವ್' ಎಂದು ಮಾತ್ರ ಆತನು ಆಜ್ಞಾಪಿಸಿದ. ನಾವೆಲ್ಲರೂ ಹಿಂದಿರುಗಿದೆವು. ಆ ಕೋಟೆಗೆ ಕಾವಲು ಇರಬೇಕು ಎಂದು ಸರಕಾರದ ಅಪ್ಪಣೆಯಿದ್ದುದರಿಂದ, ನಮಗೆ ಅದರೊಳಗೆ ಹೋಗಿ ನೋಡುವುದಾವುದೂ ಸಾಧ್ಯವಾಗಲಿಲ್ಲ. ಅಲ್ಲಿಯೆ ಹೊರಬದಿಯಲ್ಲಿ ನಿಂತು, ಒಳಗೆ ಕಾಣುವ ತುಸು ಭಾಗವನ್ನು ನೋಡಿದಷ್ಟೇ ಆ ಕೋಟೆಯಲ್ಲಿ ಕಂಡದ್ದು.

ಅಲ್ಲಿಂದ ಮರಳಿದವರು ನಾವು ತುಸು ದಾರಿ ಹಾಗೆಯೆ ಆ ಕೋಟೆಯ ಗೋಡೆಗುಂಟ ಹೊರಡಬೇಕಾಗಿದ್ದಿತು. ನಡುವೆ ನಮ್ಮ ಕ್ಯಾಪ್ಟನ್ನರಾದವರು ನಮಗೆ ಒಂದು ವಸ್ತುವನ್ನು ತೋರಿಸಿದರು.

'ಅಕೋ.. ಅಕೋ.. ಆ ಬಿಳಿಯ ಕಲ್ಲಿನ ಮೇಲ್ರೀ.. ಅಲ್ಲಿ ಒಂದು ಗೆರೆ ಕಾಣುತ್ತದೆಯಲ್ಲ.. ಅದರ ಬಳಿಯಲ್ಲಿಯೆ.. ಅಹಾ.. ಅಕಾ.. ಅದೇ.. ದುಂಡಗೆ ಕಾಣುತ್ತದೆಯಲ್ಲ.. ಹಾಂ.. ಹಾಂ! ಅದಲ್ಲ. ಅದಕ್ಕಿಂತ ಈಚೆಗೆ ಕೆಳಗೆ.. ಅದು ಮತ್ತೊಂದಿರಬಹುದು. ಆದರೆ ಇದು ಅಲ್ಲಿಯೆ ಸಿಕ್ಕಿಕೊಂಡಿರುವುದು.. ಕಂಡಿತೇನು? ಅಲ್ಲಿಯೆ ಇದೆಯಲ್ಲರೀ.." ಎಂದು ತಮ್ಮ ಸಂಗಾತಿಯೊಬ್ಬರಿಗೆ ತಿಳಿಸಿಕೊಟ್ಟು, ತೋರಿಸುವ ತೊಂದರೆಯನ್ನು ತೆಗೆದುಕೊಳ್ಳಹತ್ತಿದ್ದರು. ನನಗೆ ಮೊದಲು ಆಶ್ಚರ್ಯ, ಆ ಮೇಲೆ ಕಳಕಳಿ–ಅನಂತರ ಕುತೂಹಲ ಎನಿಸಿ,

"ಏನರೀ ಅದು.. ಅಲ್ಲಿಯೆ ಇರುವುದು..?" ಎಂದು ಕೇಳಿದೆ. ಅವರಿಗೂ ಅಷ್ಟೇ ಬೇಕಾದಂತೆ ತೋರಿತು. ಇನ್ನೊಬ್ಬರಾದರೂ ಹೆಚ್ಚು ಆಸಕ್ತಿಯುಳ್ಳವರು ಕೇಳಬೇಕು; ತಮಗೆ ಅಷ್ಟೇ ತೊಂದರೆ ಅದೇಕೆ ಅದಕ್ಕೂ ಹೆಚ್ಚು ತೊಳಲಾಟವಾದರೂ ಅಡ್ಡಿಯಿಲ್ಲ—ಅವರಿಗೆ ತೋರಿಸಿ, ಅವರಿಂದ ಕಂಡಿತು ಎನಿಸಿಕೊಳ್ಳಬೇಕು ಎಂದು ಅವರ ಇಚ್ಛೆಯಿದ್ದಂತೆ ಎನಿಸಿತು. ಅಂತೆಯೆ ನಾನು ಕೇಳಿದಾಕ್ಷಣ ಅವರು ನನಗೆ ಆ ದೊಡ್ಡ ಕೋಟೆಯ ಗೋಡೆಯಲ್ಲಿ ಒಂದು ಬಿಂದುವಿನ ಕಡೆಗೆ ಬೆರಳುಮಾಡಿ ತೋರಿಸುತ್ತ "ಅಕೋ.. ಅಲ್ಲಿ

ನೋಡಿರಿ.. ಅದೇ .. ಔರಂಗಜೇಬನ ಸೈನ್ಯದವರು ಈ ಕೋಟೆಯನ್ನು ಕೈವಶಮಾಡಿಕೊಳ್ಳುವಾಗ ಹೊಡೆದ ಗುಂಡು. ಅದು ಅಲ್ಲಿಯೆ ಸಿಕ್ಕಿಕೊಂಡಿದೆ. ಇಂದಿಗೂ ಸಹ ಅದನ್ನು ಅಲ್ಲಿಯೆ ಇರಿಸಿದ್ದಾರೆ" ಎಂದರವರು.

"ಏನು! ಔರಂಗಜೇಬನ ಸೈನ್ಯದವರ ಗುಂಡು? ಅಲ್ಲಿಯೇ ನಾಟಿಕೊಂಡಿರುವುದೆ?" ಎಂದು ನಾನು ಕೇಳಿದೆ. "ಅಲ್ಲಿ ಕಾಣುತ್ತದೆ ದುಂಡಗೆ; ಅದೇ ಏನು ಗುಂಡು?" ಎಂದು ಜೋಡಿಸಿದೆ.

"ಅಹಾ, ಅದೇ! ನಿಮಗೆ ಕಂಡಿತಲ್ಲವೆ? ಅದೇ ನೋಡಿರಿ! ಮುದ್ದು ಔರಂಗಜೇಬನೆ ಯಾವಾಗ ಮುತ್ತಿಗೆಯಲ್ಲಿ ತೊಡಗುವ ಪ್ರಸಂಗವಿತ್ತೋ—ಆಗ ಹಾರಿಸಿದ ಒಂದು ಗುಂಡು ಅಲ್ಲಿಯೆ ಕುಳಿತಿದೆ. ಆದರೂ ದುರ್ಗಮವಾದ ಈ ಕೋಟೆಯು ಕೊನೆಗೆ ಆತನ ವಶವಾಯಿತು. ಇರಲಿ, ಆದರೆ ಜನರು ಹೇಳುತ್ತಾರೆ: ಈ ಗುಂಡನ್ನು ಔರಂಗಜೇಬನೇ ಹಾರಿಸಿದ್ದು.. ಅಲ್ಲಿ ಕುಳಿತಿದೆಯೆಂದು.." ಎಂದು ಹೇಳುತ್ತ ಅವರು ಮತ್ತೆ ತಮ್ಮ ವಾಹನಾರೂಢರಾದರು. ಅದೊಂದು ನೋಡುವಂತಹ ವಸ್ತು. ಗುಂಡುಗಳನ್ನು ಹಾರಿಸಿ, ಕೋಟೆಯನ್ನು ತೆಗೆದುಕೊಂಡಿರಬಹುದು. ಆದರೂ ಭದ್ರವಾಗಿಯೆ ಉಳಿದ ಆ ಉತ್ತುಂಗವಾದ ಗೋಡೆಯಲ್ಲಿ ನೆಟ್ಟ ಗುಂಡೊಂದನ್ನು ಅಲ್ಲಿ ಹಾಗೆಯೇ ಇರಗೊಟ್ಟಿದ್ದಾರೆ—ಎಂದ ಮೇಲೆ ಅದು ನೋಡತಕ್ಕ ವಸ್ತುವಲ್ಲವೆ?

ಮುಂದೆ ಕೊಂಚ ಬಿಸಿಲು ಏರಿತೆಂದು ನಾವು ಜೋರಿನಿಂದ ಹೊಡೆಯಹತ್ತಿದೆವು ಇಗ್ಗಾಲಿಗಳನ್ನು. ಹನ್ನೊಂದು ಗಂಟೆಯ ಒಳಗೇ ನಾವು ಗಂಡೀಪೇಟೆಯನ್ನು ಮುಟ್ಟಿರಬಹುದು. ಅಲ್ಲಿಯ ವಿಸ್ತಾರವಾದ ಕೆರೆಯನ್ನು ನೋಡಿ, ಅದರ '**ಉಸ್ಮಾನ್ ಸಾಗರ**' ಎಂಬ ರಮ್ಯವಾದ ಹೆಸರಿನಂತೆಯೆ ರಮ್ಯತರವಾದ ಉದ್ಯಾನದಲ್ಲಿ ಆಟಪಾಟಗಳನ್ನು ಆಡಿದೆವು. ಅಪರಾಹ್ಣದಲ್ಲಿ ತುಸುವೇಳೆ ಅಲ್ಲಿಯೆ ಒಂದು ಗಿಡದಡಿಯಲ್ಲಿ ವಿಶ್ರಮಿಸಿ, ಇಳಿಹೊತ್ತಿನಲ್ಲಿ ಮತ್ತೊಮ್ಮೆ ಅಲ್ಲಿ ಸಿಕ್ಕ ಕೆಲವು ತಿನಿಸುಗಳನ್ನು ತಿಂದು, ತಿರುಗಿದೆವು—ಹೈದರಾಬಾದಿನ ಕಡೆಗೆ.

ಹೈದರಾಬಾದಿನಲ್ಲಿದ್ದಷ್ಟು ಸೈಕಲ್ಲುಗಳನ್ನು ನಾನು ಇಲ್ಲಿಯವರೆಗೆ ಮತ್ತಾವ ಊರಿನಲ್ಲಿಯೂ ನೋಡಿರಲಿಲ್ಲ. ಪುಣೆಯಲ್ಲಿ ಊರ ತುಂಬೆಲ್ಲ ಇವುಗಳು ಕಾಣುತ್ತಿದ್ದರೂ, ಪ್ರಮಾಣದಲ್ಲಿ ಹೈದರಾಬಾದಿನಲ್ಲಿಯೆ ಹೆಚ್ಚು ಇರುವುವು. ಹೀಗೆ ಸೈಕಲ್‌ಸ್ವಾರರ ಹಾವಳಿಯಿದ್ದ ಊರುಗಳಲ್ಲಿ ಯಾವಾಗಲೂ ಒಂದು ಸಂಗತಿ ನಡೆಯುತ್ತದೆ. ಅದೆಂದರೆ ದೀಪದ ಕಾಟ. ಅದರಲ್ಲಿಯಂತೂ ಕಾಯಿದೆಯ '**ಅಮಲು**' ತುಸು ಹೆಚ್ಚೇರಿದ ಊರುಗಳಲ್ಲಿ ಅದರ ತೊಂದರೆಯನ್ನು ಹೇಳಲಾಗದು. ಕೆಲವರು ಪೋಲೀಸರು ಇರದ ಓಣಿಗಳಲ್ಲಿ ಹಾಯದ್ದು ತಮ್ಮ ಜಾಗಗಳಿಗೆ ಹೋಗುವ ಎತ್ತುಗಡೆ ನಡೆಯಿಸಿದರೆ, ಹಲವರು ಪೋಲೀಸರು ನಿಂತ ಚೌಕಿಗಳಲ್ಲಿ ಅಷ್ಟೇ ಇಳಿದು, ಕೈಯಲ್ಲಿ ಸೈಕಲ್ಲು ಹಿಡಿದುಕೊಂಡು ಸಾಗುತ್ತಾರೆ. ಪೋಲೀಸರು 'ಕಣ್ಮರೆ' ಯಾದ ಕೂಡಲೆ ಮತ್ತೆ ಏರಿದರೇ ತಮ್ಮ ಆಧುನಿಕ ಅಶ್ವವನ್ನು. ಮೊದಲು ಮನೆಯಿಂದ ಹೊರಡುವಾಗ, ಬೆಳಕು ಇರುವ ಕಾರಣವೊ ಮರೆವಿನ ಮೂಲಕವೊ ಸಂಗಡ ದೀಪಗಳನ್ನು ಒಯ್ಯುವುದಿಲ್ಲ. ಮುಂದೆ ತಿರುಗಿ ಬರುವಾಗ, ಇಡಿಯ ದಾರಿಯುದ್ದಕ್ಕೂ ಕೈಯಲ್ಲಿ ಸೈಕಲ್ಲನ್ನು, ಹಿಡಿದುಕೊಂಡು ಬರಲು ಮನಸ್ಸು ಒಪ್ಪುವುದಿಲ್ಲ. ಹೀಗಾಗಿ ಇಂತಹ '**ಯುಕ್ತಿ**'ಗಳು ನಡೆಯುವುವು. ಅದರಲ್ಲಿಯಂತೂ ಬಾಡಿಗೆಯ ಸೈಕಲ್ಲುಗಳನ್ನು ಒಯ್ದಿದ್ದರೆ, ತಿರುಗಿ ತಡವಾಗಿ ಬಂದರೆ ಬಾಡಿಗೆ ಹೆಚ್ಚು ಬೀಳುವುದಲ್ಲ—ಎಂಬ ಗೋಳು ಬೇರೆ. ಅದಕ್ಕೆಂತಲೆ ಬಾಡಿಗೆ ಇಗ್ಗಾಲಿಗಳನ್ನು ಕತ್ತಲೆಯೊಳಗಿಂದ, ಪೋಲೀಸರ ಕಣ್ಣು ತಪ್ಪಿಸಿ, ಓಣಿಯಲ್ಲಿ ತಿರುಗಾಡುವ ಜನರಿಗೆ ಹಾಯುವುದನ್ನು ತಪ್ಪಿಸಿ, ಹತ್ತಿಕೊಂಡೇ ಬರಬೇಕು ಎಂಬ ಹಿರಿಯ ಹವಣಿಕೆ. ಅಂದು ಬರುವಾಗ ಕತ್ತಲೆಯಾದ ಕಾರಣ ನಾವೂ ಹೀಗೆಯೆ ಏನೇನೋ ಮಾಡಿ ಮನೆಯನ್ನು ಸೇರಿದೆವು.

ದಣಿದು ತಿರುಗಿ ಬಂದ ಕಾರಣ 'ತುಸು ಅಡ್ಡ ಬಿದ್ದುಕೊಳ್ಳಬೇಕು' ಎಂದು ವಿಚಾರವಿತ್ತು. ಮನೆಗೆ ಬಂದು ಬಂದರೆಕ್ಷಣ ಹೀಗೆ ಬರಗಿದ್ದೆ—ಅಷ್ಟರಲ್ಲಿಯೆ ನಮ್ಮ ದಾರಿಯನ್ನೇ ಕಾಯುತ್ತ ಕುಳಿತ ಒಂದು ಸುದ್ದಿಯು ನಮ್ಮ ಕಿವಿಯನ್ನು ಹೊಕ್ಕಿತು. **ನೃಪತುಂಗ ಕನ್ನಡಶಾಲೆಯ** ಒಂದು ಉತ್ಸವವಿತ್ತು—ಆ ದಿನ ರಾತ್ರಿಯಲ್ಲಿ. ನಾಟಕವೇ ಮೊದಲಾದ ಕೆಲವುಕಾರ್ಯಕ್ರಮಗಳಿದ್ದುವು. ಅಲ್ಲಿಗೆ ಅಸ್ಮಾದಿಕರು ಬಿಜಯಂಗೈಯಬೇಕಾಗಿ 'ಇತ್ತಲ' ಬಂದಿತು. ಹೊರಟೆವು ನಾವು ಕೆಲವರು ಅತ್ತಕಡೆಗೆ. ಒಂದು ಭವ್ಯ ಕಟ್ಟಡದೆದುರು— '**ನೃಪತುಂಗ ಕನ್ನಡಶಾಲೆ**' ಎಂದು ಕನ್ನಡದಲ್ಲಿ ಢಾಳಾಗಿ ಕಾಣುವ ಅಕ್ಷರಗಳ ಒಂದು ಹಲಗೆ ಕಂಡಿತು. ಒಳಗಿನ ಅಂಗಳದಲ್ಲಿಯೆ ಒಂದು ರಂಗಸ್ಥಲವನ್ನು ಮಾಡಿ, ಎದುರಿಗೆ—ಚಿಕ್ಕದೇ ಆದರೂ ಅಡ್ಡಿಯಿಲ್ಲ—ನಾಕಷ್ಟು ಜನರಿಗೆ ಕೊಡುವಷ್ಟು ಜಾಗದ ಏರ್ಪಾಡಾಗಿತ್ತು. ನಾವು ಹೋಗುವಷ್ಟರಲ್ಲಿಯೆ ಒಂದು 'ಚಾದು' ಆರಂಭವಾಗಿತ್ತು. ಅದನ್ನು ನೋಡಿ ನಾನು "ಅಡ್ಡಿಯಿಲ್ಲ.. ಹೀಗೆ ಏನಾದರೂ ಹೊಸ ವಿಷಯಗಳು ಬೇಕು" ಎಂದುಕೊಂಡೆ. ಇತ್ತೀಚೆಗೆ ಕನ್ನಡದಲ್ಲಿ—ಎಂದರೆ ಹೊಸಗನ್ನಡದಲ್ಲಿ ಅನೇಕ ಬಗೆಯ ಉತ್ಸವಗಳು ಜರುಗುತ್ತವೆ. **ವಾರ್ಷಿಕೋತ್ಸವ, ನಾಡಹಬ್ಬ, ವಿದ್ಯಾರಣ್ಯರ ವಿಜಯದಿನ** ಹೀಗೆಯೆ ಕೆಲಕೆಲವು ಹಬ್ಬಗಳು ಆರಂಭವಾಗಿರುತ್ತವೆ. ಆದರೆ ಇಂತಹ ದಿನಗಳಲ್ಲಿ ಯಾವ ಊರ ಯಾವ ಸಂಸ್ಥೆಯನ್ನು ತೆಗೆದುಕೊಂಡರೂ ಅವುಗಳ ಕಾರ್ಯಕ್ರಮಗಳು ಒಂದೇ ರೀತಿಯವಾಗಿ ಕಾಣುವುವು. ಯಾರಾದರೊಬ್ಬ 'ದೊಡ್ಡ ಜನ'ರನ್ನು 'ಭಾಷಣ'ಕ್ಕೆಂದು ಕರೆಯುವುದು. ಅವರ ಉಪನ್ಯಾಸ, ಅಂತಹವೆ ಆದ 'ಇತರ ಭಾಷಣಗಳು,' ಒಂದು ಚಿಕ್ಕ ಪ್ರಹಸನ ಇಲ್ಲವೆ ನಾಟಕ; ಮತ್ತು ಹೆಚ್ಚಾದರೆ ಒಂದು ಚಿಕ್ಕ ನರ್ತನ. **ಇದಿಷ್ಟಾದರೆ ಪೂರ್ತಿಯಾದಂತಾಯಿತು — ಇಂತಹ ಉತ್ಸವಗಳ ಕಾರ್ಯಕ್ರಮ. ಇದನ್ನೆಲ್ಲ ಕಂಡ ನನಗೆ ಆ ದಿನ**

ಅಲ್ಲಿಯ ಕಾರ್ಯಕ್ರಮದಲ್ಲಿ '**ಜಾದು**' ಒಂದು ನಡೆದುದನ್ನು ನೋಡಿ ಹುರುಪೆನಿಸಿತು. ಹೀಗೆಯೆ, ಕಸರತ್ತು, ಲಾವಣಿಗಳನ್ನು ಹಾಡುವುದು ಮೊದಲಾದ ಕೆಲವು ಹೊಸ ವಿಷಯಗಳನ್ನೂ ಇಂತಹ ಕಾರ್ಯಕ್ರಮದಲ್ಲಿ ಸೇರಿಸಲು 'ಈ ದಿನ ಇವರು ಒಂದು ಪಾಠ ಹಾಕಿಕೊಟ್ಟಂತಾಯಿತು' ಎನ್ನಿಸಿತು ನನಗೆ. ಹಾಗೆ ನೋಡಿದರೆ ಹೈದರಾಬಾದಿನಲ್ಲಿ ಆ ಶಾಲೆಯವರು ಇನ್ನೂ ಒಂದು ಪಾಠವನ್ನು ಹಾಕಿಕೊಟ್ಟಿರುವರು—ಎಲ್ಲರಿಗೂ. ಅದೆಂದರೆ ಆ ಶಾಲೆಯನ್ನು ಆರಂಭಿಸಿರುವುದು. ಕನ್ನಡ ಸಂಸ್ಕೃತಿಯನ್ನು ಉಳಿಸಿ, ಬೆಳೆಯಿಸಲಿಕ್ಕೆ ಕೇವಲ 'ಮಾತು'ಗಳನ್ನಾಡುವುದಕ್ಕಿಂತ ಪ್ರಾಥಮಿಕ ಶಾಲೆಯೊಂದನ್ನು ತೆಗೆಯುವುದು ಹೆಚ್ಚು ಒಳ್ಳೆಯ ಹಾದಿ ಎಂಬುದನ್ನು ಮನಗಂಡು, ಈ ಶಾಲೆಯನ್ನು ನಡೆಯಿಸಿರುವುದು! ನಿಜವಾಗಿಯೂ ಹೈದರಾಬಾದಿನಲ್ಲಿ—ಅದೇಕೆ ಅಂತಹ ಚಿಕ್ಕ ಎಲ್ಲ ಊರುಗಳಲ್ಲಿ—ಕನ್ನಡದ ಏಳ್ಗೆಗಾಗಿ ಹಗಲಿರುಳೂ ದುಡಿಯುತ್ತಿರುವ ಎಷ್ಟೋ ಜನ 'ಪುಢಾರಿ'ಗಳಿರಬಹುದು; ತರತರದ ಬರೆಹಗಳಿಂದ ಜನರಲ್ಲಿ ಜಾಗೃತಿಯನ್ನುಂಟುಮಾಡಬೇಕು ಎಂದು ಹೆಣಗುವ ಎಷ್ಟೋ ಪತ್ರಿಕೆಗಳಿರಬಹುದು. ಆದರೆ ಅವೆಲ್ಲ ಸಾಧನಗಳಿಗಿಂತ ಹೆಚ್ಚು ಉಪಯುಕ್ತವೂ ಫಲಕಾರಿಯೂ ಆಗುವಂತಹ ಕೆಲಸವಾಗುವುದೆಂದರೆ—ಇಂತಹ ಒಂದು ಶಾಲೆಯಿಂದ. ಅಂತೆಯೆ ಹೈದರಾಬಾದಿನ ಎಲ್ಲ ಕನ್ನಡ ಚಟುವಟಿಕೆಗಳ ಕೇಂದ್ರ ಎಂದರೆ ಆ ಶಾಲೆ ಎಂದೆನಿಸಿತು—ನನಗೆ!

ಅದೇ ಉಬ್ಬಿನಲ್ಲಿ ನಮ್ಮ ಸ್ಥಳಕ್ಕೆ ಬಂದೆವು. ಮನದೊಳಗಿನ ಆ ಹಿಗ್ಗು, ಮೈಯ ದಣಿವನ್ನು ಎಷ್ಟೋ ಮರೆಯಿಸಿತು. ಆ ಕಾರ್ಯಕ್ರಮಕ್ಕೆ ಹೋಗಿ ಬರದಿದ್ದರೆ, ಮೂವತ್ತು ಮೈಲು ಇಗ್ಗಾಲಿಗಳ ಮೇಲೆ ಪ್ರವಾಸ ಮಾಡಿ ಬಂದ ನನಗೆ ಆ ರಾತ್ರಿ ನಿದ್ರೆಯಾದರೂ ಬರುತ್ತಿದ್ದಿತೋ ಇಲ್ಲವೋ! 'ಇನ್ನು ಪ್ರಸನ್ನ ಚಿತ್ತದಿಂದ ಮಲಗೋಣ — ಬೆಳಗಿನಲ್ಲಿ ಸೂರ್ಯನೇ ಬಂದು ಎಬ್ಬಿಸುವವರೆಗೆ' ಎಂದು ಮನಸ್ಸನ್ನು ಗಟ್ಟಿಮಾಡಿಕೊಂಡು ಮಲಗಿದೆ.

ಆದರೆ ...! ಅದೇ ಕ್ಷಣಕ್ಕೆ ನನಗೆ ಮತ್ತೊಂದು ಸಂಗತಿಯು ನೆನಪಾಯಿತು. ಆ ದಿನದ ಪತ್ರಿಕೆಗಳಲ್ಲಿ, ಮರುದಿನದಿಂದ ಹೈದರಾಬಾದಿನಲ್ಲಿ 'ಆಸ್ಟ್ರೇಲಿಯದ ಹನ್ನೊಂದಕ್ಕೂ, ಹೈದರಾಬಾದಿನ ಹನ್ನೊಂದಕ್ಕೂ ಕ್ರಿಕೆಟ್ ಪಂದ್ಯಾಟವಾಗುವುದು — ಮೂರು ದಿನ' ಎಂಬ ವರ್ತಮಾನವನ್ನು ಓದಿದ್ದೆ. ಆ ಸುದ್ದಿಯನ್ನು ಓದಿದಾಗ ನಾನು ನಿಶ್ಚಿತಮಾಡಿದ್ದೆ: 'ಬಹುದೂರದಿಂದ ಪ್ರಖ್ಯಾತ ಆಟಗಾರರು ಬಂದಿದ್ದಾರೆ. ಸಿಕ್ಕಲಾರದ ಪ್ರಸಂಗವು ಅನಾಯಾಸವಾಗಿ ದೊರೆತಿದೆ. ಕಾರಣ ಎಂತಹ ತೊಂದರೆ ಬಂದರೂ ಆ ಪಂದ್ಯಾಟಗಳನ್ನು ನೋಡಲಿಕ್ಕೆ ಹೋಗಬೇಕು!' ಎಂದು. ಈ ವಿಚಾರದ ನೆನಪು ಮತ್ತೆ ನನಗೆ ಮರುದಿನ ಬೇಗನೆ ಏಳಬೇಕಾಗುತ್ತದಲ್ಲ ಎಂಬ ಅಳುಕು. 'ಏನೇ ಇರಲಿ, ಈಗಂತೂ ಸುಖವಾಗಿ ನಿದ್ರಿಸೋಣ!' ಎಂದು ಮಲಗಿದೆನು.— ಮರುದಿನ ನನ್ನ ಗೆಳೆಯರೊರ್ವರು ಮೈ ತಟ್ಟಿದಾಗಲೇ —ಎಚ್ಚರು.

"ಏನು ಸ್ವಾಮಿ, ಆಸ್ಟ್ರೇಲಿಯದವರು ಆಡುವದಿಲ್ಲವೆಂತಲ್ಲ!"

"ಅದೇಕೆ? ಏನಾಯಿತು?" ಎಂದು ನಾನು ನಿರಾಶೆ ಬೆರೆತ ಗಾಬರಿಯಲ್ಲಿ ಕೇಳಿದೆ.

"ನಿಮಗೆ ಬರುವುದಾಗುವುದಿಲ್ಲ — ಆಟ ನೋಡಲಿಕ್ಕೆ — ಎಂಬುದು ಅವರಿಗೆ ತಿಳಿದು ಬಂದಿತಂತೆ!.. ಅದಕ್ಕೆ .." ಎಂದು ನಗಹತ್ತಿದರು ಅವರು.

"ಛೆ! ಇಷ್ಟೇ ಅಲ್ಲವೆ! ನಿನ್ನೆ ಕೊಂಚ ಶ್ರಮ ಆಗಿತ್ತು.. ದೂರದ ಪ್ರವಾಸದಿಂದ — ಅದಕ್ಕೆ ಹಾಗೆಯೆ ಒರಗಿದ್ದೆ. ಅಷ್ಟೆ .."

"ಇರಲಿ .. ಈಗೇನು ಹೊರಡುವುದಲ್ಲವೆ ಹಾಗಾದರೆ?.." ಎಂದು ಅವರು ಪ್ರಸ್ತಾಪವನ್ನೆತ್ತಿದರು.

"ಹಂ! ಹೋಟೇಲಿಗೆ ಹೋದಲ್ಲೊ?.. ನಡೆಯಿರಲ್ಲ— ನಾನು ಸಿದ್ಧ" ಎಂದು ನಗುನಗುತ್ತಲೆ ಅವರೊಡನೆ 'ಕಾಫಿ'ಗೆಂದು ಹೊರಟೆ. ಹಾಗೆಯೆ ಬೇಗಬೇಗನೆ ಊಟದ ನಿಮಿತ್ತವನ್ನಷ್ಟು ಮಾಡಿ, ನಾವಿರ್ವರೂ ಕೂಡಿ ಹೊರಟೆವು ಆಟದ ಬಯಲಿಗೆ.

"ಏನ್ರೀ ಇದು?" ಎಂದು ನಾನು ಆಶ್ಚರ್ಯದಿಂದ ಕೇಳಿದೆ.

"ಇದು ಕರಿ, ಬಿಳಿ, ಕೆಂಪು ಫೇಜ್‌ಗಳ ಸಮ್ಮೇಳನ. ಈ ಊರಲ್ಲಿ ಪ್ರತಿಯೊಂದು ವಿಷಯ ಹೀಗೆಯೆ ನೋಡಿರಿ! ಏನಾದರೊಂದು ಹೊಸ ಸಂಗತಿಯು ಸಂಭವಿಸಿತೆಂದರೆ ನೆರೆದುವೆ ಎಣಿಸಲಾರದಷ್ಟು ಫೇಜ್‌ಗಳು. ನೋಡಿದಿರಾ ಈ ಜನರ ಉಡುಪುಗಳನ್ನು! ಅವರು ತೊಟ್ಟ ಈ ಉದ್ದವಾದ ಶೇರವಾನಿಯು ಎಲ್ಲರನ್ನೂ ಒಂದೇ ಬಗೆಯಾಗಿ ಕಾಣಲು ಪೋಷಕವಾಗಿರುತ್ತದೆ.. ಅಂದರೆ 'ಯಾರು, ಯಾರು?' ಎಂಬುದನ್ನು ವಿಂಗಡಿಸಿ ನೋಡಲು ಸಹ ಅವಕಾಶ ಕೊಡುವುದಿಲ್ಲ..'ಈ ಗದ್ದಲದೊಳಗೆ ನಮಗೆ ಟಿಕೀಟುಗಳಾದರೂ ಸಿಕ್ಕುತ್ತವೆನೊ!'..ಎನ್ನುತೆನ್ನುತ್ತ ಅವರು ಕ್ರಮಶಃ 'ಟಿಕೇಟಿನ ಕಿಟಕಿ'ಯ ಬಳಿಗೆ ನುಗ್ಗಹತ್ತಿದರು. ಮೈಯೊಳಗಿನ ಶಕ್ತಿಸರ್ವಸ್ವವನ್ನೂ ಹಾಕಿ ತಲೆ, ದಂಡ, ಬಾಹು, ಭುಜ, ಮೊಳಕೈ ಮೊದಲಾದ ಆಯುಧಗಳಿಂದ ಆ ಮುತ್ತಿಗೆಯನ್ನು ಮುಂದುವರಿಸಿದರು. ಅದರಲ್ಲಿ ನನ್ನ ಬೆಂಬಲ ಬೇರೆ. ಇನ್ನೇನು ಕಿಟಕಿಯು ಕೈವಶವಾಗಲು ತಡವಿಲ್ಲ ಎಂದು ನಾನು ನನ್ನ ಜೇಬಿನೊಳಗೆ ಹಣಕ್ಕೆಂದು ಕೈ ಹಾಕಿದೆ—ನನ್ನ ಭುಜವನ್ನು ಯಾರೋ ಕೈಯಿಂದ ತಟ್ಟಿದಂತೆ ನನಗೆ ಭಾಸವಾಯಿತು.

"ನನ್ನದೊಂದು ಟಿಕೀಟು ತೆಗೆಯಿರಿ.. ನನಗೆ.. ಈ ಗದ್ದಲ" ಎಂದು ಕೇಳಿಸಿತು ಒಂದು ಮಾತು. 'ನಮಗೇ ಟಿಕೀಟುಗಳು ಸಿಕ್ಕಬೇಕಾದರೆ ಏಳೂ ಹನ್ನೊಂದು ಆದ ಈ ಸಮಯದಲ್ಲಿ. ನಮ್ಮನ್ನು ಕೆಣಕುವ ಈ ಪುಣ್ಯಾತ್ಮನಾರು' ಎಂದು ಹೊರಳಿ ನೋಡುತ್ತೇನೆ— ನನ್ನ ಗಾಡಿಯೊಳಗಿನ ಫ್ರೆಂಡ್! ನನಗೆ ಮೊದಲು ಸಂಶಯ ಬಂದಿತು—'ಇವರಾರಿರಬಹುದು?' ಎಂದು.

"ಯಾಕರೀ.. ಗುರುತು ಮರೆಯಿತೇನು... ಇಷ್ಟರಲ್ಲಿಯೆ?" ಎಂದು ಕೋರೆನಗೆಯೊಡನೆ ಕೇಳಿದರವರು. ನನಗೆ **ಕೊಂಚ** ಸಂಕೋಚವೆನ್ನಿಸಿತು.

“ಅದೇನಿಲ್ಲ. ನೀವು.. ಈ ವೇಷ.. ಅಂದರೆ ಹೀಗೆ ಶೇರವಾನಿ, ಸುರವಾರಗಳನ್ನು ಹಾಕಬಹುದು ಎಂದು..” ನಾನು ತತ್ತರಿಸಿದೆ.

“ಓಹೊ.. ಅದೋ! ಹೀಗೆ ನಡೆಯುವುದೇ. ಕಾಲಕ್ಕೆ ತಕ್ಕಂತೆ ನಡೆಯಬೇಕು; ದೇಶಕ್ಕೆ ತಕ್ಕಂತೆ ವೇಷ ಧರಿಸಬೇಕು. ನೋಡಿರಿ. ‘ರೋಮದಲ್ಲಿ ರೋಮನ್ನನಂತೆ ಇರು’ ಎಂದು ಹೇಳಿಲ್ಲವೆ? ಹಾಗೆ ಇಲ್ಲಿದ್ದಾಗ ಇಲ್ಲಿಯ ಜನರಂತೆ ಇರಬೇಕು ನೋಡಿರಿ!” ಎಂದು ಅವರು ತಮ್ಮ ಉದ್ದೇಶವನ್ನು ಸ್ಪಷ್ಟಗೊಳಿಸಿದರು. ಅದರೊಡನೆಯೆ ನನ್ನ ಗೆಳೆಯರು ತಂದ ಟಿಕೀಟನ್ನು ಸಪ್ಪಳ ಮಾಡದಂತೆ ಸ್ವೀಕರಿಸಿದರು. ಮುಂದೆ ಆ ಗದ್ದಲದೊಳಗೆ ಅವರೆತ್ತ ತೆರಳಿದರೋ ತಿಳಿಯಲಿಲ್ಲ ನಮಗೆ. ನಾವೂ ಆಟವನ್ನು ನೋಡುವುದರಲ್ಲಿ ಮಗ್ನರಾದೆವು.

ಅದಕ್ಕೆ ಕಾರಣಗಳೂ ಇದ್ದುವು. ಆ ದಿನ ಹಿಂದುಸ್ಥಾನದ ಹನ್ನೊಂದು ಜನ ಆಟಗಾರರು, ಅದ್ಭುತವಾದ ಆಟಗಾರಿಕೆಯನ್ನು ತೋರಿಸಿದ ದಿನವಾಗಿತ್ತು. ಆ ಪಕ್ಷಕ್ಕೆ ‘**ಮೋಹಿನುದ್ದೌಲಾ ಕ್ರಿಕೆಟ್ ಕ್ಲಬ್**’ ಎಂದು ಅಲ್ಲಿಯ ಅಭಿಧಾನವಿದ್ದರೂ, ಅದರಲ್ಲಿ ಅಖಿಲ ಭಾರತದ ಆಟಗಾರರಿದ್ದರು. ಮೊದಲು ಆಟದ ಸರತಿ ಬಂದ ಕಾರಣ ನಮ್ಮವರು ಆಟವನ್ನು ಆರಂಭಿಸಿದರು. ಅವರೆದುರು ಜಗತ್ಪ್ರಸಿದ್ಧ ಚೆಂಡುಗಾರರು—ಎದುರಾಳಿಗಳು. ಅಂತಹ ಪರಿಸ್ಥಿತಿಯಲ್ಲಿಯೂ ಎಂಟೇ ಜನರು ಆಟವಾಡಿ ೪೧೨ ಓಟಗಳನ್ನು ಪಡೆದ ದಿನ ಅದು. **ಅಮರನಾಥನು ಹಿಂದುಸ್ಥಾನದ ಆಟಗಾರಿಕೆ**ಯನ್ನೇ ಅಮರ—ಅಜೇಯ ಮಾಡಿದ ದಿನವದು. ಯಾಕೆಂದರೆ ಆತನೊಬ್ಬನೇ ೧೪೪ ಓಟಗಳನ್ನು ಪಡೆದು, ಆಸ್ಟ್ರೇಲಿಯದವರ ಮೊದಲನೆಯ ಆಟದ ಒಟ್ಟು ಓಟಗಳನ್ನು ತಾನೊಬ್ಬನೆ ಲೀಲೆಯಿಂದ ತೆಗೆಯಬಹುದು—ಎಂಬುದನ್ನು ಸಿದ್ಧಮಾಡಿ ತೋರಿಸಿದ ದಿನವದು. ಮುಂಬಯಿ, ಕಲ್ಕತ್ತೆ ಮೊದಲಾದ ಸ್ಥಳಗಳಲ್ಲಿ ವಿಜಯವನ್ನು ಸಂಪಾದಿಸಿ ಮಲಿತ ಆ ಆಸ್ಟ್ರೇಲಿಯದವರಿಗೆ, ಕಾಶಿಯಲ್ಲಿ ಕಾಣಿಕೆಯಾಗಿ ಕೊಟ್ಟ ಸೋಲಿನ ನಂತರ, ಬಹಳ ದಿನಗಳ ಮೇಲೆ—ಆದರೂ ಮುಂದೆ ಎಷ್ಟೋ ಕಾಲ ಮರೆಯದಂತಹ—ಸೋಲನ್ನು ಉಡುಗರೆಯಾಗಿ ಕೊಟ್ಟ ದಿನವದು. ಅಂತಹ ಸಮಯದಲ್ಲಿ ಆಟದ ಕಡೆಗೆ ಬಿಟ್ಟು ಬೇರೆ ಕಡೆಗೆ ಲಕ್ಷ್ಯ ಹೋಗಬಹುದೆ?

ಮರುದಿನ ಆಸ್ಟ್ರೇಲಿಯದವರು ಆಟವಾಡಿದರು. ಮೊದಲನೆಯ ಆಟದಲ್ಲಿ ೧೪೪, ಎರಡನೆಯ ಆಟದಲ್ಲಿ ಎಂಟು ಜನರು ಔಟ್ ಆಗಿ ೧೪೩ ಹೀಗೆ ಓಟಗಳನ್ನು ತೆಗೆದರು. ಮೂರನೆಯ ದಿನ ಮಾತ್ರ—‘ಏನಾದರೂ ಒದಗಾಗುವುದೇನೋ ನೋಡಬೇಕು,’ ‘ಕ್ರಿಕೆಟ್ಟು ವಿಚಿತ್ರ ಆಟ,’ ಎಂದು ಎಲ್ಲರೂ ಉತ್ಸಾಹದಿಂದ ನೋಡಲಿಕ್ಕೆ ಹೋಗಿದ್ದೆವು. ಆದರೆ ಸರಿಯಾಗಿ ಹದಿನೈದು ನಿಮಿಷಗಳಲ್ಲಿ ಆಟವು ಪೂರೈಸಿ ಹೋಯಿತು. ‘ನಾವು ಗೆದ್ದೆವಲ್ಲ!’ ಎಂಬ ಆನಂದದಲ್ಲಿ ಕೆಲವರು, ‘ಮೂರು ದಿವಸಗಳ ಆಟವನ್ನು ನೋಡಲಿಕ್ಕೆಂದು ಕೊಟ್ಟ ಹಣಕ್ಕೆ ಎರಡೇ ದಿನಗಳ ಆಟವನ್ನು ನೋಡಿದಂತಾಯಿತಲ್ಲ,’ ಎಂಬ ವ್ಯಥೆಯಲ್ಲಿ ಹಲವರು,—ಹೀಗೆ ಅನೇಕಜನರು ಅನೇಕ ಬಗೆಯಾಗಿ ಮಾತನಾಡುತ್ತ ಮರಳಿದರು. ಅಲ್ಲಿಂದ ನಾನು, ನನ್ನ ಗೆಳೆಯರೆದುರು ‘ನಾಳೆ ಹೊರಡುವೆ.. ನಾನು ನಮ್ಮೂರಿಗೆ’ ಎಂಬುದನ್ನು ತಿಳಿಸಿದೆ.

“ಹಾಗಾದರೆ ಇಂದು ಅನಾಯಾಸವಾಗಿ ಬಿಡುವು ದೊರೆತಿದೆ. ಇಲ್ಲಿಯ ಒಬ್ಬ ಮಿತ್ರರ ಮನೆಗೆ ಹೋಗಿ ಬರೋಣ ಬನ್ನಿರಿ” ಎಂದರವರು. ನಾವು ಅತ್ತ ಕಡೆಗೆ ಹೊರಟೆವು.

ಒಂದು ವಿಶಾಲವಾದ ಅಂಗಳ. ಅದರ ಎರಡೂ ಬದಿಗೆ ಚೆಲುವು ಚೆಲುವಾದ ಹೂವಿನ ಗಿಡಗಳು. ಮೊದಲು ಈ ವಾತಾವರಣದಿಂದಲೆ, ಅವುಗಳ ಒಡೆಯನ ರಸಿಕತೆಯ ಬಗೆಗೆ ಹೆಚ್ಚಿನ ಕುತೂಹಲವುಂಟಾಗುವಂತಿತ್ತು. ನಾವು ಮೊಗಸಾಲೆಯಲ್ಲಿ ಕಾಲಿಡುತ್ತಲೆ, ಗೋಡೆಗಳಿಗೆ ಸುಂದರವಾದ ಚಿತ್ರಗಳನ್ನೂ, ಫಲಗೆಗಳನ್ನೂ, ಚಿತ್ರಪಟಗಳನ್ನೂ ಹಾಕಿದುದು ಕಂಡಿತು. ಅಲ್ಲಿರಿಸಿದ ಸುಖಾಸನಗಳಲ್ಲಿ ನಾವು ಕುಳಿತುಕೊಂಡೆವು. ನನ್ನ ಬಲಬದಿಯಲ್ಲಿಯೆ ಒಂದು ಹುಕ್ಕಾ ಕಂಡಿತು. ಅಷ್ಟರಲ್ಲಿಯೆ ಮನೆಯೊಡೆಯನು ಬಂದನು. ನಮ್ಮ ಔಪಚಾರಿಕ ಮಾತುಗಳಾದ ಕೂಡಲೆ, ಅವರು ನಾವು ಆ ದಿನದ ಪಂದ್ಯಾಟದ ವಿಷಯವಾಗಿ, ಒಟ್ಟು ಹೈದರಾಬಾದ್ ಸಂಸ್ಥಾನದ ಪರಿಸ್ಥಿತಿಯ ವಿಷಯವಾಗಿ ಅನೇಕ ಮಾತುಗಳನ್ನಾಡಿದೆವು. ಆ ಇಡಿಯ ಸಂಭಾಷೆಯಲ್ಲಿ ಆ ಗೃಹಸ್ಥ ನಮಗೆ ‘ತಾವು, ತಮ್ಮ’ ಎಂಬ ವಿನಯಪೂರ್ಣ ಮಾತುಗಳಿಂದ ನಮ್ಮನ್ನು ಸಂಬೋಧಿಸಿದುದನ್ನು ಕಂಡು ನನಗೆ ಕೌತುಕವೆನಿಸಿತು. ಆ ಜನರೆ ಹಾಗೆ! ಆ ಊರಲ್ಲಿ ಎಲ್ಲರೂ ಮಾತನಾಡಿದುದೆ ಹಾಗೆ! ಅಥವಾ ಆ ಮಾತುಗಳೆ ಹಾಗೆ ಎಂದರೂ ಸಲ್ಲುವುದು. ಅತಿಥಿ-ಅಪರಿಚಿತರಲ್ಲಿ ತೋರುವ ಸತ್ಕಾರ, ಆ ಮಾತುಗಳಲ್ಲಿ ಕಾಣುವ ಮಿದುತನ ಇನ್ನಾವ ಕಡೆಗೂ ಕಾಣಲಿಕ್ಕಿಲ್ಲ. ಇದನ್ನೆಲ್ಲ ಕಂಡು ಆ ನಾಡು-ನುಡಿಗಳಿಗಾಗಿ ಆದರವುಂಟಾಗುವುದಲ್ಲದೆ—ಅದನ್ನೇ ಹೆಚ್ಚಾಗಿ ಅರಿತುಕೊಳ್ಳಬೇಕು ಎಂಬ ಅಭಿಲಾಷೆಯುಂಟಾಗುವುದು.

ನಾವು ಅಲ್ಲಿಂದ ಹೊರಟು ಮನೆಯ ಕಡೆಗೆ ಬಂದೆವು. ಆ ದಿನ ಸಂಜೆಯ ಮತ್ತೊಂದು ಎಂದರೆ ಕಡೆಯ ಸುತ್ತು ಮುಗಿದ ಕೂಡಲೆ, ನಾನು ಊರಿಗೆ ಹೊರಡುವ ಎತ್ತುಗಡೆಯನ್ನು ಮಾಡಹತ್ತಿದೆ. ಒಬ್ಬರ ಸೂಚನೆಯ ಮೇರೆಗೆ ನಾನು ಅಲ್ಲಿಯ ನನ್ನ ಬಳಿಯಲ್ಲಿದ್ದ ಹೈದರಾಬಾದಿನ ನಾಣ್ಯಗಳನ್ನು ಬ್ರಿಟಿಶ್ ನಾಣ್ಯಗಳಿಗೆ ಬದಲು ಮಾಡಿಕೊಂಡೆ. ಊರಿಗೆ ಹೊರಡುವಾಗ ನಿಲ್ದಾಣಕ್ಕೆ ನನ್ನ ಗೆಳೆಯರು ಬಂದಿದ್ದರು. ಗಾಡಿಯು ಬಿಡುವ ಕಾಲಕ್ಕೆ ಅವರು:

“ಏನೇನು ಆದ ಹಾಗಾಯಿತು ಹೈದರಾಬಾದಿನಲ್ಲಿ?” ಎಂದರು. ಗಾಡಿಯು ಹೊರಟಿತು.

“ಒಬ್ಬ ಗೆಳೆಯನನ್ನು ಮಾತ್ರ ಗಳಿಸಿಕೊಂಡಂತಾಯಿತು” ಎಂದೆ ನಾನು. ಅವರ ಕಣ್ಣಲ್ಲಿ ಒಂದು ತೊಟ್ಟು ಕಂಡಿತು; ನನ್ನ ಬಗೆಯಲ್ಲಿ ಒಂದು ಚಿತ್ರಮೂಡಿತು.

ನಮ್ಮ ಪಿಡುಗು-ಪುಢಾರಿಗಳು

೭. ಪುಂಡ ಪುಢಾರೆಪ್ಪ

ಅರ್ಥಾತ್

ಹಂಡಬಂಡ ಹನುಮಪ್ಪ

[ಎಚ್ಚರಿಕೆ:— ಇದೊಂದು ವ್ಯಂಗ್ಯ-ಚಿತ್ರಲೇಖ-ಮಾಲೆ. ಕೇವಲ ಕಾಲ್ಪನಿಕವಾದುದು. ಇಲ್ಲಿ ಚಿತ್ರಿಸಿದ ವ್ಯಕ್ತಿ, ವ್ಯವಹಾರದ ಯಾವುದೊಂದು ವ್ಯಕ್ತಿಯನ್ನೂ ಸಂಬಂಧಿಸಿಲ್ಲ. ಈ ಮಾತನ್ನು ಮರೆತು ಯಾರಾದರೂ ದೊಡ್ಡಸ್ತನದಿಂದಾಗಲಿ ದುರ್ಲಕ್ಷ್ಯದಿಂದಾಗಲಿ, ತಮ್ಮ ಇಲ್ಲವೆ ಅನ್ಯರ ಸಂಬಂಧ ಕಲ್ಪಿಸಿಕೊಂಡರೆ, ಅದರ ಪೂರ್ಣ ಹೊಣೆಗಾರಿಕೆ ಅವರವರ ತಲೆಯ ಮೇಲೆಯೆ !

—ಸಂಪಾದಕರು]

ಕರ್ನಾಟಕವು ಕಿಷ್ಕಿಂಧಾನಾಡಾಗಿತ್ತೆಂದು ಇತಿಹಾಸವನ್ನು ಬಲ್ಲವರು ಹೇಳುವರಷ್ಟೆ. ಆ ಮಾತಿನಲ್ಲಿ ಯಾರಿಗಾದರೂ ಸಂಶಯ ಇದ್ದರೆ ಅವರು ಇಂದಿನ ನಮ್ಮ ಈ ಪುಂಡ ಪುಢಾರಿಯನ್ನು ನೋಡಲಿ. ರಾವಣನಂತಹ ಬಲಾಢ್ಯ ರಾಕ್ಷಸನನ್ನು ಸೋಲಿಸಿದ ರಾಮನ ಮಂಗಗಳಿಗಿಂತ ಹೆಚ್ಚಿನ ಮಂಗತನ ಈ ಹನುಮಪ್ಪನಲ್ಲಿದೆ. ಇವನ ನಿಜವಾದ ಹೆಸರು ಹನುಮಪ್ಪನಲ್ಲ; ನಾಲೆಯಿಂದ ಸಮುದ್ರದ ವರೆಗೆ ಎಲ್ಲವನ್ನೂ ಹಾರಾಡಿ ಬಂದರೂ ಜನರು ಇವನನ್ನು **ಹಂಡಬಂಡ ಹನುಮಪ್ಪ** ಎನ್ನುವುದಕ್ಕೆ ಒಂದು ಕಾರಣ ಇದೆ. ಅಂದಿನ ಹನುಮಂತನು ಶ್ರೇಷ್ಠವಾದ, ಆದರ್ಶವಾದ ಭಕ್ತನಾಗಿದ್ದನು. ಆದರೆ ಈ ನಮ್ಮ ಹನುಮಪ್ಪನು ಭಕ್ತನೂ ಆಗಿದ್ದಾನೆ ದೇವನೂ ಎನಿಸಿದ್ದಾನೆ. ವಿರಕ್ತನಾದ ರಾಮಾಯಣದ ಹನುಮಂತನು ಗಿರಿಗುಡ್ಡಗಳ ಕಾಡುವಾಸಿಯಾಗಿದ್ದರೆ, ಆರಾಮಾಯಣದ ಈ ಹನುಮಪ್ಪ ಹೂ-ಬಳ್ಳಿ-ವಾಸಗಳ ನಾಡಿಗನಾಗಿದ್ದಾನೆ. ಕಣ್ಣಲ್ಲಿ ಬ್ರಹ್ಮಚರ್ಯ, ಕೈಯಲ್ಲಿ ಕ್ಷಾತ್ರವೀರ್ಯ, ವಿಚಾರದಲ್ಲಿ ವೈಶ್ಯಚಾತುರ್ಯ, ಕೆಲಸದಲ್ಲಿ ಶೂದ್ರನ ಸ್ಥೈರ್ಯ ಹೀಗೆ ವಿರಾಟಪುರುಷನಾಗಿದ್ದಾನೆ ಈತ. ಇದಕ್ಕೆಯೆ ಕನ್ನಡದಲ್ಲಿ ' ಹಂಡಬಂಡ ' ಎಂಬ ನಾಮಧೇಯ.

ಹನುಮಪ್ಪನನ್ನು ' ನಮ್ಮವನು ' ಎಂದು ತಪ್ಪು ತಿಳಿದು ಕೊಂಡಿದ್ದೇವೆ. ಆದರೆ ಅವನೊ ಹಿಂದುಸ್ತಾನಕ್ಕೆಯೆ ಹನುಮಪ್ಪನು. ಅವನ ಸೇವಾ ಅಖಿಲಹಿಂದುಸ್ತಾನಕ್ಕಾಗಿ; ಅವನ ವೇಷ, ಅಖಿಲ ಹಿಂದುಸ್ತಾನದ ಹಂಡಬಂಡ ಮಾದರಿ; ಅವನ ಭಾಷೆ ಅಖಿಲ ಭಾರತದ ಝೇಂಡಾ ಊಂಚಾ ರಹೇ; ಅವನ ವಿಚಾರ ಅಖಿಲ ಹಿಂದುಸ್ತಾನದ ತಿಸ್ತಿಗಾಗಿ........

ಇವನಿಗೆ ' ಪುಂಡ ಪುಢಾರೆಪ್ಪ' ಎಂಬ ಇನ್ನೂ ಒಂದು ಬಿರುದಿದೆ. ಅಷ್ಟಕ್ಕೆ ಇವನು ' ಪುಂಡ ' ಎಂದು ಯಾರೂ ತಿಳಿಯಬಾರದು ; ತಿಳಿದರೂ ಅದು ರೂಢವಾದ ಅರ್ಥದ ಪುಂಡತನವಲ್ಲ. ಯಾಕೆಂದರೆ, ವೇಷದಿಂದ ವಿಚಾರದ ವರೆಗೆ ಇವನಲ್ಲಿ ' ಲಂಡತನ 'ವಿದೆ. ಧರ್ಮದ, ದೇವರ, ಸಂಪ್ರದಾಯದ, ಶಾಸ್ತ್ರದ-ಒಟ್ಟಾರೆ ಅಧಿಕಾರದ ವಿರೋಧವನ್ನು ಮಾಡುವ ಲಂಡತನ ಇವನದು. ಇಷ್ಟೇಕೆ ವಿರೋಧವನ್ನು ಹೂಡುವುದು ಇವನಿಗೆ ಸ್ವಭಾವವೆ ಆಗಿದೆ. ಅದಕಾಗಿ ತನ್ನ ವಿಚಾರಕ್ಕೆ ತಾನೇ ವಿರೋಧವನ್ನು ಹೂಡಬಲ್ಲ ಪುಂಡನಾಗಿದ್ದಾನೆ ಇವನು. ಈ ಪುಂಡ ಪುಢಾರೆಪ್ಪನ ಮುಂದಾಳುತನದಿಂದ ಕನ್ನಡಿಗರು ತಮ್ಮ ಬುದ್ಧಿಮತ್ತೆಯನ್ನು ಬೆಳೆಯಿಸಿಕೊಂಡಿದ್ದಾರೆಂದು ನಿಸ್ಸಂದೇಹವಾಗಿ ಹೇಳಬಹುದು. ತನ್ನ ವಿಚಾರಗಳಿಗೆ ತಾನೆ ವಿರೋಧವನ್ನು ಹೂಡುವುದು ಬುದ್ಧಿಮತ್ತೆಯ ಲಕ್ಷಣವಲ್ಲವೆ? ' ವಿಚಾರವೇನೆ ಇರಲಿ, ಆಚಾರವು ಅದಕ್ಕೆ ಒಳಗಾಗಬಾರದು ' ಎಂಬ ಧೀರತತ್ವವನ್ನು ಸಾರಿದ ವೀರ ಮಾರುತಿ ಎಂದರೆ ಈ ಹಂಡಬಂಡ ಮಂಗತನದ ಮಾರುತಿ ! ವಿಚಾರದಲ್ಲಿ ಅಹಿಂಸೆ, ಆಚಾರದಲ್ಲಿ ಆತ್ಮಪ್ರಶಂಸೆ; ಮಾತಿನಲ್ಲಿ ಮಹಾತತ್ವ, ಕೈಯಲ್ಲಿ ಮಣಿಯುವ

೫೦ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರದ ಗುಳಿಗೆ
ಬಾಟ್ಲಿಗೆ ೧ ರೂ.
ಎಲ್ಲ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧ.
ವಿಳಾಸ:—ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಚಿತ್ತ; ತಲೆಯೊಳಗೆ ಕಪ್ಪು ಕತ್ತಲೆ, ತಲೆಯ ಮೇಲೆ ಬಿಳಿ ಟೊಪ್ಪಿಗೆ; ವಿಚಾರದಲ್ಲಿ ತ್ಯಾಗ, ವೇಷದಲ್ಲಿ ಭೋಗ; ಕಲಿತದ್ದು ಸೊನ್ನೆ, ಕೇಳಿದರೆ ಹೊನ್ನೆ! ಹೇಗಿದೆ ಪುಂಡಾಟಿಕೆಯ ಪುಢಾರಿತನ?

ಇದು 'ಒಳಗೊಂದು ಹೊರಗೊಂದು' ಎಂಬ ಡಾಂಭಿಕತನ ಎಂದು — ಮೂಢ ಮಾನವರಿರಾ! ಬಡ ಕನ್ನಡಿಗರಿರಾ!— ಬಡಬಡಿಸಬೇಡಿರಿ. ಯಾಕೆಂದರೆ ದಡ್ಡರಲ್ಲಿ ಡಾಂಭಿಕತನವೆನಿಸಿದ್ದು ದೊಡ್ಡವರಲ್ಲಿ ಧಾರ್ಷ್ಟ್ಯವೆನಿಸಿರುವುದು. ಈ ಧಾರ್ಷ್ಟ್ಯದಿಂದಲ್ಲವೆ ನಮ್ಮ ಪುಢಾರೆಪ್ಪನು ಕರ್ನಾಟಕದ ಹೆಸರನ್ನು ಮುಂದೆ ತಂದದ್ದು! 'ಹೇಳಿದ್ದನ್ನು ಕೇಳುವ ಕುರಿಗಳೆಂದರೆ ಕನ್ನಡಿಗರು' ಎಂದು ಕನ್ನಡಿಗರ ಧ್ವಜವನ್ನು ಅಖಿಲ ಹಿಂದುಸ್ಥಾನಕ್ಕೆ ಎತ್ತಿ ಹಿಡಿದದ್ದು ಧಾರ್ಷ್ಟ್ಯವಲ್ಲವೆ? ಕನ್ನಡದ ಅಕ್ಷರಜ್ಞಾನವಿಲ್ಲದಾಗೂ ಕನ್ನಡದಲ್ಲಿ ಬರೆದು ಬಲ್ಲವನೆನಿಸಿಕೊಳ್ಳಬೇಕೆಂಬುದು ಧಾರ್ಷ್ಟ್ಯವಲ್ಲವೆ? ಕರ್ನಾಟಕದಲ್ಲಿ ಹುಟ್ಟಿದರೂ ಕನ್ನಡವನ್ನು ಮರೆತು, ಮತ್ತೊಂದು ಮಾತನ್ನು ಕಲಿತು, ಮೂರನೆಯ ಭಾಷೆಯಲ್ಲಿಯೆ ಮಾತನಾಡಿ, ಕೊನೆಗೂ ಕರ್ನಾಟಕದ ಮುಂದಾಳು ಎನಿಸಿಕೊಂಡುದು ಧಾರ್ಷ್ಟ್ಯವಲ್ಲವೆ?

ಇಂತಹ ಧಾರ್ಷ್ಟ್ಯದ ಆಂಜನೇಯನಿಗೆ ಡಾಂಭಿಕತನದ ಅನುಮಾನವೆ? ಧಿಕ್ಕಾರ! ಹರಹರಸ್ವಾಹಾದೇವ! ಬೊಲೊ, ಬೇಕಾದ ಮಾತಾಡಿಕೊ ಜೈ! ಈ ವೀರವಾಣಿಗಳನ್ನು ಕೇಳಿದರೂ ಇಂದಿಗೂ ಕೈಲಾಸದಿಂದ ಕುಮಾರಿಯ ವರೆಗೆ ದಳ ದಳ ವೀರಾಶ್ರುಧಾರೆ ಸುರಿಯುವುದು! ಇಂತಹಸ್ಥಿತಿಗೆ ಸ್ಫೂರ್ತಿದಾಯಕನಾದವನಿಗೆ ಅನುಮಾನವೆ? ಅನುಮಾನ-ಅಂಜಿಕೆಗಳ ಲೆಕ್ಕಾಚಾರವೆ ಗೊತ್ತಿಲ್ಲ ಈ ಪುಂಡಪ್ರಚಂಡನಿಗೆ. ಹಾಗೆ ಕೇಳಿದರೆ ಲೆಕ್ಕಾಚಾರವೆಂಬುದೆ ಇವನಿಗೆ ಗೊತ್ತಿಲ್ಲ. 'ತಲೆಯಲ್ಲಿ ಲೆಕ್ಕ, ಕೈಯಲ್ಲಿ ರೊಕ್ಕ' ಇದೇ ನಿಜವಾದ ಆಚಾರ ಎಂಬುದು ಇವನ ವ್ಯವಹಾರ ತತ್ತ್ವ. ಈ ತತ್ತ್ವದಲ್ಲಿ ಬರಿಯ ಧಾರ್ಷ್ಟ್ಯವಷ್ಟೇ ಅಲ್ಲ, ಧಾರಣಾತ್ಮಕವಾದ ಧರ್ಮವೂ ಇದೆ. ಲೆಕ್ಕವಿಟ್ಟಲ್ಲಿ ಒಂದು ವ್ಯಕ್ತಿಯ ಸಮಾಧಾನವಾಗುವುದು, ನಿಜ; ಆದರೆ ದೇಶದ ಹಿತವನ್ನೆ ಗುರಿಯಾಗಿಟ್ಟುಕೊಂಡು ಹೋರಾಡುವ ವೀರನಿಗೆ ವ್ಯಕ್ತಿಗಳ ಚಿಂತೆ ಯಾಕೆ? ಸೀತೆಯನ್ನು ಹುಡುಕುವ ಹನುಮಂತನು ರಾವಣನ ತೋಟದಲ್ಲಿ ತಿಂದ ಬಾಳೆಹಣ್ಣುಗಳ ಲೆಕ್ಕವನ್ನಿಟ್ಟಿದ್ದರೆ ಎಷ್ಟು ಅಪಹಾಸ್ಯವೆನಿಸುತ್ತಿದ್ದಿತು! ಭಕ್ತರು ತಂದಿಟ್ಟ ತೆಂಗುಗಳ ಲೆಕ್ಕವನ್ನು ದೇವನಿಡುವುದಾದರೆ ಎಷ್ಟು ಕ್ಷುಲ್ಲಕವೆನಿಸಬಹುದಾಗಿತ್ತು! ಇಂತಹ ಅಪಹಾಸ್ಯದ ಪ್ರದರ್ಶನವನ್ನು ನಮ್ಮ ಪುಂಡ ಪೂಜಾರಿ ಮಾಡಲಿಲ್ಲ ಎಂಬುದು ಕರ್ನಾಟಕಕ್ಕೆ-ಅತ ಏವ-ಅಖಿಲ ಹಿಂದುಸ್ಥಾನಕ್ಕೆ ಹೆಮ್ಮೆಯ ಮಾತು.

ಪುಢಾರೆಪ್ಪನು ನಮ್ಮವನು ಎಂಬ ಕೇವಲ ಬಣ-ಹೆಮ್ಮೆಗಾಗಿ ಅವನನ್ನು ನಾವು ದೇವನೊಡನೆ ಹೋಲಿಸುವುದಿಲ್ಲ. ಹಾಗೆ ಕೇಳಿದರೆ ನಾವು ಮರುಳ ಭಕ್ತರು, ಅದಕಾಗಿಯೆ 'ನಮ್ಮವನು' ಎಂದು ತಪ್ಪು ತಿಳಿದುಕೊಂಡಿದ್ದೇವೆ. ಆದರೆ ಅವನೊ-ಹಿಂದುಸ್ಥಾನಕ್ಕೆಯೆ ಹನುಮಪ್ಪನು! ಅವನ ಸೇವಾ ಅಖಿಲ ಹಿಂದುಸ್ಥಾನಕ್ಕಾಗಿ; ಅವನ ವೇಷ, ಅಖಿಲಹಿಂದುಸ್ಥಾನದ ಹಂಡಬಂಡ ಮಾದರಿ; ಅವನ ಭಾಷೆ, ಅಖಿಲಭಾರತದ ಝೆಂಡಾ ಊಂಚಾ ರಹೇ; ಅವನ ವಿಚಾರ, ಅಖಿಲಹಿಂದುಸ್ಥಾನದ ಶಿಸ್ತಿಗಾಗಿ. ಹೆಚ್ಚೇನು! ಅಖಿಲ ಹಿಂದುಸ್ಥಾನವೆಂದರೆ ಅವನು, ಅವನೆಂದರೆ ಅಖಿಲಹಿಂದುಸ್ಥಾನ.

ತನ್ನ ಅಖಿಲಹಿಂದುಸ್ಥಾನ ಸ್ವರೂಪದಿಂದ ಇವನು ಕರ್ನಾಟಕದ ಕಲ್ಯಾಣವನ್ನು ಕಟ್ಟಿಕೊಂಡಿದ್ದಾನೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಕರ್ನಾಟಕವೆಂದರೆ ಇಂದು ಇವನ 'ಕರ-ನಾಟಕ'ವಾಗಿದೆ, ಅರ್ಥಾತ್ ಕೈಯಲ್ಲಿ ಕುಣಿಯುತ್ತಲಿದೆ. ಶಂಖ-ಚಕ್ರ-ಗದಾ-ಪದ್ಮಗಳನ್ನು ಧರಿಸಿದ ನಾರಾಯಣನ ನಾಲ್ಕು ಕರಗಳಂತೆ ಕರ್ನಾಟಕಕ್ಕೆ ಇವನ 'ಕರ'ಗಳು. ಇವನು ಊದುವ ಶಂಖನಿನಾದದಲ್ಲಿ ಬೇರೆ ಎಲ್ಲ ಸದ್ದು ಅಡಗುವದು; ಇವನ ಚಕ್ರದಲ್ಲಿ ಸಿಲುಕಿ ಪಾಪಿಗಳೆಲ್ಲ ದುರಂತಕ್ಕೀಡಾಗುವರು; ಇವನ ಗದಾಘಾತದಿಂದ ಕರ್ನಾಟಕವು ಕುರುಕ್ಷೇತ್ರವಾಗುವುದು; ಇವನ ಪದ್ಮವನ್ನು ನೋಡಿದೊಡನೆ ಲಕ್ಷ್ಮಿ ಇದ್ದಲ್ಲಿಂದ ಓಡಿಬರುವಳು. ಒಟ್ಟಾರೆ—ಕರ್ನಾಟಕದಲ್ಲಿ ಧರ್ಮಗ್ಲಾನಿಯೂ ಅಧರ್ಮದ ಅಭ್ಯುತ್ಥಾನವೂ ಇದೆ ಎಂಬುದನ್ನು ಇವನ ಅವತಾರದಿಂದಲೆ ತಿಳಿದುಕೊಳ್ಳಬಹುದಾಗಿದೆ. ಆದರೆ ತನ್ನ ಅಖಿಲಹಿಂದುಸ್ಥಾನ ಸ್ವರೂಪದಿಂದ ಇವನು ಆ ಗ್ಲಾನಿಯನ್ನೂ ಆ ಅಭ್ಯುತ್ಥಾನವನ್ನೂ ಹೊಡೆದೋಡಿಸಲು ಶಕ್ತನಾಗಿದ್ದಾನೆ. ಕರ್ನಾಟಕದಲ್ಲಿ ಅದೆಷ್ಟು ಪಕ್ಷೋಪಪಕ್ಷಗಳು! ಅದರೇನು? ಈ ಹಾರುವ ಹನುಮಪ್ಪನು ಕ್ಷಣಾರ್ಧದಲ್ಲಿ ಅವನ್ನು ಉಲ್ಲಂಘಿಸಬಲ್ಲನು. ಹೇಗೆನ್ನುವಿರಾ? ಇವನು ಅಖಿಲಹಿಂದುಸ್ಥಾನ; ಮಿಕ್ಕವರದು ಬರಿಯ ಕರ್ನಾಟಕದ ಅಭಿಮಾನ. ಅದಕಾಗಿ ಜಾತಿಯ ಬಹುಮತದ ಹೆಮ್ಮೆಯಿಂದ ಹಾರಾಡುವ ಬ್ರಾಹ್ಮಣೇತರರನ್ನು ಇವನು ಬಾಲಕ್ಕೆ ಕಟ್ಟುವನು. ಅದರಂತೆಯೆ 'ಕರ್ನಾಟಕವೆ ಜಾತಿ' ಎಂಬ ಬ್ರಾಹ್ಮಣರನ್ನೂ ಬಾಲದಿಂದ ಬಿಗಿಯುವನು. ಎಲ್ಲರನ್ನೂ ಬಾಲದಿಂದ ಬಿಗಿದು, ತಾನು ಎಲ್ಲರ ಮುಂದಾಗಿ ಇವನು ತನ್ನ ಮುಂದಾಳುತನವನ್ನು ಸಾರುವನು. ಹೀಗೆ ಬಿಗಿದವರನ್ನು ಕೆಳಗಿಟ್ಟು, ಬಾಲದ ಸುರುಳಿಸಿಂಹಾಸನವನ್ನು ಮಾಡಿ, ಮೇಲಿನವನೆಂದು ಮೆರೆಯುವ ಮಂಗತನ ಇವನಲ್ಲಿಲ್ಲದಿದ್ದರೆ, ಕರ್ನಾಟಕವು ಇಂದಿಗೂ ತಲೆ ಎತ್ತುತ್ತಿರಲಿಲ್ಲ. ತಲೆ ಎತ್ತಿದ್ದಿಲ್ಲವೆಂದರೆ ತಗ್ಗಿಸುವ ಪ್ರಸಂಗವೂ ಬರುತ್ತಿರಲಿಲ್ಲ.

—o—

ಶಾಕುಂತಲ ಕಥಾನಿರೂಪಣೆ

★

ವಿದ್ವಾನ್ ಕೆ. ಎಲ್. ಎನ್. ಉಪಾಧ್ಯಾಯ, ಕಾರಕಳ

ದುಷ್ಯಂತನ ಕತೆ ನಮ್ಮ ಪುರಾಣಗಳಲ್ಲಿ ಬಂದೆಬಂದಿದೆ. ಕಾಳಿದಾಸ ಅದೇ ಕತೆಯನ್ನೇ ವಸ್ತುವಾಗಿಟ್ಟುಕೊಂಡು, ಸರ್ವಕಾಲ ಸರ್ವದೇಶ ಸರ್ವಜನಮಾನ್ಯವಾದ ನಾಟಕವನ್ನು ಬರೆದಿದ್ದಾನೆ. ಪೌರಾಣಿಕ ನೀರಸಕಥೆಯಲ್ಲಿ ರಸದ ಝುರಿಯನ್ನು ಹರಿಸುವುದಕ್ಕೆ ಮಾಡಿದ ಅವನ ಕೈವಾಡಗಳು ಹೇಗೆ ಹೇಗೆ ಇವೆ?

★

ಇತಿಹಾಸ ಪ್ರಸಿದ್ಧವಾದ ಇತಿವೃತ್ತವನ್ನವಲಂಬಿಸಿ ನಾಟಕವನ್ನು ರಚಿಸಬೇಕೆಂಬ ಕ್ರಮವು ಸಂಸ್ಕೃತ ಸಾಹಿತ್ಯದಲ್ಲಿ ಪ್ರಸಿದ್ಧವಾಗಿದೆ. **ಕಾಳಿದಾಸನು** ಈ ಸಂಪ್ರದಾಯವನ್ನನುಸರಿಸಿ **ಶಾಕುಂತಲ** ನಾಟಕವನ್ನು ಬರೆದಿರುವನು. **ಭಾರತ**ದಲ್ಲಿಯೂ **ಪದ್ಮ**ಪುರಾಣದಲ್ಲಿಯೂ ದುಷ್ಯಂತರಾಜನ ಆಖ್ಯಾಯಿಕೆಯು ಪ್ರಥಿತವಾಗಿದೆ. ಈ ಪುರಾಣಕತೆಯನ್ನೇ ಕವಿಯು ಹೇಳಿದನಾದರೂ ಪೌರಾಣಿಕ ರೀತಿಯನ್ನು ಅನುಸರಿಸಲಿಲ್ಲ. ಕವಿಯ ಉಪದೇಶ ಕಾಂತಾಸಮ್ಮಿತೋಪದೇಶ. ವೇದ-ಶಾಸ್ತ್ರಗಳು ಪ್ರಭುವಿನ ಆಜ್ಞೆಯಂತೆ; ಮಿತ್ರನ ಸಲಹೆಗಳಂತೆ. ಹೀಗಾದುದರಿಂದಲೇ ವೇದ-ಶಾಸ್ತ್ರಗಳಿಂದ ಕಾವ್ಯದ ವೈಶಿಷ್ಟ್ಯ! ಸುಂದರ ದರ್ಶನ, ಜೊತೆಗೆ ಜೀವನವಿಕಾಸ ಕಾವ್ಯಾನುಸಂಧಾನದಿಂದುಂಟಾಗುವುದು. ಇತ್ತ ಶಿಕ್ಷೆ, ಅತ್ತ ರಸಾನುಭವ ಇವೆರಡರ ದಿವ್ಯಸಂಗಮ ಕಾವ್ಯ.

ಬಹುಕಾಲದಿಂದ ಪ್ರಸಿದ್ಧವಾದ ಇತಿವೃತ್ತವನ್ನೇ ಕಾಳಿದಾಸನು ಶಾಕುಂತಲದಲ್ಲಿ ಪ್ರತಿಪಾದಿಸಿದ್ದರಿಂದ, ಶಾಕುಂತಲವು ಕಾಳಿದಾಸನ ನವೀನ ಸೃಷ್ಟಿಯಲ್ಲ; ಹೊಸ ಕಲ್ಪನೆ. ಕಾಳಿದಾಸನಂತಹ ಶ್ರೇಷ್ಠ-ಕವಿಯ ಕಥಾನುಸಂಧಾನದ ಫಲವೇ ಇಂದು ಲೋಕವಿಖ್ಯಾತವಾದ ಶಾಕುಂತಲ ನಾಟಕವೆನ್ನಬಹುದು. ಕವಿಯು ದುಷ್ಯಂತ-ಚರಿತ್ರೆಯನ್ನು ರಸಮಯ ದೃಷ್ಟಿಯಿಂದ ಕಂಡು, ಸಹೃದಯ ಹೃದಯದಿಂದ ಮಥಿಸಿ, ನಾಟಕ ರೂಪದಲ್ಲಿ ಹೊರಗೆಡಹಿದನು. ಪರುಷಸ್ಪರ್ಶದಿಂದ ಕಬ್ಬಿಣವೂ ಬಂಗಾರವಾದಂತೆ, ಪೌರಾಣಿಕ ಕತೆಯು ಕವಿಮಹಿಮೆಯಿಂದ ಸಂಸ್ಕೃತ ಸಾಹಿತ್ಯದ ಶಿರೋರತ್ನವೆಂಬಂತೆ ಬೆಳಗುತ್ತಿದೆ.

ನಾಟಕದಲ್ಲಿ ಬರುವ ವ್ಯಕ್ತಿಗಳ ಸಂಪೂರ್ಣ ಪರಿಚಯ ಕವಿಗೆ ಇರಬೇಕು. ಆಯಾಯ ಪಾತ್ರಗಳ ಮಾನಸಿಕ ಪರಿಣಾಮಗಳನ್ನೂ ವಿರಳತಗಳನ್ನೂ ಕವಿಯು ಜೀರ್ಣಿಸಿಕೊಂಡಿರಬೇಕು. ಚಿತ್ರಿಸಿದ ಪಾತ್ರಗಳಲ್ಲಿ ಆತ್ಮೀಯತೆಯು ಕವಿಗೆ ಎಷ್ಟೆಷ್ಟು ಅಧಿಕವಾಗಿರುವುದೊ, ಸಾಮಾಜಿಕನಿಗೆ ಆ ಕತೆಯು ವಿಶೇಷವಾಗಿ ಹೃದಯಂಗಮವಾಗಿರುವುದು.

ನಾಟಕವೆಂದರೆ ಸುಂದರ ದೃಶ್ಯಗಳ ಒಂದು ಸ್ತಬಕ. ಒಂದಲ್ಲ, ಎರಡಲ್ಲ, ನೂರಾರು ದೃಶ್ಯಗಳು ನಾಟಕದಲ್ಲಿ ಬಂದುಹೋಗುವುವು. ಅವುಗಳಿಗೆ ಪರಸ್ಪರ ಸಂಬಂಧವಿದೆ, ನಿರೀಕ್ಷೆಯಿದೆ. ಕವಿಯು ಜೋಡಿಸಿದ ಒಂದೆ ಒಂದು ದೃಶ್ಯ ಕಡಿಮೆಯಾದರೂ ನಾಟಕವು ಸಚ್ಛಿದ್ರವಾಗಿ ಕಾಣುವುದು. ಇಂತಹ ದೃಶ್ಯಗಳು – ಸನ್ನಿವೇಶಗಳು—ನಾಟಕಕ್ಕೆ ಪೋಷಕಗಳು.

ಪಾತ್ರಗಳು ಶುದ್ಧವಾದಷ್ಟು ಮೇಲು. ಅಂಗರಸವಾಗಲಿ, ಅಂಗಿರಸವಾಗಲಿ ಜ್ವಲಿಸುವ ಅಗ್ನಿಯಂತಿದ್ದು, ಪಾತ್ರಗಳು ಅದರಲ್ಲಿ ಪುಟವಿಟ್ಟಂತಿರಬೇಕು. ಅದರಿಂದ ಸಾಮಾಜಿಕನ ಬರಟುಬುದ್ಧಿಗೆ ಶಿಕ್ಷೆಯೂ ಜೊತೆಗೆ ಬೋಧೆಯೂ ಉಂಟಾಗುವುದು.

ಸೌಂದರ್ಯನಿರೀಕ್ಷಣೆಯೊಂದೇ ಜೀವನ ಸರ್ವಸ್ವವಲ್ಲ. ಸುಂದರ ದರ್ಶನವೊಡನೆ ಬೌದ್ಧಿಕ ವಿಕಾಸ, ಮಾನಸಿಕ ಜಾಗ್ರತಿ ಇವು ಸೇರಿದ್ದರೆ ಕಾವ್ಯವು ಹಿಡಿದ ಪಂಜು; ಎತ್ತಿದ ಜ್ಯೋತಿ!

ನಾಯಕನು ಉದಾತ್ತನಾಗಿರಬೇಕು. ಅದರಿಂದ ಸಾಮಾಜಿಕನ ಹೃದಯ ವಿಕಾಸಕ್ಕೆ ಅವಕಾಶ ಹೆಚ್ಚು. ನಾಟಕದಲ್ಲಿ ಬರುವ ಎಲ್ಲ ಸನ್ನಿವೇಶಗಳೂ ನಾಯಕನ ಉದಾರಕರ್ಮಗಳಿಗೆ ಪೋಷಕವಾಗಿರಬೇಕು.

ಕವಿಗೆ ಮೂಲಕತೆಯೊಂದು ನೆಪ ಮಾತ್ರ; ಕವಿಕೌಶಲ್ಯವನ್ನು ಅದರಿಂದ ತಿಳಿಯಬಾರದು. ಮೂಲಕತೆಯು ಅನುಸ್ಯೂತವಾಗಿರುವ ಮಾಲಾರಜ್ಜುವಿನಂತೆ. ಕವಿಕಲ್ಪನೆಗೊಳಪಟ್ಟ ವರ್ಣನೆಗಳು, ಸನ್ನಿವೇಶಗಳು ಅದರಲ್ಲಿ ಸುರಿದ ಬಣ್ಣದ ಹೂಗಳಂತೆ; ರನ್ನಮಣಿಗಳಂತೆ.

ದುಷ್ಯಂತನು ತೀವ್ರ ಮನೋವೃತ್ತಿಯ ಒರ್ವ ಚಕ್ರವರ್ತಿಯು. ಮೃಗಬೇಟೆಯ ಸಂಬಂಧ ಕಾಡಿಗೆ ಹೋದವನು, ಋಷ್ಯಾಶ್ರಮ

ದಲ್ಲಿ ಪವಿತ್ರಳಾಗಿದ್ದ ಶಕುಂತಲೆಯನ್ನು ಮೋಹಿಸುವನು. ವನಮಧ್ಯೆ ದಟ್ಟವಾಗಿ ಬೆಳೆದ ಪೊದರ ಮರೆಯಲ್ಲಿ ಮಗಮಗಿಸುವ ವನಸುಮವನ್ನು—ಆಕಸ್ಮಿಕವಾಗಿ ಪಾಂಥನೊಬ್ಬನು ಅಪೇಕ್ಷಿಸಿದಂತೆ. ದುಷ್ಯಂತನು ಕಾಮುಕನಂತೆ ತುಡುಕಲಿಲ್ಲ. ಮರೆಯಾಗಿ ನಿಂತು ಸಮಯ ಪ್ರತೀಕ್ಷಿಸುತ್ತಿದ್ದನು. ಇತ್ತ ಶಕುಂತಲೆಯು ಲತೆಗಳಿಗೆ ನೀರೆರೆವ ಭರದಲ್ಲಿ, ಸ್ಥಾನೋಚ್ಚಲಿತ ಮರಿದುಂಬಿಯೊಂದು ಆಕೆಯ ಮುಖಮಂಡಲದಲ್ಲಿ ತಾಂಡವವಾಡುವುದು. ಮುಗ್ಧೆ ಶಕುಂತಲೆಗಿದು ಸಹನವಾಗಲಿಲ್ಲ. ಮುಂದೆ ದುಷ್ಯಂತನೆಂದಂತೆ "ಚಲಾಪಾಂಗಾಂದೃಷ್ಟಿಂ ಸ್ಪೃಶಸಿ ಬಹುಶೋ ವೇಪಥುಮತೀಂ। ರಹಸ್ಯಾಖ್ಯಾಯೀವ ಸ್ವನಸಿ ಮೃದುಕರ್ಣಾಂತಿಕಚರಃ ಕರೌ ವ್ಯಾಧುನ್ವತ್ಯಾಃ ಪಿಬಸಿ ರತಿಸರ್ವಸ್ವಮಧುರಂ ॥ ವಯಂ ತತ್ತ್ವಾನ್ವೇಷಾನ್ಮಧುಕರ ಹತಾಸ್ತ್ವಂ ಖಲು ಕೃತೀ ॥" ಕಾಮುಕನ ನಿರ್ವ್ಯಾಜ ಪ್ರೀತಿಪ್ರದರ್ಶನವೆಂಬಂತೆ ತುಂಬಿಯ ಝೇಂಕಾರ. ಅನೇಕ ಪುಷ್ಪಗಳನ್ನೊತ್ತಿ ತಬ್ಬಿತುಬ್ಬಿ ಮಧುರ ರಸಾಸ್ವಾದನೆ ಮಾಡಿದ ಪಾಪವೇ ಮೂರ್ತಿವೆತ್ತಂತೆ ಕರ್ಪೇರಿದ ಮೈಸಿರಿ. ಇದನ್ನು ಕಂಡು ಶಕುಂತಲೆಯಂತಹ ಸಾಧ್ವೀಮಣಿಯು ಸಹಿಸುವಳೆಂತು? ಎರಡೂ ಕೈಗಳಿಂದ ನಿವಾರಿಸುವಳು, ಆದರೆ ಸಾಧ್ಯವಾಗಲಿಲ್ಲ. ಆಗ 'ಭೀತಾನಾಂ ಭಯನಾಶನ'ನೆಂಬಂತೆ ದುಷ್ಯಂತನು ಮುಂದುವರಿದು ಭ್ರಮರಬಾಧೆಯನ್ನು ಪರಿಹರಿಸುವನು. ಮುಂದೆ ದುಷ್ಯಂತ-ಶಕುಂತಲೆಯರ ಲೀಲಾನಾಟಕದ ಸೂಕ್ಷ್ಮ ನಿರೂಪಣೆಯೇ ಭ್ರಮರ ವೃತ್ತಾಂತ. ನಾಟಕವನ್ನೋದುತ್ತ ಸಾಮಾಜಿಕನಿಗೆ ಭ್ರಮರಲೀಲೆಯನ್ನು ಮೊದಲು ತೋರ್ಪಡಿಸಿದ ಕವಿಯ ಚಮತ್ಕಾರವು ವೇದ್ಯವಾಗುವುದು. ಐದನೆಯ ಅಂಕದಲ್ಲಿ "ಅಭಿನವ ಮಧುಲೋಲುಪೋ ಭವಾನ್ ತಥಾ ಪರಿಚುಂಬ್ಯ ಚೂತ ಮಂಜರೀಂ। ಕಮಲ ವಸತಿ ಮಾತ್ರನಿರ್ವೃತಃ ವಿಸ್ಮೃತೋಸ್ಯೇನಾಂ ಕಥಂ" ಎಂಬುದಾಗಿ ಹಂಸಪದಿಕೆಯು ಹಾಡುತ್ತ ದುಷ್ಯಂತನ ಮಧುಕರೀ ವೃತ್ತಿಯನ್ನು ವ್ಯಂಗ್ಯವಾಗಿ ಸೂಚಿಸಿದ್ದಾಳೆ.

ಮುಂದಿನ ಕತೆಯನ್ನು ನಿರೀಕ್ಷಿಸೋಣ. ಶಕುಂತಲೆಯನ್ನು ಮದುವೆಯಾಗಿ ರಾಜಧಾನಿಗೆ ಮರಳಿದ ದುಷ್ಯಂತನಿಗೆ ಅನಂತರ ಶಕುಂತಲೆಯ ನೆನಪಾಗುವುದಿಲ್ಲ. ಕೊನೆಗೆ ಶಕುಂತಲೆಯೇ ಸ್ವಂತ ಸನ್ನಿಧಾನಕ್ಕೆ ಚಿತ್ತಯಿಸುವಳು. ಆಗಲೂ ಆಕೆಯ ಗುರುತನ್ನು ಹಿಡಿಯಲಿಲ್ಲ ಪುಣ್ಯಾತ್ಮ. ಶಾರ್ಙ್ಗರವನೆಂದಂತೆ ಮರವೆಯೊ, ಮದಾಂಧತೆಯೊ, ಶಾಪವೊ, ಕೋಪವೊ ಬಲ್ಲವರಾರು? ಅಂತೂ ದುಷ್ಯಂತನ ವಿಭವಕ್ಕೆ ಮನಸೋತು ಹುಡುಗಿಯೊಬ್ಬಳು ಹಣ್ಣಾದಳು; ಬಾಲ್ಯದ ಚಾಪಲ್ಯಕ್ಕೊಳಗಾಗಿ ಜೀವಹಿಂಡಿಕೊಂಡಳು. ಕವಿಯು ತನ್ನ ಕೈವಾಡವನ್ನೀಗ ಪ್ರದರ್ಶಿಸಬೇಕಾಯಿತು. ಹೀಗೆಯೆ ಬಿಟ್ಟರೆ ನಾಯಕನಿಗೆ ಕುಂದು. ಸಾಮಾಜಿಕನೂ ದುಷ್ಯಂತನನ್ನು ಅವಹೇಳಿಸುವಂತಾಗಿದೆ. ಇದನ್ನು ನಿವಾರಿಸುವುದಕ್ಕಾಗಿ ದೂರ್ವಾಸಶಾಪವನ್ನು ಕವಿಯು ಮಧ್ಯೆ ಸೇರಿಸಿದನು.

ದೂರ್ವಾಸನ ಶಾಪಪ್ರಭಾವದಿಂದ, ದುಷ್ಯಂತನನ್ನು ದೂರುವುದರ ಬದಲಾಗಿ ಕನಿಕರಪಡುವಂತಾಗಿದೆ. ದುಷ್ಯಂತನು ನಾವೆಣಿಸಿದಂತೆ ಧೂರ್ತನಲ್ಲ; ಶಾಪವು ಅವನನ್ನು ಹಾಗೆ ಮಾಡಿತಷ್ಟೆ! ಮೊದಲನೆಯ ಅಂಕದಲ್ಲಿ "ಪರಿಗ್ರಹಬಹುತ್ವೇಪಿ ದ್ವೇ ಪ್ರತಿಷ್ಠೇ ಕುಲಸ್ಯ ಮೇ ॥ ಸಮುದ್ರವಸನಾ ಚೋರ್ವೀ ಸಖೀ ಚ ಯುವಯೋರಿಯಂ" ಎಂದು, ಅಂತಃಪುರದ ಮಂದಿ ಎಷ್ಟಿದ್ದರೂ ಶಕುಂತಲೆಯೂ ವಸುಂಧರೆಯೂ ಇವರ್ವರೇ ತನ್ನ ಕುಲಸ್ಥಾಪಕರೆಂದು ಇತರೋರ್ವರಲ್ಲಿ ಇಬ್ಬರನ್ನೂ ಮನ್ನಿಸಿಲ್ಲವೆ? ಆದರೆ ವಿಧಿಗೆ ವಿವೇಕ ಸಾಲದು. ಗುಲಾಬಿ ಹೂವಿಗೆ ಮುಳ್ಳಿನ ಹಂದರವನ್ನು ಹೊದಿಸಿದೆ. ವಿಧಿಯು ಪಾವನ ಚಾರಿತ್ರ್ಯವು ದುಷ್ಯಂತನ ಉದಾರಭವಿಷ್ಯದಲ್ಲಿ ವಿಯೋಗದ ದುರಂತವನ್ನು ಹುದುಗಿಸಿಟ್ಟಿತು. ಅದೇ ದೂರ್ವಾಸಶಾಪ. ಅತ್ಯಂತ ಸಿಡುಕುಸ್ವಭಾವದವನಾದ ದೂರ್ವಾಸನೊಮ್ಮೆ ಕಣ್ವಋಷಿಯ ಆಶ್ರಮಕ್ಕೆ ಚಿತ್ತಯಿಸುವನು. ಆತನು ಆಶ್ರಮಕ್ಕೆ ಬಿಜಯಂಗೈದುದೂ ದುಷ್ಯಂತನು ಆಶ್ರಮದಿಂದ ಬೀಳ್ಕೊಂಡುದೂ ಒಂದೇ ದಿನ. ಶಕುಂತಲೆಯು ದುಷ್ಯಂತನನ್ನೇ ಧ್ಯಾನಿಸುತ್ತ ವಿವಶಳಾಗಿದ್ದಳು. ತನ್ನನ್ನೇ ತಾನು ಮರೆತಿರುವಳಾಗಿ ಬಂದ ಅತಿಥಿಯನ್ನು ಮನ್ನಿಸುವಳೆಂತು? ಅತಿಥಿಸತ್ಕಾರ ವಿಮುಖಳಾದ ಶಕುಂತಲೆಯನ್ನು ಕಂಡು, ದೂರ್ವಾಸನಿಗೆ ಮುನಿಸಿನ ಕಿಡಿಗಳನ್ನು ಕೆದರಿದಂತಾಯಿತು. ಅದು ಹೊತ್ತಿ ಉರಿದು ಶಕುಂತಲೆಯ ಕೋಮಲಜೀವನ ವನವನ್ನು ಸ್ವಾಹಾಮಾಡುವುದು. ಸಳಸಳಿಸಿ ಬೆಳೆಯುತ್ತಿದ್ದ ಹಸಿಕಸಿಗೆ ಸಿಡಿಲೆರಗಿದಂತಾಯಿತು.

ರಾತ್ರಿ ವೇಳೆಯೆಷ್ಟುಳಿದಿದೆಯೆಂಬುದನ್ನು ತಿಳಿದು ಬರಲು, ಆಗ ತಾನೆ ಸೋಮತೀರ್ಥದಿಂದ ಮರಳಿದ್ದ ಕಣ್ವನು ಶಿಷ್ಯನನ್ನು ಆಜ್ಞಾಪಿಸುವನು. ಶಿಷ್ಯನು ಹೊರಗೆ ಬಂದು ನೋಡಲಾಗಿ, ಒಂದೆಡೆ ಅರುಣೋದಯವಾಗಿದೆ. ಈ ಸಂದರ್ಭವನ್ನು ಕವಿಯು ಮುದ್ದುಮುದ್ದಾಗಿ ವರ್ಣಿಸಿರುವನು:

"ಯಾತ್ಯೇಕತೋಽಸ್ತಶಿಖರಂ ಪತಿರೋಷಧೀನಾಂ ॥ ಆವಿಷ್ಕೃತೋರುಣ ಪುರಸ್ಸರ ಏಕತೋರ್ಕಃ । ತೇಜೋದ್ವಯಸ್ಯ ಯುಗಪದ್ವ್ಯಸನೋದಯಾಭ್ಯಾಂ ॥ ಲೋಕೋ ನಿಯಮ್ಯತ ಇವಾತ್ಮದಶಾಂತರೇಷು ॥"

ದೂರ್ವಾಸನು ಅನಿರೀಕ್ಷಿತವಾಗಿ ಆಶ್ರಮಕ್ಕೆ ಬಂದು, ದುಷ್ಯಂತನು ನಿನ್ನನ್ನು ಸ್ಮರಿಸದಿರಲೆಂದು ಶಾಪವಿತ್ತಿರುವನು. ಕಣ್ವನು ಸೋಮತೀರ್ಥದಿಂದ ಮರಳಿ ಬಂದಿರುವನಷ್ಟೆ. ಈ ಸಂಧಿಯಲ್ಲಿ ಪೂರ್ವೋಕ್ತ ದೃಶ್ಯವು ಚಿತ್ರಿಸಲ್ಪಟ್ಟಿದೆ. ಶಕುಂತಲೆಯ ಸೌಭಾಗ್ಯವು ಚಂದ್ರನೆಂದು ಈ ಪದ್ಯದಲ್ಲಿ ನಿರೂಪಿತವಾಗಿದೆ. ಅಂತಹ ಚಂದ್ರನು ಪಶ್ಚಿಮಾಂಬುಧಿಯಲ್ಲಿ ಅಸ್ತಂಗತನಾದನು. ಇತ್ತ ದೂರ್ವಾಸನ ಚಂಡ ಪ್ರಚಂಡ ಕೋಪಾಗ್ನಿಯಂತೆ ಸಂಧ್ಯಾರಾಗ ರಂಜಿತ ಸೂರ್ಯೋದಯವಾಗಿದೆ. ಸೂರ್ಯೋದಯದನಂತರ ಚಂದ್ರನು ನಿಸ್ತೇಜನಾದಂತೆ ದೂರ್ವಾಸೋದಯದಿಂದ ಶಕುಂತ-

(೩೭೩ನೆಯ ಪುಟದ ಅಡಿಯಲ್ಲಿ)

ಸಾದರ ಸ್ವೀಕಾರ

೬೩. ರೇಲವೇ ಪ್ರವಾಸಿಗರ ಮಿತ್ರ:— ಬೆಳಗಾಂವಿಯ ರೇಲವೇ ಮಂಡಳದಿಂದ ಪ್ರಕಟವಾಗಿದೆ. ಡೆ. ಅ. ೩೨ ಪುಟಗಳು; ಬೆಲೆಯಿಲ್ಲ.

ಎಂತಹ ಕಲಿತ ಜನ ಕೂಡ— ರೇಲ್ವೆಯ ನಿಯಮಗಳು ಗೊತ್ತಿರದುದರಿಂದ — ಪ್ರವಾಸದಲ್ಲಿ ಹಲವು ಬಗೆಯ — ತೊಂದರೆಗಳನ್ನು ಅನುಭವಿಸಬೇಕಾಗುವುದು. ಮಧ್ಯಮತರಗತಿಯವರೂ ಸಾಮಾನ್ಯ-ಜನರೂ ಪಡುತ್ತಿರುವ ತೊಂದರೆಯನ್ನಂತೂ ದೇವರೇ ಕೇಳಬೇಕು. ಪ್ರವಾಸಿಕರಿಗಿರುವ ಅನುಕೂಲ ಹಕ್ಕುಗಳ ಕಲ್ಪನೆಯನ್ನು ರೇಲ್ವೆಕಂಪನಿಯವರು ಪ್ರಾದೇಶಿಕ ಭಾಷೆಗಳಲ್ಲಿ ಕೊಡದೆ ಇರುವುದರಿಂದಲೂ, ಅಧಿಕಾರ 'ಬಜಾಯಿಸಿ' ತೋರಿಸಬೇಕೆನ್ನುವ ರೇಲ್ವೆನೌಕರರ ಅಧಿಕ-ಪ್ರಸಂಗದ ಮೂಲಕವೂ ಪ್ರವಾಸಿಕರು ಎಷ್ಟೊಂದು ಗೋಳುಗೊಳ್ಳುತ್ತಾರೆಂಬುದು ನಿತ್ಯವೂ ಕಣ್ಣಿಗೆ ಬೀಳುವ ಸಂಗತಿ. ಈ ತೊಂದರೆಯನ್ನು ಕಡಮೆ ಮಾಡುವುದಕ್ಕೆ, ಬೆಳಗಾಂವಿಯ ರೇಲ್ವೆಮಂಡಲವು ೧೦-೧೨ ವರ್ಷಗಳಿಂದ ಕೆಲಸಮಾಡುತ್ತಲಿದೆ. ಜನತೆಗೆ ಬೇಕಾಗುವ ಅನೇಕ ಸೌಕರ್ಯಗಳು ಸಿಕ್ಕುವಂತೆ, ರೇಲ್ವೆ ಕಂಪನಿಗಳೊಂದಿಗೂ ಸರಕಾರದೊಂದಿಗೂ ವ್ಯವಹಾರವನ್ನು ನಡೆಯಿಸಿರುತ್ತದೆ. ಇದರ ಪ್ರಯತ್ನದಿಂದ ಈಗಾಗಲೆ ಅನೇಕ ಸೌಕರ್ಯಗಳು ರೆಲ್ವೆಪ್ರವಾಸಿಕರಿಗೆ ದೊರೆತಿವೆ. ಈ 'ರೇಲವೆ ಪ್ರವಾಸಿಕರ ಮಿತ್ರ'ವು ಬೆಳಗಾಂವಿಯ ರೇಲ್ವೆಮಂಡಳದವರ ಪ್ರಕಟನೆಯು. ನಿಜವಾಗಿಯೂ ಇದು ರೇಲವೇ ಪ್ರವಾಸಿಕರಿಗೆ ಮಿತ್ರನಂತಿದೆ. ಜನಸಾಮಾನ್ಯರು ಇದನ್ನೋದಿ, ಪ್ರವಾಸ ಕಾಲದ ತಮ್ಮ ಹಕ್ಕು-ಬಾಧ್ಯತೆಗಳ ಬಗೆಗೆ ತಿಳುವಳಿಕೆ ಮಾಡಿಕೊಳ್ಳಬೇಕು. ಬೆಳಗಾಂವಿ ರೆಲ್ವೆಮಂಡಳವು ಅಖಿಲಕರ್ನಾಟಕದ ಪ್ರಾತಿನಿಧಿಕ ಸಂಸ್ಥೆಯಾಗುವಂತೆ ಕನ್ನಡಿಗರು ನೆರವನ್ನು ಕೊಟ್ಟು ಅದನ್ನು ತಮ್ಮ ಸಂಸ್ಥೆಯನ್ನಾಗಿ ಮಾಡಿಕೊಳ್ಳಬೇಕು.

೬೪. ತಕ್ಕಡಿ (ವ್ಯಾಪಾರ ಶಾಸ್ತ್ರಗ್ರಂಥ) ಶ್ರೀ. ಎಚ್. ಎಸ್. ಪಾಟೀಲ ಎಂ. ಎ. ಬಿ. ಕಾಮ್ ಅವರು ಬರೆದದ್ದು, ಧಾರವಾಡದ ಮಿಂಚಿನ ಬಳ್ಳಿಯ ೮ನೆಯ ವರುಷದ ೩ನೆಯ ಕುಡಿಯಾಗಿ ಪ್ರಕಟವಾಗಿದೆ. ಕ್ರಾ. ಅ. ೧೬೫ ಪುಟ. ಬೆಲೆ ೧-೪-೦.

೬೫ ಗಾಂಧೀಸಾಹಿತ್ಯ (ಪ್ರಸಾದ ದೀಕ್ಷೆ) ಮಹಾತ್ಮಾ ಗಾಂಧಿಯವರು ಶ್ರೀಮತಿ ಪ್ರೇಮಾಕಂಟಕ ಅವರಿಗೆ ಬರೆದ ಓಲೆಗಳ ಸಂಗ್ರಹದ ಅನುವಾದ. ಸಂಪಾದಕರು ಶ್ರೀ. ಸಿದ್ದವ್ವನಹಳ್ಳಿ ಕೃಷ್ಣಶರ್ಮ. ಪ್ರಕಾಶಕರು ಶ್ರೀ. ಶೇಷಗಿರಿರಾವ್ ಗೋವಿಂದ-ರಾವ್ ಕುಲಕರ್ಣಿ, ಸಾಧನ ಮುದ್ರಣಾಲಯ, ಧಾರವಾಡ. ಕ್ರಾ. ಅ. ೧೫೦ ಪುಟಗಳು. ಬೆಲೆ ೧-೪-೦.

(೪೭೬ನೆಯ ಪುಟದಿಂದ ಮುಂದುವರಿದದ್ದು)

...ಯ ಮಾಂಗಲ್ಯವು ಮಣ್ಣುಗೂಡಿದೆ. ಕವಿಯು ಅವ್ಯಕ್ತವಾಗಿ ...ಅರ್ಥವನ್ನು ಸೂಚಿಸಿರುವನು. ಆದ್ದರಿಂದ ಈ ಪದ್ಯ ಎಷ್ಟು ...ಂಜಕವೋ ಅಷ್ಟೇ ಭವಿಷ್ಯದ ದುರಂತಸೂಚಕವೂ ಆಗಿದೆ. ...ೂರ್ವಾಸಶಾಪದ ತರುವಾಯ, ದುಷ್ಯಂತನು ಶಕುಂತಲೆಯನ್ನು ...ಸ್ಕರಿಸಿದ ದಾರುಣದೃಶ್ಯವನ್ನು ಕವಿಯು ತೋರಿಸುವುದಿಲ್ಲ. ...ದಕ್ಕೆ ಮೊದಲು ಸತಿ-ಪತಿಗಳು ವಿಯುಕ್ತರಾಗಿದ್ದು ಮುಂದೆ ...ಟ್ಟಾಗುವವೆಂಬ ಶಕಾತಂತುವಿನ ಆಧಾರದಲ್ಲಿ ತೂಗುತ್ತಿರುವ ...ೀನಜೀವಿಗಳ ದಾರುಣದೃಶ್ಯವನ್ನು ಕಣ್ಣೆದುರು ಕಟ್ಟಿ ತೂಗಿ...ಾನೆ ಕವಿ. ಶಕುಂತಲೆ ಪತಿಗೃಹಕ್ಕೆ ಹೊರಟಾಗ, ಆಕೆ ಕಂಡ ...ಂದು ನೋಟ ಹೀಗಿದೆ:— "ಹಲಾ ಪಶ್ಯ ನಲಿನೀ ಪತ್ರಾಂತರಿತ...ಪಿ ಸಹಚರಮಪಶ್ಯಂತ್ಯಾತುರಾ ಚಕ್ರವಾಕ್ಯಾ ಕೌತಿ ದುಷ್ಕರಮಹಂ ಕರೋಮಿತಿ."

ಧ್ವನಿಗೆ ಪ್ರತಿಧ್ವನಿ! ಮಾತಿಗೆ ಪ್ರತಿಮಾತು. ಪ್ರೀತಿಯೂ ಕೂಡ ಹಾಗೆಯೇ. ಅನ್ಯೋನ್ಯವಾಗಿದ್ದರೆ ಅದಕ್ಕೆ ರಸವೆನ್ನುವರು. ಇಲ್ಲದಿದ್ದರೆ ರಸವು ಹೋಗಿ ರಸಾಭಾಸವಾಗುವುದು. ಶಕುಂತಲೆಯು ಸ್ವರ್ಗಲೋಕಕ್ಕೆ ತೆರಳಿದ ತರುವಾಯ, ಆಕೆಯ ಸುದ್ದಿ ಸಾಮಾಜಿಕನಿಗೆ ತಿಳಿದಿಲ್ಲ. ಇತ್ತ ದುಷ್ಯಂತನಿಗೆ ಶಕುಂತಲೆಯ ಉಂಗುರವು ಹೇಗೋ ದೊರಕಿತು. ಪೂರ್ವಸ್ನೇಹವು ನೆನಪಿಗೆ ಒಂದು ಆತನು ವಿರಹದುಃಖದಲ್ಲಿ ತೊಳಲುತ್ತಿರುವನು. ಆರನೆಯ ಅಂಕದಲ್ಲಿ ವಿಪ್ರಲಂಭವರ್ಣನೆಯನ್ನು ವಿಶಿವಿಶಾರದಹಾಗೆ ರುಚಿಗೆಡದಂತೆ ಕವಿಯು ಸಾಂಗೋಪಾಂಗ ಮಾಡಿರುವನು. ದುಷ್ಯಂತನಿಗೆ ಶಕುಂತಲೆಯಲ್ಲಿರುವ ಗಾಢಾನುರಾಗವು ವೇದ್ಯವಾಗುವುದು ವಿಪ್ರಲಂಭದಿಂದಲೇ. ವಿಪ್ರಲಂಭವಲ್ಲದಿದ್ದರೆ ದುಷ್ಯಂತ-ಶಕುಂತಲೆಯರ ಪರಸ್ಪರಾನುರಾಗವು, ಕೇವಲ ಅನುಮೇಯವಾಗುತ್ತಿತ್ತು. ದುಷ್ಯಂತನಿಗೆ ಶಕುಂತಲೆಯಲ್ಲೆಂಬಂತೆ ಶಕುಂತಲೆಗೆ ದುಷ್ಯಂತನಲ್ಲಿ ಅನುರಾಗವಿದೆಯೇ ? ಅಥವಾ ತನ್ನನ್ನು ಅವಹೇಳಿಸಿದ ಪ್ರಿಯುಕ್ತ ರಾಜನಲ್ಲಿ ವಿರಕ್ತಿಹೊಂದಿದ್ದಾಳೆಯೇ ? ಸಾಮಾಜಿಕನ ಮುಂದಿರುವ ಸಮಸ್ಯೆಯಿದು. ಸಾನುಮತಿಯು ನಮ್ಮ ಸಮಸ್ಯಾಪೂರ್ತಿ ಮಾಡುವಳು. ಸಾನುಮತಿಯು ಶಕುಂತಲೆಯ ಪ್ರೇಮಸಂದೇಶವನ್ನು ಹೊತ್ತು ತಂದ ದೇವದೂತಿ. ದುಷ್ಯಂತನಿಗೆ ಆಕೆ ಕಾಣಿಸುವುದಿಲ್ಲ. ಅವಳು ತಿರಸ್ಕರಿಣೀ ವಿದ್ಯಾಬಲದಿಂದ ಯಾರಿಗೂ ಗೋಚರಳಾಗುವುದಿಲ್ಲ. ಆಕೆ ಶಕುಂತಲೆಯ ವಿಚಾರವನ್ನು ಸಾಮಾಜಿಕನಿಗೆ ಪ್ರತ್ಯಕ್ಷವಾಗಿ ತಿಳಿಸುವಳು. ನಾಟಕದಲ್ಲಿ ಸಾನುಮತಿಯ ಅಮೃತಸ್ಯಂದಿನೀ ನುಡಿಗಳು ಗುಪ್ತಗಾಮಿನಿಯಂತೆ ಪ್ರವಹಿಸುತ್ತಿವೆ.

‘ ಬಾಸಿಗ ’

ಬರೆದವರು:— ಶ್ರೀ. ರಂ. ಶ್ರೀ. ಮುಗಳಿ. ಮನೋಹರ ಗ್ರಂಥಪ್ರಕಾಶನ ಸಮಿತಿಯ ಪ್ರಕಟನೆ. ಒಟ್ಟು ಪುಟಗಳು; ೧೪೦ ಬೆಲೆ, ೧ ರೂ.

ಇದು ಶ್ರೀ. ಮುಗಳಿಯವರ ಕವನ-ಸಂಗ್ರಹ. ಶ್ರೀ. ಮುಗಳಿಯವರು ಪ್ರೊಫೆಸರೆಂದು ಪ್ರಸಿದ್ಧಿ ಪಡೆದಿದ್ದಾರೆ; ಕಾದಂಬರಿಕಾರರೆಂದು ಹೆಸರುಗೊಂಡಿದ್ದಾರೆ; ನಾಟಕಗಳನ್ನು ಬರೆದಿರುವರೆಂದು ತಿಳಿದಿದೆ —ಕನ್ನಡಿಗರಿಗೆ; ಆದರೆ ಅವರೊಬ್ಬ ಕವಿಯೆಂಬುದು ಬಾಸಿಗದಿಂದಲೆ ಪ್ರಕಟವಾಯಿತು. ಅಲ್ಲಲ್ಲಿ ಆಗಾಗ ಅವರ ಕವನಗಳು ಪ್ರಕಟವಾಗುತ್ತಿದ್ದರೂ ಕವಿಯ ತೂಕವನ್ನು ತಂದುಕೊಟ್ಟಿದ್ದಿಲ್ಲ. ‘ಮುಗಳಿಯವರೂ ಕವಿತೆಗಳನ್ನು ಬರೆಯಬಲ್ಲರೆ ?’ ಎಂದು ಕೆಲವರು ಸಂಶಯಗೊಂಡಿದ್ದಾರೆ. ಅವರು ಈ ‘ಬಾಸಿಗ’ವನ್ನು ಕಟ್ಟಿಕೊಳ್ಳಲಿ; ಸಂಶಯ ದೂರವಾಗಲಿ.

ಈ ಬಾಸಿಗದಲ್ಲಿ ಪೋಣಿಸಿದುವು ಒಟ್ಟು ಎಂಬತ್ತು ಹೂ—ಕವನಗಳು. ಅವುಗಳನ್ನು ಭಾವನೆಗಳಿಗೆ ತಕ್ಕಂತೆ ಭಾಗಮಾಡಲಾಗಿದೆ ಭಕ್ತ ಜೀವನ; ಸೌಂದರ್ಯ-ಜೀವನ; ದಾಂಪತ್ಯ-ಜೀವನ; ಪ್ರೇಮ-ಜೀವನ; ಅಂತರಿಕ ಜೀವನ. ಹೀಗೆ ಬೇರೆ ಬೇರೆ ವಿಭಾಗಗಳಾಗಿ ಮಾಡುವಂತಿದ್ದರೂ ಓದುವಾಗ ಮಾತ್ರ ‘ಭಾಗಗಳವೆಯೆ’ ಎಂದು ಸಂಶಯವು ಬರುವುದು. ಅದಕ್ಕೆ ಎಲ್ಲ ಕವಿತೆಗಳಲ್ಲಿಯೂ ಕಂಡುಬರುವ ಒಂದು ಒಳದನಿಯೆ ಕಾರಣ.

ಶ್ರೀ. ಮುಗಳಿಯವರು ಭಾವುಕರು. ಅವರೆ ಹೇಳಿದಂತೆ ಈ ಕವನಗಳಲ್ಲಿ ‘ಹತ್ತುಹನ್ನೆರಡು ವರುಷಗಳ ಅವಧಿಯಲ್ಲಿ, ಬೇರೆ ಬೇರೆ ಸಂದರ್ಭಗಳು ಒದಗಿ ಬಂದು” ಬರೆಯಲ್ಪಟ್ಟಿವೆ. ಕವನಗಳಿಗೆ ಘಟನೆಗಳೆ ಕಾರಣ; ಒದಗಿದ ಸಂಗತಿಗಳೆ ಕಾರಣ. ಆ ಮೂಲಕ ಇಡಿ ಹೊತ್ತಗೆಯನ್ನು ಓದುವಾಗ ‘ಆ ಅವಧಿಯ’ ಇತಿಹಾಸವು ಕಣ್ಣ ಮುಂದೆ ಬರುವುದು. ಕವನಗಳು ಹೆಚ್ಚಾಗಿ ಅನುಭವಾತ್ಮಕ-ಚರಿತ್ರಾತ್ಮಕವಾಗಿವೆ.

ಬಾಳುವೆಯ ಕುಲುಮೆಯಲ್ಲಿ ಬೆಂದು ಒಳಲಿ ಬೆಂಡಾದ ಬವಣೆಯು ಎದ್ದು ಕಾಣುವುದು ಕೆಲವೆಡೆ; ನೊಂದ ಹೃದಯದ ನೋವು ತೋರುವುದು ಅಲ್ಲಲ್ಲಿ; ‘ತುಟ್ಟ ತುದಿ ಮನನೋಹಪಣ್ಣಿಗುರಿಯಾಯ್ತು’ ನಿರಾಶೆ ಹೊಂದಿದುದು ಕಾಣುವುದು; ನಿರಾಶೆಯ ಮುಸುಕಿನಲ್ಲಿಯೆ ಆಶೆಯ ಬೆಳಕು ಕಾಣಬೇಕೆಂದು ಜಗದೊಡೆಯನ ನೆರವನ್ನು ಪಡೆಯಲು ಪ್ರಾರ್ಥನೆ; ಹುಚ್ಚು ಭಾವಿಕತನವಿಲ್ಲದಿದ್ದರೂ ಸಂಪ್ರದಾಯದ ದೈವವಾದವಿದೆ, ಅನುಭವದ ಸ್ಪಷ್ಟಚಿತ್ರವಿದೆ; ಕವಿಯ ಕಲ್ಪನೆಯಿಲ್ಲ. ಶಬ್ದಗಳು ಸಂಗೀತಮಯವಾಗಿವೆ. ಸಂದರ್ಭದ ಮೇಲೆ ನಿಂತ ಕವಿತೆಗಳು ಇರುವುದರಿಂದ, ಕಾಲಮಿತವಾಗಿವೆ ಕೆಲವು.

ಹೊತ್ತಿಗೆಯ ಸಾಮಾನ್ಯ ಲಕ್ಷಣಗಳನ್ನು ಹೇಳಿದರೂ ವಿಶಿಷ್ಟ ಕವನಗಳು ಕಾಲ-ಪರೀಕ್ಷೆಯನ್ನು ದಾಟಿ ಗೆಲುವಿನಿಂದ ನಿಲ್ಲಬಹುದೆಂದು ಹೇಳಬಹುದು: ಹೊಸ ಯುಗದ ನಾಸ್ತಿಕ ವೃತ್ತಿಗಾಗಿ ಹೇಸಿ-ಹೆದರಿ ‘ನೀನೇ ಉಳಿಸು ತಂದೆ’ ಎಂದು ಮೊರೆಯಿಡುವಾಗ, ಭಕ್ತನ ಕಾತರಭಾವವು ಮನಸ್ಸಿಗೆ ತಾಗುವುದು.

“ನೀನೆ ಕಿತ್ತಿದ್ದಿದ್ದವ್ಯ ಮನುಜ, ಮೂರ್ತಿಗಳೆಲ್ಲ। ಅದುವೆ ಶಿಲೆ, ದೈವತನ ನೆಲೆಯೆ ಅದು?। ಎಂದೊದರಿ ಗದರಿಸುತ ಕೇಳುತಿಪೆ......ಕಾಳಲಾರೆನು ತಾಳೆ, ಬೀಳು ಗುಡಿ ನೋಟವನು। ಏಳು ಬಾ, ಎಲ್ಲಿ ಡೆಗೆ ನಿನ್ನ ಮನೆ ನಿಲಿಸು.”

ಕಾಮನ ಹುಣ್ಣಿಮೆಯಲ್ಲಿ ಮಾನವರ ಪ್ರಜ್ವಲಿತ ಭಾವನೆಗೆ ನಗೆಯಾಡಿದ ತೀಕ್ಷ್ಣ ಮಾತುಗಳಿವೆ. ಕಂಗೆಟ್ಟ ಕನ್ನಡ ನಾಡಿಗೆ ಕಾರಣ ಪುರುಷನೊಬ್ಬ ಬರುತಲಿರುವನೆಂದು ಸಾರುವುದು ‘ಕಾರಣ ಪುರುಷ’. ‘ಬೊಂಬೆ’ಯಲ್ಲಿಯ ಕೂಲಿಕಾರರ ಬಣ್ಣನೆ ಎಷ್ಟು ಸ್ಫುಟವಾಗಿದೆ! “ಹಗಲ ಸೆಕೆ, ಬಿಸಿಲಲ್ಲಿ ನೊಗದ ಭಾರವ ಹೊತ್ತು, ದುಡಿವ ಜನ-ದನವಾಗಿ। ಇಡಿತೆರೆದ ಬಾಯ್ಬರುಗು। ಬಿಸಿಯುಸಿರು ಕೆಂಗಣ್ಣು। ಕಸವಿಸಿಯ ಶಾಪ ಕಂಡೆ।” ಸಂಪ್ರದಾಯವಂತರಾಗಿಯೂ ಸಮಾಜಸುಖವನ್ನೆ ಮುಂದಿಟ್ಟುಕೊಂಡು ‘ಹೆಂಡತಿಯಾಗುವ ಹೆಂಗುಸಿ’ಗೂ ‘ಗಂಡನಾಗುವ ‘ಜಾಣ’ನಿಗೂ ಕೆಲಮಾತು ಒಳ್ಳೆ ಮಾರ್ಮಿಕವಾಗಿ ಹೇಳಿದ್ದಾರೆ: “ಗಂಡನ ಮುತ್ತೊಂದು ತಳೆಯದೆ, ತುಟಿ ಮ್ಯಾಲೆ। ದುಂಡನ್ನ ಮುತ್ತಿನ ಸರವ್ಯಾಕೆ?। ಗಂಡನ ಚಿನ್ನದ ಮೈಯುಪ್ಪಿ ನಲಿಯದೆ ನೂರೆಂಟು ಚಿನ್ನದ ಒಡವೇಕೆ!” ಈ ಸಾಲುಗಳು ಶ್ರೀ ಬೇಂದ್ರೆಯವರ “ಅತ ಕೊಟ್ಟ ವಸ್ತ ಒಡವೆ ನನಗ ಅವಗೆ ಗೊತ್ತು। ತೋಳುಗಳಿಗೆ ತೋಳುಬಂದಿ ಕೆನ್ನೆ ತುಂಬ ಮುತ್ತು”। ಎಂಬುದರ ನೆನಪನ್ನು ತಂದುಕೊಡುವುವು. ಒಂದು ಆಶೆ; ಇನ್ನೊಂದು ಆದರ್ಶ.

‘ಬೆಂಕೆಯೆ ಬಾಳಸವಿ, ಬೆರಕೆಯಿಲ್ಲದ ಬಾಳ್ವೆ ಬರಿನರಕ’ ಎಂದು ಗಂಡ-ಹೆಂಡರಿಗೆ ಉಪದೇಶಿಸಿ ಗೆಳೆಯರಿಗೆ ಮಾತು ಹೇಳುವರು: ‘ವಿಚಾರ ವ್ಯತ್ಯಾಸವಿರುವುದು ಅಸಹಜವಲ್ಲ, ಆದರೂ ಭೇದನೀತಿಯನ್ನು ಬಿಟ್ಟು ‘ಬಾಳೋಣ ಗೆಳೆಯರೆ ಕೂಡಿಯೆ ನಾವೆಲ್ಲ; ಏಳೋಣ ಬೀಳೋಣ ಜೊತೆಯಾಗಿಯೆ” ಇದನ್ನು

(ಮುಂದಿನ ಪುಟ ನೋಡಿರಿ)

ಭಾರತೀಯ ಕಲೆ ಮತ್ತು ಸಾಹಿತ್ಯ ಪರಿಷತ್ತು

(ಬೇಕಾಗಿರುವ ಸಂಸ್ಥೆಯೊಂದರ ಸ್ವರೂಪ ಪರಿಚಯ)

★

ಭಾರತೀಯ ಕಲೆ ಮತ್ತು ಸಾಹಿತ್ಯದ ಬಗ್ಗೆ ಪ್ರಪಂಚದ ಜನತೆಗೆ ಯೋಗ್ಯ ತಿಳಿವಳಿಕೆ ಇಲ್ಲವೆಂಬುದು ಎಲ್ಲರೂ ಅರಿತ ಮಾತು. ಈ ಅಜ್ಞಾನದ ಮೂಲಕ ನಮ್ಮನ್ನು ಇನ್ನಿತರರು ಸರಿಸಮಾನರೆಂದು ನೋಡುವುದಿಲ್ಲ ನಮ್ಮ ಕಲೆಯ—ಸಾಹಿತ್ಯದ–ಯಥಾರ್ಥ ಜ್ಞಾನ ಮಾಡಿಕೊಡುವುದು ನಮ್ಮ ಕರ್ತವ್ಯವಲ್ಲವೆ? ನಮಗಾಗಿ ಹೆರವರು ಹೇಳಬೇಕೆಂದು ಅಪೇಕ್ಷಿಸುವುದು ಸರಿಯಲ್ಲ. ಪ್ರಪಂಚದ ಪ್ರಗತಿಯಲ್ಲಿ ಭಾರತವು ಮುಂದೆ ಮುಂದೆ ಹೆಜ್ಜೆ ಇಡಬೇಕಾಗಿದೆ. ಅದಕ್ಕಾಗಿ ಭಾರತದ ಪಕ್ಷವನ್ನು ಮಂಡಿಸಲು ಇಡಿಯ ಭಾರತದ ಪ್ರಾತಿನಿಧ್ಯವನ್ನು ಪಡೆದ ಸಂಸ್ಥೆಯೊಂದು ಬೇಕು. ಇದರ ಅವಶ್ಯಕತೆ ಬಹುಕಾಲದಿಂದಲೂ ಎನಿಸಿದೆ. ತಡವಾಗಿಯಾದರೂ ಏಕಾಗಲೊಲ್ಲದು, ಈ ಮಾತನ್ನು ಮುಂದುವರಿಸಬೇಕೆಂದು ಬಯಸಿ ಈಗ ಕಾರ್ಯವನ್ನು ಪ್ರಾರಂಭಿಸಲಾಗಿದೆ.

ಭಾರತೀಯ ಸಾಹಿತ್ಯ ಪರಿಷತ್ತಿನ ವಿಚಾರ ಇಂದಿನದಲ್ಲ; ಹದಿನೆಂಟು ವರುಷಗಳ ಹಿಂದೆ ಡಾ. ಕಜಿನ್ಸ್, ಶ್ರೀ. ಜೆ. ಎ. ಚಾಪ್‌ಮನ್ ಮತ್ತು ಡಾ. ಥಾಮಸನ್ ಅವರು ಮೊದಲು ಮಾಡಿದುದು. ಅನಂತರ ಆಗಾಗ ಬೇರೆ ಬೇರೆ ಮಹನೀಯರು ಇದರ ಬೆಳವಣಿಗೆಯನ್ನು ಹರಸಿದ್ದಾರೆ. ಈ ವಿಚಾರವನ್ನು ಮಂಡಿಸಲು ಅನೇಕ ಲೇಖನ ಬರೆದಿದ್ದಾರೆ— ಭಾಷಣಗಳನ್ನು ಮಾಡಿದ್ದಾರೆ. ಆದರೆ ಅದೆಲ್ಲವೂ ಗಾಳಿಯಲ್ಲಿಯೆ ಇತ್ತು. ಇಂದು ಜಗತ್ತಿನಲ್ಲಿ ಎಲ್ಲೆಲ್ಲಿಯೂ ವಿಕಾಸವೂ ತಿರುಗುಮುರುಗೂ ಕಾಣುತ್ತಿವೆ. ಮುನ್ನುಗ್ಗುವವರೆ ಹೆಚ್ಚಾಗಿದ್ದಾರೆ. ಇದೆ ಸಂಧಿ, ನಮ್ಮ ಹೆಜ್ಜೆಯನ್ನೂ ಮುಂದೂಡುವ ಎಂದು ಈ ಭಾರತೀಯ ಪರಿಷತ್ತಿನ ವಿಚಾರ ಮತ್ತೆ ಅಲ್ಲಲ್ಲಿ ತಲೆಯೆತ್ತುತ್ತಲಿದೆ. ಹಿಂದೆ ಕಾಲ ಕಳೆದಂತೆ ಕಳೆಯದೆ, ಕಾರ್ಯರೂಪದಲ್ಲಿ ತರುವ ಪ್ರಯತ್ನವಾಗಬೇಕೆಂದು ಅಪೇಕ್ಷಿಸಿ, ಅದರ ರೂಪರೇಷೆಯನ್ನು ಜನತೆಯ ಮುಂದೆ ಇಟ್ಟಿದೆ. ಮಹನೀಯರು ವಿಚಾರಿಸಬೇಕು.

ಪರಿಷತ್ತಿನ ಗೊತ್ತು-ಗುರಿ :

(೧) ಜಗತ್ತಿನ ಸಾಹಿತ್ಯಪ್ರಪಂಚಕ್ಕೆ ಭಾರತೀಯ ಪ್ರಾದೇಶಿಕ ಭಾಷೆಗಳ (ಸಾಹಿತ್ಯದ) ವೈಭವವನ್ನು ಪರಿಚಯ ಮಾಡಿಕೊಡುವುದು. ಮತ್ತು ಪರಿಷತ್ತು ಭಾರತದ ಪ್ರಾತಿನಿಧಿಕ ಸಂಸ್ಥೆಯಾಗಿ ನಿಂತು ಭಾರತದ ಪ್ರಭಾವವನ್ನು ಜಗತ್ತಿನಲ್ಲಿ ಬೀರುವಂತೆ ಮಾಡುವುದು.

(೨) ಪ್ರಾದೇಶಿಕ ಭಾಷೆಯ ಸಾಹಿತ್ಯವನ್ನು ಬೇರೆ ಬೇರೆ ಭಾಷೆಯನ್ನಾಡುವ ನೆರೆನಾಡಿನವರಿಗೂ ಹೊರನಾಡಿನವರಿಗೂ ತಿಳಿಸಿಕೊಡುವುದು. ಮತ್ತು ಒಳ್ಳೆಯ ಬರೆಹಗಾರರಿಗೆ ವಾರ್ಷಿಕ ಮನ್ನಣೆಯ ಮೂಲಕ ಉತ್ತೇಜನ ಕೊಡುವುದು.

(೩) ಭಾರತದ ಸಾಂಸ್ಕೃತಿಕ ಏಕೀಕರಣವನ್ನು ಮಾಡಲು ಹವಣಿಸುವುದು ವಿವಿಧ ವಿಷಯಗಳ ಅಭ್ಯಾಸದ ಚಟುವಟಿಕೆಗಳನ್ನೂ ಉತ್ಪಾದಕ ಶಕ್ತಿಗಳನ್ನೂ ನಿರ್ಮಿಸುವುದು.

(೪) ಭಾರತದಲ್ಲಿಯ ಒಳ್ಳೆಯ ಸಾಹಿತ್ಯ-ಕಲಾಕೃತಿಗಳಿಗೆ ವಾರ್ಷಿಕ ಬಹುಮಾನಗಳನ್ನು ಕೊಟ್ಟು, ವೈಯಕ್ತಿಕ ಜ್ಞಾನಾಭಿವೃದ್ಧಿಗೆ ಉತ್ತೇಜನ ಕೊಡುವುದು.

(೫) ಅಲ್ಲಲ್ಲಿ ಸಮ್ಮೇಲನಗಳನ್ನು ನೆರೆಯಿಸಿ, ಭಾರತದ ಕವಿಗಳಲ್ಲಿ ಕಲಾಕಾರರಲ್ಲಿ ಐಕ್ಯ-ಸೌಹಾರ್ದಗಳನ್ನು ಬೆಳೆಯಿಸುವುದು. ಅವ-

ತೂಕ-ಮಾಪುಗಳು

ವ್ಯಾಪಾರದಲ್ಲಿ ಪ್ರಾಮಾಣಿಕತೆ ಅವಶ್ಯ!

ಅಂತಹ ಪ್ರಾಮಾಣಿಕತೆಯನ್ನು ಕಾಯಲಿಕ್ಕೆ

ತೂಕದ ಕಲ್ಲುಗಳೂ ★

★ ಅಳೆಯುವ ಮಾಪುಗಳೂ

ಅಳತೆಗೆ ಸರಿಯಾದುವುಗಳಿರಬೇಕು.

ಎಲ್ಲ ಬಗೆಯ ಸಣ್ಣ ದೊಡ್ಡ ತೂಕದ ಕಲ್ಲುಗಳೂ

(ಪಾವುಸೇರು, ಅರ್ಧಸೇರು, ಸೇರು, ಪಂಚೇರು, ಧಡೆ)

ಕಾಳುಗಳನ್ನು ಅಳೆಯುವ ಮಾಪುಗಳೂ

(ಪಾವು, ಅರಪಾವು, ಕಾಲಪಾವು, ಚಟಾಕು)

ನಮ್ಮಲ್ಲಿ ಯೋಗ್ಯವಾದ ಬೆಲೆಗೆ ಸಿಕ್ಕುತ್ತವೆ. ಬನ್ನಿರಿ!

ಎಲ್. ಸಿ. ಥಕ್ಕರ,

ಹತ್ತಿಕಾಳುಸಾಲು, ಹುಬ್ಬಳ್ಳಿ.

ರವರ ವಿಚಾರದೃಷ್ಟಿ ಅನುಭವಗಳನ್ನು ಪರಸ್ಪರ ವಿನಿಮಯ ಮಾಡಲು ಅನುವು ಮಾಡಿಕೊಡುವುದು. ಭಾರತದ ಸಾಹಿತ್ಯಕ—ಕಲೆಯ ಅಭಿವೃದ್ಧಿಯನ್ನು ಮಾಡಲು ಅವಶ್ಯವಾದ ಉಪಾಯಗಳನ್ನು ಕೈಕೊಳ್ಳತಕ್ಕದ್ದು. ಪರಿಷತ್ತು ಮಾತ್ರ ಜಾತೀಯ ಭಾವನೆ, ಪ್ರಾಂತೀಯ ಭಾವನೆಗಳನ್ನು ಮೀರಿ ನಿಂತಿರಬೇಕು. ಪರಿಷತ್ತಿನ ಸದಸ್ಯತ್ವವು ಕೇವಲ ಯೋಗ್ಯತೆಯನ್ನವಲಂಬಿಸಿರಬೇಕು; ಅಲ್ಲಿ ವ್ಯಕ್ತಿ ವಿಚಾರವಿರಕೂಡದು. ಪ್ರಮುಖ ಪಾಶ್ಚಾತ್ಯ ರಾಷ್ಟ್ರಗಳ ಪರಿಷತ್ತುಗಳ ಸದಸ್ಯತ್ವದಂತೆ, ಇದು ಕೂಡ ಮಾನ್ಯ ಪದವಿಯಾಗಬೇಕು.

ಘಟನೆ ಮತ್ತು ಆಡಳಿತ

(೧) ಪರಿಷತ್ತಿನ ಅಂಗಸಂಸ್ಥೆಗಳು ಬೇರೆ ಬೇರೆ ಪ್ರಾಂತಗಳಲ್ಲಿ ಒಂದೊಂದರಂತೆ ಇರಬೇಕು. ದಿಲ್ಲಿ, ಕಲಕತ್ತೆ ಅಥವಾ ಮುಂಬಯಿಯಲ್ಲಿರುವ ಕೇಂದ್ರಸಂಸ್ಥೆಯೊಡನೆ ಇವು ಸಂಬದ್ಧವಾಗಿರಬೇಕು.

(೨) ಪ್ರತಿಯೊಂದು ಪ್ರಾಂತಿಕ ಅಂಗಸಂಸ್ಥೆಯೂ ತನ್ನ ಭಾಷೆಯನ್ನೆ ಪ್ರಾಧಾನ್ಯವಾಗಿಟ್ಟುಕೊಂಡು, ಆ ವರುಷದ ಅತ್ಯುತ್ತಮ ಸಾಹಿತ್ಯ ಕಲಾಕೃತಿಗಳನ್ನು ಕಲೆಹಾಕಬೇಕು. ಅವುಗಳನ್ನು ಕೇಂದ್ರಸಂಸ್ಥೆಗೆ ಕಳುಹಬೇಕು.

(೩) ಕೇಂದ್ರದ ನಿರ್ಣಾಯಕ ಸಮಿತಿಯ ವ್ಯವಹಾರವು ಇಂಗ್ಲಿಷಿನಲ್ಲಿಯಾಗಲಿ ಹಿಂದಿಯಲ್ಲಾಗಲಿ ನಡೆಯಬೇಕು. ಮತ್ತು ನಿಜವಾಗಿಯೂ ಒಳ್ಳೆಯವೆನಿಸಿದ ಕೃತಿಗಳನ್ನು ಬೆಲೆಕಟ್ಟಿ, ಅವುಗಳಿಗೆ ಮನ್ನಣೆ ಕೊಡಬೇಕು. ಆ ಕೃತಿಯನ್ನು ಸಾಮಾನ್ಯ (common) ಭಾಷೆಯಲ್ಲಿ ಅನುವಾದಿಸಿ ಬಿಡಬೇಕು. ಸಾಂಸ್ಕೃತಿಕ, ಸಾಹಿತ್ಯಿಕ, ಕಲೆಯ ಕ್ಷೇತ್ರಗಳಲ್ಲಿ ಅತ್ಯುತ್ತಮವೆನಿಸಿದುದಕ್ಕೆಯೆ ಮನ್ನಣೆ ಸಲ್ಲಬೇಕು.

(೪) ಇಂಗ್ಲಿಷಿನಲ್ಲಾಗಲಿ, ಹಿಂದಿಯಲ್ಲಾಗಲಿ ಪರಿಷತ್ತು ಪಾಕ್ಷಿಕವೊಂದನ್ನು ಪ್ರಾರಂಭಿಸಬೇಕು. ಅದರಲ್ಲಿ ಭಾರತದ ಎಲ್ಲ ಭಾಗದ ಬರೆಹಗಾರರ ಲೇಖನಗಳಿಗೆಡೆ ಕೊಡುವುದಲ್ಲದೆ, ಅಲ್ಲಲ್ಲಿಯ ಸಂಸ್ಥೆಗಳ ವರದಿಯೂ ಬರಬೇಕು. ಅದರ ಆಡಳಿತವು, ಸಂಪಾದಕೀಯ ಮಂಡಲದ ಕಡೆಗೆ ಇದ್ದ ಎಲ್ಲ ಪ್ರಾಂತಗಳ—ಸಂಸ್ಕೃತಿಯ ಘಟಕಗಳ—ಪ್ರಾತಿನಿಧ್ಯವುಳ್ಳದ್ದಾಗಿರಬೇಕು.

(೫) ಭಾರತದ ಎಲ್ಲ ಪ್ರಕಟನೆಗಳ ಪಟ್ಟಿಯೊಂದು ಪರಿಷತ್ತಿನ ಪರವಾಗಿ ಪ್ರಸಿದ್ಧಿಸಲ್ಪಡಬೇಕು. ಅದರ ಸಿದ್ಧತೆಗೆ ಭಾರತದ ಉಳಿದ ಸಂಘ-ಸಂಸ್ಥೆಗಳ ಸಂಶೋಧನ ಸಮಿತಿಗಳ ಮತ್ತು ಸಂಗ್ರಹಾಲಯಗಳ ನೆರವನ್ನೂ ಸಹಕಾರವನ್ನೂ ಪಡೆಯಬೇಕು. ಇದು ವರುಷಕ್ಕೊಮ್ಮೆಯಾಗಬೇಕು. ಇದಕ್ಕೆ ಸರಕಾರದ ಧನಸಹಾಯವನ್ನು ಪಡೆಯಲೂ ಪ್ರಯತ್ನಿಸಬೇಕು.

(೬) ಪರಿಷತ್ತಿನ ಆಡಳಿತವೆಲ್ಲ ಪ್ರತಿವರುಷ ಆಯ್ಕೆಗೊಂಡ ಸಮಿತಿಯ ಅಧಿಕಾರಕ್ಕೊಳಪಟ್ಟಿರಬೇಕು.

ಅಧ್ಯಕ್ಷ, ಉಪಾಧ್ಯಕ್ಷ.

ಮೂವರು ಕಾರ್ಯದರ್ಶಿಗಳು, ಅಲ್ಲದೆ ಪ್ರಾತಿನಿಧಿಕ ಸ್ವರೂಪದ ಕಾರ್ಯಸಮಿತಿಯೊಂದು. ನಿರ್ಣಾಯಕ ಸಮಿತಿ ಮತ್ತು ಸಂಪಾದಕೀಯ ಮಂಡಲ; ಇವು ಕಾರ್ಯಸಮಿತಿಗೆ ಸೇರ್ಪಡೆಯಾಗಿರಬೇಕು.

(೭) ಪ್ರತಿವರುಷ ಅಖಿಲ ಭಾರತ ಸಾಹಿತ್ಯ ಸಮ್ಮೇಳನವೊಂದು ನೆರೆಯಬೇಕು. ಅದಕ್ಕೆ ಎಲ್ಲ ಪ್ರಾಂತಗಳಿಂದ ಪ್ರತಿನಿಧಿಗಳು ಬರಬೇಕು. ಸಮ್ಮೇಲನದಲ್ಲಿ ವಿಚಾರವಿನಿಮಯ, ಸಮಸ್ಯೆಗಳ ಚರ್ಚೆ, ಪರಿಷತ್ತಿನ ಪ್ರಗತಿ ಇವುಗಳ ಬಗ್ಗೆ ವಿಚಾರ ನಡೆದು ಗೊತ್ತುವಳಿಗಳಾಗಬೇಕು. ಸಮ್ಮೇಲನಾಧ್ಯಕ್ಷನು ಎಲ್ಲ ಪ್ರತಿನಿಧಿಗಳಿಂದ ಆಯ್ಕೆ ಹೊಂದಿದವನಿರಬೇಕು.

(೮) ಅಂತರ್ರಾಷ್ಟ್ರೀಯ ಸಮ್ಮೇಲನಗಳಲ್ಲಿ ಭಾರತದ ಪರಿಷತ್ತು ಪ್ರತಿನಿಧಿಯಾಗಬೇಕು. ಪರಿಷತ್ತಿನಿಂದ ಚುನಾಯಿತರಾದ ಪ್ರತಿನಿಧಿಗಳ ತಂಡವೊಂದು ಅಲ್ಲಿಗೆ ಹೋಗಬೇಕು.

ಬಾಲ್ಯಾವಸ್ಥೆಯಲ್ಲಿ ಪರಿಷತ್ತು ಧನಸಹಾಯಕ್ಕಾಗಿ ಸಾಮಾಜಿಕರನ್ನೂ ಸರಕಾರವನ್ನೂ ಬೇಡಿಕೊಳ್ಳಬೇಕು.

ಉದಾರ ಸ್ವದೇಶಾಭಿಮಾನಿಗಳ ಕಾಣಿಕೆಗಳನ್ನು ಪಡೆಯಲು ಪ್ರಯತ್ನ ಮಾಡಬೇಕು.

ಹೆಚ್ಚಿನ ವಿವರಗಳು ಬೇಕಾಗಿದ್ದರೆ ಕೆಳಗಿನ ಮಹನೀಯರೊಂದಿಗೆ ಪತ್ರವ್ಯವಹಾರ ಮಾಡಬೇಕು.

ದೇವಗುಪ್ತ ಪು. ವಿಶ್ವೇಶ್ವರರಾವು
(ನವ್ಯಸಾಹಿತ್ಯ ಪರಿಷತ್)
ಮದಗೊಳ
ವಿಜಗಾಪಟಂ ಜಿಲ್ಲೆ
ಮದ್ರಾಸ ಅಧಿಪತ್ಯ.

(೩೭೮ ನೆಯ ಪುಟದಿಂದ ಮುಂದುವರಿದದ್ದು)

ಒಂದು ಘಟನೆಯ ಹಿನ್ನೆಲೆಯಲ್ಲಿ ಬರೆದುದರಿಂದ, ಆ ಘಟನೆ ತಿಳಿದವರು ಇದರ ಮಾರ್ಮಿಕತೆಯನ್ನು ತಿಳಿಯಬಲ್ಲರು.

ಕನ್ನಡ ನಾಡು ಹೀನದಶೆಗಿಳಿದುದು ಅಭಾವದಿಂದಲ್ಲ ಆಲಸ್ಯದಿಂದೆಂದು, ನಾಡಿಗೆ 'ಚೇತರಿಸಿಕೊಂಡೇಳು ಚೇತನದ ಚೆಲುವೆ' ಎಂದು ಎಚ್ಚರಿಸಿರುವರು: "ಬಲ್ಲವಳು ಇದ್ದು ನೀ ಮರವುಹಾಸಿಗೆಯಲ್ಲಿ! ಸುಳ್ಳು ನಿದ್ದೆಯ ಗೈವುದೆನಿತಾ ಬಲವೆ!"

ಸಂದರ್ಭಪದ್ಯಗಳು ಹೆಚ್ಚಾಗಿರುವದರಿಂದ ಕೊನೆಗೆ ಕೊಟ್ಟ 'ನೆರವು' ನೆರವಿಗೆ ಬರುವುದು ನಿಜ. ಆ ನೆರವಿನ ಸಹಾಯದಿಂದ ಓದಿದಾಗ ಜನತೆಗೆ 'ಬಾಸಿಗದ' ಬಲ ತಿಳಿದೀತು. ಇದೆ 'ಬಾಸಿಗ' ಬಲದ ನೆರವಿನಿಂದ ಶ್ರೀ. ಮುಗಳಿಯವರ ಕಾವ್ಯ, ಜೀವನವು ಪ್ರಾರಂಭವಾಗಿದೆ. ಅದು ಬೆಳೆಯಲಿ; ಕಾಲ ಹಬ್ಬಲಿ—ಎಂದು ನಮ್ಮ ಹಾರಯಿಕೆ. —ನೆರಂಗ.

ನಗೀಗೆ ನೈವೇದ್ಯ

ಜೀವಾನಽ ತಿಂದಬಿಡತಾರ್ರಿ !

ಸಾವುಕಾರ:— ನೋಡು ಭರಮಣ್ಣಾ ! ನಾನು ನೀರೊಳಗ ಬಿದ್ದು ಇನ್ನೇನು ಮುಳಗಿ ಸಾಯುವುದರೊಳಗೇ ಇದ್ದೆ ; ಅಷ್ಟರೊಳಗಽ ನೀನು ಬಂದು ನನ್ನ ಜೀವಾ ಬದಿಕಿಸಿದಿ. ಅದಕ್ಕಾಗಿ ಇಂದ, ಊರ ಜನರನ್ನೆಲ್ಲಾ ಸಭಾ ಕೂಡಿಸಿ, ತುಂಬಿದ ಸಭೆಯೊಳಗ ನಿನ್ನ ಉಪಕಾರಾ ಸ್ಮರಿಸಬೇಕಂತ ಮಾಡೀನಿ !

ಭರಮಣ್ಣ:— ಚೇ ಚೇ ಚೇ ! ಹಾಂಗ ಮಾತ್ರ ಮಾಡಬ್ಯಾಡ್ರಿ ಯಪ್ಪಾ ; ಊರ ಜನಾ ಎಲ್ಲಾ ಕೂಡಿ, ನನ್ನ ಜೀವಾನಽ ತಿಂದಬಿಡತಾರ್ರಿ ಧಣೇರ !

* * *

ದುಡ್ಡಿನ ದೊಡ್ಡಿತೆ

ಆಕೆ:— ಮನುಷ್ಯನ ಹತ್ತರ ದುಡ್ಡೊಂದು ಇದ್ದುಬಿಟ್ಟರ ಸಾಕು; ಆಗಲಾರದ ಕೆಲಸ ಎಲ್ಲಾ ಸಹಜವಾಗಿ ಆಗಿಬಿಡತಾವ !

ಆತ:— ನನಗ ಈ ಮಾತು ಎಂದೋ ತಿಳಿದು ಹೋಗೇದ. ನೋಡು, ವರದಕ್ಷಿಣೀ ಕೊಡಲಿಕ್ಕೆ ನಿಮ್ಮ ಅಪ್ಪನ ಹತ್ತರ ಎರಡು ಸಾವಿರ ರೂಪಾಯಿ ಇಲ್ಲದಿದ್ದರೆ, ನಿನ್ನ ಮದಿವಿ ಆಗೂದು ಶಕ್ಯ ಇತ್ತೇನು ಹೇಳು !

* * *

ತೆರವಿದ್ದ ಜಾಗ !

ಮನೆಗೆ ಬಂದ ತರುಣನನ್ನು ನೋಡಿ ಡಿಸ್ಟ್ರಿಕ್ಟ್ ಕಲೆಕ್ಟರ್ ಧೋಂಡೋಪಂತರು, ಕೆಲ ಹೊತ್ತು ಮಾತನಾಡಿಯಾದ ಮೇಲೆ ಹೇಳಿದರು:

" ಸರಿಸರಿ, ತಿಳದ್ಹಾಂಗಾಯ್ತು ಬಿಡ್ರಿ.. ಒಟ್ಟು ಮಾತಿನ ಅರ್ಥ ಅಂದರ, ನಿಮಗೊಂದು ಜಾಗಾ ಬೇಕಾಗೇದ ಹೌದಲ್ಲೊ ? "

" ಹಂ.. ಹಂ.. ಹೌದು ರಾಯರಽ ! "

" ಆದರ .... ಈಗ ಯಾವುದೂ ಜಾಗಾ ತೆರವು ಇಲ್ಲ ! "

" ಅದೇ.... ಅಂತ ಸುದ್ದೀ ಕೇಳೀ ಬಂದೀನಿ ರಾಯರ !"

" ಯಾವ ಜಾಗಾ ಅದ ? ಯಾರು ಹೇಳಿದರು ನಿಮಗ ?"

" ನಿಮ್ಮ ಆಳಿಯನ ಜಾಗಾ ತೆರವು ಅದಽ ಅಂತ ; ಸ್ವತಃ ನಿಮ್ಮ ಮಗಳು ಚಂಚಲಾನಽ ಹೇಳಿದಳು ನನಗ.... ಹ ಹ ! "

* * *

ಮಂಡಿನೊಳಗಿರುವ ಗಂಡ

" ಇದೇನೇ ಕಾವೇರೀ ನಿನ್ನ ಹಟ ? ಸೈನ್ಯದೊಳಗಿನ ನೌಕರಿಗೆ ಸೇರಿದವರನ್ನೇ ಮದಿವಿ ಆಗಬೇಕೆಂಬೂ ಹುಚ್ಚು ಎಲ್ಲಿಯದು ಹೊಕ್ಕಿತು ... ನಿನ್ನ ತಲಿಯೊಳಗ ? "

" ಇದರ ಮರ್ಮ ನಿನಗ ಗೊತ್ತಿಲ್ಲ ಬಿಡಽ ಅವ್ವಾ ! ಹುಕುಮ್ ಆದದ್ದನ್ನ ಕೂಡಲೆ ಅಮಲ್ ಬಜಾವಣಿ ಮಾಡೂದಂದರಽ ಸೈನಿಕರಿಗೊಂದು ಸ್ವಭಾವನೇ ಆಗಿ ಬಿಟ್ಟಿರತ್ತದ!"

* * *

ಔಷಧಿಯ ಅದಲುಬದಲು

"ಏನು ಡಾಕ್ಟರ್, ತಿಂಗಳದಿನಾ ಆಯಿತು; ಏನೇನೂ ಗುಣಾ ಬರವೊಲ್ಲದು. ಅಂತಲೇ ನಾವಿಬ್ಬರೂ ಇನ್ನಮ್ಯಾಲ, ನಮ್ಮ ಔಷಧಾ ಬದಲಿಸಬೇಕಂತ ನಿರ್ಣಯಿಸಿ ಬಿಟ್ಟೇವಿ ! "

" ಹೀಂಗೇನು ? ಬ್ಯಾರೇ ಯಾವ ಡಾಕ್ಟರರ ಹತ್ತರ ಹೋಗತೀರಿ ಹಾಂಗಾದರ ? "

" ಔಷಧ ಬದಲಿಸೂದಂದರ ಡಾಕ್ಟರರನ್ನೂ ಬದಲಿಸೂದಂತ ತಿಳಿದಿರೇನು ನೀವು ? ಛೇ ಛೇ ! ಹಾಂಗಲ್ಲ ! ಇನ್ನ ಮ್ಯಾಲ ನನಗ ಕೊಡೂ ಔಷಧಾ ಆಕಿಗೆ ಕೊಡತೀನಿ ಆಕಿಗೆ ಕೊಡೂ ಔಷಧಾ ನಾನು ತೊಗೋತೀನಿ ! "

* * *

ತಂಪೆ ಹೆಡ್‌ಮಾಸ್ತರು !

" ಎಲೇ ಭೀಮೂ.. ಹುಂ, ನಿನಗೊಂದು ಪ್ರಶ್ನೆ ಕೇಳತೀನಿ; ಸರಿಯಾಗಿ ಉತ್ತರ ಕೊಡತೀಯಾ ? "

" ಹೂಂನ್ರೀ ಮಾಸ್ತರ್ ! "

" ನೀನು ಒಂದು ಬೀದಿಯೊಳಗ ನಿಂತುಕೊಂಡು ಏನಾದರೂ ಹುಂಟಾಟಾ ಆಡತಾ ಇರತೀಯಲ್ಲಾ ! ಆಗ ಒಂದು ಬದಿಯಿಂದ ನಿನ್ನ ತಂದೆ— ಇನ್ನೊಂದು ಬದಿಯಿಂದ ನಿಮ್ಮ ಹೆಡ್‌ಮಾಸ್ತರ್‍ರು ಬಂದರು. ಆ ಹೊತ್ತಿನೊಳಗ ನೀನು ಪಾರಾಗಬೇಕಾದರ ಏನು ಮಾಡತೀ ಹೇಳಪ್ಪಾ ! "

" ಛೇಛೇ ! ಹಾಂಗ ಇಬ್ಬರೂ ಒಂದೊಂದು ಬದಿಯಿಂದ ಬರೂದು ಶಕ್ಯವೇ ಇಲ್ರೀ ಮಾಸ್ತರ್ ! "

" ಅದ್ಯಾಕ ? ಶಕ್ಯ ಯಾಕ ಇಲ್ಲ ? "

" ಯಾಕಂದರೀ ಮಾಸ್ತರರ್‍ರು, ಹೆಡ್‌ಮಾಸ್ತರರೇ ನಮ್ಮ ತಂದಿ ಅಂಬೂದು ನಿಮಗ ಗೊತ್ತಿಲ್ಲೇನ್ರಿ ? "

* * *



ಗಲಿ ನೀಚತನದಿಂದಾಗಲಿ ಅದು ಯುದ್ಧದ ಪರಿಸ್ಥಿತಿಯನ್ನು ಕೆಡಿಸಿದೆ ಎಂದು ಹೇಳಬಹುದು. ಕಳೆದ ಕೆಲವು ದಿನಗಳಿಂದ ರಶಿಯಾದಲ್ಲಿ ಹಿಟ್ಲರನ ಸೈನಿಕರು ಹಿಂದೆಗೆಯಲು ತೊಡಗಿದ್ದಾರೆ; ಮಾಸ್ಕೋ ನಗರವನ್ನು ಗೆಲ್ಲುವ ಆಶೆಯನ್ನೆ ಹಿಟ್ಲರನು ಬಿಟ್ಟುಬಿಡಬೇಕಾಗಿದೆ; ಇದೇ ಸಂದರ್ಭದಲ್ಲಿ ಉತ್ತರ ಆಫ್ರಿಕೆಯಲ್ಲಿ ಬ್ರಿಟಿಶರು ಜರ್ಮನ್ ಸೈನ್ಯವನ್ನು ಕಾಳಗದಲ್ಲಿ ಹಿಡಿದಿಟ್ಟರು; ಕೊನೆಗೆ ವಚನಕೊಟ್ಟ ಸಹಾಯವು ಅಮೇರಿಕೆ- ಇಂಗ್ಲಂಡಗಳಿಂದ ರಶಿಯಾಕ್ಕೆ ಇದೀಗ ಫಲರೂಪವಾಗಿ, ಪ್ರತ್ಯಕ್ಷವಾಗಿ, ಹೆಚ್ಚಾಗಿ ಬರತೊಡಗಿತು. ಹೀಗೆಯೆ ನಡೆದರೆ ತನ್ನ ನೇತೃತ್ವಶಕ್ತಿಯು ತೀವ್ರದಲ್ಲಿಯೆ ಕುಗ್ಗುವುದೆಂದು ಹಿಟ್ಲರನು ಕಂಡಿರಲು ಸಾಕು. ಸದ್ಯಕ್ಕೆ ಚಳಿಗಾಲದ ನಿಮಿತ್ತದಿಂದ ರಶಿಯಾದಲ್ಲಿಯ ಯುದ್ಧವನ್ನು ಅವನು ತಡೆಯಲೇಬೇಕಾಗುವದು. ಈ ೩-೪ ತಿಂಗಳುಗಳ ಬಿಡುವಿನಲ್ಲಿ ರಶಿಯಾಕ್ಕೆ ಸಹಾಯಕ ರಾಷ್ಟ್ರಗಳಿಂದಲೂ ಸ್ವಂತದ ಉತ್ಪಾದನೆಯಿಂದಲೂ ಯುದ್ಧಶಕ್ತಿಯು ಹೆಚ್ಚುವುದು. ಇದನ್ನಾದರೂ ತಡೆಯುವ ಹಂಚಿಕೆಯಿಂದ ಹಿಟ್ಲರನು ಜಪಾನನ್ನು ಯುದ್ಧದಲ್ಲಿ ನೂಕಿರಬಹುದಾಗಿದೆ. ಜಪಾನಕ್ಕೆ ನೌಕಾಬಲವಿದೆ. ಅದನ್ನು ಎದುರಿಸುವುದರಲ್ಲಿ ಇಂಗ್ಲಂಡ್-ಅಮೇರಿಕೆಗಳ ನೌಕಾಬಲ ತೊಡಗಿದರೆ, ರಶಿಯಾಕ್ಕೆ ಸಾಮಗ್ರಿಗಳನ್ನು ಮುಟ್ಟಿಸುವುದು ಹೇಗೆ? ಅಂತೂ ಹಿಟ್ಲರನನ್ನು ಕೊನೆಯವರೆಗೂ ವಂಚಿಸಲಾಗದ ಹೇಡಿತನದಿಂದ ಜಪಾನವು ಶಾಂತಸಾಗರ (Pacific Ocean) ದಲ್ಲಿ ತಿಮಿಂಗಿಲತನವನ್ನೆ ನಡ್ಡಿಸಿದೆ. ಇಂದಿನ ವರೆಗೆ ಜಪಾನವು ಯುದ್ಧವ್ಯೂಹದ ಸರ್ವಸಿದ್ಧತೆಯನ್ನೆ ಮಾಡಿಕೊಳ್ಳುತ್ತಲಿದ್ದಿತು ಎಂಬುದು ಪ್ರಾರಂಭದಿನದ ಹಾವಳಿಯಿಂದ ಸ್ಪಷ್ಟವಾಗುವುದು; ಆದರೆ ಅದೇ ಕಾಲಕ್ಕೆ ಸಂಧಾನವನ್ನೂ ನಡೆಯಿಸುತ್ತಲಿದ್ದಿತು ಎಂಬುದರಿಂದ ಅದರ ನೀಚತನವೂ ಸ್ಪಷ್ಟವಾಗುವುದು. (೮-೧೨-೧೯೪೧)

ಪುಂಡತನದ ಪಿಡುಗು

ಕೆಲವು ದಿವಸಗಳಿಂದ ಯುದ್ಧವು ನಮ್ಮ ದೇಶವನ್ನು ಸಮೀಪಿಸುತ್ತಲಿದೆ. . ಎನ್ನುತ್ತಿದ್ದೆವು. ಇಂದು ಯುದ್ಧವು ನಮ್ಮ ದೇಶಕ್ಕೆಯೆ ಬಂದುಮುಟ್ಟಿದೆ ಎನಬೇಕಾಗಿದೆ. ಯುದ್ಧ ಬೇಡ ಎಂದು ನಾವು ದೂರ ಸರಿದರೂ ಯುದ್ಧವು ಧಾವಿಸುತ್ತ ಬಂದು ನಮ್ಮನ್ನು ಸುತ್ತುಗಟ್ಟಿದೆ. ಇದು ಅನಿವಾರ್ಯವಾಗಿತ್ತೆಂಬುದು ಸ್ವಲ್ಪ ವಿಚಾರ ಮಾಡಿದರೆ ತಿಳಿದು ಬರುವಂತಹ ಮಾತು. ಇಂದಿನ ಯುದ್ಧವೆಂಬುದು ಪುಂಡತನದ ಪಿಡುಗು ಆಗಿದೆ. ಪಿಡುಗಿನಂತೆ ಹಬ್ಬುತ್ತ ಬಲಿದವರನ್ನೂ ಬಲ್ಲದವರನ್ನೂ ಕೂಡಿಯೆ ತನ್ನ ಹಿಡಿತದಲ್ಲಿ ಬಿಗಿಯುವುದು. 'ನನಗೆಯೆ ಸ್ವಾತಂತ್ರ್ಯವಿಲ್ಲದಾಗ, ಇಲ್ಲದ ಸ್ವಾತಂತ್ರ್ಯಕ್ಕಾಗಿ ನಾನು ಒಡಿದಾಡುವುದು ಹೇಗೆ?' ಎಂದು ಪಂಡಿತ ಜವಾಹರಲಾಲರು ಒಂದು ಭಾಷಣದಲ್ಲಿ ಸವಾಲನ್ನು ಹಾಕಿದ್ದಾರೆ. ಪಂಡಿತರಿಗೆ ನಮ್ಮದೊಂದು ನಮ್ರ ಉತ್ತರ- ಅಥವಾ ಸೂಚನೆ ಎನ್ನೋಣ-ಇದೆ. 'ಇಲ್ಲದ ಸ್ವಾತಂತ್ರ್ಯವನ್ನು ಗಳಿಸುವುದಕ್ಕಾಗಿ ಬಡಿದಾಡಬಹುದಲ್ಲವೆ?' ಇಂದು ನಾವು ಯುದ್ಧದಲ್ಲಿ ಸೇರದಿದ್ದರೆ ಯಾವುದನ್ನು ಸಾಧಿಸಿದಂತಾಗುವುದು? ಯುದ್ಧದಲ್ಲಿ ಸೇರದಿದ್ದರೆ ಸ್ವಾತಂತ್ರ್ಯ ದೊರೆಯುವ ಭರವಸೆ ಇದೆಯೆ? ಸರ್ವಾಧಿಕಾರಿಗಳು ಜಯಶೀಲರಾದರೆ ಸ್ವಾತಂತ್ರ್ಯ ದೊರೆಯುವ ಆಶೆ ಇದೆಯೆ? ಆದರಂತೆಯೆ 'ಬ್ರಿಟಿಶರು ಗೆದ್ದರೂ ಸ್ವಾತಂತ್ರ್ಯದ ಆಶೆ ಇಲ್ಲ' ಎಂದು ದೇಶಾಭಿಮಾನಿಗಳು ವಾದಿಸಬಹುದು. ಆದರೆ ಅಂತರರಾಷ್ಟ್ರೀಯ ವ್ಯವಹಾರ-ರಾಜನೀತಿಗಳನ್ನರಿತ ಜವಾಹರರು ಹಾಗೆ ವಾದಿಸಲಿಕ್ಕಿಲ್ಲ ಎಂದು ನಮ್ಮ ಅಭಿಪ್ರಾಯ. ಇಂದು ನಮಗೆ ಸ್ವಾತಂತ್ರ್ಯ ದೊರೆವುದು ಬಿಡುವುದು ಬ್ರಿಟಿಶರ ಅಧೀನವಾದ ಮಾತಾಗಿಲ್ಲ. ಸ್ವಾತಂತ್ರ್ಯ ತತ್ತ್ವವನ್ನು ಮೊದಲು ಉಳಿಸುವುದು ಜಗತ್ತಿಗೆಯೆ ಮಹತ್ತ್ವದ ಮಾತಾಗಿದೆ. ಆ ತತ್ತ್ವವನ್ನು ಉಳಿಸುವುದಕ್ಕಾಗಿ ನಾವು ಸರ್ವಾಧಿಕಾರಿಗಳನ್ನು ಎದುರಿಸದಿದ್ದರೆ? 'ಸ್ವಾತಂತ್ರ್ಯವೆ ಉಳಿಯದಿದ್ದಲ್ಲಿ ಗಳಿಸುವ ಸ್ವಾತಂತ್ರ್ಯ ಯಾವುದು?' ಎಂದು ಪಂಡಿತ ಜವಾಹರರಿಗೆ ನಾವು ಮರುಸವಾಲನ್ನು ಹಾಕುವೆವು.

ಸ್ವಾಭಿಮಾನದ ಸಂಪಾದನೆ

ಹೀಗೆ ಹೇಳಿದ ಮಾತ್ರಕ್ಕೆ ಕುರಿಗಳಂತೆ ನಾವು ಆಳರಸರು ಕಳಿಸಿದತ್ತ ಎಳೆಯಬೇಕು, ತುರುಕಿದತ್ತ ತಡೆಯಬೇಕು ಎಂದರ್ಥವಲ್ಲ. ಬ್ರಿಟಿಶರಿಗೆಯೆ ಸ್ಪಷ್ಟವಾಗಿ ಸಾರೋಣ, 'ಈ ಯುದ್ಧದಲ್ಲಿ ನಾವು ಎಲ್ಲ ರೀತಿಯಿಂದಲೂ ಭಾಗ ವಹಿಸುವುದು ನಿಮ್ಮ ಹೆದರಿಕೆಗಾಗಿ ಅಲ್ಲ, ನಿಮಗಾಗಿ ಆದರವಿದೆ ಎಂದೂ ಅಲ್ಲ; ಸ್ವಾತಂತ್ರ್ಯಕ್ಕಾಗಿ ಹೆಣಗಾಡುವ ನಮಗೆ ಜಗತ್ತಿನಲ್ಲಿ ಸ್ವಾತಂತ್ರ್ಯತತ್ತ್ವವನ್ನು ಉಳಿಸಬೇಕಾಗಿದೆ; ಇಂದು ಉಳಿಸಿದ ಸ್ವಾತಂತ್ರ್ಯವನ್ನು ನಾಳೆ ಗಳಿಸಲು ಹೀಗೆಯೆ ಹೋರಾಡುವವರು' ಎಂದು. ನಮ್ಮ ತತ್ತ್ವವನ್ನು ಬಿಟ್ಟಂತಾಗುವುದಿಲ್ಲ, ಕರ್ತವ್ಯವನ್ನೂ ತಪ್ಪಿಸಿದಂತಾಗುವುದಿಲ್ಲ— ಹೀಗೆ ಮಾಡಿದರೆ. ಅದರಂತೆಯೆ ಸ್ವಾತಂತ್ರ್ಯಕ್ಕೆ ಮುಂಚಿತವಾಗಿ ಸದ್ಯಕ್ಕೆ ದೇಶವನ್ನೂ ಉಳಿಸಿಕೊಳ್ಳಬೇಕಾಗಿದೆ. ನಮ್ಮ ಯೋಗ್ಯತೆಯಿಂದ, ನಮ್ಮ ಶಕ್ತಿಯಿಂದ ಉಳಿಸಿಕೊಳ್ಳುವುದರಲ್ಲಿಯೆ ನಿಜವಾಗಿ ಪುರುಷಾರ್ಥವಿದೆ. ಇಂದು ಯುದ್ಧನೀತಿಗಾಗಿ ಅಸಹಕಾರವನ್ನೊಡ್ಡಿ, ತುರಂಗದಲ್ಲಿ ತತ್ತ್ವಗಳನ್ನು ಮೆಲುಕಾಡಿಸಿದರೆ ಆ ಯೋಗ್ಯತೆ, ಆ ಶಕ್ತಿ ನಮ್ಮಲ್ಲಿ ಬರುವುದು ಹೇಗೆ? ಇದಲ್ಲದೆ ಯಾವ ಸರಕಾರಕ್ಕಾಗಿ ನಿಮ್ಮಲ್ಲಿ ವಿಶ್ವಾಸವಿಲ್ಲವೊ ಆ ಸರಕಾರವು ಯೋಗ್ಯ ರೀತಿಯಿಂದ, ಕೊನೆಯ ವರೆಗೆ ನಿಮ್ಮನ್ನು ಸಂರಕ್ಷಿಸಬಹುದೆಂದು ನಂಬುವುದು ಸ್ವಾಭಿಮಾನವೂ ಅಲ್ಲ, ಬುದ್ಧಿಮತ್ತೆಯ ಲಕ್ಷಣವೂ ಅಲ್ಲ.

(೧೧-೧೨-೪೧)

ಮೈಸೂರು ಕಾಗದದ

ಅಧಿಕೃತ ಪ್ರಸಾರಕರು : ಜಿ. ಕೆ. ಕೇಳಕರ

ಸ್ವದೇಶಿ ಪೇಪರ್ ಮಾರ್ಟ್, ಧಾರವಾಡ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

ಗನೋರಿಯಾ, ಪರಮಾರೋಗ, ಉಷ್ಣರೋಗದ ಮೇಲೆ

ಔಷಧ

೭ ದಿವಸಗಳಲ್ಲಿ ಈ ರೋಗ ಗುಣಹೊಂದುವುದು ಗ್ಯಾರಂಟಿ !

ಶರೀರದಿಂದ ಕೀವ ಬರುತ್ತಿದ್ದರೆ, ಧೋತರಕ್ಕೆ ಹಳದಿ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದಿಂದ ಕೊಗಲು ಹಿಂಡಕ್ಕೆ ಸರಿಯದಿದ್ದರೆ, ಶರೀರದ ಸಂತು ಘಾತಯುವಾಗಿದ್ದರೆ, ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇಡು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ. ಗಂಡುಮಾಲಿ, ಕೈಕಾಲುಶೂಲಿ. ಅರ್ಧಾಂಗವಾಯು, ನಡುನೋಯುವುದು, ಸ್ತ್ರೀಯರ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು, ಗರ್ಮಿಯಿಂದ ಗರ್ಭಕೋಶನಾಶವಾಗಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ ಈ ಎಲ್ಲ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲುದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ, ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ-ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ : ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ ರೂ. ಪೋಸ್ಟ್ ಚಾರ್ಜು ೧೦ ಆಣೆ.

ಮಕ್ಕಳನ್ನು ಹಡೆಯುವದು ಸಾಕು

ಅಶಕ್ತ ಹೆಣ್ಣುಮಕ್ಕಳಿಗೆ ★ ರೋಗಗ್ರಸ್ತ ಸ್ತ್ರೀಯರಿಗೆ

ಬರ್ಥ ಕಂಟ್ರೋಲ್

★

ಏಳು ದಿವಸದ ಈ ಮಾತ್ರೆಗಳನ್ನು ಸೇವನಮಾಡಿದರೆ, ಮುಂದೆ ಖಂಡಿತವಾಗಿಯೂ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿ ತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು, ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ : ಪ್ರತಿ ದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ ಸಂಜೆಗೆ ೧ ಗುಳಿಗೆಯಂತೆ ಊಟಕ್ಕೆ ಮೊದಲು ತಕ್ಕೊಳ್ಳಬೇಕು. ೭ ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ : ಹರಮೀಪಲ್ಲೆ ಬಿಡಬೇಕು.

೭ ದಿವಸದ ಸಂಪೂರ್ಣ ಔಷಧದ ಕಿಮ್ಮತ್ತು

೫ ರೂಪಾಯಿ ಪೋಸ್ಟ್ ಚಾರ್ಜು ೧೦ ಆಣೆ.

ಏಜಂಟರು :

ಗದಗ ಫಾರ್ಮಸಿ, ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ ಫಾರ್ಮಸಿ

ವಿಳಾಸ:— ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಗಳ ದವಾಖಾನೆ, ಗದಗ.

ಮಗುವಿನ
ಮೃದು
ಚರ್ಮಕ್ಕೆ
★
ಬೇಕಾದುದು
★

ಶುದ್ಧವಾದ ಮತ್ತು ಮೃದುವಾದ ಒಂದು ಸಾಬೂನು. ಮತ್ತು ಆ ಸಾಬೂನು ಪರಿಮಳಯುಕ್ತವಾಗಿಯೂ ಔಷಧಯುಕ್ತವಾಗಿಯೂ ಇರಬೇಕು. ಮೈಸೂರು ಗಂಧದ ಸಾಬೂನಿನಲ್ಲಿ ಇವೆರಡು ಗುಣಗಳೂ ಕೂಡಿವೆ. ಈ ಸಾಬೂನು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛ ಮಾಡುವುದಲ್ಲದೆ, ಕಾಂತಿಯನ್ನುಂಟು ಮಾಡುತ್ತದೆ.

★

ಮೈಸೂರು
ಸ್ಯಾಂಡಲ್
ಸೋಪು

ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಫೆಬ್ರುವರಿ ೧೯೪೭

ಕೆಲವು ಲೇಖಕರು

ಶ್ರೀಧರ
ವಾಳ್ವೇಕರ ಗುರುರಾಯರು
ಜೋಗಳೇಕರ ಪಾಂಡುರಂಗರಾಯರು
ಎನ್. ಕೆ. ಕುಲಕರ್ಣಿ
ಎಂ. ಪಿ. ಟಿ. ಆಚಾರ್ಯ

ಜಯಂತಿ

ಬೆಲೆ ನಾಲ್ಕಾಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ .... ವ್ಹಿ. ಪಿ. ಯಿಂದ ೩-೫-೦ .... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮರು ಪಾಟೀಲ ಮಾಧವರಾಯರು

೪ನೆಯ ವರ್ಷ	ಫೆಬ್ರುವರಿ ೧೯೪೨	೯ನೆಯ ಸಂಚಿಕೆ

ಮುಖ್ಯವಿಷಯುಗಳ ಪರಿವಿಡಿ

ನಗುತಲಿರುವೆ (ಕವನ)	ಶ್ರೀಮತಿ ಎಲ್. ವಿ. ಕಾವೇರಮ್ಮ, ಮೈಸೂರು	೩೮೫
ಸಂಪಾದಕೀಯ	ಸಂಪಾದಕರು	೩೮೬
ಮಂಗನ ಮಲ್ಲಿನಾಥತನ	' ಮಲ್ಲಿನಾಥ '	೩೮೭
ಕಳೆದ ಮಹಾಯುದ್ಧದಲ್ಲಿ ಭಾರತೀಯರ ಸಹಾಯ (ರಾಜಕೀಯ)	ಶ್ರೀ. ವಾಳ್ವೇಕರ್ ಗುರುರಾಯರು, ಎಲ್‌ಎಲ್. ಬಿ.	೩೮೯
ಫಲವಿಲ್ಲದ ತಾಳ್ಮೆದಕೆ (ಸಣ್ಣಕತೆ)	ಶ್ರೀ. ಜೋಗಳೇಕರ ಪಾಂಡುರಂಗರಾಯರು ಬಿ.ಎ.ಎಸ್.ಟಿ.ಸಿ.	೩೯೩
ಪುಣೆಯ ಕನ್ನಡಿಗರು, ' ಪುಣೇರಿ ' ಕನ್ನಡಿಗರು (ಪರಿಚಯಾತ್ಮಕ)	ಶ್ರೀ. ಮೊರಬ ರಘುನಾಥರಾಯರು ಬಿ.ಎ.(ಆನರ್ಸ್)	೩೯೮
ಸಲಾಮ್ ಸಾಬ್ (ಕಥನಕವನ)	ಶ್ರೀ. ' ಕಾವ್ಯಾನಂದ ' ಹೈದರಾಬಾದ್	೪೦೦
ಇನ್ನೇನು ?- ಎಂದಾಗ ಇನ್ನೇನು (ವ್ಯಕ್ತಿಪರಿಚಯ) ..	ಶ್ರೀ. ಎಂ. ಪಿ. ಟಿ. ಆಚಾರ್ಯ, ಮುಂಬಯಿ	೪೦೧
ನಾಮಕರಣ (ಹರಟೆ)	ಶ್ರೀ. ಕ. ರಾಧಾಕೃಷ್ಣನ್, ಬನಾರಸ್ ಹಿಂ. ವಿ. ವಿ.	೪೦೪
ಹಾಸ್ಯಪ್ರಕಾರಗಳು (ರಸವಿಮರ್ಶೆ)	ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ	೪೦೭
ರೈತ (ಸಣ್ಣ ಕಥೆ)	' ಇಂದುತನಯ ' ನೇಡಬಾಳ	೪೧೧
ಬುದ್ಧಿಯೊ..ಭಾವನೆಯೊ ! (ಉತ್ತರಪಕ್ಷಕ್ಕೆ ಪುಷ್ಟಿ) ..	' ಸೂರ್ಯೋಪಾಸಕ '	೪೧೫
ನವಯುಗದ ಚಿತ್ರಪಟಗಳು (ಚಲಚ್ಚಿತ್ರ ವಿಮರ್ಶೆ)	ಶ್ರೀ. ಎನ್. ಕೆ. ಕುಲಕರ್ಣಿ, ಎಮ್.ಎ., ಬಿ.ಟಿ.	೪೧೭
ಮತ್ತೆ ಕನ್ನಡ-ಮರಾಠಿ ವಾದ (ನಡೆದ ಸಂಗತಿಯ ನಿರೀಕ್ಷಣೆ)	ಸಂಪಾದಕರು	೪೨೦
ಫಿಲಿಪೈನ್ಸ್ ಪರಾಧೀನವಾದುದು ಹೇಗೆ ? (ಇತಿಹಾಸ) ..	ಶ್ರೀ. ಸಿ. ಬಿ. ಬೆಲ್ಲದ, ಇಟಗಿ	೪೨೩
ಬಾಲಕರ ಜೋಡಂಗಿ (ಹೊಲಿಗೆಯ ವಿಚಾರ)	ಶ್ರೀ. ಹಳಪೇಟೆ ಚಿಂತಾಮಣಿರಾಯರು ಟಿ. ಸಿ. ಡಿ.	೪೨೯
ಸಾದರಸ್ವೀಕಾರ	.. ..	೪೩೧
ನಾಲ್ಕೂ ನಿಟ್ಟಿನ ನೋಟ	' ನಿರೀಕ್ಷಕರು '	೪೩೨

ಹೊಸವರ್ಷದಲ್ಲಿ 'ಜಯಂತಿಗೆ' ಚಂದಾದಾರರಾಗಿರಿ, ಓದಿ ಆನಂದಿಸಿರಿ !

ಸಂಪುಟ ೪ | ೧ನೆಯ ಫೆಬ್ರುವರಿ ೧೯೪೨ | ಸಂಚಿಕೆ ೯

ನಗುತಲಿರುವೆ!

ಶ್ರೀಮತಿ ಎಲ್. ವ್ಹಿ. ಕಾವೇರಮ್ಮ, ಮೈಸೂರು

★

ನಗುತಲಿರುವೆ, ನಗುತಲಿರುವೆ,
ಬಾಳ ಹಣತೆಯುರಿವವರೆಗೆ!

೧

ದುಃಖದುಗ್ರ ಜ್ವಾಲೆಗಗ್ನಿ-
ಕುಂಡವಾಗಿ ನಿಲ್ಲುವೆ!
ಸುಖದ ಮುಗಿಲಿನೊಡನೆ ಆವೆ-
ಯಾಗಿ ನಡೆದು ನಲಿಯುವೆ!

೨

ಜಗದ ತುಳಿತದಿದಿರು ಮುಳ್ಳ-
ಕಂಟಿಯಾಗಿ ನಿಲ್ಲುವೆ!
ಜನದ ನುಡಿಯ ನಂಜಿನಿದಿರು
ಕಾಲಕೂಟವಾಗುವೆ!

೩

ದುಷ್ಟರೆಸೆವ ಕಲ್ಲಿನಿದಿರು
ಬೆಟ್ಟವಾಗಿ ನಿಲ್ಲುವೆ!
ಇಷ್ಟರಿಡುವ ಹಾಲಿನಲ್ಲಿ
ಬೆಲ್ಲವಾಗಿ ಬೆರೆಯುವೆ!

೪

ಕೂಸಿಗಿಂತ ಕಿರಿಯಳಾಗಿ
ಜಗದ ಕೂಡೆ ಆಡುವೆ!
ತಾಯಿಗಿಂತ ಹಿರಿಯಳಾಗಿ
ಪ್ರೀತಿತೊರೆಯ ಹರಿಸುವೆ!

೫

ಗಾಳಿಯಂತೆ ತೇಲಿ ಜಗದ
ಸುಗುಣಸುರಭಿ ಹೀರುವೆ!
ಗಂಗೆಯಂತೆ ಹರಿದು ಬಾಳ
ಕಲುಷವ ತೊಳೆ-ತೊಳೆಯುವೆ!

೬

ಹೂವಿಗಿಂತ ಮೃದುಲವಾಗಿ
ವಿಶ್ವಶಿವಗೆ ಬಾಗುವೆ!
ಜೇನಿಗಿಂತ ಮಧುರವಾಗಿ
ಬಾಳವೀಣೆ ಮಿಡಿಯುವೆ!

ನಗುತಲಿರುವೆ, ನಗುತಲಿರುವೆ,
ಬಾಳ ಹಣತೆಯುರಿವವರೆಗೆ!



ಈ ಸಲದ ಕನ್ನಡ ಸಾಹಿತ್ಯಸಮ್ಮೇಳನ

ಇಪ್ಪತ್ತಾರನೆಯ ಕನ್ನಡ ಸಾಹಿತ್ಯಸಮ್ಮೇಳನವು, ಕಳೆದ ಡಿಸೆಂಬರ್ ೨೯-೩೦-೩೧ ಈ ಮೂರು ದಿನ ಹೈದರಾಬಾದಿನಲ್ಲಿ, ತುಂಬ ವಿಜೃಂಭಣೆಯಿಂದ ಜರುಗಿತು. ಹೈದರಾಬಾದ್ ಸಂಸ್ಥಾನದ ರಾಜಕೀಯ ವಿಶಿಷ್ಟ ಪರಿಸ್ಥಿತಿಯ ಮೂಲಕ 'ಸಮ್ಮೇಳನ ಹೇಗೆ ನಡೆದೀತೋ' ಎಂಬ ಸಾಶಂಕ ವೃತ್ತಿಯಿಂದ ಅನೇಕರು ಅದನ್ನು ನಿರೀಕ್ಷಿಸುತ್ತಿದ್ದರು; ಆದರೆ ಅಲ್ಲಿಯ ಸರಕಾರದವರು ಈ ಸಂದರ್ಭದಲ್ಲಿ ತೋರಿಸಿದ ಸಮಂಜಸ ಧೋರಣೆಯಿಂದ ಸಮ್ಮೇಳನವು ಸುಯಂತ್ರಿತವಾಗಿ ನೆರವೇರಲು ಸಾಧ್ಯವಾಯಿತು. ನೈಝಾಮರ ಸರಕಾರ ಸಮ್ಮೇಳಕ್ಕೆ ೨೦೦೦ ರೂಪಾಯಿಗಳ ಉದಾರ ಸಹಾಯವನ್ನು ಕೊಟ್ಟಿತು, ಪರಸ್ಥಳಗಳಿಂದ ಸಮ್ಮೇಳನಕ್ಕೆ ಬಂದ ಮಹಾಜನರಿಗೆ ಆಗಬಹುದಾಗಿದ್ದ ಪೋಲೀಸರ ತೊಂದರೆಯನ್ನೂ 'ಕರೋಡ್‌ಗಿರಿ (ಸುಂಕ)'ಯ ತೊಂದರೆಯನ್ನೂ ತಪ್ಪಿಸಿಬಿಟ್ಟಿದ್ದಿತು. ಪ್ರತಿನಿಧಿಗಳ ವಾಹನಸೌಕರ್ಯಕ್ಕಾಗಿ ಬಸ್ಸುಗಳ ಅನುಕೂಲತೆಯನ್ನೂ ಮಾಡಿಕೊಟ್ಟಿದ್ದಿತು. ಅಲ್ಲದೆ ಸರಕಾರದ ಶಿಕ್ಷಣ-ಮಂತ್ರಿಗಳು ಬಂದು, ಸಹಾನುಭೂತಿಯಿಂದ ಸಮ್ಮೇಳನದ ಪ್ರಾರಂಭೋತ್ಸವ ನಡೆಯಿಸಿದರು.

ಪರಸ್ಥಳದಿಂದ ಬಂದವರಿಗಾಗಿ ಇಳಿದುಕೊಳ್ಳಲು ಏರ್ಪಡಿಸಿದ ಬಿಡಾರವೆಂದರೆ ಅದೊಂದು ಅರಮನೆಯಂತಹದು. ಸ್ನಾನ-ಊಟ ಉಪಾಹಾರಗಳ ಏರ್ಪಾಡೂ ತುಂಬ ಅಚ್ಚುಕಟ್ಟಾದುದು. ಕಾರ್ಯಕರ್ತರೂ ಸ್ವಯಂಸೇವಕರೂ—ಇಂತಹ ಸಾರ್ವಜನಿಕ ಕಾರ್ಯಗಳನ್ನು ಸಾಕಷ್ಟು ನಿರ್ವಹಿಸಿ ರೂಢಿಯಿದ್ದವರಲ್ಲವಾದರೂ—ತಂತಮ್ಮ ಕಾರ್ಯಗಳನ್ನು ಚೆನ್ನಾಗಿ ನಡೆಯಿಸಿದರು. ಹೋದವರೆಲ್ಲರೂ ಮೆಚ್ಚುವಂತಹ ಆತಿಥ್ಯ ಸ್ವಾಗತಮಂಡಲದಿಂದ ಸಿಕ್ಕಿತು.

ಹೈದರಾಬಾದಿನಲ್ಲಿ ಸಿರಿವಂತರಾದ ಕನ್ನಡಿಗರ—ಕನ್ನಡವನ್ನು ಪ್ರೀತಿಸುವವರ—ಸಂಖ್ಯೆಯೂ ಸಾಕಷ್ಟಿದೆ. ಅವರಲ್ಲಿಯ ಕೆಲವರು ಇದ್ದ ಮೂರು ದಿನದ ಅವಕಾಶದಲ್ಲಿಯೆ—ಸಮ್ಮೇಳನಕ್ಕೆಂದು ಬಂದ ಅತಿಥಿಗಳಿಗೆ— ಸವಿಯುಣಿಸಿನ ಔತಣಗಳನ್ನು ಕೊಟ್ಟರು. ಇನ್ನು ಕೆಲವರು ಅವಕಾಶ ದೊರೆಯದುದಕ್ಕಾಗಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ ಅನಿವಾರ್ಯವಾಗಿ ಸಮಾಧಾನಪಟ್ಟರು.

ಸಮ್ಮೇಳನದ ಕಾರ್ಯಕಲಾಪಗಳೆಲ್ಲ ನಡೆದುದು ಅದಕ್ಕಾಗಿಯೆ ನಿರ್ಮಿತವಾದ ಸುಂದರವೂ ಭವ್ಯವೂ ಆದ ಮಂಟಪದಲ್ಲಿ. ಸುಮಾರು ೩೦೦೦ ಜನರು ಸಹಜವಾಗಿ ಕುಳ್ಳಿರಬಹುದಾಗಿದ್ದ ಆ ಸಭಾಮಂಟಪವು ಯಾವಾಗಲೂ ತುಂಬಿ ಕಿಕ್ಕಿರಿದಿರುತ್ತಿದ್ದಿತು. ಎಲ್ಲರಿಗೂ ಕೇಳಿಸುವಂತೆ ಅನುಕೂಲವಾದ ಧ್ವನಿವಾಹಕದ ವ್ಯವಸ್ಥೆಯೂ ಇದ್ದಿತು.

ಸಾಹಿತ್ಯಸಮ್ಮೇಳನದೊಂದಿಗೆ 'ಮಹಿಳಾಗೋಷ್ಠಿ' 'ಕವಿಗೋಷ್ಠಿ' 'ಸಾಹಿತ್ಯಗೋಷ್ಠಿ' 'ನಾಟಕಗೋಷ್ಠಿ'ಗಳು ನಡೆದುವು. ರಾತ್ರಿಯಲ್ಲಿ ಬೇರೆ ಬೇರೆ ನಾಟಕ ಪ್ರಯೋಗಗಳು ಜರುಗಿದುವು.

ಸಮ್ಮೇಳನಾಧ್ಯಕ್ಷರಾದ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳ ಪ್ರಾರಂಭ ಭಾಷಣ, ಕನ್ನಡ ನಾಡು-ನುಡಿಗಳ ಸಂರಕ್ಷಣೆ ಸಂವರ್ಧನೆಯ ದೃಷ್ಟಿಯಿಂದ ತುಂಬ ಮಹತ್ತ್ವದ ವಿಷಯಗಳಿಂದ ಕೂಡಿದೆ. ಕನ್ನಡಿಗರ ಜೀವನದ ಹಲವು ಕಾರ್ಯಕ್ಷೇತ್ರಗಳಲ್ಲಿಯೂ ಕನ್ನಡ ನುಡಿಗೆ ಸಲ್ಲಬೇಕಾಗಿರುವ ಸ್ಥಾನ-ಮಾನಗಳ ವಿಚಾರವನ್ನವರು ಗಟ್ಟಿಯಾದ ಸ್ಪಷ್ಟವಾದ ಮಾತುಗಳಲ್ಲಿ ಸಾರಿಹೇಳಿದ್ದಾರೆ. ಅವರ ನಿಷ್ಠುರ-ಸತ್ಯವಚನಪ್ರವಾಹವು ಹಿಂದೀ-ಸಂಸ್ಕೃತಗಳ ಸಂಮೋಹಮುಗ್ಧರ ಹೃದಯಕ್ಕೆ ಅಪ್ಪಳಿಸಿ, 'ಕಂಡುದನ್ನಾಡಿ ಕೆಂಡದಂತಹ ಕೋಪವನ್ನು' ತರಿಸಿಬಿಟ್ಟದೆ ಇಷ್ಟರಲ್ಲಿಯೆ. ಕನ್ನಡಿಗರೆಲ್ಲ ಚೆನ್ನಾಗಿ ಅಭ್ಯಾಸಮಾಡಿ ಅನುಷ್ಠಾನದಲ್ಲಿ ತರಬೇಕಾದಂತಹ ಅನೇಕ ಸಂಗತಿಗಳಿಂದ ಕೂಡಿದೆ ಈ ಅಧ್ಯಕ್ಷರ ಭಾಷಣ. ಸ್ವಾಗತಾಧ್ಯಕ್ಷರ ಭಾಷಣವೆಂದರೆ ಹೈದರಾಬಾದಿನ ಕನ್ನಡಿಗರೆಲ್ಲರ ಮಾತೃಭಾಷಾಪ್ರೇಮದ ಕರುಣಕಥೆಯಾಗಿದೆ. ಸಮ್ಮೇಳನದಲ್ಲಿ ಹತ್ತಾರು ಗೊತ್ತುವಳಿಗಳು ಪುರಸ್ಕೃತವಾದುವಾದರೂ ಹೆಚ್ಚಿನ ಕಾರ್ಯಯೋಜನೆ ಯಾವ ಗೊತ್ತುವಳಿಯಲ್ಲಿಯೂ ಇಲ್ಲ. ಕನ್ನಡದ ಸಂರಕ್ಷಣೆಗಾಗಿ ಬೇರೆ ಬೇರೆ ಸರಕಾರಗಳನ್ನು ಬೇಡಿಕೊಳುವುವೇ ಹೆಚ್ಚಾಗಿ ಇವೆ.

ಗೋಷ್ಠಿಗಳಲ್ಲಿ ನಡೆದ ವಿಶೇಷ ಕಾರ್ಯಕಲಾಪಗಳೆಂದರೆ ಉದ್ಘಾಟಕರ—ಸ್ವಾಗತಾಧ್ಯಕ್ಷರ—ಅಧ್ಯಕ್ಷರ ಭಾಷಣಗಳು. ಮಿಕ್ಕವು ಏನೇನೋ ನಡೆದುವಾದರೂ ನೆನಪಿನಲ್ಲಿರಿಸಬಹುದಾದುವು ಏನೂ ಇರಲಿಲ್ಲ. ಆದರೂ ನೆನಪಿನಲ್ಲಿರಿಸಬಹುದಾದಂತಹ ಮಾತೆಂದರೆ, ಬೆಳಗಿನ ೯ ಗಂಟೆಗೆಂದು ಗೊತ್ತಾಗಿದ್ದ ಕವಿಗೋಷ್ಠಿ—ಮಹಾಜನರು ಬಾರದುದರಿಂದ—ಹನ್ನೊಂದು ಗಂಟೆಗೆ ಪ್ರಾರಂಭವಾದುದು; ನಾಟಕಗೋಷ್ಠಿಯಲ್ಲಿ ಚೆನ್ನಾಗಿ ಸಾಗಿದ್ದ ವಿಚಾರಸಂಕಿರಣವನ್ನು ನಡುವೆಯೆ ನಿಲ್ಲಿಸಿ—ಸಭಿಕರನ್ನೆಲ್ಲ ನಿರಾಶೆಗೊಳಿಸಿ—ಮಹಾಜನರು ಸವಿದಿನಿಸಿನ ಔತಣವೊಂದಕ್ಕೆ ಹೊರಟು ಹೋದುದು. ಇವೆರಡೂ ಸಂದರ್ಭಗಳನ್ನು ನೋಡಿದಾಗ 'ಮಹತ್ತ್ವದುದಾವುದು? ಸಭೆಯೊ ಸಂತೋಷಕೂಟವೊ?' ಎಂಬ ಸಮಸ್ಯೆ ಹಲವು ಜನರ ಮನಸ್ಸಿನಲ್ಲಿ ತಲೆದೋರಿರಬಹುದು.

ಈ ಗೋಷ್ಠಿಗಳ ಅಧ್ಯಕ್ಷರ ಭಾಷಣಗಳಲ್ಲಿ ಕವಿಗೋಷ್ಠಿಯ ಅಧ್ಯಕ್ಷರಾದ ಶ್ರೀಮಾನ್ ಸಾಲಿಯವರ ಭಾಷಣ ಎಲ್ಲವುಗಳಿಗಿಂತ ಚಿಕ್ಕದು. ನಾಟಕಗೋಷ್ಠಿಯ ಅಧ್ಯಕ್ಷರಾದ ಶ್ರೀಮಾನ್ ಮುಗುಳಿಯವರ ಭಾಷಣವು ಉಳಿದುವುಗಳಿಗಿಂತ ತೀರ ದೊಡ್ಡದು. ಅಧ್ಯಕ್ಷಭಾಷಣಗಳೆಲ್ಲವೂ ವಿಚಾರಪರಿಪ್ಲುತವಾಗಿದ್ದು ಕೂಲಂಕಷ ವಿಮರ್ಶ

(೩೯೩ನೆಯ ಪುಟಕ್ಕೆ ಮುಂದೆ ಸಾಗಿದೆ.)

೧. ಅರ್ಥವ್ಯರ್ಥೇರ್ ಭೀಃ !
ಇತಿ ಪಾಣಿನಿಃ !

ಹೈದರಾಬಾದ ಸಾಹಿತ್ಯಸಮ್ಮೇಳನದ ಪ್ರಾರಂಭದಲ್ಲಿ ಭೂತಾಧ್ಯಕ್ಷರು ವರ್ತಮಾನಾಧ್ಯಕ್ಷರಿಗೆ ಭವಿಷ್ಯವನ್ನು ಒಪ್ಪಿಸುವಾಗ 'ಅಖಂಡ ಕರ್ನಾಟಕವನ್ನು ಸಖಂಡ ಮಾಡುವುದು ಕನ್ನಡಿಗರ ಕರ್ತವ್ಯ' ಎಂದು ಹೇಳಿದ ಮಾತಿನ ಗಾಂಭೀರ್ಯದ ತಿರುಗಣೆಯಲ್ಲಿ ತೇಲಿ ತಿಣಕಿದ ವಾಚಕನೊಬ್ಬನು ಮಂಗರಾಯನನ್ನು ಮೊರೆಹೊಕ್ಕಿದ್ದಾನೆ. ಪಾಪ! ಹಿರಿಸಾಹಿತಿಗಳ ಹಿರಿಶೈಲಿಯ ಹಿರಿಮೆ ಇಂತಹ ಹಸುಳೆಗೆ ಹೊಳೆಯುವುದು ಹೇಗೆ? 'ಅಖಂಡ— ಎಂದರೆ ಖಂಡವಿಲ್ಲದ— ಎಂದರೆ ಶಾಕಾಹಾರಿ ಕರ್ನಾಟಕವನ್ನು ಸಖಂಡ ಎಂದರೆ ಮಾಂಸಾಹಾರಿಯಾಗಿ ಮಾಡಬೇಕೆಂಬ ಹಿಂದುಮಹಾಸಭಾಪೂರರ ನೀತಿಯನ್ನು ಇವರು ಹೇಳಿದ್ದಾರೆಯೆ?' ಎಂಬ ಹುಚ್ಚು ಪ್ರಶ್ನೆ ಬೇರೆ! ವಾಚಕರಾ, ಕಠಿಣ ಅರ್ಥದ ಅವಾಚಕರಾ, ಅಂತಹ ಮಾತನ್ನು ತೀರ್ಥರೂಪ ವ್ಯಾಕರಣರು—ಅಲ್ಲಲ್ಲ—ವ್ಯಾಕರಣರೂಪ ತೀರ್ಥರು ಹೇಳಬಹುದೆ? 'ಕರ್ನಾಟಕವು ಅ–ಖಂಡವಿದೆ, ಎಂದರೆ ಯಾವ ಖಂಡಕ್ಕೂ ಸೇರಿಲ್ಲ, ಎಂದರೆ ಭರತಖಂಡಕ್ಕೂ ಸೇರಿಲ್ಲ (ಒತ್ತಾಯದ ಹಿಂದೀ ಶಿಕ್ಷಣದಿಂದ ಸೇರಬಹುದಾಗಿತ್ತು); ಇದನ್ನು ಸ–ಖಂಡ ಮಾಡಬೇಕು, ಎಂದರೆ ಯಾವುದಾದರೊಂದು ಖಂಡಕ್ಕೆ (ಪಾಖಂಡವನ್ನು ಮಾತ್ರ ಬಿಟ್ಟು) ಸೇರಿಸಬೇಕು' ಎಂಬ ಅರ್ಥಗಾಂಭೀರ್ಯವಿದೆ ಆ ಮಾತಿನಲ್ಲಿ! ಅಥವಾ ಸಂಸ್ಕೃತದ 'ಅಖಂಡ' ಎಂಬುದು ಕನ್ನಡದಲ್ಲಿ 'ಅಕಂಡ' ಎಂದೂ, 'ಸಖಂಡ' ಎಂಬುದು 'ಸಕಂಡ' ಎಂದೂ (ಯಾಕೆಂದರೆ ಕನ್ನಡದಲ್ಲಿ ಮಹಾಪ್ರಾಣವೆ ಇಲ್ಲ!) ರೂಪಾಂತರಹೊಂದುವುದರಿಂದ, ಅಚ್ಚಗನ್ನಡದಲ್ಲಿ 'ಕಾಣದ್ದನ್ನು ಕಂಡುಬಿಡುವುದು' ಎಂದೂ ಆ ಮಾತಿನ ಅರ್ಥವಾಗಬಹುದು. ಅಥವಾ— ಹೆಚ್ಚಿಗೆ ಹೇಳುವುದೇನು? ಹಿರಿಯರ ವಿಷಯದಲ್ಲಿ 'ವಾಚಮರ್ಥೋಽನುಧಾವತಿ' ವಾಚ (ಗಡಿಯಾರವನ್ನು) ಮರೆತು ಓಡುವವರು (ಎಂದರೆ ಕಾಲವನ್ನೂ ಧಿಕ್ಕರಿಸುವವರು) ಎಂದು ಭವಭೂತಿ ಹೇಳಿಲ್ಲವೆ? ಅದರಂತೆ 'ಅರ್ಥಮನರ್ಥಂ ಭಾವಯ'–ಅರ್ಥವಾದರೆ ಅನರ್ಥವಾಯಿತೆಂದೇ ತಿಳಿ—ಎಂದು ಶಂಕರಾಚಾರ್ಯರು ಹೇಳಿಲ್ಲವೆ?

* * *

೨. ಸ್ವಾರ್ಥತ್ಯಾಗದ ಸರ್ಟಿಫಿಕೇಟು

'ಭರತಖಂಡದ ರಾಜಕಾರಣದಲ್ಲಿಯಾಗಲಿ ಇತರ ಕ್ಷೇತ್ರಗಳಲ್ಲಾಗಲಿ ಅದಕ್ಕೆ (ಕರ್ನಾಟಕಕ್ಕೆ) ಮಹತ್ವದ ಸ್ಥಾನವಿಲ್ಲ' (ಒಂದೇಒಂದಾದ ಕನ್ನಡ ಪತ್ರಿಕೆಯ ಉಗ್ರಗಣ್ಯ ಲೇಖ). ಆಂಜನೇಯನ ಆಣೆಯನ್ನಿಟ್ಟು ಮಂಗರಾಯನು ಈ ಮಾತನ್ನು ಧಿಕ್ಕರಿಸುವವನಿದ್ದಾನೆ, ಅರ್ಥಾತ್ ಇದರ ಸತ್ಯವನ್ನು ಕುಕ್ಕರಿಸುವವನಿದ್ದಾನೆ ಎಂತಹ ಮಾತು! ಛೀ–ಥೂ–ಹೆ–ಅಲ್ಲ, ಆಂದ್ರೆ ಇಂತಹ ಮಾತನ್ನು ಆಡಬೇಕೇನೂ ಅಂತ ಮಂಗರಾಯನ ಪ್ರಶ್ನೆ. ಕರ್ನಾಟಕಕ್ಕೆ—ಭರತಖಂಡದ ರಾಜಕಾರಣದಲ್ಲಿ—ಮಹತ್ವದ ಸ್ಥಾನವಿಲ್ಲವೆ? ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಕನ್ನಡಿಗನಿಗೆ ಅದೆಷ್ಟು ದಿನ ಸ್ಥಾನ ವಿದ್ದಿತು? ಅದು ಮಹತ್ವದ್ದಲ್ಲವೆ? ಕೇಂದ್ರ ಶಾಸನಸಭೆಯಲ್ಲಿ ಕನ್ನಡಿಗರು ಸದಸ್ಯರಿಲ್ಲವೆ? ಕಾಂಗ್ರೆಸ್ ಮಂತ್ರಿಮಂಡಳಗಳಲ್ಲಿ ಕನ್ನಡಿಗರು ಅಧಿಕಾರಿಗಳಾಗಿದ್ದಿಲ್ಲವೆ? ಈ ಉದಾಹರಣೆಗಳಿರುವಾಗ— ಅಥವಾ ಕ್ಷಮೆ ಇರಲಿ. ಮಂಗರಾಯನು ಯಾರನ್ನು ಕನ್ನಡಿಗರೆಂದಿದ್ದಾನೊ ಅವರು ಈ ಪತ್ರಿಕೆಯ ದೃಷ್ಟಿಯಿಂದ ಕನ್ನಡಿಗರೆನಿಸುತ್ತಿರಲಿಕ್ಕಿಲ್ಲವೆ? ಅಥವಾ— ಅಖಂಡ ಕರ್ನಾಟಕದ ಏಕಮೇವಾದ್ವಿತೀಯ ಪತ್ರಿಕಾನಿಧಿ—ಅಲ್ಲ ಪ್ರತಿನಿಧಿ ತಾನು ಎಂದುಕೊಂಡು ಈ ನೊಂದ ಮಾತುಗಳನ್ನು ಆಡಿರಬಹುದೆ? ಅಥವಾ—

ಬಲ್ಲವರೆ ಬಲ್ಲರು ಎಲ್ಲರರಿಯರು | ಮೂರು-
ಬಿಲ್ಲೆಯಾ ಪತ್ರದಾ ಬದಲು ಮಾತುಗಳಾ ||

* * *

೩. ಮದ್ರಾಸೀ ಮಾಯೆ!

ವರ್ಧಾದ ಎ. ಆಯ್. ಸಿ. ಸಿ. ಸಭೆಯಲ್ಲಿ ಮಾತನಾಡುವಾಗ ರಾಜಾಜಿಯವರು ಹೀಗೆ ಹೇಳಿದರು: 'ಸರಕಾರದೊಡನೆ ಒಳಗಿಂದೊಳಗೆಯೆ ಏನನ್ನೋ ಮಾತನಾಡಿಕೊಳ್ಳುವ ಚಾಣಾಕ್ಷ ನಾನು ಎನ್ನುವಿರಿ. ಅದೇ ವೇಳೆಗೆ ಸರಕಾರದ ಬಲೆಯಲ್ಲಿ ಬೀಳುವಷ್ಟು ದಡ್ಡ ನಾನು ಎನ್ನುವಿರಿ. ಯಾವುದಾದರೊಂದನ್ನು ಹೇಳಿರಿ ಒಬ್ಬನೇ ಇಂತಹ ವಿರುದ್ಧ ಗುಣಗಳನ್ನುಳ್ಳವನು ಹೇಗಾಗಬಹುದು?' ಈ ಯುಕ್ತಿವಾದಕ್ಕೆ ಎ. ಆಯ್. ಸಿ. ಸಿ. ಯ ಎಷ್ಟು ಸಭಾಸದರು ಮೋಸಹೋದರೆಂಬ ಲೆಕ್ಕ ಇನ್ನೂ ಪ್ರಕಟವಾಗಿಲ್ಲ. ಆದರೆ ಬಹುಮತದಿಂದ ಸಭೆಯು 'ರಾಜಬಲೆ'ಯಲ್ಲಿ ಸಿಲುಕಿತೆಂದು ಮಂಗರಾಯನ ಅಭಿಪ್ರಾಯ. ನಿಜವಿದ್ದ ಮಾತೆಂದರೆ ಮದ್ರಾಸಿ ಮಿದುಳುಗಾರರಾದ ರಾಜಾಜಿಯವರಲ್ಲಿ, ವಿರುದ್ಧ ಗುಣಗಳನ್ನು ಇಟ್ಟುಕೊಳ್ಳುವ ವಿಶಿಷ್ಟಾದ್ವೈತ ಶಕ್ತಿ ಇದೆ. ನೋಡಿರಿ: ಅಹಿಂಸೆಯ ಧ್ಯೇಯದಲ್ಲಿ ಅವರ ವಿಶ್ವಾಸ ಕುಂದಿಲ್ಲ, ಹಿಂಸೆಗೆ ಸಿದ್ಧವಾಗಲು ಅವರ ವಿಚಾರ ಹಿಂಜರಿದಿಲ್ಲ! ಇನ್ನೂ ಒಂದು ಯುಕ್ತಿ ಎಷ್ಟು ಜನರ ಲಕ್ಷ್ಯಕ್ಕೆ ಬಂದಿದೆಯೊ! ಒಂದು ಮಾತಿಗಾಗಿ ದೃಷ್ಟಾಂತವನ್ನು ಕೊಡುವಾಗ 'ಮದರಾಸಿನ ಮುಖ್ಯ ಮಂತ್ರಿಯಾಗುವುದು ಬೇಡ, ಕೇಂದ್ರಸರಕಾರದ ಹೊಣೆಗಾರಿಕೆಯ ಮುಖ್ಯ-ಮಂತ್ರಿಯಾಗಲು ನನ್ನ ಅಡ್ಡಿ ಇಲ್ಲ' ಎಂದಿದ್ದಾರೆ! ಭಲಾಭಾಯೀ, ಭೂಲೋ ಮತ್! ಸತ್ಯಮೂರ್ತಿಯವರೆ, ಸಿನೆಮಾ ವ್ಯವಸಾಯಕ್ಕೆ ಸಾಗಿರಿ! ಇಲ್ಲವಾದರೆ—ನೀವೂ 'ರಾಜಬಲೆ'ಯಲ್ಲಿ ಸಿಲುಕಬಹುದಾಗಿದೆ. ಮದ್ರಾಸೀ ಮಾಯಾಶಕ್ತಿಯೆ ಇಂತಹದಿದೆ! ಕಪ್ಪುಮೈಬಣ್ಣದೊಳಗೆ ಬುದ್ಧಿಯ ಬೆಳಕನ್ನು ಮರೆಯಾಗಿರಿಸಿ ನಿಸರ್ಗವೆ ಈ ಸಂಚಿಗೆ ಕೈಕೊಟ್ಟಿದೆ, ಇನ್ನು ಮಾನವನ ಪಾಡೇನು? ಎಷ್ಟೆಂದು ಮಹಾತ್ಮನಾದರೂ ಮರ್ತ್ಯನೇ ಅಲ್ಲವೆ ಮಾನವನು?

* * *

೪. ಒಂದು ಒಗಟು

'ಭಾಷೆಯು ಎಲ್ಲ ಕನ್ನಡಿಗರನ್ನು ಒಂದೆಡೆಗೆ ಸೇರಿಸುವ ಪರಮ ಸಾಧನವು ಆದರೆ ರಾಷ್ಟ್ರೀಯತ್ವಕ್ಕೆ ಹಾನಿಯನ್ನುಂಟು ಮಾಡುವಂತೆ ಪ್ರಾಂತೀಯತೆಯ ಭಾವನೆಯನ್ನು ಬೆಳೆಯಗೊಡಬಾರದು. ಈ ವಿಷಯದಲ್ಲಿ ನಾವು ಸಾಕಷ್ಟು ದಕ್ಷತೆಯನ್ನು ವಹಿಸಬೇಕು. ಸದ್ಯಕ್ಕೆ ಪ್ರಾಂತಾಭಿಮಾನದ ಅಭಾವವೆ ನಮ್ಮ ಜನರಲ್ಲಿ ಕಂಡುಬರುವುದರಿಂದ ಅದು ಎಲ್ಲೆ ಮೀರಿ ಹೋಗುವದೆಂಬ ಭಯವಿಲ್ಲ....'

ವಾಚಕರೆ, ಮೇಲಿನ ವಾಕ್ಯಗಳನ್ನು ನೂರಾರು ಸಲ ಓದಿರಿ. ಒಂದೊಂದು ವಾಕ್ಯದ ಅರ್ಥವನ್ನು ಕಂಡುಹಿಡಿಯಿರಿ. ಆ ಮೇಲೆ ಎಲ್ಲ ವಾಕ್ಯಗಳಿಗೆ ಇರಬೇಕಾದ ಒಂದೇ ಒಂದು ಅರ್ಥವನ್ನು ಕಂಡು ಹಿಡಿಯಿರಿ; ಕೈಯಲ್ಲಿ ಸಿಗದಿದ್ದರೆ ತಲೆಯಲ್ಲಿಯೆ ತಡೆಯಿರಿ, ಅರ್ಥಾತ್ ತಲೆಹಿಡಿದುಕೊಂಡು ಕುಳ್ಳಿರಿ; ಅದೂ ಶಕ್ಯವಾಗದಿದ್ದರೆ ಕಣ್ಣು ಮುಚ್ಚಿರಿ; ಅಷ್ಟಕ್ಕೆ ಸಮಾಧಾನವಾಗದಿದ್ದರೆ ಹಲ್ಲುಕಿರಿಯಿರಿ—ಯಾಕೆಂದರೆ, ಕರ್ನಾಟಕದಲ್ಲಿ ಭಾಷಾಶುದ್ಧಿಯ ಏಕೀಕರಣದಿಂದ ಜಾತ್ಯೈಕ್ಯವನ್ನು ಹುಟ್ಟಿಸಿ ರಾಷ್ಟ್ರೀಯತೆಯನ್ನು ಬೆಳೆಯಿಸುವ, ವಿಶ್ವಬಾಂಧವ್ಯದಿಂದ ಭಕ್ತಿಮಾರ್ಗಕ್ಕೆ ಪ್ರವೇಶಿಸುವ ಸಯುಕ್ತ—ಅಲ್ಲ—ಸಂಯುಕ್ತ ಭಾಷಣೋದ್ದೀಪಿತ ಧರ್ಮದ ಅಂತರಂಗವಿದು; ನಾಡಿಯ ಅನಂತರಂಗದಿಂದ ಹೊರಹೊಮ್ಮಿದ ಅಗ್ನಿದಿವ್ಯವಿದು!

* * *

೫. ಪದವೀದಾನಮಹೋತ್ಸವ!

ಮನ್ನೆಯ ಮೇರರು ಕನ್ನಡ ತರುಣರಿಗೆ ಕೊಟ್ಟ ಬಿರುದು!

'ಬೆಳಗಾಂವಿಯ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುವಾಗ, ಸಭೆಗೆ ಬಂದ ಕನ್ನಡ ತರುಣರು ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಮಾತನಾಡಿರೆಂದರೆ, ಕರ್ನಾಟಕ ಸಿಂಗಣ್ಣನವರ ಮಾತನ್ನು ಕೇಳಿದ ಮಾನ್ಯ ಮೇರರು ಮುಂಗಣ್ಣ ಸಂಕೆಯ ಮಾಡಿಬಿಟ್ಟರು. ಕನ್ನಡ ತರುಣರು ನ್ಯಾಯವಾದ ಹಕ್ಕಿಗಾಗಿ ಗದ್ದಲ ಎಬ್ಬಿಸಿದರು; ನ್ಯಾಯವಾದ ಹಕ್ಕಿಗಾಗಿಯೇ ಹೋರಾಡುವ ಮನ್ನೆಯ ಮೇರರು ಕನ್ನಡ ತರುಣರಿಗೆ 'ಗುಂಡ' 'ಪುಂಡ' 'ದರೋಡೆಖೋರ' ಎಂದು ಬಿರುದುಗಳನ್ನು ಕೊಟ್ಟರು. ಕನ್ನಡನಾಡಿನ ಹಿರಿಯ ಮುಂದಾಳಾದ ದೇ. ಭ. ಗಂಗಾಧರರಾಯರು ಅವೆಲ್ಲ ಇರಲೆಂದರು; ತಾವೂ ಕನ್ನಡಿಗರಿಗೆ 'ದುರಭಿಮಾನಿಗಳು' 'ಕೀಳು ಮನಸ್ಸಿನವರು' ಎಂಬ ಪದವಿಗಳನ್ನು ಕೊಟ್ಟರು. ಅಂದಿನ ಸಭೆಯೆಂದರೆ ಕನ್ನಡ ತರುಣರ ಪದವೀದಾನ ಸಮಾರಂಭವಾಗಿ ಪರಿಣಮಿಸಿತು ....'

ಬೆಳಗಾಂವಿಯ ಕನ್ನಡಿಗರೊಬ್ಬರು ಮಂಗರಾಯನಿಗೆ ಹೀಗೆಲ್ಲ ಬರೆದು ತಿಳಿಸಿದ್ದಾರೆ. ಇದರ ಬಗ್ಗೆ ನಿನ್ನ ಅಭಿಪ್ರಾಯವೇನೆಂದೂ ಕೇಳಿದ್ದಾರೆ. ಮಂಗರಾಯ ಇದರ ಬಗ್ಗೆ ಅಭಿಪ್ರಾಯವನ್ನೇನು ಕೊಡಬೇಕು..?

ತಡೆಯಿರಿ, ನ್ಯಾಯ ಕೆರೆದು ವಿಚಾರಮಾಡುತ್ತಲಿದ್ದಾನೆ. ಹುಂ, ಎಲ್ಲರೂ ಕೇಳಿರಿ. ಇಂತಹ 'ಪದವೀದಾನಮಹೋತ್ಸವ' ಇದೇ ಮೊದಲನೆಯದಲ್ಲ. ಕನ್ನಡ ನಾಡಿನ ಮುಂದಾಳುಗಳು ನೆರೆನಾಡಿನ 'ಸತ್-ಪುರುಷ'ರನ್ನು ಕರೆಯಿಸಿ ಆಗಾಗ ಈ ಉತ್ಸವಗಳನ್ನು ಜರುಗಿಸುತ್ತಿರುವರು; ತಮ್ಮ ತರುಣರಿಗೆ ಇಂತಹ ಪದವಿಗಳನ್ನು ಕೊಡಿಸಿ ಕೌತುಕಪಡುತ್ತಿರುವರು. ನಿಜವಾಗಿಯೂ ಕನ್ನಡ ತರುಣರಲ್ಲಿ, ಮಿಕ್ಕ—ಅವರ ನೆರೆಯ ಪ್ರಾಂತೀಯರಲ್ಲಿರುವ ಕೆಲವು ಮಹತ್ತ್ವದ ಗುಣಗಳು ಇಲ್ಲವೆಂಬುದು ನಮ್ಮ ನಾಡಿನ ಹಿರಿಯರಿಗೆ ಚೆನ್ನಾಗಿ ಗೊತ್ತಿದೆ. ಆದುದರಿಂದ ಅಧಿಕಾರವಾಣಿಯಿಂದ ಯಾರಾದರೂ ತಜ್ಞರು ಆ ಗುಣಸೂಚಕ ಬಿರುದುಗಳನ್ನು ಕೊಟ್ಟರೆ, ಆ ಬಿರುದುಗಳು ಅನ್ವರ್ಥಕವಾದಾವೆಂಬ ವಿಶ್ವಾಸವಿದ್ದರೂ ಇರಬಹುದು ನಾಡಿನ ಹಿರಿಯರಿಗೆ. ಆದುದರಿಂದ ಇಂತಹ ಪದವೀದಾನ ಸಮಾರಂಭಗಳನ್ನು ಯಾರೂ ಕುಟಿಲದೃಷ್ಟಿಯಿಂದ, ಸಂಶಯ ದೃಷ್ಟಿಯಿಂದ, ವಿಪರೀತಭಾವನೆಯಿಂದ ನೋಡಬಾರದಾಗಿ ಮಂಗರಾಯನ ಸ್ಪಷ್ಟವಾದ ಅಭಿಪ್ರಾಯ. ಹಿರಿಯರು ಮಾಡುವುದೆಲ್ಲ ಕಿರಿಯರ ಒಳಿತಿಗಾಗಿಯಲ್ಲವೆ?

ಬೋಲೋ ಕರ್ನಾಟಕ ಸಿಂಹಕೀ ಜೈ!
ಕೊಡು ಕನ್ನಡದ ಕುತ್ತಿಗೀ ಮ್ಯಾಲ್ ಕೈ!

* * *

ಕುಮಾರವ್ಯಾಸನ ಕುಲ ಯಾವುದು?

ಮೊನ್ನೆ ಮೊನ್ನೆ ಧಾರವಾಡದಲ್ಲಿ ಸೇರಿದ ವೀರಶೈವ ಸಾಹಿತ್ಯಗೋಷ್ಠಿಯಲ್ಲಿ 'ಕುಮಾರವ್ಯಾಸ ವೀರಶೈವನಿದ್ದನು' ಎಂದು ಯಾರೋ ಸಂಶೋಧಕರೊಬ್ಬರು ಭಾಷಣಮಾಡಿದರಂತೆ. ಪತ್ರಿಕೆಯಲ್ಲಿ ಇದರ ವರದಿಯನ್ನೋದಿದ ಒಬ್ಬ ಸಾಹಿತ್ಯ ಭಕ್ತರು ಗಾಬರಿಯಾಗಿ ಮಂಗರಾಯನಿಗೆ ಕಾಗದ ಬರೆದಿರುವರು. ಅವರು ಇಷ್ಟೇಕೆ ಗಾಬರಿಯಾಗಿದ್ದಾರೋ ಮಂಗರಾಯನಿಗೆ ತಿಳಿಯದಾಗಿದೆ. ಎಂತಲೆ ಮಂಗರಾಯ ಅವರಿಗೊಂದು ಹೀಗೆ ಉತ್ತರ ಬರೆದಿದ್ದಾನೆ:

"ರಾಯರೆ, ನಿಮ್ಮ ಪತ್ರವನ್ನೋದಿದೆ. ನಿಮಗೆ ಬೇಕಾದುದು ಕುಮಾರವ್ಯಾಸನ ಕುಲವೋ ಕಾವ್ಯವೊ? ಕಾವ್ಯವೇ ಬೇಕಾಗಿದ್ದರೆ ಕುಮಾರವ್ಯಾಸ ಹರಿಜನನಿದ್ದರೂ ನಿಮಗೇಕೆ ಗಾಬರಿ? ಇನ್ನು ಕುಲವೇ ನಿಮಗೆ ಬೇಕಾಗಿದ್ದರೆ ಅವನು ಯಾವ ಕುಲದವನಿದ್ದನೆಂದು ನಿಮ್ಮ ವಿಶ್ವಾಸ? 'ವೀರಶೈವ' ಎಂದೋ? ಅಲ್ಲವೆಂದು ನಿಮ್ಮ ವಿಶ್ವಾಸವೇ ಇದ್ದರೆ ಗಾಬರಿಯೇಕೆ ಆಗಬೇಕು? 'ಬ್ರಾಹ್ಮಣ' ಎಂದು ನೀವು ನಂಬುವಿರೇನು? ಅದಕ್ಕೆ ಯುಕ್ತ ಪ್ರಮಾಣಗಳನ್ನು ತೋರಿಸಬಲ್ಲಿರಾದರೆ ವ್ಯರ್ಥ ಗಾಬರಿಗೊಳ್ಳುವುದೇಕೆ? ಒಳ್ಳೆಯವರನ್ನು 'ನಮ್ಮವನು-ತಮ್ಮವನು' ಎಂದು ಎಲ್ಲರೂ ಎಳೆದಾಡುವುದು ಸಹಜ. ಒಳ್ಳೆಯತನ ವ್ಯಕ್ತಿಯ ಕೃತಿಯಲ್ಲಿರುವುದಲ್ಲದೆ ಕುಲದಲ್ಲಿರುವುದಿಲ್ಲ. ಮಿಕ್ಕ ಬ್ರಾಹ್ಮಣ ಕವಿಗಳನ್ನು ಯಾರೂ ವೀರಶೈವರು ಎನ್ನುವುದಿಲ್ಲ. ವೀರಶೈವ ಕವಿಗಳನ್ನು ಮಿಕ್ಕವರಾರೂ ಬ್ರಾಹ್ಮಣರೆಂದು ಹೇಳುವುದಿಲ್ಲ. ಇನ್ನು ಕುಮಾರವ್ಯಾಸನ ಕುಲದ ವಿಚಾರದಲ್ಲಿ ನಿಮಗೇ ಸಂಶಯವೇನಾದರೂ ಇದ್ದರೆ ಕೋಳಿವಾಡಕ್ಕೆ ಹೋಗಿರಿ; ಕುಮಾರವ್ಯಾಸನ ಕುಲದ ಗೌಡರೇ ಇದ್ದಾರೆ, ಅವರನ್ನು ಕೇಳಿರಿ. ಮಂಗರಾಯನಿಗೆ ಇಂತಹ ಸಣ್ಣ ಮಾತುಗಳಿಗಾಗಿ ಸಂಶೋಧನೆ ನಡೆಯಿಸಲಿಕ್ಕೆ ಸಾಕಷ್ಟು ಸಮಯ ಇಲ್ಲವೀಗ. ಮಹಾಯುದ್ಧದಕಾಲ ಗೊತ್ತಿಲ್ಲವೆ?"

* * *

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,
೬ ಆಣೆಗೆ ಒಂದು ಸೆಟ್ಟು

ಮಿಕ್ಕ ಬ್ಲೇಡುಗಳಿಗಿಂತ ಚೊಕ್ಕಟ!
ಚರ್ಮ ಉರಿಯುವುದಿಲ್ಲ; ಕಪ್ಪಾಗುವುದಿಲ್ಲ!

ಕಳೆದ ಮಹಾಯುದ್ಧದಲ್ಲಿ ★ (೨ನೆಯ ಭಾಗ)

★ ಭಾರತೀಯರ ಸಹಾಯ

ಶ್ರೀ. ನಾಳ್ವೀಕರ ಗುರುರಾಯರು, ಬಿ. ಎ., ಎಲ್‌ಎಲ್. ಬಿ. ★

ತನ್ನಲ್ಲಿ ಹುಟ್ಟಿ ಬಾಳುತ್ತಲಿದ್ದ ಬಡ ಭಾರತೀಯರಿಗೆ ಹೊಟ್ಟೆಗಿಲ್ಲದಿದ್ದರೂ ಬಟ್ಟೆಗಿಲ್ಲದಿದ್ದರೂ, ಭರತಖಂಡ ಬ್ರಿಟಿಷರಿಗೂ ಬೇರೆ ದೇಶದವರಿಗೂ ಕಳುಹಿದ ಧನದ ರಾಶಿಯೆಂತಹದು? ಭಾರತದಲ್ಲಿ ವಿಧಾಯಕ ಕಾರ್ಯಗಳಿಗದನ್ನು ವೆಚ್ಚಮಾಡಿದ್ದರೆ ಭಾರತೀಯರ ಬಡತನವೆ ಇಲ್ಲದಂತಾಗುತ್ತಿತ್ತು!

ಮೊದಲು ಮಾತು

ಈ ಬರೆಹದ ಮೊದಲನೆಯ ಭಾಗದಲ್ಲಿ ಭಾರತೀಯರು ಮಾಡಿದ ಧನಸಹಾಯದ ಉಲ್ಲೇಖವನ್ನು ಮಾಡಿದ್ದೇನೆ. ಅದರ ಹೆಚ್ಚಿನ ವಿವರಗಳನ್ನು ಈ ಬರೆಹದಲ್ಲಿ ಕೊಡುತ್ತೇನೆ. ಕೆಲವು ಸಂಗತಿಗಳನ್ನು ಸ್ವಲ್ಪ ಹೆಚ್ಚು ವಿಸ್ತಾರವಾಗಿ ತಿಳಿಸುವುದು ಅವಶ್ಯವಿದೆಯೆಂದು ತೋರುತ್ತದೆ. ಆದ್ದರಿಂದ ಕೆಲವು ಅವತರಣಿಕೆಗಳನ್ನು ಕೊಡುತ್ತೇನೆ. ಅಂಕೆಗಳನ್ನು ಆದಷ್ಟು ಕಡಿಮೆ ಕೊಡಬೇಕೆಂದು ಬಲವಾದ ಇಚ್ಛೆ ಇದ್ದರೂ, ಅವುಗಳ ಆಧಾರವಿಲ್ಲದೆ ಮಾಡಿದ ವಿಧಾನಗಳು ಓದುಗರಿಗೆ ತೃಪ್ತಿಕರವಾಗವು. ಮನುಷ್ಯದೇಹಕ್ಕೆ ಅಸ್ಥಿಪಂಜರದ ಆಧಾರ ವೆಷ್ಟಿದೆಯೋ ಅದಕ್ಕಿಂತ ಹೆಚ್ಚು ಇಂತಹ ಬರೆಹಗಳಿಗೆ ಅಂಕೆಗಳ ಆಧಾರವಿರುತ್ತದೆ. ಕಾರಣ ಅವುಗಳನ್ನು ಸ್ವಲ್ಪ ಹೆಚ್ಚಾಗಿ ಕೊಡಬೇಕಾಗಿದೆ.

ಆಳಿನಿಂದ ಅರಸನವರೆಗೆ

ಮುಂಜಾವಿನಿಂದ ಸಂಜೆಯವರೆಗೆ—ಕೆಲವು ಸಂದರ್ಭಗಳಲ್ಲಿ ನಿಶಾಚರರಂತೆ ಸಂಜೆಯಿಂದ ಬೆಳಗಿನವರೆಗೆ—ಮೈ ನುಗ್ಗಾಗುವಂತೆ ದುಡಿದ ಕೂಲಿಕಾರರು, ಬಡತನದ ಬಾಳುವೆಯಲ್ಲಿ ಬಳಲುವ ಹಳ್ಳಿಗರು, ಸ್ವಹಸ್ತದಿಂದ ಪರಹಸ್ತದಿಂದ ಪ್ರತ್ಯಕ್ಷವಾಗಿ ಅಪ್ರತ್ಯಕ್ಷವಾಗಿ ಹಿಂದಿನ ಮಹಾಯುದ್ಧದಲ್ಲಿ ಬ್ರಿಟಿಶರಿಗೆ ಧನಸಹಾಯ ಮಾಡಿದರು. ಉಳಿದಿನೆಯೆಂದು ತಿಳಿದುಕೊಂಡ ಲಾಭದ ಅಬ್ಬರದಲ್ಲಿ ವರ್ತಕರು 'ವಾರಲೋನ್' 'ವಾರಫಂಡು'ಗಳಿಗೆ ದೊಡ್ಡ ರಕಮು ಗಳನ್ನು ಕೊಟ್ಟರು. ಹಗ್ಗವನ್ನು ಹಾವೆಂದು ತಿಳಿದುಕೊಂಡು ಬೆದರಿ ಗಾಬರಿಗೊಂಡು, ಮೈತುಂಬ ಬೆವತು, ಸುಮ್ಮನೆ ದುಃಖ ಪಡುವವನಂತೆ— ವರ್ತಕರೂ ಉದ್ಯೋಗಸ್ಥರೂ, ಮಿಂಚಿನಂತೆ ಕ್ಷಣದಲ್ಲಿ ಮಾಯವಾಗುವ ಈ ಲಾಭದ ಮೋಹಕ್ಕೆ ಬಲಿಬಿದ್ದರು. ಈ ಮಾಯಾಮಯವಾದ ಲಾಭದಲ್ಲಿ ಉಳಿಯಬಹುದಾದ ಅಲ್ಪ ಸ್ವಲ್ಪ ಭಾಗವನ್ನು ಸಹ ರಿವ್ಹರ್ಸ್‌ಕೌನ್ಸಿಲ್ ಮೊದಲಾದುವುಗಳು ಕಚ್ಚಿಕೊಂಡು ಹೋಗಿಬಿಟ್ಟುವು. ಬ್ರಿಟಿಶರಂತಹ ಧನಾಢ್ಯರ ದೊಡ್ಡವರ ಆಶ್ರಯದಲ್ಲಿದ್ದೇವೆಂದು ಉಬ್ಬಿದ ಭಾರತೀಯರು, ಮೊದಲಿನ ಬಡತನದ ಮನೆಗೇ ಬಂದುಬಿಟ್ಟರು. ತಮ್ಮ ದುಷ್ಟ ಆಡಳಿತದ ದೋಷಗಳ ಬಗ್ಗೆ ತಮಗೆ ಯಾವ ಪ್ರಾಯಶ್ಚಿತ್ತವೂ ದೊರೆಯಬಾರದೆಂದು ಬಳ್ಳಿ ದಕ್ಷತೆಯಿಂದ ಬ್ರಿಟಿಶರನ್ನು ಸಂತುಷ್ಟರನ್ನಾಗಿ ಮಾಡುವುದರಲ್ಲಿ ತತ್ಪರರಾದ, ತಮ್ಮ ಮನೆತನದ ತಮ್ಮ ಸ್ವಂತದ ಖಾಸಗಿ ಖರ್ಚನ್ನು (Privy Purse) ಅಡಗಿಸಿಡುವ ನರೇಂದ್ರರು ಹಣ ಸುರಿಸಿದರೆಂದು ಹೇಳುವ ಕಾರಣವಿಲ್ಲ. ಯುದ್ಧ-ಸಹಾಯದ ರಂಗಸ್ಥಳದ ಮೇಲೆ ಯಾವ ಯಾವ ಪಾತ್ರಗಳು ಹೇಗೆ ಹೇಗೆ ಕುಣಿದುವೆಂಬುದನ್ನು ವರ್ಣಿಸಲಿಕ್ಕೆ ಕವಿಯೇ ಬೇಕು.

ಮಾಂಡಲಿಕರ ಸಾಮ್ರಾಜ್ಯಸೇವೆ

ಹಿಂದುಸ್ತಾನದಲ್ಲಿ ಹಿಂಡುಹಿಂಡಾಗಿ ಇರುವ ಮಾಂಡಲಿಕರು ತಮಗೆ 'ನರೇಂದ್ರ' 'ಸುರೇಂದ್ರ' 'ರಾಜಾಧಿರಾಜ' ಮೊದಲಾದ ಮಾರುದ್ದ ಬಿರುದಾವಳಿಗಳನ್ನು ಬರೆಯಿಸಿಕೊಂಡು ಭಟ್ಟಂಗಿಗಳ ಕಡೆಯಿಂದ ಪಠನಮಾಡಿಸಿ ಹೊಗಳಿಸಿಕೊಳ್ಳುವವರಲ್ಲಿ ಹಿರಿದಾದವರೆಂದು ಹೆಸರು ಪಡೆದುಕೊಂಡಿದ್ದಾರೆ. ಇವರ ಅಧಿರಾಜ್ಯತ್ವ ಎಂತಹದೋ ತಿಳಿಯದು. ಮಹಾಯುದ್ಧವು ಪ್ರಾರಂಭವಾದ ಒಂದು ತಿಂಗಳಲ್ಲಿ, ನಾವು ಹೆಚ್ಚು ನೀವು ಹೆಚ್ಚು ಹಣ ಸಲ್ಲಿಸಿದೆವೆಂಬ ಅಹಮಹಮಿಕೆಯು ಇವರಲ್ಲಿ ಪ್ರಾರಂಭವಾಯಿತು. ಬ್ರಿಟಿಶರು ೪ನೆಯ ಆಗಸ್ಟ್ ೧೯೧೪ಕ್ಕೆ ಮಹಾಯುದ್ಧವನ್ನು ಸಾರಿದರು. ೨೮ನೆಯ ಆಗಸ್ಟಿಗೆ ಮೈಸೂರಿನ ಮಹಾರಾಜರು ಯುದ್ಧದ ವೆಚ್ಚಕ್ಕಾಗಿ ಐವತ್ತು ಲಕ್ಷ ರೂಪಾಯಿಗಳನ್ನು ವ್ಹಾಯಿಸ್‌ರಾಯರ ಸ್ವಾಧೀನಮಾಡಿದರು. ಹೈದರಾಬಾದಿನ ನಿಝಾಮರು, ಹೀಗೆ ಸಹಾಯಮಾಡುವ ಸಂಪ್ರದಾಯವು ತಮ್ಮ ರಾಜಮನೆತನದಲ್ಲಿ ಮೊದಲಿನಿಂದಲೂ ಬಂದಿದೆಯೆಂದೂ ಮತ್ತು ತಮ್ಮ ತಾತಂದಿರು ೧೯೧೭ರಲ್ಲಿ ವಿಕ್ಟೋರಿಯಾ ಮಹಾರಾಣಿಯವರಿಗೆ ೬೦ ಲಕ್ಷ ರೂಪಾಯಿಗಳನ್ನು ಸಲ್ಲಿಸಲು ಸಿದ್ಧರಿದ್ದರೆಂದೂ ಹೇಳಿ, ಸದ್ಯಕ್ಕೆ

ಅಷ್ಟು ರಕಮುನ್ನಾದರೂ ತಾವು ಕೊಡುತ್ತೇವೆಂದು ಹೇಳಿದರು. ನಮೂನೆಗಾಗಿ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ.

ನೈಜಾಮರ ದಾತೃತ್ವ

ಸಾಲಕೊಟ್ಟ ರಕಮು— ೧ ಕೋಟಿ ೬೪ ಲಕ್ಷ ರೂಪಾಯಿ.

ದಾನಕೊಟ್ಟ ರಕಮು— ೧ ಕೋಟಿ ೯೩ ಲಕ್ಷ ರೂಪಾಯಿ.

ಅದರ ವಿವರಗಳು ಕೆಳಗಿನಂತೆ ಇವೆ:—

ಅಶ್ವಸೇನೆಯ ವೆಚ್ಚಕ್ಕಾಗಿ (20th Deccan Horse and the 1st Hyderabad Imperial Service Cavalry)	೧ ಕೋಟಿ ೫೩ ಲಕ್ಷ ರೂ.
ಬ್ರಿಟಿಶ ನೌಕಾಪಡೆಗೆ (Anti submarine campaign)	೧೫ ಲಕ್ಷ ರೂ.
ವಿಶೇಷ ದಾನ	೧೫ ಲಕ್ಷ ರೂ.
ಯುದ್ಧದಲ್ಲಿ ನೋಯುಹೊಂದಿದವರಿಗಾಗಿ (sufferers) ಚಕ್ರವರ್ತಿ ಹಾಗು ಚಕ್ರವರ್ತಿನಿಯವರ ಮದುವೆಯ ರೌಪ್ಯಮಹೋತ್ಸವಕ್ಕಾಗಿ (ಸಿಲ್ವರ ವೆಡಿಂಗ್ ಫಂಡ್)	೩ ಲಕ್ಷ ೭೫ ಸಾವಿರ ರೂ.
ಲಾಯಿಲ್ಡಿ ಆಸ್ಪತ್ರೆ ಹಡಗಿಗಾಗಿ	೨ ಲಕ್ಷ ರೂ.
ಬೇರೆ ಸಣ್ಣ ರಕಮುಗಳು	೨ ಲಕ್ಷ ೩೪ ಸಾವಿರ ರೂ.

ಈ ಬಗೆಯ ಧನಸಹಾಯವಲ್ಲದೆ, ಸರಕುಗಳನ್ನು ಪೂರಯಿಸುವುದರಲ್ಲಿಯೂ ಮಾಂಡಲಿಕ ಭೂಪಾಲರು ಹಿಂದೆ ಬಿದ್ದಿದ್ದಿಲ್ಲ. ಅದರ ವಿಚಾರ ಮುಂದುಗಡೆ ಮಾಡುವ.

ಬರೋಡದ ಗಾಯಕವಾಡರು

ಇವರು ದಾನಕೊಟ್ಟ ರಕಮು ೩೨ ಲಕ್ಷ ೭೫ ಸಾವಿರ ರೂ. ಇಷ್ಟು. ಈ ರಕಮಿನಲ್ಲಿ ಫೋರ್ಡ ಮೋಟರ್ ವ್ಯಾನ್ಸ್ (Vans) ಗಳಿಗಾಗಿ ೧೫ ಲಕ್ಷ ರೂ. ಕೊಡುವುದರಲ್ಲಿ ಬಂದಿತ್ತು. ಹೋದ ಮಹಾಯುದ್ಧದಲ್ಲಿ ಅಮೇರಿಕೆಯು ಸಿರಿವಂತಿಕೆಯ ಶಿಖರಕ್ಕೇರಿತು. ಜಪಾನವು ಅನೇಕ ಉದ್ಯೋಗ-ಧಂದೆಗಳನ್ನು ಬೆಳಸಿ ಧನಾಢ್ಯ ರಾಷ್ಟ್ರವಾಯಿತು. ವ್ಯಾಪಾರವನ್ನು ಅಭಿವೃದ್ಧಿಪಡಿಸಿಕೊಂಡಿತು. ಆದರೆ ಹಿಂದುಸ್ಥಾನವು ಮುಖ್ಯವಾಗಿ ಕಚ್ಚಾಮಾಲನ್ನು— ಯುದ್ಧಕ್ಕೆ ಬೇಕಾಗುವ ಕೆಲವು ಯುದ್ಧಸಾಮಗ್ರಿಯನ್ನು— ಪೂರಯಿಸುವುದಕ್ಕಿಂತ ಹೆಚ್ಚಿಗೆ ಏನನೂ ಮಾಡಲಿಲ್ಲ. ಕಳೆದ ೨೫ ವರ್ಷಗಳಲ್ಲಿಯೂ ಹಿಂದುಸ್ಥಾನದಲ್ಲಿ ಮೋಟರ್ ಕಾರಖಾನೆ ತೆರೆಯಲಿಲ್ಲ. ತೆರೆಯಲು ಸಿದ್ಧತೆಯನ್ನು ಮಾಡಿದವರಿಗೆ ಜನಾಬ ಕೆಲವು ಉತ್ತೇಜನ ದೊರೆಯುತ್ತಿಲ್ಲವೆಂಬುದು ಓದುಗರಿಗೆ ಗೊತ್ತಿದ್ದ ಸಂಗತಿಯಾಗಿದೆ. ಇತ್ತ ಹಿಂದಿ ಕಾರಖಾನೆ ಹೊರಡಲಿಲ್ಲ; ಅತ್ತ ಕೋಟ್ಯವಧಿ ರೂ. ಕ್ರಯದ ಲಕ್ಷಾವಧಿ ಮೋಟರುಗಳಿಗೆ ಆರ್ಡರ್ ಕೊಡುವುದರಲ್ಲಿ ಬಂತು. ಗಾಯಕವಾಡರು ೧ ಕೋಟಿ ರೂ. ಗಳಿಗಿಂತ ಹೆಚ್ಚಿಗೆ 'ವಾರಲೋನ್' ಕೊಟ್ಟರು. ಹಿಂದೀ ಸಂಸ್ಥಾನಿಕರಲ್ಲದೆ ಅವರ ಪ್ರಜರು ಕೂಡ ಪರಿಪರಿಯಿಂದ ಧನಸಹಾಯ ಮಾಡಿದರು

ಅಸಂಖ್ಯ ಫಂಡುಗಳು

ಶಾಂತವೃತ್ತಿಯ, ಸಾರಾಸಾರ ವಿಚಾರವಮಾಡುವ, ಸರಕಾರಿ ಅಧಿಕಾರಿಗಳಾದ ಪ್ರೊಫೆಸರ್ ಪಾಣಂದಿಕರರು ಹೀಗೆ ಒರೆದಿದ್ದಾರೆ: "Some idea, although an inadequate one, of these contributions may be obtained from the fact that the bare list of larger donations published by the Government was long enough to fill more than 200 pages of a closely printed pamphlet." **ಸಾರಾಂಶ :** 'ದೊಡ್ಡ ದೊಡ್ಡ ರಕಮುಗಳನ್ನು ದಾನಕೊಟ್ಟವರ ಹೆಸರುಗಳ ಪಟ್ಟಿಯು ಒತ್ತು ಒತ್ತಾಗಿ ಅಚ್ಚಾದ ೨೦೦ ಪುಟಗಳುಳ್ಳ ಪುಸ್ತಕವಾಗಿದೆಯೆಂಬ ಸಂಗತಿಯು ಮೇಲಿಂದ, ನಿಮಗೆ ಈ ದಾನದ ಬಗ್ಗೆ ಮಸಕುಮಸಕಾದ ಕಲ್ಪನೆ ಬರಬಹುದು' ಈ ಮಾತು ನಿಚ್ಚಳವಾಗಿ ಕಾಣಬೇಕೆಂದು ಈ ಫಂಡುಗಳಲ್ಲಿ ಕೆಲವುಗಳ ಹೆಸರುಗಳನ್ನು ಕೆಳಗೆ ಕೊಟ್ಟಿದ್ದೇನೆ :

೧. ಇಂಪೀರಿಯಲ್ ವಾರ್ ರಿಲೀಫ್ ಫಂಡು
೨. ಬೆಲಜಮ್ ರಿಲೀಫ ಫಂಡು
೩. ಇಂಡಿಯನ್ ವಾರ್ ರಿಲೀಫ್ ಫಂಡು
೪. ಸ್ಪೆಶಲ್ ವಾರ್ ರಿಲೀಫ್ ಫಂಡು
೫. ಪ್ರಿಝನರ್ಸ ಆಫ್ ವಾರ್ ಫಂಡು
೬. ಅವರ್ ಡೆ ಸಬ್‌ಸ್ಕ್ರಿಪ್‌ಶನ್ಸ್
೭. ಪ್ರಿನ್ಸ್ ಆಫ್ ವೆಲ್ಸ್ ರಿಲೀಫ್ ಫಂಡು
೮. ಇನೋಟಾ ಕಾರ್ ಟೂ ಸ್ಪೆಶಲ್ ವಾರ್ ಫಂಡು
೯. ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡು
೧೦. ಇಂಡಿಯನ್ ಸೋಲ್ಜರ್ಸ್ ಫಂಡು
೧೧. ಬೆಂಗಾಲ್ ಅಂಬ್ಯುಲನ್ಸ್ ಕೋರ್ ಫಂಡು
೧೨. ಕಲಕತ್ತಾ ವಾರ್‌ಗಿಫ್ಟ್ ಫಂಡು
೧೩. ಲೇಡಿ ಕಾರ್ಮಾಯಿಕಲ್ ವುಮೆನ್ಸ್ ವಾರ್ ಫಂಡು
೧೪. ಬೆಂಗಾಲ ಡಬಲ್ ಕಂಪನಿ ಫಂಡು
೧೫. ಲಾರ್ಡ ಕಿಚನೇರ್ ಮೆಮೋರಿಯಲ್ ಫಂಡು
೧೬. ಬರಡ್ವಾನ್ ಅವರ್‌ಡೇ ರಿಲೀಫ್ ಫಂಡು
೧೭. ಕಿಂಗ್ ಜಾರ್ಜೆಸ್ ಫಂಡ್ ಫಾರ್ ಸೇಲರ್ಸ
೧೮. ರಾಯಲ್ ಸಿಲ್ವ್ಹರ್ ವೆಡಿಂಗ್ ಫಂಡು
೧೯. ಚಾರ್ಜರ್ ಫಂಡ್ ಆಫ್ ದಿ ಬೆಂಗಾಲ್ ಲಯಾಟಿ ಹಾರ್ಸ
೨೦. ವೆಲಿಂಗಟನ್ಸ್ ವಾರ್ ಫಂಡು
೨೧. ಲಾರ್ಡ ಮೇಯರ್ಸ್ ಫಂಡ್ ಫಾರ್ ಬೆಲ್ಜಿಯನ್ ಚಿಲ್ಡ್ರನ್
೨೨. ಗ್ರೇಟ್ ವಾರ್ ಸೇಲ್ ಫಂಡು
೨೩. ನ್ಯಾಶನಲ್ ರುಮೇನಿಯನ್ಸ್ ರಿಲೀಫ್ ಫಂಡು
೨೪. ಚಿಲ್ಡ್ರನ್ಸ್ ಜ್ಯುಎಲ್ ಫಂಡ್ ಲಂಡನ್
೨೫. ಫ್ರೆಂಚ್ ವಾರ್ ಆರ್ಫನ್ಸ್ ಫಂಡು
೨೬. ಬ್ರಿಟಿಶ್ ರೆಡ್ ಕ್ರೆಸೆಂಟ್ ಸೋಸಾಯಿಟಿ

೨೭. ಆಫಿಸರ್ಸ್ ಫ್ಯಾಮಿಲಿ ಫಂಡು

೨೮. ಖಾಕಿ ಫಂಡ್ ಫಾರ್ ದಿ ರಿಲೀಫ್ ಆಫ್ ಪ್ರಿಝುನರ್ಸ್ ಇನ್ ಜರ್ಮನಿ

೨೯. ಜನರಲ್ ಬೆನಿವ್ಹೊಲಂಟ್ ಫಂಡ್ ಆಫ್ ದಿ ವಾರ್-ಹಾಸ್ಪಿಟಲ್

೩೦. ರೆಡ್ ಕ್ರೆಸೆಂಟ್ ಸೊಸಾಯಿಟಿ ಲಂಡನ್

೩೧. ಸೇಂಟ್ ಜಾನ್ ಅಂಬ್ಯುಲನ್ಸ್ ಅಸೋಸಿಯೇಶನ್ ಜರುಸಲೇಮ್

೩೨. ವಾರ್ ಗಿಫ್ಟ್ಸ್ ಫಂಡ್

ಎಲ್ಲ ಫಂಡುಗಳ ಹೆಸರುಗಳನ್ನು ಕೊಡುವುದು ಶಕ್ಯವಿಲ್ಲ; ಹಾಗೂ ಅವಶ್ಯವೂ ಇಲ್ಲ. ಮೇಲೆ ಕೊಟ್ಟ ಹೆಸರುಗಳ ಮೇಲಿಂದ ಫಂಡುಗಳ ಕಲ್ಪನೆ ಚನ್ನಾಗಿ ಆದೀತೆಂಬ ಭರವಸೆ ಇದೆ.

ಹೆಚ್ಚಿನ ವಿವರಗಳು

ದಂಡಿನ ವೆಚ್ಚದ ಉಲ್ಲೇಖವನ್ನು ಮೊದಲನೆಯ ಭಾಗದಲ್ಲಿ ಮಾಡಿದ್ದೇನೆ. ಆದರೆ ಕೆಲವು ಓದುಗರು ಅದರ ಬಗ್ಗೆ ಹೆಚ್ಚು ವಿವರಗಳನ್ನು ಕೊಡಬೇಕೆಂದು ತಿಳಿಸಿದ್ದಾರೆ. ಕೆಲವು ಸಂಗತಿಗಳು ಅವರಿಗೆ ಸೋಜಿಗದುವೆಂದೆನಿಸಿದುವೇನೋ ತಿಳಿಯದು; ಹೇಗೂ ಇರಲಿ, ಹೆಚ್ಚಿನ ವಿವರಗಳನ್ನು ಕೊಡುತ್ತೇನೆ. ಆಗಿನ ಕಾಲದ ವರಿಷ್ಠ ಕಾಯದೆ ಮಂಡಳದ ಸಭಾಸದರಾದ **ಸರ್ ಗಂಗಾಧರ ಚಿಟಣವೀಸರು**, ಹಿಂದುಸ್ಥಾನದಿಂದ ಬೇರೆ ಬೇರೆ ಯುದ್ಧ ಕ್ಷೇತ್ರಗಳಿಗೆ ಹೋದ ದಂಡುಗಳ ಸಂಪೂರ್ಣ ವೆಚ್ಚವನ್ನು ಹಿಂದುಸ್ಥಾನವು ಕೊಡಬೇಕೆಂಬ ನಿರ್ಣಯವನ್ನು ಕಾನೂನು ಮಂಡಳದಲ್ಲಿ ಮಂಡಿಸುವ ಕಾಲಕ್ಕೆ ಹೀಗೆ ಹೇಳಿದರು: "Should any outside danger threaten us we stand shoulder to shoulder round our mighty mother, England and her enemies will find us arrayed in solid phalanx by her side ready to meet any danger and render any sacrifice for the sake of the great of. the glorious Empire of which we are proud to call ourselves citizens....we are and shall be ready to bear our share in the financial burden that will be imposed by this war." ಎಂದರೆ 'ಹೊರಗಿನ ಗಂಡಾಂತರ ಬಂದರೆನಾವು ಒಟ್ಟುಗೂಡಿ ನಮ್ಮ ಮಾತೃಭೂಮಿಯ ರಕ್ಷಣೆ ಮಾಡುವೆವು. ಇಂಗ್ಲಂಡದ ಶತ್ರುಗಳು ಸಮರದಲ್ಲಿ ಸಾಲುಗೊಂಡು ನಿಂತು ಸಾಯಲು ಕೂಡ ಹಿಂಜರಿಯದಿರುವ ನಮ್ಮನ್ನು ಕಂಡು ಚೆದರದೆ ಇರರು. ಈ ಘನವಾದ ಹಾಗೂ ದೇದೀಪ್ಯಮಾನವಾದ ಸಾಮ್ರಾಜ್ಯದ ನಾಗರಿಕರೆಂದು ಕರೆದುಕೊಳ್ಳಲು ನಮಗೆ ಅಭಿಮಾನವೆನಿಸುತ್ತದೆ. ಈ ಮಹಾಯುದ್ಧವು ಸಾಮ್ರಾಜ್ಯದ ಮೇಲೆ ಹೇರಿದ ವೆಚ್ಚದ ಭಾರವನ್ನು ಸಹಿಸಲು ನಾವು ಸಿದ್ಧರಿದ್ದೇವೆ....'ಇತ್ಯಾದಿ. ಸರ್ ಗಂಗಾಧರ ಪಂತರು ಇಹಲೋಕದ ಯಾತ್ರೆ ಮುಗಿಸಿಕೊಂಡು, ಕಪ್ಪು ಜನಾಂಗಗಳ ಸತ್ತ್ವಹರಣದಲ್ಲಿ ಹಿರಿಯದಾದ ಸಾಮ್ರಾಜ್ಯವನ್ನು ಹೊಗಳಿದ್ದರ ಬಗ್ಗೆ—ಬಟ್ಟಂಗಿಗಳಿಗೆ—ದೊರೆಯುವ ಫಲವನ್ನು ಎಲ್ಲಿ ಇದ್ದಲ್ಲಿ ಅನುಭವಿಸುತ್ತಿರಬೇಕು. **ಸರ್** ಸಾಹೇಬರಿಗೆ ಸಾಮ್ರಾಜ್ಯಗಳ ಕಾಲವು ಕಳೆದುಹೋಗಿದೆಯೆಂಬುದನ್ನು ತಿಳಿದುಕೊಳ್ಳುವಷ್ಟು ದೂರದೃಷ್ಟಿ ಇರಲಿಲ್ಲ. ೧೯೧೪ ರಿಂದ ನಾಲ್ಕು ವರ್ಷಗಳಲ್ಲಿ ಯುರೋಪಖಂಡದಲ್ಲಿ ಬಹು ಬಲಾಢ್ಯವಾದ ನಾಲ್ಕು ಸಾಮ್ರಾಜ್ಯಗಳು ಕಳಚಿಕೊಂಡು ಬಿದ್ದುವು. ಬ್ರಿಟಿಶರಿಗೆ ಸಹ— ಭಾರತ ಸ್ಟೇಟ್ ಸಕ್ರೆಟರಿಗಳಾದ ಅಮೆರಿಯವರಂಥವರನ್ನು ಬಿಟ್ಟಿಳಿದು— ಸಾಮ್ರಾಜ್ಯವೆಂಬ 'ಶಬ್ದಕ್ಕಿಂತ ಬ್ರಿಟಿಶ್ ಕಾಮನ್‌ವೆಲ್ಥ್ ಆಫ್ ನೇಶನ್ಸ್' ಎಂಬ ನಾಮಾಭಿಧಾನವು ಹೆಚ್ಚು ಇಷ್ಟವಾದದ್ದೆಂದು ಎನಿಸಹತ್ತಿದೆ. ಸಂಪತ್ತಿಯ ಆಗರವಾದ ಬ್ರಿಟನಿಗೆ ಧನಸಹಾಯ ಮಾಡುವುದರಲ್ಲಿ ಉತ್ಸುಕರಾದ ಸರ್ ಸಾಹೇಬರಿಗೆ, ಒಪ್ಪತ್ತುಂಡು ಕಾಲಕಳೆಯುವ ಕೋಟ್ಯವಧಿ ಜನವಸತಿಯ ಬಡಭಾರತದ ಮೇಲೆ ಹೆಚ್ಚಿನ ಕರ ಹೇರಬಾರದೆಂಬುದರ ಅರಿವು ಉಳಿಯಲಿಲ್ಲ. ಆದರೆ ಧೂರ್ತರೂ ಚಾಣಾಕ್ಷರೂ ಆದ ವ್ಹಾಯಿಸ್‌ರಾಯ್ **ಲಾರ್ಡ್ ಹಾರ್ಡಿಂಜರಿಗೆ** ಜನತೆಯ ಕ್ಷೋಭವಾಗುವಷ್ಟು ಕರ ಕೂಡಿಸಬಾರದೆಂಬ ಮಾತಿನ ಮರೆವು ಆಗಿದ್ದಿಲ್ಲ. ಸರ್ ಗಂಗಾಧರ ಪಂತರಿಗೆ ಅವರು ಹೀಗೆ ಉತ್ತರಕೊಟ್ಟರು:

"I speak for the Government of India when I say that we are in full accord and complete sympathy with the wish expressed and will be very pleased to gratify it as far as we legitimately can having due regard to the interest of the tax-payers" ಎಂದರೆ: "ನಿಮ್ಮ ಅಭಿಲಾಷೆಗೆ ನಮ್ಮ ಸಂಪೂರ್ಣ ಒಪ್ಪಿಗೆ ಇದೆ, ನಮ್ಮ ಸಹಾನುಭೂತಿ ಇದೆ. ಕರಕೊಡುವವರ ಹಿತರಕ್ಷಣೆ ಮಾಡಿ, ಕಾನೂನಿಗನುಸರಿಸಿ ಅದನ್ನು ತೃಪ್ತಿಗೊಳಿಸಲು ನಮಗೆ ಸಂತೋಷವಾಗುತ್ತದೆಂದು ನಾನು ಹಿಂದುಸ್ಥಾನ್ ಸರಕಾರದ ಪರಿಯಿಂದ ಹೇಳುತ್ತೇನೆ" ಮುಂದೆ ವ್ಹಾಯಿಸ್‌ರಾಯರು ಹೀಗೆ ಹೇಳಿದರು: "A contribution on more liberal line than this would not, we think, be fair to the Indian tax-payers..." ಎಂದರೆ: ಇದಕ್ಕೂ ಹೆಚ್ಚಿನ ಉದಾರ ಸಹಾಯವು ಹಿಂದೀ ಕರಕೊಡುವವರಿಗೆ ನ್ಯಾಯವಾದದ್ದಾಗಲಿಕ್ಕಿಲ್ಲ— ಎಂದರೆ ಹಿಂದುಸ್ಥಾನದ ಹೊರಗಿನ ರಣಕ್ಷೇತ್ರಗಳಿಗೆ ಕಳಿಸಿದ ದಂಡು ಹಿಂದುಸ್ಥಾನದಲ್ಲಿದ್ದರೆ ಅದಕ್ಕಾಗಿ ಎಷ್ಟು ಹಣ ವೆಚ್ಚ ಮಾಡಬೇಕಾಗುತ್ತಿತ್ತೋ ಅಷ್ಟೇ ಹಣವನ್ನು ಹಿಂದುಸ್ಥಾನವು ಕೊಟ್ಟರೆ ಸಾಕು. ಹೊರಗಿನ ಸಮರಗಳಲ್ಲಿ ಹಿಂದೀ ಸೈನ್ಯಕ್ಕಾಗಿ ಆಗುವ ಎಲ್ಲ ವೆಚ್ಚವನ್ನು ಭಾರತೀಯರು ಕೊಡುವುದು ಯೋಗ್ಯವಲ್ಲ. ಇಷ್ಟು ಕರಭಾರವನ್ನು ಹೊರುವ ಬಲ ಭಾರತೀಯರಲ್ಲಿ ಇಲ್ಲ." ವ್ಹಾಯಿಸ್‌ರಾಯರು ಹೀಗೆಲ್ಲ ಹೇಳಿದರು. ೧೯೧೪ರ ಸಪ್ಟಂಬರ್ ತಿಂಗಳಲ್ಲಿ ಬ್ರಿಟಿಶ್ ಪಾರ್ಲಿಮೆಂಟಿನ ಮುಖ್ಯ ಪ್ರಧಾನರಾದ **ನೇಕ್ ನಾಮದಾರ್ ಆಸ್ಕ್ವಿಥರು** ವ್ಹಾಯಿಸ್‌ರಾಯರ ಮತವನ್ನು ಸಮರ್ಥಿಸುವ ಗೊತ್ತುವಳಿಯನ್ನು ಮಂಡಿಸಿದರು. **ಸರ್ ಗಂಗಾಧರಪಂತರಿಂದ, ಮಹಮದಾಬಾದದ ರಾಜೇಸಾಹೇಬ**

ರಿದ. ಹಿಂದುಗಡೆ ಸರ್ ಪದವೀಧರರಾದ **ಸುರೇಂದ್ರನಾಥ ಬ್ಯಾನರ್ಜಿಯವರಿಂದ** ಮಂಡಿಸಲ್ಪಟ್ಟ, ಅನುಮೋದಿಸಲ್ಪಟ್ಟ, ಸಮರ್ಥಿಸಲ್ಪಟ್ಟ ಗೊತ್ತುವಳಿಗೂ, ವ್ಹಾಯಿಸರಾಯರು ಸೂಚಿಸಿದ ಹಾಗೂ ಅಸ್ಕ್ವಿಥರು ಮಂಡಿಸಿದ ಗೊತ್ತುವಳಿಗೂ ಅಭ್ಯಂತರವಿದೆ ಯೆಂಬುದನ್ನು ಓದುಗರೇ ನಿರ್ಣಯಿಸಬೇಕು. ಆಗ ನಾಮದಾರ್ ಮಿಸ್ಟರಾ (ಹಿಂದುಗಡೆ ನಾಮದಾರ್ ಸರ್) ಸುರೇಂದ್ರನಾಥರು ಹೀಗೆ ಹೇಳಿದರು :— " the Empire was confronted with a crisis of the greatest magnitude...All constitutional considerations must be held in partial abeyance. they must bear there own share of the burden. India aspired to Colonise Self-Government and should do what the colonies were doing. " ಸಾರಾಂಶ: " ಸಾಮ್ರಾಜ್ಯದ ಮೇಲೆ ಒಹು ಭಯಂಕರವಾದ ಗಂಡಾಂತರ ಬಂದಿದೆ. ಎಲ್ಲ ಘಟನಾತ್ಮಕ ವಿಚಾರಗಳನ್ನು ಕೆಲವುಕಾಲ ಬದಿಗಡಬೇಕು. ನಾವು ನಮ್ಮ ಪಾಲಿಗೆ ಬಂದ ಭಾರವನ್ನು ಹೊರಲೇ ಬೇಕು. ಹಿಂದುಸ್ಥಾನವು ವಸಹಾತಿಯು ಸ್ವರಾಜ್ಯವುಳ್ಳ ವಸಹಾತುಗಳ ಅನುಕರಣಮಾಡಬೇಕು."

ಎರಡು ಸಲ ಕಾಂಗ್ರೆಸಿನ ಅಧ್ಯಕ್ಷರಾದ ಸರ್ ಸಾಹೇಬರಿಗೆ, ಪಕ್ಷೀಯರಾದ ವ್ಹಾಯಿಸ್‌ರಾಯರಿಗೆ ಹಾಗೂ ಬ್ರಿಟಿಶ್ ಮುಖ್ಯ ಸಚಿವರಿಗೆ ಯೋಗ್ಯವಲ್ಲವೆಂದೆನಿಸಿದ ವೆಚ್ಚದ ಭಾರವನ್ನೂ ಭಾರತೀಯರು ಹೊರಬೇಕೆಂದೆನಿಸಿದುದು ಸೋಜಿಗದ ಸಂಗತಿಯಲ್ಲವೆ? ಯಾವ ಸಾಮ್ರಾಜ್ಯದ ಅನೇಕ ಭಾಗಗಳಲ್ಲಿ ಭಾರತೀಯರಿಗೆ ಒದಿಕೆ-ಲತ್ತೆಗಳೊಂದಿಗೆ ನಾಲ್ಕು ಕಾಸು ಕೂಲಿ ದೊರೆಯುತ್ತಿದೆಯೊ, ಅಂತಹ ಸಾಮ್ರಾಜ್ಯದ ಬಗ್ಗೆ 'ಸರ್'ದ್ವಯರಿಗೆ ಎಷ್ಟೊಂದು ಅಭಿಮಾನ! ಅದರ ಮೇಲೆ ಎಷ್ಟೊಂದು ಮಮತೆ!! ಸರ್ ಸಾಹೇಬರಿಗೆ ಕಾಮಾಗಾಟಾ ಮಾರೂದ ಮರೆವಾಯಿತೊ? ದಕ್ಷಿಣದ ಹಾಗೂ ಪೂರ್ವ ಆಫ್ರಿಕೆಗಳಲ್ಲಿಯ ಭಾರತೀಯರ ಶೋಚನೀಯ ಸ್ಥಿತಿಯ ಅರಿವು ಇದ್ದಿಲ್ಲವೋ? ಹಿಂದಿನದೆಲ್ಲವನ್ನೂ ಹುಗಿದುಬಿಡುವಾ—ಇಂದಿನದರ ಕಡೆಗೆ ನೋಡುವಾ! ಮಲಯದಲ್ಲಿ ಹಿಂದೀಸೈನಿಕರಿಗೆ, ಹಿಂದೀ ಕೂಲಿಕಾರರ ಮೇಲೆ ಗುಂಡುಹಾಕುವ ಹುಕುಂ ಆಯಿತು; ಅದರ ಬಗ್ಗೆ ಹಿಂದೀ ಪತ್ರಿಕಾಕಾರರು ತಕ್ಕ ಮಟ್ಟಿಗೆ ಬರೆದಿದ್ದಾರೆ. ತಾ. ೨೧-೧೨-೧೯೪೧ರ **ಬಾಂಬೇ ಕ್ರಾನಿಕಲ್** ಪತ್ರಿಕೆಯಲ್ಲಿ, **ಏಡನ್**ದ ಸರಕಾರದಿಂದ ಹಿಂದೀಯರ ಮೇಲೆ ಹಾಕಲ್ಪಟ್ಟ ನಿಯಂತ್ರಣಗಳ ಬಗ್ಗೆ ದಿ ಇಂಡಿಯನ್ **ಮರ್ಚಂಟ್ಸ್ ಚೆಂಬರ್** ಎಂಬ ವರ್ತಕರ ಸಂಘದವರು, ಹಿಂದುಸ್ತಾನ್ ಸರಕಾರಕ್ಕೆ ಅವುಗಳನ್ನು ತೆಗೆಯಿಸಬೇಕೆಂದು ಅರಿಕೆಮಾಡಿಕೊಂಡಿರುತ್ತಾರೆ. ಇದು ಸಾಮ್ರಾಜ್ಯದಲ್ಲಿ ಸಮತೆಯ ಭಾವನೆಯನ್ನು ಹುಟ್ಟಿಸಿ ಬಂಧುಭಾವನೆಯನ್ನು ವೃದ್ಧಿಂಗತಮಾಡುವ ಕಾರ್ಯದ ದ್ಯೋತಕವೋ? ಇರಾಣ, ಇರಾಕ, ಇಜಿಪ್ತ, ಅಬಿಸಿನಿಯಾ, ಉತ್ತರ ಆಫ್ರಿಕೆಗಳಲ್ಲಿ ಹಿಂದೀ ಸೈನಿಕರು ಜೀವದ ಹಂಗುದೊರೆದು ಕಾದುತ್ತಿರುವುದರ ಪ್ರತಿಫಲವಿದೋ? ಸರ್ ಸಾಹೇಬರು, ಭಾರತೀಯರಿಗೆ ವಸಾಹತಿಯ ಮಾದರಿಯ ಸ್ವರಾಜ್ಯಬೇಕಾಗಿದ್ದರೆ ಅವರು ಯುದ್ಧಸಹಾಯದಲ್ಲಿ ವಸಹಾತಿಗರ ಅನುಕರಣಮಾಡಬೇಕೆಂದು ಹೇಳಿದ್ದಾರೆ. ವಸಹಾತಿಗರ ಸಹಾಯವೆಂತಹದಿದೆ ನೋಡಿ ಬ್ರಿಟನ್ನಿಗೆ ಯುದ್ಧಕ್ಕಾಗಿ ಹೆಚ್ಚು ಹಣ ವೆಚ್ಚಮಾಡಬೆಕಾಗಿದೆ ಯೆಂದು ಹಿಂದುಸ್ತಾನವು ಇಂಗ್ಲಂಡಿನಲ್ಲಿ ಸಾಲತೆಗೆಯಲೆ ಇಲ್ಲ. ತಾತ್ಪೂರ್ತಿಕ ತೆಗೆದರೂ ಅದರ ರಕಮು ತೀರ ಕಡಿಮೆ ಇತ್ತು. ಇದಲ್ಲದೆ ಬ್ರಿಟನಕ್ಕೆ ಭಾರತವು ಕೊಡತಕ್ಕ ಸಾಲವನ್ನದು ತೀರಿಸಿ ತೊಂದರೆಯಲ್ಲಿದ್ದ ಬ್ರಿಟನಕ್ಕೆ ಸಹಾಯಮಾಡಿತು. ವಸಹಾತುಗಳು ಧನಸಹಾಯ ಮಾಡುವುದನ್ನು ಬಿಟ್ಟು, ತಮ್ಮ ಯುದ್ಧವೆಚ್ಚಕ್ಕಾಗಿ ಇಂಗ್ಲಂಡಿನ ಕಡೆಯಿಂದ ಸಾಲ ತೆಗೆದುವು. ಯುದ್ಧಪ್ರಾರಂಭವಾದಂದಿನಿಂದ ೧೯೧೭ರ ಮಧ್ಯದವರೆಗೆ ವಸಹಾತುಗಳು ೧೫ಕೋಟಿ ೪೦ಲಕ್ಷ ಪೌಂಡು ಸಾಲತೆಗೆದಿದ್ದುವು. ಹಿಂದುಸ್ತಾನವು ಬ್ರಿಟಿಶ್ ವಾರ್ ಸೆಕ್ಯುರಿಟೀಜ್‌ಗಳಲ್ಲಿ ೩ಕೋಟಿ ೪೦ಲಕ್ಷ ಪೌಂಡು ತೊಡಗಿಸಿ, ಬ್ರಿಟನಕ್ಕೆ ಸಹಾಯಮಾಡಿತು. ಹಿಂದುಸ್ಥಾನವು ಬ್ರಿಟನಕ್ಕೆ ಪ್ರತ್ಯಕ್ಷ, ಅಪ್ರತ್ಯಕ್ಷ ಮಾಡಿದ ಧನಸಹಾಯದ ಬಗ್ಗೆ ಮುಂದಿನ ಬರಹದಲ್ಲಿ ವಿವರವಾಗಿ ಬರೆಯುವೆನು.

(೩೮೬ ನೆಯ ಪುಟದಿಂದ ಮುಂದೆ ಸಾಗಿದ್ದು)

ಗಳೊಂದಿಗೆ ಕೂಡಿವೆ. ಎಲ್ಲವೂ ಅಂದವಾಗಿ ಅಚ್ಚಾಗಿವೆ. ಸಾಹಿತ್ಯ ಗೋಷ್ಠಿಯ ಉದ್ಘಾಟಕರಾದ ಪಂಡಿತ ಚಿದಿರೆಮಠದ ವೀರಭದ್ರ ಶರ್ಮರ ಸಂದರ್ಭೋಚಿತ ಭಾಷಣವೂ, ಅವರ ಸಾಹಿತ್ಯಾಭ್ಯಾಸದ ಆಳವನ್ನು ಸೂಚಿಸುವುದಾಗಿದ್ದು ಸಭೆಯಲ್ಲಿಯ ಪಂಡಿತರನ್ನು ತಲೆದೂಗಿಸಿತು. ಹೈದರಾಬಾದಿನ ಒಬ್ಬಿಬ್ಬರು ತರುಣ ಕವಿಗಳು ಓದಿದ ಕವನಗಳು ರಸವತ್ತಾಗಿದ್ದು, ನಿಜಾಂ ಕರ್ನಾಟಕದ ಸಾಹಿತ್ಯದ ಶುಭ-ಭವಿಷ್ಯಕ್ಕೆ ಸೂಚಕಗಳಾಗಿ ತೋರಿದುವು.

ಹೈದರಾಬಾದಿನ ಸಮ್ಮೇಳನದ ವೈಶಿಷ್ಟ್ಯವೇನೆಂದು ಯಾರಾದರೂ ಕೇಳಿದರೆ 'ಇಷ್ಟೊಂದು ಉತ್ಸಾಹದಿಂದಲೂ ಉತ್ಸವದಿಂದಲೂ ಸಮ್ಮೇಳನ ಹೈದರಾಬಾದಿನಲ್ಲಿ ಜರುಗಿದುದೇ' ಎಂದು ನಾವು ಹೇಳಬಹುದು. ಸಮ್ಮೇಳನಕಾಲದ ಉತ್ಸಾಹ ನಿಜಾಂ ಕನ್ನಡಿಗರಲ್ಲಿ ಹನ್ನೆರಡು ತಿಂಗಳೂ ಜಾಗೃತವಾಗಿದ್ದು, ಸಂಸ್ಥಾನದಲ್ಲಿ ಕನ್ನಡಕ್ಕೊಂದು ಮರ್ಯಾದೆಯ ಸ್ಥಾನ ಸಿಕ್ಕುವಂತೆ ಮಾಡಲೆಂಬುದೇ ನಮ್ಮ ಹೃದಯದ ಹಿರಿಯಾಶೆ.

ಈ ಸಂಚಿಕೆ

ಕೆಲವೊಂದು ಸಾಮಯಿಕ ಲೇಖನಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸುವುದು ಅತ್ಯಾವಶ್ಯಕವೆನಿಸಿದುದರಿಂದ 'ಪುಸ್ತಕ ವಿಮರ್ಶೆ' 'ನಗೀಗೆ ನೇವಿದ್ಯ' ಮೊದಲಾದ—ಪ್ರತಿತಿಂಗಳಲ್ಲಿ ಬರಬೇಕಾಗಿದ್ದ—ವಿಷಯಗಳು, ಸ್ಥಳಾಭಾವದ ಮೂಲಕ ಪ್ರಕಟವಾಗಿಲ್ಲ. ಅವುಗಳನ್ನಪೇಕ್ಷಿಸುವ ವಾಚಕರು ದಯೆಯಿಟ್ಟು ಕ್ಷಮಿಸಬೇಕು.

—ಸಂಪಾದಕರು

ಫಲಮಿದು ★ ★ ತಾಳ್ದುದಕೆ!

(ಸಣ್ಣ ಕತೆ)

ಶ್ರೀ. ಜೋಗಳೇಕರ ಪಾಂಡುರಂಗರಾಯರು,
ಬಿ. ಎ. ಎಸ್. ಟಿ. ಸಿ.

★

ತಮ್ಮ ಒಲುಮೆಯಂತೆ ನಲ್ಲ-ನಲ್ಲೆಯರು ಜೀವನದ ಜೊತೆಗಾರರಾಗುವುದು ಹಣೆಯ ಬರೆಹದಿಂದಲೊ, ಯತ್ನದ ಬಲದಿಂದಲೊ?

★

ಕಲಾಪ್ರಭು— Master of Arts— ಎಂಬ ಪದವಿಯನ್ನು ಗಳಿಸಿದೊಡನೆ, ಪರೀಕ್ಷೆಗಾಗಿ ಓದುವುದರ ಒತ್ತಾಯದಿಂದ ಒಮ್ಮೆ ಮುಕ್ತನಾದ ಬಗ್ಗೆ ನಿಟ್ಟುಸಿರುಬಿಟ್ಟ ನಿಶಾಕಾಂತ. ಇಷ್ಟರಲ್ಲಿ ಹಲವಾರು ವಿದ್ಯಾಲಯ ಚಾಲಕರಿಂದ, ಆಂಗ್ಲ ಸಾಹಿತ್ಯದ ಪ್ರಾಧ್ಯಾಪಕತ್ವವನ್ನು ಸ್ವೀಕರಿಸುವುದಕ್ಕಾಗಿ ಅವನಿಗೆ ಮನವಿಗಳೂ ಬಂದಿದ್ದುವು. ಒಂದನೆಯ ತರಗತಿಯ ಪದವೀಧರರ ಮಾತೇ ಬೇರೆ.

ವ್ಯಾವಸಾಯಿಕ ಸ್ಥಾನಮಾನವು ತನ್ನ ಬಯಕೆಯಂತೆ ನಿಶ್ಚಿತವಾದ ಮೇಲೂ ನಿಶಾಕಾಂತನು ನಿಶ್ಚಿಂತನಾಗಿರದಿರುವುದೇಕೆ? ಸ್ವಾಭಾವಿಕ ವೈಷಮ್ಯವನ್ನು ಮರೆತು ಶ್ರೀ-ಸರಸ್ವತಿಯರು ಅವನಲ್ಲಿ ಅಕ್ಕರದಿಂದ ನೆಲಸಿದುದೇನೋ ನಿಜ. ಆ ವಿಷಯದಲ್ಲಿ ಅವನ ಆನಂದಕ್ಕೆ ಯಾವ ಕೊರತೆಯೂ ಇರಲಿಲ್ಲ. ಪ್ರತಿಯೊಂದು ಕ್ಷೇತ್ರದಲ್ಲಿ ಅವನ ಹಿರಿಯಾಸೆ ಫಲಿಸಿದ್ದಿತು. ಪ್ರಣಯಕ್ಷೇತ್ರದಲ್ಲಿ ಮಾತ್ರ ಅವನ ಹೆಬ್ಬಯಕೆ ಈಡೇರಿರಲಿಲ್ಲ. ತನ್ನ ಒಲುಮೆಯ ನಲ್ಲೆಯನ್ನು ಮದುವೆಯಾದ ವಿನಾ ಅವನ ಆನಂದವು ಪೂರ್ತಿಗೊಳ್ಳುವುದೆಂತು?

ಹುಣ್ಣಿಮೆಯ ಮಧ್ಯರಾತ್ರಿ, ಅಟ್ಟಡಮೇಲಿನ ತನ್ನ ಸುಸಜ್ಜಿತ ಮಲಗುಮನೆಯಲ್ಲಿ ಹಾಸಿಗೆಯ ಮೇಲೆ ಉಸಿರ್ಗರೆಯುತ್ತಿದ್ದ ನಿದ್ದೆಗೆಟ್ಟ ನಿಶಾಕಾಂತ. ಬೇಕಾದಷ್ಟು ತಂಗಾಳಿ ಬೀಸಿದರೂ ಅವನ ದೇಹದಾಹವು ಕಡಿಮೆಯಾಗಲೊಲ್ಲದು. ಸುತ್ತಲೂ ಬೆಳುದಿಂಗಳಲ್ಲಿ ಲಾವಣ್ಯದಿಂದ ತೂಕಡಿಸುವ ಚಲಾಚಲ ಸೃಷ್ಟಿಯ ಸೊಬಗನ್ನು ನೋಡಿ ನಿಶಾಕಾಂತನು ಎಂದಿನಂತೆ ನಲಿಯದೆ, ಬೇಗೆಗೀಡಾದವನಂತೆ ತಳಮಳಿಸುತ್ತಲಿದ್ದ. ಅವನ ಅಸ್ವಾಸ್ಥ್ಯದ ರಹಸ್ಯವು ಅವನಿಗೆ ಹೊಳೆಯದೆ ಹೋಗಲಿಲ್ಲ.

ಇದುವರೆಗೆ ಅಧ್ಯಯನದ ನೆಪದಿಂದ ಮನೋಭವನನ್ನು ತನ್ನ ಹೃದಯದ ಕತ್ತಲಕೋಣೆಯಲ್ಲಿ ಭದ್ರವಾಗಿ ಸೆರೆಯಿಟ್ಟಿದ್ದ.. ವಿದ್ಯಾಸಕ್ತ ನಿಶಾಕಾಂತ. ಇಮ್ಮಡಿ ಪದವೀಧರನಾದ ಮೇಲೂ ಅವನು ಶಾರದೋಪಾಸನೆಯನ್ನೇ ಮುಂದುವರಿಸುವುದು ಶಕ್ಯವೆ? ಬ್ರಹ್ಮಚರ್ಯವನ್ನು ತೊರೆದು ಗೃಹಸ್ಥಾಶ್ರಮಿಯಾಗಿ ಮೆರೆವ ಸಮಯವು ಒಂದಿರಲಿಲ್ಲವೆ? ಸೆರೆಯೊಳಿನ ಬಾಳಿಗೆ ಬೇಸತ್ತು ಕಂಗೆಟ್ಟ ಹೃದಯಸ್ಥ ಕಾಮದೇವನು ಅವನನ್ನು ಈ ಬಗೆಯಲ್ಲಿ ಎಚ್ಚರಿಸಿದನೊ ಏನೊ! ಕೇಳಿ, "ಶಾರದೆಯ ಅಡಿಗಳಲ್ಲಿ ಏಕೀಕೃತವಾದ ನಿನ್ನ ನಿಷ್ಠೆಯನ್ನು ನೋಡಿ ನಾನು ಇಷ್ಟು ದಿನ ಸುಮ್ಮನಿದ್ದೆ. ನಿನ್ನ ಉಪಾಸನೆಗೆ ತಕ್ಕ ಫಲವೂ ಸಿಕ್ಕಿದೆ. ಇನ್ನು ನಿನ್ನ ಉಪಾಸ್ಯದೈವತವು ನಾನು, ವಾಗ್ದೇವಿಯಲ್ಲ. ವಿಷಯೋಪಭೋಗವನ್ನು ಮಾಡುವುದು ಯೌವನದ ಹೊಬಿಸಿಲಿನಲ್ಲಿ, ಮುಪ್ಪಿನ ಇಳಿಬಿಸಿಲಿನಲ್ಲಲ್ಲ. ನೀನೇ ಬರೆದ ಕಿರಿಯ ಕತೆಗಳ ನಿನ್ನ ನಾಯಕ-ನಾಯಿಕೆಯರೇ ಈ ಮಾತನ್ನು ಎಡಿರಲಿಲ್ಲವೆ? ಪ್ರಣಯಪೂರ್ತಿಗಾಗಿ ಅವರು ತಾಳಿದ ಯುಕ್ತಿ-

ಪ್ರಯುಕ್ತಿಗಳನ್ನು ಅವರ ನಿರ್ವಾತ್ಯವಾದ ನೀನೂ ಯೋಚಿಸಿ, ಅವರಂತೆಯೇ ನಿನಗೆ ಸಲ್ಲುವ—ನೀನು ಮೆಚ್ಚುವ—ಕೋಮಲೆಯ ಪಾಣಿಯನ್ನು ಗ್ರಹಿಸಿದರೆ, ನೀನು ಇದುವರೆಗೆ ತಾಳಿದ ಇಂದ್ರಿಯ ನಿಗ್ರಹದ ತಕ್ಕ ಪಾರಿತೋಷಕವು ನಿನ್ನ ಪಾಲಿಗೆ ಬರುವುದು. ನಿನಗೆ ಸಲ್ಲುವ ನಲ್ಲೆ ರಜನಿಯಲ್ಲವೆ? ಏಳು, ಮೊದಲು ಅವಳನ್ನು ವಶಪಡಿಸು! ಫಲವಿದು ತಾಳ್ಮೆದಕೆ!"

ಮನ್ಮಥನ ಹಿತೋಪದೇಶದಿಂದ ಚೇತರಿಸಿಯೇನೊ, ಮಂಚದಿಂದ ಜಿಗಿದೆದ್ದನು, ಮಿಂಚಿನ ದೀಪ ಮೂಡಿಸಿ, ರಜನಿಗೆ ಪ್ರದೀರ್ಘ ಪ್ರಣಯ ಪತ್ರವೊಂದನ್ನು ಬರೆಯಲಣಿಯಾದ... ಕಾಮಾರ್ತ ನಿಶಾಕಾಂತ. ಅವನ ಲೆಕ್ಕಣಿಕೆಯಿಂದ ಹೊರಬಿದ್ದ ಕುಮಾರ ಕುಮಾರಿಕೆಯರೂ—'ಒಲ್ಲೆ ಒಲ್ಲೆ' ಎಂದು ಸಿಡಿದು ಹೋಗುವವರನ್ನೂ—ಗೆಲ್ಲಬಲ್ಲ ಓಲೆಗಳನ್ನು ಓದುವಲ್ಲಿ ವಿಶಾರದರಾಗಿರುವಾಗ, ಅವನು ತಾನೇ ನಿಜ-ಕಾಮಿನಿಗೆ ಕಳುಹುವ ಪ್ರೀತಿಯ ಸಂದೇಶದಲ್ಲಿ ತನ್ನ ನೈಪುಣ್ಯ ಸರ್ವಸ್ವವನ್ನು ಕೇಂದ್ರೀಕರಿಸದಿರುವನೆ? ರಾತ್ರಿಯ, ಅಲ್ಲ ಬೆಳಗಿನ ಒಂದು ಗಂಟೆಯ ಸಮಯವಾಗಿದ್ದರೂ ಸ್ಟವ್ ಹೊತ್ತಿಸಿ, ಹಳದಿ ಲಿಪ್ಟನಿನ ಸ್ವಾದುಮಧುರ ಚಹ ಮಾಡಿಕೊಂಡ. 'ಗೋಲ್ಡನ್ ಪಫ್' ಬಿಸ್ಕೀಟಿನೊಡನೆ ಬಿಸಿಬಿಸಿ ಚಹ ಕುಡಿಯುವಾಗ, ಪತ್ರದ ವಿಚಾರಸರಣಿಯನ್ನೂ ಭಾಷಾಸರಣಿಯನ್ನೂ ಗೊತ್ತುಮಾಡಿಕೊಂಡು ಗೋಲ್ಡ್‌ಫ್ಲೇಕ್ ಸಿಗರೇಟನ್ನು ಆಗಾಗ ಸೇದುತ್ತ, ತನ್ನ ಮನಸ್ಸು ತೃಪ್ತಿಗೊಳ್ಳುವಂತೆ ಪತ್ರವನ್ನು ಬರೆದು ಮುಗಿಸಿದ. ಓಲೆಯನ್ನು ಮಡಿಸಿ, ಅದರ ಹೊಟ್ಟೆಯಲ್ಲಿ ಹತ್ತು ರೂಪಾಯಿಯ ಎರಡು ನೋಟುಗಳನ್ನು ಇರಿಸಿ, ಅಂದವಾದ ಪಾಕೀಟಿನ ಬಾಯಿಯನ್ನಂಟಿಸಿ, ನಲ್ಲೆಯ ವಿಳಾಸ ಬರೆದು, ಹತ್ತಿರದಲ್ಲಿರುವ ಅಂಚೆ-ಪೆಟ್ಟಿಗೆಯಲ್ಲಿ ಚೆಲ್ಲಿ, ತಾನು ಬಿಟ್ಟ ಬಾಣವು ಗುರಿಗಾಣುವುದರ ಶಕ್ಯಾಶಕ್ಯತೆಯನ್ನು ಯೋಚಿಸುತ್ತ ಹಾಸಿಗೆಯ ಮೇಲೆ ಉರುಳಿದ.. ಕೃತಕೃತ್ಯ ನಿಶಾಕಾಂತ.

* * *

ಮಾರನೆಯ ಮಧ್ಯಾಹ್ನದ ಮೂರು ಗಂಟೆಯ ಸಮಯ. ಓದು-ಕೋಣೆಯಲ್ಲಿ ಚಹಾಪಾನಮಾಡುತ್ತ ಹಗಲ್ಗನಸಿನಲ್ಲಿ ಮುಳುಗಿದ್ದಳು ರಜನಿ. ಆದೇ ಮದುವೆಯಾದ ತನ್ನ ಗೆಳತಿಯರು ತಂತಮ್ಮ ರಮಣರೊಡನೆ ಝೂನ್ ಟೀಕಿಟಿನ ಪ್ರವಾಸದಲ್ಲಿ ಮಧುಚಂದ್ರದ (ಹನಿಮೂನ್) ಆನಂದವನ್ನು ಅನುಭವಿಸುತ್ತಿರುವಂತೆ, ತಾನೂ ತನ್ನ ಪ್ರೀತಿಯ ಪ್ರಿಯಕರನೊಡನೆ ಎಲ್ಲಿಯೋ ಪ್ರಣಯ ಸಂಧಾನ ಮಾಡುತ್ತಿರುವಂತೆ ಭಾಸವಾಗುತ್ತಿದ್ದಿತು ರಜನಿಗೆ. ಮನಸ್ಸಿನಲ್ಲಿ ಅವಳು ಈ ಬಗ್ಗೆ ಮಂಡಿಗೆ ತಿನ್ನುತ್ತಿರುವಾಗ, ಅಂಚೆಯವನು (ಪೋಸ್ಟ ಮನ್) 'ಬಾಯಿಸಾಹೇಬ, ಟಪಾಲ್' ಎನ್ನುತ್ತ ಒಂದು ಪಾಕೀಟನ್ನು ಚೆಲ್ಲಿದ. ಅಂಚೆಯಾಳು ತನ್ನ ಮನೋರಾಜ್ಯವನ್ನು ಹಾಳುಮಾಡಿದ್ದಕ್ಕಾಗಿ ಅವಳಿಗೆ ಸಂತಾಪವಾಯಿತು. ಅಷ್ಟರಲ್ಲಿ ಅವಳ ತಾಯಿ ಪತ್ರವನ್ನೆತ್ತಿ—ಸುರಮ್ಯಸ್ವಪ್ನಸೃಷ್ಟಿಯೊಳಗಿಂದ ಶುಷ್ಕ ಸತ್ಯಸೃಷ್ಟಿಯಮೇಲೆ ದೊಪ್ಪನೆ ಅಪ್ಪಳಿಸಿದ್ದಕ್ಕಾಗಿ ಸಿಡಿಮಿಡಿಗೊಂಡ— ರಜನಿಗೆ ಒಪ್ಪಿಸಿ, ಎದುರಿನ ಆಸನದಲ್ಲಿ ಕುಳಿತಳು.

ಪತ್ರದ ಬಾಯಿಯನ್ನು ಸಿಟ್ಟಿನಿಂದ ಹರಿದೊಗೆದು, ಒಳಗಿದ್ದ ಅಸಾಧಾರಣ ಉದ್ದಳತೆಯ ಓಲೆಯ ಮಡಿಕೆಯನ್ನು ಬಿಚ್ಚುವಷ್ಟರಲ್ಲಿ, ಎರಡು ನೋಟುಗಳು ಸಪ್ಪಳಿಲ್ಲದೆ ಅವಳ ಅಡಿಯಲ್ಲಿ ಇಳಿದುವು. 'ಇದೇನೇ ರಜನಿ, ಯಾರ ಪತ್ರ ಅದು? ನೋಟು ಯಾಕ? ರೊಕ್ಕಾ ಕಳಸೋದಾದ್ರ ಮನಿಯಾರ್ಡರ ಮಾಡತಾರವಾ! ಹೀಂಗ ನೋಟು ಕಳಸತಾರs ಯಾರರ? ಪತ್ರ ಎರಡನೇದವರ ಕೈಗೆಬಿದ್ರ?' ಎಂದು ಮುಂತಾಗಿ ಕೇಳುವ ತಾಯಿಗೆ 'ಹೂಂsss' ಕಾರದ ಉತ್ತರ ಮಾತ್ರಕೊಟ್ಟು, ಅತಿ ಕುತೂಹಲಪೂರ್ವಕವಾಗಿ ಓಲೆಯನ್ನೋದ-ತೊಡಗಿದಳು.. ಅಚ್ಚರಿಗೊಂಡ ಮಗಳು, ಒಂದು ಸಲ ಪತ್ರವನ್ನು ಓದಿದ್ದಾಯಿತು; ಅಷ್ಟೊಂದು ಸ್ಪಷ್ಟಾರ್ಥವಾಗಲಿಲ್ಲ. ಎರಡನೆಯ ಸಲ ಎಷ್ಟೋ ಅರ್ಥವಾಯಿತು. ಮೂರನೆಯ ಸಲ ಅರ್ಥವು ಪೂರ್ಣವಾಯಿತು. ಪತ್ರಕ್ಕೆ ಬರೆಹಗಾರನು ತನ್ನ ಮುದ್ರಿಕೆ (ಸಹಿ) ಯನ್ನಿಕ್ಕಿದ್ದಿಲ್ಲ! ಆದರೂ ಅದರಲ್ಲಿ ಅಡಕವಾದ ಘಟನೆಗಳು, ಭಾಷಾಶೈಲಿ, ವಿಚಾರಸರಣಿ, ಹಸ್ತಾಕ್ಷರ ಮುಂತಾದುವುಗಳ ಸಾಧನದಿಂದ ತನ್ನ ಪ್ರಚ್ಛನ್ನ ಪ್ರಣಯನಿವೇದಕನು ನಿಚ್ಚಳವಾಗಿ ಹೊಳೆದ ರಜನಿಗೆ. ಅಂಚೆಯಾಳನ್ನು ಸುಮ್ಮನೆ ಆಡಿಕೊಂಡದ್ದಕ್ಕಾಗಿ ಪಶ್ಚಾತ್ತಾಪ! ತಾಯಿಗೆ ಗುಟ್ಟು ಹೇಳಿಬಿಡಬಹುದೆ? ಮಗಳ ಮನಸ್ಸಿನಲ್ಲಿ ಗೊಂದಲ. ಕಿರಿಯರ ಪ್ರಣಯವನ್ನು ಉತ್ತೇಜಿಸುವ ಹಿರಿಯರು ಉಂಟೇ? ಇಲ್ಲವೆಂದು ರಜನಿಯ ಉತ್ತರ. 'ಈ ಪತ್ರದ್ದೇನಿದು ಗೊಂದಲ?' ಕೇಳಿದಳು ತಾಳ್ಮೆಗೆಟ್ಟ ತಾಯಿ. 'ಏನಿಲ್ಲ,' ಎಂದಳು ಸುಳ್ಳುಹೇಳುವ ನಿಶ್ಚಯಮಾಡಿದ ರಜನಿ. 'ನನ್ನ ಗೆಳತಿ—ಉಷಾ ಸರ್‌ನಾಯಕ ಇದ್ದಾಳಲ್ಲ, ಆಕಿ ಝೂನ್ ತೀಕೀಟಿನ ಪ್ರವಾಸ ಮಾಡ್ಲಿಕ್ಕೆ ಕರೆದಾಳ ನನ್ನ. ರೂಪಾಯಿನೂ ಕಳಿಸ್ಯಾಳ'. ಕ್ವಿನೀನಿನಷ್ಟೇ ಕಹಿ ಎನಿಸಿತು ಮಗಳ ಗುಳಿಗೆ ತಾಯಿಗೆ. 'ಹೀಂಗ ss' ಎಂದು ವಿಡಂಬಕತ್ವ, ತಾಯಿ ಮುಂದುವರಿದಳು: "ಯಾವನಾರ ಗೆಳೆಯ ಪತ್ರಾ ಬರೆದಿದ್ರ ಬಂಗಾರ ಆಗುತಿತ್ತವ್ವ! ನೀನs ನೋಡು, ರಜನೀ. ಎಷ್ಟುದಿನಾ ಅದು ಮದಿವೀ ಬಿಟ್ಟು ಇರೋದು ನೀನು? 'ಬಿ.ಯೇ. ಆಗಲಿ' ಅಂತಿದ್ದಿ; ನಾ ಸುಮ್ಮನಿದ್ದೆ. ಈಗ ಬಿ. ಯೇನೂ ಆದಿ, ಕೆಲಸಾನೂ ಸಿಕ್ಕಿತು. ಇನ್ನಬೇಕಾರ ನಾ ಸುಮ್ಮನೆ ಇರೋ ಆಕ್ಕಲ್ಲನೋಡವಾ! ಹೋಗು, ಗೆಳತೀಸಂಗಡ ಅಡ್ಡಾಡಿ ಬಾ, ಆಕಿಯ ಗುರ್ತಿನವ ಯಾವನಾದರೂ ಚೆಲೋ ವರಾ ಇದ್ರ ನೋಡು; ನೀವs ಮದಿವೀ ಗೊತ್ತುಮಾಡಿದ್ರೂ ನಮಗ ಸಂತೋಷs! ಒಂದುವ್ಯಾಳ್ಯಾ ಮದಿವಿ ಮಾಡಿಕೊಂಡು ಬಂದು ಇಬ್ಬರೂ ನಮಗ ನಮಸ್ಕಾರ ಮಾಡಿದ್ರೂ ನನಗೇನೂ ಕೆಡಕೆನಿಸ-ಲಿಕ್ಕಿಲ್ಲ ನೋಡು ಮತ್ತ! ನೀ ಮದಿವಿಯಾದದ್ದೊಂದು ಕಂಡ್ರ ಸಾಕಾಗೇದ ನನಗೆ. ಊರ ಮಂದೀ ಬಾಯಿ ಯಾರು ಹಿಡೀಬೇಕು? ಆಡಬಾರದ್ದಾಡತಾವ ಖೋಡಿಗಳು! ಚೆಲೋ ವರಾ ನೋಡಿ ನೀ ಅವನ್ನ ಮಾಡಿಕೊಂಡೆಂದ್ರ ನಾ ಗೆದ್ದೆ; ನೀನೂ ಗೆದ್ದಿ. ಇಂದ್ರ ಚಂದ್ರ

ಸಿಗಬೇಕೂ ಅಂತ ಇಷ್ಟುದಿನ ನನಗೂ ಅನಿಸತಿತ್ತು. ಹಾಸಿಗಿ ಇದ್ದಷ್ಟು ಕಾಲುಚಾಚೋದಃ ಸುಖಾ ಅಲ್ಲ? ನಾಕುಮಂದಿ ಸೈ ಅನ್ನೊ ಹಾಂಗ ವರಾ ನೋಡು ತೀರಿತು!''

ತಾಯಿಯ ಈ ತೆರದ ಹೃದಪರಿವರ್ತನವನ್ನು ಕಂಡು ತನ್ನ ಪ್ರಣಯರಹಸ್ಯವನ್ನು ಆಕೆಗೆ ಹೇಳದಿದ್ದುದು ಸರಿಯಾಗಲಿಲ್ಲ ವೆಂದೆನಿಸಿತು ರಜನಿಗೆ. ಆದರೆ ಒಮ್ಮೆ ಸುಳ್ಳುಹೇಳಿದ ಬಳಿಕ ಅದನ್ನೆತ್ತಿಹಿಡಿಯದೆ ಗತಿಯಿರಲಿಲ್ಲ. 'ನನಗೂ..' ವಿಚಾರಕ್ಕವಕಾಶ ಪಡೆವುದಕ್ಕಾಗಿ ಸುಮ್ಮನೆ ಕೆಮ್ಮುತ್ತ ಗಂಭೀರ ದನಿಯಲ್ಲಿ ರಜನಿ ಯೆಂದಳು: 'ನಿನ್ಹಾಂಗಃ ಅನಸತದ. ನನ್ನ ಮನಸಿನ ತಕ್ಕ ವರಾ ಸಿಕ್ಕರೆ ಮದುವ್ಯಾಗಿ ಬಿಡಬೇಕಂತ ನನ್ನದೂ ವಿಚಾರ. ಈ ಪ್ರವಾಸದಾಗ ಅಂಥಾ ಯೋಗಾಯೋಗ ಸಂಭವಿಸತದೇನು ನೋಡೋಣ!' ಚಟಕ್ಕನೆ ಎದ್ದು ಪಯಣಕ್ಕಾಗಿ ಸಜ್ಜಾಗ ತೊಡಗಿದಳು.. ಪ್ರಣಯಪ್ರಚೋದಿತ ರಜನಿ.

* * *

'ಮನಮಾಡ' ನಿಲ್ದಾಣದ ಪುಸ್ತಕಾಲಯದ ಮುಂದೆ, ಆದೇ ಹೊರಬಿದ್ದ ಪ್ರಕಟನೆಗಳನ್ನವಲೋಕಿಸುತ್ತ ನಿಂತಿದ್ದ ಆಶಾಭರಿತ ನಿಶಾಕಾಂತ. ಧೋಂಡ ಮಾರ್ಗವಾಗಿ ಬಂದು, ಚಹಾಪಾನೋತ್ತರ ಧೂಮ್ರಪಾನವನ್ನು ಮುಗಿಸಿ, ಕಲ್ಯಾಣಮಾರ್ಗವಾಗಿ ಬರುವ ತನ್ನ ಪ್ರಣಯಿನಿಯ ಹಾದಿ ಕಾಯುವ ನಿಶಾಕಾಂತನಿಗೆ ಹಾಗೂ ಹೀಗೂ ಹೊತ್ತು ಕಳೆಯಬೇಕಾಗಿದ್ದಿತು. ಎಚ್. ಜಿ. ವೆಲ್ಸ್‌ರವರ 'ಎ ಶಾರ್ಟ್ ಹಿಸ್ಟರಿ ಆಫ್ ದಿ ವರ್ಲ್ಡ್' ಎಂಬ ಹೊಸ ಪುಸ್ತಕದ ಅಂದವಾದ ಪ್ರತಿಯೊಂದನ್ನು ಕೊಂಡು, ಅದರ ಮುನ್ನುಡಿಯ ಪೂರ್ವಾರ್ಧವನ್ನೋದುವಷ್ಟರಲ್ಲಿ 'ದಿಲ್ಲಿ ಎಕ್ಸ್‌ಪ್ರೆಸ್' ಪಕ್ಕದ ಮೆಟ್ಟುಗಟ್ಟಿಗೆ ಬಂದು ನಿಂತಿತು. ಬಂಡಿ ಬಿಡುವವರಿಗೂ ಬಂಡಿ ಏರುವವರಿಗೂ ನಡೆದ ತಿಕ್ಕಾಟವನ್ನು ತಪ್ಪಿಸಿ, ನಿಜರಮಣಿಯ ನಗುಮೊಗವನ್ನು ಕಂಡುಹಿಡಿಯಲು ಬಂಡಿಯುದ್ದಕ್ಕೂ ಓಡಾಡಿದ ನಿಶಾಕಾಂತ. ಎಲ್ಲಿಯೂ ಕಾಣಲಿಲ್ಲ ರಜನಿ. 'ಮಹಿಳೆಯರ ಡಬ್ಬಿಯನ್ನೂ ನೋಡೋಣ' ಎಂದುಕೊಂಡು ಅದರೆಡೆಗೆ ರಭಸದಿಂದ ಸಾಗುತ್ತಿರಲು, ಅಲ್ಲಿ ತನ್ನ 'ಎಲ್ಲಸಿಡಿ (ಹೋಲ್ಡಾಲ್)' 'ಚರ್ಮ ಸಂದುಕ'ಗಳನ್ನು ಸರಿಪಡಿಸುತ್ತಿರುವ ತೆಂಕಣ ಸೀರೆಯ ತರುಣಿ ಯೊಬ್ಬಳನ್ನು ಕಂಡೊಡನೆ, ಅವನ ಆನಂದವು ಮಿತಿಮೀರಿತು. 'ನಮಸ್ತೇ, ಮಹಿಳೆಯರ ಡಬ್ಬಿಯಲ್ಲಿ ನಿಮ್ಮನ್ನು ಕಾಣಬಹುದೆಂದು ಕನಸಿನಲ್ಲಿಯೂ ಅಪೇಕ್ಷಿಸಿರಲಿಲ್ಲ,' ಮುಗುಳ್ನಗೆಯಿಂದೆಂದ ನಿಶಾಕಾಂತ. 'ಕನಸಿನಲ್ಲಿಯೂ ಬಯಸದ್ದನ್ನು ಒಮ್ಮೊಮ್ಮೆ ಸಹಿಸಬೇಕಾಗುವುದಲ್ಲವೆ? ಬೇರೆಡೆಗೆ ಬಹಳ ಗದ್ದಲವಿದ್ದಕಾರಣ ಇದರ ಆಶ್ರಯ!' ಎಂದು ಮುಂತಾಗಿ ರಜನಿಯು ಸ್ಪಷ್ಟೀಕರಿಸಿ ದೊಡನೆ, ಸಾಮಾನುಗಳೊಂದಿಗೆ ಬೇರೊಂದು ಡಬ್ಬಿಯನ್ನು ಏರಿ, ಅಂತೂ ಇಂತೂ ಅನುವುಮಾಡಿಕೊಂಡು ಕುಳಿತರು ನಲ್ಲ-ನಲ್ಲೆಯರು. ಹಾದಿಕಾರರಿಂದ ಕಿಕ್ಕಿರಿದು ತುಂಬಿದ ಬಂಡಿಯಲ್ಲಿ ಪ್ರಣಯಾಲಾಪಕ್ಕೆ ಅವಕಾಶವೆಲ್ಲಿ? ಜನರಿಗೆ ತಿಳಿಯದಂತೆ ಪರ್ಯಾಯದಿಂದ ಆಂಗ್ಲಭಾಷೆಯಲ್ಲಿ ಸಂಭಾಷಣ ಸಾಗಿತು. ಕುಸು ಹೊತ್ತಿನ ವೇಳೆ ಉಪಾಹಾರದ ಡಬ್ಬಿಗೆ ಹೋಗಿ ಇಬ್ಬರೂ ಚಹಾಪಾನ ಮಾಡಿ ಬಂದರು. ಸಂಜೆಯ ಐದರ ಸುಮಾರಿಗೆ ಭುಸಾವಳದ ನಿಲ್ದಾಣದಲ್ಲಿ ಬಂಡಿ ಬಂದು ನಿಂತಿತು.

ಅಲ್ಲಿಂದ ನಾಗಪೂರಕ್ಕೆ ಪಯಣ ಬೆಳಸಬೇಕೆಂದು ಯೋಚಿಸಿದ್ದ ನಿಶಾಕಾಂತ. ಆ ಬಗ್ಗೆ ತನ್ನ ಗೆಳೆಯನಿಗೆ ತಿಳಿಸಿಯೂ ಇದ್ದ. ಭುಸಾವಳದಲ್ಲಿ ಇರುಳು ಕಳೆದು, ಹಾದಿಯ ದಣಿವನ್ನು ಆರಿಸಿ ಕೊಂಡು ಮುಂದೆ ಸಾಗುವುದು ಹಿತವೆಂದು ಭಾವಿಸಿ, ವಸತಿ ಗಾಗಿ 'ಸುಖನಿವಾಸ'ಕ್ಕೆ ತೆರಳಿದರು. ಇಬ್ಬರ ಸಲುವಾಗಿ ಸಜ್ಜು ಗೊಳಿಸಿದ ಮೇಲಂತಸ್ತಿನ ಬಂದು ಅಚ್ಚುಕಟ್ಟಾದ ಕೋಣೆಯಲ್ಲಿ ಅವರನ್ನು ಕರೆದೊಯ್ದು, ಚಹ ಮತ್ತು ಅಲ್ಪೋಪಹಾರವನ್ನು ತರಿಸಿ, ಅವರು ಅಪೇಕ್ಷಿಸುವ ಸೌಕರ್ಯಾದಿಗಳನ್ನು ತಿಳಿದು ಕೊಂಡು ವ್ಯವಸ್ಥಾಪಕನು, ನಿಶಾಕಾಂತನನ್ನು ಹೆಸರೇನೆಂದು ಕೇಳಿದನು. ನಿಶಾಕಾಂತನು ತನ್ನ ಕಾರ್ಡನ್ನು ತೋರಿಸಿದ. 'ಮಿಸ್ಟರ್ ಆ್ಯಂಡ್ ಮಿಸೆಸ್ ನಿಶಾಕಾಂತ ವೈದ್ಯ ಎಂ. ಎ.' ಎಂದು ಅವರಿಗೆ ಕೇಳಿಸುವಂತೆ ಎನ್ನುತ್ತ ಟಿಪ್ಪಣೆಮಾಡಿಕೊಂಡು ವ್ಯವಸ್ಥಾಪಕನು ಹೊರಟುಹೋದ. ಇಬ್ಬರಿಗೂ ನಗೆ. ವ್ಯವಸ್ಥಾ-ಪಕನ ತಪ್ಪುಟಿಪ್ಪಣೆಯನ್ನು ಇಬ್ಬರಲ್ಲೊಬ್ಬರೂ ತಿದ್ದಲಿಲ್ಲ. ಅದೊಂದು ಅಜಾಗೃತ ಮನಸ್ಸಿನ ಚಾಪಲ್ಯವೆ?

* * *

ಸಂಜೆಯಲ್ಲಿ ಭುಸಾವಳದಲ್ಲಿ ನೋಡತಕ್ಕ ನೋಟಗಳನ್ನು ನೋಡಿ ಬಂದರು ನಿಶಾಕಾಂತ-ರಜನಿಯರು. ಕೋಣೆಯಲ್ಲಿಯೆ ಊಟ ವಾಯಿತು. ರೂಸೋ-ಜರ್ಮನ್ ಯುದ್ಧದ ಬಿಸಿ ಬಿಸಿ ಸುದ್ದಿ ಗಳನ್ನೂ ರೇಡಿಯೋದೊಳಗಿಂದ ಕೇಳಿದರು. ಹತ್ತು ಗಂಟೆಗೆ ಕೋಣೆಯ ಬಾಗಿಲನ್ನಿಕ್ಕಿ ನಿರಾತಂಕವಾಗಿ ಪ್ರಣಯ ಸಂಭಾಷಣಕ್ಕೆ ತೊಡಗಿದರು. ಅವರ ಪ್ರದೀರ್ಘ ಸಂಭಾಷಣದ ಮುಖ್ಯಾಂಶವಿದು:

ನಿಶಾಕಾಂತನು ಬಿ. ಎ. ಆದೊಡನೆ ಅವನ ತಾಯ್ತಂದೆಗಳು ಅವನಿಗಾಗಿ ಬಂದು ಅರ್ಧಮರ್ಧ ಕಲಿತ ಹೆಣ್ಣನ್ನು ನೋಡಿದರು. ಅವನ ಸಮ್ಮತಿಯಿಲ್ಲದೆಯೆ ವರದಕ್ಷಿಣೆ ವರೋಪಚಾರಗಳೂ ಗೊತ್ತಾದುವು. ಅನಂತರ ವರನು ವಧೂಪರೀಕ್ಷೆ ಮಾಡುವ ನಾಟಕವಾಯಿತು. ನಿಶಾಕಾಂತನಿಗೆ ಕನ್ಯಾರತ್ನವು ರುಚಿಸಲಿಲ್ಲ. 'ಎಮ್. ಎ. ಆಗಿ, ನನ್ನ ಹೊಟ್ಟೆ ನಾನೇ ತುಂಬಿಕೊಳ್ಳುವ ಶಕ್ತಿ ಬಂದ ಮೇಲೆಯೆ ಮದುವೆಯ ಮಾತು' ಎಂದ ನಿಶಾಕಾಂತ. 'ನನಗೆ ನಿಮ್ಮ ಪರಂಪರಾಗತ ಶರೀರಸಂಬಂಧ ಬೇಕಿಲ್ಲ. ಹೃದಯ-ಸಂಬಂಧವನ್ನೊದಗಿಸುವ ಪ್ರಣಯವಿವಾಹ ಬೇಕು ನನಗೆ' ಎಂದ. ಹೀಗೆಂದೊಡನೆ ಅವನ ತಾಯಿಯೆಂದಳಂತೆ: 'ಪ್ರಣಯಾ, ಪ್ರೀತೀ ಅಂಬೋ ಹುಚ್ಚುಚ್ಚಾರ ಈಗ ಬಂದಾವ. ಪ್ರೀತಿ ಏನು. ಮದುವಿ ಆದ ಮ್ಯಾಲೆ ತಾನಃ ಬರತದ. ನನ್ನ ಮದಿವಿ ಆದಾಗ ನನಗ ನೆಟ್ಟಗ ಕಿರಿಗೀ ಉಡ್ಲಿಕ್ಕೆ ಸುದ್ಧಾ ಬರತಿದ್ದಿಲ್ಲ. ಅಂದಮ್ಯಾಲೆ ಪ್ರೀತಿಯೆಲ್ಲಿಂದ ಬರಬೇಕು? ಇಂಥಾ ಗಂಡಗ ಇಂಥಾ ಹೆಣ್ಣು

ಎಲ್ಲಕ್ಕಿಂತ ಅಗ್ಗ ! ಎಲ್ಲಕ್ಕಿಂತ ಉತ್ತಮ !

ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ.

ಚರ್ಮವು ಉರಿಯುವುದಿಲ್ಲ—ಕಪ್ಪಾಗುವುದಿಲ್ಲ !

ಅಂತ ದೇವರು ಮದಲೇ ಗಂಟುಹಾಕಿಬಿಟ್ಟಿರತಾನ. ನಮ್ಮದೇನು ಕೆಟ್ಟಿದ್ದು? ಹದ್ನಾರು ಮಕ್ಕಳನ್ನು ಹಡೆದೆ!'

ಮಕ್ಕಳ ಸಂಖ್ಯೆಯಿಂದ ಸಂಸಾರದ ಯಶಸ್ವಿತೆಯನ್ನಳೆಯುವ ತಾಯಿಯ ವಿಚಿತ್ರ ತರ್ಕಪದ್ಧತಿಯನ್ನು ನಿಶಾಕಾಂತನು ಚೆನ್ನಾಗಿ ಪಚನಿಸುವಷ್ಟರಲ್ಲಿ, ನಾರಪ್ಪನವರು (ಅವನ ತಂದೆಯ ಗೆಳೆಯರೊಬ್ಬರು) ಹೇಳಿದಂತೆ: 'ಈ ಪ್ರೀತಿವಿವಾಹದ ಹುಚ್ಚಿಗೆ ಬೀಳ ಬ್ಯಾಡಾ; ಪ್ರೀತಿವಿವಾಹಕ್ಕ ಘಟಸ್ಫೋಟ ತಪ್ಪಿದ್ದಲ್ಲ. ನನ್ನ ಮದಿವೀ ನನ್ನ ಹಿರೇರs ಗೊತ್ತುಮಾಡಿದರು. ಸಪ್ತಪದಿ ಆಗೋವಾಗ ನನ್ನ ಹೇಣತಿ ನನ್ನ ಕಣ್ಣಿಗೆ ಬಿದ್ಲು. ನನ್ನ ಹೇಣತಿ ಅಂದ್ರ ತಿಳಿದ ಕೆಂಪ, ಹೆಗ್ಗಣಕ್ಕಿಂತ ಅಷ್ಟಾವಕ್ರ. ಅಂದ್ರೂ ಆಕೀ ಇಲ್ದಿದ್ರ ನಮ್ಮ ಸಂಸಾರ? ಹಿರೇರು ಮಾಡಿದ್ದs ಪಾವನಾ ಅಂತ ನಮ್ಮ ಭಾವನಾ. ಕಣ್ಣುಮುಚ್ಚಿ ಆಕೀ ಕೂಡ ಸಂಸಾರ ಮಾಡಿದೆ ನಾ.' ಒಡನೆ ನಿಶಾಕಾಂತನೆಂದನಂತೆ; 'ಅಂಥ ರೂಪವತಿ ಕೂಡ ಸಂಸಾರ ಮಾಡೋದು ಕಣ್ಣುಮುಚ್ಚೇ, ಕಣ್ತೆರೆದಲ್ಲ! ಆಕೀ, ಇಲ್ದಿದ್ರ ನಮ್ಮ ಸಂಸಾರ— ಅಂತ ನೀವು ಕೇಳತೀರಿ. ನನಗ ನಗೀ ಬರತದ. ಸಂಸಾರದೊಳಗ ನಿಮಗ ಸುಖಾ ಸಿಕ್ಕಿದ್ರ ಹತ್ತೆಂಟು ವೇಶ್ಯೇರಿಗೆ ಆಸರಾ ಯಾಕ ಕೊಡ್ತಿದ್ರಿ ನೀವು?' ನಾರಪ್ಪನವರು ಉತ್ತರ ಕೊಡಲಾರದಾದರು. 'ಶೇಷಂ ಕೋಪೇನ ಪೂರಯೇತ್' ಹಳೆಯ ಪದ್ಧತಿಗಳಿಗನುಸಾರ ಸಿಟ್ಟಿಗೆದ್ದು ನಿಶಾಕಾಂತನ 'ಸೊಕ್ಕು' ಮುರಿಯಲು ಹೊಂಚುಹಾಕಿದರಂತೆ. ಮಾರನೆಯ ದಿನ ನಾರಪ್ಪನವರು ಹಳಬರ ಪರವಾಗಿ ಕೊನೆಯ ಎಚ್ಚರ ಕೊಟ್ಟರು. 'ಹಿರಿಯರ ಮಾತು ಕೇಳುವದಾದರೆ ಮನೆಯಲ್ಲಿರಬಹುದು; ಇಲ್ಲವಾದರೆ ನೀನು ಕೂಡಲೆ ಮನೆಬಿಟ್ಟು ಹೋಗಬೇಕು. ಪಿತ್ರಾರ್ಜಿತ ಆಸ್ತಿಯ ಒಡಕು ಕಾಸೂ ನಿನಗೆ ಸಿಗಲಿಕ್ಕಿಲ್ಲ.' ವಾರಸಾಪಹರಣದ ಬೆದರಿಕೆಯೊಂದು ಹಿರಿಯತನದ ಹುಕುಮಿನ—ಭರವಸೆಯ—ಎಲೆ. ಆದರೆ ಆಸ್ತಿಗಿಂತ ಸ್ವಾತಂತ್ರ್ಯವೆ ಮೇಲೆನಿಸಿದ ಕಾರಣ ನಿಶಾಕಾಂತನು ವಿನಾಹುಕುಮಿನ (ನೋ-ಟ್ರಂಪ್ಸ್) ಆಟವನ್ನು ಸಾರಲು, ಹಿರಿಯರ ಭರವಸೆಯ ಎಲೆ ಕಳಚಿ ಬಿದ್ದಿತು.

ಕೂಡಲೆ ನಿಶಾಕಾಂತನು ತನ್ನ ಹುಟ್ಟಿದೂರನ್ನು ಬಿಟ್ಟು ಪುಣೆಗೆ ಎಮ್. ಎ. ದ ಅಧ್ಯಯನಕ್ಕಾಗಿ ಹೊರಟು ಹೋದ. ಅಲ್ಲಿ ಹಲವು ಮನೆಯ ಅಧ್ಯಾಪನೆಗಳನ್ನು ದೊರಕಿಸಿ, ಸ್ವಾವಲಂಬಿಯಾಗಿ ಒಂದನೆಯ ತರಗತಿಯ ಇಮ್ಮಡಿ ಪದವೀಧರನಾದ. ಅತ್ತ ಮಗಳು ಕುಣಿಸಿದಂತೆ ಕುಣಿಯುವ ಅವನ ತಾಯಿಯು, ಅವನ ಹಿರಿಯರಿಂದ ನಿಶಾಕಾಂತನ ಸರ್ವನಾಶವಾಗುವಂತಹ ಕಾಗದ ಪತ್ರಗಳನ್ನು ಮಾಡಿಸಲು ಹಾತೊರೆಯುತ್ತಿದ್ದಳಂತೆ. ಕೊನೆಗೆ ಅವನ ತಂದೆಯವರು ವಕೀಲರ ಅಭಿಪ್ರಾಯದ ನೆಪದಿಂದ ಪುಣೆಗೆ ಬಂದು, ನಿಶಾಕಾಂತನ ಮನೆಯಲ್ಲಿಯೇ ತಳವೂರಿದರು. ಮುಂದೆ ಅವನ ಆಶ್ರಯದಲ್ಲಿಯೆ ಹಲವಾರು ತಿಂಗಳು ಸುಖದಿಂದ ಇದ್ದು, ಹೃದಯಸ್ತಂಭನದಿಂದ ಕಾಲವಶರಾದರು. ಹಿರಿಯರ ಆಸ್ತಿಗೆ ನಿಶಾಕಾಂತನೆ ಒಡೆಯನಾದ ಕಾರಣ, ಅವನ ಅಕಾರಣ ವೈರಿಗಳೂ ಸಕಾರಣವಾಗಿ ನಿರಾಶರಾದರು.

ಪುಣೆಯಲ್ಲಿ ನಿಶಾಕಾಂತನ ಬಿಡಾರವು ರಜನಿಯ ಮನೆಯ ಹತ್ತಿರದಲ್ಲಿಯೆ ಇದ್ದಿತು. ಆಂಗ್ಲಭಾಷೆಯಲ್ಲಿ ಹಸಿಬಿಸಿಯಾಗಿದ್ದಳು ರಜನಿ. ನಿಶಾಕಾಂತನ ಆಂಗ್ಲಭಾಷಾಪ್ರಭುತ್ವದ ಕೀರ್ತಿಯು ರಜನಿಯ ಕಿವಿಗೂ ತಲುಪಿದ್ದಿತು. ಕೂಡಲೆ ಅವಳ ತಾಯಿಯು ನಿಶಾಕಾಂತನನ್ನು ಅಧ್ಯಾಪನೆಗಾಗಿ ಮನವಿಮಾಡಿಕೊಳ್ಳಲು, ಅವನು ಸುಮಾರು ಒಂದು ವರ್ಷ ಅವಳ ಅಧ್ಯಾಪಕನಾದ. ಉಳಿದವರ ಜೊತೆಯಲ್ಲಿ ನಿಶಾಕಾಂತನು ರಸಿಕ ಮಾತಾಳಿಯಾದರೂ, ರಜನಿಯ ಸಮ್ಮುಖದಲ್ಲಿ ಅವನು ಮೂಕ ಬಸಪ್ಪನಾಗಿದ್ದ. ಅಧ್ಯಾಪನದ ಆಚೆಗೆ ಯಾವ ಮಾತೂ ಎತ್ತಲಿಲ್ಲ ನಮ್ಮ ಮೂಕನಾಯಕ. ರಜನಿಯೂ ಮೂಕನಾಯಿಕೆಯೆ. ಅವಳ ಉಳಿದ ಗೆಳತಿಯರು ತರುಣರೊಡನೆ ಅದೆಷ್ಟು ಸಲಿಗೆಮಾಡುತ್ತಿದ್ದರು; ಉಳಿದ ವಿಷಯಗಳಲ್ಲಿ ಬೇಕಾದಷ್ಟು ಆಧುನಿಕಳಾಗಿದ್ದರೂ, ಪ್ರಣಯಕ್ಷೇತ್ರದಲ್ಲಿ ಹಳೆಯ ಸಂಪ್ರದಾಯದ 'ತುಳಸಿ ಭಾಗಿ'ಗಳಂತೆ ಗಂಡಸರ ನೆಳಲಿಗೂ ಬೆದರುವವಳು ರಜನಿ. ನಿಶಾಕಾಂತನ ವಿಷಯಲ್ಲಿ ಉದಯಿಸಿದ ತನ್ನ ಪ್ರಣಯವನ್ನು ಅವಳು ಎಷ್ಟೇ ದಮನಿಸಿದರೂ, ಸ್ತ್ರೀಸ್ವಭಾವ ಸಹಜವಾದ ವಿಭ್ರಮಗಳಲ್ಲಿ ಒಡಮೂಡುವ ಅವಳ ಪ್ರೇಮಸಂದೇಶವನ್ನು ಕಂಡುಹಿಡಿಯದಷ್ಟು ಮಂದಮತಿಯಾಗಿರಲಿಲ್ಲ ನಿಶಾಕಾಂತ. ಆದರೆ ರಜನಿಯ ತಾಯಿಗೆ ದುಡ್ಡಿನ ಮೇಲೆ ಉರುಳಾಡುವ—ಅಧಿಕಾರದಿಂದ ಮೆರೆದಾಡುವ—ಅಳಿಯ ದೇವರು ಬೇಕಾಗಿರುವುದನ್ನು ಅವನು ಅರಿತುಕೊಂಡಿದ್ದ ಕಾರಣ, ತನ್ನ ಮೂಕನಲ್ಲೆಯನ್ನು ಉತ್ತೇಜಿಸಲಿಲ್ಲ.. ಈ ಮೂಕನಲ್ಲ.

ಅಧ್ಯಯನ ಅಧ್ಯಾಪನಗಳಲ್ಲಿ ತೊಡಗಿದ್ದರೂ, ಆಗಾಗ ಬಿಡುವು ಮಾಡಿಕೊಂಡು ಸಾಹಿತ್ಯಸೇವೆಯನ್ನೂ ಮಾಡುತ್ತಿದ್ದ ನಿಶಾಕಾಂತ. ಅವನು ಬರೆದ ಸುರಸ ಕಿರುಗತೆಗಳಲ್ಲಿ, ವಾಸ್ತವತೆಯ ತಳಹದಿಯ ಮೇಲೆಯೆ ಸುರಮ್ಯತೆಯ ಅಂದ ಮಂದಿರವು ಕಂಗೊಳಿಸುತ್ತಿದ್ದಿತು. ಅವನ ನಾಯಕ-ನಾಯಿಕೆಯರು ಅವೆಂತಹ ಯುಕ್ತಿಸಾಹಸಗಳಿಂದ ವಿವಾಹಬದ್ಧರಾದವರು ! ಆದರೆ ಅವರ ಜನಕನಾದ ನಿಶಾಕಾಂತನು ಮಾತ್ರ ತನ್ನ ವಿಷಯದಲ್ಲಿ ಅದಾವ ಎದೆಗಾರಿಕೆಯನ್ನೂ ತೋರಿಸದೆ ಅಳ್ಳೆದೆಯ ಮೂಕಬಸವಣ್ಣನಾಗಿಯೆ ಉಳಿದುದು ವಿಚಿತ್ರವಲ್ಲವೆ ? ನಿಶಾಕಾಂತನಿಗೆ ತನ್ನ ದೌರ್ಬಲ್ಯವು ಹೊಳೆಯದಿರಲಿಲ್ಲ. ತನ್ನ ಬಾಯ್ಬಿಡದ ಪ್ರೀತಿಯ ಬಗ್ಗೆ ಅವನಿಗೆ ನಾಚಿಕೆಯೂ ಎನಿಸಿತು. ಅಂತೆಯೆ ಕೊನೆಗೊಮ್ಮೆ ಗಟ್ಟಿಮನಸ್ಸು ಮಾಡಿ, ನಲ್ಲೆಗೊಂದು ಪ್ರಣಯಪತ್ರ ಬರೆದ. ಆ ತೆರದ ಸಾಹಸ ಮಾಡಿದ್ದಕ್ಕಾಗಿಯೆ ಅವನು ಈಗ ನಲ್ಲೆಯೊಡನೆ ಭುಸಾವಳದಲ್ಲಿ ಪ್ರಣಯಸಂಧಾನವನ್ನು ಹೂಡುವುದಕ್ಕೆ ಶಕ್ಯವಾಯಿತು.

ಮಧ್ಯರಾತ್ರಿ ಸಮೀಪಿಸಿತು. ಮುಖ್ಯವಿಷಯವು, ಅರ್ಥಾತ್ ಅವರ ಮದುವೆಯ ಮಾತು ಇನ್ನೂ ಅನಿಶ್ಚಿತವಾಗಿಯೇ ಉಳಿಯಿತು. ಅವರ ಸಂಭಾಷಣದ ಕೊನೆಯ ಭಾಗದಲ್ಲಿ ಅವರ ವಿವಾಹ-ವಿಷಯವು ಈ ಬಗೆಯಾಗಿ ಬಗೆಹರಿಯಿತು :

ಅವನು:—ಪ್ರವಾಸಕ್ಕೆ ಹೊರಡುವಾಗ ಪ್ರಸ್ತುತ ಘಟನೆಯನ್ನೊಳಗೊಂಡ ಏಕಾಂಕನಾಟಕವೊಂದನ್ನು ಬರೆದಿರುವೆ. ಆಶ್ಚರ್ಯದ ಮಾತೆಂದರೆ, ಅದರಲ್ಲಿ ಕಲ್ಪಿಸಿದ ಯೋಜನೆಯಂತೆಯೆ ನಮ್ಮ ಪ್ರಣಯಪ್ರವಾಹವು ಹರಿಯುತ್ತಿದೆ. ಜರ್ಮನ್ ಹಾಯ್ ಕಮಾಂಡದ ಬಡಿವಾರದ ಭಾಷೆಯನ್ನೆತ್ತಿ ನಾವು ಧಾರಾಳವಾಗಿ ಹೇಳಬಹುದು : 'Operations proceeding according to plan !— ಪೂರ್ವಯೋಜನೆಯ ಮೇರೆಗೆ ಮುನ್ನಡೆ ! '

ಅವಳು:—ಅಲ್ಲವೆ ! ನಿಮ್ಮ ಕಲ್ಪನಾಸೃಷ್ಟಿಯು ಸುರಮ್ಯವಿರುತ್ತಲೂ ವಾಸ್ತವತೆಯನ್ನು ಬಿಟ್ಟಿರುವುದಿಲ್ಲ. ನಿಮ್ಮ ನಾಟಕದ ಕೊನೆ ಯಾವಬಗೆಯಾಗಿದೆ ?

ಅವನು:— (ನಕ್ಕು) ನನ್ನ ನಾಯಿಕೆ ಅಕ್ಷರಶಃ ಇದೇ ರೀತಿ ಕೇಳುತ್ತಾಳೆ !

ಅವಳು:—(ನಕ್ಕು) ಸರಿ, ಸರಿ! ನಾಯಕನ ಉತ್ತರ ?

ಅವನು:—ನಾಯಕನ ಉತ್ತರ ತಾನೆ ? 'ನನ್ನ ನಾಟಕದ ಕೊನೆ ನಿನ್ನ ಕೈಯಲ್ಲಿಯೆ ಇದೆ ' ನಾಯಕನ ಉತ್ತರವಿದು.

ಅವಳು:— ಅದಕ್ಕೆ ನಾಯಿಕೆಯೆನ್ನುವುದೇನು ?

ಅವನು:—ಅದನ್ನು ನಾವು ಊಹಿಸುವುದೇ ವಿಹಿತವಲ್ಲವೆ ?

ಅವಳು:— (ಎದ್ದು, ನಗುತ್ತ ಅವನ ಕೈ ಹಿಡಿದು) ಅವಳು ಹೀಗೆ ಎಂದಿರಲಿಕ್ಕೆ ಸಾಕು : ' ನನ್ನ ಕೈ ನಿಮ್ಮ ಕೈಯಲ್ಲಿಯೆ ಇರುವುದೆಂದಮೇಲೆ, ಹೇಳಿ, ನಾಟಕದ ಕೊನೆ ಯಾರ ಕೈಯಲ್ಲಿದೆ ಕೊನೆಯಲ್ಲಿ ?' ಇದೇ ತಾನೇ ನಿಮ್ಮ ನಾಯಿಕೆಯ ಮಾತು ? ಅಥವಾ ಬೇರೆ . . . .

ಅವನು:— (ನಕ್ಕು) ಬೇರೆ ! ಶಕ್ಯವಿಲ್ಲ. ನೀವು ಅಂದದ್ದನ್ನೇ ಅವಳೂ ಅಂದಿರುವಳು. ನೀವು ನನ್ನ ನಾಯಿಕೆಯೊಡನೆ ತುಂಬಾ ತಾದಾತ್ಮ್ಯ ಪಡೆದಿರುವಿರಿ !

ಅವಳು:— ವಾದ-ಸಂವಾದಿಗಳಿಂದ ವಿಸ್ವರವು ಹೊರಡುವುದುಂಟೆ ? ಮುಂದೆ ನಾಯಕನು ಅಂದದ್ದು ?

ಅವನು:— ' ಇನ್ನು ಸರಿಯಾಗಿ ನಾಗಪೂರಕ್ಕೆ ಪಯಣ. ಅಲ್ಲಿ ನನ್ನ ಸಲುಗೆಯ ಗೆಳೆಯನೊಬ್ಬನಿದ್ದಾನೆ. ಅವನಿಗೆ ಮೊದಲೇ ಸೂಚನೆ ಕೊಟ್ಟ ಮೇರೆಗೆ ಅವನ ಮನೆಯಲ್ಲಿಯೆ ನಾವು ಮದುವೆಯಾಗಿ, ಯಥೇಷ್ಟ ಪ್ರವಾಸದ ಉಳಿದ ಅವಧಿಯಲ್ಲಿ ಯಥೇಷ್ಟ ಮಧುಚಂದ್ರವನ್ನಾಸ್ವಾದಿಸಿ, ಸ್ವಸ್ಥಾನದಲ್ಲಿ ಗೃಹಪ್ರವೇಶ. ನಾಯಕನ ಈ ಕಾರ್ಯಕ್ರಮವು ಅವನ ರಮಣಿಗೆ ಸಮ್ಮತವಷ್ಟೆ?

ಅವಳು:— Oprations proceeding according to plan. ಸಹಧರ್ಮಚಾರಿಣಿಯು ಅಸಹಕಾರವನ್ನು ಸಾರಬಹುದೆ ?

ಅವನು:— ನನ್ನ ನಾಟಕದ ಕೊನೆ ಇದೇ ರೀತಿ ಸಿದ್ಧಿಯಾಗಿದೆ. ಪ್ರಣಯ ವಿವಾಹದ ಬಂಧನವು ದೈವಾಧೀನವಲ್ಲ; ಯತ್ನಾಧೀನವು! ನಾವು ತಾಳ್ಮೆಯಿಂದ ಯತ್ನ ಮಾಡಿದ ಫಲವಾಗಿಯಲ್ಲವೆ ನಾವು ಈ ಬಗೆಯಾಗಿ ಕೂಡಿದ್ದು ? ಫಲವಿದು ತಾಳ್ದದಕೆ !

ಅವಳು:— ಕಷ್ಟದಿಂದ ಗಳಿಸಿದ್ದು ಬಲು ಸಿಹಿಯಲ್ಲವೆ?

ಅವನು:— (ಅವಳನ್ನು ತಕ್ಕೈಯಿಸಿ, ಗದ್ದವನ್ನು ಹಿಡಿದು ಮೊಗವನ್ನು ಅನುಕೂಲವಾಗುವಂತೆ ಎತ್ತಿ) ಕೇಳುವುದೇನು, ರಜನಿ ! ಅದನ್ನು ಬಲ್ಲವರೇ ಬಲ್ಲರು. ಮಾತಿನಲ್ಲಿ ಅದನ್ನು ಬಣ್ಣಿಸುವುದುಂಟೆ ? ಕೃತಿಯಿಂದಲೆ ಅದನ್ನು ಹೀಗೆ ಉಣ್ಣುವುದುಂಟು !

ನಿಶಾಕಾಂತ ಆಗ ಏನು ಮಾಡಿದನೆಂಬುದನ್ನು ರಸಿಕ ಓದುಗರಿಗೆ ಒಡೆದು ಹೇಳುವ ಕಾರಣವಿಲ್ಲ!

ಶರಣಸಂದೇಶ

(ವಾರಪತ್ರಿಕೆ)

ಸಂಪಾದಕರು: ಶ್ರೀ. ಹರ್ಡೇಕರ್ ಮಂಜಪ್ಪನವರು

ಹಿಂದೂ ಸಂಘಟನೆಯ ಗುರಿಯನ್ನಿಟ್ಟುಕೊಂಡು ಯಶಸ್ವಿಯಾಗಿ ಕಾರ್ಯಮಾಡುತ್ತಿರುವ ಕನ್ನಡ ವೃತ್ತಪತ್ರಿಕೆಯೆಂದರೆ ಇದೊಂದೆ. ದೇಶ-ವಿದೇಶದ ವರ್ತಮಾನಗಳನ್ನೂ ವಿಚಾರಪೂರ್ಣ ಲೇಖನಗಳನ್ನೂ ಇದರಲ್ಲಿ ಓದಬಹುದು.

ವಾರ್ಷಿಕ ವರ್ಗಣಿ ಅಂಚೆಯ ವೆಚ್ಚ ಸೇರಿ ೩-೦-೦ ಗಳು.

' ಶರಣಸಂದೇಶ '

ಪೋಸ್ಟ್ : ಆಲಮಟ್ಟಿ, ಜಿಲ್ಲಾ ವಿಜಾಪೂರ.

ಪುಣೆಯ ಕನ್ನಡಿಗರು, ★ ★ 'ಪುಣೇರೀ' ಕನ್ನಡಿಗರು!

ಪ್ರೊ. ನೊರಬ ರಘುನಾಥ
ಬಿ.ಎ. (ಆನರ್ಸ್)
ಕನ್ನಡಿಗರ ಕೂಟ ಪುಣೆ

ಪುಣೆಯಲ್ಲಿ ೨೦,೦೦೦ ಕ್ಕೆ ಕಡಿಮೆಯಿಲ್ಲದಷ್ಟು ಕನ್ನಡಿಗರಿದ್ದಾರೆ. ಆದರೆ ತಾವು ಕನ್ನಡಿಗರೆಂಬ ಅಭಿಮಾನ ಎಚ್ಚರ ಅವರಿಗಿದೆಯೆ? ಪುಣೆಯಲ್ಲಿಯೆ ವಾಸಮಾಡಿಕೊಂಡಿರುವ ತೆಲುಗರ ತಮಿಳರ ದೇಶಾಭಿಮಾನವನ್ನೂ ಸಂಸ್ಕೃತಿ ಸಂರಕ್ಷಣೆಯನ್ನೂ ಕಂಡು ಕನ್ನಡಿಗರು ತಲೆಯನ್ನು ಕೆಳಕ್ಕೆ ಹಾಕುವಂತಿದೆ.

★

ಹೊಟ್ಟೆಯ ಪಾಡಿಗಾಗಿಯೊ, ದುಡಿಮೆ ತಮ್ಮ ನಾಡಿನಲ್ಲಿ ಸಿಕ್ಕದಾಗಲು ಜೀವನ ಸಾಗಿಸುವುದಕ್ಕಾಗಿಯೊ, ಒಂದು ನಾಡಿನವರು ಮತ್ತೊಂದು ನಾಡಿನಲ್ಲಿ—ಕುಟುಂಬದೊಂದಿಗೆ—ತೆರಳಿ ಅಲ್ಲಿ ನೆಲಸುವುದುಂಟು. ಕೆಲವರು ವಿದ್ಯೆ ಗಳಿಸುವುದಕ್ಕಾಗಿಯೂ, ಇನ್ನು ಕೆಲವರು ವಿದ್ಯೆಹೇಳುವುದಕ್ಕಾಗಿಯೂ ಪರದೇಶಕ್ಕೆ ತೆರಳುವುದುಂಟು. ಮನೆಮಾಡಿಕೊಂಡು ಅಲ್ಲಿಯೆ ತಳವೂರಿದವರು ಕೆಲವರು; 'ಟೋಲಿ'ಯನ್ನು ಹಿಡಿದು ಕೆಲದಿನ ಪರದೇಶದ ಹವೆ ಸವಿದು ಮತ್ತೆ ತಮ್ಮ ದೇಶಕ್ಕೆ ಮರಳುವವರು ಕೆಲವರು. ಮಹಾರಾಷ್ಟ್ರದ ಗಂಡುಮೆಟ್ಟಿದ ಪುಣೆಯಲ್ಲಿ ಆಂಧ್ರರು, ತಮಿಳರು, ಕನ್ನಡಿಗರು ಮತ್ತು ಇವರಂತೆಯೆ ಉಳಿದ ಜನಾಂಗದವರೂ ಬಂದು ಸೇರಿರುವರು. ಇದೀಗ ೨೦ ಸಾವಿರದಷ್ಟು ಕನ್ನಡಿಗರು ಈ ಪಟ್ಟಣದಲ್ಲಿ ಬೀಡುಬಿಟ್ಟುಕೊಂಡಿರುವರೆಂದು ಅಂಕಿ–ಸಂಖ್ಯೆಗಳಿಂದ ತಿಳಿದು ಬಂದಿದೆ. ಇತ್ತೀಚೆಗೆ ಮೆಡಿಕಲ್ ಸ್ಕೂಲ್, ಸೈನ್ಯದ ಲೆಕ್ಕಪತ್ರ ಖಾತೆ, ಮತ್ತು ಆಯುಧಗಳನ್ನು ತಯಾರಿಸುವ ಸಂಸ್ಥೆ ಇವುಗಳಿಗೆ ಹೆಚ್ಚು ಹೆಚ್ಚು ದುಡಿಮೆಗಾರರೂ ನೌಕರರೂ ಬೇಕಾಗಿದ್ದುದರಿಂದ, ಕನ್ನಡಿಗರು ಸಾಕಷ್ಟು ಜನ ಪುಣೆಯಲ್ಲಿ ನೆಲಸಹತ್ತಿರುವರು. ಕೆಲವು ದಿನಗಳಲ್ಲಿಯೆ ಅನೇಕ ಕನ್ನಡ ಕುಟುಂಬಗಳು ಈ ನಗರದಲ್ಲಿ ಬೇರುಬಿಡುವುವೆಂಬುದರಲ್ಲಿ ಸಂಶಯವಿಲ್ಲ.

ಪುಣೆಯಲ್ಲಿಯ ಕನ್ನಡಿಗರನ್ನು ಎರಡು ವಿಧವಾಗಿ ಆರಯ್ದು ನೋಡಬಹುದು: ಪುಣೆಯ ಕನ್ನಡಿಗರು, ಮತ್ತು 'ಪುಣೇರೀ' ಕನ್ನಡಿಗರು. ಮೊತ್ತಮೊದಲು ಪುಣೆಯ ಕನ್ನಡಿಗರನ್ನು ಹಣಿಕಿಕ್ಕಿ ನೋಡುವ. ಪುಣೆಯಲ್ಲಿದ್ದರೂ ಕೂಡ ಯಾರಾದರೂ ಕನ್ನಡದಲ್ಲಿ ಮಾತನಾಡಿದರೆ, ಕನ್ನಡದಲ್ಲಿ ಮಾತನಾಡುವವರೆಂದರೆ ಈ '**ಪುಣೆಯ** ಕನ್ನಡಿಗ'ರೆ. ಮರಾಟಿಯ ಸೊಲ್ಲಿನ ಪ್ರಭಾವದಿಂದ, ಪುಣೆಯ ಕನ್ನಡಿಗರ ಮಾತಿನಲ್ಲಿ '**ತಸ್ಸಿ, ಘಾಬರಾಸು, ಬಾಂಧಾಸು, ಶೋಧಾಸು, ಅಗದಿ, ಪುಷ್ಕಳ, ಧುಮುಶೇನ, ಠಣಠಣೀತ, ಶೀನಿ, ಅಡೀಚ, ದೀಡ, ಗಾಣೆ**' ಇವೆಲ್ಲ ತುಂಬಿರುವುವು. ಅಲ್ಲದೆ ಒಮ್ಮೊಮ್ಮೆಯಂತೂ, ದ್ವಿತೀಯಾ ವಿಭಕ್ತಿಯ ಬದಲು ಚತುರ್ಥಿಯನ್ನು ಉಪಯೋಗಿಸುವರು. "ಗಾಂಧೀಜಿಯವರನ್ನು ಹಿಡಿದರು." ಎಂಬುದನ್ನು "ಗಾಂಧೀಗೆ ಹಿಡಿದರು" ಎಂದೆನ್ನುವ ವಾಡಿಕೆಯೂ ಉಂಟು. ಬೇಸರಿಕೆ ಬಂದಾಗಾಗಲಿ, ಬಯ್ಯುವುದಕ್ಕಾಗಿ—ಯಾಗಲಿ, ಯಾವುದಾದರೊಂದು ಸನ್ನಿವೇಶದಲ್ಲಿ ತಲ್ಲೀನರಾದಾಗಾಗಲಿ, ಬಾಯಿಂದ ಕನ್ನಡಶಬ್ದಗಳೂ ಭಾವಬೋಧಕ ಕನ್ನಡ ಉದ್ಗಾರಗಳೂ ಹೊರಬೀಳದೆ, ಮರಾಟಿಯ ಶಬ್ದಗಳೇ ಬರುವುವು. ಒರ್ವ ಡಾಕ್ಟರು ಕನ್ನಡಿಗನಿರುವ. ಆಸ್ಪತ್ರೆಯಲ್ಲಿ ದುಡಿದು ಬೇಸತ್ತು ಮನೆಗೆ ಬಂದು, ಆರಾಮ ಕುರ್ಚಿಯಲ್ಲಿ ಕುಳ್ಳಿರುವಾಗ, '**ಆಯಿಗೋಗs**' ಎಂದುಸಿರಿದ. 'ಅವ್ವಾ', 'ಅಪ್ಪಾ', 'ದಮ್ಮಯ್ಯಾ', 'ಅವ್ವಯ್ಯಾ', 'ಅಯ್ಯಪ್ಪಾ' ಈ ಭಾವಬೋಧಕಗಳು ಇವರ ರಕ್ತಗೋಲಗಳಿಂದ ಹಾರಿಹೋಗಿ, ಅವುಗಳ ಜಾಗೆಯಲ್ಲಿ, 'ಆಯಿಗ', 'ಅರೇರೆ', 'ಅರೇಬಾಪರೇ', 'ಅರೇಚಾ', 'ಬುವಾ', 'ವಾರೆ ಪಠ್ಠೆ', 'ಇಶ್ಶ (ಇಸ್ಸೀ)', ಇವು ಆಕ್ರಮಿಸಿಕೊಂಡಿರುವುವು. "ಮರಾಟಿಗರೆಂದರೆ ಅಸೂಯೆ ಇಲ್ಲ; ಕನ್ನಡಿಗರೆಂದರೆ ದುರಭಿಮಾನವಿಲ್ಲ" ಎಂದೆನ್ನಲು ಹಿಂದುಮುಂದು ನೋಡುವುದಿಲ್ಲ ಇವರು. ನಾಲ್ವರಲ್ಲಿ ಒಬ್ಬನೆ ಒಬ್ಬ ಮರಾಟಿಗನಿರಲಿ, ನಾಲ್ವರೂ ಕೂಡಿ ಮರಾಟಿ ಭಾಷೆಯಾಡುವರೇ ಹೊರತು, ಕನ್ನಡನುಡಿಯಲ್ಲಿ ತಮ್ಮ ವಿಚಾರ ಮಂಡಿಸುವುದಿಲ್ಲ. '**ಸಂಯುಕ್ತ ಕರ್ನಾಟಕ**' ವೃತ್ತಪತ್ರಿಕೆ ಇಲ್ಲಿಗೆ ಬರಬೇಕಾದರೆ, ಒಂದು ದಿನ ತಡವಾಗುವುದರಿಂದ, ಬಿಸಿಬಿಸಿ ಸುದ್ದಿಗಳು ದೊರಕುವುದಿಲ್ಲ

ವೆಂತಲೂ ಕನ್ನಡ ಮಾಸಪತ್ರಿಕೆಗಳಲ್ಲಿ ಹೇಳಿಕೊಳ್ಳುವಂತಹದು ಒಂದಾದರೂ ಇಲ್ಲವೆಂತಲೂ, ಅಂದ-ಚೆಂದವಾದ ಮುದ್ರಣ, ಬಗೆ-ಸೆಳೆಯುವಂತಹ ಮೇಲ್ಸೊಪ್ಪಿಗೆ ಇವು ಕನ್ನಡ ಪತ್ರಗಳಲ್ಲಿ ದೊರಕು-ವುದಿಲ್ಲವೆಂತಲೂ, '**ಮನೋಹರ**', '**ಸ್ತ್ರೀ**', '**ಕಿರ್ಲೋಸ್ಕರ**', '**ಝ್ಣಾರಪಕರ**' ಮುಂತಾದ ಪತ್ರಿಕೆಗಳಿಗೆ ಮನೆಯಲ್ಲಿ ಎಡೆಮಾಡಿ-ಕೊಡುವರು. 'ಅವುಗಳಿಗಿಂತ ಮಜಕೂರು ಹೆಚ್ಚು ಮರಾಟೀ ವರ್ತಮಾನಪತ್ರದೊಳಗ ಸಿಗತsದ; ಪಾನೂ ಪುಷ್ಕಳ ಇರತಾವ; ಅಲ್ಲದೆ ವಾರದ ಭವಿಷ್ಯ ಖರೇ ಬರೂದಂದ್ರ ಮರಾಟೀ ಪತ್ರದೊಳಗ,' ಎಂಬುದು—ಮರಾಟಿ ಮಾಸಿಕಗಳನ್ನು ಕೊಳ್ಳುವುದಕ್ಕೋಸ್ಕರ—ಅವರು ಹೇಳುವ ಕಾರಣ. 'ನಾವು ಇರತೇವಿ ಸೋಮವಾರ-ದಾಗ, ಅಷ್ಟು ದೂರ ಹೋಗಲಿಕ್ಕ ವೇಳ ಎಲ್ಲಿರತsದ' ಎಂದು **ಕರ್ನಾಟಕ ಸಂಘ, ಸರ್ಕಲ್, ಕನ್ನಡಿಗರ ಕೂಟ** ಮುಂತಾದ ಸಂಸ್ಥೆಗಳಿಗೆ, ಕಾರ್ಯಕ್ರಮಗಳಿದ್ದಾಗ ಹೋಗದಿದ್ದುದಕ್ಕೆ ಬಿಡುವ ಬಿಸಿಯುಸಿರಿದು. ಮೇಲಣ ಸಂಸ್ಥೆಗಳಿಗೆ ಹೋಗಿ,ಉಳಿದ ಕನ್ನಡಿಗ-ರೊಂದಿಗೆ ಕಲೆತು, ಯಾವುದಾದರೊಂದು ವಿಷಯವನ್ನು ತೆಕ್ಕೊಂಡು ಚರ್ಚೆಮಾಡಿ ಜ್ಞಾನ ಬೆಳೆಯಿಸುವ ಹಟವುಳ್ಳವರಿವರಲ್ಲ. ವರ್ಗಣಿ, ಚಂದಾಹಣ, ದಾನ ಮುಂತಾದುವುಗಳಿಗೆ ಇವರು ಕೊಡುಗೈ-ಯಾಗಿರದಿದ್ದರೂ, 'ಏನೋ ಬೇಡಲು ಬಂದಿರುವರು'ಎಂದು ಮೊಗ ಕಿವುಚಿ ಕೊಡುವವರು ಇವರು. ಆದರೂ ಕನ್ನಡಿಗರಾರಾದರೂ ಬಂದರೆ, ಅವರ ಸಂಗಡ ಕನ್ನಡ ಮಾತನಾಡಲು ಕೊಂಚ ಮನಸ್ಸು ಮಾಡುವವರೆಂದರೆ ಇವರೇ.

ಇನ್ನು 'ಪುಣೇರೀ ಕನ್ನಡಿಗ' ರೆಂದರೆ ಯಾರು? ಪುಣೇರಿ ಕನ್ನಡಿಗರಲ್ಲಿ 'ಕನ್ನಡಿಗ' ಎಂಬ ಭಾವನೆಯೆ ಇರುವುದಿಲ್ಲ. ಕನ್ನಡಿಗರಿವರು, ಕನ್ನಡ ದೇಶದಿಂದ ಬಂದವರು, ಕನ್ನಡ ನುಡಿಯನ್ನೇ ಕಲಿತವರು, **ಕನ್ನಡ** ವಾತಾವರಣದಲ್ಲಿಯೆ ಬೆಳೆದವರು. ಇಷ್ಟಿದ್ದವರು, ಪುಣೆಗೆ ಬರುವಕಾಲಕ್ಕೆ ಅವನ್ನೆಲ್ಲ ಮರೆತೇ ಬಂದವರಿವರು. ಒಂದ ಕೆಲವು ದಿನಗಳಲ್ಲಿ ತಮ್ಮ ಇಡಿಯ ಸಂಸ್ಕೃತಿಯನ್ನೇ ಮರೆತು, ಮೊತ್ತ-ಮೊದಲು ಪುಣೆಯ ಜನರ ಹೊರಸೋಗನ್ನು ಅನುಸರಿಸುವರು. ಅವರ ಒಟ್ಟೆಯ ಬೆಡಗು, ಮಾತಿನ ವೈಖರಿ, ಹೆಜ್ಜೆಹೆಜ್ಜೆಗ ಮುರುಕ, ನಡೆ-ನುಡಿಗಳಲ್ಲಿ ಕೃತ್ರಿಮತೆ ಇವು ಅವರಲ್ಲಿ ನೈಜವಾಗಿ ಸೇರಿದಂತಿದ್ದರೂ ಬೆರೆತಂತಿದ್ದರೂ, ಇವರು ಏನೂ ತಡೆಯಿಲ್ಲದೆ ಅವುಗಳನ್ನೆಲ್ಲ ಅನುಕರಿಸುವರು. ಕ್ರಮೇಣ ಮಾತು-ಮಾತಿನಲ್ಲಿ, ಮರಾಟಿ ಶಬ್ದಗಳನ್ನು ಬೆರಸುತ್ತ, ಗಡಿಯಾರದ ಗಂಟೆ ನಿಮಿಷಗಳನ್ನು ಹೇಳಬೇಕಾದರೆ,'ಅಕರಾ, ಸಾಡೇದಹಾ, ದೀಡ, ಅಡೀಚ' ಮುಂತಾದುವುಗಳನ್ನು ಸೇರಿಸುತ್ತ, 'ನಮಗೂ ಮರಾಟಿ ಒರತsದ' ಎಂದು ತೋರಿಸುವುದಕ್ಕಾಗಿ, ಏನೋ ಸಣ್ಣಸಣ್ಣ ಮಾತುಗಳನ್ನೂ ಸಂಪೂರ್ಣ ಮರಾಟಿಯಲ್ಲಿ ಆನ್ನುತ್ತ, ಕನ್ನಡದ ಸೊಬಗನ್ನು ಕೆಲದಿನಗಳಲ್ಲಿ ಕಳೆದುಕೊಂಡು ಬಿಡುವರು. 'ನಾನು ಮೊದಲಿಗೆ **ಕನ್ನಡ** ಕಲಿತರೇನಾಯಿತು, ನನಗ ಮರಾಟಿ ಅರಭಾಟ ಬರತsದ' **ಎಂದು ಹೆಮ್ಮೆ** ತೋರಿಸುವವರು ಇವರು. 'ಅರೇ ಬಾಪರೆ, ವಾಹ್ವಾ, ಬುವಾ' ಮುಂತಾದುವುಗಳನ್ನು ಸೇರಿಸುವುದರಲ್ಲಿ ಇವರಿಗೆ ಒಂದು ತೆರನಾದ ಹುರುಪು. ಇವರು ಕನ್ನಡವನ್ನು ಓದುವುದಿಲ್ಲ, ಬರೆಯುವುದಿಲ್ಲ, ನುಡಿಯುವುದಿಲ್ಲ — ಇಷ್ಟೇ ಅಲ್ಲ—ಕನ್ನಡ ವಾತಾವರಣವನ್ನೇ ಮನೆಯಿಂದ ದೂಡಿಬಿಟ್ಟಿರುವರು. ಸ್ವಭಾವದಲ್ಲಿ, ಊಟದಲ್ಲಿ, ಅಚ್ಚ ಪುಣೇರೀ ಪಡಿಯಚ್ಚೇ ಇವರಲ್ಲಿ ಮೂಡಿರುತ್ತದೆ. ಉಪ್ಪಿಟ್ಟು, ಸಿಹಿಸಜ್ಜಿಗೆ, ದೋಸೆ, ಇಡ್ಲಿ, ಕಡಬು, ಕೋಸಂಬ್ರಿ, ಹೋಳಿಗೆ ಇಂತಹ ಕರ್ನಾಟಕದ ಪಕ್ವಾನ್ನವನ್ನು ಬಿಟ್ಟು, ಬುಂದೆ, ಬೇಸನು, ಪಿಟ್ಲs, ಬಾಳೆಯ ಹಣ್ಣಿನ ಕೋಶಿಂಬೀರ್, ಪುರೆ, ಆಳೂಭಾಜಿ, ಶ್ರೀಖಂಡ, ಕಡಿ. ಇವುಗಳಿಗೆ ಮಾರು ಹೋಗಿರುವರು. ವಚನಾಲಯವನ್ನು **ಸಕಾಳ, ಸಂಧ್ಯಾಕಾಳ, ಕೇಸರಿ, ಚಿತ್ರಾ, ಸ್ತ್ರೀ,** ಮುಂತಾದ ವೃತ್ತಪತ್ರಿಕೆಗಳೂ, **ಆಶಾ, ಪಾಂಥರಾಥಗ, ಕಾಳಾಥಗ, ದೋನಧ್ರುವ** ಮುಂತಾದ ಕಾದಂಬರಿಗಳೂ, **ವಿ. ಸ. ಖಾಂಡೇಕರ, ನಾ. ಸಿ. ಫಡಕೆ, ಆಪ್ಟೇ, ನ. ಚಿ. ಕೇಳಕರ** ಮುಂತಾದವರ ಭಾವಚಿತ್ರಗಳೂ ಅಲಂಕರಿಸಿರುವುವು. ಮನೆಯಲ್ಲಿ ಫೋನೋ ಇದ್ದರೆ ತೀರಿತು. '**ಯಮುನಾ ಜಳಿ**' 'ಯಾಹೋ ರಾಜಸಾ' '**ಡೊಳೇಹಿ ಜುಲ್ಮಿಗಡೆ**' '**ಶಿಶುಪಾಲ ಬಧವೆ**' ಮುಂತಾದ ಗಾನದೋಸೆಗಳೇ (ರೆಕಾರ್ಡ್ಸ್) ಇವರ ಬಗೆ ಮಿಡಿಯುವುವು. ಪುಣೇರಿ ಕನ್ನಡಿಗರನ್ನು ಕನ್ನಡಿಗರೆಂದು ಗುರುತಿಸುವುದು ಬಲುಕಠಿನ. ಮರಾಟಿಗರಿಗಿಂತ ಈ ಕನ್ನಡಿಗರು (?) ಸರಸವಾಗಿ, ಸುಲಲಿತವಾಗಿ ಮರಾಟಿಭಾಷೆಯಾಡುತ್ತಿರುವರಾದುದರಿಂದ, ಇವರು ಕನ್ನಡಿಗರೆಂದು ಬೆರಲು ತೋರಿಸುವುದು ಬಲು ಬಿಕ್ಕಟ್ಟು. ಆದಕ್ಕೆ ಒಂದೇಒಂದು ಸಾಧನ: ಓಣಿಯೊಳಗೆ ತಿರುಗಾಡುವಾಗ, ಒಬ್ಬೊಬ್ಬರನ್ನೆ ಟೀಕೆಮಾಡುತ್ತ, ಬೈಯುತ್ತ ಹೋದಾಗ, ಯಾರಾದರೂ. "ಯಾಕ್ರೆಪಾ, ನನಗೂ ಕನ್ನಡ ಒರತsದ. ನಾವೂ ನಿಪ್ಪಾಣಿಯವರು" ಎಂದರೆ, 'ಸಿಕ್ಕಿತಲೆ ಬ್ಯಾಟಿ! ಇವನೂ ಒಬ್ಬ ಕನ್ನಡಿಗನಿರುವ!' ಎಂದು ಕಂಡುಹಿಡಿಯಬಹುದು.

ಇತ್ತೀಚಿಗೆ ಕನ್ನಡನಾಡು, ಕನ್ನಡನುಡಿ, ಕನ್ನಡ ಸಾಹಿತ್ಯ ಮುಂತಾದ ಬಗೆಮುಗುಳುಗಳು ಎಲ್ಲರ ಎದೆಯಲ್ಲಿ ಕೊನರೊಡೆಯುತ್ತಿರುವುದರಿಂದ, ಪುಣೆಯಲ್ಲಿಯೂ ಕನ್ನಡದ ಜಾಗೃತಿ— ಹೆಜ್ಜೆ ಸಣ್ಣದಾದರೂ— ಹೆಜ್ಜೆ ಇಡುತ್ತ ಮುಂದೆ ಸಾಗಿದೆ. **ಕರ್ನಾಟಕ ಸಂಘ, ಕನ್ನಡಿಗರ** ಕೂಟ ಮುಂತಾದ ಸಂಸ್ಥೆಗಳು ತಲೆಯೆತ್ತುತ್ತಲಿವೆ. ಆದರೂ ಹುರುಪು ಮಂದಗತಿಯಲ್ಲಿಯೇ ಇದೆ. ಕೂಡುವುದಾದರೂ ಯಾವಾಗಲಾದರೊಮ್ಮೆ, ಅದೂ ಮೋಜುಮಾಡಲಿಕ್ಕೆ. ಕನ್ನಡಿಗರ ಕೂಟ, ಕರ್ನಾಟಕ ಸಂಘ, ಇವು ಹರಟೆಹೊಡೆಯುವ, ಚಾಯಾರಿ ಚಹವ ಕುಡಿಯುವ, ವ್ಯಕ್ತಿತ್ವವನ್ನು ಮುಂದೆಮಾಡಲು ಪ್ರಯತ್ನಿಸುವ ಸಂಸ್ಥೆಗಳಾಗದೆ, ಯಾವುದಾದರೊಂದು ವಿಧಾಯಕ ಕಾರ್ಯಕ್ರಮವನ್ನು ಮುಂದೆ ಇರಿಸಿಕೊಳ್ಳಬೇಕು. ಕನ್ನಡ ಕುಟುಂಬಗಳೆಷ್ಟು, ಕನ್ನಡಿಗರೆಷ್ಟು, ಎಷ್ಟು ಜನರಿಗೆ ಕನ್ನಡ ಓದಲಿಕ್ಕೆ ಬರೆಯಲಿಕ್ಕೆ ಗೊತ್ತಿದೆ —

(೪೦೬ ನೆಯ ಪುಟ ನೋಡಿರಿ.)

ಸಲಾಮ್ ಸಾಬ್ !

'ಕಾವ್ಯಾನಂದ' ಹೈದರಾಬಾದ್

ನಡು ಹಗಲು ! ಬೇಸಗೆಯ ನೇಸರಿನ ಸುಡುಬಿಸಿಲು !
ಪೊಡವಿ ತಲ್ಲಣಿಸುತಿದೆ! ತಿರೆಗೆ ಜ್ವರ ಬಂದಂತೆ
ಬಿಸಿಲ ಬಿರುಬಿದು ಹೆಚ್ಚಿ ಉಗಿಕಾರುತಿದೆ ನೆಲವು !
ತನಗೆ ತಂಪನು ನೀಡೆ ಗಾಳಿಯೂ ಗೋಳಿಟ್ಟು
ತರುಗಳನು ಕೇಳುತಿದೆ ಆಗಾಗ ಕೆಣಕೆಣಕಿ !
ಬಿಸಿಲುಗುದುರೆಗಳೇರಿ ವಸುಧೆಯೊಡಲಿಂದೊಗೆದ
ಬಿಸಿಯುಸಿರು ಓಡುತಿದೆ ಮೋಡಗಳ ನೊರೆಹೊಗಲು !
ಹೊಗೆಬಂಡಿಯೋಡುತಿದೆ ದಿಗಿಲುಗೊಂಡವರಂತೆ—
ಉಗಿಯ ಬಿಸುಪಿಮ್ಮಡಿಸೆ ಹಗಲುಗುಳ್ದ ಕಿಚ್ಚಿನಲಿ !

ನಾನಿಳಿದ ನಿಲ್ದಾಣವೊಂದು ಹಂಚಿನ ಕೋಣೆ ;
ನಾಲ್ಕು ಜನರೊಮ್ಮೆಗೇ ನಿಂತುಕೊಳ್ಳಲು ಬರದು ;
ಮುಗ್ಗಲಿನ ತಗಡುಮನೆಯುರಿಗಾವುನೆರಳಿನಲಿ
ಉಸ್ಸೆಂದು ಹೊರಳುತಿವೆ ಜೀವಿಗಳು ನಾಲ್ಕಾರು !
ಸನಿಹದಲಿ ಮರವಿಲ್ಲ ; ನಿಲ್ಲೆ ನೆರಳಿನಿತಿಲ್ಲ ;
ಊರಿಹುದು ದೂರದಲಿ; ದಾರಿ ತಿಳಿಯದು ನನಗೆ ;
ಏನು ಮಾಡುವುದೆಂದು ಜಾನಿಸುತ ನಿಂತಿರಲು,
ಕಿವಿಯ ಕೊರೆಯುತ ಹೊಕ್ಕು ಎದೆಯ ನಡುಗಿಸಿತೊಂದು
ಕರುಣ ಕ್ರಂದನ— “ ಸಲಾಮ್ ಸಾಬ್ | ”

ಹಿಂದಿರುಗಿ ನೋಡಿದೆನು; ಹೆದರಿ ಹೌಹಾರಿದೆನು—
ದೈನ್ಯತೆಯು ನಿಟ್ಟುಸಿರೆ ನರನಾಗಿ ನಿಂತಂತೆ
ದಾರಿದ್ರ್ಯದುಮ್ಮಳವೆ ಮೈದಾಳಿತೆಂಬಂತೆ
ಅಳಲ ಚೀತ್ಕಾರವೇ ಚರ್ಮತೊಟ್ಟಿರುವಂತೆ
ಕನಿಕರದ ಕಣ್ಣೀರೆ ಕೈಕಾಲು ತಳೆದಂತೆ
ಕರುಣೆಯಾ ಕಲಮಲವೆ ಕಾಯವನು ಪಡೆದಂತೆ
ಎಲುವು-ತೊಗಲುಗಳಲ್ಲಿ ಎಂತೆಂತೊ ಜೀವವನು
ಬಲುಮೆಯಿಂದಲಿ ಹಿಡಿದು, ಉಸಿರ ಬಲೆಯಲಿ ಬಿಗಿದು,
ಬಾಯ್ಬಿಡುತ ನಿಂತಿತ್ತು ನರನ ಆಕೃತಿಯೊಂದು !

ಸರನೆನಲೋ ? ನೆರಳೆನಲೊ ? ಅರೆಜೀವಹಾರಿರುವ
ಬರಿಕಳೇಬರನೆನಲೊ? ನಿಟ್ಟುಸಿರ ಕಿದಿಯೆನಲೊ ?
ತಳದಿಂದ ತಲೆವರೆಗೆ ಕಣ್ಣಿಟ್ಟು ನೋಡಿದರು
ಮಧ್ಯದಲಿ ಕಾಣುವುದು ಛಿದ್ರವಸ್ತ್ರದ ತುಂಡು !
ತಲೆಯ ಕಾಯುವರಾರು ? ಕರುಣೆಬಂದಿತೊ ಏನೊ—
ನೆರೆಗೂದಲೆಂಬುವಕೆ! ಮುಚ್ಚಿಹವು ತಲೆಕನ್ನೆ !
ಹೆಗಲಿನಲಿ ಹರುಕೊಲ್ಲಿ; ಬಗಲಿನಲಿ ಅನುಗೋಲ್ ;
ಎಡಗೈಯೊಳಿದೆ ಪಾತ್ರೆ; ಬಲಗೈಗೆ ಹಣೆಯು—
“ ಸಲಾಮ್ ಸಾಬ್ ! ಸಲಾಮ್ ಸಾಬ್ ! ”

ಜವರು ಬತ್ತಿದ ಕಾಯ, ಹೊಲಸು ಮೆತ್ತಿಹ ಮೈಯು,
ಹಿಂಡಿದಂತಿಹ ಚರ್ಮ ; ಖಂಡವಂಟಿದ ಎಲುವು;
ಕಾಂತಿಯಿಂಗಿದ ಕಣ್ಣು ; ಚಿಂತೆಯಡಸಿದ ಹಣೆಯು ;
ಹಸಿದು ಕುಸಿದಿಹ ಹೊಟ್ಟೆ; ಮುರಿದು ಬಾಗಿದ ಬೆನ್ನು;
ನೆರೆತು ನಡುಗುವ ತಲೆಯು; ಬರತು ಅಂಟಿದ ಜಿಹ್ವೆ,—
ಬಿಸಿಲನಣಕಿಸಿ ನಿಂತು ನಿರುಕಿಸುತಲಿಹ ಜೀವಿ—
ಭಾರತದ ಬಡತನದ ಬಾವುಟದ ಚಿತ್ರದೊಲು,
ಅಳಲು ಕರುಣೆಗೆ ಬರೆದ ಜೀವಂತ ಪತ್ರದೊಲು-
“ ಸಲಾಮ್ ಸಾಬ್—ಸಲಾಮ್ ಸಾಬ್ ! ”

ಕಂಡೊಡನೆ ಕಲ್ಲೆದೆಯ ಕರಗಿಸುವ ಕನಿಕರವು
ಕಲಕಿದರು ಎನ್ನೆದೆಯ—ಕನಲಿ ನುಡಿಯಿತು ಬುದ್ಧಿ-
“ ಇವ ತುರುಕ, ಭಾರತದ ಅರಮನೆಯ ಮುರುಕ !
ಇವ ಮ್ಲೇಂಛ-ಭಾರತವ ಹಂಚೆ ಮಾಡಿಹ ಹೊಂಚ !
ಕರೆದು ನೆರವನು ಕೊಟ್ಟ ಜನರಿವಗೆ ಕಾಫರರು ?
ಸ್ವಸ್ತ್ರೀಯು ಬಚ್ಚಿಟ್ಟು ಪರಸ್ತ್ರೀಯರನು ಕಂಡು
ಕೆರಳುವುದು ಕಾಮೇಚ್ಛೆ! ಹಿಂದುಗಳ ಕಂಡೊಡನೆ
'ಎಂದಿವರ ನುಂಗುವೆನು' ಎಂದು ಕಳಮಳಿಸುವನು !
ಭಾರತದ ವೈರಿಯಿವ! ಹಾವ್ಗೆ ಹಾಲೆರೆಯದಿರು ! ”

ಇತ್ತಂಡದಲಿ ಸಿಕ್ಕು ಮನಕೆ ಕವಿಯಿತು ಮಂಕು:
“ ಶತಮಾನ ಕಳೆದರೂ ಭಾರತವ ನೆಮ್ಮದಲೆ
ಮಕ್ಕಯಿಹ ದಿಕ್ಕಿಗೇ ಕಣ್ಣಿಟ್ಟು ನೋಡಿ ಕೂ-
ಳಿಕ್ಕಿ ಸಲಹಿದ ನಾಡಿನೊಕ್ಕಟ್ಟ ಮುರಿದವರು
ತಕ್ಕವರೆ ಕರುಣೆಗೆ ? ಸಾಯಲಿವರಿದೆ ರೀತಿ! ”
ಎಂದು ಗುಡುಗಿದ ದನಿಗೆ—“ ಕನಲದಿರು ಕರುಣೆಯೇ,
ಭಾರತದ ವೈರಿಗಳು ಬಡತುರುಕರಲ್ಲ! ಸಿರಿ
ತಲೆಗೇರಿ ಕುಣಿಯುತಿಹ ಸ್ವಾರ್ಥಿಗಳು ಕೆಲವು ಜನ !
ಕೆಡುಕರವರಾ ಪಾಪ ಬಡಜನಕೆ ಮೃತ್ಯುವೆ ? ”

ಬೆಚ್ಚಿದೆನು ಮನದಲ್ಲಿ—ನಿಶ್ಚಯವು ಈ ಮಾತು !
ಬಡತುರುಕ ಬೇಡುವುದು ಅನ್ನ—ಅಲ್ಲ ಪಾಕಿಸ್ತಾನ !
ಇವರೊಡನೆ ದ್ವೇಷವೆ ? ನಾಲ್ಕಾಣೆಯನ್ನಿತ್ತೆ ;
“ ಸಲಾಮ್ ಸಾಬ್ ! ” ಅವನ ಹಿಗ್ಗನು ಕಂಡು
ಹಿಗ್ಗಿತೆನ್ನೆದೆ! ಇಂದು ಹೊಟ್ಟೆತುಂಬುಣ್ಣುವನು ಹಸಿದ ಜೀವಿ!
ಹುಟ್ಟಿನೊಳಗಿರಬಹುದು—ಹಸಿದ ಹೊಟ್ಟೆಯಲಿ ಕುಲವುಂಟೆ?
ಜಡತನುವಿಗಿರಬಹುದು-ಹೃದಯಭಾಷೆಯಲಿ ಕುಲವುಂಟೆ ?
ಜಡತನುವಿಗಿರಬಹುದು—ಬಡತನಕೆ ಕುಲವುಂಟೆ ?
ಕರಿ-ಬಿಳಿಯ ವರ್ಣವಿರೆ ಕರುಣಕ್ಕೆ ಕುಲವುಂಟೆ ?
“ ಸಲಾಮ್ ಸಾಬ್—ಸಲಾಮ್ ಸಾಬ್ ! ”

ಇನ್ನೇನು?– ಎಂದಾಗ ಇನೋನು!

ತುರ್ಕಸ್ತಾನದ ಮಹಾಪ್ರಾಣನಾದ ಇಸ್ಮೆತ್ ಇನೋನು

(ವ್ಯಕ್ತಿಪರಿಚಯ)

ಶ್ರೀ. ಎಂ. ಪಿ. ಟಿ. ಆಚಾರ್ಯ, ಮುಂಬಯಿ

ತುರ್ಕಸ್ತಾನದಲ್ಲಲ್ಲದೆ ಬೇರೆ ಯಾವ ಪಶ್ಚಿಮರಾಷ್ಟ್ರದಲ್ಲಿ ಹುಟ್ಟಿದ್ದರೂ ಇಸ್ಮೆತ್ ಇನೋನುವಿನ ಹೆಸರು, ವಿಶ್ವದ ರಾಜಕಾರಣಿಗಳ ಮಾಲೆಯಲ್ಲಿ ಮೇಲುಗೈಯಾಗಿ ಮೆರೆಯುತ್ತಿತ್ತು. ಇವನು ದೊರೆತುದು ತುರ್ಕಸ್ತಾನದ ಭಾಗ್ಯ; ಆದರೆ ಆ ಭಾಗ್ಯದಿಂದ ಪ್ರಯೋಜನ ಪಡೆಯುವ ಯೋಗ್ಯತೆ ತುರ್ಕ್ ಜನತೆಯಲ್ಲಿದೆಯೆ?

★

ಯುದ್ಧದ ಜ್ವಾಲೆಯು ಹಬ್ಬುತ್ತ — ಹೊಯ್ದಾಡುತ್ತ ತುರ್ಕಸ್ತಾನದ ಸಮೀಪ ಬರಲಿದೆ ; ಬಂದಿದೆ. ಸಂಕಟಸಮಯ ಬಂದಾಗ ಶಾಂತತನದಿಂದ ಹೇಳಿಕೆಯನ್ನು ಕೊಟ್ಟ ತುರ್ಕೀ ಪ್ರಜಾಸತ್ತೆಯ ಅಧ್ಯಕ್ಷನಾದ ಇನೋನುವಿನ ಕಡೆಗೆ — ತುರ್ಕಸ್ತಾನದ ಕಡೆಗೆ — ಇಡಿ ಜಗತ್ತಿನ ಲಕ್ಷ್ಯವೇ ಇಂದು ಹೊರಳಿದೆ. ಯುದ್ಧರಂಗದ ದೃಷ್ಟಿಯಿಂದ ತುರ್ಕಸ್ತಾನದ ಮಹತ್ವವು ಮೂಲೆಯಾಗಿದೆ. ಅದಕ್ಕಾಗಿ ತುರ್ಕಸ್ತಾನದ ಜೀವಾಳದಂತಹ ಮಾರ್ಗದರ್ಶಿಯ ಬಗೆಗೆ ಹೇಳುವುದುಚಿತ. (ಹಿಂದೊಮ್ಮೆ ಇವನ ಬಗೆಗೆ ಹೇಳಿಯಿದೆ; ಇಂದು ಮತ್ತೊಮ್ಮೆ. ಇಂದಿನ ಕಾಲಮಾಹಾತ್ಮ್ಯವು ಅಂತಹದು).

ಇಂದಿನ ಜಗತ್ತಿನ ಬೇರಾವ ಹಿರಿಯ ರಾಜಕಾರಣಿಯೂ ಇಲ್ಲದಷ್ಟು ಕಾಲದ ವರೆಗೆ, ಇಸ್ಮೆತ್ ಇನೋನುವು ದೊಡ್ಡ ಸ್ಥಾನದಲ್ಲಿದ್ದಾನೆ; ಎಡೆಬಿಡದೆ ಹದಿನಾರು ವರುಷ! ೧೯೨೨ ರಿಂದ ೧೯೩೮ ರ ವರೆಗೆ ಅವಿಚ್ಛಿನ್ನವಾದ ಹದಿನಾರು ವರುಷ ರಾಜ್ಯದಾಡಳಿತ ಸಮಿತಿಯ ಮುಂದಾಳಾಗಿದ್ದನು ; ಕೆಲಕಾಲ ಪರರಾಷ್ಟ್ರ ಮಂತ್ರಿಯಾಗಿದ್ದನು ; ಆ ಮೇಲೆ ಮುಖ್ಯಮಂತ್ರಿಯಾದನು. ೧೯೩೮ನೆಯ ನವ್ಹೆಂಬರಿನಲ್ಲಿ **ಇವನ ಮೊದಲಿಗನಾದ ಮುಸ್ತಫಾ-**ಕಮಾಲನು ತೀರಿದ ನಂತರ, ತುರ್ಕ್ ಪ್ರಜಾಸತ್ತೆಯ ಅಧ್ಯಕ್ಷಸ್ಥಾನವನ್ನು ಈತ ವಹಿಸಿದನು. ನ್ಯಾಯವಾಗಿ ನೋಡಿದರೆ ಇವನು ತುರ್ಕಸ್ತಾನದ ಪಾರ್ಲಮೆಂಟಿನ ಒಂದು ಪಕ್ಷದಿಂದ ಚುನಾಯಿತನಾಗಿದ್ದಾನೆ. ಆದರೆ ಅಧಿಕಾರದಲ್ಲಿ ಯಾವ ಹಿಟ್ಲರ್ – ಮುಸೊಲಿನಿಗೂ ಕಡಿಮೆಯಿಲ್ಲ. ಚಾಣಾಕ್ಷನಾದ ರಾಜತಂತ್ರಿಯೆಂದು ಇಡಿ ಯುರೋಪದಲ್ಲಿ ಹೆಸರನ್ನು ಪಡೆದಿದ್ದಾನೆ. ಕುಶಲ ಆಡಳಿತಗಾರನೆಂದು ಮನ್ನಣೆಯಿದೆ. ಶಿಸ್ತಿನ ಸೈನಿಕನಾಗಿದ್ದಾನೆ. ಯುದ್ಧರಂಗದ ವ್ಯವಸ್ಥೆಯಲ್ಲಿ ಈತನ ಜೊತೆ ನಿಲ್ಲುವವರು ಕಡಿಮೆ. ೧೯೧೪-೧೮ ರ ಮಹಾಯುದ್ಧದಲ್ಲಿಯೂ, ೧೯೨೧-೨೨ ರಲ್ಲಿಯ ತುರ್ಕ್-ಗ್ರೀಕ್ ಯುದ್ಧದಲ್ಲಿಯೂ ತೋರಿಸಿದ ಇವನ ಚಾಣಾಕ್ಷತನವೆ ಇದಕ್ಕೆ ಸಾಕ್ಷಿ. ಹೀಗಿದ್ದು ಅಂದಿನ ಪತ್ರಿಕೆಗಳಲ್ಲಿ ಸ್ಫುಟವಾಗಿ ಈತನ ಹೆಸರು ಬಂದುದಿಲ್ಲ. ಇವನ ಬಗೆಗೆ ಅಧಿಕೃತ ರೆಕಾರ್ಡು ಸಿಕ್ಕುವುದು ಇಷ್ಟು: 'ಹುಟ್ಟಿದುದು ೧೮೮೪ರಲ್ಲಿ. ೧೯೦೪ ರಲ್ಲಿ ಸೈನ್ಯವಿದ್ಯಾಶಾಲೆಯಿಂದ ಸ್ನಾತಕನಾದನು; ೧೯೧೪ ರಲ್ಲಿ ಸೇನಾಪತಿಯಾದನು' ಮುಂತಾಗಿ. ಎಲ್ಲವೂ ಬರಿ ಬರಿ — ಉಪಚಾರಕ್ಕಾಗಿ. ಇಂಗ್ಲಂಡಿನ 'ಯಾರುಯಾರು?' ಎಂಬ

[illegible]

ಗ್ರಂಥದಲ್ಲಿ ತುರ್ಕಸ್ಥಾನದ ಎಲ್ಲ ಮಂತ್ರಿ — ರಾಜತಂತ್ರಿಗಳ ಹೆಸರುಗಳು ನಿರ್ದೇಶವಾಗಿದ್ದರೂ—೧೯೪೦ ರಲ್ಲಿ ಪ್ರಸಿದ್ಧವಾದ ಅವರ ಆ ವೃತ್ತಿಯಲ್ಲಿಯೂ—ಬ್ರಿಟನ್ನಿನ ಮುಖ್ಯ ಮಿತ್ರರಾಷ್ಟ್ರದ ಹಿರಿಯನ ಈ ಹೆಸರು, ಹುಡುಕಿದರೂ ಸಿಕ್ಕುವಂತಿಲ್ಲ.

ಪರದೇಶದಲ್ಲಿಯ ಪಾಡು ಹೀಗೆ. ಸ್ವದೇಶದಲ್ಲಿಯೂ ಅಷ್ಟೇ ; ತುರ್ಕಸ್ಥಾನದಲ್ಲಿ ಕೂಡ ಜನತೆಗೆ ಅವನ ಬಗೆಗೆ ಹೆಚ್ಚಿನ ಸಂಗತಿ ಗೊತ್ತಿಲ್ಲವೆಂದು ಹೇಳಿದರೆ ಆಶ್ಚರ್ಯವಾಗಬಹುದು. ಇವನ ಬಗೆಗೆ ಯಾರೂ ಮಾತನಾಡರು. ಹರಟೆಯಲ್ಲಿ— ಹುಸಿಮಾತಿನಲ್ಲಿಯೂ ಹೆಸರು ಬಾರದು. **ಕಾನ್‌ಸ್ಟಾಂಟಿನೋಪಲ್, ಸ್ಮರ್ನಾ,** **ಅಂಕಾರದ** ಪೇಟೆಗಳಲ್ಲಿ ತಲೆತುಂಬ ಹರಟುವುದು ನಿತ್ಯಜೀವನವಾಗಿದ್ದರೂ, ಅಲ್ಲಿ ಇವನ ಸುದ್ದಿ ಇರದು. ಮನೆಯ ಜೀವನ ಸುಖದ್ದಾಗಿದೆ. ಮೂರುಮಂದಿ ಮಕ್ಕಳಿದ್ದಾರೆ. ಸಾರ್ವಜನಿಕ ಸಮಾರಂಭದಲ್ಲಿ ಒಬ್ಬರೂ ಕಾಣಿಸಿಕೊಳ್ಳುವುದಿಲ್ಲ. ಮುಹಮ್ಮದೀಯ ಧರ್ಮದ ಕರ್ಮಠನೂ ಅಲ್ಲ ; ಕಮಾಲನಂತೆ ಕಟುಧರ್ಮವಿರೋಧಿಯೂ ಅಲ್ಲ. ಕವಿತೆ ಇವನಿಗೆ ಗೊತ್ತಿಲ್ಲವೆಂದರೂ ಸರಿಯೆ ; ಆದರೆ ಪ್ರಸಂಗ ಬಂದಾಗ ಮುಂಬ ಮುದುಡಿಸುವಷ್ಟು ಅದಕ್ಕೆ ಅಪರಿಚಿತನೂ ಅಲ್ಲ. ಆಗಾಗ ಸೆರೆಯ ಗ್ಲಾಸೊಂದನ್ನು ಸೇವಿಸುತ್ತಾನೆ, ರಾಜ್ಯತಂತ್ರಿಗಳ ಕೂಟದಲ್ಲಿರುವಾಗ. ಯುದ್ಧಮುನ್ನಿನ ತುರ್ಕಸ್ಥಾನದಂತಹ ಸಮಾಜಶೈಥಿಲ್ಯದ ವಾತಾವರಣದಲ್ಲಿ ಬೆಳೆದವನಾದರೂ, ೩೦ನೆಯ ವಯಸ್ಸು ಬರುವುದರೊಳಗೆ ಬಿಕ್ಕಟ್ಟಿನ— ಬಿಗುಹಿನ—ಕಾರ್ಯರಂಗದಲ್ಲಿ ಮುಂದಾಳಾಗಿದ್ದನು. **ಅಬ್ದುಲ್ ಹಮೀದನನ್ನು** ತಳ್ಳಿದ ತಂತ್ರಗಾರನು ಇವನೆ. ಅನಂತರ ತುರ್ಕಸ್ಥಾನದ ಸೈನ್ಯದಲ್ಲಿಯೂ ರಾಜಕೀಯರಂಗದಲ್ಲಿಯೂ ಮೇಲಿನ ಸ್ಥಾನ ಇವನದೆ. ಹೊಸಯುಗದ ಅದ್ಭುತ ಚಮತ್ಕೃತಿಯಂತೆ ಪರಿಣಮಿಸಿದ ತುರ್ಕಸ್ಥಾನದ ಪುನರ್ಜನ್ಮದ ಕಾರ್ಯದ ಮುಖ್ಯ ಸೂತ್ರಧಾರನೂ ಇವನೆ. ಆದರೇನು, ಒಬ್ಬ ಹಳ್ಳಿಯ ಶಿಕ್ಷಕನಂತೆ ಈತ ಜನತೆಗೆ ಅಪರಿಚಿತನು.

ಸಹಗಿನ ವೊಗಪವನಾದರೂ ಚಪ್ಪನ್ನ ವಿದ್ಯೆಯ ಸ್ನರಿತ ಇನೋನುವು ಅಧಿಕಾರಕ್ಕೆ ಬರುವಾಗ ತುರುಸು-ತಿಕ್ಕಾಟಗಳಾಗಲಿಲ್ಲ. ತಳ್ಳಾಟ-ತಾಕಲಾಟವಿರಲಿಲ್ಲ. ಯಾವ ಗುಣುಗಾಟ-ಹಣಿದಾಟಗಳೂ ಇರಲಿಲ್ಲ. ಪಟ್ಟಕ್ಕೆ ಬಂದಾಗ ಇವನಿಗೆ ೫೪ ವರುಷದ ಹಮ್ಮನ್ನು.

ಇನೋನುವು ಸ್ನಾತಕನಾದನಂತರದ ೩೫ ವರುಷಗಳಲ್ಲಿ, ತುರ್ಕಸ್ಥಾನವು ಎರಡು ಕ್ರಾಂತಿಗಳನ್ನೂ ಐದು ಯುದ್ಧಗಳನ್ನೂ ಕಂಡಿದೆ ಮೂರು ಯುದ್ಧಗಳಲ್ಲಿ ಸೋತಿದೆ ೧೯೧೮ರ ಸೋಲು ಮೊನ್ನೆ ಮೊನ್ನೆಯ ಆದ ಫ್ರಾನ್ಸಿನ ಪರಾಭವದಂತೆ. ಇವೆಲ್ಲ ಪ್ರಸಂಗಗಳಲ್ಲಿ ಇನೋನುವಿನದು ಮುಖ್ಯಭಾಗ. ಯಾವಾಗಲೂ ಆಳವಾದ ತಂತ್ರ—ಸಂಚು, ಸಾಕಷ್ಟು ರಕ್ತಪಾತ, ವರ್ಗವೈಷಮ್ಯ, ವೈರ ಇವೆಲ್ಲವನ್ನೂ ಹಿಂಬಾಲಿಸಬೇಕಾದೆ. ಹೀಗಿದ್ದರೂ ಇನೋನುವಿಗೆ ಒಬ್ಬನಾದರೂ ವೈರಿಯೆಂದು ಇಲ್ಲ. ಕಮಾಲನ ಸರ್ವಾಧಿಕಾರಿತ್ವಕ್ಕೆ ವಿರೋಧವಾಡಿದ ಸಂಚುಗಾರರೊಂದಿಗೆ ಸಹಕರಿಸಲು ಈತ ತನ್ನ ವೈಯಕ್ತಿಕ ಒಪ್ಪಿಗೆಯನ್ನೀಯಲಿಲ್ಲ. ಇವನೊಬ್ಬ ಶಿಸ್ತು ಪಾಲಿಸುವ ಸೈನಿಕ. ರಾಜಕಾರಣಿಯೊಬ್ಬನು ಇವನ ಮತವನ್ನು ಒಪ್ಪದಿದ್ದರೆ, ಅವನನ್ನು ಪರರಾಷ್ಟ್ರದಲ್ಲಿ ರಾಯಭಾರಿಯನ್ನಾಗಿ ಕಳಿಸುವನು. 'ತಾಳ್ಮೆಯಿಂದ ಸಾಧಿಸಿದಷ್ಟು ಬಾಂಬಿನ ಹೊಡೆತದಿಂದ ಸಾಧಿಸುವುದಿಲ್ಲ' ಎಂದು ನಂಬಿರುವ ಪೌರ್ವಾತ್ಯ ಕ್ರಾಂತಿಕಾರಿ! ತುರ್ಕ-ಗ್ರೀಕರ ಯುದ್ಧದಲ್ಲಿ ಇನೋನು ಪಡೆದ ದೊಡ್ಡ ಜಯವೆ ಮೊದಲನೆಯದು. ಯುದ್ಧಾನಂತರದ ತುರ್ಕಸ್ಥಾನದಲ್ಲಿ ಕುಟುಂಬದ ಹೆಸರುಗಳನ್ನು ಬದಲುಮಾಡುವ ಸಂದರ್ಭದಲ್ಲಿ ಇವನು, ಆ ಯುದ್ಧದ ಜಯವನ್ನು ಸೂಚಿಸುವ '**ಇನೋನು**' ಎಂಬ ಹೆಸರಿಟ್ಟುಕೊಂಡನು. ಒಮ್ಮೆ ಗ್ರೀಕ ಸೈನ್ಯವು ಅನಾಟೋಲಿಯವನ್ನು ಭೇದಿಸಿ, ತುರ್ಕರಾಜಧಾನಿಯಾದ ಅಂಕಾರದೆಡೆಗೆ ಭರದಿಂದ ಸಾಗತೊಡಗಿತ್ತು. ತುರ್ಕ ಸೈನಾಧಿಕಾರಿಯಾದ ಇನೋನುವು ಅವರನ್ನು ಎದುರಿಸದೆ, ದಿನದಿನಕ್ಕೆ ಹಿಂದೆಗೆಯತೊಡಗಿದನು. ತುರ್ಕ-ಸರಕಾರವು ಗಾಬರಿಗೊಂಡಿತು. ಸರಕಾರದವರು ಇನೋನುವನ್ನು ಅಂಗಲಾಚಿ ಬೇಡಿಕೊಂಡರು ; ತಿಳಿಸಿ ಹೇಳಿದರು; ಯುದ್ಧಮಾಡಲು ಆಜ್ಞೆಯಿತ್ತರು ; ಅವನನ್ನು ಗಲ್ಲಿಗೇರಿಸುವುದಾಗಿ ಹೆದರಿಸಿದರು. ಬರಿಗಾಲಿನ, ಹಸಿದ ಹೊಟ್ಟೆಯ — ಸಾಧನ ಸಾಮಗ್ರಿಗಳಿಲ್ಲದ—ಅವನ ಸ್ವಯಂಸೇವಕರ ತಂಡವು, ಕ್ಷಣಕ್ಷಣಕ್ಕೆ ಕರಗತೊಡಗಿತ್ತು. ಸೇನಾನಿ ಕಮಾಲನು ಕೂಡ ಕಂಗೆಟ್ಟನು. ಇನೋನುವು ಹಿಂದೆ ಸರಿಯುವುದರಲ್ಲಿದ್ದನು. ಗ್ರೀಕರು ಮೇಲೇರಿ ಬಂದರು ; ಬಹುದೂರ ಬಂದರು. ಹಿಂದಿರುಗಿ ಹೋಗಲಾರದ ಸ್ಥಾನದವರೆಗೂ ಬಂದರು. ಈ ಸಂಧಿಯನ್ನು ಸಾಧಿಸಿ, ಅವರನ್ನು ಹಣ್ಣುಮಾಡಿ ಹಣಿದನು ಇನೋನು.

ಇದಕ್ಕೂ ಹೆಚ್ಚಿನ ಮಹತ್ವದುದಾದರೂ ಆಡಂಬರವೇನೂ ಇರದಂತಹ ಅವನ ಕೀರ್ತಿಪ್ರಸಂಗವೆಂದರೆ ಯುದ್ಧಾನಂತರದ ಶಾಂತಿಸಮ್ಮೇಲನದಲ್ಲಿ. ಸ್ವದೇಶವನ್ನು ಬಿಟ್ಟು ಹೊರಗೆ ಹೋಗಿದ್ದಿಲ್ಲ ಎಂದೂ ; ಸೈನ್ಯಕಾರ್ಯದ ಹೊರತು ಬೇರೆ ಯಾವುದನ್ನೂ ಮಾಡಿದ್ದಿಲ್ಲ ; ಪಶ್ಚಿಮದ ಯಾವ ರಾಜತಂತ್ರಿಯ ಪರಿಚಯವೂ ಇದ್ದಿಲ್ಲ. ಆದರೂ ಇಂತಹ ಇನೋನುವು ೧೯೨೩ ರಲ್ಲಿ ರಾಜತಂತ್ರಿಗಳ ಹೊಡೆತವನ್ನು ಎದುರಿಸಲು ಒಬ್ಬನೆ **ಸ್ವಿತ್‌ಜರ್‌ಲಂಡ್‌ಗೆ** ಕಳುಹಲ್ಪಟ್ಟನು. ಕೈಲಾಗದ ಗ್ರೀಕ್ ಸೈನಿಕರು ಅಲ್ಲಿ ಇವನ ಎದುರಾಳಿಗಳಿರಲಿಲ್ಲ ; ಇಡಿ ಬ್ರಿಟಿಶ್ ಸಾಮ್ರಾಜ್ಯದ ಬಲವು ಇವನನ್ನು ಎದುರಿಸಿತ್ತು ; ಇಂಗ್ಲಂಡದ ಪರರಾಷ್ಟ್ರಮಂತ್ರಿಯಾದ **ಲಾರ್ಡ್ ಕರ್ಜನ್‌**ನು ಇದಿರಾಗಿದ್ದನು. ತುರ್ಕ-ಗ್ರೀಕ್ ಯುದ್ಧದಲ್ಲಿ ಬ್ರಿಟಿಶ್ ಸರಕಾರವು ಗ್ರೀಕರಿಗೆ ಧನ-ಧಾನ್ಯಗಳಿಂದ ಸಹಾಯಮಾಡಿತ್ತು ; ಗ್ರೀಕರ ಸೋಲನ್ನು ತಮ್ಮ ಅವಮಾನವೆಂದು ತಿಳಿದಿದ್ದಿತು. ಬ್ರಿಟಿಶರು ತುರ್ಕಸ್ಥಾನದ ಮೇಲೆ ಅಭಿಯೋಗ ಮಾಡಬೇಕೆಂಬ ಬಯಕೆ ಲಾರ್ಡ್ ಕರ್ಜನ್‌ನಲ್ಲಿದ್ದುದು ತುರ್ಕರಿಗೆ ಮನವರಿಕೆಯಾಗಿತ್ತು. ಕರ್ಜನ್‌ನ ನಡೆವಳಿಕೆ ಇದಕ್ಕನುಗುಣವಾಗಿದ್ದಂತಿತ್ತು. ಸ್ವಭಾವದಿಂದಲೆ ಸಾಮ್ರಾಜ್ಯವಾದಿ ; ಮೇಲೆ

ಏಳು ವರುಷಗಳವರೆಗೆ ಭಾರತದ ವೈಸ್‌ರಾಯ; ವಿರೋಧವನ್ನು ತಡೆದು ಕೊಳ್ಳುವುದು ಹೇಗೆ— ಅದೂ ಪೌರ್ವಾತ್ಯರಿಂದ? ತನ್ನ ಹಿಡಿತವನ್ನು ಬಿಡಲು ಅವನ ಮನಸ್ಸು ಒಪ್ಪಲಿಲ್ಲ. ಉರಿದೆದ್ದು ಪುಟನೆಗೆದು ಇನೋನುವನ್ನು 'ಅನಾಗರಿಕ' ಎಂದು ಕರೆದನು. ಭೂಮಧ್ಯ ಸಮುದ್ರದಲ್ಲಿದ್ದ ಬ್ರಿಟಿಷ್ ಹಡಗುಪಡೆಯು ತತ್‌ಕ್ಷಣವೆ ಕಾರ್ಯಾಸಕ್ತವಾಗುವಂತೆ ಆಣತಿಯಿತ್ತನು.

ಬ್ರಿಟಿಷರ ಭೇದವನ್ನು ಎದುರಿಸುವುದು ಅಸಾಧ್ಯವೆಂದು ಇನೋನುವು ತಿಳಿದಿದ್ದನು. ಆಗ ತುರ್ಕೀ ಸೈನ್ಯವು ಸನ್ನದ್ಧವಿರಲಿಲ್ಲ. ಇದನ್ನೆಲ್ಲ ಒಳಗಿಟ್ಟುಕೊಂಡು ಕರ್ಜನ್‌ನ ಕೋಪಕ್ಕೆ ಉತ್ತರವಾಗಿ ಇನೋನುವು ನಸುನಕ್ಕನು. ಇಂಗ್ಲಂಡಿನಲ್ಲಿ ಅಧಿಕಾರಕ್ಕೆ ಬರಲಿದ್ದ ಸಂಪ್ರದಾಯವಾದಿಗಳು ರಸಿಯದ ಸಂಘವಾದಕ್ಕೆ ಬೆದರಿದವರೆಂಬುದನ್ನು ಈತ ತಿಳಿದಿದ್ದನು. ತಾನು ಸ್ವತಃ ಸಂಘವಾದವನ್ನು ಒಪ್ಪದಿದ್ದರೂ ಕೆಂಪುಸೈನ್ಯವನ್ನು ಸಹಾಯಕ್ಕೆ ತರುವೆನೆಂಬ ಹುಸಿ ಹೆದರಿಕೆಯನ್ನು ಹಾಕಿದನು. ಅಲ್ಲದೆ ಸಿರಿಯಾದಲ್ಲಿ ತಂತಮ್ಮ ಸ್ಥಾನಕ್ಕಾಗಿ ಇಂಗ್ಲಿಷರು ಫ್ರೆಂಚರು ಬಡಿದಾಡುತ್ತಿರುವರೆಂಬುದು ಅವನ ಗಮನಕ್ಕೆ ಬಂದಿತ್ತು; ಸಿರಿಯಾದ ಸಂಬಂಧ ಹಕ್ಕು-ಬಾಧ್ಯತೆಗಳು ಕೆಲವು ತುರ್ಕಸ್ಥಾನಕ್ಕೆ ಸಂಬಂಧಿಸಿದುವಿದ್ದರೂ ಇನೋನುವು ಫ್ರಾನ್ಸದವರ ಹಕ್ಕುಗಳನ್ನು ಮನ್ನಿಸುವ ನಟನೆ ಮಾಡಿದನು. ೧೯೧೧ರಿಂದ ಇಟಲಿಯು ತುರ್ಕಸ್ಥಾನದ ಭಾಗದ ಮೇಲೆ ಕಣ್ಣಿಟ್ಟಿತ್ತು; ಆದರೆ ಇಟಲಿಯು ಬೆಳೆಯುತ್ತಿದ್ದ ಹಡಗುಪಡೆಯ ಹೆದರಿಕೆ ಬ್ರಿಟಿಶರಿಗೆ ಬಹಳವಿದೆಯೆಂದು ಗೊತ್ತಿದ್ದುದರಿಂದ, ಈತ ಕರ್ಜನ್‌ನ ವಿರುದ್ಧ ಇಟಲಿಯನ್ನು ಪುರಸ್ಕರಿಸಿದನು. ಅನೇಕ ಅಡೆ-ತಡೆಗಳನ್ನು ಮುಂದಿಟ್ಟುಕೊಂಡು ಸಮ್ಮೇಲನಕ್ಕೆ ಬಂದವನು, ತುರ್ಕಸ್ಥಾನದ ಜನತೆಯ ಆಶೆಯ ಮೇರೆಯನ್ನು ಮೀರಿ ಫಲಗಳನ್ನು ಪಡೆದು ಮರಳಿ ಹೊರಟನು.

ಇದೇ ಅವನ ಪರರಾಷ್ಟ್ರ ರಾಜಕಾರಣ. ಯಾವ ಸಂದರ್ಭದಲ್ಲಿಯೂ ತುರುಸು-ತಿಕ್ಕಾಟಗಳನ್ನು ತುರ್ಕಸ್ಥಾನಕ್ಕೆ ಸುಖವಾಗುವಂತೆ ಲಾಭವಾಗುವಂತೆ ಉಪಯೋಗಮಾಡಿಕೊಳ್ಳುತ್ತಿರುವನು. ಹಳೆಯ ಗೆಳೆಯರನ್ನು ಕಾಯ್ದಿಟ್ಟುಕೊಂಡು, ಹೊಸಬರನ್ನು ಒಳವಿನಲ್ಲಿ ತಂದುಕೊಂಡು, ಸವಿಮಾತಿನಿಂದ— ಸತ್ಯಕಾಣುವ ಸುಳ್ಳುಗಳಿಂದ— ತನ್ನ ಕಾರ್ಯವನ್ನು ಮಾಡಿಕೊಳ್ಳುವನು.

ಪಶ್ಚಿಮದ ಪ್ರಭಾವವನ್ನು ತಡೆಯಲೋಸುಗ ಪೂರ್ವದ ಸಂಬಂಧಗಳನ್ನು ಗಟ್ಟಿಯಾಗಿರಿಸಿಕೊಂಡನು. ತುರ್ಕಸ್ಥಾನದಲ್ಲಿ ಸಂಘವಾದಿಗಳು ಬಹಿಷ್ಕೃತರಿದ್ದರೂ ರಶಿಯವು ಮಿತ್ರರಾಷ್ಟ್ರ. ಭೂಮಧ್ಯಸಮುದ್ರದಲ್ಲಿಯ ಬ್ರಿಟಿಶ್-ಫ್ರೆಂಚ್-ಇಟಾಲಿಯನ್ನರ ತುರುಸು-ತಿಕ್ಕಾಟಗಳ ಲಾಭವನ್ನು ಪಡೆದನು. ಒಂದು ದೇಶವನ್ನು ಬಿಟ್ಟು ಉಳಿದ ಎಲ್ಲ ಬಾಲ್ಕನ್ ರಾಜ್ಯಗಳ ಆದರಕ್ಕೆ ಪಾತ್ರನಾದನು. ಮೊದಲಿನಿಂದಲೂ ವೈರಿ ರಾಷ್ಟ್ರಗಳಾಗಿದ್ದ ನೆರೆಹೊರೆಯ **ಪರ್ಶಿಯಾ, ಇರಾಕ್** ಮತ್ತು ಸಿರಿಯಾಗಳ ಗೆಳೆತನವನ್ನೂ ಸಂಪಾದಿಸಿದನು. ಕೊನೆಗೆ **ಅಬ್ಬಿಸಿನಿಯನ್** ಯುದ್ಧದ ಕಾಲಕ್ಕೆ ದೊಡ್ಡದೊಂದು ಹಂಚಿಕೆ ಹಾಕಿದನು. ಹಳೆಯ ವೈರವನ್ನು ಮರೆಯಿಸಿ, ಇಂಗ್ಲಂಡಿನೊಂದಿಗೆ—ಇಟಲಿಯ ವಿರುದ್ಧ—ಹಾಯೆನ್ನುವುದರೊಳಗೆ ಮುರಿಯಲಾರದ ಬೆಸುಗೆಯನ್ನು ಹಾಕಿದನು. ಇವನಲ್ಲಿ ಒಳ್ಳೆಯ ಸಾಧನೆಗಳು ಇರುವುದು ಕಡಿಮೆ. ಇದ್ದುವುಗಳನ್ನು ಪ್ರತಿರೋಧಿಗಿಂತ ಒಳ್ಳೆಯ ರೀತಿಯಲ್ಲಿ ಬಳಸುವ ಜಾಣತನವಿದೆ. ಇಂದು ಆ ತಾಳ್ಮೆ ಆ ಚಾಣಾಕ್ಷತನ ಬೇಕಾಗಿದೆ; ಹಿಂದಿನ ಹತ್ತೊಂಬತ್ತು ವರುಷಗಳ ಇತಿಹಾಸದಲ್ಲಿ ಇಂತಹ ಒಕ್ಕಟ್ಟು ತುರ್ಕಸ್ಥಾನಕ್ಕೆ ಒದಗಿರಲಿಲ್ಲ. ಹಿಂದಿನ ಜಯವು ಮರೆತು ಹೋಗುವಂತಹ ಪ್ರಸಂಗ ಬಂದಿದೆ; ಕೊಡಲಾಗದೊಡವೆಗಳನ್ನು ಕೊಡುವಂತಾಗಿದೆ.

ಇನೋನು ಬೇರೆ ಪಾಶ್ಚಾತ್ಯ ದೇಶದಲ್ಲಿದ್ದುದೆ ಆದರೆ ಕೀರ್ತಿಶಾಲಿಯಾದ ಮುಂದಾಳಾಗುತ್ತಿದ್ದ. ಇವನಂತಹ ಮುಂದಾಳನ್ನು ಪಡೆಯಲು ತುರ್ಕಸ್ಥಾನವು ತಕ್ಕುದೆ? ಬಿಚ್ಚುಮಾತಿನಿಂದ ಹೇಳುವುದಾದರೆ, ತುರ್ಕಸ್ಥಾನದ ಜನತೆಗೆ ಇನೋನಿನ ಗುಣಗಳ ವೈಭವದ ಅರಿವು ಇದೆಯೇ? ಇವನ ಗುಣಗಳನ್ನರಿತು ೨೦ ವರುಷಗಳ ಹಿಂದೆ ಕಮಾಲನ ಬೆನ್ನುಕಟ್ಟಿದಂತೆ ಸಿದ್ಧವಾಗಲು ಸಾಧ್ಯವಿದೆಯೆ? ಹೊಸ ತುರ್ಕಸ್ಥಾನದ ಮುಂದಾಳು ಪ್ರಾಮಾಣಿಕನಾದರೆ ಸಾಕೆ? ಜಾಣನಾದರೆ ಸಾಕೆ? ತಾಳ್ಮೆಯುಳ್ಳ ರಾಜಕಾರಣಿಯಾದರೆ ನಡೆದೀತೆ? ಅಥವಾ ವಿಲಾಸಿಯಾದ — ಆಡಂಬರದ — ಉನ್ಮತ್ತನಾದ — ದುಡುಕಿನ—ಕಮಾಲನಂತಹರ ಅಗತ್ಯವಿದೆಯೆ?

ತುರ್ಕಸ್ಥಾನದ ಜನತೆ ಅಷ್ಟು ತಿಳುವಳಿಕೆಯುದಲ್ಲ; ಕಳೆದ ಇಪ್ಪತ್ತು ವರುಷಗಳ ಸುಧಾರಣೆಗಳನ್ನು ಎಷ್ಟರಮಟ್ಟಿಗೆ ಅರಗಿಸಿಕೊಂಡಿದೆಯೆಂಬುದರ ಅರಿವು ಅದಕ್ಕಿಲ್ಲ. ಇನ್ನು ಅನೇಕರು ನಿರಕ್ಷರಿಗಳು. ಹೆಚ್ಚೆಂದರೆ ತಮ್ಮ ಹೆಸರನ್ನು ಬರೆಯಬಲ್ಲರು. ಜನತೆಗೆ ಮತಾಧಿಕಾರವಿದೆ; ಆದರ ಉಪಯೋಗವೆಲ್ಲಿ? ಒಂದೇ ಪಕ್ಷ; ಅವರಲ್ಲಿಯವರೆ ಹುರಿಯಾಳು; ಅವರನ್ನೇ ಆರಿಸುವುದು. ಹಿಂದಿನಕಾಲದ ಸುಲ್ತಾನರಾಳಿಕೆಗಿಂತ ಸ್ಥಿತಿ ಚೆನ್ನಾಗಿದೆ. ಆದರೆ ಹಿಂದೆ ಧರ್ಮವು ಒದಗಿಸುತ್ತಿದ್ದ ಅನುಕೂಲತೆಗಳನ್ನು ಮಾತ್ರ ಕಳೆದುಕೊಂಡಿದೆ. ಪಟ್ಟಣದಲ್ಲಿ ವಾಸಿಸುವ ತುರ್ಕರು— ಯಾರು ತಮ್ಮ ದೇಶದ ಪುನರುಜ್ಜೀವನದಲ್ಲಿ ಪ್ರತ್ಯಕ್ಷ ಭಾಗವಹಿಸುವರೋ ಅವರು ಮಾತ್ರ—'ಕಟ್ಟರ್' ರಾಷ್ಟ್ರವಾದಿಗಳಾಗಿದ್ದಾರೆ. ಆದರೆ ರೈತಾವಳಿಯು ಮೊದಲಿನಂತೆ ಸಪ್ಪಗೆ ಇದೆ. ದೇಶದ ಜನತೆಯಲ್ಲಿ ನೂರಕ್ಕೆ ಎಂಬತ್ತು ರೈತರು ಇರುವುದರಿಂದ, ಯಾವ ನಿರ್ಣಯಕ್ಕೂ ಅವರೆ ಹೊಣೆಗಾರರು.

ತುರ್ಕಸ್ಥಾನದ ಹೊರಗಿನವರಿಗಾಗಲಿ ಒಳಗಿನವರಿಗಾಗಲಿ ಅದರ ಭವಿತವ್ಯದ ಬಗ್ಗೆ ಉಸಿರುವುದು ಕಷ್ಟಸಾಧ್ಯ. ಬಾಲ್ಕನ್ ರಾಷ್ಟ್ರಗಳು ಭೌಗೋಲಿಕವಾಗಿಯೂ ಸಾಮಾಜಿಕವಾಗಿಯೂ ತುರ್ಕಸ್ಥಾನದಂತೆ ಇವೆ. ೧೯೧೮ ರಲ್ಲಿ ಹುಟ್ಟಿದ ಈ ರಾಷ್ಟ್ರಗಳು ಕುಸಿದುದು ರೈತಾವಳಿಯನ್ನು ಗೆಲ್ಲದೆ ಇರುವುದರ ಕಾರಣದಿಂದಲೆ.

- (೪೦ನೆಯ ಪುಟ ನೋಡಿರಿ.)

ನಾಮಕರಣ

(ಹರಟೆ)

ಶ್ರೀ. ಕೆ. ರಾಧಾಕೃಷ್ಣನ್, ಬನಾರಸ

ಹುಟ್ಟಿದ ಮಾನವ ಜೀವಿಗೆ, ಮಿಕ್ಕಿದೇನೂ ಇಲ್ಲದಿದ್ದರೂ ಯಾವುದಾದರೊಂದು ಹೆಸರು ಇದ್ದೇ ಇರುತ್ತದೆ. ಕೆಲವರಿಗೆ ಇಟ್ಟಹೆಸರು, ಇನ್ನು ಕೆಲವರಿಗೆ ಅಡ್ಡಹೆಸರು. ಕೆಲಕೆಲವರ ಇಟ್ಟ ಹೆಸರು, ಅವರ ಜೀವನದುದ್ದಕ್ಕೂ ನಗೆಗೆ ಗುರಿಯಾಗಿಸುವುದುಂಟು.

ಹೋಗುತ್ತಿದ್ದವರು ನಾವು ಮೂವರು— ಮೂರ್ತಿ, ರಾಮು, ನಾನು. ದಾರಿಯಲ್ಲಿ ಹೆಡ್ ಅಕೌಂಟೆಂಟ್‍ರು ಬಂದರು. ನಾನು ಸಲಾಮು ಹೊಡೆದು, ಮೂರು ಹೆಜ್ಜೆ ಮುಂದೆ ಹಾಕಿದೆ. ಮೂರ್ತಿ ಕೇಳಿದ—"ಇವರ ಹೆಸರೇನೋ" ಎಂದು. "ಹನುಮಂತ ರಾಯರು" ಎಂದೆ. ಇಬ್ಬರೂ ಗೊಳ್ಳನೆ ನಗುತ್ತಾ, "ಆತನನ್ನು ನೋಡಿದ ಕೂಡಲೆ ಹಾಗೇ ಅನ್ನಿಸಿತು" ಎಂದರು. ನನಗೂ ಅರ್ಥವಾಗಿ ನಾನು ಹಲ್ಲುಕಿರಿದೆ. ಹನುಮಂತರಾಯರಿಗೆ, ಹನುಮಂತನಿಗೆ ಇರಬೇಕಾದ ಅಂಗವಿಕಾರಗಳೆಲ್ಲ ಇದ್ದುವು. ಊದಿದ ಕೆನ್ನೆ, ನೆಗೆಯಬೇಕೆಂಬ ಕಾಲು, ಮೈಯೆಲ್ಲ ಕೂದಲು, ಜೋಡಿಸಿದ ಕೈ.. ಇವೆಲ್ಲ. ಮೂರ್ತಿ ಎಂದ: "ನಿಜವಾಗಿಯೂ ಆತ ಪುಣ್ಯವಂತ ಕಣೋ! ತಾಯಿ-ತಂದೆ ಇಟ್ಟ ಹೆಸರನ್ನು ಸಾರ್ಥಕಗೊಳಿಸಿದ್ದಾನೆ. ರಾಮು ತಮ್ಮ ಕೃಷ್ಣಸ್ವಾಮಿ ಇದ್ದಾನಲ್ಲ; ಅವನಿಗೂ ಹಾಗೇ! ಕರಿಯ ರೂಪ; ಅರುವತ್ತುನಾಲ್ಕು ಸಾವಿರ ಇಲ್ಲದಿದ್ದರೂ ಕೆಲವು ಗೋಪಿಕೆಯರ ಸಹವಾಸ. ಎಲ್ಲಾ ಕೃಷ್ಣನ ಮೂರ್ತಿಯೆ" ಎಂದು. ರಾಮು "ಏನೋ, ಇಂತಹ ಪುಣ್ಯ ಇರುವುದು ಕೆಲವರಿಗೆ ಮಾತ್ರ" ಎಂದು ಗೊಣಗುಟ್ಟಿದ; ನನಗೆ ಥಟ್ಟನೆ ಹೊಳೆಯಿತು ರಾಮುವಿನ ಮಾತಿನ ಅರ್ಥ. "ನನಗೆ ಗೊತ್ತು ಬಿಡಪ್ಪಾ ನೀನು ಹೇಳೋದು; ನೀನೇ ನೋಡು! ಹೆಸರು ರಾಮಚಂದ್ರ, ಹೇಳೋದೆಲ್ಲ ಬರೀ ಸುಳ್ಳೇ" ಎಂದೆ.

ರಾಮು ಏನೋ ಮೊದಲಿನಿಂದಲೂ ಸುಳ್ಳುಹೇಳುತ್ತಿರಲಿಲ್ಲ. ಹತ್ತು-ಹನ್ನೆರಡು ವರುಷದ ವರೆಗೆ ಪಿತೃವಾಕ್ಯ ಪರಿಪಾಲಕ, ಸತ್ಯಸಂಧ, ಭ್ರಾತೃಪ್ರೇಮಿ ಎಂಬ ಹೆಸರುಗಳನ್ನು ಗಳಿಸಿದ್ದ. ಒಮ್ಮೆ ಸುಳ್ಳುಹೇಳುವ ಪ್ರಸಂಗವೊಂದು ಬಂತು. ಅಂದು ಮೊದಲಿಟ್ಟವನು ಇಂದಿನ ವರೆಗೆ ಸುಳ್ಳುಪರಿಪಾಲಕನಾಗಿಯೇ ಇದ್ದಾನೆ; ತಿರುಗಿ ಸತ್ಯದ ಹಾದಿ ಮೆಟ್ಟಿಲ್ಲ. ಇಷ್ಟುದಿನ ಇಲ್ಲದ್ದು ಈಗ ತಾನೆ ಹೇಗೆ ಬಂದೀತು?

ಅಂದು, ಮೊದಲ ಬಾರಿಗೆ ಸುಳ್ಳು ಹೇಳಬೇಕಾದ ಪ್ರಮೇಯ ಬಂದಾಗ, ನಾನೂ ರಾಮೂ ನಾಟಕಕ್ಕೆ ಹೋಗಿದ್ದೆವು. ನಾಣಿ ಮನೆಯಲ್ಲಿ ನಾಟಕ. ರಾಮಚಂದ್ರ ಆ "ಲಂಕಾದಹನ"ದಲ್ಲಿ ಸೀತೆಪಾರ್ಟು. ರಾಮಚಂದ್ರ ಸೀತೆಯಾಗುವುದುಂಟೆ? ಆದರೂ ಆಗಿದ್ದ ನೋಡಿ. ಇದೆಲ್ಲ ಅವರ ಮನೆಯವರಿಗರಿವಿರಲಿಲ್ಲ. ಅವರಪ್ಪನಿಗೆ, ನಾಟಕಗಳಲ್ಲಿ ಪಾತ್ರವಹಿಸುವವರನ್ನು ಕಂಡರೆ ಕೋಪ. ಆದರೆ ಪ್ರಪಂಚದಲ್ಲಿ ರಾಮುಗೆ—ಅವರ ಮಗನಿಗೆ—ಏನಾದರೂ ಬರ್ತಿತ್ತೆಂದರೆ ನಾಟಕದಲ್ಲಿ ಪಾತ್ರವಹಿಸುವುದು. ನಾಟಕ ರಾತ್ರಿ ೧೨ ಘಂಟೆಗೆ ಮುಗಿಯಿತು. ಮನೆಯಲ್ಲಿ ಏನು ಹೇಳಬೇಕು..! ಕೊನೆಗೆ ತೀರ್ಮಾನಿಸಿ ರಾಮೂ ನಮ್ಮ ಮನೆಯಲ್ಲಿ ನನ್ನ ಜೊತೆಯಲ್ಲಿ ಓದುತ್ತಿದ್ದನೆಂದೂ, ಇದಕ್ಕೆ ನನ್ನ ತಮ್ಮ ಅದ್ರಿ ಸಾಕ್ಷಿ ಆಗಬೇಕೆಂದೂ ಗೊತ್ತಾಯಿತು.

ಮರುದಿನ ರಾಮುತಂದೆಯನ್ನು ನಮ್ಮ ತಂದೆಯವರು ನೋಡಿ "ಏನು? ರಾಮು ನಿನ್ನೆ ಸೀತೆ ಪಾತ್ರ ಬಹಳ ಚೆನ್ನಾಗಿ ಮಾಡಿದನಂತಲ್ಲಾ? ನನ್ನ ಮಗ ಹೇಳಿದ!" ಎಂದರಂತೆ. ಸರಿ! ಸುಳ್ಳು ಬಯಲಿಗೆ ಬಿತ್ತು; ಅವನಿಗೆ ಏಟು ಬಿತ್ತು; ನನಗೂ ಎರಡು ಬೈಗಳು ಆದುವು.

* * * *

ಹೆಸರಿನಲ್ಲಿ ಯಾವಾಗಲೂ ಇದು ದೊಡ್ಡ ದೋಷ. ನಮ್ಮ ತಂದೆ ಎಷ್ಟು ತೆಳ್ಳಗೆ ಗೂನಾಗಿ ಇದ್ದಾರೆ. ಅವರ ತಾಯಿ ಅವರಿಗಿಟ್ಟ ಹೆಸರು ಭೀಮಸೇನರಾಯರಂತೆ. ಭೀಮನ ಗುಣ ಒಂದೂ ಅವರಲ್ಲಿಲ್ಲ. ಹೆಸರು ಹೇಳದ ಗುಣಗಳು ನಮ್ಮಲ್ಲಿರುತ್ತವೆ; ಗುಣಕ್ಕೆ ತೂಗದ ಹೆಸರು ನಮಗಿರುತ್ತದೆ.

ನಮ್ಮ ತಾಯಿಯ ಮಕ್ಕಳಲ್ಲೆಲ್ಲ ಸ್ವಲ್ಪ ಕರ್‍ರಗಿರುವುದು—ಮೇಘಶ್ಯಾಮ. ಹಾಗೆಂದೇ ಅವನಿಗಾ ಹೆಸರಿಟ್ಟಿರುವುದು. ಒಮ್ಮೆ ಕೃಷ್ಣಸ್ವಾಮಿ ಅವನನ್ನು ಕೇಳಿದ: "ಏನು ನಿನ್ನ ಹೆಸರು?" ಎಂದು. ನಾನು ಹೇಳಿದೆ "ನಮ್ಮ ತಾಯಿ ಇವನು ಕರ್‍ರಗಿದ್ದಾನೆಂದು ಇಟ್ಟ ಹೆಸರಿದು" ಅಂತ. ಅವನು "ಅರೇ! ಇವನಿಗೆ ಯಾಕೆ ಆ ಹೆಸರಿಟ್ಟಿರಿ; ಅದು ನನಗೆ ಸರಿಹೋಗುವಂಥಾದ್ದು," ಎಂದ. ಅವನು ಬಲು ಕರ್‍ರಗೆ ಇದ್ದಾನೆ. ಕಾಗೆಯನ್ನು ನಾಚಿಸುವ ಕರಿಯ ಬಣ್ಣ ಅವನದು. ಕೆಂಡ ಕೂಡ ತಲೆಬಾಗಬೇಕು ಅವನ ಬಣ್ಣ ಕಂಡಮೇಲೆ. ನಾನೂ ಹೇಳಿದೆ: "ನಿನ್ನ ಹೆಸರೇನು ಕಡಿಮೆಯೇ?" ಎಂದು.

* * * *

ಒಳ್ಳೆಯ ಹೆಸರು ನಮಗೆ ಇರುವುದೆಂದರೆ ಸ್ವಲ್ಪ ವಿಶೇಷವೇ ಸರಿ! ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯ ಹಿಂದಕ್ಕಾಯಿತು; ಈ ಜನ್ಮದಲ್ಲಿ ಹೆಸರು ಚೆನ್ನಾಗಿರಬೇಕೆಂದರೆ ಮತ್ತೆ ಪುಣ್ಯಮಾಡಲೆಬೇಕು. ತಂದೆ ಬುದ್ಧಿವಂತನಾಗಿರಬೇಕು; ತಾಯಿ ಜಾಣಳಾಗಿರಬೇಕು; ಆಗ ಹೆಸರು ಚೆನ್ನಾಗಿಡಬಹುದು. ಅನೇಕ ಕಡೆ ಅದೂ ಕಷ್ಟವಾಗಿ ಕಾಣುತ್ತದೆ. ಅವರಿಗೂ ಈ ವಿಚಾರದಲ್ಲಿ ಸ್ವಾತಂತ್ರ್ಯವಿಲ್ಲ. ಅಪ್ಪನ ಕಡೆ, ಅಮ್ಮನ ಕಡೆ ಅಜ್ಜಿ-ಅಜ್ಜಂದಿರು ಅನೇಕರಿರುತ್ತಾರಲ್ಲ! ಅವರಿಲ್ಲದಿದ್ದರೆ, ಅವರ ಹೆಸರುಳಿಸಬೇಕೆಂದು ಅವರ ಹೆಸರಿಡುತ್ತಾರೆ.

ಅವರಿದ್ದರಂತೂ ವಿಧಿಯೇ ಇಲ್ಲ. ಹೀಗಾಗಿ ಹೊಸ ಹೆಸರುಗಳಿಗೆ ಅವಕಾಶವಿಲ್ಲದಾಗುತ್ತದೆ. ಯೋಚನಾಶಕ್ತಿ ಹಾಳಾಗುತ್ತದೆ. ನಾವೂ ಮಂಕರಾಗುತ್ತೇವೆ. ಈಗಳಿಂದಲೇ ಎಲ್ಲರೂ ಯೋಚಿಸಬೇಕು. ತಮ್ಮ ಹಿಂದಿನವರ ಹೆಸರುಗಳನ್ನು ಮರೆಯಬೇಕು; ಇಲ್ಲವೆ ಎತ್ತಿ ತೋರಿಸಿದಂತೆ ಮಕ್ಕಳಿಗಿಡಬಾರದು.

* * *

ತಮಿಳಲ್ಲಿ ಒಂದು ಗಾದೆಯಿದೆ. "ಲೇ ಎಂದು ಕರೆಯಲಿಕ್ಕೆ ಹೆಂಡತಿಯಿಲ್ಲ; ಆಗಲೇ ಮಗನ ಹೆಸರು ಗೋಪಾಲಕೃಷ್ಣ" ಎಂದು. ಆ ದೇಶದಲ್ಲಿ ಇದು ಬಹಳ ಮುಖ್ಯವಾದ ಗಾದೆ. ಈ ಗಾದೆಗೆ ಮೂಲವಾಗಿ ಒಂದು ಶಾಸನವಿದೆ. ತಿರುವಾಂಕೂರಿನ ಬಳಿ "ಪಾಳಾದಪಳ್ಳಿ" ಎಂಬ ಹಳ್ಳಿಯ ಶ್ರೀರಂಗಂ ಅಯ್ಯಂಗಾರ್ಯನ ಹೆಂಡತಿ ರತ್ನಮ್ಮ ಎಂಬಾಕೆ ಬರೆದುದದು. ಅದು ಪಾಲಿ ಭಾಷೆಯಲ್ಲಿದೆಯಂತೆ. ಹೆಂಗುಸು-ಹೆಣ್ಣು ಹೆಂಗುಸು, ಬರೆದ ಶಾಸನ ಅದು. ಆ ಮಹಾನುಭಾವನಿಗೆ ಪುತ್ರೋತ್ಸವ ಆದಾಗ, ಆತನ ಅತ್ತೆಯ ಮನೆಯಲ್ಲಿ ದೊಡ್ಡ ಜಗಳವಾಯಿತಂತೆ. ಅತ್ತೆಗೆ ತಮ್ಮ ಗಂಡದಿರ ಹೆಸರು—ಕುಂಭಕೋಣಂ ಅಯ್ಯಂಗಾರ್—ಇಡಬೇಕೆಂಬ ಹಟ; ರತ್ನಮ್ಮ ತಾಯಿಯ ಕಡೆ. ಆತನಿಗೆ ಮಾತ್ರ 'ಗೋಪಾಲಕೃಷ್ಣ ಅಯ್ಯಂಗಾರ್' ಎಂದು ಹೆಸರಿಡಬೇಕೆಂಬಾಶೆ. ಜಗಳ ಕೊನೆಗಾಣಲಿಲ್ಲ. ಹೆಂಡತಿ ಕೇಳಿದಳಂತೆ "ಏಕೆ ನಿಮಗಿಷ್ಟು ಹಟ?" ಎಂದು. ಆತ ಪ್ರತಿ ಹೇಳಿದನಂತೆ-"ನಿನ್ನ ನಾ ಮದುವೆಯಾಗಲಿಕ್ಕೆ ಮುಂಚೆಯೇ ನಾನು ಹಾಗೆ ತೀರ್ಮಾನಿಸಿದ್ದೆ" ಎಂದನಂತೆ. ಇದನ್ನೆಲ್ಲ ಬಾಗಿಲ ಕಂಡಿಯಲ್ಲಿದ್ದು ಕೇಳಿದ ಅತ್ತೆ ಹೇಳಿದಳಂತೆ: 'ಲೇ, ಮಗ ಹುಟ್ಟಲಿಕ್ಕೆ ಮುನ್ನ ನಮ್ಮ ಅಳಿಯದೇವರು ಮಗನ ಹೆಸರು ನಿರ್ಧರಿಸಿದರಂತೆ' ಎಂದು. ಇದು ಅತ್ತೆಯ ಬಾಯಿಂದ ಬೀದಿಯ ಮಾತಾಗಿ, ಊರಮಾತಾಗಿ, ಶಾಸನವಾಗಿ, ಈಗ ಅದು ಎಲ್ಲೆಲ್ಲೂ ಕೇಳಿಬರುತ್ತಲಿದೆ.

ಆದರೆ ಶಾಸನದಲ್ಲಿಷ್ಟು ಇಲ್ಲ. ಅದರಲ್ಲಿ ಅವರ ಹೊಡೆದಾಟ, ಗಾದೆ ಇಷ್ಟೇ ಇದೆ. ಮಿಕ್ಕದ್ದೆಲ್ಲ ಶಾಸನಕಾರರು ಊಹಿಸಿದ್ದಾರೆ. ಈ ಊಹೆಯನ್ನು ಎಲ್ಲರೂ ನಂಬುತ್ತಾರೆ. ಇದು ರತ್ನಮ್ಮ ಬರೆದ ಶಾಸನವೆಂದು ನಂಬಲು ಸಾಕಷ್ಟು ಆಧಾರವಿದೆ. ಆದರೆ ಇದನ್ನಾಕೆ ಎಲ್ಲಿ ಬರೆದಳು ಎಂಬಲ್ಲಿ ಮಾತ್ರ ತೊಡಕಿದೆ. ಕೆಲವರು 'ಅಶ್ವತ್ಥ ವೃಕ್ಷದಡಿಯಲ್ಲಿ' ಎಂದೂ, ಉಳಿದವರು ಬಯಲಿನಲ್ಲಿ ಹೊರಗೆ ಮರದಡಿಯಲ್ಲೆಂದೂ ಹೇಳುತ್ತಾರೆ. ಈ ವಿಚಾರವಾಗಿ ನೂರಾರು ಪುಸ್ತಕಗಳಿವೆ. ಆಕೆಯ ಹೆಸರೂ ಅಷ್ಟೇ, ವೇದವಲ್ಲಿ ಎಂದು ಕೆಲವರೂ, ಜಾನಕೀಮಣಿ ಎಂದು ಉಳಿದವರೂ ಹೇಳುತ್ತಾರೆ. ಆತನ ಹೆಸರು ಶ್ರೀರಂಗಂ ಅಯ್ಯಂಗಾರ್ ಎಂದೂ ಅನ್ನುವುದುಂಟು. ಈ ಶಾಸನ ಬರೆದುದು ಚೋಳರ ಕಾಲದಲ್ಲಿ.

ಮತ್ತೊಂದು ವಾದಾಸ್ಪದ ಅಂಶವಿದೆ. ಇದನ್ನು ಪ್ರಸಿದ್ಧ ಚರಿತ್ರಕಾರ Mr. fool ಪ್ರತಿಪಾದಿಸಿದ್ದಾನೆ: 'ಆಕೆ ಬರೆದಿರುವುದೇನೋ ನಿಜ; ಆದರೆ ಇದು ಪತಿಯ ಮೇಲಲ್ಲ; ಪ್ರತಿವಾದಿ ಭಯಂಕರನಾದ ತನ್ನ ತಮ್ಮ ಷಡಗೋಪನ್ ಮೇಲೆ' ಎಂದು.

ಅಂತೂ ಶಾಸನದಲ್ಲಿದೆ; ಗಾದೆ ಇದೆ; ನೀವೂ ಇದ್ದೀರಿ.

* * *

ಹೆಸರು ಎಂದೊಡನೆ ಕವಿಸಾರ್ವಭೌಮ ಶೇಕ್ಸ್‌ಪಿಯರು ನೆನಪಿಗೆ ಹತ್ತುತ್ತಾನೆ. "ಹೆಸರಲ್ಲೇನಿದೆ? ಬೇರೆ ಹೆಸರಿಂದಾದರೂ ಗುಲಾಬಿಯ ವಾಸನೆ ಅಡಗೀತೇನು?" ಎಂದಿದ್ದಾನೆ. ನಿಜ, ಆದರೆ ಹೆಸರಿಲ್ಲದವನ ಬಾಳು ಖಂಡಿತವಾಗಿಯೂ ಬಾಳಲ್ಲ. ಶೇಕ್ಸ್‌ಪಿಯರನ ಮಾತು ಆ ಗ್ರೀಕ್‌ಯೋಧ ಯುಲಿಸಿಸನಿಗೆ ಸರಿಹೋಯಿತು. ಬೇರೆ ಹೆಸರಿಂದಾದರೂ ಅವನ ಪರಾಕ್ರಮ ತಗ್ಗಲಿಲ್ಲ. "ಯಾರೂ ಇಲ್ಲ" ಎಂಬ ಹೆಸರಿಂದ ಸೈಕ್ಲೋಪ್ಸ್ ರಾಕ್ಷಸರ ಕಣ್ಣು ಚುಚ್ಚಿ, ಮುಚ್ಚಿದ. ಅರ್ಜುನನ ಮತ್ತೇನು? ಬೇರೆ ಹೆಸರಲ್ಲವೇ ಅವನನ್ನು ಮುಚ್ಚಿದ್ದು? ಅದೇ ಅಲ್ಲವೇ ಉತ್ತರ ಗೋಗ್ರಹಣದ ಹಿನ್ನೆಲೆ?

ಇದೆಲ್ಲ ಧೀರರ ಮಾತಾಯಿತು. ಆದರೆ ಸಾಮಾನ್ಯಜನ ಹೆಸರಿಲ್ಲದೆ ಎಂದಿಗೂ ಬಾಳಲಾರದು. ಹೆಸರಿಲ್ಲದೆ ಅಲ್ಲ, ಬೇರೆ ಹೆಸರಿಂದಾದರೂ ಬಾಳಲಾರೆವು. ಹೆಸರು ಮಾನವನ ಗುರುತು. ಹೆಸರಿಲ್ಲದವ ಕೆಲಸಕ್ಕೆ ಬಾರದವ. ಹೆಸರಿಲ್ಲದ ಮನುಷ್ಯ ಉಂಟೆ? ಹೂವಿಲ್ಲದ ಹಣ್ಣುಂಟೆ? ಅರ್ಥ ಇರಲಿ, ಇಲ್ಲದಿರಲಿ; ಸರಿಹೋಗಲಿ, ಹೋಗದಿರಲಿ; ಹೆಸರಂತೂ ಇದ್ದೇತೀರಬೇಕು. ಹೆಸರಿಲ್ಲದೆ ಹೋದರೆ ನಾವೆಲ್ಲ ನರಕಕ್ಕೆ ಹೋದಾಗ, ಚಿತ್ರಗುಪ್ತ ಹೇಗೆ ನ್ಯಾಯ ಹೇಳಾನು? ಹೆಸರು ಮಾನವನ ಹಿರಿಯ ಆಸ್ತಿ!

ರಾಧೆ ಇಲ್ಲದೆ 'ರಾಧಾಕೃಷ್ಣ' ಇರಬಹುದು; ರಾಜಯ್ಯಂಗಾರಿಗೆ ರಾಜ್ಯ, ಕೋಶ ಇಲ್ಲದಿರಬಹುದು; ಗರುಡಧ್ವಜನಿಗೆ ರೆಕ್ಕೆ ಪುಕ್ಕ ಇಲ್ಲದಿರಬಹುದು. ಸುಳ್ಳುಹೇಳಿದರೂ ರಾಮ ಸಾಗಿರಬಹುದು. ಶಕ್ತಿಯಿಲ್ಲದ ಭೀಮ ಇರಬಹುದು. 'ತಾಟಕಿ' ಯಂತಹ ಮಂಡೋದರಿಗೆ ಪಾತಿವ್ರತ್ಯದ ಸಿರಿಗೊಂಬೆ ಸೀತೆಯ ಹೆಸರಿರಬಹುದು. ಆದರೆ ಹೆಸರಿಲ್ಲದೆ ಮನುಷ್ಯ ಇರಲಾರ. ಮನುಷ್ಯನ ಹುಟ್ಟು ಉಪಪತ್ನಿಗಳಲ್ಲಿದೊಂದು. ಜನ್ಮಕ್ಕೇ ಗಂಟುಬಿದ್ದ ಹೆಂಡತಿ. ಮರೆಯಲಾರದ, ತೊರೆಯಲಾರದ ಹೊರೆ.

* * *

ಅಂಗಿ ಹಳೆಯದಾದರೆ, ಹರಿದುಹೋದರೆ ಮೂಲೆಗೊತ್ತುತ್ತೇವೆ. ಹೆಸರೂ ಅಷ್ಟೇ; ಎಂದು ನಮಗೆ ಹೆಸರು ಬೇಜಾರಾಗುತ್ತದೋ ಅಂದೇ ಆ ಹೆಸರಿಗೆ ರಾಜೀನಾಮೆ ಒಪ್ಪಿಸಬಹುದು.

ಸ್ತ್ರೀಯರ ಹೆಸರಂತೂ ತೀರ ವಿಚಿತ್ರವಾಗಿದೆ. ಕಪ್ಪನೆ ಹುಡುಗಿ, ದಪ್ಪತುಟಿ, ಸಣ್ಣಮೂಗು, ಬಹಳ ಹಲ್ಲಿನಬಾಯಿ ಇರುವ ಹುಡುಗಿಗೆ 'ಸುಂದರಮ್ಮಾಳ್' ಎಂಬ ಹೆಸರೆಷ್ಟು ವಿಚಿತ್ರವಾಗಿದೆ? ಹೆಸರಿಟ್ಟಾಗ ಆಕೆ ಸುಂದರಿಯಾಗಿರಬಹುದು. ಆದರೆ 'ಸುಂದರಿ, ಬಾ ಇಲ್ಲಿ!' ಎಂದು ಕೂಗಬೇಕಾದ ಗಂಡ ಯಾವ ಮೋರೆಯಿಂದ ಕೂಗುತ್ತಾನೆ? ಗಂಡನನ್ನು ತ್ಯಜಿಸಿದ ಅನಸೂಯೆಗೇನು ಹೇಳುವ? ಪತಿವ್ರತೆಯಾದ ತಾರೆಗೇಕೀ ಹೆಸರು?

ಸ್ತ್ರೀಸ್ವಾತಂತ್ರ್ಯ ಇದೆಯೆಂದು ಡಂಗುರ ಹೊಡೆಯುವ ಆಂಗ್ಲರು, ಸಣ್ಣಸಣ್ಣ ವಿಷಯಗಳಲ್ಲಿಯೇ ತಮ್ಮ ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಟ್ಟಿಲ್ಲ. ಮಿಸ್ಟರ್ ವುಲ್ಫನ ಪತ್ನಿ ಮಿಸೆಸ್ ವುಲ್ಫ್ ಆಗಬೇಕೇ ಹೊರತು, ಮಿಸೆಸ್ ರೋಸಲಿಂಡ್ ಆಗಬಾರದು. ಹೊರಗೂ ಅಷ್ಟೇ; ಗಂಡನ ಹೆಸರು ಹಿಡಿದೇ ಎಲ್ಲರೂ ಕರೆಯುವುದು. ಆಕೆಯ ನಿಜವಾದ ಹೆಸರನ್ನು ಮರೆತ ಸಂದರ್ಭ ಕೂಡ ಉಂಟು.

ಹೆಂಡತಿಯಂತಿರಲಿ, ಮಗಳಿಗಾದರೂ ಆಕೆಯ ಹೆಸರಾದ ಮಿಸ್ ಸಿರಿಯಾ ಇದೆಯೋ; ಅವಳು ಮಿಸ್ ವುಲ್ಫ್. ಕೂಡಿಕೆ, ಇಂಗ್ಲೀಷರ ಮದುವೆ ಅಷ್ಟೆ, ಇದಾಗುವವರೆಗೂ ತಂದೆಯ ಹೆಸರು. ಬಳಿಕ ಗಂಡ. ಸ್ವಾತಂತ್ರ್ಯವಂತೆ ಮಣ್ಣು ಹೊಯ್ದುಕೊಳ್ಳಲಿಕ್ಕೆ!

ನಮ್ಮಲ್ಲೂ ಈ ಜಾಡ್ಯ ಈಗೀಗ ಬಂದಿದೆ. ಎಲ್ಲದರಲ್ಲೂ ವಿದೇಶೀಯರನ್ನು ಅಣಕಿಸಿ ಅನುಸರಿಸುವ ನಮ್ಮ ಜನ ಇದರಲ್ಲೇನು ಹಿಂದಿಲ್ಲ. ಸ್ವಾತಂತ್ರ್ಯದ ಒಡಿದಾಟದ ಮೊಳಕೆಯಲ್ಲಿರುವ ನಮ್ಮ ಸ್ತ್ರೀಯರು, ಈಗ ಗಂಡ ಹೇಳದೇನೇ ಗುಲಾಮಗಿರಿಗೆ ಸೇರಿದ್ದಾರೆ. ಇದು-ವರೆಗಿಲ್ಲದ ಶ್ರೀಮತಿ ರಾಜಮ್ಮ-ಶಿವರಾಮನ್, ನಾಗಮಣಿ-ಪಾರ್ಥಸಾರಥಿ ಈಗ ಬಂದುಬಿಟ್ಟಿದೆ. ಶ್ರೀಮಂತರಲ್ಲೇ ಇನ್ನೂ ಒದ್ದಾಡುತ್ತಿರುವ ಈ ಜಾಡ್ಯಕ್ಕೆ ಬೇಗ ಆಪರೇಷನ್ ಆಗಲೇ ಬೇಕು. ಇಲ್ಲದಿದ್ದರೆ ಸಂಜಿ-ಗಿರಿಯ, ಮಾದಿ-ಚೆನ್ನಯ್ಯ ಬರಲೂ ಬಹುದು. ಪುಟ್ಟ ವಿಷಯಗಳಲ್ಲೇ ಸಾತಂತ್ರ್ಯಬೇಡದಿರುವ ಜನ ದೊಡ್ಡದಕ್ಕೆ ಕೈಹಾಕಿದರೆ, ಆಗುವ ಗತಿ ಗೊತ್ತೇ ಇದೆಯಲ್ಲ!

ಈಗಾಗಲೇ ಹಳೆಗಾಲದ ಹೆಸರುಗಳಲ್ಲಿ ವಿಕೃತಿ ಬರುತ್ತಿದೆ. ಗಂಡೂರಿ ವೆಂಕಟಶೇಷ, ಐ.ಎಸ್.ಗಂಡೂರ ಆಗಿದ್ದಾನೆ.ಗೋಕಾಕ ರಂತೂ ಇದ್ದೇ ಇರುವರಲ್ಲ. ಎನ್. ಶ್ರೀನಿವಾಸಯ್ಯಂಗಾರ್ಯರು ಎಮ್. ಎಸ್. ಅಯ್ಯಂಗಾರ್ಯರಾಗಿರುವುದೂ, ಸ್ವಲ್ಪ ಮುಂದೆ ಸುಗ್ಗಿ ಎಮ್. ಎಸ್. ಐ.ಗಾರ್ ಆಗಿರುವುದೂ ನಮಗೇನು ಹೊಸ ದಲ್ಲ. ಹೆಸರು ಬದಲಾಯಿಸುವ ಜಾಡ್ಯ ಅಂಟೆಗಾಲಿಡುತ್ತಿದೆ. ತಂದೆ-ತಾಯಿ ಇಟ್ಟ ಹೆಸರು ನೆಟ್ಟಗಿಲ್ಲವೆಂದು ಜನ ಮುಂದೆ ಬಂದು "ಧೀರರಂತೆ, ದಿಟ್ಟತನದಿಂದ ಧೈರ್ಯಶಾಲಿಗಳಾಗಿ" ಬೇರೆ ಹೆಸರು ಕೊಡುತ್ತಿದ್ದಾರೆ. ಗಂಡ, ಹೆಂಡತಿಗೆ ಅತ್ತೆ ಮನೆಯಲ್ಲಿ ಬೇರೆ ಹೆಸ-ರಿಡುವ ಆಟ ಇನ್ನೂ ತೀರಿಲ್ಲ. ಯಾರನ್ನು ಕೇಳಿ ಹೊಸ ಹೆಸ-ರಿಡುತ್ತಾರೆಂಬುದು ನಾಸರಿಯದ ವಿಷಯ.

* * *

ಕವಿಗಳಿಗೆ, ಕವಿಗಳನ್ನು ಕಪಿಯುವವರಿಗೆ (ಇದು ಬಹಳ ಹಿಂದಿದ್ದ ಶಬ್ದವಂತೆ; ಒಬ್ಬ ವ್ಯಾಕರಣತೀರ್ಥರು ಹೇಳಿದರು. ಯಾವುದೋ ಪ್ರದೇಶದಲ್ಲಿ ಕನ್ನಡ ಪುರಾತನಕಾಲದಲ್ಲಿತ್ತೆಂದು ಸಿದ್ಧಾಂತ ಮಾಡುವವರಿಗೆ ಇದೊಂದು ಆಧಾರ) ಒಂದು ವಿಶೇಷವಾದ ಸ್ವಾತಂತ್ರ್ಯ ಇದೆ. ಸಿಕ್ಕಾಪಟ್ಟೆ ಹೆಸರುಗಳನ್ನು ತಯ್ಯಾರಿಸಿ, ತಮ್ಮ ಲೇಖನಗಳ ಬೆನ್ನಿಗೆ ಅಂಟಿಸುವುದು. ಇದೇನೋ ಹಳೆಯ ರೋಗವೆ! ಇದು ಮೊದಲು ಹೀಗಾಯಿತಂತೆ: ಒಬ್ಬರು ಸ್ವಾರ್ಥರಹಿತರು ಲೇಖನ ಬರೆಯುತ್ತಾ, ತಮ್ಮನ್ನು ತಾವೇ ಹೊರಗಾಣಿಸಿಕೊಳ್ಳ ಬಾರದೆಂದು ಗುಪ್ತನಾಮ ತೆಗೆದರು.

ಮನೆಯ ಮಾತು ಬೀದಿಗೆ ಹಾರಿ, ಕೇರಿಗೆ ತಾಕಿ, ಊರೆಲ್ಲ ಆವರಿಸಿತು. ಈಗ ಗುಪ್ತ ನಾಮಧೇಯವಿಲ್ಲದ ಲೇಖಕನೇ ಇಲ್ಲ. ಗುಪ್ತನಾಮವಿಲ್ಲದಿದ್ದರೆ ಕವಿ ಹೆಸರುಗಳಿಸುವುದೇ ಇಲ್ಲವಂತೆ. ದೇವರಪೂಜೆಗೆ ಮೊದಲು ಆಚಮನವಾಗಬೇಕು. ಕವಿಯಾಗ ಲಿಕ್ಕೆ ಮೊದಲು ಗುಪ್ತನಾಮಬೇಕು. ಬರೆಯಲಿ, ಬರೆಯದಿರಲಿ, ಬರೆದದ್ದು ನೆಟ್ಟಗಿರಲಿ, ಇಲ್ಲದಿರಲಿ; ಅಂತೂ ಅದು ಅವನನ್ನು ಮೇಲೇರಿಸುವ ಮಂತ್ರ.

ಹೆಸರಿಟ್ಟಮೇಲೆ ಅಡ್ಡಹೆಸರ ಪ್ರಸಂಗ ಬಂದೇ ಬರುತ್ತದೆ. ಎಂಥ ದೊಡ್ಡ ಮನುಷ್ಯನಾಗಲಿ, ಎಷ್ಟು ಒಳ್ಳೆಯ ಹೆಸರಿರಲಿ, ಅಡ್ಡ ಹೆಸರು ಮಾತ್ರ ತಪ್ಪುವುದಿಲ್ಲ. ಕಲಕತ್ತೆಯಲ್ಲಿ ರಿಟೈರಾದ ಒಬ್ಬ ಪ್ರೊಫೆಸರಿದ್ದಾರೆ. ಆತ ಅಷ್ಟು ಮುದುಕನಾದರೂ ಆತ ತಾಯಿಗೆ ಇನ್ನೂ "ಮಗು," ಆತನ ಮಕ್ಕಳೇ ಆತನನ್ನು "ಮಗು" ಎಂದು ಕೂಗುತ್ತಾರೆ. ಆತನ ನಿಜವಾದ ಹೆಸರಂತಿರಲಿ. ನಾನೊಮ್ಮೆ ಅವರ ಮನೆಗೆ ಹೋದಾಗ '—ರೇ' ಎಂದು ಕರೆದೆ. ಆತನ ಹೆಂಡತಿ ಬಂದು 'ಯಾರು?' ಎಂದು ಕೇಳಿದರು. ನಾನು ಹೆಸರು ಹೇಳಿದೆ. ಆಕೆ "ಇಲ್ಲ" ಎಂದು ಬಿಟ್ಟಳು. ನಾನು ಕಾಲಿಗೆ ಎಕ್ಕಡ ಕಟ್ಟುವಾಗ ಆ, ಓ. "ನಮ್ಮವರು ಮಗುನೇ? ಇದಾರೆ ಬನ್ನಿ" ಎಂದರು!

'ಲಕ್ಷ್ಮೀದೇವಿ' ಎಷ್ಟು ಮುದ್ದಾದ ಹೆಸರು! 'ಲಚ್ಚಿ'ಎಂತ ಅವಳ ಹೆಸರು ಅವಳಿಷ್ಟಕ್ಕೆ ವಿರುದ್ಧವಾಗಿ ಆಗುತ್ತದೆ. ಶ್ರೀನಿವಾಸ 'ಶೀನ' ಆಗಿ 'ಚೀನು' ಆಗುತ್ತಾನೆ. ಕೃಷ್ಣ ಕಿಟ್ಟಿಯಾಗುತ್ತಾನೆ. ನನ್ನ ತಂಗಿ ಪದ್ಮಳನ್ನ ಚಿಕ್ಕಂದಿನಲ್ಲಿ ಬಂದ ಜನ "ಹಲೋ, ಮಿಸ್" ಎಂದು ಕರೆದು, ಈಗ ಅವಳು ನಮಗೆ ಮಿಸ್ಸಿ. ಇನ್ನೊಬ್ಬ ತಂಗಿ ಯಾದರೆ ಜವಾನರೆಲ್ಲ "ಸಣ್ಣಮ್ಮಯ್ಯ" ಎಂದುದು, ಈಗ ಅವಳು ಮನೆಯಲ್ಲಿ "ಸಣ್ಣಮ್ಮ!"

* * *

ಹೆಸರು ಜೀವನದಲ್ಲಿ ಮುಖ್ಯ ಅಂಶ. ಹೆಸರಿಲ್ಲದವ ಬಾಳಲಾರ. ಕನ್ನಡದೇವಿಗೆ ಮಾತ್ರ ಹೆಸರಿದ್ದೂ ಇರಲಿಲ್ಲ. ಎಂತಲೇ "ಹೆಸರಾ ಗಿಯೂ ಕೂಡ ಹೇಳಹೆಸರಿಲ್ಲ"

(೪೯೯ ನೆಯ ಪುಟದಿಂದ ಮುಂದರಿದದ್ದು)

ಮುಂತಾದ ವಿವರಣೆಗಳನ್ನು ಕೂಡಿಹಾಕಿ, ಕನ್ನಡ ಸಾಲೆಯನ್ನು ತೆರೆಯಲೂ ಕನ್ನಡ ಓದುಸಾಲೆಯನ್ನು ಹೆಚ್ಚಿಸಲೂ ಪ್ರಯತ್ನಿ-ಸುವುದು ಕಾರ್ಯಕ್ರಮದಲ್ಲಿ ಮೊದಲ ಹೆಗ್ಗುರಿಯಾಗಬೇಕು. ಈ ಪಾಠವನ್ನು ನಾವು ಆಂಧ್ರರಿಂದ ಕಲಿಯಬೇಕಾಗಿದೆ. ಪುಣೆಯಲ್ಲಿ ಸೌಥ್ ಇಂಡಿಯನ್ ಸರ್ಕಲ್ ಎಂಬುದೊಂದು ದೊಡ್ಡ ಬೀಡು ಇದೆ ಆಂಧ್ರರದು. ಅಲ್ಲಿ ಸಾಲೆಯಿದೆ; ವಾಚನಾಲಯವಿದೆ. ಒಂದು ದೊಡ್ಡ ಓಣಿ. ಹೆಸರು ಕೂಡ 'ಸರ್ ಮುಗ್ಗೆಯಾರ ರೋಡ್' ಎಂದಿದೆ. ದಕ್ಷಿಣಾದಿ ಸಂಗೀತ, ಪ್ರತಿಷ್ಠಿತ ಜನರ ಭಾಷಣ, ಗಣೇ-ಶೋತ್ಸವ ಮುಂತಾದ ಕಾರ್ಯಕ್ರಮಗಳು ಅಲ್ಲಿ ಜರುಗುವವು. ಇಡಿಯ ರಾಸ್ತಾ ಪೇಟೆಯೇ ಆಂಧ್ರರಿಗೆ ವಿಾಸಲಾಗಿದೆಯೆಂದರೂ ಅಡ್ಡಿ ಇಲ್ಲ. ಅವರಲ್ಲಿಯ ಒಕ್ಕಟ್ಟು, ಅವರ ಒಂದಾದ ಜೀವನ, ತಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳುವ ಅವರ ಹಂಬಲ, ಇವನ್ನು ಸಾಧಿಸುವ ಅವರಲ್ಲಿಯ ಶಿಸ್ತು ಇವು ಕಲಿಯತಕ್ಕಂತಹ ವುಗಳಾಗಿವೆ. ಇಲ್ಲಿಯ ಕನ್ನಡ ಸಂಸ್ಥೆಗಳು ಕೂಡ ಈ ರೀತಿಯಾಗಿ ದುಡಿಯುವುದರಲ್ಲಿ ದೊಡ್ಡ ಮನಸ್ಸನ್ನು ಮಾಡಿಕೊಂಡರೆ, ಪುಣೆಯ ಕನ್ನಡಿಗರನ್ನೂ, ಪುಣೇರೀ ಕನ್ನಡಿಗರನ್ನೂ ಕನ್ನಡಿಗ-ರನ್ನಾಗಿ ಮಾರ್ಪಾಟು ಮಾಡಲು,ಇಲ್ಲವೆ ಪುಣೆಯಲ್ಲಿಯ ಕನ್ನಡಿಗ-ರನ್ನಾಗಿ ತಿದ್ದುವುದು ಸುಲಭಸಾಧ್ಯವಾದೀತು.

ಹಾಸ್ಯಪ್ರಕಾರಗಳು

(ರಸವಿಚಾರ)

ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ.

★

ನಗುವುದೆಂದರೆ ಹಾಸ್ಯರಸವೆ? ಹಾಸ್ಯರಸದ ಗುಟ್ಟು-ಗುರಿಗಳೇನು? 'ವಿಟ್' ಎಂದರೇನು? 'ಹ್ಯೂಮರ್' ಎಂದರೇನು? ಸಾಹಿತ್ಯದಲ್ಲಿ ಇವುಗಳಿಗಿರುವ ಸ್ಥಾನ-ಮಾನಗಳೆಂತಹವು?

★

ಜೀವನದಲ್ಲಿಯೂ ವಾಙ್ಮಯದಲ್ಲಿಯೂ ಹಾಸ್ಯರಸವು ತುಂಬಿ ತುಳುಕುತ್ತದೆ. ಹಾಸ್ಯವಿಲ್ಲದ ಮನೆಯಿಲ್ಲ, ಹಾಸ್ಯವಿಲ್ಲದ ಮನುಷ್ಯನಿಲ್ಲ, ಹಾಸ್ಯವಿಲ್ಲದ ಮಠವಿಲ್ಲ, ರಾಷ್ಟ್ರವಿಲ್ಲ, ಸ್ಮಶಾನವಿಲ್ಲ! ಅಡಿಗೆಯೊಳಗೆ ಒಗ್ಗರಣೆಯಂತೆ ಹಾಸ್ಯದ ಪ್ರಭಾವ. ಪ್ರತಿಯೊಂದು ವಸ್ತುವಿಗೆ ಕಾಂತಿಯನ್ನೀಯುವ ಹೊನ್ನಿನಂತೆ ಹಾಸ್ಯ. ಸಹಭೋಜನವಾಗಲಿ, ವನಭೋಜನವಾಗಲಿ, ಹಾಸ್ಯವಿಲ್ಲದ ಭೋಜನವು ಪಿಂಡಭೋಜನವೇ ಸೈ. ದುಃಖದ ನೆಲೆಮನೆಯನ್ನು ಸುಖದ ತವರುಮನೆಯನ್ನಾಗಿ ಮಾಡುವ ಕಾವ್ಯ-ನಾಟಕಪ್ರಪಂಚದಲ್ಲಂತೂ ಹಾಸ್ಯಕ್ಕೆ ಪ್ರಾಧಾನ್ಯವಿರುವುದೇನಾಶ್ಚರ್ಯ? ಪ್ರಾಧಾನ್ಯವಿದ್ದವನೇ ಪ್ರಧಾನಿ. ಪ್ರಧಾನಿಯು ರಾಜನಿಗಷ್ಟೇ ವಿಧೇಯ. ರಾಜನ ಉನ್ನತಿಯ ಮಾರ್ಗವನ್ನಾದರೂ ಪ್ರಧಾನಿಯೇ ತೋರಿಸುವಂತೆ, ನಾಟಕದ—ಕಾವ್ಯದ—ಪಾತ್ರವಿಶೇಷಗಳಲ್ಲಿರುವ ಗುಣ-ದೋಷಗಳನ್ನೂ, ಉನ್ನತಿ-ಅವನತಿಗಳನ್ನೂ, ಕೊಂಕು-ಕೊರತೆಗಳನ್ನೂ ತೋರುವುದು ಹಾಸ್ಯ. ಆದ್ದರಿಂದಲೇ ನಮ್ಮ ಪೂರ್ವ-ಸಾಹಿತಿಗಳೂ, ಸಾಹಿತ್ಯ ಶಾಸ್ತ್ರಜ್ಞರೂ ಹಾಸ್ಯದ ಹಿರಿಮೆಯನ್ನು ಅರಿತು, ಅದಕ್ಕೊಂದು ಸ್ವತಂತ್ರ ರಸಸ್ಥಾನವನ್ನು ಕೊಟ್ಟಿರುವರು.

ಸ್ವಾಭಾವಿಕವಾಗಿ ಮಾನವನ ಮನದಲ್ಲಿಯೂ, ಜಗತ್ತಿನ ವ್ಯವಹಾರದಲ್ಲಿಯೂ ಅಡಗಿರುವ ಸೂಕ್ಷ್ಮ ಸಂಬಂಧಗಳನ್ನು ನೇರವಾಗಿ ವಿಂಗಡಿಸಿ ಹೇಳುವುದಕ್ಕೆ ಶಾಸ್ತ್ರವೆಂದು ಹೆಸರು. ಮೊದಲು ಮನುಷ್ಯ, ಆ ಮೇಲೆ ಮಾನವ ಶರೀರ ಶಾಸ್ತ್ರ; ಮೊದಲು ವಿದ್ಯುತ್ತು, ಆ ಮೇಲೆ ವಿದ್ಯುತ್‌ಶಾಸ್ತ್ರ, ಮೊದಲು ಭೂಮಿ, ಆ ಮೇಲೆ ಭೂಗರ್ಭಶಾಸ್ತ್ರ—ಹೀಗಿರುವುದು ಕ್ರಮ. ಸಂಗೀತಶಾಸ್ತ್ರವಿರದ ಕಾಲದಲ್ಲಿಯೂ ಮಾನವನು ಹಾಡಿಯೇ ಹಾಡುತ್ತಿದ್ದನು. ಸಂಗೀತಶಾಸ್ತ್ರದ ಅರಿವಿಲ್ಲದೆಯೂ ಕೂಡ ನದಿ, ಹಳ್ಳ, ಪಕ್ಷಿಗಳು ಹಾಡಿಯೆ ಹಾಡುತ್ತವೆ. ಮೊದಲು ಮಾನವನು ಸಾವಿರಾರು ವರ್ಷ ನಕ್ಕಮೇಲೆ, ಅವನ ಬುದ್ಧಿಯು ಬಲಿತಮೇಲೆ, ಹಾಸ್ಯರಸ ಶಾಸ್ತ್ರವು ಉತ್ಪನ್ನವಾಯಿತು. ಹಾಸ್ಯಶಾಸ್ತ್ರವಿರಲಿ, ಇರದೇ ಇರಲಿ; ಹಾಸ್ಯವೊಂದು ದೇವದತ್ತವಾದ ಗುಣವಿರುವುದರಿಂದ, ಅದು ಚಿರಂತನವಾಗಿ ನಡೆದೇ ನಡೆಯುವುದು. ಮಾನವನು ಬುದ್ಧಿವಂತನಾಗಿ, ತನ್ನ ಬುದ್ಧಿಯನ್ನೇ ತನಗೆ ಹಚ್ಚಿ ಮಾನಸಶಾಸ್ತ್ರವನ್ನು ಕಟ್ಟಿದನೆಂದ ಮೇಲೆ, ತಾನು ನಕ್ಕ ನಗೆಗೆ ಶಾಸ್ತ್ರಕಟ್ಟದೆ ಬಿಡುವನೇ?

ರಸಶಾಸ್ತ್ರದಲ್ಲಿ ಹಾಸ್ಯವು ಎರಡು ಪ್ರಕಾರದ್ದು. ಒಂದು ಬುದ್ಧಿ-ಪ್ರಧಾನವಾದದ್ದು; ಎರಡನೆಯದು ಭಾವಪ್ರಧಾನವಾದದ್ದು. ಬುದ್ಧಿಪ್ರಧಾನವಾದದ್ದಕ್ಕೆ (wit) ಕೋಟಿಕ್ರಮವೆಂದೂ ಭಾವಪ್ರಧಾನವಾದದ್ದಕ್ಕೆ (humour) ವಿನೋದವೆಂತಲೂ ಹೆಸರು. ಕೋಟಿಕ್ರಮವು ಅಥವಾ ಕೋಟಿಯು ಎರಡು ಪ್ರಕಾರದ್ದು. ಒಂದು ಶಬ್ದಚಮತ್ಕೃತಿಯುಳ್ಳದ್ದು; ಎರಡನೆಯದು ಅರ್ಥ-ಚಮತ್ಕೃತಿಯುಳ್ಳದ್ದು. ಕೋಟಿಯು ಸ್ವಲ್ಪದರಲ್ಲೇ ಮಿಂಚಿನಂತೆ ಬೆಳಕನ್ನು ಪಸರಿಸಿ ಮುಗಿಯುವುದು. ಕೋಟಿಯ ಪ್ರಸಾರವು ಒಂದು ಶಬ್ದ, ಒಂದುವಾಕ್ಯ, ಬಹಳವಾದರೆ ಒಂದು ಶ್ಲೋಕ. ಅದಕ್ಕೂ ಹೆಚ್ಚು ಪ್ರಸರಣಶಕ್ತಿಯುಳ್ಳದ್ದಕ್ಕೆ ವಿನೋದವೆಂದು ಹೆಸರು. ಒಬ್ಬರು ವ್ಯಾಖ್ಯಾನ ಕೊಡುತ್ತಿದ್ದರು; ವ್ಯಾಖ್ಯಾನ ಭರದಿಂದ ಸಾಗಿತ್ತು; ಕಟ್ಟಕಡೆಗೆ ಅವರು "ಒಟ್ಟಿನಮೇಲೆ ನಮ್ಮೆಲ್ಲರಿಗೂ ಬುದ್ಧಿ ಇಲ್ಲವೆಂದೇ ಸಿದ್ಧವಾಯಿತು" ಎಂದರು. ಒಬ್ಬ ಪ್ರೇಕ್ಷಕ "ಎಂಥಾ ಬಂಗಾರದ ಮಾತು" ಎಂದ. ಒಬ್ಬ ಕುಚೇಷ್ಟೆಗಾರ "ಏನು ರಾಯರೇ, ಎಲ್ಲಿಗೆ ಹೋಗಿದ್ದಿರಿ? ಕಾಶೀ ಕಡೆಗೋ ಏನ್ ಗಂಗಾನಕಡೆಗೋ?" ಎಂದ. ರಾಯರು "ನಿಮ್ಮ ಮುದ್ದುಮುಖ ನೋಡಿದ ಕೂಡಲೇ ನನಗ್ಯಾರದೂ ನೆನಪಾಗೋದಿಲ್ಲ" ಎಂದರು. ಇವೆರಡೂ ಕೋಟಿಕ್ರಮದ ಉದಾಹರಣೆಗಳು. ಇನ್ನು ವಿನೋದ-ಗೋಷ್ಠಿಯ ಉದಾಹರಣೆಯಿದು; ಇದೊಂದು ಚಿಕ್ಕಕಥೆ: ಒಬ್ಬ ಫಕೀರನ ಒಂಟೆ ಕಳೆದಿತ್ತು. ಅವನು ದೇವರಿಗೆ ಬೇಡಿಕೊಂಡನು, "ಒಂಟೆ ಸಿಕ್ಕರೆ ಅದನ್ನೇ ಮಾರಿ ಮಿರಾಯು ಹಂಚುವೆನು" ಎಂದು. ಒಂಟೆ ಸಿಕ್ಕಿತು. ಇನ್ನು ಒಂಟೆ ಮಾರಬೇಕಲ್ಲ! ಏನು ಮಾಡಬೇಕು? ಒಂದು ಉಪಾಯವನ್ನು ಯೋಚಿಸಿದನು. ಒಂಟೆಯ ಕೊರಳೊಳಗೊಂದು ಬೆಕ್ಕು ಕಟ್ಟಿದನು. ಪೇಟೆಗೆ ಹೋಗಿ "ಇದನ್ನು ತಗೊಳ್ಳಿರಿ ನನ್ನ ಒಂಟೆ" ಎಂದನು. "ಒಂಟೆಗೇನು?" ಎಂದು ಕೇಳಿದರೆ "ಎರಡು ಪಿಲ್ಲಿ; ಆದರೆ ಒಂಟೆಯನ್ನು ಕೊಳ್ಳುವವನು ಬೆಕ್ಕನ್ನೂ ಕೊಳ್ಳಬೇಕು. ಬೆಕ್ಕಿನ ಕ್ರಯ ನೂರು ರೂಪಾಯಿ!" ಎಂದನು. ನೂರು ರೂಪಾಯಿ ಎರಡುಪಿಲ್ಲೆಗೆ ಒಂಟೆಯನ್ನು ಮಾರಿ, ಒಂಟೆಯ ಕ್ರಯವಾದ ಎರಡು ಪಿಲ್ಲಿಯ ಮಿರಾಯಿಯನ್ನು ಹಂಚಿ, ನೂರು ರೂಪಾಯಿಗೊಂದು ಒಂಟೆಯನ್ನು ಕೊಂಡು, ಫಕೀರನು ಮನೆಗೆ ಹೋದನು." ಆತ್ಮವಂಚನೆಯ ಉದಾಹರಣೆಯಿದು. ಇವಕ್ಕೆ ವಿನೋದವೆಂತಲೂ ಸುಭಾಷಿತವೆಂತಲೂ ಹೆಸರು.

ಕೋಟಿಕ್ರಮದ ಪರಿಣಾಮವು ಹಾಸ್ಯರಸವಾಗಬೇಕು. ಬರೀ ನಗೆಯು ಹಾಸ್ಯರಸವಲ್ಲ. ಕಚ್ಚಾಡಿಸಿದರೂ ನಗೆ ಬರುವುದು. ನಗೆಯೆಂದರೆ ಹಾಸ್ಯರಸವಲ್ಲ, ಭಯವೆಂದರೆ ಭಯಾನಕರಸವಲ್ಲ.

ಹೆಂಡತಿಯಂತಿರಲಿ, ಮಗಳಿಗಾದರೂ ಆಕೆಯ ಹೆಸರಾದ ಮಿಸ್ ಸಿರಿಯಾ ಇದೆಯೇ; ಅವಳು ಮಿಸ್ ವುಲ್ಫ್. ಕೂಡಿಕೆ, ಇಂಗ್ಲೀಷರ ಮದುವೆ ಅಷ್ಟೇ, ಇದಾಗುವವರೆಗೂ ತಂದೆಯ ಹೆಸರು. ಬಳಿಕ ಗಂಡ. ಸ್ವಾತಂತ್ರ್ಯವಂತೆ ಮಣ್ಣು ಹೊಯ್ದುಕೊಳ್ಳಲಿಕ್ಕೆ!

ನಮ್ಮಲ್ಲೂ ಈ ಜಾಡ್ಯ ಈಗೀಗ ಬಂದಿದೆ. ಎಲ್ಲದರಲ್ಲೂ ವಿದೇಶೀಯರನ್ನು ಅಣಕಿಸಿ ಅನುಸರಿಸುವ ನಮ್ಮ ಜನ ಇದರಲ್ಲೇನು ಹಿಂದಿಲ್ಲ. ಸ್ವಾತಂತ್ರ್ಯದ ಓಡಿವಾಟದ ಮೊಳಕೆಯಲ್ಲಿರುವ ನಮ್ಮ ಸ್ತ್ರೀಯರು, ಈಗ ಗಂಡ ಹೇಳದೇನೇ ಗುಲಾಮಗಿರಿಗೆ ಸೇರಿದ್ದಾರೆ. ಇದುವರೆಗಿಲ್ಲದ ಶ್ರೀಮತಿ ರಾಜಮ್ಮ-ಶಿವರಾಮನ್, ನಾಗಮಣಿ-ಪಾರ್ಥಸಾರಥಿ ಈಗ ಬಂದುಬಿಟ್ಟಿದೆ. ಶ್ರೀಮಂತರಲ್ಲೇ ಇನ್ನೂ ಬಿಸ್ಸಾಡುತ್ತಿರುವ ಈ ಚಾಪಲ್ಯಕ್ಕೆ ಬೇಗ ಅಪರೇಷನ್ ಆಗಲೇಬೇಕು. ಇಲ್ಲದಿದ್ದರೆ ಸಂಜೆ-ಗಿರಿಯ, ಮಾದಿ-ಚೆನ್ನಯ್ಯ ಬರಲೂಬಹುದು. ಪುಟ್ಟ ವಿಷಯಗಳಲ್ಲೇ ಸ್ವಾತಂತ್ರ್ಯಬೇಡದಿರುವ ಜನ ದೊಡ್ಡದಕ್ಕೆ ಕೈಹಾಕಿದರೆ, ಆಗುವ ಗತಿ ಗೊತ್ತೇ ಇದೆಯಲ್ಲ !

ಈಗಾಗಲೇ ಹಳೆಗಾಲದ ಹೆಸರುಗಳಲ್ಲಿ ವಿರಕ್ತಿ ಬರುತ್ತಿದೆ. ಗಂಡೂರಿ ವೆಂಕಟಶೇಷ, ವಿ.ಎಸ್.ಗಂಡೂರ ಆಗಿದ್ದಾನೆ.ಗೋಕಾಕ ರಂತಹ ಇದ್ದೇ ಇರುವದಲ್ಲ. ಎಮ್. ಶ್ರೀನಿವಾಸಯ್ಯಂಗಾರ್ಯರು ಎಮ್. ಎಸ್. ಅಯ್ಯಂಗಾರ್ಯರಾಗಿರುವುದೂ, ಸ್ವಲ್ಪ ಮುಂದೆ ಸಾಗಿ ಎಮ್. ಎಸ್. ಐ.ಗಾರ್ಯ ಆಗಿರುವುದೂ ನಮಗೇನು ಹೊಸದಲ್ಲ. ಹೆಸರು ಬದಲಾಯಿಸುವ ಜಾಡ್ಯ ಅಂಟಿಗಾಲಿಡುತ್ತಿದೆ. ತಂದೆ-ತಾಯಿ ಇಟ್ಟ ಹೆಸರು ಸೆಟ್ಟಗಿಲ್ಲವೆಂದು ಜನ ಮುಂದೆ ಬಂದು " ಧೀರೋದಾತ್ತ, ದಿಟ್ಟತನದಿಂದ ಧೈರ್ಯಶಾಲಿಗಳಾಗಿ " ಬೇರೆ ಹೆಸರು ತೊಡುತ್ತಿದ್ದಾರೆ. ಗಂಡ, ಹೆಂಡತಿಗೆ ಅತ್ತೆ ಮನೆಯಲ್ಲಿ ಬೇರೆ ಹೆಸರಿಡುವ ಆಟ ಇನ್ನೂ ತೀರಿಲ್ಲ. ಯಾರನ್ನು ಕೇಳಿ ಹೊಸ ಹೆಸರಿಡುತ್ತಾರೆಂಬುದು ನಾಚಿಕೆಯದ ವಿಷಯ.

* * *

ಕವಿಗಳಿಗೆ, ಕವಿಗಳನ್ನು ಕಪಿಯುವವರಿಗೆ (ಇದು ಬಹಳ ಹಿಂದಿದ್ದ ಶಬ್ದವಂತೆ : ಒಬ್ಬ ವ್ಯಾಕರಣತೀರ್ಥರು ಹೇಳಿದರು. ಯಾವುದೋ ಪ್ರದೇಶದಲ್ಲಿ ಕನ್ನಡ ಪುರಾತನಕಾಲದಲ್ಲಿತ್ತೆಂದು ಸಿದ್ಧಾಂತ ಮಾಡಿರುವವರಿಗೆ ಇದೊಂದು ಆಧಾರ) ಒಂದು ವಿಶೇಷವಾದ ಸ್ವಾತಂತ್ರ್ಯ ಇದೆ. ನಿರ್ಮಾಪಿಟ್ಟ ಹೆಸರುಗಳನ್ನು ತಯ್ಯಾರಿಸಿ, ತಮ್ಮ ಲೇಖನಗಳ ಬೆನ್ನಿಗೆ ಅಂಟಿಸುವುದು. ಇದೇನೋ ಹಳೆಯ ರೋಗವೆ!

ಇದು ಮೊದಲು ಹೀಗಾಯಿತಂತೆ: ಒಬ್ಬರು ಸ್ವಾರ್ಥರಹಿತರು ಲೇಖನ ಬರೆಯುತ್ತಾ, ತಮ್ಮನ್ನು ತಾವೇ ಹೊರಗಾಣಿಸಿಕೊಳ್ಳಬಾರದೆಂದು ಗುಪ್ತನಾಮ ತೆಗೆದರು.

ಮನೆಯ ಮಾತು ಬೀದಿಗೆ ಹಾರಿ, ಕೇರಿಗೆ ತಾಕಿ, ಊರೆಲ್ಲ ಆವರಿಸಿತು. ಈಗ ಗುಪ್ತ ನಾಮಧೇಯವಿಲ್ಲದ ಲೇಖಕನೇ ಇಲ್ಲ. ಗುಪ್ತನಾಮವಿಲ್ಲದಿದ್ದರೆ ಕವಿ ಹೆಸರುಗಳಿಸುವುದೇ ಇಲ್ಲವಂತೆ. ದೇವರಪೂಜೆಗೆ ಮೊದಲು ಆಚಮನವಾಗಬೇಕು. ಕವಿಯಾಗಲಿಕ್ಕೆ ಮೊದಲು ಗುಪ್ತನಾಮಬೇಕು. ಬರೆಯಲಿ, ಬರೆಯದಿರಲಿ, ಬರೆದದ್ದು ನೆಟ್ಟಗಿರಲಿ, ಇಲ್ಲದಿರಲಿ; ಅಂತೂ ಅದು ಅವನನ್ನು ಮೇಲೇರಿಸುವ ಮಂತ್ರ.

* * *

ಹೆಸರಿಟ್ಟಮೇಲೆ ಅಡ್ಡಹೆಸರ ಪ್ರಸಂಗ ಬಂದೇ ಬರುತ್ತದೆ. ಎಂಥ ದೊಡ್ಡ ಮನುಷ್ಯನಾಗಲಿ, ಎಷ್ಟು ಒಳ್ಳೆಯ ಹೆಸರಿರಲಿ, ಅಡ್ಡ ಹೆಸರು ಮಾತ್ರ ತಪ್ಪುವುದಿಲ್ಲ. ಕಲಕತ್ತೆಯಲ್ಲಿ ರಿಟೈರಾದ ಒಬ್ಬ ಪ್ರೊಫೆಸರಿದ್ದಾರೆ. ಆತ ಅಷ್ಟು ಮುದುಕನಾದರೂ ಆತ ತಾಯಿಗೆ ಇನ್ನೂ " ಮಗು, " ಆತನ ಮಕ್ಕಳೇ ಆತನನ್ನು " ಮಗು " ಎಂದು ಕೂಗುತ್ತಾರೆ. ಆತನ ನಿಜವಾದ ಹೆಸರಂತಿರಲಿ. ನಾನೊಮ್ಮೆ ಅವರ ಮನೆಗೆ ಹೋದಾಗ '—ರೇ' ಎಂದು ಕರೆದೆ. ಆತನ ಹೆಂಡತಿ ಬಂದು ' ಯಾರು? ' ಎಂದು ಕೇಳಿದರು. ನಾನು ಹೆಸರು ಹೇಳಿದೆ. ಆಕೆ " ಇಲ್ಲ " ಎಂದು ಬಿಟ್ಟಳು. ನಾನು ಕಾಲಿಗೆ ಎಕ್ಕಡ ಕಟ್ಟುವಾಗ ಅ. ಔ. " ನಮ್ಮವರು ಮಗುನೇ ? ಇದಾರೆ ಬನ್ನಿ " ಎಂದರು !

'ಲಕ್ಷ್ಮೀದೇವಿ' ಎಷ್ಟುಮುದ್ದಾದ ಹೆಸರು! 'ಲಚ್ಚಿ'ಎಂತ ಅವಳ ಹೆಸರು ಅವಳಿಷ್ಟಕ್ಕೆ ವಿರುದ್ಧವಾಗಿ ಆಗುತ್ತದೆ. ಶ್ರೀನಿವಾಸ 'ಶೀನ' ಆಗಿ 'ಚೀನು' ಆಗುತ್ತಾನೆ. ಕೃಷ್ಣ ಕಿಟ್ಟಿಯಾಗುತ್ತಾನೆ. ನನ್ನ ತಂಗಿ ಪದ್ಮಳನ್ನ ಚಿಕ್ಕಂದಿನಲ್ಲಿ ಬಂದ ಜನ " ಹಲೋ, ಮಿಸ್ " ಎಂದು ಕರೆದು, ಈಗ ಅವಳು ನಮಗೆ ಮಿಸ್ಸಿ. ಇನ್ನೊಬ್ಬ ತಂಗಿಯಾದರೆ ಜವಾನರೆಲ್ಲ " ಸಣ್ಣಮ್ಮಯ್ಯ " ಎಂದುದು, ಈಗ ಅವಳು ಮನೆಯಲ್ಲಿ " ಸಣ್ಣಮ್ಮ ! "

* * *

ಹೆಸರು ಜೀವನದಲ್ಲಿ ಮುಖ್ಯ ಅಂಶ. ಹೆಸರಿಲ್ಲದವ ಬಾಳಲಾರ. ಕನ್ನಡದೇವಿಗೆ ಮಾತ್ರ ಹೆಸರಿದ್ದೂ ಇರಲಿಲ್ಲ. ಎಂತಲೇ " ಹೆಸರಾಗಿಯೂ ಕೂಡ ಹೇಳಹೆಸರಿಲ್ಲ "

(೪೯೯ ನೆಯ ಪುಟದಿಂದ ಮುಂದರಿದದ್ದು)

ಮುಂತಾದ ವಿಚಾರಣೆಗಳನ್ನು ಕೂಡಿಹಾಕಿ, ಕನ್ನಡ ಶಾಲೆಯನ್ನು ತೆರೆದೂ ಕನ್ನಡ ಓದುಶಾಲೆಯನ್ನು ಹೆಚ್ಚಿಸಲೂ ಪ್ರಯತ್ನಿಸುವುದು ಕಾರ್ಯಕ್ರಮದಲ್ಲಿ ಮೊದಲ ಹೆಗ್ಗುರಿಯಾಗಬೇಕು. ಈ ಪಾಠವನ್ನು ನಾವು ಆಂಧ್ರರಿಂದ ಕಲಿಯಬೇಕಾಗಿದೆ. ಪುಣೆಯಲ್ಲಿ ಸೌಥ್ ಇಂಡಿಯನ್ ಸರ್ಕಲ್ ಎಂಬದೊಂದು ದೊಡ್ಡ ಬೀಡು ಇದೆ ಆಂಧ್ರರದು. ಅಲ್ಲಿ ಶಾಲೆಯಿದೆ ; ವಾಚನಾಲಯವಿದೆ. ಒಂದು ದೊಡ್ಡ ಓಣಿಯ ಹೆಸರು ಕೂಡ 'ಸರ್ ಮುದ್ಲಿಯಾರ ರೋಡ್' ಎಂದಿದೆ. ದಕ್ಷಿಣಾದಿ ಸಂಗೀತ, ಪ್ರತಿಷ್ಠಿತ ಜನರ ಭಾಷಣ, ಗಣೇಶೋತ್ಸವ ಮುಂತಾದ ಕಾರ್ಯಕ್ರಮಗಳು ಅಲ್ಲಿ ಜರುಗುವವು. ಇಡಿಯ ರಾಸ್ತಾ ಪೇಟೆಯೇ ಆಂಧ್ರರಿಗೆ ವಿಲಾಸಲಾಗಿದೆಯೆಂದರೂ ಅಡ್ಡಿ ಇಲ್ಲ. ಅವರಲ್ಲಿಯ ಒಕ್ಕಟ್ಟು, ಅವರ ಒಂದಾದ ಜೀವನ, ತಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳುವ ಅವರ ಹಂಬಲ, ಇವನ್ನು ಸಾಧಿಸುವ ಅವರಲ್ಲಿಯ ಶಿಸ್ತು ಇವು ಕಲಿಯತಕ್ಕಂತಹವುಗಳಾಗಿವೆ. ಇಲ್ಲಿಯ ಕನ್ನಡ ಸಂಸ್ಥೆಗಳು ಕೂಡ ಈ ರೀತಿಯಾಗಿ ದುಡಿಯುವುದರಲ್ಲಿ ದೊಡ್ಡ ಮನಸ್ಸನ್ನುಂಟುಮಾಡಿಕೊಂಡರೆ, ಪುಣೆಯ ಕನ್ನಡಿಗರನ್ನೂ, ಪುಣೇರೀ ಕನ್ನಡಿಗರನ್ನೂ ಕನ್ನಡಿಗರನ್ನಾಗಿ ಮಾರ್ಪಾಟು ಮಾಡಲು,ಇಲ್ಲವೆ ಪುಣೆಯಲ್ಲಿಯ ಕನ್ನಡಿಗರನ್ನಾಗಿ ತಿದ್ದುವುದು ಸುಲಭಸಾಧ್ಯವಾದೀತು.

ಹಾಸ್ಯಪ್ರಕಾರಗಳು

(ರಸವಿಚಾರ)

ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ.

ನಗುವುದೆಂದರೆ ಹಾಸ್ಯರಸವೆ? ಹಾಸ್ಯರಸದ ಗುಟ್ಟು-ಗುರಿಗಳೇನು? 'ವಿಟ್' ಎಂದರೇನು? 'ಹ್ಯೂಮರ್' ಎಂದರೇನು? ಸಾಹಿತ್ಯದಲ್ಲಿ ಇವುಗಳಿಗಿರುವ ಸ್ಥಾನ-ಮಾನಗಳೆಂತಹವು?

★

ಜೀವನದಲ್ಲಿಯೂ ವಾಙ್ಮಯದಲ್ಲಿಯೂ ಹಾಸ್ಯರಸವು ತುಂಬಿ ತುಳುಕುತ್ತದೆ. ಹಾಸ್ಯವಿಲ್ಲದ ಮನೆಯಿಲ್ಲ, ಹಾಸ್ಯವಿಲ್ಲದ ಮನುಷ್ಯನಿಲ್ಲ, ಹಾಸ್ಯವಿಲ್ಲದ ಮಠವಿಲ್ಲ, ರಾಷ್ಟ್ರವಿಲ್ಲ, ಸ್ಮಶಾನವಿಲ್ಲ! ಅಡಿಗೆಯೊಳಗೆ ಒಗ್ಗರಣೆಯಂತೆ ಹಾಸ್ಯದ ಪ್ರಭಾವ. ಪ್ರತಿಯೊಂದು ವಸ್ತುವಿಗೆ ಕಾಂತಿಯನ್ನೀಯುವ ಹೊನ್ನಿನಂತೆ ಹಾಸ್ಯ. ಸಹಭೋಜನವಾಗಲಿ, ವನಭೋಜನವಾಗಲಿ, ಹಾಸ್ಯವಿಲ್ಲದ ಭೋಜನವು ಪಿಂಡಭೋಜನವೇ ಸೈ. ದುಃಖದ ನೆಲೆಮನೆಯನ್ನು ಸುಖದ ತವರುಮನೆಯನ್ನಾಗಿ ಮಾಡುವ ಕಾವ್ಯ-ನಾಟಕಪ್ರಪಂಚದಲ್ಲಂತೂ ಹಾಸ್ಯಕ್ಕೆ ಪ್ರಾಧಾನ್ಯವಿರುವುದೇನಾಶ್ಚರ್ಯ? ಪ್ರಾಧಾನ್ಯವಿದ್ದವನೇ ಪ್ರಧಾನಿ. ಪ್ರಧಾನಿಯು ರಾಜನಿಗಷ್ಟೇ ವಿಧೇಯ. ರಾಜನ ಉನ್ನತಿಯ ಮಾರ್ಗವನ್ನಾದರೂ ಪ್ರಧಾನಿಯೇ ತೋರಿಸುವಂತೆ, ನಾಟಕದ—ಕಾವ್ಯದ—ಪಾತ್ರವಿಶೇಷಗಳಲ್ಲಿರುವ ಗುಣ-ದೋಷಗಳನ್ನೂ, ಉನ್ನತಿ-ಅವನತಿಗಳನ್ನೂ, ಕೊಂಕು-ಕೊರತೆಗಳನ್ನೂ ತೋರುವುದು ಹಾಸ್ಯ. ಆದ್ದರಿಂದಲೇ ನಮ್ಮ ಪೂರ್ವ-ಸಾಹಿತಿಗಳೂ, ಸಾಹಿತ್ಯ ಶಾಸ್ತ್ರಜ್ಞರೂ ಹಾಸ್ಯದ ಹಿರಿಮೆಯನ್ನು ಅರಿತು, ಅದಕ್ಕೊಂದು ಸ್ವತಂತ್ರ ರಸಸ್ಥಾನವನ್ನು ಕೊಟ್ಟಿರುವರು.

ಸ್ವಾಭಾವಿಕವಾಗಿ ಮಾನವನ ಮನದಲ್ಲಿಯೂ, ಜಗತ್ತಿನ ವ್ಯವಹಾರದಲ್ಲಿಯೂ ಅಡಗಿರುವ ಸೂಕ್ಷ್ಮ ಸಂಬಂಧಗಳನ್ನು ನೇರವಾಗಿ ವಿಂಗಡಿಸಿ ಹೇಳುವುದಕ್ಕೆ ಶಾಸ್ತ್ರವೆಂದು ಹೆಸರು. ಮೊದಲು ಮನುಷ್ಯ, ಆ ಮೇಲೆ ಮಾನವ ಶರೀರ ಶಾಸ್ತ್ರ; ಮೊದಲು ವಿದ್ಯುತ್ತು, ಆ ಮೇಲೆ ವಿದ್ಯುತ್‌ಶಾಸ್ತ್ರ, ಮೊದಲು ಭೂಮಿ, ಆ ಮೇಲೆ ಭೂಗರ್ಭಶಾಸ್ತ್ರ—ಹೀಗಿರುವುದು ಕ್ರಮ. ಸಂಗೀತಶಾಸ್ತ್ರವಿರದ ಕಾಲದಲ್ಲಿಯೂ ಮಾನವನು ಹಾಡಿಯೇ ಹಾಡುತ್ತಿದ್ದನು. ಸಂಗೀತಶಾಸ್ತ್ರದ ಅರಿವಿಲ್ಲದೆಯೂ ಕೂಡ ನದಿ, ಹಳ್ಳ, ಪಕ್ಷಿಗಳು ಹಾಡಿಯೆ ಹಾಡುತ್ತವೆ. ಮೊದಲು ಮಾನವನು ಸಾವಿರಾರು ವರ್ಷನಕ್ಕ ಮೇಲೆ, ಅವನ ಬುದ್ಧಿಯು ಬಲಿತ ಮೇಲೆ, ಹಾಸ್ಯರಸ ಶಾಸ್ತ್ರವು ಉತ್ಪನ್ನವಾಯಿತು. ಹಾಸ್ಯಶಾಸ್ತ್ರವಿರಲಿ, ಇರದೇ ಇರಲಿ; ಹಾಸ್ಯವೊಂದು ದೇವದತ್ತವಾದ ಗುಣವಿರುವುದರಿಂದ, ಅದು ಚಿರಂತನವಾಗಿ ನಡೆದೇ ನಡೆಯುವುದು. ಮಾನವನು ಬುದ್ಧಿವಂತನಾಗಿ, ತನ್ನ ಬುದ್ಧಿಯನ್ನೇ ತನಗೆ ಹಚ್ಚಿ ಮಾನಸಶಾಸ್ತ್ರವನ್ನು ಕಟ್ಟಿದನೆಂದ ಮೇಲೆ, ತಾನು ನಕ್ಕ ನಗೆಗೆ ಶಾಸ್ತ್ರಕಟ್ಟದೆ ಬಿಡುವನೇ?

ರಸಶಾಸ್ತ್ರದಲ್ಲಿ ಹಾಸ್ಯವು ಎರಡು ಪ್ರಕಾರದ್ದು. ಒಂದು ಬುದ್ಧಿ-ಪ್ರಧಾನವಾದದ್ದು; ಎರಡನೆಯದು ಭಾವಪ್ರಧಾನವಾದದ್ದು. ಬುದ್ಧಿಪ್ರಧಾನವಾದದ್ದಕ್ಕೆ (wit) ಕೋಟಿಕ್ರಮವೆಂದೂ ಭಾವಪ್ರಧಾನವಾದದ್ದಕ್ಕೆ (humour) ವಿನೋದವೆಂತಲೂ ಹೆಸರು. ಕೋಟಿಕ್ರಮವು ಅಥವಾ ಕೋಟಿಯು ಎರಡು ಪ್ರಕಾರದ್ದು. ಒಂದು ಶಬ್ದಚಮತ್ಕೃತಿಯುಳ್ಳದ್ದು; ಎರಡನೆಯದು ಅರ್ಥ-ಚಮತ್ಕೃತಿಯುಳ್ಳದ್ದು. ಕೋಟಿಯು ಸ್ವಲ್ಪದರಲ್ಲೇ ಮಿಂಚಿನಂತೆ ಬೆಳಕನ್ನು ಪಸರಿಸಿ ಮುಗಿಯುವುದು. ಕೋಟಿಯ ಪ್ರಸಾರವು ಒಂದು ಶಬ್ದ, ಒಂದು ವಾಕ್ಯ, ಬಹಳವಾದರೆ ಒಂದು ಶ್ಲೋಕ. ಅದಕ್ಕೂ ಹೆಚ್ಚು ಪ್ರಸರಣಶಕ್ತಿಯುಳ್ಳದ್ದಕ್ಕೆ ವಿನೋದವೆಂದು ಹೆಸರು. ಒಬ್ಬರು ವ್ಯಾಖ್ಯಾನ ಕೊಡುತ್ತಿದ್ದರು; ವ್ಯಾಖ್ಯಾನ ಭರದಿಂದ ಸಾಗಿತ್ತು; ಕಟ್ಟಕಡೆಗೆ ಅವರು "ಒಟ್ಟಿನಮೇಲೆ ನಮ್ಮೆಲ್ಲರಿಗೂ ಬುದ್ಧಿ ಇಲ್ಲವೆಂದೇ ಸಿದ್ಧವಾಯಿತು" ಎಂದರು. ಒಬ್ಬ ಪ್ರೇಕ್ಷಕ "ಎಂಥಾ ಬಂಗಾರದ ಮಾತು" ಎಂದ. ಒಬ್ಬ ಕುಚೇಷ್ಟೆಗಾರ "ಏನು ರಾಯರೇ, ಎಲ್ಲಿಗೆ ಹೋಗಿದ್ದಿರಿ? ಕಾಶೀ ಕಡೆಗೋ ಏನ್ ಗಂಗಾನಕಡೆಗೋ?" ಎಂದ. ರಾಯರು "ನಿಮ್ಮ ಮುದ್ದುಮುಖ ನೋಡಿದ ಕೂಡಲೇ ನನಗ್ಯಾವುದೂ ನೆನಪಾಗೋದಿಲ್ಲ" ಎಂದರು. ಇವೆರಡೂ ಕೋಟಿಕ್ರಮದ ಉದಾಹರಣೆಗಳು. ಇನ್ನು ವಿನೋದ-ಗೋಷ್ಠಿಯ ಉದಾಹರಣೆಯಿದು; ಇದೊಂದು ಚಿಕ್ಕಕಥೆ: ಒಬ್ಬ ಫಕೀರನ ಒಂಟೆ ಕಳೆದಿತ್ತು. ಅವನು ದೇವರಿಗೆ ಬೇಡಿಕೊಂಡನು, "ಒಂಟೆ ಸಿಕ್ಕರೆ ಅದನ್ನೇ ಮಾರಿ ಎಂತಾಯಿ ಹಂಚುವೆನು" ಎಂದು. ಒಂಟೆ ಸಿಕ್ಕಿತು. ಇನ್ನು ಒಂಟೆ ಮಾರಬೇಕಲ್ಲ! ಏನು ಮಾಡಬೇಕು? ಒಂದು ಉಪಾಯವನ್ನು ಯೋಚಿಸಿದನು. ಒಂಟೆಯ ಕೊರಳೊಳಗೊಂದು ಬೆಕ್ಕು ಕಟ್ಟಿದನು. ಪೇಟೆಗೆ ಹೋಗಿ "ಇದನ್ನು ತಗೊಳ್ಳಿರಿ ನನ್ನ ಒಂಟೆ" ಎಂದನು. "ಒಂಟೆಗೇನು?" ಎಂದು ಕೇಳಿದರೆ "ಎರಡು ಬಿಲ್ಲಿ; ಆದರೆ ಒಂಟೆಯನ್ನು ಕೊಳ್ಳುವವನು ಬೆಕ್ಕನ್ನೂ ಕೊಳ್ಳಬೇಕು. ಬೆಕ್ಕಿನ ಕ್ರಯ ನೂರು ರೂಪಾಯಿ!" ಎಂದನು. ನೂರು ರೂಪಾಯಿ ಎರಡುಬಿಲ್ಲೆಗೆ ಒಂಟೆಯನ್ನು ಮಾರಿ, ಒಂಟೆಯ ಕ್ರಯವಾದ ಎರಡು ಬಿಲ್ಲೆಯ ಎಂತಾಯಿಯನ್ನು ಹಂಚಿ, ನೂರು ರೂಪಾಯಿಗೊಂದು ಒಂಟೆಯನ್ನು ಕೊಂಡು, ಫಕೀರನು ಮನೆಗೆ ಹೋದನು." ಆತ್ಮವಂಚನೆಯ ಉದಾಹರಣೆಯಿದು. ಇದಕ್ಕೆ ವಿನೋದವೆಂತಲೂ ಸುಭಾಷಿತವೆಂತಲೂ ಹೆಸರು.

ಕೋಟಿಕ್ರಮದ ಪರಿಣಾಮವು ಹಾಸ್ಯರಸವಾಗಬೇಕು. ಬರೀ ನಗೆಯು ಹಾಸ್ಯರಸವಲ್ಲ. ಕಚ್ಚುಗುಳಿಯಿಂದಲೂ ನಗೆ ಬರುವುದು. ನಗೆಯೆಂದರೆ ಹಾಸ್ಯರಸವಲ್ಲ. ಭಯವೆಂದರೆ ಭಯಾನಕರಸವಲ್ಲ.

[illegible]

[illegible]

ಹಾಸ್ಯಪ್ರಕಾರಗಳು

([illegible])

ಶ್ರೀ. [illegible] ಶ್ರೀ[illegible], ಪುಣೆ.

ನಗುವುದೆಂದರೆ ಹಾಸ್ಯವೇನು? ಹಾಸ್ಯರಸದ ಗುಟ್ಟು-ಗುರಿಗಳೇನು? 'ವಿಟ್' ಎಂದರೇನು? 'ಹ್ಯೂಮರ್' ಎಂದರೇನು? ಸಾಹಿತ್ಯದಲ್ಲಿ ಇವುಗಳಿಗಿರುವ ಸ್ಥಾನ-ಮಾನಗಳೆಂತಹವು?

★

೧

ಜೀವನದಲ್ಲಿಯೂ ಕಾವ್ಯದಲ್ಲಿಯೂ ಹಾಸ್ಯರಸವು ತುಂಬಿ ತುಳುಕುತ್ತದೆ. ಹಾಸ್ಯವಿಲ್ಲದ ಮನೆಯಿಲ್ಲ, ಹಾಸ್ಯವಿಲ್ಲದ ಮನುಷ್ಯನಿಲ್ಲ, ಹಾಸ್ಯವಿಲ್ಲದ ಸಂತೆಯಿಲ್ಲ, [illegible]! ಜಗತ್ತಿನೊಳಗೆ ಹಬ್ಬಿಕೊಂಡಿರುವುದೇ ಹಾಸ್ಯದ ಪ್ರಭಾವ. ಪ್ರತಿಯೊಂದು ವಸ್ತುವಿಗೆ ಕಾಂತಿಯನ್ನೀಯುವ ಹೊನ್ನಿನಂತೆ ಹಾಸ್ಯ, ಕವಿತೆಗೆ ಚೆಲುವನ್ನಾಗಲಿ, ನಡತೆಗೆ ಚೆಲುವನ್ನಾಗಲಿ, ಹಾಸ್ಯವಿಲ್ಲದ [illegible] [illegible] [illegible] ನಂತೆ, ನಾಟಕದ—ಕಾವ್ಯದ—ಪಾತ್ರವಿಶೇಷಗಳಲ್ಲಿರುವ ಗುಣ-ದೋಷಗಳನ್ನೂ, ಉನ್ನತಿ-ಅವನತಿಗಳನ್ನೂ, ಕೊಂಕು-ಕೊರತೆಗಳನ್ನೂ ತೋರುವುದು ಹಾಸ್ಯ. ಅದ್ದರಿಂದಲೇ ನಮ್ಮ ಪೂರ್ವ-ಸೂರಿಗಳೂ, ಸಾಹಿತ್ಯ ಶಾಸ್ತ್ರಜ್ಞರೂ ಹಾಸ್ಯದ ಹಿರಿಮೆಯನ್ನು ಅರಿತು, ಅದಕ್ಕೊಂದು ಸ್ವತಂತ್ರ ರಸಸ್ಥಾನವನ್ನು ಕೊಟ್ಟಿರುವರು.

ಸ್ವಾಭಾವಿಕವಾಗಿ ಮಾನವನ ಮನದಲ್ಲಿಯೂ, ಜಗತ್ತಿನ ವ್ಯವಹಾರದಲ್ಲಿಯೂ ಅಡಗಿರುವ ಸೂಕ್ಷ್ಮ ಸಂಬಂಧಗಳನ್ನು ನೇರವಾಗಿ ವಿಂಗಡಿಸಿ ಹೇಳುವುದಕ್ಕೆ ಶಾಸ್ತ್ರವೆಂದು ಹೆಸರು. ಮೊದಲು ಮನುಷ್ಯ, ಆ ಮೇಲೆ ಮಾನವ ಶರೀರ ಶಾಸ್ತ್ರ; ಮೊದಲು ವಿದ್ಯುತ್ತು, ಆ ಮೇಲೆ ವಿದ್ಯುತ್‌ಶಾಸ್ತ್ರ, ಮೊದಲು ಭೂಮಿ, ಆ ಮೇಲೆ ಭೂಗರ್ಭಶಾಸ್ತ್ರ--ಹೀಗಿರುವುದು ಕ್ರಮ. ಸಂಗೀತಶಾಸ್ತ್ರ [illegible] ಕಾಲದಲ್ಲಿಯೂ ಮಾನವನು ಹಾಡುತ್ತಿದ್ದನು. ಸಂಗೀತಶಾಸ್ತ್ರದ ಅರಿವಿಲ್ಲದೆಯೂ ಕೂಡ ನದಿ, ಹಳ್ಳ, ಪಕ್ಷಿಗಳು ಹಾಡುತ್ತಿವೆ. ಮೊದಲು ಮಾನವನು ಹಾಡಿರಬೇಕು [illegible] [illegible], ಅವನ ಬುದ್ಧಿಯು ಬಲಿತ ಮೇಲೆ, ಹಾಡಿನ ಶಾಸ್ತ್ರವು ಉತ್ಪನ್ನವಾಯಿತು. ಹಾಸ್ಯಶಾಸ್ತ್ರವಿರಲಿ, ಇರದೇ ಇರಲಿ; ಹಾಸ್ಯವೊಂದು [illegible] ಗುಣವಾಗಿ [illegible] ಅದು ಚಿರಂತನವಾಗಿ ನಡೆದೇ ನಡೆಯುತ್ತದೆ. ಮಾನವನು ಬುದ್ಧಿವಂತನಾಗಿ, ತನ್ನ ಬುದ್ಧಿಯನ್ನೇ [illegible] [illegible] ಕಟ್ಟಿದನೆಂದ ಮೇಲೆ, ತಾನು ನಕ್ಕ ನಗೆಗೆ ಶಾಸ್ತ್ರ ಕಟ್ಟದೆ ಬಿಡುವನೇ?

ರಸಶಾಸ್ತ್ರದಲ್ಲಿ ಹಾಸ್ಯಕ್ಕೆ ಎರಡು ಪ್ರಕಾರಗಳು. ಒಂದು ಬುದ್ಧಿಪ್ರಧಾನವಾದದ್ದು; ಇನ್ನೊಂದು ಭಾವಪ್ರಧಾನವಾದದ್ದು. ಬುದ್ಧಿಪ್ರಧಾನವಾದದ್ದಕ್ಕೆ (wit) ಕೋಟಿಯೆಂದೂ ಭಾವಪ್ರಧಾನವಾದದ್ದಕ್ಕೆ (humour) ವಿನೋದವೆಂದೂ ಹೆಸರು. ಕೋಟಿಯೆನ್ನುವುದು ಅಥವಾ ಕೋಟಿಯು ಎರಡು ಪ್ರಕಾರದ್ದು. ಒಂದು ಶಬ್ದಚಮತ್ಕೃತಿಯುಳ್ಳದ್ದು; ಎರಡನೆಯದು ಅರ್ಥಚಮತ್ಕೃತಿಯುಳ್ಳದ್ದು. ಕೋಟಿಯು ಸ್ವಲ್ಪದರಲ್ಲೇ ಮಿಂಚಿನಂತೆ ಬೆಳಕನ್ನು ತೋರಿಸಿ [illegible]. ಕೋಟಿಯು [illegible] ಒಂದು [illegible], ಒಂದು [illegible], [illegible] ಒಂದು [illegible]. [illegible] [illegible] [illegible]ಶಕ್ತಿಯುಳ್ಳದ್ದಕ್ಕೆ ವಿನೋದವೆಂದು ಹೆಸರು. [illegible] [illegible] [illegible]; [illegible] [illegible] [illegible] [illegible]. " [illegible] [illegible] [illegible] [illegible]. " [illegible] [illegible] " [illegible] " [illegible] [illegible] [illegible] [illegible] [illegible] " [illegible] [illegible] [illegible] [illegible] " [illegible] [illegible] [illegible] [illegible] [illegible] [illegible]. " [illegible] " [illegible] [illegible] [illegible]. " [illegible] " [illegible] [illegible] [illegible] [illegible] [illegible]. " [illegible] [illegible] [illegible] [illegible] [illegible]."

ಕೋಟಿ [illegible] [illegible] ಹಾಸ್ಯರಸ[illegible]. [illegible] ನಗೆಯು.. ಹಾಸ್ಯವಲ್ಲ. [illegible] ನಗು ಬರುವುದು. ನಗೆಯೆಂದರೆ ಹಾಸ್ಯವಲ್ಲ. [illegible] [illegible] [illegible].

ವಾಙ್ಮಯದ ಧ್ಯೇಯವೆಂದರೆ ಉದಾತ್ತವಾದ ಭಾವನೆಗಳನ್ನು ಜನರ ಮನಸ್ಸಿನಲ್ಲಿ ಜಾಗೃತಗೊಳಿಸಿ, ಅವರಿಗೆ ಸನ್ಮಾರ್ಗದ ಶಿಕ್ಷಣವನ್ನು ಕೊಡುವುದಿರುತ್ತದೆ. ಅಂತಹ ಭಾವಗಳನ್ನು ಹುಟ್ಟಿಸಿ ಸ್ಥಿರಗೊಳಿಸುವುದೇ ಎಲ್ಲ ಲಲಿತಕಲೆಗಳ ಧ್ಯೇಯವಾಗಿರುತ್ತದೆ. ಧ್ಯೇಯವೊಂದೇ; ಆದರೆ ಮಾಧ್ಯಮವು ಬೇರೆಬೇರೆಯಾಗಿದ್ದರೆ, ಅದೇ ಕಲೆಗೆ ಬೇರೆ ಬೇರೆ ಹೆಸರು. ಚಿತ್ರಕಲೆ, ಸಂಗೀತಕಲೆ, ಕಾವ್ಯಕಲೆ. . . . . ವಾಙ್ಮಯದಲ್ಲಿ ಶಬ್ದಾರ್ಥಗಳಿಗೆ ಪ್ರಾಧಾನ್ಯ; ಶಬ್ದಗಳಿಂದ-ವಿಶಿಷ್ಟ ಅರ್ಥಗಳುಳ್ಳ ಶಬ್ದಗಳಿಂದ-ರಸವನ್ನು ಹುಟ್ಟಿಸುವುದು ವಾಙ್ಮಯದ ವಿಶೇಷ; ಆದ್ದರಿಂದಲೇ ಶಬ್ದಗಳಿಗೂ, ಅರ್ಥಗಳಿಗೂ, ವಿಶೇಷವಾದ ಆತ್ಮಗುಣವನ್ನು ಕೊಟ್ಟು ಸಾಹಿತಿಗಳು ಸಾಹಿತ್ಯವನ್ನುಂಟು ಮಾಡುವರು. ಚಮತ್ಕೃತಿಯಿಂದಲೇ ಕಾವ್ಯವಾಗುವುದು. ಚಮತ್ಕೃತಿಯೆಂದರೆ ಯಾರೂ ಕಾಣದ—ಸಾಮಾನ್ಯರಂತೂ ಎಂದೂ ಕಾಣದ—ಗುಟ್ಟು. ಶಬ್ದಚಮತ್ಕೃತಿಗಿಂತಲೂ ಅರ್ಥಚಮತ್ಕೃತಿಗೆ ಸಾಹಿತ್ಯಶಾಸ್ತ್ರದಲ್ಲೂ ಜೀವನದಲ್ಲೂ ವಿಶೇಷ ಮಹತ್ತ್ವವುಂಟು. ಶಬ್ದಗಳಿಂದಲೇ ಹಾಸ್ಯವನ್ನು ಹುಟ್ಟಿಸಬಹುದು. **ಪುನರುಕ್ತಿಯಿಂದ** 'ಇವತ್ತಿನ ವಿಷಯವು ಸ್ತ್ರೀಶಿಕ್ಷಣವು ಸಮಾಜಕ್ಕೆ ಹಿತಕಾರಿಯೋ ಅಹಿತಕಾರಿಯೋ ? ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡುವುದರಿಂದ ಸಮಾಜದ ಉತ್ಕರ್ಷವಾಗುವದೋ ಅಪಕರ್ಷವಾಗುವದೋ ? ಹೆಂಗಸರಿಗೆ ಕಲಿಸುವದರಿಂದ . . . . " **ಅರ್ಥಶಬ್ದಗಳಿಂದ:** ಖಜಾಂಚಿಯಲ್ಲಿ " ಭ-ಭ-ಗವಾನ್ ತೇರಾ ತೇರಾ ಭ-ಭ-ಲಾ ಕರೋ!" ಉಗ್ಗು ಮಾತಾಡುವವರನ್ನು ನೋಡಿ ನಗಬಾರದೆ ಇರದು. ಇವೆಲ್ಲ ನೈಸರ್ಗಿಕವಾಗಿರುವುದರಿಂದ ನಗೆಯೂ ನೈಸರ್ಗಿಕವಾಗಿಯೇ ಬರುವದು. ಕೆಲವರಿಗೆ ಕೆಲವೊಂದು ಮಾತು ಸಹಜವಾಗಿಯೇ ಮಾತಿನಲ್ಲಿ ಬರುವುದು. ನಮ್ಮೊಬ್ಬ ಸ್ನೇಹಿತನ ಆಲಾಪವಿದು: " ನಾ ಏನಂತಂದ್ರ ತೀರ್ತು, ನಿನ್ನೆ ಏನಂತಂದರ ತೀರ್ತು, ಸ್ಟೇಶನ್ನಿಕ್ಕೆ ಏನಂತಂದ್ರ ತೀರಿತು, ಹೋಗಿದ್ದೆ ಏನಂತಂದ್ರ ತೀರಿತು! " ನಮ್ಮೊಬ್ಬ ಮಾಸ್ತರರು ಪ್ರತಿಯೊಂದು ವಾಕ್ಯದ ಮೊದಲಿನಲ್ಲಿಯೂ ತುದಿಯಲ್ಲಿಯೂ " Of corse " ದ ಡಬಲ್ ಎಂಜಿನ್ ಇಲ್ಲದೆ ಮಾತನಾಡುತ್ತಿರಲಿಲ್ಲ. ಇನ್ನೊಬ್ಬರು " What I want to tell you is this that " ಎಂದೇ ಪ್ರತಿಯೊಂದು ವಾಕ್ಯದ ಪುಣ್ಯಾಹವಾಚನವನ್ನು ಮಾಡುತ್ತಿದ್ದರು. ಇವೆಲ್ಲ ಕಲೆಯೆಂಬ ಹೆಸರಿಗೆ ಪಾತ್ರವಾದುವುಗಳಲ್ಲ. ಇವು ಸಹಜವಾಗಿಬಂದ ಸಹಜೋದ್ಗಾರಗಳು. ಒಂದೆರಡು ಸಲ ಕೇಳಿದಮೇಲೆ ಇವುಗಳನ್ನೆಂದರೆ ಹಾಸ್ಯ ಬರುವುದಿಲ್ಲ. ಇದರ ಮುಂದಿನ ಪಾವಟಿಗೆ ಎಂದರೆ ಶಬ್ದಚ್ಛಲ. ಇದರಲ್ಲಿ ಅರ್ಥಕ್ಕೆ ಪ್ರಾಧಾನ್ಯವಿರದೆ ಬರೀ ಬಾಲಿಶವಾದ ಶಬ್ದಸಂಗಡದಿಂದಾಗಲಿ, ಶಬ್ದಸಂಗತಿಯಿಂದಾಗಲಿ ನಗೆಯನ್ನು ತರಿಸುವುದು. ಕಟ್ಯಾಡಿಸಿ ನಗೆಯನ್ನುಂಟು ಮಾಡುವುದಕ್ಕಿಂತಲೂ ಒಳ್ಳೆಯದು ! ಗೀತೆಯಂತಹ ಧರ್ಮಗ್ರಂಥದಲ್ಲಿಯೂ ಬಾಲಿಶ ಶಬ್ದಚ್ಛಲವನ್ನು ಮಾಡುವುದನ್ನು ಕಂಡಿದ್ದೇನೆ. ಒಬ್ಬರು 'ಗೀತೆಯಲ್ಲಿ ಅರ್ಜುನನು ಹುಟ್ಟಿದ ತಾರೀಖು ಅದೆ' ಎಂದರು. ಆಶ್ಚರ್ಯವಾಯಿತು. ಒಂದೇ ನಿಮಿಷ " ಅರ್ಜುನ ಎಂದು ಅದೆಯಲ್ಲಾ ಗೀತೆಯಲ್ಲಿ! ಅದೇ ಜೂನ್ ೪ನೇ ತಾರೀಖು! " ಹೀಗೆಂದು ಕೊಳ್ಳನೆ ನಕ್ಕರು. ನನಗೇನೂ ನಗೆ ಬರಲಿಲ್ಲ. ಅದರಂತೆಯೇ " ಸರ್ವಸ್ಯ ಚಾಹಂ ಹೃದಿಸನ್ನಿವಿಷ್ಟೋ " ಎಂದರೆ ಶ್ರೀಕೃಷ್ಣನು ಸ್ಟೋ ಮೇಲೆ ಮಾಡಿದ ಚಹವನ್ನು ಕುಡಿಯುತ್ತಿದ್ದನೆಂದು ನಕ್ಕರು. ಇನ್ನೊಬ್ಬರು " ದೋಗ್ಧಾ ಗೋಪಾಲನಂದನಃ " ದ ಕಥೆಯನ್ನು ಹೇಳಿದರು. ಒಬ್ಬ ಶಿಷ್ಯನು ಗೀತೆಯನ್ನು ಗುರುವಿನಿಂದ ಕೇಳಿ " ಎಲ್ಲ ತಿಳಿಯಿತು; ದೋಗ್ಧಾ ಯಾರು ತಿಳಿಯಲಿಲ್ಲ " ಎಂದು ಕೇಳಿದನು. ಶಿಷ್ಯನ ಕುಶಾಗ್ರಬುದ್ಧಿಗೆ ಆಶ್ಚರ್ಯಚಕಿತರಾಗಿ ಗುರುಗಳು "ಪ್ರಶ್ನೆ ಕೇಳುವವ ನೀನೊಂದು ಗದ್ಧಾ (ಕತ್ತೆ). ನಿನ್ನಂಥ ಶಿಷ್ಯನಿಗೆ ಗೀತಾಪಾಠವನ್ನು ಹೇಳುವಂಥ ನಾನೊಬ್ಬ ಗದ್ಧಾ " ಎಂದು ಹೇಳಿದರಂತೆ. ಇದನ್ನು ಹೇಳುವವನಿಗೂ ಅವನಂತಿರುವ ಬಾಲಿಶ ಬುದ್ಧಿಗೂ ನಗೆ ಬರುವುದು. ರಸಿಕರಿಗೆ ಇದರಲ್ಲಿ ಯಾವ ಹಾಸ್ಯರಸವೂ ಹೊಳೆಯುವುದಿಲ್ಲ. ಶೇಕ್ಸ್‌ಪಿಯರನ ಅಧಮ-ಪಾತ್ರಗಳು ರಂಗಭೂಮಿಯ ಮೇಲೆ ಬಂದ ಕೂಡಲೆ ಶಬ್ದಚ್ಛಲಕ್ಕೆ ಸುರುವಾಯಿತೆಂದೇ ತಿಳಿಯಬೇಕು. ಉತ್ತಮ ರಸಿಕರ ದೆಸೆಯಿಂದ ಬರೆದದ್ದಲ್ಲವಿದು. ರಂಗಮಂದಿರದೊಳಗಿನ ಅಧಮರಸಿಕರಿಗಾಗಿ ಇರುವ ವಿನೋದವಿದು. ಗುರುಗಳು 'ಲವಣಹಾಕು' ಎಂದರೆ ಶಿಷ್ಯನು ಕುದುರೆಯನ್ನು ತಂದದ್ದೂ, ಶಾಕುಂತಲದಲ್ಲಿ " ಇಮಾಮಾಶ್ರಮ ಧರ್ಮ ನಿಯುಕ್ತೇ " ಇದರ ಅರ್ಥವನ್ನು ಇಮಾಮನು ಕಣ್ವನ ಆಶ್ರಮದಲ್ಲಿ ನೀರುಹಾಕುತ್ತಿದ್ದನೆಂದು ಅರ್ಥ ಮಾಡುವುದೂ ಒಂದೇ ಮಾದರಿಯದು ! ಇರಲಿ.

ಇನ್ನು ಮಹಾಪಂಡಿತರಾದರೂ ಶಬ್ದಚಮತ್ಕೃತಿಗಳನ್ನು ಮಾಡಿರುವರು. ಭಾರವಿ, ಮಾಘ, ಕಾಲಿದಾಸರು ಏಕಾಕ್ಷರೀ ಬಂಧ, ಖಡ್ಗಬಂಧ, ಮುರಜಬಂಧ ಮುಂತಾದ ಯಮಕವುಳ್ಳ ಕವಿತೆಯನ್ನು ಬರೆದಿಹರು. ಈ ಪಂಡಿತರು ಇಷ್ಟೇಕೆ ಶ್ರಮಪಟ್ಟರೋ ಎಂದು ಕನಿಕರದಿಂದ ನಗೆಬರುವುದು ಇವುಗಳನ್ನೋದಿ. ಪಾಂಡಿತ್ಯ-ಪ್ರದರ್ಶನದಿಂದ ಯಾರಿಗೆ ನಗೆ ಬರಲಿಕ್ಕಿಲ್ಲ ?

ಕೋಟಿಕ್ರಮದಲ್ಲಿ ವಿಶೇಷವಾದದ್ದೆಂದರೆ ಶ್ಲೇಷ. ಶ್ಲೇಷದಿಂದ ಆಶ್ಚರ್ಯವಾಗುವುದಲ್ಲದೆ, ಉದಾತ್ತಭಾವವುಂಟಾಗುವುದು. ಉದಾತ್ತ ಭಾವನೆಯೂ ಸೌಂದರ್ಯಪ್ರತೀತಿಯೂ ಹಾಸ್ಯರಸಕ್ಕೆ ಘರ್ಷಣ.

ಕೋಟಿಕ್ರಮದ ಮುಖ್ಯ ರಣಾಂಗಣವೆಂದರೆ ಉತ್ತರ-ಪ್ರತ್ಯುತ್ತರ, ವಾದ-ವಿವಾದ, ಟೀಕೆ, ಶತ್ರುವಿನ ಬಾಣಕ್ಕೆ ನಿರುತ್ತರವಾದ ಪ್ರತಿಬಾಣವನ್ನು ಹೂಡಿ ಸುಮ್ಮನಿರಿಸುವುದು ಮುಂತಾದುವುಗಳು. ಮುಯ್ಯದ ಹಾಡುಗಳಲ್ಲಿರುವ ಹಾಸ್ಯರಸವು ಅನುತ್ತಮವಾದದ್ದು. ಬುದ್ಧಿಯ ಹೊಳಪುಳ್ಳ ಹಾಡುಗಳಿದ್ದರಂತೂ ಅತ್ಯಾನಂದವಾಗುತ್ತದೆ. ಆದರೆ ಕೇಳುವವರಿಗೇನಾದರೂ, ಪ್ರತ್ಯಕ್ಷ ಯುದ್ಧವನ್ನು ಮಾಡುವವರಿಗೆ ಕೊಚ್ಚೇ ಬರುವುದು. ಸುಂದರವಾದ ಉತ್ತರ ಪ್ರತ್ಯುತ್ತರದ ಉದಾಹರಣೆಯಿದು: " ವಾಚಯತಿ ನಾನ್ಯಲಿಖಿತಂ ಲಿಖಿತಮನೇನಾಪಿ ವಾಚಯತಿ ನಾನ್ಯಃ । ಚತುರಃ ಸಖಿಮೇ ಭರ್ತಾ ಸ್ವಯಮಪಿ ಲಿಖಿತಂ ಸ್ವಯಂ ನ ವಾಚಯತಿ. " ಇಬ್ಬರು ಹೆಂಗಸರು ನೀರು ತರುವಾಗ ತಮ್ಮ

ತಮ್ಮ ಗಂಡಂದಿರ ಗುಣಗಳನ್ನು ಹಾಡುತ್ತಿದ್ದರು. ಒಬ್ಬಳು 'ನೋಡ್ರಿ, ನಮ್ಮವರ ಪಾಂಡಿತ್ಯ ಎಷ್ಟೆಂದು ಹೇಳಬೇಕು? ಅವರು ಬರೆದದ್ದನ್ನ ಎರಡನೆಯವರಿಗೆ ಓದಲಿಕ್ಕೆ ಬರೋದಿಲ್ಲ; ಎರಡನೆಯವರು ಬರೆದದ್ದನ್ನ ಇವರಿಗೆ ಓದಲಿಕ್ಕೆ ಬರೋದಿಲ್ಲಾ!" ಅವಳ ಸಖಿ "ಇಷ್ಟೇ ಏನು ನಿಮ್ಮವರ ಪಾಂಡಿತ್ಯ? ನಮ್ಮವರು ಇದಕ್ಕೂ ಚತುರರು. ತಾವು ಬರೆದದ್ದನ್ನ ತಮಗೆ ಓದಲಿಕ್ಕೂ ಬರುವದಿಲ್ಲ!"

ಕೋಟಿಕ್ರಮದ ವಿಶೇಷವೆಂದರೆ ವಿರೋಧವನ್ನು ಸಾಧಿಸುವುದು. ಒಬ್ಬರು ರಾಜನ ಬಳಿಗೆ ಹೋದರು. ರಾಜನು ನಮಸ್ಕಾರ ಮಾಡಲು "ನಿನಗೆ ದಿನಾಲು ಮೂರು ಪೀಡೆಗಳು ಬಾಧಿಸುತ್ತಿರಲಿ," ಎಂದು ಆಶೀರ್ವಾದವನ್ನಿತ್ತರು. ರಾಜನು ಚಕಿತನಾದನು. ಪಂಡಿತರು "ಅರಸನೇ 'ದಾನಕೊಡು'ಎಂದು ನಮ್ಮಂತಹ ಬಡವರು ಯಾವಾಗಲೂ ನಿನ್ನನ್ನು ಪೀಡಿಸುತ್ತಿರಲಿ! ಭೋಜನದಲ್ಲಿ ನಿನ್ನ ಮಕ್ಕಳು ಯಾವಾಗಲೂ ಪೀಡೆಯನ್ನೀಯಲಿ (ಎಂದರೆ ಯಾವಾಗಲೂ ಅಂಬೆಗಾಲಿಡುವಂತಹ ಕೂಸು ಮನೆಯಲ್ಲಿ ಇದ್ದೇ ಇರಲಿ). ಶಯನದಲ್ಲಿ ರಾಣಿಯು ಪೀಡಿಸುತ್ತಿರಲಿ" ಎಂದು ಬರೆದು ಹೇಳಿದರು. (ಪ್ರದಾನೇ ವಿಪ್ರಪೀಡಾಸ್ತು ಪುತ್ರಪೀಡಾಸ್ತು ಭೋಜನೇ । ಶಯನೇ ಪತ್ನಿಪೀಡಾಸ್ತು ತ್ರಿಪೀಡಾಸ್ತು ದಿನೇ ದಿನೇ). ವಾದವಿವಾದದಲ್ಲಿ ಕೋಟಿಕ್ರಮದ ಸಾಮ್ರಾಜ್ಯವೇ ತೋರುವುದು. ಏಕೆಂದರೆ ಒಂದು ಪಂಗಡದವರು ತಮ್ಮ ಶತ್ರುಗಳನ್ನು ವಾಕ್‌ಪಾಟವದಿಂದ ಹೀಯಾಳಿಸುವುದು, ಅಪಮಾನಮಾಡುವುದು, ಖಂಡನಮಾಡುವುದು, ಬೈಯುವುದು ನಡೆದೇ ನಡೆಯುತ್ತದೆ. ಆಗ ಬಂದ ಸ್ಫೂರ್ತಿಯಿಂದಾಗುವ ವಾಗ್‌ವಿಲಾಸದಲ್ಲಿ ಕೊಂಕು, ಚುಚ್ಚು, ಸೂಚಕವಾದ ವಾಗ್‌ಬಾಣಗಳು ಹೊರಡುತ್ತವೆ. ಪರರನ್ನು ಹಾಸ್ಯಮಾಡುವುದಕ್ಕೂ ಬುದ್ಧಿಬೇಕು. ಇಲ್ಲದಿದ್ದರೆ 'ಶೇಷಂ ಕೋಪೇನ ಪೂರಯೇತ್' ಎಂಬ ನ್ಯಾಯದಂತೆ ಮುಷ್ಟ್ಯಾಮುಷ್ಟಿ ದಂಡಾದಂಡಿ ನಡೆದರೆ, ವಾಙ್ಮಯಕ್ಕೆ ಚಂಡಿನ ಮೇಲೆ ಕೈಬರುವುದು. ಸಾಲೆಯೊಳಗಿನ ವಿವಾದಮಂಡಲಕ್ಕಿಂತಲೂ ಕಾಲೇಜಿನೊಳಗಿನ ಬುದ್ಧಿವಂತರು ಮಾಡುವ ವಿವಾದದಲ್ಲಿ, ವಿಶೇಷತಃ ಕ್ಲಬ್ಬುಗಳಲ್ಲಿ ಊಟಕ್ಕೆ ಕುಳಿತಾಗ, ಪಂಗಡ-ಪಂಗಡವಾಗಿ ವಿನೋದಯುಕ್ತ ಜಗಳ ನಡೆದಿರುವಾಗಂತೂ— ಕೋಟಿಕ್ರಮಕ್ಕೆ ಉತ್ಕರ್ಷವಿರುತ್ತದೆ. ಇದರಲ್ಲಿ ಜೊಳ್ಳು ಬಹಳವಾಗಿರುವುದಿಲ್ಲ. ಎಲ್ಲರೂ ಮಹತ್ವಾಕಾಂಕ್ಷಿಗಳೂ, ತಮ್ಮ ದೇಶದ, ತಮ್ಮ ಧರ್ಮದ, ತಮ್ಮ ಸಮಾಜದ, ತಮ್ಮ ವಾಙ್ಮಯದ ಉತ್ಕರ್ಷವನ್ನು ಬಯಸುವವರೂ, ಪಾಂಡಿತ್ಯಪಟುಗಳೂ, ನವಜೀವನ-ನವಶಕ್ತಿಗಳಿಂದ ಒಡಗೂಡಿದವರೂ, ಹಿರಿಯರೂ ಇರುವುದರಿಂದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ವಿಷಯವಿಚಾರಗಳಿಂದ ಇವರ ಹಾಸ್ಯವು ತುಂಬಿ ತುಳುಕುತ್ತಿದ್ದುದರಿಂದ, ಇಂಥ ವಾದ-ವಿವಾದಗಳನ್ನು ಕೇಳುವುದರಿಂದ ನೋಡುವವರಲ್ಲಿ ಲವಲವಿಕೆಯೂ, ಮನೋರಂಜನವೂ, ಆನಂದವೂ ನೆಲೆಗೊಳ್ಳುತ್ತವೆ. ನಾನು ಕಾಲೇಜಿನಲ್ಲಿದ್ದಾಗಿನದು : "ನಾನು ಕರ್ನಾಟಕದ ಟಿಳಕನಾಗುವೆ ನೋಡಿರಿ ಬೇಕಾದರೆ!" ಒಬ್ಬನೆಂದನು. ಅದಕ್ಕೆ ಇನ್ನೊಬ್ಬನು: "ಟಿಳಕರಾಗುವುದಕ್ಕೆ ಇನ್ನೊಮ್ಮೆ ಹುಟ್ಟಿಬರಬೇಕು ನೀವು" "ಇನ್ನೊಮ್ಮೆ ಹುಟ್ಟಿ? ಪುರ್ಜನ್ಮದಲ್ಲಿನ್ನೂ ವಿಶ್ವಾಸವಿಡುವಂತಹ ಮೂರ್ಖ ನಾನಲ್ಲ!" "ಹಾಂಗಾದರೆ ನೀವು ಎಂಥಾ ಮೂರ್ಖರು!"—ಖೊಳ್ಳನೆ ನಗೆ! ಇನ್ನೊಬ್ಬರು "ಛೇ ಹಿಂಗ್ಯಾಕಂತೀರಿ! ಟಿಳಕರಾಗುವ ಮಹತ್ವಾಕಾಂಕ್ಷೆ ಹಿಡಿಯುವುದರೊಳಗೆ ತಪ್ಪೇನು? ತಮ್ಮ ದೇಶಸೇವೆ ಮಾಡುವ ಆದರ್ಶವನ್ನಿಡುವುದೇನು ಸಾಮಾನ್ಯವಲ್ಲ! ನೀವು ಟಿಳಕರಾದರೆ ನಾವು ನಿಮ್ಮ ಶಿಷ್ಯರಾಗುತ್ತೇವೆ! ತೀರಿತೇ? ಆದರೆ ಟಿಳಕ ಆಗುವುದಕ್ಕೆ ಮೊದಲು ಒಂದು ಪಗಡೀ ಹಾಕಿಕೊಳ್ಳುವುದಕ್ಕೆ ಕಲಿಯಿರಿ, ಅಂದರೆ ತೀರಿತು"—ನಗೆಯ ಗೆರುಸೊಪ್ಪೆ! ಗಾಂಭೀರ್ಯದಿಂದ ಮೊದಲುಮಾಡಿ ಕಟ್ಟಕಡೆಗೆ ಪಗಡಿಯತನಕ ಬಂದದ್ದರಿಂದ ಇಷ್ಟು ನಗೆ ಬಂತು. ಮಾದರಿಗಾಗಿ ಕಟ್ಟಿದ್ದೇನೆ ಕೆಲವು ಉದಾಹರಣೆಗಳನ್ನು. ಜೀವನದಲ್ಲಿ ಸೂಕ್ಷ್ಮದೃಷ್ಟಿಯನ್ನಿತ್ತರೆ ದಿನಾಲು ಎಷ್ಟೋ ಉದಾಹರಣೆಗಳು ಸಿಕ್ಕುತ್ತವೆ. ತತ್ತ್ವದ ಕಡೆಗೆ ಲಕ್ಷ್ಯವನ್ನೀಯುವುದೇ ಮುಖ್ಯ ಉದ್ದೇಶ.

ತಂದೆ ತಮ್ಮ ಮಿತ್ರರ ಟೀಕೆಯನ್ನು ಮಾಡುತ್ತಿದ್ದರು: "ನಮ್ಮ ಶಾಮ್ಯಾಗ ನಾ ಎಷ್ಟು ಹೇಳಿದ್ದೆ. ನನಗೊಂದು ೧೦-೧೨ ರೂಪಾಯಿ ಶಾಲು ತಗೊಂಡು ಬಾ.. ಕಾಶಿಯೊಳಗ ನೋಡು ಸಿಗತಾವ.. ಅಂತ! ಅಂವ ಅಂದಾ 'ನನಗ ಕಾಶಿಯೊಳಗ ವ್ಯಾಖ್ಯಾನನಿಗಲಿಲ್ಲಾ!' ಏನು ಬರೋದು ಹೋಗೋದು ನಮ್ಮ ಮನಿಗೆ, ಏನು ಚಹಾ ಫರಾಳಾ, ಎಲ್ಲಾ ಫುಕಟ!" ಬದಿಗೆ ನಿಂತಿದ್ದ ಪುತ್ರರತ್ನ "ಅದೆಲ್ಲಾ ಆತು ಅಣ್ಣಾ, ಅವರಿಗೆ ರೂಪಾಯಿ ಕೊಟ್ಟಿದ್ದೇನು?" ತಂದೆಯ ಮುಖ ಕಪ್ಪುಬಡಿಯಿತು.

ಒಬ್ಬರು ಕರ್ನಾಟಕೀ ಜನರನ್ನು ಹೀಯಾಳಿಸುತ್ತಿದ್ದರು: "ಏನು ರುಮಾಲ, ಏನು ಉದ್ದ ಕೋಟು, ಏನು ಮಚ್ಚಿ, ಏನು ಹಲ್ಲು ಕಿಸಿಯೋದು, ಶುದ್ಧ ಮಂಗ್ಯಾ!" ನನಗೆ ಸ್ವಾಭಾವಿಕವಾಗಿ ಸಿಟ್ಟು ಬಂತು. ನಾನು "Every man is a descendent of a monkey" ಎಂದೆ. ಇದರ ಅರ್ಥ ಕನ್ನಡದಲ್ಲಿ 'ನಾನು ಮಂಗ್ಯಾ ಆದರೆ ನೀನು ಮಂಗ್ಯಾನ ಮಗ' ಆಗುತ್ತದೆ. ಆದರೆ ಅದರಲ್ಲಿಯ ಸೂಚಕತೆ, ಅದರೊಳಗಿನ ಶಾಸ್ತ್ರೀಯ ತತ್ತ್ವ, ಅದನ್ನು ಅಂದ ಬಗೆ, ನನಗೆ ಒಮ್ಮೆಲೇ ಸೂಚನೆಯಾದದ್ದು, ನಾನು ಅಂದದ್ದರ ಅರ್ಥ ಪ್ರತಿಯೊಬ್ಬನಿಗೂ ತಿಳಿದದ್ದು— ಒಟ್ಟುಗೂಡಿ— ನನ್ನ ಮುಖ ಕೆಂಪು, ಉಳಿದವರ ಮುಖದಲ್ಲಿ ಅಟ್ಟಹಾಸ್ಯ, ಬೈಸಿಕೊಂಡವನ ಮುಖ ಮೋಘಮಾಲೆ.

ಗಂಡ-ಹೆಂಡರು ಒಂದು ಕೂಸಿನೊಂದಿಗೆ ಮೋಟಾರಿಗೆ ಬಂದರು. ಏಜಂಟನು ಟಿಕೀಟಿನ ರೊಕ್ಕ ಕೇಳಿದನು. ಗಂಡ 'ಹುಡುಗೀನ ತೊಡೀಮ್ಯಾಲೆ ತಗೊಂಡರ ಟಿಕೀಟು ಇಲ್ಲಲ್ಲಾ?" ಎಂದನು. ಏಜಂಟನು "ಹುಡುಗೀನ ತಗೊಳ್ಳಿರಿ ಮತ್ತ; ಅವರ್ನ ತಗೊಂಡೀರಿ!" ಅಂದನು. ಕೊಳ್ಳನೆ ನಗೆಯಾಯಿತು. ಆದರೆ ಇದು ಸಾತ್ತ್ವಿಕ ನಗೆಯಲ್ಲ. ಗೃಹಸ್ಥರಿಗೆ ಸ್ವಲ್ಪ ಅಪಮಾನವೆನಿಸಿದರೂ

ಎರಡು ತಿಕೀಟಿನ ರೊಕ್ಕ ಕೊಟ್ಟು ತಣ್ಣಗೆ ಕುಳಿತುಕೊಂಡರು—ಈ ಉದಾಹರಣೆಯನ್ನು ಅಧಮಹಾಸ್ಯವೆಂದು ಕೊಟ್ಟಿರುವೆನು.

ತಿರುಕರೂ ಸಾವಲಿಗರೂ ಬಹಳ ಮಾರ್ಮಿಕರೆಂದು ಕೀರ್ತಿ. ವಕೀಲರ ಚಹಾಪಾರ್ಟಿ. ಹದಿನೆಂಟು ಮಂದೀ ಗದ್ದಲ. ಅದೇ ವೇಳೆಯಲ್ಲಿ ಒಬ್ಬ ತಿರುಕ ಹಾಡುಹಾಡುತ್ತ ಬಿಕ್ಕೆಬೇಡಹತ್ತಿದನು. ಯಾರೂ ಲಕ್ಷ್ಯ ಕೊಡಲಿಲ್ಲ. ಬಹಳೇ ಕಾಡಿಸಹತ್ತಲು ಯಜಮಾನರು ತಮ್ಮ ಕಿಸೆಯೊಳಗಿಂದ ಒಂದು ದುಡ್ಡು ತೆಗೆದು ಅವನ ಕೈಯಲ್ಲಿ ಹಾಕಿದರು. "ಇಷ್ಟು ಹಾಡಾಡಿ ಅತ್ತರೂ ಒಂದೇ ಬಿಲ್ಲಿಯೇನು ರಾಯರೇ? ನೀವರೇ ಏನು ಮಾಡೀರಿ; ನಿಮ್ಮ ಯೋಗ್ಯತೆಯಂತೆ ಕೊಟ್ಟಿರಿ!" ಯಜಮಾನರ ವಿರುದ್ಧವಿರುವ ಜನರಿಗೆ ನಗೆ ಬಂತು. ಯಜಮಾನರಿಗೆ ಸಿಟ್ಟುಬಂತು, ನುಂಗಿದರು. ತಿರುಕ ಯಃಪಲಾಯತೇ!

ಒಬ್ಬ ಸಾವಲಿಗ ಕೆತ್ತುತ್ತಿದ್ದನು. ಮಿಾಸೆ ಕತ್ತರಿಸುವ ಸಮಯ ಬಂತು. "ಬಹಳ ತೆಳ್ಳಗೆ ಮಾಡಲೇನು ರಾಯರ?" ಎಂದು ಕೇಳಿದ. "ಬ್ಯಾಡ ಮಧ್ಯಮ ಕತ್ತರಿಸು," ಎಂದರು ರಾಯರು. "ನಿಮ್ಮ ಕೂದಲು ಬಹಳ ಬಿಳುಪು; ಮನೆಯವರು ಒಪರಿಕೊಂಡರೆ ನಾನೇನೂ ಜವಾಬ್‌ದಾರನಲ್ಲ!" — ರಾಯರಿಗೆ ಸಿಟ್ಟು ಬಂದರೂ, ಅವನನ್ನು ಬೈದರೆ ಮನೆಯವರು ಕೇಳಿದರೆ ತನ್ನ ಅಪಮಾನವೆಂದೇ ನುಂಗಿ—'ಸಪಾಟಾಗಲಿ' ಅಂದರು.

ಕೀಳು ಜನರಲ್ಲಿ—ಸಂಸ್ಕೃತವಿಹೀನ ಜನರ ಬಾಯೊಳಗೆ ಇಂತಹ ಹಾಸ್ಯವಿದ್ದೇ ಇರುವುದು. ಸಂಸ್ಕೃತಿಯುಳ್ಳ ಸುಶಿಕ್ಷಿತ ಮಂಡಲಿಯಲ್ಲಿ ಇದಕ್ಕೂ ಹತ್ತುಪಾಲು ಕೀಳುತನದಿಂದಲೂ ಅಶ್ಲೀಲತೆಯಿಂದಲೂ ತುಂಬಿದ ಹಾಸ್ಯವು ನಡೆಯುತ್ತಿರುವುದು ನಮ್ಮ ದುರ್ದೈವ ಲೀಲೆ! ಮತ್ತೇನು!

ಇನ್ನು ಕೋಟಿಯ ಕ್ರಮವನ್ನೇ ವಿಸ್ತಾರವಾಗಿ ಮಾಡಿದರೆ ಅದಕ್ಕೆ ವಿನೋದವೆಂದು ಹೆಸರು. ಅಂತೆಯೆ ಕೋಟಿಕ್ರಮವನ್ನು ಸವಿಸ್ತಾರವಾಗಿ ಹೇಳಿದ್ದೇನೆ. ಕೋಟಿಕ್ರಮವು ವಿರೋಧದರ್ಶಕವಾಗಲಿ, ಸಾಮ್ಯದರ್ಶಕವಾಗಲಿ ಸ್ವಲ್ಪದರಲ್ಲೇ ಇರಬೇಕು. ಬೆಳಕಿನಿಂದ ಉಕ್ಕುತ್ತಿರಬೇಕು; ಮಿಂಚಿನಂತಿರಬೇಕು (ಅಂದರೆ ಬೆಳಕಿನ ಪುಂಜವನ್ನು ಪಸರಿಸಿ ಮಾಯವಾಗಬೇಕು). ಶತ್ರುವಿನ ಪ್ರಾಣವನ್ನು ಒಂದು ನಿಮಿಷದಲ್ಲಿ ಹೀರುವಂಥ ಕೃಷ್ಣಸರ್ಪದ ವಿಷದ ಬಿಂದುವಿನಂತಿರಬೇಕು. ಒಂದೇ ಬಿಂದುವಿನಿಂದ ಸಾವಿರಾರು ಸುಖದ ಅನುಭವವನ್ನು ತರುವ ಅಮೃತದಂತಿರಬೇಕು. ಗುಂಡಿನಂತಿರಬೇಕು. ಗುಳಿಗೆಯಂತಿರಬೇಕು. ಇದು ವಾದ-ವಿವಾದದಲ್ಲೇ ಅದ್ಭುತ ಶಕ್ತಿಯುಳ್ಳದ್ದು. ಬುದ್ಧಿಯ ಬೆಳಕು ಅತ್ಯಾವಶ್ಯಕವಾದದ್ದು ಕೋಟಿಕ್ರಮದಲ್ಲಿ ವಿನೋದವು ವರ್ಣ್ಯವಾದದ್ದು. ಕೋಟಿಕ್ರಮವು ಸಂನ್ಯಾಸಿಯಂತೆ; ಕೈಯಲ್ಲಿ ಒಂದು ಪರಟಿ, ಮೈಮೇಲೆಯೊಂದು ಲಂಗೋಟಿ. ವಿನೋದವು ಹಾಗಲ್ಲ. ಗಂಡ-ಹೆಂಡತಿ, ಮಕ್ಕಳು ಮರಿ, ಅತಿಥಿ-ಅಭ್ಯಾಗತ, ನಂಟರಿಷ್ಟರು ಕೂಡಿದ ಮದುವೆಯಮನೆಯಂತೆ. ಮದುವೆಯೂ ಪೂರ್ವಕಾಲದ ಮದುವೆಯಂತೆ ಹುಣ್ಣಿವೆಗೆ ಹತ್ತಿದರೆ ಅಮಾಸಿಗೆ ಬಿಡದಂಥದು. ಕೋಟಿಕ್ರಮದ ಪ್ರಪಂಚವು ಈಗಿನ ಮದುವೆಯಂತೆ: ಒಂದೇ ದಿನದಲ್ಲಿ ಸೋಡಮುಂಜಿ, ಅಕ್ಷತಾ, ಮೆರೆವಣಿಗೆ, ಫಲಶೋಭನ. ವಿನೋದವು ಭಾವನಾಪ್ರಧಾನವಾದದ್ದು. ಮನುಷ್ಯನ ಪ್ರಭಾವವೇ ವಿನೋದಕ್ಕೆ ಆಧಾರ. ಡಿಕನ್ಸನಂಥ ಒಬ್ಬ ವಿನೋದಿ ಇಪ್ಪತ್ತಿಪ್ಪತ್ತೈದು ಕಾದಂಬರಿಗಳನ್ನು ಮಾನವನ ವಿನೋದ ಪ್ರಪಂಚದ ಸಲುವಾಗಿ ಬರೆದಿದ್ದಾನೆ. ಗ್ರಂಥಕಾರನೇ ವಿನೋದ ಬುದ್ಧಿಯುಳ್ಳವನಿರಬಹುದು; ಅಥವಾ ಒಂದೇ ಒಂದು ವಿನೋದಪಾತ್ರವು ಎಲ್ಲ ಕಾದಂಬರಿಯನ್ನಲ್ಲದಿದ್ದರೂ, ಇಡೀ ನಾಟಕವನ್ನಲ್ಲದಿದ್ದರೂ, ಅರ್ಧರ್ಧ ಭಾಗವನ್ನು ತುಂಬುವಷ್ಟಿರಬಹುದು. ಡಿಕನ್ಸ್, ಡಾನ್ ಕ್ವಿಕ್‌ಸೋಟ್, ಮಾರ್ಕ್‌ಟ್ವೇನ ಮುಂತಾದ ಲೇಖಕರು, ಗ್ರಂಥಗಳನ್ನೇ ವಿನೋದದಿಂದ ತುಂಬಿರುವುದು ವಿನೋದಶೀಲರಾದ ಪಾತ್ರಗಳಿಂದ, ಅವರ ಕೃತಿಗಳಿಂದ, ಅವರ ಸ್ವಭಾವವರ್ಣನೆಯಿಂದ. ಎಡಿಸನ್ ಸ್ಟೀಲರು ಸಹ ವರ್ಣನೆ, ಹರಟೆ, ಮುಂತಾದ ಚಿಕ್ಕ ಲೇಖನಗಳಿಂದ ಅದೇ ಕಾರ್ಯವನ್ನು ಮಾಡಿರುವರು. ಸಂಸ್ಕೃತದಲ್ಲಿ ಪ್ರಹಸನಗಳು, ಭಾಣಗಳು ಇದೇ ತರಹದುವು. ಕನ್ನಡದಲ್ಲಿ ಅಲ್ಲಲ್ಲಿ ಹಾಸ್ಯ ಕಂಡರೂ ಬರಿ ಹಾಸ್ಯದಿಂದ ತುಂಬಿದ ಕಾದಂಬರಿಗಳನ್ನು ಪೂರ್ವಿಕರಾರೂ ಬರೆದಿಲ್ಲ. ಬರೆದಿದ್ದರೂ ನನಗೆ ಗೊತ್ತಿಲ್ಲ. ಇತ್ತೀಚೆ ಕನ್ನಡದಲ್ಲಿ ಹೊಸ ಮಾದರಿಯ ಪ್ರಯತ್ನಗಳು ನಡೆದಿವೆ. ನಾಟಕಗಳಲ್ಲಂತೂ ವಿನೋದವೇ ಹೆಚ್ಚು; ಕೋಟಿಕ್ರಮವು ಅಲ್ಲಲ್ಲಿಯೇ ಬರುವುದು. ರವೀಂದ್ರನಾಥರ ಕಥೆಗಳಲ್ಲಿ ಸೂಕ್ಷ್ಮವಾಗಿ ವಿನೋದವು ಹರಿದೇ ಇರುವುದು. ಶೇಕ್ಸ್‌ಪಿಯರನ ಕೆಲವು ನಾಟಕಗಳು ಬರಿ ವಿನೋದದಿಂದಲೇ ತುಂಬಿವೆ. ಇದರಲ್ಲಿಯೂ ಉದಾತ್ತತೆಯೂ, ಸೌಂದರ್ಯವೂ, ಸಾತ್ವಿಕಗುಣವೂ ತುಂಬುವಂತಹ ಕೋಟಿಕ್ರಮವಾಗಲಿ, ವಿನೋದಪ್ರಬಂಧವಾಗಲಿ ಹೆಚ್ಚು ಮಹತ್ವವುಳ್ಳದ್ದು. ದೊಡ್ಡವರ ಲೇಖನಗಳಲ್ಲಿಯೂ ವ್ಯಾಖ್ಯಾನಗಳಲ್ಲಿಯೂ ವಿನೋದವು-ಕೋಟಿಕ್ರಮವು, ಸಾತ್ವಿಕತೆಯಿಂದಲೇ ಹೊರಡುತ್ತಿರುವುದನ್ನು ಗಾಂಧಿಯವರ ಲೇಖನಗಳನ್ನೋದಿ ಮನಗಾಣಬಹುದು. ರವೀಂದ್ರರ ಕಥೆಗಳನ್ನೋದಿ ತಿಳಿದುಕೊಳ್ಳಬಹುದು. ಉದಾತ್ತ ಉದಾಹರಣೆಯ ಕೋಟಿಕ್ರಮವಿದು. ಒಮ್ಮೆ ರಂಗನಾಥ ದಿವಾಕರರು ಬರುವವರಿದ್ದರು. ನಾವು ನಾಲ್ಕೆಂಟು ಜನ ಕುಳಿತಿದ್ದೆವು. ಒಬ್ಬರ ಕಡೆಗೆ ಸರ್ವಜ್ಞನ ಪುಸ್ತಕವಿತ್ತು. ದಿವಾಕರರು ಬಂದರು. ಸರ್ವಜ್ಞನ ಪುಸ್ತಕ ತೆರೆಯಲಾಯಿತು. ಅದರಲ್ಲಿ 'ಕರೆಯದಲೆ ಬರುವವನ ಬರೆಯದಲೆ ಓದುವನ, ಬಿರಿಗಾಳಿನಿಂದ ನಡೆವವನ ಕರೆತಂದು ಕೆರದಿ ಹೊಡೆಯೆಂದ ಸರ್ವಜ್ಞ' ಎಂದು ಒಬ್ಬರು ಓದಿದರು. ದಿವಾಕರರು ಬಿರಿಗಾಳಿನಿಂದ ಬಂದಿದ್ದರು. ಅವರು "ಓಹೋ ಸರ್ವಜ್ಞನು ಹೊಡೆದರೆ ಸಿದ್ಧನಿದ್ದೇನೆ" ಎಂದರು—ಎಂತಹ ಉದಾತ್ತ ಭಾವ!!

“ ರೈತ ”

(ಕಿರುಗತೆ)

'ಇಂದುತನಯ' ಸೇಡಬಾಳ

ಮನುಷ್ಯನ ಹೊಟ್ಟೆಗೆ ಅನ್ನಬೇಕು ; ಮನಸ್ಸಿಗೆ ಮನುಷ್ಯತ್ವ ಬೇಕು. ಈರಪ್ಪ ಹೊಟ್ಟೆಗೆ ಅನ್ನವಿಲ್ಲದೆ ಗೌಡರ ಬಳಿ ಬಂದ; ಮನಸ್ಸು ಬೇಡುವ ಮನುಷ್ಯತ್ವ ಸಿಕ್ಕದಾಗಲು ಅಲ್ಲಿಂದ ಹೊರಟು ನಡೆದ.

★

ಅಂದು ಶನಿವಾರ. ಸ್ವಲ್ಪ ಬೇಗನೆ ಪಾಠ ಮುಗಿಸಿ ಮನೆಗೆ ಹೋಗಬೇಕೆಂದಿದ್ದೆ. ಹೋಗುವಾಗ ಗೌಡರ ಹತ್ತಿರ ನಾಲ್ಕು ಮಾತು ಆಡಿ ಹೋಗುವುದು ದಿನದ ರೂಢಿ. ಆದರೆ ಇಂದು ಗೌಡರೇನೋ ತಮ್ಮೊಬ್ಬ ರೈತನಿಗೆ ಬಾಯಿಮಾಡುತ್ತಿದ್ದರು. ಈರ—ಆ ರೈತನ ಹೆಸರು— “ ಬಾಂವಿಗೆ ನೀರs ಇಲ್ಲ. ಎರಡು ಮೂರು ಸಲ ಹೇಳಿಕೊಂಡೆ. ನೀವ್ ಕಿವೀಗೇ ಹಾಕ್ಕೊಳ್ಳಿಲ್ಲ. ನೋಡ್ದಕ್ಕ ನಾನs ತಗಿಸಿದೆ. ” ಎಂದು ಏನೇನೋ ನಮ್ರತೆಯಿಂದ ಹೇಳುತ್ತಲಿದ್ದ. ಅವನು ಮೆತ್ತಗೆ ಮಾತಾಡಿದಷ್ಟೂ ಗೌಡರ ದನಿ ಬಿರುಸಾಗುತ್ತಲಿದ್ದಿತು: ' ಕೊಳಚೆಯನ್ನು ಕೇಳದೆ ಯಾಕೆ ತಗಿಸಿದೆ ? ' ಎಂದರು. ಮನೆಗೆ ಬೇಗನೆ ಹೋಗಬೇಕೆನ್ನುವ ನನಗೆ ಇದೊಂದು ಅನುಕೂಲವಾಗಿಯೆ ಪರಿಣಮಿಸಿತು. ಆದರೆ ತಲೆಯಲ್ಲೊಂದು ವಿಚಾರ ತರಂಗವನ್ನೆಬ್ಬಿಸಿ ಬಿಟ್ಟಿತು ಆ ಪ್ರಸಂಗ: ' ಬಾವಿಯ ಕೊಳಚೆಯನ್ನು ಕೇಳದೆ ತೆಗೆಯಿಸಿದರೆ ರೈತನದೇನು ತಪ್ಪು ?.. ಅದರಲ್ಲಿ ಗೌಡರದೇನು ಹಾನಿ..? ' ಎಂದು ಮೊದಲಾದ ವಿಚಾರಮಾಲಿಕೆಯು ಮುಗಿಯುವುದರಲ್ಲಿ ಮನೆಯನ್ನು ಮುಟ್ಟಿದ್ದೆ ನಾನು.

ಲಲಿತೆ ಆದಾಗಲೇ ಮಲಗಿಕೊಂಡಿದ್ದಳು. ಆದರಿಂದ ನನ್ನ ವಿಚಾರಗಳಿಗೇನೂ ತೊಂದರೆಯೊದಗಲಿಲ್ಲ. ವಿಚಾರಮಾಲಿಕೆಯನ್ನು ಮುಡಿಯುತ್ತ ಮನಸ್ಸು ಮುಂದೆ ಸಾಗಹತ್ತಿತು. ಒಂದೆಡೆಗೆ ಒಪ್ಪೊತ್ತಿನ ಗಂಜಿಗೆ ಗತಿಯಿಲ್ಲದೆ “ ಅಯ್ಯೋ ಹೊಟ್ಟೆ ! ಅಯ್ಯೋ ಹೊಟ್ಟೆ ! ' ಎನ್ನುವ ಎಷ್ಟೋ ಕಂಗಾಲರ ಕೂಗು ; ಆದರೆ ಇನ್ನೊಂದೆಡೆಗೆ ಹಣಗಾರರು ಕೊಬ್ಬಿದ ಗೂಳಿಯಂತೆ ಮನಬಂದಂತೆ ತಿಂದುಂಡು ಅಜೀರ್ಣವಾಗಿ ಬಿಡುವ ಕಮರುದೇಗು ! ಒಂದೆಡೆಗೆ—ಲಂಗೋಟಿಗೆ ಗತಿಯಿಲ್ಲದೆ ಒಳಹೊಕ್ಕ ಹೊಟ್ಟೆಯಲ್ಲಿ ಕೈಕಾಲುಗಳನ್ನು ಅವಚಿಕೊಂಡು ' ಚಳಿ ! ಚಳಿ ! ' ಎನ್ನುತ್ತಿರುವ ಬಡವರ ನಡುಗು ! ಮತ್ತೊಂದೆಡೆಗೆ—ಕೋಟುಜಾಕೀಟುಗಳನ್ನು ತೊಟ್ಟುಕೊಂಡು, ಬಡವರ ಬಗ್ಗರವೇಲೆ ಅನ್ಯಾಯ ಅತ್ಯಾಚಾರಗಳಿಂದ ' ಹುರ್ ಹುರ್ ' ಎಂದು ಮೆರೆದಾಡುವ ಸಾವುಕಾರರ ಸಿಡುಕು ! ದುಡ್ಡುಳ್ಳವರು ದುಂದುಗಾರಿಕೆಯನ್ನು ಬಿಟ್ಟರೆ, ಬಡವರಿಗೆ ಹೊಟ್ಟೆತುಂಬ ಅನ್ನ ಮೈತುಂಬ ಬಟ್ಟೆಯಾದರೂ ಆಗಬಹುದಲ್ಲ ! . . ”

ಇವೇ ಮೊದಲಾದ ವಿಚಾರಗಳಿಂದ ಇರುಳು ನಿದ್ರೆ ಬೇಗ ಬಂದಿರಲಿಲ್ಲ. ಅಂತೆಯೆ ಬೆಳಗಿನಲ್ಲಿ ಬೇಗನೆ ಎಚ್ಚರಾಗಲಿಲ್ಲ. ಎಚ್ಚರು ಆಗುವುದೊಂದೇ ತಡ, ಮತ್ತೆ ಮುಂದೆ ಬಂದಿತು ಆ ಈರನ ಚಿತ್ರ. ಅದೇಕೋ, ಈರನನ್ನು ನಾನು ಮೊದಲನೆಯ ಸಲ ಕಂಡಾಗ—ನಡತೆಯೊಳಗಿನ ನಯವನ್ನು ನೋಡಿದಾಗ—ಒಮ್ಮೆಲೆ ಅವನನ್ನು ಮೆಚ್ಚಿಬಿಟ್ಟಿದ್ದೆ. ನಿನ್ನೆಯ ಅವನ ದೈನ್ಯಭಾವವನ್ನು ಕಂಡು ಮನಸ್ಸು ಮರುಗಿತ್ತು. ಇಂದು ' ಅವನ ಸ್ಥಿತಿ-ಗತಿಗಳನ್ನು ಸಂಪೂರ್ಣ ಅರಿತುಕೊಳ್ಳಬೇಕು: ಅವಶ್ಯಕವಿದ್ದರೆ ನೆರವಾಗಬೇಕು! ' ಎಂದು ಮನಸ್ಸು ಹರಿಯಹತ್ತಿತು. ತೋಟದ ದಾರಿಯೂ ಗೊತ್ತಿದ್ದಿತು; ಕೂಡಲೆ ತಂಬಿಗೆಯೊಂದನ್ನು ಕೈಯಲ್ಲಿ ತಕ್ಕೊಂಡು ಹೊರಟೇ ಬಿಟ್ಟೆ.

'ಕಲ್ಲಹಳ್ಳ' ಎಂಬುದು ಕಟ್ಟಡವಿಯೊಳಗಿನ ಹಳ್ಳ; ಹಳ್ಳಕ್ಕೆ ಹನ್ನೆರಡು ತಿಂಗಳೂ ನೀರು. ನೆರೆಯಲ್ಲಿ ಅಗಿದ ಬಾವಿಗಳಿಗಂತೂ ತುಂಬ ನೀರು. ಸುತ್ತಲಿನ ಭೂಮಿಯೂ ಕಸುವಿನದು. ಆದರೆ ಸಾಗುವಳಿ ಮಾಡದ ನೆಲ. ಅಲ್ಲಿರುವುವೆಲ್ಲ ವತನದಾರರ ಜಮೀನುಗಳು, ಅವಕ್ಕೆ ಇರುವ ತೆರಿಗೆ ತುಸು, ಉಳಿದ ಕಡೆಗೆ ಅವರ ಭೂಮಿ ಬಹಳ—ಹೀಗಾಗಿ ಆ ಭೂಮಿಯ ಸಾಗುವಳಿ ಮಾಡುವ ಅಗತ್ಯವೇ ಅವರಿಗಿರಲಿಲ್ಲ. ಅಂತೆಯೆ ಆ ಪ್ರದೇಶವೆಲ್ಲ ಹುಲ್ಲುಬೆಳೆದು ಬೇಸಾಯಕ್ಕೆ ಬಾರದ ಬೀಳುಭೂಮಿಯಾಗಿತ್ತು. ಅದರ ಉಪಯೋಗವೆಂದರೆ ಊರ ಜನರ ದನಗಳಷ್ಟು ಅಲ್ಲಿ ಮೇಯಲು ಹೋಗುತ್ತಿದ್ದುದಿಷ್ಟೆ.

ಇಂತಹ ಪ್ರದೇಶದಲ್ಲಿದ್ದುದು ಈರನ—ಅಲ್ಲ ಗೌಡರ—ತೋಟ. ಊರು ಬಿಟ್ಟು ಮೂರು ಮೈಲಿನ ಮೇಲೆ. ಎಂದೋ ಹಿರಿಯರು ತೋಡಿಸಿದ ಬಾವಿ ; ಮೊನ್ನೆಮೊನ್ನೆಯವರೆಗೂ ಹಾಳುಬಿದ್ದಿತ್ತು. ಈರ ಗಟ್ಟಿಗ. ಪರಸ್ಥಳದಿಂದ ಹೊಟ್ಟೆಹೊರೆಯುವುದಕ್ಕೆಂದು ಗುಳೇಕಟ್ಟಿ ಬಂದವ. ಹೀಗೆ ಬಂದಾಗ ಭೂಮಿಯನ್ನು ಒಮ್ಮೆಲೆ ಯಾರು ಕೊಡಬೇಕು ? ಗೌಡರು ಕೊಟ್ಟದ್ದು ಬೀಳುನೆಲವೆಂದು. ಅವನೂ ಬಲ್ಲೆನೆನ್ನದೆ ಲಾವಣಿಗೆ ಹಿಡಿದ; ಮೈಮುರಿಯೆ ದುಡಿದು ಈಗ ಆ ತೋಟದಲ್ಲಿ ವರ್ಷಾ ನಾಲ್ಕೈದು ನೂರು ರೂಪಾಯಿ ಉತ್ಪನ್ನ ಬರುವಂತೆ ಮಾಡಿದ. ಗೌಡರಾದರೊ ಅವನ ಕುಟುಂಬಕ್ಕೆ ಬೇಕಾಗುವಷ್ಟನ್ನು — ಬಡರೈತನ ಹೊಟ್ಟೆ ಬಟ್ಟೆಗೆ ತಕ್ಕಷ್ಟು—ಬಿಟ್ಟು, ಹೆಚ್ಚಿನದನ್ನೆಲ್ಲ ತಮ್ಮ ಮನೆ ತುಂಬಿಕೊಳ್ಳುತ್ತಿದ್ದರು. ಅವನೂ ಅದಕ್ಕೆ ಮರುಮಾತನ್ನಾಡುತ್ತಿರಲಿಲ್ಲ. ಅನ್ನವಿಲ್ಲದೆ ಅಲೆಯುತ್ತಿದ್ದಾಗ ಆಶ್ರಯ ಕೊಟ್ಟರೆಂದೋ ? ಅಲ್ಲ. ' ಜೀತದಾಳಿನಂತೆ ದುಡಿದರಾಯಿತು. ಎಲ್ಲವೂ ಅವರದೇ ಅದೆ.

ನಮ್ಮದೇನು ? ಹತ್ತುವಷ್ಟು ಕೊಡುತ್ತಾರಲ್ಲ. ಹೆಚ್ಚಿನ ಮಾತು ನಮಗೇಕೆ ಬೇಕು ? ' ಎಂದು. ಈಸಲವೂ ಕಬ್ಬು ಹಚ್ಚಿದ್ದಾನಂತೆ. ಚೆನ್ನಾಗಿ ಬೆಳೆದರೆ, ಬರುವ ಬೇಸಗೆಗೆ ಹಿರಿಯ ಮಗ ನಿಂಗನ ಮದುವೆ ಮಾಡಬೇಕೆಂಬಾಶೆಯಂತೆ ಅವನಿಗೆ. ಗೌಡರ ಮುಂದೆಯೂ ಒಂದೆರಡು ಸಲ ಇದನ್ನು ಹೇಳಿದನಂತೆ. ಕೇಳಿ ಅವರು ಸುಮ್ಮನಾದರಂತೆ ! ಈ ಸಂಗತಿಯನ್ನು ಅವನೇ ಮೊನ್ನೆ ಹೇಳುತ್ತಿದ್ದ. ಗೌಡರೂ ಒಂದೆರಡು ಸಲ ಅವನ ಎದುರಿಗೇ ಅವನ ದುಡಿಮೆಯ ಬಗ್ಗೆ ಹೊಗಳಿದ್ದನ್ನು ಕೇಳಿದ್ದೆ. ಆದರೆ ನಿನ್ನೆ ಹಾಗೇಕೆ ಬಾಯಿಮಾಡುತ್ತಿದ್ದರೋ? ಮನಸ್ಸು ಈರನ ತೋಟ-ಪಟ್ಟಿಗಳನ್ನು ನೆನೆಯುತ್ತಿದ್ದಂತೆಯೇ ಕಾಲುಗಳೂ ಅತ್ತ ಕಡೆಗೇ ಹರಿಯುತ್ತಿದ್ದುವು. ತಾಸೆರಡು ತಾಸು ಹೊತ್ತೇರುವಷ್ಟರಲ್ಲಿ ತೋಟಕ್ಕೆ ಬಂದು ತಲುಪಿದೆ. ಕಬ್ಬು ಚೆನ್ನಾಗಿ ಬೆಳೆದಿದೆ. ಆದರೆ ಈಗ ಬಾಡುತ್ತಲಿವೆ. ಬಾಡದೆ ಏನುಮಾಡೀತು ? ನಾಲ್ಕಾರುದಿನ ನೀರೇ ಹಾಯಿಸಿಲ್ಲ. ಹಾಯಿಸುವುದಾದರೂ ಎಲ್ಲಿಂದ? ಬಾವಿಯಲ್ಲಿ ನೀರು ಇದ್ದರಷ್ಟೆ ? ಬಾವಿಯ ಮೇಲೆ ಹೋಗಿನಿಂತೆ ; ಒಳಗೆ ಮೂರು ನಾಲ್ಕು ಹುಡುಗರು ಕೊಳಚೆಯನ್ನು ತುಂಬುತ್ತಲಿದ್ದರು. ಎಲ್ಲರೂ ಎಳೆಯ ಮಕ್ಕಳು, ಒಬ್ಬ ಮಾತ್ರ ಹಿರಿಯ ಹುಡುಗ. ಆತ ಸುಮಾರು ಹನ್ನೆರಡು ವರ್ಷದವನಿರಬಹುದು. ಅವನೇ ಹೆಡಿಗೆ ಹೊತ್ತು ಮೇಲೆ ತರುವವ. ಇದೀಗ ಹೆಡಿಗೆ ತುಂಬುವುದಾಯಿ ತೇನೊ ! ಒಬ್ಬ ಹುಡುಗ ಹೇಳಿದ: ' ಸಾಕಿನ್ನ, ಅಣ್ಣಾಗ ಒಜ್ಜೆ ಆಗ್ತೈತಿ ' ಎಂದು. ಮತ್ತೊಬ್ಬ ಕಿರಿಯ ಹುಡುಗ ' ಮರತು ಹಾಂಗs ತುಂಬಿದ್ರೆಲ್ಲೋ ' ಎಂದು ಸ್ವಲ್ಪ ಕೊಳಚೆಯನ್ನು ಹೆಡಿಗೆ ಯೊಳಗಿಂದ ತೆಗೆದು ಮತ್ತೊಂದು ಹೆಡಿಗೆಯಲ್ಲಿ ಹಾಕಹತ್ತಿದ. ಹಿರಿಯ ಹುಡುಗ ' ಇರಲಿ ಬಿಡೋ ' ಎಂದು ಹೆಡಿಗೆಯನ್ನು ಎತ್ತಲು ಹೋದ ; ಆದರೆ ಎತ್ತಲಿಕ್ಕಾಗಲಿಲ್ಲ. ಎಲ್ಲರೂ ಕೈಹಚ್ಚಿದರು ; ಹೆಡಿಗೆ ಎತ್ತಹತ್ತಿದರು. ಮೈಮೇಲೆ ಕೊಳಚೆ ಸುರಿಯುತ್ತಲಿತ್ತು. ಹಾಗೆಯೆ ಹಿರಿಯ ಹುಡುಗ ಹೆಡಿಗೆ ಹೊತ್ತು ಮೇಲೆ ಏರಹತ್ತಿದ. ಕಾರಿಯ ಕಟಿಗೆಯಂತಹ ಕಾಯ ; ಲಂಗೋಟಿಯನ್ನುಳಿದು ಮೈಮೇಲೆ ಬೇರೇ ಬಟ್ಟೆಗಳಿಲ್ಲ. ಹುಡುಗ ಮೇಲಕ್ಕೆ ಬಂದ. ನನ್ನನ್ನು ಬೆರಗುಗಣ್ಣಿನಿಂದ ನೋಡಿದನಷ್ಟೆ; ಮಾತಾಡಿಸುವ ಧೈರ್ಯ ಸಾಲಲಿಲ್ಲವೆನೊ ! ಹೆಡಿಗೆಯೊಳಗಿನ ಕೊಳಚೆಯನ್ನು ಚೆಲ್ಲಿ ಬಾವಿಯಲ್ಲಿ ಇಳಿಯತೊಡಗಿದ. ಆಗ ನಾನು ಕೇಳಿದೆ: " ಈರ ಇಲ್ಲೇನು ? "

" ಅಪ್ಪ ನೆನ್ನೆ ಊರೊಳಗ ಹೋದಾಂವ ಇನ್ನೂ ಬರಲಿಲ್ಲರಿ! " ಧ್ವನಿಯಲ್ಲಿ ವ್ಯಾಕುಲತೆ ಇಡುಗಿತ್ತು. ಅಣ್ಣಾ ಯಾರೊಡನೆ ಮಾತಾಡಿದನೆಂದು ಮೇಲೆ ನೋಡಿದರು ಆ ಹುಡುಗರು. ಅಪರಿಚಿತನಾದ ನನ್ನನ್ನು ಕಂಡು ಮೇಲೆಯೇ ಬಂದುಬಿಟ್ಟರು. ಮೈ-ಕೈ ಕೆಸರು. ಬಣ್ಣ ಕಪ್ಪು. ಆದರೂ ಎಷ್ಟು ಮುದ್ದು ಸುರಿಯುವ ಮಕ್ಕಳವರು! ನಿಸರ್ಗದೇವತೆ ನಿರ್ಮಿಸಿ ಬೆಳೆಯಿಸಿದ ನಗ್ನ ಪುತ್ಥಳಿಗಳವು ! ಹುಡುಗರು ನನ್ನನ್ನೊಮ್ಮೆ ನೋಡಿ, ಅಣ್ಣನ ಕಡೆಗೆ ಕುತೂಹಲದೃಷ್ಟಿಯಿಂದ ನೋಡತೊಡಗಿದರು. ' ಕುಂಡ್ರಿ ! ಅಪ್ಪಾ ಈಗ ಬಂದಾನು ನೋಡೋನು ' ಎಂದು ಹಿರಿಯ ಹುಡುಗ ಹೇಳಿದ. ಅಲ್ಲೇ ಕಲ್ಲಿನ ಮೇಲೆ ಕುಳಿತೆ. ನಸುವೇಳೆಯಲ್ಲಿಯೆ ಈರ ಕಾಣಿಸಿದ. ಮುಖಬಾಡಿತ್ತು ; ಕಾಲುಗಳನ್ನು ಎಳೆಯುತ್ತ ಕೆಳಗೆ ಮೋರೆಮಾಡಿ ಬರುತ್ತಿದ್ದ. ನನ್ನನ್ನು ಕಂಡಿರಲಿಲ್ಲ. ನಾನೇ ಅವನನ್ನು ಕೂಗಿದೆ :

" ಈರಪ್ಪಾ ! "

" ಅಂ. . . . ಇತ್ತೆಲ್ಲಿ ದ್ಯಾವ್ರೂ ? "

" ನಿನ್ನ ಕಡೇನೇ ! "

" ನೆನ್ನೆ ಸಂಜೇನಾಗ ಭೇಟಿ ಆಗಿತ್ತಲ್ಲಾ ರಾಯರs ! "

" ಹೌದು, ಈ ಹೊತ್ತೂ ಭೇಟಿ ಆಗಬೇಕೂ ಅಂತ ಅನಿಸಿ. . . "

" ಅದ್ಯಾಕ . . . . ಬುದ್ಧಿ. . . . "

ಈರ ನನ್ನ ಮುಖವನ್ನು ಕೆಲವು ನಿಮಿಷಗಳ ವರೆಗೆ ಕುತೂಹಲ ದೃಷ್ಟಿಯಿಂದ ನೋಡಿದ. ಕಾಲೊಳಗಿನ ಕೆರವುಗಳನ್ನು ಅಲ್ಲಿಯೇ ದೂರದಲ್ಲಿ ಬಿಟ್ಟು, ಸ್ವಲ್ಪ ಮುಂದೆ ಬಂದು ಒಂದು ಕಲ್ಲಿನಮೇಲೆ ಕುಳಿತ. ತನ್ನ ಹಿರಿಯ ಮಗನ ಕಡೆಗೆ ನೋಡಿ ಹೇಳಿದ:

" ನಿಂಗಾ ಆಕಳ್ನಷ್ಟು ಹಿಂಡ್ಕೊ ಲಗೂನs! ಹಾಲೊಂದsಟ ತಗೊಳ್ಳಿ ಮಾಸ್ತರಸಾಬರು! "

" ಈರಪ್ಪಾ, ಹಾಲ್ಗೀಲೇನೂ ಈಗ ಬೇಡ – ನಾ ಲಗೂನ ಹೋಗ್ಬೇಕು. " " ಹೋಗರಂತೇಳ್ರಿ ! . . . . ! ನೀವ್ಯಾನ ಮ್ಯಾಲಿಂದ ಮ್ಯಾಲ ದೊರಕ್ತೀರೆ ಇನ್ನ ? " ಜಗ್ಗಿದ ದನಿಯಲ್ಲಿ ಈರ ನುಡಿದ. ಹೋಗುವ ಹುಡುಗನ ಕಡೆಗೆ ಹೊರಳಿ—" ನಿಂಗಾ, ಚರಿಗೀ ತೊಳ್ದು ಬಿಸಲ್ಗಿಟ್ಟು ಆ ಮ್ಯಾಗ ಕಾಗರ ಬಿಡು ಅಂ!" ಎಂದು ಹೇಳಿ ನನ್ನ ಕಡೆಗೆ ಮುಖ ತಿರುಹಿದಾಗ, ಅವನ ಕಣ್ಣುಗಳು ನಸುಗೆಂಪಾಗಿದ್ದುವು. ಅವುಗಳಲ್ಲಿ ಸ್ವಲ್ಪ ನೀರೂಬಂದಂತೆ ತೋರಿತು. ನನ್ನ ಎದೆ ದಡದಡಿಸಿತು. " ಏನು ವಿಶೇಷ ? " ಎಂದೆ.

" ಏನಾನ ಇಲ್ಲ ರಾಯರs ! " ಎಂದು ನಗೆಯೊಂದನ್ನು ಬೀರಿ ಹೃದಯದ ನೋವನ್ನು ಅಡಗಿಸಿಡಲು ಈರ ಯತ್ನಿಸಿದ. ಸ್ವಲ್ಪ ಹೊತ್ತು ನೀರವ, ನಿಶ್ಶಬ್ದ– " ನೆನ್ನೆ ಗೌಡ್ರ ಹತ್ರ ನಿಮ್ಮನ್ನ ಹ್ಯಾಂಗ ಮಾತಾಡ್ಸೋದಂತ ಬಿಟ್ನೆ ರಾಯರs! – " ಎಂದು ಮಾತನ್ನು ಪೂರ್ಣಮಾಡಲು ಹವಣಿಸಿದ.

" ಹೌದು ; ನಾನೂ ಹಾಗೇ ತಿಳಕೊಂಡೆ ; ಅದಕ್ಕs ಈಗ ಬಂದೆ ! "

" ತಾವು ದೇವ್ರಂಗ ಇದ್ದೀರಿ ನೋಡ ನನ್ನೊಡ್ಯಾ ! "

" ಅಂದರೆ ಏನೋ ? "

" ನುಮ್ಮ ಯಾನ್ರೀ ಇಲ್ಲಂಕಾ ಬರಬೇಕಂದ್ರ . . . . ಮುನಿ-ಮುಟ್ಟಿ ಹ್ಯಾದ್ಯೂ ಮಾತಾಡುದಿಲ್ಲ ದ್ಯಾವ್ರೂ!"

ಅತ್ತಕಡೆಗೆ ನಿಂಗ ಕೂಗಿ ಕೇಳಿದ: " ಅಪ್ಪಾ ಅಲ್ಲೇ ತಗೊಂಡು ಬರಲೇನು ? " ಎಂದು. " ನನಗೆ ಹಾಲು ಬೇಡ " ಎಂದೆ. ಅವನು ನೊಂದುಕೊಂಡ; ಬಿಸಿಯುಸಿರೊಂದನ್ನು ಬಿಟ್ಟ. ಆ ಉಸುರಿಗೆ ನನ್ನ

ಹೃದಯ ಕರಗಿತೇನೋ ! ನನ್ನ ಹೊಟ್ಟೆಯಲ್ಲೂ ಕಲಕುವಂತಾಯಿತು. ಕೂಡಲೆ ನಾನಾಗಿಯೇ ಹೇಳಿದೆ– ' ಇಲ್ಲ; ಇಲ್ಲೇನೂ ಬೇಡ ಅಂದೆನಿಸ್ತೇ ! ಅಲ್ಲೇ ಹೋಗೋಣ ! " ಎಂದು ಎದ್ದೆ. ಅವನು ಸ್ವಲ್ಪ ಹಿಂಜರಿದ. ಆದರೂ ಕೆರವನ್ನು ಕಾಲಿಗೆ ಸಿಕ್ಕಿಸಿ-ಕೊಂಡು ನನ್ನ ಮುಂದೆ ನಡೆದ. ಒಂದು ಸಲ ಹಿಂದೆ ಹೊರಳಿ ನೋಡಿದೆ. ಹಳ್ಳದೊಳಗೆ ನೀರು ಜುಳುಜುಳು ಹರಿಯುತ್ತಿದ್ದಿತು. ಮೆಲುಗಾಳಿ ಸುಯ್ಯೆಂದು ಗಿಡಗಳ ಸಂದಿಯೊಳಗಿಂದ ಸುಳಿಯಿತು. ಸೂರ್ಯ ಸಾವಕಾಶ ಮೇಲಕ್ಕೇರುತ್ತಲಿದ್ದ. ಬಿಸಿಲಿಗೆ ಬೆದರಿ ಗಿಡಗಳು ತಮ್ಮ ನೆರಳನ್ನು ನೆರೆಯಲ್ಲಿ ಕರೆದುಕೊಳ್ಳುತ್ತಲಿವೆಯೋ ಎನ್ನುವಂತೆ, ನೆರಳುಗಳು ಗಿಡಗಳನ್ನು ಸಮೀಪಿಸುತ್ತಲಿವೆ. ಹುಲ್ಲುಗಾವಲದೊಳಗಿನ ಕಾಲುದಾರಿ.

" ಈರಪ್ಪಾ," ಎಂದೆ.

" ಏನ್ರ್ಯಪ್ರೂ ? "

" ನಿನ್ನ ಮನೆ ಎಲ್ಲಿ ? "

" ಅಲ್ಲಿ ; ದೂರದಲ್ಲಿ ಆ ಮೊರಡೀ ತುದೀಲಿ ! "

" ಅಷ್ಟು ದೂರ ? "

" ಹೌದು ರಾಯರs, ಇಲ್ಲಿ ಹಳ್ಳದ ನೆರೀಲಿ, ರಾತ್ರಿ ಕಾಡ-ಹಂದಿಗಳ ಕಾಟ ! "

" ರಾತ್ರಿ ಬಾಗಿಲಾ ಹಾಕಿಕೊಂಡ್ರಾತು! "

" ಅದ್ಯಾಸ ಮನೀನs ನನ್ನೊಡ್ಡಾ? ಗುಡ್ಸ್ಲು. ಬೇಕಾದ ಕಡಿಂದನೂ ಒಳಗ ಸೇರ್ರ್ತಾವ .... "

" ಮನೆಯಲ್ಲವೊ ? "

" ಅಲ್ಲ ; ರಾಯರs ಗುಡ್ಸ್ಲು. " ಎಂದು ಸ್ವಲ್ಪ ಸ್ತಬ್ಧನಿದ್ದ ಮತ್ತೆ ಹೇಳತೊಡಗಿದ :

" ಹಿಂದ್ಕ, ಮನೀನೂ ಇತ್ತು ಅಲ್ಲೇ ಭಾವೀಹತ್ರಾನs. ಮನೀ ಅಂದ್ರ ಕೆಸ್ರು ಕಲ್ಲಿ ಕಟ್ಟಿದ್ದಲ್ಲ. ಸುಮ್ನ ಸವಡು ಸಿಕ್ಕ್ಯಾಗ ನಾಕು ಕಲ್ಲೇರಿಸಿ, ಮ್ಯಾಲೆ ದಂಟು-ಗಳಾ ಹಾಕಿದ್ದಿವಿ; ನಾಕುದಿನಾ ಹಂದೀ ಕಾಟ ತಪ್ಪಿತ್ತೊ ಅನ್ನಿ. ಆದರ .... " ಎಂದು ಸುಮ್ಮನಾದ.

" ಆದರೇನು ! "

" ಕೇಳಬ್ಯಾಡ್ರಿ ದ್ಯಾವ್ರೇ .. " ಈರನ ದನಿಯಲ್ಲಿ ದುಃಖ ತುಂಬಿತ್ತು. ನಾನು ಯಾಕೆ ಕೇಳಿದೆನೋ ಎಂದೆನ್ನಿಸಿತಾದರೂ ಕುತೂಹಲ ಕೆರಳಿ " ಯಾಕೆ ? " ಎಂದು ಮೈಮರೆತವನಾಗಿಯೆ ಮತ್ತೆ ಅಂದೆ.

ಈರ ಸ್ವಲ್ಪ ಹೊತ್ತು ಸುಮ್ಮನಿದ್ದ. ಉಗುಳಿದ, ಕಣ್ಣನ್ನೊರಸಿಕೊಂಡನೇನೋ ! ಕಳವಳಬೆರೆತ ಕಂಠದಿಂದ ಹೇಳಹತ್ತಿದ:

" ಅದೊಂದು ಕಾಳರಾತ್ರಿ – ಆಗ .... ನರಿಯ ಕಾಟ .. ಭಾಳ; ಕಬ್ಬಿನ ಸುತ್ತ ತಿರುಗಿಬರಬೇಕಂತ ಹೋದ್ನಿರಿ ! ನಾಲ್ಕು ಮಾರು .... ಹೋಗಿದ್ನಿ ಇನ್ನೂ! ಕಲ್ಲುರುಳಿದ ಸಪ್ಪಳಾತು. ಓಡಿ ಬಂದು .... ಬಾಗಿಲ ಈಡು ತೆಗಿತಿದ್ನಿ .... ! ಒಳಗಿಂದ ಕಾಡಹಂದಿ .... ಬಂದು ಹಾಯ್ತು. ಅಯ್ಯೋ .... ಅಂತ ಅಲ್ಲೇ ನೆಲಕ್ಕ ಒರಗ್ದೆ .... ! ಸೊಲ್ಪ .. ತಡ್ದು ಒಳ್ಗ ಹೋಗಿ, ದೀಪಾ ಹೊತ್ಸಿದೆ .... ಹೋಗಿದ್ಲು ದ್ಯಾವ್ರೆ ! "

" ಏನೋ ಹಾಗಂದ್ರೆ ? "

" ಹೋಗಿದ್ಲು .. ದ್ಯಾವ್ರೇ .. ನೀಲಿ .... ತೀರ್ಕೊಂಡು ಹೋಗಿದ್ಲು .... !

" ಏನು ಹಂದಿ ಕೊಂದಿತ್ತೊ ? "

" ಇಲ್ಲ ದ್ಯಾವ್ರೂ, ಮೈಮ್ಯಾಲ ಕಲ್ಲುರುಳಿ .. "

ಈರ ಮೌನದಿಂದ ನಡೆಯಹತ್ತಿದ. ಅವನ ಕಣ್ಣೆದುರಿಗೆ ಅಂದಿನ ಚಿತ್ರ ಕಟ್ಟಿರಬೇಕು. ನನ್ನ ಮನಸ್ಸೂ ಬರಿಯದಾಗಿತ್ತು. ಮಾತಾಡುವುದಾಗಲಿಲ್ಲ. ಹಾಗೆಯೆ ವಿಚಾರವೊಂದು ತಲೆಯಲ್ಲಿ ಸುಳಿಯಿತು : ' ಮನುಷ್ಯ ಬಡವನಾಗಿರಬಹುದು. ಉಪವಾಸವೂ ಇರಬಹುದು. ಆದರೆ ಅದನ್ನೆಲ್ಲ ಮರೆಯಿಸುವಂತಹ ಮಡದಿಯ ಮುಖವೊಂದೆದುರಿಗೆ ಇದ್ದರೆ .. ಎಲ್ಲ ಉಪದ್ರವಗಳನ್ನೂ ನಗೆಮೊಗದಿಂದ ಎದುರಿಸಬಹುದಲ್ಲ ! .... '

PHOTO
ENLARGEMENT

16" by 20" Size ★ Rs. 7/- Only

12" by 18" Size ★ Rs. 6/- Only

HIGH CLASS WORK
EXECUTED BY
SPECIALIZED ARTISTS
Equipment Most Modern !
Entire Satisfaction Guaranteed.
Wanted agents to canvass for enlargements throughout Karnataka on pay or commission basis.
National Photo Art Studio,
Radha-Krishna Peth, HUBLI.

" ಈರಣ್ಣಾ, ನನಗ ಇದಾವದೂ ಗೊತ್ತಿಲ್ಲಲಾ ! "

" ನೀವು ಇನ್ನೂ ಈ ಊರಿಗೆ ಬಂದಿದ್ದಿಲ್ಲ ದ್ಯಾವ್ರು.... ! ಮಾತನಾಡುತ್ತಿರುವಂತೆಯೇ ಮುಂದೆ ಒಂದು ಗುಡಿಸಲನ್ನು ಕಂಡೆ. ಹಳೆಯ ಗುಡಿಸಿಲದು. ಬಿರಿಬಿರಿ ಬಿಸಿಲಲ್ಲಿ ನಿಂತಿದೆ. ' ನೀರು ನೆಳಲುಗಳಿದ್ದಲ್ಲಿ ಗುಡಿಸಿಲನ್ನು ಕಟ್ಟಬೇಕೆಂದರೆ ಅಲ್ಲಿ ಅಡವಿಯ ಪಶುಗಳ ಕಾಟ; ನಿರ್ಧನನಿಗೆ ನಿಸರ್ಗವೂ ಮುನಿಯಬೇಕೆ?' ಎಂದು ಮನದಲ್ಲಿ ಮರುಗಿದೆ.

ಈರ ಸ್ವಲ್ಪ ಮುಂದಕ್ಕೆ ಹೋಗಿ ಅಂಗಳ ಕಸಗುಡಿಸಿದ. ನಾನೂ ಹೋದೆ. "ಕೂಡ್ರಿ ರಾಯ್ರs, ಹೊಲ್ದಾಗ ಬೂವಿಂತಾಯೇ ಹಾಸ್ಗ" ಎಂದ ಸಂಕೋಚದಿಂದ. ಮರುಗಳಿಗೆಯಲ್ಲಿ ಹಾಲು ತಂದುಕೊಟ್ಟ ಕುಡಿಯಲೆಂದು. ಹಾಗೇ ಕೇಳಿದೆ: 'ಕಬ್ಬು ಒಣಗತಾ ಇದೆಯಲ್ಲಾ!'

" ಆದs ರಾಯರs ! ಬಾಂವಿಗೆ ನೀರs ಇಲ್ಲ. ಕೊಳಚಿ ತುಂಬಿಕೊಂಡೈತಿ ಎಂದೋ ಹಿರೇರ ಕಾಲ್ದ ತಗ್ದಾರು. ತೆಗ್ಸಿಕೊಡ್ರೀ ಅಂದ್ರ ಮುಂದಮುಂದಕ್ಕ ಹಾಕ್ತs ಬಂದ್ರು. ನಾನs ನೋಡ ಲಾರದಕ್ಕ ದನಾಕಾಯುವರ್ನ ಕರ್ದು—ಗೌಡ್ನ ಹತ್ರ ಕೇಳಿ ನಾಕು ಕಾಸ ತರ್ತೀನಿ, ಚುನಮುರೀ ತಿನ್ನೋಣ ' ಅಂತ ಹೇಳಿ, ಕೊಳಚೀ ತಗೀಲಿಕ್ಕೆ ಕರಕೊಂಡು ಬಂದೆ. 'ಇನ್ನೊಂದುದಿನಾ ತೆಗದ್ರ ತೀರ್ತಿತ್ತೆ ನೆನ್ನಿ ಸಂತಿ; ಊರಾಗ ಹ್ವಾದೆ. ಹಾಂಗs ಗೌಡನ ಕಡೆ ಹಾದು, ನಾಲ್ಕುಹುಡುಗರ್ನ ಕರಕೊಂಡ ಕೊಳಚಿ ತೆಗೆದ್ನ್ಯ; ಅವರಿಗೆ ಚುನಮುರೀತರ್ತೀನಂತ ಹೇಳ್ದಿನಿ. 'ನಾಲ್ಕು ದುಡ್ಡ ಕೊಡ್ತೀರಿ ?' ಅಂತ ಕೇಳ್ದಿನಿ. ' ಕೇಳದs ಯಾಕ ತಗ್ದಿ ? ನಡಿ ತ್ವಾಟಾಬಿಟ್ಟು, ' ಅಂತ ಬಾಯಿಬಿಟ್ಟರು. ಯಾಕೋ ಸಿಟ್ಟಿಗೆ ಬಂದರು.—ಅಂದ್ನೊಂಡು ಸಂಜೀತಂಕಾ ಕೂತೆ; ಸಂಜೀನಾಗೂ ಹಾಂಗs ಅಂದ್ರು. ಆಗ ನೀವೂ ಬಂದಿದ್ರೆಲಾ ! "

* * *

ಈರನ ತೋಟಕ್ಕೆ ಹೋಗಿ ಬಂದಾಗಿನಿಂದಲೂ ಏನು ಮಾಡುವು ದಕ್ಕೂ ಬೇಸರು. ಕಾಲಕಳೆಯುವುದೇ ಕಷ್ಟವೆನಿಸಿತು. ಹೇಗೋ ಹೊತ್ತುಹಾಕುತ್ತಿದ್ದೆ. ಇಂದೇನೋ ಅತ್ತಿತ್ತ ಸ್ವಲ್ಪ ಅಡ್ಡಾಡಿ ದೀಪ ಹೊತ್ತಿಸುವ ಹೊತ್ತಿಗೇನೇ ಗೌಡರ ಮನೆಗೆ ಹೋದೆ. ಅವರ ತಯ್ಯಾರಿ ಹಳಬ— ' ಆ ದಿವ್ಸ ಮುಂಜೇಲಿ ಕರಿಬಸ್ತ್ಯಾ, ತೋಟಾ ಮಾಡಿಕೊಂಡ ಇರತೇನಂತ ನಿಮ್ಮ ಹತ್ರ ಹೇಳಿ ಹೋಗ ಲಿಲ್ಲs? ಅಂದ ಸಂಜೀನಾಗs ಈರಗ ಹೇಳಿಕಳ್ಸಿದೆ ನೀವು ಹೇಳ್ದಾಂಗ. ಇಂದ ಸಂಜಿನಾಗಂದ್ರ ಅತ್ತ ಹೋಗಿದ್ನಿ. ಕಬ್ಬು ಒಣಗಿದ್ದು ನೋಡಿ ಸಿಟ್ಟುಬೆಂಕೀ ಆದ್ನಿ ಅನ್ರಿ. ಎತ್ತು-ಕೋಣ, ಹಗ್ಗ-ಹಂಗಡ ಅಲ್ಲಲ್ಲೇ ಬಿದ್ದಿದ್ದವು. ಎಲ್ಲಾರೂ ಗುಡ್ಲ ಕಡೇನ ಇದಾರೇನೋ ನೂ.. ಮಕ್ಕಳಂತ ಕೂಗಿದೆ. ಯಾರೂ ಬರಲಿಲ್ಲ. ಗುಡ್ಲಿನ ಕಡೇನs ಹ್ವಾದೆ; ಮನ್ಸ್ಯಾರ ಸುಳುವಿರಲಿಲ್ಲ. ಗುಡ್ಲ ಹೊಕ್ಕು ನೋಡ್ದೆ ಗಡಿಗಿ ಮಡಕಿ ಹಾಂಗs ಇದ್ವು ! ಸುತ್ತಲೂ ಸುತ್ತಾಡಿ ನೋಡಿದೆ ಒಂದು ಪಿಳ್ಳೀನೂ ನೋಡಲಿಕ್ಕೆ ಸಿಗಲಿಲ್ಲ " ಎಂದು ಏನೇನೋ ಹೇಳ್ತಿದ್ದ.

ಕೇಳುತ್ತಿದ್ದಂತೆಯೇ ಕಳವಳವಾಯಿತು ನನಗೆ. ದೇಹದೊಳ ಗಿನ ಶಕ್ತಿ ಸೋರಿಹೋದಂತಾಯ್ತು. ಅಲ್ಲೇ ಇರುವ ಕಂಬಕ್ಕೆ ಆತುಕೊಂಡು ನಿಂತೆ— ಹೊರಗಿನ ಪ್ರಪಂಚವು ಶೂನ್ಯವಾದಂತಿದ್ದೆ. ಹೃದಯಾಂತರಾಳದಲ್ಲಿ ' ಈರ ತೋಟಬಿಟ್ಟು ಯಾಕೆ ಹೋದ ? ' ಎಂಬುದೆಲ್ಲಾ ಗಾಢತರವಾಗಿ ಚಿತ್ರಿತವಾಗಿತು. ಅವನ ಬಡತನದ ಬವಣೆಯನ್ನು ಅರಿತುಕೊಳ್ಳಲು ಹವಣಿಸಿದೆ. ನಾನು ಅವನಿಗೆ ಸ್ವಲ್ಪವಾದರೂ ಸಹಾಯನೀಡಬಹುದೆಂದು ಬಗೆದೆ. ಅವನು ಹೀಗೆ ಒಮ್ಮಲೇ ಹೋದಾನೆಂದು ಕನಸಿನಲ್ಲಿಯೂ ಭಾವಿಸಿರಲಿಲ್ಲ ನಾನು. ಮತ್ತೊಮ್ಮೆ ಬರುವೆನೆಂದಿದ್ದನಲ್ಲ ! ಯಾತಕ್ಕೆ ಬರುವುದೆಂದೆನಿಸಿ ತೇನೋ ; ಎನಿಸಿರಲೂ ಬಹುದು! ಗೌಡರ ನೆರೆಯಲ್ಲಿದ್ದವರ ಉಪಕಾರವೂ ಬೇಡವೆಂದೆನಿಸಿತೇನೊ ! ಹೌದು ; ದುಡ್ಡುಳ್ಳವರ ಉಪಕಾರವೇ ಅಂತಹುದು! ಅವನದು ನಂಬುಗೆಯ ಸ್ವಭಾವ, ಅವನ ಬಗೆಗೆ ಗೌಡರು ವ್ಯತಿರಿಕ್ತವಾಗಿ ನಡೆದುಕೊಂಡರು. ಅದರಿಂದ ಹೀಗೆ ಬಿಟ್ಟುಹೋದ.... ಅದೆಲ್ಲಿ ?

ಈ ಸಂಗತಿಯು ಮನವನ್ನು ನೆನೆಯಿಸಲು ನೀರನ್ನು ಹನಿಸುತ್ತ ಲಿತ್ತು. ಹೆಚ್ಚಾದ ನೀರು ಬಸಿದು ಹೊರಕ್ಕೆ ಬರುವುದೇನೊ ಎನ್ನು ವಂತೆ ನಯನಗಳಿಂದ ನೀರು ಒಸರುತ್ತಿದ್ದಿತು. ಮೆಲ್ಲನೆ ಕಣ್ಣನ್ನು ಒರಸಿಕೊಂಡು ನೋಡಿದೆ. ಅದಾವಾಗಲೋ ಮನೆಯಮುಂದೆ ಬಂದಿದ್ದೆ. ಬಾಗಿಲಲ್ಲಿ ಲಲಿತೆ ನಗುಮೊಗದಿಂದ ನಿಂತಿದ್ದಳು. ಅವಳಾ ನಗೆ ನನ್ನ ಮನದ ಉದ್ವಿಗ್ನತೆಗೆ ತೆರೆಯಾಗಿ ಪರಿಣಮಿಸಿತು. ಮತ್ತೊಮ್ಮೆ ಈರನ ಬದುಕಿನ ದುರಂತ ನೆನಪಾದಾಗ, ನನ್ನ ಮನುಷ್ಯತ್ವಕ್ಕೆ ನಾನೇ ನಕ್ಕುಬಿಟ್ಟೆ.

(೪೦೬ ನೆಯ ಪುಟದಿಂದ ಮುಂದುವರಿದಿದೆ)

ಈ ಶತಮಾನದ ಮೂರನೆಯ ದಶಕದಲ್ಲಿ ಒಂದರಹಿಂದೊಂದು ಬಾಲ್ಕನ್ ರಾಷ್ಟ್ರಗಳ ರೈತರು, ತಮ್ಮ ಸರಕಾರದ ಅಧಿಕಾರವನ್ನು ಕಳೆದುಕೊಂಡು, ಸರ್ವಾಧಿಕಾರಿಗಳ ಕೈಗೆ ಅಧಿಕಾರ ಸೂತ್ರಗಳನ್ನು ಕೊಟ್ಟರು—ಅವರು ಮತ್ತೆ ನಾಝೀದಾಳಿಯ ಹೆದರಿಕೆಯಿಂದ ಕೈಬಿಟ್ಟರು. ಆದರೆ ರಾಷ್ಟ್ರೀಯ-ಸ್ವದೇಶಾಭಿಮಾನಿ-ಸರ್ವಾಧಿ ಕಾರಿಗಳ ಆಡಳಿತದಲ್ಲಿ, ತುರ್ಕಸ್ಥಾನದ ರಾಜಕೀಯ ಬೆಳೆವಣಿಗೆಯು ಬೇರೆ ರೂಪವನ್ನು ತಳೆದಿದೆ. ಮೂಲಭೂತ ರಾಜಕೀಯ ಸಮಸ್ಯೆ ಗಳನ್ನು ಬಿಡಿಸಲು ರೈತನ ರಾಜ್ಯನಿಷ್ಠತೆಯನ್ನು ಪಡೆಯಲು ಅದು ಹೆಚ್ಚು ಕಾರ್ಯಕಾರಿಯಾಗಿದೆಯೆಂದು ತಿಳಿದರೆ ತಪ್ಪೇನೂ ಇಲ್ಲ.

ಬುದ್ಧಿಯೊ? .... ಭಾವನೆಯೊ?

(ಒರ್ವ ಸೂರ್ಯೋಪಾಸಕನಿಂದ)

★

ಭಾರತೀಯರ ಬಾಳಿಗೆ ಕೈಗನ್ನಡಿಯಂತಿದ್ದ ಗೀತೆಯಲ್ಲಿ, ಭಾವನೆಗೆ ತಲೆವಾಗಲು ಎಲ್ಲಿಯೂ ಹೇಳಿಲ್ಲ. ಪಾಪಪುಣ್ಯಗಳ ತೊಡಕಿನೊಳಗಿಂದ ಬಿಡಿಸಿಕೊಂಡು ಸತ್ಯವನ್ನು ಗುರಿಯಾಗಿಟ್ಟುಕೊಂಡು ಹೊರಟವರಿಗೆ, ಬುದ್ಧಿಯೊಂದೇ ಸರಿದಾರಿಯನ್ನು ತೋರಿಸಬಲ್ಲುದೆಂದು ಗೀತೆಯು ಸಾರಿ ಸಾರಿ ಹೇಳುತ್ತದೆ!

★

ಕಳೆದ ಸಂಚಿಕೆಯಲ್ಲಿ ಶ್ರೀಮಾನ್ ಕಾಯ್ಕಿಣಿ ಗೌರೀಶರು ದೇಶಭಕ್ತ ಬುರ್ಲಿಯವರ ಲೇಖನಕ್ಕೆ ಕೊಟ್ಟ ಉತ್ತರವು ಬಹಳ ಸಮರ್ಪಕವಾಗಿದೆ. ಅದರಲ್ಲಿ ಶ್ರೀಮಾನ್ ಬುರ್ಲಿಯವರ ಪರಸ್ಪರ ವಿರೋಧಿಯಾದ ವಿಧಾನಗಳನ್ನು ಸ್ಪಷ್ಟಪಡಿಸಿದ್ದಾರೆ; ಸುಳ್ಳನ್ನು ಬಯಲಿಗೆಳೆದಿದ್ದಾರೆ; ಜಳ್ಳನ್ನು ತೂರಿದ್ದಾರೆ. ಆದರೂ ಒಂದು ವಿಚಾರದಲ್ಲಿ ಇನ್ನೂ ನಾಲ್ಕು ಮಾತುಗಳನ್ನು ವಿವರಿಸುವುದು ಅವಶ್ಯವೆನಿಸುತ್ತದೆ: ಶ್ರೀಮಾನ್ ಬುರ್ಲಿಯವರು, ಭಾವನಾ-ಪ್ರಧಾನತೆಯೇ ಆರ್ಯಸಂಸ್ಕೃತಿಯ ಜೀವಾಳವೆಂಬಂತೆ ಮಾಡಿದ ವಿಚಾರಪ್ರದರ್ಶನವು ತೀರ ಹುರುಳಿಲ್ಲದುದೆಂದು ತೋರಿಸುವುದೇ ಈ ಟಿಪ್ಪಣಿಯ ಗುರಿಯಾಗಿದೆ.

ಶ್ರೀ. ಬುರ್ಲಿಯವರ ಈ ವಿಧಾನವನ್ನು ಶ್ರೀ. ಗೌರೀಶರು ಎತ್ತಿ ಖಂಡಿಸಿದ್ದುಂಟು. ಆದರೆ ಈಗ ಶ್ರೀ. ಬುರ್ಲಿಯವರು, ಯಾವ ಶ್ರೀಕೃಷ್ಣಪರಮಾತ್ಮನು ಭಾವನಾಪ್ರಧಾನನೆಂದು ಭಾವಿಸಿರುವರೊ, ಆ ಶ್ರೀಕೃಷ್ಣನೇ ಭಗವದ್ಗೀತೆಯಲ್ಲಿ ಏನು ಹೇಳಿರುವನೆಂಬುದನ್ನು ಒಂದಿಷ್ಟು ಶ್ರೀಯುತರ ಗಮನಕ್ಕೆ ತರಬೇಕೆಂದು ಹಾರಯಿಸುತ್ತೇನೆ.

ಗೀತೆಯಲ್ಲಿ ಜ್ಞಾನಯೋಗಕ್ಕೆ ಒಂದು ಮಹತ್ವದ ಸ್ಥಾನವಿದೆ. '**ಜ್ಞಾನ**' ಎಂಬುದು ಬುದ್ಧಿಯ ಫಲ. ಆದುದರಿಂದ ಗೀತೆಯಲ್ಲಿ ಬುದ್ಧಿಯನ್ನು ತಿರಸ್ಕರಿಸುವುದು ಎಂದೂ ಸಾಧ್ಯವಿಲ್ಲ. ಶ್ರೀಕೃಷ್ಣನು ಅರ್ಜುನನಿಗೆ '**ಸ್ಥಿರಬುದ್ಧಿಃ**' '**ಅಸಂಮೂಢಃ**' ಆಗಲು ಉಪದೇಶಿಸುತ್ತಾನೆ. ಭಾವನಾಪ್ರಧಾನರು ಸ್ಥಿರಬುದ್ಧಿಯವರಾಗಿರುವುದು ಸಾಧ್ಯವೇ ಇಲ್ಲ. ಭಾವನೆಯ ಆವೇಶದಿಂದ ಮೈತುಂಬಿದವರು ಅಸಂಮೂಢರಾಗಿರುವುದೂ ಶಕ್ಯವಿಲ್ಲ. ಭಾವನೆಗಳಿಂದ ಸಂಭ್ರಾಂತರಾಗಿ, ಆವೇಗದಿಂದ — ಉದ್ವೇಗದಿಂದ – ಕಾರ್ಯಪ್ರವೃತ್ತರಾದವರ ಕರ್ಮಗಳು ಹಿಡಿತದ, ತೂಕದ ಕೆಲಸಗಳಾಗಿರುವುದು ಎಂದಾದರೂ ಸಂಭವನೀಯವಾಗಿದೆಯೆ?

ಗೀತೆಯು ಮಾನವನಿಗೆ '**ಜ್ಞಾನಿ**' ಯಾಗು....ಎಂದು **ಬೋಧಿ**ಸುತ್ತಲಿದೆ. ಜ್ಞಾನಿಗೆ ಶ್ರೀಕೃಷ್ಣನು '**ಬುದ್ಧಿಮಾನ್**' ಎಂದು ಹೇಳಿದ್ದಾನೆ. "ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನ ಕರ್ಮಕೃತ್" (೪.೧೮). ಜ್ಞಾನಿಯೆಂದರೆ ಬುದ್ಧಿವಂತನು. ಯೋಗಯುಕ್ತನು, ಅವನೇ ಎಲ್ಲ ಕರ್ಮಗಳನ್ನೂ ಮಾಡಲರ್ಹನು.

'ಬುದ್ಧಿವಂತರಲ್ಲಿರುವ ಬುದ್ಧಿಯೆಂದರೇ ತಾನು (ಬುದ್ಧಿಃ ಬುದ್ಧಿಮತಾಂ ಅಸ್ಮಿ ೭.೧೦)' ಎಂದು ಶ್ರೀಕೃಷ್ಣನು ಹೇಳಿದ್ದಾನೆ. ಆದುದರಿಂದ '**ಬುದ್ಧಿ**' ಎಂಬುದು ದೇವಾಂಶ, ಅದು ಹೀನವಲ್ಲ ಎಂಬ ಮಾತನ್ನು ಇನ್ನುಮೇಲಾದರೂ ಶ್ರೀ. ಬುರ್ಲಿಯವರು ಒಪ್ಪುವರೆ? ಅಥವಾ ಶ್ರೀಕೃಷ್ಣನ ಮಾತೂ ಅವರಿಗೆ ಸಮ್ಮತವಿಲ್ಲವೊ?— ಎಂಬುದನ್ನು ದಯವಿಟ್ಟು ಸ್ಪಷ್ಟಪಡಿಸಬೇಕಾಗಿ ಬಿನ್ನಹ.

'ನನ್ನ ಶ್ರೇಷ್ಠರಾದ ಭಕ್ತರಿಗೆ ತಾನು 'ಬುದ್ಧಿಯೋಗವನ್ನು' ದಯಪಾಲಿಸುತ್ತೇನೆ' ....ಎಂದು ಶ್ರೀ ಕೃಷ್ಣನು ಆಶ್ವಾಸನವನ್ನಿತ್ತಿದ್ದಾನೆ. (೧೦.೧೦) **ಭಾವನಾವಶತೆಯನ್ನಲ್ಲ; ಬುದ್ಧಿಯೋಗವನ್ನು!** (ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಂ ದದಾಮಿ ಬುದ್ಧಿಯೋಗಂ ತಂ ಯೇನ ಮಾಂ ಉಪಯಾಂತಿ ತೇ); 'ಈ ಬುದ್ಧಿಯೋಗದ ಬಲದಿಂದಲೇ ಈ ಜನರು ತನ್ನನ್ನು ಹೊಂದುತ್ತಾರೆ (ಮೋಕ್ಷ ಪಡೆಯುತ್ತಾರೆ)' ಎಂದು ಶ್ರೀಕೃಷ್ಣನು ಉಸುರಿದ್ದಾನೆ.

'ಬುದ್ಧ್ಯಾ ಯುಕ್ತೋ ಯಯಾ ಪಾರ್ಥ ಕರ್ಮಬಂಧಂ ಪ್ರಹಾಸ್ಯಸಿ' (೨.೩೯) ಬುದ್ಧಿಯುಕ್ತನಾದರೆ ಹೇ ಅರ್ಜುನನೇ ನೀನು ಕರ್ಮದ ಬಲೆಯಲ್ಲಿ ಸಿಲುಕದೆ ಪಾರಾಗುವಿ; ಇಂತಹ ಯುಕ್ತಿಯನ್ನು ಬುದ್ಧಿಯೇ ನಿನಗೆ ಹೇಳಬಲ್ಲುದು' ಈ ಯುಕ್ತಿಗೇ '**ಬುದ್ಧಿಯೋಗ**' ಎಂಬ ಹೆಸರುಂಟು. ಈ 'ಬುದ್ಧಿಯೋಗ'ವು ಗೀತೆಯಲ್ಲಿದೆ. **ಯಾವ ಪಾಶ್ಚಿಮಾತ್ಯರಿಂದಲೂ ಇದು ಬಂದುದಲ್ಲ. ಆದುದರಿಂದ 'ಬುದ್ಧಿ'ಯ ಯೋಗವು ಆರ್ಯಸಂಸ್ಕೃತಿಯ**

ಅತಿಗೆಲ್ಲಾಗಿದೆಯೆಂಬುದನ್ನು ಶ್ರೀ. ಬುರ್ಲಿಯವರು ಇನ್ನು ಮೇಲಾದರೂ ಒಪ್ಪುವರೆ? '**ಬುದ್ಧಿಗೆ ಶರಣುಹೋಗು,** (ಬುದ್ಧೌ ಶರಣಮನ್ವಿಚ್ಛ)' ಎಂದು ಶ್ರೀ ಕೃಷ್ಣನ ಕಟ್ಟಪ್ಪಣೆಯಿದೆ. ಭಾವನೆಗೆ ತಲೆವಾಗಲು ಒಂದೆಡೆಯಲ್ಲಿಯೂ ಹೇಳಿಲ್ಲ. ಪಾಪ-ಪುಣ್ಯಗಳ ತೊಡಕಿನೊಳಗಿಂದ ಬಿಡಿಸಿಕೊಂಡು, ನಿತ್ಯಾನಂದದ ಹೆದ್ದಾರಿಯಲ್ಲಿ ಸತ್ಯವನ್ನು ಗುರಿಯಾಗಿಟ್ಟುಕೊಂಡು ಹೊರಟವರಿಗೆ, ಬುದ್ಧಿಯೊಂದೇ ದಾರಿಯನ್ನು ತೋರಿಸಬಲ್ಲುದು. ಬುದ್ಧಿಯೇ ಪಾಪ-ಪುಣ್ಯದ ದ್ವಂದ್ವದಿಂದ, ಕರ್ಮಬಂಧನದಿಂದ ದೂರವಿರಿಸಬಲ್ಲುದು (ಬುದ್ಧಿಯುಕ್ತೋ ಜಹಾತೀಹ ಉಭೇ ಸುಕೃತ ದುಷ್ಕೃತೇ) ಎಂದು ಗೀತೆಯು ನಿಃಸಂದಿಗ್ಧವಾಗಿ ಹೇಳುತ್ತದೆ. (೨.೪೯,೫೦).

ಭಾವನಾವಶತೆ— **ವಿಕಾರವಶತೆಯಿಂದ ಬಗೆ ಕದಡಿದಂತಾಗಿ** ಬುದ್ಧಿಯು ಮಂದವಾಗುತ್ತದೆ. ಬುದ್ಧಿಗೆ ಅಧಿಷ್ಠಾನವಿಲ್ಲದವರ ಜೀವನದಲ್ಲಿ ಯುಕ್ತಕರ್ಮಕ್ಕೆ ಪ್ರಾಶಸ್ತ್ಯವೇ ಇರುವುದಿಲ್ಲ ಹಿಡಿತ, ತೂಕ, ಸಮತ್ವ ಎಂದರೆ ತಲೆ ತಿರುಗುವ ಅತಿವಾದಿಗಳ ಜೀವನದಲ್ಲಿ ಭಾವನೆಗೇ ಪಟ್ಟ. ಇಂತಹರು ಭಾವನೆಗಳ ಕೈಗೊಂಬೆಗಳಾಗಿ ಅವು ಕುಣಿಸಿದಂತೆ ಕುಣಿಯುವರು. ಇಂತಹ ಭಾವನೆಗಳ '**ಮೋಹಕಲಿಲ**'ದೊಳಗಿಂದ ಮುಕ್ತರಾಗಬೇಕಾಗಿದ್ದರೆ ಬುದ್ಧಿಯೇ ಮುಖ್ಯವಾದ ಆಧಾರವೆಂದು ಗೀತೆಯ ಮತ. (ಯದಾ ತೇ ಮೋಹಕಲಿಲಂ ಬುದ್ಧಿವ್ಯತಿತರಿಷ್ಯತಿ; ತದಾ ಗಂತಾಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯ ಚ (೨-೫೨)

'**ಭಾವನೆ**' ಎಂಬ ಮಾತು ಗೀತೆಯಲ್ಲಿ ಒಂದೆಡೆಗೆ (೨.೬೬) ಬಂದಿದೆ. ಅಯುಕ್ತರಾದವರಿಗೆ ಬುದ್ಧಿಯೂ ಇಲ್ಲ ಭಾವನೆಯೂ ಇಲ್ಲವೆಂದು ಅಲ್ಲಿ ವಿವರಿಸಿದ್ದಾಗಿದೆ. (ನಾಸ್ತಿ ಬುದ್ಧಿಃ ಅಯುಕ್ತಸ್ಯ; ನಚಾಯುಕ್ತಸ್ಯ ಭಾವನಾ; ನಚಾಭಾವಯತಃ ಶಾಂತಿಃ; ಅಶಾಂತಸ್ಯ ಕುತಃ ಸುಖಂ?) ಭಾವನೆಯು ಇಲ್ಲವಾದರೆ ಆ ಮನುಷ್ಯನಿಗೆ ಶಾಂತಿಯೂ ಇಲ್ಲವೆಂದು ಸ್ಪಷ್ಟಪಡಿಸಿದ್ದಾಗಿದೆ. ಆತ್ಮಜ್ಞಾನದಿಂದ ಸ್ಥಿರಬುದ್ಧಿಯು ಪ್ರಾಪ್ತವಾಗುವುದು. ಬುದ್ಧಿಯು ಸ್ಥಿರವಾದವನೇ 'ಸ್ಥಿತ-ಪ್ರಜ್ಞನು'! ಸ್ಥಿತಪ್ರಜ್ಞನಿಗೇ '**ಭಾವನೆ**'ಯು ಇರುವುದು, ಎಂದು ಗೀತೆ ಹೇಳುವಲ್ಲಿ '**ಭಾವನೆ**' ಎಂಬ ಮಾತಿನಲ್ಲಿ ಅಡಕವಾಗಿರುವ ಭಾವವು ಬುದ್ಧಿಗೆ ಎಳ್ಳಷ್ಟೂ ವಿರೋಧಕವಾಗಿಲ್ಲವೆಂದು ಹೇಳಬಹುದಾಗಿದೆ. ಇಷ್ಟೇ ಅಲ್ಲ: ಸ್ಥಿರ-ಬುದ್ಧಿಯುಂಟಾದರೆ '**ಭಾವ**' ಸ್ಥಿತಿಯು ದೊರೆಯುವುದೆಂದೂ ಗೀತೆಯು ಸೂಚಿಸುತ್ತದೆ. ಆದುದರಿಂದಲೆ ಕೊನೆಗೆ ೧೮ನೆಯ ಅಧ್ಯಾಯದಲ್ಲಿ 'ಬುದ್ಧಿಯೋಗಂ ಉಪಾಶ್ರಿತ್ಯ ಮಚ್ಚಿತ್ತಃ ಸತತಂ ಭವ (೧೮-೫೭)' ಬುದ್ಧಿಯೋಗವನ್ನು ಆಶ್ರಯಿಸಿ ನನ್ನಲ್ಲಿ ನಿನ್ನ ಚಿತ್ತವನ್ನಿಡು, ಅದರಿಂದ ನಿನ್ನ ದುಃಖಗಳೆಲ್ಲ ದೂರವಾಗಿ ಶಾಂತಿ-ಸೌಖ್ಯವನ್ನು ಪಡೆಯುವೆ—ಎಂದೂ ಹೇಳಿದ್ದುಂಟು.

ಬುದ್ಧಿಯ ಸ್ಥಾನ-ಮಾನಗಳನ್ನು ಕುರಿತು ಗೀತೆಯಲ್ಲಿ ಇನ್ನೂ ಒಂದು ಸ್ಪಷ್ಟವಾದ ಉಲ್ಲೇಖವಿದೆ: 'ಇಂದ್ರಿಯಾಣಿ ಪರಾಣ್ಯಾಹುಃ ಇಂದ್ರಿಯೇಭ್ಯಃ ಪರಂ ಮನಃ; ಮನಸಸ್ತು ಪರಾ ಬುದ್ಧಿಃ; ಯೋ ಬುದ್ಧೇಃ ಪರತಸ್ತು ಸಃ. ವಿಷಯ ವಸ್ತುವಿಗಿಂತ ಇಂದ್ರಿಯಗಳು ಹೆಚ್ಚಿನವಿರಬಹುದು; ಆದರೆ ಇಂದ್ರಿಯಗಳಿಂದಲೂ ಮನಸ್ಸು ಹಿರಿದಾದುದು. ಮನಸ್ಸಿಗಿಂತಲೂ ಬುದ್ಧಿಯು ಮಿಗಿಲಾದುದು. ಕೊನೆಗೆ ಬುದ್ಧಿಗಿಂತ ಮೇಲಿನದೆಂದರೆ ಆ ಪರಮಾತ್ಮವೊಂದೇ. ಆದುದರಿಂದ ಪರಮಾತ್ಮನನ್ನು ಬಿಟ್ಟರೆ ಬುದ್ಧಿಗಿಂತ ಶ್ರೇಷ್ಠವಾದುದೇ ಇಲ್ಲವೆಂದು ಗೀತೆಯ ನಿಶ್ಚಿತ ಮತ.

ಎಂದಬಳಿಕ 'ಬುದ್ಧಿಯು ಹೀನ; ಬುದ್ಧಿಯಿಂದ ಮನುಷ್ಯನು ಅಧೋಗತಿಗೆ ಹೋಗುವನು' ಎಂದು ಹೇಳುವುದೇ 'ಆರ್ಯ-ಸಂಸ್ಕೃತಿ'ಗೆ ತೀರ ವಿರೋಧವಾದುದು, ವಿಪರೀತವಾದುದೆಂದು ಹೇಳಬೇಕಾಗುತ್ತದೆ. ಆಡ್ಯಾಮ್ ಮತ್ತು ಈವ್ ಕಥೆಯಲ್ಲಿ ಬುದ್ಧಿಯ ಫಲವಾಗಿ ಅವರು ಕೀಳ್ಮೆಗೆ ಇಳಿದರೆಂದು ಇರುವ ದಂತ-ಕಥೆಯನ್ನು ನಂಬುವುದಾದರೆ, ಬುದ್ಧಿಯ ತಿರಸ್ಕಾರವು ಭರತ-ಖಂಡಕ್ಕೆ ಹೊರಗಿನಿಂದ ಬಂದುದೆಂದು ಊಹಿಸಬಹುದಾಗಿದೆ.

ಜ್ಞಾನಕ್ಕೆ ಸೂರ್ಯನ ಉಪಮೆಯನ್ನು ವೈದಿಕ ಋಷಿಗಳು ಕೊಟ್ಟಿದ್ದಾರೆ. ಸೂರ್ಯೋಪಾಸನೆಗೆ, ಗಾಯತ್ರೀಮಂತ್ರದ ಜಪಕ್ಕೆ ಪ್ರಾಧಾನ್ಯವಿರುವ ಭಾರತೀಯ ಸಂಸ್ಕೃತಿಯು 'ಬುದ್ಧಿ'ಯನ್ನು ಎಂದಾದರೂ ತಿರಸ್ಕರಿಸುವುದು ಸಾಧ್ಯವೆ?

ಆ ಜ್ಞಾನಸೂರ್ಯನು ನಮ್ಮ ಹೃದಯಾಕಾಶದಲ್ಲಿ ತೊಳಗಿ ಬೆಳಗಲೆಂದು ಬಿಟ್ಟುಬಿಡದೆ ಪ್ರಾರ್ಥಿಸುವುದು ಕರ್ತವ್ಯವೆಂದು ಬೋಧಿಸುವ ಆರ್ಯಪರಂಪರೆಯನ್ನು ತೊರೆದುದರ ದುಷ್ಪರಿಣಾಮಗಳನ್ನೇ ನಾವು ಇಂದು ಭಾರತೀಯರು ಅನುಭವಿಸುತ್ತಲಿದ್ದೇವೆ. ಬುದ್ಧಿಯನ್ನು ಹಳಿಯುವುದೆಂದರೆ, ಜ್ಞಾನಸೂರ್ಯನನ್ನು ತಿರಸ್ಕರಿಸುವುದು. ಬೆಳಕನ್ನು ಬಿಟ್ಟು ಕತ್ತಲೆಯನ್ನು ಬಯಸುವುದು. ಬುದ್ಧಿಯು ಸಮತ್ವವನ್ನು ಕಲಿಸುತ್ತದೆ. ಸಮತ್ವವೆಂದರೇ ಯೋಗ; (ಸಮತ್ವಂ ಯೋಗ ಉಚ್ಯತೇ), ಸಮತ್ವ ಎಂದರೆ ತೂಕ, ಹದ; ಹಿಡಿತ. ಮನೋಭಾವನೆಗಳ ಆವೇಶದಲ್ಲಿ ಸಮತ್ವವೆಲ್ಲಿ? ತೂಕವೆಲ್ಲಿ! 'ಹಲಲಃ ಡುರ್' ಎಂಬೀ ಬಗೆಯ ಅರ್ಭಟೆಯ ಕರ್ಮವೊಂದೇ ಸಾಧ್ಯ.

ಇಂದಿನ ನಮ್ಮ ಸಮಾಜದ ಉದ್ಧಾರಕ್ಕೆ, ದೇಶದ ಏಳ್ಗೆಗೆ 'ಹಲಲ ಡುರ್' ಜಾತಿಯ ಕರ್ಮಗಳೇ ಬೇಕಾಗಿದ್ದರೆ, ಹಾಗೆ ಸ್ಪಷ್ಟವಾಗಿ ಒಪ್ಪಿಕೊಳ್ಳೋಣ; ಆದರೆ ಸುಮ್ಮನೆ ಬುದ್ಧಿಗೆ ಬೈದು, 'ಬುದ್ಧಿಯು ಆರ್ಯಸಂಸ್ಕೃತಿಯಲಿಲ್ಲ' ಎಂದು ಮುಂತಾಗಿ ಅಪ-ಸಿದ್ಧಾಂತಗಳನ್ನು ಮಾಡುವುದು ಮಾತ್ರ ಯುಕ್ತವಾಗಲಾರದು.

ನವಯುಗದ ★ ★ ಚಿತ್ರಪಟಗಳು

★

(ಚಲಚ್ಚಿತ್ರ ವಿಮರ್ಶೆ)

ಶ್ರೀ. ಎನ್. ಕೆ. ಕುಲಕರ್ಣಿ, ಎಂ. ಎ. ಬಿ. ಟಿ., ಧಾರವಾಡ

ಚಿತ್ರಪಟ ಪ್ರಪಂಚದಲ್ಲಿ ಮಹಾರಾಷ್ಟ್ರವು ಮುಂದುವರಿಯುತ್ತಿದೆಯೆಂದು ಹೆಮ್ಮೆಯಿದ್ದವರು, ಇಂದಿನ ನವಯುಗದ ಚಿತ್ರಗಳನ್ನು ಕಂಡು ನಿಜವಾಗಿಯೂ ವಿಷಾದಪಡಬೇಕು. ವಾಸ್ತವ ಜೀವನದಿಂದ ಆರಂಭವಾಗಿ, ಅವಾಸ್ತವದ ಶಿಖರವನ್ನು ಮುಟ್ಟಿ, ಪ್ರಣಯದಲ್ಲಿಯೇ ಕೊನೆಗಾಣುವ ಈ ಚಿತ್ರಗಳು ಜನತೆಗೆ ಸಾರುವ ಸಂದೇಶವೇನು ?

★

'ಬ್ರಹ್ಮಚಾರಿ'ಯ ಚಿತ್ರಪಟವನ್ನು ನೋಡಿ ಮರುಳಾಗದ ಜನರೇ ಇಲ್ಲ. '**ಯಮುನಾಜಳಿ**' ಎಂಬ ಸಂಗೀತವು ವಿರಹಿಗಳಿಗೊಂದು ಔಷಧ (ವಿಸು ಸಂತಾಪಕಾರಿಯಾದ ಸೂಜಿ ಮದ್ದೋ ?) ಆಗಿದೆ. ಅಂತೂ ಈ ಚಿತ್ರಪಟದಿಂದ ಸಮಾಜದ ಮಾನಸಸರೋವರದಲ್ಲಿ ಸಂತೋಷದ ತರಂಗಮಾಲೆಯನ್ನೆಬ್ಬಿಸಿದ ಈ '**ಹಂಸ**' ಚಿತ್ರಪಟವೇ ಮುಂದೆ '**ನವಯುಗ**' ಚಿತ್ರಪಟವಾಯಿತು. 'ಬ್ರಹ್ಮಚಾರಿ'ಯು ಜನಸಮುದಾಯದ ಪರಮಾದರಕ್ಕೆ ಪಾತ್ರವಾದ ಶ್ರೇಯಸ್ಸಿನ ಬಹುಭಾಗವು, ದಿಗ್ದರ್ಶಕರಾದ ಮಾಸ್ಟರ್ ವಿನಾಯಕ ಅವರಿಗೂ, ಕಥಾಲೇಖಕರಾದ ಆಚಾರ್ಯ ಅತ್ರೆ ಅವರಿಗೂ ಸಲ್ಲತಕ್ಕುದೆಂದರೆ ಒಪ್ಪುವ ಮಾತಾಗಿದೆ. 'ಬಜರಂಗಬಲಿ'ಯಿಂದ ಪ್ರೇರಣೆಹೊಂದಿದ ಬ್ರಹ್ಮಚಾರಿಯು, ತನ್ನ ಆದರ್ಶಸಾಧನೆಯ ಗರುಡಿಯಲ್ಲಿ ಸ್ತ್ರೀಯರಿಗೆ ಪ್ರವೇಶ ದೊರೆಯದಂತೆ ಅಂಗಸಾಧನೆಗೆ ಆರಂಭಿಸುವನು. ಅವನು ಎಷ್ಟೆಷ್ಟು ಗಂಭೀರವಾಗಿ ಬಜರಂಗಬಲಿಯ ಪ್ರಾರ್ಥನೆಯನ್ನು ಮಾಡುವನೋ ಅಷ್ಟಷ್ಟು ಆಳವಾಗಿ ಶ್ರೋತೃವೃಂದವು ಹಾಸ್ಯಲಹರಿಯಲ್ಲಿ ಮುಳುಗುತ್ತದೆ. ಬ್ರಹ್ಮಚಾರಿಯು ವಿನಾಯಕರಿಗೆ ಒಪ್ಪುವ ಪಾತ್ರ; ಅವರಿಗಾಗಿಯೇ ಹೇಳಿಮಾಡಿಸಿದಂತಿದೆ. ಈ ಬಗೆಯ ಅಣಕುಆವೇಶ (mock heroism) ವನ್ನು ಪ್ರದರ್ಶಿಸುವಲ್ಲಿ ಶ್ರೀ. ವಿನಾಯಕರು ಸುರಿತ ಕೈ. '**ಧರ್ಮವೀರ**' ದಲ್ಲಿಯೂ '**ಪ್ರೇಮವೀರ**' ದಲ್ಲಿಯೂ ಇದೇ ಬಗೆಯ ಸಮರ್ಪಕವಾದ ಪಾತ್ರವನ್ನು ಶ್ರೀ. ವಿನಾಯಕರು ವಹಿಸಿದ್ದಾರೆ.

ಶ್ರೀ. ವಿನಾಯಕರ ವಿನೋದದ ಅಭಿನಯಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿಕೊಡುವಂತಹ ಶ್ರೀ. ಅತ್ರೆ ಅವರ ಹಾಸ್ಯಸರಣಿ; ಕೇಳುವುದೇನು ? ಜನರನ್ನು ನಗಿಸಿದ್ದೇ ನಗಿಸಿದ್ದು. ಒಮ್ಮೆ ಜನರನ್ನು ನಗಿಸಿದ್ದೇ ಬಂತು—ಎಂಬ ಹುಚ್ಚು ಮೈಯಲ್ಲಿ ತುಂಬಿತೆಂದರೆ ತೀರಿತು; ಶ್ರೀ. ಅತ್ರೆಯವರ ಕಲ್ಪನಾವಿಲಾಸವು ಗಗನಕ್ಕೇ ನೆಗೆದು, ವಾಸ್ತವಲೋಕವನ್ನೇ ಮರೆತುಬಿಡುತ್ತದೆ. ತಾಳಕ್ಕೆ ಹೆಜ್ಜೆಹಾಕುವ ನರ್ತಕನಂತೆ, ಅತ್ರೆಯವರ ಪಾತ್ರಸೃಷ್ಟಿಯನ್ನು ನಿರ್ವಹಿಸಿದ ವಿನಾಯಕರೂ ಅವರೊಡನೆ ಗಗನಕ್ಕೆ ನೆಗೆಯುತ್ತಾರೆ. '**ಬ್ರಹ್ಮಚಾರಿ**' ಯಲ್ಲಿ ಬ್ರಹ್ಮಚಾರಿಯು ಖಾಸಗಿ ಶಿಕ್ಷಕನಾಗಿ, ತೋಟದಮಾಲಿ ಚಹದಮಾಣಿಯಾಗಿ ಮಾಡುವ ಕೆಲಸ, '**ಪ್ರೇಮವೀರ**' ದಲ್ಲಿ ಕಾಲೇಜ 'ಗ್ಯಾದರಿಂಗಿ' ನಲ್ಲಿ ಅಭಿನಯಿಸಿ ತೋರಿಸುವ ನಟನ ಕೆಲಸ, '**ಅರ್ಧಾಂಗಿ**' ಯಲ್ಲಿ ಮಿಸೆಸ್ (?) ಅರುಂಧತಿಯ ಶ್ವಾನೋಪಾದಿ ದಾಸ್ಯವನ್ನು ವಹಿಸಿ—ಅಲ್ಲಿಯೂ ಬಟ್ಲರನಾಗಿ—ಮಾಡುವ ಕೆಲಸ, '**ಲಪಂಡಾವ**' ದಲ್ಲಿ ಪ್ರೇಮವುಢಾರಿಯಾಗಿ--ಮೋಟಾರ್ ಸಾರಥಿಯಾಗಿದ್ದರೂ ಪ್ರೇಮರಥದ ಸಾರಥಿಯಾಗಿ ಮಾಡಿತೋರಿಸುವ ಅತಿಮಾನುಷಕಾರ್ಯ, ಇವೆಲ್ಲವೂ ಸಾಕ್ಷಿಯಾಗಿವೆ ಮೇಲಿನ ವಿಧಾನಕ್ಕೆ.

ಒಮ್ಮೊಮ್ಮೆ ನಿಜವಾಗಿಯೂ ಶ್ರೀ. ಅತ್ರೆಯವರ ಹಾಸ್ಯವು ಅಪರೂಪವಾದ ಮಾರ್ಮಿಕತೆಯಿಂದ ಕೂಡಿರುತ್ತದೆ. ಅರ್ಧಾಂಗಿಯೊಳಗಿನ '**ಅರ್ಧಾಂಗಿ**'ಯಾದ ಸಾವಿತ್ರಿಯ ಪಾತ್ರ, 'ಝುಟಪಟ ವಿದ್ಯಾಲಯ'ದ ಶಿಕ್ಷಕನ ಪಾತ್ರ, 'ಲಪಂಡಾವ' ದೊಳಗಿನ ಗೀತಾಭಕ್ತನಾದ ಸುಲಭಾ-ಸರಲಾ ಅವರ ತಂದೆಯ ಪಾತ್ರ, 'ಅರ್ಧಾಂಗಿ' ಯಲ್ಲಿ ಪ್ರೇಮದ ತತ್ತ್ವವನ್ನಭ್ಯಸಿಸುವ ಆ ಪುಸ್ತಕಪಿಶಾಚಿ ವಶಿಷ್ಠ—ಇತ್ಯಾದಿ ಎಲ್ಲ ಪಾತ್ರಗಳಲ್ಲಿಯೂ ಮನುಷ್ಯಸ್ವಭಾವಾವಲೋಕನದ ಒಂದು ಹೊಸ ದೃಷ್ಟಿಯಿದೆ. ಅತ್ರೆಯವರ ಹಾಸ್ಯಚಮತ್ಕಾರವಂತೂ ಅಪೂರ್ವವಾದುದು. ಮಾತಿನಲ್ಲಿ, ಕೃತಿಯಲ್ಲಿ, ಸನ್ನಿವೇಶದಲ್ಲಿ, ಪಾತ್ರನಿರೂಪಣೆಯಲ್ಲಿ ತುಂಬಾ ಹಾಸ್ಯದ ಸುರಿಮಳೆಯನ್ನು ಸುರಿಯಿಸುವ ಇಂದ್ರಜಾಲಶಕ್ತಿ ಅವರಲ್ಲಿದೆ.

ಶ್ರೀ. ಅತ್ರೆ ಅವರ ಹಾಸ್ಯಪೂರ್ಣ ಪಾತ್ರನಿರ್ಮಿತಿಗಳಲ್ಲಿಯೂ ವೈವಿಧ್ಯವನ್ನು ಕಾಣುತ್ತೇವೆ. ವಿನಾಯಕರು ವಹಿಸುವ ಪಾತ್ರದ ಹಾಸ್ಯವು ಒಂದು ಮಟ್ಟದ್ದು, ಶ್ರೀಯುತ ದಾಮುಅಣ್ಣಾ ಮಾಲವಣಕರ್ ಅವರು ವಹಿಸುವ ಪಾತ್ರದ ಹಾಸ್ಯವು ಮತ್ತೊಂದು

ಮುಟ್ಟಿದ್ದು. ಯಾವುದು ಹೆಚ್ಚು ಯಾವದು ಕಡಿಮೆ ಹೇಳಲಿಕ್ಕೆ ಬರುವಂತಿಲ್ಲ ಒಮ್ಮೊಮ್ಮೆ. ಆಯಾ ನಟರಿಗೆ ತಕ್ಕಂತಹ ಪಾತ್ರ-ಸೃಷ್ಟಿಯನ್ನು ಮಾಡುವಂತಹ ಶಕ್ತಿ ಶ್ರೀ. ಅತ್ರೆ ಅವರಲ್ಲಿದೆ.

ಆದರೆ ಕಥಾನಕವನ್ನು ನಾವು ಉದ್ದಕ್ಕೆ ನೋಡಿದರೆ, ಪೂರ್ವಾರ್ಧದಲ್ಲಿ ಚಾಚೂ ತಪ್ಪದಂತೆ ಮನಸ್ಸನ್ನು ಸೆರೆಹಿಡಿಯುವಂತೆ ನಿರೂಪಿತವಾಗಿರುವ ಅತ್ರೆಯವರ ವಾಸ್ತವಜೀವನದ ಕಥಾವಸ್ತುವು, ಉತ್ತರಾರ್ಧದಲ್ಲಿ ಗಂಧರ್ವನಗರಕ್ಕೂ ನಿಲುಕದಂತಹ ಅವಾಸ್ತವತೆಗೆ ಇಳಿದು ಬಿಡುತ್ತದೆ. '**ಅರ್ಧಾಂಗಿ**'ಯ ಪೂರ್ವಾರ್ಧದಲ್ಲಿ ಇಡಿಯಾಗಿ ವಾಸ್ತವಿಕವಾಗಿ ಹಾಸ್ಯದಿಂದ ತುಂಬಿತುಳುಕುತ್ತಿರುವ ಕಥಾಸರಣಿ, ಉತ್ತರಾರ್ಧದಲ್ಲಿ ಅರುಂಧತಿಯ ಮೋಹಪಾಶದಲ್ಲಿ ಮರ್ಯಾದೆಯನ್ನು ಮಾರಿಕೊಂಡು ದಾಸಾನುದಾಸನಾದ ಸತ್ಯವಂತನ ಅವಸ್ಥೆಯನ್ನು ನೋಡಿದರೆ—ಯಾವಲೋಕದ ವ್ಯಕ್ತಿ ಯಾವ ಲೋಕಕ್ಕೆ ಹೋಯಿತು!—ಎಂಬ ಪ್ರಶ್ನೆ ಎದುರಿಗೆ ಬಂದು ನಿಲ್ಲುತ್ತದೆ. ಪ್ರೇಮವೀರದಲ್ಲಿ ಈ ಕಳ್ಳ ಪ್ರೇಮವೀರನು ಒಮ್ಮೆ ಪತ್ರಿಕೋದ್ಯಮಿಯಾಗಿ, ಒಮ್ಮೆ ಪೆಚ್ಚ ವೈದ್ಯರಾಜನಾಗಿ, ಮತ್ತೊಮ್ಮೆ ಜ್ಯೋತಿಷಿಯಂತಾಗಿ ತನ್ನ ಪ್ರೇಯಸಿಯ ಮನೆಯನ್ನು ಪ್ರವೇಶಿಸಿ, ಅವಳ ತಂದೆಯ ಕಣ್ಣು ಕಟ್ಟಿ ತನ್ನವಳೊಡನೆ ಒಲುಮೆಯ ಕಣ್ಣುಮುಚ್ಚಾಲೆಯಾಟವನ್ನಾರಂಭಿಸುವನು. 'ಬ್ರಹ್ಮಚಾರಿ'ಯಲ್ಲಿ 'ಬ್ರಹ್ಮಚಾರೀ ಸುಖಾಮೇವಾ'—ದ ಅಂಗಡಿಕಾರನಾಗಿ ಅಂಡಲೆಯುತ್ತ, ಮುಂದೆ ಆ ನೂಕುಬಂಗಡಿಯನ್ನು ಅಲ್ಲಿಯೇ ನೂಕಿ, ತನ್ನ ನಲವಿನ ರಾಣಿಯೊಂದಿಗೆ ಪಲಾಯನ ಹೇಳಿಸುವನು ಕಾರಿನಲ್ಲಿ. ಹೀಗೆ ಉತ್ತಮ ಕಥಾಸರಣಿ ಹುಚ್ಚು ಕಥನದ ಅವಾಸ್ತವತೆಗಿಳಿಯುವುದು ಯಾರ ತಪ್ಪು? ಇಂತಹ ನೀರಸ ಅಭಿರುಚಿಯುಳ್ಳ ಮಹಾರಾಷ್ಟ್ರದ ಜನಸಮುದಾಯದ ತಪ್ಪೋ? ಆ ಅಭಿರುಚಿಯನ್ನು ಪೂರೈಸುವ ಸಾಹಿತ್ಯಕಾಮಧೇನುವಾದ ಶ್ರೀಮಾನ್ ಅತ್ರೆಯವರ ತಪ್ಪೋ? ಚಿತ್ರಪಟವೆಂದು ಶೃಂಗಾರವೇದಿಕೆಯನ್ನು ಸೀರೆ ಬಿಚ್ಚಿ ಜಲಕೇಳಿಯಾಡಿಸುವುದೆ? ಹ್ಯಾಗಾದರೂ ಜನರು ನಕ್ಕು ನಾಲ್ಕಾಣೆ ಒಗೆದರೆ ಸಾಕೆಂದು ದಿಗ್ದರ್ಶಕರೂ ಲೇಖಕರೂ ಈ ರುಚಿಗೆ ಇಳಿಯುವುದೆ?

ಚಿತ್ರಪಟವೆಂದಾಕ್ಷಣಕ್ಕೆ ಅದಕ್ಕೆ ಸಾಹಿತ್ಯಕೃತಿಯ ಲಕ್ಷಣಗಳು ಅನ್ವಯಿಸುವುದೇ ಇಲ್ಲವೆ? ಇಲ್ಲವಾದರೆ ಉತ್ತಮ ಲೇಖಕರ ಉತ್ಕೃಷ್ಟ ಕಾದಂಬರಿಗಳನ್ನು ಕೂಡ ಅವಾಸ್ತವತೆಯ ಮೊಟ್ಟೆಯನ್ನಾಗಿ ಮಾಡಿಡುವುದೆ!? ಇತ್ತೀಚೆಗೆ ಶ್ರೀ. ಅತ್ರೆಯವರು 'ನವಯುಗ'ವನ್ನು ಬಿಟ್ಟು ಸ್ವತಂತ್ರ ಚಿತ್ರಪಟಗಳ ಪ್ರವರ್ತಕರಾಗಿದ್ದಾರೆ. ಆದುದರಿಂದ ನವಯುಗದವರು ಇತ್ತೀಚೆಗಿನ ಒಂದೆರಡು ಚಿತ್ರಪಟಗಳಿಗಾಗಿ ಶ್ರೀ. **ಖಾಂಡೇಕರ** ಅವರನ್ನು ಮೊರೆಹೋಗಬೇಕಾಗಿದೆ. '**ಅಮೃತ**' ಮತ್ತು '**ಸಂಗಮ**' ಇವು ನವಯುಗ ಚಿತ್ರಪಟದ ನವೀನಚಿತ್ರಗಳು. ಶ್ರೀ. ಖಾಂಡೇಕರ ಅವರು ಆಧುನಿಕ ಮರಾಠೀ ಸಾಹಿತ್ಯದಲ್ಲಿ ಹಿರಿಗಿಲಾದ ಕಾದಂಬರಿಕಾರರು; ದೊಡ್ಡ ಸಣ್ಣ ಕತೆಗಾರರು. ಅವರ ಕಥಾಸರಣಿ ಶ್ರೀ. ಅತ್ರೆ ಅವರಷ್ಟು ಹಗುರಾದುದಲ್ಲ, ಗಂಭೀರವಾದುದು. ಅವರ ಸಾಹಿತ್ಯದಲ್ಲಿ ವಾಸ್ತವತೆಗಿಂತ ತಾತ್ತ್ವಿಕತೆಯೆ ಬಹಳ; ಹಾಸ್ಯಕ್ಕಿಂತ ಕರುಣಾರಸವೇ ವಿಶೇಷ; ವಾಚ್ಯಶೈಲಿಗಿಂತ ಕಾವ್ಯಶೈಲಿಯೆ ಹೆಚ್ಚು.

ಇಲ್ಲಿಯ ವರೆಗೆ ಶ್ರೀ. ಅತ್ರೆಯವರ ಹಾಸ್ಯದ ಕೈವಾಡದಿಂದ ಕುಣಿದ ಮಾಸ್ಟರ್ ವಿನಾಯಕರವರ ನಾಯಕಪಾತ್ರವು, ಇತ್ತೀಚೆಗಿನ ಚಿತ್ರಪಟಗಳಲ್ಲಿ ಶ್ರೀ. ಖಾಂಡೇಕರರ ನಾಯಕನ ವೇಷಧರಿಸಿ, ವಿದೂಷಕನ ಕೈಯಲ್ಲಿ ರಣಖಡ್ಗವನ್ನು ಕೊಟ್ಟಂತಾಗಿದೆ. ಈ ಮೂಲಕವೇ '**ಸಂಗಮ**' **ಚಿತ್ರಪಟದಲ್ಲಿ ಮುಕುಂದನ** ಪಾತ್ರ ವಹಿಸಿದ ವಿನಾಯಕರ ಅಭಿನಯವು, ಮೂಲ ಕಥಾಲೇಖಕರ ಪಾತ್ರಸೃಷ್ಟಿಯ ಶಕ್ತಿಯ ಬಗ್ಗೆ ಪ್ರಶ್ನೆಯನ್ನು ತರುವಂತಾಗಿದೆ. ಸಂಗಮದಲ್ಲಿಯ ಈ ಮುಕುಂದನು ವಿನೋದಿಯೆನ್ನಬೇಕೊ, ವೀರಾಗ್ರಣಿಯೆನ್ನಬೇಕೊ, ಪ್ರಣಯದ ಮೊದಲನೆಯ ಪಾಠ ತಿಳಿಯದ ಶುಂಭವ್ಯಕ್ತಿಯೆನ್ನಬೇಕೊ, ರೈತರ ಕೈವಾರಿಯಾದ ಗಂಭೀರವ್ಯಕ್ತಿಯೆನ್ನಬೇಕೊ—ತಿಳಿಯದಾಗಿದೆ. ಮೂಲ ಕಥಾಲೇಖಕರ ದೃಷ್ಟಿ ಮುಕುಂದನ ಪಾತ್ರವು ಹಾಸ್ಯದ ಮೂರ್ತಿಯೆಂದು ಎಳ್ಳಷ್ಟೂ ಇದ್ದಿರಲಾರದು. ಆದರೆ ಹಾಸ್ಯವನ್ನು ಬಿಟ್ಟರೆ ವಿನಾಯಕರಿಗೆ ಊರುಗೋಲೇ ಕಳಚಿಹೋದ ಹಾಗೆ! ಆದುದರಿಂದ ಆರಂಭದಲ್ಲಿ ರೇಲ್ವೆಪ್ರಯಾಣದ ಅವಸರದಲ್ಲಿ ಸ್ತ್ರೀಯರ ಗಾಡಿಯನ್ನೇರಿ, ಕುಂದೆಯ ಪರಿಚಯವನ್ನು ಮಾಡಿಕೊಂಡು, ಕ್ಷಣಾರ್ಧದಲ್ಲಿ ಸಾವಿರ ದಿನದ ಸಲುಗೆಯಿಂದ ಹರಟೆಗೆ ಆರಂಭಿಸುವರು. ಈ ವಿನೋದಸರಣಿ—ಅವಾಸ್ತವದ ಮೊಟ್ಟೆಯೆ ಆಗಿರಲಿ—ರೈತರ ಹುರಿಯಾಳಾಗಿ ಜಮೀನ್‌ದಾರನ ಮುಂದೆ ಆವೇಶಪೂರ್ಣವಾದ ಅಭಿನಯದಿಂದ ಮಾತನಾಡುವಾಗ ಎತ್ತೋ ಮಾಯವಾಗಿ ಬಿಡುತ್ತದೆ. ವಿನಾಯಕರ ಪಾತ್ರದಲ್ಲಿಯ ಈ ಎರಡು ವಿಷಮ ಸ್ಥಾಯಿಭಾವಗಳ ಸಂಗಮವೇ ಈ '**ಸಂಗಮ**' ವಾಗಿದೆ. 'ಮನುಷ್ಯನೆಂದ ಮೇಲೆ ಎಲ್ಲಬಗೆಯ ಸ್ಥಾಯಿಭಾವಗಳೂ ಅವನಲ್ಲಿ ಮನೆಮಾಡಿರುವುವು' ಎಂದು ಬಗೆದರೂ, ಒಂದೊಂದು ಸ್ಥಾಯಿಭಾವಕ್ಕಾಗಿ ನಿರ್ಮಿತವಾಗಿರುವ ಒಂದೊಂದು ವಿಶಿಷ್ಟ ವ್ಯಕ್ತಿ ಪಾತ್ರದಲ್ಲಿ, ಹೀಗೆ ಮತ್ತೊಂದು ಸ್ಥಾಯಿಭಾವವು ಬೆರೆತರೆ, ಉಪ್ಪುಹಚ್ಚಿಕೊಂಡು ಪೆಪ್ಪರಮಿಂಟು ತಿಂದಂತಾಗುತ್ತದೆ. ಹೀಗಾಗಿ ರಸೋತ್ಪತ್ತಿಯ ಹದವು ಕೆಟ್ಟುಹೋಗುತ್ತದೆ. ಕಥಾವಸ್ತುವಿನ ದೃಷ್ಟಿಯಿಂದಲೂ ಚಿತ್ರಪಟವು ಬಗೆ ಹಿಡಿಯುವಂತಾಗಿಲ್ಲ. ಕುಂದೆ-ಮುಕುಂದರ ಪ್ರಣಯದಲ್ಲಿ ಸಂಶಯಭೂತದ ಸುಳಿದಾಟದಿಂದ ಬೆರೆತ ವಿರಾಗವು ಮುಂದೆ ಸರಾಗವಾಗಿ ಪರಿಣಮಿಸುವುದು. ಇನ್ನು, ಈ ಸಂಗಮದಲ್ಲಿ ಬರುವ ನಾಟ್ಯಪ್ರದರ್ಶನದ ಪ್ರಯುಕ್ತತೆಯೇನು? ಶಾಂತೆಗೂ ಜಮೀನ್‌ದಾರನಿಗೂ ಇದ್ದ ಸಂಬಂಧವೇನು? ರೈತರ ಪ್ರಶ್ನೆಯು ಕಥಾವಸ್ತುವಿಗೆ ಎಷ್ಟರಮಟ್ಟಿಗೆ ಹೊಂದಿಕೊಂಡಿದೆ? ಅವರ ಸಮಸ್ಯೆಯ ಉತ್ತರ

ವೇನು! ಶಾಂತೆಯ ಪಾತ್ರದ ಯುಕ್ತತೆಯಾದರೂ ಎಷ್ಟುಮಟ್ಟಿಗಿದೆ? ಪುಂಡೋಪಂತನಂತಹ ಸಂಪಾದಕನು ಹುಡುಕಿದರೂ ಸಿಕ್ಕಬಹುದೆ? ಇರಲಿ, ಶ್ರೀ. **ದಾಮು ಅಣ್ಣಾ** ಅವರು ವಹಿಸಿರುವ ಈ ವಿನೋದಪಾತ್ರವು ಕೇವಲ ವಿನೋದದಮಟ್ಟಿಗಾದರೂ ಉಳಿದಿದೆ. ಮುಕುಂದನ ಪಾತ್ರದಂತೆ ಈ ಪಾತ್ರದ ಭಟ್ಟಿಕೆಟ್ಟಿಲ್ಲ. ತನ್ನ 'ಡಿಪ್ಲೊಮಸಿ' ಮತ್ತು 'ಟ್ರೇಡ್ ಸಿಕ್ರೆಟ್'ಗಳಿಂದ ಜನರಲ್ಲಿ ತಿಳಿಯಾದ ನಗೆಯ ಝರಿಯನ್ನು ಹರಿಯಿಸುತ್ತಾನೆ ಪುಂಡೋಪಂತ.

ಆದರೆ ಚಿತ್ರಪಟದ ದಿಗ್ದರ್ಶಕರು ಮೂಲದ ಕಥಾ ಸರಣಿಯನ್ನು ಈ ಪರಿ ಗಾಡಕ್ಕೆ ಹಿಡಿದರೆ ಅವಸ್ಥೆಯೇನು? ಜನರಿಗೆ ಯಾವುದು ಬೇಕೋ ಅದನ್ನು ಚಿತ್ರಪಟದಲ್ಲಿ ಪೂರಯಿಸುವ **ಕಾಮಧೇನು**ಗಳಾಗಿ ಈ ದಿಗ್ದರ್ಶಕರು ಪ್ರವರ್ತಿಸತೊಡಗಿದರೆ, ಕಲೆಯಿಂದ ಜನತೆಯಲ್ಲಿ ರಸಿಕರುಚಿಯು ಹೇಗೆ ಕುಡಿಯೊಡೆಯಬೇಕು? ಸಾಹಿತ್ಯಕೃತಿಯು ಜೀವನಕ್ಕೆ ಹೊರತಾಗಿರಬಾರದು; ಜೀವನದಿಂದ ನೂರು-ಯೋಜನ ದೂರದಲ್ಲಿರಬಾರದು. ಚಿತ್ರಪಟವೇ ಆಗಲಿ ನಾಟಕವೇ ಆಗಲಿ, ಅದು ಸಾಮಾಜಿಕವಾಗಿದ್ದರೆ ವಾಸ್ತವತೆಯ ಒಪ್ಪ ಅದಕ್ಕೆ ಬೇಕು. ದುಃಸಾಧ್ಯ ಸಂಭಾವ್ಯಗಳನ್ನು ಸಾಧ್ಯಮಾಡಲಿಕ್ಕೆ ಹೊರಟರೆ, ಜನಜೀವನಕ್ಕೆ ಶರಣುಹೊಡೆದು ನಿಲ್ಲಬೇಕಾಗುವುದು.

ಚಿತ್ರಪಟ ಪ್ರಪಂಚದಲ್ಲಿ ಮಹಾರಾಷ್ಟ್ರ ಮುಂದುವರಿಯುತ್ತಿದೆಯೆಂಬ ಹೆಮ್ಮೆಯಿದ್ದವರಿಗೆ ಇದೊಂದು ವಿಷಾದದ ಸಂಗತಿ. ವಾಸ್ತವಜೀವನದಿಂದ ಆರಂಭವಾಗಿ, ಅವಾಸ್ತವದ ಶಿಖರವನ್ನು ಮುಟ್ಟಿ, ಪ್ರಣಯದಲ್ಲಿಯೆ ಕೊನೆಗಾಣುವ ಈ ಚಿತ್ರಪಟಗಳು ಜನಸಾಮಾನ್ಯರಿಗೆ ಬೀರುವ ಜೀವನದ ಸಂದೇಶವೇನು? ಕಲೆಯು ಜನಸಾಮಾನ್ಯರನ್ನು ತಿದ್ದಬೇಕು—ತನ್ನ ಅಮೃತ ಸತ್ಯವಾಣಿಯಿಂದ. ತದ್ವಿಪರೀತವಾಗಿ ಜನಸಾಮಾನ್ಯರಿಗಾಗಿ ಕಲೆಯನ್ನು ಮಾರುವುದು ಕಲಾಭಿಮಾನಿಗಳಿಗೊಂದು ಕಲಂಕ. ಕೇವಲ ಒಂದು ಹಾಸ್ಯದಿಂದ ಒಂದು ಶೃಂಗಾರದಿಂದ ಜನತೆಯು ಮರುಳಾಗುವುದೆಂದರಿತು, ಕಲಾದೇವತೆಯ ಕೊರಳನ್ನೇ ಕತ್ತರಿಸಿದಂತೆ ಮಾಡಬಾರದು. ಮುಂದುವರಿಯುತ್ತಿರುವ ಒಂದು ಪ್ರಾಂತದ ಪ್ರಗತಿಯು ಇಂತಹ ಚಿತ್ರಪಟಗಳಿಂದಲೂ ನಿರ್ಣಯಿಸಲ್ಪಡುವ ಪ್ರಸಂಗ ಬಂದರೆ, ಅದನ್ನು ನಾವು ಪ್ರಗತಿಯೆಂದು ಹೇಗೆ ಕರೆಯೋಣ!

ಸದ್ಯಕ್ಕೆ ಹಿಂದುಸ್ಥಾನದಲ್ಲಿ ಹೊರಡುವ ಚಿತ್ರಪಟಗಳಲ್ಲಿ, ಬಹುಮಟ್ಟಿಗೆ ಸಂಸ್ಕೃತಿಯ ಬೆಳವಣಿಗೆಗಾಗಿ, ಸಮಾಜಹಿತದ ದೃಷ್ಟಿಯಿಂದ ಆದರ್ಶಕಲೆಯನ್ನು ಗುರಿಯಿಟ್ಟುಕೊಂಡು ಮುಂದಡಿಯಿಡುತ್ತಿರುವ ಒಂದೇ ಒಂದು ಚಿತ್ರಪಟಮಂಡಲವೆಂದರೆ 'ನ್ಯೂ-ಥಿಯೇಟರ್ಸ್' ಎನ್ನಬಹುದು. ಆ ನ್ಯೂ ಥಿಯೇಟರಿನ '**ಲಗನ್**' ಎತ್ತ? ನವಯುಗದ '**ಲಗ್ನ ಪಹಾವೆ ಕರೂನ**' ಎತ್ತ? ಅತ್ರೆಯವರು ತಮ್ಮ ಪ್ರಾಚೀನಕೃತಿಗಳನ್ನೆಲ್ಲ ಚಿತ್ರಪಟಕ್ಕೆ ಇಳಿಸತೊಡಗಿದ್ದಾರೆ ಇತ್ತೀಚೆಗೆ. '**ಪಾಯಾಚೀ ದಾಸೀ**' ಎಂಬ ಸ್ವತಂತ್ರ ಚಿತ್ರಪಟವೂ ಇದಕ್ಕೆ ಇನ್ನೊಂದು ದೃಷ್ಟಾಂತ. ಇಂದಿನ, ನವಯುಗದ ಸಮಾಜವು '**ಪಾಯಾಚೀದಾಸಿ**'ಯ ಕಾಲವನ್ನು ವಿಹಾರಿ ರಜಿಸ್ಟರ್ ವಿವಾಹ, ಘಟಸ್ಫೋಟಗಳವರೆಗೆ ಮುಂದುವರಿದಿದೆಯೆಂಬುದನ್ನು ಶ್ರೀ. ಅತ್ರೆಯವರು ಅರಿಯರೆ? ಸಮಾಜದ ಕನ್ನಡಿಯಲ್ಲಿ ಸಮಾಜದ ಪ್ರತಿಬಿಂಬವೇ ಬೇಡವೆ! ನಮ್ಮ ಮುಖವನ್ನು ನೋಡಿಕೊಳ್ಳಲು ಕನ್ನಡಿ ತೆಗೆದುಕೊಂಡಾಗ, ಅದರಲ್ಲಿ ಡಾರ್ವಿನ್ನನ ಕಾಲದ ನಮ್ಮ ಮುಖವು ಪ್ರತಿಬಿಂಬಿತವಾದರೆ, ನಮ್ಮದೇ ಮುಖವೆಂದು ನಂಬುವ ಬಗೆ ಹೇಗೆ? ನಂತರ ಚಿತ್ರಪಟಗಳನ್ನು ಬಿಟ್ಟರೆ, ಸಾಮಾಜಿಕ ದೃಷ್ಟಿಯಿಂದ ಇಲ್ಲಿಯವರೆಗೆ ಹೊರಡಿಸಿದ '**ಪ್ರಭಾತ**'ದವರ '**ಕುಂಕು**' '**ಮಾಣೂಸ**' '**ಶೇಜಾರಿ**' ಚಿತ್ರಪಟಗಳು ಕೆಲಮಟ್ಟಿಗಾದರೂ ಸಮಾಜಕ್ಕೆ ಮಾರ್ಗದರ್ಶಕವಾಗಿ ನಾಟುವಂತಿವೆಯೆನ್ನಬಹುದು. 'ಕುಂಕು' ಚಿತ್ರಪಟದಲ್ಲಿ ಚಿತ್ರಿತವಾದ ಸಮಾಜರೂಢಿಯು ಕೊಂಚ ಪುರಾತನದ್ದೆನಿಸಿದರೂ 'ನೀರೆ' ಯಂತಹ ಸೊಸೆಯ ಪ್ರತಿಭಟನೆಯಿಂದ ಅದಕ್ಕೊಂದು ಹೊಸ ಬಣ್ಣ ಬಂದಿದೆ. ಇದೇ ದೃಷ್ಟಿಯಿಂದ 'ಬಾಂಬೆ ಟಾಕೀಜ್'ನವರ 'ಬಂಧನ್' 'ಕಂಗನ್' 'ನಯಾ ಸಂಸಾರ' ಗಳಾದರೂ ಸಮಾಜಕ್ಕೆ ಬೋಧಕವಾಗಿರದಿದ್ದರೂ ಬಾಧಕವಾಗಿಲ್ಲ; ಬಹುಮಟ್ಟಿಗೆ ಪ್ರೇಮರಸದ ಬಣ್ಣಬಣ್ಣಗಳಿಂದ ಮನೋರಂಜಕವಾಗಿವೆ.

ಇನ್ನು ವಾಡಿಯಾ ಮೊದಲಾದ ಸ್ಟಂಟ್ ಚಿತ್ರಪಟಗಳ ಪ್ರಸಕ್ತಿ ಇಲ್ಲಿ ಯಾಕೆ? ನವಯುಗದ ಚಿತ್ರಪಟಗಳು ಕೇವಲ ಸಾಮಾಜಿಕವಾಗಿದ್ದು, ಬಹುಜನರ ಮನ್ನಣೆಗೆ ತಕ್ಕುವು ಎನ್ನಬಹುದಾದಾಗ, ಸಾಮಾಜಿಕತೆಯ ಹೆಸರಿನಲ್ಲಿ ಅವು ಉಂಟುಮಾಡಿರುವ ಅಸಮಾಜಿಕತೆಯನ್ನು ಕಂಡು ಪ್ರಸ್ತುತ ಲೇಖನವನ್ನು ಉಪಕ್ರಮಿಸಬೇಕಾಯಿತು. ಇತ್ತೀಚೆಗಿನ ನವಯುಗದ ಚಿತ್ರಪಟಗಳಂತೂ ಮೊದಲಿನ ಸಂಗೀತ ಮಾಧುರ್ಯವನ್ನೂ ಹಾಸ್ಯದ ರುಚಿಯನ್ನೂ ಬಹಿಷ್ಕರಿಸಿ ಬಿಟ್ಟಿರುವುದರಿಂದ, ಬರಡುಬರಡೆನಿಸುತ್ತವೆ. (ಚಿತ್ರಪಟದಲ್ಲಿ ಸಂಗೀತದ ಸ್ಥಾನವೇನೆಂಬುದೂ ಇಲ್ಲಿ ಅಧಿಕಪ್ರಸಂಗವಾಗಬಹುದು).

ಚಿತ್ರಪಟಗಳು ಉದಯವಾಗಿ ನಾಟಕಕಂಪನಿಗಳು ಹಗಲು-ಚುಕ್ಕೆಗಳಂತೆ ಮಾಯವಾಗುತ್ತ ಬಂದಿವೆ. ಕರ್ನಾಟಕದ ಪ್ರಶ್ನೆಯಂತೂ ದೂರವೇ ಆಯಿತು. ಆದರೆ ಮುಂದುವರಿಯುತ್ತಿರುವ ಮಹಾರಾಷ್ಟ್ರದ ರಂಗಭೂಮಿಯೂ ಈಗ ಕುಂಠಿತವಾಗಿದೆ. ವಯೋವೃದ್ಧರಾದ ಬಾಲಗಂಧರ್ವರು ರಂಗಭೂಮಿಯಿಂದ ನಿವೃತ್ತರಾದಂತೆಯೆ ಸರಿ. ಮೊನ್ನೆ ಮೊನ್ನೆ ಹುಬ್ಬಳ್ಳಿ–ಧಾರವಾಡಗಳಲ್ಲಿ ತಮ್ಮ ಪ್ರಭಾವವನ್ನು ಬೀರಿ ಹೋದ '**ಆನಂದ ಸಂಗೀತ ಮಂಡಲಿ**'ಯು, ರಂಗಭೂಮಿ–ಚಿತ್ರಪಟಗಳ ಒಂದು ನಡುವಿನ ಅವತಾರವೆಂದು ಹೇಳಬಹುದು. ಸಂಗೀತ ಬೇಕಾದರೆ ಯಂತ್ರ ಮುಖೇನ ಗಾಯನ; ಸಮರಪ್ರಸಂಗವು ರಂಗಭೂಮಿಯಮೇಲೆ ಬಂದಕೂಡಲೆ ಮೂಕ ಚಿತ್ರಪಟಗಳ ಪ್ರದರ್ಶನ. ಇದರಿಂದ ನೈಜ-ದೃಷ್ಟಿಯಿಂದ ನೋಡುವ ನಾಟಕದಲ್ಲಿ ರಸಭಂಗ, ಕ್ರಮಭಂಗ

(೪೩೪ನೆಯ ಪುಟಕ್ಕೆ ಮುಂದುವರಿದಿದೆ.)

ಮತ್ತೆ ಕನ್ನಡ-ಮರಾಠಿ ವಾದ

(ನಡೆದ ಸಂಗತಿಯೊಂದರ ನಿರೀಕ್ಷಣೆ)

(ಸಂಪಾದಕರಿಂದ)

★

ಪ್ರಪಂಚದಲ್ಲಿ ನಡೆದಿರುವ ಪ್ರಳಯದಂತಹ ಮಹಾಯುದ್ಧದ ಕಡೆಗೇ ಕುತೂಹಲದೃಷ್ಟಿಯನ್ನಿರಿಸಿ ನಿಂತಿರುವ ಕನ್ನಡದ ಮಹಾಮಹಾ ಜನಕ್ಕೆಲ್ಲ 'ಕನ್ನಡ-ಮರಾಠಿ ವಾದ' ಎಂಬ ಮಾತನ್ನೋದಿದ ಕೂಡಲೆ ತಿರಸ್ಕಾರದ ನಗೆ ಬಾರದೆ ಇರದು. 'ಎಷ್ಟು ಸಣ್ಣ ವಿಷಯ!' 'ಸೇದುವ ಬಾವಿಯ ಕಪ್ಪೆಗಳು' ಎಂದು ಈ ವಿಚಾರವನ್ನೆತ್ತಿ ಮಾತನಾಡುವವರನ್ನು ಆ ಜನ ಹೀಗಳೆಯಲೂ ಬಹುದು. ಪ್ರಪಂಚದಲ್ಲಿ ಮಹಾಯುದ್ಧ ನಡೆದಿದೆಯಾದರೂ ನಮ್ಮ ಯಾವ ಮಹಾಜನರೂ ತಂತಮ್ಮ ದಿನಚರ್ಯೆಯಲ್ಲಿ ಯಾವ ಬದಲಾವಣೆಯನ್ನೂ ಮಾಡಿದಂತಿಲ್ಲ. ನಿತ್ಯದ ಊಟ-ಉಡಿಗೆಗಳಾಗುತ್ತವೆ; ಸಿನೇಮಾ-ನಾಟಕಗಳಾಗುತ್ತವೆ; ಮದುವೆ-ಮುಂಜಿಗಳಾಗುತ್ತವೆ; ಜಾಣಾಕ್ಷತೆ-ನಾಮಕರಣೋತ್ಸವ ನಡೆಯುತ್ತವೆ. ಮಹಾಯುದ್ಧದ ದೃಷ್ಟಿಯಿಂದ ನೋಡಿದರೆ ಇವೆಲ್ಲ ಎಂತಹ ಕ್ಷುಲ್ಲಕ ಸಂಗತಿಗಳು? ಆದರೆ ತಮ್ಮ ತಮ್ಮ ದಿನಚರ್ಯೆಗೆ ಏನಾದರೂ ವ್ಯತ್ಯಯ ಬಂದರೆ ಸುಮ್ಮನೆ ಸಹಿಸಿಕೊಂಡಿರಬಲ್ಲ ಮಹಾಜನ ನಮ್ಮಲ್ಲಿ ಎಷ್ಟು ಜನವಿರಬಹುದು? ದೂರ ಹೋಗಬೇಕಿಲ್ಲ. ಮನೆ ಮಾಕೆ ಏನಾದರೂ ಹೆಚ್ಚಿನ ಸಲುಗೆ ತೋರಿಸಿ ಒಂದುಹೆಜ್ಜೆ ಮುಂದೆ ಬಂದು ಮಾತನಾಡಿದರೆ, ಈ ಮಹಾಯುದ್ಧದ ಕುತೂಹಲಿಗಳು ಸಣ್ಣಮಾತೆಂದು ಕ್ಷಮಿಸಬಹುದೆ? ಮನೆಯಲ್ಲಿಟ್ಟುಕೊಂಡ ಆಳು ವಿಪರೀತಿವಿಂತು ಎದುರುತ್ತರ ಕೊಟ್ಟರೆ 'ಇದೇನು ಕ್ಷುಲ್ಲಕ ಸಂಗತಿ' ಎಂದು ಸುಮ್ಮನಿರಬಹುದೆ? ಹೊಲಮಾಡಿದ ರೈತ ತೆರಿಗೆ ಕೊಡದಿದ್ದರೆ ಮಹಾಯುದ್ಧದ ಮಾಯೆಗೊಳಗಾದ ಈ ಮಹಾವಿಭೂತಿಗಳು ಹಾಗೆಯೆ ಬಿಟ್ಟುಬಿಡಬಹುದೆ? ಕಾರಣವಿದ್ದೋ ಇಲ್ಲದೆಯೋ ಯಾರಾದರೂ ತಮ್ಮನ್ನು ಟೀಕಿಸಿ ಪತ್ರಿಕೆಗಳಲ್ಲಿ ಬರೆದರೆ ಸಣ್ಣಮಾತೆಂದು ಮೌನವನ್ನು ವಹಿಸಬಹುದೆ? ಛೆ ಛೆ! ಇದೆಲ್ಲವೂ ನಿಸರ್ಗಕ್ಕೆ ವಿರೋಧವಾದ ಮಾತು. ಆದರೆ ಕನ್ನಡಿಗರನ್ನೂ ಕರ್ನಾಟಕವನ್ನೂ ಇನ್ನೊಬ್ಬರು ಬೇಕಾದಂತೆ ಬೈದರೂ, ಆಕ್ರಮಣ ಬುದ್ಧಿಯಿಂದ ಇಲ್ಲದ ಹಕ್ಕುಗಳನ್ನು ಹೇಳುತ್ತ ಏರಿಬಂದರೂ ಅವೆಲ್ಲ ಸಣ್ಣಮಾತು—ಕ್ಷುಲ್ಲಕವಾದಸಂಗತಿ. ಎಂತಲೇ ಉದಾರಧೋರಣವನ್ನಿರಿಸಿಕೊಂಡು ಮಹಾಕಾರ್ಯಕ್ಕೆ ತೊಡಗಿದ ಪತ್ರಿಕೆಗಳಿಗೆ ಇದರ ವಿಚಾರ ಬೇಕಿಲ್ಲ. 'ಜಯಂತಿ' ಕನ್ನಡಿಗರ ನೋವು-ಬೇನೆಗಳನ್ನು ತಿಳಿದುಕೊಂಡು, ಅದನ್ನೇ ಲೋಕಕ್ಕೆ ತಿಳಿಸಬೇಕೆಂಬ ಸಣ್ಣದಾದ ಗುರಿಯನ್ನೇ ಇರಿಸಿಕೊಂಡುದರಿಂದ 'ಮತ್ತೆ ಕನ್ನಡ-ಮರಾಠಿ ವಾದ' ಎಂಬ ವಿಷಯವನ್ನು ಈಗ ಚರ್ಚೆಗೆ ತೆಗೆದುಕೊಳ್ಳಬೇಕಾಯಿತು.

ದೊಡ್ಡತನಕ್ಕಾಗಿಯೋ ದಡ್ಡತನಕ್ಕಾಗಿಯೋ ಕನ್ನಡನಾಡಿನ ಇದುವರೆಗಿನ ಹಿರಿಯರು, ಅನ್ಯರಿಂದಾಗುವ ಅಪಮಾನವನ್ನು ಬೇಕಾದ ಹಾಗೆ ಸಹಿಸಿದರು. ಈ ಸಹಿಸುವ ಹೇಡಿತನಕ್ಕೆ 'ಔದಾರ್ಯ' ಎಂಬ ಹಿರಿಯ ಹೆಸರನ್ನು ಕೊಟ್ಟುಕೊಂಡರು. ಬೈಸಿಕೊಳ್ಳಲಿಕ್ಕೆ ಸಿದ್ಧರಾದ ಕನ್ನಡಿಗರನ್ನು ಒಳಗಿನವರೂ ಹೊರಗಿನವರೂ ಬೇಕಾದಷ್ಟು—ಇದುವರೆಗೂ—ಬೈದರು; ಕನ್ನಡಿಗರ 'ಔದಾರ್ಯ'ದ ಉಪಯೋಗವನ್ನು ತಮ್ಮ ಸ್ವಾರ್ಥಸಾಧನೆಗೆ ಮಾಡಿಕೊಂಡರು. ಈಗ ಕನ್ನಡ ತರುಣವರ್ಗದಲ್ಲಿ ಆತ್ಮಜಾಗೃತಿ ತಲೆದೋರಿದೆ. ಸ್ವಾಭಿಮಾನ ಎಚ್ಚತ್ತಿದೆ. ಹುಚ್ಚು ಹೇಡಿತನದ ಔದಾರ್ಯ ಕನ್ನಡಿಗರಿಗಿಂದು ಬೇಡವಾಗಿದೆ. ಮಿಕ್ಕವರಾರನ್ನೂ ಹಣಿದಿಕ್ಕಬೇಕೆಂಬ ಹೀನಬುದ್ಧಿ ಅವರಲ್ಲಿಲ್ಲವಾದರೂ, ತಾವು ಬೆಳೆದು ಬಾಳಿ ದೊಡ್ಡವರೆನಿಸಿಕೊಳ್ಳಬೇಕೆಂಬ ಹಂಬಲು ಅವರ ಹೃದಯವನ್ನು ತುಡಿಯುತ್ತಲಿದೆ. ಕರ್ನಾಟಕವನ್ನು ಕಟ್ಟಿ ಆಳುವವರು ತರುಣ ಕನ್ನಡಿಗರು; ಹಳೆಯಕಾಲದ ಈ 'ಔದಾರ್ಯ'ದ ಗುತ್ತಿಗೆಗಾರರಲ್ಲ. ಮೊದಲು ಹುಟ್ಟಿಬಂದವರೆಂಬ ವಯೋವೃದ್ಧಿಯ ಅಧಿಕಾರದಿಂದ, ಏನನಾದರೂ ಅಲ್ಲದುದನ್ನೂ ಸಲ್ಲದುದನ್ನೂ ಇವರು ಹೇಳಬಂದರೆ ಕನ್ನಡ ತರುಣರಿನ್ನು ಕೇಳಲಾರರು. ತಾನಾಗಿಯೆ ಸಿಕ್ಕ ಹಿರಿಯತನದ ಅಧಿಕಾರದ ಮೂಲಕ ಯಾರಾದರೂ ಅಭಿಮಾನಶೂನ್ಯತೆಯ ಪಾಠವನ್ನು ಕಲಿಸಲು ಬಂದರೆ, ಈ ಸ್ವಾಭಿಮಾನಿಗಳು ಎಂದೂ ತಾಳಲಾರರು. 'ಇದು ಅತಿಕ್ರಮಣ!' 'ತಿಳಿವಳಿಕೆ ಸಾಲದ ಅವಿವೇಕ!' 'ಉತ್ಸಾಹದ ಹುಚ್ಚು ಆವೇಶ' ಎಂದು ಹಿರಿಯರು ತರುಣರನ್ನು ಬೈಯತೊಡಗಿದರೆ, ತಮ್ಮ ಹಿರಿಯತನ ಕಳೆದುಕೊಂಡು ಮೂಲೆಗುಂಪಾಗುವ ಸಂದರ್ಭವಿದೆಯಾಗ. ಆದುದರಿಂದ ನಿಜವಾಗಿಯೆ ಕನ್ನಡನಾಡನ್ನು ಕಟ್ಟಬೇಕೆಂಬ ಆಂತರಿಕ ಆಶೆ-ಆಕಾಂಕ್ಷೆಗಳಿರುವ ಮುಂದಾಳುಗಳಾರಾದರೂ ಇದ್ದರೆ, ಮೊದಲು ಅವರು ಕನ್ನಡ ತರುಣರ ಮಹದಾಶೆಯೇನೆಂಬುದನ್ನು ಅರಿತುಕೊಳ್ಳಬೇಕು. ಅವರ ಆದರ್ಶವೇನೆಂಬುದನ್ನು ಕಂಡುಹಿಡಿಯಬೇಕು. ಕನ್ನಡ ತರುಣರಾರೂ ಭಾರತೀಯ ರಾಷ್ಟ್ರಸಭೆಯ ಆದರ್ಶವಾದ ಸ್ವಾತಂತ್ರ್ಯಸಾಧನೆಗೆ ಎಂದೂ ವಿರೋಧಿಗಳಲ್ಲ; ಆದರೆ ಇದುವರೆಗೆ ಇಲ್ಲದಿರುವ ಕನ್ನಡಿಗರ ವ್ಯಕ್ತಿತ್ವವನ್ನು ಮೊದಲು ಸಾಧಿಸಿ, ಅದರ ಮೂಲಕ ಪಡೆದ ಸ್ವಾತಂತ್ರ್ಯಕ್ಕೆ ಹೆಚ್ಚಿನ ಬೆಲೆಯಿದೆಯೆಂಬ ಕಣಸನ್ನು ನಮ್ಮ ತರುಣರು ಕಂಡಿದ್ದಾರೆ. ಇದನ್ನು ನಮ್ಮ ಹಿರಿಯ ಮುಂದಾಳುಗಳು ಅರಿತುಕೊಳ್ಳಬೇಕು. ಹೀಗೆ ಮಾಡದೆ ಹೋದಲ್ಲಿ, ಬೆಳಗಾಂವಿಯಲ್ಲಿ ನಡೆದಂತಹ

ಗೊಂದಲ ಕನ್ನಡನಾಡಿನ ಯಾವ ಅಂತಹ ಸಭೆಯಲ್ಲಿಯೂ ನಡೆಯಬಹುದು. ನಡೆದರೆ ತಪ್ಪಲ್ಲವಿಷ್ಟೇ ಅಲ್ಲ, 'ಕನ್ನಡನಾಡಿನ ಶುಭಭವಿಷ್ಯದ ಗುರುತದು' ಎಂಬುದು ನಮ್ಮ ಅಭಿಮತವಾಗಿದೆ.

ಶ್ರೀಮಾನ್ ಖೇರ್ ಅವರ ಮತ್ತು ಅಂದಿನ ಸಭೆಯಲ್ಲಿದ್ದ ಕನ್ನಡ ಮುಂದಾಳುಗಳ ಉದ್ದಾಮತನಕ್ಕೂ ಹುಚ್ಚುಹಟಕ್ಕೂ ಉರಿದೆದ್ದ ಬೆಳಗಾಂವಿಯ ತರುಣ ಕನ್ನಡಿಗರು, ಜಯಂತಿಗೆ ಹಲವು ವಿಚಾರಗಳನ್ನೊಳಗೊಂಡ ಕಾಗದಗಳನ್ನು ಬರೆದಿದ್ದಾರೆ. ಒಬ್ಬರು ನೊಂದು ಸುರಿಯುವ ಕಣ್ಣೀರಿಂದ ಕನಿಕರದ ಕಾಗದ ಬರೆದಿದ್ದಾರಾದರೆ, ಇನ್ನೊಬ್ಬರು ಸಿಟ್ಟಿನಿಂದ ಕಾವೇರಿದ ನೆತ್ತರದಿಂದ ಕಿಡಿಯನ್ನುಗುಳುವ ಕಾಗದ ಬರೆದಿದ್ದಾರೆ. ಮತ್ತೊಬ್ಬರು ನಮ್ಮ ಮುಂದಾಳುಗಳ ನಡತೆಗಾಗಿ ನಿರಾಶೆಯ ನಿಟ್ಟುಸಿರನ್ನು ಮೂಡಿಸಿದ್ದಾರಾದರೆ, ಬೇರೊಬ್ಬರು ತಮ್ಮ ಸಂತಾಪದ ಕಾವನ್ನೇ ಕಾರಿದ್ದಾರೆ.

ಬೆಳಗಾಂವಿಯಲ್ಲಿ ಶ್ರೀ. ಖೇರರವರು ಮಾತನಾಡಲಿದ್ದ ಸಭೆಯಲ್ಲಿ ಏನೇನು ನಡೆಯಿತೆಂಬುದು ಅನೇಕ ಕನ್ನಡಿಗರಿಗೆ ಚೆನ್ನಾಗಿ ಗೊತ್ತೇ ಇಲ್ಲ. ಏಕೆಂದರೆ ಕನ್ನಡ ಪತ್ರಿಕೆಗಳಲ್ಲಿ ಆ ಸಂಗತಿ ಇದ್ದುದಿದ್ದಂತೆ ಪ್ರಕಟವಾಗಿಲ್ಲ. ಇಷ್ಟೇ ಅಲ್ಲ, ಅಲ್ಲಿಯ ಸುದ್ದಿಗಾರರು ಇದ್ದ ಸಂಗತಿಯನ್ನು ಮುಚ್ಚಿಟ್ಟು, ಬೇರೊಂದು ಬಣ್ಣಬಡಿದಿರುವಂತೆ ಕಾಣುತ್ತಲಿದೆ. ಮರಾಠಿ ಪತ್ರಿಕೆಗಳು ಮಾತ್ರ ಇಲ್ಲದ ಸಂಗತಿಗೆ ಉಪ್ಪು-ಕಾರ ಹಚ್ಚಿ, ಕನ್ನಡಿಗರನ್ನು ಬೇಕಾದಹಾಗೆ ಬೈದು ಅಪಪ್ರಚಾರ ಮಾಡುತ್ತಲಿವೆ. ಇದರಿಂದಂತೂ ಸ್ವಾಭಿಮಾನಿಗಳಾದ ತರುಣರ ಕರುಳು ಕುದಿದುಹೋಗಿದೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದುದರಿಂದಲೆ ಬೆಳಗಾಂವಿಯಲ್ಲಿಯ ಕನ್ನಡ ತರುಣರು ತಾ. ೨೦-೧-೪೨ ನೆಯ ಸಾಯಂಕಾಲ, ಬೆಳಗಾಂವಿಯ ಮಾರುತಿ ದೇವಾಲಯದಲ್ಲಿ ಸಭೆಕೂಡಿಸಿ ಹೀಗೆ ಹೀಗೆ ನಿರ್ಣಯಗಳನ್ನು ಮಾಡಿದ್ದಾರೆ.

೧. ತಾ. ೧೧-೧-೪೨ರ ಜಾಹೀರ್ ಸಭೆಯಲ್ಲಿ, ಮಾನ್ಯ ಅತಿಥಿಗಳಾದ ಶ್ರೀ. ಖೇರರ ಕೆಲವು ಮಾತುಗಳು ಸ್ವಾಭಿಮಾನಿಯಾದ ಪ್ರತಿಯೊಬ್ಬ ಕನ್ನಡಿಗನಿಗೂ ದುಃಖವನ್ನುಂಟುಮಾಡಿದ್ದು, ಹಿಂದಿಯಲ್ಲಿ ಭಾಷಣ ಮಾಡುವ ಬಗ್ಗೆ ಕೊಟ್ಟ ತಮ್ಮ ಆಶ್ವಾಸನವನ್ನು ಶ್ರೀ. ಖೇರರೇ ಕಡೆಗಣಿಸಿ, ೪೦ ನಿಮಿಷ ಕೊನೆಗೂ ಮರಾಠಿಯಲ್ಲಿಯೇ ಮಾತನಾಡಿ, ಅಂದಿನ ಬಹುಸಂಖ್ಯಾಕ ಕನ್ನಡಿಗ ಸಭಿಕರ ವಿನಂತಿಯನ್ನು ಕಡೆಗೂ ಅಮಾನ್ಯಮಾಡಿದ್ದಕ್ಕಾಗಿ, ಅದಿನದ ಶ್ರೀ. ಖೇರ ಸಾಹೇಬರ ವರ್ತನೆಯನ್ನು ಈ ಸಭೆಯು ಖಂಡಿಸುತ್ತದೆ.

೨. ಶ್ರೀ. ಖೇರರ ಅಂದಿನ ವರ್ತನೆಗೆ ಇಲ್ಲಿಯ ಸ್ಥಳಿಕ ಪ್ರಮುಖರೂ ಕಾರಣರಿರುವರೆಂದು ಈ ಸಭೆಯು ಅಭಿಪ್ರಾಯಪಡುತ್ತಿದ್ದು, ಸ್ಥಳಿಕ ಮುಖಂಡರ ಧೋರಣೆಯನ್ನು ಈ ಮೂಲಕ ಖಂಡಿಸುತ್ತದೆ. ಇನ್ನುಮುಂದಾದರೂ ಇಂತಹ ಪ್ರಮಾದಗಳಾಗದಂತೆ ನೋಡಿಕೊಂಡು, ಕನ್ನಡಿಗರ ನ್ಯಾಯವಾದ ಅಧಿಕಾರವನ್ನು ಅವಮಾನ್ಯ ಮಾಡುವುದರಿಂದುಂಟಾಗುವ ಸ್ವಾಭಾವಿಕವಾದರೂ ಪ್ರಕ್ಷುಬ್ಧವಾದ ವಾತಾವರಣಕ್ಕೆ, ಯಾವುದೇ ಅವಕಾಶವನ್ನು ಕೊಡಕೂಡದೆಂದು ಈ ಸಭೆಯು ಅವರಿಗೆ ಸೂಚಿಸುವುದಲ್ಲದೆ, ಹಾಗೆ ಮಾಡದೆ ಬಿಟ್ಟಲ್ಲಿ ಪರಿಸ್ಥಿತಿಯು ಅನರ್ಥಕ್ಕೆ ಹೋಗುವುದು ಖಂಡಿತವೆಂದೂ, ಹಾಗು ಆ ಪ್ರಸಂಗಗಳಲ್ಲಿಯ ಅನಾಹುತಕ್ಕೆ ಸ್ಥಳಿಕ ಮುಖಂಡರೇ ಹೊಣೆಗಾರರಾಗುವರೆಂದೂ ಈ ಸಭೆಯು ಅವರಿಗೆ ಎಚ್ಚರಿಕೆ ಕೊಡಬಯಸುತ್ತದೆ.

೩. ಈ ಬಗ್ಗೆ ಇನ್ನುಮುಂದೆಯಾದರೂ ಈ ಪ್ರಮಾದಗಳಾಗದಂತೆ ಪ್ರಯತ್ನಿಸಲು ಒಂದು ಶಿಷ್ಟಮಂಡಲವನ್ನು, ಬೆಳಗಾಂವಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮುಖಂಡರೊಡನೆ ವಿಚಾರವಿನಿಮಯ ಕ್ಕೋಸುಗ ನಿಯಮಿಸಬೇಕು; ಆ ಶಿಷ್ಟಮಂಡಳದ ಸದಸ್ಯರನ್ನಾರಿಸಲು ಅಧ್ಯಕ್ಷರಿಗೆ ಈ ಸಭೆಯು ಅಧಿಕಾರವನ್ನು ಕೊಡುತ್ತದೆ.

೪. ಕನ್ನಡನಾಡಿನ ಪ್ರಮುಖಪತ್ರಿಕೆಗಳು ಈ ವಿಷಯದಲ್ಲಿ ಕನ್ನಡಿಗರಿಗೆ ಸಹಾನುಭೂತಿಪರವಾದುದು ನಿಜವಾದರೂ, ಇದಕ್ಕೂ ಹೆಚ್ಚು ಸ್ಪಷ್ಟ ಮತ್ತು ಖಂಡತುಂಡರೀತಿಯಿಂದ ಕನ್ನಡಿಗರ ನ್ಯಾಯವಾದ ಬೇಡಿಕೆಗಳನ್ನು ಮಂಡಿಸುವುದು ಅತ್ಯವಶ್ಯವಿದ್ದು, ಅವುಗಳು ಹಾಗೆ ಮಾಡದೆ ಬಿಟ್ಟಿದ್ದಕ್ಕೆ ಈ ಸಭೆಯು ವಿಷಾದ ವ್ಯಕ್ತಗೊಳಿಸುತ್ತದೆ; ಮತ್ತು ಇಲ್ಲಿಯ ಸ್ಥಳಿಕ ಮರಾಟಿ ಪತ್ರಿಕೆಗಳು ಈ ಪ್ರಕರಣದಲ್ಲಿ ತಳೆದ ತಾಳಗೆಟ್ಟ ಧೋರಣೆಯನ್ನು ಖಂಡಿಸಿ, ಈಗಿನ ಆತ್ಮಘಾತಕ ಧೋರಣೆಯನ್ನು ಬೇಗ ಬಿಡದಿದ್ದರೆ, ತಾವೇ ತಮ್ಮ ಅಹಿತಕಾರಿಗಳಾಗುವುವೆಂದು ಅವುಗಳಿಗೆ ಈ ಸಭೆಯು ಎಚ್ಚರ ಕೊಡ ಬಯಸುತ್ತದೆ.

೫. ಇಂದಿನ ಪ್ರಚಂಡಸಭೆಯ ಮಹತ್ತ್ವವನ್ನುಲಕ್ಷಿಸಿ, ಇದರ ಕಾರ್ಯಕಲಾಪಗಳನ್ನು ಅವಶ್ಯವೆನಿಸಿದ ಪತ್ರಿಕೆಗಳಿಗೆ ಪ್ರಕಟನೆಗಾಗಿ ಕಳುಹಲು ಅಧ್ಯಕ್ಷರನ್ನು ಈ ಸಭೆಯು ವಿನಂತಿಸುತ್ತದೆ.

ಈ ನಿರ್ಣಯಗಳನ್ನು ಓದಿದ ಮೇಲೆ ಅನೇಕ ಕನ್ನಡಿಗರಿಗೆ ಎನಿಸಬಹುದು: 'ಹಾಗಾದರೆ ಬೆಳಗಾಂವಿಯಲ್ಲಿ ನಿಜವಾಗಿಯೂ ನಡೆದುದೇನು ?' ಎಂದು. ಅಂತಹರ ಕುತೂಹಲವನ್ನು ಕಳೆಯುವುದಕ್ಕಾಗಿಯೆ ಬೆಳಗಾಂವಿಯಿಂದಲೆ ಜಯಂತಿಯ ಹಿತಚಿಂತಕರೊಬ್ಬರಿಂದ ಬಂದ ವಿಶದ ಸುದ್ದಿಯೋಲೆಯೊಂದನ್ನು ಇದ್ದುದಿದ್ದಂತೆ ಪ್ರಕಟಿಸುತ್ತಿದ್ದೇವೆ. ಎಲ್ಲರೂ ಲಕ್ಷ್ಯಗೊಟ್ಟು ಓದಬೇಕು. ಇಂತಹ ಸಂದರ್ಭ ಬಂದಾಗ ಸ್ವಾಭಿಮಾನಿಗಳಾದ ಕನ್ನಡ ತರುಣರು ಏನುಮಾಡಬೇಕೆಂಬುದನ್ನು, ವಿಚಾರಿಸಿ, ವಿಧಾಯಕ ಸೂಚನೆಗಳನ್ನೂ ಕೊಡಬೇಕು. ನಮಗೆ ಬಂದ ಸುದ್ದಿಯೋಲೆಯಿದು :—

" ಬೆಳಗಾಂವಿಯಲ್ಲಿ ಮತ್ತೆ ಕನ್ನಡ ಮರಾಠೀ ವಾದ !

ಬೆಳಗಾಂವಿಯಲ್ಲಿ ೧೯೩೪ ರಿಂದ ಪ್ರಾರಂಭವಾದ ಕನ್ನಡ ಮರಾಠಿ ವಾದವು, ಕನ್ನಡಿಗರ ಅನಾವಶ್ಯಕ ಔದಾರ್ಯ, ನಿಸ್ಸಂಘಟನೆಗಳ ಅಭಾವ ಇವುಗಳ ಮೂಲಕ, ಇನ್ನೂ ಮಾಯವಾಗದೆ, ಮತ್ತೆ ಮತ್ತೆ ಬೇಗೆಯಂತೆ ಹಬ್ಬುತ್ತಿರುವುದು ನಿಜವಾಗಿ ಶೋಚನೀಯವು. ಬೆಳಗಾಂವಿಯ ಕನ್ನಡ ನಿವಾಸಿಗಳ ಮೇಲೆ,

ಮರಾಠಿ ದಬ್ಬಾಳಿಕೆಯು ಹಿಂದಿನಂತೆ ಇಂದೆಯೂ ಅಪ್ರತಿಹತವಾಗಿ ಸಾಗಬೇಕೆದಿಂದ್ದ ಅಲ್ಲಿಯ ಕೆಲವು ಮುಖಂಡರ ಅಭಿಲಾಷೆಗನುಸರಿಸಿ, ಆ ದೆಶೆಯಲ್ಲಿ ಪ್ರಯತ್ನಗಳು ಅವ್ಯಾಹತವಾಗಿ ನಡೆದಿರುವುದು ಆಶ್ಚರಿಯೇನೂ ಅಲ್ಲ. ಆದರೆ ಇಂದಿನ, ಮತ್ತು ಮೊದಲಿನ ಬೆಳಗಾಂವಿಗಳಲ್ಲಿಯ ಮಹದಂತರವನ್ನು ಅವರು ಉದ್ದೇಶಪೂರ್ವಕವಾಗಿ ಅಲಕ್ಷ್ಯಸುತ್ತಿರುವರು. ಕಳೆದ ಆರು ವರುಷಗಳಿಂದಲೂ ಸಾರ್ವಜನಿಕ ವಾಚನಾಲಯದಲ್ಲಿಯ ವ್ಯವಸ್ಥಾಪಕ ಮಂಡಲಿಯ ಚುನಾವಣೆಗಳನ್ನು ನಿರೀಕ್ಷಿಸಿದರೆ, ಕನ್ನಡಿಗರ ಅಭಿವೃದ್ಧಿಯು ಸ್ಪಷ್ಟವಾಗುವುದು. ಹಾಗೆಯೇ ಇಲ್ಲಿಯ ಹೊಸ ಹೊಸ ಶಿಕ್ಷಣಸಂಸ್ಥೆಗಳ ಬೆಳೆವಣಿಗೆಗಳೂ ಕನ್ನಡನಾಡಿನ ನಾನಾ ಮೂಲೆಗಳಿಂದ ವಿದ್ಯಾರ್ಥಿಗಳನ್ನು ಇಲ್ಲಿ ಕಲೆಹಾಕಲು ಒಳ್ಳೆಯ ಸಾಧನಕಾರಿಗಳಾಗಿವೆ. ಹೋದ ವರುಷದ ಜನಗಣನೆಯನ್ನು ಗಣನೆಗೆ ತಂದರಂತೂ, ಬೆಳಗಾಂವಿಯಲ್ಲಿಯ ಕನ್ನಡಿಗರ ಬಲದ ಕಲ್ಪನೆಯು ಸ್ಪಷ್ಟವಾಗುವುದು.

ಹೀಗಿದ್ದರೂ, ಇಲ್ಲಿಯ ಸಾರ್ವಜನಿಕಸಭೆಗಳು ಮರಾಟಿಯಲ್ಲಿ ನಡೆಯುವುದನ್ನು ನೋಡಿದರೆ, ಕನ್ನಡಿಗರು ಸುಷುಪ್ತಾವಸ್ಥೆಯಿಂದ ಜಾಗ್ರತಾವಸ್ಥೆಗೆ ಇನ್ನೂ ಮುಟ್ಟಿಲ್ಲವೆಂದು ದುಃಖಪಡಬೇಕಾಗುವುದು. ಇನ್ನು ವಿಶೇಷ ಮಹತ್ವದ ಸಂದರ್ಭಗಳಲ್ಲಿ, ಅವರಲ್ಲಿಯೂ ಪರಪ್ರಾಂತದ ಮುಂದಾಳುಗಳು ಅತಿಥಿಗಳಾಗಿ ಬಂದಾಗ-ಸ್ಥಳಿಕ ನಾಗರಿಕರಲ್ಲದೆ ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳೂ ಸಭೆಗೆ ಬರುವುದು ಸಹಜವಿದ್ದು, ಆಗ ಮರಾಟಿ ತಿಳಿಯದ ಕನ್ನಡಿಗರ ಸಂಖ್ಯೆ ಬಹ್ವಂಶದಲ್ಲಿ ಹೆಚ್ಚಿರುವುದೆಂಬ ಸಂಗತಿಯನ್ನು ಮರೆತರೆ, ಕನ್ನಡಿಗರ ನ್ಯಾಯವಾದ ಹಕ್ಕಿನ ಮೇಲೆ ಗದಾಪ್ರಹಾರ ಮಾಡಿದಂತೆಯೇ ಸರಿ.

ಇಂತಹದೇ ಒಂದು ವಿಷಾದಕರ ಸಂಗತಿಯು ಶ್ರೀ. ಖೇರರ ಭಾಷಣದ ಕಾಲಕ್ಕೆ ನಡೆಯಿತು. ಸ್ಥಳಿಕ ಮುಖಂಡರು ಕನ್ನಡಿಗರ ಬಲವನ್ನು ಕಡೆಗಣಿಸುವ ಅಪರಾಧವನ್ನು ಮಾಡಿದ್ದರಿಂದ, ಕನ್ನಡಿಗರು ತಮ್ಮ ಹಕ್ಕಿಗಾಗಿ ಟೊಂಕಕಟ್ಟಿ ನಿಲ್ಲುವುದು ಅನಿವಾರ್ಯವಾಯಿತು. ಹೀಗೆ ಪೂರ್ಣಮ ಜಾಹೀರ್ ಸಭೆಯಲ್ಲಿ ಕನ್ನಡಿಗರ ಶಕ್ತಿಯ ಬಳವು ನಿರೀಕ್ಷಿಸಿದುದಕಿಂತ ಹೆಚ್ಚಾಗಲು, ಕಾರಣ ಬಲ್ಲವರಾದರೂ ಮತ್ತು ಗೊಂದಲದ ನಿವಾರಣೋಪಾಯವು ತಮ್ಮನ್ನೇ ಕೂಡಿದ್ದರೂ ಶ್ರೀ. ಬಾಳಾಸಾಹೇಬರು ತಾಳ್ಮೆಗೆಟ್ಟು, 'ಗುಂಡಾ' 'ದರೋಡೆಖೋರ್' ಎಂದು ಕನ್ನಡಿಗರಿಗೆ ಬೈದರು. ಶ್ರೀ. ಗಂಗಾಧರರಾಯರಿಗಂತೂ ಅಷ್ಟೇ ಬೇಕಾಗಿದ್ದಿತೆಂದು ತೋರುತ್ತದೆ; ಅವರೂ ಅದೇ ವೇಳೆಯನ್ನು ಸಾಧಿಸಿ, 'ದುರಭಿಮಾನಿಗಳು' 'ಕೀಳುಮನದವರು' ಮುಂತಾಗಿ ಕನ್ನಡಿಗ ಸಭಿಕರನ್ನು ಮನಸಾರೆ ಹಳಿದು ಸಂತೋಷಬಟ್ಟರು. ಕನ್ನಡ ದ್ವೇಷವು ಹುಟ್ಟುಗುಣವೇ ಉಳ್ಳಂತಹರನ್ನು ಕುರಿತು ಇಲ್ಲಿ ನಾನು ಚರ್ಚಿಸಹೋಗುವುದಿಲ್ಲ.

ಶ್ರೀ. ತ. ಸಾ. ಅಮ್ಮಸಭಾಂವಿಯವರು ಈ ಬಗ್ಗೆ 'ಕನ್ನಡನುಡಿ' ಯಲ್ಲಿ ಪ್ರಕಟಿಸಿದ ಲೇಖನವು ಸಮಯೋಚಿತವಾಗಿದ್ದು, ತರುಣರಿಗೆ ಮಾರ್ಗದರ್ಶಿಯಾಗಿದೆ. ಅವರಿಗೆ ಕನ್ನಡಿಗರು ಚಿರಋಣಿಗಳು. ಶ್ರೀ. ಬಾಳಾಸಾಹೇಬರು, ಎಷ್ಟೇ ವಿರೋಧವಾದರೂ ಮರಾಠಿಯಲ್ಲಿಯೆ ಭಾಷಣಮಾಡಲು ಮೊದಲೇ ನಿಶ್ಚಯಿಸಿದಂತೆ ಎನಿಸಿತು. ಹಾಗಿಲ್ಲದಿದ್ದರೆ ಹಿಂದಿಯಲ್ಲಿ ಮಾತನಾಡುವ ಕುರಿತು ಕೊಟ್ಟ ತಮ್ಮ ವಚನಭಂಗ ಮಾಡಿದುದರ ಅರ್ಥವಾಗುವುದು ಕಠಿನವೇ ಸರಿ. ತಮ್ಮ ದುರಾಗ್ರಹದಲ್ಲಿ ಶ್ರೀ. ಖೇರರು ಯಶಸ್ವಿಗಳಾದರೆಂದೇ ಹೇಳಬೇಕಾಗಿದೆ. ಇದರ ಪರಿಣಾಮವು, ಸುದೈವದಿಂದ ಕನ್ನಡಿಗ ವಿದ್ಯಾರ್ಥಿಗಳ ಮೇಲೆ ಚೆನ್ನಾಗಿಯಾಯಿತೆಂಬುದು ಅವರು ನೆರೆಯಿಸಿದ ತಾ॥ ೧೦ ಜನವರಿಯ ಸಭೆಯಿಂದ ಸ್ಪಷ್ಟವಾಗುವುದು.

ಅಂದಿನ ಸಭೆಯಲ್ಲಿ ಬೆಳಗಾಂವಿಯ ಅಖಿಲ ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳೂ ಸೇರಿ, ಶಾಂತ ಹಾಗೂ ಗೌರವಯುಕ್ತ ರೀತಿಯಲ್ಲಿ ಶ್ರೀ. ಖೇರರ ವರ್ತನೆಯನ್ನು ನಿಷೇಧಿಸಿ, ಸ್ಥಳಿಕ ಮುಖಂಡರೂ ಆ ಅನರ್ಥಕ್ಕೆ ಕಾರಣರೆಂದು ಅವರ ಧೋರಣೆಯನ್ನು ಖಂಡಿಸಿದ್ದಲ್ಲದೆ, ಅವರೆಡೆಗೆ ವಿಚಾರವಿನಿಮಯಕ್ಕಾಗಿ ಒಂದು ಶಿಷ್ಟಮಂಡಳ ಕಳುಹುವ ವಿಧಾಯಕ ನಿರ್ಣಯವನ್ನು ಮಾಡಿದುದು ಮತ್ತೂ ಶ್ಲಾಘ್ಯವು. ಇಷ್ಟೊಂದು ಒಮ್ಮನಸ್ಸಿನಿಂದಲೂ ಹುಮ್ಮಸದಿಂದಲೂ, ದೂರದೃಷ್ಟಿಯಿಂದಲೂ ಆ ದಿನದ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದ್ದುದು ಬೆಳಗಾಂವಿಯ ವಿದ್ಯಾರ್ಥಿಪ್ರಪಂಚದಲ್ಲಿಯೇ ಮೊದಲನೆಯ ದೃಷ್ಟಾಂತವೆಂದು ಹೇಳಬೇಕು. ಅಂದು ವ್ಯಕ್ತವಾದ ಕನ್ನಡಿಗರ ಸ್ವಾಭಿಮಾನ, ಧೃಢನಿಶ್ಚಯಗಳು ಬೆರಗುಗೊಳಿಸುವಂತಹವಾಗಿದ್ದು, ಬೆಳಗಾಂವಿಯ ಮಟ್ಟಿಗಾದರೂ ಕನ್ನಡಿಗರ ಭಾಗ್ಯೋದಯವಾಯಿತೆಂದು ನ್ಯಾಯವಾಗಿ ಅಭಿಪ್ರಾಯಪಡಬಹುದಾಗಿದೆ.

ಕಾಂಗ್ರೆಸ್ಸಿನ ಕೆಲವು ಮುಖಂಡರು, ಕನ್ನಡಕ್ಕೆ ದ್ರೋಹಬಗೆಯುವಾಗ ಮಾತ್ರ, ಸಾಮಾನ್ಯವಾಗಿ 'ಕನ್ನಡಿಗರ' 'ಕನ್ನಡತನ'ದ ಬಗ್ಗೆ ದೊಡ್ಡದೊಡ್ಡ ಅಗ್ರಲೇಖ ಬರೆಯುವ ದೈನಿಕ ಹಾಗು ವಾರಪತ್ರಿಕೆಗಳು, ಅದೇಕೋ ತಟಸ್ಥ ಧೋರಣೆಯನ್ನು ವಹಿಸಿರುವುದು ಅಸಹ್ಯವಾದರೂ, ಎಲ್ಲರಿಗೂ ವಿದಿತವಾದ ವಿಚಾರವು. ಇಂತಹ ಪತ್ರಿಕೆಗಳು ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಾದರೂ ಅತ್ಯಂತ ಸೌಮ್ಯವಾಗಿ ರಾಜಕೀಯ ರಂಗದಲ್ಲಿಯ ಮುಖಂಡರಂತೆ — ಬರೆದೂ ಬರೆಯದಂತಹ ಅಭಿಪ್ರಾಯಗಳನ್ನು ಹೊರಪಡಿಸಿ ಪಾರಾಗಿರುವುದು ಅತ್ಯಂತ ವಿಷಾದಕರವು.

ಈ ಸಲದ ಸಾಹಿತ್ಯಸಮ್ಮೇಲನದ ಅಧ್ಯಕ್ಷರಾದ ವಿದ್ವದ್ರತ್ನ ಶ್ರೀ. ಎ. ಆರ್. ಕೃಷ್ಣಶಾಸ್ತ್ರಿಗಳ "ನಮ್ಮ ನಾಡಿನಲ್ಲಿ ಕನ್ನಡಕ್ಕೆ ಮೊದಲನೆಯ ಸ್ಥಾನವನ್ನು ಎಲ್ಲ ವಿಷಯಗಳಲ್ಲಿಯೂ ಪಡೆಯಲು ಕನ್ನಡಿಗರು ಹೆದರದೆ ಹೆಣಗಾಡಬೇಕು" ಎಂಬೀ ವೀರ ಸಂದೇಶವು, ಬೆಳಗಾಂವಿಯ ಕನ್ನಡಿಗರನ್ನು ಹೊಡೆದೆಬ್ಬಿಸಿದಂತೆ, ಅಖಿಲ ಕನ್ನಡ ನಾಡಿನಲ್ಲಿಯೂ ಅದು ಮೊಳಗಿದ ದಿನವೇ ಸುದಿನವು! ಅದುವೇ ಕನ್ನಡಿಗರಿಗೆ ಪ್ರಗತಿಯ ಕುರುಹು."

ಫಿಲಿಪ್ಪಾಯಿನ್ಸ್ ★ ಪರಾಧೀನವಾದುದು ಹೇಗೆ?

(ಇತಿಹಾಸ ವಿವೇಚನೆ) ★

ಶ್ರೀ. ಸಿ. ಬಿ. ಬೆಲ್ಲದ, ಇಟಗಿ

ಫಿಲಿಪ್ಪೈನ್ಸ್ ದ್ವೀಪದ ಜನತೆಯ ಹಾಡು 'ಅಂತೂ ಇಂತೂ ಕುಂತೀಮಕ್ಕಳಿಗೆ ರಾಜ್ಯವಿಲ್ಲ' ಎಂಬಂತಾಗಿದೆ. ಅಬ್ಬಾ, ಫಿಲಿಪಿನೋಜರ ಸ್ವಾತಂತ್ರ್ಯದ ಹಸಿವು ಎಂತಹದು! ಅದಕ್ಕಾಗಿ ಅವರು ತೆತ್ತ ಬಲಿಗಳು ಎಷ್ಟೊಂದು ಬೆಲೆಯುಳ್ಳವು? ಆದರೇನು, ಅವರಿಗೆ ಮೋಕ್ಷಕಾಲ ಇದುವರೆಗೂ ಕಣ್ಣಿಗೆ ಕಾಣುತ್ತಿಲ್ಲ!

★

ಪೂರ್ವ ಪೀಠಿಕೆ

ಕ್ರಿ.ಶ. ೧೫-೧೬ನೆಯ ಶತಕಗಳೆಂದರೆ ಜಗತ್ತಿನ ಇತಿಹಾಸದಲ್ಲಿ ಸಂಕ್ರಾಂತಿಯ ಕಾಲ. ಪ್ರಗತಿಸೂರ್ಯನು ತನ್ನ ಪಥಪರಿವರ್ತನಮಾಡಿದ ಸಂಧಿಕಾಲವದು. ಎಚ್ಚತ್ತಿದ್ದ ಪೂರ್ವಾರ್ಧ ಭೂಖಂಡವು ಅಂದಿನಿಂದ ಮೈಮರೆತು ನಿದ್ರೆಹೋಯಿತು. ಅದೇ, ನಿದ್ರೆಯಲ್ಲಿದ್ದ ಪಶ್ಚಿಮಾರ್ಧವು (ಪ್ರಾಮುಖ್ಯವಾಗಿ ಯುರೋಪವು) ಜಾಗೃತವಾಯಿತು. ಸ್ಪೇನ್, ಪೋರ್ತುಗಾಲ್ ಮೊದಲಾದ ದೇಶಗಳ ನಾವಿಕರು, ಹೊಸಹೊಸ ಭೂಪ್ರದೇಶಗಳ ಶೋಧನೆಗಾಗಿ ಹೊರಬಿದ್ದು, ಶೋಧವಾದ ದೇಶಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು; ಉಳಿದ ದೇಶಗಳಲ್ಲಿ ವ್ಯಾಪಾರದ ನೆವ ಮುಂದೆ ಮಾಡಿ ನೆಲಸಿ, ಧರ್ಮಪ್ರಸಾರ ಮಾಡುತ್ತ, ಅಲ್ಲಿಯ ಅನುಕೂಲ ಪರಿಸ್ಥಿತಿಯ ಲಾಭತೆಗೆದುಕೊಂಡು ಅವುಗಳನ್ನು ಆಕ್ರಮಿಸಿ, ಇಂದಿಗೂ ಉಪಭೋಗಿಸುತ್ತಿದ್ದಾರೆ. ಪ್ಯಾಸಿಫಿಕ್ ಮಹಾಸಾಗರದಲ್ಲಿ ಹಬ್ಬಿದ ಈ ಫಿಲಿಪಾಯಿನ್ಸ್ ದ್ವೀಪಗಳೂ, ಆ ಸಾಹಸಿಗಳ ಗೃಧ್ರದೃಷ್ಟಿಯಿಂದ ಪಾರಾಗಲಿಲ್ಲ.

ಸ್ಪಾನಿಶ್‌ರ ಪ್ರವೇಶ ಮತ್ತು ಆಕ್ರಮಣ

ಕ್ರಿ.ಶ. ೧೫೨೧ ರಲ್ಲಿ **ಫರ್ಡಿನಾಂಡ್ ಮ್ಯಾಗಲಿನ್** ಎಂಬ ನಾವಿಕನು ಸ್ಪೇನದ ಅರಸನ ನೆರವಿನಿಂದ ಪರ್ಯಟನಕ್ಕಾಗಿ ಹೊರಟು, ಈ ದ್ವೀಪಸಮೂಹದ ದಕ್ಷಿಣಕ್ಕೆ ಬಂದು ಮುಟ್ಟಿದನು. ಅಮಿಂಡಾನೋ ದ್ವೀಪದ ನಿವಾಸಿಗಳು ಈ ಬಿಳಿಯ ಜನರು ದೇವದೂತರೆಂದು ಭಾವಿಸಿ, ಅವರಿಗೆ ಪೂಜೆ-ಸತ್ಕಾರಗಳನ್ನು ಸಲ್ಲಿಸಿದರು. ಫರ್ಡಿನಾಂಡನು ಆ ದ್ವೀಪದ ಮೇಲೆ ಸ್ಪಾನಿಶ್ ಧ್ವಜವನ್ನು ನೆಟ್ಟು ಅದು ತಮ್ಮದಾಯಿತೆಂದು ಹೇಳಿದನು. ಆ ಜನರಿಗೆ ಇವನ ಮಾತು-ಕೃತಿಗಳ ಅರ್ಥವೇ ಆಗಲಿಲ್ಲ. ಅನಂತರ ಫರ್ಡಿನಾಂಡನು ಅಲ್ಲಿಯ ಸೇಬೂದರಾಜನ ಭೆಟ್ಟಿಗೆ ಹೊರಟನು. ಭೆಟ್ಟಿಯ ಕಾಲಕ್ಕೆ ಆ ರಾಜನೂ ಫರ್ಡಿನಾಂಡನೂ ಪರಸ್ಪರರ ಹೃದಯದಲ್ಲಿಯ ರಕ್ತಪ್ರಾಶನ ಮಾಡಿ, ತಮ್ಮ ಬಾಂಧವ್ಯವನ್ನು ವ್ಯಕ್ತಪಡಿಸಿದರು. ಫರ್ಡಿನಾಂಡನು ಆ ಅರಸನ ಕೂಡ ಸ್ಪೇನಿನ ರಾಜನ ಹೆಸರಿನಿಂದ ಒಡಂಬಡಿಕೆಮಾಡಿಕೊಂಡನು. ಬಳಿಕ ಹಡಗಿನಲ್ಲಿಯ ಮಿಶನರಿ ಜನರು ಮುಂದುವರಿದು, ರಾಜನಿಗೂ ಅಲ್ಲಿಯ ಅನೇಕ ಜನರಿಗೂ, 'ಬಾಪ್ತಿಸ್ಮಾ' ಕೊಟ್ಟು, ಧರ್ಮಾಂತರದ ಕಾರ್ಯವನ್ನು ಪ್ರಾರಂಭಿಸಿದರು. ಸೇಬೂದರಾಜನಿಗೆ ೧ನೆಯ ಚಾರ್ಲ್ಸನೆಂದು ಹೆಸರು ಕೊಡಲ್ಪಟ್ಟಿತು.

ಆ ಕಾಲಕ್ಕೆ ಸೇಬೂದ ರಾಜನು ನೆರೆಯ ಅರಸನ ಕೂಡ ಯುದ್ಧ ಹೂಡಿದ್ದನು. ಫರ್ಡಿನಾಂಡನು ತನ್ನ ಜನರೊಂದಿಗೆ ಸೇಬೂದ ರಾಜನಿಗೆ ಸಹಾಯಕನಾಗಿ ಹೋರಾಡಲು ಹೊರಟನು. ಈ ಕಾಡು ಜನರನ್ನು ನಿರಾಯಾಸದಿಂದ ಸೋಲಿಸಬಹುದೆಂದು ಫರ್ಡಿನಾಂಡ ನೆಗೆನಿಸಿತ್ತು. ಆದರೆ ಅವನೇ ಈ ಯುದ್ಧದಲ್ಲಿ ತನ್ನ ಜನರೊಂದಿಗೆ ಪ್ರಾಣಕ್ಕೆರವಾಗಬೇಕಾಯಿತು. ಮುಂದೆ ಫರ್ಡಿನಾಂಡನ ಸ್ಥಳಕ್ಕೆ ಬೇರೆ ಅಧಿಕಾರಿಗಳು ನೇಮಕವಾದರು. ಸ್ಪೇನದಿಂದ ಹೊಸ ಸೈನ್ಯವೂ ಬಂತು. ಕ್ರಮೇಣ ಈ ದ್ವೀಪದ ಒಂದೊಂದೇ ಭಾಗಗಳು ಆಕ್ರಮಿಸಲ್ಪಟ್ಟವು. ಕ್ರಿ. ಶ. ೧೫೬೫ ರಲ್ಲಿ ಇದು ಸ್ಪೇನದ ವಸಾಹತೆಂದು ಸಾರಲ್ಪಟ್ಟಿತು. ಮತ್ತು ಸನ್ ೧೫೭೧ ರಲ್ಲಿ ಮ್ಯಾನಿಲಾ ಶಹರವೂ ಅವರ ಅಧೀನವಾಯಿತು. ಒಟ್ಟಿಗೆ ೩೫೦ ವರ್ಷಗಳ ವರೆಗೆ ಈ ದ್ವೀಪವು ಸ್ಪೇನಿನ ಆಧಿಪತ್ಯದ ಕೆಳಗಿದ್ದಿತು. ಈ ಅವಧಿಯಲ್ಲಿ ಯಾವ ತರದ ಪ್ರತೀಕಾರವಿಲ್ಲದೆ ಸ್ಪೇನಿನ ರಾಜ್ಯಶಕಟವು ಸುಯಂತ್ರಿತವಾಗಿ ಸಾಗಿತ್ತೆಂದು ಯಾರೂ ಭಾವಿಸಕೂಡದು. (ಆದರೆ ಮಿಶನರಿ ಜನರ ಪ್ರಯತ್ನದಿಂದ ಇಡೀ ದ್ವೀಪವೇ ಕ್ರಿಸ್ತೀಧರ್ಮವುಯ

ವಾಯಿತು). ಫಿಲಿಪಿನೋಜರು ಸುಧಾರಿಸಿದ ಶೂರಜನರು. ಅವರ ಸುಧಾರಣೆಯು ಮೇಲ್ಸ್ತರಗತಿಯದಿದ್ದಿತು. ಆದರೆ ೭೦೮೪ ಭಿನ್ನ ಭಿನ್ನ ದ್ವೀಪಗಳಿಂದ ಕೂಡಿದ ಈ ದ್ವೀಪಸಮೂಹವು, ವಿಸ್ತೃತ ವಾದುದರಿಂದಲೇ ಅಲ್ಲಿ ಪರಕೀಯರ ಚಂಚುಪ್ರವೇಶಕ್ಕೆ ಆಸ್ಪದ ದೊರೆಯಿತು.

ಸ್ವಾತಂತ್ರ್ಯಯುದ್ಧದ ಪ್ರಾರಂಭ

ತಮ್ಮ ಮೇಲಿನ ಪರಚಕ್ರದ ಅನುಭವವು ಫಿಲಿಪಿನೋಜರಿಗೆ ಸ್ವಲ್ಪ ದಿವಸಗಳಲ್ಲಿಯೇ ಆಯಿತು. ಅವರು ಸ್ಪಾನಿಶ್‌ರಿಗೆ ಒಂದು ವರ್ಷ ಕೂಡ ಶಾಂತತೆಯಿಂದ ರಾಜ್ಯವಾಳಗೊಡಲಿಲ್ಲ. ಸ್ಪಾನಿಶ್‌ರು ಸೈನ್ಯಬಲದಿಂದ ಈ ದ್ವೀಪಗಳನ್ನು ತಮ್ಮ ಆಧೀನದಲ್ಲಿಟ್ಟುಕೊಳ್ಳಬೇಕಾದರೆ ಸಾಕುಬೇಕಾಯಿತು. ಕೇವಲ ಪಾಶವ ಶಕ್ತಿಯ ಬಲದಿಂದ ಯಾವ ಜನಾಂಗವನ್ನೂ ತಮ್ಮ ಆಧೀನದಲ್ಲಿ ಇಟ್ಟುಕೊಳ್ಳುವುದು ಶಕ್ಯವಿಲ್ಲೆಂಬುದನ್ನೂ ಅವರು ಸ್ಪಾನಿಶ್‌ರಿಗೆ ಮನಗಾಣಿಸಿಕೊಟ್ಟರು. ಇತಿಹಾಸವಾದರೂ ಇದೇ ಮಾತನ್ನು ದೃಢಪಡಿಸುತ್ತದೆ. ಜಗಜ್ಜೇತೃವಾದ ನೆಪೋಲಿಯನನನ್ನು ಬಿರೋಲಿನಿಯು ಧೃತಿಗೆಡಿಸಿದನು. ಪರಾಕ್ರಮಿಗಳಾದ ಆಸ್ಟ್ರಿಯನ್ ಜನರನ್ನು ಅಲ್ಪಸಂಖ್ಯಾಕರಾದ ಸ್ವಿಸ್ ಜನರು ತ್ರಾಹಿ ತ್ರಾಹಿ ಎನಿಸಿಬಿಟ್ಟರು. ಅದರಂತೆ ಫಿಲಿಪಿನೋಜರೂ ಅನೇಕ ಸಾರಿ ಸ್ಪೇನಿನ ವಿರುದ್ಧ ಬಂಡುಹೂಡಿದರು. ಪ್ರತಿಸಾರಿಯೂ ಸ್ಪೇನದಿಂದ ಹೊಸ, ಹೊಸ ದಂಡುಗಳು ಬಂದು, ತಮ್ಮ ರಾಜ್ಯಸತ್ತೆಯ ರಕ್ಷಣೆ, ಮಾಡಬೇಕಾಯಿತು. ಫಿಲಿಪಿನೋಜರು ಯಾವಕಾಲಕ್ಕೆ ಹಾಗೂ ಎಷ್ಟುಬಾರಿ ಬಂಡುಹೂಡಿದರೆಂಬುದನ್ನು ಕೆಳಗೆ ತೋರಿಸಿದೆ.

ಕ್ರಿ. ಶ. ೧೫೭೪, ೧೫೮೫, ೧೫೮೭, ೧೫೮೯, ೧೬೦೩, ೧೬೨೨, ೧೬೨೨ (ಪುನಃ) ೧೬೨೯, ೧೬೪೩, ೧೬೪೫, ೧೬೪೯, ೧೬೬೦, ೧೬೬೧, (ಪುನಃ) ೧೬೬೧, ೧೬೬೩, ೧೬೮೬, ೧೬೯೯, ೧೭೪೪, ೧೬೬೩, (ಪುನಃ) ೧೬೬೩, ೧೭೪೫, ೧೮೦೭, ೧೮೧೧, ೧೮೧೯, ೧೮೨೨, ೧೮೨೩ ೧೮೩೩, ೧೮೪೧, ೧೮೪೩, ೧೮೪೯, ೧೮೫೩, ೧೮೫೪, ೧೮೫೮, ೧೮೬೩, ೧೮೭೨. ಇಷ್ಟುಸಾರಿ ಬಂಡುಹೂಡಿದ ಉದಾಹರಣೆಗಳು ಜಗತ್ತಿನ ಇತಿಹಾಸದಲ್ಲಿಯೇ ಇಲ್ಲ. ಇವುಗಳಲ್ಲಿ ಕೆಲವು ಕ್ಷುಲ್ಲಕವಾಗಿದ್ದರೆ ಕೆಲವು ರಾಜ್ಯಶಕಟವನ್ನೇ ಬುಡಮೇಲು ಮಾಡುವಷ್ಟು ಶಕ್ತಿಯುತವಾಗಿದ್ದುವು. ಈ ಬಂಡುಗಳ ಪರಿಣಾಮವಾಗಿ ಸ್ಪಾನಿಶ್‌ರು ರಾಜ್ಯಸತ್ತೆಯನ್ನು ಬಿಟ್ಟುಕೊಟ್ಟು ತಮ್ಮ ದಾರಿಯನ್ನು ಕಂಡುಕೊಳ್ಳಬೇಕಾಯಿತು.

ಸನ್ ೧೮೭೨ರಲ್ಲಾದ ಬಂಡಾಯವು ಕೇವಲ ಫಿಲಿಪಿನೋಜ್ ಸಿಪಾಯಿಗಳದಾಗಿದ್ದಿತು. ಆದರೆ ಅದು ಅಕಾಲಕ್ಕೆ ಹೂಡಲ್ಪಟ್ಟದ್ದರಿಂದ ಯಶಸ್ವಿಯಾಗಲಿಲ್ಲ. ಆದರೂ ಇದರಿಂದ ಜನರಲ್ಲಿ ಇಷ್ಟ ಪ್ರತಿಕ್ರಿಯೆಯುಂಟಾಗಿ, ಅವರ ಹೃದಯದಲ್ಲಡಗಿದ್ದ ಪ್ರತೀಕಾರಾಗ್ನಿ ಹೊಗೆಯಾಡಹತ್ತಿತು. ಮುಂದೆ ಕೆಲವು ದಿನಗಳಲ್ಲಿಯೇ ಈ ಬಂಡಾಯದ ಧ್ವಜವನ್ನೆತ್ತಿಹಿಡಿಯಲು, ವಿದ್ಯಾರ್ಥಿಗಳು, ಡಾಕ್ಟರರು, ವಕೀಲರೇ ಮುಂತಾದ ಸುಶಿಕ್ಷಿತ ವರ್ಗವು ಮುಂದಾಯಿತು. ಇದರಲ್ಲಿ ಬಹುಸಂಖ್ಯಾಕರು ಸೆರೆಹಿಡಿಯಲ್ಪಟ್ಟರು. ಮತ್ತು ಮೂವರು ಪ್ರಮುಖರು ನಡುರಾಜಬೀದಿಯಲ್ಲಿಯೇ ಅತ್ಯಂತ ಕ್ರೂರತನದಿಂದ ಕೊಲ್ಲಲ್ಪಟ್ಟರು. ಆದರೆ ಫಿಲಿಪಿನೋಜರು ಇಂತಹ ಶಾರೀರಿಕ ಕಷ್ಟ-ನಷ್ಟಗಳಿಗೆ ಬೆದರಿ ಹಿಂಜರಿಯುವ ದೇಶಭಕ್ತರಾಗಿರಲಿಲ್ಲ. ತದ್ವಿರುದ್ಧವಾಗಿ ಜನತೆಯ ಹೃದಯದಲ್ಲಿ ಅಸಂತೋಷಾಗ್ನಿಯು ಮತ್ತಿಷ್ಟು ಪ್ರಜ್ವಲಿಸಿತು. 'ಕಾಟಿಪುನನ' ಎಂಬ ಕ್ರಾಂತಿಕಾರಕ ಸಂಸ್ಥೆಯು ಸ್ಥಾಪಿತವಾಗಿ, ದೇಶದ ತುಂಬೆಲ್ಲ ಹಬ್ಬಿತು. ಲಾಲೀಗಾ ಫಿಲಿಪಾಯಿನಾ (ಫಿಲಿಪಾಯಿನ್ಸ್ ಲೀಗ್) ಎಂಬ ಸಂಸ್ಥೆಯೂ ಇದೇ ಸಂಧಿಗೆ ಸ್ಥಾಪಿತವಾಯಿತು. ಈ ಸಂಘದ ನಾಯಕನಾದ **ಜೋಸೆ ರಿಝಾಲ**ನೆಂಬವನು ತ್ಯಾಗ, ದೇಶಭಕ್ತಿಗಳ ಮೂರ್ತಿಮಂತ ಪ್ರತೀಕವಾಗಿದ್ದನು. ಅವನು ಅಖಂಡ ೩೫ ವರ್ಷಗಳವರೆಗೆ ಮಾಡಿದ ಕಾರ್ಯದ ಫಲವಾಗಿ, ಇಡಿ ದೇಶವೇ ನವಚೈತನ್ಯದಿಂದ ತುಂಬಿ ತುಳುಕಹತ್ತಿತು. ಅಲ್ಲಿಂದ ಸ್ಪಾನಿಶ್ ಸತ್ತೆಯ ಉಚ್ಚಾಟನೆಯಾಗಲು ಪ್ರಾಮುಖ್ಯವಾಗಿ ಈ ಮಹಾಪುರುಷನ ಕೃತಿಗಳೇ ಕಾರಣವಾಗಿವೆ. ಇವನಂತಹ ಸ್ಫೂರ್ತಿದಾಯಕ ಚರಿತ್ರೆಗಳು ಇತಿಹಾಸದಲ್ಲಿಯೇ ತೀರ ವಿರಳ. ಈ ರೀತಿ ಈ ಶೂರ ದೇಶಭಕ್ತನು, ಫಿಲಿಪಿನೋಜರ ಅಂತಃಕರಣದಲ್ಲಿ ಸ್ವಾತಂತ್ರ್ಯಜ್ಯೋತಿಯನ್ನು ಹೊತ್ತಿಸಿ, ಕಡೆಗೆ ಸ್ಪಾನಿಶ್‌ರ ಗುಂಡಿಗೆ ತನ್ನ ದೇಹವನ್ನು ಆಹುತಿಕೊಟ್ಟನು.

ಇತ್ತ ಕಾಟಿಪುನನ ಸಂಸ್ಥೆಯು, ಗುಪ್ತರೀತಿಯಿಂದ ತನ್ನ ಚಟುವಟಿಕೆಗಳನ್ನು ಸಾಗಿಸಿ, ತನ್ನ ಬಲ ಬೆಳಸಿಕೊಂಡು, ಬಂಡಾಯದ ಸನ್ನಾಹವನ್ನು ಜೋರಿನಿಂದ ಸಾಗಿಸಿದ್ದಿತು. ಈ ಸಂಸ್ಥೆಯ ಸಭಾಸದರ ಭಾಷೆ-ಬರೆಹಗಳು ಸಾಂಕೇತಿಕವಾಗಿದ್ದುವು. ಈ ರೀತಿ ಅರಾಜಕ ಕಾರ್ಯಕ್ರಮ ಕೈಕೊಂಡ ಈ ಸಂಸ್ಥೆಯ ಕಡೆಗೆ ಸ್ವಾಭಾವಿಕವಾಗಿ ಪರದೇಶದ ಮಿಶನರಿಗಳು ವಕ್ರದೃಷ್ಟಿಯಿಂದ ನೋಡುತ್ತಿದ್ದರು. ಅವರಲ್ಲೊಬ್ಬನು ಒಂದು ದಿವಸ ಸಮಯ

(೪೦೯ ನೆಯ ಪುಟದಿಂದ ಮುಂದೆ ಸಾಗಿದ್ದು)

ವಿಕೃತಾಂಗಗಳ ತ್ರಿಭಂಗ ದೋಷವು ಕೂಡಿ ಬರುತ್ತದೆ. ಇರಲಿ. ಅದನ್ನು ಈಗ ಬದಿಗಿರಿಸುವ. ಇನ್ನು ಆಂಧ್ರ, ತಮಿಳು ಚಿತ್ರಪಟಗಳಂತೂ ಲಂಕಾದಹನ-ದಶಾವತಾರಗಳ ಕಾಲವನ್ನು ಬಿಟ್ಟು ಹೊಸಯುಗದಲ್ಲಿ ಹಜ್ಜೆಯನ್ನಿಡಲು ಹಿಂಜರಿಯುತ್ತಿವೆ. ಈ ಎಲ್ಲ ವಿಚಾರಗಳಿಂದ ನಮ್ಮ ಕರ್ನಾಟಕ ರಂಗಭೂಮಿಯಾಗಲಿ ಚಿತ್ರಪಟವಾಗಲಿ, ಮುಂಗಾಣದೆ ಸ್ತಂಭೀಭೂತವಾಗಿರುವಾಗ, ಸಮಾಜ ಸ್ವಾಸ್ಥ್ಯವನ್ನು ಕೆಣಕುವ ಮಹಾರಾಷ್ಟ್ರದ ನವಯುಗವು ಸಲ್ಲಿಸಿದ ಅಮೋಘವಾದ ಕಾಣಿಕೆಯನ್ನು ಕುರಿತು, ಈ ವಿಚಾರಗಳನ್ನು ಪ್ರಸ್ತಾಪಿಸಬೇಕಾಯಿತು-ಇಷ್ಟೆ.

ಸಾಧಿಸಿ, ಗುಪ್ತ ಮುದ್ರಣಾಲಯದೊಳಗಿಂದ ಈ ಸಂಸ್ಥೆಯ ಪ್ರಕಟನೆಯ ಪ್ರತಿಯೊಂದನ್ನು ಹಸ್ತಗತಮಾಡಿಕೊಂಡು, ಅದನ್ನು ಪೋಲೀಸರ ಸ್ವಾಧೀನಪಡಿಸಿದನು. ಅದರಲ್ಲಿ "ನಿರ್ದಿಷ್ಟಪಡಿಸಿದ ತಾರೀಖಿನ ದಿವಸ ದೇಶದ ತುಂಬ, ಕಂಡಲ್ಲಿ ಸ್ಪಾನಿಶ್‌ರನ್ನು ಕೊಲೆಮಾಡಬೇಕೆಂದು ಪ್ರತಿಯೊಬ್ಬ ಮೆಂಬರನಿಗೆ ಆಜ್ಞೆ ವಿಧಿಸಲಾಗಿತ್ತು. ಇಂಥ ಪ್ರಬಲ ಆಧಾರವು ಸಿಕ್ಕನಂತರ ಅಧಿಕಾರಿಗಳು ಸುಮ್ಮನಿರುವರೇ? ಕೈಗೆ ಸಿಕ್ಕ ಜನರು ಸೆರೆಹಿಡಿಯಲ್ಪಟ್ಟು ಗುಂಡಿನಿಂದ ಹೊಡೆಯಲ್ಪಟ್ಟರು. ಆದರೆ ಇಂಥ ದಬ್ಬಾಳಿಕೆಯಿಂದ ಜನತೆಯು ಶಾಂತವಾಗುವುದು ಶಕ್ಯವಿದ್ದಿಲ್ಲ.

ಇದೇ ಸಮಯಕ್ಕೆ ಅಧಿಕಾರಿಗಳು, ಜನರಿಗೆ ಈ ದ್ವೀಪದ ದಕ್ಷಿಣಭಾಗಕ್ಕೆ ಹೋಗಿ ನೆಲಸಲು ಒತ್ತಾಯಪಡಿಸಹತ್ತಿದರು. ಜನರಿಗೆ ಇದು ಸರಿಬಾರದ್ದರಿಂದ, ಅವರು ಅಧಿಕಾರಿಗಳ ಆಜ್ಞೆಯನ್ನುಲ್ಲಂಘಿಸಿದರು. ಇದಕ್ಕಾಗಿ ಅವರು ತಕ್ಕ ಶಿಕ್ಷೆಯನ್ನನುಭೋಗಿಸಬೇಕಾಯಿತು. ಕಡೆಗೆ ಈ ತರದ ಬಲುಮೆಯ ಆಡಳಿತಕ್ಕೆ ಜನತೆಯು ತೀರ ಬೇಸತ್ತಿತು.

ಸನ್ ೧೮೯೬ ರಲ್ಲಿ ಕಾಟಿಪುನನವು, ಜಪಾನದ ಚಕ್ರವರ್ತಿ ಮಿಕ್ಯಾಡೋನ ಕಡೆಗೆ, ಈ ದ್ವೀಪವನ್ನು ಜಪಾನ್ ಸಾಮ್ರಾಜ್ಯಕ್ಕೆ ಕೂಡಿಸಿಕೊಳ್ಳಬೇಕೆಂದು ಬಿನ್ನವಿಸಿ ಒಂದು ಮನವಿಯನ್ನು ಕಳಿಸಿತು. ಅದಕ್ಕೆ ೫೦೦೦ ಫಿಲಿಪಿನೋಜರ ರುಜುಗಳಿದ್ದುವು. ಜಪಾನವು ಎಂತಹ ನೀಚ ನಿರ್ದಯರಾಷ್ಟ್ರವಿದೆಯೆಂಬುದು ಈ ಪ್ರಸಂಗದಿಂದ ಬೆಳಕಿಗೆ ಬಂದಿತು. ತನಗೆ ಸಹಾಯಮಾಡುವುದು ಶಕ್ಯವಿಲ್ಲದಿದ್ದರೆ ಅದು ಸುಮ್ಮನುಳಿಯಬಹುದಾಗಿದ್ದಿತು; ಇಷ್ಟು ಸೌಜನ್ಯವನ್ನು ಕೂಡ ಜಪಾನವು ತೋರಿಸಲಿಲ್ಲ; ೫೦೦೦ ರುಜುಗಳುಳ್ಳ ಆ ಬಿನ್ನವತ್ತಳೆಯನ್ನು ಸ್ಪೇನಿನ ರಾಜನೆಡೆಗೆ ಕಳುಹಿಕೊಟ್ಟಿತು. ಅನುಕೂಲಕಾಲದ ಪ್ರತೀಕ್ಷೆ ಮಾಡುತ್ತ ಸ್ಪೇನವು ಕೆಲಕಾಲ ಸುಮ್ಮನಿದ್ದು, ತಕ್ಕ ಸಮಯಸಾಧಿಸಿ, ರುಜುಮಾಡಿದ ಆ ೫೦೦೦ ಜನರನ್ನು ಸಾಲಾಗಿ ನಿಲ್ಲಿಸಿ ಅವರ ಶಿರಚ್ಛೇದನ ಮಾಡಿ, ತನ್ನ ದ್ವೇಷ ತಣಿಸಿಕೊಂಡಿತು. ವಸ್ತುತಃ ಈ ದುರಂತದ ಶ್ರೇಯಸ್ಸೆಲ್ಲ ಜಪಾನಕ್ಕೇ ಸಲ್ಲತಕ್ಕದಾಗಿದೆ.

ಈ ಭೀಕರಹತ್ಯಾಕಾಂಡದಿಂದಲೂ, ಆ ಧೀರ ಫಿಲಿಪಿನೋಜರು ಬೆಚ್ಚಲಿಲ್ಲ, ಬೆದರಲಿಲ್ಲ. ಅವರ ಹೃದಯದಲ್ಲಿ ಪ್ರಜ್ವಲಿತವಾಗಿದ್ದ ಸ್ವಾತಂತ್ರ್ಯಜ್ಯೋತಿಯು ಈಗ ದಾವಾನಲದ ಸ್ವರೂಪವನ್ನು ತಾಳಿದ್ದಿತು. ಇಂಥ ಬಿರುಗಾಳಿಗಳಿಂದ ಅದು ನಂದುವ ಸ್ಥಿತಿಯಲ್ಲಿದ್ದಿಲ್ಲ; ಮತ್ತಿಷ್ಟು ಪ್ರಜ್ವಲಿಸಿತು. ಸನ್ ೧೮೯೬ ನೆಯ ಇಸ್ವಿಯ ಜುಲೈ ೫ ನೆಯ ತಾರೀಖಿನ ದಿವಸ, ೧೪೦೦೦ ಫಿಲಿಪಿನೋಜರು ಪಾಸಿಗದ ಖಿಂಡಿಯ ಬಳಿಯಲ್ಲಿ ಬಂಡಾಯಕ್ಕಾಗಿ ಒಟ್ಟುಗೂಡಿದರು. ಇದನ್ನು ಪ್ರತಿಬಂಧಿಸುವುದು ಅಧಿಕಾರಿಗಳಿಗೆ ಕಠಿನವಾಗಿ ತೋರತೊಡಗಿತು. ಹೆಜ್ಜೆಜ್ಜೆಗೆ ವಿರೋಧವಾಗಹತ್ತಿತು. ಸರಕಾರಕ್ಕೆ ಎಲ್ಲ ಫಿಲಿಪಿನೋಜರೂ ವೈರಿಗಳಂತೆ ತೋರತೊಡಗಿದರು. ಹೀಗೆ ಪರಿಸ್ಥಿತಿಯು ಭೀಕರ ರೂಪವನ್ನು

ಮನೆಗೊಂದು ಅಂದ-ಚೆಂದದ ಒಡವೆ ಅವಶ್ಯವಲ್ಲವೆ?
ದಣಿವಾರಿಸಿಕೊಳ್ಳಲು ಹಿತವಾದ ಆಸನವು ಬೇಕಲ್ಲವೆ?

ಹುಬ್ಬಳ್ಳಿಯ
ಸದ್ಗುರು ಉದ್ಯೋಗ ಮಂದಿರ
ಇವರು
ತಯಾರಿಸಿದ

ಸುಂದರ ಆಕಾರದ
ಸುಲಭ ಬೆಲೆಯ

'ಸುಮನ'

ಕುರ್ಚಿಯನ್ನು
ಉಪಯೋಗಿಸಿರಿ.



★

ಮನಮೊಪ್ಪುವ ಕೆಲಸಕ್ಕಾಗಿ ಇಲ್ಲಿಯೆ
ಬನ್ನಿರಿ!

ಕುರ್ಚಿ, ಮೇಜು, ಕಪಾಟು, ಬಾಕು,
ಟೀಪಾಯ್, ಸೋಫಾಸೆಟ್ಟುಗಳು —
ಆದೇಕೆ —
ಯಾವುದೆ ತರದ ಹೊಸ ಮಾದರಿಯ ಕಟ್ಟಿಗೆಯ
ಸಾಮಾನುಗಳನ್ನೂ ಶಾಸ್ತ್ರೀಯವಾಗಿ, ಯೋಗ್ಯ ಬೆಲೆಗೆ,
ತಯಾರಿಸಿ ಕೊಡುವೆವು.

★

ಕರ್ನಾಟಕದಲ್ಲಿ ಔದ್ಯೋಗಿಕಶಿಕ್ಷಣ ಕೊಡುವ ಆದ್ಯ ಸಂಸ್ಥೆ!

ಬಡಿಗತನದ

ಶಾಸ್ತ್ರೀಯ ಶಿಕ್ಷಣವು ನಮ್ಮಲ್ಲಿ ದೊರೆಯುವುದು
ವಿವರಗಳಿಗಾಗಿ ಬನ್ನಿರಿ, ಇಲ್ಲವೆ
ಬರೆಯಿರಿ.

ಶ್ರೀ ಸದ್ಗುರು ಉದ್ಯೋಗ ಮಂದಿರ,
ಸ್ಟೇಶನ್ ರೋಡ್,
ಹುಬ್ಬಳ್ಳಿ.

ಗೀತಾಗಾಂಭೀರ್ಯ
ಶ್ರೀಕೃಷ್ಣನ ಸಮಾಜಧರ್ಮ

ಬರೆದವರು : 'ಶ್ರೀರಂಗ'

ಅಚ್ಚಾಗಿ ಬೆಳಕಿಗೆ ಬಂದಿದೆ. ಈಗಾಗಲೆ ಹಲವು ವಾಚಕರ ಮನವನ್ನು ಕೂಡ ಮುಟ್ಟಿದೆ.

ಡೆಮಿ ಅಷ್ಟಪತ್ರದ ೩೫೦ ಕ್ಕಿಂತ ಹೆಚ್ಚು ಪುಟ

ಬೆಲೆ ಸಾದಾ ಪ್ರತಿಗೆ ೩-೦-೦
ಕ್ಯಾಲಿಕೋ ಪ್ರತಿಗೆ ೩-೮-೦

ಧಾರವಾಡದ ರಂಗಮಂಗ ರಂಜನೋದ್ಯಾನದ ಪ್ರಕಟನೆಯಿದು.

ಬೇಕಾದವರು ಲೇಖಕರೊಂದಿಗಾಗಲಿ
ಜಯಂತಿಯ ಕಾರ್ಯಾಲಯಕ್ಕಾಗಲಿ
ಪತ್ರ ಬರೆದು ತರಿಸಿಕೊಳ್ಳಬೇಕು.

ತಾಳಿದುದನ್ನು ಕಂಡು ಅಧಿಕಾರಿಗಳು ದಿಙ್ಮೂಢರಾದರು. ಕಡೆಗೆ ಸರಕಾರವೇ ಸಂಧಾನದ ಮಾತು-ಕತೆ ಸುರುಮಾಡಿತು.

ಸ್ವಾತಂತ್ರ್ಯದಾಹದಿಂದ ಪರಿತಪಿಸುತ್ತಿದ್ದ ಫಿಲಿಪಿನೋಜರು ಸಣ್ಣಪುಟ್ಟ ಹಕ್ಕು-ಬಾಧ್ಯತೆಗಳಿಂದ ತುಷ್ಟರಾಗುವುದೆಂತು ! ಎಸೆದ ಚೂರುರೊಟ್ಟಿಗಾಗಿ ಧಾವಿಸಲು ಅವರೇನು ಹಂದಿಯರೇ ? ಅವರು ಇತ್ತ ಲಕ್ಷ್ಯವನ್ನೇ ಕೊಡಲಿಲ್ಲ.

ಅದೇ ಇಸ್ವಿಯ ಆಗಸ್ಟ್ ೩೦ ನೆಯ ತಾರೀಖಿನ ದಿವಸ ಬಂಡು ಸಾರಲ್ಪಟ್ಟಿತು. ಬಂಡುಗಾರರೆಲ್ಲ ಮ್ಯಾನಿಲಾ ಪಟ್ಟಣದ ಬಳಿ ಒಟ್ಟುಗೂಡಿದರು. ಪ್ರಥಮಕ್ಕೆ ಬಂಡುಗಾರರು ಹಿಂದೂಡಲ್ಪಟ್ಟರು. ದೇಶದ ತುಂಬಾ ಲಷ್ಕರೀಕಾಯ್ದೆಯು ಸಾರಲ್ಪಟ್ಟಿತು. ಬಂಡುಗಾರರ ಮುಂದಾಳುಗಳೆಲ್ಲ ಸೆರೆಹಿಡಿಯಲ್ಪಟ್ಟರು. ಹಸುರು ಬಟ್ಟೆಯನ್ನು ಪರಿಧಾನಮಾಡಿದ ಭೂದೇವಿ, ಫಿಲಿಪಿನೋಜರ ರಕ್ತಾಭಿಷೇಕದಿಂದ ರಕ್ತವರ್ಣೆಯಾದಳು. ಇಷ್ಟರಿಂದ ಬಂಡಾಯವು ಶಾಂತವಾಗಲಿಲ್ಲ. ದೇಶದ ಮೂಲೆಮೂಲೆಗೂ ಅದರ ಜ್ವಾಲೆಯು ನಾಲಗೆಯನ್ನು ಚಾಚಿದ್ದಿತು. ಇತ್ತ ಗವ್ಹರ್ನರ್ ಜನರಲ್ಲನಾದ **ಬ್ಲಾಂಕೋನನ್ನು** ಅವನ ಸಲಹೆಗಾರರು ಸೆರೆಹಿಡಿದ ಜನರಿಗೆ ದೇಹಾಂತ ಶಿಕ್ಷೆಯನ್ನು ವಿಧಿಸುವಂತೆ ಒತ್ತಾಯಪಡಿಸುತ್ತಿದ್ದರು. ಮ್ಯಾನಿಲಾ ನಗರದೊಳಗಿನ ಎಲ್ಲ ಪತ್ರಿಕೆಗಳೂ ಬಂಡಾಯದ ವರ್ತಮಾನವನ್ನು ಪ್ರಸಿದ್ಧಿಸದಂತೆ ಪ್ರತಿಬಂಧಿಸಲ್ಪಟ್ಟುವು.

ಬಂಡುಗಾರರ ವಿಜಯ

ಒಂದರ ಹಿಂದೊಂದರಂತೆ ಎಲ್ಲ ಪ್ರಾಂತಗಳೂ ಬಂಡು ಸಾರಿದುವು. '**ಏಮಿಲೋ ಆಗಿನೋಲ್ಡೋ**' ಎಂಬ ಶಾಲೆಯ ಶಿಕ್ಷಕನು ಮುಂದೆ ಬಂದು, ಬಂಡುಗಾರರ ನೇತೃತ್ವವನ್ನು ವಹಿಸಿದನು. ಆ ಕಾಲಕ್ಕೆ ಅವನು ಕೇವಲ ೨೭ ವರ್ಷದವನಿದ್ದನು. ಇದರಿಂದ ಬಂಡಾಯದಲ್ಲಿ ಪ್ರಾಮುಖ್ಯವಾಗಿ ತರುಣ ವಿದ್ಯಾರ್ಥಿಗಳೇ ಭಾಗ ವಹಿಸಿದ್ದರೆಂದು ಧ್ವನಿತವಾಗುತ್ತದೆ. ಇಷ್ಟರಲ್ಲಿ ಸ್ಪೇನ್‌ನಿಂದ ೨೮೦೦೦ ಜನರುಳ್ಳ ಸೈನ್ಯಪಡೆಯೊಂದು ಅಲ್ಲಿ ಬಂದು ತಲ್ಪಿತು. ಇದರಲ್ಲಿಯ ಸೈನಿಕರು ಮುಖ್ಯವಾಗಿ ನವಯುವಕರೇ ಆಗಿದ್ದರು. ಅವರಿಗೆ ಶಸ್ತ್ರಾಸ್ತ್ರಗಳ ಪೂರಯಿಕೆಯೂ ಸಾಕಷ್ಟಿದ್ದಿಲ್ಲ. ಫಿಲಿಪಿನೋಜರ ಸ್ಥಿತಿಯು ಇದಕ್ಕೂ ಕನಿಷ್ಠತರಗತಿಯದಾಗಿದ್ದಿತು. ಅವರ ಬಂದೂಕುಗಳು ನೀರಿನ ನಳದ ಕೊಳವೆಗಳ ತುಂಡುಗಳಿಗೆ ತಾರಾಯಂತ್ರದ ತಂತಿಗಳನ್ನು ಕಟ್ಟಿ ಮಾಡಲ್ಪಟ್ಟಿದ್ದುವಂತೆ ! ಗುಂಡುಗಳಾದರೋ ಚರ್ಚಿನೊಳಗಿನ ಗಂಟೆಗಳನ್ನು ಕರಗಿಸಿ ಮಾಡಿದುವುಗಳಾಗಿದ್ದುವು. ಜೀವನಕ್ಕಿಂತಲೂ ಪ್ರಿಯವಾದ ತಮ್ಮ ಸ್ವಾತಂತ್ರ್ಯದ ಸಲುವಾಗಿ ಅವರು ಪ್ರಾಣದ ಪರಿವೆಯಿಲ್ಲದೆ ಕಾದಿದರು. ಸ್ಪಾನಿಶ್‌ರು ಅಮಾನುಷರೀತಿಯಿಂದ ಅವರನ್ನು ಹಿಂಸಿಸಿದರು. ಸೆರೆಯಾಳುಗಳ ಕೈಕಾಲು ಕಟ್ಟಿ, ಸಾಮಾನುಗಳಂತೆ ಅವರನ್ನು ಒಬ್ಬರಮೇಲೊಬ್ಬರಂತೆ ಹಡಗಿನಲ್ಲಿ ಹೇರಿ ಸ್ಪೇನಕ್ಕೆ ಕಳಿಸಿದರು. ಈ ಯುದ್ಧವು ಬಹುದಿವಸ ಸಾಗಿತು. ಸ್ವಲ್ಪಕಾಲ ಮಂದವಾದರೂ ಪುನಃ ಜೋರಿನಿಂದ ಸುರುವಾಗುತ್ತಿದ್ದಿತು.

ಆ ಕಾಲಕ್ಕೆ ತನ್ನ ಪರಾಕ್ರಮದಿಂದ ಸ್ಪೇನಿನಲ್ಲಿ ಹೆಸರುವಾಸಿಯಾದ ಫ್ರಿಮೋರಾ ಡಿ. ರಿವ್ಹೇರಾ ಎಂಬವನು, ಸನ್ ೧೮೯೭ನೆಯ ಇಸ್ವಿಯ ಎಪ್ರಿಲ್ ತಿಂಗಳಲ್ಲಿ, ಗವ್ಹರ್ನರ್ ಜನರಲ್ಲನೆಂದು ಈ ದ್ವೀಪಕ್ಕೆ ಕಳಿಸಲ್ಪಟ್ಟನು. ಅವನು ಬಂಡುಗಾರರಿಗೆ ಅಭಯಕೊಟ್ಟು ಶಸ್ತ್ರಗಳನ್ನು ಕೆಳಗಿಡಲು ಬಿನ್ನವಿಸಿದನು. ಈ ಬಂಡಾಯದಲ್ಲಿ ಒಟ್ಟು ೩೦೦೦೦ ಜನ ಫಿಲಿಪಿನೋಜರು ಮಡಿದರು. ಭೂಮಿಯನ್ನು ಸಾಗುವಳಿ ಮಾಡುವವರಿಲ್ಲದ್ದರಿಂದ, ದೇಶದ ತುಂಬಾ ಭೀಕರ ಬರಬಿದ್ದಿತು. ನಿಯಮಿತವಾಗಿ ಸ್ಪಾನಿಶ್ ಸೈನಿಕರ ಸಂಬಳವು ಮುಟ್ಟದ್ದರಿಂದ ಅವರು ಅಸಂತುಷ್ಟರಾಗಿದ್ದರು. ಸ್ವಾತಂತ್ರ್ಯವೇ ತಮ್ಮ ಜೀವನದುಸಿರೆಂದು ತಿಳಿದದ್ದರಿಂದ ಫಿಲಿಪಿನೋಜರು ಮಾತ್ರ ಯಾವ ಕಷ್ಟ-ನಷ್ಟಗಳಿಗೂ ಸೊಪ್ಪುಹಾಕಲಿಲ್ಲ. ಈ ಬಂಡುಗಾರರು ಎರಡು ಮಹತ್ವದ ಕೋಟೆಗಳನ್ನು ಆಕ್ರಮಿಸಿಕೊಂಡಿದ್ದರು. ಅಲ್ಲಿಂದ ಅವರು ಆಕಸ್ಮಿಕವಾಗಿ ಸ್ಪೇನಿನ ಸೈನ್ಯ-ಪಾಳ್ಯದ-ಮೇಲೆ ಹಲ್ಲೆಮಾಡಿ ತಿರುಗಿ ಬರುತ್ತಿದ್ದರು. ಇದನ್ನಡಗಿಸಲು ಸರಕಾರವು ವಿಶ್ವಪ್ರಯತ್ನಮಾಡಿದರೂ ಸಾಧ್ಯವಾಗಲಿಲ್ಲ.

ಶಸ್ತ್ರಾಸ್ತ್ರಗಳ ಅಭಾವದಿಂದ ಬಂಡಾಯವನ್ನು ಮುಂದುವರಿಸುವುದು ಕಷ್ಟಸಾಧ್ಯವೆನಿಸಿದ್ದರಿಂದ, ಸರಕಾರವು ಇಂಥಿಂಥ ಕರಾರುಗಳಿಗೆ ಒಪ್ಪುತ್ತಿದ್ದರೆ ಮಾತ್ರ ಸಂಧಾನವು ಶಕ್ಯವಿದೆಯೆಂದು ಬಂಡುಗಾರರು ಒಂದು ಜಾಹೀರ್‌ನಾಮೆಯನ್ನು ತೆಗೆದರು. ಸರಕಾರಕ್ಕೂ ಇದೇ ಬೇಕಾಗಿದ್ದಿತು. ಕಡೆಗೆ ಅವರು ಆಗಿನೋಲ್ಡೋನಿಗೆ ಅರಣ್ಯದಲ್ಲಿ ಭೆಟ್ಟಿಯಾಗಿ, '**ಬಿಕಾನೋ ಬಾಟೋ**' ದ ಒಡಂಬಡಿಕೆಯನ್ನು ಮಾಡಿಕೊಂಡರು.

ಇದರಿಂದ ಸರಕಾರವು ಬಂಡುಗಾರರಿಗೆ ೧೦ ಲಕ್ಷ ಡಾಲರುಗಳನ್ನು ಕೊಡಬೇಕೆಂದೂ, ಬಂಡುಗಾರರು ಸರಕಾರದೊಡನೆ ಸ್ನೇಹದಿಂದಿರಬೇಕೆಂದೂ ನಿರ್ಧರಿಸಲ್ಪಟ್ಟಿತು. ಸರಕಾರಕ್ಕೆ ಈ ಒಪ್ಪಂದ

ವನ್ನು ಪಾಲಿಸುವ ಇಚ್ಛೆಯು ಎಷ್ಟೂ ಇದ್ದಿಲ್ಲ. ಆಗಿನೋಲ್ಡೋನ ಕೈಯಲ್ಲಿ ೪ ಲಕ್ಷ ಡಾಲರು ಕೊಟ್ಟದ್ದೇನೋ ನಿಜ. ಇಷ್ಟಾದ ಕೂಡಲೆ ಶಸ್ತ್ರಸಂಗ್ರಹಕ್ಕಾಗಿ ಅವನು ಬೇರೊಂದು ದ್ವೀಪಕ್ಕೆ ಹೊರಟುಹೋದನು. ಇತ್ತ ಸರಕಾರವು ಅನೇಕ ಬಂಡುಗಾರರನ್ನು ಸೆರೆಹಿಡಿಯಿತು. ಅವರಲ್ಲಿ ಕೆಲವರು ಗಲ್ಲಿಗೇರಿಸಲ್ಪಟ್ಟರು. ಈ ರೀತಿ ಸರಕಾರವೇ ಒಪ್ಪಂದದ ಕರಾರುಗಳಿಗೆ ಆರದಾಳ ಬಡಿಯಿತು.

ಇದೇ ಸುಮಾರಿಗೆ, ಸರಕಾರದ ಅತ್ಯಂತ ವಿಶ್ವಾಸಿಕ ತದ್ದೇಶಿಯ ಸೈನ್ಯದ ತುಂಡಿಗೆ ಫಿಲಿಪಿನೋಜರ ಮೇಲೆ ಗುಂಡುಹಾರಿಸಲು ಆಜ್ಞೆ ವಿಧಿಸಲಾಯಿತು. ಆದರೆ ಅವರಿದಕ್ಕೆ ಸಮ್ಮತಿಸಲಿಲ್ಲ. ಅದರಿಂದ ಆ ಸೈನ್ಯವಿಭಾಗಕ್ಕೆ ಮರಣದಂಡನೆ ವಿಧಿಸುವೆವೆಂದು ಬೆದರಿಕೆ ಹಾಕಲಾಯಿತು. ಆದರೆ ಅವರು ನೌಕರಿಯನ್ನೆ ಎಸಗಾಲಿ ನಿಂದೊದ್ದು ಹೊರಹೊರಟರು. ಬೇರೊಂದು ಸೈನ್ಯದ ತುಕಡಿಯೂ ಇವರನ್ನೇ ಅನುಕರಿಸಿತು. ಇದರಿಂದ ಬಂಡುಗಾರರು ಮತ್ತಿಷ್ಟು ಉತ್ತೇಜಿತರಾದರು. ಸ್ಪೇನ್ ಸರಕಾರವು ಬೆದರಿತು. **ಬಿಕಾನೋ ಬಾಟೋದ** ಒಡಂಬಡಿಕೆಯು ರದ್ದುಗೊಳಿಸಲ್ಪಟ್ಟಿತು ಮತ್ತು ಅದನ್ನು ಮಾಡಿಕೊಂಡ '**ರಿವ್ಹೇರಾ**'ನನ್ನು ಹಿಂದಕ್ಕೆ ಕರೆಯಿಸಲಾಯಿತು.

ಅಮೇರಿಕೆಯೊಡನೆ ಸಂಧಾನ

ಇತ್ತ ಫಿಲಿಪಾಯಿನ್ಸಿನಿಂದ ಹೊರಟ ಆಗಿನೋಲ್ಡಾನು ಹಾಂಗ್‌ಕಾಂಗಕ್ಕೆ ಬಂದುಮುಟ್ಟಿದನು. ಅಲ್ಲಿ ಶಸ್ತ್ರಸಂಗ್ರಹದ ಕಾರ್ಯವನ್ನು ಆರಂಭಿಸಿದನು. ಬಂಡುಗಾರರ ಈ ಚತುರ ಮುಂದಾಳನ್ನು, ಅಮೇರಿಕೆಯು ಹೇಗೆ ಮೋಸಗೊಳಿಸಿ ಈ ದ್ವೀಪವನ್ನು ತನ್ನ ಅಧೀನದಲ್ಲಿಟ್ಟುಕೊಂಡಿತೆಂಬ ಉದ್ವೇಗಜನಕ ಇತಿಹಾಸದ ಕಡೆಗೆ ನಾವಿನ್ನು ಹೊರಳೋಣ.

ಆ ಕಾಲಕ್ಕೆ ಸ್ಪೇನ್-ಅಮೇರಿಕೆಗಳ ಸಂಬಂಧವು ನೆಟ್ಟಗಿದ್ದಿಲ್ಲ. ಹಾಂಗ್‌ಕಾಂಗದಲ್ಲಿ ಬಂದಿಳಿದ ಅಮೇರಿಕದ ನಾವಿಕದಳದ ಅಧಿಪತಿಯಾದ ಅಡ್ಮಿರಲ್ ಡ್ಯೂಯಿ ಎಂಬವನು, ತ್ರಯಸ್ಥರ ಮುಖಾಂತರ ಆಗಿನೋಲ್ಡಾನ ಕೂಡ ಸಂಧಾನದ ಮಾತು-ಕತೆ ನಡೆಯಿಸಿದನು. ಸಂತ್ರಸ್ತರಾದ ಸ್ಪಾನಿಶ್‌ರನ್ನು ಸಹಜವಾಗಿ ಸೋಲಿಸಬಹುದೆಂದು ಅಮೇರಿಕನರಿಗೆನಿಸಿತ್ತು. ಆದರೆ ಈ ಬಂಡುಗಾರರು ಅವರ ಮಾರ್ಗಮಧ್ಯದಲ್ಲಿ ಆತಂಕವಾಗಿದ್ದರು. ಇವರನ್ನು ಹೇಗೆ ದೂರಮಾಡಬೇಕೆಂಬುವೇ ಅವರ ಮುಂದಿನ ಮಹತ್ತ್ವದ ಸಮಸ್ಯೆಯಾಗಿದ್ದಿತು.

ಸಿಂಗಾಪುರದಲ್ಲಿ 'ಪ್ರೆ' ಎಂಬ ಒಬ್ಬ ಇಂಗ್ಲಿಷ್ ಮನುಷ್ಯನಿದ್ದನು. ಅವನು ಆಗಿನೋಲ್ಡಾನ ಮಿತ್ರನಾಗಿದ್ದನು. ಅಮೇರಿಕನರ ಸೂಚನೆಯಂತೆ ಅವನು ಆಗಿನೋಲ್ಡಾನನ್ನೂ, ಡ್ಯೂಯಿಯನ್ನೂ ಸಿಂಗಾಪುರಕ್ಕೆ ಕರೆಯಿಸಿ, ಅವರಿಬ್ಬರಿಗೂ ಒಡಂಬಡಿಕೆ ಮಾಡಿಸಿದನು. ಈ ಒಪ್ಪಂದವನ್ನು ಅಮೇರಿಕನರು ಬಚ್ಚಿಟ್ಟುಕೊಳ್ಳುತ್ತಾರೆ. ಯಾಕೆಂದರೆ—ಅದರಲ್ಲಿ ಫಿಲಿಪಾಯಿನ್ಸಿನ ಸ್ವಾತಂತ್ರ್ಯವು ಮಾನ್ಯ ಮಾಡಲ್ಪಟ್ಟಿದ್ದಿತು. ಸ್ಪೇನಿನ ಜುಲುಮೆಯಿಂದ ಕ್ಯೂಬಾ ದ್ವೀಪವನ್ನು ಮುಕ್ತಮಾಡಿದಂತೆ, ತನ್ನ ದೇಶವನ್ನೂ ಕೇವಲ ಭೂತದಯೆಯಿಂದ ಅಮೇರಿಕನ್‌ರು ಮುಕ್ತಗೊಳಿಸುವರೆಂದು, ಆಗಿನೋಲ್ಡಾನು ಭಾವಿಸಿದನು. ಪಾಪ ಅವನಿಗೇನು ಗೊತ್ತು? ಅಮೇರಿಕನ್‌ರ ಕೃಷ್ಣಕಾರಸ್ಥಾನ?

ಫಿಲಿಪಿನೋಜರು ತಾ. ೧೨ನೆಯ ಜೂನ್ ೧೮೯೮ನೆಯ ಇಸ್ವಿ ದಿವಸ ತಮ್ಮ ದೇಶದ ಸ್ವಾತಂತ್ರ್ಯದ ಘೋಷಣೆ ಮಾಡಿದರು. ಈ ಘೋಷಣೆಗೆ ಅಮೇರಿಕನ್‌ರ ಆಕ್ಷೇಪವಿರಲಿಲ್ಲ. ಇಷ್ಟೇ ಅಲ್ಲ, ತಮ್ಮ ಸರಿ-ಸಮಾನದರ್ಜೆಯ ರಾಷ್ಟ್ರವೆಂದು ತಿಳಿದು, ಅಮೇರಿಕನ್‌ರು, ಫಿಲಿಪಿನೋಜರ ಧ್ವಜಕ್ಕೆ ವಂದಿಸುತ್ತಿದ್ದರು. ಆಗಿನೋಲ್ಡಾನು ತನಗವಶ್ಯವಿದ್ದ ಶಸ್ತ್ರಾಸ್ತ್ರಗಳನ್ನು 'ಡ್ಯೂಯಿ'ಯ ಕಡೆಯಿಂದ ಕೊಂಡುಕೊಂಡನು.

ವಿಮೋಚನ ಹಾಗೂ ಪುನರ್ಬಂಧನ

ಜನತೆಯು ಆಗಿನೋಲ್ಡಾನ ನೇತೃತ್ವದ ಕೆಳಗೆ ಅತ್ಯಂತ ಕಲಿತನದಿಂದ ಕಾದಹತ್ತಿತು. ಜಗತ್ತಿನ ಇತಿಹಾಸದಲ್ಲಿ ಇಂತಹ ಕಾರ್ಯದ ಉದಾಹರಣೆಗಳು ತೀರ ವಿರಳ. ಸ್ವಾತಂತ್ರ್ಯಕ್ಕಾಗಿ ಹೋರಾಡುವ ವೀರರಲ್ಲಿ ಅಪೂರ್ವ ಬಗೆಯ ಸ್ವಯಂಸ್ಫೂರ್ತಿಯು ಜನಿಸುತ್ತದೆ. ಅಂತೆಯೆ ಅವರು ಅಸಾಮಾನ್ಯ ಪರಾಕ್ರಮವನ್ನು ಪ್ರಕಟಿಸಲು ಶಕ್ಯರಾಗುತ್ತಾರೆ. ಅಮೇರಿಕನ್ ಅಧಿಕಾರಿಗಳು ಇವರ ಪರಾಕ್ರಮವನ್ನು ಕಂಡು ಆಶ್ಚರ್ಯಚಕಿತರಾದರು. ಸ್ಪಾನಿಶ್ ಸೈನಿಕರು ಇವರ ಅಗ್ನಿವರ್ಷಾವವನ್ನು ಎದುರಿಸಲಾರದೆ ಹಿಂಜರಿಯತೊಡಗಿ, ಕಡೆಗೆ ಮ್ಯಾನಿಲ್ಲಾ ನಗರವನ್ನು ಆಕ್ರಮಿಸಿದರು. ಫಿಲಿಪಿನೋಜರು ಮ್ಯಾನಿಲ್ಲಾಕ್ಕೆ ಮುತ್ತಿಗೆ ಹಾಕಿದರು.

ಮುತ್ತಿಗೆಯು ಹೀಗೆಯೇ ಕೆಲಕಾಲ ಸಾಗಿತು. ತಮ್ಮ ಜಯದ ವಿಷಯಕ್ಕೆ ಹತಾಶನಾದ ಸ್ಪೇನ್ ಸೇನಾನಾಯಕನು ಒಪ್ಪಂದದ ಮಾತು-ಕತೆಗೆ ಪ್ರಾರಂಭಮಾಡುವುದರಲ್ಲಿದ್ದನು. ಇನ್ನೇನು, ಸ್ಪಾನಿಶ್ ರಾಜ್ಯಸತ್ತೆಯ ರಾಹುಗ್ರಹಣದಿಂದ ಫಿಲಿಪಾಯಿನ್ಸಿನ ಸ್ವಾತಂತ್ರ್ಯಸೂರ್ಯನು ಮುಕ್ತನಾಗುವ ಯೋಗವು ಬಂದೊದಗಿತ್ತು. ಆದರೆ ವಿಧಿಲೀಲೆಯೆ ಬೇರೆಯಾಗಿದ್ದಿತು. ಫಿಲಿಪಿನೋಜರ ಕೊರಳಲ್ಲಿ ಹಾಕಲು ವಿಜಯಲಕ್ಷ್ಮಿಯು ಕೈಯಲ್ಲಿ ಹಿಡಿದ ಜಯಮಾಲೆಯನ್ನು, ಸ್ವಾರ್ಥಿಯೂ ವಿಶ್ವಾಸಘಾತಕಿಯೂ ಆದ ಅಮೇರಿಕವು ಒತ್ತಾಯದಿಂದ ಕಸಿದುಕೊಂಡಿತು. ಅಮೇರಿಕವು ತನ್ನ ಕೃಷ್ಣಹೃದಯವನ್ನು ಈಗ ಬಹಿರಂಗಗೊಳಿಸಿತು. ಫಿಲಿಪಿನೋಜರು ಸ್ಪಾನಿಶ್‌ರನ್ನು ಪರಾಭವಗೊಳಿಸಿದನಂತರ, ಅಮೇರಿಕವು ವಿಜಯಶಾಲಿಗಳಾದ ಫಿಲಿಪಿನೋಜರನ್ನು ಜಯಿಸಲಿಚ್ಛಿಸುವುದು ಕ್ರಮಪ್ರಾಪ್ತವಾಗಿತ್ತು. ಆನಂದದ ಉಬ್ಬಿನಲ್ಲಿದ್ದ ಆ ಸರಳ ಸ್ವಭಾವದ ಫಿಲಿಪಿನೋಜರಿಗೇನು ಗೊತ್ತು....ತಾವು ಅಮೇರಿಕನ್‌ರಿಂದ ಪುನಃ ಶೃಂಖಲಾಬದ್ಧರಾಗುವುದಿದೆಯೆಂಬ ಸಂಗತಿಯು? ಸಾಮ್ರಾಜ್ಯಶಾಹಿ ರಾಷ್ಟ್ರಗಳ ಇತಿಹಾಸವು ಇಂತಹ ಕೃಷ್ಣಕೃತ್ಯಗಳ ಆಗರವೇ ಆಗಿದೆ.

ಮ್ಯಾನಿಲ್ಲಾ ಪಟ್ಟಣವು ಇನ್ನು ೪-೬ ತಾಸುಗಳಲ್ಲಿ ಸ್ಪಾನಿಶ್‌ರ ಕೈಬಿಡುವುದೆಂದು ತೋರಹತ್ತಿದ ಕೂಡಲೆ ಅಮೇರಿಕನ್ನರು ಸ್ಪಾನಿಶ್‌ರೊಡನೆ ಸಂಧಾನದ ಮಾತು-ಕತೆ ಆರಂಭಿಸಿದರು. ಕಡೆಗೆ ಸ್ಪಾನಿಶ್‌ರು ಮ್ಯಾನಿಲ್ಲಾ ಪಟ್ಟಣದ ಮೇಲಿನ ತಮ್ಮ ಧ್ವಜವನ್ನು ಕೆಳಗಿಳಿಸಬೇಕೆಂದೂ, ಅಮೇರಿಕನ್‌ರು ಒಳಗೆ ಪ್ರವೇಶಿಸಿ ಆ ಸ್ಥಳ

ದಲ್ಲಿ ತಮ್ಮ ಧ್ವಜವನ್ನು ನೆಡಬೇಕೆಂದೂ ನಿರ್ಧರಿಸಲ್ಪಟ್ಟಿತು. ಹೆಚ್ಚಿಗೆ ಜಗ್ಗಾಡದೆ ಸ್ಪ್ಯಾನಿಶ್‌ರು ಒಂದೇ ಕರಾರಿನ ಮೇಲೆ ಇದಕ್ಕೆ ಸಮ್ಮತಿಸಿದರು. ಅದೆಂದರೆ 'ಶ್ವೇತವರ್ಣೀಯರಾದ ನಿಮ್ಮ ಸ್ವಾಧೀನಕ್ಕೆ ಈ ಪಟ್ಟಣವನ್ನು ಒಪ್ಪಿಸುವುದಕ್ಕೇನೂ ಅಭ್ಯಂತರ ವಿಲ್ಲ ; ಆದರೆ ನೀವು ಆ ಕರಿಯಬಣ್ಣದ ಫಿಲಿಪಿನೋಜರನ್ನು ಒಳಗೆ ಪ್ರವೇಶಿಸಗೊಡಕೂಡದು' ಎಂಬುದು.

ಮಿತ್ರನಾಗಿದ್ದ ಅಗಿನೋಲ್ಡೋನು ಅಮೇರಿಕನ್‌ರಿಗೆ ಈಗ ಒಮ್ಮೆಲೆ ಶತ್ರುವಾಗಿ ಪರಿಣಮಿಸಿದನು. ಅಮೇರಿಕನ್ ಸೈನ್ಯವು ಕಂದಕದಲ್ಲಿ ನಿಂತು ಯುದ್ಧಮಾಡುತ್ತಿದ್ದ ಫಿಲಿಪಿನೋಜರನ್ನು ಒಮ್ಮೆಲೆ ಮುತ್ತಿತು. ಅಮೇರಿಕನ್ ಸೇನಾಧಿಪತಿಯು 'ಹಿಂದಕ್ಕೆ ಸರಿಯಿರಿ, ಇಲ್ಲದಿದ್ದರೆ ನಿಮ್ಮ ಮೇಲೆ ಗುಂಡುಹಾರಿಸಲ್ಪಡುವುವು' ಎಂದು ಫಿಲಿಪಿನೋಜರನ್ನು ಗರ್ಜಿಸಿದನು. ಪಾಪ! ಅಗಿನೋ-ಲ್ಡೋನಿಗೆ ಈ ಪರಿಸ್ಥಿತಿ ಪಲ್ಲಟದ ಅರ್ಥವೆ ಆಗಲಿಲ್ಲ. ಅವನು ಹೌಹಾರಿದನು, ಕಡೆಗೆ ವಸ್ತುಸ್ಥಿತಿಯು ತಿಳಿದುಬಂದಿತು.

ಅಗಿನೋಲ್ಡೋನು ಅಮೇರಿಕನರ ಹುಕುಮಿಗೆ ಕಿವಿಗೊಡದೆ ಮುಂದುವರಿಯಲು ಯತ್ನಿಸಿದನು. ಆದರೆ ಬಲಾಢ್ಯ ಅಮೇರಿಕನ ಸೈನ್ಯದ ಮುಂದೆ ಅವನಾಟವು ಸಾಗಲಿಲ್ಲ ; ಅಮೇರಿಕವು ಮ್ಯಾನಿಲ್ಲಾ ನಗರದ ಮೇಲೆ ತನ್ನ ಧ್ವಜವನ್ನು ನೆಟ್ಟಿತು. ಆದರೆ ಅದು ಸ್ವಂತ ವಿಶ್ವಾಸಘಾತಕತನದ ದ್ಯೋತಕ ಧ್ವಜವಾಗಿದ್ದಿತು. ಮುಂದಾದ ಒಡಂಬಡಿಕೆಯಲ್ಲಿ, ಅಮೇರಿಕೆಯು ಸ್ಪೇನಿಗೆ ೨ಕೋಟಿ ಡಾಲರುಗಳನ್ನು ಕೊಡಲೊಪ್ಪಿ, ಆ ದ್ವೀಪದ ಮೇಲಿನ ಸಂಪೂರ್ಣ ಸ್ವಾಮಿತ್ವವನ್ನು ಪಡೆದುಕೊಂಡಿತು.

ಅಮೇರಿಕೆಯು ತನ್ನ ಈ ಅವಿಶ್ವಾಸದ ಕೃತ್ಯದಿಂದ, ಸ್ವಾತಂತ್ರ್ಯ ವಾದಿಯೆಂಬ ತನ್ನ ಹೆಸರಿಗೇ ಕಲಂಕ ತಂದುಕೊಂಡಿತು. ಪೂರ್ವದ ಒಡಂಬಡಿಕೆಯನ್ನು ಒದೊಗೆದು, ನಿರ್ಲಜ್ಜತನದಿಂದ, ಫಿಲಿಪಾಯಿನ್ಸನ್ನು ತನ್ನಾಧೀನದಲ್ಲಿ ಇಟ್ಟುಕೊಳ್ಳುವೆವೆಂದು ಸಾರಿತು. ಆ ಕಾಲಕ್ಕೆ ಮ್ಯಾಕ್‌ಕಿನಲೆ ಎಂಬವರು ಅಮೇರಿಕೆಯ ಅಧ್ಯಕ್ಷರಿದ್ದರು. ಮಿ. ಆಂಡ್ರ್ಯೂ ಕಾರ್ನೆಗಿ ಎಂಬವರ ಕಿವಿಗೆ ಈ ಸುದ್ದಿಯು ಬಿದ್ದಕೂಡಲೆ, ಅವರು ಅಧ್ಯಕ್ಷರ ಕಡೆಗೆ ಧಾವಿಸಿ ಹೋಗಿ, ಹೀಗೆ ಮಾಡುವುದು ಉಚಿತವಲ್ಲವೆಂದು ಪರಿ-ಪರಿಯಿಂದ ಹೇಳಿದರು. ಅದಕ್ಕೆ ಅಧ್ಯಕ್ಷಮಹಾಶಯರು ಕೊಟ್ಟ ಉತ್ತರ ವಿದು : 'That public opinion demanded that ilands be kept,' ಈ ಕೃಷ್ಣಕೃತ್ಯವು ಜನಾಭಿಪ್ರಾಯಕ್ಕನು ಸರಿಸಿಯೇ ಮಾಡಲ್ಪಟ್ಟಿದೆಯೆಂದು ಸಾಧಿಸುವುದರಿಂದೇನೂ, ಅದರ ಉಗ್ರತ್ವವು ಕಡಿಮೆಯಾಗುವುದಷ್ಟರಲ್ಲಿಯೆ ಇದೆ. ಇದು ಪ್ರಜಾ-ಸತ್ತಾತ್ಮಕ ರಾಜ್ಯಪದ್ಧತಿಯ ವಿಡಂಬನೆಯಲ್ಲದೆ ಮತ್ತೇನು?

ಈ ದ್ವೀಪದ ಟೆಂಗಿನಕಾಯಿ, ಜೂಟು, ತಂಬಾಕು, ಸಕ್ಕರೆಗಳ ವ್ಯಾಪಾರವು ಅಮೇರಿಕನ್ ಜನತೆಯ ಬಾಯಿಗೆ ನಿರೂರಿಸಿತು. ಫಿಲಿಪಿನೋಜರಿಗೆ ಅಮೇರಿಕನ್ನರ ಹರಾಮಖೋರ್ ಕೃತ್ಯದ ಬಗ್ಗೆ ತುಂಬಾ ಸಂತಾಪವೆನಿಸಿತು. ಆದರೆ ಮಾಡುವರೇನು? ಹೊಟ್ಟೆ ಯಲ್ಲಿಯ ಸಿಟ್ಟು ರಟ್ಟೆಯಲ್ಲಿಲ್ಲದಾಗಿದ್ದಿತು.

ಅಮೇರಿಕನ್‌ರ ಈ ಕೃಷ್ಣಕೃತ್ಯಕ್ಕೆ ಬ್ರಿಟಿಷರೂ ಸಹಾಯಕ ರಾಗಿದ್ದರು. ಫಿಲಿಪಾಯಿನ್ಸಿಗೆ ಸ್ವಾತಂತ್ರ್ಯ ಕೊಡಬೇಕೋ ಹೇಗೆಂಬ ನಾಟಕೀಯ ವಾದ-ವಿವಾದವು ಅಮೇರಿಕೆಯಲ್ಲಿ ನಡೆದಾಗ, ಕೈಯಲ್ಲಿಯ ಈ ದ್ವೀಪವನ್ನು ಬಿಡಕೂಡದೆಂದು ಬ್ರಿಟಿಷ್ ವೃತ್ತ-ಪತ್ರಗಳು ಆಗ್ರಹಮಾಡುತ್ತಿದ್ದುವು. ಬಿಳಿಯವರ್ಣದವರಾದ ನಾವು ನಮ್ಮ ಕರ್ತವ್ಯವನ್ನು ಮಾಡಲೇಬೇಕೆಂದು ಅವು ಉಪದೇಶಿ ಸುತ್ತಿದ್ದುವು. ಅಹಾ! ಎಂತಹ ಕರ್ತವ್ಯನಿಷ್ಠೆಯಿದು?

ಬ್ರಿಟಿಷ್ ಮುತ್ಸದ್ದಿಗಳೂ ಇದೇರೀತಿ ಸಲಹೆಕೊಡುತ್ತಿದ್ದರು. ಆದರೆ ಅಮೇರಿಕನ್‌ರಿಗೆ ಇಂತಹ ಸಲಹೆ-ಉಪದೇಶಗಳ ಅವಶ್ಯಕತೆ ಅಷ್ಟರಲ್ಲಿಯೇ ಇತ್ತು. ೬ ಕೋಟಿ ರೂಪಾಯಿಗಳಿಗೆ ಈ ದ್ವೀಪ ಗಳನ್ನು ಕೊಂಡುಕೊಂಡೆವೆಂಬ ನೆಪವನ್ನು ಮುಂದೆಮಾಡಿದರೂ, ಆ ಹಣವು ಸ್ಪೇನಿಗೆ ದೊರಕುವ ಬದಲು ಅವರಿಗೆ ಮದ್ದು-ಗುಂಡು ಪೂರಯಿಸಿದವರೆಂದು ಬ್ರಿಟಿಷರಿಗೆ ಕೊಡಲ್ಪಟ್ಟಿತು.

ಸ್ಪಾನಿಶ್‌ರು ತಮ್ಮ ಒಪ್ಪಂದದ ಕರಾರುಗಳ ಈ ಪರ್ಯವಸಾನ ವನ್ನು ಕಂಡು, ಒಂದು ಶಿಷ್ಟಮಂಡಳವನ್ನು ವಾಶಿಂಗ್ಟನ್ನಿಗೆ ಕಳಿಸ್ಕಿ ದರು. ಅಲ್ಲಿ ಇವರ ಮಾತಿಗೆ ಕಿವಿಗೊಡುವರಾರು? ಮತ್ತೊಂದು ಶಿಷ್ಟಮಂಡಳವು ಪ್ಯಾರಿಸ್ಸಿನ ಶಾಂತತಾಪರಿಷತ್ತಿಗೆ ಕಳಿಸಲ್ಪಟ್ಟಿತು. ಈ ಶಿಷ್ಟಮಂಡಳದ ಆಗಮನವನ್ನು ಕಂಡು, ತನ್ನ ಶಾಂತತಾಭಂಗ ವಾದೀತೆಂಬ ಹೆದರಿಕೆಯಿಂದ ಆ ಪರಿಷತ್ತು ಬಾಗಿಲನ್ನಿಕ್ಕಿ ಕೊಂಡಿತು.

ಫಿಲಿಪಿನೋಜ ಮತ್ತು ಅಮೇರಿಕನ್‌ರ ನಡುವೆ ಚಕಮಕಿ ಗಳಾಗುತ್ತಲೇ ಇದ್ದುವು. ಅಮೇರಿಕವು ಇಂಗ್ಲಿಷರ ಅನುಕರಣ ಮಾಡಿ ಅವರನ್ನು ಸಂಪೂರ್ಣ ನಿಃಶಸ್ತ್ರರನ್ನಾಗಿ ಮಾಡಿತು. ಫಿಲಿಪಿನೋಜರು ಈ ಅಪಮಾನದ ಪ್ರೀತ್ಯರ್ಥವಾಗಿ, ತಮ್ಮ ಬಲಿದಾನ ಮಾಡಿದರು. ೫-೬ ವರ್ಷಗಳವರೆಗೆ ಬಂಡಾಯವು ಸಾಗಿತು. ಅನೇಕ ಅಮೇರಿಕನ್‌ರು ಕೊಲ್ಲಲ್ಪಟ್ಟರು.

ಕಡೆಗೆ ಅಮೇರಿಕೆಯು ಫಿಲಿಪಿನೋಜರಿಗೆ ಸ್ವಾತಂತ್ರ್ಯದ ಅಭಿವಚನವನ್ನು ಕೊಟ್ಟಿತು. ಆದರೆ ಇಷ್ಟುದಿವಸಗಳ ವರೆಗೆ ಅದರ ವಿಡಂಬನೆ ಮಾಡುತ್ತ ಬಂತು; ಇದೀಗ ನಿರ್ದಿಷ್ಟ ಅವಧಿಯು ಗೊತ್ತುಪಡಿಸಲ್ಪಟ್ಟಿದೆ.

ಸದ್ಯಕ್ಕೆ ಜಪಾನಿಗಳು ಈ ದ್ವೀಪಗಳ ಮೇಲೆ ಆಕ್ರಮಣ ನಡೆಯಿ ಸಿರುತ್ತಾರೆ; ಫಿಲಿಪಿನೋಜರಿಗೆ ಈ ಮೊದಲು ಮಾಡಿದ ಉಪಕಾರ ವನ್ನು (!) ಮರೆತು, ತಾವಿಬ್ಬರೂ ಒಂದೇವರ್ಣದವರಾದುವರಿಂದ ಫಿಲಿಪ್ಪೈನ್ಸಿನ ಸಂರಕ್ಷಣೆ ಮಾಡುವ ತನ್ನ ಜವಾಬ್ದಾರಿಯನ್ನು ದುರ್ಲಕ್ಷಿಸುವುದು ಶಕ್ಯವಿಲ್ಲವೆಂದೂ ಪ್ರತಿಪಾದಿಸುತ್ತಾರೆ. ಆದರೆ ಇಂಥ ಬೂಟಾಟಿಕೆಯ ಮಾತುಗಳಿಗೆ ಮೋಸಹೋಗುವಷ್ಟು ಫಿಲಿಪಿನೋಜರೇನೂ ಮೂರ್ಖರಿಲ್ಲ. ಫಿಲಿಪಿನೋಜರು ಇನ್ನೂ ಅದೆಷ್ಟು ಕಷ್ಟ-ನಷ್ಟಗಳನ್ನು ಎದುರಿಸಬೇಕಾಗುವುದೋ, ಹಾಗೂ ತಮ್ಮ ಜೀವನದುಸಿರಾದ ಸ್ವಾತಂತ್ರ್ಯವನ್ನೆಂದು ಪಡೆಯುವರೋ? ಆ ಕಾಲಪುರುಷನೊಬ್ಬನಿಗೇ ಅದು ಗೊತ್ತು.

ಮನೆಯಲ್ಲಿಯೆ ಹೊಲಿಗೆ ಕಲಿಯಿರಿ!

ಶ್ರೀ. ಹಳಪೇಟೆ ಚಿಂತಾಮಣಿರಾಯರು ಟಿ. ಸಿ. ಡಿ.

ಹೊಲಿಗೆಯ ಶಿಕ್ಷಕರು ಕೆ. ಇ. ಬೋರ್ಡ್, ಧಾರವಾಡ.

ಬಾಲಕರ ಜೋಡಂಗಿ

(ಸೇಲರ್ ಸೂಟ್)

ಅಳತೆಗಳು :—

೨೨ ಇಂಚು ಎದೆ. ೨೧ ಇಂಚು ಸೊಂಟ. ೧೦½ ಇಂಚು ಸೊಂಟದ ಉದ್ದ. ೧೨ ಇಂಚು ಚಡ್ಡಿಯ ಉದ್ದ. ೫½ ಇಂಚು ಅರ್ಧ ಭುಜ. ೬ ಇಂಚು ತೋಳು.

ವಿವರ :—

ಬೆಡಗಿನ ಕೊರಳುಪಟ್ಟಿ. (ಕಾಲರ್) ಮೇಲಿನ ಅಂಗಿ ಹಾಗೂ ಚಡ್ಡಿಗಳನ್ನು ಗುಂಡಿಗಳಿಂದ ಜೋಡಿಸುವುದು. ಅರ್ಧ ತೋಳು. ೧ ಜೇಬು.

ಕತ್ತರಿಸುವುದು :—

ಮೇಲಿನ ಅಂಗಿಯ ಹಿಂಭಾಗ.

ಬ, ಅ, ಕ ಕಾಟಕೋನ.

ಅ, ತ=೫½'' ಎಂದರೆ ಎದೆಯ ¼.

ಅ, ಕ=೧೦½'' ಎಂದರೆ ಸೊಂಟದ ಉದ್ದ.

ತ, ಕ ರೇಷೆಗಳನ್ನು ಮುಂದೆ ಬೆಳೆಯಿಸಿರಿ.

ಅ, ಡ=⅓''.

ಅ, ಇ=೧⅚'' ಎಂದರೆ ಎದೆಯ ೧/೧೨.

ಡ, ಇ ಚಿತ್ರದಂತೆ ಕೂಡಿಸಿರಿ.

ಅ, ರ=೫½ ಅರ್ಧ ಭುಜ.

ರ, ವನ್ನು ಸರಳವಾಗಿ ಕೆಳಕ್ಕೆಳೆಯಿರಿ.

ರ, ನ=೧½''.

ಇ, ನ ಕೂಡಿಸಿರಿ.

ತ, ಮ=೬½'' ಎಂದರೆ ಎದೆಯ ¼+¾''.

ಸ, ಮ ಚಿತ್ರದಂತೆ ಬಾಗು ಕೂಡಿಸಿರಿ.

ಮ, ವನ್ನು ಗ ಕ್ಕೆ ಸರಳವಾಗಿ ಕೆಳಗೆ ಎಳೆಯಿರಿ.

ಗ, ದ=⅓''.

ದ, ಮ ಕೂಡಿಸಿರಿ.

ಮುಂಭಾಗ :—

ಅ, ತ, ಕ ರೇಷೆಗಳನ್ನು ಬ, ಣ, ಉ ಗಳ ವರೆಗೆ ಬೆಳೆಯಿಸಿರಿ.

ಮ, ಣ=೬½'' ಎಂದರೆ ಎದೆಯ ¼+೧½''.

ಣ, ವನ್ನು ಬ, ಉ ಗಳ ವರೆಗೆ ಸರಳವಾಗಿ.



ಬ, ಚ=೧⅚'' ಎಂದರೆ ಎದೆಯ ೧/೧೨.

ಬ, ಎ=೨⅓'' ಎಂದರೆ ಎದೆಯ ೧/೧೨+½''.

ಚ, ಎ ಕೊರಳು ಕೂಡಿಸಿರಿ.

ಚ, ನ ಕೂಡಿಸಿರಿ.

ಚ, ಜ ಹಿಂಭಾಗದ ಇ, ನ ದಷ್ಟು.

ಣ, ಯ=೪½'' ಎಂದರೆ ಎದೆಯ ¼-೧''.

ಕೊರಳುಪಟ್ಟಿ :—

ಚ, ಜ., ಇ, ನ ಗಳನ್ನು ಎಂದರೆ ಭುಜ ವನ್ನು ಕೂಡಿಸಿ ಚಿತ್ರದಲ್ಲಿ ತೋರಿಸಿದ ಆಕಾರದ ಕೊರಳುಪಟ್ಟಿಯನ್ನು ಪ್ರತ್ಯೇಕವಾಗಿ ತೆಗೆದು ಹಚ್ಚಬೇಕು.

ಜೇಬು :—

ಉ, ಣ ಕೂಡಿಸಿರಿ.

ಲ, ಟ=⅔''.

ಟ, ವ=೩''.

ವ, ಶ=೩½''.

ಶ, ಷ=೩½''.

ತೋಳು :—

ಬ, ಅ, ಕ ಕಾಟಕೋನ.

ಅ, ಬ=೬'' ಎಂದರೆ ಎದೆಯ ¼+⅓''.

ಅ, ಕ ೬'' ತೋಳಿನ ಉದ್ದ.

ಅ, ಡ ೨½ ಎದೆಯ ೧/೧೨+½''.

ನ, ಇದು ಅ, ಬ ಗಳ ಮಧ್ಯ.

ಡ, ನ, ಬ ಬಾಗು ಕೂಡಿಸಿರಿ.

ಡ, ಬ ಇನ್ನೊಂದು ಬಾಗು, ಚಿತ್ರದಂತೆ.

ಚಡ್ಡಿ :— ಮುಂಭಾಗ.

ಬ, ಅ, ಕ ಕಾಟಕೋನ.

ಅ, ತ=೫⅓'' ಎಂದರೆ ಎದೆಯ ¼.

ಅ, ಕ ೧೨'' ಎಂದರೆ ಚಡ್ಡಿಯ ಉದ್ದ.

ತ, ಕ ಮುಂದೆ ಬೆಳೆಯಿಸಿರಿ.

ತ, ರ ೬½'' ಎಂದರೆ ಎದೆಯ ¼+೧''.

ಯ, ಲ=⅓''.

ಜ, ಲ=ಕೂಡಿಸಿರಿ.

ಜ, ಲ, ಮ. ಗಳ ಬಾಗನ್ನು ಚಿತ್ರದಂತೆ ಕೂಡಿಸಿರಿ.

ಗ, ಥ=⅓''.

ಮ, ಥ ಕೂಡಿಸಿರಿ.

ಗ, ಧ ಹಾಗೂ ಗ, ಪ ಭಾಗವನ್ನು ಕತ್ತರಿಸಬೇಕು. ಇಲ್ಲವೇ ಹಾಗೇ ಹಿಡಿಯಬೇಕು.

ಎ, ಫ=೩/೪″.

ಉ, ಫು=೧/೪″.

ಫ, ಫು ಕೂಡಿಸಿರಿ.

ಮೇಲ್ಪಟ್ಟಿಯನ್ನು ಚಿತ್ರದಂತೆ.

ರ, ದ=೬೩/೪ ಎಂದರೆ ಎದೆಯ ೧/೪-೧/೪″.

ದ, ಎ ಸರಳವಾಗಿ.

ರ, ಬ ಭಾಗವನ್ನು ಚಿತ್ರದಂತೆ.

ಕ, ಫ ೪″ ಎಂದರೆ ಕ, ರ ಕ್ಕಿಂತ ೩/೪″ ಕಡಿಮೆ.

ರ, ಫ ಕೂಡಿಸಿರಿ.

ಹಿಂಭಾಗ :—

ಇ. ಚ=೩/೪″.

ಕ, ಟ=೩/೪″.

ಚ, ಟ ಕೂಡಿಸಿರಿ.

ಬ, ನ=೧೩/೪″.

ನ, ಚ ಕೂಡಿಸಿರಿ.

ರ, ಇ=೧೩/೪″.



ನ, ಇ ಚಿತ್ರದಂತೆ ಕೂಡಿಸಿರಿ.

ಫ, ಡ ೧೧/೪″.

ಇ, ಡ ಕೂಡಿಸಿರಿ.

ಕತ್ತರಿಸುವಾಗ ಕ, ಫ, ಟ, ಡ. ಗಳ ಕೆಳಗೆ ೨″ ಬಟ್ಟೆ ಹೆಚ್ಚು ಬೇಕು.

ಬೇಕಾಗುವ ಬಟ್ಟೆ:—

ಮೇಲಿನ ಅಂಗಿಗೆ ಬೇಕಾದ ಒಗೆಯು ತಿಳುವಾದ ಬಟ್ಟೆ ನಡೆಯುವುದು.

ಕೆಳಗಿನ ಚಡ್ಡಿಗೆ. ಅಂಗಿಯ ಬಟ್ಟೆಗೆ ಹೊಂದಿಕೆಯಾಗುವ ಬಣ್ಣದ ಮಖಮಲ್ಲಿನ ದಾಗಲಿ, ಕೋಟಿನ ಬಟ್ಟೆಯನ್ನು ಮಾತ್ರಗಿರುವ ಯಾವುದೇ ಎದ್ದು ಕಾಣುವ ಬಣ್ಣದ ಬಟ್ಟೆಯಾಗಲಿ ನಡೆಯುವುದು. ಈ ಚಡ್ಡಿಯ ಬಟ್ಟೆಯನ್ನೇ ಕೊರಳಪಟ್ಟಿಗೂ, ಜೇಬಿನ ಮೇಲ್ಪಟ್ಟಿಗೂ, ತೋಳಿನ ಮುಂದಿನ ಭಾಗಕ್ಕೂ ಸಾಮಾನ್ಯವಾಗಿ ಹಚ್ಚುವರು.

ಮೇಲಿನ ಅಂಗಿಗೆ ೩೬″ ಅಗಲದ ೩/೪ ವಾರ.

ಕೆಳಗಿನ ಚಡ್ಡಿಗೆ ೩೬″ ಅಗಲದ ೧ ವಾರ.

ಹೀಗೆ ಬಟ್ಟೆ ಬೇಕು.

(ಮುಂದಿನ ಸಲ "ಚಿತ್ತಚೋರ"(ಸುರವಾಲ).

ಗನೋರಿಯಾ, ಪರಮಾರೋಗ, ಉಷ್ಣರೋಗದ ಮೇಲೆ

ಔಷಧ

೭ ದಿವಸಗಳಲ್ಲಿ ಈ ರೋಗ ಗುಣಹೊಂದುವುದು ಗ್ಯಾರಂಟಿ !

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದಿ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದಿಂದ ಕೆಂಪು ಹಿಂದಕ್ಕೆ ಸರಿಯುವಿದ್ದರೆ, ಶರೀರದ ಸತ್ವ ಕ್ಷಯವಾಗಿದ್ದರೆ, ಹೊಟ್ಟೆ ಉಬ್ಬಿದ್ದರೆ, ಉಷ್ಣದಿಂದ ಜೇರು ಆಳವಿದ್ದರೆ, ಉರುಚು ಆಗಿದ್ದರೆ, ಮೂಳವ್ಯಾಧಿ, ಭಗೇಂದ್ರ, ಗಂಡಮಾಲೆ, ಕೈಕಾಲುನೋವು, ಅರ್ಧಾಂಗವಾಯು, ನಡುನೋಯುವುದು, ಸ್ತ್ರೀಯರ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಳೆಕಟ್ಟು, ಗರ್ಮಿಯಿಂದ ಗರ್ಭಕೋಶನಾಶವಾಗಿದ್ದರೆ, ಸರಿಯಾಗಿ ಶೋಧಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ ಈ ಎಲ್ಲ ರೋಗಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲುದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ, ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪ್ರತಿ ದಿವಸ ಬೆಳಿಗ್ಗೆ ಒಂದೇಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಛಳಿ-ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಬಳ್ಳೊಳ್ಳಿ ಬಿಡಬೇಕು.

ಬಾಟ್ಲಿಂಗೆ ೩ ರೂ. ಪೋಸ್ಟ್ ಚಾರ್ಜ ೧೦ ಆಣೆ.

ಮಕ್ಕಳನ್ನು ಹಡೆಯುವದು ಸಾಕು

ಅಶಕ್ತ ಹೆಣ್ಣುಮಕ್ಕಳಿಗೆ ★ ರೋಗಗ್ರಸ್ತ ಸ್ತ್ರೀಯರಿಗೆ

ಬರ್ಥ್ ಕಂಟ್ರೋಲ್

★

ಒಂದು ದಿವಸದ ಈ ಮಾತ್ರೆಗಳನ್ನು ಸೇವನಮಾಡಿದರೆ, ಮುಂದೆ ಬಹಳ ದಿನವಾಗಿಯೂ ಮಕ್ಕಳಾಗುವದಿಲ್ಲ, ಸ್ತ್ರೀಯರು ಪ್ರತಿ ತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು ಪ್ರದರರೋಗ, ಹೊಳೆಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿ ದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ ಸಂಜೆಗೆ ೧ ಗುಳಿಗೆ ಯಂತೆ ಊಟಕ್ಕೆ ಮೊದಲು ತಕ್ಕೊಳ್ಳಬೇಕು. ೭ ದಿವಸ ಈ ಔಷಧವನ್ನು ಮುಟ್ಟಿನಲ್ಲಿ ಸೇವಿಸಬೇಕು.

ಪಥ್ಯ: ಹರವೀಪಲ್ಲೆ ಬಿಡಬೇಕು.

೭ ದಿವಸದ ಸಂಪೂರ್ಣ ಔಷಧದ ಕಿಮ್ಮತ್ತು

೫ ರೂಪಾಯಿ ಪೋಸ್ಟ್ ಚಾರ್ಜ ೧೦ ಆಣೆ.

ಏಜಂಟರು:

ಗದಗ ಫಾರ್ಮಸಿ, ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ ಫಾರ್ಮಸಿ

ವಿಳಾಸ:— ಹಾಲಪ್ಪಾ ಹಾವಣಗೇರಿ ಆಯುರ್ವೇದ ಔಷಧಗಳ ದವಾಖಾನೆ, ಗದಗ.

ಸಾದರ ಸ್ವೀಕಾರ

೬೬. **ಜಾತ್ರೆಗಳ ಸುಧಾರಣೆ** (ವಿಚಾರ ವಿಕಾಸಕ ಲಘುಗ್ರಂಥ): ಬರೆದವರು ಶ್ರೀಮಾನ್ ಹರ್ಡೇಕರ ಮಂಜಪ್ಪನವರು; ಪ್ರಕಾಶಕರು ಶ್ರೀಮಾನ್ ಜವಳಿ ಮಹಾಂತಪ್ಪನವರು ಚಿತ್ರವಾಡಿಗಿ, ಜಿಲ್ಹಾ ಬಳ್ಳಾರಿ. ಶ್ರೀಕಲ್ಮಠೇಶ ಜಾತ್ರೆಯ ಗ್ರಂಥಮಾಲೆ ಪು. ೧; ಡೆ. ೧೬ ದ ೨೪ ಪುಟಗಳು.

ಶ್ರೀ. ಹರಡೇಕರ ಮಂಜಪ್ಪನವರ ಪ್ರಗತಿಪರ ಸಾಮಾಜಿಕ ವಿಚಾರಗಳ ಪರಿಚಯ ಹಲವು ಕನ್ನಡಿಗರಿಗಿದೆ. ನಮ್ಮ ಹಳ್ಳಿಯ ಸಾಮಾಜಿಕ ಸಂಸ್ಥೆಯೊಂದಾದ ಜಾತ್ರೆಯನ್ನು ಹೊಸಕಾಲಕ್ಕೆ ತಕ್ಕಂತೆ ಅದರಲ್ಲಿ ತಿದ್ದುಪಡಿ ಮಾಡಿ, ಸಮಾಜದ ಹೊಸಜೀವನಕ್ಕೆ ಅದನ್ನು ಹೇಗೆ ಅಳವಡಿಸಿಕೊಳ್ಳಬಹುದೆಂಬುದನ್ನು ಅವರು ಈ ಕಿರುಹೊತ್ತಗೆಯಲ್ಲಿ ಚೆನ್ನಾಗಿ ಬರೆದಿದ್ದಾರೆ. ಜಾತ್ರೆಯನ್ನು ಮಾಡುತ್ತಿರುವ ಹಳ್ಳಿಗರೂ ಪಟ್ಟಣಿಗರೂ ಇದನ್ನು ಓದಿ ಪ್ರಯೋಜನ ಪಡೆಯಬಹುದು.

೬೭. **ತರುಣರ ಕೈಗನ್ನಡಿ** (ನಿಬಂಧ-ಸಂಗ್ರಹ) ಇದನ್ನು ಕೂಡ ಶ್ರೀಮಾನ್ ಮಂಜಪ್ಪನವರೇ ಬರೆದಿದ್ದು, ಮೇಲಿನ ಕಲ್ಮಠೇಶ ಜಾತ್ರೆಯ ಗ್ರಂಥಮಾಲೆಯ ೨ನೆಯ ಪುಷ್ಪವಾಗಿ ಹೊರಟಿದೆ. ಕ್ರಾ. ೮. ೨೮ ಪುಟಗಳು.

ಇದರಲ್ಲಿ ತರುಣರಿಗೆ ಆದರ್ಶಬೋಧಕವಾದ 'ಜೀವನದ ಗುರಿ' 'ಶಕ್ತಿಸಂಪಾದನೆ' 'ಕೌಟುಂಬಿಕ ಕರ್ತವ್ಯ' 'ರಾಷ್ಟ್ರಸೇವೆ' ಎಂಬ ನಾಲ್ಕು ಪ್ರಬಂಧಗಳಿವೆ. ಸಮಾಜಸೇವೆ ಮಾಡಬೇಕೆಂಬ ತರುಣರು ಅವಶ್ಯವಾಗಿ ಇದನ್ನೋದಬೇಕು.

೬೮. **ಗಾಂಧೀಸಂದೇಶ** ಇದು ಕಲ್ಮಠೇಶ ಜಾತ್ರೆಯ ಗ್ರಂಥಮಾಲೆಯ ೩ನೆಯ ಪುಷ್ಪ. ಶ್ರೀಮಾನ್ ಮಂಜಪ್ಪನವರಿಂದ ಸಂಗ್ರಹಗೊಂಡುದಾಗಿದೆ. ಡೆ. ೧೬ ದ ೩೨ ಪುಟಗಳು.

ಇದರಲ್ಲಿ, ಮಹಾತ್ಮಾಗಾಂಧಿಯವರ ವಿಧಾಯಕ ಧರ್ಮದ ತಳಹದಿಗಳಾದ ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಭಯ, ಅಸ್ವಾದ, ಅಸ್ತೇಯ, ಅಪರಿಗ್ರಹ, ಖಾದಿ, ಅಸ್ಪೃಶ್ಯತಾ ನಿವಾರಣೆ, ಸತ್ಯಾಗ್ರಹ, ಹಿಂದು–ಮುಸ್ಲಿಂ ಐಕ್ಯತೆ, ಹಿಂದುಧರ್ಮ ಈ ೧೨ ವಿಷಯಗಳನ್ನು ಕುರಿತು ಮಹಾತ್ಮರು ಬರೆದ ೮೩ ವಚನಗಳನ್ನು ಒಂದೆಡೆಯಲ್ಲಿ ಸಂಗ್ರಹಿಸಲಾಗಿದೆ.

೬೯. **ಗೀತಾದರ್ಶ** (ಗೀತೆಯ ೧ ರಿಂದ ೬ ಅಧ್ಯಾಯಗಳು). ಉಡುಪಿ ಸಂಸ್ಥಾನ ಶ್ರೀಶಿರೂರುಮಠದ ಶ್ರೀ ೧೦೮ ಶ್ರೀಮಲ್ಲಕ್ಷ್ಮೀಂದ್ರ ತೀರ್ಥ ಶ್ರೀಪಾದಂಗಳವರು. ಟೀಕೆ ಟಿಪ್ಪಣಿ ಬರೆದಿದ್ದು, ಶ್ರೀಮಾನ್ ಎಂ. ಆರ್. ರಾವ್ ಎಂ. ಎ. ಪ್ರಿನ್ಸಿಪಾಲ್ ಎಸ್. ಎಂ. ಎಸ್. ಪಿ. ಸಂಸ್ಕೃತ ಕಾಲೇಜ್ ಉಡುಪಿ ಅವರು ಪ್ರಕಾಶಿಸಿದ್ದಾರೆ. ಕ್ರಾ. ೮. ೧೮೮ ಪುಟಗಳು. ಬೆಲೆ ?

೭೦. ರಾಣೀಬಿನ್ನೂರಿನ ಕರ್ನಾಟಕ ಸಂಘದ ವಾರ್ಷಿಕ (೧೯೪೨) ವರದಿ. ಕಾರ್ಯದರ್ಶಿ ಶ್ರೀಮಾನ್ ಟಿ. ಡಿ. ನಾಯಕ ಬಿ. ಎ. ಬಿ. ಟಿ. ಅವರು.

ಉಪನ್ಯಾಸ, ಪುಸ್ತಕ ಭಾಂಡಾರ, ನಾಡ-ಹಬ್ಬ, ನಾಟ್ಯಶಾಲೆ, ಸಾಹಿತ್ಯಪರೀಕ್ಷೆ ಮೊದಲಾದ ಹಲವು ಚಟುವಟಿಕೆಗಳನ್ನು ಕೈಕೊಂಡು, ಉತ್ಸಾಹದಿಂದ ಮುಂದುವರಿಸುತ್ತ ಕನ್ನಡ ಜಾಗೃತಿಯ ಕೆಲಸವನ್ನು ಈ ಸಂಘ ಮಾಡುತ್ತಲಿದೆ. ಸಾರ್ವಜನಿಕರು ಸಾಕಷ್ಟು ಪ್ರೋತ್ಸಾಹವನ್ನಿತ್ತು ಸಂಘದಿಂದ ಪ್ರಯೋಜನವನ್ನು ಹೆಚ್ಚುಹೆಚ್ಚಾಗಿ ಪಡೆದುಕೊಳ್ಳಬೇಕು.



೭೧. **ರೂಪಾರ್ಲಿಯ ಆಚಾರ್ಯರು** (ಕಾದಂಬರಿ) ಲೇಖಕರು ಶ್ರೀ. ಕಟ್ಟಿ ಶೇಷಾಚಾರ್ಯರು, ಬಿ. ಎ., ಎಲ್. ಎಲ್. ಬಿ. ವಕೀಲರು ಬೆಳಗಾಂವಿ. ಕ್ರಾ. ೮. ೧೬೦ ಪುಟ. ಬೆಲೆ ೦-೧೨-೦. ಲೇಖಕರೇ ಪ್ರಕಾಶಕರು.

೭೨. ರಕ್ತ (ವೈಜ್ಞಾನಿಕ) ಶ್ರೀ. ಡಿ. ಶಾಮಣ್ಣ ಬಿ. ಎ., ಎಂ. ಬಿ. ಬಿ. ಎಸ್. ಅವರು ಬರೆದುದು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆಯ ೩೦ನೆಯ ಗ್ರಂಥ. ಫೂ. ಕ್ರಾ. ೮. ೫೬ ಪುಟ; ಬೆಲೆ ೦-೨-೦.

೭೩. ಇಂಗ್ಲಿಷ್ ಪ್ರಬಂಧಗಳು (ಸಾಹಿತ್ಯ ಪರಿಚಯ) ಬರೆದವರು ಶ್ರೀ. ಎಸ್. ಮಂಜನಾಥ ಎಂ. ಎ. ಮೈಸೂರು. ವಿ. ವಿ. ನಿಲಯದ ಪ್ರ. ಪು. ಮಾಲೆಯ ೨೯ನೆಯ ಗ್ರಂಥ. ಫೂ. ಕ್ರಾ. ೮. ೬೦ ಪುಟ; ಬೆಲೆ ೦-೨-೦.

೭೪. ಅಕ್ಕಮಹಾದೇವಿ (ವ್ಯಕ್ತಿ–ಗ್ರಂಥಪರಿಚಯ) ಬರೆದವರು ಶ್ರೀಮಾನ್ ಎಸ್. ವಿ. ಪರಮೇಶ್ವರಭಟ್ಟ ಎಂ. ಎ. ಅವರು. ಮೇಲಿನ ಪ್ರಚಾರ ಪುಸ್ತಕಮಾಲೆಯ ೩೨ನೆಯ ಗ್ರಂಥ. ಫೂ. ಕ್ರಾ. ೮. ೬೦ ಪುಟ ಬೆಲೆ ೦-೨-೦.



‘ರಾಜಾಜಿಕಾರಣ’

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರನ್ನೂ ಸತ್ಯಾಗ್ರಹ ಕೈದಿಗಳನ್ನೂ ಬಂಧಮುಕ್ತಮಾಡಿದಂದಿನಿಂದ, ನಮ್ಮ ದೇಶದ ರಾಜಕಾರಣಕ್ಕೆ ಒಂದು ತೀವ್ರ ಚಲನ ಸಿಕ್ಕಂತಾಗಿದೆ. ಒಂದು ಕಡೆ ಭಾರತಮಂತ್ರಿಗಳೂ ವೈಸ್‌ರಾಯರೂ ಪ್ರಕಟವಾಗಿ ಭಾಷಣಗಳನ್ನು ಮಾಡುತ್ತಲಿದ್ದಾರೆ; ಒಂದು ಕಡೆ ಸಂರಕ್ಷಣಾಸಮಿತಿಯ ಸದಸ್ಯರು, ದೇಶಕ್ಕೆ ಬಂದ ಗಂಡಾಂತರದ ವಿಷಯವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡುತ್ತಲಿದ್ದಾರೆ; ಇನ್ನೊಂದು ಕಡೆ ಕಾಂಗ್ರೆಸ್ ಮುಂದಾಳುಗಳೂ ಸದ್ಯದ ಪರಿಸ್ಥಿತಿಯನ್ನು ಅನುಸರಿಸಿಯೆ ಮಾತನಾಡುತ್ತಲಿದ್ದಾರೆ. ಭಾರತಮಂತ್ರಿಗಳಾಗಲಿ ವೈಸ್‌ರಾಯರಾಗಲಿ, ಕೇಸರಿಸುವಂತೆ ಒಂದೇ ಮಾತನ್ನು ಒಂದು ವರ್ಷದಿಂದ ಹೇಳುತ್ತಲಿದ್ದಾರೆ. ಭಾರತದ ಬಿಕ್ಕಟ್ಟಿಗೆ ತಮ್ಮ ಹೊಣೆಗಾರಿಕೆಯೆ ಇಲ್ಲದಂತೆ ಕೇವಲ ಹೊರದಾಳಿಯ ಹೆದರಿಕೆ ತುಂಬಲೆ ಹಿಂದೀಯರು ಸಹಾಯಮಾಡುವಂತೆ, ಯುದ್ಧದ ಸ್ವಾತಂತ್ರ್ಯಧ್ಯೇಯವು ಭಾರತಕ್ಕೆ ಅನ್ವಯಿಸದಂತೆ, ಭಿನ್ನಜಾತಿಗಳಿಗಾಗಿ ಭಾರತಕ್ಕೆ ಸ್ವತಂತ್ರರಾಷ್ಟ್ರಗಳಲ್ಲಿ ಸ್ಥಾನವಿಲ್ಲವೆನ್ನುವಂತೆ ಈ ಅಧಿಕಾರಿಗಳು ಮಾತನಾಡುತ್ತಲಿದ್ದಾರೆ. ಜಪಾನದ ದಾಳಿಯಿಂದ ಹಿಂದುಸ್ಥಾನಕ್ಕೆ ಯುದ್ಧದ ಭಯ ತಾಕಿತೆಂದೂ, ಅದಕ್ಕಾಗಿ ಹಿಂದೀಯರೆಲ್ಲರೂ ಒಕ್ಕಟ್ಟಾಗಿ ಬ್ರಿಟಿಶರ ಬೆನ್ನುಕಟ್ಟಬೇಕೆಂದೂ, ಸದ್ಯಕ್ಕೆ ಸ್ವಾತಂತ್ರ್ಯಕ್ಕಿಂತ ಸುರಕ್ಷಿತತೆ ಮುಖ್ಯವೆಂದೂ ಸಂರಕ್ಷಣಾಸಮಿತಿಯ ಸದಸ್ಯರ ಅಭಿಪ್ರಾಯ. ಆದರೆ ಇವರೆಲ್ಲರಿಗೆ ಸಮರ್ಪಕವಾಗಿ ಉತ್ತರವನ್ನು ಕೊಟ್ಟು, ಬದಲಾಯಿಸಿದ ಪರಿಸ್ಥಿತಿಗಾಗಿ ತಾವು ಧೋರಣೆಯನ್ನು ಬದಲಾಯಿಸಲು ಸಿದ್ಧರಿದ್ದು ಬ್ರಿಟಿಶರೂ ಸಿದ್ಧರಾಗಬೇಕೆಂದು ಆಹ್ವಾನಿಸಿ, ಸದ್ಯದ ಪರಿಸ್ಥಿತಿಯನ್ನು ಸರಿಯಾಗಿ ವಿಮರ್ಶಿಸಿ, ಈಗ ಸುರಕ್ಷಿತತೆಗಿಂತ ಸ್ವಾತಂತ್ರ್ಯತತ್ತ್ವವೆ ಮುಖ್ಯವಾದುದೆಂದು ಕಾಂಗ್ರೆಸಿನ ಕೆಲ ಮುಂದಾಳುಗಳ ಅಭಿಪ್ರಾಯ. ಮಿಕ್ಕವರದು ರಾಜಕಾರಣ ಎನಿಸಿದರೆ, ಈ ಮುಂದಾಳುಗಳದು ‘ರಾಜಾಜಿಕಾರಣ’ ಎನಬಹುದು. ಯಾಕೆಂದರೆ, ಇಂದು ಧೈರ್ಯವನ್ನೂ ಬುದ್ಧಿಮತ್ತೆಯನ್ನೂ ತೋರಿಸಿ, ಕಾಂಗ್ರೆಸಿನ ಒಂದು ಅಭಿಪ್ರಾಯವನ್ನು ಮೊದಲು ಮುಂತರ್ಗೆಳಿಸಿದವರು ರಾಜಾಜಿಯವರು.

ಮುನ್ನೋಟದ ಮುಂದಾಳು

ರಾಜಾಜಿಯವರು ಲಖನೌದಲ್ಲಿ ಮೊದಲನೆಯ ಮಹತ್ವದ ಭಾಷಣವನ್ನು ಮಾಡಿದರು. (೧) ಯುದ್ಧಕ್ಷೇತ್ರವು ಹಬ್ಬಿದೆ, ಅದಕ್ಕನುಗುಣವಾಗಿ ಪರಿಸ್ಥಿತಿ ಬದಲಾಯಿಸಿದೆ, ಆದ್ದರಿಂದ ಕಾಂಗ್ರೆಸು ಧೋರಣೆಯನ್ನು ಬದಲಾಯಿಸುವುದಗತ್ಯ; (೨) ಅಹಿಂಸಾತತ್ತ್ವವು ಶ್ರೇಷ್ಠವಾದ ಧ್ಯೇಯವಾಗಿದೆ, ಆದರೆ ಸಾಮೂಹಿಕ ಜೀವನದಲ್ಲಿ ಮತ್ತು ಸದ್ಯದ ಪರಿಸ್ಥಿತಿಯಲ್ಲಿ ಹಿಂಸೆಯನ್ನು ಪೂರ್ತಿಯಾಗಿ ಬಿಟ್ಟುಕೊಡುವುದು ಬುದ್ಧಿಮತ್ತೆಯ ಲಕ್ಷಣವೆನಿಸದು; (೩) ಹಿಂದುಸ್ಥಾನಕ್ಕೆ ಯುದ್ಧದ ತರುವಾಯ ಸ್ವಾತಂತ್ರ್ಯ ದೊರೆಯುವುದು, ಇದು ಖಂಡಿತ; ಆದರೆ ಬ್ರಿಟಿಶರಿಗೆ ಭಾರತದ ಸಂಪೂರ್ಣ ಸಹಾಯ ಬೇಕಾಗಿದ್ದರೆ ಅವರು ಈ ಮಾತನ್ನು ಒಪ್ಪಬೇಕು, ಲಕ್ಷ್ಯದಲ್ಲಿಟ್ಟು ಅದರಂತೆ ವರ್ತಿಸಬೇಕು; ಎಂದರೆ ಯುದ್ಧಕಾರ್ಯದ ಜವಾಬ್ದಾರಿಯನ್ನೂ ಸ್ವಾತಂತ್ರ್ಯವನ್ನೂ ಭಾರತೀಯ ಮಂತ್ರಿಗಳ ಕಡೆಗೆ ಕೊಡಬೇಕು. (೪) ಹಾಗೆ ಮಾಡಿ ಪ್ರಾಂತಗಳಲ್ಲಿ ಸ್ವಾಯತ್ತತೆಯ ಸರಕಾರ ಪದ್ಧತಿಯನ್ನು ಮತ್ತೆ ಜಾರಿಯಲ್ಲಿ ತರಬೇಕು, ಈ ಸರಕಾರಗಳಿಗೆ ಯುದ್ಧವನ್ನು ನಡೆಯಿಸಲು ಎಲ್ಲತರದ ಸ್ವಾತಂತ್ರ್ಯವಿರಬೇಕು; (೫) ಇಷ್ಟಿದ್ದರೆ ಪಕ್ಷ-ಪಂಗಡಗಳ ಭೇದಗಳನ್ನು ಬಿಟ್ಟುಕೊಟ್ಟು ಯುದ್ಧ ಮುಗಿವವರೆಗೆ ರಾಷ್ಟ್ರೀಯ (ಅಖಿಲ ಪಕ್ಷೀಯ) ಮಂತ್ರಿಮಂಡಳ (National Government) ಗಳನ್ನು ರಚಿಸಲು ತಾವು ಸಿದ್ಧರು:—ಹೀಗೆ ರಾಜಾಜಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ತಮ್ಮ ಅಭಿಪ್ರಾಯಕ್ಕೆ ಕಾಂಗ್ರೆಸನ್ನು (ಎಂದರೆ ಮಹಾತ್ಮಾಗಾಂಧಿಯವರನ್ನು) ರಾಜಾಜಿಯವರು ಒಲಿಸಬಲ್ಲರೊ ಹೇಗೆ ಎಂಬುದು ಕೆಲವೇ ದಿನಗಳಲ್ಲಿ ತಿಳಿದುಬರುವುದು. ಆದರೆ ಸದ್ಯಕ್ಕೆ ಮಾತ್ರ ಭಾರತದ ಸ್ವಾತಂತ್ರ್ಯವನ್ನೂ ಬ್ರಿಟಿಶನೀತಿಯ ಮಾನವನ್ನೂ ಒಂದೇ ವೇಳೆಗೆ ರಕ್ಷಿಸಿ ‘**ರಾಜಾಜಿ ಕಾರಣ**’ವು ಅತ್ಯಂತ ಮಹತ್ತ್ವದ ಒಂದೇ ಒಂದು ಘಟನೆಯಾಗಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

(೧೮-೧೨-೪೧)

ಬಾರ್ಡೋಲಿಯ ಬರಿಹ

ಸರಕಾರಿ ಅಧಿಕಾರಿಗಳಿಂದ ಸಾಮಾನ್ಯನ ವರೆಗೆ ಇಂದು ಎಲ್ಲರ ಲಕ್ಷ್ಯವು ಕಾಂಗ್ರೆಸಿನ ಕಡೆಗಿದೆ. ಬಾರ್ಡೋಲಿಯಲ್ಲಿ ಸೇರಿದ

ವರ್ಕಿಂಗ್ ಕಮಿಟಿಯು ಒಂದು ವಾರದ ವರೆಗೆ ನಿರ್ಣಯಕ್ಕೆ ಬಾರದಿರಲು ಜನರಲ್ಲಿ ತರ್ಕವಿತರ್ಕಗಳೆದ್ದುವು. 'ಕಾಂಗ್ರೆಸ್ ರಾಜಕಾರಣದ ಸೂತ್ರಧಾರಿಗಳಿಗೆ ಒಂದು ಧಾಳವಾದ ನಿರ್ಣಯಕ್ಕೆ ಒಂದು ಮುಟ್ಟುವ ಧೈರ್ಯ ಇಲ್ಲವೆ ಮುತ್ಸದ್ದಿತನವಿರಲಿಕ್ಕಿಲ್ಲವೆ? ಅಥವಾ, ಕಾಂಗ್ರೆಸಿನ ಮುಂದಾಳುಗಳು ಚರ್ಚಿಲ್–ರೂಜವೆಲ್ಟರ ಚರ್ಚೆಯ ನಿರ್ಣಯಕ್ಕಾಗಿ ಕಾದಿದ್ದಾರೆಯೆ ! ಅಥವಾ ಈ ಹಿರಿಯಹುದ್ದರಿಗಳಲ್ಲಿಯೆ ಏಕಾಭಿಪ್ರಾಯವು ಅಶಕ್ಯವಾಗಿದೆಯೆ ? . . ' ಇತ್ಯಾದಿ. ಆದರೆ ಒಮ್ಮೆ ನಿರ್ಣಯ ಹೊರಬಿದ್ದ ಮೇಲೆ ಇವೆಲ್ಲ ತರ್ಕ-ವಿತರ್ಕಗಳು ಬರಿಯ ಕನಸುಗಳಾದುವು. ಮೌಲಾನಾ ಆಝಾದರ ಬಗ್ಗೆ ನಾವು ಆಡಿದ ಮಾತುಗಳು ತೀರ ಯಥಾರ್ಥವೆನಿಸುವಂತೆ,ರಾಷ್ಟ್ರದ ಅಸಂದಿಗ್ಧ ಧೋರಣೆ ಸ್ವೀಕೃತವಾಯಿತು. ಬಾರ್ಡೋಲಿ ನಿರ್ಣಯದಲ್ಲಿ ಕಣ್ಣೊತ್ತುವಂತೆ ಎರಡು ಮಹತ್ತ್ವದ ಮಾತುಗಳು ಅಡಕವಾಗಿವೆ ; (೧) ಒರೆಗೆ ಹತ್ತಿದಾಗ ಕಾಂಗ್ರೆಸು ತನ್ನ ಹೊಣೆಗಾರಿಕೆಯನ್ನು ಪ್ರಾಮಾಣಿಕತೆಯಿಂದ ವಹಿಸಿದ್ದು ; ಇನ್ನೊಂದು (೧) ಸರಕಾರದ ಮತ್ತು ಮಿಕ್ಕ ಭಾರತೀಯ ಪಕ್ಷಗಳ ಪ್ರಾಮಾಣಿಕತೆಯನ್ನು ಒರೆಗೆ ಹಚ್ಚಿದ್ದು.

ಗೊತ್ತುವಳಿಯ ತತ್ತ್ವ

ಮಹಾತ್ಮಾ ಗಾಂಧಿಯವರನ್ನು ಕಾಂಗ್ರೆಸ್ ಚಳವಳದ ನೇತೃತ್ವದಿಂದ ಮುಕ್ತರನ್ನಾಗಿ ಮಾಡಿದ್ದು ಬಾರ್ಡೋಲಿಯ ನಿರ್ಣಯದಲ್ಲಿ ಮೊದಲಿನ ಮಾತಾಗಿದೆಯಷ್ಟೆ ! ಈ ಮಾತನ್ನು ಸರಿಯಾಗಿ ತಿಳಿದುಕೊಂಡವರು ಅದೆಷ್ಟು ಕಡಮೆ ಜನ ! ಕಾಂಗ್ರೆಸೇತರರ ಮಾತಿರಲಿ, ಮಹಾತ್ಮರ ಅನುಯಾಯಿಗಳೂ ಇದನ್ನು ತಪ್ಪಾಗಿ ತಿಳಿದುಕೊಂಡಿದ್ದಾರೆ ! ಮಹಾತ್ಮರಿಗೂ ಮಿಕ್ಕವರಿಗೂ ಮತಭೇದವಾಯಿತೆಂಬ ಗ್ರಹಿಕೆ ಒಬ್ಬರದು, ಕಾಂಗ್ರೆಸು ಅಹಿಂಸೆಯನ್ನು ಬಿಟ್ಟುಕೊಟ್ಟಿತೆಂಬ ಗ್ರಹಿಕೆ ಮತ್ತೊಬ್ಬರದು! ಇವರಿಬ್ಬರ ಗ್ರಹಿಕೆಯೂ ತಪ್ಪಾದುದೆಂದು ರಾಷ್ಟ್ರಾಧ್ಯಕ್ಷರು ಸ್ಪಷ್ಟವಾಗಿ ಹೇಳಿದ್ದರೂ, ಅನೇಕರು ತಮ್ಮ ತಪ್ಪನ್ನು ತಿದ್ದಿಕೊಂಡಿಲ್ಲ. ಈ ಸಂಗತಿಗೆ ಒಂದು ಕಡೆ ರಾಜಾಜಿಯವರು ಕಾರಣರೆನಿಸಿದರೆ, ಇನ್ನೊಂದು ಕಡೆ ಪಂಡಿತ ಜವಾಹರರು ಕಾರಣರೆನಿಸಿದ್ದಾರೆ. 'ಈಗಲಾದರೂ ಬ್ರಿಟಿಶರು ಸರಿಯಾಗಿ ನಡೆದುಕೊಂಡರೆ ನಮ್ಮ ಸಹಕಾರ ಸಿದ್ಧವಿದೆ' ಎಂಬವರು ಚಕ್ರವರ್ತಿ ಆಚಾರ್ಯರು ; 'ಇಂದಿನ ಜಾಗತಿಕ ಪರಿಸ್ಥಿಯಲ್ಲಿ ಅಹಿಂಸೆಯ ಮಾತನ್ನೇ ಮುಂದೆ ಮಾಡಬಾರದು' ಎಂಬವರು ಜವಾಹರರು. ಆದರೆ ಇವರಿಬ್ಬರ ಮಾತು ಬಾರ್ಡೋಲಿಯ ನಿರ್ಣಯದ ಭಾಷ್ಯವಾಗಿದೆಯಲ್ಲದೆ ಆ ನಿರ್ಣಯದ ತತ್ತ್ವವಲ್ಲ ಎಂಬುದನ್ನು ನಾವು ತಿಳಿದುಕೊಳ್ಳಬೇಕಾದ ಮಹತ್ತ್ವದ ವಿಷಯ.

(೫–೧–೪೨)

ಸಹಕಾರಕ್ಕೆ ಸ್ವಾತಂತ್ರ್ಯ

'ಸುತ್ತಲಿನ ಪರಿಸ್ಥಿತಿಗೆ ಕಣ್ಣುಮುಚ್ಚಿ, ತನ್ನ ತಾತ್ತ್ವಿಕ ಹಟಕ್ಕಾಗಿ ಕಾಂಗ್ರೆಸು—ಎಂದರೆ ಭಾರತದ ಹಿರಿಯ ರಾಜಕೀಯ ಪಕ್ಷವು—ದೇಶದ ಹಿತವನ್ನು ಹಿಂದೂಡುತ್ತಲಿದೆ' ಎಂಬ ಆಪೋಪವಿದ್ದಿತಷ್ಟೆ ! ಅದಕ್ಕೀಗ ಕಾಂಗ್ರೆಸೂ ಮಹಾತ್ಮರೂ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಹೊರದಾಳಿಯಿಂದ ರಕ್ಷಿಸುವುದಕ್ಕಾಗಿ ಕಾಂಗ್ರೆಸು ಹಿಂದೊಮ್ಮೆ ನಿರ್ಣಯಿಸಿದಂತೆ ಅಹಿಂಸೆಯನ್ನು ಬದಿಗಿಡುವುದೆಂದು ಬಾರ್ಡೋಲಿ ನಿರ್ಣಯವು ಮತ್ತೆ ಸಾರಿದೆ. ಇಷ್ಟಾದ ಮೇಲೆ ಕಾಂಗ್ರೆಸು ಪರಿಸ್ಥಿತಿಗೆ ಕಣ್ಣುಮುಚ್ಚಿದೆ ಎಂದು ಹೇಳಬಹುದೆ? ಇದಕ್ಕೂ ಹೆಚ್ಚಿನದೇನನ್ನು ಮಾಡಬಲ್ಲದು ಬಡ ಭಾರತವು ? ಹಾಗೆ ನೋಡಿದರೆ ವಿಮಾನದಾಳಿ ರಕ್ಷಣೆ (A. R. P.)ಯ ಕೆಲಸದಲ್ಲಿ ಕಾಂಗ್ರೆಸಿಗರು ಸಹಕರಿಸಬೇಕೆಂದೂ, ಜನತೆಯು ಎಂತಹ ಪರಿಸ್ಥಿತಿಯಲ್ಲೂ ದಿಕ್ಕೆಡದೆ ಧೈರ್ಯದಿಂದಿರಬೇಕೆಂದೂ ವರ್ಕಿಂಗ್ ಕಮಿಟಿಯು ಅಭಿಪ್ರಾಯಪಟ್ಟಿಲ್ಲವೆ? ಇದಕ್ಕೂ ಹೆಚ್ಚಿನದೇನನ್ನು ಮಾಡಬಲ್ಲದು ಪರತಂತ್ರ ಭಾರತವು ? ಸೈನಿಕ ಶಿಕ್ಷಣವನ್ನೆ ? ಯಂತ್ರಬಲ ನಿರ್ಮಾಣವನ್ನೆ ? ಆದರೆ ಆ ಶಕ್ತಿ ಭಾರತಕ್ಕಿದೆಯೆ ? ಇನ್ನು ತನು–ಮನ–ಧನಗಳಿಂದ ಸಹಾಯವನ್ನು ನೀಡಬೇಕೆಂದರೆ ಅಂತಹ ಕೆಲಸವನ್ನು ಕೇಂದ್ರೀಕರಿಸಲು ಭಾರತಕ್ಕೆ ಅಧಿಕಾರವಿಲ್ಲ. ಸ್ವಾತಂತ್ರ್ಯವಿಲ್ಲ. ಹೀಗಿರುವಾಗ ತನ್ನಿಂದ ಶಕ್ಯವಾಗಬಹುದಾದ ಕಾರ್ಯಕ್ಕೆ ತಾನು ಸಿದ್ಧ ಎಂದು ಕಾಂಗ್ರೆಸು ಒಪ್ಪಿಕೊಂಡಿಲ್ಲವೆ ! ಕಣ್ಣು ತೆರೆದು ಪರಿಸ್ಥಿತಿಯನ್ನು ನೋಡಲು ಮಾತ್ರ ಭಾರತಕ್ಕೆ ಶಕ್ಯವಿದೆ, ಈಗ ಹಾಗೆ

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಸರ್ವಮಾನ್ಯ !

ಚಳಿಗಾಲದಲ್ಲಿ ಶಕ್ತಿಯ ಬಗ್ಗೆ

ಸರ್ವೋತ್ಕೃಷ್ಟವೆಂದು

ರಕ್ತವರ್ಧಕವನ್ನೇ

ಎಲ್ಲ ಜನರು ಉಪಯೋಗಿಸುತ್ತಿರುವರು.



ಅಷ್ಟವರ್ಗ

ಚ್ಯವನಪ್ರಾಶ

●

ಸುವರ್ಣ

ಮಾಲಿನೀ ವಸಂತ

●

ಮಕರಧ್ವಜಗುಟಿ

●

ಮುಂತಾದ

ಶಕ್ತಿವರ್ಧಕ

ಔಷಧಗಳನ್ನು

ತರಿಸಿರಿ.

ಕರ್ನಾಟಕ ಕೇಂದ್ರ ಮರಾಠಾಗಲ್ಲಿ, ಹುಬ್ಬಳ್ಳಿ.

ನೋಡಲಾಗದೆ ಕೈಯಿಂದ ಕಾರ್ಯವನ್ನು ಕೈಗೊಳ್ಳಲು ಭಾರತಕ್ಕೆ ಸ್ವಾತಂತ್ರ್ಯವೆ ಇಲ್ಲ, ಆದ್ದರಿಂದ ಈಗ ಹಾಗೆ ಮಾಡುವುದು ಪ್ರಸ್ತುತವೆ ಅಲ್ಲ.

ಮಾರಾಟದ ಮಾತಲ್ಲ

ಇಲ್ಲಿಗೆಯೆ ತಡೆಯದೆ ಕಾಂಗ್ರೆಸು ಒಂದು ಹೆಜ್ಜೆ ಮುಂದೆ ಹೋಗಿದೆ. 'ಒಣ ತಾತ್ತ್ವಿಕ ಹಟ ಕಾಂಗ್ರೆಸಿಗಿದೆ' ಎಂಬ ಆಕ್ಷೇಪ ಎದ್ದಿತಲ್ಲವೆ? ಮಹಾತ್ಮರನ್ನು ಕಾಂಗ್ರೆಸ್ ನೇತೃತ್ವದಿಂದ ಮುಕ್ತ ಮಾಡಿ, 'ಸತ್ಯಾಗ್ರಹದ ಸರ್ವಾಧಿಕಾರ ಅವರದು ಮಾತ್ರ' ಎಂದು ಸಾರಿ, ಕಾಂಗ್ರೆಸು ತಾತ್ತ್ವಿಕ ಹಟ ತನ್ನದಲ್ಲ ಎಂದು ತೋರಿಸಿದೆ; 'ತಾತ್ತ್ವಿಕ ಹಟದ ಹೊಣೆಗಾರಿಕೆ ನನ್ನದು, ಕಾಂಗ್ರೆಸಿನದಲ್ಲ' ಎಂದು ಮಹಾತ್ಮರೂ ತೋರಿಸಿದ್ದಾರೆ. ಹೀಗೆ ಕಾಂಗ್ರೆಸು 'ಅಹಿಂಸೆಗಾಗಿ ತಾತ್ತ್ವಿಕ ಹಟವಿಲ್ಲ' ಎಂದಿಷ್ಟೆ ಹೇಳಿದೆಯಲ್ಲದೆ, ಅಹಿಂಸೆಯ ತತ್ತ್ವವನ್ನೆ ಬಿಟ್ಟುಕೊಟ್ಟಿಲ್ಲ. ಇಂದಿನ ರಾಷ್ಟ್ರಗಳ ನೀತಿಯನ್ನೂ ಸಂಸ್ಕೃತಿಯನ್ನೂ ನೋಡಿದಂತೆ 'ಅಹಿಂಸೆಯೆ ಕೊನೆಯ ಧ್ಯೇಯವಾಗಬೇಕು' ಎಂಬ ಹಟ ಪ್ರತಿಯೊಬ್ಬನಲ್ಲಿ ಪುಟಿಯುತ್ತಿರುವಾಗ, ಇಪ್ಪತ್ತು ವರ್ಷಗಳ ಆಚರಣೆಯ, ಅನುಭವದ ತತ್ತ್ವವನ್ನು ಕಾಂಗ್ರೆಸು ಬಿಡುವುದಾದರೂ ಹೇಗೆ? ಅದೇ ಸಂದರ್ಭದಲ್ಲಿ ತಾತ್ತ್ವಿಕ ಹಟವನ್ನು ಬಿಟ್ಟುಕೊಟ್ಟುದಕ್ಕೆ ಕಾಂಗ್ರೆಸು ಬೆಲೆ ಬೇಡಿಲ್ಲ. 'ಭಾರತವು ಸ್ವತಂತ್ರವಾಗಬೇಕು' ಎಂಬುದು ಹಾಗಲ್ಲ. ಇಂದು ಸ್ವಾತಂತ್ರ್ಯವು ಪ್ರತಿಯೊಂದು ಜನಾಂಗದ ಹಕ್ಕೆಂದೂ, ಅದನ್ನು ಉಳಿಸುವುದಕ್ಕೆ ಗಳಿಸುವುದಕ್ಕೆ ತಮ್ಮ ಹೋರಾಟವೆಂದೂ ಇಂಗ್ಲಂಡವು ಸಾರುವುದಲ್ಲವೆ? ಆ ಮಾತು ಹಿಂದುಸ್ಥಾನಕ್ಕೂ ಅನ್ವಯಿಸಲಿ ಎಂದಿಷ್ಟೆ ಕಾಂಗ್ರೆಸಿನ ಕೋರಿಕೆ; ಮಿಕ್ಕವರಿಗೆ ಸಲ್ಲದಂತಹ ಬೆಲೆಯಾಗಿ ಕಾಂಗ್ರೆಸು ಸ್ವಾತಂತ್ರ್ಯವನ್ನು ಬೇಡಿಲ್ಲ.

(೭-೧-೪೨)

ಮಿಕ್ಕವರ ಮಿದುಳುಗುಮ್ಮ

ಇತ್ತ ಕಾಂಗ್ರೆಸು ಪರಿಸ್ಥಿತಿಗಾಗಿ ಹೀಗೆ ಪ್ರಾಮಾಣಿಕತೆಯನ್ನೂ ಧೈರ್ಯವನ್ನೂ ತೋರಿಸಿದರೆ, ಅತ್ತ ಮಿಕ್ಕ ಪಕ್ಷಗಳು ಒದಗೆ ಹತ್ತುವ ತಮ್ಮ ಪ್ರಾಮಾಣಿಕತೆಯನ್ನು ಹಿಂತೆಗೆದುಕೊಳ್ಳುತ್ತಲಿವೆ. ಬೇಕಾದ್ದಾಗಲಿ ತಮ್ಮ ಜಾತಿಗೆ ದೊರಕಬೇಕಾದ ರೊಟ್ಟಿಯ ತುಣುಕು ದೊರಕುವುದು ಮುಖ್ಯ' ಎಂದು ಜಾತಿನಿಷ್ಠ ಪಕ್ಷಗಳು ಬೊಗಳುತ್ತಲಿವೆ. 'ಬೇಕಾದ ಪರಿಸ್ಥಿತಿ ಬರಲಿ, ಹಿಂದುಸ್ಥಾನದ ಸ್ವಾತಂತ್ರ್ಯಪ್ರಶ್ನೆಯು ಅಪ್ರಸ್ತುತ' ಎಂದು ಬ್ರಿಟಿಶ್ ಅಧಿಕಾರಿಗಳು ಕೆರಳಿ ತೆಗಳುತ್ತಿದ್ದಾರೆ! 'ತನಗೆ ಸುಖಸ್ವಾತಂತ್ರ್ಯ ಬೇಕಾದರೆ ಮುಂಚೆ ಜಗತ್ತಿನಲ್ಲಿ ಅವುಗಳ ತತ್ತ್ವ ಉಳಿಯಬೇಕು, ತಮಗೆ ಅನ್ನ-ಅಧಿಕಾರಗಳು ಬೇಕಾದರೆ ಮುಂಚೆ ತಮ್ಮ ದೇಶವು ಭದ್ರವಾಗಿರಬೇಕು' ಎಂಬ ಪರಿಸ್ಥಿತಿಯ ಎಚ್ಚರ ಜಾತಿನಿಷ್ಠರಿಗಿಲ್ಲ! ಆಡುವ ತತ್ತ್ವವನ್ನು ಮಾಡುವ ಕೃತಿಯಲ್ಲಿ ತಾರದಿದ್ದರೆ, ತತ್ತ್ವದ ಅಭಿಮಾನಿಗಳು ಕೃತಿಗೆ ಸಹಕಾರವನ್ನು ನೀಡಲಾರರೆಂಬುದರ ಪರಿವೆ ಅಧಿಕಾರಿಗಳಿಗಿಲ್ಲ! ಭಾರತಮಂತ್ರಿಗಳಾದ ಅಮೆರಿಯವರು ಬಾರ್ಡೋಲಿ ನಿರ್ಣಯದ ತರುವಾಯ ಪಾರ್ಲಮೆಂಟಿನಲ್ಲಿ ಹೇಳಿದ ಅಭಿಪ್ರಾಯದಿಂದ ನಮ್ಮ ಮಾತಿನ ಸತ್ಯತೆ ಹೆಚ್ಚುವುದು. ಒಂದೇ ಧರ್ಮದವರು, ಒಂದೇ ಸಂಸ್ಕೃತಿಯವರು ತಂತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವಾಗ, ಮಿಕ್ಕವರಿಗೆ 'ನಿಮ್ಮ ಜಾತಿಗಳಲ್ಲಿ ಐಕ್ಯ ಬೆಳೆದರೆ ನಿಮಗೆ ಸ್ವಾತಂತ್ರ್ಯವನ್ನು ಕೊಡುವೆವು' ಎಂದು ಹೇಳಬಹುದೆ? ಸದ್ಯದ ಪರಿಸ್ಥಿತಿಯಲ್ಲಿ ಜಾತಿಗಳ ಐಕ್ಯ-ಮಹತ್ತ್ವದ್ದೊ, ದೇಶದ, ಸ್ವಾತಂತ್ರ್ಯತತ್ತ್ವದ ರಕ್ಷಣೆ ಮಹತ್ತ್ವದ್ದೊ? ಬಹುಮತದ ರಾಜಕೀಯ ಪಕ್ಷವು ದೇಶಕ್ಕಾಗಿ ಸ್ವಾತಂತ್ರ್ಯರಕ್ಷಣೆಗಾಗಿ ಹೋರಾಡಲು ಮುಂದೆ ಬರುವಾಗ 'ನೀವು ಇನ್ನೂ ತುಸು ತಡೆದು ಜಾತೀಯ ಐಕ್ಯದ ಸರ್ಟಿಫಿಕೀಟನ್ನು ತಂದು ತೋರಿಸಿ ಆ ಮೇಲೆ ಬರಬೇಕು' ಎನ್ನುವುದು ಅದಾವ ಜಾಣತನ? ಸರ್ವತ್ಯಾಗದಿಂದಲೂ ಹೋರಾಡಲು ನಿಮ್ಮನ್ನು ಹುರಿದುಂಬಿಸುವ ಸ್ವಾತಂತ್ರ್ಯತತ್ತ್ವ ಮಿಕ್ಕವರನ್ನು ಹಾಗೇಯೆ ಹುರಿದುಂಬಿಸಬಹುದಲ್ಲವೆ? ಅಲ್ಲವೆಂದರೆ ಅದೆಂತಹ ಪ್ರಾಮಾಣಿಕತೆ? ಇದೀಗ ಪ್ರಾಮಾಣಿಕತೆಯ ಪರೀಕ್ಷಾಕಾಲ.

(೧೪-೧-೪೨)

೫೦ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರಗಡ್ಡೆಯ ಗುಳಿಗೆ
ಬಾಟ್ಲಿಗೆ ೧ ರೂ.
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಚತುರಂಗ ಬಲ

ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಕೊನೆಗೆ ಅಖಿಲಭಾರತ ಕಾಂಗ್ರೆಸ್ ಸಮಿತಿ (A. I. C. C.) ಯು ಒಪ್ಪಿದೆ. ಎಂದರೆ ಈಗ ಬಾರ್ಡೋಲಿಯ ನಿರ್ಣಯವು ಕಾಂಗ್ರೆಸಿನ ಅಧಿಕೃತವಾದ ಧೋರಣೆಯಾಗಿದೆ. ಈ ನಿರ್ಣಯಕ್ಕೆ ನಿಕರದ ವಿರೋಧ ಬರಬಹುದೆನುವಾಗ ಮಹಾತ್ಮರೆ ಮುಂದಾಗಿ ಈ ನಿರ್ಣಯವನ್ನು ಎ. ಆಯ್. ಸಿ. ಸಿ. ಯು ಕೈಕೊಳ್ಳಬೇಕೆಂದು ಹೇಳಿದರು. ಮಹಾತ್ಮರ ಭಾಷಣದಿಂದ ಅನೇಕರಿಗೆ ಆಶ್ಚರ್ಯವಾಗಿದೆ. ಆದರೆ ನಾವು ಇದುವರೆಗೆ ಕಾಣಿಸಿದ ನಿರ್ಣಯರಹಸ್ಯವನ್ನು ನೋಡಿದರೆ ಮಾತ್ರ ಆಶ್ಚರ್ಯಕ್ಕೆ ಎಳ್ಳಷ್ಟೂ ಕಾರಣವಿಲ್ಲದಂತಾಗುವುದು. ಅದಕಾಗಿ ಎ. ಆಯ್. ಸಿ. ಸಿ. ಯ ನಿರ್ಣಯದ ಬಗ್ಗೆ ಇಲ್ಲಿ ಹೆಚ್ಚಿಗೆ ಬರೆಯುವುದಗತ್ಯವಿಲ್ಲ. ಆದರೆ ಒಂದು ಮಾತನ್ನಿಲ್ಲಿ ಹೇಳಬಹುದು. ಎ. ಆಯ್. ಸಿ. ಸಿ. ಯ ಚರ್ಚೆಯಲ್ಲಿ ಮುಂದಾಳುಗಳ ಭಾಷಣಗಳನ್ನು ನೋಡಿದರೆ, ನಿರ್ಣಯದ ಅನೇಕ ಮುಖದ ರಹಸ್ಯವು ತಿಳಿದುಬರುವುದು. 'ಯಾವ ಪರಿಸ್ಥಿತಿಗೂ ಅಹಿಂಸೆಯೆ ಯೋಗ್ಯ ಉಪಾಯ' ಎಂದು ಮಹಾತ್ಮರ ಅಭಿಪ್ರಾಯ; 'ಸದ್ಯದ ಪರಿಸ್ಥಿತಿಯಲ್ಲಿ ಹೊರವಾಳಿಗೆ ಪ್ರತೀಕಾರವೆಂದು ಅಹಿಂಸೆಯನ್ನು ಬಿಡಬೇಕು' ಎಂದು ಅಝಾದರ ಅಭಿಪ್ರಾಯ; 'ಅಹಿಂಸೆಯ ಸಂಬಂಧವೆ ಇಂದಿನ ರಾಜಕಾರಣಕ್ಕಿಲ್ಲ, ಮೊದಲು ಸ್ವಾತಂತ್ರ್ಯ ಆ ಮೇಲೆ ಸಹಾಯದ ವಿಚಾರ' ಎಂದು ಜವಾಹರರ ಅಭಿಪ್ರಾಯ; ಕೊನೆಗೆ, 'ಸ್ವಾತಂತ್ರ್ಯ ಮೊದಲು ಬರಲಿ ಯುದ್ಧಮುಗಿದಮೇಲೆ ಬರಲಿ, ಬ್ರಿಟಿಶರು ನಮಗೆ ಸ್ವಾತಂತ್ರ್ಯವನ್ನು ಒಪ್ಪಿದರೆ ಸಾಕು; ನಾವು ಯುದ್ಧದಲ್ಲಿ ಸಹಾಯವನ್ನು ಮಾಡುವೆವು' ಎಂದು ರಾಜಾಜಿಯವರ ಅಭಿಪ್ರಾಯ. ನಿರ್ಣಯದಲ್ಲಿ ಈ ಎಲ್ಲ ಅಭಿಪ್ರಾಯಗಳಿಗೆ ಎಡೆ ಇದೆ ಎಂದು ಮಹಾತ್ಮರೆ ಹೇಳಿದ್ದಾರೆ. ಇದರಿಂದ ಕಾಂಗ್ರೆಸ್ ಮುಂದಾಳುಗಳಲ್ಲಿ ಭಿನ್ನಾಭಿಪ್ರಾಯವಿದೆ ಎಂದು ಯಾರೂ ಹಟತೊಡಬಾರದು, ತದ್ವಿರುದ್ಧವಾಗಿ ಈ ನಿರ್ಣಯವು ಚತುರಂಗಬಲಸಮೇತವಾದಂತೆ ಶಕ್ತಿಯನ್ನು ದೊರಕಿಸಿದೆ ಎಂಬುದು ನಮ್ಮ ಚರ್ಚೆಯಿಂದ ಸ್ಪಷ್ಟವಾಗುವುದು.

(೨೧-೧-೪೨)

ಧೋರಣೆಯ ದೆವ್ವ

ಮುಖ್ಯಮಂತ್ರಿ ಚರ್ಚಿಲ್‌ರು ಅಮೇರಿಕೆಯಿಂದ ಮರಳಿ ಬಂದಾಕ್ಷಣ, ಪಾರ್ಲಮೆಂಟಿನಲ್ಲಿ ಭಾರತದ ಬಿಕ್ಕಟ್ಟಿನ ಬಗ್ಗೆ ಸದಸ್ಯರು ಪ್ರಶ್ನೆಗಳನ್ನು ಸುರಿದರು. ಅವುಗಳಿಗೆ ಉತ್ತರ ಕೊಡುವಾಗ 'ಸದ್ಯದ ಯುದ್ಧಪರಿಸ್ಥಿತಿಯಲ್ಲಿ ಘಟನಾತ್ಮಕ ತತ್ತ್ವಗಳನ್ನು ಎತ್ತುವುದರಲ್ಲಿ ಯಾವ ಲಾಭ ?' ಎಂದಿದ್ದಾರೆ ಚರ್ಚಿಲ್‌ರು. ಈ ಅಭಿಪ್ರಾಯವು ಅಮೆರಿಯವರ ಧೋರಣೆಯ ಪ್ರತಿಧ್ವನಿಯಾಗಿದೆ. ಅಮೆರಿಯವರ ಧೋರಣೆ ಸತ್ತಿದೆ ಎಂದರೆ ಇದು ಅದರ ದೆವ್ವ ಎಂದೇ ಹೇಳಬೇಕಾಗುವುದು. ಆದರೆ ಈ ಶುಷ್ಕಧೋರಣೆಯಿಂದ ಪಾರ್ಲಮೆಂಟಿನ ಸದಸ್ಯರಿಗೂ ಸಮಾಧಾನವಾಗಲಿಕ್ಕಿಲ್ಲ ಎಂಬುದು ಇಂದು ಅಲ್ಲಿಯ ಪತ್ರಿಕೆಗಳ ಮತ್ತು ವಿಚಾರವಂತರ ಅಭಿಪ್ರಾಯಗಳಿಂದ ಸ್ಪಷ್ಟವಾಗುವುದು. 'ಭಾರತದಲ್ಲಿ ಜಾತೀಯ ಐಕ್ಯವಾದ ಹೊರತು ಸ್ವಾತಂತ್ರ್ಯದ ಪ್ರಶ್ನೆಯೆ ಏಳುವುದಿಲ್ಲ' ಎಂಬ ಯುಕ್ತಿವಾದದ ಮರೆಯಲ್ಲಿ ಹುದುಗಿಕೊಳ್ಳುವ ಪ್ರವೃತ್ತಿ ಅಧಿಕಾರಿಗಳಲ್ಲಿ ಇದುವರೆಗೂ ಹೆಚ್ಚಾಗಿ ಕಂಡುಬರುವುದು. 'ಜಾತೀಯ ಐಕ್ಯವನ್ನು ಮರೆತು ಕಾಂಗ್ರೆಸ್ ನಿರ್ಣಯವು ತನ್ನ ನಿಷ್ಪ್ರಯೋಜನ ತೋರುವುದು' ಎಂದು ಭಾರತದಲ್ಲಿ ಕೆಲ ಆಂಗ್ಲಪ್ರೇರಿತ ಪತ್ರಿಕೆಗಳೂ ಈಗ ದನಿಯನ್ನು ಎಳೆಯುತ್ತಲಿವೆ. ಸದ್ಯಕ್ಕೆ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು—ವಿಶೇಷವಾಗಿ ಸಪ್ರುಮನವಿಗೆ ಉತ್ತರವನ್ನು ಕಾಣಿಸುವವರೆಗೆ ಈ ಮಾತನ್ನು ನಾವು ಮುಂದೆಹಾಕಬಹುದು. ಒಂದು ವೇಳೆ ಚರ್ಚಿಲರು ಅದೇ ಹಾಡನ್ನು ಹಾಡಿದಲ್ಲಿ, ಆ ಮಾತಿನ ವಿಚಾರವನ್ನು ಮಾಡುವೆವು. ಒಂದು ಮಾತನ್ನು ಮಾತ್ರ ಖಂಡಿತವಾಗಿ ಮುಂಚೆಯೆ ಹೇಳುವೆವು. ಸ್ವಾರ್ಥಸಾಧುಗಳಿಂದ ಹುಟ್ಟಿದ (ಇದಕ್ಕೆ ಅಜ್ಞಾನವೂ ಕೆಲಮಟ್ಟಿಗೆ ಕಾರಣವಾಗಿದೆ) ಜಾತಿಯ ಜಗಳಕ್ಕೆ ಮೊದಲ ಸ್ಥಾನವನ್ನೆ ಕೊಡಬೇಕೇ—ಜಗತ್ತಿನಲ್ಲಿ ಸ್ವಾತಂತ್ರ್ಯತತ್ತ್ವದ ಸಂರಕ್ಷಣೆಗೆ ಮೊದಲ ಸ್ಥಾನವನ್ನು ಕೊಡಬೇಕೆ ? ಇದರ ನಿರ್ಣಯವನ್ನು ಚರ್ಚಿಲ್‌ರು ಮಾಡಬೇಕಾಗಿದೆ.

(೨೩-೧-೪೨)

"ಕಾಡುಕೋಣ" ದ ಗುರುತಿನ
ಕಾಗದವು
ಕನ್ನಡ ನಾಡಿನದು !
ಬರೆಯಲಿಕ್ಕೂ ಮುದ್ರಣಕ್ಕೂ ತಕ್ಕುದಾದುದು !
ಅಧಿಕೃತ ಪ್ರಸಾರಕರು : ಜಿ. ಕೆ. ಕೇಳಕರ
ಸ್ವದೇಶಿ ಪೇಪರ್ ಮಾರ್ಟ್, ಧಾರವಾಡ.

ಮಗುವಿನ
ಮೃದು
ಚರ್ಮಕ್ಕೆ
★
ಬೇ
ಕಾ
ದು
ದು!
★

ಶುದ್ಧವಾದ ಮತ್ತು ಮೃದುವಾದ ಒಂದು ಸಾಬೂನು. ಮತ್ತು ಆ ಸಾಬೂನು ಪರಿಮಳಯುಕ್ತವಾಗಿಯೂ ಔಷಧಯುಕ್ತವಾಗಿಯೂ ಇರಬೇಕು. ಮೈಸೂರು ಗಂಧದ ಸಾಬೂನಿನಲ್ಲಿ ಇವೆರಡು ಗುಣಗಳೂ ಕೂಡಿವೆ. ಈ ಸಾಬೂನು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛ ಮಾಡುವುದಲ್ಲದೆ, ಕಾಂತಿಯನ್ನುಂಟು ಮಾಡುತ್ತದೆ.

★

ಮೈಸೂರು
ಸ್ಯಾಂಡಲ್
ಸೋಪು



ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.



ಶಿಲಾಪ್ರವಂಗ

SHILAPRAVANG

★

ಯಾವುದೇ ವಿಧವಾದ ಉಷ್ಣತೆಯಿಂದ ಬಳಲಿರುವ ನಿಮ್ಮ ಹೃದಯ, ಮಿದುಳು, ರಕ್ತ, ವೀರ್ಯಗಳಿಗೆ, ಆಯಾಸವನ್ನು ಹೋಗಲಾಡಿಸಿ ತಂಪು ಕೊಟ್ಟು, ಶರೀರದಲ್ಲಿ ನವಚೈತನ್ಯವನ್ನು ಹುಟ್ಟಿಸುವುದಕ್ಕೆ ಶ್ರೇಷ್ಠವಾದ ಔಷಧವು.

★

ಶ್ರೀಧೂತಪಾಪೇಶ್ವರ
ಪನವೇಲ, ಲಿಮಿಟೆಡ್.,

ಪನವೇಲ ಕುಲಾಬಾ

★

**SHRI DHOOTAPAPESHWAR
PANVEL Ltd, PANVEL.**

ಮಗುವಿನ ಮೃದು ಚರ್ಮಕ್ಕೆ

★

ಬೇಕಾದುದು!

★

ಶುದ್ಧವಾದ ಮತ್ತು ಮೃದುವಾದ ಒಂದು ಸಾಬೂನು. ಮತ್ತು ಆ ಸಾಬೂನು ಪರಿಮಳಯುಕ್ತವಾಗಿಯೂ ಔಷಧಯುಕ್ತವಾಗಿಯೂ ಇರಬೇಕು. ಮೈಸೂರು ಗಂಧದ ಸಾಬೂನಿನಲ್ಲಿ ಇವೆರಡು ಗುಣಗಳೂ ಕೂಡಿವೆ. ಈ ಸಾಬೂನು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛ ಮಾಡುವುದಲ್ಲದೆ, ಕಾಂತಿಯನ್ನುಂಟು ಮಾಡುತ್ತದೆ.

★

ಮೈಸೂರು ಸ್ಯಾಂಡಲ್ ಸೋಪು



ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.



ಶಿಲಾಪ್ರವಂಗ

SHILAPRAVANG

★

ಯಾವುದೇ ವಿಧವಾದ ಉಷ್ಣತೆಯಿಂದ
ಬಳಲಿರುವ ನಿಮ್ಮ ಹೃದಯ, ಮಿದುಳು,
ರಕ್ತ, ವೀರ್ಯಗಳಿಗೆ, ಆಯಾಸವನ್ನು
ಹೋಗಲಾಡಿಸಿ ತಂಪು ಕೊಟ್ಟು,
ಶರೀರದಲ್ಲಿ ನವಚೈತನ್ಯವನ್ನು ಹುಟ್ಟಿಸು
ವುದಕ್ಕೆ ಶ್ರೇಷ್ಠವಾದ ಔಷಧವು.

★

ಶ್ರೀಧೂತಪಾಪೇಶ್ವರ
ಪನವೇಲ, ಲಿಮಿಟೆಡ್.,

ಪನವೇಲ ಕುಲಾಬಾ

★

SHRI DHOOTAPAPESHWAR
PANVEL Ltd, PANVEL.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

★ ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ!

ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು!

ಹಾಗಾಗಬೇಕಾದರೆ 'ಮುಕುಲ' ಉಪಯೋಗಿಸಿರಿ!

ತರುಣ-ತರುಣಿಯರು ಬರಿಯ ಕಣ್ಣು-ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆಯಿದ್ದರೂ ಅದು ವ್ಯರ್ಥವೆನಿಸುವುದು. ಅದಕ್ಕಾಗಿಯೆ

ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿಯೆಣ್ಣೆಯಲ್ಲಿ ತಯಾರಿಸಲಾದ 'ಮುಕುಲ' ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗರ

ಕರ್ನಾಟಕ ಶಾಖೆ : ಸ್ಟೇಶನ್ ರೋಡು, ಹುಬ್ಬಳ್ಳಿ.

Printed by V. Y. Jathar at the Karnatak Printing Works, Dharwar, Edited and Published by M. G. Patil at Jayanti Office, Dharwar.

ಮಾರ್ಚ್ ೧೯೪೨

ಕೆಲವು ಲೇಖಕರು.

ಶ್ರೀರಂಗ
ಗೌರೀಶ ಕಾಯ್ಕಿಣಿ
ಪ್ರೊ. ಎಸ್. ಎಂ. ಕುಲಕರ್ಣಿ
ಡಾ. ಎಚ್. ಪಿ. ಕುಲಕರ್ಣಿ
ಎನ್. ಕೆ. ಕುಲಕರ್ಣಿ

ಜಯಂತಿ

ಬೆಲೆ ನಾಲ್ಕಾಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ .... ವ್ಹಿ. ಪಿ. ಯಿಂದ ೩–೫–೦ .... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮರು ಪಾಟೀಲ ಮಾಧವರಾಯರು

೪ನೆಯ ವರ್ಷ | ಮಾರ್ಚ್ ೧೯೪೭ | ೧೦ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಸಾಮಾಜಿಕನ ಸಂವಚನ (ವಿಚಾರತರಂಗ)	'ಸಾಮಾಜಿಕ'	೪೨೭
ಸಂಪಾದಕೀಯ	ಸಂಪಾದಕರು	೪೩೮
ಮಂಗನ ಮಲ್ಲಿನಾಥತನ	'ಮಲ್ಲಿನಾಥ'	೪೩೯
ಕಳೆದ ಮಹಾಯುದ್ಧದಲ್ಲಿ ಭಾರತೀಯರ ಸಹಾಯ (ರಾಜಕೀಯ)	ಶ್ರೀ. ವಾಳ್ವೇಕರ್ ಗುರುರಾಯರು, ಎಲ್‌ಎಲ್. ಬಿ.	೪೪೧
'ಸರ್ವಮಹಮಸ್ಮಿ' (ಕಿರುಗತೆ)	'ಮಧುಕರ'	೪೪೪
ಆ ಒಂದು ಘಂಟೆ (ಸಣ್ಣಕತೆ)	ಶ್ರೀ. ಎಸ್. ಸುಬ್ಬರಾಮಯ್ಯ, ಬಿ. ಎ. (ಆನರ್ಸ್)	೪೪೫
ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವೆ? (ವಿಚಾರಪರ ಪ್ರ. ಪ್ರ.)	ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ	೪೪೯
ಅಂತರ್ವಾಣಿಗೆ (ಕವನ)	ಶ್ರೀ. ಬಿ. ಎಚ್. ಶ್ರೀಧರ, ಬಿ.ಎ. (ಆನರ್ಸ್)	೪೫೩
ಚಂದ್ರಗ್ರಹಯಾತ್ರೆ (ಪರಿಚಯಾತ್ಮಕ)	ಶ್ರೀ. ಎಚ್. ಕೆ. ನಾಗಭೂಷಣರಾವ್	೪೫೪
ಲಢಾಯಿಯಲ್ಲಿ ಶಿಕ್ಷಣಿಕೆ (ಲಘುಪ್ರಬಂಧ)	'ಶ್ರೀರಂಗ'	೪೫೮
ಕೊಡುಗೈ (ಸಣ್ಣಕಥೆ)	'ಮಂಗಳೂರಿನವ'	೪೬೦
ಹಾಳಿನಿಂದ ಬಾಳು (ವಿಜ್ಞಾನಪರಿಚಯ)	ಪ್ರೊ. ಎನ್. ಎಂ. ಕುಲಕರ್ಣಿ, ಎಂ. ಎ.	೪೬೪
ಸಾಹಿತ್ಯದ ಸ್ವಾಹಾಪತಿಗಳು (ಹರಟೆ)	ಶ್ರೀ. ಎನ್. ಕೆ. ಕುಲಕರ್ಣಿ, ಎಮ್.ಎ., ಬಿ.ಟಿ.	೪೬೬
ಕನ್ನಡ ಸೈನಿಕ (ಜಯಂತಿಯ ಹೊಸವಿಭಾಗ)	ಸಂ. ಕ. ಸೈ.	೪೬೮
ಶ್ರೀ. ಬೇಂದ್ರರ ಸಂದರ್ಶನ (ಕನ್ನಡ-ಮರಾಠಿ ವಾದ)	ಶ್ರೀ. ಎಚ್. ಎಸ್. ಪಾಟೀಲ, ಎಂ.ಎ., ಬಿ.ಕಾಮ್	೪೬೯
ಭಾಷೆಯ ಬಿಕ್ಕಟ್ಟು (ಬಲ್ಲವರ ಹೇಳಿಕೆ)	ಸಂಪಾದಕರಿಂದ	೪೭೩
ಹೈದರಾಬಾದ್ ಕನ್ನಡಿಗರ ಸಾರ್ವಜನಿಕ ಜೀವನ	'ವಿಮರ್ಶಕ' ಹೈದರಾಬಾದ್	೪೭೪
ಪುಸ್ತಕ ವಿಮರ್ಶೆ	'ಎನ್ಕೆ' ಮತ್ತು ಬೇರೆಯವರು	೪೭೭
ಸಾದರಸ್ವೀಕಾರ	.. ..	೪೭೯
ನಗೀಗೆ ನೈವಿದ್ಯ	'ಸಕಲೀ ನಾರಾಯಣಾಚಾರ್ರು'	೪೮೦
ನಾಲ್ಕು ನಿಟ್ಟಿನ ನೋಟ	'ನಿರೀಕ್ಷಕರು'	೪೮೧

ಸಂಪುಟ ೪ | ೧ನೆಯ ಮಾರ್ಚ್ ೧೯೪೨ | ಸಂಚಿಕೆ ೧೦

ಸಾಮಾಜಿಕನ ಸಂವಚನಗಳು

★

‘ಧರ್ಮ, ಧರ್ಮ’ ಎಂದೊರಲುವ ಅಣ್ಣಗಳಿರಾ, ಧರ್ಮದ ಮರ್ಮವಾವುದೆಂಬುದನು ತಿಳಿಸಬಲ್ಲಿರಾ? ದಿಟವ ನುಡಿವುದೆ ಧರ್ಮ, ದಿಟದ ದಾರಿಯಲಿ ಸೊಗದಿ ಬಾಳ್ವುದೆ ಧರ್ಮ, ಸೊಗದಿ ಬಾಳ್ವುದಕೆ ಸಿರಿಯ ಸಂಪಾದಿಸುವುದೆ ಧರ್ಮ, ಸಿರಿಯ ಸಂಪಾದನೆಗಾಗಿ ತಿಳಿದು ದುಡಿಯುತಿರುವುದೆ ಧರ್ಮ! ಇದನುಳಿದು ಬರಿದೆ ನೀರಲಿ ಮಿಂದು, ಬರಡು-ಗೆರೆಗಳನೆಳೆದು, ಬೆರಳನೆಣಿಸುತ್ತ ಕರಿಗತ್ತಲಲಿ ಕುಳಿತುಕೊಳ್ಳುವವರ ಕಂಡು, ಕಳಕಳನೆ ನಗುವನಯ್ಯಾ ನಮ್ಮ **ಕಾಲರಾಯ!**

* * *

ಬದುಕಬೇಕೆಂಬುದೆ ಜೀವಕುಲದ ಹಿರಿಯಾಸೆ ಕೇಳಣ್ಣಾ! ಬದುಕಿರುವುದೇ ಜೀವಕುಲದ ಪರಮ ಧರ್ಮ ಕಾಣಣ್ಣಾ! ಬದುಕಿರುವುದಕ್ಕೆ ಬಲವು ಬೇಕು; ಬಲಕ್ಕಾಗಿ ಭೋಜನವು ಬೇಕು; ಭೋಜನ ಬಿಟ್ಟರೆ ಬೇರೆ ಧರ್ಮವೇನಿದೆಯಣ್ಣಾ! ನಿರಾಹಾರ ಮಾಡಿ ಕಾಯವನು ಕೊರಗಿಸಿ ಬೇಗನೆ ಸಾಯಬೇಕೆನ್ನುವ ಮರುಳರ ಕಂಡು, ಮರಳಿ ಮರಳಿ ನಗುವ ನಮ್ಮ **ಕಾಲರಾಯ!**

* * *

ಕೊಡಬೇಕೆಂಬುದು ಧರ್ಮದ ನಿಯಮ ಸರಿಯಣ್ಣಾ! ಕೊಟ್ಟವರ ಬಾಳಿನ ಬೆಲೆ ಬಲ್ಲಿತ್ತಾಗುವುದಣ್ಣಾ! ಕಳೆದುಕೊಂಡುದು ಕೊಟ್ಟಂತಲ್ಲವಣ್ಣಾ! ಕಳೆದುದನು ಕಂಡು ಹಿಡಿದು ಕಸಿದುಕೊಳ್ಳುವುದೂ ಬದುಕಬೇಕೆಂಬವರ ಧರ್ಮ ಕಾಣಣ್ಣಾ! ಕಳೆದುಕೊಂಡುದನೆ ಕೊಡುಗೆ ಕೊಟ್ಟೆವೆಂದು ಹೊರಗೆ ಹೆಮ್ಮೆ ಕೊಚ್ಚುವ—ಮನದೊಳಗೆ ಮರುಗಿ ಬೀಳುವ—ಹೇಡಿಗಳ ಕಂಡು, ಹಳಿದು ಹಳಿದು ನಗುವ ನಮ್ಮ **ಕಾಲರಾಯ!**

* * *

ಕೂಡಿರುವುದು ಜೀವಕುಲದ ಧರ್ಮ ಕಾಣಣ್ಣಾ! ಕೂಡಿರುವವರನು ಕೆಡಿಸುವ ಧರ್ಮಗಳು ಧರ್ಮವೆಂತಹವು ಹೇಳಣ್ಣಾ! ಬಲವು-ಕಲೆ-ಕರುಣೆಗಳೆ ಮಾನವನ ಧರ್ಮ-ಸೂತ್ರದ ಮೂರು ಎಳೆಗಳಣ್ಣಾ! ಇವಿಲ್ಲದ ಬರಡುಧರ್ಮಗಳನ್ನು ನೆಚ್ಚಿ, ಬರಿದೆ ಬಾಳನು ಕೆಡಿಸಿ, ಕುರುಡರಾಗಿರುವವರ ಕಂಡು ಕಂಡು, ಕೈತಟ್ಟಿ ನಗುವ ನಮ್ಮ **ಕಾಲರಾಯ!**

* * *



ಕನ್ನಡ ವೈರಿಗಳು ಕನ್ನಡನಾಡಿನಲ್ಲಿ ಇಲ್ಲವೆ ?

‘ ಇಲ್ಲ ’ ಎಂದು ಮೈಸೂರುಕನ್ನಡದ ಪ್ರಸಿದ್ಧ ದಿನಪತ್ರಿಕೆಯೊಂದು ಅಗ್ರಲೇಖ ಬರೆದು ಸಾಧಿಸಲು ಪ್ರಯತ್ನಪಟ್ಟಿದೆ. ಆದರೆ ಕರ್ನಾಟಕದ ವಸ್ತುಸ್ಥಿತಿಯ ಕಲ್ಪನೆಯಿದ್ದವರಾರೂ ಈ ಮಾತನ್ನು ಇಷ್ಟೊಂದು ಸ್ಪಷ್ಟವಾದ ಮಾತಿನಲ್ಲಿ ಸಾರಿಹೇಳಲಾರರು. ಸಾಮಾನ್ಯವಾಗಿ ಮೈಸೂರುದೇಶದಲ್ಲಿ ವಾಸಿಸುವ ತೆಲುಗರೂ ತಮಿಳರೂ ಕೊಂಕಣಿಗರೂ ಅನಿವಾರ್ಯವಾಗಿ—ಪ್ರಾದೇಶಿಕ ಭಾಷೆಯಾದ—ಕನ್ನಡವನ್ನು ಕಲಿತಿರಬಹುದು. ಕಲಿತವರಲ್ಲಿ ಸಾಹಿತ್ಯನಿರ್ಮಾಣ-ಗುಣವಿದ್ದ ಕೆಲವರು, ಪ್ರೀತಿಯಿಂದ ಕನ್ನಡದಲ್ಲಿ ಗ್ರಂಥಗಳನ್ನು ಬರೆಯುತ್ತಿರಬಹುದು, ಪತ್ರಿಕೆಗಳನ್ನೂ ನಡೆಯಿಸುತ್ತಿರಬಹುದು. ಮತ್ತೆ ಕೆಲವರು ವ್ಯಾಪಾರಿದೃಷ್ಟಿಯಿಂದಲೂ ಕನ್ನಡ ಗ್ರಂಥ-ನಿರ್ಮಾಣಕ್ಕೆ—ಪತ್ರಿಕಾ ವ್ಯವಸಾಯಕ್ಕೆ—ತೊಡಗಿರಬಹುದು; ಅದೇ ದೃಷ್ಟಿಯಿಂದ ಅವರು ಕನ್ನಡದಲ್ಲಿ ಅಭಿಮಾನವನ್ನೂ ತೋರಿಸುತ್ತಿರಬಹುದು. ಇನ್ನು ಕೆಲವು ಜನರು ಅಧಿಕಾರಸ್ಥಾನದಲ್ಲಿದ್ದುಕೊಂಡು, ‘ ರಾಜಭಾಷೆ ’ ಎಂಬ ರಾಜನಿಷ್ಠಾಬುದ್ಧಿಯಿಂದ ಅನಿವಾರ್ಯವಾಗಿ ಕನ್ನಡವನ್ನು ಪುರಸ್ಕರಿಸುತ್ತಿರಬಹುದು. ಬೇರೆ ಕೆಲವರು ಬೇರೆ ಯಾವುದೊ ಮಹತ್ವಾಕಾಂಕ್ಷೆಯಿಂದ ಕನ್ನಡವನ್ನು ಎತ್ತಿ ಹಿಡಿಯುತ್ತಿರಬಹುದು. ಅವರೆಲ್ಲರನ್ನು ನೋಡಿದ ಆ ಪತ್ರಿಕಾಸಂಪಾದಕರು— ಸರಳ ಹೃದಯದಿಂದಲೇ ಇರಬೇಕು— ‘ ಕನ್ನಡ ವೈರಿಗಳು ಕನ್ನಡ ನಾಡಿನಲ್ಲಿ ಇಲ್ಲ ’ ಎಂದು, ಅಂತಹರನ್ನೆಲ್ಲ ಸಾಕ್ಷಿಕೊಟ್ಟು ಸಾರಿ ಸಾರಿ ಹೇಳಿಬಿಟ್ಟಿರುವರು.

ಇರಬಹುದು, ಮೈಸೂರುದೇಶದಲ್ಲಿ ಕನ್ನಡಕ್ಕೆ ಪ್ರತ್ಯಕ್ಷವಾದ ವೈರಿಗಳು ಕಾಣದೆ ಇರಬಹುದು; ಆದರೆ 'ಬ್ರಿಟಿಷ' ಕನ್ನಡನಾಡನ್ನು ಸ್ವಲ್ಪ ಕಣ್ಣು ತೆರೆದು ನೋಡಿದರೆ ‘ ಕನ್ನಡ ವೈರಿಗಳು ’ ಕನ್ನಡ ನಾಡಿನಲ್ಲಿಯೆ ಇದ್ದಾರಲ್ಲದೆ ಬೇರೆ ಎಲ್ಲಿಯೂ ಇಲ್ಲ—ಎಂಬುದು ಸ್ಪಷ್ಟವಾಗಿ ಕಂಡುಬರುವುದು. ಗಡಿನಾಡಿನಲ್ಲಿಯ ನೆರೆನೆರೆ ಭಾಷೆಯವರ ತಿಕ್ಕಾಟ ಬರಿ ತಿಕ್ಕಾಟವಾಗಿರುವುದಲ್ಲದೆ, ಅದರ ಹಿಂದೆ ಹಗೆತನವಿರುವುದಿಲ್ಲ. ಅಲ್ಲಲ್ಲಿಯ ಬಹುಸಂಖ್ಯಾಕರ ಭಾಷೆ ಸಾರ್ವಜನಿಕ ಭಾಷೆಯಾಗಿರಬೇಕೆಂಬ ತತ್ತ್ವವನ್ನು ಇಬ್ಬರೂ ಒಪ್ಪಿಬಿಟ್ಟರೆ, ಇದ್ದ ತಿಕ್ಕಾಟವೂ ಹೊರಟು ಹೋಗುವುದು; ಅಲ್ಲದೆ ಬರುಬರುತ್ತ ಸಾರ್ವಜನಿಕ ಜೀವನದ ಆವಶ್ಯಕತೆಯ ಒತ್ತಾಯದ ಮೂಲಕ, ಗಡಿನಾಡಿನ ಪ್ರದೇಶದಲ್ಲೆಲ್ಲ ಬಹುಸಂಖ್ಯಾಕರ ಭಾಷೆಯೆ ನಿಂತುಬಿಟ್ಟು, ಅಲ್ಪ-ಸಂಖ್ಯಾಕರ ಭಾಷೆ ಅನಾವಶ್ಯಕವಾದುದರಿಂದ, ತನ್ನಿಂದ ತಾನೆ ಅಳಿದು ಹೋಗಿ ಬಿಡುವುದು. ಆದರೆ ಇಂದು ನಮ್ಮ ನಾಡಿನ ಮುಂದಾಳುಗಳೆನಿಸಿಕೊಳ್ಳುವ ಕೆಲವರು—ಯಾವುದೋ ಒಂದು ಆಂತರಿಕ ಅಭಿನಿ-ವೇಶದ ಮೂಲಕ—ಗಡಿನಾಡುಗಳ ತಿಕ್ಕಾಟವು ವೈರವಾಗಿ ಪರಿಣಮಿಸುವಂತೆ ತಮ್ಮ ವರ್ತನವನ್ನು ಇರಿಸಿದ್ದಾರೆ. ಬಳ್ಳಾರಿಯಲ್ಲಿಯ ಕನ್ನಡಿಗರು ‘ ರಾಯಲುಸೀಮೆ ’ಯ ಬೆನ್ನನ್ನು ಹತ್ತಿರುವುದೂ, ಬೆಳಗಾಂವಿಯ ಕನ್ನಡಿಗರು ಮಹಾರಾಷ್ಟ್ರದ ಹೊರಮೆಂಟಿಗೆ ಬೆರ-ಗಾದುದೂ ಕರ್ನಾಟಕಕ್ಕೆ ಒಂದು ದೊಡ್ಡ ಆಘಾತವಲ್ಲದೆ ಇನ್ನೇನು ? ಅಂತಹರಿಂದ ಕರ್ನಾಟಕಕ್ಕೆ ಅನಿಷ್ಟವಾಗದಿರುವುದೆ ? ತಿಳಿದು ತಿಳಿದೂ ಅನಿಷ್ಟವನ್ನುಂಟುಮಾಡುವವರನ್ನು ವೈರಿಗಳೆಂದೇ ಹೇಳಬೇಕಲ್ಲದೆ ಇನ್ನೇನೆಂದು ಹೇಳಬೇಕು ? ಅಂತಹರೆಲ್ಲ ಕನ್ನಡನಾಡಿನ ಹೊರಗೆ ಇಲ್ಲ; ಕನ್ನಡನಾಡಿನಲ್ಲಿಯೆ ಇದ್ದು ವಂಶಪಾರಂಪರ್ಯವನ್ನು ಇಲ್ಲಿಯೆ ನಡೆಯಿಸಿಕೊಂಡು ಬಂದಿರುವರು ; ಮುಂದೆ ಕೂಡ ಇಲ್ಲಿಯೇ ಬಾಳಿ ಬದುಕುವವರು.

ಕನ್ನಡನಾಡಿನಲ್ಲಿಯೆ ಇದ್ದು, ಕನ್ನಡಕ್ಕೆ ದ್ರೋಹಬಗೆಯುವ ಇನ್ನೊಂದು ಗುಂಪೂ ನಮ್ಮಲ್ಲಿ ಪ್ರಬಲವಾಗಿದೆ. ಆ ಗುಂಪು ಯಾವುದು ಗೊತ್ತೆ ? ವಿಪರೀತ ಪರಿಸ್ಥಿತಿಯ ಮೂಲಕ—ಕನ್ನಡಿಗರಿಗೆ ಹೊಸಕಾಲದ ಉಚ್ಚಶಿಕ್ಷಣ ದೊರೆಯದಿರುವಾಗ, ಕನ್ನಡನಾಡಿಗೆ ನೌಕರಿಗೆಂದೊ, ಡಾಕ್ಟರಿ-ವಕೀಲಿಯ ವ್ಯವಸಾಯಕ್ಕೆಂದೊ, ವ್ಯಾಪಾರೋದ್ಯಮಕ್ಕೆಂದೋ ಬಂದು, ಬೇರೆಬೇರೆ ನಮ್ಮ ನಗರಗಳಲ್ಲಿ ನೆಲೆಗೊಂಡಿರುವ ನೆರೆನಾಡಿನವರು. ಇವರಿಗೆ ಕನ್ನಡಿಗರು ಬೆಳೆಯುವ ಬೆಳೆ ಬೇಕು, ಕೊಡುವ ದುಡ್ಡುಬೇಕು, ತಿನ್ನಿಸುವ ತಿನಿಸು ಬೇಕು, ಆದರೆ ಅವರ ಭಾಷೆ ಸಂಸ್ಕೃತಿ ಬೇಕಿಲ್ಲ ; ಅವರೊಂದಿಗೆ ಕೂಡಿ ನಡೆಯುವುದು ಬೇಕಿಲ್ಲ. ನಾಡಿನ ಮುಂದಾಳಾಗಿ ಮೆರೆಯುವ ವಿಜೃಂಭಣೆ ಬೇಕು; ನಾಡಿಗರ ಜೀವನದ ಕಷ್ಟ-ನಷ್ಟಗಳಲ್ಲಿ ಸಹಾನು-ಭೂತಿ ಬೇಕಿಲ್ಲ. ಈ ಮೊದಲೆ ಸಿಕ್ಕಿರುವ ಸ್ಥಾನ-ಮಾನದ ಮೂಲಕ ಕನ್ನಡಿಗರ ಬಾಳನ್ನು ಹಲವು ರೀತಿಯಿಂದಿವರು ಕಿತ್ತು ತಿನ್ನುತ್ತಲಿರುವರಲ್ಲದೆ, ಅವರಲ್ಲಿ ಸಂಘಟನೆಯುಂಟಾಗುವುದಕ್ಕೆ ವಿರೋಧಿಗಳಾಗಿರುವರು. ಎಂತಲೆ ಇವರ ಔದಾರ್ಯವು ಪರಪ್ರಾಂತಗಳಲ್ಲಿರುವ ಸಂಘ-ಸಂಸ್ಥೆಗಳ ಸಂವರ್ಧನೆಗೆ ವೆಚ್ಚವಾಗುತ್ತಿರುವುದಲ್ಲದೆ, ಕನ್ನಡ ನಾಡಿನ ಸಂಘ-ಸಂಸ್ಥೆಗಳಿಗೆ ಒಂದು ಕಾಸೂ ಸಿಕ್ಕದು. ಯಾವುದೊಂದು ನಾಡು ಸಂಘಟನೆಗೊಳಬೇಕಾದುದು ಅಲ್ಲಿಯ ಸುಶಿಕ್ಷಿತ ನಾಗರಿಕರ ವಿಧಾಯಕಕಾರ್ಯದಿಂದ ; ಆದರೆ ಕನ್ನಡನಾಡಿನಲ್ಲಿಯ ಇಂತಹ ಸುಶಿಕ್ಷಿತ ನಾಗರಿಕರ ಪಂಚಮದಳವು, ಬರಿಯೆ ವಿಧ್ವಂಸಕ ಕಾರ್ಯಗಳನ್ನೇ ನಡೆಯಿಸುತ್ತಿರುವುದು. ಇವರೆಲ್ಲ ಇಂದೆ ಇದ್ದು ನಾಳೆ ಹೊರಟು ಹೋಗುವವರಲ್ಲ. ಇಲ್ಲಿಯೆ ನೆಲೆಯೂರಿ ನಿಂತಿದ್ದಾರೆ, ಇಲ್ಲಿಯೆ ತಮ್ಮ ಹಿತಸಂಬಂಧಗಳನ್ನು ಬೆಳೆಯಿಸಿಕೊಂಡಿದ್ದಾರೆ, ಇವರ ಮಕ್ಕಳು ಮೊಮ್ಮಕ್ಕಳೂ ಇಲ್ಲಿಯೆ ಇರುವವರಾಗಿದ್ದಾರೆ. ಎಂದ

(೪೪೩ನೆಯ ಪುಟ ನೋಡಿರಿ)

೧. ದಂಪತಿಗಳ ದರ್ಶನ

ಚೀನಾ ದೇಶದ ಅದ್ವಿತೀಯ— ಅಥವಾ ಸದ್ವಿತೀಯ ಎನ್ನೋಣ— ಮುಂದಾಳಾದ **ಶಿಯಾಂಗ-ಕೈ-ಶೇಕರು** ಭಾರತಕ್ಕೆ ಬಂದಿರುವರಷ್ಟೆ? ಅವರೊಡನೆ ಮಂಗರಾಯನ ಸಾಕ್ಷಾತ್ಕಾರ ಸಂದರ್ಶನ ಆಯಿತೆ, ಅನಬಹುದೆ— ಎಂದು ಮಂಗಾಭಿಮಾನಿಯಾದ ವಾಚಕನೊಬ್ಬನು ಕಳಕಳಿಯಿಂದ ಕೇಳಿದ್ದಾನೆ. ಮಿಕ್ಕ ವಾಚಕರೆ, ನಿಮ್ಮ ತರ್ಕವೇನು? ಹಿಂದುಸ್ಥಾನದಲ್ಲಿಯ ಬ್ರಿಟಿಶರ ಪರವಾಗಿ ವೈಸರಾಯರನ್ನೂ, ಕಾಂಗ್ರೆಸಿನ ಪರವಾಗಿ ಆಝಾದ-ನೆಹರು ಪ್ರಭೃತಿಗಳನ್ನೂ, ಮುಸ್ಲಿಂಲೀಗದ ಪರವಾಗಿ ಜಿನಾ ಸಾಹೇಬರನ್ನೂ, ಸಂಸ್ಥಾನಿಕರ ಸಮಿತಿಯ ಪರವಾಗಿ ನವಾನಗರದ ಜಾಮ ಸಾಹೇಬರನ್ನೂ ಕಾಣಲು ಏರ್ಪಾಡು ಮಾಡಿ, ಹಿಂದುಸ್ಥಾನದಲ್ಲಿ ಇಷ್ಟು ಬೇರೆ ಬೇರೆ ಪ್ರಮುಖ ಪಕ್ಷಗಳಿವೆ ಎಂದು ಒಪ್ಪಿದ **ಶಿಯಾಂಗರು** ಮಂಗರಾಯನನ್ನು ಕಾಣದೆ ಉಳಿಯುವರೆ? ಆದಕಾಗಿಯೂ ಮಂಗರಾಯನ ಪಕ್ಷವನ್ನು ಒಪ್ಪುವುದೂ ಮಂಗರಾಯನನ್ನು ಸಂದರ್ಶಿಸುವುದೂ ಅವರಿಗೆ ಅನಿವಾರ್ಯವಾಯಿತು. 'ನಮ್ಮ ದೇಶ ಚೀನ' ಎಂದರು **ಶಿಯಾಂಗರು**; 'ನಮ್ಮ ದೇಶ ಪ್ರಾ—ಚೀನ' ಎಂದನು ಮಂಗರಾಯನು. ಅಂತೂ ಎಲ್ಲರನ್ನೂ ಕಂಡು 'ಜನರಲ್ಲಿ ಸಮೋ' ಭೂತರಾಗಿ ತಮ್ಮ Generalissmo ಎಂಬ ಹೆಸರನ್ನು ಸಾರ್ಥಕಗೊಳಿಸಿದರು ಚೀನದ ಚಿನ್ನ-ನಾಯಕರು. ಮಂಗರಾಯನ ಸಂದರ್ಶನದಲ್ಲಿ ಏನೇನು ಜರುಗಿತು ಎಂದು ತಿಳಿಯಲು ಅನೇಕರಿಗೆ ಕುತೂಹಲವಿರಬಹುದು. ಅದನ್ನು ಹೇಳಿ ಅಹಂಕಾರದ ಅಪರಾಧಕ್ಕೆ ಗುರಿಯಾದರೆ ಅಡ್ಡಿ ಇಲ್ಲವಷ್ಟೆ? 'ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗದ ಮುಂದಾಳುಗಳನ್ನು ಏಕಕಾಲಕ್ಕೆ ನೋಡಬೇಕೆಂಬ ಆಸೆ ನನಗಿದೆ; ಅವರಿಬ್ಬರೂ ಒಂದೆಡೆ ಸೇರಬಹುದೆ? ಇಲ್ಲದೆ ಹೋದರೆ—' ಎಂದು ನಿರಾಶೆಯ ಮುದ್ರೆಯಿಂದ ಅವರು ಕೇಳಿದ್ದಕ್ಕೆ ಮಂಗರಾಯನು ಹೀಗೆ ಹೇಳಿದನು: 'ಅವರು ಒಂದೆಡೆ ಸೇರದಿದ್ದರೂ ತಾವು ಹೆದರಬೇಕಾಗಿಲ್ಲ. ತಮ್ಮ ವ್ಯಕ್ತಿತ್ವ ಇಷ್ಟುದೊಡ್ಡದಿದೆ, ಶಿಯಾಂಗ-ಕೈ-ಶೇಕರೆ! ಅದಕಾಗಿ ಅದೇ ವೇಳೆಗೆ **ಶಿಯಾಂಗರು** ಮಹಾತ್ಮರನ್ನು ಕಾಣಲಿ, ಶೇಕರು ಜಿನಾ ಅವರನ್ನು ಕಾಣಲಿ, ಉಳಿದ ಕೈ ಮಿಕ್ಕವರನ್ನು ನೋಡಲಿ' ಶ್ರೀಮತಿ ಶಿಯಾಂಗರು ನಕ್ಕರು. 'ಮತ್ತೆ ತಾವು ಬರುವುದು ಯಾವಾಗ?' ಎಂದು ಏಳುತ್ತ ಮಂಗರಾಯನು ಕೇಳಲು 'ಮಂಗರಾಯನ ಪಕ್ಷವೆ ದೇಶದ ತುಂಬ ಬೆಳೆದ ಸುದಿನಕ್ಕೆ' ಎಂದು ದಂಪತಿಗಳು ಹರಸಿದರು.

* * *

೨. ಖೇರ ಪ್ರಕರಣದ 'ಅಖೇರ'

'ಬೆಳಗಾಂವಿಯಲ್ಲಿ ಶ್ರೀಯುತ ಖೇರರು ಬಂದಾಗ ಕನ್ನಡ-ಮರಾಟಿ ವಾದದ ಗೊಂದಲವೆದ್ದಿತಷ್ಟೆ! ಈ ವಿಷಯಕ್ಕೆ ಮಂಗರಾಯನು ಅಖೇರದ ನಿರ್ಣಯವನ್ನು ಕೊಡಬಹುದೆ?' ಎಂದು ಮರಾಟಿಯನ್ನರಿಯದ ಮರುಳ ಕನ್ನಡ ತರುಣರ ಮನವಿಯೊಂದು ಬಂದಿದೆ. 'ಬೆಳಗಾಂವಿಯು ಅಖೇರವಾಗಬೇಕು' ಎಂದು ಮಂಗರಾಯನ ನಿರ್ಣಯ; ಅರ್ಥಾತ್, ಬೆಳಗಾಂವಿಯಲ್ಲಿ ಅ-ಖೇರ ಎಂದರೆ ಖೇರತನವಿಲ್ಲದಂತಾಗಬೇಕು ಎಂದು ಮಂಗರಾಯನ ಅಭಿಪ್ರಾಯ.

ಧಾರವಾಡ ಸಾರ್ವಜನಿಕ ಸಭೆಯಲ್ಲಿ

ಪುರಸ್ಕೃತವಾದ

ಗೊತ್ತುವಳಿಯೊಂದು.

“ಕರ್ನಾಟಕದ ಜನಜೀವನ ಭಾಷೆ ಕನ್ನಡವಿದ್ದು, ಕರ್ನಾಟಕದಲ್ಲೂ ಮಿಕ್ಕಪ್ರಾಂತಗಳಲ್ಲಿಯಂತೆ ಸಾರ್ವಜನಿಕ ಚಟುವಟಿಕೆಗಳೆಲ್ಲ ಕನ್ನಡದಲ್ಲಿಯೇ ನಡೆಯಬೇಕಾಗಿದ್ದು, ಕನ್ನಡವನ್ನರಿಯದ ಪರಪ್ರಾಂತದ ಅತಿಥಿಗಳು ಬಂದಾಗ ಮೊದಲು ಕನ್ನಡ, ಅದಿಲ್ಲದೆ ಹೋದರೆ ರಾಷ್ಟ್ರಭಾಷೆ, ಕೊನೆಯ ಪಕ್ಷಕ್ಕೆ ಇಂಗ್ಲಿಷ್— ಈ ಕ್ರಮದಲ್ಲಿ ಮಾತನಾಡಬೇಕು. ಇದು ಶಕ್ಯವಿಲ್ಲದ ಪಕ್ಷದಲ್ಲಿ ಅತಿಥಿಯ ಭಾಷಣವನ್ನು ವಾಕ್ಯಕ್ಕೆ ವಾಕ್ಯ ಕನ್ನಡದಲ್ಲಿ ಭಾಷಾಂತರಿಸಬೇಕು. ಮತ್ತು ಈ ಸಾಮಾನ್ಯತತ್ತ್ವವನ್ನು ಕರ್ನಾಟಕದ ಎಲ್ಲ ಕಾಂಗ್ರೆಸ್ ಸಮಿತಿ, ಸಾಹಿತ್ಯಪರಿಷತ್ತು, ಕ. ವಿ. ವ. ಸಂಘ, ಬೇರೆ ಇತರ ಸಾರ್ವಜನಿಕ ಸಂಘಗಳು ಸಾರಿ, ಇದನ್ನು ಪ್ರಚಾರದಲ್ಲಿ ತರುವ ಪೂರ್ಣಹೊಣೆಯನ್ನು ಹೊರಬೇಕು.”



ಹಿಹೊ — ಮರೆತುದಕ್ಕೆ ಕ್ಷಮೆ ಇರಲಿ, 'ವೀರತನ' ಎಂದರೇನೆಂಬುದು ತಮಗೆ ಗೊತ್ತಿಲ್ಲವೆ? ಹಿಂಸೆಯಿಂದ ಮಾಡುವ ಕೆಟ್ಟ ಕೆಲಸಕ್ಕೆ 'ಘೋರ' ಎಂದು ಹೆಸರಿದ್ದರೆ ಅಹಿಂಸೆಯಿಂದ ಮಾಡಬಹುದಾದ ಅಂತಹ ಕೆಲಸಕ್ಕೇ 'ವೀರ' ಎಂದು ಹೆಸರು. ಉದಾಹರಣಾರ್ಥವಾಗಿ, ಕರ್ನಾಟಕದಲ್ಲಿ 'ಹಿಂದಿ ಭಾಷೆಯೋ ಮರಾಠಿ ಭಾಷೆಯೊ?' ಎಂದು ಕೆ. ಪಿ. ಸಿ. ಸಿ. ಯಲ್ಲಿ ಕೇಳುವುದು. ಕರ್ನಾಟಕದಲ್ಲಿ ಕನ್ನಡ ಭಾಷೆ, ಬರದಿದ್ದರೆ ಹಿಂದೀ ಭಾಷೆ, ಎರಡೂ ಬರದಿದ್ದರೆ ಅಲ್ಲದ ತಮಾಷೆ! ಇನ್ನು ಬೆಳಗಾಂವಿಯು ಕಾಂಗ್ರೆಸಿನ ಪ್ರಾಂತವಿಭಜನೆಗೆ ಅನುಸರಿಸಿ ಕರ್ನಾಟಕದಲ್ಲಿದೆ ಎಂಬುದು ಅವರಿಗೆ ಗೊತ್ತಿರದಿದ್ದರೆ ಮಾಡುವುದೇನು? ಎಂದು ಹೆದರಬೇಕಾಗಿಲ್ಲ. ಯಾಕೆಂದರೆ ಅಂತಹ ಪ್ರಸಂಗದಲ್ಲೂ ಮಾಡುವ ಕೆಲಸ ಸುಲಭವಿದೆ; ಅರ್ಥಾತ್, ಶಿಕ್ಷಣ ಮಂತ್ರಿಗಳೆಂಬುದನ್ನು ಮರೆತು ಮಂತ್ರಿಗಳಿಗೆ ಶಿಕ್ಷಣ ಬೇಕು ಎಂಬುದು ತಿಳಿಯುವುದು!

'ಹೋದಲ್ಲೆಲ್ಲ ಮಾತೃಭಾಷೆಯಲ್ಲಿಯೆ ಮಾತನ್ನಾಡುವ ಹಕ್ಕು ಇದೆ' ಎಂದರೆ 'ಇಂತಹ ಕೂಸುಗಳು ಮಾತೆಯ ಮಗ್ಗುಲನ್ನು ಬಿಟ್ಟು ಸಾರ್ವಜನಿಕ ಕೆಲಸದಲ್ಲಿ ತೊಡಗಬಾರದು' ಎಂದು ಹೇಳಬೇಕು. 'ಸ್ಥಾನಿಕ ಮುಖಂಡರ ಮಾತನ್ನು ಮೀರಬಹುದೆ' ಎಂದರೆ 'ಮುಂದೆ ಕೂತ ಖಂಡತುಂಡರ ಮಾತೇನು'-ಎಂದು ಕೇಳಬೇಕು. 'ವೀರತನ'ಕ್ಕೆ ಹೀಗೆ 'ಚೋರತನ' ಮಾಡಿದರೆ ಪ್ರಕರಣದ ಅಖೇರವಾಗುವುದು ಖಂಡಿತ—ಎಂದು ಸಾರುತ್ತಾನೆ ಮಂಗಮಹಾಖಂಡಿತ! ಕರ್ನಾಟಕದ ಕೆಂಡೀತ! 'ಜಾಹ್ನವೀ ಮಂಡಿತ'ರ ದಂಡೀತ!

೩. 'ಸಾರಥೀ! ಹುಳುಗಂಬ ನಾರುತ್ತಿ!'

ಭಳಿ! ಭಲೆ! ತಾವು ಬಂಧವರಧಾರಿಜೀ— ಎನಬೇಡ ಸಾರಥಿ—ಕನ್ನಡವ ಕಾರುತೀ। ಅದೇಕೆಂದರೆ, ಮುಂಬಯಿ ಕರ್ನಾಟಕ-ಮದರಾಸು ಕರ್ನಾಟಕ-ಮೈಸೂರು ಕರ್ನಾಟಕ-ಮೂವತ್ತೂರು ಕೋಟಿ ಕರ್ನಾಟಕಂಗಳ ವಿಶ್ವಕರ್ನಾಟಕಂ ಮಾಡಿದ ಉಭಯಭಾಷೆಗಳ ಗಂಡ, ಪತ್ರಿಕಾಪ್ರಚಂಡ, ನಾನು ಬಂಧಿದೇನೆ ಎತ್ತಿಕೊಂಡೀ ದಂಡ! 'ಕನ್ನಡಿಗರು ಕನ್ನಡ ವೈರ ತೋರಿಸಿರುವ ಉದಾಹರಣೆಯೊಂದೂ ನಮ್ಮ ಗಮನಕ್ಕೆ ಬಂದಿಲ್ಲ'! ಹಿಂದಿಯ ನೆಪದಿಂದ ಕನ್ನಡವನ್ನೆ ಹಿಂದೂಡುವ, ಅಹಿಂಸೆಯ ನೆಪದಿಂದ ಅನ್ಯರ ಏಟನ್ನೆ ಕನ್ನಡರು ತಿನ್ನಬೇಕೆಂಬ, ಸತ್ಯದ ನೆಪದಿಂದ ಜನಗಣತಿಯ ಜಾದುಗಾರಿಕೆಯನ್ನು ಮಾಡುತ್ತಿರುವ—ಅವರೂ ಕನ್ನಡರೆ! ಅವರೂ ಕನ್ನಡದ ಪ್ರಗತಿಗೆ ಆಸರಗಂಬಗಳೆ! ಯಾಕೆಂದರೆ? ಕಂಬಗಳಲ್ಲಿ ತೀರ ಫ್ಯಾಶನೇಬಲ್ ಆದ 'ಐದನೆಯ ಕಂಬ, fifth column' (ಪಂಚಮ ದಲ) ಎಂಬುದಿಲ್ಲವೆ? ಅಂತಹ ಪಂಚಮ—ಅಥವಾ ಅಚ್ಚಗನ್ನಡದಲ್ಲಿ ಹೇಳುವುದಾದರೆ—ಹುಳುಗಂಬ (ಹುಳು ತಿಂದ ಕಂಬ) ಇವರು! ತೀರ ಅಧುನಿಕ ಮಾದರಿ!

ಕರ್ನಾಟಕದಲ್ಲಿದ್ದರೂ ಕನ್ನಡದಿಂದ ಮುಖವಿದ ಮಾಡುತ್ತಿ, ಹೇ ಸಾರಥೀ, ಇವರು ಜಾಮೂರುತಿ!

೪. ತಿದ್ದುಪಡೆ!

ಸತ್ಯದ ಅಭಿಮಾನವಿದ್ದವರು ತಪ್ಪನ್ನು ತಿದ್ದಿಕೊಳ್ಳುವುದರಲ್ಲಿ ಆಶ್ಚರ್ಯವೇನು? ಅದಕ್ಕಾಗಿ ಸತ್ಯಕ್ಕೆಯೆ ಮೀಸಲಾದ ಒಂದು ಉಜ್ವಲಾಭಿಮಾನದ ರಾಷ್ಟ್ರಪತ್ರಿಕೆ—ಅಲ್ಲಲ್ಲ, ರಾಷ್ಟ್ರಾಭಿಮಾನದ ಉಜ್ವಲ ಪತ್ರಿಕೆಯು (ಅರ್ಥಾತ್ ಕನ್ನಡ ದಿನಪತ್ರಿಕೆ), ದಿನಾಲು ಒಂದು ಕಾಲನ್ನು 'ತಿದ್ದುಪಡೆ'ಗಾಗಿಯೆ ಮೀಸಲಾಗಿರಿಸಿದ್ದರೆ ಆಶ್ಚರ್ಯವೇನು? ಇಷ್ಟಾದರೂ ಕೆಲವು ಮಾತುಗಳು 'ತಿದ್ದುಪಡೆ' ಇಲ್ಲದೆ ಉಳಿದರೂ ಆಶ್ಚರ್ಯವೇನು? ಯಾಕೆಂದರೆ, ಎಷ್ಟಾದರೂ ಸಂಪಾದಕನು ಮರ್ತ್ಯನೆ. ಆದ್ದರಿಂದ ಅಂತಹ ಪ್ರಸಂಗದಲ್ಲಿ ಸತ್ಯದ ಸೇವೆಗೆ ತನ್ನ ಸಹಾಯವನ್ನು ಸಲ್ಲಿಸುವ ಸದಿಚ್ಛೆಯಿಂದ ಮಂಗರಾಯನು ಆ ದಿನಪತ್ರಿಕೆಯ (೧೦-೨-೪೨) ಒಂದು ಸುದ್ದಿಯ ತಲೆಬರೆಹವನ್ನು ತಿದ್ದುಪಡೆ ಶಾಖೆಯ ನಿದರ್ಶನಕ್ಕೆ ತರಬಯಸಿದ್ದಾನೆ. ವಾಚಕರ ಕ್ಷಮೆ ಇರಲಿ ಕ್ಷಮೆ ಯಾಕೆ—ಎನ್ನುವಿರಾ? ಯಾಕೆಂದರೆ 'ಅಖಿಲ ಭಾರತ ಮಹಿಲಾ ಪರಿಷತ್ತಿನ ಶಿಕ್ಷಣ ಶಿಬಿರ' ಎಂಬ ತಲೆಬರೆಹದ ಕೆಳಗೆ ಹೀಗೆ ಇನ್ನೊಂದು ತಲೆ ಬರೆಹವಿದೆ:

"ಕರ್ನಾಟಕದಿಂದ ಸುರತ ಶಿಕ್ಷಣ
ಶಿಬಿರಕ್ಕೆ ಹೋಗಲಿಚ್ಛಿಸುವ
ಭಗಿನಿಯರಿಗೆ ಸೂಚನೆ"

ತಿದ್ದುಪಡೆಯ ಸದುದ್ದೇಶದಿಂದ ಇದ್ದುದನು ಇದ್ದಂತೆಯೆ ಕಾಣಿಸಿದ್ದಕ್ಕಾಗಿ ಕ್ಷಮೆ ಇರಲಿ. ಕತಲೆ-ಬರೆಹ—ಅಥವಾ, ಎಲ್ಲರೂ ಒಂದು ನಿಮಿಷ ತಲೆಯನ್ನು ತಗ್ಗಿಸಿ ತಿದ್ದುಪಡೆಯನ್ನು ಒಪ್ಪೋಣವೆ?

ಜಯಂತಿಗೆ ಏಜಂಟರು ಬೇಕು!

ಬೆಳಗಾಂವಿ ಜಿಲ್ಲೆಯ ಚಿಕ್ಕೋಡಿ, ಅಥಣಿ, ಹುಕ್ಕೇರಿಗಳಲ್ಲಿಯೂ; ವಿಜಾಪುರ ಜಿಲ್ಲೆಯ ಕೆಲವು ತಾಲೂಕು ಸ್ಥಳಗಳಲ್ಲಿಯೂ; ಕಾರವಾರ ಜಿಲ್ಲೆಯ ಕುಮಟಾ, ಹೊನ್ನಾವರ, ಕಾರವಾರಗಳಲ್ಲಿಯೂ; ಮೈಸೂರು ಸಂಸ್ಥಾನದ ದೊಡ್ಡ ದೊಡ್ಡ ನಗರಗಳಲ್ಲಿಯೂ ಜಯಂತಿಯ ಪ್ರಚಾರಕ್ಕಾಗಿ ನಂಬುಗೆಯ ಏಜಂಟರು ಬೇಕು. ಚೆನ್ನಾಗಿ ಕೆಲಸ ಮಾಡಿದರೆ ಕೈತುಂಬ ಹಣ ಸಿಕ್ಕುವುದು. ಇಷ್ಟವಿದ್ದವರು ಪತ್ರವ್ಯವಹಾರ ಮಾಡಿ ಹೆಚ್ಚಿನ ಸಂಗತಿ ತಿಳಿದುಕೊಳ್ಳಬೇಕು.

ವ್ಯವಸ್ಥಾಪಕ ಜಯಂತಿ ಧಾರವಾಡ.

ಕಳೆದ ಮಹಾಯುದ್ಧದಲ್ಲಿ ★ (೩ನೆಯ ಭಾಗ)
ಭಾರತೀಯರು ಮಾಡಿದ ಸಹಾಯ

★

ಶ್ರೀಮಾನ್ ವಾಳ್ವೇಕರ ಗುರುರಾಯರು, ಬಿ. ಎ., ಎಲ್‌ಎಲ್. ಬಿ.

ಬರಿಹೊಟ್ಟೆಯಿಂದ ದುಡಿಯುವ ಬಡವರೂ ಅಂದು ಕೊಟ್ಟ ಹಣದ ಸಂಖ್ಯೆ ಎಂತಹದು? ಭಾರತವು ಇಷ್ಟೊಂದು ಹಣವನ್ನು ಹೇಗೆ ಕೊಟ್ಟಿರಬಹುದೆಂಬುದರ ಬಗ್ಗೆ, ಯಾವ ಅರ್ಥಶಾಸ್ತ್ರಜ್ಞನೂ ಆಶ್ಚರ್ಯಪಡುವಂತಿದೆ.

ಒಟ್ಟು ಹಣ ರೂಪಾಯಿಗಳಲ್ಲಿ

ಭಾರತಖಂಡವು ಬ್ರಿಟಿಶರಿಗೆ ಮಾಡಿದ ಧನಸಹಾಯವು ಸ್ಥೂಲ ಮಾನದಿಂದ (Rough estimate) ಕೆಳಗಿನಂತಿದೆಯೆಂದು **ಶ್ರೀಯುತ ಭಾರ್ಗವರ** ಗಣನೆ:—

ಯುದ್ಧಕಾಲದ ೫ ವರ್ಷಗಳಲ್ಲಿ ದಂಡಿನ ವೆಚ್ಚ	೩೦೦ ಕೋಟಿ ರೂ.
ಹಿಂದೀ ವಾರಲೋನ್ ಒಡಗೊಂಡು ಬ್ರಿಟಿಶ್ ಬೊಕ್ಕಸಕ್ಕೆ ಧನಸಹಾಯ	೧೫೦ ಕೋಟಿ ರೂ.
ವಾರಲೋನಿನ ಮೇಲಿನ ಬಡ್ಡಿ ಹಾಗೂ ಬ್ರಿಟಿಶ್ ವಾರ್‌ಷೆಟ್ ಮೇಲಿನ ಬಡ್ಡಿ	೨೦ ಕೋಟಿ ರೂ. ಗೆ ಸ್ವಲ್ಪ ಕಡಿಮೆ
ಭಾರತೀಯರು ಕೊಟ್ಟ ಬೇರೆ ಬೇರೆ ತೆರದ ಯುದ್ಧಕಾಣಿಕೆಗಳು, ಹಾಗೂ ವಾರಫಂಡುಗಳಿಗೆ ಸಲ್ಲಿಸಿದ ಧನ	೨೦ ಕೋಟಿ ರೂ.
ಒಟ್ಟು	೪೯೦ ಕೋಟಿರೂ.ಗಳು

ಮೇಲಿನ ಅಂಕೆಗಳನ್ನು ಕೊಟ್ಟು ಶ್ರೀಯುತ ಭಾರ್ಗವರು ಹೀಗೆ ಬರೆದಿದ್ದಾರೆ: "ಭಾರತೀಯರಲ್ಲಿ ಕೊಟ್ಯವಧಿ ಜನರು ಹೊಟ್ಟೆತುಂಬ ಊಟವನ್ನೂ ಕಾಣುವುದಿಲ್ಲ. ೩೧೫ ದಶಲಕ್ಷ ಜನರಲ್ಲಿ ೨ ಲಕ್ಷ ೪೦ ಸಾವಿರ ಜನರು ಮಾತ್ರ ಪ್ರಾಪ್ತಿಯ ಮೇಲಿನ ಕರ ಕೊಡುತ್ತಾರೆ." ಎಂದರೆ ೨ ಲಕ್ಷ ೪೦ ಸಾವಿರ ಜನರಿಗೆ ಮಾತ್ರ ವರ್ಷವೊಂದಕ್ಕೆ ಒಂದು ಸಾವಿರಕ್ಕಿಂತ ಹೆಚ್ಚಿನ ಪ್ರಾಪ್ತಿ ಇದೆ. ಇವರಲ್ಲಿ ಕೇವಲ ೯೦ ಸಾವಿರ ಜನರ ವಾರ್ಷಿಕ ಉತ್ಪನ್ನವು ೫೦೦೦ ಸಾವಿರಕ್ಕಿಂತ ಹೆಚ್ಚಿದೆ. ಎಂದರೆ ವ್ಯಾಪಾರ, ಉದ್ಯೋಗದಿಂದ ಹೆಚ್ಚಿನ ಆದಾಯವುಳ್ಳ ಜನರು ತೀರ ಕಡಿಮೆ ಇದ್ದಾರೆಂಬುದು ಸ್ಪಷ್ಟವಾಗುತ್ತದೆ. ಹಿಂದುಸ್ಥಾನದಂತಹ ಬಡ ದೇಶವು ಇಷ್ಟು ಧನಸಹಾಯ ಮಾಡಿದ್ದು ಬಹಳ ಆಶ್ಚರ್ಯದ ಸಂಗತಿ (It requires a huge effort to believe that such a country could contribute such a large amount of financial assistance). ಮುಂದೆ ಭಾರತೀಯರ ಹಾಗೂ ಬ್ರಿಟಿಷರ ಆದಾಯದ ಅಂಕೆಗಳನ್ನು ಕೊಟ್ಟು ಶ್ರೀ. ಭಾರ್ಗವರು ಹೀಗೆ ಅನುಮಾನ ತೆಗೆದಿದ್ದಾರೆ: "A contribution of 300 millions, therefore, means at least a contribution of £ 1050 million from the point of view of the relative paying capacities of India and England" ಸಾರಾಂಶ: ಭಾರತೀಯರ ಹಾಗೂ ಬ್ರಿಟಿಷರ ಆರ್ಥಿಕ ಬಲದ ಮಾನದಿಂದ ಭಾರತೀಯರು ಕೊಟ್ಟ ಧನಸಹಾಯವನ್ನು ಅಳೆದರೆ, ಭಾರತೀಯರು ೧೦೫೦ ದಶಲಕ್ಷ ಪೌಂಡು ಕೊಟ್ಟಂತಾಗುತ್ತದೆ.

ಕರಕೂಡಿಸಬೇಕೋ? ಇಲ್ಲವೆ ಸಾಲತೆಗೆಯಬೇಕೋ?

ಸರಕಾರವು ಯುದ್ಧದಂತಹ ವಿಪತ್ತಿನಲ್ಲಿ ಬೇಕಾದ ಹಣವನ್ನು ಹೊಸ ಕರಗಳಿಂದ ಕೂಡಿಸಬೇಕೋ ಅಥವಾ ಸಾಲ ತೆಗೆದು ತಮಗೆ ಬೇಕಾದ ರಕಮನ್ನು ಭರತಿಮಾಡಬೇಕೋ ಎಂಬುದು—ಕೆಲವು ಮಟ್ಟಿಗೆ ತತ್ತ್ವದ ಹಾಗೂ ಕೆಲವು ಮಟ್ಟಿಗೆ ವ್ಯಾವಹಾರಿಕ—ಪ್ರಶ್ನೆಯಾಗಿದೆ; ಈ ಮಾತಿನ ಬಗ್ಗೆ ಮತೈಕ್ಯವಿಲ್ಲ. ಕರಕೂಡಿಸಿದ್ದರೆ ಅದರ ಭಾರವನ್ನು ಈಗಿನ ಜನರು ಹೊರಬೇಕಾಗುತ್ತದೆ. ಸಾಲ ತೆಗೆದರೆ ಅದನ್ನು ಕೆಲವು ಮಟ್ಟಿಗೆ ಇಂದಿನವರು, ಬಹುಮಟ್ಟಿಗೆ ಮುಂದಿನವರು ತೀರಿಸಬೇಕಾಗುತ್ತದೆ. ಒಂದೇ ಉಪಾಯದಿಂದ ಯುದ್ಧವನ್ನು ಸಾಗಿಸಲಿಕ್ಕೆ ಬೇಕಾದ ಧನವನ್ನು ಕೂಡಿಸಬಾರದೆಂದೂ, ಆಯಾ ದೇಶದ ಸಾಂಪತ್ತಿಕ ಸ್ಥಿತಿ ಮತ್ತು ಯುದ್ಧಕಾಲದಲ್ಲಿಯ ವಾತಾವರಣವನ್ನು ನೋಡಿಕೊಂಡು ಈ ವಿಷಯದ ವಿಚಾರವಾಗಬೇಕೆಂದೂ ನಿರ್ಣಯವಾಗಬೇಕು. ನಡೆಯುವ ವರ್ಷದ (೧೯೪೧-೪೨) ಮುಂಗಡಪತ್ರಿಕೆಯ ಮೇಲೆ

ಕಾನೂನು ಮಂಡಳದಲ್ಲಿ ಆದ ವಾದದಲ್ಲಿ ಈ ವಿಷಯದ ಚರ್ಚೆಯಾಯಿತು. ಸರ್ ಕಾವಸಜಿ ಜಹಾಂಗೀರ್ ಹಾಗೂ ಹಿಂದುಸ್ಥಾನ್ ಸರಕಾರದ ಅರ್ಥಸಚಿವರಾದ ಸರ ರಾಯಿಸಮನ್ಸ್ ಇವರ ನಡುವೆ ತೀವ್ರ ಮತಭೇದವಾಯಿತು. ನಾವೀಗ ಈ ವಾದದಲ್ಲಿ ಸೇರುವ ಕಾರಣವಿಲ್ಲ.

ಧನವಂತರ ದರಿದ್ರರ ದುಡಿಮೆ

ಕಳೆದ ಮಹಾಯುದ್ಧವು ಧನವಂತರ ದುಡಿಮೆಯಂತೆ ದರಿದ್ರರ ದುಡಿಮೆಯ ಬಹುಭಾಗವನ್ನೂ ನುಂಗಿತು. ಭರತಖಂಡವು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಬಲವಾದ ಸತ್ತ್ವಹರಣದ (exploitation) ಭೂಮಿಯಾಗಿಯೇ ಉಳಿಯಬೇಕೆಂಬ ಉದ್ದೇಶದಿಂದ ಬ್ರಿಟಿಷ್ ಆಡಳಿತವು ಸಾಗುತ್ತ ಬಂದಿದ್ದರೂ, ಭಾರತೀಯರು ಬ್ರಿಟಿಷರಲ್ಲಿ ಸಂಪೂರ್ಣ ನಂಬಿಗೆಯನ್ನಿಟ್ಟು, ಪ್ರಜಾಪ್ರಭುತ್ವದ ಧ್ವಜವನ್ನು ಮೆರೆಯಿಸುವ ಬ್ರಿಟಿಷರಿಂದ ತಮಗೆ ಸ್ವರಾಜ್ಯ ದೊರೆಯುತ್ತದೆಂಬ ಭರವಸೆಯಿಂದ ಸಾಮ್ರಾಜ್ಯದ ಅಭಿಮಾನ ತಾಳಿ, ಅಸಂಖ್ಯಾತರು ಬಹುಪರಿಯಿಂದ ಸಹಾಯಮಾಡಿದರು. ಒಂದೇ ಉದಾಹರಣೆಯನ್ನು ಕೊಡುತ್ತೇನೆ: ಬಡವರಿಗೆ ಸಹ ಯುದ್ಧದ ಸಾಲ ತಕ್ಕೊಳ್ಳಲಿಕ್ಕೆ ಅನುಕೂಲವಾಗಬೇಕೆಂದು ಪೋಸ್ಟ್ ಆಫೀಸಿನ ೭-೧೫-೦ ಯ ಕ್ಯಾಶ್ ಸರ್ಟಿಫಿಕೇಟುಗಳನ್ನು ಹೊರಡಿಸುವುದರಲ್ಲಿ ಬಂದಿತು. ೧೯೧೭ ರಲ್ಲಿ ತೆಗೆದ ಸಾಲದ ರಕಮು ೩೬೫ ದಶಲಕ್ಷ ಪೌಂಡು (೩ ಕೋಟಿ ೫೫ ಲಕ್ಷ) ಇತ್ತು. ಅದರಲ್ಲಿ ಮುಖ್ಯವಾಗಿ ಬಡವರ ಸಾಲಿನ ಕ್ಯಾಶ್ ಸರ್ಟಿಫಿಕೇಟುಗಳ ರಕಮು ೬೦ ಲಕ್ಷ ಪೌಂಡು ಇತ್ತು. ಸಾವಿರ ರೂಪಾಯಿ ಸಂಬಳದ ಅಥವಾ ಆದಾಯದ ಧನಿಕನು ದುಃಖಪಡದೆ—ಏನೂ ತೊಂದರೆ ಇಲ್ಲದೆ—ನೂರು ಇನ್ನೂರು ರೂಪಾಯಿ ಕೊಡಬಹುದು; ಆದರೆ ೫೦-೬೦ ರೂಪಾಯಿ ಅಥವಾ ಅದಕ್ಕೂ ಕಡಿಮೆ ಉತ್ಪನ್ನದವನಿಗೆ ಒಂದೆರಡು ಕ್ಯಾಶ್ ಸರ್ಟಿಫಿಕೇಟುಗಳನ್ನು ಕೊಳ್ಳುವುದು ಸಹ ದುಸ್ತರವಾಗುತ್ತದೆ. ಆದರೂ ಕ್ಯಾಶ್ ಸರ್ಟಿಫಿಕೇಟುಗಳಿಂದ ಕೂಡಿದ ಸಾಲವು ೬೦ ಲಕ್ಷ ರೂಪಾಯಿ ಇತ್ತು. ವಾರ್‌ಬಾಂಡುಗಳನ್ನು ತಕ್ಕೊಂಡವರ ಸಂಖ್ಯೆಯೇ ೧೭ ಲಕ್ಷಕ್ಕಿಂತ ಹೆಚ್ಚಿತ್ತು. ೧೯೧೭ ರಲ್ಲಿ ಇಷ್ಟು ದೊಡ್ಡ ರಕಮು ಸಾಲಕೊಟ್ಟ ಬಡ ಭಾರತೀಯರಿಂದ, ೧೯೧೮ರಲ್ಲಿ ಹೆಚ್ಚಿನ ರಕಮಿನ ಸಾಲ ದೊರೆಯಲಿಕ್ಕಿಲ್ಲವೆಂದು ಚಲನದ ಅಧಿಕಾರಿಗಳಿಗೆ ಎನಿಸಿದ್ದುದು ಆಶ್ಚರ್ಯದ ಮಾತಲ್ಲ. ಮಹಾಯುದ್ಧಕ್ಕಿಂತ ಮೊದಲಿನ ಸಾಲದ ರಕಮನ್ನು ಗಮನಕ್ಕೆ ತಕ್ಕೊಂಡರೆ, ಬೇರೆ ಅಭಿಪ್ರಾಯವನ್ನು ಕೊಡುವುದು ಧಾರ್ಷ್ಟ್ಯದ್ದಾಗುತ್ತಿತ್ತು. ಮಹಾಯುದ್ಧದ ಮೊದಲು ರೂಪಾಯಿಗಳಲ್ಲಿ ಸಾಲ ತೆಗೆದ ಎಲ್ಲಕ್ಕೂ ದೊಡ್ಡ ರಕಮು ೫೦ ಲಕ್ಷ ಪೌಂಡಿಗಿಂತ ಹೆಚ್ಚಿದ್ದಿಲ್ಲ. ವಾರ್ ಬಾಂಡುಗಳನ್ನು ಕೊಂಡವರ ಸಂಖ್ಯೆ ಸಹ ಅನೇಕ ಪಟ್ಟು ಹೆಚ್ಚಿತ್ತು. ೧೯೧೮ ರ ಸಾಲವು ೧೯೧೭ ರ ಸಾಲವನ್ನು ಮೀರಿಸಿತು. ೧೯೧೮ ರ ಒಟ್ಟು ಸಾಲದ ರಕಮು ೫೮ ದಶಲಕ್ಷ ಪೌಂಡು ಇತ್ತು. ಸಾಲಕೊಟ್ಟವರ ಸಂಖ್ಯೆ ಬಹಳ ಹೆಚ್ಚಿತ್ತು, ಎಂದರೆ ಅದು ೨೪ ಲಕ್ಷ ಇತ್ತು. ಸಾಲದಂತೆ ಅನೇಕ ವಾರ್‌ಫಂಡುಗಳಿಗೆ, ಸಿರಿವಂತರಂತೆ ಸಾಮಾನ್ಯ ಜನರು ಕೂಡ ತಮ್ಮಿಂದಾದಷ್ಟು ಸಹಾಯಮಾಡಿದರು.

ಅಪ್ರತ್ಯಕ್ಷ ಧನಸಹಾಯ

ಹಿಂದುಸ್ಥಾನ ಸರಕಾರದವರು ಬ್ರಿಟಿಷ್ ಸರಕಾರಕ್ಕಾಗಿ ಹಿಂದುಸ್ಥಾನದಲ್ಲಿ ಅನೇಕ ತರದ ಯುದ್ಧಸಾಮಗ್ರಿಯನ್ನೂ ಬೇರೆ ಬೇರೆ ತರದ ಸರಕುಗಳನ್ನೂ ಕೊಂಡರು. ಇವುಗಳಿಗಾಗಿ ಹಿಂದುಸ್ಥಾನ ಸರಕಾರಕ್ಕೆ ಕೆಳಗಿನಂತೆ ಹಣ ವೆಚ್ಚಮಾಡಬೇಕಾಯಿತು.

೧೯೧೪—೧೫	೮೦ ಲಕ್ಷ ೮೦ ಸಾವಿರ ಪೌಂಡು
೧೯೧೫—೧೬	೨ ಕೋಟಿ ೩೬ ಲಕ್ಷ ,,
೧೯೧೬—೧೭	೩ ಕೋಟಿ ೮೫ ಲಕ್ಷ ,,
೧೯೧೭—೧೮	೭ ಕೋಟಿ ೬೧ ಲಕ್ಷ ,,

ಇದರಿಂದ ಹಿಂದೀ ಚಲನದಲ್ಲಿ ಗೊಂದಲವಾಯಿತು. ಹಿಂದೀ ವ್ಯಾಪಾರಕ್ಕೆ ಧಕ್ಕೆ ತಗಲಿತು. ಅಮೇರಿಕಾ ಜಪಾನ್ ಮೊದಲಾದವುಗಳು ತಮ್ಮ ವ್ಯಾಪಾರಾಭಿವೃದ್ಧಿ ಮಾಡಿಕೊಂಡಂತೆ ಭರತಖಂಡವು ಮಾಡಿಕೊಳ್ಳಲಿಲ್ಲ. ಹಾಗೆ ಮಾಡಿಕೊಳ್ಳಲಿಕ್ಕೆ ಪರಕೀಯ ಅರಸರ ಆಳಿಕೆಯು ಅಡ್ಡ ಬಂದಿತು. ಬೆಳ್ಳಿ-ಬಂಗಾರದ ನಾಣ್ಯಗಳ ಕೊರತೆಯಾಯಿತು. ಕಾಗದದ ಚಲನದ ವಿಸ್ತಾರ ಮಿತಿಮೀರಿ ಬೆಳೆಯಿತು. ಕಾಗದದ ಚಲನದ ಬಗ್ಗೆ ಒಪ್ಪಿತವಾದ ನಿಯಮಗಳನ್ನೂ ಒದಗಿಸಬೇಕಾಯಿತು. ಭಾರತೀಯರು ಬ್ರಿಟಿಷರಿಗೆ ಬೆಂಬಲ ಕೊಡುವುದಕ್ಕಾಗಿ, ಬೆಳ್ಳಿಯ ಇಲ್ಲವೆ ಬಂಗಾರದ ನಾಣ್ಯಗಳ ಅಥವಾ ಗಟ್ಟಿಗಳ ಆಧಾರವಿಲ್ಲದೆ ಪ್ರಚಾರದಲ್ಲಿ ತಂದ ಕಾಗದದ ಚಲನವನ್ನು ಸ್ವೀಕರಿಸಿ, ತಮ್ಮ ವಿಶ್ವಾಸವನ್ನು ವ್ಯಕ್ತಗೊಳಿಸಿದರು. ಕಾಗದದ ಚಲನದ ಪ್ರಸಾರವು ಎಷ್ಟು ಬೆಳೆದಿತ್ತೆಂಬುದು ಕೆಳಗಿನ ಅಂಕೆಗಳಿಂದ ಒಡೆದು ಕಾಣುತ್ತದೆ :—

ವರ್ಷ	ಸ್ಥೂಲ ಪ್ರಸಾರ (Gross circulation)
೧೯೧೪	೬೬ ಕೋಟಿ ರೂ.
೧೯೧೬	೬೪ ,, ,,
೧೯೧೮	೧೦೦ ,, ,,
೧೯೨೦	೧೬೪ ,, ,,

ಕಡಿಮೆ ಬೆಲೆಯ ನೋಟುಗಳನ್ನು ಪ್ರಚಾರದಲ್ಲಿ ತರುವುದು ಇಷ್ಟವಲ್ಲೆಂಬುದು ಎಲ್ಲರೂ ಒಪ್ಪಬೇಕಾದ ಸಂಗತಿಯಾಗಿದೆ. ಆದರೂ ಒಂದು ರೂಪಾಯಿಯ ಹಾಗು ಎರಡುವರೆ ರೂಪಾಯಿಯ ನೋಟುಗಳು ಹೊರಟುವು. ಅವುಗಳ ಕಾಗದವು ಸಹ ಸಾಕಷ್ಟು ದಪ್ಪಾದದ್ದು ಒಳಕೆಯಲ್ಲಿ ಬಾಳುವಂತಹದು ಇದ್ದಿಲ್ಲ. ಮಹಾಯುದ್ಧದ ಮೊದಲು ನಂಬಿಗೆಯ ಕಾಗದದ ಚಲನದ ಮರ್ಯಾದೆ ೧೪ ಕೋಟಿ ರೂಪಾಯಿಗಳಿಗೆ ಮೀರಬಾರದೆಂಬ ನಿಯಮವಿತ್ತು.

ಎಂದರೆ ೧೪ ಕೋಟಿಗಳಿಗಿಂತ ಹೆಚ್ಚಿನ ನೋಟುಗಳನ್ನು ಪ್ರಚಾರದಲ್ಲಿ ತರುವುದಾದರೆ, ಅವುಗಳ ಬೆಲೆಯಷ್ಟು ಬೆಳ್ಳಿ ಅಥವಾ ಬಂಗಾರದ ನಾಣ್ಯಗಳನ್ನು ಅಥವಾ ಗಟ್ಟಿಗಳನ್ನು ಸಂಗ್ರಹದಲ್ಲಿಡಬೇಕಾಗುತ್ತಿತ್ತು. ಆದರೆ ಈ ಇಷ್ಟವಾದ ಹಾಗು ಅವಶ್ಯವಾದ ನಿಯಮವನ್ನು ಬದಿಗಿಡುವುದರಲ್ಲಿ ಬಂದಿತು. ಇದರಿಂದ ಕಾಗದದ ಚಲನದ ಪ್ರಸಾರಕ್ಕೆ ಮಿತಿಯುಳಿಯಲಿಲ್ಲ. (It was " in effect a forced loan from the Indian public free from interest ") ಈ ಪ್ರಕಾರ ಏರಿದ ಕಾಗದದ ಚಲನವೆಂದರೆ ಹಿಂದೀ ಜನರು ಬಡ್ಡಿ ಇಲ್ಲದೆ ಸಾಲ ಕೊಟ್ಟ ರಕಮೇ ಇತ್ತೆಂದು ಪ್ರೊಫೇಸರ್ **ಕಾಣಂದೀಕರರು** ಹೇಳಿದ್ದಾರೆ. ೧೯೧೫ ರಿಂದ ೧೯೨೦ ರ ವರೆಗೆ ಕಾಗದದ ಚಲನದ ಕಾಯಿದೆಯಲ್ಲಿ ಬದಲಾವಣೆಗಳಾದುವು. ಇದೊಂದು ಪ್ರಕಾರದ ಅಪ್ರತ್ಯಕ್ಷ ಧನಸಹಾಯವಲ್ಲವೇ ? ಬಡ್ಡಿ ತಕ್ಕೊಂಡು ಪ್ರತ್ಯಕ್ಷವಾಗಿ ಕೊಡುವ ಸಾಲಕ್ಕಿಂತ ಬಡ್ಡಿ ಇಲ್ಲದೆ ಅಪ್ರತ್ಯಕ್ಷವಾಗಿ ಕೊಟ್ಟ ಸಾಲದ ನೈತಿಕ ಬೆಲೆ ಹೆಚ್ಚಿದೆ. ನ್ಯಾಯನೀತಿಯನ್ನು ಬದಿಗಿಟ್ಟವರಿಗೆ ಪ್ರತ್ಯಕ್ಷ ಅಪ್ರತ್ಯಕ್ಷ ಸಾಲದ ಮಹತ್ವವು ಅಷ್ಟೇ ಇರುತ್ತದೆ. ಈ ಸಂದರ್ಭದಲ್ಲಿ ಇನ್ನೊಂದು ಮಹತ್ವದ ಸಂಗತಿಯನ್ನು ಓದುಗರ ಗಮನಕ್ಕೆ ತಾರದೆ ಇರಲಾರೆನು. ಮಹಾಯುದ್ಧಕ್ಕೆ ಮೊದಲು ಕಾಗದದ ಚಲನಕ್ಕೆ ಕಾದಿಟ್ಟ ನಿಧಿಯೊಳಗಿನ ಹತ್ತು ಕೋಟಿ ರೂಪಾಯಿಗಳು, ಹಿಂದುಸ್ತಾನ ಸರಕಾರದ ಆಧಾರಪತ್ರಗಳಲ್ಲಿ (securities) ಹಾಗೂ ನಾಲ್ಕು ಕೋಟಿ ರೂಪಾಯಿಗಳು ಬ್ರಿಟಿಷ್ ಸರಕಾರದ ಆಧಾರಪತ್ರಗಳಲ್ಲಿ (sterling securities) ತೊಡಕಿಸುವುದರಲ್ಲಿ ಬಂದಿದ್ದುವು. ಬ್ರಿಟಿಷ್ ಸರಕಾರಕ್ಕೆ ಸಂಕಟಸಮಯದಲ್ಲಿ ಸಹಾಯಮಾಡುವುದಕ್ಕಾಗಿ ಬ್ರಿಟಿಷ್ ಟ್ರೇಝುರಿ ಬಿಲ್ಲುಗಳಲ್ಲಿ ತೊಡಕಿಸಿದ ರಕಮು, ೮೧ ಕೋಟಿ ರೂಪಾಯಿಗಳಿಗೆ ಏರಿತು. ಎಂದರೆ ಬ್ರಿಟಿಷ್ ಸರಕಾರವು ಟ್ರೇಝುರಿ ಬಿಲ್ಲುಗಳನ್ನು ಅಚ್ಚು ಹಾಕಿಸುತ್ತ ಸಾಗಿತು, ಮತ್ತು ಅವುಗಳ ಆಧಾರದಿಂದ (ಬೆಳ್ಳಿ ಬಂಗಾರದ ಆಧಾರದಿಂದಲ್ಲ) ಹಿಂದುಸ್ತಾನ ಸರಕಾರವು ನೋಟುಗಳನ್ನು ಮುದ್ರಿಸುವ ಕ್ರಮವನ್ನು ಕೈಕೊಂಡಿತು. ಒಂದು ಕಾಗದದ ತುಂಡಿಗೆ ಇನ್ನೊಂದು ಕಾಗದದ ತುಂಡಿನ ಆಧಾರ. ಇಷ್ಟೇ ಅಲ್ಲ, ಹಿಂದುಸ್ತಾನ ಸರಕಾರವು ಹೊರಡಿಸಿದ ಆಧಾರಪತ್ರಗಳು ಟ್ರೇಝುರಿ ಬಿಲ್ಲುಗಳು ನೋಟುಗಳಿಗೆ ಆಧಾರಭೂತವಾಗಿ ಪರಿಣಮಿಸಿದುವು. ೧೯೧೮-೧೯ ರಲ್ಲಿ ೬ ಕೋಟಿ ರೂಪಾಯಿಗಳ ನೋಟುಗಳಿಗೆ ಹಿಂದುಸ್ಥಾನ ಸರಕಾರದ ಟ್ರೇಝುರಿ ಬಿಲ್ಲುಗಳ ಆಧಾರವೇ ಆಧಾರ. ಈ ಕ್ರಮವು ಇಷ್ಟವಾದದ್ದಲ್ಲೆಂದು ಹಿಂದುಸ್ತಾನ ಸರಕಾರದ ಕೋಶಾಧಿಕಾರಿಗಳು (Finance member) ಸಹ ಒಪ್ಪಿದ್ದಾರೆ. " None of us can pretend to any affection for that form of investment into which our necessities have recently forced us. I mean the purchase of our own Treasury Bills ". ಇದರಿಂದ ಬ್ರಿಟಿಷ್ ಸರಕಾರಕ್ಕೆ ಬೇಕಾದ ಸರಕುಗಳನ್ನು ಕೊಳ್ಳಲಿಕ್ಕೆ ಹಿಂದುಸ್ಥಾನ ಸರಕಾರಕ್ಕೆ ಬೇಕಾದ ಚಲನದ ಸಹಾಯ ದೊರೆಯಿತು. ವಿಧಿ-ನಿಷೇಧವಿಲ್ಲದೆ ಬೆಳೆಯಿಸಿದ ಚಲನವು ಅನಿಷ್ಟವಾದ ಮುಚ್ಚು-ಮರೆಯ ಪ್ರಾಪ್ತಿಯ ಮೇಲಿನ ಕರವೆಂದು ಒಬ್ಬ ಹೆಸರಾದ ಅರ್ಥ-ಶಾಸ್ತ್ರಜ್ಞರು ಹೇಳಿದ್ದಾರೆ.

ಬಂಗಾರದ ಖಾಸಗಿ ಆಯಾತವನ್ನು (private import of gold) ನಿಲ್ಲಿಸುವುದರಲ್ಲಿ ಬಂದಿತು. ಲಂಡನ್ ಪೇಟೆಯಲ್ಲಿಯ ಬೆಳ್ಳಿ-ಬಂಗಾರದ ವರ್ತಕರು ಹಿಂದುಸ್ತಾನದ ಚಲನದ ಪರಿಸ್ಥಿತಿಯ ಲಾಭವನ್ನು ಹೇಗೆ ಪಡೆದುಕೊಂಡರೆಂಬುದನ್ನು ಈ ಚಿಕ್ಕ ಒರೆಹದಲ್ಲಿ ಹೇಳುವುದು ಶಕ್ಯವಿಲ್ಲ. ವಿಪರೀತವಾಗಿ ಬೆಳೆದ ಚಲನದಿಂದ ಸರಕುಗಳ ಮೇಲೆ ಆದ ಪರಿಣಾಮವನ್ನು ಸಹ, ಭಾರತೀಯರು ಮಾಡಿದ ಸಹಾಯದ ವಿಷಯದ ವಿವೇಚನದಲ್ಲಿ ನಾವು ಮರೆಯಬಾರದು. ಆದರೆ ಕೆಲವು ಮೂಲತತ್ತ್ವಗಳ ಉದಾಹರಣೆಗಳನ್ನು ಕೊಟ್ಟು ವಿಶದವಾಗಿ ಹೇಳಿದ ಹೊರತು ಈ ವಿಷಯವನ್ನು ತಿಳಿಯಾಗಿ ಮಾಡುವುದು ಕಠಿಣವಿದೆ; ಕಾರಣ ಇಲ್ಲಿಯೆ ವಿರಮಿಸುವೆ.

(೪೩೮ನೆಯ ಪುಟದಿಂದ ಮುಂದೆ ಸಾಗಿದ್ದು)

ಮೇಲೆ ' ಕನ್ನಡ ವೈರಿಗಳು ಕನ್ನಡನಾಡಿನಲ್ಲಿ ಇಲ್ಲ, ಎಂದು ಹೇಗೆ ಹೇಳಲಿಕ್ಕಾಗುವುದು ? ಇಂತಹ ' ಕನ್ನಡ ವೈರಿ ' ಗಳನ್ನು ಹುಡುಕುತ್ತ ಹೋದರೆ ಒಂದೊಂದು ಮೂಲೆಯಲ್ಲಿಯೂ ಒಂದೊಂದು ಬಗೆಯ ' ವೈರಿಗಳು ' ಸಿಕ್ಕಬಹುದು. ಆದುದರಿಂದಲೆ ನಾವು ಹೊರಗಿನ ' ವೈರಿ ' ಗಳಿಗಿಂತ ಈ ಒಳಗಿನ ' ವೈರಿ 'ಗಳ ಸಲುವಾಗಿಯೆ ಹೆಚ್ಚು ಎಚ್ಚರಿಕೆ ತೆಗೆದುಕೊಳ್ಳಬೇಕಾಗಿದೆಯೆಂಬುದನ್ನು ನಮ್ಮ ಮಿತ್ರರಾದ ಆ ಪತ್ರಿಕಾಸಂಪಾದಕರಿಗೂ ಕನ್ನಡಿಗರಿಗೂ **ಸೂಚಿಸಲಿಳಸುವೆವು.**

ಕನ್ನಡಸೈನಿಕ

' ಕನ್ನಡವೈರಿ ' ಗಳ ಸುಳಿವನ್ನರಿತು ಮುನ್ನೆಚ್ಚರಿಕೆ ಕೊಡಲಿಕ್ಕೆಂದೇ ಜಯಂತಿಯ ಈ ಸಂಚಿಕೆಯಿಂದ ' ಕನ್ನಡ ಸೈನಿಕ ' ಎಂಬ ವಿಶೇಷವಿಭಾಗವೊಂದನ್ನು ಪ್ರಾರಂಭಿಸಿದ್ದೇವೆ. ಕರ್ನಾಟಕದ ಮೂಲೆಮೂಲೆಗಳಲ್ಲಿಯೂ ಇರುವ ಕನ್ನಡಿಗರು, ಕನ್ನಡಕ್ಕೂ ಕರ್ನಾಟಕಕ್ಕೂ ಅಲ್ಲಲ್ಲಿ ಇರುವ ವಿರೋಧಕ ಪರಿಸ್ಥಿತಿಯನ್ನು ಬರೆದು, ' ಕನ್ನಡ ಸೈನಿಕ ' ನಿಗೆ ತಿಳಿಸುತ್ತಿರಬೇಕು. ಅಲ್ಲದೆ ಕನ್ನಡಸೈನಿಕನ ವಿಧಾಯಕ ಸೂಚನೆಗಳ ಕಡೆಗೆ ಕಿವಿಗೊಟ್ಟು, ಅವುಗಳನ್ನು ಕೃತಿಯಲ್ಲಿ ತರಬೇಕು.

—ಸಂಪಾದಕರು

ಸರ್ವಮಹಮಸ್ಮಿ!

★

(ಸಿರಿಯಾದೇಶದ ಕವಿ ಖಲೀಲ್ ಗಿಬ್ರಾನ್‌ನ ವೈಚಾರಿಕ ಕಥೆಯೊಂದರ ಅನುವಾದ)

' ಮಧುಕರ '

ಗುಡ್ಡಗಾಡಿನ ಪ್ರದೇಶವೊಂದರಲ್ಲಿ ಹೆಂಗುಸೊಬ್ಬಳು. ಒಂದೇ ಒಂದು ಮಗುವನ್ನಿಟ್ಟುಕೊಂಡು ವಾಸಿಸುತ್ತಿದ್ದಳು. ಒಮ್ಮೆ ಮಗುವಿಗೆ ತುಂಬ ಜ್ವರ ಬಂದಿತು. ಹತ್ತಿರ ವೈದ್ಯನಿರುವಾಗಲೆ ಮಗುವಿನ ಜೀವಜ್ಯೋತಿ ನಂದಿಹೋಯಿತು.

ತಾಯಿಗೆ ಅದೆಷ್ಟು ದುಃಖ! ಒಂದೆಸವನೆ ಪ್ರಲಾಪಿಸತೊಡಗಿದಳು. ಮಧ್ಯೆ ಒಂದುಸಲ ವೈದ್ಯನ ಕಡೆಗೆ ತಿರುಗಿ ಕೇಳಿದಳು:—

" ಪಂಡಿತರೆ, ದಯೆಮಾಡಿ ಹೇಳಿರಿ; ಇದ್ದುದಿದ್ದಹಾಗೆಯೆ ನನ್ನ ಕಂದನ ಆಟವೆಲ್ಲ ಏಕೆ ನಿಂತು ಹೋಯಿತು? ಬೇಗನೆ ಹೇಳಿರಿ ನನ್ನ ಮುದ್ದುಗೂಸಿನ ಇಂಪಾದ ತೊದಲ್ನುಡಿಗಳೆಲ್ಲ ಎಲ್ಲಿ ಹೋದುವು? "

ವೈದ್ಯ ಹೇಳಿದ:

" ಜ್ವರ ತಾಯಿ! ಕೆಟ್ಟ ಜ್ವರ ಬಂದು ಮಗುವು ತೀರಿಕೊಂಡಿದೆ! "

ತಾಯಿ ಕೇಳಿದಳು:

" ಜ್ವರವೆ? ಜ್ವರ ಎಂದರೇನು? "

" ನನಗದನ್ನು ಹೇಳಲಿಕ್ಕೆ ಬರುವಂತಿಲ್ಲ: ಜ್ವರವೆಂದರೆ ಇಷ್ಟೊಂದು ಸೂಕ್ಷ್ಮಾತಿಸೂಕ್ಷ್ಮ ವಸ್ತುವಿದೆ...ಯಾರ ಕಣ್ಣಿಗೂ ಕಾಣದಂತೆ ಅದು ಶರೀರದಲ್ಲಿ ಸೇರಿಕೊಳ್ಳುತ್ತದೆ, ಮಾನವರಿಗೆ ತಾಪವನ್ನು ಕೊಡುತ್ತದೆ! "

ವೈದ್ಯ ಇಷ್ಟೊಂದು ಮಾತನಾಡಿ ಅಲ್ಲಿಂದ ಜಾರಿಕೊಂಡ. ತಾಯಿ ತನ್ನೊಳಗೆ ತಾನೆ ಗುಣುಗುಣಿಸ ತೊಡಗಿದಳು.

" ಸೂಕ್ಷ್ಮಾತಿಸೂಕ್ಷ್ಮ ವಸ್ತುವೆ? ಯಾರ ಕಣ್ಣುಗಳಿಗೂ ಕಾಣುವುದಿಲ್ಲವೆ....? "

* * *

ಸಂಜೆಯ ವೇಳೆ ತಾಯಿಯನ್ನು ಸಮಾಧಾನಗೊಳಿಸಲು ಪುರೋಹಿತರು ಬಂದರು. ಬಿಕ್ಕುತ್ತ ಬಿಕ್ಕುತ್ತ ತಾಯಿ ಕೇಳಿದಳು:

" ಪುರೋಹಿತರೆ, ನನ್ನ ಮಗು ಹೇಗೆ ಹೋಯಿತು, ಹೇಳಿ ಸ್ವಾಮಿ! ನನಗೆ ಒಂದೇ ಒಂದು ಮಗುವಲ್ಲವೆ? ಇದು.... ಅಯ್ಯೊ! "

ಪುರೋಹಿತರು ಹೇಳಿದರು:

" ಪರಮಾತ್ಮನ ಇಚ್ಛೆಯಮ್ಮಾ; ನಮ್ಮೆಲ್ಲರ ಕೈಯಲ್ಲಿ ಏನಿದೆ? "

ತಾಯಿ ಆಶ್ಚರ್ಯಗೊಂಡು ಕೇಳಿದಳು:

" ಪರಮಾತ್ಮನೆ? ಎಂದರೆ ಅವನಾರು? ಎಲ್ಲಿ ಇರುತ್ತಾನೆ? ನಾನು ಆತನನ್ನು ನೋಡಬೇಕಾಗಿದೆ! ಅವನ ಹತ್ತಿರ ಹೋಗಿ ಅಲ್ಲಿ ನನ್ನ ಎದೆಯನ್ನು ಹರಿದುಕೊಳ್ಳುತ್ತೇನೆ. ಹೃದಯದಲ್ಲಿಯ ರಕ್ತದಿಂದ ಆತನ ಅಡಿಯನ್ನು ತೊಳೆಯುತ್ತೇನೆ! ಹೇಳಿರಿ, ಪರಮಾತ್ಮನು ನನಗೆ ಎಲ್ಲಿ ಸಿಕ್ಕಬಹುದು? "

ಪುರೋಹಿತರು ಹೇಳಿದರು:

" ಪರಮಾತ್ಮ..! ಅವನು ನಿನಗೆ ಸಿಕ್ಕುವನೆ? ಹುಚ್ಚಮ್ಮಾ, ಅವನು ಮಹತೋಮಹೀಯಾನ್! ಈ ಮಾನವೀಯ ದೃಷ್ಟಿಗೆ ಅವನು ಕಾಣಸಿಕ್ಕುವುದು ಸಾಧ್ಯವೆ ಇಲ್ಲ! "

ಇದನ್ನು ಕೇಳಿ ಉದ್ವೇಗಗೊಂಡವಳಾಗಿ ತಾಯಿ ಹೇಳಿದಳು:

" ಮಹತೋ ಮಹೀಯಾನ್ ಪರಮಾತ್ಮನ ಇಚ್ಛೆಯಿಂದ ಸೂಕ್ಷ್ಮಾತಿಸೂಕ್ಷ್ಮ ವಸ್ತುವಾದ ಜ್ವರವು ನನ್ನ ಮಗುವನ್ನು ಕೊಂದುಬಿಟ್ಟಿತು! ಹಾಗಿದ್ದರೆ ನಾವು ಏನು ಇದ್ದೇವೆ? ನಾವು ಇರುತ್ತೇವಾದರೂ ಏನು?..

ಅದೇ ವೇಳೆಯಲ್ಲಿ ಆ ಹೆಂಗುಸಿನ ತಾಯಿ ಒಳಗೆ ಬಂದಳು. ಕೂಸಿನ ಶವಕ್ಕೆ ಸುತ್ತುವುದಕ್ಕಾಗಿ ಆಕೆ 'ವಾಸ'ವನ್ನು ತಂದಿದ್ದಳು. ತನ್ನ ಮಗಳ ಪ್ರಲಾಪವನ್ನೂ ಕೇಳಿದ್ದಳು, ಪುರೋಹಿತರ ಉಪದೇಶವನ್ನೂ ಕೇಳಿದ್ದಳು. ತಂದಿದ್ದ ವಾಸವನ್ನು ಕೆಳಕ್ಕಿಟ್ಟು ಆ ಮುದುಕಿ, ಮಗಳ ಕೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಹೇಳಿದಳು.

" ಮಗು, ಆ ಸೂಕ್ಷ್ಮಾತಿಸೂಕ್ಷ್ಮ ಜ್ವರವೂ ನಾವೆ! ಆ ಮಹತೋಮಹೀಯಾನ್ ಪರಮಾತ್ಮನೂ ನಾವೇ! ಮತ್ತೆ ಇವೆರಡನ್ನೂ ಒಗ್ಗೂಡಿಸುವ ಸೇತುವೆಯೂ ನಾವೆ! "

ಆ ಒಂದು ಘಂಟೆ ★ (ಸಣ್ಣ ಕತೆ)*

ಟೀ. ಎಸ್. ಸುಬ್ಬರಾಮಯ್ಯ, ಬಿ. ಎ. (ಆನರ್ಸ್) ಮೈಸೂರು

★

ಅಕ್ಕ ಸತ್ತರೆ ಅಮಾವಾಸ್ಯೆ ನಿಲ್ಲದು, ಅಣ್ಣ ಸತ್ತರೆ ಹುಣ್ಣಿಮೆ ನಿಲ್ಲದು. ಎಲ್ಲರೂ ಬದುಕುವುದು ತಮಗಾಗಿಯಲ್ಲದೆ ಇನ್ನೊಬ್ಬರಿಗಾಗಿ ಅಲ್ಲ. ಜಗತ್ತು ಸತ್ತವರನ್ನು ಮರೆಯುವುದು; ಇದ್ದವರನ್ನು ಮೆರೆಯಿಸುವುದು!

★

ರಾಜನು ರುಗ್ಣಶಯ್ಯೆಯಲ್ಲಿ ಮಲಗಿದ್ದಾನೆ; ಸುತ್ತಲೂ ಪರಿವಾರದ ಜನವೆಲ್ಲಾ ನೆರೆದಿದೆ; ಮಾತನಾಡಿದರೆ ರೋಗಿಗೆ ತೊಂದರೆಯಾಗಬಹುದೆಂಬ ಭಯದಿಂದ ಎಲ್ಲರೂ ನಿಶ್ಶಬ್ದರಾಗಿ ಇದ್ದಾರೆ. ಕಾರ್ಯತತ್ಪರರಾಗಿ ಸೇವಕರೂ ದಾದಿಯರೂ ಗಡಿಬಿಡಿಯಿಂದ ಅತ್ತಿಂದಿತ್ತ ಹರಿದಾಡುತ್ತಿದ್ದಾರೆ. ರಾಜನ ಪಕ್ಕದಲ್ಲಿಯೆ ಕುಳಿತಿರುವ ವೈದ್ಯನು ಅವನನ್ನು ಪರೀಕ್ಷಿಸುತ್ತಿದ್ದಾನೆ. ಆಗಲೇ ರೋಗಿಯ ಇಂದ್ರಿಯಗಳ ವ್ಯಾಪಾರವೆಲ್ಲಾ ನಿಂತು ಹೋಗಿದೆ. ಇನ್ನು ಅವರಾರೂ ಮೆಲ್ಲಗೆ ಮಾತನಾಡುವ ಆವಶ್ಯಕತೆಯಿಲ್ಲ! ಮರಣೋನ್ಮುಖನಾದ ರಾಜನನ್ನು ನೋಡಲು ಈಗ ಎಲ್ಲರಿಗೂ ಅಪ್ಪಣೆಯುಂಟು. ಆದರೆ ಬಾಹ್ಯಪ್ರಜ್ಞೆಯಿಲ್ಲದ್ದರಿಂದ, ಅವನು ಮಾತ್ರ ಯಾರನ್ನೂ ಗುರುತಿಸಲಾರ!

ಶಾಂತವಾಗಿದ್ದ ಕೊಠಡಿಯ ವಾತಾವರಣವು ಕ್ರಮವಾಗಿ ಬದಲಾಯಿಸುತ್ತಾ ಬಂದಿತು. ಎಲ್ಲರೂ ರಾಜನ ವಿಷಯವನ್ನೇ ಚರ್ಚಿಸಲಾರಂಭಿಸಿದರು. ಅವನ ಗುಣಗಾನವೇ ಇವರ ಮುಖ್ಯ ಮಾತು. ತನ್ನ ಕೊಠಡಿಯಲ್ಲಿ ಇಷ್ಟೆಲ್ಲಾ ಗದ್ದಲ ನಡೆದಿದ್ದರೂ, ರಾಜನು ಮಾತ್ರ ಇದೆಲ್ಲವನ್ನೂ ಮೀರಿದ್ದನು. ಯಾವ ವಿಧವಾದ ಶಬ್ದದಿಂದಲೂ ಇನ್ನು ಅವನಿಗೆ ತೊಂದರೆಯಾಗುವಂತಿರಲಿಲ್ಲ. ರಾಣಿಯು ಅವನ ಪಕ್ಕದಲ್ಲಿಯೆ ಕುಳಿತು, ಒಂದೇ ಸಮನಾಗಿ ರೋದಿಸುತ್ತಿದ್ದಾಳೆ. ಆದರೆ ಅವಳ ದೈನ್ಯದ ಬೇಡಿಕೆಗಳಾವುವೂ ವಿಧಿನಿಯಮವನ್ನು ತಪ್ಪಿಸಲಾಗಲಿಲ್ಲ. ಇದ್ದಿದ್ದಂತೆಯೇ ರೋಗಿಯ ಕಣ್ಣುಗಳು ವಿಶಾಲವಾಗಿ ತೆರೆದುವು. ಅವನ ಕೈಗಳು ಏನನ್ನೋ ಹುಡುಕುವಂತೆ ಚಟಪಡಿಸಹತ್ತಿದುವು. ರಾಣಿಯು ಆ ಕೈಗಳನ್ನು ಹಿಡಿದುಕೊಂಡಳು. ಆ ನಿಸ್ಸತ್ತ್ವ ಹಸ್ತಗಳ ಸ್ಪರ್ಶದಿಂದ ಶರೀರವಾದ್ಯಂತವೂ ತಲ್ಲಣಗೊಂಡಿತು. ಅವಳ ದೇಹವೆಲ್ಲಾ ಹೆಪ್ಪುಗಟ್ಟಿದಂತಾಯಿತು. ನಡುಗುತ್ತಾ ರೋಗಿಯ ಕಡೆಗೆ ನೋಡಿದಳು. ಅವನ ಮುಖದ ಬಣ್ಣವು ಪೂರ್ತಿಯಾಗಿ ಬದಲಾವಣೆ ಹೊಂದಿದ್ದಿತು. ಪೂರ್ಣವಾಗಿ ತೆರೆದಿದ್ದ ಕಣ್ಣುಗಳು ಒಮ್ಮೆಯೆ ಮುಚ್ಚಿಹೋದುವು; ಪುನಃ ತೆರೆಯಲಿಲ್ಲ.

* * *

ರಾಜನು ಪುನಃ ಎಚ್ಚತ್ತಾಗ, ಆ ಕೊಠಡಿಯ ಆವರಣವು ಸಂಪೂರ್ಣವಾಗಿ ಮಾರ್ಪಟ್ಟಿದ್ದಂತೆ ತೋರಿತು. ಆಗ ಸೇರಿದ್ದ ಜನರಾರೂ ಈಗ ರೋಗಿಯ ಬಳಿಯಲ್ಲಿರಲಿಲ್ಲ. ಅಲ್ಲಿ ಈಗ ಇರುವವರೆಂದರೆ ನಿದ್ರಾದೇವಿಯ ತೋಳತಕ್ಕೆಯಲ್ಲಿ ಸಿಕ್ಕಿ ಗತಪ್ರಜ್ಞರಾದ ನಾಲ್ಕಾರು ಮಂದಿ ಪಹರೆಯವರು ಮಾತ್ರ. ಎಲ್ಲೆಲ್ಲಿಯೂ ಮೌನದ ಸಾಮ್ರಾಜ್ಯವೆ ಸಾಮ್ರಾಜ್ಯ! ಸುತ್ತಲೂ ಕವಿದಿರುವ ಗಾಢಾಂಧಕಾರವು ಅಲ್ಲಿಯ ಮೌನವನ್ನು ಇನ್ನೂ ಭೀಕರವಾದುದನ್ನಾಗಿ ಮಾಡಿದೆ. ಹಾಸಿಗೆಯ ಪಕ್ಕದಲ್ಲಿ ಮಾತ್ರ ಒಂದು ಹಣತೆಯು ಮಸಕು-ಮಸಕಾಗಿ ಉರಿಯುತ್ತಿದೆ; ಆದರೆ ಕತ್ತಲೆಯನ್ನದು ಹೋಗಲಾಡಿಸುವ ಬದಲು, ಅಂಧಕಾರದ ಆಳವನ್ನು ಇನ್ನೂ ಹೆಚ್ಚು ಮಾಡಿದೆ.

ಅರಮನೆಯ ಉದ್ಯಾನದಿಂದ ಬೀಸುವ ಮಂದಾನಿಲವು, ಪುಷ್ಪಗಳ ಸೌರಭದಿಂದ ರಾಜನ ಮನಸ್ಸಿಗೆ ಉಲ್ಲಾಸವನ್ನು ತಂದಿತು. ಈಗ ಅವನ ಶರೀರದಲ್ಲಿ ರೋಗದ ಚಿಹ್ನೆಗಳಾವುವೂ ಇಲ್ಲ. ಮನಸ್ಸಿನ ದುಗುಡವೆಲ್ಲಾ ಜಾರಿ ಅವರ್ಣನೀಯ ಆನಂದವು ಮೂಡಿದೆ. ಅವನಿಗೆ ಅಲ್ಲಿಂದ ಕದಲುವುದಕ್ಕೇ ಮನಸ್ಸಿಲ್ಲ. ಇದ್ದುದಿದ್ದಂತೆಯೆ ಅರಮನೆಯ ಗಡಿಯಾರದಲ್ಲಿ ಹನ್ನೊಂದು ಗಂಟೆ ಹೊಡೆಯಿತು. ನೀರವವಾಗಿದ್ದ ಮೂರ್ತಿಯ ಮುಖದಲ್ಲಿ ಎಳನಗೆಯು ತೋರಿತು. ಮಲಗಿದ್ದವನು ಹಾಗೆಯೆ ಎದ್ದು ಕುಳಿತನು. ಅಂದಿನ ವಿಷಯವೆಲ್ಲಾ ತಲೆಯಲ್ಲಿ ಮಿಂಚಿತು. ತನ್ನ ಶರೀರವೆಲ್ಲಾ ನಶಿಸಿ ರೋಗವು ವಿಷಮಾವಸ್ಥೆಗೆ ಬಂದಿದ್ದಿತು. ಬಾಹ್ಯಪ್ರಜ್ಞೆ ಸಡಿಲವಾಗುತ್ತ

* ಇಂಗ್ಲಿಷ್ ಕತೆಯೊಂದರ ಅನುಸರಣದ ಫಲವಿದು. —ಲೇ.

ಓಡುವಂತೆ, ಯಾವುದೋ ಶಕ್ತಿಯು ತನ್ನನ್ನು ಇಹಲೋಕದಿಂದ ಎಳೆದೊಯ್ಯುವಂತೆ ಭಾಸವಾಯಿತು. ಆದರೆ ಇವನಂತಹ ವೀರನು ಪ್ರತಿಭಟಿಸದೆ ಶರಣಾಗುವನೇ? ಆ ಶಕ್ತಿಯನ್ನು ಕುರಿತು ಹೇಳಿದನು:

"ನನ್ನ ಜೀವನದ ಉದ್ದೇಶವು ಇನ್ನೂ ಪೂರೈಸಿಲ್ಲ. ಪ್ರಜೆಗಳು ನನ್ನಿಂದ ಬಹಳ ಸಹಾಯವನ್ನು ನಿರೀಕ್ಷಿಸುತ್ತಿದ್ದಾರೆ. ಇದೀಗ ಅವರಿಗೆ ನನ್ನ ಅವಶ್ಯಕತೆ ಹೆಚ್ಚಾಗಿರುವ ಸಮಯ. ಇಂತಹ ಹೊತ್ತಿನಲ್ಲಿ ಅವರಿಂದ ನನ್ನನ್ನು ಕಸಿದುಕೊಳ್ಳುವುದು ಯಾವ ನ್ಯಾಯ?"

ಆ ಶಕ್ತಿಯು ಇವನ ಮಾತಿಗೆ ನೊಂದಿತು: "ನಿನ್ನ ಮರಣಾನಂತರ ಒಂದು ಘಂಟೆಕಾಲ ನಿನಗೆ ಜೀವದಾನ ಮಾಡಿದ್ದೇನೆ; ಅಷ್ಟರಲ್ಲಿ ನಿನ್ನ ಜೀವವನ್ನು ಬಯಸುವ ಮೂರು ಜನರನ್ನು ನೀನು ಹುಡುಕಬಲ್ಲೆಯಾದರೆ ನೀನು ಪುನಃ ಬದುಕುವೆ" ಎಂದು ಹೇಳಿತು.

* * *

ಹಾಸಿಗೆಯಿಂದ ಎದ್ದು ರಾಜನು ಮುಂದೆ ಹೊರಟನು. 'ನನ್ನಂತಹ ಸ್ವಾರ್ಥತ್ಯಾಗಿಯ ಜೀವನವನ್ನು ಬಯಸದವರಾರು?' ಎಂದು ಮನಸ್ಸು ಹೆಜ್ಜೆಹೆಜ್ಜೆಗೂ ಧೈರ್ಯ ಹೇಳುತ್ತಿತ್ತು. ಹಾಗೆಯೇ ಕೋಟೆಯ ಬಾಗಿಲಿಗೆ ಬಂದನು. ಪಹರೆಯವರು ನಿರ್ಯೋಚನೆಯಾಗಿ ನಿದ್ರಿಸುತ್ತಿದ್ದಾರೆ. ಎಲ್ಲೆಲ್ಲಿಯೂ ಕತ್ತಲೆ ಕವಿದಿದೆ. ನಿಶೆಯ ಮೌನವು ರಾಜನ ಹೃದಯವನ್ನು ಕಲಕಿತು. ವಿಶಾಲವಾಗಿರುವ ಈ ಪ್ರಪಂಚದಲ್ಲಿ ತಾನು ಅಲ್ಪನೆಂಬ ಭಾವನೆ ಮನಸ್ಸಿನಲ್ಲಿ ಮೊಳೆಯಲಾರಂಭವಾಯಿತು. ತಾನೇನೋ ಲಕ್ಷಾವಧಿ ಪ್ರಜೆಗಳ ಸುಖಕ್ಕೋಸ್ಕರ ತನ್ನ ದೇಹವನ್ನು ಸವೆಯಿಸಿದ್ದುದು ನಿಜ; ಆದರೆ ತನಗಿಂತ ಹೆಚ್ಚು ಉಪಕಾರಿಗಳು ಮತ್ತು ಸ್ವಾರ್ಥತ್ಯಾಗಿಗಳು ಈ ಪ್ರಪಂಚದಲ್ಲಿ ಅನೇಕರು ಇರುವರಲ್ಲವೇ! ತನ್ನ ದೇಶ, ತನ್ನ ಪ್ರಜೆಗಳು ಎಂಬ ಅಭಿಮಾನವು ರಕ್ತದ ಪ್ರತಿಬಿಂದುವಿನಲ್ಲಿಯೂ ತುಂಬಿ ಹರಿಯಿತು. ಆದರೆ ಮನಸ್ಸು ಮಾತ್ರ ಯಾವುದೋ ಒಂದು ಕೊರತೆಯು ಕಾಣುತ್ತಿದ್ದಂತೆ ಭಾಸವಾಯಿತು. ತನ್ನಂತೆಯೆ ತನ್ನ ಪ್ರಜೆಗಳೂ ಪವಿತ್ರಾತ್ಮರು, ಆದರ್ಶ ಜೀವಿಗಳು ನಿಜ; ಆದರೆ ಈಗಿನ ತನ್ನ ಸ್ಥಿತಿಯೇನು? ಅಂತೆಯೇ ಒಂದು ದಿನ ತನ್ನ ದೇಶ, ಪ್ರಜೆಗಳು ಎಲ್ಲರೂ ಚರಮಗೀತೆಯನ್ನು ಹಾಡಬೇಕಲ್ಲವೇ? ಇರುಳಿನ ತಣ್ಣೆಲರು ಬಿರುಸಿನಿಂದ ಬೀಸಿತು. ರಾಜನ ವಜ್ರದೇಹವೂ ನಡುಗಿತು. ಜೀವನದ ಅಸ್ಥಿರತೆಯು ಮನಸ್ಸಿನಲ್ಲಿ ಬೇರೂರಿತು. ತಾನು ಸತ್ತುದು ಅನ್ಯಾಯವೆಂಬ ಭಾವನೆ ಸಡಿಲವಾಗುತ್ತಾ ಬಂದಿತು.

ಯಾರನ್ನು ಮೊದಲು ನೋಡಬೇಕೆಂಬ ಆಲೋಚನೆಯು ಈಗ ರಾಜನನ್ನು ಬಾಧಿಸತೊಡಗಿತು. 'ತನ್ನ ಮೋಹದ ಮಡದಿಯನ್ನು ಉಳಿದು ಇತರರನ್ನು ಮೊದಲು ನೋಡಬಹುದೇ? ಆದರೆ ಇಂತಹ ವ್ಯಸನದ ವೇಳೆಯಲ್ಲಿ ಆಕೆಯನ್ನು ನೋಡಬಾರದು. ಅವಳು ಕಂಬನಿಗರೆಯುವುದನ್ನು ಕಂಡು ಸಹಿಸುವುದು ತನ್ನಿಂದ ಸಾಧ್ಯವಿಲ್ಲ. ಹೇಗೂ ಇನ್ನೊಂದು ಘಂಟೆಯಲ್ಲಿ ಜೀವಂತನಾಗಿ ಮಡದಿಯ ಸಮೀಪಕ್ಕೆ ಮರಳಬಹುದು. ಆಕೆಯ ಹರಿಣದೃಷ್ಟಿಗೆ ಉತ್ತರವಾಗಿ, ಸತ್ತಮೇಲಿನ ತನ್ನ ಅನುಭವಗಳನ್ನೆಲ್ಲಾ ವಿವರಿಸಬೇಕು. ದುಃಖಭರದಿಂದ ಕಂದಿದ್ದ ಲಲನೆಯನ್ನು ಸಂತಯಿಸಬೇಕು. ಆಶ್ಚರ್ಯಚಕಿತಳಾಗಿ ಕಣ್ಣಿನಲ್ಲಿ ಕಂಬನಿಯು ಹಾಗೆಯೆ ಉಳಿದು ತುಟಿಗಳು ಅದಿರುತ್ತಿರುವಾಗ, ಅವುಗಳ ಸವಿಯನ್ನನುಭವಿಸಬೇಕು..' ಹೀಗೆ ಭಾವನಾಪ್ರಪಂಚದಲ್ಲಿ ಲೀನನಾಗಿದ್ದ ರಾಜನನ್ನು ಗಂಟೆಯ ಶಬ್ದವು ಎಚ್ಚರಿಸಿತು. ಅವನಿಗೆ ತನ್ನ ಆಗಿನ ಸ್ಥಿತಿಯು ಪರಿವೆಯಾಯಿತು. ತನ್ನ ಪಾಲಿನ ಒಂದು ಗಂಟೆಯಲ್ಲಿ ಆಗಲೇ ೧೫ ನಿಮಿಷಗಳು ಕಳೆದು ಹೋದುದು ಅವನಿಗೆ ತಿಳಿಯಿತು. ಇನ್ನಾದರೂ ಕಾಲವಿಳಂಬ ಮಾಡದೆ, ತನ್ನ ಉದ್ಧಾರಕರನ್ನು ಹುಡುಕಲು ಹೊರಡಬೇಕೆಂದೆನಿಸಿತು. ಅರಿವಿಲ್ಲದೆಯೆ ಹೊರಬಂದ ಅವನ ಒಂದು ದೀರ್ಘನಿಟ್ಟುಸಿರು, ರಾತ್ರಿಯ ಮೌನದೊಡನೆ ಲೀನವಾಯಿತು.

ನಿರಾಶೆಯಿಂದ ಬಳಲಿದ ರಾಜನು ತನ್ನ ವಿಸ್ತಾರವಾದ ರಾಜಧಾನಿಯನ್ನು ಅವಲೋಕಿಸುತ್ತಿದ್ದಾನೆ. ಇದ್ದಿದ್ದಂತೆಯೇ ಮನಸ್ಸಿನಲ್ಲಿ ಆಶೆ ಕುಡಿಬಿಟ್ಟು ಚಿಗುರಿದೆ. ಹುಣ್ಣಿಮೆಯ ಚಂದ್ರನನ್ನು ಮುಸುಕಿದ್ದ ಕಾರ್ಮೋಡವು ಕ್ರಮೇಣ ಸರಿಯುತ್ತಿದೆ. ನಿಶಾಕಾಂತನ ಹಿಮಕರಸ್ಪರ್ಶದಿಂದ ರಾಜನ ಮನಸಿನಲ್ಲಿ ಧೈರ್ಯವು ತಲೆದೋರಿದೆ. ಇಂತಹ ನಡುರಾತ್ರಿಯಲ್ಲಿಯೂ ನಗರದ ಎಲ್ಲಾ ಕಡೆಗಳಲ್ಲಿಯೂ ಮೌನದ ಆಧಿಪತ್ಯವನ್ನು ಭೇದಿಸುತ್ತಾ ಗುಜುಗುಜು ಧ್ವನಿ ಹೊರಡುತ್ತಿದೆ. ಎಂದಿನ ಮೌನಕ್ಕೆ ಇಂದು ಅವಕಾಶವಿಲ್ಲ. ಇಂದು ರಾಜನ ಮರಣದ ವಿಶೇಷದಿನ. ಆದುದರಿಂದ ಪಟ್ಟಣದ ಎಲ್ಲಾ ಕಡೆಗಳಲ್ಲಿಯೂ ಜನರು ಗುಂಪುಗುಂಪಾಗಿ ಸೇರಿದ್ದಾರೆ. ರಾಜನು ಇದೆಲ್ಲವನ್ನೂ ನೋಡಿದನು. ಇದೆಲ್ಲವೂ ಅವರಿಗೆ ತನ್ನಲ್ಲಿರುವ ಅಭಿಮಾನದ ಕುರುಹಲ್ಲವೇ? ಇಂತಹ ಜನಸಮುದ್ರದಲ್ಲಿ ತನ್ನನ್ನು ಬಯಸುವ ಬರೇ ಮೂರು ಜನರನ್ನು ಕಾಣುವುದು ಒಂದು ಕೆಲಸವೇ! ರಾಜನ ಧೈರ್ಯ ಇಮ್ಮಡಿಸಿತು. 'ಮೂರೇಕೆ, ಮೂರು ಸಹಸ್ರ ಮಂದಿಯಾದರೂ ಸಿಕ್ಕಬಹುದಲ್ಲ!' ಎಂದುಕೊಂಡು ಮುಂದಕ್ಕೆ ಹೊರಟನು. ಇಂದು ಸಾಮ್ರಾಜ್ಯದ ಒಡೆಯನೊಬ್ಬ, ತನ್ನ ತಲೆಯನ್ನುಳಿಸಿಕೊಳ್ಳಲು ಮೂವರು ಅಲ್ಪಪ್ರಜೆಗಳನ್ನು ಹುಡುಕುತ್ತಾ ಹೊರಟಿದ್ದಾನೆ!

ಅಲ್ಲಿಂದ ಹೊರಟವನು ಅವಸರವಸರವಾಗಿ ಅರಮನೆಯ ಮೆಟ್ಟಿಲುಗಳನ್ನು ಇಳಿಯತೊಡಗಿದನು. ಇದ್ದಿದ್ದಂತೆಯೇ ಒಂದು ಮೂಲೆಯಿಂದ ಹಸುಳೆಯೊಂದರ ರೋದನಧ್ವನಿಯು ಕೇಳಿಸಿತು. ಪಾಪ, ಆ ಕೂಸು ರಾಜನ ಸಾವಿನಿಂದ ದುಃಖಿಯಾಗಿರಬೇಕು! ರಾಜನು ಅತ್ತ ಕಡೆಗೇ ಧಾವಿಸಿದನು. ಇಷ್ಟರಲ್ಲಿಯೆ ಗಸ್ತಿನ ಪೋಲೀಸಿನವನೊಬ್ಬನು ಮಗುವನ್ನು ಸಮಾಧಾನಪಡಿಸುತ್ತಿದ್ದನು. ರಾಜನ ಸಾವು ಆ ಕಂದನ ತಂದೆ-ತಾಯಿಯರನ್ನು ಅರಮನೆಯಲ್ಲಿಯೇ ಬಚ್ಚಿಟ್ಟುಕೊಂಡಿದ್ದಿತಂತೆ. 'ರಾಜನು ಬದುಕಿದ್ದರೆ ಎಷ್ಟೋ ಚೆನ್ನಾಗಿತ್ತು' ಎಂದು ಉದ್ಗಾರ ತೆಗೆದು ಮಗುವು

ರೋದನವನ್ನಿಮ್ಮಡಿಸಿತು. ಅದರ ಕಾತರಸ್ವರವು ರಾಜನನ್ನು ಮರುಳುಮಾಡಿತು. ಆದರೆ ಕಾಲದ ಅಭಾವದಿಂದ ಅದನ್ನು ಸಮಾಧಾನಪಡಿಸಲಾರದೆ ಹಾಗೆಯೇ ಮುಂದೆ ಹೊರಟನು. ಅಂತೂ ತನ್ನ ಜೀವವನ್ನು ಬಯಸುವ ಒಂದು ವ್ಯಕ್ತಿ ನಿರಾಯಾಸವಾಗಿ ದೊರೆತಂತಾಯಿತು.

ಅರಮನೆಯಿಂದ ಹೊರಟವನು ತನ್ನ ಪ್ರಾಣಸ್ನೇಹಿತನ ಮನೆಯ ಕಡೆಗೆ ತಿರುಗಿದನು. ಇಡಿ ಜೀವನದಲ್ಲಿ ತನಗೆ ಅಂತಹ ಆಪ್ತನು ಬೇರೊಬ್ಬನು ಸಿಕ್ಕಿರಲಿಲ್ಲ. ತನ್ನ ಸಾವಿನ ದುಃಖವನ್ನು ಅವನು ಹೇಗೆ ಸಹಿಸಿಕೊಂಡಿರಬಲ್ಲನೋ ಎಂಬ ಯೋಚನೆ ಅರಸನನ್ನು ಬಾಧಿಸ ತೊಡಗಿತು. ಆದರೆ ಮರುಕ್ಷಣದಲ್ಲಿಯೇ ಮನಸ್ಸಿಗೆ ಒಂದು ವಿಧವಾದ ಸಮಾಧಾನವಾಯಿತು. ತನಗೆ ಒದಲು ಆತನೇ ಮೊದಲು ಮರಣ ಹೊಂದಿದ್ದರೆ, ಆ ದುಃಖದಲ್ಲಿ ತಾನು ಜೀವಿಸುವದು ಅಸಾಧ್ಯವಾಗುತ್ತಿತ್ತೆಂದು ತೋರಿತು. ಹೀಗೆಯೇ ಯೋಚಿಸುತ್ತಾ ಆತನ ಪ್ರಾಸಾದವನ್ನು ಮುಟ್ಟಿದನು. ಎಲ್ಲೆಲ್ಲಿಯೂ ಗದ್ದಲವೇ ಗದ್ದಲ. ಕೆಲವು ಸೇವಕರು ದೀವಟಿಗೆಗಳನ್ನು ಹಿಡಿದು ಓಡಾಡುತ್ತಿದ್ದಾರೆ. ಇತರರು ಕುದುರೆಗಳಿಗೆ ಜೀನು ಹೊದಿಸುತ್ತಿದ್ದಾರೆ. ಆದರೆ ತನ್ನ ಸ್ನೇಹಿತನು ಮಾತ್ರ ಅಲ್ಲೆಲ್ಲಿಯೂ ಕಾಣಲಿಲ್ಲ. ರಾಜನ ಮನಸ್ಸು ನಡುಗಿತು. ತನ್ನ ಸಾವಿನ ವ್ಯಸನಕ್ಕೆ ಆತನ ಜೀವವೂ ಏನ ಲಾಗಿರಬೇಕೆಂದು ತೋರಿ ದೇಹಾದ್ಯಂತವೂ ತಣ್ಣಗೆನಿಂದಿತು. ಆದರೆ ತಾನು ಹುಡುಕದೆ ಉಳಿದ ಮತ್ತೊಂದು ರಹಸ್ಯಕೊಠಡಿಯ ವಿಷಯವು ಮನಸ್ಸಿಗೆ ಧೈರ್ಯತಂದಿತು. ಮೆಲ್ಲಗೆ ಆ ಕೊಠಡಿಯ ಕಡೆಗೆ ಹೊರಟನು. ಅರ್ಧ ತೆರೆದಿದ್ದ ಬಾಗಿಲನ್ನು ಸರಿಸಿ ಒಳಕ್ಕೆ ಹೋದನು. ಒಳಗೆ ಯಾರೂ ಇರಲಿಲ್ಲ. ಆದರೆ ಇಲ್ಲಿಯ ಎಲ್ಲಾ ವಸ್ತುಗಳೂ ಚೆಲ್ಲಾಪಿಲ್ಲಿಯಾಗಿದ್ದುವು. ಯಾವುದನ್ನೋ ಹುಡುಕುವ ಅವಸರದಲ್ಲಿ ಎಲ್ಲವನ್ನೂ ಕಿತ್ತೆಸೆದಿದ್ದಂತೆ ತೋರಿತು. ನೆಲದ ಮೇಲೆ ಕನ್ನಡಿ ನುಚ್ಚುನೂರಾದ ಒಂದು ಚಿತ್ರಪಟವು ಬಿದ್ದಿದ್ದಿತು. ರಾಜನು ಅದನ್ನು ಕೈಗೆ ತೆಗೆದುಕೊಂಡು ನೋಡುತ್ತಾನೆ; ಅದು ತನ್ನ ಚಿತ್ರಪಟ! ಹಾಗೆಯೇ ನೆಲದ ಮೇಲೆ ಬಿದ್ದಿದ್ದ ಅರೆಬೂದಿಯಾದ ಒಂದು ಕಾಗದ ಅವನ ಕಣ್ಣಿಗೆ ಕಾಣಿಸಿತು. ಅದು ತಾನು ತನ್ನ ಸ್ನೇಹಿತನಿಗೆ ಬರೆದಿದ್ದ ಕೊನೆಯ ಕಾಗದ! ರಾಜನು ದಿಙ್ಮೂಢನಾದನು. ಜೀವವು ಬಹಳ ಭಾರವಾಗಿ ತೋರಿತು. ತನ್ನೊಡನೆಯೆ ತನ್ನ ನೆನಪಿನ ಕುರುಹುಗಳೂ ಅಳಿಯಬೇಕೇ?

ಹೊರಗೆ ಯಾರೋ ಮಾತನಾಡುವ ಶಬ್ದವಾಯಿತು; ಬಾಗಿಲಿನ ಹಿಂದೆ ಅವಿತುಕೊಂಡನು. ತನ್ನ ಸ್ನೇಹಿತನ ಪತ್ನಿಯು ಒಬ್ಬ ಅಧಿಕಾರಿಯೊಡನೆ ಒಳಕ್ಕೆ ಬಂದಳು. ಆಕೆಯ ಪತಿಯು ಹೊಸ ರಾಜನನ್ನು ಆಶ್ರಯಿಸಲು ಆಗಲೇ ಹೋಗಿದ್ದನಂತೆ. ಅವಳು ಹೇಳಿದಳು: 'ಸತ್ತರಾಜ ಬಹಳ ವಿಚಿತ್ರ ವ್ಯಕ್ತಿ; ಈಗಿನ ರಾಜನು ಅವನಿಗಿಂತ ಎಲ್ಲಾ ವಿಧದಲ್ಲಿಯೂ ಮೇಲು!'

'ಹೌದು. ಅದೃಷ್ಟವಶಾತ್ ಅವನ ಹೊಸನೀತಿಗೆ ನಾವು ಆಹುತಿಯಾಗುವುದಕ್ಕೆ ಮೊದಲೇ ಅವನು ಸತ್ತನು.' ದೂರದಿಂದ ಘಂಟೆಯ ಶಬ್ದವು ಕೇಳಿಸಿತು. ರಾಜನು ಇನ್ನು ಅಲ್ಲಿ ನಿಲ್ಲಲಾರದಾದನು. 'ಶ್ರೀಮಂತರ ಸಹವಾಸವೇ ಹೀಗೆ; ನನ್ನ ಬಡಪ್ರಜೆಗಳೇ ನನ್ನನ್ನು ಗೌರವಿಸುವವರು' ಎಂದುಕೊಂಡು ಅಲ್ಲಿಂದ ಹೊರಟನು.

* * *

ರಾಜನು ಈಗ ಜನಸಾಂದ್ರವಾದ ಬೀದಿಯ ಒಂದು ಅಂಚಿನಲ್ಲಿ ನಡೆಯುತ್ತಾ ಹೊರಟನು. ಎಲ್ಲೆಲ್ಲಿಯೂ ಜನರು ಇವನ ವಿಷಯವನ್ನೇ ಚರ್ಚಿಸುತ್ತಿದ್ದರು. ರಾಜ ಹೇಗೆ ಸತ್ತನೆಂಬುದೇ ಅವರ ಮಾತಿನ ಮುಖ್ಯ ವಿಷಯ. ಆದರೆ ಅವನ ಸಾವಿನಿಂದ ತಮ್ಮ ಸ್ಥಿತಿಯು ಹೇಗೆ ಬದಲಾಯಿಸಬಹುದೆಂಬುದನ್ನು ಯಾರೂ ಯೋಚಿಸಿದಂತೆ ತೋರಲಿಲ್ಲ. ಕೆಲವರು ಮಾತ್ರ ಹಿಂದುಮುಂದಿನ ಅಂತರವನ್ನು ಅಳೆಯಲು ಪ್ರಯತ್ನಿಸುತ್ತಿದ್ದರು. ಅವರಲ್ಲೊಬ್ಬನು ಹೇಳಿದನು: 'ಇತ್ತೀಚೆಗೆ ಅವನು ಹುಚ್ಚನಂತಾಗಿದ್ದನು; ಸರಿಗೂಡಲು ಮಸಣದ ದಾರಿ ಹಿಡಿಯಬೇಕು; ಹರಯದ ಹುರುಪಿಗೆ ಎಲ್ಲವನ್ನೂ ಒಪ್ಪಿಸಬೇಕು!'

'ಅವನು ಮರಣದಂಡನೆಯ ಶಿಕ್ಷೆಯನ್ನೇ ರದ್ದುಮಾಡಲು ಇಷ್ಟಪಟ್ಟುದು ಏಕೆಂದು ತಿಳಿದಿರುವಿರಿ? ಬಂದಿಗಳು ಹೆಚ್ಚು ಜನರು ಇದ್ದಷ್ಟೂ ಅವರಿಂದ ಹೆಚ್ಚು ಕೆಲಸ ತೆಗೆಯಬಹುದೆಂದೇ ಇರಬೇಕು!'

ರಾಜನಿಗೆ ಇಂತಹ ಮರ್ಮಾಘಾತವನ್ನು ಸಹಿಸಲಾಗಲಿಲ್ಲ. ತನ್ನ ಸರ್ವಸ್ವವನ್ನೂ ಅವರಿಗೋಸ್ಕರ ತ್ಯಾಗಮಾಡಿ ಹಗಲಿರುಳೂ ದುಡಿದಿದ್ದನು. ಆದರೆ ತನ್ನ ಸ್ವಾರ್ಥತ್ಯಾಗಕ್ಕೆ ಇಂತಹ ಪ್ರತಿಫಲವೇ? ತನ್ನಿಂದ ಉಪಕೃತರಾದವರ ಈ ಬಗೆಯು ಅವನ ಹೃದಯವನ್ನು ಕಲಕಿತು. ಆಗ ಆತನ ಶತ್ರುಗಳಾದರೂ ನಿಂದೆಯ ಮಳೆಗರೆದಿದ್ದರೆ, ಅವನ ಮನಸ್ಸಿಗೆ ತಂಪಾಗುವಂತೆ ತೋರಿತು. ಆದ್ದರಿಂದ ಹಾಗೆಯೇ ಸೆರೆಮನೆಯ ಕಡೆಗೆ ನಡೆದನು. ಅಲ್ಲಿ ಇವನಿಂದ ದಂಡಿತರಾಗಿ ನೇಣುತೀರಿಸಿಕೊಳ್ಳಲು ಕಾದಿದ್ದ ಕೈದಿಗಳು ಎಷ್ಟೋ ಜನರಿದ್ದರು.

ಜೈಲಿನ ಅಧಿಕಾರಿಯು ಆಗ ತಾನೇ ಬಾಗಿಲನ್ನು ತೆರೆದು ಒಬ್ಬ ಕೈದಿಯು ಒಳಗೆ ಬಂದನು. ಆ ಕೈದಿಯ ಮುಖವು ರಾಜನಿಗೆ ಪರಿಚಿತವಿದ್ದಂತೆ ತೋರಿತು. ಹೌದು, ತಾನೇ ಅವನಿಗೆ ಮರಣದಂಡನೆ ವಿಧಿಸಿದ್ದನು. ಅಧಿಕಾರಿಯನ್ನು ಕಂಡು ಕೈದಿಯು ಗಾಬರಿಗೊಂಡು, 'ನಾಳೆಯಲ್ಲವೇ ಆ ದಿನ?' ಎಂದು ಹೇಳಿ, ತನ್ನ ಅಧೈರ್ಯಕ್ಕೆ ನಾಚಿ 'ಇಂದೇ ಆದರೂ ನಾನು ಸಿದ್ಧ; ದಯವಿಟ್ಟು ಈ ಪತ್ರವನ್ನು ನನ್ನ ಹೆಂಡತಿಗೆ ತಲುಪಿಸುವಿರಾ?' ಎಂದು ಕೇಳಿದನು.

'ರಾಜನು ಸತ್ತನು; ಇಂದಿನ ರಾಜನು ಹಿಂದಿನವನಂತಲ್ಲ. ಖಂಡಿತ ನಿನ್ನ ಬಿಡುಗಡೆಯಾಗುವುದು!'

'ಏನು! ರಾಜನು ಸತ್ತನೇ?'

'ಅಹುದು, ಸತ್ತನು!'

ಕೈದಿಯು ಕಾತರನಾಗಿ ಗದ್ಗದಸ್ವರದಲ್ಲಿ ಉದ್ಗಾರತೆಗೆದನು: ‘ಅಯ್ಯೋ, ಅವನು ಸತ್ತುದು ಅನ್ಯಾಯ! ರಾಜನಿಗೆ ತಕ್ಕ ಗೌರವ ಅವನಲ್ಲಿದ್ದಿತು. ಅದೂ ಅಲ್ಲದೆ, ಅವನಿಗೆ ಇನ್ನೂ ಚಿಕ್ಕವಯಸ್ಸಿನ ಹೆಂಡತಿ ಬೇರೆ ಇದ್ದಾಳೆ. ಅವನು ಈಗಲೇ ಸಾಯದಿದ್ದರೆ ಎಷ್ಟು ಚೆನ್ನಾಗಿತ್ತು!’

ದೊರೆಗೆ ಒಂದು ಅವರ್ಣನೀಯ ಅನುಭವವುಂಟಾಯಿತು. ಕೈದಿಯು ತುಂಬಿದ ಸಭೆಯಲ್ಲಿ ತನ್ನ ಶಿರಚ್ಛೇದನ ಮಾಡಿದ್ದರೂ ರಾಜನಿಗೆ ಇಷ್ಟು ಯಾತನೆಯಾಗುತ್ತಿರಲಿಲ್ಲ. ವೈರಿಯ ಔದಾರ್ಯವು ತಲೆಯನ್ನು ಹೊಕ್ಕು ಇರಿಯಲಾರಂಭವಾಯಿತು. ಅಲ್ಲಿ ನಿಲ್ಲಲಾರದೆ ಮುಂದೆ ಹೊರಟನು.

ಅಂದಿನ ಅನುಭವವೆಲ್ಲಾ ಅವನ ಕಣ್ಣಮುಂದೆ ಮಿಂಚಿತು. ಮೂವರೇಕೆ, ಮೂರು ಲಕ್ಷ ಮಂದಿಯಾದರೂ ತನ್ನ ಆಪ್ತರು ಸಿಕ್ಕುವರೆಂಬ ಹುಮ್ಮಸಿನಿಂದ ಹೊರಟಿದ್ದನು. ಆದರೆ ಆತನಿಗೆ ಸಿಕ್ಕಿದ್ದಾದರೂ ಏನು? ಒಂದು ಕಡೆ ತನ್ನಿಂದಲೇ ಶ್ರೀಮಂತ ಪದವಿಗೆ ಬಂದ ಸ್ನೇಹಿತ; ಮತ್ತೊಂದು ಕಡೆ ತನ್ನ ಸಹಾಯದಿಂದ ಉತ್ತಮಗೊಳ್ಳುತ್ತಿದ್ದ ಪ್ರಜೆಗಳು. ಇವರೆಲ್ಲರೂ ಕೃತಘ್ನರೆಂದು ಅವನ ಮನಸ್ಸಿಗೆ ನಿರ್ಧರವಾಯಿತು. ಹಳೆಯ ನೆನಪಿನ ಗೋರಿಯನ್ನು ಕಟ್ಟಿ, ಅದರ ಮೇಲೆ ಹೊಸ ಸಿಂಹಾಸನವನ್ನಿಡುವ ಕೆಲಸದಲ್ಲಿ ತೊಡಗಿದ್ದವರೇ ಎಲ್ಲರೂ! ಅಂದಿನ ವಸ್ತುವು ತಮ್ಮಿಂದ ದೂರವಾಯಿತೆಂಬ ಚಿಂತೆ ಒಬ್ಬರಿಗಾದರೂ ಇರಲಿಲ್ಲ! ಆದರೂ ಎರಡು ವ್ಯಕ್ತಿಗಳು ಮಾತ್ರ ಅವನನ್ನು ಪುನಃ ಬಯಸಿದ್ದರು. ಅದರಲ್ಲಿ ಒಂದು ಏನೂ ಅರಿಯದ ಹಸುಗೂಸು; ಮತ್ತೊಬ್ಬನು ದಯಾಳುವಾದ ಶತ್ರು! ತನ್ನಿಂದ ಎಲ್ಲಾ ವಿಧದಲ್ಲಿಯೂ ಸಹಾಯ ಪಡೆದವರ ಕೃತಘ್ನತೆಗಿಂತಲೂ ಶತ್ರುವಿನ ಕನಿಕರವು ಸಹಿಸಲಸಾಧ್ಯವಾಯಿತು. ‘ಇಂತಹವನು ಪುನಃ ಜೀವಿಸಬೇಕೆ?’ ಎಂಬ ಪ್ರಶ್ನೆಯು ಮತ್ತೆಮತ್ತೆ ತಲೆದೋರಿ, ಮೃತ್ಯುವಿನ ನೀತಿಯು ಸರಿಯೆಂಬ ಭಾವನೆಯನ್ನು ಮನಸ್ಸಿನಲ್ಲಿ ತುಂಬಿತು. ಇಡಿ ಜೀವನದಲ್ಲಿ ಎಂದೂ ಕಾಣದ ಒಂದು ಹೊಸ ಅನುಭವವು ಆತನನ್ನು ಮಾರ್ಪಡಿಸಿತು. ಯಾವ ವಿಧದಲ್ಲಿಯೂ ಪ್ರತಿಭಟಿಸದೆ, ಪುನಃ ಹೋಗಿ ಮೃತ್ಯುವಿನ ವಶವಾಗಬೇಕೆಂದು ರಾಜ ನಿರ್ಧರಿಸಿದನು.

ಆದರೂ ತನ್ನ ಏಕಾಕಿತನವು ರಾಜನನ್ನು ಬಾಧಿಸಲಾರಂಭವಾಯಿತು. ಆತನ ಸ್ಥಿತಿಯು ವಿಷಮವಾಗುತ್ತಾ ಬಂದು, ಮನಸ್ಸನ್ನು ದಾರುಣವೇದನೆಯು ಆವರಿಸಿತು. ಒಂದೇ ಒಂದು ಸಮಾಧಾನದ ಮಾತಿಗೆ ಪ್ರತಿಯಾಗಿ ಆತನು ಪ್ರಪಂಚವನ್ನೇ ಕೊಡಲು ಸಿದ್ಧನಾಗಿದ್ದನು. ಇದ್ದುದಿದ್ದಂತೆ ದೃಷ್ಟಿಯು ಗಗನದ ಕಡೆಗೆ ಹೊರಳಿತು. ಬಣ್ಣಬಣ್ಣದ ಮೋಡಗಳು ಚಂದ್ರನೊಡನೆ ಚೆಕ್ಕಂದವಾಡುತ್ತಿದ್ದುವು. ಕ್ರಮೇಣ ಚಂದ್ರನನ್ನು ಮುಚ್ಚಿದ್ದ ಕಾರ್ಮೋಡಗಳೆಲ್ಲಾ ದೂರ ಸರಿದುವು. ರಾಜನ ಮನಸ್ಸೂ ಹಗುರಾಗುತ್ತಾ ಬಂದಿತು. ಧೈರ್ಯವು ಮೊಳೆತು ಮನಸ್ಸಿನಲ್ಲಿ ಆಶೆಯು ಕುಡಿಯಿಟ್ಟಿತು. ‘ಇನಿಯಳ ಮಮತೆ-ಪ್ರೇಮಗಳಿರುವಾಗ ತನಗೆಲ್ಲಿಯ ಏಕಾಕಿತನ?’ ಎಂದುಕೊಂಡನು. ಇಷ್ಟು ವೇಳೆಯನ್ನು ಹೀಗೆ ವೃಥಾ ಕಳೆಯದೆ ಮೊದಲೇ ಮಡದಿಯ ಬಳಿಗೆ ಹೋಗಬೇಕಾಗಿದ್ದಿತೆಂದೆನಿಸಿತು. ಪುನಃ ಗಂಟೆಯ ಶಬ್ದವು ಕೇಳಿಸಿತು. ಆ ಒಂದು ಗಂಟೆಯಲ್ಲಿ ಇನ್ನೂ ಹದಿನೈದು ನಿಮಿಷಗಳು ಉಳಿದಿದ್ದುವು; ಆದ್ದರಿಂದ ಇನ್ನೂ ಕೆಲಸವು ಕೈಮೀರಿರಲಿಲ್ಲ. ದುಃಖವು ದೂರವಾಗಿ ಪುನಃ ಜೀವಿಸುವ ಆಶೆಯು ತುಂಬಿ ಹರಿಯಿತು. ಹೆಜ್ಜೆಗಳು ಹಾಗೆಯೆ ರಾಣೀವಾಸದ ಕಡೆಗೆ ಹೊರಟುವು.

ರಾಜನು ರಾಣಿಯ ಕೊಠಡಿಯ ಬಾಗಿಲಿನಲ್ಲಿ ನಿಂತಿದ್ದಾನೆ. ಆಕೆಯ ರೋದನಧ್ವನಿಯು ನಿಶೆಯ ಅಂತರ್ಯವನ್ನು ಭೇದಿಸುತ್ತಿದೆ. ಅವಳನ್ನುಳಿದು ಕೊಠಡಿಯಲ್ಲಿ ಮತ್ತಾರೂ ಇಲ್ಲ. ಬಿಚ್ಚಿದ ಕೂದಲು ನೆಲದಮೇಲೆ ಬಿದ್ದಿರುವುದನ್ನೂ ಗಮನಿಸದೆ, ಅಧೋವದನೆಯಾಗಿ ಒಂದೇ ಸಮನಾಗಿ ಅಳುತ್ತಾ ಕುಳಿತಿದ್ದಾಳೆ. ರಾಜನು ಇದನ್ನು ಸಹಿಸದಾದನು. ‘ಇಂತಹ ಸಮಯದಲ್ಲಿಯೂ ಅವಳನ್ನು ಒಂಟಿಯಾಗಿ ಬಿಟ್ಟಿರುವರಲ್ಲಾ’ ಎಂದು ಸೇವಕರ ಮೇಲೆ ಕೋಪವುಂಟಾಯಿತು. ತಾನೇ ಮುಂದೆ ಹೋಗಿ ಅವಳನ್ನು ಸಮಾಧಾನಪಡಿಸಬೇಕೆಂದು ಬಯಸಿದನು. ಇಷ್ಟರಲ್ಲಿಯೇ ಏನೋ ಸಪ್ಪಳವಾದಂತಾಯಿತು. ಗುಪ್ತದ್ವಾರದಿಂದ ಒಂದು ವ್ಯಕ್ತಿಯು ಕೊಠಡಿಯನ್ನು ಪ್ರವೇಶಿಸಿತು. ತಮ್ಮಿಬ್ಬರನ್ನುಳಿದು ಮತ್ತಾರಿಗೂ ಆ ದ್ವಾರವು ತಿಳಿಯದೆಂದಿದ್ದ ರಾಜನು ಸ್ತಂಭಿತನಾದನು. ಆ ವ್ಯಕ್ತಿಯನ್ನು ದೃಷ್ಟಿಸಿ ನೋಡುತ್ತಾನೆ; ತನ್ನ ಶ್ರೀಮಂತ ಸ್ನೇಹಿತ! ರಾಣಿಯ ದೃಷ್ಟಿಯೂ ಅತ್ತಕಡೆಗೇ ಹರಿಯಿತು. ಮಿಂಚಿನಂತೆ ಒಬ್ಬರನ್ನೊಬ್ಬರು ಸಮೀಪಿಸಿ ಇಬ್ಬರೂ ಒಂದಾದರು. ಕನಸಿನಲ್ಲಿ ಇದ್ದಂತೆ ರಾಜನಿಗೆ ಕೇಳಿಸಿತು: ‘ನೀನು ಎಲ್ಲಿ ಬರುವುದಿಲ್ಲವೋ ಎಂದು ಯೋಚನೆಯಾಗಿತ್ತು. ಅವನು ಹೋದನು; ಇನ್ನು ನಾವು ನಮ್ಮ ಮನಬಂದಂತೆ ಇರಬಹುದು!’

ಚಿತ್ರದ ಪ್ರತಿಮೆಯಂತೆ ನಿಂತಿದ್ದ ರಾಜನು ಮೆಲ್ಲಗೆ ತಲೆಯೆತ್ತಿ ನೋಡಿದನು. ತನ್ನ ಪ್ರಣಯದ ಬಳುವಳಿಯಾಗಿ ರಾಣಿಯಲ್ಲಿದ್ದ ರತ್ನಾಂಗುಳೀಯವು, ತನ್ನ ಸ್ನೇಹಿತನ ಬೆರಳಿನಲ್ಲಿ ಜಾಜ್ವಲ್ಯಮಾನವಾಗಿದ್ದಿತು!

* * *

ಅರಮನೆಯ ಗಡಿಯಾರದಲ್ಲಿ ಹನ್ನೆರಡು ಘಂಟೆಯು ಮೊಳಗಿ ಅರ್ಭಟಿಸಿತು. ಕಾವಲುಗಾರರು ಗಾಬರಿಯಿಂದ ಎಚ್ಚತ್ತರು. ರಾಜನ ನಿರ್ಜೀವದೇಹವು ಮೊದಲಿನಂತೆಯೆ ನಿಶ್ಚಲವಾಗಿ ಬಿದ್ದಿದೆ. ಆದರೆ ಮುಖದಲ್ಲಿ ಮಾತ್ರ ಒಂದು ಭೀಕರ ವಿಕೃತಭಾವವು ಒಡೆದು ಕಾಣುತ್ತಿದೆ. ಈ ಘೋರ ರೂಪವನ್ನು ರಾಣಿಯು ಪುನಃ ನೋಡಬಾರದೆಂದು. ಸೇವಕರು ಮುಖವನ್ನು ಮುಚ್ಚಿದರು. ಆ ಒಂದು ಗಂಟೆಯ ಅನುಭವದ ಪ್ರತಿಯೊಂದು ಭಾವವೂ ರಾಜನ ಮುಖದ ಮೇಲೆ ಮುದ್ರೆಯೊತ್ತಿದಂತೆ ಚಿರಸ್ಥಾಯಿಯಾಗಿ ನೆಲಸಿದೆ.

ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವೇ?

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

★

ಪಾಶ್ಚಿಮಾತ್ಯರ ಆಧಿಭೌತಿಕ ಸಂಸ್ಕೃತಿಗಿಂತ ಪೌರ್ವಾತ್ಯರ ಆಧ್ಯಾತ್ಮಿಕ ಸಂಸ್ಕೃತಿ ಶ್ರೇಷ್ಠವೆಂದು ಹೇಳುವ ಮನೋವೃತ್ತಿಯ ಹಿಂದೆ ಅಡಗಿರುವ ಸತ್ಯ ಯಾವುದು? ದ್ರಾಕ್ಷೆಯ ಹಣ್ಣು ನಿಲುಕದ್ದರಿಂದ ದಣಿದ ನರಿಯು, ನಿರುಪಾಯವಾಗಿ 'ದ್ರಾಕ್ಷೆ ಹುಳಿ!' ಎಂದು ಹೇಳಿದ ಮಾತಿನಲ್ಲಿ ಹುದುಗಿದ್ದ ಸತ್ಯವೇ!

ಲೇಖಾಂಕ ೧

(೧) ನಮ್ಮ ರಾಷ್ಟ್ರವಾದದ ಸಾಮಾನ್ಯ ಲಕ್ಷಣ

ಹಿಂದೀಯರ ದೇಶಭಕ್ತಿಗೆ—ಭಾರತೀಯ ರಾಷ್ಟ್ರವಾದಕ್ಕೆ ಒಂದು ಸಾಮಾನ್ಯ ಲಕ್ಷಣವಿದೆ. ನಮ್ಮ ದೇಶಭಕ್ತಿಯು—ಅದು ಯಾವುದೇ ಬಣ್ಣದ್ದಿರಲಿ, ಯಾವುದೇ ರಾಜಕೀಯ ಪಕ್ಷದವರದಿರಲಿ—ಒಂದು ಗುಣವನ್ನು ವ್ಯಕ್ತಮಾಡುತ್ತದೆ: ಆ ಲಕ್ಷಣ—ಆ ಗುಣವೆಂದರೆ "ಪಾಶ್ಚಾತ್ಯ ಸಂಸ್ಕೃತಿ"ಯ ಕುರಿತು ಇರುವ ತಿರಸ್ಕಾರ ಮತ್ತು ವಿರೋಧ. ನಮ್ಮಲ್ಲಿಯ ಭಿನ್ನ ಭಿನ್ನ ರಾಜಕೀಯ ಪಕ್ಷ-ಪಂಗಡಗಳ ಸಾಮಾಜಿಕ ಹಿನ್ನೆಲೆಗೆ ಅನುರೂಪವಾಗಿ, ಹಿಂದೀರಾಷ್ಟ್ರವಾದದ ಈ ಸಾಮಾನ್ಯಧರ್ಮದ ಸ್ವರೂಪದಲ್ಲಿ ಹೆಚ್ಚುಕಡಿಮೆಯಾಗಿದೆ. ಒಂದು ತುದಿಗೆ ಹಿಂದೂ ಮಹಾಸಭೆಯೂ—ಅದರೊಂದಿಗೆ ಹಲಕೆಲವು ಪಟ್ಟಿಗೆ ಹೊಂದಿಕೊಂಡಿರುವ ಆರ್ಯಸಮಾಜ ಮತ್ತು ವರ್ಣಾಶ್ರಮಸಂಘಗಳಂತಹ ಸಂಸ್ಥೆಗಳೂ— ಪಾಶ್ಚಾತ್ಯ ಸಂಸ್ಕೃತಿಯ ಕುರಿತು ಬಿರಿಯುವ ಅಸಹನೆ ಮತ್ತು ಇರಿಯುವ ಹಗೆತನವನ್ನು ತೋರಿಸುತ್ತಿರುತ್ತವೆ. ತಮ್ಮ ದಾಂಭಿಕ ಧಾರ್ಮಿಕತೆ ಮತ್ತು ಆತ್ಮ-ಸಂಭಾವನೆಯ ಬಲದಿಂದ ಅವು, ತಮ್ಮ ಈ ಅಸಹನೆಗೆ ಪುಟಕೊಡುತ್ತವೆ. ಈ ಕಣದ ಇನ್ನೊಂದು ತುದಿಗೆ, ಉದಾರ ಮತ-ವಾದಿಗಳಾದ ಪ್ರಾಗತಿಕರೆಂದೆನಿಸಿಕೊಳ್ಳುವ ಸುಧಾರಕರು—ನೇಮಸ್ತ ಪಕ್ಷದವರು—ನಿಂತಿರುವರು. ಇವರು ಒಂದೆಡೆಯಲ್ಲಿ ತಮ್ಮ ಮಾತು-ಮತಗಳಲ್ಲಿ, ಭಾರತವು ಅನುಸರಿಸಲೇ ಬೇಕೆಂದು ಸಾರುವ ಸಾಮಾಜಿಕ ಪ್ರಗತಿಯ ಮಾರ್ಗದ ಕುರಿತು, ಇನ್ನೊಂದೆಡೆಯಲ್ಲಿ ಸಾಕಷ್ಟು ಪ್ರಶಂಸೆ-ಪ್ರೋತ್ಸಾಹಗಳನ್ನು ಕಾಣಿಸದೆ ರಾಜಕೀಯ ಮತ್ತು ತಾತ್ತ್ವಿಕದೃಷ್ಟಿಯಿಂದ ತಮ್ಮ ತೇಜೋ-ಭಂಗವನ್ನು ತಾವೇ ಮಾಡಿಕೊಳ್ಳುತ್ತಾರೆ!

ಇವೆರಡು ತುದಿಗಳ ನಡುವೆ ಗಡಿಯಾರದ ಲಂಬಕದಂತೆ ಕಾಂಗ್ರೆಸು ನಿಂತಿದೆ. ಒಂದೆಡೆಗೆ ಹಳಸಿ ಹದಗೆಟ್ಟು ಹೋದ ಭಾರತೀಯ ಧರ್ಮವ್ಯವಸ್ಥೆಯ ಈ ಜೀರ್ಣೋದ್ಧಾರವನ್ನು ಹೇಗಾದರೂ ಮಾಡಲೇಬೇಕೆಂದು ಹೆಣಗುವ, ಮತ್ತು ಇನ್ನೊಂದೆಡೆಗೆ ಆಧುನಿಕಜೀವನದ ಪ್ರಗತಿಪಥದಲ್ಲಿ ಭಾರತವು ನಡೆಯಬೇಕೆಂದು ತೋರಿದರೂ, ತಮ್ಮ ನೀತಿಯನ್ನು ಕೃತಿಯಲ್ಲಿ ಅಲ್ಲಗಳೆದು ಆತ್ಮವಂಚನೆಯನ್ನು ಸಾಧಿಸುವ—ಈ ಮೇಲಿನ ಎರಡು ಗುಂಪುಗಳ ನಡುವೆ ಕಾಂಗ್ರೆಸ್ಸು ಸುಳಿದಾಡುತ್ತದೆ. ಭಾರತದ ರಾಷ್ಟ್ರವಾದದ ರಂಗಭೂಮಿಯಲ್ಲಿ ಕಾಂಗ್ರೆಸು ಮಧ್ಯಸ್ಥಾನವನ್ನು ಪಡೆದು ಮೆರೆಯುತ್ತಲಿದೆ. ಕಾಂಗ್ರೆಸಿನ ಧೋರಣವೂ ದೃಷ್ಟಿಯೂ ಬಹಳೇ ಮಾದರಿಯದಾಗಿದೆ—ಪ್ರಾತಿನಿಧಿಕವಾಗಿದೆ. ಕಾಂಗ್ರೆಸ್-ರಾಷ್ಟ್ರವಾದವು ಗಾಂಧೀವಾದದ ಧ್ವಜದಡಿಗೆ ಸಡಗರದಿಂದ ನಿಂತಿದೆ. ಮತ್ತು ಗಾಂಧೀವಾದವೆಂದರೆ ಪಾಶ್ಚಾತ್ಯ ಸಂಸ್ಕೃತಿಯ ವ್ಯಾಧಿಗೆ ದಿವ್ಯೌಷಧಿಯೆಂದು—ಕೇವಲ ವಿರುದ್ಧವೆಂದು—ಪಾಮರರಿಂದಲೂ ಪಂಡಿತರಿಂದಲೂ ಸರಿಯಾಗಿಯೇ ನಂಬಲಾಗುತ್ತದೆ.

ಭಾರತೀಯ ರಾಷ್ಟ್ರವಾದದಲ್ಲಿಯ ಇದೊಂದು ತತ್ತ್ವವು ಬಹಳೇ ಅವಿವೇಕದ್ದಾಗಿದೆ. ಮಿಕ್ಕ ವಿಷಯಗಳಲ್ಲಿ ಹೆಚ್ಚಾಗಿ ಪ್ರಗತಿ-ಪ್ರಿಯರಾದ ಆಧುನಿಕ ದೃಷ್ಟಿಯು ಬಲ್ಲಿದರು ಕೂಡ, ನಮ್ಮಲ್ಲಿಯ ರೂಢವಾಗಿ ಬಂದ ಅನಿಷ್ಟ-ಅರಿಷ್ಟಕರವಾದ ಸಾಮಾಜಿಕ ಸಂಪ್ರ-ದಾಯಗಳ ಮತ್ತು ಸಂಸ್ಥೆಗಳ ಕುರಿತು ಟೀಕೆಮಾಡಲು ಸಾಹಸಪಡುವಾಗೆಲ್ಲ, ತಾವು ಪಾಶ್ಚಾತ್ಯಸಂಸ್ಕೃತಿಯನ್ನು ಹೊಗಳುವ ಪಂಥದವರಲ್ಲವೆಂದು ಸಾರಿ ಹೇಳಿಯೇ ತಮ್ಮ ಭಾಷಣವನ್ನು ಮುಂದುವರಿಸಲು ಮರೆಯುವುದಿಲ್ಲ! ಹೀಗೆ ತೇಲಿಹೋಗುವ ತಿಳಿಗೇಡಿಯಾದ ಘೋಷಣೆಗಳನ್ನು ಮಾಡುವಾಗ ಆಗುವ ಸೋಜಿಗವೇನೆಂದರೆ: ಒಂದೆಡೆಗೆ ಪಾಶ್ಚಾತ್ಯ ಸಂಸ್ಕೃತಿಯನ್ನು ತೆಗಳುತ್ತ ತೆಗಳುತ್ತ, ಇನ್ನೊಂದೆಡೆಗೆ ಈ ಬಲ್ಲವರು, ಅದೇ ಸಂಸ್ಕೃತಿಯೊಂದಿಗೆ ಹೊಂದಿ ಇರುವ ರಾಜಕೀಯ ಸಂಸ್ಥೆಗಳನ್ನೂ ಸಾಮಾಜಿಕ ಸಂಪ್ರದಾಯಗಳನ್ನೂ ಇಲ್ಲಿಯೂ ಪ್ರಚಾರದಲ್ಲಿ ತರಬೇಕೆಂದು ಪ್ರತಿಪಾದಿಸು-

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ತ್ತಿರುತ್ತಾರೆ. 'ನಮ್ಮ ಸಮಾಜದಲ್ಲಿ ಕೀಲು ತಪ್ಪಿದೆ; ಕೇಡು ಬಂದಿದೆ. ಅದಕ್ಕೆ ಸರಿಯಾದ ನಿವಾರಣೆಯು ಪರಂಪರಾಗತವಾದ ಸನಾತನೀಯ ವ್ಯವಸ್ಥೆಯಲ್ಲಿಲ್ಲ' ಎಂಬುದನ್ನು ಇವರು ಒಪ್ಪುವರು. 'ಪಾಶ್ಚಾತ್ಯಸಂಸ್ಕೃತಿ' ಎಂದು ಕರೆಯಲ್ಪಡುವ ಜೀವನ-ವ್ಯವಸ್ಥೆಯು,ಸಾವಿರಾರು ವರ್ಷಗಳಿಂದ ಬೆಳೆದು ಬಂದ ಮಾನವೀಯ ಪ್ರಗತಿಯ ಪರಿಣಾಮವೆಂಬುದನ್ನು ಅಲ್ಲಗಳೆಯುವುದು ಇವರಿಗೆ ಬಿಗಿಯಾಗಿದೆ. ಆದರೂ, ದುರ್ದೈವವೇನೆಂದರೆ, ಹಳತನ್ನು ಕಡಿದುಕೊಂಡು ಹೊಸತಿನೊಂದಿಗೆ ಕೂಡಿಕೊಳ್ಳುವ ಎದೆಗಾರಿಕೆ ಇವರಲ್ಲಿಲ್ಲ.

ಇಂತಹ ಅವಸ್ಥೆಯಲ್ಲಿ ನಮ್ಮ ಈ ಸುಧಾರಣಾಪ್ರಿಯರಾದ ಸದ್ಗೃಹಸ್ಥರಿಗೆ ಒಂದು 'ಮುರಾರೀಪಂಥವು' ಸೂಚಿಸಿದೆ. ಪಾಶ್ಚಾತ್ಯ ಮತ್ತು ಭಾರತೀಯಸಂಸ್ಕೃತಿಗಳ "ಸಮನ್ವಯ"ವನ್ನು ಸಾಧಿಸಬೇಕೆಂಬುದು ಇವರ ಪ್ರೀತಿಯ ಸಿದ್ಧಾಂತ. ಈ ಸಮನ್ವಯವು ನಮ್ಮ ಭಾರತದ "ಆಧ್ಯಾತ್ಮಿಕ ಪ್ರತಿಭೆ"ಯ ತಳಹದಿಯ ಮೇಲೆ ಆಗಬೇಕಾಗಿದೆಯಂತೆ. ತಮೋಗುಣಿಯಾದ ಆಸುರೀ-ಪಾಶ್ಚಿಮಾತ್ಯ-ಸಂಸ್ಕೃತಿಯನ್ನು, ನಮ್ಮ ಪುರಾತನ ಪುಣ್ಯಭೂಮಿಯಾದ ಭಾರತದಲ್ಲಿ ತರುವುದಕ್ಕೆ ಮೊದಲು, ಅದಕ್ಕೊಂದು ಪ್ರಾಯಶ್ಚಿತ್ತವಿಧಿಯಾಗಬೇಕು! ಪಾಶ್ಚಾತ್ಯ ಸಂಸ್ಕೃತಿಯು ನಮಗೆ ಬೇಕು; ಆದರೆ ಅದು ನಮ್ಮ ಧರ್ಮಕ್ಷೇತ್ರದ ಪರಿಶುದ್ಧ ಪ್ರಭಾವದಲ್ಲಿ ಉಳಿಯಬೇಕು. ಆದರೆ ಇದೆಲ್ಲ ಶಬ್ದಾಡಂಬರದ ಅರ್ಥವೇನೆಂಬುದನ್ನು ಈ ಜಾಣರಿಗೆ ಅರಿತುಕೊಳ್ಳಲು ಅವಸರವಿಲ್ಲ. ಸಮನ್ವಯವಾಗಬೇಕೆಂದು ಇವರು ಎನ್ನುವರು ನಿಜ; ಆದರೆ ಈ ತಾತ್ತ್ವಿಕ ಜಾಣತನದ ಹೊಗೆಯ ಹಿಂದೆ, ಇವರು ಬಚ್ಚಿಡಬಯಸುವ ವಾಸ್ತವಿಕ ಘಟನೆಯೇನು? ಅಪೇಕ್ಷೆ ಯಾವುದು? ಅದೊಂದು ಅಶಕ್ಯ ಸಂಗತಿಯು. ಭೂತಕಾಲವನ್ನು ಭವಿಷ್ಯಕಾಲದೊಂದಿಗೆ ಬೆರೆಯಿಸುವ ಚಮತ್ಕಾರವಿದು; ಹಲವು ಶತಮಾನಗಳಿಂದ ವಿಂಗಡಿಸಲ್ಪಟ್ಟ, ಒಂದರಿಂದೊಂದು ತೀರ ಬೇರೆಯಾದ, ಎರಡು ವಿಚಾರ—ಜೀವನ ಪದ್ಧತಿಗಳನ್ನು ಹೊಂದಿಸಿ ಹೆಣೆಯುವ ಇಂದ್ರಜಾಲವು; ಮುನ್ನಡೆಯನ್ನು ಹಿನ್ನಡೆಯೊಂದಿಗೆ ಜೋಡಿಸಿ ಕಾಣಿಸುವ ಕಣ್ಕಟ್ಟಿನ ಜಂಭವಿದು!

ಸಮನ್ವಯವೆಂದರೇನು? ತಾತ್ತ್ವಿಕವಾಗಿ ಸಮನ್ವಯದ ಅರ್ಥವು ಹೀಗಿದೆ: ಮೊದಲಿದ್ದ ಭಾವಾತ್ಮಕವಾದ (Positive) ಸತ್ತೆಯನ್ನು ಅಲ್ಲಗಳೆದು ಅಳಿಸಿ, ಅದರೊಳಗಿಂದ ಹೊಸದೊಂದು ಭಾವಾತ್ಮಕವಾದ ಸತ್ತೆಯು ಹೊರಬೀಳುವ ಕ್ರಿಯೆಯೇ ಸಮನ್ವಯ. ಉದಾಹರಣಾರ್ಥವಾಗಿ ರಾಸಾಯನಿಕಮಿಶ್ರಣ. ಎರಡು ಇಲ್ಲವೆ ಹಲವು ದ್ರವ್ಯಗಳಿಂದ ಕೂಡಿ ಸಂಭವಿಸಿದ್ದರೂ, ಅವೆಲ್ಲವುಗಳಿಂದ ತೀರ ಭಿನ್ನವಾದ— ಅವೆಲ್ಲವುಗಳಲ್ಲಿ ಇರದಂತಹ ತೀರ ಹೊಸ ಗುಣಧರ್ಮಗಳುಳ್ಳ ದ್ರವ್ಯವೊಂದು ಉಂಟಾಗುವುದೇ ಸಮನ್ವಯ (synthesis)ದ ಮುಖ್ಯ ಲಕ್ಷಣವು. ಅತ್ತಿತ್ತ, ಆಡುತ್ತ, ಹಾಡುತ್ತ ಹಾಡುತ್ತ ಹೆಣೆಯಲು ಅದೇನು ಕೋಲಾಟದ 'ಗೋಪು' ಅಲ್ಲ, ಕುರುಳುಗೂದಲಿನ ಜಡೆಯಲ್ಲ! ಪಾಶ್ಚಾತ್ಯ ಸಂಸ್ಕೃತಿಯಲ್ಲಿಯೆ ಬೆಳೆದುಬಂದ ಎರಡು ಘಟನಾವಲಿಗಳಲ್ಲಿ ಘರ್ಷಣವಾಗಿ, ಅವುಗಳ ಪ್ರತಿಕ್ರಿಯೆಗಳೊಳಗಿಂದ ಹೊಸತೊಂದು ವ್ಯವಸ್ಥೆಯು ಉಂಟಾಗಬಹುದು; ಆದರೆ ಭಾರತೀಯ ಸಂಸ್ಕೃತಿಯು, ನೆಲೆಗೊಂಡ ಅವಸ್ಥೆ-ವ್ಯವಸ್ಥೆಗಳನ್ನು ವಿಸಾರಿ ಮುಂದುವರಿದು ಇಂದಿನ ಸ್ಥಾನ-ಮಾನದಲ್ಲಿ ನಿಂತ ಆ ಸಂಸ್ಕೃತಿಯನ್ನು, ನಮ್ಮ ಸಂಸ್ಕೃತಿಯೊಂದಿಗೆ ಸಮನ್ವಯಿಸುವುದೆಂದರೆ, ತರುಣನು ತಿರುಗಿ ತರಳನಾಗಲು ಹೆಣಗಿದಷ್ಟೇ—ಹಕ್ಕಿಯು ಮರಳಿ ತತ್ತಿಯಾಗಲು ಇಲ್ಲವೆ ಹಕ್ಕಿ-ತತ್ತಿಗಳನ್ನು ಕೂಡಿಸಿ ಹೊಸ ವಸ್ತುವೊಂದನ್ನು ಉಂಟುಮಾಡಲು ಹವಣಿಸಿದಷ್ಟೇ ಹಾಸ್ಯಾಸ್ಪದ ಸಂಗತಿಯಲ್ಲವೇ? ಇರಲಿ, ಈ ಸಮನ್ವಯದ ವಿವರಗಳನ್ನು ಕುರಿತು ಮುಂದೆ ವಿಚಾರಿಸೋಣ.

"ಪಾಶ್ಚಾತ್ಯ ಸಂಸ್ಕೃತಿಯು ಜಡವಾದಿ," "ಪೌರ್ವಾತ್ಯ ಸಂಸ್ಕೃತಿಯು ಆಧ್ಯಾತ್ಮಿಕ" ಇವೆರಡು ಕೂಗುಗಳು ನಮ್ಮ ರಾಷ್ಟ್ರೀಯತೆಯ ಪಲ್ಲವಿಗಳಾಗಿವೆ. ಎಲ್ಲರೂ ಎಲ್ಲೆಡೆಗಳಲ್ಲಿಯೂ ಇವನ್ನು ಉಚ್ಚರಿಸುವವರೇ; ಆದರೆ ಇವೆರಡು ತತ್ತ್ವಗಳನ್ನು (?) ಸಿದ್ಧಮಾಡುವ ಗೊಡವೆಗೆ ಯಾರೂ ಹೋಗುವುದಿಲ್ಲ. ಹಲವು ಮುಖಗಳಿಂದ ಹಲವು ಲೇಖನಗಳಿಂದ ಇವೆರಡು ಮಾತುಗಳನ್ನೂ

ಪ್ರತಿಯೊಂದು ಶ್ರುತಿಯಲ್ಲಿ ಮಂತ್ರ-ಸೂತ್ರದಂತೆ ಸಾರುವುದರಿಂದ, ಅವು ಸತ್ಯವೆಂತಲೂ ಸ್ವತಃಸಿದ್ಧವೆಂತಲೂ ನಂಬುವುದು ಹೆಚ್ಚಾಗುತ್ತದೆ. ಅದ್ದರಿಂದ ಈ ವಿಷಯದ ಪರಾಮರ್ಷ ಮಾಡಬೇಕಾಗಿದೆ.

ಈ ರೀತಿಯಾಗಿ ಪೂರ್ವ-ಪಶ್ಚಿಮ ದಿಕ್ಕುಗಳಂತೆ ಸಂಸ್ಕೃತಿಯಲ್ಲಿ ಭೇದವನ್ನು ಕಲ್ಪಿಸಿ, ಅವು ಅಚ್ಚಳಿಯದಂತೆ ಇರುವಂತಹವೆಂದು ಸಾರುವವರು ನಮ್ಮವರು ಮಾತ್ರವಲ್ಲವೆಂಬುದನ್ನು ನೆನಪಿಡಬೇಕು. "ಪೂರ್ವವದು ಪೂರ್ವವೇ ; ಪಶ್ಚಿಮವೇ ಪಶ್ಚಿಮವು ; ಇರ್ವರೂ ಕೂಡುವುದು ಅಶಕ್ಯವರ್ಣನೆಯು !" ಎಂದು ಕಿಪ್ಲಿಂಗ್ ಕವಿಯು ಇಂಗ್ಲಂಡಿನಲ್ಲಿ ಸಾರಿದ್ದನು. ಇದು ಸಾಮ್ರಾಜ್ಯವಾದದ ಸೊಲ್ಲು. "ನೀನು ವಾನರ, ವನಚರ! ಇಕ್ಷ್ವಾಕುವಂಶಕ್ಕೆ ಬ್ರಹ್ಮನಿಂದ ಪೃಥ್ವಿಯು ಅರಸೊತ್ತಿಗೆ ಹಿಂದೆಯೆ ಸಿಕ್ಕಿದೆ" ಎಂದು ವಾಲೀವಧವನ್ನು ರಾಮಚಂದ್ರನು ಸಮರ್ಥಿಸಿದಂದಿನಿಂದಲೂ, ಗೆಲ್ಲುವ ಮತ್ತು ಸೋಲುವ ಜನರಲ್ಲಿ, ಸ್ಥಾನ-ಮಾನಗಳಲ್ಲಿ, ಇಂತಹ ಅಭ್ಯಂತರವನ್ನು ಕಲ್ಪಿಸಿ ಸ್ಥಿರಪಡಿಸುವ ಪ್ರವೃತ್ತಿಯು ನಡೆದುಬಂದಿದೆ. ಸಾಮ್ರಾಜ್ಯವಾದಿಗಳು ಈ ತರದ ಭೇದವನ್ನು ತಮ್ಮ ಸ್ವಾರ್ಥ-ಸಾಧನೆಗಾಗಿ ಒಪ್ಪಿಕೊಂಡಿದ್ದರೆ, ನಾವು ಅದೇ ಭೇದವನ್ನು ಬೇರೊಂದು ದೃಷ್ಟಿಯಿಂದ ಒಪ್ಪಿಕೊಳ್ಳುವೆವು. ಭೌತಿಕವಿಜಯಗಳನ್ನು ಪಡೆಕೊಳ್ಳಲಾರದಂತಹರಾಗಿ, ರಾಜ್ಯ-ಭೋಜ್ಯಗಳನ್ನು ಕಳೆದುಕೊಂಡಂತಹರಾಗಿ, ಇತಿಹಾಸದಲ್ಲಿ ಹಿಂದುಳಿದುದರ ಫಲವಾಗಿ, ನಾವು ನಮ್ಮನ್ನು ಗೆಲ್ಲುವವರಿಗಿಂತಲೂ ಆಧ್ಯಾತ್ಮಿಕತೆಯಲ್ಲಿ ಮಿಗಿಲಾಗಿರುವೆವೆಂದು ಸಮಾಧಾನಪಟ್ಟುಕೊಳ್ಳುವುದು ನಮ್ಮ ನೊಂದ ಅಹಂಕಾರಕ್ಕೆ ಪಥ್ಯವೆನಿಸುವುದು. ಯಾವ ದೃಷ್ಟಿಯಿಂದಾದರೇನು? ಈ ಭೇದವನ್ನು ನಾವೂ ಒಪ್ಪಿಕೊಳ್ಳುವುದು, ಸಾಮ್ರಾಜ್ಯಶಾಲಿಗಳಿಗೂ ಆಕ್ರಮಣಶೀಲರಿಗೂ ಒಪ್ಪಿಗೆಯೆ ಸರಿ. 'ಬಿಳಿಯ ಜನಾಂಗವು ಮೇಲು ; ಆಳಲು ಹುಟ್ಟಿದವರು. ಬಣ್ಣದ ಜನಾಂಗಗಳು ಕೀಳು, ಆಳಾಗಲು ಬಂದವರು,' ಎಂಬ ಮಾತೂ, 'ನಾವು ಬಿಳಿಯರಿಗಿಂತ ಮಿಗಿ; ಅವರು ಮ್ಲೇಚ್ಛರು! ನಾವು ಆತ್ಮನಿಗಾಗಿ ಪೃಥ್ವಿಯನ್ನೇ ತ್ಯಜಿಸುವವರು ; ಅವರು ಜಡವಾದಿಗಳು. (ಆತ್ಮವನ್ನು ಕಳಕೊಂಡು ಪೃಥ್ವಿಯನ್ನು ಗೆಲ್ಲಲು ಹೊರಟ ದಾರಿತಪ್ಪಿದ ದಡ್ಡರು!)' ಎಂಬ ನಮ್ಮ ಮಾತೂ — ಇವೆರಡೂ ಪರಿಣಾಮದಲ್ಲಿ ಒಂದೇ ಆಗಿವೆ. ಜಪಾನವೂ ಬಣ್ಣದ ರಾಷ್ಟ್ರವಾಗಿತ್ತು ; ಆದರೆ ಅದೀಗ ಪಾಶ್ಚಿಮಾತ್ಯ ಶಕ್ತಿಯಾಗಿದೆ. (ಜಪಾನವು ಅಮೇರಿಕೆಯ ಪಶ್ಚಿಮಕ್ಕಿದೆಯಲ್ಲವೇ?) ಆದುದರಿಂದ ಅದರ ಹಳದಿ ಬಣ್ಣವು ಕಪ್ಪು-ಕೆಂಪು ಬಣ್ಣಗಳಿಗಿಂತ ಬಿಳಿಯ ಬಣ್ಣಕ್ಕೆ ಹೆಚ್ಚು ಹತ್ತಿರವಾಯಿತು. ಆದರೆ ನಾವು ಭಾರತೀಯರು ಅವರಿಗೂ ಮೇಲು. ಈ ವರ್ಣಸಂಕರ ನಮಗೆ ಎಳ್ಳಷ್ಟೂ ಒಪ್ಪಿಗೆಯಿಲ್ಲ! ಇರಲಿ, ತಾತ್ಪರ್ಯವೇನೆಂದರೆ, ಒಂದೆಡೆಗೆ ರಾಷ್ಟ್ರೀಯತೆಗಾಗಿ ನಮ್ಮಲ್ಲಿಯ ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕೆಂದು ಯತ್ನಿಸುವ ನಮ್ಮ ಬಲ್ಲವರು ನಮ್ಮ ಸಂಸ್ಕೃತಿಯು ಪವಿತ್ರವೆಂದು ತಿಳಿದ ಮೂಲಕವೂ, ನಮ್ಮನ್ನು ಗೆಲ್ಲುವವರು ನಮ್ಮ ಪ್ರಕೃತಿಯು ಅಪವಿತ್ರವೆಂದು ತಿಳಿದ ಮೂಲಕವೂ ಒಂದೇ ಪರಿಣಾಮವಾಗಿದೆ. ಅದೆಂದರೆ, ಭಾರತೀಯ ಮತ್ತು ಪಾಶ್ಚಾತ್ಯಸಂಸ್ಕೃತಿಯಲ್ಲಿ ಅಸ್ಪೃಶ್ಯತೆಯು ಬೆಳೆದು ನಿಂತಿದೆ.

(೨) ನಮ್ಮ ಆಧ್ಯಾತ್ಮಿಕತೆಯು ವಿಶೇಷಪ್ರತಿಭೆಯೆ ?

ಇನ್ನು ಈ ಅಸ್ಪೃಶ್ಯತೆಯು ಇದೆಯೇ? ಅದೇ ಮುಖ್ಯಪ್ರಶ್ನೆ. ನಿಜವಾಗಿಯೂ ನೋಡಿದರೆ, ನಮ್ಮ ಸಂಸ್ಕೃತಿಯ ವಿಶೇಷಪ್ರತಿಭೆಯೆಂದು ಎಣಿಸಲ್ಪಡುವ ಆಧ್ಯಾತ್ಮಿಕತೆಯು—ಎಂದರೆ ಧಾರ್ಮಿಕಸ್ವರೂಪದ ವಿಚಾರಪದ್ಧತಿಯು, ನಮ್ಮದೇ ಆದ ಒಂದು ವೈಶಿಷ್ಟ್ಯವಲ್ಲ ; ಮಾನವ ಜನಾಂಗದ ಸಾಮಾಜಿಕ ವಿಕಾಸದ ಒಂದು ಮಟ್ಟದಲ್ಲಿ — ವಿಶೇಷವಾದ ಒಂದು ಅವಸ್ಥೆಯಲ್ಲಿ — ಈ ಆಧ್ಯಾತ್ಮಿಕತೆಯು, ಮನುಷ್ಯ ಸಂಸ್ಕೃತಿಯ ಒಂದು ಲಕ್ಷಣವಾಗಿ ಎಲ್ಲ ಕಡೆಯಲ್ಲಿಯೂ ಕಂಡುಬಂದದ್ದಿದೆ. ಭಾರತೀಯ ಜೀವನದ ಲಕ್ಷಣವು ಇಂತಹ ಆಧ್ಯಾತ್ಮಿಕತೆಯಾದರೆ, ಅದರ ಕಾರಣವು ಭಾರತವು ಜಗದ್-ವಿಲಕ್ಷಣವಾದ ಭೂಮಿಯಾದುದೆಂತಲ್ಲ ; ಭಾರತೀಯ ಜನಾಂಗದ ಸಾಮಾಜಿಕ ಬೆಳವಣಿಗೆಯು, ಇಂದಿನ ಹಲವು ಪಾಶ್ಚಾತ್ಯಜನಾಂಗಗಳು ಮೀರಿ ಮುಂದುವರಿದು ಬಂದ ಹಿಂದಿನ ಅಂತಹ ಒಂದು ಅವಸ್ಥೆಯಲ್ಲಿಯೇ ಉಳಿದಿದೆಯೆಂಬುದು. ಏಕೆಂದರೆ ಮನುಷ್ಯನ ಇರುವಿಕೆಯು ಆತನ ಅರಿವು–ಎನಿಸಿಕೆಗಳನ್ನು ಗೊತ್ತುಮಾಡುತ್ತದೆ. ವಿಚಾರಪದ್ಧತಿಯು ರೀತಿ-ರೂಪಗಳು, ಸಮಾಜರಚನೆಯಲ್ಲಿಯ ಸ್ಥಿತ್ಯಂತರಗಳಿಗೆ ಅನುಸಾರವಾಗಿ ಪಲ್ಲಟಿಸುತ್ತವೆ. ಆದುದರಿಂದ, ಯಾವುದೇ ಒಂದು ವಿಚಾರಪದ್ಧತಿಯು ಸನಾತನವಾಗಿ ಚಿರಂತನವಾಗಿ ಉಳಿಯಲಾರದು; ಅರ್ಥಾತ್ ಯಾವುದೊಂದು ವಿಚಾರಪದ್ಧತಿಯು, ಯಾವುದೇ ಜನಾಂಗದ ಅಚಲವಾದ ಲಕ್ಷಣವಾಗಲಾರದು.

ಇಂದು ಪಾಶ್ಚಾತ್ಯವೆಂದು ಎಣಿಸಲ್ಪಟ್ಟ ಸಂಸ್ಕೃತಿಗೆ ಒಳಪಟ್ಟ ರಾಷ್ಟ್ರಗಳು ಬಿಟ್ಟಿರುವ ಇಲ್ಲವೆ ಬದಲಿಸಿಕೊಂಡಿರುವ ಒಂದು ವಿಚಾರಪದ್ಧತಿಯನ್ನು ಭಾರತವು ಭದ್ರವಾಗಿ ಅವಚಿಕೊಂಡಿದೆಯೆಂದು ತೋರಿದರೆ, ಅಂತಹ ರಾಷ್ಟ್ರಗಳನ್ನು ನೀತಿಭ್ರಷ್ಟರೂ, ವಿಕೃತಸ್ವಭಾವದವರೂ, ಧಾರ್ಮಿಕವಿಚಾರಪದ್ಧತಿಯ ಪರಿಶುದ್ಧವಾದ ಪಾತಳಿಯ ಮೇಲೆಯೇ ತಡೆದುನಿಲ್ಲುವ ಸತ್ತ್ವವನ್ನು ಕಳೆದುಕೊಂಡು

"ಕಾಡುಕೋಣ" ದ ಗುರುತಿನ
ಕಾಗದವು
ಕನ್ನಡನಾಡಿನದು!
ಬರೆಯಲಿಕ್ಕೂ ಮುದ್ರಣಕ್ಕೂ ತಕ್ಕುದಾದುದು!
ಅಧಿಕೃತ ಪ್ರಸಾರಕರು : ಜಿ. ಕೆ. ಕೇಳಕರ
ಸ್ವದೇಶಿ ಪೇಪರ್ ಮಾರ್ಟ, ಧಾರವಾಡ.

ಅಧಃಪಾತ ಹೊಂದಿದವರೂ— ಎಂದೆಲ್ಲ ತಿಳಿದುಕೊಳ್ಳುವ ಕಾರಣ ಇಲ್ಲ. ಆದರಿಂದ ಇಷ್ಟೇ ಸಿದ್ಧವಾಗುತ್ತದೆ: ಅಂತಹ ಪಾಶ್ಚಿಮಾತ್ಯ ರಾಷ್ಟ್ರಗಳು, ಭಕ್ತಿ-ಶ್ರದ್ಧೆಗಳ ಭಾವನಾಮಯತೆಯ— ಬ್ರಹ್ಮಜ್ಞಾನದ ಭಾವುಕ ಕಲ್ಪನೆಗಳ ಲೋಕದಲ್ಲಿ ಬಡಿದಾಡುವುದಕ್ಕಿಂತಲೂ, ನಿಸರ್ಗದ ಶಕ್ತಿಗಳನ್ನು ಗೆಲ್ಲುವುದರಲ್ಲಿ ಹೆಚ್ಚು ಹೆಚ್ಚು ಪ್ರಗತಿಯನ್ನು ಪಡೆದು, ತಮ್ಮ ನಾಗರಿಕತೆಯನ್ನು ನಿರ್ಮಿಸ ಬಲ್ಲವರಾಗುವಷ್ಟು ಮಟ್ಟಕ್ಕೆ ಬಂದು ಮುಟ್ಟಿದ್ದರಿಂದ, ಬುದ್ಧಿಯ ಪ್ರತ್ಯಕ್ಷಜ್ಞಾನದ ಮತ್ತು ಪ್ರಾಯೋಗಿಕ ವಿಜ್ಞಾನದ ದೃಷ್ಟಿಯಿಂದಲೇ ವಿಚಾರಮಾಡಲು ಸಮರ್ಥವಾಗಿರುತ್ತವೆ; ಆದರಿಂದ ಇಷ್ಟೇ ಸ್ಪಷ್ಟವಾಗುತ್ತದೆ:—ಜೀವನದ ಸ್ಥಿತಿಗಳು ಬೇರೆಯಾದರೆ, ಮನುಷ್ಯನ ವಿಚಾರಲೋಕದಲ್ಲಿ ಕ್ರಾಂತಿಯು ಅಪರಿಹಾರ್ಯವಾಗಿ ಒದಗಿ ಬರುತ್ತದೆ. ಅಂತಹ ಸ್ಥಿತ್ಯಂತರಗಳು ಭಾರತೀಯ ಜೀವನದಲ್ಲಿ ಇನ್ನೂ ಒದಗಿಲ್ಲ; ಹಾಗೆ ಒದಗಿದ್ದರೆ, ಭಾರತೀಯ ಜನಾಂಗವೂ ಹೆಚ್ಚು ಕಡಿಮೆ ಪಾಶ್ಚಾತ್ಯ ಜನಾಂಗಗಳಂತೆಯೆ ವಿಚಾರಿಸುತ್ತಿತ್ತು. ಮುನ್ನೂರು ವರ್ಷಗಳ ಹಿಂದೆ ಅವು ಹಾಗೆಯೆ ಕೂಡಿ ನಡೆದಿದ್ದುವು. ಆಗ ಭಾರತದಂತೆ ಯುರೋಪವೂ ಧರ್ಮಪ್ರಧಾನವಾಗಿತ್ತು. ವಿದ್ಯಾರಣ್ಯ-ರಾಮದಾಸ-ಮಹಾತ್ಮಾ ಗಾಂಧಿಯಂತಹವರ ಆಶೀರ್ವಾದದ ನೆರಳಲ್ಲಿ, ಸಾಮಾಜಿಕ ರಾಜಕೀಯ ಮಾರ್ಪಾಡುಗಳು ಆಗುವಂತೆ, ಅಲ್ಲಿಯೂ ಧರ್ಮಗುರುಗಳ ಪರಮಾರ್ಥ ಜೀವನದ ಅಧ್ಯಾತ್ಮಭಾವನೆಯ ಛಾಯೆಯಲ್ಲಿ ಜನಾಂಗದ ಆಗು-ಹೋಗುಗಳು ಸಾಗಿದ್ದುವು.

ಆದರೆ ಕಳೆದ ಎರಡು ಶತಮಾನಗಳಲ್ಲಿ, ಪಾಶ್ಚಿಮಾತ್ಯ ಜನಾಂಗಗಳು ತಮ್ಮ ಜೀವನದ ಪರಿಸ್ಥಿತಿಯಲ್ಲಿ ಪ್ರಚಂಡ ಪರಿವರ್ತನಗಳನ್ನು ಅನುಭವಿಸಿದುವು. ಅಂದಿನಿಂದ ಪೂರ್ವ-ಪಶ್ಚಿಮಗಳ ನಡುವೆ ಕೊರಕಲು ಬಿತ್ತು, ಮತ್ತು ಮನೋಧರ್ಮದಲ್ಲಿಯೂ ತಾತ್ತ್ವಿಕ ಭೂಮಿಕೆ (Ideology)ಯಲ್ಲಿಯೂ ಪಾಶ್ಚಾತ್ಯರಾಷ್ಟ್ರಗಳ ಸಾಂಸ್ಕೃತಿಕ ಜೀವನವು ಭಾರತೀಯ ಜೀವನದಿಂದ ಬೇರೆಯಾಗಿ ದೂರವಾಗಿ ನಡೆಯುತ್ತ ಸಾಗಿತು. ಅವರು ಅನುಭವಿಸಿದ ಭೌತಿಕ-ಪರಿಸ್ಥಿತಿಯ ಪರಿವರ್ತನೆಗಳಿಗೆ ನಮ್ಮ ಭಾರತವೂ ಒಳಪಡಲಿ, ಆಗ ನಮ್ಮ ಮತ್ತು ಅವರೊಳಗಿನ ಕೊರಕಲು ತುಂಬಿಹೋಗುವುದು; ಪೂರ್ವ-ಪಶ್ಚಿಮಗಳ ನಡುವಿನ ಅಂತರವು ಕೂಡಲೆ ಅಂತರ್ಧಾನವಾಗುವುದು.

ಆದರೆ ನಮ್ಮ ಬಹುಸಂಖ್ಯಾಕ ರಾಷ್ಟ್ರವಾದಿಗಳಿಗೆ ಇದೇ ಅಬ್ರಹ್ಮಣ್ಯವಾಗಿದೆ. "ಇಂತಹ ಪಾಶ್ಚಾತ್ಯರ ಅನುಕರಣವೇ ನಮಗೆ ಬೇಡ!" ಎಂದು ಅವರು ಹೋಬು ಗುದ್ದಿ ಗದ್ದರಿಸುವರು! ಪಾಶ್ಚಾತ್ಯರು ಮಾಡಿದಂತೆ ತಾವು ಮಾಡುವುದೆಂದರೆ, ಅವರು ಮಾಡಿದುದರಿಂದಲೇ ನಾವು ಹಾಗೆ ಮಾಡುವೆವೆಂದು ಅರ್ಥ ಮಾಡುವುದು ಮಂಕುತನವಲ್ಲವೇ? ಜೀವನದ ದಾರಿಯಲ್ಲಿ ಕಾಲಕ್ರಮದಲ್ಲಿ ಅವರು ಮುಂದಾದ ಮಾತ್ರಕ್ಕೆ, ಅದೇ ದಾರಿಯನ್ನು ತುಳಿಯುವುದು ಅಗತ್ಯವಿದ್ದರೂ ಅದು ಅನುಕರಣವೆಂದು ಅಂಜಿ ಹಿಂಜರಿಯುವುದು ಅಜ್ಞಾನವಲ್ಲವೇ? ಇದರಲ್ಲಿ ಮತ್ತೊಂದು ಸೋಜಿಗವಿದೆ. ಅವರ ಅನುಕರಣ ನಮಗೆ ಬೇಡವೆಂದು ಹೇಳಿ ನಮ್ಮ ಮುಖಂಡರು, ಭಾರತೀಯ ಸಂಸ್ಕೃತಿಯ ಆಧ್ಯಾತ್ಮಿಕ ಶ್ರೇಷ್ಠತೆಯನ್ನು ಸಿದ್ಧಮಾಡಿದೆವೆಂದು ತಿಳಿಯುವರೇನೋ ನಿಜ; ಆದರೆ ಇದರಿಂದ ಇನ್ನೊಂದು ಪ್ರಶ್ನೆಯು ಏಳುತ್ತದೆ. 'ಭಾರತವು ಪಾಶ್ಚಾತ್ಯ ರಾಷ್ಟ್ರಗಳ ಯಂತ್ರಯೋಜನೆ, ವಿಜ್ಞಾನ ವೈಭವಗಳ ಭೋಗಪ್ರಧಾನವಾದ ರಾಜಸರಾಜಮಾರ್ಗವನ್ನು ಹಿಡಿಯಲಿಲ್ಲ; ನಮ್ಮದು ಸಾತ್ತ್ವಿಕವಾದ ತ್ಯಾಗಪ್ರಧಾನವಾದ ಆತ್ಮೋನ್ನತಿಯ ಕಾಲುದಾರಿ. ಹೀಗೆ ನಾವು ಭಾರತೀಯರು ಆಯ್ದುಕೊಂಡ ಜೀವನದ ರೀತಿಯೇ ನಮ್ಮಲ್ಲಿಯ ಮೂಲಭೂತವಾದ ಪಾರಮಾರ್ಥಿಕ ಒಲವನ್ನು— ಆಧ್ಯಾತ್ಮಿಕ ಪ್ರೇರಣೆಯನ್ನು ತೋರಿಸುತ್ತದೆ' ಎಂದು ಹೇಳುವ ಮೊದಲು ಒಂದು ಪ್ರಶ್ನೆಗೆ ಉತ್ತರ ಕೊಡಬೇಕು. ಭಾರತವು ಇತರ ರಾಷ್ಟ್ರಗಳ ರಾಜಮಾರ್ಗವನ್ನು ತುಳಿಯದೆ ಇದ್ದದ್ದು ಸ್ವಂತ ಇಚ್ಛೆಯಿಂದಲೇ? ಅಂತಹ ರಾಷ್ಟ್ರಗಳ ಮಾರ್ಗವನ್ನೇ ಯಥಾಶಕ್ತಿ ಅನುಸರಿಸಬೇಕೆಂಬ ತನ್ನ ಒಲವನ್ನು ಭಾರತವು ಹತ್ತಿಕ್ಕುತ್ತಿದೆಯೇ? ವಿರೋಧಿಸುತ್ತಿದೆಯೇ? ಭಾರತೀಯ ಇತಿಹಾಸವನ್ನು ಸ್ವಲ್ಪವಾದರೂ ಓದಿದವರು-ಐತಿಹಾಸಿಕ ಸಂಗತಿಗಳನ್ನು ತುಸುವಾದರೂ ಲೆಕ್ಕಿಸುವವರು—ಅದೇಕೆ ಇಂದಿನ ಪರಿಸ್ಥಿತಿಯನ್ನು ಗಮನಿಸುವವರು—ಇವೆರಡೂ ಪ್ರಶ್ನೆಗಳಿಗೆ "ಇಲ್ಲ" ಎಂಬ ಒಂದೇ ಉತ್ತರ ಕೊಡಬೇಕಾಗುವುದು. ಭಾರತದಲ್ಲಿ ಆಸೇತು ಹಿಮಾಚಲವಾಗಿ ಹಬ್ಬಿದ ನಮ್ಮ ದೊಡ್ಡ ಜನಾಂಗವು, ಅಡಿಗಡಿಗೆ ಹೊರರಾಜ್ಯಗಳನ್ನು ಹೊಸ ಭಾಗ್ಯ-ಭೋಗಗಳನ್ನು ಗೆಲ್ಲಲು ಗಳಿಸಲು ಮತ್ತೂ ಉಳಿಸಿ ನಿಲ್ಲಿಸಲು ಮಾಡಿದ ಪ್ರಯತ್ನಗಳು ಇದಕ್ಕೆ ಪುಟಕೊಡುತ್ತವೆ. ಸತ್ತೆ, ಸಂಪತ್ತು, ಮತ್ತು ಜೀವನದ ಸುಖ-ಸೌಕರ್ಯಗಳ ಸಂಸ್ಕೃತಿಯ ಸಲುವಾಗಿ, ನಮ್ಮ ಜನಾಂಗವು ಕಡಿಮೆ ಹೆಣಗಾಡಿಲ್ಲ; ಕಡಿಮೆ ಹೋರಾಡಿಲ್ಲ. ಆದರೆ ಇತಿಹಾಸದ ಶಕ್ತಿಗಳನ್ನರಿಯದೆ ಕೈಕೊಂಡ ಆ ಹೋರಾಟ-ಹೆಣಗಾಟಗಳು ಕೈಗೂಡಲಿಲ್ಲ. ಬಾಹ್ಯ ಪ್ರಪಂಚದಲ್ಲಿ ಅನುಭವಿಸಬೇಕಾದ ನಿರಾಶೆ, ನಿರ್ವೇದ ಮತ್ತು ನಿರ್ವೀರ್ಯಗಳ ಪರಿಣಾಮವಾಗಿ, ಮನಸ್ಸು ಅಂತರ್ಮುಖಿ-ಆಧ್ಯಾತ್ಮಿಕವಾಗಿ ತನ್ನ ಅಹಂಕಾರವನ್ನು ತಣಿಸಿಕೊಳ್ಳುವುದು ಸಹಜವು.—ಬಲವಾಗಿ ಪೇಚಾಡಿದರೂ ಕೊನೆಗೆ ನಿರಾಶೆಗೊಂಡ ನರಿಯು ಕೂಡ, ಬಾಯಿಗೆ ನಿಲುಕಲಾರದ ಹಣ್ಣುಗಳಿಗಾಗಿ ಉದಾಸೀನತೆಯನ್ನು ಕಾಣಿಸಲು ಹೋಗಿ ನಗೆಗೀಡಾಗುತ್ತದೆ. ಆದರೆ ಇಂತಹ ಮನೋವೃತ್ತಿಯು, ಬೆಳೆದು ಬಾಳಬೇಕೆಂಬ ಹಂಬಲದಲ್ಲಿ ಚೇತರಿಸಿಕೊಳ್ಳುತ್ತಿರುವ ದೊಡ್ಡ ಜನಾಂಗಕ್ಕೆ ಒಪ್ಪುವುದಿಲ್ಲ. ಇಂತಹ ಅತ್ಯಂತ ಅಪಾಯಕರವಾದ ಆತ್ಮವಂಚನೆಯನ್ನು ಮಾಡಿಸಿಕೊಡುವುದು ಬಲ್ಲವರ ಅಪರಾಧವು—ಎಲ್ಲವರ ಅನರ್ಥವು!

Jayanti

ಅಂತರ್ವಾಣಿಗೆ:—

ಶ್ರೀ. ಬಿ. ಎಚ್. ಶ್ರೀಧರ ಬಿ.ಎ. (ಆನರ್ಸ್)

★

ಎಲ್ಲಿರುವೆ ಎಳನಗೆಯ ಗಾಡಿಕಾತಿಯೆ? ನಿನ್ನ
ಬಲ್ಲೆನೆಂಬರ ಕಾಣೆ, ಹುಡುಕಿ ಸೋತೆ ॥ ಪಲ್ಲ ॥

೧

ಸುಕುಮಾರತೆಯು ಮಾಡಿದ ಸುಕುಮಾರಿಯರು ಹರ್ಮ್ಯ-
ಧಾರಾಮಗಳಲಿ ಕೆಲೆದಾಡುತಿರಲು,
ಲತೆಗೆ ಕೋಮಲತೆಯನ್ನೊಲಿದು ಕಲಿಸುತ್ತಿರಲು—
ಶುಕವಾಗಿ ಹಾರಿದೆನು ಅವರೊಳೊಬ್ಬಳ ಕಂಡು
ಅಧರಬಿಂಬವ ತಿಂಬ ಬಯಕೆಯಿಂದ;
ಆದರಲ್ಲಿ ತಡೆದೆನು, ಅಧರ ನಿನ್ನದಲ್ಲ!

೨

ಎಲೆಯೆಲೆಯನರಸುತ್ತ ಕೊಳಲ ಹೊರಮ್ಮೆಯಲ್ಲಿ
ಬಳಿಹಿಡಿದು ಸಾರುತಿರೆ ದಾರಿಯೊಳಗೆ
ಕಂಚುದಲೆಯುವೇರುಂಜವ್ವನೆಯರ ಬಳಗ.
ಅಳಕಪ್ರತಾನಗಳ ನೇವರಿಸ ಬಗೆದೊಮ್ಮೆ
ಸುಳಿದೆ ಸುಯ್ಯನೆ ಮಂದಪವನನಾಗಿ;
ಆದರಲ್ಲಿ ತಡೆದೆನು, ಅಳಕ ನಿನ್ನದಲ್ಲ!

೩

ಹೊನಗಯ ಹುಡುಗಿಯರು ಹೂದೋಟವೊಂದರಲಿ
ಹುಬ್ಬನೇರಿಸಿ ಕುಳಿತು ನೋಡುತಿರಲು,
ಬಿಡದೆ ಝೇಂಕರಿಸಿದೆನು ಭೃಂಗರಾಜನಾಗಿ.
ಏನೆಂಬೆ, ತುಂಟಗ್ನೆಯೊಂದೆಸೆದ ಹೂಜೊಂಪ
ಮ್ಮೆಯ ಸೋಂಕಿತು, ನೋದವಾಡಿತೆನಗೆ.
ಆದರಲ್ಲಿ ತಡೆದೆನು, ಜೊಂಪ ನಿನ್ನದಲ್ಲ!

೪

ಊರಹನಿಹದ ಕೊಳದ ನಳದ ನೀರನು ಹೊತ್ತು
ನೀರೆಯರು ನಿರಿಹಿಡಿದು ಸಾಗುತಿರಲು,
ಒಡನೆ ಹೊಂಚಿ ಮಿಂಚಿದೆನು ಆ ಹಡೆಯ ಮೇಲೆ;
ತೊನೆದೊಮ್ಮೆ ಹುಲ್ಲೆಗಣ್ ಬಿಟ್ಟು ದಿಟ್ಟಿಸಿ ಮಿಂಚ-
ನಲ್ಲಗಳೆದಳು ಮುಗುದ ನೋಡಿಯಿಂದ;
ಆದರಲ್ಲಿ ತಡೆದೆನು, ನೋಟ ನಿನ್ನದಲ್ಲ!

೫

ಕಲಕಂಠವತಿಯರೊಂದಾಗಿ ಬಾಗಿಲ ಹೊರಗೆ
ಮಲೆತು ಸರಸಾಲಾಪಗೈಯುತಿರಲು,
ಸಾಲೆಯುಲಸಿಗರ ಬಗೆಗೆ ನಗೆಯಾಡುತಿರಲು—
ಬಿನದವುಕ್ಕಿತು, ಉಕ್ಕಲಡಗಿ ಉಲಿವವನಿದ್ದೆ
ಅಣಕವನು ಕೇಳ್ವ ಹೆಬ್ಬಯಕೆಯಿಂದ
ಆದರಲ್ಲಿ ತಡೆದೆನು, ದನಿಯು ನಿನ್ನದಲ್ಲ!

೬

ಪ್ರೇಯಸಿಯೆ ಪ್ರೇಮದರಸಿಯೆ ಪೇಳ ನೀನಾವ
ಮಾಯೆಯಲಿ ನಿಂದೆನ್ನ ಕುಣಿಸುತಿರುವೆ?
ಹೃದಯ ಬಾಯಾಗಿ ಮೊರೆಯಿಡುವುದೊಂದೆ ತಡವೆ!
ನಾಯಿಕೆಯೆ ಎಲ್ಲಿರುವೆ? ಮೆಯ್ದೋರು, ವಿರಹದುರಿ
ಸಾಯಸುಡುತಿದೆ ಓಡಿಬಾರ ನಲ್ಲೆ!
ನಿನ್ನ ಕರೆದು ಕರೆದಾಸತ್ತೆ ಕರುಣವಿಲ್ಲೆ?

ಚಂದ್ರಗ್ರಹ ಯಾತ್ರೆ

ಶ್ರೀ. ಎಚ್. ಕೆ. ನಾಗಭೂಷಣರಾವ್, ಜಾವಗಲ್ಲು

ಮಾನವನ ಆಶೆಗೆ ಅಂತವಿಲ್ಲ, ಪಾರವಿಲ್ಲ. ಭೂಮಿಯಲ್ಲಿ ಕಾಣಬಹುದಾಗಿದ್ದುದನ್ನೆಲ್ಲಾ ಕಂಡ ಆ ಆಶೆ, ಅಜ್ಞಾತವಾದ ಗ್ರಹಲೋಕಗಳನ್ನು ಕಾಣಲು ಹವಣಿಸುತ್ತಲಿದೆ. ವಿಜ್ಞಾನವು ಅದಕ್ಕೆ ಬೆಂಬಲ ಕೊಡಲು, ಹೊಸ ಹೊಸ ಪ್ರಯೋಗಗಳನ್ನು ಎಡೆಬಿಡದೆ ನಡೆಯಿಸಿರುತ್ತದೆ.

ಅಮೇರಿಕೆಯಲ್ಲಿಯ ಒಬ್ಬ ಸುಗಂಧವ್ಯಾಪಾರಿಯು, ತನ್ನ ಸಾಮಗ್ರಿಗಳನ್ನು (ಸುಗಂಧದ್ರವ್ಯಗಳನ್ನು) 'ಕ್ಷಯರೋಗ ನಿವಾರಕ ಪದಾರ್ಥ'ಗಳೆಂದು ಜಾಹೀರಾತು ಮಾಡಿ ಮಾರುತ್ತಿದ್ದನಂತೆ. ಒಂದು ಬಾರಿ ಯಾರೋ ಇದು ಸುಳ್ಳೆಂದು ಆವನ ಮೇಲೆ ಖಟ್ಲೆ ನಡೆಯಿಸಿದರಂತೆ. ನ್ಯಾಯಾಸ್ಥಾನದವರು ವಿಚಾರಿಸಿದಾಗ ಆವನು " ಸುಗಂಧ ದ್ರವ್ಯಗಳನ್ನು ಉಪಯೋಗಿಸುವವರನ್ನು ಅನೇಕರು ಪ್ರೀತಿಸುವರು. ಆ ಪ್ರೇಮಿಗಳಿಗಾಗಿ ದೀರ್ಘಕಾಲ ಬಾಳಲು ರೋಗಿಯು ತನ್ನ ಜೀವನಸೂತ್ರಗಳನ್ನು ಬದಲಿಸುವನು; ದೀರ್ಘಕಾಲ ಬಾಳಲು ಯತ್ನಿಸುವನು, " ಎಂದು ವಾದಿಸಿ, ಖಟ್ಲೆಯಲ್ಲಿ ಜಯಪಡೆದನಂತೆ.

ಅಂತೂ ಹೀಗೆ ದೀರ್ಘಕಾಲ ಬದುಕಬೇಕೆಂಬ ಆಕಾಂಕ್ಷೆ ಹುಟ್ಟಬೇಕು; ಅದರಿಂದ ಜೀವನದ ರೀತಿ-ನೀತಿಗಳು ಮಾರ್ಪಾಡಾಗಬೇಕು. ಈ ಆಕಾಂಕ್ಷೆಯು ಅನೇಕ ರೀತಿಯಿಂದ ಹುಟ್ಟುವುದು. ಅವುಗಳಲ್ಲಿ ಈಗ ನಾವು ಓದಬೇಕಾಗಿರುವ ವಿಷಯವೂ ಒಂದು. ಇದನ್ನು ಓದಿದವರೆಲ್ಲರ ಮನಸ್ಸಿನಲ್ಲೂ " ನಾವೂ ಸಹ ಆ ವರೆಗೆ ಬದುಕಿರಬೇಕು; ಆ ಸುವರ್ಣಸಂಧಿಯನ್ನು ನೋಡಬೇಕು ! " ಎಂಬಾಶೆಯು ಹುಟ್ಟುವುದು ಖಂಡಿತ.

ಈಗ ನಾನು ಹೇಳ ಹೊರಟಿರುವುದು ಜ್ಯೋತಿಷ್ಯಕ್ಕೆ ಸಂಬಂಧಿಸಿದ ವಿಷಯವೊಂದನ್ನು ಕುರಿತು. ಹಾಗೆಂದರೆ ಫಲಜ್ಯೋತಿಷ್ಯವಲ್ಲ. 'ಜ್ಯೋತಿಷ್ಯ' ಎಂಬ ಪದದ ಸರಿಯಾದ ಅರ್ಥವನ್ನು ತಿಳಿದರೆ ಆಗ ಎಲ್ಲವೂ ಸರಿಹೋಗುವುದು. 'ಜ್ಯೋತಿ' ಎಂದರೆ ಆಕಾಶದಲ್ಲಿ ಮಿನುಗುವ ಲಕ್ಷಾಂತರ ತಾರಾ-ಗ್ರಹಗಳನ್ನೂ ಅವುಗಳ ಚಲನ-ವಲನ ಪರಿಣಾಮಗಳನ್ನೂ ನಿರೀಕ್ಷಿಸುವ ಶಾಸ್ತ್ರಕ್ಕೆ 'ಜ್ಯೋತಿಷ್ಯ' ಎಂದು ಹೆಸರು. ಈ ಶಾಸ್ತ್ರವು ಬಹಳ ಪುರಾತನ ಕಾಲದಲ್ಲಿ ಭಾರತದಲ್ಲಿ ಅಭಿವೃದ್ಧಿ ಸ್ಥಿತಿಯಲ್ಲಿತ್ತು. ಮಾನವನು ಈ ತಾರಾ-ಗ್ರಹಗಳ ಮುಂದಿನ ಚಲನ-ವಲನ-ಪರಿಣಾಮಗಳನ್ನು ಗಣಿತಬಲದಿಂದ ಇಂದೆಯೆ ಕಂಡುಹಿಡಿಯಲು ಸಮರ್ಥನಾದಾಗ ಆಶ್ಚರ್ಯಪಟ್ಟು, ತನ್ನ ಶಕ್ತಿಗೆ ತಾನೇ ಹಿಗ್ಗಿ, ಅಡ್ಡಮಾರ್ಗವೊಂದನ್ನು ಹಿಡಿದನು. ಅದೆಂದರೆ 'ಇಂತಹ ಅದ್ಭುತ ಸಾಮರ್ಥ್ಯವುಳ್ಳ ತಾರಾ-ಗ್ರಹಗಳ ಭವಿಷ್ಯವನ್ನು ನಿರ್ಧರಿಸಲು ಶಕ್ತನಾದ ತಾನು, ತನ್ನ ಭವಿಷ್ಯವನ್ನು ಕೂಡ ನಿರ್ಧರಿಸಿಕೊಳ್ಳಬಹುದಲ್ಲವೆ?' ಎಂಬ ಭ್ರಾಂತಿಗೆ ಬಲಿಯಾದನು. ಆದರ ಉಗ್ರಕರಾಳಸ್ವರೂಪವೇ ಇಂದಿನ ಫಲಜ್ಯೋತಿಷ್ಯ.

ಇಂದು ಯಾವ ವಾರ-ದಿನ-ಮಾಸ-ವರ್ಷ ಅಥವಾ ವಿಶೇಷ, ಪತ್ರಿಕೆಗಳನ್ನೇ ನೋಡಲಿ, ಅವುಗಳಲ್ಲಿ ಈ ಫಲಜ್ಯೋತಿಷ್ಯಕ್ಕೆ ಕೆಲವು ಪುಟಗಳು ಮೀಸಲು. ಕೊಳ್ಳುವವರಂತೂ (ಜಯಂತಿಯಂತಹ) ಭವಿಷ್ಯವಿಲ್ಲದ ಪತ್ರಿಕೆಗಳ ವಿಷಯದಲ್ಲಿ ಸಾಮಾನ್ಯವಾಗಿ ಉದಾಸೀನರು. ಭವಿಷ್ಯವಿರುವ ಪತ್ರಿಕೆಗಳು ಕಾಸಿನ ಬೆಲೆ ಬಾಳದಿದ್ದರೂ ಅವು ಬಿಸಿದೋಸೆಯಂತೆ ಖರ್ಚಾಗುವುವು. ಮುಖಪತ್ರದ ಮೇಲೊಬ್ಬ ಸಿನಿಮಾ ನಟಿ, ಒಳಗೆ ಅದು ಹೊರಡುವ ಕಾಲಕ್ಕನುಸರಿಸಿ ಭವಿಷ್ಯ—ಇದು ಇಂದಿನ ಕನ್ನಡ ನಾಡಿನ ಪತ್ರಿಕಾವೈಶಿಷ್ಟ್ಯ. ಪಾಪ ! ಈ ದುರ್ದಶೆಗೆ ಏನೆನ್ನಬೇಕೋ ತಿಳಿಯದು. ವಿಶ್ವದ ಬಹುಮುಖ್ಯ ಭಾಗವೂ, ಬುದ್ಧಿಗೆ ಆಹಾರವೂ, ವೈಚಿತ್ರ್ಯತಮವೂ, ಕ್ಷಣ ಕ್ಷಣಕ್ಕೂ ಕುತೂಹಲವನ್ನು ಹೆಚ್ಚಿಸತಕ್ಕುದೂ ಆಗಿರುವ ಜ್ಯೋತಿಷ್ಯಶಾಸ್ತ್ರವನ್ನು ಅಭ್ಯಾಸಿಸಬೇಕಾಗಿರುವ ಬುದ್ಧಿಯೂ,ಪಾಂಡಿತ್ಯವೂ ಈರೀತಿ ಗಾಳಿಗುದ್ದಿ ಕೈನೋಯಿಸಿಕೊಳ್ಳುವುದರಲ್ಲಿ—ಮುಗಿಲಲ್ಲಿ ಮನೆ ಕಟ್ಟುವುದರಲ್ಲಿ—ಬಿಸಿಲ್‌ಗುದುರೆಯನ್ನು ಬೆನ್ನಟ್ಟುವುದರಲ್ಲಿ ವ್ಯಯವಾಗುತ್ತಿದೆಯಲ್ಲಾ! ಜೋತಿಷ್ಯಶಾಸ್ತ್ರದಲ್ಲಿ ಪ್ರಪಂಚದ ಎಲ್ಲಾ ಜನಾಂಗದವರಗಿಂತಲೂ ಪ್ರಥಮವಾಗಿ ನಿಪುಣರೆನಿಸಿಕೊಂಡಿದ್ದ ಭಾರತೀಯ ಮಹಾಪುರುಷರ ವಂಶಜರೆಂದು ಹೇಳಿಕೊಳ್ಳಲು ಕೂಡಾ ನಾಚಿಕೆ ಬರುವಂತಾಗಿದೆಯಲ್ಲಾ ನಮ್ಮ ಸ್ಥಿತಿ !

ಹೋಗಲಿ, ಈ ಫಲಜ್ಯೋತಿಷ್ಯದಿಂದ ಸಮಾಜಕ್ಕೆ ಉಪಕಾರವೇನಾದರೂ ಇದೆಯೇ? ಈ ಜ್ಯೋತಿಷ್ಯದಿಂದ 'ತೂಕಡಿಸುತ್ತಿದ್ದವನಿಗೆ ಹಾಸಿಗೆ ಹಾಕಿಕೊಟ್ಟಂತಾಗಿದೆ' ಮಾತ್ರ. ಒದಗುವ ಕಷ್ಟಗಳನ್ನು ಪರಿಹರಿಸಿಕೊಳ್ಳುವ ಉಪಾಯವನ್ನು ಹುಡುಕಬೇಕಾಗಿದ್ದ ಬುದ್ಧಿಯು ಸಹ "ತನ್ನ ರಾಶಿಭವಿಷ್ಯದಲ್ಲಿ ಹಾಗೆಯೇ ಇದೆ; ಎಲ್ಲವೂ ಕರ್ಮ, ಅದೃಷ್ಟ" ಎಂದು ಹೇಳಿ ಸುಮ್ಮನಾಗಿ ಬಿಡುವುದು. ಸಮಾಜದ ಮೇಲ್ಮೆಗಾಗಿ ವ್ಯಯವಾಗಬೇಕಾದ ಪತ್ರಿಕಾಪುಟಗಳು ಈ ರೀತಿ ವ್ಯಯವಾಗುವುವು. **ಅಲ್ಲ, ಪ್ರಪಂಚವನ್ನು ಚೆನ್ನಾಗಿ ಬಲ್ಲ ಪತ್ರಿಕಾಸಂಪಾದಕರುಗಳು ಸಹ** ಈ ರೀತಿ ಜನತೆಯನ್ನು **ಭ್ರಾಂತಿಗೊಳಿಸುತ್ತಿರುವುದಲ್ಲವೇ ಆಶ್ಚರ್ಯದ ಸಂಗತಿ**? ಇದನ್ನು ನೋಡಿದರೆ 'ಬೇಲಿಯೇ ಎದ್ದು **ಹೊಲಮೇಯುವುದು**' ಜ್ಞಾಪಕಕ್ಕೆ ಬರುವುದು. ಭವಿಷ್ಯದ ವಿಷಯವಾಗಿ ಪ್ರಶ್ನಿಸಿದಾಗ "ಅದು ಭ್ರಾಂತರ ಭವಿಷ್ಯ" ಎಂದು ಸಾರಿ, ಅದೇ ಅಸತ್ಯವನ್ನೇ ಯಾವ ಕಾರಣದಿಂದಲೋ ಬಿಗಿದಪ್ಪಿರುವ ಸಂಪಾದಕರುಗಳೂ ಇದ್ದಾರೆ. ಅದೂ ಹೋಗಲಿ, ಈ ಭವಿಷ್ಯದಲ್ಲಿ ತಥ್ಯವೇನಾದರೂ ಇದೆಯೆ? ಸ್ವಲ್ಪ ವಿವೇಚನಾಶಕ್ತಿಯನ್ನು ಉಪಯೋಗಿಸಿದರೆ ತಿಳಿಯುವುದು ಅದರ ಟೊಳ್ಳುತನ. ಆದುದರಿಂದ ನಾನು ವಿನಯಪೂರ್ವಕವಾಗಿ ಪತ್ರಿಕೆಗಳವರಿಗೆ ಬೇಡಿಕೊಳ್ಳುವುದೇನೆಂದರೆ "ಭವಿಷ್ಯಕ್ಕಾಗಿ ಮೀಸಲಾಗಿಟ್ಟಿರುವ ಪುಟಗಳನ್ನು ದಯೆಯಿಟ್ಟು ಬೇರೆಯಾವುದಾದರೂ ಸಾಮಾಜಿಕ, ವೈಜ್ಞಾನಿಕ, ರಾಜಕೀಯ ಅಥವಾ ರಚನಾತ್ಮಕ ಕಾರ್ಯಕ್ರಮ ಇತ್ಯಾದಿಗಳಿಗಾಗಿ ಉಪಯೋಗಿಸಿ, ಜನತೆಯ ತಿಳಿವಿನ ಮಟ್ಟವನ್ನು ಹೆಚ್ಚಿಸಿರಿ"....ಎಂದು. ಮತ್ತು ಜ್ಯೋತಿಷಿಗಳಲ್ಲಿ ಬೇಡುವುದೇನೆಂದರೆ "ಬೇರೆ ಬೇರೆ ದೇಶಗಳ ಖಗೋಳಶಾಸ್ತ್ರಜ್ಞರಂತೆ ತಾವು ಸಹ ಹೊಸ ಹೊಸ ವಿಷಯಗಳನ್ನು ಸಂಶೋಧಿಸಿ, ಭಾರತಕ್ಕೆ ಕೀರ್ತಿ ತನ್ನಿರಿ' ಎಂದು.

ಈಗ ಪ್ರಸ್ತಾಪಿಸಹೊರಟಿರುವುದು ಅಮೇರಿಕೆಯವರು ಪರಿಶೋಧಿಸುತ್ತಿರುವ ಹೊಸವಿಷಯಗಳಲ್ಲೊಂದನ್ನು. ನಮ್ಮ ಈ ಭೂಮಿಗೆ ಅತ್ಯಂತ ಸಮೀಪದಲ್ಲಿರುವ ಗ್ರಹವೆಂದರೆ ಚಂದ್ರ. ಅದು ನಮ್ಮಿಂದ ನಿಷ್ಕೃಷ್ಟವಾಗಿ ೨೩೮೮೫೭ ಮೈಲಿ ದೂರದಲ್ಲಿದೆ ಎಂದರೆ ನಾವು ಪ್ರಯಾಣ ಮಾಡುವ ಮೋಟಾರೊಂದರಲ್ಲಿ, ಗಂಟೆಗೆ ೧೫ ಮೈಲಿಯಂತೆ ಅಹೋರಾತ್ರಿ ಪ್ರಯಾಣಮಾಡಿದರೆ, ೬೬೩ ದಿನ ಅಥವಾ ೧ ವರ್ಷ ೧೦ ತಿಂಗಳ್ಲಿ ಸೇರಬಹುದು. . ಆ ಚಂದ್ರಗ್ರಹವನ್ನು. ಚಂದ್ರನ ಹುಟ್ಟಿನ ವಿಷಯವಾಗಿ ಒಂದೊಂದು ಪುರಾಣವೂ ತನ್ನದೇ ಆದ ಒಂದೊಂದು ಕತೆಯನ್ನು ಹೇಳುತ್ತದೆ. ಆದರೆ ವೈಜ್ಞಾನಿಕ ಪ್ರಯೋಗಪರೀಕ್ಷೆಗಳೆದುರು ಅವೆಲ್ಲಾ ಬರೀ ಜೊಳ್ಳು. ವಿಜ್ಞಾನ ಸಮ್ಮತವಾದ ವಿಷಯವೆಂದರೆ 'ಒಂದಾನೊಂದು ಕಾಲದಲ್ಲಿ, ಭೂಮಿಯಿಂದ ಸಿಡಿದು ಹೋದ ತುಂಡು ಚಂದ್ರ'. ಆದರೂ ಬಾಹ್ಯಲಕ್ಷಣಗಳಲ್ಲಿ ಭೂಮಿಗೂ ಚಂದ್ರನಿಗೂ ಎಷ್ಟೋ ವ್ಯತ್ಯಾಸವಿದೆ. ಅವನ್ನೆಲ್ಲಾ ದೂರದರ್ಶಕ ಯಂತ್ರದಲ್ಲಿ ನೋಡಬಹುದು.

ರಾತ್ರಿಯ ಸಮಯ ಬೆಳುದಿಂಗಳಿನಲ್ಲಿ ಚಂದ್ರನನ್ನು ನೋಡಲು ಎಷ್ಟು ಆನಂದ? ಅಂತಹ ಚಂದ್ರನ ಮೇಲೆ ಹೋಗಿ ನಿಲ್ಲುವ ಸುಯೋಗವೊದಗಿದರೆ ನಮಗೆ ಇನ್ನೆಷ್ಟು ಆನಂದವಾಗಲಿಕ್ಕಿಲ್ಲ? ಹಾಗೆ ಚಂದ್ರನ ಬಳಿಗೆ ಹೋಗಲು ಮಾನವನು ಬಹಳ ಹಿಂದಿನಿಂದಲೂ ಪ್ರಯತ್ನಗಳನ್ನು ನಡೆಯಿಸಿದ್ದಾನೆ. ಈ ಪ್ರಯತ್ನದಲ್ಲಿ ಲಕ್ಷಾಂತರ ಜನರು ಪ್ರಾಣವನ್ನು ಸಹ ತೆತ್ತಿದ್ದಾರೆ. ಕಾಲಕಾಲಕ್ಕೆ ಸಾಧನಗಳನ್ನೂ ಯೋಜನೆ(Plan) ಗಳನ್ನೂ ಬದಲಾಯಿಸಿದ್ದಾರೆ. ಅವುಗಳಲ್ಲಿ ಫ್ರಾನ್ಸಿನ **ಡಾನ್‌ವಿಲ್ಲೆ** (Donville) ಪ್ರಯೋಗಶಾಲೆಯು ಹೆಸರಾದುದು. **ಪ್ರೊಫೆಸರ್ ಲ್ಯೂಸಿನ್ ರುಡಾಕ್ಸ್** (Lucien Rudaux) ಎಂಬವರು ಆ ಪ್ರಯೋಗ ಶಾಲೆಯವರು. ಅವರು ಚಂದ್ರನ ವಿಷಯವಾಗಿ ಅನೇಕ ಸಂಗತಿಗಳನ್ನು ಪರಿಶೋಧಿಸಿದ್ದಾರೆ. ಚಂದ್ರನಲ್ಲಿಗೆ ಪ್ರಯಾಣಮಾಡಲು ಅತ್ಯುತ್ತಮವಾದ ಸಾಧನವೊಂದನ್ನು ಅವರು ಕಂಡುಹಿಡಿದರು. ಅದಕ್ಕೆ **ರಾಕೆಟ್** (Rocket) ಎನ್ನುವರು. ಈಗ ಅಮೇರಿಕೆಯ **ಫಿಲಡೆಲ್ಫಿಯಾ** ಎಂಬಲ್ಲಿರುವ **ಫ್ರಾಂಕ್ಲಿನ್ ಇನ್‌ಸ್ಟಿಟ್ಯೂಟ್**ನವರು ಆ ಪ್ರಯೋಗವನ್ನು ಮುಂದುವರಿಸುತ್ತಿರುವರು.

ಈಗ ವಾಯುವಿನಲ್ಲಿ ಸಂಚರಿಸುತ್ತಿರುವ ವಿಮಾನಗಳು ಚಂದ್ರಮಂಡಲದ ಪ್ರಯಾಣಕ್ಕೆ ನಿರುಪಯೋಗಿಗಳು; ಕಾರಣವೇನೆಂದರೆ ಅವುಗಳ ನಡಿಗೆಗೆ ಗಾಳಿಯೇ ಮುಖ್ಯ ಸಾಧನ. ಭೂಮಿಯಿಂದ ಸುಮಾರು ೧೦೦-೧೫೦ ಮೈಲಿಗಳ ವರೆಗೆ ಮಾತ್ರ ಗಾಳಿಯಿದೆ. ಅಲ್ಲಿಂದ ಮೇಲಕ್ಕೆ ಏನೂ ಇಲ್ಲ (Vacuum). ಸಾಧಾರಣವಾಗಿ ಇಂದು ೩೦೦೦೦ ಅಡಿ (೬ ಮೈಲಿ) ಮೇಲೆ ಹಾರಾಡುವ ವಿಮಾನಗಳ ಸಾರಥಿಗಳು, ತಮಗೆ ಗಾಳಿಯ ಅಭಾವದಿಂದ ಬಹಳ ತೊಂದರೆಯಾಗುವುದೆನ್ನುವರು. ಹೀಗಿರುವಾಗ ಸ್ವಲ್ಪ ಹೆಚ್ಚು ಕಡಿಮೆ ೨½ ಲಕ್ಷ ಮೈಲಿಗಳ ಪ್ರಯಾಣಕ್ಕೆ ಇಂತಹ ವಿಮಾನಗಳು ತೀರ ನಿರುಪಯೋಗಿಗಳೆಂಬುದನ್ನು ಹೇಳಲೇ ಬೇಕಾದುದಿಲ್ಲ. ಇನ್ನು ಆ ರಾಕೆಟ್ಟಿಗೆ ಉಪಯೋಗಿಸುವ ಶಕ್ತಿದಾಯಕ ವಸ್ತುವಾವುದೆಂಬುದನ್ನು ಯೋಚಿಸುವ: ೨½ ಲಕ್ಷ ಮೈಲಿಗಾಗುವಷ್ಟು ಇದ್ದಲು, ಪೆಟ್ರೋಲ್ ಅಥವಾ ನೀರನ್ನು ಇಲ್ಲಿಂದ ಅಲ್ಲಿಯವರೆಗೆ ಹೊಂದುವುದೆಂಬುದು ಅಸಾಧ್ಯವಾದ ಮಾತೇ ಸರಿ. ಈ ವಿಷಯವೇ ಈಗ ವಿಜ್ಞಾನಿಗಳ ಮೂಗನ್ನು ಹಿಡಿದಿರುವುದು. ಮಿಕ್ಕ ಎಲ್ಲ ಸಿದ್ಧತೆಗಳೂ

೫೦ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರದ ಗುಳಿಗೆ
ಬಾಟ್ಲಿಗೆ ೧ ರೂ.
ಎಲ್ಲ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧ.
ವಿಳಾಸ:—ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಮನೆಗೊಂದು ಅಂದ-ಚಂದದ ಒಡವೆ ಅವಶ್ಯವಲ್ಲವೆ?
ವಣಿವಾರಿಸಿಕೊಳ್ಳಲು ಹಿತವಾದ ಆಸನವು ಬೇಕಲ್ಲವೆ?

ಹುಬ್ಬಳ್ಳಿಯ
ಸದ್ಗುರು ಉದ್ಯೋಗ ಮಂದಿರ
ಇವರು
ತಯಾರಿಸಿದ

ಸುಂದರ ಆಕಾರದ
ಸುಲಭ ಬೆಲೆಯ

‘ಸುಮನ’

ಕುರ್ಚಿಯನ್ನು
ಉಪಯೋಗಿಸಿರಿ.



★

ಮನವೊಪ್ಪುವ ಕೆಲಸಕ್ಕಾಗಿ ಇಲ್ಲಿಯೆ ಬನ್ನಿರಿ!

ಕುರ್ಚಿ, ಮೇಜು, ಕಪಾಟು, ಬಾಕು,
ಟೀಪಾಯ್, ಸೋಫಾಸೆಟ್ಟುಗಳು —
ಇದೇಕೆ—
ಯಾವುದೆ ತರದ ಹೊಸ ಮಾದರಿಯ ಕಟ್ಟಿಗೆಯ
ಸಾಮಾನುಗಳನ್ನು ಶಾಸ್ತ್ರೀಯವಾಗಿ, ಯೋಗ್ಯ ಬೆಲೆಗೆ,
ತಯಾರಿಸಿ ಕೊಡುವೆವು.

★

ಕರ್ನಾಟಕದಲ್ಲಿ ಔದ್ಯೋಗಿಕಶಿಕ್ಷಣ ಕೊಡುವ ಆದ್ಯ ಸಂಸ್ಥೆ!

ಬಡಿಗತನದ

ಶಾಸ್ತ್ರೀಯ ಶಿಕ್ಷಣವು ನಮ್ಮಲ್ಲಿ ದೊರೆಯುವುದು
ವಿವರಗಳಿಗಾಗಿ ಬನ್ನಿರಿ, ಇಲ್ಲವೆ
ಬರೆಯಿರಿ.

ಶ್ರೀ ಸದ್ಗುರು ಉದ್ಯೋಗ ಮಂದಿರ,

ಸ್ಟೇಶನ್ ರೋಡ್,
ಹುಬ್ಬಳ್ಳಿ.

ಆಗಿವೆ. ವೇಗದ ವಿಷಯದಲ್ಲಿ ಯೋಚಿಸಬೇಕಾಗಿಯೇ ಇಲ್ಲ. ಈ ರಾಕೆಟ್ಟು ಗಂಟೆಗೆ ೧೦೦೦ ಮೈಲಿಯಂತೆ ಪ್ರಯಾಣ ಮಾಡುವುದೆಂಬುದನ್ನು ಪ್ರಯೋಗ ಪರೀಕ್ಷೆಗಳಿಂದ ಸಿದ್ಧಾಂತಗೊಳಿಸಿದ್ದಾರೆ. ಎಂದರೆ ಇಲ್ಲಿಂದ ಹೊರಟ ೧೦ ದಿನಗಳಲ್ಲಿ ಚಂದ್ರನನ್ನು ತಲ್ಪಬಹುದು. ಈ ರಾಕೆಟ್ಟು ಗಾಳಿಯಿರುವೆಡೆಗಿಂತಲೂ ವೇಗವಾಗಿ, ನಿರ್ವಿಘ್ನವಾಗಿ, ನಿರ್ವಾತ ಪ್ರದೇಶದಲ್ಲಿ ಪ್ರಯಾಣ ಮಾಡುವುದು. ಆದರೆ ಇಂಧನ(ಶಕ್ತಿದಾಯಕ)ದ್ದೇ ತೊಂದರೆ. ಆ ತೊಂದರೆಯನ್ನು ಬಗೆಹರಿಸಿಕೊಳ್ಳಲು ವಿಜ್ಞಾನಿಗಳು, ಇನ್ನು ೯೨ ವರ್ಷಗಳ ಅವಧಿಯನ್ನು ಕೊಟ್ಟುಕೊಂಡಿದ್ದಾರೆ. ಈಗಾಗಲೇ ಅಂತಹ ಇಂಧನವೊಂದನ್ನು ಕಂಡುಹಿಡಿದಿದ್ದಾರೆ. ಅದನ್ನು ಕ್ರಮವಾಗಿ ವಿನಿಯೋಗಿಸುವ ವಿಧಾನ ಮಾತ್ರ ಕರಗತವಾಗಿಲ್ಲ. ಆ ಶಕ್ತಿಯನ್ನು ಪರಮಾಣುಶಕ್ತಿ (Atomic Power)ಎನ್ನುವರು. *

ಅದೆಂದರೆ ಈ ಜಗತ್ತಿನಲ್ಲಿರುವ ಸಕಲವಸ್ತುಗಳೂ ಪರಮಾಣುಗಳಿಂದಲೆ ಆಗಿವೆ. (ಈ ವಿಷಯವು ಸಹ ಭಾರತೀಯರಿಗೆ ಶತಮಾನಗಳ ಹಿಂದೆಯೆ ಗೊತ್ತಿತ್ತು.) ಈ ಪರಮಾಣುಗಳು ಹೇಗೆ ಆಗಿವೆ?—ಅದೇ ಈ ವರೆಗೆ ತಿಳಿಯದ ವಿಷಯವಾಗಿತ್ತು. ಪರಮಾಣುವನ್ನು ಭೇದಿಸಲು ಸಾಧ್ಯವಾಗಿರಲಿಲ್ಲ. ಈಗ ಬೃಹದ್ಯಂತ್ರವೊಂದರ ಸಹಾಯದಿಂದ ("ಗುಬ್ಬಿಯೆದುರು ಬ್ರಹ್ಮಾಸ್ತ್ರವೇ?" ಎಂಬ ಗಾದೆಯನ್ನು ಇನ್ನು ಮುಂದೆ ಹಾಸ್ಯಕ್ಕಾಗಿ ಉಪಯೋಗಿಸುವಂತಿಲ್ಲ) ಈ ಪರಮಾಣುವನ್ನು ಸಹ ಒಡೆದಿರುತ್ತಾರೆ. ಇದು ಕ್ಷೀಣ ವಿದ್ಯುತ್ಕಣಗಳಿಂದ ರಚಿಸಲ್ಪಟ್ಟಿದೆಯೆಂಬುದನ್ನು ಕಂಡುಹಿಡಿದಿದ್ದಾರೆ. ಯಾವ ಪದಾರ್ಥದ ಪರಮಾಣುವೂ ಇದೇ ತತ್ತ್ವದಿಂದ ಕೂಡಿದೆ. ಆದರೆ ಈ ಪರಮಾಣುಗಳ ಶಕ್ತಿಯು ಸುಪ್ತಾವಸ್ಥೆಯಲ್ಲಿರುತ್ತವೆ. (ಅವು ಚೇತನಗೊಂಡರೆ ಈ ಭೂಮಿಯು ಸಹ ಒಂದು ಸೂರ್ಯಗ್ರಹವಾಗುವುದು.) ಅವುಗಳನ್ನು ಕ್ರಮವಾಗಿ ಚೇತನಗೊಳಿಸಿ ನಮ್ಮಿಷ್ಟದಂತೆ ಉಪಯೋಗಿಸಲು ಸಾಧ್ಯವಾಗುವಂತೆ ಮಾಡಬಲ್ಲ ಮಾಧ್ಯಮಿಕ (Cataletic agent) ವೊಂದನ್ನು ಕಂಡುಹಿಡಿಯಲು ಈಗ ವಿಜ್ಞಾನಿಗಳು ಪ್ರಯತ್ನಿಸುತ್ತಿದ್ದಾರೆ. ಯುರೇನಿಯಮ್ (Uranium) ಎಂಬ ಧಾತುವನ್ನು ಈ ಪರಮಾಣು ಶಕ್ತಿಗಾಗಿ ಉಪಯೋಗಿಸಬಹುದೆಂದು ಸಿದ್ಧಗೊಳಿಸಿದ್ದಾರೆ. ರಾತ್ತಲ (Pound) ಯುರೇನಿಯಮ್ಮಿನ ಪರಮಾಣು ಶಕ್ತಿಯು, ೩೦ ಲಕ್ಷ ರಾತ್ತಲ ಕಲ್ಲಿದ್ದಲಿಯ ಶಕ್ತಿಗೆ ಸಮನಾಗುವುದು. ಈ ರಾಕೆಟು ಅಸಾಧ್ಯವೇಗದಿಂದ ಹೋಗಿ, ಚಂದ್ರನ ಆಕರ್ಷಣ ಶಕ್ತಿಯಿಂದ ಚಂದ್ರನಿಗೆ ಡಿಕ್ಕಿ ಹೊಡೆಯದಂತೆ, ಸ್ವಯಂಪ್ರೇರಿತ ನಿಲುಗಡೆಯನ್ನು (Automatic Brake) ಉಪಯೋಗಿಸಿದ್ದಾರೆ. ಅವು ಭೂಮಿಯ ಆಕರ್ಷಣ ಶಕ್ತಿಯನ್ನು ದಾಟಿ, ಚಂದ್ರನ

* ಪರಮಾಣುಶಕ್ತಿಯ ವಿಷಯವನ್ನು ವಿವರವಾಗಿ ಚೆನ್ನಾಗಿ ತಿಳಿಯಲು ಅಪೇಕ್ಷಿಸುವವರು ದಯೆಯಿಟ್ಟು "ಮಿಂಚಿನ ಬಳ್ಳಿ—ಧಾರವಾಡ" ಅವರ "ಜ್ಞಾನೋಪಾಸನೆ" ಎಂಬ ಪುಸ್ತಕವನ್ನೋದಿರಿ. —ಲೇ.

ಆಕರ್ಷಣಶಕ್ತಿಗೆ ಹೆಚ್ಚು ಹೆಚ್ಚಾಗಿ ಒಳಪಟ್ಟಂತೆ ರಾಕೆಟಿನ ವೇಗವನ್ನು ತಗ್ಗಿಸುತ್ತ, ಕೊನೆಗೆ ಪೂರ್ತಿಯಾಗಿ ವೇಗವನ್ನು ನಾಶ ಮಾಡುವುವು.

ಚಂದ್ರಗ್ರಹ ಪರಿಶೋಧಕರ ಉಡುಪಿನ ವ್ಯವಸ್ಥೆಯೂ ಸಹ ವಿಚಿತ್ರವಾದದ್ದು. ಚಂದ್ರನಲ್ಲಿ ಗಾಳಿಯೇ ಇಲ್ಲವಾದುದರಿಂದ, ಇವರ ದೇಹದೊಳಗಿನ ಗಾಳಿಯ ಒತ್ತಡವನ್ನು ತಡೆಯಲು ಇವರ ದೇಹಕ್ಕೂ ಉಡುಪಿಗೂ ಮಧ್ಯೆ ಗಾಳಿ ಇರುವುದು. ಉಡುಪುಗಳಿಂದ ಗಾಳಿಯು ಹೊರಕ್ಕೆ ಹೋಗದಂತೆ ಅದನ್ನು ಚೆನ್ನಾಗಿ ಮೊಹರು ಮಾಡುವರು. ಬೆನ್ನಿನ ಮೇಲೆ ಉಸುರಿನ ಚೀಲಗಳು ಮೊಹರುಮಾಡಲ್ಪಟ್ಟಿರುವುವು. ಅವುಗಳ ಸಹಾಯದಿಂದ ಇವರು ಉಸಿರಾಡಿಸುವರು. ಉಡುಪಿನ ಒಳಗಡೆ ಹವೆಯನ್ನು ವ್ಯತ್ಯಾಸಗೊಳಿಸುವ ಸಾಧನವಿರುವುದು. ಚಂದ್ರನ ಆಕರ್ಷಣ ಶಕ್ತಿಯು ಭೂಮಿಯ ಆಕರ್ಷಣ ಶಕ್ತಿಯ ಆರರಲ್ಲಿ ಒಂದು ಪಾಲು ಮಾತ್ರ. ಎಂದರೆ ಇಲ್ಲಿ ೧೨೦ ರಾತ್ಲು ತೂಗುವ ಪದಾರ್ಥವು ಅಲ್ಲಿ ಬರೀ ೨೦ ರಾತ್ಲು ತೂಗುವುದು. ಇಲ್ಲಿ ೩ ಮಣ ಭಾರ ಹೊರಬಲ್ಲ ಮನುಷ್ಯನು ಅಲ್ಲಿ ೧೮ ಮಣ ಭಾರ ಹೊರಬಲ್ಲನು. ಆದುದರಿಂದ ಈ ಸಾಧನವನ್ನೆಲ್ಲಾ (ಉಡುಪಿನೊಂದಿಗೆ) ಹೊರಲು ಆ ಪರಿಶೋಧಕರು ಶ್ರಮಪಡುವುದಿಲ್ಲ. ಈ ಪರಿಶೋಧಕರು ಹೋಗಿ ಇಳಿಯಲು ಒಂದು ಪ್ರದೇಶವನ್ನು ಸಹ ಆಗಲೇ ಚಂದ್ರನ ಮೇಲೆ ಗುರುತಿಸಿದ್ದಾರೆ. ಅದನ್ನು "ಫ್ರಾಂಕ್ಲಿನ್ ಕ್ರೇಟರ್' ಎಂದು ಕರೆದಿದ್ದಾರೆ.

ಚಂದ್ರನ ಮೇಲೆ ಅನೇಕ ವರ್ತುಳಾಕಾರದ ಪರ್ವತಗಳಿವೆ. ಇವುಗಳಲ್ಲಿ ಕೆಲವು ೧೫೦೦೦ ಅಡಿ ಎತ್ತರದ ವರೆಗೂ ಇವೆ. ಕೆಲವರ ಮಧ್ಯದಲ್ಲಿ ಬಿಂದುವಿನಂತೆ ಒಂದೊಂದು ಗುಡ್ಡವಿದೆ. ಇವುಗಳ ಉತ್ಪತ್ತಿಯ ವಿಷಯವಾಗಿ ಭಿನ್ನಾಭಿಪ್ರಾಯಗಳಿದ್ದರೂ ಬಹುಮತವು 'ಇವು ಅಚೇತನ ಜ್ವಾಲಾಮುಖಿಗಳು' ಎಂಬ ಕಡೆಗಿದೆ. ಈಚೀಚೆಯ ಪ್ರಯೋಗವು ಸಹ ಅದನ್ನೇ ಸಮರ್ಥಿಸುತ್ತಲಿದೆ. ಚಂದ್ರನ ಮೇಲೆ ವಾತಾವರಣವಿಲ್ಲವಾದುದರಿಂದ ಅಲ್ಲಿ ಆಕಾಶವಿಲ್ಲ, ಮೋಡವಿಲ್ಲ. ಸೂರ್ಯನ ಬಿಸಿಲು ಬಿದ್ದಾಗ ಅಲ್ಲಿಯ ಕಾವು ೨೦೦°-೩೦೦° ಡಿಗ್ರಿಗಳವರೆಗೂ ಏರುವುದು—೧೨೦°—೧೫೦° ಡಿಗ್ರಿ ಇಳಿಯುವುದು. ಇಷ್ಟು ಭಾರಿ ವ್ಯತ್ಯಾಸವಾಗಲು ಕಾಲವು ಸಹ ಹೆಚ್ಚು ಬೇಕಿಲ್ಲ. ೧-೨ ಗಂಟೆಗಳಲ್ಲಿಯೆ ಇಷ್ಟು ವ್ಯತ್ಯಾಸವಾಗುವುದು. ಚಂದ್ರನ ಸುತ್ತಲೂ ಆಕಾಶ, ಮೋಡ ಯಾವುದೂ ಇಲ್ಲದುದರಿಂದ, ಅಲ್ಲಿಂದ ಆಕಾಶದೊಳಗಿನ ಅದ್ಭುತಗಳನ್ನು ಇಲ್ಲಿಗಿಂತಲೂ ಸ್ಪಷ್ಟವಾಗಿ ಕಾಣಬಹುದು. ಅದಕ್ಕಾಗಿ ವಿಜ್ಞಾನಿಗಳು ಚಂದ್ರನಲ್ಲಿಗೆ ಹೋಗಲು ತವಕಿಸುತ್ತಿರುವರು. ಹಿಂದೆ ಹೇಳಿದಂತೆ ವಿಜ್ಞಾನಿಗಳು ಚಂದ್ರಲೋಕ ಪ್ರವಾಸಕ್ಕೆ ೯೨ ವರುಷಗಳ ಅವಧಿಯನ್ನೇ ಕೊಟ್ಟುಕೊಳ್ಳಲು ಕಾರಣವೊಂದಿದೆ. ಅದೆಂದರೆ ಕ್ರಿ. ಶ. ೨೦೩೩ನೆಯ ಇಸವಿ ಎಪ್ರಿಲ್ ೧೪ ನೆಯ ತಾ. ಶನಿವಾರ ರಾತ್ರಿ ೧೦.೦೭ ಘಂಟೆಗೆ, ಚಂದ್ರಗ್ರಹಣವು ಹಿಡಿದು ೩.೪೨ ಗಂಟೆಗೆ ಮುಕ್ತಾಯವಾಗುವುದು. ಭೂಮಿಯ ಮೇಲಿರುವವರಿಗೆ ಚಂದ್ರಗ್ರಹಣವಾದರೆ, ಅದು ಚಂದ್ರನ ಮೇಲಿರುವವರಿಗೆ ಸೂರ್ಯಗ್ರಹಣವಾಗುವುದು. ಎಂತಹ ಚಮತ್ಕಾರವಿದು ? ಇಡೀ ಜ್ಯೋತಿಷ್ಯವೇ ತಲೆ ಕೆಳಗಾಗುವ ದಿನವದು. ಸೂರ್ಯಗ್ರಹಣವು ಈ ವರೆಗೆ ಸಾಮಾನ್ಯವಾಗಿ ೭ ನಿಮಿಷಕ್ಕಿಂತಲೂ ಹೆಚ್ಚಿಗೆ ಹಿಡಿದಿಲ್ಲ. ಮಾನವನು ಸೂರ್ಯಗ್ರಹಣವನ್ನು ಪರೀಕ್ಷಿಸಲು ತೊಡಗಿ ಇಂದಿಗೆ ಸುಮಾರು ೪-೫ ಶತಮಾನಗಳಾದರೂ, ಅಂದಿನಿಂದ ನಿರೀಕ್ಷಿಸಿದ ಎಲ್ಲಾ ಕಾಲಗಳ ಮೊತ್ತವು ಬರೀ ೨ ಗಂಟೆ; ಆದರೆ ಅಂದು ಆ ಸುದಿನದಲ್ಲಿ (೧೪-೪-೨೦೩೩) ಚಂದ್ರನ ಮೇಲಿರುವವರು ಅಖಂಡವಾಗಿ ೨ ಗಂಟೆ ೪೨ ನಿಮಿಷ ಸೂರ್ಯಗ್ರಹಣವನ್ನು ನೋಡುವರು. ಮನುಷ್ಯನು ೪೦೦-೫೦೦ ವರ್ಷ ಪ್ರಯತ್ನಿಸಿ ಕಂಡುದನ್ನೆಲ್ಲಾ—ಅದಕ್ಕಿಂತಲೂ ಹೆಚ್ಚನ್ನೇ—ಅಂದು ಒಂದೇ ದಿನದಲ್ಲಿ ಕಾಣುವರು. ಜೊತೆಗೆ ಭೂಮಿಯಲ್ಲಿಯಂತೆ ವಾತಾವರಣದ, ಮೋಡದ, ಆಕಾಶದ ತೊಂದರೆಯಿಲ್ಲ. ಗ್ರಹಣಕಾಲದಲ್ಲಿ ಸೂರ್ಯನ ಬೆಳಕು ಕಡಿಮೆ. ಆಗ ಸೂರ್ಯನನ್ನು ಪರೀಕ್ಷಿಸುವುದು ಸುಲಭ. ಆದುದರಿಂದ ಅವರು ಅಂದು ಸೂರ್ಯನನ್ನು ಚೆನ್ನಾಗಿ ಪರೀಕ್ಷಿಸುವರು. ಭೂಗರ್ಭಶಾಸ್ತ್ರಜ್ಞರಾದವರು ಚಂದ್ರನನ್ನು ಅಲ್ಲಿ ಪರೀಕ್ಷಿಸುವರು.

ಈ ಪ್ರಯಾಣಕ್ಕೆ ಈಗಿನಿಂದಲೆ ಅಸಾಧ್ಯಸಿದ್ಧತೆಗಳು ನಡೆಯುತ್ತಿವೆ. ಪ್ರಯಾಣಿಕರು ಇಲ್ಲಿಂದ (೪-೪-೨೦೩೩) ೧೦ ದಿನ ಮೊದಲೇ, ಚಂದ್ರನು ೧೪-೪-೨೦೩೩ನೆಯ ದಿನ ಯಾವ ಸ್ಥಾನಕ್ಕೆ ಬರುವನೋ ಆ ಸ್ಥಾನದ ಕಡೆಗೆ ನೇರವಾಗಿ ಹೊರಡುವರು. ಗ್ರಹಣದ ದಿನ ಸರಿಯಾಗಿ ಅಲ್ಲಿಗೆ ಹೋಗುವರು. ಒಟ್ಟು ಪ್ರಯಾಣವು ೨೨-೨೩ ದಿನಗಳದ್ದಾದರೂ ಆಗಬಹುದು. ಆಹಾರದ ವಿಷಯದಲ್ಲಂತೂ ಭಯಪಡಬೇಕಾದದ್ದೇ ಇಲ್ಲ. ಇಂದೇ ಒಂದು ಸಣ್ಣ ಗುಳಿಗೆ ನುಂಗಿದರೆ ಒಂದು ದಿನದ ಆಹಾರವೇ ಆಗುವುದು. ೧೪೯೨ನೆಯ ಇಸವಿಯಲ್ಲಿ, ಕೊಲಂಬಸ್ಸನಿಗೆ ಅಮೆರಿಕಾ ಖಂಡವನ್ನು ಕಂಡುಹಿಡಿಯುವ ಮೊದಲು, ಅದರ ವಿಷಯವು ಅವನಿಗೆ ಎಷ್ಟು ಗೊತ್ತಿತ್ತೋ ಅದಕ್ಕಿಂತ ಸಾವಿರಾರು ಪಾಲು ಹೆಚ್ಚಿಗೆ ವಿಷಯವನ್ನು ಇಂದು ವಿಜ್ಞಾನಿಗಳು ಚಂದ್ರನ ವಿಷಯವಾಗಿ ನಿಶ್ಚಯವಾಗಿ ತಿಳಿದಿರುವರು. ಅವರ ಪ್ರವಾಸವು ಯಶಸ್ವಿಯಾಗುವುದು ಖಂಡಿತ.

ಚಂದ್ರಲೋಕದಿಂದ ಹಿಂದಿರುಗಿದವರು ಅರುಹುವ ವಾರ್ತೆಯನ್ನು ಕೇಳಲು ನಾವೆಲ್ಲರೂ ಅಂದಿನವರೆಗೆ ಒದುಕಲೂ ಪ್ರಯತ್ನಿಸೋಣ.

ವಾಚಕರಿಗೆ ಈ ವಿಷಯದಲ್ಲಿ ಏನಾದರೂ ಅನುಮಾನಗಳಿದ್ದರೆ, ದಯೆಯಿಟ್ಟು ಜಯಂತಿ ಕಾರ್ಯಾಲಯಕ್ಕೆ ಬರೆದರೆ, ಅವುಗಳನ್ನು ಸಾಧ್ಯವಿದ್ದಮಟ್ಟಿಗೂ ಪರಿಹರಿಸಲು ಸಿದ್ಧನಿರುತ್ತೇನೆ.

ಲಢಾಯಿಯಲ್ಲಿ ಲೆಕ್ಕಣಿಕೆ

★

★

ಅರ್ಥಾತ್
? ? ?

(ಒಂದು ಲಘುಪ್ರಬಂಧ)

★

ಇದುವರೆಗಿನ ನಮ್ಮ ಸಾಹಿತ್ಯಿಕರ ದೃಷ್ಟಿ ಆಕಾಶ-ಪಾತಾಳಗಳ ಕಡೆಗೇ ಇದ್ದುದರಿಂದ, ಭೂಲೋಕ ಅವರ ಕಣ್ಣಿಗೆ ಕಾಣುತ್ತಿರಲೇ ಇಲ್ಲ. ಇಂದು ವಿಮಾನಗಳು ಆಕಾಶವನ್ನು ಮುಚ್ಚಿಬಿಟ್ಟಿವೆ, ಮುಳುಗಿದ ಹಡಗಗಳು ಪಾತಾಳವನ್ನು ತುಂಬಿಬಿಟ್ಟಿವೆ; ಆದುದರಿಂದಲೇ ಇಂದು ಸಾಹಿತ್ಯಿಕರ ಲೆಕ್ಕಣಿಕೆ ಬೇರೆಯ ಮಾರ್ಗವನ್ನು ಹಿಡಿಯಬೇಕಾಗಿದೆ.

★

ಅರ್ಥಾತ್— ಏನೆಂದು ಹೇಳೋಣ? ಒಂದಕ್ಕೆ ಅರ್ಥವಾಗದೆ ಇದ್ದರೆ 'ಅರ್ಥಾತ್' ಎಂದು ಜೋಡಿಸಿ ಇನ್ನೊಂದು ಹೆಸರನ್ನು ಕೊಡುವುದು ಸಾಹಿತಿಗಳ ವಾಡಿಕೆ; ಉದಾಹರಣಾರ್ಥವಾಗಿ, 'ಪಂಪ-ಭಾರತ—ಅರ್ಥಾತ್— ನೀರಿಲ್ಲದ ನಾಗರಿಕರ ಅಜ್ಞಾತವಾಸ' ಎಂದು ಮುಂತಾಗಿ. ಆದರೆ ನಾವು ಕೊಟ್ಟ ಹೆಸರಿನ—ಅರ್ಥಾತ್-'ಲಢಾಯಿಯಲ್ಲಿ ಲೆಕ್ಕಣಿಕೆ' ಎಂಬುದರ ಅರ್ಥವು ಸುಲಭವಿರಲು ಅರ್ಥಾತ್ – ಹೆಚ್ಚಿಗೆ ಬರೆಯುವುದೇನು ?

ವಾಚಕರೆ—ಅರ್ಥಾತ್—ತಿಳಿದುಕೊಂಡು ಓದುವಂಥಾತ್ತರಾದ ತಾವುಗಳಿರೆ, ಸದ್ಯಕ್ಕೆ ಯುದ್ಧ ನಡೆದುದು ನಿಮಗೆ ಗೊತ್ತಿರಬಹುದಷ್ಟೆ! 'ಈ ಯುದ್ಧವು ಹಿಂದಿನ ಎಲ್ಲ ಯುದ್ಧಗಳಿಗಿಂತ ಬೇರೆಯಾದುದು' ಎಂದು ಬಲ್ಲವರು ಹೇಳುತ್ತಾರೆ. ಆ ಮಾತಿಗೆ ಅನೇಕ ಕಾರಣಗಳಿವೆ. ಒಂದು, ಈ ಯುದ್ಧದಲ್ಲಿ ಮನೆಯಲ್ಲಿ ಕುಳಿತವರಿಗೂ ಸಾಯುವ ಪ್ರಸಂಗವಿದೆ; ಇನ್ನೊಂದು, ಈ ಯುದ್ಧವು ಪೃಥ್ವಿಯ ಮಾನವರನ್ನೆ ಸಂಬಂಧಿಸಿದ್ದರೂ ಹೆಚ್ಚಾಗಿ ಆಕಾಶ-ಪಾತಾಳಗಳಲ್ಲಿಯೆ ನಡೆಯುತ್ತಿದೆ. ಆದರೆ ಇವೆಲ್ಲಕಿಂತ ಮಹತ್ವದ್ದಾದ ಒಂದು ಕಾರಣವಿದೆಯಂತೆ: ಅದೆಂದರೆ ಈ ಯುದ್ಧದಿಂದ ಮಾನವಸಂಸ್ಕೃತಿಯ ಮೇಲೆ ಸರ್ವವಿಧದಿಂದಲೂ ಪರಿಣಾಮವಾಗದೆ ತಪ್ಪದಂತೆ. ಅದ್ದರಿಂದ—ಎಂದರೆ, ಅರ್ಥಾತ್—ಸಾಹಿತ್ಯ ಮತ್ತು ಸಾಹಿತಿಗಳ ಮೇಲೂ ಕ್ರಾಂತಿಕಾರಕ ಪರಿಣಾಮವಾಗಬಹುದೆಂದು ಊಹಿಸಬಹುದಲ್ಲವೆ? ಈ ಮಾತೇ 'ಲಢಾಯಿಯಲ್ಲಿ ಲೆಕ್ಕಣಿಕೆ' ಎಂಬ ಶಿರೋಲೇಖದಿಂದ ಸಂಕೇತಿತವಾಗಿದೆ, ಅರ್ಥಾತ್ ಆ ಪರಿಣಾಮವೆಂತಹದೆಂಬುದನ್ನು ವಿವರಿಸುವುದು ಲೇಖದ ಉದ್ದೇಶವಾಗಿದೆ.

ಮೊದಲ ಮಾತೆಂದರೆ, ಇಂದಿನ ಯುದ್ಧದಿಂದ ಸಾಹಿತಿಗಳ ದೃಷ್ಟಿಕೋನವೆ (ಸಾಮಾನ್ಯರ ದೃಷ್ಟಿಕೋನದಿಂದ ಇದು ಬೇರೆಯಾಗಿದೆ) ಬದಲಾಗುವುದು. ಇಂದಿನವರೆಗೆ ಸಾಹಿತಿಗಳು ಆಕಾಶ-ಪಾತಾಳಗಳ ಕಡೆಗೆ ತಮ್ಮ ದೃಷ್ಟಿಯನ್ನಿಡುತ್ತಿದ್ದರು, ಧೈರ್ಯದಿಂದ ಇಡುತ್ತಿದ್ದರು. ಆ ಸ್ಥಳಗಳಲ್ಲಿ ಏನೂ ಇಲ್ಲದ್ದರಿಂದ ಅವರ ಕಲ್ಪನೆಗೆ ಬೇಕಾದಷ್ಟು ಅನುವು ದೊರೆಯುತ್ತಿದ್ದಿತು; ಸ್ವರ್ಗಗಳನ್ನು ಸೃಷ್ಟಿಸುತ್ತಿದ್ದರು, ನರಕಗಳನ್ನು ನಿರ್ಮಿಸುತ್ತಿದ್ದರು. ಇಲ್ಲದ್ದಲ್ಲಿ ಇದ್ದುದಂತೆ ಮಾಡಲು ದೊರೆಯುವ ಈ ಅವಕಾಶದಿಂದ ಕಾವ್ಯಕ್ಕೆ ಕಳೆ ಏರುತ್ತಿದ್ದಿತು. ಆದರೆ ಇಂದು ಆ ಪರಿಸ್ಥಿತಿಯಲ್ಲಿ ಅದಲುಬದಲಾಗಿದೆ. ಆಕಾಶವೆಲ್ಲ ವಿಮಾನಗಳಿಂದ ತುಂಬಿದೆ; ಕಾಲ್ಪನಿಕ ಪುಷ್ಪಕ, ಆವರ್ತಕ ಮುಂತಾದುವುಗಳಲ್ಲ; ಫಾಯಿಟರ್, ಬೊಂಬರ್, ಸ್ಟುಕಾ ಮುಂತಾದ ಮೊದಲಾದ ವಾಸ್ತವಿಕ ವಿಮಾನಗಳಿಂದ. ಅದರಂತೆ ಪಾತಾಳದಲ್ಲಿ ಸಬ್‌ಮರೀನುಗಳಿವೆ, ಡೆಪ್ಥ್ ಚಾರ್ಜುಗಳಿವೆ, ಮುಳುಗಿದ ಹಡಗಗಳಲ್ಲಿಯ ಮದ್ದು-ಗುಂಡುಗಳೂ ಮಾನವ ದಂಡುಗಳೂ ಮಹಾನ್‌ಮಹಾನ್ ಸಂಸಾರಗಳೂ ಇವೆ. ಸಾಹಿತಿಗಳ ಮಾತಂತಿರಲಿ, ಕ್ಷೀರಸಾಗರದಲ್ಲಿ ಒರಗಿದ ವಿಷ್ಣುವು ಸಬ್‌ಮರೀನಿಗೂ ಕೈಲಾಸದಲ್ಲಿದ್ದ ಶಿವನು ವಿಮಾನದಾಳಿಗೂ ಭಯಪಡುವಂತಹ ಯಂತ್ರದ ಸರ್ವಾಧಿಕಾರಿತ್ವಯುಗದ ಯುದ್ಧವಿದು. ಹೀಗಾಗಿ ಬಡಸಾಹಿತಿಯು ಆಕಾಶ-ಪಾತಾಳಗಳನ್ನು ಬಿಟ್ಟು ಬರಿಯ ಭೂಲೋಕವನ್ನೆ ನೋಡಬೇಕಾಗುವುದು. ಸುಖ-ದುಃಖಮಯ ಸಂಸಾರದ ರಂಗಸ್ಥಲವಾದ ಈ ಹಾಳು ಭೂಲೋಕದಲ್ಲಿ ಕಲ್ಪನೆಗೆ ಸ್ಫೂರ್ತಿ ದೊರೆಯುವುದೆಂತು? ಯಾಕೆಂದರೆ ಹಾಳಾದ ನಗರಗಳೂ ಬೀಳುತ್ತಲಿದ್ದ ಕಟ್ಟಡಗಳೂ ಕುರುಡ-ಕುಂಟ-ಕಡಿತಗಳಿಂದ ಬಳಲುವ ನರಪ್ರೇತಗಳೆ ಕಾಣಬಹುದು! ಅಂತೂ ತಾತ್ಪರ್ಯವೇನು? ಸಾಹಿತಿಯು ತನ್ನ ಕೋಣದ ಹಗ್ಗವನ್ನು ಹಿಡಿದೆಳೆಯಲೇ ಬೇಕಾಗುವುದು.

ಕೋಣ ಹೀಗೆ ಬದಲಾಯಿಸುವುದಕ್ಕೆ ಸಾಹಿತಿಯ ಸಂಕಷ್ಟ ಮುಗಿಯಲಿಲ್ಲ. ಕೋಣಕ್ಕೆ ಸರಿಯಾಗಿ ಕಟ್ಟಡವು ಬದಲಾಯಿಸ

ಬೇಕಾಗುವುದು-ಅರ್ಥಾತ-ಶೈಲಿಯೂ ಬೇರೆಯಾಗಬೇಕಾಗುವುದು. 'ಗಾಳಿಯ ವೇಗದಂತೆ' ಎಂದು ಹೇಳುವ ಕವಿ ಗಾಳಿಪಾಲಾಗುವನು; 'ವೇಗದಲ್ಲಿ ವಿಮಾನದಂತೆ, ಜಂಬದ ಬಾಂಬಿನಂತೆ' ಎಂದು ನೂತನವಾಗಿ ಬರೆಯುವವನೆ ಬದುಕುವನು. 'ಸಂಸಾರವು ನಾಲ್ಕು ಗಳಿಗೆಯ ಆಟ' ಎಂಬುದು ಹಳೆಯ ಪುರಾಣವೆನಿಸುವುದು; 'ಒಂದು ಗಳಿಗೆ ಕೂಡ ತಾಳದ ಮಾಟ' ಎಂಬುದು ಪ್ರಗತಿಪರವಾದ ಆಧುನಿಕ ವಿಚಾರವಾಗುವುದು. 'ಕಪಿಕುಲದಲ್ಲಿ ಹನುಮಂತನು ವಾಯುದೇವರ ಮಗನು' ಎಂದರೆ ಮುಗಿಯಲಿಲ್ಲ; ಮುಂದೆ 'ಶಿಂಪನೀಝನು ವಿಷವಾಯುದೇವರ ಮಗನು' ಎಂದು ಮಾತನ್ನು ಪೂರ್ತಿಗೊಳಿಸಬೇಕಾಗುವುದು. 'ಹಗಲಿನಲ್ಲಿ ಎರಡು ವಿಧಗಳಿವೆ, ಒಂದು ಬಿಳಿ ಹಗಲು ಒಂದು ಕರಿ ಹಗಲು (Black out)' ಎಂದು ಮಕ್ಕಳಿಗೆ ಹೊಸ ಪಾಠ ಕಲಿಸಬೇಕಾಗುವುದು. 'ಇದೆಲ್ಲ ಇತಿಹಾಸವನ್ನು ಬರೆವವರ ಭೂಗೋಲವನ್ನು ರಚಿಸುವವರ ಕೆಲಸ, ಇದರಲ್ಲಿ ಸಾಹಿತಿಯ ಸಂಬಂಧವೇನು?' ಎಂದು ಕೇಳಬೇಡಿರಿ. ಯಾಕೆಂದರೆ ಯುದ್ಧದ ತರುವಾಯದ ಜಗತ್ತಿನಲ್ಲಿ ಎಲ್ಲ ಅಳಿದು ಸಾಹಿತ್ಯ ಒಂದೇ ಉಳಿಯುವುದು. ಉಳಿಯಬಾರದೇಕೆ? ಇತಿಹಾಸವು ಮಾನವನಿಗೆ ಅನುಭವವನ್ನು ಕಲಿಸಲೊಲ್ಲದು; ಭೂಗೋಲ ಪಾಠವು ಇಂದಿನಂತೆ ನಾಳೆ ಉಳಿಯಲೊಲ್ಲದು! ಇಂತಹ ಕ್ಷಣಭಂಗುರ ವಿಷಯಗಳಿಂದ ಯಾರಿಗೆ ಲಾಭವಾಗುವಂತಿದೆ? ಸಾಹಿತ್ಯದ ಮಾತು ಬೇರೆ. ಸುಖವಿಲ್ಲದಲ್ಲಿ, ಸೌಂದರ್ಯವಿಲ್ಲದಲ್ಲಿ, ಸತ್ಯವಿಲ್ಲದಲ್ಲಿ ಅವನ್ನು ಹುಡುಕುವ ಬಿಸಿಲ್ಗುದಿರೆಯ ಬೆರಗಾಟ ಸಾಹಿತ್ಯವೆಂದರೆ. ಈ ಯುದ್ಧದಿಂದ ಸತ್ಯ-ಸುಖ-ಸೌಂದರ್ಯಗಳು ಇನ್ನಿಷ್ಟು ಅಸಂಭವನೀಯವೆನಿಸಬಹುದಾದ್ದರಿಂದ, ಸಾಹಿತ್ಯಕ್ಕೆ ಇನ್ನೂ ಚುರುಕಾದ ಸ್ಫೂರ್ತಿ ಸಿಕ್ಕುವುದು. ಹಾಗೆ ಸ್ಫೂರ್ತಿಗೊಂಡು ವೈಮನರೆತಾಗ ಯಾವಸಂಗತಿಗಳನ್ನು ಲಕ್ಷ್ಯದಲ್ಲಿಡಬೇಕಾಗುವುದೆಂಬುದನ್ನು ನಾನಿಲ್ಲಿ ವಿವರಿಸುತ್ತಲಿದ್ದೇನೆ.

ಶೈಲಿ ಬೇರೆಯಾಗಬೇಕೆಂದು ಮೇಲೆ ಹೇಳಿದೆಯಷ್ಟೆ? ಹಾಗೆಂದರೇನು? ನೋಡಿರಿ, ಇಂದು ಸಾಹಿತಿಗಳು ಕವಿತೆಯನ್ನು ಬರೆಯುತ್ತಾರಲ್ಲವೆ? ಆ ಕಾವ್ಯದ ಶೈಲಿ ಹೇಗಿದೆ? ನದಿಗಳ ತೆರೆಗಳಂತೆ, ಸುಳಿಗಾಳಿಯ ಸುಯ್ದಾಟದಂತೆ, ಹೃದಯದ ಹಾರಾಟದಂತೆ ಅದರಲ್ಲಿ ತಾಳವಿದೆ, ಮೇಳವಿದೆ, ಕಳೆ ಇದೆ. ಆದರೆ ಇನ್ನು ಮುಂದೆ ಈ ಶೈಲಿ ನಮ್ಮನ್ನು ಹೇಗೆ ತೃಪ್ತಿಗೊಳಿಸೀತು? ವರ್ಷಾನುವರ್ಷ ಯುದ್ಧದ ವಾತಾವರಣದಲ್ಲಿ ಬೆಳೆಯುವ ನಮಗೆ ಟಾರ್ಪೆಡೊದಂತೆ ಸಿಡಿಯುವ, ಬಾಂಬಿನಂತೆ ಅಬ್ಬರಿಸುವ, ವಿಷವಾಯುವಿನಂತೆ ಮೋಹಗೊಳಿಸುವ, ಪ್ರಚಾರಶಾಸ್ತ್ರದಂತೆ ಶಬ್ದಜಾಲವನ್ನು ಪಸರಿಸುವ, ಆಕಾಶವಾಣಿಯಂತೆ ಶ್ರವಣಪೇಯವಾದ ಶೈಲಿಯೆ ನಮಗೆ ಇಷ್ಟವೆನಿಸಿದರೆ ಆಶ್ಚರ್ಯವೇನು! ನಮ್ಮ ರೇಡಿಯೊ ಯಂತ್ರವನ್ನು on (ಹಚ್ಚು) ಮತ್ತು off (ಮುಚ್ಚು) ಮಾಡುವಂತೆ, ಕವಿಯನ್ನೆ on and off ಮಾಡಲು ಶಕ್ಯವಿದ್ದ ಶೈಲಿ ನಮಗೆ ಹೆಚ್ಚು ಅನುಕೂಲವೆನಿಸುವುದು. ಅದಕಾಗಿ ಉದ್ದುದ್ದ ಕತೆ-ಕಾದಂಬರಿಗಳ ಧಾಟಿಯನ್ನು ಲೇಖಕನು ಬಿಡಬೇಕಾಗುವುದು. ಅವನ ಒಂದು ಇಡಿಯ ಗ್ರಂಥವು ಬಹಳವಾದರೆ ಒಂದು record (ಗ್ರಾಮೊಫೋನ ರೆಕಾರ್ಡ)ನ ಎರಡೂ ಬದಿಗಳಿಗೆ ಸಾಲುವಷ್ಟಿರಬೇಕು.

ಶೈಲಿಯ ಸಂದರ್ಭದಲ್ಲಿ ಇನ್ನೂ ಒಂದು ಮಾತನ್ನು ಹೇಳಬಹುದು. ಧ್ವನಿವಾಹಕ ಯಂತ್ರ (telephone) ದೊಡನೆ ಇಂದು ಚಿತ್ರವಾಹಕತೆಯೂ ಸೇರಿದೆ. ಎಂದರೆ ದೂರದಿಂದ ಮಾತನಾಡುವವನ ಮಾತುಗಳು ಕೇಳಿಸುವವಲ್ಲದೆ, ಅವನೇ ಅದರ ಜೊತೆಗೆ ಕಾಣಿಸುವನು. ಅದಕಾಗಿ ಸಾಹಿತಿಗಳು ಎಚ್ಚರದಿಂದಿರಬೇಕಾಗುವುದು. ಮಲಗುವಾಗಲೊ ಮತ್ತೆಲ್ಲಿರುವಾಗಲೊ ಸ್ಫೂರ್ತಿಬಂದರೆ ಅದನ್ನು ತಡೆಯಬೇಕಾಗುವುದು. ಉತ್ತಮವಾದ ಬಟ್ಟೆಗಳನ್ನು ಧರಿಸಿ, ತಲೆಗೂದಲನ್ನು ಬಾಚಿ, ಒರಣದಿಂದಿರುವಾಗಲೇ ಸ್ಫೂರ್ತಿ ಬರಬೇಕು— ಇಲ್ಲವಾದರೆ ಚಿತ್ರವೂ ಮೂಡಿ ಸ್ವರೂಪನಾಶವಾದೀತು!

ಬಾಹ್ಯದೃಷ್ಟಿಯಿಂದ ನೋಡಿದರೆ ಕೂಡ ಯುದ್ಧದ ನಿಮಿತ್ತದಿಂದ ಸಾಹಿತ್ಯದಲ್ಲಿ ಕ್ರಾಂತಿಯಾಗುವುದಗತ್ಯ ಎಂಬುದು ಸ್ಪಷ್ಟವಿದೆ. ಮೊದಲ ಮಾತೆಂದರೆ, ಗ್ರಂಥಕರ್ತನು ತನ್ನ ಗ್ರಂಥದ ಎಷ್ಟು ಪ್ರತಿಗಳನ್ನು ಪ್ರಕಟಿಸಬೇಕು?...ಸದ್ಯಕ್ಕೆ ಕನ್ನಡ ಗ್ರಂಥಕರ್ತರೆಲ್ಲ ಪ್ರತಿಯೊಂದು ಗ್ರಂಥದ ಸಾವಿರಪ್ರತಿಗಳನ್ನು ಸಿದ್ಧಪಡಿಸುವರು. ಕರ್ನಾಟಕದಲ್ಲಿ ಚಹದ ಅಂಗಡಿಗಳ ಸಂಖ್ಯೆಗೆ ಹಚ್ಚಿ ನೋಡಿದರೆ ಸಾವಿರವೆಂದರೆ ಬಹಳೇ ಸ್ವಲ್ಪ ಎಂದೆನಿಸಬಹುದು. ಆದರೆ ಈ 'ಘರಾಳಪ್ರಪಂಚ'ದಲ್ಲಿ ವೃತ್ತಪತ್ರಗಳಿಗೇ ಹೆಚ್ಚಿನ ಮಹತ್ವವಿದೆ, ಅರ್ಥಾತ್ ಪತ್ರಿಕೆಗಳೆ ಹೆಚ್ಚು ಉಪಯುಕ್ತವಾಗಿವೆ. ಈ ಮೇಲಾಟದಲ್ಲಿ ಗ್ರಂಥಗಳಿಗೆ ಹೆಚ್ಚು ಅವಕಾಶದೊರೆಯುವುದಿಲ್ಲವಾದ್ದರಿಂದ, ಸಾವಿರ ಪ್ರತಿಗಳೇ ಸಾಕೆನಿಸುವುವು. ಆದರೆ ಯುದ್ಧದ ನಿಮಿತ್ತದಿಂದ ಪರಿಸ್ಥಿತಿ ಬದಲಾಯಿಸಿದೆ. 'ರದ್ದೀ ಪೇಪರಿ'ನ ಧಾರಣೆ ಏರಿದೆ— ಅದಕಾಗಿ ಹೆಚ್ಚು ಪ್ರತಿಗಳನ್ನು ಹೊರಡಿಸಬಹುದೆಂದು ಎನಿಸುವದು. ಆದರೆ ತುಸು ವಿಚಾರ ಮಾಡಿದಲ್ಲಿ ತೀರ ವಿಪರೀತ ಪರಿಸ್ಥಿತಿಯೆ ಕಂಡುಬರುವುದು. ಸಾಮಾನ್ಯವಾಗಿ ಪ್ರತಿಯೊಬ್ಬ ಗ್ರಂಥಕರ್ತನೂ ತನ್ನ ಗ್ರಂಥವನ್ನು ಓದುವ ಜನರಿದ್ದಾರೆ ಎಂದು ಭಾವಿಸಿಕೊಳ್ಳುವುದು ವಾಡಿಕೆಯಾಗಿದೆ. ಈ ಭಾವನೆಯಿಂದ, ಹೆಚ್ಚಿನ ತಾಪತ್ರಯವಿಲ್ಲದ ಕಾಲದಲ್ಲಿ ಸಾವಿರಪ್ರತಿಗಳನ್ನು ಹೊರಡಿಸಿದರೆ, ಯುದ್ಧದ ತರುವಾಯ— ಎಂದರೆ ಲಕ್ಷಾವಧಿ ಜನರು (ಇವರೆಲ್ಲರೂ ಓದುವ ವಯಸ್ಸಿನವರೆ) ರಣಾಂಗಣದಲ್ಲಿ ಮಡಿದ ತರುವಾಯ—ಎಷ್ಟು ಪ್ರತಿಗಳನ್ನು ಹೊರಡಿಸಬೇಕು? ಪ್ರಶ್ನೆಯನ್ನೇನೋ ಕೇಳಿರುವೆ, ಆದರೆ ಉತ್ತರವನ್ನು ಮಾತ್ರ ದಯವಿಟ್ಟು ಗಣಿತ ಶಾಸ್ತ್ರಜ್ಞರೆ ಕೊಡಬೇಕೆಂದು ಬೇಡುವೆ? ಯಾಕೆನ್ನುವಿರಾ? ಲೆಕ್ಕಬಿಡಿಸಲು ಪ್ರಮಾಣವನ್ನು ಕಂಡುಹಿಡಿಯಲು-ನೀವೇ ಪ್ರಯತ್ನ ಮಾಡಿನೋಡಿರಿ. ಇನ್ನೊಂದು ಮಾತು— ಒಂದು ವೇಳೆ ಯುದ್ಧದಲ್ಲಿ ಯಾರೂ ಆಹುತಿಯಾಗಲಿಲ್ಲ ಎಂದು ತಿಳಿಯಿರಿ, ಎಲ್ಲರೂ ಸುರಕ್ಷಿತ

(೩೬೧ ನೆಯ ಪುಟ ನೋಡಿರಿ)

★ ಕೊಡುಗೈ! ★

(ಎರಡು ಚಿತ್ರಗಳು)

'ಮಂಗಳೂರಿನವ'

★

ಬಡವರನ್ನು ಸೂರೆಗೊಂಡು ಸಂಪಾದಿಸಿದ ಸಿರಿವಂತರ ಹಣ ಬಡವರಿಗೇ ವೆಚ್ಚವಾಗುತ್ತ ಹೋದರೆ ನಾಡಿನ ಸುಖ-ಶಾಂತಿಗೆ ಭಂಗ ಬರುವುದಿಲ್ಲ; ಆದರೆ ಸಿರಿವಂತರ ಔದಾರ್ಯ ಎಲ್ಲಿ ಉಪಯೋಗ-ವಾಗುತ್ತಿದೆ, ನೋಡಿ!

"ಅಯ್ಯಾ, ರಾಯರೆ!"

"ಬೌ! ಬೌ ಽ!"

"ಅಯ್ಯಾಽ....."

"ಬೌ! ಬೌ ಬೌ ಽ"

"ಲಚ್ಚಾ!"

"......"

"ಏ ಲಚ್ಚಾ!"

"ಓ! ಬಂದೆ ಒಡೆಯಾ!"

"ಎಲ್ಲಿ ಸತ್ತಿದ್ದಿಯೊ? ಆಗೋ, ನಾಯಿ ಕೂಗುತ್ತಿದೆ. ಗೇಟಿನ ಬಳಿಯಲ್ಲಿ ಯಾರೋ ಬಂದಂತಿದೆ. ಅದಾರೆಂದು ನೋಡಿ ಬಾ!"

ಲಚ್ಚ ನೋಡಿಬರಲು ಹೋದ.

"ಏ! ಇಲ್ಲಿ ಯಾಕೆ ನಿಂತಿರುವೆಯೊ? ಇಲ್ಲಿ ಏನೂ ಸಿಕ್ಕಲಾರದು, ಹೋಗು ಹೋಗು!" ಗೇಟಿನ ಬಳಿಯಲ್ಲಿ ನಿಂತುಕೊಂಡು, ಒಳಗೆ ತೋರುವ ದಿವ್ಯ ಸೌಧವನ್ನು ನೋಡುತ್ತಾ "ಅಯ್ಯಾ" ಎಂದೊರಲುತ್ತಿದ್ದ ವ್ಯಕ್ತಿಗೆ ಲಚ್ಚ ಗದ್ದರಿಸಿದ.

"ಅಣ್ಣಾ, ರಾಯರಿರುವರೇ?" ಆ ವ್ಯಕ್ತಿ - ಲಚ್ಚನ ಬಿರುನುಡಿಗೆ ಒಂದಿಷ್ಟೂ ಅಳುಕದೆ—ಪ್ರಶ್ನಿಸಿದ.

"ಹ್ಞ! ರಾಯರು! ರಾಯರೇಕೋ ನಿನಗೆ? ಇಲ್ಲಿ ಏನೂ ಸಿಕ್ಕಲಾರದು ಎಂದು ಆಗಲೇ ಹೇಳಿದೆನಲ್ಲಾ. ನಡೆಯುತಿಯೋ, ಇಲ್ಲವೊ? ನಾಯಿಯನ್ನು ಬಿಡಬೇಕೇನು?"

"ಅಣ್ಣಾ, ಕೋಪಿಸಬೇಡ. ನನಗೆ ರಾಯರನ್ನು ಕಾಣಬೇಕಾಗಿದೆ. ನನ್ನಲ್ಲಿ ಜಿಲ್ಲಾಕಾಂಗ್ರೆಸ್ಸು ಕಮಿಟಿಯ ಅಧ್ಯಕ್ಷರಿಂದ ಒಂದು ಕಾಗದವಿದೆ. ಅದನ್ನು ರಾಯರಿಗೆ ತೋರಿಸಬೇಕಾಗಿದೆ. ಆದುದರಿಂದ ರಾಯರಿಗೆ ನನ್ನ ವಿಷಯ ತಿಳಿಸು," ಎಂದ ಆ ವ್ಯಕ್ತಿ.

"ಯಾರಿಂದ ಕಾಗದವೆಂದೆ?"

"ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಿಂದ!"

"ಸರಿ, ನಿನ್ನ ಹೆಸರೇನು?"

"ನನ್ನ ಹೆಸರು ಯಾಕಣ್ಣಾ ಅವರಿಗೆ? ನನ್ನ ಹೆಸರನ್ನು ತಿಳಿದುಕೊಳ್ಳುವುದರಿಂದ ಯಾರಿಗೂ ಪ್ರಯೋಜನವಿಲ್ಲ. ನಾನು ಹೇಳಿದಷ್ಟನ್ನು ರಾಯರಿಗೆ ತಿಳಿಸಿಬಿಡು, ಅಷ್ಟೇ ಸಾಕು."

"ಛೆ! ಆದಾಗದು. ರಾಯರನ್ನು ನೋಡಲಿರುವವರು, ತಮ್ಮ ಹೆಸರನ್ನು ಒಂದು ಕಾಗದದ ತುಂಡಿನ ಮೇಲೆ ಬರೆದು ಅದನ್ನೇ ರಾಯರಿಗೆ ನನ್ನ ಮೂಲಕ ಕಳುಹುವ ರೂಢಿ ಇಲ್ಲಿ. ಆಗ ತಾನೇ ರಾಯರು—ಹೊರಗೆ ಬಂದು—ಇಲ್ಲವೆ ಆಗಂತುಕರನ್ನು ತಾವಿದ್ದಲ್ಲಿಗೆ ಕರೆಯಿಸಿಕೊಂಡು—ವಿಚಾರಿಸುವ ಪದ್ಧತಿ. ನಿನ್ನಲ್ಲಿ ಅಂತಹ ಕಾಗದವೇನೂ ಇರಲಾರದೆಂದು ನಿನ್ನನ್ನು ನೋಡುವಾಗಲೇ ವ್ಯಕ್ತವಾಗುತ್ತದೆ. ಆದುದರಿಂದ ನೀನು ಹೆಸರನ್ನು ತಿಳಿಸಲೇಬೇಕು; ಇಲ್ಲದಿದ್ದರೆ ನಿನಗೆ ರಾಯರು ಕಾಣಸಿಗರು."

"ಭೈಯ್ಯಾ, ಅಂತ ನನ್ನ ಹೆಸರು!"

"ಸರಿ; ನಿಂತಿರು. ಈಗ ಬಂದೆ" ಎಂದೆನ್ನುತ್ತಾ ಲಚ್ಚ ಮರಳಿ ಹೋದ.

"ಒಡೆಯಾ,"

"ಯಾರೋ ಅದು ಬಂದಿರುವುದು?"

"ಭೈಯ್ಯಾ ಅಂತ ಒಡೆಯಾ, ಅವನ ಹೆಸರು. ಆತನ ಬಳಿಯಲ್ಲಿ ಜಿಲ್ಲಾ ಕಾಂಗ್ರೆಸ್ಸು ಸಮಿತಿಯ ಅಧ್ಯಕ್ಷರಿಂದ ಒಂದು ಕಾಗದವಿದೆ. ಅದನ್ನು ಒಡೆಯರಿಗೆ ತೋರಿಸಬೇಕಾಗಿದೆಯಂತೆ."

"ಏನು! ಕಾಂಗ್ರೆಸ್ಸು ಅಧ್ಯಕ್ಷರಿಂದ ನನಗೆ ಪತ್ರವೆ! ಯಾರವ ಬಂದಿರುವುದು?" ಕೊಡುಗೈ ಸಾಹುಕಾರ ಸೂರಪ್ಪನವರು, ಒರಗಿದ್ದ ಆರಾಮಕುರ್ಚಿಯಿಂದ ಎದ್ದು, ಮಾಳಿಗೆಯ ಮೆಟ್ಟಲುಗಳನ್ನು ನಿಧಾನವಾಗಿ ಇಳಿಯಹತ್ತಿದರು. ಲಚ್ಚ ಅವರನ್ನು ಹಿಂಬಾಲಿಸಿದ.

"ಅವನನ್ನು ಒಳಗೆ ಬರಹೇಳು" ಚಾವಡಿಯಲ್ಲಿ ನಿಂತುಕೊಂಡು ಸಾಹುಕಾರರು ಲಚ್ಚನಿಗೆಂದರು.

ಲಚ್ಚ ಗೇಟಿನ ಸನಿಯಕ್ಕೆ ಹೋಗಿ "ಒಳಗೆ ಬರಬೇಕಂತೆ, ರಾಯರ ಅಪ್ಪಣೆಯಾಗಿದೆ" ಎಂದು ಸೂಚಿಸಿ ಗೇಟು ತೆರೆದ.

ಭೈಯ್ಯಾ ಒಳಗೆ ಬಂದ. ಲಚ್ಚ ಗೇಟನ್ನು ಮುಚ್ಚಿ ಅವನ ಹಿಂದಿನಿಂದಲೇ ಬಂದ.

* * * *

"ಎಲ್ಲಿದೆಯಾ ಪತ್ರ?" ಸಾಹುಕಾರರು ಭೈಯ್ಯಾನಿಗೆ ಪತ್ರ ಕೊಡಲು ಹೇಳಿದರು.

ಭೈಯ್ಯಾ ಸೊಂಟದ ವಸ್ತ್ರದ ಮಡಿಕೆಯಲ್ಲಿ ಮುಚ್ಚಿದ್ದ ಒಂದು ಮಡಿಸಿದ ಕಾಗದವನ್ನು ಹೊರತೆಗೆದು, ಸಾಹುಕಾರರ ಇದಿರು ನೆಲದ ಮೇಲೆ ಇಟ್ಟ. ಲಚ್ಚ ಅದನ್ನೆತ್ತಿ ಸಾಹುಕಾರರಿಗೆ ನೀಡಿದ,

" ಮಹಾಶಯರೇ,

ಇತ್ತೀಚೆಗೆ ಸಂಭವಿಸಿದ ನೆರೆಯ ಹಾವಳಿಯಿಂದ ವೇಣೂರು, ಗುರುಪುರ, ಕೂಳೂರು ಕೋಟೂರು ಮೊದಲಾದೆಡೆಗಳಲ್ಲಿ ನೂರಾರುಮಂದಿ ಹೊಲ, ಮನೆ-ಮಾರುಗಳನ್ನು ಕಳಕೊಂಡು ನಿರ್ಗತಿಕರಾಗಿರುವರೆಂಬುದು ಈಗಾಗಲೆ ಎಲ್ಲೆಲ್ಲೂ ವಿದಿತವಾಗಿರುವ ವಿಷಯ. ಈ ಪತ್ರ ತರುವವನು ನೆರೆಹಾವಳಿಗೆ ತುತ್ತಾಗಿ ನಿರ್ಗತಿಕನಾದವನು. ಇವನ ಮತ್ತು ಇವನ ಸಂಸಾರದ ಜೀವನ-ಸೂತ್ರವು ಕುದುರಿಗೊಳ್ಳಬೇಕಾದರೆ ತಮ್ಮಂತಹರ ಬೆಂಬಲ ಅತ್ಯವಶ್ಯ. ಆದುದರಿಂದ ಶಕ್ಯವಿದ್ದ ಸಹಾಯ ನೀಡಬೇಕಾಗಿ ಬೇಡಿಕೆ.

—ಜಿಲ್ಲಾ ಕಾಂಗ್ರೆಸ್ಸು ಕಮಿಟಿಯ ಅಧ್ಯಕ್ಷ"

ಸಾಹುಕಾರರ ದೃಷ್ಟಿ ಈ ಪತ್ರದ ಬುಡದಿಂದ ಕಡೆಯವರೆಗೊಮ್ಮೆ ಹರಿಯಿತು.

" ನಿನ್ನ ಊರು ಯಾವುದು ? " ಸಾಹುಕಾರರು ಓಲೆಯ ಮೇಲಿಂದ ದೃಷ್ಟಿಹೊರಳಿಸುತ್ತಾ ಭೈಯ್ಯಾನನ್ನು ಪ್ರಶ್ನಿಸಿದರು.

" ವೇಣೂರು ರಾಯರೆ ! "

" ಏನು ಮಾಡುತ್ತಿದ್ದೆ ಅಲ್ಲಿ ? "

" ಬೇಸಾಯ ರಾಯರೆ! ಇದ್ದ ಹೊಲ, ಮನೆ ಎಲ್ಲವೂ ಮೊನ್ನಿನ ನೆರೆಗೆ ಕೊಚ್ಚಿಹೋಯಿತು. ಅಲ್ಲದೆ, ಒಬ್ಬ ಮಗನೂ ಬಲಿಯಾದ ರಾಯರೆ ! "

" ನಿಜ ! ಬಹಳ ಕಷ್ಟ ! ಬಹಳ ಕಷ್ಟ ! ದೇವರು ಕೊಟ್ಟದ್ದು; ಏನುಮಾಡುವುದಕ್ಕಾಗುತ್ತೆ ? ಆದರೆ ನೋಡು, ಈಗ ನನ್ನೊಡನೆ ಒಂದು ಪೈಯೂ ಇಲ್ಲ. ನಾನು ಧರ್ಮಮಾಡುವುದು ಶನಿವಾರ ದಿನಾ—ಅಂತ ರೂಢಿ ಇಟ್ಟುಕೊಂಡಿದ್ದೇನೆ. ಆದುದರಿಂದ ನೀನು ನಾಳೆ ಬಾ ; ನಾಳೆ ಶನಿವಾರ, ಕೊಡುವುದಿದ್ದರೆ ನಾಳೆ ! "

" ರಾಯರೆ, ತಮ್ಮಂತಹ ಕೊಡುಗೈಯವರೂ ಹೀಗೆ ಹೇಳುವುದೆ ? ನೋಡಿ, ರಾಯರೆ, ಎರಡುದಿನಗಳಿಂದಲೂ ಊಟ ಮಾಡಿಲ್ಲ ! "

" ನನ್ನೊಡನೆ ಈಗ ಏನೂ ಇಲ್ಲ ಎಂದೆನಲ್ಲವೆ ? ನಾಳೆ ಬಾ-ಅಂತ ಹೇಳಿದೆನಲ್ಲವೆ ? "

" ರಾಯರೆ, ಊಟಮಾಡದೆ ಎರಡು ದಿನಗಳಾಯಿತು ! "

" ಇಗೊ, ಸುಮ್ಮನೆ ಹರಟಬೇಡ ! ನಡೆ ಇಲ್ಲಿಂದ, ನಾಳೆ ಬಾ ಎಂದರೆ ನಾಳೆಯೇ ಬರಬೇಕು. ಈಗ ಇಲ್ಲ ಎಂದರೆ ಇಲ್ಲ ! " ಸಾಹುಕಾರರು ಮೋರೆ ತಿರುವಿ ಒಳಗೆ ನಡೆದೇಬಿಟ್ಟರು.

" ರಾಯರೆ, ರಾಯರೆ,............" ಭೈಯ್ಯಾನ ಎರಡು ಬಾರಿಯ ಕೂಗಿಗೆ, ಸಾಹುಕಾರರು ಮಾಳಿಗೆ ಮೆಟ್ಟಲನ್ನು ಏರುವಾಗಿನ " ಪಟ್ ! ಪಟ್ ! " ಶಬ್ದಗಳು ಮರುಸುತ್ತಿದುವು.

ಭೈಯ್ಯಾ ತನ್ನ ಕಾಗದದೊಂದಿಗೆ ಗೇಟಿನಿಂದ ಹೊರನಡೆದ; ಲಚ್ಚ ಗೇಟು ಮುಚ್ಚಿದ.

*　　　*　　　*

" ಪೊಂ ! ಪೊಂ ! ಪೊಂಂಂ "

" ಬೌ ! ಬೌಂ ! ಬೌಂ ! "

" ಪೊಂ ! ಪೊಂ ! "

" ಬೌ ! ಬೌ ! ಬೌ ! ಬೌಂ ! "

" ಲಚ್ಚಾ ! "

" .... "

" ಏ ಲಚ್ಚಾ ! "

" ಓ ! ಬಂದೆ ಒಡೆಯಾ ! "

" ನಿದ್ರೆಮಾಡುತ್ತೀಯೇನೊ ? ಅಗೊ, ನಾಯಿ ಬೊಗಳಿತು. ಗೇಟಿನ ಬಳಿಯಲ್ಲಿ ಯಾರದೋ ಕಾರು ಬಂದಂತಿದೆ. ಯಾರೆಂದು ನೋಡಿಬಾ ! " ಲಚ್ಚ ನೋಡಿ ಬರಲು ಹೋದ.

" ಒಳಗೆ ಬನ್ನಿಯಮ್ಮಾ, ರಾಯರಿರುವರು ! " ಲಚ್ಚ ಗೇಟನ್ನು ತೆರೆದು ಹೊರಗೆ " ಗರ್ " ಎನ್ನುತ್ತಿದ್ದ ಕಾರಿಗೆ ದಾರಿಮಾಡಿ ಕೊಟ್ಟ. ಕಾರು " ಬರ್ " ಎಂದು ಒಳಗೆ ಓಡಿ, ಸೌಧದ ಇದಿರು ಬಂದು ನಿಂತಿತು. ಕಾರಿನಿಂದ ಇಬ್ಬರು ಹೆಂಗುಸರು ಇಳಿದರು. ಒಬ್ಬಳು ನಡುಹರಯದವಳು ; ಆದರೂ ರೂಪವಂತಳು. ಇನ್ನೊಬ್ಬಳು ತುಂಬುಜವ್ವನೆ; ಅರಳುವ ಮೊಗ್ಗಿನ ಸೌಂದರ್ಯ.

" ಇಗೊ, ಇದನ್ನು ' ಕೊಡುಗೈ 'ಯವರಿಗೆ ಕೊಡು ! " ಎನ್ನುತ್ತಾ ಆ ನಡುಹರಯದವಳು, ತನ್ನ ಕೈಯಲ್ಲಿ ತೂಗುತ್ತಿದ್ದ ತೊಗಲಿನ ಕೈಚೀಲವನ್ನು ತೆರೆದು ಒಂದು ಕಾಗದದ ತುಂಡನ್ನು ಕೊಟ್ಟಳು. ಲಚ್ಚ ಅದನ್ನು ಸಾಹುಕಾರರಿಗೆ ಕೊಡಲು ತೆರಳಿದ.

" ಒಡೆಯಾ ! "

" ಯಾರೋ ಅದು ಬಂದುದು ? "

" ಯಾರೆಂದು ತಿಳಿದಿಲ್ಲ ಒಡೆಯಾ, ಇಕೊಳ್ಳಿ ಒಡೆಯಾ— ಈ ಕಾಗದ ಕೊಟ್ಟಿರುತ್ತಾರೆ, ಬಂದವರು ! " ಎನ್ನುತ್ತಾ ಲಚ್ಚ ಕಾಗದ

(೩೫೯ನೆಯ ಪುಟದಿಂದ ಸಾಗಿದ್ದು)

ಮರಳಿ ಬರುವರೆಂದು ತಿಳಿಯಿರಿ. ಹಾಗೆ ತಿಳಿದಲ್ಲೂ ಸುಖವಿಲ್ಲ. ಯಾಕೆಂದರೆ ಜಗತ್ತಿನ ಖಂಡೋಪಖಂಡಗಳನ್ನು ವರ್ಷಾನುವರ್ಷ ಅಲೆದು ಬಂದವರಿಗೆ ಯಾವ ಭಾಷೆ ರೂಢಿಯಲ್ಲುಳಿದಿರುವುದು ? ಅವರ ಅನುಭವದ ಭಾಷೆಯಲ್ಲಿಯೆ ಬರೆಯುವುದೆಂದರೆ ಕಾಯಿದೆ-ಕಾನೂನು ಅಡ್ಡಬರಬಹುದು !

ಇದಲ್ಲದೆ ಬಾಹ್ಯದೃಷ್ಟಿಯಿಂದ ವಿಚಾರಮಾಡಿದರೆ—ಅಥವಾ ಹೆಚ್ಚೇನು ?—ಉದಾಹರಣಾರ್ಥವಾಗಿ ಒಂದು ಮಹತ್ತ್ವದ ಮಾತನ್ನು ಹೇಳಿಬಿಡುವೆ, ಎಂದರೆ ಒಟ್ಟು ಪರಿಸ್ಥಿತಿಯ ಕಲ್ಪನೆ ತಮಗೆ ಸುಲಭವಾಗಿ ಬಂದೀತು. ಆ ಮಹತ್ತ್ವದ ಮಾತೆಂದರೆ, ಇನ್ನು ನಾನೀ ಲೇಖನವನ್ನು ಮುಗಿಸುವೆ. ಇದೆಂತಹ ಮಹತ್ತ್ವದ ಮಾತು ಎನಬೇಡಿರಿ. ಯಾಕೆಂದರೆ, ಯುದ್ಧದ ನಿಮಿತ್ತದಿಂದ ಕಾಗದವು ಕೇವಲ ತುಟ್ಟಿಯಾಗಿಲ್ಲ, ದೊರೆಯುವುದೆ ದುರ್ಲಭವಾಗಿದೆ. ಆದ್ದರಿಂದ ಬರೆಯುವುದನ್ನು ಬೇಗ ಮುಗಿಸುವುದು ಅತ್ಯಂತ ಮಹತ್ತ್ವದ್ದಾಗಿದೆ. ಶಕ್ಯವಾದರೆ ಮೊದಲುಮುಗಿಸಿ ಆ ಮೇಲೆ ಬರೆಯಬೇಕು—ಇಹಕ್ಕೆ ಸುಖ, ಪರರಿಗೆ ಪರೀಕ್ಷೆ !

ನೀಡಿದ; ಸಾಹುಕಾರರು ಅದನ್ನು ತಕ್ಕೊಂಡು ದಿಟ್ಟಿಸಿದರು ಮಾತ್ರ. ತಟ್ಟನೆ "ಏ, ಒಳಗೆ ಬರಹೇಳೊ! ನಿನಗೆ ಅಷ್ಟು ತಲೆ ಇಲ್ಲವೆ? ಗೇಟಿನ ಬಳಿಯಲ್ಲಿ ಅವರಂತಹರನ್ನು ನಿಲ್ಲಿಸುವುದೆ?" ಸಾಹುಕಾರರು ಕೋಪವನ್ನು ಪ್ರದರ್ಶಿಸುತ್ತಾ, ನಿಮಿಷಾರ್ಧದಲ್ಲಿ ಮಾಳಿಗೆಯಿಂದ ಚಾವಡಿಗೆ ಬಂದರು.

"ಓಹೋ, ಬರಬೇಕಾದ್ದು, ಒಳಗೆ ಬನ್ನಿ! ಅಲ್ಲಿ ಯಾಕೆ ನಿಂತಿರಿ?" ಸಾಹುಕಾರರು ಹೊರಗೆ ನಿಂತಿದ್ದ ಆ ಹೆಂಗುಸರನ್ನು—ಆದರದಿಂದ ನಗುತ್ತಾ—ಆಹ್ವಾನಿಸಿದರು.

ಸಾಹುಕಾರರು ಮುಂದೆ, ಹೆಂಗುಸರು ಹಿಂದೆ "ಪಟ! ಪಟ!" ಎನ್ನುತ್ತಾ ಮಾಳಿಗೆಗೆ ಏರಿದರು.

"ವೀಳ್ಯ ಸ್ವೀಕರಿಸು ರತ್ನಾ ನಾನಿ," ದುಂಡುಮೇಜಿನ ಸುತ್ತಲಿರುವ ದಿಂಬಿನ ಕುರ್ಚಿಯಲ್ಲಿ ಆ ಹೆಂಗುಸರಿಬ್ಬರೂ ಒರಗಿದಮೇಲೆ, ಸಾಹುಕಾರರು ಬೆಳ್ಳಿಯ ತಬಕವನ್ನು ಆ ಹೆಂಗುಸರ ಇದಿರು ದೂಡಿದರು.

"ಬಹಳ ಸಂತೋಷ!" ಎನ್ನುತ್ತಾ ಆ ಹೆಂಗುಸರು ಅದನ್ನು ಸ್ವೀಕರಿಸಿದರು.

"ಅನಿರೀಕ್ಷಿತವಾಗಿ ಬಂದೆಯಲ್ಲ; ಏನು ಕಾರ್ಯ ನಾನೀ?"

"ಮಹಾಶಯಾ, ತಾವು ಹೀಗೆ ಕೇಳಬಹುದೆ? ತಮ್ಮಲ್ಲಿ ನಾನು ಯಾವಾಗಲೂ ಬರಬೇಕಾದ್ದೆ ಅಲ್ಲವೆ? ನನ್ನನ್ನು ಮರೆತುಬಿಟ್ಟಂತೆ ಮಾತಾಡುವಿರಲ್ಲ?" ವೀಳ್ಯದೆಲೆಗೆ ಸುಣ್ಣ ಹಚ್ಚುತ್ತಾ ಅವಳೆಂದಳು.

"ರತ್ನಾ, ಕೋಪಿಸಬೇಡ! ನಾನು ನಿನ್ನನ್ನು ಮರೆತೆನೆ? ಛೆ! ಕನಸಿನಲ್ಲೂ ಅಸಾಧ್ಯ! ನಾನೆಂದದ್ದು ಹಾಗಲ್ಲ. ನೀನು ಇಲ್ಲಿಯವರೆಗೆ ಬರಬೇಕಾದರೆ ಏನಾದರೂ ವಿಶೇಷ ಕಾರ್ಯವಿರಬೇಕು; ಅಂತಹ ಕಾರ್ಯವೇನಾದರೂ ಇದೆಯೋ—ಎಂತ ನಾನು ಕೇಳಿದ್ದು. ಅದಕ್ಕೆ ನೀನು ವಿಪರೀತವಾಗಿ ಅರ್ಥಮಾಡುವುದೆ?"

"ಮಹಾಶಯಾ, ವಿನೋದಕ್ಕೆ ಹೇಳಿದೆ; ಅಷ್ಟೆ! ಆದರೆ ತಾವು ಸರಿಯಾಗಿ ಯೋಚಿಸಿದಿರಿ! ತಮ್ಮಿಂದ ಒಂದು ಅತ್ಯವಶ್ಯ ಕಾರ್ಯವಾಗಬೇಕಿದೆ, ಅದಕ್ಕಾಗಿ ನಾನು ಬಂದುದು." ಅವಳು ಸುರುಳಿಯಾಗಿ ಮಡಿಸಿದ ಎಲೆಯನ್ನು ಬಾಯಿಯೊಳಗೆ ತುರುಕಿಸುತ್ತಾ ಜೊತೆಗೆ ಒಂದಿಷ್ಟು ಅಡಕೆಪುಡಿಯನ್ನು ಹಾಕಿಕೊಂಡಳು.

"ಎಂತಹ ಕಾರ್ಯವದು ನಾನೀ? ಅಗತ್ಯವಾಗಿ ಹೇಳು!"

"ನಡೆಯಿಸಿ ಕೊಡುವಿರೋ ಇಲ್ಲವೋ ಎಂದು ಸಂಶಯ!" ಒಂದು ತೊಲೆ ಹೊಗೆಸೊಪ್ಪನ್ನು ಹಲ್ಲಿನಡೆಗೆ ಸೇರಿಸಿದಳು.

"ನಾನೀ, ಈಹೊತ್ತು ವಿಪರೀತವಾಗಿ ಮಾತನಾಡುತ್ತೀಯಲ್ಲ! ನೋಡು, ಯಾವಾಗಲಾದರೂ ನಾನು ನಿನ್ನ ಬೇಡಿಕೆಯನ್ನು—ಎಂತಹದ್ದೇ ಇರಲಿ ಅದು—ಮನ್ನಿಸದೆ ಹೋದದ್ದು ಇದೆಯೊ? ಅವಶ್ಯವಾಗಿ ಮನಬಿಚ್ಚಿ ಹೇಳು, ನಿನ್ನ ಕಾರ್ಯವೆಂಬುದನ್ನು! ಖಂಡಿತವಾಗಿ ನಡೆಯಿಸಿಕೊಡುವೆನು." ಅವಳು ವೀಳ್ಯದ ರಸವನ್ನು ಕಿಟಕಿಯಿಂದ ಹೊರಗೆ ಉಗುಳಿದಾಗ, ಮುಖದ ಮೇಲೆ ಹನಿಹನಿಯಾಗಿ ಹಾರಿಬಂದ ಎಂಜಲ ಹನಿಗಳನ್ನು ಒರಸುತ್ತಾ ಸಾಹುಕಾರರೆಂದರು.

"ಖಂಡಿತವಲ್ಲವೆ?"

"ಖಂಡಿತ ರತ್ನಾ!"

"ಹಾಗಾದರೆ ಮಹಾಶಯಾ, ಇವಳು—ನಮ್ಮ ಮಿಸ್ ನಲಿನಿ; ನಾಡಿದು ಸೋಮವಾರ, ಪಾಶ್ಚಾತ್ಯ ನೃತ್ಯಕಲೆಯನ್ನು ಅಭ್ಯಸಿಸಲು ಅಮೇರಿಕಕ್ಕೆ ತೆರಳುವವಳಿರುವಳು. ನೋಡಿ, ಉದ್ದೇಶ ಹಿರಿಯದಾದುದು— ಕಲಾಸೇವೆ; ಆದರೆ.. ಬೆಂಬಲ ಕಿರಿದಾಗಿದೆ. ತಮ್ಮಂತಹ ಕೊಡುಗೈಯ ಮಹಾಶಯರು ಇಂತಹ ಕೆಲಸಕ್ಕೆ ಮುಂದುಬಿದ್ದು ಪ್ರೋತ್ಸಾಹಿಸಬೇಕು!" "ಪಿಚ್" ಎಂದು ಅವಳು ಉಗುಳುತ್ತಾ ವಿವರಿಸಿದಳು.

"ಉತ್ತಮ ಕಾರ್ಯ, ಉದಾತ್ತ ಧ್ಯೇಯ! ಅತ್ಯವಶ್ಯ! ನಾನೀ, ನಾನೆಷ್ಟು ಕೊಡಬೇಕು ಹೇಳು, ಅಷ್ಟು ಕೊಟ್ಟು ಬಿಡುತ್ತೇನೆ." ಸಾಹುಕಾರರು ನಗುತ್ತಾ ನುಡಿದರು.

"ನಾನೆಷ್ಟೆಂದು ಹೇಳಲಿ ಮಹಾಶಯಾ! ತಮಗೆ ತಿಳಿಯುವುದಿಲ್ಲವೆ? ಇಂತಹ ಕೆಲಸದಲ್ಲಿ ಬಹಳ ನುರಿತ ಅನುಭವಿಕರಾದ ನಿಮಗೆ ನಾನೇನು ಸೂಚನೆ ಕೊಡಲಿ? ತಾವೇ ಆಳವಾಗಿ ಯೋಚಿಸಿ, ಎಷ್ಟಾದರೂ ಕೊಟ್ಟುಬಿಡಿ!" "ಹು ಹು" ನಗುತ್ತಾ ಅವಳು ಮಾತನಾಡಿ ತಿರುಗಿ ಉಗುಳಿದಳು.

"ಸಹಜವಾದುದು! ಚೆನ್ನಾಗಿ ಹೇಳಿದೆ! ನೋಡು, ಈಗ ನಾನು ಬಹಳ ತೊಡಕಿನಲ್ಲಿ ಸಿಲುಕಿದ್ದೇನೆ. ಎರಡುಸಾವಿರಕ್ಕಿಂತ ಮಿಕ್ಕಿ ಕೊಡಲು ತುಂಬಾ ಕಷ್ಟ!"

"ಮಹಾಶಯಾ, ತಮ್ಮಂತಹರ ಬಾಯಿಯಿಂದ ಇಂತಹ ಮಾತುಗಳು ಬರುವುದೇ?"

"ಆಗಲಿ, ರತ್ನಾ, ಇನ್ನೊಂದು ಸಾವಿರ ಹೆಚ್ಚಿಸಿದೆ; ಈಗ ತೃಪ್ತಿಯಾಯಿತೊ?"

"ಆಶ್ಚರ್ಯ! ಮಹಾಶಯಾ, ಒಂದು ಆಶ್ಚರ್ಯ ನಡೆಯುತ್ತಿದೆ!"

"ಆಶ್ಚರ್ಯ! ಎಲ್ಲಿ? ಏನು?"

"ಅಲ್ಲ; ಕೊಡುಗೈಯೆಂದು ಪತ್ರಿಕೆಗಳಲ್ಲಿ ಹೊಗಳಿಸಿಕೊಂಡ ಸಾಹುಕಾರ ಸೂರಪ್ಪನವರ ಯೋಗ್ಯತೆ; ಬರೇ ಮೂರುಸಾವಿರವೆಂದು ನನಗೆ ಈಗ ತಿಳಿಯಿತು; ಇದೇ ಆಶ್ಚರ್ಯ!" ಕೆಂಪಾದ ನಾಲಗೆಯಿಂದ ತುಟಿಗಳನ್ನು ಸವರುತ್ತಾ ಅವಳು ಮೂದಲಿಸಿದಳು.

"ನನ್ನಿಂದ ಹೆಚ್ಚು ಕೊಡಲು ಸಾಧ್ಯವಿಲ್ಲದಿದ್ದರೆ ಏನು ಮಾಡಲಿ ರತ್ನಾ?"

"ದೂರದ ಪ್ರಯಾಣವೆಂದು ತಿಳಿದೂ ತಾವು ಹೀಗೆ ಹೇಳುವುದೆ!"

"ಆಗಲಿ, ಇನ್ನೂ ಒಂದು ಸಾವಿರ ಹೆಚ್ಚಿಸಿದೆ; ಇದಕ್ಕಿಂತ ಒಂದು ಕಾಸೂ ಹೆಚ್ಚು ಸಿಕ್ಕಲಾರದು. ನಾಲ್ಕುಸಾವಿರ ಬೇಕಾದರೆ, ಈಗಲೇ ಕೊಡುತ್ತೇನೆ!" ಸಾಹುಕಾರರು ನಿರ್ಧಾರಕ್ಕೆ ಬಂದಂತೆ ಖಂಡತುಂಡವಾಗಿ ಹೇಳಿದರು.

"ತಮ್ಮ ಅಂತಸ್ತಿಗೆ ಈ ಮಾತು ಒಂದಿಷ್ಟೂ ಹೊಂದದು!"

"ನೀನು ಇನ್ನು ಏನೇ ಹೇಳು ರತ್ನಾ, ಇದಕ್ಕಿಂತ ಹೆಚ್ಚು ಸಾಧ್ಯವೇ ಇಲ್ಲ. ಹೆಚ್ಚಿಗೆ ಕೊಡುವ ಸ್ಥಿತಿಯಲ್ಲಿ ನಾನಿಲ್ಲ ನೋಡು ಈಗ!" ಸಾಹುಕಾರರು ಕುರ್ಚಿಯಿಂದ ಎದ್ದು ತಮ್ಮ ಖಜಾನೆಯನ್ನು ತೆರೆದು, ಒಂದೊಂದು ಸಾವಿರದ ನಾಲ್ಕು ನೋಟುಗಳನ್ನು ಎಣಿಸಿ ರತ್ನಾನಾನಿಯ ಮುಂದಿಟ್ಟರು.

"ಮಹಾಶಯಾ, ಹೇಗೂ ಎರಡನ್ನು ನಾಲ್ಕಕ್ಕೆ ಏರಿಸಿದಿರಿ; ಹಾಗೆಯೇ ಅದನ್ನು ಐದಕ್ಕೆ ಏರಿಸಿಬಿಡಿ! ಸಾಕು; ಐದುಸಾವಿರ ಧಾರಾಳವಾಯಿತು! ಅದಕ್ಕಿಂತ ಒಂದು ದಮ್ಮಡಿಯೂ ಹೆಚ್ಚಿಗೆ ಬೇಡ; ಈ ಒಂದು ಬೇಡಿಕೆಯನ್ನು ನನಗಾಗಿ ಅಲ್ಲಗಳೆಯದಿರಿ." ತಿರುಗಿ ಅವಳು ರಸವನ್ನು ಉಗುಳಿ, ಸಾಹುಕಾರರನ್ನೇ ನೋಡಿದಳು.

"ನೋಡು ಬಹಳ ಕಷ್ಟ! ಆಗಲಿ, ಏನು ಮಾಡುವುದು? ಆ ಒಂದು ಸಾವಿರ ನಾಳೆ ಕೊಡುತ್ತೇನೆ; ನಿನ್ನ ಮಾತಿಗೆ ನಾನು ಸೋಲಲೇ ಬೇಕಲ್ಲ!" ನಗುತ್ತಾ ಸಾಹುಕಾರರು ಉಸುರಿದರು.

"ಬಹಳ ಉಪಕಾರ ಮಹಾಶಯಾ, ನಾನು ಮತ್ತು ಇವಳು ತಮಗೆ ಭಾರಿ ಋಣಿಗಳಾದೆವು. ತಾವು ತಮ್ಮ 'ಕೊಡುಗೈ' ಎಂಬ ಬಿರುದಿಗೆ ಉಚಿತವಾಗಿ ಆಚರಿಸಿದಿರಿ. ಬಹಳ ಸಂತೋಷ!" ಎಂದೆನ್ನುತ್ತಾ ಅವಳು ಮೇಜಿನಮೇಲಿದ್ದ ನಾಲ್ಕೂ ನೋಟುಗಳನ್ನು ತನ್ನ ಕೈಚೀಲಕ್ಕೆ ತುರುಕಿದಳು; ಸಾಹುಕಾರರು ನಗುತ್ತಾ ಅವಳನ್ನು ನೋಡಿದರು.

"ಬನ್ನಿ, ಮಹಾಶಯಾ! ಒಮ್ಮೆ ಮನೆಯ ವರೆಗೆ ಬರುವ ಕೃಪೆ ಮಾಡಿ! ಹೇಗೂ ನಮ್ಮ ಕಾರು ಇದೆ!" ರತ್ನಾನಾನಿಯು ಸಾಹುಕಾರರನ್ನು ಅವಳ ಮನೆಗೆ ಆಹ್ವಾನಿಸಿದಳು.

"ಓಹೋ! ಅದಕ್ಕೇನೀಗ, ಈಗಲೆ ಬಂದೆ, ಹೋಗುವ!" ಎಂದು ಸಾಹುಕಾರರು ಸಿಂಗರಿಸಿಕೊಂಡು ಸಿದ್ಧರಾದರು.

ಮೂವರೂ ಮೆಟ್ಟಿಲನ್ನು ಇಳಿದು ಬಂದು ಕಾರನ್ನು ಹತ್ತಿದರು. ಕಾರು "ಗೊರ್" ಎನ್ನುತ್ತಾ ಗೇಟಿನ ಸನಿಯಕ್ಕೆ ಬಂದು ನಿಂತಿತು. ಲಚ್ಚ ಓಡುತ್ತಾ ಬಂದು ಗೇಟನ್ನು ತೆರೆದ.

"ಏ! ಏಳೋ! ಕಾರು ಬರುತ್ತದೆ," ಲಚ್ಚನೆಂದ..ಹೊರಗಡೆ ನಿಂತಿದ್ದ ವ್ಯಕ್ತಿಯನ್ನು ಕಂಡು.

"ಅಯ್ಯಾ, ರಾಯರೆ....." ಕೂಗಿದ ಆ ವ್ಯಕ್ತಿ.

"ಈಗಿಲ್ಲವೊ! ನಾಳೆಬಾ." ಮೋಟರಿನ ಒಳಗೆ ರತ್ನಳೊಡನೆ ಕುಳಿತಿದ್ದ ಸಾಹುಕಾರರೆಂದರು.

"ರಾಯರೆ, ಶನಿವಾರ! ಈಹೊತ್ತು ಶನಿವಾರ! ತಾವು ನನ್ನನ್ನು ಬರಹೇಳಿದ್ದು ಈಹೊ......"

"ಅನವಶ್ಯವಾಗಿ ಹರಟಬೇಡ, ನಾಳೆಬಾ! ನಾಳೆಖಂಡಿತ! ಈಗ ನಾನು ಜರೂರ್ ಕೆಲಸದ ಮೇಲೆ ಹೊರಟಿದ್ದು ನಿನಗೆ ಕಾಣುವುದಿಲ್ಲವೇನೋ? ದಾರಿಬಿಡೊ, ಕಾರು ಮೈಮೇಲೆ ಹೋದೀತು ನೋಡು!" ಸಾಹುಕಾರರು ಗದ್ದರಿಸಿದರು.

"ರಾಯರೆ, ಮೂರುದಿನಗಳಿಂದ ಊಟಮಾಡಲಿಲ್ಲ. ಈಹೊತ್ತು ಶನಿವಾರ!"......

"ಡ್ರೈವರ್! ಏನುನೋಡುತ್ತಿಯೋ? ಬಿಡೊ!" ಸಾಹುಕಾರರು ಆತುರತೆಯಿಂದೆಂದರು.

"ಪೊಂ! ಪೊಂ! ಪೊಂ!" ಕಾರು ಚಲಿಸಿತು.

"ರಾಯರೆ, ರಾಯ..ರೆ, ರಾ...." ಭೈಯ್ಯಾ ಸರಿದುನಿಂತ.

"ಪೊಂ! ಪೊಂ! ಪೊಂ! ಪೊಂ! ಪೊಂ!......"

ಕಾರು ಮುಂದೆ ಹೋಯಿತು, ಲಚ್ಚ ಗೇಟು ಮುಚ್ಚಿದ.

ಸರ್ವಮಾನ್ಯ!

ಚಳಿಗಾಲದಲ್ಲಿ ಶಕ್ತಿಯ ಬಗ್ಗೆ

ಸರ್ವೋತ್ಕೃಷ್ಟವೆಂದು

ರಕ್ತವರ್ಧಕವನ್ನೇ

ಎಲ್ಲ ಜನರು ಉಪಯೋಗಿಸುತ್ತಿರುವರು.



ಅಷ್ಟವರ್ಗ

ಚ್ಯವನಪ್ರಾಶ

●

ಸುವರ್ಣ

ಮಾಲಿನೀ ವಸಂತ

●

ಮಕರಧ್ವಜಗುಟಿ

●

ಮುಂತಾದ

ಶಕ್ತಿವರ್ಧಕ

ಔಷಧಗಳನ್ನು

ತರಿಸಿರಿ.

ಕರ್ನಾಟಕ ಕೇಂದ್ರ ಮರಾಠಾಗಲ್ಲಿ, ಹುಬ್ಬಳ್ಳಿ.

ಹಾಳಿನಿಂದ ಬಾಳು

ಪ್ರೊ. ಎನ್. ಎಂ. ಕುಲಕರ್ಣಿ ಎಂ. ಎ.
ಬನಾರಸ ಯುನಿವ್ಹರ್ಸಿಟಿ

೧

ಗಾಲ್ಸ್‌ವರ್ದಿ (Galsworthy) ಎಂಬ ಆಂಗ್ಲಸಾಹಿತಿಯು ತನ್ನ ನಾಟಕಗಳಲ್ಲಿ ಜೀವನದ ದುರಂತಚಿತ್ರಗಳನ್ನು ರಚಿಸಿ, ಇಂದಿನ ನಮ್ಮ ನಾಗರಿಕತೆಯಲ್ಲಿ ಕಂಡುಬರುವ ದೋಷಗಳೆಲ್ಲ ಮಾನವಶಕ್ತಿಯ ದುರುಪಯೋಗದಿಂದ ಪುಷ್ಟಿಹೊಂದುತ್ತವೆಂದು ತೋರಿಸಿದ್ದಾನೆ. ‘Strife (ಕಲಹ)’ ಎಂಬ ಇವನ ದುರಂತ-ಚಿತ್ರದಲ್ಲಿ, ಆಧುನಿಕ ಕಾರಖಾನೆಗಳ ಕೆಲಸಗಾರರು ಸಂಪುಹೂಡಿ ಯಾವ ರೀತಿಯಲ್ಲಿ ಕೇಡಿಗೀಡಾಗುತ್ತಾರೆಂಬುದನ್ನು ಹೃದಯಂಗಮವಾಗಿ ತೋರಿಸಿ, ಇಂತಹ ‘ಕಲಹ’ ದಿಂದ ಕಂಡುಬರುವ ಮಾನವ-ಪ್ರಯತ್ನದ ‘ ಹಾಳು ’ (Waste) ಅದೆಷ್ಟು ಮೂರ್ಖತನದ್ದು ಮತ್ತು ದುಃಖಾಂತಿಕವಾದದ್ದು ಎಂಬ ಸತ್ಯವನ್ನು ಸಾರಿದ್ದಾನೆ. ಈ ಹಾಳಿನಿಂದ ಸಂಪುಗಾರರಿಗಾಗಲಿ, ಕಾರಖಾನೆಯ ಒಡೆಯರಿಗಾಗಲಿ ಯಾವಬಗೆಯ ಪ್ರಯೋಜನವೂ ಉಂಟಾಗದೆ, ವೃಥಾ ಕಾಲ-ಶಕ್ತಿ ವೆಚ್ಚಮಾಡಿ ಕೊನೆಗೆ ‘ಯಥಾಪೂರ್ವಮಕಲ್ಪಯತ್’ ಎಂಬಂತೆ, ಒಬ್ಬರೂ ಈ ಕಲಹದಿಂದ ಜಾಣರಾಗುವುದಿಲ್ಲ, ಹಿತ ಹೊಂದುವುದಿಲ್ಲ. ಈ ತರದ ಹಾಳು, ಬಾಳಿನ ನೈತಿಕ ಹಿತವನ್ನು ಬದಿಗಿರಿಸಿ ಸಾಮಾನ್ಯತಃ ಮಾನವನ ಪ್ರತಿಯೊಂದು ಕರ್ಮದಲ್ಲಿಯೂ ಕಂಡುಬರುತ್ತಿದ್ದರೂ, ನಮ್ಮ ಇಂದಿನ ನಾಗರಿಕತೆಯಲ್ಲಿ ಇನ್ನೊಂದು ಬಗೆಯ ಹಾಳುತನವು ನಮ್ಮ ಕಣ್ಣೆದುರಿನಲ್ಲೇ ಕಂಡುಬರುತ್ತದೆ. ಈ ಹಾಳು ಮಾನವವ್ಯಕ್ತಿಯ ನೈತಿಕ ಅಥವಾ ಆಧ್ಯಾತ್ಮಿಕ ಶಕ್ತಿಯ ದುರುಪಯೋಗವಾಗಿರದೆ, ನಾವು ದೈನಂದಿನದ ಬಾಳಿನಲ್ಲಿ ಮಾಡುವ ಭೌತಿಕ ಹಾಳಿಗೆ ಸಂಬಂಧಿಸಿದುದು, ಅರ್ಥಾತ್ ಈ ಹಾಳು ಸ್ಥೂಲರೂಪವಾದದ್ದು. ನಾವು ಬಾಳಿನಲ್ಲಿ ಉಪಯೋಗಿಸಿ ಹೆಚ್ಚಾದ, ಇಲ್ಲವೆ ಉಪಯೋಗಮಾಡಲರಿಯದೆ ತಿಪ್ಪೆಗಳಲ್ಲಿಯೂ ಮ್ಯುನಿಸಿಪಲ್ ಡಬ್ಬಿಗಳಲ್ಲಿಯೂ ತೂರಿಬಿಡುವ ವಸ್ತುಗಳಿಗೆ ಸಂಬಂಧಿಸಿದುದು. ಇಂತಹ ಹಾಳಿನಿಂದ ಬಾಳುರಿಗೆ ಪುಟಬರಲು ಸಾಧ್ಯವೇ ? ಎಂದು ವಿಚಾರಿಸಬೇಕಾಗಿದೆ. ನೈತಿಕ ಹಾಳಿನಿಂದ ಸಂಭವಿಸುವ ಪ್ರಮಾದಗಳು ದೂರವಾಗಬೇಕಾದರೆ ಆ ಬಗೆಯ ಸುಧಾರಣೆಗೆ ಹೆಚ್ಚು ಕಾಲ ಬೇಕು ; ಪ್ರಯತ್ನಬೇಕು ; ಸಾರ್ವಜನಿಕ ಶಿಕ್ಷಣಬೇಕು. ಆದರೆ ಉಪಯೋಗವಿಲ್ಲವೆಂದು ಬಿಸುಡುವ ವಸ್ತುಗಳಿಂದ ಉಪಯೋಗತೆಗೆದುಕೊಳ್ಳುವುದು ತಾತ್ಕಾಲಿಕ ಫಲವುಳ್ಳದ್ದು. ಇಂತಹ ಹಾಳಿನಿಂದಲೂ ಬಾಳಿನ ಬೆಲೆಯನ್ನೂ ಸೊಬಗನ್ನೂ ಬೆಳೆಯಿಸಲು ಸಾಧ್ಯವಿದೆಯೆಂದು ಆಧುನಿಕ ವಿಜ್ಞಾನಿಗಳ ಪ್ರಮೇಯಗಳಿಂದ ಕಂಡುಬರುತ್ತದೆ. ಈ ಬಗೆಯ ಸಾಧನಗಳು ಈಗಾಗಲೇ ಪಾಶ್ಚಾತ್ಯರಾಷ್ಟ್ರಗಳಲ್ಲಿ ಸಿದ್ಧಿಯಾಗಹತ್ತಿವೆ. ಇಂತಹ ಪ್ರಮೇಯಗಳಿಂದ ಭಾರತದ ಬಡತನವು ಪೂರ್ಣ ನಾಶವಾಗದಿದ್ದರೂ, ಈ ಸಿದ್ಧಾಂತಗಳಿಂದ ಕೆಲವೊಂದು ಪಾಠಗಳನ್ನು ನಾವು ಕಲಿತುಕೊಳ್ಳಬಹುದು.

ಸಾಮಾನ್ಯವಾಗಿ ಹಾಳೆಂದು ಹೇಳುವ ವಸ್ತುಗಳಲ್ಲಿ ಎರಡು ಭಾಗ ಮಾಡಬಹುದು. ಉಪಯೋಗಮಾಡಿ ತ್ಯಜಿಸಿದ ವಸ್ತುಗಳ ಹಾಳೊಂದು ; ಉಪಯೋಗಮಾಡದೆ ಬಿಟ್ಟ ವಸ್ತುಗಳ ಹಾಳು ಇನ್ನೊಂದು. ಈ ಎರಡನೆಯ ವಿಭಾಗದಲ್ಲಿ ನೈಸರ್ಗಿಕ ಅಂಶಗಳನ್ನು ಸೇರಿಸಬಹುದು. ಹವೆ, ನೀರು, ಬೆಳಕು ಮುಂತಾದ ಈ ಸೃಷ್ಟಿಯ ಅವಯವಗಳನ್ನು ನಾವು ಸಂಪೂರ್ಣವಾಗಿ ಉಪಯೋಗಮಾಡುವುದಿಲ್ಲ. ಜಗತ್ತಿನಲ್ಲಿರುವ ಬೀಳುಭೂಮಿ, ಹಾಳು ಮರುಭೂಮಿ, ಉಸುಬಿನ ಬೈಲುಗಳನ್ನು ಅವಿಶ್ರಾಂತವಾಗಿ ನಿರರ್ಥಕವಾಗಿ ಬಿಸಿಮಾಡುವ ಸೂರ್ಯರಶ್ಮಿಗಳು, ಅಲ್ಲಲ್ಲಿ ಹರಿಯುವ ಮಹಾನದಿಗಳು, ಜಲಪಾತಗಳು, ಪೃಥ್ವಿಯ ಗರ್ಭದಲ್ಲಿರುವ ಅನೇಕ ದ್ರವ್ಯಗಳು, ಆಕಾಶ ವಾತಾವರಣದಲ್ಲಿರುವ ದ್ರವ್ಯಾಂಶಗಳು—ಇವೇ ಮೊದಲಾದ ನೈಸರ್ಗಿಕ ಅಂಗಾಂಗಗಳನ್ನು ನಾವು ಸಂಪೂರ್ಣವಾಗಿ ಉಪಯೋಗಮಾಡುವುದೇ ಇಲ್ಲ. ಒಂದು ರೀತಿಯಲ್ಲಿ ಇವೆಲ್ಲವುಗಳಿಂದ ಹೊರಡಿಸಬಹುದಾದ ಶಕ್ತಿಯೆಲ್ಲ ಹಾಳಾಗುತ್ತಲೇ ಇದೆ ಎಂದು ಹೇಳಬಹುದು. ಉದಾಹರಣಾರ್ಥವಾಗಿ ಸೂರ್ಯರಶ್ಮಿಗಳನ್ನೇ ತೆಗೆದುಕೊಳ್ಳೋಣ. ಸೂರ್ಯನಿಂದ ಬೆಳಕು ಬರುವುದು ನಮ್ಮ ಯತ್ನದಿಂದಲ್ಲವಷ್ಟೇ ? ಆದರೆ ಈ ಸೂರ್ಯಶಕ್ತಿಯನ್ನು ಯಂತ್ರಪುಟವನ್ನಾಗಿ ಉಪಯೋಗಿಸಿದರೆ, ಇಂದು ಮಾನವನಿಂದಲೂ ಇನ್ನಿತರ ಶಕ್ತಿಗಳಿಂದಲೂ ಸಾಂಗವಾಗುತ್ತಿರುವ ಕಾರ್ಯಗಳನ್ನು ಈ ಶಕ್ತಿಯಿಂದ ಮಾಡಿಸಬಹುದು. ಹರಿಯುವ ನೀರಿನ ಶಕ್ತಿಯಿಂದ ಜಲಯಂತ್ರಗಳನ್ನೂ, ಬೀಸುವ ಹವೆಯಿಂದ ಗಾಳಿಯಂತ್ರಗಳನ್ನೂ ನಿರ್ಮಿಸಿರುವಂತೆ, ಪ್ರಯೋಜನವಿಲ್ಲದೆ ಬೆಳಗುವ ಸೂರ್ಯಕಿರಣಗಳಿಂದ ಶಕ್ತಿಯೊಂದನ್ನು ಹಿಡಿದು, ಮಾನವಜೀವನಕ್ಕೆ ಬೇಕಾಗುವ ವಸ್ತುನಿರ್ಮಾಣಮಾಡಬಹುದು. ಈ ವಿಷಯದಲ್ಲಿ ಪಾಶ್ಚಾತ್ಯ ಸಂಶೋಧಕರೊಬ್ಬರು Solar-flash

ಮನುಷ್ಯನ ಬಾಳಿನ ದೃಷ್ಟಿಯಿಂದ ಈಗ ಹಾಳೆಂದು ಬಿಸುಡುವ ‘ ಒಡಕು ’ ‘ ಹರಕು ’ ಗಳಿಗೂ ಒಂದು ವಿಶಿಷ್ಟವಾದ ಬೆಲೆಯಿದೆ; ಪ್ರಯೋಜನ ಶಕ್ತಿಯಿದೆ. ಆದರೆ ಆ ಕಸದಲ್ಲಿಯ ರಸವನ್ನು ಕಂಡುಹಿಡಿಯಲಿಕ್ಕೆ ನಮಗೆ ಕಲ್ಪಕಬುದ್ಧಿಯ ಆವಶ್ಯಕತೆಯಿದೆ. ಅದಿಲ್ಲದುದರಿಂದಲೆ ಇಂದು ಹಾಳಿನೊಂದಿಗೆ ಎಣಿಕೆಯಿಲ್ಲದಷ್ಟು ಹಣ ಹರಿದುಹೋಗುತ್ತಲಿದೆ.

boiler ಎಂಬ ಯಂತ್ರವನ್ನು ತಯಾರಿಸಿದ್ದಾರೆ. ಇದರ ಸಹಾಯದಿಂದ ಪೃಥ್ವಿಯಲ್ಲಿ ಬೆಳಗುವ ಸೂರ್ಯರಶ್ಮಿಗಳನ್ನು ಯಂತ್ರಶಕ್ತಿ ರೂಪವಾಗಿ ಮಾಡಲು ಶಕ್ಯವಿದೆಯೆಂದು ಹೇಳುತ್ತಾರೆ. ಅದೆಷ್ಟೋ ಲಕ್ಷ ಅಶ್ವಸಾಮರ್ಥ್ಯ (Horse power)ವು ಈ ಸೂರ್ಯ ರಶ್ಮಿಗಳಲ್ಲಿದ್ದು, ಅದಿಂದು ನಿಷ್ಪ್ರಯೋಜಕವಾಗಿ ಹೋಗಹತ್ತಿದೆ ಎಂಬುದನ್ನು ಕಲ್ಪಿಸಬಹುದು. ಇದೇ ರೀತಿಯಲ್ಲಿಯೇ ಜಲಪಾತಗಳಿಂದ ವಿದ್ಯುತ್‌ಶಕ್ತಿಯನ್ನೂ ಹೊಳೆಗಳಿಂದ ಯಂತ್ರಶಕ್ತಿಯನ್ನೂ ಸೃಷ್ಟಿಸಬಹುದು. ಈಗಾಗಲೇ ಈ ವಿಷಯದಲ್ಲಿ ಎಷ್ಟೋ ಮಾರ್ಪಾಡುಗಳು ಅಲ್ಲಲ್ಲಿ ಆಗಿವೆ. ಆದರೂ ಭಾರತದಲ್ಲಿಯ ಅಸಂಖ್ಯ ಹೊಳೆಗಳ ದ್ರವ್ಯವು ಇನ್ನೂ ಒಂದುರೀತಿಯಲ್ಲಿ ಹಾಳಾಗುತ್ತಲೇ ಇದೆ ಎಂದು ಹೇಳಬಹುದು.

ಬೀಳುಭೂಮಿ, ಮರುಪ್ರದೇಶ ಮುಂತಾದ ಹಾಳುಗಳ ಹಾವಳಿ ಅದೆಷ್ಟು ನಮ್ಮ ದೇಶದಲ್ಲಿಲ್ಲ ? ಇವು ಕೇವಲ ಹಾಳಾಗಿ ಬಿದ್ದ ಪ್ರದೇಶಗಳಷ್ಟೇ ಆಗಿರದೆ, ಜೀವನದಲ್ಲಿ ಪಿಡುಗುಜಂತುಗಳ ತವರುಮನೆಯಾಗಿ ಬಿಟ್ಟಿವೆ. ಈ ತರದ ಹಾಳುಭೂಮಿಯನ್ನು ಬಾಳಿಗೆ ತಂದ ಎರಡು ಉದಾಹರಣೆಗಳು ನಮ್ಮ ದೇಶದಲ್ಲಿ ಅನುಕರಣೀಯವಾಗಿವೆ. ಪಂಜಾಬದಲ್ಲಿ ಸರ್ ಗಂಗಾರಾಮರು ಮತ್ತು **ಬಿಕಾನೇರ ಸಂಸ್ಥಾನದ ಮಹಾರಾಜರು**, ತಮ್ಮ ಪ್ರಾಂತಗಳಲ್ಲಿ ಸ್ವಲ್ಪೇ ದಿನಗಳಲ್ಲಿ ಮಾದರಿಯ ಕಾರ್ಯಮಾಡಿದ್ದಾರೆ. ಇಂತಹ ಕಾರ್ಯಗಳು ಸರಕಾರದ ಸಹಾಯದಿಂದ ಇನ್ನೂ ಹೆಚ್ಚು ಹೆಚ್ಚಾಗಿ ಯಶಸ್ವಿಯಾಗಲು ಶಕ್ಯವಿದೆ; ಅಲ್ಲದೆ ಒಮ್ಮೆ ಈ ಕಾರ್ಯ ಕೈಕೊಂಡಲ್ಲಿ, ನಮ್ಮ ಇಂದಿನ ಸಾವಿರಾರು ಸಂಖ್ಯೆಯಲ್ಲಿ ಕಲಿತು ಕೆಲಸವಿಲ್ಲದೇ ಬಳಲುವ ತರುಣರಿಗೆ ಹಾಳಿನಿಂದ ಬಾಳು ಮಾಡುವ ವಿದ್ಯೆ ಕಲಿಸಿದಂತಾಗುವುದು.

ಹಾಳೆಂದು ಬಿಸುಡುವ ಇನ್ನೂ ಅನೇಕ ವಸ್ತುಗಳು ಅರ್ಥಗರ್ಭಿತವಾಗಿವೆ. ಈ ಮಾತನ್ನು ನಾವು ನಮ್ಮ ಮ್ಯುನಿಸಿಪಲ್ ಡಬ್ಬಿಗಳಲ್ಲಿ ತುಂಬುವ ಪದಾರ್ಥಗಳಿಂದ ತಿಳಿದುಕೊಳ್ಳಬಹುದು. ಇಂತಹ ರದ್ದೀಮಾಲಿನಲ್ಲಿಯೂ ದ್ರವ್ಯವಿದೆಯೆಂತಲೇ ನಮ್ಮ ಮೋಡಕಾ ಬಾಜಾರಿನ ವರ್ತಕರೂ, "ಶೀಶೀ ಬೋತಲ್ ರದ್ದೀಕಾಗದ ಬೇಚೋ" ಎಂದು ಓಣಿ-ಓಣಿ ತಿರುಗುವ ವ್ಯಕ್ತಿಗಳೂ ಈ ಹಾಳು-ವಸ್ತುಗಳಿಂದ ಬಾಳಿನ ಮಾರ್ಗ ತುಳಿಯಹತ್ತಿದ್ದಾರೆ. ಆದರೆ ಈ ವ್ಯಕ್ತಿಗಳೂ ಕೂಡ ಹಾಳೆಂದು ಭಾವಿಸಿ ಬಿಸುಡುವ ಇನ್ನೂ ಅನೇಕ ಪದಾರ್ಥಗಳಲ್ಲಿಯೂ ಒಂದುಬಗೆಯ ದ್ರವ್ಯವಿದೆಯೆಂದು ಆಧುನಿಕ ಪ್ರಯೋಗಗಳಿಂದ ಸಿದ್ಧವಾಗುತ್ತದೆ. ಇದಕ್ಕೆ ಒಂದೇ ಉದಾಹರಣೆ ಹೇಳಬಹುದು:— ಇಂಗ್ಲಂಡ್ ಮತ್ತು ವೇಲ್ಸ್ ದೇಶದ ಸ್ಥಾನಿಕ ಸಂಸ್ಥೆಗಳು, ಪ್ರತಿವರ್ಷ ೩,೦೦೦,೦೦೦ ಟನ್ ರಸ್ತೆಯ ಕಸವನ್ನೂ ೧,೦೦೦,೦೦೦ ಟನ್ ವ್ಯಾಪಾರದಲ್ಲುಂಟಾಗುವ ಕಸವನ್ನೂ ಮತ್ತು ೧೧,೬೦೦,೦೦೦ ಟನ್ ಮನೆಗಳಿಂದ ಚೆಲ್ಲಿದ ಕಸವನ್ನೂ ಹಾಳೆಂದು ಬಿಸಾಡುತ್ತವಂತೆ! ಅಲ್ಲದೆ ಈ ಎಲ್ಲ ಕೋಟಿ ಟನ್ನಿನಷ್ಟು ಕಸದ ಹಾವಳಿಯಿಂದ ಪಾರಾಗಲಿಕ್ಕೆ ಪ್ರತಿವರ್ಷ ೧೧,೦೦೦,೦೦೦ ಪೌಂಡು ಸಂಬಳಕೊಟ್ಟು ಈ ಕಸವನ್ನು ತುಂಬಿಸಿ ಚೆಲ್ಲಿಸುತ್ತಾರಂತೆ!! ಕಸದಲ್ಲಿ ಹಾಳಾಗುವ ದ್ರವ್ಯ ಬೇರೆ; ಆ ಕಸವನ್ನು ಚೆಲ್ಲಿಸಲಿಕ್ಕೆ ಪುನಃ ದ್ರವ್ಯ ವೆಚ್ಚಮಾಡಬೇಕು; ಹೀಗಿದೆ ನಮ್ಮ ನಾಗರಿಕತೆಯ ಖರ್ಚು. ಇಷ್ಟೆಲ್ಲ ಟನ್ ಕಸವನ್ನು ಕೆಲವೊಂದು ರೀತಿಯಲ್ಲಿ ಪರಿವರ್ತಿಸಿದರೆ, ಅದರಿಂದ ಕನಿಷ್ಟಪಕ್ಷಕ್ಕೆ ೨೫೦,೦೦೦ ಪೌಂಡು ಬೆಲೆ ಬಾಳುವಷ್ಟು ದ್ರವ್ಯಬರುತ್ತದೆಂದು ಸಂಶೋಧಕರ ಅಭಿಪ್ರಾಯ. ಕೇವಲ ಅಭಿಪ್ರಾಯವಷ್ಟೇ ಅಲ್ಲ; ಕೃತಿಯಿಂದಲೂ ಸಿದ್ಧಮಾಡಿ ತೋರಿಸಿದ್ದಾರೆ. ಬರ್ಮಿಂಗ್‌ಹ್ಯಾಮ್ ನಗರರಕ್ಷಕರು ತಮ್ಮ ನಗರದ ಹಾಳಿನಿಂದ ವಿದ್ಯುಚ್ಛಕ್ತಿಯನ್ನು ಹೊರಡಿಸಿ, ಆ ಕಸ ತುಂಬುವ ಟ್ರಕ್‌ಗಳನ್ನು ನಡೆಯಿಸುವುದಲ್ಲದೆ, ಉಳಿದ ಶಕ್ತಿಯಿಂದ ಬಲವಾದ ಗೊಬ್ಬರವನ್ನೂ ದಾರಿಗಳನ್ನು ತಯಾರುಮಾಡುವ ಕಲ್ಲುಗಳನ್ನೂ ಹುಟ್ಟಿಸುತ್ತಾರಂತೆ. ಮ್ಯುನಿಸಿಪಲ್ ಸಂಸ್ಥೆಗಳು, ನಮ್ಮ ನಗರದ ಕಸದಿಂದ ದೇಶದ ದ್ರವ್ಯಕ್ಕೆ ಎಷ್ಟು ಪಾಲು ಕೂಡಿಸುತ್ತವೆ-ಯೆಂಬುದನ್ನು ತಿಳಿಯುವುದು ಅವಶ್ಯವಾಗಿದೆ. ಇದೇ ಸಂದರ್ಭದಲ್ಲಿ ಗಟಾರುಗಳಿಂದಲೂ ಸಕ್ಕರೆ ಕಾರಖಾನೆಗಳಿಂದಲೂ, ಆಕಾಶವನ್ನೇ ಮುಚ್ಚುವಂತೆ ಹಬ್ಬುವ ನಮ್ಮ ಗಿರಣಿಗಳ ಧೂಮದಿಂದಲೂ, ಕಟ್ಟಿಗೆಯ ಪುಡಿ-ಚೂರುಗಳಿಂದಲೂ, ಕೆಸರಿನಿಂದಲೂ, ಚಿಂದಿಗಳಿಂದಲೂ, ಇನ್ನೂ ಎಷ್ಟೋ ಹಾಳುಗಳಿಂದಲೂ ಮಾನವನು ಇಂದು ದ್ರವ್ಯಸಂಪಾದನೆ ಮಾಡಹತ್ತಿದ್ದಾನೆ. ಇದೊಂದು ಶುಭಸೂಚನೆ. ನೆಟ್ಟಗಿದ್ದ ವಸ್ತುಗಳನ್ನು ಮದಾಂಧತನದಿಂದ ಇಂದಿನ ಕೆಲವು ಸರ್ವಾಧಿಕಾರಿಗಳು ನಾಶಮಾಡುತ್ತಿದ್ದಾಗ, ಹಾಳಿನಿಂದ ದ್ರವ್ಯತೆಗೆಯುವ ವೈಜ್ಞಾನಿಕರಿಗೆ ನಾಗರಿಕತೆಯು ಧನ್ಯವಾದಗಳನ್ನು ಕೊಡಬೇಕು.

ಇಂದಿನ ಯುಗದಲ್ಲಿಯ ದಾರಿದ್ರ್ಯಕ್ಕೆ ಮಾನವನು ಅಜ್ಞಾನದಿಂದ ಹಾಳುಮಾಡುತ್ತಿರುವ ದ್ರವ್ಯವೇ ಮೂಲಕಾರಣವೆಂದು, ಅಮೇರಿಕೆಯ ಸುಪ್ರಸಿದ್ಧ **ಹೆನ್ರಿಫೋರ್ಡ**ರವರ ಅಭಿಪ್ರಾಯ. ಅವರ ಆತ್ಮಚರಿತ್ರೆಯಲ್ಲಿಯ ವಿಷಯಗಳನ್ನು ಓದಿದಾಗ, ಪ್ರತಿಯೊಬ್ಬ ನಾಗರಿಕನಿಗೂ ಒಂದು ಹೊಸದೃಷ್ಟಿಯೂ ನವಚೇತನವೂ ಸುಧಾರಣೋತ್ಸಾಹವೂ ತುಂಬಿಬರುತ್ತದೆ. ಒಟ್ಟಾಗಿ ಹೇಳುವುದೆಂದರೆ, ದ್ರವ್ಯವು ಸದುಪಯೋಗದಿಂದ ವೃದ್ಧಿಹೊಂದುತ್ತದೆ. ಈ ಸದುಪಯೋಗಕ್ಕೆ ಬುದ್ಧಿಚಾತುರ್ಯವೂ, ಚತುರಪ್ರಯೋಗವೂ ಅವಶ್ಯ. ಬುದ್ಧಿಚಾತುರ್ಯದಿಂದ ಕಸವನ್ನು ರಸಮಾಡಬಹುದು; ಕೆಸರನ್ನು ಮೊಸರನ್ನಾಗಿ ಮಾಡಬಹುದು; ಹಾಳನ್ನು ಬಾಳುರಿಯ ಪುಟವನ್ನಾಗಿ ಮಾಡಬಹುದು. ಆದರೆ ಬುದ್ಧಿಯು ಇಂದು ದುರುಪ-ಯೋಗಕ್ಕೀಡಾಗಹತ್ತಿದೆ. ಅಂತೆಯೇ ಈ ಎಲ್ಲ ಆಧುನಿಕ ಅನಾಹುತಗಳು ನಡೆದಿವೆ. ಆದರೂ ವೈಜ್ಞಾನಿಕರು ಒಟ್ಟಾಗಬಹುದು; ಮಾನವ ಸುಖಸಾಧನೆಗೆ ಮಾತ್ರ ತಮ್ಮ ಜಾಣತನದ ಫಲವನ್ನು ಅರ್ಪಿಸಬಹುದು. ಹಾಗೆ ಮಾಡಿದಲ್ಲಿ ಸ್ವರ್ಗಜೀವನವು ಕನಸಿನದಾಗಿ ಉಳಿಯುವುದಿಲ್ಲ; ಈ ಬಾಳಿನಲ್ಲಿಯೇ ಅನುಭವಿಸಲು ಸಾಧ್ಯವಾಗುವುದು.

ಸಾಹಿತ್ಯದ ಸ್ವಾಹಾಪತಿಗಳು (ಹರಟೆ)

ಶ್ರೀ. ಎನ್. ಕೆ. ಕುಲಕರ್ಣಿ, ಎಂ. ಎ. ಬಿ. ಟಿ. ಧಾರವಾಡ

ಮಣ್ಣನ್ನು ಹೊನ್ನನ್ನಾಗಿ ಮಾಡುವ ಮಹಾನುಭಾವರ ಕೊರತೆ ಈಗ ಲೋಕದಲ್ಲಿ ಹೆಚ್ಚಾಗಿ ಇದ್ದರೂ, ಹೊನ್ನನ್ನು ಮಣ್ಣನ್ನಾಗಿ ಮಾಡುವ ಗೆದ್ದಲಿಗಳಿಗೆ ಯಾವ ಕೊರತೆಯೂ ಇಲ್ಲ. ಎಂತಹ ಗಂಭೀರವಿಚಾರದ ಗ್ರಂಥಗಳಿರಲಿ, ಗೆದ್ದಲಿಗಳು ಕ್ಷಣದಲ್ಲಿ ಅರಗಿಸಿಬಿಡಬಲ್ಲುವು!

ನಾನು ಆ ಗ್ರಂಥ ಬರೆದು ಎಷ್ಟೋ ದಿವಸಗಳಾಗಿತ್ತು. ಕನ್ನಡ ಸಾಹಿತ್ಯ-ಚರಿತ್ರ-ಗ್ರಂಥ. ಎರಡು ನೂರು ಅರ್ಧಪಾಳೆಯ ಪುಟಗಳನ್ನು ಮಿಕ್ಕಿತ್ತು. ಒಳ್ಳೆ ಅಪರೂಪದ ಗ್ರಂಥವೆಂದರೂ ಅಡ್ಡಿಯಿಲ್ಲ. ಆದರೇನು ಮಾಡುವುದು, ರಾಜಾಶ್ರಯವಿಲ್ಲದ ಬಡಗನ್ನಡಿಗರ ದುರ್ದೈವ! ಅಚ್ಚು ಕಾಣದ ಆ ಗ್ರಂಥವು ಗಚ್ಚು ಹಾಕಿದಂತೆ ಗಣೇಶನ ಮಾಡಿನಲ್ಲಿಯೇ ಕುಳಿತಿತ್ತು. ಆ ದಿನ ಗಣೇಶನನ್ನು ಬಾವಿಗೆ ಕಳಿಸಿ, ಅವನ ಸ್ಥಾನದಲ್ಲಿ ಈ ಗ್ರಂಥವನ್ನಿರಿಸಿದ್ದೆ. ಆದರೆ ಆ ವಿದ್ಯಾಪತಿಯಿಂದ ನನ್ನ ಗ್ರಂಥಕ್ಕೇನೂ ಉಪಚಾರ ಒದಗಿಬರಲಿಲ್ಲ.

ಈ ಹೊತ್ತು, ಯಾಕೋ ಮತ್ತೊಮ್ಮೆ ಆ ಗ್ರಂಥವನ್ನು ಅವಲೋಕಿಸಬೇಕೆಂದು ಮನಸ್ಸಾಯಿತು. ಅವಶ್ಯವೆನಿಸಿದರೆ ಮತ್ತೇನಾದರೂ ಮಾರ್ಪಾಡುಗಳನ್ನು ಮಾಡಬೇಕೆಂದು, ಹಾಗೆಯೇ ಮಾಡಿನಲ್ಲಿ ಕೈಹಾಕಿದೆ. ಮೇಲಿದ್ದ ವರ್ತಮಾನಪತ್ರಗಳನ್ನೆಲ್ಲ ತೆಗೆದಿಟ್ಟೆ. ಆದರೆ ಅಲ್ಲೇನಿದೆ! ಅಯ್ಯೋ, ಹಣೆಬರಹದ ಗಣೇಶ ಜಪತಿಯೆ! ಗ್ರಂಥದ ತುಂಬ ಹುತ್ತು ಬೆಳೆದು ಬಿಟ್ಟಿದೆ! ಹಿರಣ್ಯಕಶ್ಯಪು ಮಹಾತಪಶ್ಚರ್ಯವನ್ನು ಕೈಕೊಂಡಾಗ, ಅವನ ಮೇಲೆಲ್ಲ ಹುತ್ತು ಬೆಳೆದಿತ್ತೆಂದು ಹರಿದಾಸರು ಹೇಳುವರಲ್ಲ; ಹಾಗೆ ಈ ನನ್ನ ಗ್ರಂಥವೂ ನಿಜವು ಅಜ್ಞಾನದೇವತೆಯನ್ನು ಕುರಿತು ತಪಶ್ಚರ್ಯವನ್ನಾರಂಭಿಸಿತ್ತೋ ಏನೋ, ಈ ಮಹಾ ಹುತ್ತು ಬೆಳೆದು ಬಿಟ್ಟಿತ್ತು. ಮೆಲ್ಲಗೆ ಅದನ್ನು ಕೊಡವಿದೆ, ಗ್ರಂಥವನೆತ್ತಿದೆ. ಕೈಗೆ ಬರಲೇ ಇಲ್ಲ; ಅದು ಭಾರವೆನಿಸಿತು. ಶಿವಧನುಸ್ಸಿನ ಮಂತ್ರಬಲವು ನನ್ನ ಗ್ರಂಥವನ್ನಾವರಿಸಿತ್ತೇನೋ! ಮತ್ತೊಮ್ಮೆ ಕಸುವಿನಿಂದ ಎತ್ತಿದೆ; ದುರಂತ! ನನ್ನ ಗ್ರಂಥವೇನೂ ಕೈಗೆ ಬರಲಿಲ್ಲ, ಒಂದು 'ಹೆಂಟೆ' ಮಣ್ಣು ಮಾತ್ರ ಕೈಗೆ ಬಂದಿತು. ಆ ಮಣ್ಣನ್ನು ಕಿತ್ತುದುದೊಂದೇ ತಡ, ಅದಕ್ಕೆ ಅಂಟಿಕೊಂಡೇ ಹುಟ್ಟಿರುವ ಸ್ವಪ್ನದಂತೆ ಒಂದು ಪ್ರಾಣಿಸಮೂಹವು 'ಬುಳು ಬುಳು' ಎಂದು ತುಂಬ ಹರಿದಾಡಹತ್ತಿತು. ಮೈಮೇಲೆಯೇ ಏರಿಬಂದುವು—ಮಿಂಚಿನ ಯುದ್ಧವಾಗುತ್ತಿದ್ದಂತೆ! ಸಾವಿರಾರು ಪ್ರಾಣಿಗಳು ಮಾಡಿನ ತುಂಬ ಹರಿದಾಡಹತ್ತಿದುವು! ನಡೆದಿದೆಯೇನು? ಏನು **ಗೆದ್ದಲಿಗಳ ದಬ್ಬಾಳಿಕೆ!** ನನ್ನ ಗ್ರಂಥದ ಅವಸ್ಥೆ? ಹಾಯ್, ಹಾಯ್! ಮಾಡಿನ ತುಂಬೆಲ್ಲ ಪುಡಿಪುಡಿಯಾಗಿ ಬಿದ್ದಿದೆ—ನನ್ನ ಮೂರು ವರ್ಷದ ಶ್ರಮವೆಲ್ಲ ಮಣ್ಣುಪಾಲಾಗಿ ಹೋಯಿತು. ಮಣ್ಣುಪಾಲೇನು—ಎಲ್ಲವೂ ಗೆದ್ದಲಿಯ ಪಾಲೇ ಆಗಿ ಹೋಗಿಬಿಟ್ಟಿತ್ತು. ಆ ಕೆಂಪುಮೋತಿಯ ಬಿಳಿಯ ಹುಳುಗಳನ್ನು ಕಂಡು ನನ್ನ ಅಂಗಾಂಗವೆಲ್ಲ ತಪ್ತವಾಗಿ ಹೋಯಿತು. ಬ್ರಹ್ಮಾಂಡ ಕೋಪಬಂದಿತು. ಏನು ಮಾಡುವುದು? ಉರಿಗಣ್ಣು ಇದ್ದರೆ ಅವನ್ನು ಅಲ್ಲಿಯೇ ಭಸ್ಮೀಭೂತ ಮಾಡಿಬಿಡುತ್ತಿದ್ದೆ. ಆದರೂ ಕಾಲೊಳಗಿನ ಚಪ್ಪಲಿಯಿಂದ ಒಳ್ಳೇ ಏಟುಗಳನ್ನು ಕೊಟ್ಟೆ. ಒಂದೊಂದು ಏಟಿಗೆ ಒಂದೊಂದು ಸಾವಿರ ಹುಳುಗಳು ಪ್ರಾಣ ಬಿಟ್ಟಿರಬೇಕು. ಗೆದ್ದಲಿಗಳಂತೆ! ಇವು ಗೆದ್ದಲಿಗಳಲ್ಲ, ನನ್ನ ಗಾಳಿಗೋಪುರದ ಗುದ್ದಲಿಗಳು.

ಆದರೇನು? ನನ್ನ ಗ್ರಂಥದ ಹಾಡೇನಾಯಿತು? ಎಲ್ಲವನ್ನೂ ಮತ್ತೆ ನೆನೆಸಿಕೊಂಡು ಬರೆಯಲಿಕ್ಕೆ ಸಾಧ್ಯವಿದೆಯೋ? ಬರೆಯುವದೇನು ಸಾಧ್ಯ—ನೆನೆ-ನೆನೆಸಿಕೊಂಡು ಅಳುವುದೇ ಒಂದು ಸಾಧ್ಯ!

ಏನು ಒಂದೊಂದು ಹುಳುವಿನ ಜಾತಿಯೊ ಏನೊ! ಎಂಭತ್ತು ನಾಲ್ಕು ಲಕ್ಷ ಯೋನಿಗಳನ್ನು ನಿರ್ಮಿಸಿದ ಪುಣ್ಯಾತ್ಮ,—ಆ ಬ್ರಹ್ಮ—ಈ ಗೆದ್ದಲಿಯನ್ನು ನಿರ್ಮಿಸುವಾಗ ಮಾತ್ರ ಊಟ-ಬಿಟ್ಟು ತಲೆ ಕೆಡಿಸಿಕೊಂಡಿರಬೇಕು. ಹಾವು ಕಪ್ಪೆಯನ್ನು ನುಂಗಬಹುದು; ಕಪ್ಪೆ ನೊಣವನ್ನು ನುಂಗಬಹುದು; ಮತ್ತೊಂದು ಮತ್ತೊಂದನ್ನು ನುಂಗಬಹುದು. ಆದರೆ ಸಾಹಿತ್ಯಾಭಿರುಚಿಯುಳ್ಳಂತಹ ಈ ಗೆದ್ದಲಿ......ನಮ್ಮ ಅದೃಷ್ಟ! ಪರೀಕ್ಷೆಯ ಪಠ್ಯ-ಪುಸ್ತಕವನ್ನು ಬಿಟ್ಟು ಮತ್ತೊಂದು ಪುಸ್ತಕವನ್ನೋದುವುದೆಂದರೆ ನಮ್ಮಂತಹ ವಿದ್ಯಾರ್ಥಿಗಳಿಗೆ ತಲೆಬೇನೆ. (ಆ ಪಠ್ಯವನ್ನೋದುವುದಕ್ಕೂ ತಲೆಬೇನೆಯಿಲ್ಲವೆಂದಲ್ಲ ಮತ್ತೆ!) ಅಂತಹುದು ಈ ಗೆದ್ದಲಿಗಳು ಸಾಹಿತ್ಯದ ಮಹಾಗ್ರಂಥಗಳನ್ನು ಇಡಿಇಡಿಯಾಗಿ ಎವೆಯಿಕ್ಕುವುದರೊಳಗೆ ಸ್ವಾಹಾ ಮಾಡಿಬಿಡುತ್ತವಲ್ಲ! ಸಾಹಿತ್ಯ-ಕ್ಷೇತ್ರದಲ್ಲಿ ಇಂತಹ ದಬ್ಬಾಳಿಕೆ ನಡೆದರೆ ಗತಿ? ಗತಿಯೇನು, ನಾವೂ ಸಾಧ್ಯವಿದ್ದಮಟ್ಟಿಗೆ 'ಏರ್ ರೇಡ ಪ್ರಿಕಾಶನ್' ತೆಗೆದುಕೊಳ್ಳುವುದು.

ಕೂಡಲೆ ನೆನಪಾಯಿತು: ಉಳಿದ ಗ್ರಂಥಗಳನ್ನಾದರೂ ಭದ್ರವಾಗಿರಿಸೋಣವೆಂದು ಕಪಾಟು ತೆರೆದೆ. ನನ್ನ ಅದೃಷ್ಟ! ನನಗಿಂತ ಮೊದಲೇ ಈ ಸಾಹಿತ್ಯದ ಸ್ವಾಹಾಪತಿಗಳು ಅವನ್ನೂ ಭದ್ರಮಾಡಿಬಿಟ್ಟಿದ್ದುವು. ಒಂದೊಂದೇ ಗ್ರಂಥ ಎತ್ತುತ್ತೇನೆ—ಒಂದಕ್ಕೆ ಒಳಗಿನ ಪುಟಗಳೆಲ್ಲಾ ಹೋಗಿ ಮೇಲಿನ ಕ್ಯಾಲಿಕೊ ಬಾಯಿಂಡ್ ಮಾತ್ರ ಉಳಿದಿದೆ; ಇನ್ನೊಂದಕ್ಕೆ ಮೇಲಿನ ಹೊದಿಕೆಯೂ ಸುತ್ತಲಿನ ಅಂಚೂ ಗ್ರಸ್ತವಾಗಿವೆ; ಒಳಗಿನ ಮ್ಯಾಟರ್ ಮಾತ್ರ ಏಕೊ, ಇನ್ನೂ ಮಿಸಲಾಗಿತ್ತು—ರಶಿಯದ ಮಾಸ್ಕೊಪಟ್ಟಣದಂತೆ. ಒಂದೊಂದೆ ಹಲಗೆಯ ಮೇಲಿನ ಪುಸ್ತಕಗಳನ್ನೆಲ್ಲ ಕೊಡಹಿ ಕೊಡಹಿ ಇಡತೊಡಗಿದೆ. ಅಯ್ಯೋ, ಕಿಟೆಲ್ ಡಿಕ್ಶನರಿಯೇ! ಗುಡ್ಡದಂತಹ ಗ್ರಂಥ! ಹರಿದು ಹರಿದು ಹರವಿಯ ಪಲ್ಲೆಯಾಗಿದೆ. ಇದೂ! **ಗರಿ!** ಏನದರ ಅವಸ್ಥೆ—ಗರಿ ಉದುರಿದ ಹಕ್ಕಿಯಂತಾಗಿದೆ. '**ನಮ್ಮ ಬದುಕು**' ಅಂತೂ ಗೆದ್ದಲಿಗಳ ತರ್ಪಣವಾಗಿದೆ. ಮತ್ತೆ ಇದೇನು! ನನ್ನ ಲೇಖನಗಳ ಕೈಬರಹದ ಪ್ರತಿಗಳ 'ಫಾಯಿಲ್' ಎಲ್ಲವೂ 'ಬೊಂಬಾರ್ಡ್' ಆಗಿಹೋಗಿದೆ. ನನ್ನ ಬದುಕೇ ಗೆದ್ದಲಿಗಳ ಪಾಲಾಗಿ ಹೋಯಿತೆಂದರೂ ತಪ್ಪಿಲ್ಲ.

ಅಚ್ಚುಕಲೆಯಿನ್ನೂ ಮೊಗವೆತ್ತದ ಪಂಪ-ರನ್ನರ ಕಾಲಕ್ಕಂತೂ ಈ ಗೆದ್ದಲಿಗಳ ಹಾವಳಿಯಿಂದ ಸಾಹಿತ್ಯಕ್ಕೆ ಎಷ್ಟು ನಷ್ಟವೊದಗಿರಬೇಕು! ನಮ್ಮ ಕವಿಚರಿತಕಾರರು ಊಹಿಸಿರುವ ಅನೇಕ ಗ್ರಂಥಗಳು ಇಂದಿಗೂ ಉಪಲಬ್ಧವಾಗದೆ ಹೋದುದಕ್ಕೆ ಈ ಗೆದ್ದಲಿಗಳೇ ಕಾರಣೀಭೂತವಾಗಿರಲು ಸಾಕು. ೯೬ ಸಾವಿರ ಗ್ರಂಥಪರಿಮಿತಿಯುಳ್ಳ '**ತುಂಬಲೂರಾಚಾರ್ಯರ ಚೂಡಾಮಣಿ ಗ್ರಂಥವು**' ಗೆದ್ದಲಿಗೆ ಆಹುತಿಯಾಗಿದ್ದರೆ ಆಶ್ಚರ್ಯವೇನು?

ನನ್ನ ಮಿತ್ರನೆದುರಿಗೆ ಒಂದುದಿನ ಇದರ ಪ್ರಸ್ತಾಪ ತೆಗೆದಿದ್ದೆ. ಅವನು ಹೇಳಿದ:—'ಇಷ್ಟೆಯಾಕೆ, ಒಂದುರಾತ್ರಿ ಮಲಗಿಕೊಂಡಾಗ ನಾನು ಮಲಗಿದ ಕಂಬಳಿಯನ್ನೆಲ್ಲ ಧ್ವಂಸಮಾಡಿ ನನ್ನ ಬೆನ್ನನ್ನೂ ಭೇದಿಸುವುದರಲ್ಲಿದ್ದುವು' ಎಂದು. ಆಮೇಲೆ ಮನೆಗೆ ಬಂದು ನೋಡುತ್ತೇನೆ; ನನ್ನ ರತ್ನಗಂಬಳಿ— ಗೌತಮನಿಂದ ಶಾಪಹೊಂದಿದ ಮೈಗಣ್ಣನಂತಾಗಿತ್ತು. ಕಂಡಲ್ಲೆಲ್ಲ ಕಣ್ಣೇಕಣ್ಣು! ಸರಿ, 'ಈ ಗೆದ್ದಲಿರಾಯನ ನಂಟಸ್ತನ ಸಾಹಿತ್ಯದೊಡನೆ ಅಷ್ಟೇ ಅಲ್ಲ, ಕಂಬಳಿಯೊಡನೆಯೂ ಇದೆಯೋ'— ಎಂದುಕೊಂಡೆ.

ಇಂದಿನ ಸಂಶೋಧನಕಾಲದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿಯಾಗಲಿ, ವೈಜ್ಞಾನಿಕ ಕ್ಷೇತ್ರದಲ್ಲಿಯಾಗಲಿ, ಗೆದ್ದಲಿಗಳ ಉಪಯೋಗವನ್ನು ಯಾಕೆ ಶೋಧಿಸಿರಲಿಕ್ಕಿಲ್ಲ! ಎಂದರೆ ಗೆದ್ದಲಿಯಲ್ಲಿ ವ್ಹಿಟ್ಯಾಮಿನ್-ಜಿ ಇರಬೇಕೆಂದಲ್ಲ; — ಅದರೆ ಶಸ್ತ್ರಕ್ರಿಯೆ ಮಾಡುವುದರ ಬದಲು ಒಂದು ಡಜನ್ ಧೃಷ್ಟಪುಷ್ಟ ಗೆದ್ದಲಿಗಳನ್ನೆ ಮೈ-ಮೇಲೆ ಬಿಟ್ಟುಬಿಟ್ಟರೆ ಸಹಜವಾಗಿ ಶಸ್ತ್ರಕ್ರಿಯೆ ಆಗಬಹುದಲ್ಲ! ಅಥವಾ ಸಾಹಿತ್ಯ ಸಂಸ್ಕೃತಿಗಳನ್ನು ಮುಕ್ಕಿಬಿಡಬೇಕೆಂದು ಪಣತೊಟ್ಟು ನಿಂತ ಹಿಟ್ಲರ್‌ಮಹಾಶಯನಿಗೆ ಗೆದ್ದಲಿಗಳ ಉಪಯುಕ್ತತೆ ಇನ್ನೂ ಕಂಡುಬಂದಿರಲಿಕ್ಕಿಲ್ಲವೆ? ಕಾಲೆರಾ, ಪ್ಲೇಗುಗಳ ಹುಳುಗಳು ಹುಟ್ಟುವಂತಹ 'ಬಾಂಬ್'ಗಳನ್ನು ಸಂಶೋಧಿಸಿದ್ದಾರಂತೆ! ಗೆದ್ದಲಿಗಳನ್ನು ಹುಟ್ಟಿಸುವಂತಹ ಬಾಂಬುಗಳನ್ನು ತಯಾರಿಸಿದರೆ.. ಒಂದೊಂದು ಪುಸ್ತಕಾಲಯದಲ್ಲಿ ಈ ಗೆದ್ದಲಿ-ಬಾಂಬುಗಳನ್ನು ಪ್ರವೇಶಮಾಡಿಸಿದರಾಯಿತು. ಆಗಬಹುದು, ಆಗಬಹುದು! ಕಾಲತಿರುಗುವುದರಲ್ಲಿಯೇ ಇದೆ. ಯಾವುದು ಸಾಧ್ಯವಾಗಲಿಕ್ಕಿಲ್ಲ!

ಈ ಗೆದ್ದಲಿಗಳ ಅಭಿರುಚಿಯಂತಹ ಅಪರೂಪವಾದದ್ದೇನು ಬೇಕು! ಇದರ ಪಕ್ವಾನ್ನ ನೊಣವೊ, ಹುಳುವೊ, ಕ್ರಿಮಿಯೊ ಅಲ್ಲ; ಸಾಹಿತ್ಯದ ಸದ್ಗ್ರಂಥಗಳು. ಒಬ್ಬ ಆಂಗ್ಲ ಪ್ರಬಂಧಕಾರನು ಹೇಳಿರುವನಲ್ಲ—ಕೆಲವು ಗ್ರಂಥಗಳು ಬರಿ ರುಚಿನೋಡುವುದಕ್ಕೆ ಯೋಗ್ಯವಂತೆ, ಕೆಲವನ್ನು ರುಚಿನೋಡಿ ನುಂಗಬೇಕಂತೆ; ಇನ್ನೂ ಕೆಲವನ್ನು ರುಚಿನೋಡಿ ಅಗಿದು ಜೀರ್ಣಿಸಿಕೊಳ್ಳಬೇಕಂತೆ. ಅಂತಹ ರಸಿಕ ಪಂಡಿತರು ಮನುಷ್ಯಗಣದಲ್ಲಿ ದೊರೆವುದು ವಿರಳವೆಂದರೂ ಈ ಗೆದ್ದಲಿಯಂತಹ ಪ್ರಾಣಿವರ್ಗದಲ್ಲಿ ಧಾರಾಳವಾಗಿ ದೊರೆಯುತ್ತವೆಯಲ್ಲ! ಈ ಪ್ರಾಣಿಗಳು ಒಂದನ್ನೂ ಬಿಡದೆ ಎಲ್ಲ ಗ್ರಂಥಗಳನ್ನೂ ಅಗಿದು ನುಂಗಿಬಿಡುತ್ತವೆ; ಎಂದಮೇಲೆ ಇವುಗಳ ರಸಿಕತೆಗೆ ಬೆಲೆಯಿದೆಯೇ? ಪಾಚನಸಾಧಿರುಚಿಯನ್ನು—ಅಲ್ಲಲ್ಲ, ಸಾಹಿತ್ಯವನ್ನು ಜೀರ್ಣಿಸಿಕೊಳ್ಳುವ ಹದವನ್ನು ಅಸಂಸ್ಕೃತನಾದ ಮಾನವನು ಗೆದ್ದಲಿಯಿಂದಲೆ ಕಲಿತುಕೊಳ್ಳಬೇಕು. ಈ ಗೆದ್ದಲಿಗೆ ಸಾಹಿತ್ಯದೂಟವೇ ಹೊಟ್ಟೆತುಂಬಿಕೊಳ್ಳುವ ಉದ್ಯೋಗವಾಗಿದೆ. ಮಾನವನಿಗೆ ಹಾಗೆಲ್ಲಿ? ಹೊಟ್ಟೆತುಂಬಿಕೊಳ್ಳುವ ಉದ್ಯೋಗ ಬೇರೆ, ತನ್ನ ರಸಿಕತೆಯನ್ನು ತೋರ್ಪಡಿಸುವ ಮೇಲುಮಟ್ಟದ ರಸಿಕತೆಯೆ ಬೇರೆ. ಸಾಹಿತ್ಯ-ಸಂಗೀತ ಕಲಾವಿಹೀನನು ಪಶುವೆಂದು ಯಾರಾದರೂ ಹೂರಬಹುದು; ಗೆದ್ದಲಿಯಂತಹ ಪ್ರಾಣಿಯೆಂದಲ್ಲ. ಭೃಂಗವು ಹೂ-ಹೂವಿಗೆ ಅಲೆದಾಡಿ ಮಕರಂದವನ್ನು ಶೇಖರಿಸುತ್ತದೆ. ಜೇನು ಸವಿಯುವುದೂ ಒಂದು ರಸಿಕತೆಯೆ. ಗೆದ್ದಲಿಯಂತೆ ನುಂಗಿಯು ಹುಳುವಿಗೂ ಅದರ ರಸಿಕತೆಯೆ ಅದರ ಹೊಟ್ಟೆಯ ಪಾಡಾಗಿದೆ. ಎಂದಮೇಲೆ ಮಾನವಾ, ನಿನ್ನ ಪಾಡೇನು? ಹೊಟ್ಟೆಗೆ ಇಲ್ಲೆಂದು ಗೋಳಿಡುವುದಕ್ಕಿಂತ ರಸಿಕ ಗೆದ್ದಲಿಯಂತೆ ಸಾಹಿತ್ಯದೂಟದಿಂದ ಸುಸಂಸ್ಕೃತನಾಗಿ ಬಾಳಬಾರದೆ? ಆದರೆ ಗೆದ್ದಲಿಯಂತಹ ಪಚನಶಕ್ತಿಯೊಂದು ಬೇಕಲ್ಲ! ಅಲ್ಪಮತಿಯಾದ ಈ ಮಾನವನಿಗೆ ಯಾವ ಸಾಹಿತ್ಯವೂ ಅಜೀರ್ಣವೇ ಮದೀತಲ್ಲ!

ಎಂದಮೇಲೆ ಗೆದ್ದಲಿಯ ಗುಣಗಾನವನ್ನು ಎಷ್ಟೆಂದು ಮಾಡುವುದು? ಸಮಾಜದಲ್ಲಿಯೂ ಇಂತಹ ಗೆದ್ದಲಿಗಳ ಅವತಾರವಾಗಬೇಕು. ಧರ್ಮಕ್ಷೇತ್ರದಲ್ಲಿ, ಕರ್ಮಕ್ಷೇತ್ರದಲ್ಲಿ, ಸಾಹಿತ್ಯಕ್ಷೇತ್ರದಲ್ಲಿ, ರಾಜಕೀಯಕ್ಷೇತ್ರದಲ್ಲಿ. ಎಲ್ಲಾ ಕ್ಷೇತ್ರದಲ್ಲಿಯೂ ಇಂತಹ ಗೆದ್ದಲಿಗಳ ಅವತಾರವಾಗಬೇಕು. ಹಾಂ! ಮರೆತೆ. ಆಗಿದೆಯೆಂದೇ ಹೇಳಬೇಕು. ಗೆದ್ದಲಿಗಳೆಂದರೆ ಸಾಹಿತ್ಯದ ಸ್ವಾಹಾಪತಿಗಳಲ್ಲವೆ? ಯಾವ ಯಾವ ಕ್ಷೇತ್ರದಲ್ಲಿ ಸ್ವಾಹಾಪತಿಗಳಿರುವರೊ ಅಲ್ಲೆಲ್ಲಾ ಗೆದ್ದಲಿಯ ಏಕಾದಶ ಅವತಾರವಾಗಿದೆಯೆಂದೇ ಹೇಳಬೇಕು.

ನಾಡಗುಡಿಯು ನಮನವೆ ಮಾನ!

ಅದಕಾಗಿ ಮುಡಿಪು ನಮ್ಮಯ ಪ್ರಾಣ!

ಕನ್ನಡ ಸೈನಿಕ

“ ಸೊಕ್ಕಿದ ಹಗೆಗಳ ಬೊಗ್ಗಿಸಿ ಮೆರೆಯುವ ಸೋಲರಿಯದ ಕರಿನಾಡ ಗುಡಿ

ಸಂಪುಟ ೧ | ಬೇಕಾದಾಗ ಹೊರಡುವ ಪತ್ರಿಕೆ | ಸಂಚಿಕೆ ೧

ಕನ್ನಡ ಸೈನಿಕ :—

ಇದು ದೈನಿಕವಲ್ಲ; ದೈನಿಕದಂತೆ ಪುಟ ತುಂಬುವ ಹಂಬಲವಿಲ್ಲ. ಅದರ ದೀನವಾಣಿ ಇದಕಿಲ್ಲ. ‘ಸೈನಿಕ’ನೆಂಬ ಹೆಸರು ಕಾರ್ಯವನ್ನು ಸೂಚಿಸುವುದು. ಸೈನಿಕನು ಸದಾಸಿದ್ಧ. ಕಾರ್ಯಕ್ಕೆ ಇದೇ ಯೋಗ್ಯಕಾಲವೆಂದಿಲ್ಲ; ಮುಹೂರ್ತ ನೋಡುವ ಮೋಹವಿಲ್ಲ; ಕಾರ್ಯದ ಅರಿವಿನಲ್ಲಿರುವುದೆ ಸೈನಿಕನ ಕರ್ತವ್ಯ. ಅದುಕಾರಣ ಇದು ವಾರಕ್ಕೊಮ್ಮೆ ಹೊರಡಬಹುದು, ವಾರಕ್ಕೆರಡು ಸಲ ಹೊರಡಬಹುದು. ಇಡಿಗಣ್ಣಿನಿಂದ ನಾಡಿನ ಮೂಲೆಗಳನ್ನು ನೋಡುತ್ತ ಎದುರಾಳಿಗಳು ಬಂದೊಡನೆಯೆ ಭೇರಿಯನ್ನು ಊದುವುದು.

ಸೈನಿಕನ ಅವತಾರ :—

ನಮ್ಮಲ್ಲಿಯ ಮುಂದಾಳುಗಳು ಕನ್ನಡತನವನ್ನು ಕಡೆಗಣ್ಣಿನಿಂದ ನೋಡತೊಡಗಿ, ದೇಶಪ್ರೇಮವೆಂಬ ಮುಸುಕಿನ ಮರೆಗೆ ನಿಂತು, ಪ್ರಾಂತದ ಏಳಿಗೆಯ ವಿಚಾರದಲ್ಲಿ ಉದಾಸೀನರಾಗಿದ್ದಾರೆ. ಈ ಉದಾಸೀನತೆಯು ಅವರನ್ನು ಸ್ಥಾನಭ್ರಷ್ಟರನ್ನಾಗಿ ಮಾಡಲಿದೆ; ಇಂದಿನ ಮುಂದಾಳುಗಳೆಲ್ಲ ಹಿಂದಾಳುಗಳಾಗಿ ಹಿಂದೆ ಉಳಿಯುತ್ತ ಕೂಡುವ ಪ್ರಸಂಗ ಬಂದಿದೆ. ಮುಂದೆ ಹೋಗುವವರು ಹಿಂದೆ ಬಿದ್ದರೆ ಹಿಂದಿನವರು ಮುಂದೆ ಬರುವರು. ಕನ್ನಡ ಸೈನಿಕನ ಅವತಾರವು ಅದನ್ನೆ ಸೂಚಿಸುವುದು. ನಮ್ಮ ನಾಡಿನಲ್ಲಿ ಮುಂದಾಳುತನ ಇಂದು ಸತ್ತಿದೆ; ಅದರ ಉತ್ತರಕ್ರಿಯೆ ಮಾಡಲು ಬಂದಿದ್ದಾನೆ ಕನ್ನಡ ಸೈನಿಕನು. ಪ್ರಾಂತಾಭಿಮಾನವು ಕಡಿಮೆಯಾದುದರಿಂದಲೆ ನಮ್ಮ ಮುಂದಾಳುಗಳು, ಜನತೆಯ ನೆರವನ್ನು ತಪ್ಪಿಸಿಕೊಂಡು ಕುಸಿಬಿದ್ದು ಕುಗ್ಗಿದ್ದಾರೆ. ಇನ್ನೂ ಅವರಿಗೆ ಎಚ್ಚರು ಬಂದಿಲ್ಲ; ಬರುವ ಸಂಭವವು ದೂರವಿರುವುದೆಂಬುದರಿಂದಲೆ ಅವರು ಸತ್ತಿದ್ದಾರೆಂದು ‘ಕನ್ನಡ ಸೈನಿಕ’ನು ತಿಳಿದುಕೊಂಡು ಭಾರಹೊತ್ತು ಬಯಲಿಗೆ ಬಂದಿದ್ದಾನೆ.

ರಾಷ್ಟ್ರದ ಮುಂದಾಳುಗಳೆನಿಸಿಕೊಳ್ಳಬೇಕೆನ್ನುವವರು ಬೆಂಗಾವಲಾಗಿ ಪ್ರಾಂತವನ್ನು ಇಟ್ಟುಕೊಂಡಿರಬೇಕು. ಮನೆಯ ಜನರಿಗೆ ಮುಂಚಾಗಿ ಹೆರವರಿಗೆ ಉಪಕಾರಿಯಾಗುವವರಿಗೆ, ಮೊದಲು ಮೊದಲು ಮೇಲೆ ಬರಬಹುದೆಂಬ ಆಶೆ ತೋರುವುದು. ಮನೆಯ ಜನರಿಗೆ ಅರಿವು ಬಂದೊಡನೆ ಮನೆಯವರಿಗೂ ಬೇಡ; ಹೆರವರಲ್ಲಿಯ ಹೆಗ್ಗಳಿಕೆಯೂ ಕಡಿಮೆಯಾಗುವುದು. ಪ್ರಾಂತದ ಅಡಿಗಲ್ಲ ಮೇಲೆ ರಾಷ್ಟ್ರದ ಸೇವಕರನ್ನು ಸಿದ್ಧಮಾಡಲು ಹೆಣಗುವುದೇ ‘ಕನ್ನಡ ಸೈನಿಕ’ನ ಮುಂಧೋರಣೆ.

ಕನ್ನಡ ಸೈನಿಕನ ಜಾತಿ ಕನ್ನಡ, ಗೋತ್ರ ಕನ್ನಡ, ಕುಲ ಕನ್ನಡ, ವಿಧಾನ ಕನ್ನಡ, ವಿಷಯ ಕನ್ನಡ. ವ್ಯಕ್ತಿಯ ವ್ಯಕ್ತಿಗತ ವಿಚಾರ ಅವನಿಗಿಲ್ಲ; ಸಮಾಜದ—ಕನ್ನಡ ಸಮಾಜದ—ನಾಗರಿಕ ವ್ಯಕ್ತಿಯ ವಿಚಾರ ಅವನಿಗಿದೆ. ಕನ್ನಡ ಸಮಾಜವು ಮೊದಲು—ಆಮೇಲೆ ಕನ್ನಡವ್ಯಕ್ತಿ— ಉಳಿದ-ಪಂಥ-ಪದ್ಧತಿಗಳು ಅವನ ಗಣನೆಗೆ ಬಾರವು. ಜಾತಿ-ಪಂಥ-ಧರ್ಮಗಳೆಂಬ ಕ್ಷುಲ್ಲಕ ವಿಚಾರಗಳಿಗೆ ಎಡೆಕೊಡಲು ಕನ್ನಡ ಸೈನಿಕನಿಗೆ ಅವಕಾಶವಿಲ್ಲ.

ಕನ್ನಡ ನಾಡಿನ ಏಕೀಕರಣವೆ ಗುರಿ; ನಾಡನ್ನು ಕಟ್ಟುವುದು ಗಮ್ಯ! ಭಾರತದ ಬೆಂಗಾವಲಾಗಿರುವುದು ಹವ್ಯಾಸ. ಕನ್ನಡತನವನ್ನು ಕಾಯ್ದುಕೊಳ್ಳುವುದು ಕರ್ತವ್ಯ; ಕನ್ನಡವಾದುದನ್ನು ಮಾಡುವುದೇ ಕಾರ್ಯ. ತಡೆಯಲು ಬಂದವರನ್ನು ಸದೆದು ಬಿಡುವುದು ಪುರುಷಾರ್ಥ.

ಸೈನಿಕನ ಕಾರ್ಯಭಾರ :—

ದೀನನಾಗಿ ದುಡ್ಡು ಬೇಡುವುದು ಕನ್ನಡ ಸೈನಿಕನಿಗೆ ಒಪ್ಪದು. ಆಪದ್ಧನವನ್ನು ಬೇಡುವ ಆಪದ್ಗತನ ಬೇಡ; ನಮಗೆ ಸದಾ ಆಪತ್ತು! ಬಿಕ್ಕೆ ಬೇಡಿ ಲೆಕ್ಕಕೊಡಿಸುವುದು ಸೈನಿಕನ ಸ್ವಭಾವಕ್ಕೆ ಒಗ್ಗದು. ಸೈನಿಕನು ಮಾಡುತ್ತಿರುವ ಕಾರ್ಯವು ಸರಿಯೆಂದು ಜನತೆಗೆ ಅರಿವು ಬಂದರೆ ಅವನ ಪೋಷಣೆಗೆ ಸಹಾಯಮಾಡುವುದು ಜನರ ಕರ್ತವ್ಯ; ಅಂತಹ ಕರ್ತವ್ಯದ ಅರಿವನ್ನು ತಂದುಕೊಡಲು ಪ್ರಯತ್ನಮಾಡುವವನು ಕನ್ನಡ ಸೈನಿಕ. ಕನ್ನಡವನ್ನು ಕುಸಿಯದಂತೆ ಮಾಡುವ ಶಕ್ತಿ-ಸಾಮರ್ಥ್ಯ ಕನ್ನಡ ಸೈನಿಕನಲ್ಲಿದೆ; ಅವನಿಂದ ಹೆಚ್ಚು ಹೆಚ್ಚಿನ ಕಾರ್ಯವಾಗಬೇಕೆಂದು ಬಯಸುವವರೂ ಅವನ ಕಾರ್ಯವು ಸರಿಯೆಂದು ಬೆಂಬಲಕೊಡಬೇಕೆಂದು ಬಯಸುವವರೂ ಸಹಾಯ ಮಾಡಿದರೆ, ಉಪಕಾರ ಸ್ಮರಿಸದೆ ಸ್ವೀಕರಿಸುವನು; ಕರ್ತವ್ಯಕ್ಕೆ ಉಪಕಾರಸ್ಮರಣೆಯಿಲ್ಲ. ಕರ್ತವ್ಯ ಮಾಡಿದಾಗ ಉಪಕಾರ ಸ್ಮರಣೆಯ ಆಶೆಯಿರಬಾರದು.

ಅವತಾರವೇಕೆ? :—

ಕನ್ನಡದಲ್ಲಿ ವೃತ್ತಪತ್ರಗಳೆ ಕಡಿಮೆ. ಕೆಲವು ಸತ್ಯ-ಅಹಿಂಸೆಯ ಸೋಗಿನಲ್ಲಿ ಕನ್ನಡವನ್ನು ನೋಡವು. ಮಹಾಸ್ವಾಮಿಗಳ ಕೃಪಾಛತ್ರದಲ್ಲಿ ಬೆಳೆಯುವ ಪತ್ರಿಕೆಗಳು ತಮ್ಮ ಮೇರೆಯನ್ನು ಮರ್ಯಾದಿಸಿಕೊಂಡಿವೆ. ಅದಕ್ಕಾಗಿ ಬಿಚ್ಚುಮಾತಿನಿಂದ ಜನತೆಯನ್ನು ಎಚ್ಚರಿಸುವ ಕಾರ್ಯವನ್ನು ಮಾಡುವುದಕ್ಕೆ 'ಕನ್ನಡ ಸೈನಿಕ'ನು ಮುಂಬರಬೇಕಾಯಿತು.

ಕಾರ್ಯಾರಂಭ :—

'ಕನ್ನಡ ಸೈನಿಕ' ಕಾರ್ಯದ ಆರಂಭೋತ್ಸವವು, ಮುಂಬಯಿ ಪ್ರಾಂತದ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ. ಖೇರ ಅವರಿಂದ ಬೆಳಗಾಂವಿಯಲ್ಲಿ ಜರುಗಿತು. 'ಕನ್ನಡಿಗರೆ, ಎಚ್ಚರಾಗಿರಿ' ಎಂದು ಚುಚ್ಚಿ—ಕೆಲ ಚುಚ್ಚುಮಾತುಗಳನ್ನಾಡಿದರು. ಅವರ ಬಿರುನುಡಿಗಳನ್ನು ಸಹಿಸಲು ಅಸಾಧ್ಯವಾಗಿ, ಅವರ ಆಶೀರ್ವಾದ ಬಲದಿಂದ 'ಕನ್ನಡ ಸೈನಿಕ'ನ ಉದಯವಾಯಿತು.

ತರಬೇತುಹೊಂದಿದ ಸೈನಿಕರು ಅಲ್ಲಲ್ಲಿ ಇರುವರು. ಖೇರರ ಈ ಸಿಡಿಮಾತುಗಳು ಆ ಎಲ್ಲ ಕನ್ನಡಸೈನಿಕರನ್ನೂ ಕಾರ್ಯಪ್ರವೃತ್ತರನ್ನಾಗಿ ಮಾಡಿತು. ವೃತ್ತಪತ್ರಿಕೆಗಳಲ್ಲಿ ಇನ್ನೂ ಸರಿಯಾದ ಸಮಾಧಾನಕರವಾದ ಸುದ್ದಿಯು ಪ್ರಕಟವಾಗಲಿಲ್ಲವಾದಕಾರಣ, 'ಸತ್ಯದ ಮರೆಯಲ್ಲಿ'ನಿಂತ ಶ್ರೀ. ಖೇರರನ್ನೆ ಕಾಣಬೇಕೆಂದು ಕನ್ನಡ ಸೈನಿಕನೊಬ್ಬನಿಗೆ ಸ್ವಯಂಪ್ರೇರಣೆಯಾಯಿತು. ಶನಿವಾರ ತಾರೀಖು ೧೪-೩-೪೨ನೆಯ ಮಧ್ಯಾಹ್ನದ ಮೂರು ಗಂಟೆಗೆ ಮುಂಬಯಿಯಲ್ಲಿಯ ಶ್ರೀ. ಖೇರರ ಕಚೇರಿಯಲ್ಲಿ, ಶ್ರೀ. ಎಚ್. ಎಸ್. ಪಾಟೀಲರು ಸಂದರ್ಶನವನ್ನು ತೆಗೆದುಕೊಂಡರು. ಅದನ್ನೆ ಒಂದು ಲೇಖನವನ್ನಾಗಿ ಮುಂದೆ ಕೊಡಲಾಗಿದೆ. ಅದು ಅಂದಿನ ಸಂಗತಿಗಳ ಕನ್ನಡಿಯಾಗಿರುವುದರಿಂದ, ಹೆಚ್ಚಿನ ಮಾತನ್ನು ನಾವು ಬರೆಯಬೇಕಿಲ್ಲ. ತಪ್ಪುಯಾರದು? ಎಷ್ಟರಮಟ್ಟಿಗೆ? ನಮ್ಮ ಕರ್ತವ್ಯವೇನು?—ಎಂಬ ಪ್ರಶ್ನೆಗಳನ್ನು ಓದುಗರು ಕಣ್ಣುಮುಂದೆ ಇಟ್ಟುಕೊಂಡಿದ್ದರೆ ಸಾಕು.

ಸಂಪಾದಕ ಕ. ಸೈ.

ಶ್ರೀಮಾನ್ ಖೇರರ ಸಂದರ್ಶನ

★

(ಸ್ವಯಂಪ್ರೇರಿತ ಪ್ರತಿನಿಧಿಯಿಂದ)

ನಾನು ಒಳಗೆ ಹೋದೊಡನೆ 'ಕುಳಿತುಕೊಳ್ಳಿರಿ' ಎಂದು ಇಂಗ್ಲಿಷಿನಲ್ಲಿ ಹೇಳಿ ಟೆಲಿಫೋನಿನಲ್ಲಿ ತುಸು ಮಾತನಾಡಿದರು, ಆ ಮೇಲೆ—'ಸ್ವಲ್ಪ ತಡೆಯಿರಿ. ಈಗ ಬಂದೆ' ಎಂದು ಹೊರಗೆ ಹೋಗಿ ಒಳಗೆ ಬಂದರು. ಬರುಬರುತ್ತ 'ಹಂ—ಏನು? ಈಗ ಹೇಳಿರಿ,' ಎಂದು ಕನ್ನಡದಲ್ಲಿ ಮಾತನಾಡುತ್ತ, ನನ್ನನ್ನು ಬಳಿಯಲ್ಲಿ ಒಂದು ಕುರ್ಚಿ ರ ಹೇಳಿ ತಾವೂ ಕುಳಿತುಕೊಂಡರು. ಆ ಮೇಲೆ ಮಾತುಗಳೆಲ್ಲ ಇಂಗ್ಲೀಷಿನಲ್ಲಾದುವು.

ಬೆಳಗಾಂವಿಯ ಹಿರಿಯಾಳುಗಳೆ ಕುಳಿತು ಮರಾಟಿಯಲ್ಲಿಯೆ ಮಾತನಾಡಬೇಕೆಂದು ಹಟಹಿಡಿದಾಗ, ಪರಕೀಯರಾಗಿ ಬಂದ ಶ್ರೀ. ಖೇರರು ಮಾಡಬೇಕೇನು? ಹಿರಿಯಾಳುಗಳ ಮಾತನ್ನು ಕೇಳುವುದೆ ಅಲ್ಲವೆ?

ಶ್ರೀ. ಖೇರ :—ನನಗೆ ಮೊನ್ನೆ ಶ್ರೀ. ಕುರಂದವಾಡ ಎಂಬವರಿಂದೊಂದು ಕಾಗದ ಬಂದಿದೆ. 'ನಾವು ಮತ್ತೆ ಒಂದೆಡೆ ಸೇರಿ ನಿಮ್ಮ ನಡತೆಯ ನಿಷೇಧ ಮಾಡಿದ್ದೇವೆ' ಎಂಬುದಾಗಿ ಅವರು ಬರೆದಿದ್ದಾರೆ. ಅದಕ್ಕೆ ನಾನು ತಿರುಗಿ ಪತ್ರ ಬರೆದೆ. 'ನನ್ನ ನಡತೆ ನಿಮಗೆ ನಿಷೇಧಾರ್ಹ ಎನಿಸಿದುದಕ್ಕೆ ನನಗೆ ತುಂಬ ವಿಷಾದವೆನಿಸುತ್ತದೆ' ಎಂದು.

ನಾನು :—ಹಾಗಾದರೆ, ಈ ತೊಂದರೆಗೆ ನೀವೇನು ಉಪಾಯ ಹೇಳುವಿರಿ?

ಖೇರ :—(ಕೈ ಚೆಲ್ಲಿ) ನಾನೇನು ಹೇಳಲಿ!

ನಾನು :—ನಿಮಗೆ ಗೊತ್ತಿತ್ತಲ್ಲವೆ, ಹೀಗೆ ಬೆಳಗಾಂವಿಯಲ್ಲಿ ಈ ವಾದವಿದೆ,—ಎಂಬ ಮಾತು.

ಖೇರ :—ಗೊತ್ತಿದೆ. ಹಿಂದಕ್ಕೆ—೧೯೩೮ರಲ್ಲಿ, ಪೇಟೆಯಲ್ಲಿ ಒಮ್ಮೆ ಭಾಷಣಮಾಡಿದಾಗ ಇದೇ ಬಗೆಯ ಗೊಂದಲವೆದ್ದಿತು. ಆಗ ನಾನು ಹಿಂದಿಯಲ್ಲಿ ಮಾತನಾಡಿದೆ. ಆದರೆ ೧೯೩೯ರಲ್ಲಿಯೊಮ್ಮೆ—೧೯೪೦ರಲ್ಲಿಯೊಮ್ಮೆ—ಅದೇ ಹನುಮಂತನ ಗುಡಿಯಲ್ಲಿ ಮರಾಟಿಯಲ್ಲಿ ಮಾತನಾಡಿದ್ದೇನೆ. ಇಂತಹ ಗೊಂದಲವಾಗುವುದಾದರೆ ಇನ್ನು ಮೇಲೆ ನಾನು ಬೆಳಗಾಂವಿಗೆ ಹೋಗುವುದೇ ಇಲ್ಲ.

ನಾನು :—ಆದರೆ, ಇಂತಹ ತಮ್ಮ ವಿಚಾರದಿಂದ ಈ ತಂಟೆಯು ಬಗೆ ಹರಿಯುವುದಿಲ್ಲ. ತಾವು ಬಿಟ್ಟರೆ ಬೇರೊಬ್ಬರು ಹೋಗಬಹುದು. ನನಗೆ ಕೇಳಬೇಕಾದುದು ಇದರ ನಿವಾರಣೆಯ ಉಪಾಯವನ್ನು. ತಾವು ಮೊದಲೆ ಹಿಂದಿಯಲ್ಲಿ ಆರಂಭಿಸಿದ್ದರೆ ಈ ಗೊಂದಲ ಏಳುತ್ತಲೆ ಇರಲಿಲ್ಲ; ಅಲ್ಲವೆ?

ಖೇರ :—(ಜಾರಿಕೊಂಡು) ಅದನ್ನು ನಾನು ಹೇಗೆ ಹೇಳಲಿ! ಅದೇ ಗುಡಿಯಲ್ಲಿ ನಾನು ಎರಡು ಸಲ ಮರಾಟಿಯಲ್ಲಿ ಶಾಂತವಾದ

ವಸ್ಥೆಯಲ್ಲಿ ವ್ಯಾಖ್ಯಾನಕೊಟ್ಟಿದ್ದೇನೆ. ಮೇಲಾಗಿ ಅಂದು ಕೂಡ ನಾನು ಮೊದಲು ‘ನನಗೆ ಸಭೆಯಲ್ಲಿ—ಪಟ್ಟಣಗಳಲ್ಲಿ ಮಾತನಾಡುವಷ್ಟು ಕನ್ನಡ ಬರುವುದಿಲ್ಲ; ಕಾರಣ ಮರಾಟಿಯಲ್ಲಿ ಮಾತನಾಡುತ್ತೇನೆ’ ಎಂದು ಕನ್ನಡದಲ್ಲಿಯೆ ಹೇಳಿದೆ. ಕೂಡಲೆ ಒಂದು ಬದಿಯಿಂದ ೪೦ ೫೦ ಜನವಿದ್ಯಾರ್ಥಿಗಳು ಗೊಂದಲವೆಬ್ಬಿಸಿದರು; ‘ಕನ್ನಡ ಕನ್ನಡ’ ಎಂದು ಕೂಗತೊಡಗಿದರು. ಆಗ ನಾನು ಮತ್ತೆ ಕೇಳಿದೆ: ‘ಹಿಂದಿಯಲ್ಲಿ ಮಾತನಾಡಬೇಕೇ?’ ಎಂದು. ನನ್ನ ಹತ್ತಿರದ ಹಿರಿಯರೊಬ್ಬರು **‘ಮರಾಠಿಯಲ್ಲಿಯೆ ಆಗಲಿ’** ಎಂದರು. ಮತ್ತೆ ಕೂಗಾಟವಾರಂಭವಾಯಿತು.

ನಾನು:—ಆದರೂ ನೀವು ಮರಾಟಿಯಲ್ಲಿಯೆ ಮಾತನಾಡಿದಿರಿ! ಅವರೊಳಗೆ ಯಾರೊಬ್ಬರಿಗೆ ಕನ್ನಡದ ಪರವಾಗಿ ಅಭಿಪ್ರಾಯ ಕೇಳಿದಿರೇನು? ಅವರಿಗೆ ತಮ್ಮ ವಿಚಾರಮಂಡಿಸಲು ಅವಕಾಶ ಕೊಟ್ಟಿರೇನು?

ಖೇರ:—ಕೇಳಿದೆವು; ಆದರೆ ಒಂದು ನೂರಾರು ಜನರು ಬಂದರು. ಆಗ ನಾನು ನನ್ನ ಬಳಿಯಲ್ಲಿದ್ದ ನಿಯೋಜಕರನ್ನು ಕೇಳಿದೆ; ಅವರು **‘ಮರಾಠಿಯಲ್ಲಿ ಮಾತನಾಡಿರಿ’** ಎಂದು ಹೇಳಿದರು.

ನಾನು:—ಅದಿರಲಿ; ಅಲ್ಲಿಯ ತಂಟೆಯನ್ನು ತಿಳಿದ ತಾವು ಅದನ್ನು ಬಗೆಹರಿಸಬಹುದಿತ್ತಲ್ಲವೆ?

ಖೇರ:—ನಾನು ಅತಿಥಿಯಾಗಿ ಹೋದವ; ನನಗೆ ಯಾವ ಭಾಷೆಯಲ್ಲಿ ಮಾತಾಡಲಿಕ್ಕೆ ನಿಯೋಜಕರು ಹೇಳಿದರೊ ಆ ಭಾಷೆಯಲ್ಲಿ ಮಾತನಾಡಿದೆ. ನಾನೇನು ಮಾಡಲಿ? ಅಲ್ಲಿದ್ದ ನನ್ನ ಹಿರಿಯರೂ ಜೀವನದಾದ್ಯಂತ ನಾನು ಮಾಡುತ್ತಿದ್ದ ಕಾರ್ಯದಲ್ಲಿ ದುಡಿಯುತ್ತಿದ್ದವರೂ ಆದ ಶ್ರೀ. ಗಂಗಾಧರರಾಯರು ‘ಇಲ್ಲಿ ಮರಾಟಿ ಎಲ್ಲರಿಗೂ ತಿಳಿಯುತ್ತದೆ; ಮರಾಟಿಯಲ್ಲಿಯೇ ಮಾತನಾಡಿರಿ’ ಎಂದು ಹೇಳಿದರು. ನಾನು ಹೇಗೆ ಆ ತಂಟೆಯನ್ನು ಬಗೆಹರಿಸಲಿ?

ನಾನು:—ಹಾಗಾದರೆ ಇದು ಅನಂತ ಕಾಲದ ಪರಿಯಂತ ನಡೆಯುವುದೇ? ಹಿರಿಯರೂ ವಿದ್ವಾಂಸರೂ ಆದ ತಾವು ಏನಾದರೂ ಉಪಾಯವೊಂದನ್ನು ಹೇಳಬಹುದೆಂದು ನನ್ನ ಆಶೆಯಿತ್ತು.

ಖೇರ:—ನಾನು ಹೇಗೆ ಹೇಳಲಿ! ನನ್ನನ್ನು ಈಗಾಗಲೆ ಹಗೆಗಳಲ್ಲಿ ಎಣಿಸಿದ್ದಾರೆ. ನನ್ನ ವಿಷಯವಾಗಿ ಸಂಶಯಗ್ರಸ್ತ ರೀತಿಯಲ್ಲಿಯೆ ಮಾತನಾಡುತ್ತಾರೆ. ನಾನೇನು ಮಾಡಲಿ? ಈಗ ನೀವು ಸಹ ಪತ್ರಿಕೆಗಳಲ್ಲಿ ಏನಾದರೊಂದನ್ನು ಬರೆದು ನನ್ನನ್ನು ಬೈಯಬಹುದು. ಆದರೆ ಇಂತಹ ಸಂಶಯ ದೋಷಗಳಿಗೆ ನಾನು ಸಿದ್ಧನಾಗಿದ್ದೇನೆ. ಮನಸ್ಸಿನ ಸಿದ್ಧತೆಯನ್ನು ಮಾಡಿಕೊಂಡಿದ್ದೇನೆ.

ನಾನು:—ನನ್ನಿಂದ ತಮಗೆ ಅಂತಹ ಯಾವ ಅಂಜಿಕೆಯೂ ಇಲ್ಲ. ಅದಿರಲಿ; ಆದರೆ ತಾವು—ಮುಂಬಯಿಯಂತಹ ದೊಡ್ಡೂರಿನವರು—ಪಂಚರು ಎಂದು ತಿಳಿದುಕೊಂಡು ಇದಕ್ಕೊಂದು ಉತ್ತರವನ್ನು ಹೇಳಬಾರದೆ?

ಖೇರ:—ನಾನು ಹಾಗೆಯೆ ಹೇಗೆ ಹೇಳಲಿ? ನೀವೂ ನನ್ನ ವಿಷಯವಾಗಿ ಪೂರ್ವದೂಷಿತ ಕಲ್ಪನೆಯಿಂದ ಬಂದಿರುವಿರಿ; ಇದಲ್ಲದೆ ನನ್ನನ್ನು ಪಂಚನೆಂದು ಇಬ್ಬದಿಯವರೂ (ಮರಾಟಿಗರು ಒಪ್ಪಬೇಕಲ್ಲ!) ಒಪ್ಪಿ ‘ನೀವು ಹೇಳಿದ ನಿರ್ಣಯವನ್ನು ನಾವು ಇರ್ವರೂ ಒಪ್ಪುವೆವು’ ಎಂದು ತಮ್ಮ ತಮ್ಮ ವಿಚಾರಗಳನ್ನೆಲ್ಲ ಮಂಡಿಸದೆ, ನಾನು ಹೇಗೆ ನಿರ್ಣಯವನ್ನು ಕೊಡುವುದು?

ನಾನು:—ಆದರೆ....ನಿಮಗೆ ಈ ವಿಷಯ ಗೊತ್ತಿದೆಯೇನು—ಬೆಳಗಾಂವಿಯಲ್ಲಿ ಕೇವಲ ಮರಾಟಿ ಭಾಷಣಕಾರರು ಬಂದಾಗ ಮಾತ್ರ ಇಂತಹ ಪ್ರಶ್ನೆಯೇಳುತ್ತದೆಂಬುದು? ದಕ್ಷಿಣದವರಾಗಲಿ, ಉತ್ತರದವರಾಗಲಿ, ಇಲ್ಲವೆ ಹಿಂದು ಮಹಾಸಭೆಯಂತಹ ಬೇರೆ ಸಂಸ್ಥೆಗಳ ಜನರಾಗಲಿ, ಬಂದಾಗ ಇದು ಏಳುವುದಿಲ್ಲ. ಆದರಿಂದ ಮರಾಟಿ ಭಾಷಣಕಾರರ— ಮತ್ತು ನಿಮ್ಮಂತಹ ಹಿರಿಯರ ಮೇಲೆಯೆ ಇದರ ಹೊಣೆಯು ಹೆಚ್ಚಾಗಿರುವುದಿಲ್ಲವೇನು?

ಖೇರ:—ಅದು ಹಾಗೆ ಹೇಗೆ ಇರುತ್ತದೆ? ನಾವು ಎಷ್ಟೆಂದರೂ ಅತಿಥಿಗಳಾಗಿ ಬಂದವರು. ನಮಗೆ ಅಲ್ಲಿಯ ಸ್ಥಳೀಯ ನಿಯೋಜಕರು ಹೇಳಿದ ಭಾಷೆಯಲ್ಲಿ ನಾವು ಮಾತನಾಡುವೆವು. ಮೊನ್ನೆ ಹುಬ್ಬಳ್ಳಿ-ಬೇರೆ ಹಳ್ಳಿ— ಧಾರವಾಡದಲ್ಲಿ, ಅಲ್ಲಿಯ ನಿಯೋಜಕರು ಅಲ್ಲಿ ಹಿಂದಿಯಲ್ಲಿ ಮಾತನಾಡಬೇಕೆಂದು ಹೇಳಿದರು. ನಾನು ಹಾಗೆಯೆ ಮಾಡಿದೆ. ಇಲ್ಲಿ (ಬೆಳಗಾಂವಿಯಲ್ಲಿ) ನಿಯೋಜಕರೂ ಹಿರಿಯರೂ ‘ಮರಾಟಿ ಇಲ್ಲಿ ಎಲ್ಲರಿಗೂ ತಿಳಿಯುತ್ತದೆ; ನೀವು ಮರಾಟಿಯಲ್ಲಿಯೆ ಮಾತನಾಡಿರಿ!’ ಎಂದು ನನಗೆ ಹೇಳಿದಾಗ, ನಾನು ಬೇರೆ ಭಾಷೆಯಲ್ಲಿ ಏಕೆ ಮಾತನಾಡಬೇಕು?

ನಾನು:—ಆದರೆ ನೀವು ಪ್ರಾಂತದ ಮುಂದಾಳು; ಕಾಂಗ್ರೆಸ್ಸಿನ ಹಿರಿಯಹುದ್ದೆದಾರರು; ಅಂತಹರು ನೀವು ಕಾಂಗ್ರೆಸ್ಸಿನ ನಿರ್ಣಯವನ್ನಾದರೂ ನೋಡಬಾರದೇನು? ಬೆಳಗಾಂವಿಯು ಕನ್ನಡನಾಡಿನಲ್ಲಿ ಇದ್ದುದು ತಮ್ಮ ಗಮನಕ್ಕೆ ಬರಲಿಲ್ಲವೇನು?

ಖೇರ:—ನಮಗೆ ಹಾಗೆ ಮಾತನಾಡಿರಿ ಹೀಗೆ ಮಾತನಾಡಿರಿ ಎಂದು ಬೇರೆಯವರು ಹೇಳಬೇಕೇಕೆ? ಅಲ್ಲಿಯ ನಿಯೋಜಕರ ಕೆಲಸವದು. ನಿಮ್ಮ ಎಲ್ಲಾ ವಾದ ಅಲ್ಲಿ—ಅವರ ಮುಂದೆ ಆಗಬೇಕು.

ನಾನು:—ಇದು ನಮಗೆ ಗೊತ್ತಿದೆ. ನಮ್ಮ ಹಗೆಗಳು ನಮ್ಮ ಶಿಬಿರದಲ್ಲಿಯೆ ಇರುತ್ತಾರೆ. ಆದರೆ ದೊಡ್ಡ ದೊಡ್ಡ ಸ್ಥಾನಗಳಲ್ಲಿ ಕೆಲಸ ಮಾಡುವ ನೀವು, ಹೀಗೆ ಇಂತಹ ಪ್ರಶ್ನೆಗಳನ್ನು ಬಿಡಿಸದೆ ಅವುಗಳಿಗೆ ಪುಟ ಕೊಟ್ಟರೆ ಹೇಗೆ?

ಖೇರ:—ಹೀಗೆಲ್ಲ ನೀವು ಮಾತನಾಡಿದರೆ ನಾನು ಈ ಮಾತನ್ನು ಬಿಟ್ಟುಬಿಡುವೆ. ನೀವು ಕನ್ನಡಿಗರು ಈ ವಿಷಯವನ್ನು ಅತಿರೇಕಕ್ಕೆ ಒಯ್ಯುವಿರಿ. ಈ ನಮ್ಮ ದೀರ್ಘವಾದದಿಂದ ನಿಮ್ಮ ಮನಸ್ಸಿನ ಮೇಲೆ ಯಾವ ಪರಿಣಾಮವಾದರೂ ಆಗಲೊಲ್ಲದೇಕೆ; ನಾನು ಮಾತನಾಡಿ ಏನು ಪ್ರಯೋಜನ! ನೀವು ಯಾವಾಗಲೂ ನಿಮ್ಮ ತಿರುಗಣಿಯಲ್ಲಿಯೆ ಸುತ್ತುತ್ತೀರಿ.

ನಾನು :—ದಯೆಯಿಟ್ಟು ಇಂತಹ ಮಾತುಗಳನ್ನಾಡಬೇಡಿರಿ. ನಾವು ಈ ಬಗೆಯ ಮಾತುಗಳನ್ನು ಯಾರಿಂದಲೂ ಆಡಿಸಿಕೊಳ್ಳಲು ಸಿದ್ಧರಿಲ್ಲ. ನಿಮ್ಮನ್ನು ಮೂರನೆಯವರು—ಎಲ್ಲ ಜನರಿಗೂ ಬೇಕಾದವರು—ಸಮನಾಗಿ ಎಲ್ಲರಿಗೂ ಪ್ರಿಯರು-ಎಂಬ ವಿಚಾರದಿಂದ ಕೇಳುತ್ತೇನೆ. ಇದು ಬಗೆಹರಿಯುವುದು ಸಾಧ್ಯವೆ ಇಲ್ಲವೇನು?

ವೀರ :—ನೀವು ನಿಮ್ಮಲ್ಲಿಯೆ ಏನಾದರೊಂದು ನಿರ್ಣಯವನ್ನು ಮಾಡಿರಿ : 'ಸಾರ್ವಜನಿಕ ಸಭೆಗಳಲ್ಲಿ ಇಂತಿಂತಹ ಭಾಷೆಗಳಲ್ಲಿ ಭಾಷಣಗಳಾಗಬೇಕು,' ಎಂದು.

ನಾನು :— ಈಗ ಧಾರವಾಡದಲ್ಲಿ ಗೊತ್ತಾದ ನಿರ್ಣಯವನ್ನು ತಾವು ಬಲ್ಲಿರಾ? 'ಕನ್ನಡನಾಡಿನಲ್ಲಿ ಎಲ್ಲ ಸಾರ್ವಜನಿಕ ಭಾಷಣಗಳು ಕನ್ನಡದಲ್ಲಿಯೆ ಆಗಬೇಕು. ಹೊರಗಿನವರು ಹಿಂದಿಯಲ್ಲಿ ಮಾತನಾಡಬೇಕು ; ಇಲ್ಲವೆ ಇಂಗ್ಲೀಷಿನಲ್ಲಿ ಮಾತನಾಡಬೇಕು. ಕನ್ನಡ ಬಿಟ್ಟು ಯಾವ ಭಾಷೆಯಲ್ಲಾದರೂ ವಾಕ್ಯಕ್ಕೆ ವಾಕ್ಯ ಭಾಷಾಂತರವಾಗಬೇಕು' ಎಂದು ಗೊತ್ತುವಳಿ ಪಾಸಾಗಿದೆ.

ವೀರ :—ಹಾಗೆ ಏನಾದರೂ....ಮಾಡಿರಿ, ನಿಮ್ಮ ಸ್ಥಳೀಯ ನಿಯೋಜಕರಿಗೆ ತಿಳಿಸಿರಿ.

ನಾನು :—ಈ ಸಲವೂ ಹಾಗೆಯೆ ಮಾಡಿತ್ತು—ತಮ್ಮ ಭಾಷಣ ಹಿಂದಿಯಲ್ಲಾಗಬೇಕೆಂದು. ಅಲ್ಲದೆ ಕಳೆದ ಸಲ ತಾವೆ ಆಶ್ವಾಸನ ಕೊಟ್ಟದ್ದುಂಟು. ಇದನ್ನೆಲ್ಲ ಹೇಳಿದರೂ ಹೀಗೆ ಆಯಿತು. ತಮ್ಮಂತಹರಿಂದ ನಮಗೆಲ್ಲ ಬಿರುದಾವಳಿಗಳು ಸಿಕ್ಕುವು. ನಿಜವಾಗಿಯೂ ತಮ್ಮ ಬಾಯಿಂದ ಈ ಬಗೆಯ ಶಬ್ದಗಳು ಬರಬಹುದೆಂದು ನಾವು ಭಾವಿಸಿರಲಿಲ್ಲ.

ವೀರ :—ಅದೇಕೆ? ಕಂಡದ್ದನ್ನು ಕಂಡಂತೆಯೆ (to call spade a spade) ಆಡಲು ಹಿಂಜರಿಯುವುದಿಲ್ಲ ನಾನು; ಅದನ್ನು ಹಾಗೆ ಹೇಳಲು ಹೆದರುವುದಿಲ್ಲ. ಅಂದಿನ ಸಭೆಯಲ್ಲಿ ಮಾಡಿದ ಗದ್ದಲವನ್ನು ನೋಡಿದ್ದರೆ, ಆ ಹುಡುಗರ ಕಾಲೇಜಿನ ಪ್ರಿನ್ಸಿಪಾಲ್—ಅಥವಾ ಪಾಲಕನು ನಾನಾಗಿದ್ದರೆ, ಅವರಿಗೆ ನಾನು ಒಳಿತಾಗಿ ಪಾಠ ಕಲಿಸುತ್ತಿದ್ದೆ. ನಿಮ್ಮ ಜನರು ನಡತೆಯನ್ನು ಕಲಿಯಬೇಕು.

ನಾನು :—ನಮ್ಮ ಜನರು ನಡತೆಯಲ್ಲಿ ಎಂದೂ ಹೆಚ್ಚು ಕಡಿಮೆ ಮಾಡುವುದಿಲ್ಲ. ಆದರೆ ತಮ್ಮಂತಹರು—ಅಹಿಂಸಾವಾದಿಗಳು—ಮಾತ್ರ ಇಂತಹ 'ಪುಂಡ' 'ಗುಂಡ' 'ದಾವಡೆಖೋರ' 'ಅವರನ್ನು ಹದ್ದಿನಂತೆ ಆರಿಸಿ ಹೊರಗೆ ಚೆಲ್ಲಿರಿ' ಎಂದು ಮುಂತಾದ ಮಾತುಗಳನ್ನು ಆಡುವಿರೆಂದು ನಿರೀಕ್ಷಿಸಿರಲಿಲ್ಲ.

ವೀರ :—ಅದೇಕೆ? ಅಹಿಂಸೆಗೂ ಅದಕ್ಕೂ ಏನು ಸಂಬಂಧ? ವಿದ್ಯಾರ್ಥಿಗಳ ಸಂಬಂಧವಾಗಿ ನಾನು ಬಹಳ ನಿಷ್ಠುರನಿದ್ದೇನೆ. ಮೇಲಾಗಿ 'ಹದ್ದು ಆರಿಸಿದಂತೆ ಆರಿಸಿ ಹೊರಗೆ ಚೆಲ್ಲಿರಿ' ಎಂದು ಮುಂತಾಗಿ ನಾನು ಮಾತನಾಡಿಯೆ ಇಲ್ಲ. 'ಅಂತಹರನ್ನು ಹೊರಗೆ ಹಾಕಿರಿ' ಎಂದು ಸಿಟ್ಟಿನ ಭರದಲ್ಲಿ ಅಂದೆ, ಅದು ನಿಜ!

ನಾನು :—ಆದರೆ ಇಂತಹ ಮಾತುಗಳನ್ನು ಗಾಂಧೀಜಿಯವರು ಆಡುತ್ತಿದ್ದರೆ?

ವೀರ :—ಅವರ ಮಾತು ಬೇರೆ. ಅವರಷ್ಟು ಅಹಿಂಸೆಯು ನನ್ನಲ್ಲಿ ಇಲ್ಲ, ಇದನ್ನು ನಾನು ಒಪ್ಪುತ್ತೇನೆ. ಅವರು ಒಮ್ಮೆ ತುಂಬಿದ ಸಭೆಯಲ್ಲಿ—ಅದು ರಾಜಕೀಯ ಸಭೆಯಿದ್ದರೂ-ಒಬ್ಬನು ಅಲ್ಲಿ 'ಗೋರಕ್ಷಣೆಯ ಗೊತ್ತುವಳಿಯನ್ನು ತರುವೆನು' ಎಂದಾಗ ನಮ್ಮೆಲ್ಲರನ್ನು ಸಭೆಯಿಂದ ಹೊರಗೆ ಕರೆದೊಯ್ದರು ; ಅಲ್ಲಿ ಆ ಮಾತುಗಾರನೊಬ್ಬನೆ ಉಳಿದ. ಮತ್ತೊಮ್ಮೆ ಕಾಂಗ್ರೆಸ್ಸಿನ ಬಹಿರಂಗ ಅಧಿವೇಶನದಲ್ಲಿ ಒಂದು ವಿಷಯಾಂತರದ ಗೊತ್ತುವಳಿಯನ್ನು ತರುವ ಹಟವನ್ನೆ ಹಿಡಿದನೊಬ್ಬನು. ಆಗ ಹತ್ತು ಸಾವಿರ ಜನರನ್ನು ಡೇರೆಯ ಹೊರಗೆ ಮಳೆಯಲ್ಲಿ ನಿಲ್ಲಿಸಿದರು ಗಾಂಧೀಜಿಯವರು. ಅವನೊಬ್ಬನೆ ಒಳಗೆ ಉಳಿದ. ನಾನು ಅವರನ್ನು ಕೇಳಿದೆ : 'ಇದೆಂತಹ ಅಹಿಂಸೆ, ಬಾಪೂಜಿ!' ಎಂದು. 'ಅದಕ್ಕೇನು ಮಾಡುವುದು? ಅವನ ಇಚ್ಛೆ ಮುರಿಯುವುದು ಹೇಗೆ? ಅವನು ಮಾತನಾಡಿ ಮುಗಿಸಲಿ, ನಾವು ಹೋಗೋಣ' ಎಂದರು. ಅದೇ ಜಿನ್ನಾ ಅವರು ಏನು ಮಾಡಿದರು ಗೊತ್ತಿದೆಯೆ? ಅಂತಹ ಒಬ್ಬನನ್ನು ತಮ್ಮ ಪ್ರಾರ್ಥನಾಸ್ಥಳದ ಕಡೆಯಿಂದ ಹೊರಗೆ ದಬ್ಬಿಸಿದರು. ಗಾಂಧೀಜಿಯವರಷ್ಟು ಅಹಿಂಸೆ ಇಲ್ಲವೆಂದಮೇಲೆ, ಜಿನ್ನಾ—ಇಲ್ಲವೆ ಹಿಟ್ಲರನಂತೆ ಮಾಡಬೇಕಾಗುವುದು. ಯಾರಾದರೂ ತೊಂದರೆ ಕೊಟ್ಟರೆ ಜವಾಹರಲಾಲರು ಏನು ಮಾಡುತ್ತಿದ್ದರು ಗೊತ್ತೆ?

ನಾನು :—ಅವರದು ಗೊತ್ತಿದೆ ನಮಗೆ; ಚೌಪಾಟಿಯಲ್ಲಿ ಒಮ್ಮೆ ಒಬ್ಬನನ್ನು ರಟ್ಟೆ ಹಿಡಿದು ಹೊರಗೆ ದಬ್ಬುತ್ತಿರುವುದನ್ನು ನಾನೇ ನೋಡಿದ್ದೇನೆ. ಇಂತಹ ವಿಷಯದಲ್ಲಿ ಅವರು ಶೀಘ್ರಕೋಪಿಗಳೆ. ಅವರ ಸ್ವಂತ ಸಂಗಿಯೆ ಅವರಿಗೆ ಇಂತಹ ಬಿರುದನ್ನು ಕೊಟ್ಟಿಲ್ಲವೆ?

ವೀರ :— ಅದಕ್ಕಾಗಿಯೆ ಅಂದು ನಾನು ಸಿಟ್ಟಿನ ಭರದಲ್ಲಿ ಹಾಗೆ ಅನ್ನಬೇಕಾಯಿತು. ಕಡೆಗೆ ಕೆಲವು ಜನ ವಿದ್ಯಾರ್ಥಿಗಳು ಬಂದು 'ನಾವು ಇಂದಿನ ಸಭೆಯ ಸಂಗತಿಗಳ ಬಗ್ಗೆ ವಿಷಾದಿಸುತ್ತೇವೆ' ಮುಂತಾಗಿ ಹೇಳಿದರು. 'ಇದು ಬಹಳ ಕೆಡಕಿನ ಸಂಗತಿ. ನನಗೂ ವಿಷಾದವೆನಿಸುತ್ತದೆ' ಎಂದೂ ನಾನೂ ಹೇಳಿದೆ.

ನಾನು :—ಆದರೆ ಸಿಟ್ಟಿನ ಭರದಲ್ಲಿ ತಾವು ಅಂತಹ ಬಿರುನುಡಿಗಳನ್ನಾಡದೆ, ಸರಿಯಾದ ಅಹಿಂಸೆಯಿಂದು ಮಾತುಗಳನ್ನೆ ಆಡದೆ ಸುಮ್ಮನೆ ಕುಳಿತಿದ್ದರೆ ಆಗುತ್ತಿದ್ದಿಲ್ಲವೆ?

ವೀರ :—ನಾನು ಅಲ್ಲಿ ಮಾತನಾಡಲಿಕ್ಕೆಂದು ಹೋದವ; ಮೇಲಾಗಿ ಬಳಿಯಲ್ಲಿಯ ಜನರು ಮಾತನಾಡಲು ಹೇಳುತ್ತಾರೆ. ಹೇಗೆ ಸುಮ್ಮನೆ ಕುಳಿತುಕೊಳ್ಳಲಿ? ಧ್ವನಿವಾಹಕ ಯಂತ್ರವನ್ನು ಬಿಟ್ಟು, ಅಲ್ಲಿಯೇ ಕುಳಿತ ಸುತ್ತುಮುತ್ತಲಿನ ಜನರಿಗೆ ಕೇಳಿಸುವಂತೆ ಮೆಲ್ಲಗೆ ಮಾತನಾಡಿದೆ. ಆದರೆ ಅಂದಿನ ಸಭೆಯೊಳಗಿನ ಕನ್ನಡಿಗರು ಕೂಗಾಡದೆ ಅಲ್ಲಿಂದ ಎದ್ದು ಹೋಗಿದ್ದರೆ, ಆಮೇಲೆ ನಿಷೇಧಿಸಿದ್ದರೆ, ಒಳಿತಾಗುತ್ತಿತ್ತು.

ನಾನು :—ಹಾಗೆ ಹೇಗೆ ಮಾಡುತ್ತಾರೆ? ತಮ್ಮಂತಹ ಹಿರಿಯರ ಭಾಷಣಗಳನ್ನು ಕೇಳಬೇಕೆಂದು ಅಲ್ಲಿಗೆ ಬಂದವರನೇಕರು. ಅದು

ಸಾರ್ವಜನಿಕ ಸಭೆ. ಅಲ್ಲಿ ತಿಳಿಯದಂತಹ ಭಾಷೆಯಲ್ಲಿ ಮಾತನಾಡಿದರೇನು ಪ್ರಯೋಜನ ?

ಶೀರ:—ಅದಕ್ಕೆ ನೀವು ನಿಮ್ಮ ನಿಯೋಜಕರಿಗೆ ಕಟ್ಟುಮಾಡಿ ಹೇಳಬೇಕು. ಅವರು ಕೇಳದಿದ್ದರೆ ಸಭಾತ್ಯಾಗಮಾಡಿ ನಿಷೇಧ ವ್ಯಕ್ತಮಾಡಬೇಕು. ಆ ಸಭೆಯಲ್ಲಿ ನಿಮ್ಮ ಬೇಡಿಕೆಗಳೆಲ್ಲವನ್ನು ಮಂಡಿಸಬೇಕು. ಅದಲ್ಲದೆ ಅತಿಥಿಗಳು ಬಂದಾಗ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಕಲಿತುಕೊಳ್ಳಬೇಕು. ಅತಿಥಿಗಳಲ್ಲದೆ ಶ್ರೀ. ಗಂಗಾಧರರಾಯರಂತಹ—ನಮಗೆ ನಿಮಗೆ ತಂದೆಯೆನಿಸಿಕೊಳ್ಳುವಷ್ಟು ದೊಡ್ಡ—ಹಿರಿಯರ ಅವಮಾನ ಮಾಡಬಾರದು.

ನಾನು:—ನಮಗೆ ಶ್ರೀ. ಗಂಗಾಧರರಾಯರ ವಿಷಯಕ್ಕೆ ಆದರವಿದೆ. ಆದರೆ ಕನ್ನಡದ ವಿಷಯದಲ್ಲಿ ಅವರನ್ನು ಅಪವಾದವೆಂದೆ ತಿಳಿಯುತ್ತೇವೆ. ನೀವು ನನಗೂ ಪುಂಡ ಎಂದು ಕರೆದರೂ ಅಡ್ಡಿಯಿಲ್ಲ.

ಶೀರ:—ಹಾಗೇನು ಇಲ್ಲ. ಈ ಎಲ್ಲ ವಾಗ್ವಾದದಿಂದ ನೀವು ನಿಮ್ಮ ತಾಯ್ನುಡಿಯ ಪರಮ ಭಕ್ತರೆಂದು ತಿಳಿಯುತ್ತೇನೆ.

ಸಂದರ್ಶನದಿಂದ ತೆಗೆದ ತಿರುಳು

ಈ ಸಂದರ್ಶನದಿಂದ ಒಂದೆರಡು ಮಾತು ಸ್ಪಷ್ಟವಾಗುತ್ತವೆ. ಬೆಳಗಾಂವಿಯ ಪ್ರಸಂಗಕ್ಕೆ ಕಾರಣ ಅಲ್ಲಿಯ ಸ್ಥಳೀಯ ಮುಂದಾಳುಗಳ ಅಧಿಕಪ್ರಸಂಗತನವೊಂದೆಂಬುದೂ 'ತಮ್ಮದೇನು ತಪ್ಪಿಲ್ಲ; ಎಲ್ಲವನ್ನು ಮಾಡಿಸಿದವರು ಸ್ಥಳೀಯ ಕಾರ್ಯಕರ್ತರು ನಿಯೋಜಕರು' ಎಂದು ಹೇಳಿ ಪಾರಾಗುವ ಹಂಚಿಕೆ ಹೂಡಿದುದೂ ಶ್ರೀ. ಶೀರರ ಮಾತಿನಲ್ಲಿ ಕಾಣುವುದು. ಚಾಡಿ ಹೇಳುವವನಿಗಿಂತ ಕೇಳುವವನ ಕಿವಿಕೊಯ್ಯಬೇಕೆಂದು ನಾಣ್ಣುಡಿಯಿದೆ. ಸ್ಥಳೀಯ ಮುಂದಾಳುಗಳು ಏನೆ ಹೇಳಿದ್ದರೂ ಅಲ್ಲಿಯ ಅಂದಿನ ಪರಿಸ್ಥಿತಿಯನ್ನು ಗಣನೆಗೆ ತಂದು, ಕಾಂಗ್ರೆಸ್ ಘಟನೆಯನ್ನು ಅನುಲಕ್ಷಿಸಿ, ಪ್ರಾಂತದ ಭಾಷೆಯಲ್ಲಿ ಇಲ್ಲವೆ ಧಾರವಾಡದಲ್ಲಿಯಂತೆ ರಾಷ್ಟ್ರಭಾಷೆಯಾದ ಹಿಂದಿಯಲ್ಲಿ ಶ್ರೀ. ಶೀರರು ಮಾತನಾಡಬೇಕಿತ್ತು.

ಈ ಪ್ರಸಂಗದಿಂದ ಎಲ್ಲರೂ ಪಾಠ ಕಲಿಯುವಂತಿದೆ. ಸ್ಥಳೀಯ ಮುಂದಾಳುಗಳು ತಮ್ಮ ಹೊಣೆಯನ್ನರಿತು, ತಮ್ಮ ಸ್ಥಾನಮಾನ ನನ್ನರಿತು ಕಾರ್ಯಮಾಡಬೇಕು. ಅತಿಥಿಗಳು ಕೇವಲ ಮುಂದಾಳುಗಳ ಮುಂದೆ ಇದ್ದೇವೆಯೆಂದು ತಿಳಿಯದೆ, ಜನಸಾಮಾನ್ಯರ ಮುಂದೆ ಇದ್ದೇವೆಂಬುದನ್ನು ಲಕ್ಷ್ಯಕ್ಕೆ ತಂದುಕೊಂಡು, ಅವರ ಅಭಿಮತವನ್ನು ಮಾನವಂತೆ ವರ್ತಿಸಬೇಕು. ಇನ್ನು ಕನ್ನಡಿಗರು ಕಲಿಯುವ ಪಾಠ ಹಿರಿಯದಾಗಿದೆ. ಯಾರು ಬೇಕಾದವರು ಬರಲಿ, ನಮ್ಮ ಗಡಿಯಲ್ಲಿ ಕಾಲಿಟ್ಟಕೂಡಲೆ ನಮ್ಮ ಕರಾರುಗಳನ್ನು ಅವರ ಮುಂದಿಟ್ಟು ಅದಕ್ಕೆ ಅವರ ಒಪ್ಪಿಗೆ ಪಡೆಯಬೇಕು. ನಮ್ಮ ಪ್ರಾಂತದಲ್ಲಿದ್ದಾಗ ನಮ್ಮ ಭಾಷಾಭಿಮಾನಕ್ಕೆ ಅವರು ಕುಂದುತಾರದಂತೆ ನೋಡಿಕೊಳ್ಳುವುದು. ಮತ್ತೊಂದು ನಮ್ಮ ನಿಬಿಡದಲ್ಲಿಯೆ ಇದ್ದು ಕನ್ನಡದ ನೀರುಗು ಹಾಕಿಕೊಂಡು, ಕನ್ನಡಕ್ಕೆ ಕುಠಾರರಾಗಿ ವರ್ತಿಸುವವರ ವಿಷಯಕ್ಕೆ ಜಾಗರೂಕರಾಗಬೇಕು. ಅವರನ್ನು ತಿದ್ದುವುದು ಶಕ್ಯವಿದ್ದರೆ ತಿದ್ದಬೇಕು. ಅದನ್ನು ಅವರು ಸಾಧ್ಯಮಾಡಗೊಡದಿದ್ದರೆ ಅವರನ್ನು ಬದಿಗೊಗೆದು, ನಾಡಿನ ಅಡಿಯನ್ನು ಮುಂದಿಡಬೇಕು.

ಕನ್ನಡಿಗರಲ್ಲಿ ಬಿನ್ನಹ

ಹೆರವರು ನಮ್ಮನ್ನು ಹಿಯಾಳಿಸುವರು, ನಮ್ಮವರು ನಮ್ಮನ್ನು ಒಳಗಿನಿಂದಲೆ ನೋಯಿಸುವರು ಎಂದು ಆಕ್ಷೇಪಣೆಯನ್ನೆತ್ತಿ ಕೂಗಾಡಿದರೆ ಮುಗಿಯಲಿಲ್ಲ. ಇದಕ್ಕೆಲ್ಲ ಕಾರಣ ನಮ್ಮಲ್ಲಿಯೆ ಒಗ್ಗಟ್ಟು ಇಲ್ಲದಿರುವುದು. ಅದನ್ನು ಪಡೆಯುವುದು ನಮ್ಮ ಮುಖ್ಯಕರ್ತವ್ಯ. ನಮ್ಮನಮ್ಮಲ್ಲಿ ಅನೇಕ ವಿಚಾರಭೇದಗಳಿರಬಹುದು. ಇಡಿಪ್ರಾಂತದ ಪ್ರಶ್ನೆ ಬಂದಾಗ ನಮ್ಮ ವಿಚಾರವ್ಯತ್ಯಾಸಗಳನ್ನು ಬದಿಗಿಟ್ಟು, ಕೈಗೆ ಕೈಕೊಟ್ಟು ಒಂದಾಗಿ, ಇದಿರು ಬಂದವರನ್ನು ಬೆದರಿಸಿ—ಚೆದರಿಸಬೇಕು. ಶಾಂತತೆಯ ಕಾಲದಲ್ಲಿ ನಮ್ಮ ಆಂತರಿಕ ಏಳಿಗೆಯನ್ನು ಮಾಡಿಕೊಳ್ಳಬೇಕು. ವ್ಯಕ್ತಿಯು ತನ್ನ ವೈಯಕ್ತಿಕ ಏಳಿಗೆಯನ್ನು, ಸಂಸ್ಥೆಯು ತನ್ನ ಸ್ವಂತದ ಏಳಿಗೆಯನ್ನು, ಈ ಮೂಲಕ ಇಡಿನಾಡಿನ ಏಳಿಗೆಯನ್ನು ಪಡೆಯಬೇಕು. ಈ ತಿಂಗಳಲ್ಲಿ ಈ ವಿಧಾಯಕ ಕಾರ್ಯಕ್ರಮದಲ್ಲಿ ಒಂದು ಸೂಚನೆ ಮಾಡಬೇಕೆನ್ನುತ್ತೇವೆ. ನಿಮ್ಮ ನಿಮ್ಮ ಶಾಲೆ-ಕಾಲೇಜು-ಸಂಸ್ಥೆಗಳಲ್ಲಿ ಕನ್ನಡ ಪತ್ರಿಕೆಗಳು, ಎಷ್ಟು ಬರುವುವು, ಪರಭಾಷೆಯ ಪತ್ರಿಕೆಗಳು ಎಷ್ಟು ಬರುವುವು ? ಕನ್ನಡವು ಸಾಯುತ್ತಿದ್ದಾಗ ಪರಭಾಷೆಯ ಪತ್ರಿಕೆಗಳಿಗೆ ಪುಟುವು ಕೊಡುವುದು ಯಾವನ್ಯಾಯ ನೋಡಿ ! ಪರಭಾಷೆಯ ಪತ್ರಿಕೆಗಳು ಬರುತ್ತಿದ್ದಲ್ಲಿ ಅವು ಏಕೆ ಬರುವುವು ? ಅವುಗಳ ವಿಷಯವಿವೇಚನೆ ಏನು ? ಅದೇ ಮಾದರಿಯ ವಿಷಯ ಕನ್ನಡದ ಪತ್ರಿಕೆಯಲ್ಲಿ ಸಿಕ್ಕುವುದಲ್ಲವೆ ? ಪರಭಾಷೆಯ ಪತ್ರಿಕೆಯನ್ನು ತರಿಸುವುದನ್ನು ಬಿಟ್ಟರೆ ಆಗುವ ಹಾನಿಯೇನು ? ಆ ವಿಷಯವು ಅಗತ್ಯವಿದ್ದಲ್ಲಿ ಕನ್ನಡ ಪತ್ರಗಳ ಸಂಪಾದಕರಿಗೆ ಬರೆದು ತಮ್ಮ ಪತ್ರಿಕೆಗಳಲ್ಲಿ ಆ ವಿಷಯಗಳ ವಿವೇಚನೆ ಮಾಡಿಸುವಂತೆ ಬೇಡಿಕೊಳ್ಳಬೇಕು. ಅಲ್ಲಿಯವರೆಗೆ ತಡೆಯಬೇಕು. ಕನ್ನಡ ಪತ್ರಿಕಗಳಿಗೆ ಬೆಂಬಲ ಕೊಡಬೇಕು. ಹೊರಗಿನ ದೆವ್ವ ಮನೆಯವರನ್ನು ಹೊರದೂಡದಂತೆ ಎಚ್ಚರಪಟ್ಟುಕೊಳ್ಳಬೇಕೆಂದು ನಮ್ಮ ಮೊತ್ತಮೊದಲನೆಯ ಸೂಚನೆ.

ಸಂ. ಕ. ಸೈ.

ಭಾಷೆಯ ಬಿಕ್ಕಟ್ಟು

★

ಬಲ್ಲವರ ಬುದ್ಧಿಮಾತು

★

(ಸಂಪಾದಕರಿಂದ)

(೧) ಜನ್ಯುಅರಿ ೧೯೪೨ ರ ಮಾಡರ್ನ್‌ರಿವ್ಯೂ ಎಂಬ ಇಂಗ್ಲಿ ಮಾಸಪತ್ರಿಕೆಯ ಸಂಚಿಕೆಯಲ್ಲಿ (ಪು. ೯೮) '**ಭಾರತಕ್ಕೆ ಒಂದೇ ಸಾಮಾನ್ಯ ಭಾಷೆ**' ಎಂಬ ಶಿರೋಲೇಖದ ಕೆಳಗೆ ಹೀಗೆ ಕಾಣಿಸಿದೆ: 'ಕಿತಾಬಿಸ್ತಾನ ಗ್ರಂಥಮಾಲೆ'ಯಲ್ಲಿ 'ಹಿಂದುಸ್ತಾನಕ್ಕೆ ರಾಷ್ಟ್ರೀಯ ಭಾಷೆ' ಎಂಬ ಮೊದಲನೆಯ ಗ್ರಂಥ ಪ್ರಕಟವಾಗಿದೆ. ಆ ಗ್ರಂಥವನ್ನು ಪರಿಶೀಲಿಸುತ್ತ (Science and Culture) (ವಿಜ್ಞಾನ ಮತ್ತು ಸಂಸ್ಕೃತಿ) ಎಂಬ ಪತ್ರಿಕೆ ಹೀಗೆ ಬರೆದಿದೆ: 'ಭಾಷೆಯ ಪ್ರಶ್ನೆಯು ಅತ್ಯಂತ ಮಹತ್ವದ್ದಾಗಿದೆ. ಇದಕ್ಕೆ ಬರಿಯ ಜಾತೀಯ ಇಲ್ಲವೆ ರಾಜಕೀಯ ಸಂಗತಿಗಳೆ ಕಾರಣವಲ್ಲ. (ಜನಜೀವನದಲ್ಲಿ) ಇಂತಹ ಸಂಗತಿಗಳು ಕ್ಷಣಿಕವಾದುವು. ಆದರೆ ಮುಂದೆ ಮಾಡಬೇಕಾದ ಸಾರ್ವಜನಿಕ ಶಿಕ್ಷಣದ ಯೋಜನೆಯ ಸಾಂಸ್ಕೃತಿಕ ಚಟುವಟಿಕೆಗಳ ದೃಷ್ಟಿಯಿಂದಲೆ ಭಾಷೆಯ ಪ್ರಶ್ನೆಗೆ ನಿಜವಾದ ಮಹತ್ವವಿದೆ; ಒಂದು ಕಡೆ ದೇಶದಲ್ಲಿ ಐಕ್ಯವನ್ನು ಬೆಳೆಸಬೇಕು, ಇನ್ನೊಂದು ಕಡೆ ಹಿಂದಿನಿಂದ ನಡೆದುಬಂದ ಸಂಸ್ಕೃತಿಭಾಂಡಾರವನ್ನು ಬೆಳೆಸಬೇಕು. ಪ್ರಸ್ತುತ ಗ್ರಂಥದಲ್ಲಿ ಹಿಂದೀ ಇಲ್ಲವೆ ಉರ್ದು ಭಾಷೆಗಳನ್ನರಿಯದವರ ಅಭಿಪ್ರಾಯಗಳನ್ನು ಕಾಣಿಸಿಲ್ಲ... ಈ ಗ್ರಂಥವು ಅಖಿಲಹಿಂದುಸ್ತಾನಕ್ಕೆ ಪ್ರಾತಿನಿಧಿಕವಾಗಲಾರದು.... ಒಂದೇ ಒಂದು ಸಾಮಾನ್ಯ ಭಾಷೆಯ ಬಗ್ಗೆ ಪಂಡಿತ ಜವಾಹರರು ಕೊಟ್ಟ ವಿವೇಚನೆಯು ಹೆಚ್ಚು ಸಮಂಜಸವಾಗಿದೆ. ದೇಶಕ್ಕೆ ಹಿಂದುಸ್ತಾನಿಯು ಸಾಮಾನ್ಯ ಭಾಷೆಯಾಗಬೇಕೆಂದು ಹೇಳುವಾಗಲೂ ಆಯಾ ಪ್ರದೇಶಗಳಲ್ಲಿ **ಪ್ರಾಂತಿಕ ಭಾಷೆಯೆ** ಅಗ್ರಸ್ಥಾನದಲ್ಲಿರಬೇಕು ಎಂದು ಜವಾಹರರು ಸ್ಪಷ್ಟವಾಗಿ ಹೇಳಿದ್ದಾರೆ. .... ಜನಸಾಮಾನ್ಯರ ಶಿಕ್ಷಣದ ಮತ್ತು ಸಂಸ್ಕೃತಿಯ ಬೆಳವಣಿಗೆ ಅವರವರ ನುಡಿಯ ಮಾಧ್ಯಮದಿಂದಲೆ ಆಗತಕ್ಕದ್ದು ಮತ್ತು ನಮ್ಮ ಶಿಕ್ಷಣಪದ್ಧತಿಯೂ ಸಾರ್ವಜನಿಕ ವ್ಯವಹಾರವೂ ಪ್ರಾಂತಿಕ ಭಾಷೆಯ ಮೇಲೆಯೆ ಅವಲಂಬಿಸತಕ್ಕದ್ದು.'

(೨) ಫೆಬ್ರುವರಿ ತಿಂಗಳ 'ಹರಿಜನ' ಪತ್ರಿಕೆಯ ಒಂದು ಸಂಚಿಕೆಯಲ್ಲಿ, ಭಾಷೆಯ ಸಂಬಂಧವಾಗಿ ಮಹಾತ್ಮರೂ ತಮ್ಮ ಅಭಿಪ್ರಾಯವನ್ನು ಕಾಣಿಸಿದ್ದಾರೆ. ಪ್ರಾಂತಿಕ ಕಾಂಗ್ರೆಸ ಸಮಿತಿಗಳ ವ್ಯವಹಾರವು ಪ್ರಾಂತಿಕ ಭಾಷೆಯಲ್ಲಿಯೆ ನಡೆಯತಕ್ಕದ್ದೆಂದೂ ಹಿಂದುಸ್ತಾನಿಯು ಇಂಗ್ಲಿಶದ ಸ್ಥಾನವನ್ನು ಆಕ್ರಮಿಸಬೇಕಲ್ಲದೆ ಪ್ರಾಂತಿಕ ಭಾಷೆಯ ಅಗ್ರಸ್ಥಾನದ ನನಿಯಕ್ಕೆ ಕೂಡ ಹೋಗಬಾರದೆಂದೂ ಸ್ಪಷ್ಟವಾಗಿ ಹೇಳಿದ್ದಾರೆ.

ಸಿದ್ಧಾಂತ :— ಮೇಲಿನ ಎರಡು ಅಭಿಪ್ರಾಯಗಳಿಂದ ಒಂದು ಸಂಗತಿ ಸಿದ್ಧವಾಗುವುದು. ಒಂದು ಪ್ರಾಂತದಲ್ಲಿ ಪ್ರಾಂತಿಕ ಭಾಷೆಗೇ ಮೊದಲ ಸ್ಥಾನ (ಸಾರ್ವಜನಿಕ ವ್ಯವಹಾರಗಳಲ್ಲಿ) ಇದೆ. ಎರಡನೆಯ ಸ್ಥಾನವು ಹಿಂದುಸ್ತಾನಿ (ರಾಷ್ಟ್ರ) ಭಾಷೆಗೆ ಇದೆ; ಇದನ್ನು ಮಿಕ್ಕ ಬೇರೆ ಯಾವ ಪ್ರಾಂತಿಕ ಭಾಷೆಗೂ ಅಲ್ಲಿ ಸ್ಥಾನವಿದೆ ಎಂಬ ಪ್ರಶ್ನೆಯೆ ಬರುವದಿಲ್ಲ. ಉಜ್ವಲ ರಾಷ್ಟ್ರಾಭಿಮಾನಿಗಳು ತಾವೇ ಎಂದು ತಿಳಿದುಕೊಳ್ಳುವವರಿಗಾಗಿ ಕಾಂಗ್ರೆಸ್ ಮುಂದಾಳುಗಳ ಅಭಿಪ್ರಾಯಗಳನ್ನು ಕಾಣಿಸಿದ್ದೇವೆ. ಇನ್ನು ಮಿಕ್ಕ ಬಡ ಕನ್ನಡಾಭಿಮಾನಿಗಳಿಗಾಗಿ ಕಳೆದ ಸಾಹಿತ್ಯಸಮ್ಮೇಳನದ ಅಧ್ಯಕ್ಷರ ಒಂದು ಮಾತನ್ನು ಕಾಣಿಸುವೆವು:

(೩) 'ಮಾತೃಭಾಷೆಯ ಮೂಲಕ ಕಲಿತದ್ದೇ ಮೈಗೆ ಹತ್ತುವುದು.... (ಹೊರಗಿನಿಂದ ಬಂದು ನೆಲೆಸಿದವರು) ವ್ಯವಹಾರದಲ್ಲಿ ತಕ್ಕಷ್ಟು ದೇಶಭಾಷೆ.... ಬರದಿದ್ದರೆ ಕಲಿಯಬೇಕು.'

ಎಲ್ಲಕ್ಕಿಂತ ಅಗ್ಗ ! ಎಲ್ಲಕ್ಕಿಂತ ಉತ್ತಮ !

ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ.

ಚರ್ಮವು ಉರಿಯುವುದಿಲ್ಲ—ಕಪ್ಪಾಗುವುದಿಲ್ಲ !

ಹೈದರಾಬಾದು ಕನ್ನಡಿಗರ* ★ ★ ಸಾರ್ವಜನಿಕ ಜೀವನ

'ವಿಮರ್ಶಕ' ಹೈದರಾಬಾದ

ಹೈದರಾಬಾದು ಆದರೇನು, ಹೇಮಕೂಟವಾದರೇನು? ಎಲ್ಲಿ ಹೋದರೂ ಮುತ್ತುಗಕ್ಕೆ ಮೂರೆ ಎಲೆಗಳೆ! ಎಲ್ಲ ಕಡೆಗೂ ಕನ್ನಡಿಗರು ಕನ್ನಡಿಗರೆ! ಎಲ್ಲಿಯೂ ಇಲ್ಲದ ಸಂಘಟನೆ ಹೈದರಾಬಾದಿನಲ್ಲಾದರೂ ಏಕೆ ಇರಬೇಕು?

ಹೈದರಾಬಾದಿನಲ್ಲಿ ೩೬ ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ನಡೆದು, ಕೆಲವು ದಿನಗಳಿಂದ ವೃತ್ತಪತ್ರಿಕೆಗಳಲ್ಲಿ ಇಲ್ಲಿಯ ವಿಷಯವಾಗಿ ಅಭಿನಂದನೆಗಳು, ವಿಮರ್ಶೆಗಳು, ಬರುತ್ತಲಿವೆ. ಈ ಪರಿಸ್ಥಿತಿಯಲ್ಲಿ ಹೊರಗಿನವರ ವಾಸ್ತವಜ್ಞಾನಕ್ಕಾಗಿಯೂ ಇಲ್ಲಿ ಇದ್ದವರು ತೆರೆದ ಕಣ್ಣಿನ್ನು ಮುಚ್ಚಬಾರದೆಂಬುದಕ್ಕಾಗಿಯೂ 'ನಮ್ಮ ಮುಂದೆ ಇರುವ ಪ್ರಶ್ನೆಗಳಾವುವು, ಇನ್ನು ಮುಂದೆ ನಾವು ಮಾಡಬೇಕಾದ ಕರ್ತವ್ಯಗಳೇನು' ಎಂಬುದರ ಅರಿವು ಚೆನ್ನಾಗಿ ಆಗಿ, ಶಕ್ತಿ ಇದ್ದವರು ತಮ್ಮ ಸಂಕಲ್ಪವನ್ನು ದೃಢಪಡಿಸಿ ಹೈದರಾಬಾದಿನ ಏಳ್ಗೆಗೆ ಕಾರಣರಾಗಲೆಂಬ ದೃಷ್ಟಿಯಿಂದ ಈ ಲೇಖನವನ್ನು ಬರೆಯಲಾಗಿದೆ.

ಹೈದರಾಬಾದು ಪಟ್ಟಣದಲ್ಲಿ ಕನ್ನಡಿಗರ ಸಂಖ್ಯೆ [illegible]೦ ಸಾವಿರ; ಆದರೆ ಅವರಲ್ಲಿ ಕನ್ನಡಿಗರೆಂದು ಹೇಳಿಕೊಳ್ಳುವವರೆಷ್ಟು, ಹೇಳಿಕೊಳ್ಳುವವರಲ್ಲಿ ಅಭಿಮಾನವಿದ್ದವರೆಷ್ಟು, ಅಭಿಮಾನವಿದ್ದವರಲ್ಲಿ ಕನ್ನಡಕ್ಕಾಗಿ ದುಡಿಯಬೇಕೆಂಬ ಧ್ಯೇಯವುಳ್ಳವರೆಷ್ಟು, ಧ್ಯೇಯವುಳ್ಳವರಲ್ಲಿ ದೃಢಸಂಕಲ್ಪವಿದ್ದವರೆಷ್ಟು, ದೃಢಸಂಕಲ್ಪವಿದ್ದು ಧ್ಯೇಯವನ್ನು ಸಾಧಿಸುವಲ್ಲಿ ದುಡಿಯಲು ಅವರ ಮತ್ತು ಅವಕಾಶಗಳಿದ್ದವರೆಷ್ಟು—ಎಂಬ ಈ ಎಲ್ಲ ಅಂಶಗಳನ್ನು ಯೋಚಿಸಿದರೆ, ಶ್ರೀ. ಬೇಂದ್ರೆಯವರು ಬರೆದ 'ನಾ ಹಡೆದ ಮೂವತ್ತುಮೂರು ಕೋಟಿ' ನೆನಪಾಗುವುದು.

ಪರಿಷತ್ತನ್ನು ನೆರೆಯಿಸುವುದರ ಉದ್ದೇಶವಾದರೂ ಹೈದರಾಬಾದಿನಲ್ಲಿ ಸ್ಥಾಯೀ ಕಾರ್ಯಗಳು ಜರುಗಲು ಇದೊಂದು ಪ್ರಚೋದಕವಾಗಬೇಕೆಂದಿದ್ದಿತು. 'ಪರಿಷತ್ತು ಸೇರಿಯಿತು; ಕಲಕಲವಡಗಿತು' ಎಂಬಂತಾಗಬಾರದೆಂದು ಎಣಿಸಲಾಗಿತ್ತು. ಪರಿಷತ್ತನ್ನು ಸೇರಿಸುವುದರಿಂದುಂಟಾದ ಒಂದು ಸಾರ್ವತ್ರಿಕ ಪರಿಚಯದ ಲಾಭದಿಂದ ಪ್ರಯೋಜನವನ್ನು ಪಡೆದು, ಕಾರ್ಯಕರ್ತರು ಮತ್ತು ಕಾರ್ಯಕರ್ತರು ದೊಡ್ಡ ಪ್ರಮಾಣದ ಮೇಲೆ ಕನ್ನಡಿಗರ ಏಳ್ಗೆಯನ್ನು ಸಾಧಿಸಲು ಹವಣಿಸಬೇಕೆಂಬ ಉದ್ದೇಶವಿದ್ದಿತು. ಆದರೆ ಆ ಉದ್ದೇಶವು ಅಷ್ಟು ಸಫಲವಾದಂತೆ ಕಾಣಲಿಲ್ಲ. ಇದಕ್ಕೆ ಕಾರಣವೇನೆಂಬುದನ್ನು ಯೋಚಿಸಿದರೆ ಕೆಳಗಿನಂತೆ ವಿಭಜನೆಯಾಗಬಹುದು:

ಹೈದರಾಬಾದು ಜನತೆಯನ್ನು ನಾವು ಹೀಗೆ ವಿಂಗಡಿಸಬಹುದು: ಹಿರಿಯರು, ಕಿರಿಯರು ಮತ್ತು ಹೆಣ್ಣುಮಕ್ಕಳು. **ಹಿರಿಯರ ಹಂಚುವಿಕೆ:—** ಹಿರಿಯರು ಅನೇಕರಿದ್ದಾರೆ; ಆದರೆ ಕನ್ನಡವು ಒಂದು ಭಾಷೆ, ಕನ್ನಡತನವು ಒಂದು ಸಂಸ್ಕೃತಿ ಮತ್ತು ಕನ್ನಡಕ್ಕೆ ಹೋರಾಡಬೇಕೆಂಬುದು ಒಂದು ಧ್ಯೇಯವೆಂಬುದರ ಅರಿವಿಲ್ಲದವರು ಅನೇಕರು. ಜೀವನದ ಯಾವುದೋ ಒಂದು ಸನ್ನಿವೇಶ ಬಲದಿಂದ ಸಾಕಷ್ಟು ಸಂಪತ್ತನ್ನುಳ್ಳ ಮಹನಿಯರದು ಮತ್ತೊಂದು ಗುಂಪು. ಕೆಲಸಕ್ಕಿಂತ ಖ್ಯಾತಿಬೇಕೆಂಬುದು ಇವರ ಚಟ. ಕನ್ನಡವು ಅಳಿದರೂ ಚಿಂತೆಯಿಲ್ಲ, ತಮ್ಮ ಹೆಸರು ಉಳಿಯಬೇಕೆಂಬುದು ಇವರ ಹಟ. ಕನ್ನಡದ ನೆರಳಲ್ಲಿ ತಾವು ಬಾಳಬೇಕೆಂಬುದಕ್ಕಿಂತ 'ತಮ್ಮ ನೆರಳಲ್ಲಿ ಕನ್ನಡವು ಬಾಳಿದರೆ ಬಾಳಲಿ' ಎಂಬುದು ಇವರ ಮತ. ತಮ್ಮ ಕೀರ್ತಿಯ ಶ್ವೇತಚ್ಛತ್ರವನ್ನು ಎತ್ತಿ ಹಿಡಿಯಲು ಕನ್ನಡ ಕಾಮಿನಿಯೊಬ್ಬಳು ಕೈದೊತ್ತು. ತಮ್ಮ ಘನತೆಗೆ ಚ್ಯುತಿ ಬರುವುದೆಂಬ ಸ್ವಲ್ಪ ಅನುಮಾನವು ಬಂದರೂ ಕನ್ನಡವಾದರೇನು, ಕನ್ನಡದಪ್ಪವಾದರೇನು? ಪಾದಾಕ್ರಾಂತ ಮಾಡುವುದೇ ಅವರ ಮನೋವೃತ್ತಿ. ಕೀರ್ತಿನಾಟಕದಲ್ಲಿ ಅಗ್ರಾಸನವನ್ನು ವಹಿಸಲು ಹೆಚ್ಚು ಬೆಲೆಯ ಟಿಕೀಟು ಕೊಳ್ಳುವುದರಲ್ಲಿ ಇವರು ಸಿದ್ಧ. ಇವರಲ್ಲಿ ಇನ್ನೂ ಮುಂದುವರಿದವರೆಂದರೆ ರೊಕ್ಕವಿಲ್ಲದೆ ಅಗ್ರಾಸನದ Complimentary ಟಿಕೀಟನ್ನು ಬಯಸುವವರು. ಮುಂದಕ್ಕೆ ಸ್ಥಳ ಸಿಕ್ಕದಿದ್ದರೆ ಹಿಂದಿನಿಂದ ಕಲ್ಲೆಸೆಯುವುದು ಇವರ ವೈಶಿಷ್ಟ್ಯ.

---

* ಕಳೆದ ತಿಂಗಳ ಜಯಂತಿ ಸಂಚಿಕೆಯಲ್ಲಿ ಪ್ರಕಟವಾದ 'ಪುಣೆಯ ಕನ್ನಡಿಗರು ಪುಣೇರೀ ಕನ್ನಡಿಗರು' ಎಂಬ ಲೇಖನವನ್ನು ಜಯಂತಿಯ ವಾಚಕವರ್ಗ ಓದಿರಬಹುದು. ಇದೀಗ ಹೈದರಾಬಾದಿನ ಕನ್ನಡಿಗರ ಕನ್ನಡತನದ ಪರಿಚಯ.

—ಸಂ. ಜ.

ಮೂರನೆಯ ಗುಂಪೊಂದೆಂದರೆ ಹೊಟ್ಟೆಯ ದಾಸರದು. ಅವರಿಗೆ ಬೇಕಾದುದು ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ, ಕೂಡಲು ಕಾರು, ಮೆರೆಯಲು ಊರು. 'ಕನ್ನಡವೇನು? ಕನ್ನಡತನವೇನು? ಚೆನ್ನಾಗಿ ಬಾಳುವುದು ಮನುಷ್ಯನ ಕರ್ತವ್ಯ. ಯಾವ ಭಾಷೆಯಾದರೇನು? ಹೊಟ್ಟೆಗೆ ಅನ್ನ ಕೊಟ್ಟರೆ ಸಾಕು. ನಾವು ಕನ್ನಡಿಗರಲ್ಲ. ಕನ್ನಡತನವು ಬೇಕಿಲ್ಲ' ಎಂಬ ಔದಾರ್ಯ ಇವರದು. ನಾಲ್ಕನೆಯ ಗುಂಪೊಂದು, 'ಬಂದದ್ದಲ್ಲ, ಬಾರಿಸಿದ್ದಲ್ಲ. ದೇವರು ಕೊಟ್ಟದ್ದರಲ್ಲಿ ಸುಖವಾಗಿರುವುದನ್ನು ಬಿಟ್ಟು, ಇಲ್ಲದ ಹಂಬಲ ಹಚ್ಚಿಕೊಂಡು ಬಡಿದಾಡುವುದೇಕೆ?' ಎಂಬ ವೈರಾಗ್ಯವೃತ್ತಿಯನ್ನುಳ್ಳುದು. ಐದನೆಯದೆಂದರೆ—ಇದೇ ಅತ್ಯಂತ ಘಾತುಕವಾದ ಗುಂಪು–ಕನ್ನಡದ ಹೆಸರಿನ ಮೇಲೆ ಬಾಳಿ, ಕನ್ನಡದ ಹೆಸರಿನ ಮೇಲೆ ಆಳಿ, ಕನ್ನಡದ ಹೆಸರಿನ ಮೇಲೆ ಬೆಳಗಿ ಅದಕ್ಕೆ ದ್ರೋಹವನ್ನು ಚಿಂತಿಸುವ ಗುಂಪು ಇದು. ಆರನೆಯದೊಂದು ಹೆಚ್ಚು ವಿಶಾಲ ದೃಷ್ಟಿಯುಳ್ಳ ಗುಂಪು. 'ಹೆಚ್ಚಿಗೆ ಶ್ರಮಪಡುವುದು ನಮ್ಮಿಂದಾಗುವುದಿಲ್ಲ; ನಮ್ಮ ಕೈಯಲ್ಲಾದಷ್ಟು ನಾವು ಸಹಾಯ ಮಾಡುವೆವು. ನಮಗೆ ಹೆಸರು ಬೇಡ. ಇನ್ನೊಬ್ಬರು ಮಾಡುತ್ತಿದ್ದರೆ ಅಡ್ಡವಾಗುವುದೂ ಬೇಡ' ಎನ್ನುವುದಿದು. ಇದ್ದುದ್ದರಲ್ಲಿ ಇದೇ ವಾಸಿ, ಇಂಥವರಿಂದಲೇ ಹೈದರಾಬಾದಿನಲ್ಲಿ ಅಲ್ಪ ಸ್ವಲ್ಪ ಕೆಲಸ ನಡೆದಿದೆ.

ಏಳನೆಯದೊಂದು ವಿಚಿತ್ರ ಗುಂಪು. 'ಕನ್ನಡದಲ್ಲಿ ಶಿಸ್ತಿಲ್ಲ, ಕನ್ನಡದಲ್ಲಿ ಸಂಸ್ಕೃತಿ ಇಲ್ಲ, ಕನ್ನಡ ಭಾಷೆಯಲ್ಲಿ ಮಾಧುರ್ಯವಿಲ್ಲ. ಆದುದರಿಂದ ನಮಗೆ ಕನ್ನಡ ಬೇಡ. ಕರ್ನಾಟಕರೆನಿಸುವ ಅಪಕೀರ್ತಿ ನಮ್ಮ ತಲೆಗೇ ನಿಲ್ಲಲಿ. ನಮ್ಮ ಮಕ್ಕಳಿಗೆ ನಾವು ಕನ್ನಡವನ್ನು ಕಲಿಸುವುದಿಲ್ಲ'ಎಂದು ಹಟತೊಟ್ಟು, ಹೈದರಾಬಾದಿನಲ್ಲಿ ಕನ್ನಡ ಶಾಲೆಗಳಿದ್ದರೂ ಅನ್ಯಭಾಷೆಗಳ ಶಾಲೆಗೆ ಕಳಿಸಿ, ಹೆಚ್ಚು ದುಡ್ಡನ್ನು ಕೊಟ್ಟು ಉಪಾಧ್ಯಾಯರನ್ನಿಟ್ಟು, ಆ ಬೇರೆ ಭಾಷೆಗಳನ್ನು ಕಲಿಸಿ, ಕನ್ನಡವನ್ನು ಮರೆಯಿಸಿ, ಮಾರುಹೋದ ತೊತ್ತುಗಳು ತಾವೆಂಬ ಕಲ್ಪನೆಯಿಲ್ಲದೆ 'ಸುಧಾರಿಸಿದವರು ನಾವಾದೆವು; ನಮ್ಮ ಮಕ್ಕಳಿಗೆ ಕನ್ನಡದ ಕಳಂಕ ತಪ್ಪಿತು' ಎಂದು ಹುಚ್ಚೆದ್ದು ಕುಣಿವುದು ಇದು.

ಎಂಟನೆಯದೆಂದರೆ ಬಯಸುವವರ ಸಂಘ. ವಿಧಾಯಕತೆಯಿಲ್ಲ. ತ್ಯಾಗ ಮೊದಲಿಲ್ಲ. ವಕ್ರ ಹೆಚ್ಚು. ಬಣವಮಾತು ಬಹಳ. ಮನೆಗೆ ಹೋದರೆ ಬೆಯ್ದು ಕಳಿಸುವುದು ಇವರ ಚಟ. 'ಬಯಸುವ ಶಕ್ತಿಯನ್ನು ಕಾರ್ಯಮುಖವಾಗಿದ್ದರೆ ಎಷ್ಟು ಚೆನ್ನಾಗಿತ್ತು!

ಎರಡನೆಯ ತಂಡ ಕಿರಿಯರದು. ಇದು ವಿಚಿತ್ರವಾಗಿದೆ. ಕಿರಿಯರಲ್ಲಿ ತರುಣರು ಬೇರೆ, ವಿದ್ಯಾರ್ಥಿಗಳು ಬೇರೆ, ಬಾಲರು ಬೇರೆ, ಸಾಹಿತ್ಯದವರು ಬೇರೆ ಮತ್ತು ರಾಜಕಾರಣದವರು ಬೇರೆ. ಆದರೆ ಯಾರಿಗೂ ತೀಕ್ಷ್ಣವಾದ ಆಸಕ್ತಿಯಿಲ್ಲ. ಮನಸ್ಸಿನಿಂದ ಕಳವಳವಿಲ್ಲ. ಜೀವನವನ್ನು ತೇಯುವ ದೃಢಸಂಕಲ್ಪವಿಲ್ಲ. ಚಿಕ್ಕತನದಲ್ಲಿಯೇ ದೊಡ್ಡತನದ ಕನಸನ್ನು ಕಾಂಬುವ ದೃಷ್ಟಿ ಕೆಲವರಿಗೆ. ಸಂಸ್ಥೆಯೊಂದಕ್ಕೆ ಸೇರಿ ಆ ವಿಶಿಷ್ಟ ಸಂಸ್ಥಾಭಿಮಾನವು ಕಣ್ಣುಕೈ-ಮೈಯಲ್ಲಿ ತುಂಬಿ, ಭೂತೆದ್ದು ಕುಣಿವ ಪಂಗಡವಿನ್ನೊಂದು. ಎಲ್ಲರೂ ಕನ್ನಡಿಗರು, ಎಲ್ಲ ಬೆಳವಣಿಗೆಗಳೂ ಕನ್ನಡದ ಏಳ್ಗೆಗೆಂಬ ದೊಡ್ಡತನವಿಲ್ಲ ಅವರಲ್ಲಿ. ಮೂರನೆಯ ಪಂಗಡವೆಂದರೆ ಕನ್ನಡವನ್ನು ಅವಹೇಳಿಸುವುದು. 'ಕನ್ನಡತನವೆಂಬುದೊಂದು ಸಂಕುಚಿತ ದೃಷ್ಟಿ. ಇಡಿಯ ಭಾರತವು ಸುಟ್ಟು ಉರಿಯುತ್ತಿರುವಾಗ ಈ ಹಾಳು ಪ್ರಾಂತೀಯ ಅಭಿಮಾನವನ್ನು ಇಟ್ಟುಕೊಳ್ಳುವದು ಮಹಾ ಪಾಪ. ದೃಷ್ಟಿ ದೊಡ್ಡದಾಗಬೇಕು. ಸ್ವಾರ್ಥವನ್ನು ಬಿಟ್ಟು ದೇಶಕ್ಕಾಗಿ ಬಲಿದಾನವನ್ನು ಕೊಡಬೇಕು' ಎನ್ನುವವರಿವರು. ನಾಡಿಗಾಗಲಿ, ನುಡಿಗಾಗಲಿ ಅಲ್ಪವಾದರೂ ಸೇವೆಯನ್ನು ಸಲ್ಲಿಸದೆ, ದೊಡ್ಡಮಾತಿನ ಈ ಗಾಂಭೀರ್ಯದಲ್ಲಿ ಮನಸ್ಸಿನ ಸಣ್ಣತನವನ್ನು, ಸ್ವಾರ್ಥಸಾಧನೆಯ ಸಂಸಾರದ ಲೋಲುಪತೆಯನ್ನು ಮುಚ್ಚುವ ವರ್ಗವಿದು. ಕಿರಿಯರ ಇನ್ನೊಂದು ತಂಡವೆಂದರೆ ಉತ್ತರಕುಮಾರರದು. 'ಕನ್ನಡದ ಉದ್ಧಾರಕರೆಂದರೆ ನಾವು, ಮಹಾದಾಕ್ಷಿಗಳೆಂದರೆ ನಾವು, ನಮ್ಮಿಂದಲೇ ಕನ್ನಡದ ಏಳ್ಗೆ' ಎಂಬುದು ಅವರ ಹೆಮ್ಮೆ. ಐದನೆಯ ಗುಂಪೆಂದರೆ ಮಾತೃಭಾಷೆಯಲ್ಲಿ ಮಾತನಾಡಿದರೆ ಮೈಲಿಗೆಯೆಂದು ತಿಳಿಯುವವರದು. 'ಮಾತೃಭಾಷೆಯಲ್ಲಿ ಮಾತನಾಡುವುದೆಂದರೆ ಹಳೆಯ ಸಂಪ್ರದಾಯ, ಹೊಸತನವಲ್ಲ. ಆ ಭಾಷೆಯನ್ನು ಕಲಿಯುವುದೂ ಕೂಡ ಬೇಡ' ಎಂದು ಅವರ ನಂಬುಗೆ.

ಕೊನೆಯ ತಂಡವೆಂದರೆ ಹೆಣ್ಣುಮಕ್ಕಳದು. ಅವರಂತೂ ಹೇಳಿ ಕೇಳಿ ಹೆಣ್ಣುಮಕ್ಕಳು. ಅದರಲ್ಲೂ ಹೈದರಾಬಾದಿನ ಹೆಣ್ಣುಮಕ್ಕಳು. ಸಾಮಾಜಿಕ ಜೀವನವೊಂದಿದೆ ಎಂಬ ಕಲ್ಪನೆ ಇದ್ದವರೇ ಕಡಮೆ. ಅಲ್ಲೊಬ್ಬರಿಲ್ಲೊಬ್ಬರು ಸಿಕ್ಕಿದರೆ ಅವರಲ್ಲಿ ಶಿಕ್ಷಣವಿದ್ದವರು ಇನ್ನೂ ಕಡಮೆ. ಶಿಕ್ಷಣವಿದ್ದವರು ಒಬ್ಬಿಬ್ಬರು ಸಿಕ್ಕಿದರೆ ಅವರಲ್ಲಿ ಏಕಮತ್ಯವಿದ್ದವರು ಮತ್ತೂ ಕಡಮೆ. ಏಕಮತ್ಯವಿದ್ದವರೆಂದು ಭಾವಿಸಿದರೂ ಕನ್ನಡಕ್ಕಾಗಿ ಕೆಲಸಮಾಡಬೇಕೆಂಬ ಹಂಬಲವಿದ್ದವರು ತೀರ ಕಡಮೆ. ತಮ್ಮ ಚೈತನ್ಯಗಳನ್ನು, ಹಳೆಯ ಸಂಪ್ರದಾಯಗಳನ್ನು ತೆಗಳುವುದರಲ್ಲಿ ಥಳಕಿನ ಹೊಸಪದ್ಧತಿಯನ್ನು ಅಂಧರಾಗಿ ಅನುಕರಿಸುವಲ್ಲಿ ಉಪಯೋಗಿಸುವರು. ನಮ್ಮ

ಶರಣಸಂದೇಶ

(ವಾರಪತ್ರಿಕೆ)

ಸಂಪಾದಕರು: ಶ್ರೀ. ಹಡೇಕರ್ ಮಂಜಪ್ಪನವರು

ಹಿಂದೂ ಸಂಘಟನೆಯ ಗುರಿಯನ್ನಿಟ್ಟುಕೊಂಡು ಯಶಸ್ವಿಯಾಗಿ ಕಾರ್ಯಮಾಡುತ್ತಿರುವ ಕನ್ನಡ ವೃತ್ತಪತ್ರಿಕೆಯೆಂದರೆ ಇದೊಂದೆ. ದೇಶ-ವಿದೇಶದ ವರ್ತಮಾನಗಳನ್ನೂ ವಿಚಾರಪೂರ್ಣ ಲೇಖನಗಳನ್ನೂ ಇದರಲ್ಲಿ ಓದಬಹುದು.

ವಾರ್ಷಿಕ ವರ್ಗಣಿ ಅಂಚೆಯ ವೆಚ್ಚ ಸೇರಿ ೩–೦–೦ ಗಳು.

' ಶರಣಸಂದೇಶ '

ಪೋಸ್ಟ್ : ಆಲಮಟ್ಟಿ, ಜಿಲ್ಲಾ ವಿಜಾಪೂರ.

ಪರಭಾಷಾ ವೈದುಷ್ಯದ ಪ್ರಭಾವವನ್ನು ಹರಡಬೇಕೆಂಬ ಹಂಬಲದಲ್ಲಿ ಮಾತೃಭಾಷೆಯನ್ನು ಕಡೆಗಣಿಸುವ ಚಟವು ಈ ಸುಶಿಕ್ಷಿತ ವರ್ಗದಲ್ಲಿ ಕಂಡುಬಾರದಿಲ್ಲ. ಅಜ್ಞಾನಿಗಳಾದ ಬಹುಸಂಖ್ಯಾಕರಂತೂ ಕನ್ನಡವಂತು ಹೋಗಲಿ, ಪ್ರಾಪಂಚಿಕ ಜೀವನದ ಇನ್ನಾವ ಗೋಜಿಗೂ ಹೋಗದೆ 'ತಾವು, ತಮ್ಮ ಮನೆ' ಆಗಿ ಬಾಳುವರು.

ಮೇಲಿನ ಈ ಎಲ್ಲ ವರ್ಗಗಳಲ್ಲಿ ಸರಕಾರಿ ನೌಕರರ ತಂಡವೊಂದಿರುವುದು. ಹಿರಿಯರು ಸರಕಾರಿ ನೌಕರರಿದ್ದಾರೆ; ಕಿರಿಯರೂ ಇದ್ದಾರೆ; ಅಲ್ಪಸ್ವಲ್ಪ ಹೆಣ್ಣುಮಕ್ಕಳಿದ್ದಾರೆ. ಹಿರಿಯ ನೌಕರರಂತೂ ಹೇಳಿ ಕೇಳಿ ನೌಕರರು. ಕಿರಿಯ ನೌಕರರಲ್ಲಿ ಬರಿಯ ಚಾಪಲ್ಯ; ದೃಢಸಂಕಲ್ಪವಿಲ್ಲ. ಸೇವೆಗೆ ಅವಕಾಶವೂ ಇಲ್ಲ. ಹೆಣ್ಣುಮಕ್ಕಳಲ್ಲಿ ನೌಕರಿಯಾದವರಂತೂ ಕೈಯಿಂದ ಹಾರಿದ ಗುಬ್ಬಿಗಳು.

ಇದು ಹೈದರಾಬಾದು 'ಕನ್ನಡ ಜನಜೀವನದ ಚಿತ್ರ.' ಆಗಬೇಕಾದ ಮಹತ್ಕಾರ್ಯಗಳನ್ನು ನೋಡಿದರೂ, ಹಿಮಾಲಯದಷ್ಟು ಎತ್ತರ ರಾಶಿಯಾಗಿ ಉಳಿದಿವೆ. ಈ ಎಲ್ಲ ವಿವಿಧ ಮತ್ತು ವಿರೋಧ ಅಂಶಗಳಲ್ಲಿ ಸಮೀಕರಣವುಂಟಾಗಿ, ಸತ್ತ ನಾಡಿಗಳಲ್ಲಿ ರಕ್ತ ಸಂಚಲಿಸಿ, ಕಿಚ್ಚೆದ್ದು ಕೊಳಕನ್ನು ಸುಡುವ ವರೆಗೆ, ಹೈದರಾಬಾದಿನ ಕನ್ನಡಿಗರಿಗೆ ಮುಕ್ತಿ ಇಲ್ಲ. ಹಿರಿಯತನದ ಹಂಬಲವಿದ್ದವರು ಕಿರಿಯರಾಗಿ ದುಡಿಯಬೇಕು. ಕಿರಿಯರಾಗಿದ್ದವರು ದೊಡ್ಡತನವನ್ನು ಗುರಿಯಾಗಿಟ್ಟುಕೊಳ್ಳಬೇಕು. ಪ್ರತಿಯೊಬ್ಬನೂ ತನ್ನ ಯೋಗ್ಯತೆಯನ್ನು ತಿಳಿಯಬೇಕು; ಅಧಿಕಾರವನ್ನು ನೋಡಬೇಕು. ನಿಷ್ಠೆ ತೊಡಲು ಬೇಕು. ಸೇವೆ ಘನತೆಯನ್ನು ತರಬೇಕೇ ವಿನಾ, ಘನತೆ ಸೇವೆಯ ಪ್ರಚೋದನೆಯನ್ನುಂಟುಮಾಡಬಾರದು. ಕನ್ನಡಕ್ಕಾಗಿ ಮನಸ್ಸಿನಿಂದ ಕೊರಗಬೇಕು. ಸಾರ್ವಜನಿಕ ಸೇವೆ ಮೋಸದ ವೇಷವಾಗದೆ ಆತ್ಮೋದ್ಧಾರದ ಸಾಧನವಾಗಬೇಕು. ನಿಷ್ಪಕ್ಷಪಾತ, ಸರಳ ಮನೋವೃತ್ತಿಗಳು ಮೇಲ್ಮೆಯನ್ನು ಪಡೆಯಬೇಕು. ಎಲ್ಲಕ್ಕೂ ಹೆಚ್ಚಾಗಿ ಒಳಗೆ ಕಿಚ್ಚಿರಬೇಕು; ಕನ್ನಡದ ಹುಚ್ಚಿರಬೇಕು. ಎಂದರೆ ಲೋಕವು ಮೆಚ್ಚುವುದು, ದೇವರು ಮೆಚ್ಚುವನು. ಹೈದರಾಬಾದಿನಲ್ಲಿ ಕನ್ನಡ ಬಾವುಟವು ಬಾನುದ್ದ ನೆಗೆಯುವುದು. ನೃಪತುಂಗ ಶಾಲೆಗೆ ದೊಡ್ಡ ಕಟ್ಟಡವಾಗುವುದು. ಸಾಹಿತ್ಯ ಮಂದಿರಕ್ಕೆ ಮಹಾಮಂದಿರವಾಗುವುದು. ಶಾರದಾ ಶಾಲೆ ವಿಶ್ವವಿದ್ಯಾಲಯವಾಗುವುದು. ವಿದ್ಯಾರ್ಥಿಸಂಘವು ವೈದುಷ್ಯ ಸಂಘವಾಗುವುದು. ಬಾಲಕರ್ನಾಟಕವು ಕಲಿಗಳ ಕರ್ನಾಟಕವಾಗುವುದು. ತರುಣರ ತಂಡವು ಉತ್ತಂಡವಾಗುವುದು. ವೀರಶೈವ ತರುಣಸಂಘವು ಅನುಭವ ಮಂಟಪವಾಗುವುದು. ಅದು ನಿಜವಾದ ಜೀವನ. ಅದು ನಿಜವಾದ ಬೆಳಕು. ಕಣ್ಣು ತೆಗೆದ ಮಹನಿಯರು ಆ ಬೆಳಕನ್ನು ಕಾಣಲಿ. ಶಕ್ತಿಯಿದ್ದವರು ಕೊಳಕನ್ನು ಕಳೆಯಲಿ. ಸಾಧನವಿದ್ದವರು ಕನ್ನಡಕ್ಕೆ ಕಿರೀಟ ಮನ್ನಿಸಲಿ. ಇಷ್ಟೇ ಈ ಖಂಡತುಂಡ ಮಾತಿನ ಅರ್ಥ.

ಗನೋರಿಯಾ, ಪರಮಾರೋಗ, ಉಷ್ಣರೋಗದ ಮೇಲೆ

ಔಷಧ

೭ ದಿವಸಗಳಲ್ಲಿ ಈ ರೋಗ ಗುಣಹೊಂದುವುದು ಗ್ಯಾರಂಟಿ !

ಶರೀರದಿಂದ ಕೀವ ಬರುತ್ತಿದ್ದರೆ, ಧೋತರಕ್ಕೆ ಹಳದಿ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದಿಂದ ಕೊಗಲು ಹಿಂದಕ್ಕೆ ಸರಿಯದಿದ್ದರೆ. ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇದು ಇಳಿದಿದ್ದರೆ, ಉರುಉರು ಆಗಿದ್ದರೆ, ಮೂಳವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಸೂಲಿ, ಆಧಾರಂಗವಾದರು, ನರದೌರ್ಬಲ್ಯದ, ಸ್ತ್ರೀಯರ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ. ಹೊಲಿಕಟ್ಟು, ಗರ್ಮಿಯಿಂದ ಗರ್ಭಕೋಶನಾಶವಾಗಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ ಈ ಎಲ್ಲ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲು ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ, ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ-ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ : ಹುಳಿಖಾರ, ಕುಂಬಳಕಾಯಿ, ಬಳ್ಳೊಳ್ಳಿ ಬಿಡಬೇಕು.

ಬಾಟ್ಲಿಗೆ ೩ ರೂ. **ಪೋಸ್ಟ್ ಚಾರ್ಜು ೧೦ ಆಣೆ.**

ಮಕ್ಕಳನ್ನು ಹಡೆಯುವದು ಸಾಕು

ಅಶಕ್ತ ಹೆಣ್ಣುಮಕ್ಕಳಿಗೆ ★ ರೋಗಗ್ರಸ್ತ ಸ್ತ್ರೀಯರಿಗೆ

ಬರ್ಥ್ ಕಂಟ್ರೋಲ್

★

ಏಳು ದಿವಸದ ಈ ಮಾತ್ರೆಗಳನ್ನು ಸೇವನಮಾಡಿದರೆ, ಮುಂದೆ ಖಂಡಿತವಾಗಿಯೂ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿ ತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವುದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ : ಪ್ರತಿ ದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟಕ್ಕೆ ಮೊದಲು ತಕ್ಕೊಳ್ಳಬೇಕು. ೭ ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ : ಹುಳಿಖಾರ ಬಿಡಬೇಕು.

೭ ದಿವಸದ ಸಂಪೂರ್ಣ ಔಷಧದ ಕಿಮ್ಮತ್ತು

೫ ರೂಪಾಯಿ **ಪೋಸ್ಟ್ ಚಾರ್ಜ್ ೧೦ ಆಣೆ.**

ಏಜಂಟರು :

ಗದಗ ಫಾರ್ಮಸಿ, ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ ಫಾರ್ಮಸಿ

ವಿಳಾಸ :— ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಗಳ ದವಾಖಾನೆ, ಗದಗ

೫೮. ಆರತಿ

ಹೆಣ್ಣುಮಕ್ಕಳ ಕಥಾಸಂಕಲನ. ಪ್ರಕಾಶಕರು:- ದ. ಬಾ. ಕುಲಕರ್ಣಿ. ಮ. ಗ್ರಂ. ಭಾಂಡಾರ ಧಾರವಾಡ. ಪುಟ. ೮೪+೬. ಬೆಲೆ ಹನ್ನೆರಡಾಣೆ.

ಇಂದಿನ ಸರ್ವತೋಮುಖವಾದ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಕನ್ನಡಿತಿಯರ ಉಪಕೃತಿಯೂ ಇತ್ತೀಚೆಗೆ ಉತ್ತರೋತ್ತರವಾಗಿ ಸಲ್ಲಹತ್ತಿದೆ. ಇದು ಕನ್ನಡಿಗರ ಭವಿತವ್ಯದ ಶುಭಚಿಹ್ನವು. ಸ್ವತಂತ್ರ ಪ್ರಕಟನೆಗಳು ಕನ್ನಡಿತಿಯರಿಂದ ವಿಶೇಷವಾಗಿರದಿದ್ದರೂ ಸಂಕಲನ ರೂಪದಲ್ಲಿಯಾದರೂ ಕ್ರಮೇಣ ಬೆಳಕಿಗೆ ಬರತೊಡಗಿವೆ. ಉದಯೋನ್ಮುಖಿಯರಾದ ಕನ್ನಡ ಕತೆಗಾರ್ತಿಯರ ಕತೆಗಳನ್ನು ಸಂಗ್ರಹಿಸಿ ಪ್ರಕಟಿಸಿ, ಆಯಾ ಸಾಹಿತಿಗಳಿಗೆ ಉತ್ತೇಜನವನ್ನೂ ನಮ್ಮ ಸಾಹಿತ್ಯಕ್ಕೆ ಉಪಕೃತಿಯನ್ನೂ ಸಲ್ಲಿಸಿದ ಶ್ರೇಯಸ್ಸಿನ ಬಹುಭಾಗವು ಧಾರವಾಡದ ಮನೋಹರಗ್ರಂಥಭಾಂಡಾರದ ಒಡೆಯರಿಗೆ ಸಲ್ಲಬೇಕು. ಅವರು ಪ್ರಕಟಿಸಿದ 'ರಂಗವಲ್ಲಿ' 'ಕಂಬನಿ' ಪ್ರಸ್ತುತ ಈ 'ಆರತಿ'ಗಳು ಇದಕ್ಕೆ ಸಾಕ್ಷಿ.

'ಆರತಿ'ಯಲ್ಲಿ ನಮ್ಮ ನಾಡನ್ನು ಬೆಳಗುವ ಉಜ್ವಲವಾದ ಅಮರಜ್ಯೋತಿಯು ಕಂಡು ಬರದಿದ್ದರೂ ನಮ್ಮ ನಾಡಿನ ಭವಿಷ್ಯವನ್ನು ಬೆಳಗುವ ಆಶಾಜ್ಯೋತಿ ಮಾತ್ರ ಇಡಿಯಾಗಿ ಕಂಡುಬರುತ್ತದೆ. ಬೀಜವೊಂದು ಮೊಳೆತು, ಚಿಗಿತು, ಹೂತು, ಕಾತು ಹೆಮ್ಮರವಾಗುವುದಕ್ಕೆ ಮಣ್ಣು ಬೇಕು, ನೀರು ಬೇಕು, ಬೆಳಕು ಬೇಕು, ಗಾಳಿ ಬೇಕು. ನಮ್ಮ ನಾಡಿನ ಹೆಣ್ಣುಮಕ್ಕಳ ಸಾಹಿತ್ಯಕೃತಿಗಳು ಹೆಮ್ಮರಗಳಾಗಿ ಬೆಳೆಯಲಿಕ್ಕೆ ತಕ್ಕ ಉತ್ತೇಜನ, ಶಿಕ್ಷಣ, ಅಭ್ಯಾಸ, ರಸಿಕತೆಗಳು ಇನ್ನೂ ಬೇಕು. ದೈವಾಯತ್ತವಾದ ಪ್ರತಿಭೆಯಂತೂ ಬೇಕೇ ಬೇಕು. ಕತೆಗಾರಿಕೆಯಲ್ಲಿ 'ತಾಯಿ-ಬಾಯಿ' ಎಂದಿನಿಂದಲೂ ಕಥನಕಲೆಗೆ ಆವಾಸವಾಗಿರುವುದು; ಇದು ನಿಜ. ಮೊಮ್ಮಕ್ಕಳಿಗೆ ಕತೆಗಳನ್ನು ಹೇಳುವವಳು ಅಜ್ಜಿ, ಅಜ್ಜನಲ್ಲ. ಇಂತಹ ಅಡುಗಲಜ್ಜಿಯ ಕಟ್ಟುಕತೆಗಳಲ್ಲಿ ಸ್ವಾಭಾವಿಕತೆಯು ಕಡಿಮೆಯೆನಿಸಿದರೂ ಕಲ್ಪನಾವೈಖರಿಯು ಮಾತ್ರ ಬಾಲ-ಬಾಲಿಕೆಯರನ್ನು ಮುಗ್ಧಗೊಳಿಸುವಂತಹದಿರುತ್ತದೆ. ಈ ಬಗೆಯ ಕತೆಗಾರಿಕೆಯು ಕಿಡಿಗೆ ಉತ್ತಮ ಸಂಸ್ಕಾರದ ಗಾಳಿ ತಾಗಿದರೆ ಸಾಕು, ಅದು ಜಾಜ್ವಲ್ಯವಾಗಿ ಬೆಳಗುವುದರಲ್ಲಿ ಸಂಶಯವಿಲ್ಲ. ಸಾಹಿತ್ಯವು ಸಮಷ್ಟಿ-ಜೀವನದ ಅನುಭವದ ಪಾಕ. ಸೃಷ್ಟಿಯಲ್ಲಿ ಅದು ಗಂಡಿನ ಅನುಭವದಲ್ಲಿಯೂ ಕಾಣುವುದು, ಹೆಣ್ಣಿನ ಅನುಭವದಲ್ಲಿಯೂ ಕಾಣುವುದು. ಹೆಣ್ಣಿನ ವಿಶಿಷ್ಟ ಕೆಲವು ಅನುಭವಗಳು ಗಂಡಸಿಗೆ ಒದಗಲಾರವು. ಎಂದಮೇಲೆ, ಗಂಡು-ಹೆಣ್ಣಿನ ಎರಡೂ ಜೀವನಗಳ ಉತ್ಕಟ ಅನುಭವಗಳ ವಿಪಾಕವೆ ಉತ್ತಮ ಸಾಹಿತ್ಯದ ಪರಿಪಾಕವಾಗುವುದು. ಈ ದೃಷ್ಟಿಯಿಂದ 'ಆರತಿ'ಗೆ ವಿಶೇಷ ಮನ್ನಣೆ ಸಿಗುವದು ಯಥಾ-ಯೋಗ್ಯವಾಗಿದೆ. ಸ್ತ್ರೀ-ಪುರುಷರಿಬ್ಬರ ಕೃತಿಗಳಿಂದಲೇ ಸಾಹಿತ್ಯಪುರುಷನು ಸವ್ಯ-ಸಾಚಿಯಾಗುವನು.

'ಈ ಸಂಕಲನದ ಒಂಬತ್ತು ಕತೆಗಳಲ್ಲಿ ಒಂದೊಂದೂ, ಒಂದು ಪ್ರಣಯಜೀವನದ ರಹಸ್ಯವನ್ನೊ, ಒಂದು ಸಾಮಾಜಿಕ ಸಮಸ್ಯೆಯನ್ನೊ, ಒಂದು ಮನೋವಿಶ್ಲೇಷಣದ ಚಿತ್ರವನ್ನೊ ಓದುಗರೆದುರು ನಿಲ್ಲಿಸುವುದು.' ಸಂಪಾದಕರು ಹೇಳಿದ ಈ ಮಾತು ಸುಳ್ಳಲ್ಲ. ಆದರೆ ಇಲ್ಲಿಯ ಕತೆಗಳಲ್ಲಿ ಚಿತ್ರಿತವಾದ ಪ್ರಣಯರಹಸ್ಯವಾಗಲಿ, ಸಾಮಾಜಿಕ ಸಮಸ್ಯೆಯಾಗಲಿ ಇನ್ನಷ್ಟು ಮಾರ್ಮಿಕವಾಗಿ ಬರಬೇಕಾಗಿತ್ತು—ಎನಿಸದಿರದು. 'ವೇಣೀಸಂಹಾರ' ದೊಳಗಿನ ಸಾಮಾಜಿಕ ಸಮಸ್ಯೆಯ ಮುಂದೆ, 'ಒಂದು ಎರಡು ಮೂರ'ರಲ್ಲಿ ಪ್ರತಿಪಾದಿಸಲ್ಪಟ್ಟಿರುವ ಬಹುಪತ್ನೀಕತ್ವದ ಸಮಸ್ಯೆಯು ಸಪ್ಪೆಯಾಗಿ ತೋರುತ್ತದೆ. ಒಂದು ಪಾಡಾದ ಕಾಯಿ, ಇನ್ನೊಂದು ಪಾಡಾಗಲಿರುವ ಮಿಡಿಗಾಯಿ. 'ವೇಣೀಸಂಹಾರ' ವೆಂಬ ಕಥೆಯ ಹೆಸರು; 'ಹತ್ತನೆಯ ದಿನವೇ ಆ ಅನಿಷ್ಟಕಾರ್ಯ ಮುಗಿದು ಹೋಗಲಿ ಶಂಭೂ' ಎಂಬ—ಭಾಲೆಯ ತಿವಿತದಂತೆ ಓದುಗರ ಎದೆಯನ್ನು ಝಲ್ಲೆನಿಸುವಂತಹ—ಆರಂಭ, ಕತೆಯತುಂಬ ಪುನಃ ಪುನಃ ಬರುವ ಶಾಂತೆಯ ಕೇಶರಾಶಿಯ ಲಾವಣ್ಯದ ವರ್ಣನೆ, ಇವೆಲ್ಲವೂ ಕಥೆಗೆ ಅಪೂರ್ವವಾದ ಗಾಂಭೀರ್ಯವನ್ನು ತಂದಿವೆ. 'ಹೆಣ್ಣುಮುಡಿಯಾದಳು. ಸ್ವರ್ಗಕ್ಕೆ ಹಾದಿ ನಿರಂತರವಾಯ್ತು' ಎಂಬ ವಿಡಂಬನೆ ಉದ್ದಿಷ್ಟ ಸಮಾಜಕ್ಕೆ ಕಹಿಯಾಗಿದ್ದರೂ, ಸಾಮಾಜಿಕರೋಗಕ್ಕೆ ತಕ್ಕ ಔಷಧವಾಗಿದೆ. ನಿರೂಪಣೆಯು ಶೈಲಿಯು ಕತೆಗಾರ್ತಿಯರ ಉತ್ಕಟಭಾವನೆಯನ್ನೂ ಮನೋಧಾರ್ಷ್ಟ್ಯವನ್ನೂ ವ್ಯಕ್ತಗೊಳಿಸುತ್ತದೆ. ಕುಮಾರಿ ದೇವಾಂಗನಾ ಶಾಸ್ತ್ರಿಯವರು 'ಹೆಣ್ಣೆಂದು ಸಹಾನುಭೂತಿಯನ್ನು ಹೊಂದತಕ್ಕವರಲ್ಲ,' ಗುಣವುಳ್ಳ ಕತೆಗಾರ್ತಿಯೆಂದು ಹೆಸರು ಪಡೆಯತಕ್ಕವರು. 'ಶಾಲ್ಮಲೆಗೆ' ಎಂಬ ಕತೆಯಲ್ಲಿ ವಸ್ತು ವಿಶೇಷತೆಯಿರದಿದ್ದರೂ ವರ್ಣನೆಯ ವೈವಿಧ್ಯವಿದೆ. ಸರಳವಾದ ನಿರೂಪಣೆಯು ಬಗಲಿ, ಸೊಗಸಾಗಿದೆ. 'ಚೆನ್ನಿ' ಯೊಳಗಿನ ಸಮಸ್ಯೆಯು ನಮ್ಮಂತಹ ಸಮಾಜಕ್ಕೆ ಪರಕೀಯವಾಗಿದೆಯೆಂದರೂ ಅಡ್ಡಿಯಿಲ್ಲ. 'ಹುಚ್ಚಿಯಾರು?' ಎಂಬ

ಕತೆಯಲ್ಲಿ ತೀರ ಸರ್ವಸಾಮಾನ್ಯವಾದ ಒಂದು ಸಂಗತಿಯನ್ನೆ ಕೊಂಡವಾಗಿ ಕತೆಯು ಒಪ್ಪಕೊಟ್ಟು ಒಂದು ಹಿಡಿತದಲ್ಲಿ ಹೇಳುವ ಯತ್ನವಿದೆ. 'ಕನಸೋ-ನನಸೋ?' ಇದು ಒಂದು ಸಂಭಾಷಣಾತ್ಮಕವಾದ ಕತೆಯಾಗಿದ್ದರೂ ಅದು ಕೂಡ ಒಂದು ಕನಸಿನ ಕತೆಯಾಗಿದೆ. ಇದರಲ್ಲಿ ಕೊನೆಗೆ ಚಮತ್ಕಾರವನ್ನು ತರಬೇಕೆಂಬ ಹಂಬಲದ ಹೊರತಾಗಿ ವಿಶೇಷ ಚಾಣಾಕ್ಷತೆಯೇನೂ ಕಾಣುವುದಿಲ್ಲ. ಸಾಮಾಜಿಕ ಸಮಸ್ಯೆಯೊಡನೆ ಮಾನವ ಸ್ವಭಾವವನ್ನೂ ಹೃದಯಸ್ಪರ್ಶಿಯಾಗಿ ತೋರಿಸುವ ಸಾಮರ್ಥ್ಯವು 'ಮಾತೃಹೃದಯ'ದಲ್ಲಿದೆ. ಜಡತನದ ಕಟುತನದಲ್ಲಿ ಮಾನವನ ಮನಸ್ಸು ಯಾವ ರೀತಿ ವ್ಯವಹರಿಸುತ್ತದೆಂಬ ಸೂಕ್ಷ್ಮವಿವೇಚನೆಯು ಅಲ್ಲಿದೆ. 'ಅಂದು-ಇಂದು' ಎಂಬುದು ಕತೆಗಾರಿಕೆಯಲ್ಲಿ ಇನ್ನಷ್ಟು ಮಾಗಬೇಕು. ಆರಂಭದಿಂದ ಗಂಭೀರವಾಗಿ ಬಂದರೂ ಕೊನೆಗೆ ಸುಖಾಂತವಾಗಬೇಕೆಂಬ ಉದ್ದೇಶದಿಂದಲೆ ಮುಕ್ತಾಯಗೊಳಿಸಿದಂತಿದೆ. 'ನನ್ನ ಪರೀಕ್ಷೆ'ಯು ಇಲ್ಲಿಯ ಎಲ್ಲ ಕತೆಗಳಲ್ಲಿಯೂ ಹಿರಿಯಕ್ಕ. ಪರಿಮಳ ಪೂರ್ಣವಾಗಿ ಅರಳಿದ ಒಂದು ಮಲ್ಲಿಗೆಯಂತಿದೆ ಈ ಶೃಂಗಾರ ಕಥೆ. ನವದಂಪತಿಗಳ ಚಕ್ಕಂದ ಶೃಂಗಾರವನ್ನೂ, ಹೊಸ ಹೆಂಡತಿಯ ಮುಂಜಿನಂತಹ ಮುಗ್ಧಿಸಿನ ಸ್ವಭಾವವನ್ನೂ, ಹೊಸಗಂಡನ ಚಂಚಲ ಮನಸ್ಸನ್ನೂ ನಿರೂಪಿಸುವಲ್ಲಿ ಉತ್ತಮ ಕಲಾಭಿಜ್ಞತೆಯನ್ನು ಈ ಕತೆಯು ವ್ಯಕ್ತಗೊಳಿಸುತ್ತದೆ. 'ಆನಂದ'ರ ಶೃಂಗಾರಿಕ ಕತೆಗಳನ್ನು ಇದು ಸಹಜವಾಗಿಯೆ ಸರಿಗಟ್ಟಬಲ್ಲದು. ಕತೆಗಾರ್ತಿಯೆ ನಾಯಕಳಾಗಿ ಬರೆಯುವ ಯೋಜನೆಯಿಂದಂತೂ ವಿಶೇಷ ಚಮತ್ಕಾರವಿದೆ ಈ ಕತೆಯಲ್ಲಿ.

ಈ ನವಕತೆಗಾರ್ತಿಯರು, ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ನವರತ್ನಗಳಾಗಲೆಂದೂ ಈ ವಿಮರ್ಶೆ ಮಾರ್ಗದರ್ಶಿಯಾಗದಿದ್ದರೂ ಮರ್ಮಭೇದಿಯಾಗಲಾರದೆಂದೂ ಹಾರೈಯುಸುವೆವು. ಎಲ್ಲರೂ 'ಆರತಿ'ಯನ್ನು ಎತ್ತಿ ಬೆಳಗಿಸಬೇಕು.

—ಎನ್ನೆ

೧೯ ಮಗಳಿಗೆ ತಂದೆಯ ಓಲೆಗಳು

ಪಂಡಿತ ಜವಾಹರಲಾಲ ನೆಹರು ಅವರ ಮೂಲ ಇಂಗ್ಲಿಷ್ ಗ್ರಂಥದ ಭಾಷಾಂತರ. ಭಾಷಾಂತರಕಾರರು ಶ್ರೀಮಾನ್ ಕಪಟರಾಳ ಕೃಷ್ಣರಾಯರು, ಗುಲಬುರ್ಗಾ.

ತಮ್ಮ ಹತ್ತುವರ್ಷದ ಮಗಳಿಗೆ ಪ್ರಪಂಚದ ಪರಿಚಯಮಾಡಿಕೊಡಬೇಕೆಂಬ ತಂದೆಯ ಕರ್ತವ್ಯಬುದ್ಧಿಯಿಂದ, ಪಂಡಿತ ಜವಾಹರಲಾಲರು ಬರೆದ ೩೧ ಓಲೆಗಳು ಇದರಲ್ಲಿ ಅಡಕವಾಗಿವೆ. ಸೃಷ್ಟಿಯ ಆದಿಯಿಂದ ಭಾರತೀಯ ಇತಿಹಾಸಕಾಲದವರೆಗಿನ ಸಂಗತಿಯ ಹೊರರೇಷೆಗಳನ್ನು ಸ್ಪಷ್ಟವಾಗಿ ರೂಪಿಸಿರುತ್ತಾವೆ ಈ ಓಲೆಗಳು.

ಇತಿಹಾಸಜ್ಞಾನ ಮಾನವನ ಮನಸ್ಸು-ಹೃದಯಗಳನ್ನು ವಿಕಾಸಗೊಳಿಸುವುದಲ್ಲದೆ, ಭಾವನಾಮಯವಾದ ಮತ-ಪಂಥ-ಪಂಗಡ ಧರ್ಮಗಳ ಅರ್ಥವಿಹೀನತೆಯನ್ನು ಕಾಣಿಸಿಕೊಟ್ಟು ದೃಷ್ಟಿಯನ್ನು ವಿಶಾಲಗೊಳಿಸುತ್ತದೆ. ನಿಸರ್ಗಸಿದ್ಧವಾದ ಮನುಷ್ಯಧರ್ಮ ಯಾವುದೆಂಬುದರ ಅರಿವನ್ನುಂಟುಮಾಡುತ್ತದೆ. ಜೀವನದಲ್ಲಿ ಸರಿಯಾದ ಆದರ್ಶವನ್ನು ತೋರಿಸಿಕೊಡುತ್ತದೆ. ತಮ್ಮ ಮಗಳಿಗೆ ಮನಸ್ಸತ್ವದ ಸಾಕ್ಷಾತ್ಕಾರವಾಗಬೇಕೆಂಬ ಮಹೋದ್ದೇಶದಿಂದಲೆ ಪಂಡಿತರು ಈ ಇತಿಹಾಸಜ್ಞಾನದ ಕಿರುದುತ್ತುಗಳನ್ನು ಆಕೆಗೆ ಉಣ್ಣಿಸಿದ್ದಾರೆ; ಉದ್ದೇಶಸಿದ್ಧಿಯನ್ನೂ ಪಡೆದಿದ್ದಾರೆ.

ಭೂಮಿಯ ರಚನೆ, ಜೀವದ ಉತ್ಪತ್ತಿ, ಮನುಷ್ಯನ ಉದಯ, ಮೊದಲಿನ ಮನುಷ್ಯರು, ಬೇರೆ ಬೇರೆ ಜನಾಂಗಗಳು, ಬೇರೆ ಬೇರೆ ಭಾಷೆಗಳು, ಗಣ ಅಥವಾ ಪಂಗಡಗಳು, ಧರ್ಮದ ಉದಯ, ಶ್ರಮವಿಭಾಗ, ಗೌಡ—ಅರಸರು, ನಾಗರಿಕತೆ, ಸಂಸ್ಕೃತಿಗಳು, ಬೇರೆ ಬೇರೆ ದೇಶದ ಸಂಸ್ಕೃತಿಗಳು ಇತ್ಯಾದಿ ವಿಷಯಗಳ ಪರಿಚಯ ಯಾರಿಗೆ ಬೇಡ? ಎಲ್ಲರಿಗೂ ಬೇಕಾದರೂ ವಯೋಮಾನದಂತೆ—ಶಿಕ್ಷಣದ ಮಟ್ಟದಂತೆ ತಿಳಿಹುವ ಗ್ರಂಥನಿರ್ಮಾಣ ಕನ್ನಡದಲ್ಲಿ ಸಾಕಷ್ಟಿಲ್ಲ. ಪ್ರಸ್ತುತ ಪುಸ್ತಕ ಆ ಕೊರತೆಯನ್ನು ಚೆನ್ನಾಗಿ ತುಂಬಬಹುದಾಗಿದೆ. ಪ್ರಾಥಮಿಕ ಶಾಲೆಯ ನಾಲ್ಕನೆಯ ಇಯತ್ತೆಯಿಂದ ಮೇಲಿನ ಎಲ್ಲ ವಿದ್ಯಾರ್ಥಿಗಳೂ, ಪ್ರಾಥಮಿಕ ಶಿಕ್ಷಕರೂ ತಾಯಿ-ತಂದೆಗಳೂ ಪ್ರತಿಯೊಬ್ಬರೂ ಈ ಪುಸ್ತಕವನ್ನು ಮನಸ್ಸುಗೊಟ್ಟು ಓದಬೇಕು. ಪ್ರತಿಯೊಂದು ಶಾಲೆಯ—ಪ್ರತಿಯೊಂದು ಹಳ್ಳಿಯ ಲೈಬ್ರರಿಯಲ್ಲಿಯೂ ಈ ಪುಸ್ತಕ ಇರಲೇಬೇಕು. ಓದುಬಲ್ಲ ಹಳ್ಳಿಗರು ಓದುಬಾರದ ಜನರೆದುರು ಚೆನ್ನಾಗಿ ಓದಿತೋರಿಸಿ, ಅವರ ಮನಸ್ಸಿನಲ್ಲಿ ಬೇರೂರಿದ್ದ ಕುರುಡುನಂಬುಗೆಗಳನ್ನು ಕಿತ್ತುಹಾಕಬಹುದು. ಈ ಜಾತಿಯ ಗ್ರಂಥಗಳು ಕನ್ನಡದಲ್ಲಿ ಹೆಚ್ಚು ಹೆಚ್ಚಾಗಿ ಬರಬೇಕು. ಇಂಗ್ಲಿಷಿನಿಂದ ಭಾಷಾಂತರಿಸಿ ಕನ್ನಡಿಗರಿಗೆ ಒದಗಿಸಿಕೊಟ್ಟ ಶ್ರೀ. ಕಪಟರಾಳರವರಿಗೂ ಮುದ್ರಿಸಿ ಪ್ರಕಟಿಸಿದ ಹುಬ್ಬಳ್ಳಿಯ ಸಾಹಿತ್ಯಭಾಂಡಾರದವರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಎಲ್ಲರೂ ಕೊಂಡು ಪ್ರೋತ್ಸಾಹಿಸಬೇಕು.

—ಬಿ. ಪಿ. ಎಸ್. ರಾವ್.

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,

೬ ಆಣೆಗೆ ಒಂದು ಸೆಟ್ಟು

ಮಿಕ್ಕ ಬ್ಲೇಡುಗಳಿಗಿಂತ ಚೊಕ್ಕಟ!
ಚರ್ಮ ಉರಿಯುವುದಿಲ್ಲ; ಕಪ್ಪಾಗುವುದಿಲ್ಲ!

ಸಾದರ ಸ್ವೀಕಾರ

೭೫. **ಕೋಲಹಾಡು** (ಹಾಡುಗಳ ಸಂಗ್ರಹ). ರಚಿಸಿದವರು 'ಮದಲಗಟ್ಟಿ ದಾಸ' ಹೈದರಾಬಾದ್. ಕನ್ನಡದ ಅಭಿಮಾನವನ್ನು ಎಚ್ಚರಿಸುವಂತಹ ೯-೫ ಕೋಲುಹಾಡುಗಳಿವೆ. ೧೪ ಪುಟದ ಪುಟ್ಟ ಪುಸ್ತಕ.

೭೬. **ಮಾಯಾವರೆ** (ಪ್ರಹಸನ). ಬರೆದು ಪ್ರಕಟಿಸಿದವರು ಶ್ರೀ. ಎ. ಎನ್. ಸುಬ್ಬರಾವ್, ಕಲಾಮಂದಿರ, ಹಲಸೂರು ಗೇಟು, ಬೆಂಗಳೂರು ನಗರ. ಕ್ರಾ. ೮. ೧೮ ಪುಟ. ಬೆಲೆ ೦-೩-೦.

೭೭. **ನಮ್ಮ ನಾಡ ನುಡಿಯ ಇತಿಹಾಸವು.** ಬರೆದವರು ಶ್ರೀ. ಕಪಟರಾಳ ಕೃಷ್ಣರಾಯರು ಗುಲ್‌ಬರ್ಗಾ. ಪ್ರಕಾಶಕರು ನಿಜಾಂ ಕರ್ನಾಟಕ ಪರಿಷತ್ತು ಕಲ್ಬುರ್ಗಿ. ಕ್ರಾ. ೮. ೨೬ ಪುಟಗಳು. ಬೆಲೆ ಆಣೆ.

೭೮. ಬಸವ ವಚನಾಮೃತಮು (ತೆಲುಗು) ಲೇ. ಶ್ರೀ. ರಿಕಳಿಗೆ ಮಠಮು ವೀರಯ್ಯ, ಉಂಡಾಬಝಾರ್ ಹೈದರಾಬಾದು. ಲೇಖಕರೇ ಪ್ರಕಾಶಕರು. ಕ್ರಾ. ೮. ೯೮ ಪುಟ. ಬೆಲೆ ೦-೪-೦.

ಶ್ರೀಬಸವಣ್ಣನವರ ೧೦೮ ವಚನಗಳನ್ನು ಆಯ್ದು ತೆಲುಗಿನಲ್ಲಿ ಭಾಷಾಂತರಿಸಿದ ಸಂಗ್ರಹವಿದು.

೭೯. ಐವತ್ತುವರುಷ (ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಐವತ್ತು ವರುಷದ ಕಾರ್ಯದ ಸವಿನೆನಪು) ಡೆ. ೮. ೬೪ ಪುಟ.

ಉತ್ತರ ಕರ್ನಾಟಕದಲ್ಲಿ ಕನ್ನಡ ಚಟುವಟಿಕೆ ಹೇಗೆ ಹೇಗೆ ಹುಟ್ಟಿ ಬೆಳೆಯಿತೆಂಬುದರ ಇತಿಹಾಸವನ್ನು ತಿಳಿದುಕೊಳ್ಳಬೇಕೆನ್ನುವವರು, ಅವಶ್ಯವಾಗಿ ಇದನ್ನೋದಬೇಕು. ಸಂಘವು ಇದುವರೆಗೆ ಬೇರೆ ಬೇರೆ ೪೨೩ ಪುಸ್ತಕಗಳಿಗೆ (೧೭೫ ಗ್ರಂಥಕರ್ತರಿಗೆ) ಸೇರಿ ೧೪೯೯೦ ರೂಪಾಯಿಗಳನ್ನು ಹಂಚಿದೆ. ಸದ್ಯ ಕಲಿಯುವ ಮೇಲಿನ ಸಾಲದ ಹೊರೆಯನ್ನು ತೀರಿಸಿ ಸಂಘವು ಹೊಸಹುರುಪಿನಲ್ಲಿ ನಿಂತಿದೆ. ಅದರ ಮುಂದಿನ ಕಾರ್ಯದ ಕಡೆಗೆ ಕನ್ನಡಿಗರೆಲ್ಲರೂ ಆಶೆಯ ಕಣ್ಣುಗಳಿಂದ ನೋಡುತ್ತಲಿದ್ದರೆ ಅದು ಅಸ್ವಾಭಾವಿಕವಲ್ಲ.

೮೦. Bijapur (ನಗರ ಪರಿಚಯ) ಇಂಗ್ಲಿಷ್ ಭಾಷೆಯಲ್ಲಿ ಬರೆಯಿಸಿ ವಿಜಾಪುರದ ಮೇಸರ್ಸ್ ಕುಲಕರ್ಣಿ ಬ್ರದರ್ಸ್ ಅವರು ಪ್ರಕಟಿಸಿದ್ದಾರೆ. ವಿಜಾಪುರವನ್ನು ಕೂಲಂಕಷವಾಗಿ ನೋಡಬೇಕೆನ್ನುವವರಿಗೆ ಒಳ್ಳೆಯ ಮಾರ್ಗದರ್ಶಿಯಂತಿದೆ. ಕ್ರಾ. ೮. ೭೬ ಪುಟ. ಬೆಲೆ ೦-೬-೦.

೮೧. Bijapur (ಚಿತ್ರಪಟಿಕೆ) ಇದನ್ನೂ ಮೇಸರ್ಸ್ ಕುಲಕರ್ಣಿ ಬ್ರದರ್ಸ್ ಅವರೆ ಪ್ರಕಟಿಸಿದ್ದಾರೆ. ಬೆಲೆ ೧೨ ಆಣೆ.

ವಿಜಾಪುರದಲ್ಲಿಯ ಐತಿಹಾಸಿಕ ಕಟ್ಟಡಗಳ ಛಾಯಾಚಿತ್ರಗಳ ಪಟ್ಟಿಕೆಯಿದು. ಗೋಲಗುಂಬಜ್, ಜುಮ್ಮಾಮಸೀದೆ. ಇಬ್ರಾಹಿಮ್ ರೋಜಾ, ತಾಜಬಾವಡಿ, ಆಸಾರಮಹಾಲು ಮೊದಲಾದುವುಗಳ ಸುಂದರ ದೃಶ್ಯಗಳನ್ನು ಸಂಗ್ರಹಿಸಬೇಕೆನ್ನುವವರು ಇವನ್ನು ತೆಗೆದುಕೊಳ್ಳಲೆಬೇಕು.

೮೨. **ಗಂಡುಗಲಿ ಕುಮಾರರಾಮ** (ಐತಿಹಾಸಿಕ ವ್ಯಕ್ತಿಚರಿತೆ.) ಶ್ರೀಮಾನ್ ಹುಲ್ಲೂರು ಶ್ರೀನಿವಾಸ ಜೋಯಿಸರು ಚಿತ್ರದುರ್ಗ ಅವರು ಬರೆದುದು, ಧಾರವಾಡದ ವಿಂಸಿನಬಳ್ಳಿಯ ಆನೆಯ ವರ್ಷದ ಆನೆಯ ಕುಡಿಯಾಗಿ ಪ್ರಕಟವಾಗಿದೆ. ಕ್ರಾ. ೮. ೧೧೬ ಪುಟ; ಬೆಲೆ ೧-೦-೦.

೮೩. ವಿಧಾಯಕ ಕಾರ್ಯಕ್ರಮ ಮಹಾತ್ಮಾ ಗಾಂಧಿಯವರ ಪ್ರಬಂಧದ ಕನ್ನಡ ಭಾಷಾಂತರ. ಪ್ರಕಾಶಕರು ಶ್ರೀ. ಎಚ್. ಆರ್. ಮೊಹರೆ. ಸಂಯುಕ್ತ ಕರ್ನಾಟಕ ಕಾರ್ಯಾಲಯ, ಹುಬ್ಬಳ್ಳಿ. ಕ್ರಾ. ೮. ೩೬ ಪುಟ.

---

೮೪. **ಕಲಿಯುಗ** (ಮಾಸಪತ್ರಿಕೆಯ ವಿಶೇಷ ಸಂಚಿಕೆ). ಸಂಪಾದಕರು ಡಾ. ಗೋಪಾಲಕೃಷ್ಣರಾಯರು, ಧಾರವಾಡ. ಡೆ. ೮. ೫೨ ಪುಟ. ಬೆಲೆ ೦-೪-೦.

ಲೈಂಗಿಕ ವಿಜ್ಞಾನವನ್ನೂ ಅದರ ಮೂಲಕ ಶರೀರಸ್ವಾಸ್ಥ್ಯ ಸಂರಕ್ಷಣೆಯ ವಿಷಯಗಳನ್ನೂ ಹೇಳಲಿಕ್ಕೆ, ಇಂದು ಭಾರತದ ಎಲ್ಲ ಭಾಷೆಗಳಲ್ಲಿಯೂ ಹಲವು ಪತ್ರಿಕೆಗಳು ಹೊರಟು ಕಾರ್ಯಮಾಡುತ್ತಿವೆ. ಅಂತಹ ಕನ್ನಡ ಪತ್ರಿಕೆಗಳಲ್ಲಿ ಕಲಿಯುಗವು ಮೊದಲನೆಯದು. ಇದರ ಸಂಪಾದಕರು ಆ ವಿಷಯವನ್ನು ಚೆನ್ನಾಗಿ ಅಭ್ಯಸಿಸಿ, ಆವಶ್ಯಕ ಸಂಗತಿಗಳನ್ನು ವಾಚಕಲೋಕಕ್ಕೆ ಒದಗಿಸುತ್ತಿರುವುದು ಸಂತೋಷದ ಸಂಗತಿ. ವಿಜ್ಞಾನವು ಇಂದು ನಮ್ಮ ಜೀವನದಲ್ಲಿ ಹಲವು ಅನುಕೂಲತೆಯನ್ನು ಒದಗಿಸಿಕೊಟ್ಟಂತೆ ಪ್ರತಿಕೂಲತೆಗಳನ್ನೂ ಉಂಟುಮಾಡಿದೆ. ಹಾಗೆಯೆ ಕಲಿಯುಗದಂತಹ ಕಾಮವಿಜ್ಞಾನದ ಪತ್ರಿಕೆಗಳಿಂದ ಸಮಾಜಕ್ಕೆ ಅನುಕೂಲವೂ ಉಂಟು. ಕೆಲವೊಂದು ಜನರ ದೃಷ್ಟಿಯಿಂದ ಪ್ರತಿಕೂಲವೂ ಉಂಟು. ಎಷ್ಟೇ ಪ್ರತಿಕೂಲವೆಂದು ಕೆಲವರು ಬೊಬ್ಬೆಯಿಟ್ಟರೂ ಜನರು ಇಂತಹ ಪತ್ರಿಕೆಗಳನ್ನು ಓದುವುದನ್ನು ಬಿಡಲಾರರು; ಪರಭಾಷೆಯ ಪತ್ರಿಕೆಗಳನ್ನಾದರೂ ಕೊಂಡು ಓದಿಯೆ ಓದುವರು. ಕನ್ನಡ ನುಡಿಯಲ್ಲಿಯೆ ಅಂತಹ ಪತ್ರಿಕೆಯನ್ನು ಒದವಿಸಿಕೊಡಲು ಸಿದ್ಧರಾದುದಕ್ಕಾಗಿ ಸಂಪಾದಕರನ್ನು ಅಭಿನಂದಿಸಬೇಕಾಗಿದೆ.

೮೫. **ಹಂಪೀಕ್ಷೇತ್ರದ ದೃಶ್ಯಗಳು** (ಸಚಿತ್ರ) ಶ್ರೀ. ಎ. ಕೆ. ಬಾಲಸುಂದರಂ ಬಿ. ಎ., ಎಲ್. ಡಿ. ಬೋರ್ಡ್ ಎಜ್ಯುಕೇಶನಲ್ ಆಫೀಸರ್ ಬಳ್ಳಾರಿ. ಪ್ರಕಾಶಕರು ರಾಯಲಸೀಮಾ ಕೃಷ್ಣರಾಜ ಪಬ್ಲಿಷಿಂಗ್ ವರ್ಕ್ಸ್ ಅನಂತಪುರ. ಕ್ರೌನ್ ೧/೧೬ ದ ೨೪ ಪುಟಗಳು. ಬೆಲೆ ೦-೫-೦.



ನಗೆಗೆ ನೈವೇದ್ಯ

ಔಷಧದಿಂದಾದ ಅನುಕೂಲತೆ

“ಡಾಕ್ಟರರೆ, ತಮ್ಮ ಔಷಧದಿಂದ ನನಗೆ ಬಹಳಷ್ಟು ಅನುಕೂಲವಾಯಿತು. ಅದಕ್ಕಾಗಿ ನಾನು ತಮಗೆ ತುಂಬಾ ಆಭಾರಿಯಾಗಿದ್ದೇನೆ?”

“ಹೀಗೇನು? ಸರಿ! ತಾವು ಯಾರು? ತಾವು ನಮ್ಮಲ್ಲಿ ಔಷಧಕ್ಕೆಂದು ಎಂದೂ ಬಂದಂತೆ ಕಾಣುವುದಿಲ್ಲವಲ್ಲಾ!”

“ಹೌದು, ಡಾಕ್ಟರ್ ನಾನೆಂದೂ ತಮ್ಮಲ್ಲಿ ಔಷಧಕ್ಕೆ ಬಂದಿಲ್ಲ. ನಮ್ಮ ಚಿಕ್ಕಪ್ಪ ತಮ್ಮಿಂದ ಔಷಧ ತೆಗೆದುಕೊಳ್ಳುತ್ತಿದ್ದರು. ಅವರ ತರುವಾಯ, ಅವರ ಆಸ್ತಿಗೆ ನಾನೇ ಹಕ್ಕುದಾರನಾಗಿದ್ದೇನೆ.”

* * *

ಶುದ್ಧ ಕಗ್ಗಲ್ಲು

ಒಬ್ಬ ಮೂರ್ತಿಶಿಲ್ಪಿ ತನ್ನ ಮಿತ್ರನಿಗೆ ತಾನು ಮಾಡಿದ ಮೂರ್ತಿಯನ್ನು ತೋರಿಸುತ್ತ ಹೇಳಿದ:

“ಮಿತ್ರಾ, ಈ ಕಲ್ಲಿನ ಮೂರ್ತಿಯನ್ನು ಕೇವಲ ನನ್ನ ಕಲೆಯನ್ನು ಉಪಯೋಗಿಸಿಯೆ ಮಾಡಿದ್ದೇನೆ ನೋಡು!”

ಮಿತ್ರ ಆತುರದಿಂದ ಕೇಳಿದ:

“ಏನೆಂದಿ? ಆಶ್ಚರ್ಯ! ನಿನ್ನ ತಲೆ ಒಂದು ಕಲ್ಲಾಗಿ ಇತ್ತೆಂಬುದು ನನಗೇನೂ ಗೊತ್ತಿರಲಿಲ್ಲ ಬಿಡು! ನಿಮ್ಮಪ್ಪ ಮಾತ್ರ ನಿನಗೆ ಆಗಾಗ ಅನ್ನುತಿರೋದನ್ನ ಕೇಳಿದ್ದೆ.... ‘ನನ್ನ ಮಗಾ ಅಂದರ ಒಂದು ಶುದ್ಧ ಕಗ್ಗಲ್ಲು’ ಅಂತ. ಅವರ ಮಾತನ್ನ ನಾ ಸುಳ್ಳು ಅಂತ ತಿಳಿದಿದ್ದೆ.

* * *

ಒಳಒಕ್ಕಲಾಗಿರಲಿಕ್ಕೆ ಅಂಜಿಕೆ

“ಈ ಮನೀ ಒಳಗ, ಗೋವಿಂದರಾಯರ ಹೊರತು ಮಿಕ್ಕವರು ಯಾರೂ ಒಳವೊಕ್ಕಲಾಗಿ ಇರಲಿಕ್ಕೆ ಸಿದ್ಧರಾಗೂದಿಲ್ಲ!”

“ಯಾಕ? ದೆವ್ವ ಗಿವ್ವದ ಅಂಜಿಕಿ ಅದೇನೋ ಏನು?”

“ಛೇ ಛೇ! ಅದರದೇನೂ ದೊಡ್ಡ ವಿಷಯವಲ್ಲ. ಈ ಮನಿಯ ಯಜಮಾನರ ಹೆಂಡತಿಗೆ ಹಾಡುವ ಹುರುಪು ಹೆಚ್ಚಾಗಿ ಅದ!”

“ಹಂ ಹಂ ಹೀಂಗೇನು? ಹಾಂಗಾದರ ಗೋವಿಂದರಾಯರು ಹ್ಯಾಂಗ ತಾಳಿಕೊಂಡು ಇರತಾರಂತೀರಿ?”

“ನಿಮಗ ಗೊತ್ತಿಲ್ಲೇನು? ಅವರ ಕಿವೀ ಒಳಗ ನಗಾರಿ ಬಾರಿಸಿದರೂ ಅವರಿಗೆ ಕೇಳಿಸೂದಿಲ್ಲ. ಜಾತಿವಂತ ಕಿವುಡರವರು!”

* * *

ಬಿರುಸಾದ ರವೆ

ಗೌರಮ್ಮ:— ಏನು ಸೆಟ್ಟರೆ, ನೊನ್ನೆ ನೀವು ಕೊಟ್ಟಿರಲ್ಲಾ ಎರಡು ಪೌಂಡು ರವೆ? ಅದು ಅಷ್ಟ್ಯಾಕಿರೀ ಬಿರುಸು?

ಸೆಟ್ಟಿ:— ಬಿರುಸು.. ಅಂದರೇನ್ರವ್ವಾ! ರವೆ ಬಿರುಸೂ ಅಂದರೆ ನಿಮಗೇನು ಹೇಳಬೇಕು?

ಗೌರಮ್ಮ:— ಬಿಡ್ರೀ ಏನಂತೀರಿ! ಕಲ್ಲಿಗಿಂತಾ ಬಿರುಸು! ನೀವು ಕೊಟ್ಟ ರವೇನ ಮನಿಗೆ ಒಯ್ದು ಉಂಡಿ ಮಾಡಿದೆ. ಅದನ್ನ ತಿನ್ನತಿರುವಾಗ ನಮ್ಮ ಯಜಮಾನರದೊಂದು ಹಲ್ಲೇ ಮುರಿದು ಹೋಯ್ತು!

* * *

ದೀರ್ಘಾಯುಷ್ಯದ ಗುಟ್ಟು

ಗಂಡ, ಪ್ರೀತಿಯ ಹೆಂಡತಿಗೆ, ಹೇಳಿದ:

“ದೀರ್ಘಾಯುಷ್ಯದ ಗುಟ್ಟು” ಎಂಬುದೊಂದು ಒಳ್ಳೆಯ ಪುಸ್ತಕ ಅದ. ಈ ಸಲ ಧಾರವಾಡಕ್ಕೆ ಹೋದಕೂಡಲೆ ಅದರದೊಂದು ಪ್ರತಿ ನಿನಗ ಕಳಿಸಿಕೊಡತೇನs!”

ಹೆಂಡತಿ ಕಾತರಭಾವದಿಂದ ಹೇಳಿದಳು:

“ಬ್ಯಾಡ, ಬ್ಯಾಡ! ಕಳಿಸೂದೇನೂ ಬ್ಯಾಡ ಆ ಪುಸ್ತಕಾನ! ಅತ್ತೆಯವರು ಮಾವನವರು ಅದನ್ನ ಓದಿದರಂದರ....!”

* * *

ಅಪರಾಧಿಯ ನಿರಪರಾಧ

ನ್ಯಾಯಾಧೀಶ:— ಏನೋ, ನೀನು ಬದನೆಕಾಯಿ ಕದ್ದದ್ದನ್ನ ಪ್ರತ್ಯಕ್ಷ ಕಣ್ಣಾರೆ ಕಂಡಂಥಾ ಸಾಕ್ಷೀದಾರರು ಆರು ಜನರು ಕೋರ್ಟಿನೆದುರು ಹಾಜರಾಗಿದ್ದಾರೆ!

ಅಪರಾಧಿ:— ಹಾಂಗಲ್ಲರೀ ರಾವ್‌ಸಾಹೇಬರs, ನಾ ಕದ್ದದ್ದನ್ನನೋಡದೆ ಇರುವಂಥಾ ಸಾಕ್ಷೀದಾರರನ್ನ ಬರೇ ಆರುಜನರs ಯಾಕ; ಆರುನೂರು ಜನರನ್ನ ಕೋರ್ಟಿನ ಎದುರಿಗೆ ತಂದು ನಿಲ್ಲಿಸತೀನ್ರಿ, ಬೇಕಾದರ!

* * *

ವಕೀಲ ಬಾಲಲೀಲಾ

“ಏನುರಾಯರs! ನಿಮ್ಮ ಮಗನ ವಕೀಲಿ ಹ್ಯಾಂಗ ನಡದsದ ಈಗ?”

“ಹ್ಯಾಂಗ ಬೇಕೂ ಹಾಂಗ ನಡದsದ, ಕೇಳತೀರೇನು? ಅಂವಗ ಒಂದು ದುಡ್ಡಿನ ಕುಳಾ ಇಂಥಾದು ಗಂಟು ಬಿದ್ದsದ; ಬೇಕಾದಾಗ ಬೇಡಿದಷ್ಟು ದುಡ್ಡುಕೊಟ್ಟು ಪೂರಯಿಸತsದ!”

“ಭಲೆ! ಅದ್ಯಾವದರೆಪ್ಪಾ ಅಂಥಾ ಕುಳಾ?”

“ನಾನು, ಇನ್ಯಾರಿರಬೇಕು?”

* * *

ಬಾಗಿಲ ಮುಂದಿನ ವ್ಯಾಪಾರ

ಮನೆಯೊಡೆ:— ಹೋಗಪ್ಪಾ ಹೊರಟು ನಾವು ಬಾಗಿಲ ಮುಂದ ಬರೂ ಸಾಮಾನು ಎಂದೂ ಕೊಳತಿರೂದಿಲ್ಲ!

ಮಾರಾಟಗಾರ:— ನಾವು ಬಾಗಲ ಮುಂದ ಯಾಕ ಬರೂಣರೀ ಯವ್ವಾ! ಮನೆಯೊಳಗs ಬಂದೂ ಮಾರತಿರತೀವರಿ! ಒಳಗ ಬರಲೇನ್ರಿ, ಹಾಂಗಾದರ?

ನ. ನಾ.



ಪ್ರೂರೈಕೆಗೆ ಪ್ರಮಾಣವಿಲ್ಲ

ಯುದ್ಧದ ವಿಷಯದಲ್ಲಿ ಕಳೆದ ತಿಂಗಳು ಜರುಗಿದ ಅತ್ಯಂತ ಮಹತ್ತ್ವದ ಸಂಗತಿ ಎಂದರೆ ಸಿಂಗಾಪುರ ನೌಕಾಕೇಂದ್ರವು ಶತ್ರುಗಳ ವಶವಾದದ್ದು. ಈ ಸಂಗತಿ ಎಷ್ಟು ಮಹತ್ತ್ವದ್ದಿದೆಯೊ ಅಷ್ಟೇ ವಿಷಾದಕರವಾಗಿದೆ. ಬರ್ಮಾದ ಸೀಮೆಗೆ ಜಪಾನವು ಬಂದುದರಿಂದ ಯುದ್ಧವು ಹಿಂದುಸ್ಥಾನಕ್ಕೆ ಮುಟ್ಟಿದೆ ಎಂದರೆ, ಸಿಂಗಾಪುರ ಕಳೆದು ಯುದ್ಧವು ಹಿಂದುಸ್ಥಾನವನ್ನು ತಟ್ಟಿದೆ ಎಂದು ಹೇಳಬಹುದು. ಬಂಗಾಲ ಉಪಸಾಗರ, ಹಿಂದೀ ಮಹಾಸಾಗರ ಇವೆರಡರಲ್ಲೂ ತಾತ್ಪೂರ್ತಿಕವಾಗಿ ಜಪಾನಿಯರ ಹಾವಳಿಗೆ ಅವಕಾಶ ದೊರೆತಂತಾಯಿತು. ಸಿಂಗಾಪುರ ಘಟನೆಯಿಂದ ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಬ್ರಿಟಿಶ ಯುದ್ಧಮಂಡಳದ ನೀತಿಗಾಗಿ ಅಧೈರ್ಯವೂ ಅಸಂತೋಷವೂ ಹೆಚ್ಚುತ್ತಿದೆಯೆಂಬುದರ ಲಕ್ಷಣಗಳು ಈಗಾಗಲೆ ತೋರುತ್ತಲಿವೆ. ಕಳೆದ ಹದಿನೈದು ದಿವಸಗಳಿಂದ ಲಾರ್ಡ್ ಬೀವರ್‌ಬ್ರುಕ್ ಮೊದಲಾದವರು ಇಂಗ್ಲಂಡದ ಯುದ್ಧ ಸಾಮುಗ್ರಿಗಳ ಉತ್ಪಾದನವು ಸಮಾಧಾನಕರವಾಗಿದೆ ಎಂದು ತೋರಿಸಲು ಯತ್ನಿಸಿದ್ದಾರಷ್ಟೆ? ಆದರೆ ಕೇವಲ ಇಂತಹ ಮಾತುಗಳಿಂದ ಪಾರ್ಲಿಮೆಂಟಿನ ಸದಸ್ಯರಿಗೆ ಸಮಾಧಾನವಾಗುವ ಸಂಭವವಿಲ್ಲ. ಯಾಕೆಂದರೆ ಬರಿಯ ಉತ್ಪಾದನದಿಂದ ಆಗಬೇಕಾದ ಲಾಭವೇನು? ಆ ಸಾಮುಗ್ರಿಗಳ ಸಮಯೋಚಿತ ವಿಸರ್ಜನೆ (distribution) ಮುಖ್ಯವಾದುದು. ಅಗತ್ಯವಿದ್ದ ಸ್ಥಳದಲ್ಲಿ ಸಾಕಷ್ಟು ಸಾಮುಗ್ರಿಗಳಿಲ್ಲದಾಗ, ಸಮಾಧಾನಕಾರಕ ಉತ್ಪಾದನವು ಅಸಂಬದ್ಧ ಮಾತೆನಿಸುವುದು. ಮಲಾಯ ಯುದ್ಧಕ್ಷೇತ್ರದಲ್ಲಿ ಸಾಕಷ್ಟು ವಿಮಾನದಳಗಳು ಮೊದಲಿನಿಂದ ಇರಲಿಲ್ಲ, ಕೊನೆಯವರೆಗೂ ಬರಲಿಲ್ಲ. ಈ ತರದ ಅವ್ಯವಸ್ಥಿತ ವಿಸರ್ಜನದ ಸಂಬಂಧವಾಗಿ ಪಾರ್ಲಮೆಂಟವು ಹಟಹಿಡಿಯುವ ಸಂಭವವಿದೆ.

ಸಿಂಗಾಪುರದ ಸೂಚನೆ

ಮಿ. ಚರ್ಚಿಲ್‌ರು ಆಗಾಗ ಈ ಪ್ರಶ್ನೆಗೆ ಕೊಟ್ಟ ಉತ್ತರವನ್ನೆ ಮತ್ತೊಮ್ಮೆ ಕೊಡಬಹುದು. 'ಬ್ರಿಟಿಶ ಸಾಮ್ರಾಜ್ಯವು ಅನೇಕ ದಿಕ್ಕುಗಳಲ್ಲಿ ಅತಿದೂರವಾಗಿ ಹಬ್ಬಿದೆ, ಯುದ್ಧದ ಪರಿಸ್ಥಿತಿಯಲ್ಲಿ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಾಮುಗ್ರಿಗಳನ್ನು ಕಳುಹಿಸುವುದು ಅನಿವಾರ್ಯವಾಗಿ ಅತಿ ಸಾವಕಾಶವಾಗುವುದು' ಎಂಬುದೆ ಆ ಉತ್ತರ. ಆದರೆ ಆ ಉತ್ತರದಿಂದಲೂ ಇಂದು ಯಾರಿಗೂ ಸಮಾಧಾನವಾಗುವಂತಿಲ್ಲ. ಯಾಕೆಂದರೆ ಇಂದಿನ ಯುದ್ಧದಂತಹ ಪ್ರಸಂಗದಲ್ಲಿ ಕೂಡ, ಒಂದೇ ಕಡೆ ಯುದ್ಧ-ಸಾಮುಗ್ರಿಗಳ ಉತ್ಪಾದನವಾಗಬೇಕೆಂದಾಗಲಿ, ಕೆಲವು ದೇಶಗಳಲ್ಲಿ ಆ ಉತ್ಪಾದನ ಆಗಲೇಬಾರದೆಂದಾಗಲಿ ಹಟ ಹಿಡಿಯುವುದು, ಮುಂದಾಳಾದವರಿಗೆ ದೂರದೃಷ್ಟಿಯೆ ಇಲ್ಲ ಎಂಬುದನ್ನು ತೋರಿಸುವುದು; ಯಾವರೀತಿಯಿಂದಲೂ ಸಮಾಧಾನವನ್ನು ಕೊಡದು. ಹೋದ ವರ್ಷ ಸಾಮ್ರಾಜ್ಯದ ಪ್ರಾಚ್ಯಪ್ರದೇಶಗಳ ಪರಿಷತ್ತು ಸೇರಿತ್ತಷ್ಟೆ? ಅಲ್ಲಿ ಕೂಡ ಹಿಂದುಸ್ಥಾನವು ಹೆಚ್ಚಾಗಿ ಕಚ್ಚಾ ಸರಕುಗಳನ್ನು ಪೂರಯಿಸಬೇಕೆಂಬ ವ್ಯವಸ್ಥೆಯಾಯಿತೆಂದು ಪಂಡಿತ ಜವಾಹರರು ಆರೋಪಿಸಿದ್ದಾರೆ. ಈ ಆರೋಪಕ್ಕೆ ಸಮಾಧಾನಕಾರಕ ಉತ್ತರವಿಲ್ಲ! ಹಿಂದುಸ್ಥಾನದಲ್ಲಿ, ಸುಶಿಕ್ಷಿತ ನಿರುದ್ಯೋಗಿ ಯುವಕರು ತುಂಬಿದಲ್ಲಿ, ನಿಸರ್ಗದ ಅವಕಾಶ-ಅನುಕೂಲತೆಗಳು ಹೇರಳವಾದಲ್ಲಿ ಯುದ್ಧ ಸಾಮುಗ್ರಿಗಳನ್ನು ಬೇಕಾದಷ್ಟಾಗಿ ತಯಾರ ಮಾಡಬಹುದಾಗಿತ್ತು. 'ಹಿಂದುಸ್ಥಾನದಲ್ಲಿ ಒಂದು ಲಕ್ಷದ ಬದಲಾಗಿ ಹತ್ತು ಲಕ್ಷ ಸೈನಿಕರನ್ನು ತಯಾರು ಮಾಡಿದ್ದರೆ ಸಿಂಗಾಪುರವಾಗಲಿ ಮಲಾಯವಾಗಲಿ ಕೈ ಬಿಡುತ್ತಿರಲಿಲ್ಲ' ಎಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಕೂಡ ಅಗ್ರಲೇಖದಲ್ಲಿ ಬರೆಯಬೇಕೆಂದರೆ! ಹತ್ತು ಲಕ್ಷ ಸೈನಿಕರನ್ನು ಸಜ್ಜುಗೊಳಿಸುವುದು ಅಶಕ್ಯವಲ್ಲ ಎಂಬ ಧ್ವನಿ ಇದ್ದರೆ, ಅದೇ ಪ್ರಮಾಣದಲ್ಲಿ ಯುದ್ಧಸಾಮುಗ್ರಿಗಳನ್ನೂ ನಿರ್ಮಿಸಬಹುದಾಗಿತ್ತು ಎಂದು ನಮ್ಮ ಅಭಿಪ್ರಾಯ. ಸಿಂಗಾಪುರ ಕಳೆದರೆ ಎಲ್ಲವೂ ಕಳೆದಂತಲ್ಲ; ಜಗತ್ತನ್ನೆಲ್ಲ ಹರಡಿದ ಯುದ್ಧದಲ್ಲಿ ಇಂತಹ ಏರಿಳಿತಗಳು ಅನಿವಾರ್ಯ. ಆದರೂ ಯುದ್ಧಸಾಮುಗ್ರಿಗಳನ್ನು ಹಿಂದುಸ್ಥಾನದಲ್ಲಿಯೆ ಮೊದಲಿನಿಂದ ಸಾಕಷ್ಟಾಗಿ, ಶಕ್ಯವಿದ್ದಷ್ಟಾಗಿ ನಿರ್ಮಿಸುತ್ತ ಬಂದಿದ್ದರೆ, ಇಂದು ಸಿಂಗಾಪುರ ಕಳೆದುದಕ್ಕಾಗಿ ಆಗಬಹುದಾದ ಪ್ರತಿಕೂಲ ಪರಿಣಾಮಗಳು ಕನಸಿನಲ್ಲಿ ಕೂಡ ಶಕ್ಯವಿದ್ದಿರಲಿಲ್ಲ.

ಮಾರ್ಶಲ್ ಶಿಯಾಂಗರಿಗೆ ಸ್ವಾಗತ

ಚೀನದ ಏಕವೀರನಾಯಕರಾದ ಮಾರ್ಶಲ್ ಶಿಯಾಂಗ-ಕೈ-ಶೇಕರು ಈ ಸಂದರ್ಭದಲ್ಲಿಯೆ ವಿಚಾರವನ್ನು ನಡೆಯಿಸಲು ಹಿಂದುಸ್ಥಾನಕ್ಕೆ ಪ್ರತ್ಯಕ್ಷವಾಗಿ ಬಂದು ಹೋದರೆನಬಹುದು. ಮಲಾಯ

ದಲ್ಲಿ ಸಾಮ್ರಾಜ್ಯ ದಂಡುಗಳು ಹಿಂದೆ ಸರಿಯುವಾಗ, ಸಿಂಗಾಪುರದ ವರೆಗೂ ವಿಮಾನಶಕ್ತಿ ಸಾಕಷ್ಟು ಇಲ್ಲವೆಂಬುದು ಸ್ಪಷ್ಟವಾದಾಗ, ಇಂತಹ ಪ್ರಸಂಗ ಬರಬಹುದೆಂಬ ವಿಚಾರದಿಂದಲೆ ಶಿಯಾಂಗರು ಹಿಂದುಸ್ಥಾನಕ್ಕೆ ಬಂದರು. ಮಲಾಯದಲ್ಲಿ ನಡೆದ ಜಪಾನದ ಏರಾಟದಿಂದ ರಂಗೂನಕ್ಕೂ ಬರ್ಮಾರಸ್ತೆಗೂ ಹೆದರಿಕೆ ಇದೆ ಎಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಆದರೆ ಕೇವಲ ಬರ್ಮಾ ರಸ್ತೆಯ ಸುರಕ್ಷಿತತೆಯ ವ್ಯವಸ್ಥೆಗಾಗಿ ಶಿಯಾಂಗರು ಬಂದರೆಂದು ಹೇಳಲಿಕ್ಕಾಗದು. ಬರ್ಮಾರಸ್ತೆಯ ಸುರಕ್ಷಿತತೆಗಿಂತಲೂ ಹೆಚ್ಚು ಮಹತ್ವದ್ದಾದ ಒಂದು ಸಂಗತಿ ಇದೆ, ಅದಕ್ಕಾಗಿ— ಕೇವಲ ಅದಕ್ಕಾಗಿಯೆ-ಮಾರ್ಶಲ್‌ರು ಬಂದರೆಂದು ನಮ್ಮ ಅಭಿಪ್ರಾಯ. ಅದೆಂದರೆ ಯುದ್ಧಸಾಮಗ್ರಿಗಳ ವಿಷಯ. ಶಾಂತಿಸಾಗರದಲ್ಲಿ ಯುದ್ಧ ಪ್ರಾರಂಭವಾದಾದಿನಿಂದಲೂ ಜಪಾನದ ಹೆಚ್ಚಳವಿದೆ. ಈ ಕಾರಣಕ್ಕಾಗಿಯೆ ಇಂದಿಲ್ಲ ನಾಳೆ ಅಮೇರಿಕೆಯಿಂದಾಗಲಿ ಹೊರಗಿನಿಂದಾಗಲಿ ಸಾಮಗ್ರಿಗಳು ಬರುವುದೆ ಕಠಿಣ. ಅಂತಹ ಪ್ರಸಂಗದಲ್ಲಿ ಬರಿಯ ಬರ್ಮಾರಸ್ತೆಯಿಂದ ಪ್ರಯೋಜನವೇನು? ಸಾಮಗ್ರಿಗಳನ್ನೆ ಪೂರಯಿಸಲಾಗದ ಪರಿಸ್ಥಿತಿ ಬರಬಹುದಾದಲ್ಲಿ, ಆ ರಸ್ತೆಯ ಸುರಕ್ಷಿತತೆಗೆ ಮಹತ್ವವೆಲ್ಲಿದೆ? ಅದಕ್ಕಾಗಿ, ಮೊದಲು ಸಾಮಗ್ರಿಗಳ ವ್ಯವಸ್ಥೆ ಶಿಯಾಂಗ-ಕೈ-ಶೇಕರಿಗೆ ಮುಖ್ಯವಾಗಿದೆ. ಒಂದು ವೇಳೆ ಹಿಂದುಸ್ಥಾನದಲ್ಲಿಯೆ ಯುದ್ಧಸಾಮಗ್ರಿಗಳ ಉತ್ಪಾದನವನ್ನು ಹೆಚ್ಚಾಗಿ ಕೈಕೊಳ್ಳಬಹುದಲ್ಲ? 'ಬರ್ಮಾರಸ್ತೆ ಹೋದರೆ ಬೇರೆ ಮಾರ್ಗಗಳಿವೆ' ಎಂದು ಶಿಯಾಂಗರ ಪರಿವಾರದಲ್ಲಿ ಬಂದ ಯುದ್ಧತಜ್ಞರೊಬ್ಬರು ಈ ದೃಷ್ಟಿಯಿಂದಲೆ ಹೇಳಿರಬಹುದು. 'ಮಾರ್ಗದ ಮಾತು ಮುಂದೆ, ಸದ್ಯಕ್ಕೆ ನೀವು ಶಕ್ಯವಿದ್ದ ಎಲ್ಲ ಪ್ರಮಾಣದಲ್ಲಿ ಯುದ್ಧಸಾಮಗ್ರಿಗಳನ್ನು ಹಿಂದುಸ್ಥಾನದಲ್ಲಿಯೆ ಹುಟ್ಟಿಸಬೇಕು' ಎಂದು ಅಧಿಕಾರಿಗಳನ್ನು ಒಲಿಸಲು ಚೀನದ ಏಕಮೇವಾದ್ವಿತೀಯ ನಾಯಕನು ಇಲ್ಲಿಯ ವರೆಗೆ ಬಂದನು— ಎಂದು ತಿಳಿಯಲು ಅಡ್ಡಿ ಇಲ್ಲ. ಶಿಯಾಂಗರು ಹಿಂದುಸ್ಥಾನವನ್ನು ಬಿಡುವಷ್ಟರಲ್ಲಿಯೆ ಸಿಂಗಾಪುರವು ಶತ್ರುಗಳ ವಶವಾಗಿ, ಚೀನದ ಯೋಜನೆ ಹೆಚ್ಚು ಅಗತ್ಯವಾದಂತಾಗಿದೆ.

(೧೬-೩-೪೨)

ಬ್ರಿಟಿಶರು ಬೆಳೆಸಿದ ಬಿಕ್ಕಟ್ಟು

ಆದರೆ ಸಹಾಯಕ ರಾಷ್ಟ್ರವಾದ ಚೀನದ ಅಗತ್ಯದ ಈ ಬೇಡಿಕೆಯನ್ನು, ಹಿಂದುಸ್ಥಾನ ಸರಕಾರವು ಸುಲಭವಾಗಿ ಇಲ್ಲವೆ ಶೀಘ್ರವಾಗಿ ಒದಗಿಸಿ ಕೊಡುವುದೆಂದು ಹೇಳಲಾಗದು. ಇದಕ್ಕೆ ಇಂದಿನ ಯುದ್ಧದ ಕಾಲದಲ್ಲಿ ಕೂಡ ಬ್ರಿಟಿಶ ಸರಕಾರವು ಹಿಂದುಸ್ಥಾನದ ವಿಷಯದಲ್ಲಿ ತೋರಿಸುತ್ತಿದ್ದ ಸಾಮ್ರಾಜ್ಯ-ಧೋರಣೆ ಮೊದಲ ಕಾರಣವಾಗಿದೆ. ಹಿಂದುಸ್ಥಾನವು ಉತ್ಪಾದನಕೇಂದ್ರವಾಗಬೇಕೆಂಬ ವಿಚಾರಕ್ಕೆ ಈ ಧೋರಣೆಯಲ್ಲಿ ಸ್ಥಾನವೆ ಇಲ್ಲ. ಸಾಮ್ರಾಜ್ಯದ ಪ್ರಾಚ್ಯಪ್ರದೇಶಗಳ ಪರಿಸ್ಥಿತಿ ಕೂಡಿದಂದಿನಿಂದ ಇಂದಿನ ವರೆಗಿನ ಪರಿಸ್ಥಿತಿಯಿಂದ ಈ ಮಾತನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾಗಿದೆ. ಸಾಮ್ರಾಜ್ಯ ಧೋರಣೆಯಲ್ಲಿಯೆ ಇನ್ನೊಂದು ಕಾರಣವೂ ಅಡಕವಾಗಿದೆ. ಅದೆಂದರೆ ರಾಜಕೀಯ ಧೋರಣೆ. ಭಾರತ ಮಂತ್ರಿಗಳಾದ ಅಮೆರಿಯವರ ಮತ್ತು ಲಾರ್ಡ್ಸ್ ಸಭೆಯ ಚರ್ಚೆಯಲ್ಲಿ, ಸರಕಾರದ ಪರವಾಗಿ ಹೇಳಿದ ಅಭಿಪ್ರಾಯಗಳನ್ನು ನೋಡಿದರೆ, ಹಿಂದುಸ್ಥಾನವು ಸ್ವತಂತ್ರವಾಗಿ ಸಾಮ್ರಾಜ್ಯಕ್ಕೆ ಪೋಷಕವಾಗುವುದರ ವಿಷಯದಲ್ಲಿ ಅಧಿಕಾರಿಗಳು ಸಂಶಯವೃತ್ತಿಯನ್ನು ತಾಳಿದ್ದಾರೆಂದು ಹೇಳಬಹುದು. ಈ ಸಂಶಯವೃತ್ತಿ ಉಳಿವವರೆಗೆ ಭಾರತದ ರಾಜಕೀಯ ಬಿಕ್ಕಟ್ಟು ಬಿಡುವಂತಿಲ್ಲ; ಆ ಬಿಕ್ಕಟ್ಟು ಬಿಡದೆ ಹಿಂದುಸ್ಥಾನದ ಮುಖ್ಯ ರಾಜಕೀಯ ಪಕ್ಷಗಳು ಕೈನೀಡಿ ಯುದ್ಧಕಾರ್ಯದಲ್ಲಿ ಸಹಕಾರವನ್ನು ಮಾಡುವಂತಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ಹಿಂದುಸ್ಥಾನದಲ್ಲಿ ಶಕ್ಯವಾಗುವ ವರೆಗೆ ಯುದ್ಧ ಸಾಮಗ್ರಿಗಳ ಉತ್ಪಾದನ ಬೆಳೆಯುವುದು ಇಲ್ಲವೆ ಶೀಘ್ರದಲ್ಲಿಯೆ ಬೆಳೆಯಬಹುದು—ಎಂದು ಯಾರು ಅಭಿವಚನವನ್ನು ಕೊಡಬಲ್ಲರು?

(೧೪-೩-೪೨)

ಭೆಟ್ಟಿಯ ಗುಟ್ಟು

ಈ ದೃಷ್ಟಿಯಿಂದ ನೋಡಿದರೆ ಶಿಯಾಂಗ-ಕೈ-ಶೇಕರ ಆಗಮನದಿಂದ ಭಾರತದ ರಾಜಕೀಯ ಪರಿಸ್ಥಿತಿಯಲ್ಲಿ ಬದಲಾವಣೆಗಳಾಗಬಹುದೆಂದು ಕೆಲವರು ತಿಳಿದಿದ್ದರೆ ಅದು ತೀರ ತಪ್ಪಲ್ಲ. ಮೊದಲು ಎರಡು ಮುಖ್ಯವಾದ ಮಾತುಗಳನ್ನು ನಾವು ನೆನಪಿನಲ್ಲಿಟ್ಟುಕೊಂಡರೆ ಮೇಲಿನ ನಮ್ಮ ಅಭಿಪ್ರಾಯ ಸುಲಭವಾಗಿ ತಿಳಿಯುವುದು. (೧) ಭಾರತದಲ್ಲಿ ಎಲ್ಲ ರಾಜಕೀಯಪಕ್ಷಗಳು ಪ್ರಜಾಪ್ರಭುತ್ವದ ಮತ್ತು ಸ್ವಾತಂತ್ರ್ಯದ ತತ್ವಗಳಿಗಾಗಿ, ಅದರಂತೆಯೆ ಚೀನ ಮತ್ತು ರಶಿಯಾ ರಾಷ್ಟ್ರಗಳಿಗಾಗಿ ಮನಃಪೂರ್ವಕವಾದ ಸಹಾನುಭೂತಿಯನ್ನು ತೋರಿಸಿವೆ. (೨) ಹಿಂದುಸ್ಥಾನದಲ್ಲಿ ಯುದ್ಧ ಸಾಮಗ್ರಿಗಳ ಉತ್ಪಾದನೆಯು ಏರ್ಪಾಡಾದರೆ ಔದ್ಯೋಗಿಕ ದೃಷ್ಟಿಯಿಂದ ಅದು ಹಿಂದುಸ್ಥಾನಕ್ಕೆ ಲಾಭಕಾರಕವಾಗಬಹುದಾಗಿದೆ. ಮೊದಲಿನ ಮಾತಿಗಾಗಿ ಭಾರತದ ಎಲ್ಲ ರಾಜಕೀಯ ಪಕ್ಷಗಳೂ ಒಮ್ಮತವನ್ನು ತೋರಿಸಿವೆ. ಆದರೆ ಕೇವಲ ಗೊತ್ತುವಳಿಯ ಸಹಾನುಭೂತಿಯಿಂದ ಆಗತಕ್ಕದ್ದೇನು! ವಾಸ್ತವಿಕವಾದ ಸಹಾಯವನ್ನು ಮಾಡದಿದ್ದರೆ ಇಂದಿನ ಯುದ್ಧಪ್ರಸಂಗದಲ್ಲಿ ಯಾವ ಉಪಯೋಗವೂ ಇಲ್ಲ. ಇದಕ್ಕೆ ಶಿಯಾಂಗರು ಎಲ್ಲ ಪಕ್ಷಗಳ ಮುಂದಾಳುಗಳೊಡನೆ ಮಾತನಾಡಿದ್ದಾರೆ. ಬಹಳ ಮಾಡಿ ಚೀನಕ್ಕೆ ಎಲ್ಲ ರೀತಿಯಿಂದ ಸಾಮಗ್ರಿಗಳ ಸಹಾಯವನ್ನು ಮಾಡಲು ನಮ್ಮ ಮುಂದಾಳುಗಳನ್ನು ಒಪ್ಪಿಸಿದ್ದಾರೆ. ಆದರೆ ಹಿಂದುಸ್ಥಾನವೆ ಸ್ವತಂತ್ರವಿಲ್ಲದಾಗ ಇಂತಹ ಸಹಾಯವನ್ನು ಮಾಡುವುದು ಹೇಗೆ— ಎಂದು ನಮ್ಮ ಸಂಶಯ. ಅದಕ್ಕೆ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಯುದ್ಧ ಮುಗಿದಮೇಲೆ ಶಿಯಾಂಗರು ಸರ್ವಸ್ವವಾಗಿ ಸಹಾಯ ಮಾಡುವುದಾದರೆ, ಸದ್ಯಕ್ಕೆ

ಸಾಮಗ್ರಿಗಳ ಸಹಾಯಕ್ಕೆ ನಮ್ಮವರು ಒಪ್ಪಬಹುದಾಗಿದೆ. ಈ ಸಂವರ್ತನಗಳಲ್ಲಿ ಅಂತಹ ಏರ್ಪಾಡು ಆಗಿರಬಹುದು—ಎಂದು ನಮ್ಮ ಊಹೆ. ಯಾಕೆಂದರೆ, ಸಾಮಗ್ರಿಗಳ ಸಹಾಯಮಾಡುವಾಗ ಭಾರತಕ್ಕೆ ಆನುಷಂಗಿಕವಾಗಿ ಔದ್ಯೋಗಿಕ ಪ್ರಗತಿಗೆ ಪುಷ್ಟಿ ದೊರೆಯುವುದು. ಪಂಡಿತ ಜವಾಹರರ ಕನಸುಗಳಲ್ಲಿ ಔದ್ಯೋಗಿಕ ಪ್ರಗತಿ ಒಂದಾಗಿದೆ. ಅದರಂತೆಯೆ ರಾಷ್ಟ್ರಪತಿಗಳಾದ ಮೌಲಾನಾ ಆಝಾದರೂ 'ಅಹಿಂಸಾತತ್ತ್ವವು ಸದ್ಯದ ಸಂದರ್ಭದಲ್ಲಿ ಕಾಂಗ್ರೆಸಿಗೆ ಅಡ್ಡಬರುವುದಿಲ್ಲ' ಎಂಬುದನ್ನು ಸ್ಪಷ್ಟಮಾಡಿದ್ದಾರೆ. ಇವೆಲ್ಲ ಸಂಗತಿಗಳನ್ನು ಒಟ್ಟುಗೂಡಿಸಿ ದೂರದೃಷ್ಟಿಯಿಂದ ನೋಡಿದರೆ ಮಾರ್ಶಲ್ ಶಿಯಾಂಗ-ಕೈ-ಶೇಕರ ಆಗಮನವು ಭಾರತದ ರಾಜಕೀಯ ಪರಿಸ್ಥಿತಿಯ ಬದಲಾವಣೆಗೆ ನಿಮಿತ್ತವಾಗುವುದು ಖಂಡಿತ ಎಂದು ಹೇಳಬಹುದು.

(೨೦-೨-೪೨)

ಯುದ್ಧಮಂಡಳದ ಬದಲಾವಣೆ

ನಮ್ಮ 'ನೋಟ'ದ ಪ್ರಾರಂಭದಲ್ಲಿ ಸೂಚಿಸಿದ ಒಂದು ಮಾತಿನ ನಿರ್ಣಯ ಇಷ್ಟರಲ್ಲಿಯೆ ಆಗಿದೆ ಎಂಬುದನ್ನು ನಾವು ಅಭಿಮಾನದಿಂದಲೂ ಸಂತೋಷದಿಂದಲೂ ವಾಚಕರ ಲಕ್ಷ್ಯಕ್ಕೆ ತಂದುಕೊಡುತ್ತೇವೆ. ಅದೆಂದರೆ ಇಂಗ್ಲಂಡದ ಯುದ್ಧಮಂತ್ರಿಮಂಡಳದ ಬದಲಾವಣೆಗಳು. ಲಾರ್ಡ ಬೀವರಬ್ರುಕ್‌ರಿಗೆ ಬಿಡುಗಡೆ ದೊರೆಯಿತು. ಮಧ್ಯಪೂರ್ವದಲ್ಲಿ ಪ್ರತ್ಯಕ್ಷವಾಗಿ ದುಡಿದು ಬಂದ ಲಿಟಲ್‌ಟನ್ ಎಂಬವರನ್ನು ಸಾಮಗ್ರಿ ನಿರ್ಮಾಣ ಖಾತೆಗೆ ಮಂತ್ರಿಯನ್ನಾಗಿ ನಿಯಮಿಸಲಾಗಿದೆ. ಮುಖ್ಯವಾದ ಮಾತೆಂದರೆ ಸರ್ ಸ್ಟ್ರಾಫರ್ಡ ಕ್ರಿಪ್ಸ್‌ರನ್ನು ಯುದ್ಧಮಂತ್ರಿಮಂಡಳದಲ್ಲಿ ಸೇರಿಸಿದ್ದು. ಸರ್ ಸ್ಟ್ರಾಫರ್ಡರನ್ನು ಕಾಮನ್ಸ್ ಸಭೆಯ ನೇತೃಗಳನ್ನಾಗಿ ನಿಯಮಿಸಿದ್ದರಿಂದ ಇವರು ಎಲ್ಲರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆಂಬುದು ಸ್ಪಷ್ಟವಾಗಿದೆ. ಶಾಂತಿಸಾಗರದಲ್ಲಿ ಬ್ರಿಟಿಶರ ನೀತಿಯನ್ನು ಇವರು ಕೆಲವೇ ದಿವಸ ಮುಂಚಿತ ಸ್ಪಷ್ಟವಾಗಿ ಟೀಕಿಸಿದ್ದಾರೆ. ಹಿಂದುಸ್ಥಾನವನ್ನು ಸ್ವಾತಂತ್ರ್ಯದಲ್ಲಿರಿಸಿ ಅದರ ಸಂಪೂರ್ಣ ಸಹಾಯವನ್ನು ಕೂಡಲೆ ಪಡೆಯಬೇಕೆಂದೂ ಇವರು ಹೇಳಿದ್ದಾರೆ. ಸಿಂಗಾಪುರದ ಪತನ, ಶಿಯಾಂಗ-ಕೈ-ಶೇಕರು ಭಾರತೀಯ ಮುಂದಾಳುಗಳೊಡನೆ ನಡೆಸಿದ ಚರ್ಚೆ, ಸರ್ ಸ್ಟ್ರಾಫರ್ಡ ಕ್ರಿಪ್ಸರು ಯುದ್ಧಮಂತ್ರಿಮಂಡಳದಲ್ಲಿ ಸೇರಿದ್ದು—ಇವೆಲ್ಲ ಒಂದರ ಹಿಂದೊಂದು ಬಂದುದರಿಂದ, ಭಾರತದ ರಾಜಕೀಯ ಬಿಕ್ಕಟ್ಟು ತೀವ್ರದಲ್ಲಿಯೆ ಸಡಿಲಾಗುವುದೆಂದು ಧೈರ್ಯದಿಂದ ಹೇಳಬಹುದು.

(೨೧-೨-೪೨)

*   *   *

ಮಹಾರಾಷ್ಟ್ರದ ಮುನ್ನಡೆ

ಮಹಾರಾಷ್ಟ್ರಕ್ಕೆ ಬೇರೊಂದು ವಿದ್ಯಾಪೀಠವನ್ನು ಸ್ಥಾಪಿಸುವುದರ ವಿಚಾರವನ್ನು ಮಾಡಲು ಮುಂಬಯಿ ಸರಕಾರದವರು ಬ್ಯಾರಿಸ್ಟರ್ ಜಯಕರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಿಯಮಿಸಿದ್ದಾರಷ್ಟೆ. ಕಳೆದ ೫೦-೬೦ ವರ್ಷಗಳಿಂದ ವಿದ್ಯಾಸಂಸ್ಥೆಗಳನ್ನು ಯಶಸ್ವಿಯಾಗಿ ನಡೆಯಿಸುತ್ತ ಬಂದ ಮಹಾರಾಷ್ಟ್ರಕ್ಕೆ ಪ್ರತ್ಯೇಕ ವಿದ್ಯಾಪೀಠವು ತಕ್ಕುದೆಂಬುದರಲ್ಲಿ ಸಂದೇಹವಿಲ್ಲ. ಇಷ್ಟು ಸ್ವಲ್ಪಾವಧಿಯಲ್ಲಿಯೆ ಅದಾಗಬಹುದೆಂಬುದಕ್ಕೆ ನಾವು ಮಹಾರಾಷ್ಟ್ರದ ಮುಂದಾಳುಗಳನ್ನು ಅಭಿನಂದಿಸುತ್ತೇವೆ. ೧೯೦೩ರಿಂದ ಈ ಮುಂದಾಳುಗಳು ಒಮ್ಮತದಿಂದ ಮಹಾರಾಷ್ಟ್ರ ವಿದ್ಯಾಪೀಠ (University)ದ ವಿಚಾರವನ್ನು ನಡೆಯಿಸಿದ್ದಾರೆ. ಅವರ ಆ ಒಮ್ಮತವೂ, ಸತತಪ್ರಯತ್ನಬುದ್ಧಿಯೂ ಕನ್ನಡಿಗರಿಗೆ (ಮುಂದಾಳುಗಳಿಗಲ್ಲ) ಅನುಕರಣೀಯವಾಗಿವೆ. ಇನ್ನೊಂದು ದೃಷ್ಟಿಯಿಂದಲೂ ಕನ್ನಡಿಗರು ಈ ಸಮಿತಿಯ ಕಡೆಗೆ ಲಕ್ಷ್ಯಪೂರ್ವಕವಾಗಿ ನೋಡಬೇಕಾಗಿದೆ. ಶಿಕ್ಷಣದ ಮಾಧ್ಯಮಿಕವು ಮರಾಠಿ ಭಾಷೆಯಾಗಿ, ವಿದ್ಯಾಪೀಠವು ಹೊರಗಿನ ಶಿಕ್ಷಣಸಂಸ್ಥೆಗಳಿಗೆ ಮಾನ್ಯತೆ (affiliation) ಕೊಡಬಲ್ಲುದಾದಲ್ಲಿ, ಕರ್ನಾಟಕಕ್ಕೆ (ವಿಶೇಷವಾಗಿ ಸಂಸ್ಥಾನಗಳೂ, 'ಬೆಳಗಾಂವಿ' ಗಳೂ ಇದ್ದುದರಿಂದ) ಹಾನಿಯಾಗುವ ಧಕ್ಕೆ ತಗಲುವ ಭೀತಿ ಇದೆ. ವಿದ್ಯಾಪೀಠವು ಸ್ಥಾನಿಕವಾದರೆ, ಪುಣೆಯಲ್ಲಿದ್ದ ಅಖಿಲಪ್ರಾಂತಿಕ ಶಿಕ್ಷಣ ಸಂಸ್ಥೆಗಳಾದ ಒಕ್ಕಲುತನದ ಕಾಲೇಜು–ಎಂಜಿನಿಯರಿಂಗ್ ಕಾಲೇಜುಗಳ ತೊಡಕೂ ಉಂಟಾಗಬಹುದು. ಇವೆರಡು ಮಾತುಗಳ ಬಗ್ಗೆ ನಾವು ಜಾಗರೂಕತೆಯನ್ನು ವಹಿಸಬೇಕಾಗಿದೆ. ಇನ್ನು ಸರಕಾರದವರೆ ಸಮಿತಿಯನ್ನು ನಿಯಮಿಸಿದ್ದರಿಂದ ಭಾಷಾನ್ವಯ ವಿದ್ಯಾಪೀಠಗಳು ಸರಕಾರಕ್ಕೆ ಮಾನ್ಯವಿವೆ ಎಂದೂ, ಆ ಕಾರಣಕ್ಕಾಗಿ ಕರ್ನಾಟಕವಿದ್ಯಾಪೀಠದ ಯೋಗ್ಯತೆಯನ್ನು ದೊರಕಿಸಿಕೊಳ್ಳಲು ಕನ್ನಡಿಗರಿಗೆ ಇದೀಗ ಅನುಕೂಲ ಸಮಯವೆಂದೂ ಹೇಳಬಹುದಲ್ಲವೆ ?

(೨೩-೨-೪೨)

ತಾರಿನ ಪತ್ತೆ ಫೋನು ನಂ.
DHOOTBIJE 23698

ಬಲ್ಬು, ಸ್ವಿಚ್, ದೀಪ ಮುಂತಾದ ಎಲ್ಲ ತರದ ಇಲೆಕ್ಟ್ರಿಕ್ ಸಾಮಾನುಗಳೂ ಕಾಸ್ಟಿಕ್ ಸೋಡಾ ಇತ್ಯಾದಿ ರಾಸಾಯನಿಕ ದ್ರವ್ಯಗಳೂ ನಮ್ಮಲ್ಲಿ ಯೋಗ್ಯ ದರದಲ್ಲಿ ಸಿಕ್ಕುತ್ತವೆ. . . . .

. ವಿವರಗಳಿಗಾಗಿ ಬರೆದುಕೊಳ್ಳಿರಿ. .

ಭಗವಾನದಾಸ ಧೂತ ಮತ್ತು ಕಂಪನಿ

ಭರೂಚಾ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,

ಮುಂಬಯಿ ೨.

ಪಕ್ಷವಲ್ಲ, ತತ್ತ್ವ

ಕಳೆದ ತಿಂಗಳು ಶ್ರೀ. ಬಿ. ಜಿ. ಖೇರರು ಬೆಳಗಾಂವಿಗೆ ಬಂದಾಗ ಒಂದು ಗೊಂದಲವೆದ್ದಿತಷ್ಟೆ. ಆ ವಿಷಯವಾಗಿ ಧಾರವಾಡ ನಾಗರಿಕರ ಸಭೆಯು, ಇಡಿಯ ಪ್ರಾಂತದ ದೃಷ್ಟಿಯಿಂದ ಮಹತ್ತ್ವದ್ದಾದ ಗೊತ್ತುವಳಿಯೊಂದನ್ನು ಸ್ವೀಕರಿಸಿದೆ. ಈ ಗೊತ್ತುವಳಿಗೆ ಸಾರ್ವಜನಿಕ ಸಂಸ್ಥೆಗಳ ಮತ್ತು ಕನ್ನಡೇತರ ಮುಂದಾಳುಗಳ ಬೆಂಬಲ ಪೂರ್ತಿಯಾಗಿ ದೊರೆಯುವಂತಿದೆ. ಇವೆರಡೂ ಕಾರಣಗಳಿಗಾಗಿ ಆ ಗೊತ್ತುವಳಿಗೆ ನಾವು ಹೆಚ್ಚಿನ ಪ್ರಸಿದ್ಧಿಯನ್ನು ಕೊಡುತ್ತಲಿದ್ದೇವೆ. ಬೆಳಗಾಂವಿಯಲ್ಲಿ ನಡೆದುದೇನು ಎಂಬುದರ ಬಗ್ಗೆ ಧಾರವಾಡದವರು ಒಂದೇ ಪಕ್ಷವನ್ನು ಕೇಳಿಕೊಂಡಿದ್ದಾರೆಂದು ಯಾರೂ ತಪ್ಪು ತಿಳಿದುಕೊಳ್ಳಬಾರದು. ಯಾಕೆಂದರೆ ಆ ಗೊತ್ತುವಳಿ ವ್ಯಕ್ತಿಗಳನ್ನಾಗಲಿ, ತಿಂದ ಬೈಗಳ ಮತ್ತು ಪೆಟ್ಟುಗಳ ಸಂಖ್ಯೆಯನ್ನಾಗಲಿ ಕುರಿತುದಲ್ಲ. ಶ್ರೀ. ಖೇರರು ಮರಾಟಿಯಲ್ಲಿ ಮಾತನಾಡಿದರೆಂಬುದನ್ನು ಎಲ್ಲ ಪಕ್ಷದವರೂ ಅರಿತಿರುವರಲ್ಲವೆ? ಆದರಲ್ಲಿ ಅಡಕವಾದ ತತ್ತ್ವವನ್ನೆ ಉದ್ದೇಶಿಸಿ, ಧಾರವಾಡವು ಕಾಲಕ್ಕೆ ಸರಿಯಾಗಿ ಮುಂದಾಗುವ ಹೊಣೆಯನ್ನು ಹೊತ್ತಿದೆ.

ಸಾಹಸಿಯಾದ ಕನ್ನಡ ಸಂಗೀತಗಾರ

ಕುಮಾರ ಭೀಮಸೇನ ಜೋಶಿ, ಗದುಗು



ಗದುಗಿನ ಮ್ಯುನಸಿಪಲ್ ಹೈಸ್ಕೂಲಿನಲ್ಲಿ ಹೆಸರು ಪಡೆದ ಉಪಾಧ್ಯಾಯರೂ, ಕನ್ನಡ ಸಾಹಿತ್ಯಕರ ಬಳಗಕ್ಕೆ ಸೇರಿದವರೂ ಆದ ಶ್ರೀಮಾನ್ ಗುರುರಾಜ ಭೀ. ಜೋಶಿಯವರ ಹಿರಿಯ ಮಗನೀತ.

ಹುಟ್ಟಿದುದು ೧೯೨೨ ರಲ್ಲಿ. ಚಿಕ್ಕಂದಿನಿಂದಲೂ ಸಂಗೀತದ ಮೇಲೆ ಬಹಳ ಪ್ರೇಮ. ಇಂಗ್ಲೀಷ್ ೨ ನೆಯ ಇಯತ್ತೆ ಕಲಿಯುವಾಗಲೇ ಈತನ ಸಂಗೀತ ಶಿಕ್ಷಣವು ಪ್ರಾರಂಭವಾಯಿತು. ಗ್ರಾಮೋಫೋನ್ ಪ್ಲೇಟುಗಳನ್ನು ಚೆನ್ನಾಗಿ ಕೇಳಿ, ಅವುಗಳಂತೆಯೆ ಹಾಡಿ ತೋರಿಸುತ್ತಿದ್ದನು. ಇಂಗ್ಲೀಷ್ ೫ ನೆಯ ಇಯತ್ತೆಯಲ್ಲಿದ್ದಾಗ, ಧಾರವಾಡದಲ್ಲಿ ಕರ್ನಾಟಕ ಹಾಯಸ್ಕೂಲಿನಲ್ಲಿ ಅಭ್ಯಾಸ ಮಾಡುತ್ತ, ಶ್ರೀಮಾನ್ ಹಿತ್ತಿ ವಕೀಲರ ಹತ್ತಿರ ಸ್ವಲ್ಪ ಸಂಗೀತದ ಅಭ್ಯಾಸ ಮಾಡಿದನು. ಆಮೇಲೆ ೧೯೩೩ ನೆಯ ಇಸ್ವಿಯಲ್ಲಿ ಸಂಗೀತ ಕಲಿಯಬೇಕೆಂದು ಮನೆಬಿಟ್ಟು, ಗ್ವಾಲೇರಿ ಕಲಕತ್ತಾ ಮೊದಲಾದ ಉತ್ತರ ಹಿಂದುಸ್ಥಾನದ ಪಟ್ಟಣಗಳಿಗೆ ಹೋಗಿ, ಕೊನೆಗೆ ಜಾಲಂದರದ ಸಂಗೀತ ಕಾಲೇಜಿನಲ್ಲಿ ಒಂದು ವರ್ಷ ಅಭ್ಯಾಸ ಮಾಡಿದನು. ಬಳಿಕ ಶ್ರೀಯುತ ರಾಮರಾವ್ ಕುಂದಗೋಳ (ಸವಾಯಿ ಗಂಧರ್ವ) ಅವರ ಹತ್ತಿರ ೪ ವರ್ಷ ಇದ್ದು ಸಶಾಸ್ತ್ರವಾಗಿ ಸಂಗೀತದ ಪರಿಚಯ ಮಾಡಿಕೊಂಡನು. ೧೯೪೦ ನೆಯ ಇಸ್ವಿಯಲ್ಲಿ ಶಿವಮೊಗ್ಗ, ಉಡುಪಿ, ಮಂಗಳೂರು, ಮೈಸೂರು, ಮದ್ರಾಸುಗಳಲ್ಲಿ ಸ್ವತಂತ್ರ ಸಂಗೀತ ಕಚೇರಿಗಳನ್ನು ಮಾಡಿ ಒಳ್ಳೆಯ ಹೆಸರನ್ನು ಪಡೆದನು. ೧೯೪೧ ನೆಯ ಇಸ್ವಿ ನವ್ಹಂಬರಿನಲ್ಲಿ ಅಲಹಾಬಾದದಲ್ಲಿ ಆದ ಆಲ್ ಇಂಡಿಯಾ ಮ್ಯೂಜಿಕ್ ಕಾನಫರನ್ಸಿನಲ್ಲಿ ಅವಕಾಶ ದೊರೆತುದರಿಂದ, ತನ್ನ ಇಂಪಾದ ದನಿಯಿಂದಲೂ ಶಾಸ್ತ್ರೀಯ ಜ್ಞಾನದಿಂದಲೂ ಜನರ ಮೆಚ್ಚುಗೆಯನ್ನೂ ವಿದ್ವಜ್ಜನರ ಮನ್ನಣೆಯನ್ನೂ ಪಡೆದನು. ಆಮೇಲೆ ಡಿಸೆಂಬರ್ ತಿಂಗಳಿಂದ ಲಖನೌ ರೇಡಿಯೋದಿಂದ ಇವನ ಕಾರ್ಯಕ್ರಮಗಳು ನಡೆದಿರುತ್ತವೆ. ಒಳ್ಳೆ ಸಾಹಸಿಯೂ ಕಲಾಕೋವಿದನೂ ಇದು ಕನ್ನಡ ನಾಡಿನ ಹೆಸರನ್ನು ಮುಂದೆತರಬಲ್ಲವನಾಗಿದ್ದಾನೆ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ **ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !**

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :— ಎನ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

ಶ್ರೀರಂಗರ 'ಗೀತಾಗಾಂಭೀರ್ಯ'

ಎರಡು ಅಭಿಪ್ರಾಯಗಳು

" ಇದು ಗೀತೆಯ ಬಗ್ಗೆ, ಕೇವಲ ಲೌಕಿಕದೃಷ್ಟಿಯಿಂದ ಬರೆಯಲ್ಪಟ್ಟ, ಸ್ವತಂತ್ರ ವಿಚಾರದ ಗ್ರಂಥ....ಶ್ರೀರಂಗರು ಚರ್ಚಿಸಿದ ಕ್ರಮ ಹೊಸದು, ರೀತಿ ಆಧುನಿಕ.... ಶ್ರೀರಂಗರು ಅರ್ಜುನನ ಮನಸ್ಸನ್ನು ಹೊಕ್ಕು, ಐದು ಮುಖ್ಯ ಸಂದೇಹಗಳನ್ನು ಹಿಡಿದು ತೆಗೆದು, ಅವು ಹೇಗೆ ಮೋಹಕವಾಗಿವೆಯೆಂಬುದನ್ನು ತರ್ಕಬಲದಿಂದ ತೋರಿಸಿರುವರು. ಇದು ಈ ಗ್ರಂಥದ ವಿಶೇಷ. ತರ್ಕದಲ್ಲಿ ತಾಂಡವವಾಡುತ್ತ ಶ್ರೀರಂಗರು ಕೊನೆಗೆ ತಲುಪಿದ್ದು ಶ್ರದ್ಧೆಗೇನೇ.. ಹಿಂದಿನವರದನ್ನು ಓದಲೇಬಾರದೆಂದು ಕೆಲವರ ಪ್ರತಿಜ್ಞೆ. ಇಂದಿನವರಲ್ಲಿ ಏನೂ ಹುರುಳಿಲ್ಲ ಎಂದು ಹಿಂದಿನವರ ತಿರಸ್ಕಾರ. ನಮಗೆ ಇಬ್ಬರೂ ಬೇಕು. ಶ್ರೀರಂಗರು ಬರೆದ ಈ ಗ್ರಂಥದಿಂದ ನಮ್ಮ ಸಂಸ್ಕೃತಿಗೆ ಪುಷ್ಟಿಯು ದೊರೆತಿದೆ, ಲೋಕಕ್ಕೆ ಉಪಕಾರವೇ ಆಗಿದೆ.. "

—ಆಲೂರ ವೆಂಕಟರಾಯರು

Prof. Jagirdar....takes us elaborately into the situation of Arjuna....The Gita itself is taken as one whole containing a clear solution of a specific problem.... Prof. Jagirdar chooses to understand it in terms psychological and realistic ? The thesis itself is challenging........ This is altogether a lively book and adds to our understanding of the Gita.

V. Sitaramiah

('ಹಿಂದೂ' ಪತ್ರಿಕೆಯಲ್ಲಿ)

ಸಾದಾ ಪ್ರತಿಗೆ ಮೂರು ರೂಪಾಯಿ ★ ಕ್ಯಾಲಿಕೊ ಪ್ರತಿಗೆ ಮೂರುವರೆ ರೂಪಾಯಿ

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆಯಿರಿ !

ಮಗುವಿನ ಮೃದು ಚರ್ಮಕ್ಕೆ

★

ಬೇಕಾದುದು!

★

ಶುದ್ಧವಾದ ಮತ್ತು ಮೃದುವಾದ ಒಂದು ಸಾಬೂನು. ಮತ್ತು ಆ ಸಾಬೂನು ಪರಿಮಳಯುಕ್ತವಾಗಿಯೂ ಔಷಧಯುಕ್ತವಾಗಿಯೂ ಇರಬೇಕು. ಮೈಸೂರು ಗಂಧದ ಸಾಬೂನಿನಲ್ಲಿ ಇವೆರಡು ಗುಣಗಳೂ ಕೂಡಿವೆ. ಈ ಸಾಬೂನು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛ ಮಾಡುವುದಲ್ಲದೆ, ಕಾಂತಿಯನ್ನುಂಟು ಮಾಡುತ್ತದೆ.

★

ಮೈಸೂರು ಸ್ಯಾಂಡಲ್ ಸೋಪು



ಗವರ್ನ್ಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

Printed by V. Y. Jathar at the Karnatak Printing Works, Dharwar, Edited and Published by M. G. Patil at Jayanti Office, Dharwar

ಏಪ್ರಿಲ್ ೧೯೫೨

ಕೆಲವು ಲೇಖನಗಳು

ನೀನಾರ ಕೊಲ್ಲದಿರ್ (ಕಥೆ)

ನಾನೂ ಕವಿಯಾಗಿದ್ದೆ (ಹರಟೆ)

ಮಾತಾ ಮೊಂಟೆಸೋರಿ (ಪರಿಚಯ)

ನರ್ತಕಿ (ಸಣ್ಣ ಕತೆ)

ಜಯಂತಿ

ಬೆಲೆ ನಾಲ್ಕಾಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ .... ವ್ಹಿ. ಪಿ. ಯಿಂದ ೩-೫-೦ .... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮರು ಪಾಟೀಲ ಮಾಧವರಾಯರು

೪ನೆಯ ವರ್ಷ	ಎಪ್ರಿಲ್ ೧೯೪೨	೧೧ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಸಾಮಾಜಿಕನ ಸಂವಚನ (ವಿಚಾರತರಂಗ)	' ಸಾಮಾಜಿಕ '	೪೮೫
ಸಂಪಾದಕೀಯ	ಸಂಪಾದಕರು	೪೮೬
ಮಂಗನ ಮಲ್ಲಿನಾಥತನ	' ಮಲ್ಲಿನಾಥ '	೪೮೭
ಕಳೆದ ಮಹಾಯುದ್ಧದಲ್ಲಿ ಭಾರತೀಯರ ಸಹಾಯ (ರಾಜಕೀಯ)	ಶ್ರೀ. ವಾಳ್ವೇಕರ್ ಗುರುರಾಯರು, ಎಲ್‌ಎಲ್.ಬಿ.	೪೮೯
ನೀನಾರ ಕೊಲ್ಲದಿರು ! (ಅನುವಾದಿತ ಕಥೆ)	ಶ್ರೀ. ಕೋ. ರಾ. ಕೃಷ್ಣಮೂರ್ತಿ ಬಿ. ಎ.	೪೯೩
ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವೆ ? (ಲೇಖಾಂಕ ೨)	ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ	೪೯೬
ಬೀಸು ಬಿರುಗಾಳಿ ! (ಕವನ)	ಶ್ರೀ. ಬಿ. ಎಚ್. ಶ್ರೀಧರ, ಬಿ.ಎ. (ಆನರ್ಸ್)	೫೦೦
ನಾನೂ ಕವಿಯಾಗಿದ್ದೆ ! (ಬರಿ ಹರಟೆ)	ಶ್ರೀ. ಕ. ರಾಧಾಕೃಷ್ಣನ್, ಬನಾರಸ	೫೦೧
ಮಾತಾ ಮೊಂಟೆಸೊರಿ (ಸಾನ್ನಿಧ್ಯಪರಿಚಯ)	ಶ್ರೀ. ಹ. ಮ. ಬಬಲೇಶ್ವರ ಮೊಂಟ್. ಡಿಪ್.	೫೦೪
ಹೆಣ್ಣುಬಾಳು (ಸಣ್ಣಕಥೆ)	ಶ್ರೀ. ಸಿ. ಬಿ. ಬೆಲ್ಲದ, ಇಟಗಿ	೫೦೮
ಹಾಳಿನಿಂದ ಬಾಳು (ವಿಚಾರ ಪ್ರ. ಪ್ರಬಂಧ)	ಪ್ರೊ|. ಎಸ್. ಎಂ. ಕುಲಕರ್ಣಿ, ಎಂ. ಎ.	೫೧೪
ನಮ್ಮೂರ ಮ್ಯುನಿಸಿಪಾಲಿಟಿ (ವಿನೋದಲೇಖನ)	' ಶ್ರೀರಂಗ '	೫೧೬
ಸಿಡುಬು ಅಥವಾ ಮೈಲಿ (ಸ್ವಾಸ್ಥ್ಯವಿಚಾರ)	ಡಾ. ಎಚ್. ಪಿ. ಕುಲಕರ್ಣಿ, ಎಂ. ಬಿ. ಬಿ. ಎಸ್.	೫೧೯
ಕನ್ನಡ ಸೈನಿಕ (ಜಯಂತಿಯ ಹೊಸವಿಭಾಗ)	ಸಂ. ಕ. ಸೈ.	೫೨೩
ಮನೆಯಲ್ಲಿಯ ಹುಲಿಗೆ ಕಲಿಯುರಿ (ಪತ್ತೆಚಣ್ಣ)	ಶ್ರೀ. ಹಳಪೇಟೆ ಚಿಂತಾಮಣಿರಾಯರು ಟಿ.ಸಿ.ಡಿ.	೫೨೬
ಸಾದರಸ್ವೀಕಾರ	.. ..	೫೨೭
ಪುಸ್ತಕ ವಿಮರ್ಶೆ	' ಸೆರಂಗ '	೫೨೮
ನಗೀಗೆ ನೇವಿದ್ಯೆ	' ಸಕಲೀ ನಾರಾಯಣಾಚಾರ್ರು '	೫೨೯
ನಾಲ್ಕೂ ನಿಟ್ಟಿನ ನೋಟ	' ನಿರೀಕ್ಷಕರು '	೫೩೦

ಜೂನ್ ೧೯೪೨ ರಿಂದ ಜಯಂತಿಯ ೫ನೆಯ ವರ್ಷ ಪ್ರಾರಂಭವಾಗುವುದು. ವರ್ಷಾರಂಭದಿಂದ ಚಂದಾದಾರರಿದ್ದ ಮಹನೀಯರೆಲ್ಲರೂ ನಮ್ಮ ಪತ್ರದ ದಾರಿಯನ್ನು ನಿರೀಕ್ಷಿಸದೆ ದಯೆಯಿಟ್ಟು ಬೇಗನೆ ತಮ್ಮ ಚಂದಾಹಣ ಕಳುಹಬೇಕು.

ಜಯಂತಿ

ಸಂಪುಟ ೪ | ೧ನೆಯ ಎಪ್ರಿಲ್ ೧೯೪೨ | ಸಂಚಿಕೆ ೧೧

ಸಾಮಾಜಿಕನ ಸಂವಚನಗಳು

★

‘ದೈವ’ ‘ಪ್ರಾರಬ್ಧ’ ಎಂದು ಕನವರಿಸುವ ದೊಡ್ಡಣ್ಣಗಳಿರಾ, ಪೌರುಷದ ಕೊನೆಯ ಪಾವಟಿಗೆಯನೇರಿ ನಿಂತಾಗಲೂ ಗುರಿಯನ್ನು ತಲುಪುವುದಾಗದಿದ್ದಲ್ಲಿ, ಕೂಗಿರಿ ಅಂದು ದೈವದ ಹೆಸರನೆತ್ತಿ; ಕನವರಿಸಿರಿ ಅಂದು ಪ್ರಾರಬ್ಧದ ಹುಯಿಲನ್ನೆತ್ತಿ! ಪೌರುಷದ ಪಾವಟಿಗೆಗಳನೇರಲು ಹೆದರಿ ಬೆದರಿ, ನಿಂತಲ್ಲಿಯೆ ನಿಂತು ಹಣೆಹಣೆ ಹೊಡೆದುಕೊಳ್ಳುವ ಹೇಡಿಗಳ ಬಳಗವ ಕಂಡು, ಹೀಗಳೆದು ನಗುವನಯ್ಯಾ, ನಮ್ಮ ಕಾಲರಾಯ!

* * *

ಬಾಳಿನಲ್ಲಿಯ ಏಳು-ಬೀಳುಗಳಿಗೆ ಕಾರಣ ನಮ್ಮ ನಮ್ಮ ಒಪ್ಪು-ತಪ್ಪುಗಳಲ್ಲದೆ ‘ದೈವ, ಪ್ರಾರಬ್ಧ’ಗಳಲ್ಲ ಕಾಣೆ ಭೋ! ನಾಡು-ನಾಡುಗಳ ಬೀಡು-ಬೀಡುಗಳ ಇತಿಹಾಸವ ನೋಡಿದರೆ ಕಂಡುಬರುವುದು ಇದೇ ಮಾತು ಕೇಳಿ ಭೋ! ಜನತೆಯಲಿ ಪೌರುಷದ ಪ್ರೇಮ ಎಚ್ಚತ್ತಾಗ, ನಾಡುಗಳು ಮುಗಿಲ ಮುಟ್ಟಕ್ಕೆ ಎದ್ದು ನಿಂತಿರುವುವು; ಪ್ರಾರಬ್ಧದ ರೋಗ ಹೆಚ್ಚಾದಾಗ ಅವೇ ನಾಡುಗಳು ಪಾತಾಳದ ಹಳ್ಳದಲಿ ಮುಗ್ಗರಿಸಿ ಬಿದ್ದಿರುವುವು. ಅದು ಕಾರಣವೆ ‘ಪೌರುಷವ ನಂಬುವುದೇ ಒಪ್ಪು, ಪ್ರಾರಬ್ಧವ ಮೊರೆಹೊಗುವುದೇ ತಪ್ಪು’ ಎಂಬ ನೀತಿಯ ಪಾಠವನು ನಿರಂತರವೂ ಕಲಿಸುತಿರುವ ನಮ್ಮ ಕಾಲರಾಯ!

* * *

ತಿಳಿಯದ ಭವಿಷ್ಯವನು ತಿಳಿದುಕೊಳ್ಳಲು ಬರಿದೆ ತೊಳಲಿ ಬಳಲದಿರು ಅಯ್ಯಾ! ತಿಳಿದಿರುವ ಭೂತಕಾಲದ ಅನುಭವದ ಕತೆಗಳನೆ ಹಿಂಜಿ—ಹಿಗ್ಗಲಿಸಿ—ನೋಡಿ, ನಿನ್ನ ತಿಳಿವಿನ ಎಲ್ಲೆಯನು ಬೆಳೆಯಿಸಿಕೊಳು ಕಾಣಯ್ಯಾ! ಕಾಣದ ಭವಿಷ್ಯವನು ನಂಬಿ ಕುರುಡನಂತೆ ಮುಂದುವರಿವುದಕಿಂತ, ಕಂಡಿರುವ ಅನುಭವದ ಇತಿಹಾಸವನರಿತು ಕಂದೆರೆದು ಮುಂದುವರಿಯುತಲಿದ್ದರೆ ಬಾಳ ದಾರಿ ಸುಗಮವೆನಿಸುವುದು ಕೇಳಯ್ಯ! ಅಯ್ಯಾ, ಹಿರಿಯರಲಿ ಹಿರಿಯನಾದ ಹಳೆಯರಲಿ ಹಳೆಯನಾದ ಕಾಲರಾಯ ಕಂಡುಂಡ ಮಾತಿದು ಕಾಣಯ್ಯಾ!

* * *

ಮೂಸಿಯಲಿ ಕಾಯ್ದು ರಸವಾಗಿ, ಎರಕ ಹೊಯಿಸಿಕೊಂಡು ಗಟ್ಟಿಯಾಗಿ, ಸುತ್ತಿಗೆಯೇಟುಗಳನು ತಿಂದು ತಿಂದು, ಮಿಸುನಿ ಕುಸುರಿನೊಡವೆಯಾಗಿ ಪರಿಣಮಿಸುವುದನರಿಯೆಯಾ ಅಣ್ಣಾ! ದೈವವಾದದ ನಿರಾಶೆಯ ಕನಸುಗಳನು ಕಾಣುತ್ತ, ಕಲ್ಲಿಗಿಂತ ಕಲ್ಲಾಗಿ ಬಿದ್ದಲಿಯೆ ಬಿದ್ದು ಬಿಟ್ಟಿದ್ದರೆ ಬಂಗಾರಕ್ಕೆ ಬರುವ ಬೆಲೆಯೇನಣ್ಣಾ! ವಿವಿಧ ಪ್ರಯೋಗದಲಿ ಜೀವನವನು ಹುಡಿಮಾಡು, ರಸಮಾಡು, ಗಟ್ಟಿಯನೆಗೈ! ಪೆಟ್ಟುಗಳ ತಿಂದು ತಿಂದು ಕುಸುರಿನಾಕಾರ ತಳೆ! ಅಣ್ಣಾ, ಪ್ರಯೋಗಕಾಲದಲ್ಲಿಯ ಪೆಟ್ಟುಗಳನು ತಿನ್ನಲು ಬೆದರಿ ಬೆದರಿ, ಪ್ರಾರಬ್ಧದ ಹೆಸರಿನಿಂದ ಪಾಂಚಜನ್ಯ ಪುಟಿಸುವ ಪುರುಷಕೀಟಗಳ ಕಂಡು ಪೆಟ್ಟಿಕ್ಕಿ ಮೆಟ್ಟುವ ನಮ್ಮ ಕಾಲರಾಯ!

ಸಂಪಾದಕೀಯ

ವಿಶ್ವವಿದ್ಯಾನಿಲಯದ ಸಮಸ್ಯೆ

ಸದ್ಯದ ಮುಂಬಯಿ ವಿಶ್ವವಿದ್ಯಾನಿಲಯವು ನಾಲ್ಕು ಬೇರೆ ಬೇರೆ ಭಾಷೆಗಳನ್ನಾಡುವ ಪ್ರದೇಶಗಳನ್ನು ಒಳಗೊಂಡುದಾಗಿದೆ. ಇವುಗಳ ಪೈಕಿ ಸಿಂಧಪ್ರದೇಶವು ರಾಜಕೀಯ ದೃಷ್ಟಿಯಿಂದ ಬೇರೆ ಪ್ರಾಂತವಾದುದರಿಂದ, ಬೇಗನೆ ತನ್ನದೊಂದು ಸ್ವತಂತ್ರ ವಿ. ವಿ. ನಿಲಯವನ್ನು ಸ್ಥಾಪಿಸಿಕೊಳ್ಳುವ ವಿಚಾರವನ್ನು ಈಗಾಗಲೆ ನಡೆಯಿಸಿದೆ; ಅದು ಆಗಿಯೆ ಆಗುವುದು. ಮಹಾರಾಷ್ಟ್ರ ಪ್ರಾಂತದವರು ತಮ್ಮದೇ ಆದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂಬ ಹವಣಿಕೆಯಲ್ಲಿ ಮೊದಲಿನಿಂದಲೂ ಇರುವರು; ಕಾಂಗ್ರೆಸ್ ಮಂತ್ರಿಮಂಡಲವು ಅಧಿಕಾರದಲ್ಲಿ ಇರುವಾಗ ಅವರ ಹವಣಿಕೆಗೆ ಸಾಕಷ್ಟು ಪರಿಪೋಷಣೆ ದೊರೆಯಿತು. ಸದ್ಯದ ಮುಂಬಯಿ ಸರಕಾರವೂ ಮಹಾರಾಷ್ಟ್ರದ ಬೇಡಿಕೆಯ ಆವಶ್ಯಕತೆಯನ್ನು ಅನುಲಕ್ಷಿಸಿ ಅದಕ್ಕಾಗಿ ವಿಚಾರಣಾ ಸಮಿತಿಯೊಂದನ್ನು ನಿಯಮಿಸಿದೆ. ವಿಶ್ವವಿದ್ಯಾನಿಲಯಕ್ಕೆ ಬೇಕಾಗುವ ಅನುಕೂಲತೆಗಳೆಲ್ಲ ಈಗಾಗಲೆ ಮಹಾರಾಷ್ಟ್ರದಲ್ಲಿ ಇದ್ದೇ ಇವೆ; ಅಲ್ಲದೆ ಮಹಾರಾಷ್ಟ್ರೀಯರ ಜಾಗೃತ ಪ್ರಾಂತಾಭಿಮಾನವು, ಎಲ್ಲ ಪಕ್ಷೋಪಪಕ್ಷಗಳ ನಾಯಕರನ್ನೂ ವಿ. ವಿ. ನಿಲಯದ ವಿಚಾರದಲ್ಲಿ ಒಂದೆ ಕಾರ್ಯಕ್ಷೇತ್ರದ ಮೇಲೆ ತಂದು ನಿಲ್ಲಿಸಿ, ಕಾರ್ಯವನ್ನು ಸಾಧಿಸಿಯೂ ಬಿಡಬಹುದಾಗಿದೆ. ಗುಜರಾತಿಗಳಿಗೆ ಬೇರೆ ವಿ. ವಿ. ನಿಲಯ ಬೇಕಿಲ್ಲ. ಸಿಂಧ, ಮಹಾರಾಷ್ಟ್ರ ವಿದ್ಯಾನಿಲಯಗಳು ಪ್ರತ್ಯೇಕವಾಗಿ ಬಿಟ್ಟರೆ, ಮುಂಬಯಿ ವಿ. ವಿ. ನಿಲಯ ಅವರದೆ ಆಗಿ ಬಿಡುವುದು. ಅಲ್ಲದೆ ತಮ್ಮದನ್ನೇ ಆಗಿ ಒಂದು ಬೇರೆಯದನ್ನು ಕಟ್ಟಬೇಕೆಂದರೆ, ಗುಜರಾತಿಗಳಿಗೆ ಅದೊಂದು ದೊಡ್ಡ ವಿಷಯವಲ್ಲ. ಅದಕ್ಕೆ ಆವಶ್ಯಕವಾದ ಪ್ರಾಂತೀಯ ಸಂಘಟನೆಯೂ ಬೇಕಾದಷ್ಟು ಬಂಡವಾಳವೂ ಅವರಲ್ಲಿವೆ. ಈಗ ನಿಜವಾದ ತೊಡಕು ಇರುವುದೆಂದರೆ ಮುಂಬಯಿ ಕರ್ನಾಟಕದ ಜನರಿಗೆ. ಎಲ್ಲ ರೀತಿಯಿಂದಲೂ ತೊಂದರೆ ಬಂದು ಮುಂದೆ ನಿಲ್ಲುವುದು ಇವರಿಗೆ.

ಮಹಾರಾಷ್ಟ್ರ ವಿ. ವಿ. ನಿಲಯದ ಬೇಡಿಕೆಗೆ ಮುಂಬಯಿ ಸರಕಾರದವರು ಕಿವಿಗೊಟ್ಟುದನ್ನು ನೋಡಿದರೆ, ಭಾಷಾನುಸಾರ ಪ್ರಾಂತೀಯ ಸಂಘಟನೆಗೂ ವಿ. ವಿ. ನಿಲಯ ಸಂಸ್ಥಾಪನೆಗೂ ಸರಕಾರವು ಮನ್ನಣೆ ಕೊಡಲು ಮನಸ್ಸುಮಾಡಿದೆಯೆಂಬುದು ಸಿದ್ಧವಾಗುವುದು. ಈ ಸಂದರ್ಭದಲ್ಲಿ ಮುಂಬಯಿ ಕರ್ನಾಟಕದ ಜನರೂ ಕರ್ನಾಟಕ ಯುನಿವರ್ಸಿಟಿಗಾಗಿ ಪ್ರಯತ್ನ ಮಾಡಬೇಕೆಂದರೆ, ಮಹಾರಾಷ್ಟ್ರೀಯರಲ್ಲಿರುವ ಪೂರ್ವಸಿದ್ಧತೆಯ ಅನುಕೂಲತೆ ಕನ್ನಡಿಗರಿಗಿಲ್ಲ. ಅವರೀಗ ವಿ. ವಿ. ನಿಲಯದ ಸ್ಥಾಪನೆಯ ಬಗ್ಗೆ ಪ್ರಯತ್ನಪಡುವುದೆಂದರೆ ಸಂನ್ಯಾಸಿಯ ಲಗ್ನದಂತೆ, ಜುಟ್ಟು-ಜನಿವಾರದಿಂದಲೇ ಪ್ರಾರಂಭಿಸಬೇಕಾಗುವುದು. ಹಾಗೂ ಮಾಡಬಹುದೆಂದರೆ ಮುಂಬಯಿ ಕರ್ನಾಟಕದ ಕ್ಷೇತ್ರ-ಜನಸಂಖ್ಯೆ, ಮಹಾರಾಷ್ಟ್ರದ ಕ್ಷೇತ್ರ-ಜನಸಂಖ್ಯೆಗಳಿಗಿಂತ ತೀರ ಕಡಿಮೆಯಾಗಿ ತೋರಿ, ಅನೇಕ ಜನ ನಮ್ಮವರಿಗೂ ಆ ಪ್ರಯತ್ನ ಹಾಸ್ಯಾಸ್ಪದವೆಂದು ಎನಿಸಬಹುದಾಗಿದೆ. ಹೊರಗಿನ ಕರ್ನಾಟಕ ಪ್ರದೇಶಗಳ ಸಹಾಯ ಕೇಳಬೇಕೆಂದರೆ, ಮೈಸೂರಿನವರಿಗೆ ಸ್ವತಂತ್ರ ವಿಶ್ವವಿದ್ಯಾನಿಲಯವಿದ್ದುದರಿಂದ, ಅವರಿಂದ ಸಹಕಾರ ದೊರೆಯುವ ಸಂಭವವಿಲ್ಲ. ಅದರಂತೆಯೆ ನೈಝಾಮ್ ಕರ್ನಾಟಕದ ಪರಿಸ್ಥಿತಿ. ಮದರಾಸು ಕರ್ನಾಟಕ, ರಾಜಕೀಯ ವಿಘಟನೆಯ ಮೂಲಕ ಮುಂಬಯಿ ಕನ್ನಡಿಗರೊಂದಿಗೆ ಈ ವಿಷಯದಲ್ಲಿ ಎಷ್ಟೊಂದು ಸಹಕರಿಸುವುದೋ ತಿಳಿಯದ ವಿಷಯ. ಇಂತಹ ಸಂದರ್ಭದಲ್ಲಿ ಮುಂಬಯಿ ಕರ್ನಾಟಕದ ಜನರು ಏನುಮಾಡಬೇಕು? ಇದೊಂದು ದೊಡ್ಡ ಸಮಸ್ಯೆಯೆ ಅಲ್ಲವೆ?

'ಅದೇಕೆ, ನೆರೆಯ ನಾಡಾದ ಮಹಾರಾಷ್ಟ್ರ ವಿ. ವಿ. ನಿಲಯಕ್ಕೆ ಇದನ್ನೂ ಸೇರಿಸಿದರೆ ಆಗದೆ?' ಎಂದು ಕೇಳುವವರೂ ನಮ್ಮಲ್ಲಿ ಇಲ್ಲದೆ ಇಲ್ಲ. ಅವರು, ಸ್ವಲ್ಪ ಕಣ್ಣು ಬಿಟ್ಟು, ವಸ್ತುಸ್ಥಿತಿಯನ್ನು ವಿಚಾರ ಮಾಡಬೇಕು. ಮಹಾರಾಷ್ಟ್ರೀಯರಿಗೆ ತಮ್ಮದೆ ಆದ ವಿಶ್ವವಿದ್ಯಾನಿಲಯ ಏತಕ್ಕೆ ಬೇಕಾಗಿದೆ? ಪದವೀಧರರ ಸಂಖ್ಯೆಯನ್ನು ಹೆಚ್ಚಿಸುವುದೇ ಇದ್ದರೆ, ಈಗಿರುವ ಅನುಕೂಲತೆ ಅವರಿಗೆ ಸಾಕಷ್ಟಿದೆ. ಆದರೆ ಅವರಿಗೆ ಇದಿಷ್ಟೇ ಬೇಕಾಗಿಲ್ಲ. ಮಹಾರಾಷ್ಟ್ರ ವಿ. ವಿ. ನಿಲಯದ ಸಂಸ್ಥಾಪನೆಯಿಂದ ಅವರಿಗೆ ತಮ್ಮ ಜನತೆಯಲ್ಲಿಯೂ ಪ್ರಾಂತದಲ್ಲಿಯೂ ಸಂಘಟನೆಯನ್ನು ಉಂಟುಮಾಡಬೇಕಾಗಿದೆ. ಅದಕ್ಕಾಗಿ ಪ್ರಾಂತೀಯ ಭಾಷೆ-ಸಂಸ್ಕೃತಿಗಳಿಗೆ ಪ್ರಾಧಾನ್ಯವನ್ನು ತಂದುಕೊಡಬೇಕಾಗಿದೆ. ಮಹಾರಾಷ್ಟ್ರ-ಭಾಷೆ ಅವರ ವಿ. ವಿ. ನಿಲಯದಲ್ಲಿ ಬೋಧಭಾಷೆಯಾಗಲಿದೆ. ಆಗ ಅವರ ಇಲ್ಲದ ಇತಿಹಾಸವನ್ನೂ ಇದ್ದಂತೆ ತಿಳಿದು ವಿದ್ಯಾರ್ಥಿಗಳು ಓದಿಕೊಳ್ಳಬೇಕಾಗುವುದು; ಅವರ ಸಂಸ್ಕೃತಿಯನ್ನೆ ತಮ್ಮದನ್ನಾಗಿ ಅಭ್ಯಾಸ ಮಾಡಬೇಕಾಗುವುದು. ಕನ್ನಡನಾಡಿನ ರಾಜಕೀಯ— ಸಾಂಸ್ಕೃತಿಕ ಸಂಘಟನೆಯ ದೃಷ್ಟಿಯಿಂದ ಇದು ವಿಘಾತಕವೆನಿಸದೆ ಬಿಟ್ಟೀತೆ?

'ಹಾಗಾದರೆ ಈಗಿದ್ದಂತೆ ಮುಂಬಯಿ ವಿ. ವಿ. ನಿಲಯದಲ್ಲಿಯೆ ಇದ್ದುಬಿಡೋಣ' ಎಂದೂ ಅನೇಕರು ಹೇಳಿಬಿಡಬಹುದು. ಇದೂ ನಗೆಬರುವ ಮಾತೇ! ಮುಂಬಯಿ ವಿ. ವಿ. ನಿಲಯದಲ್ಲಿ ಸದ್ಯ ಕೂಡ ನಡೆಯದ ಕನ್ನಡಿಗರ ಕೈ ಮುಂದೆ ಏನು ನಡೆದೀತು? ಬುದ್ಧಿವಂತರೂ ಶ್ರೀಮಂತರೂ ಆದ ಗುಜರಾತಿಗಳನ್ನೂ ಪಾರಸಿಗಳನ್ನೂ ಎದುರಿಸಿ ಕನ್ನಡದ ಕರ್ನಾಟಕದ ಹಿತವನ್ನು ಸಾಧಿಸಿತರುವ ದಿಗ್ವಿಜಯಿಗಳು ನಮ್ಮಲ್ಲಿ ಇದ್ದಾರೆಯೆ? ಇದ್ದರೂ ಅಲ್ಪಮತದಲ್ಲಿ ಇರುವ ಅವರಿಂದ ಸಾಧ್ಯವಾಗುವುದೆ? ಇನ್ನೂ ಒಂದು ಮಾತು: ಇನ್ನೊಬ್ಬರೊಂದಿಗೆ ಸೇರಿ ನಮ್ಮಲ್ಲಿ ಪದವೀಧರರ ಸಂಖ್ಯೆಯನ್ನು ಹೆಚ್ಚಿಸುವುದಷ್ಟೇ ನಮ್ಮ ಗುರಿಯಾಗಿದ್ದರೆ, ಮಗ್ಗುಲಲ್ಲಿಯೇ ಇರುವ ಮಹಾರಾಷ್ಟ್ರ ವಿ. ವಿ. ನಿಲಯದ ಕ್ಷೇತ್ರದಲ್ಲಿಯೆ ಕರ್ನಾಟಕವನ್ನೂ ಕರಗಿಸಿ ಬೆಸೆದು ಬಿಟ್ಟರೆ

(೪೯೨ನೆಯ ಪುಟ ನೋಡಿರಿ)

೧. ಕ್ರಿಪ್ಸರ ಕೈಪಿಡಿ

ಹಿಂದಣ ಕಾಲದಲ್ಲಿ ಯುಗಯುಗಕ್ಕೆ ಅವತಾರ ಪುರುಷರು ನಮ್ಮಲ್ಲಿ ಬಂದರೆ, ಇಂದು ತಿಂಗಳು ತಿಂಗಳಿಗೆ ಅವತಾರಪುರುಷರು ಬರುತ್ತಿದ್ದಾರೆ. ಭಾರತಮಾತೇ, ಇಂತಹ ನಿನ್ನ ಭಾಗ್ಯಕ್ಕಾಗಿ ನಿನ್ನಲ್ಲಿ ಎಷ್ಟು ಧರ್ಮಗ್ಲಾನಿಯಾಗಿರಬಹುದಲ್ಲ— ಎಂದು ಮಂಗರಾಯನು ಅಭಿಮಾನಾವೇಶದಿಂದ ಮೈಯನ್ನು ತುರಿಸುತ್ತಾನೆ. ಒಂದು ತಿಂಗಳು ಶಿಯಾಂಗ-ಕೈ-ಶೇಕ, ಮುಂದಿನ ತಿಂಗಳು ಸರ್ ಸ್ಟ್ಯಾಫರ್ಡ್ ಕ್ರಿಪ್ಸ್! ಶೇಕರಿಗೆ ಸಲಾಮುಕ್ಕೆತ್ತಿದ ಕೈಯಿಂದಲೆ ಕ್ರಿಪ್ಸರ ಕೈಕುಲುಕುವ ಆತುರ ಮಂಗರಾಯನಿಗೆ.... ಹಾಂ.. ನೆನಪಾಯಿತು. ಕ್ರಿಪ್ಸ್‌ಸಾಹೇಬರೆ, ಶಿ ಯಾ ಂ ಗ ರಂ ತೆ ನಿಮಗೆ ತೊಂದರೆಯಾಗಬಾರದೆಂದು, ಮಹಾನುಭಾವ ಮರ್ಕಟರಲ್ಲಿಸಮ ಮಂಗರಾಯ ಈ ಸಲಹೆಗಳನ್ನು ಕೊಡುತ್ತಾನೆ— please, take down.

೧. ನಿಮ್ಮ ದೇಶದಲ್ಲಿ ಹಿರಿಯ-ಕಿರಿಯರಲ್ಲಿ ಭೆಟ್ಟಿಯಾಗುವ ಸಂಪ್ರದಾಯ ಯಾವುದು? ನಿಮ್ಮ ವಯಸ್ಸೇನು? ಇದರ ದಾಖಲೆಯನ್ನು ಸಕಾಲದಲ್ಲಿ ಪಂಡಿತ ಜವಾಹರರಿಗೆ ತಿಳುಹಿಸಿದರೆ, ಅವರು ನಿಮ್ಮನ್ನು ಗಾಂಧೀಜಿಯವರ ಭೆಟ್ಟಿಗೆ ಕರೆದೊಯ್ಯುವರು.

೨. ಅಖಿಲ ಭಾರತ ಪ್ರಚಂಡ ಅಲ್ಪಸಂಖ್ಯಾಕ ಬಹಾದ್ದೂರ್ ಅರ್ಥಾತ್ ಏಕಧುರಂಧರ ಜಿನಾಸಾಹೇಬರಿಗೆ ಚಹಾಪಾರ್ಟಿ ಯಾವ ಊರಲ್ಲಿದೆ ತಿಳಿದುಕೊಂಡು, ಅಲ್ಲಿಯೆ ಸಾಹೇಬರ ಭೆಟ್ಟಿಗೆ ಹೋಗಲು ಮರೆಯಬೇಡಿರಿ.

೩. ಮಹಾತ್ಮರ ಮೌನದಿನದ ವೇಳಾಪತ್ರಿಕೆ ಗೊತ್ತಿದೆಯೆ ತಮಗೆ? ಇಲ್ಲವಾದರೆ ತಾವು ಬರುವ ವರೆಗೆ ಮೌನದಿಂದಿರುವುದಲ್ಲದೆ, ಬಂದಾಗಲೂ ಮೌನವನ್ನೆ ತಾಳಿ ಚರ್ಚಿಸಬೇಕಾದೀತು!

ಕ್ರಿಪ್ಸರ ಭೆಟ್ಟಿಯ ಬಗ್ಗೆ ಯಾರೂ ಮಾತನಾಡಬಾರದೆಂದು ಚರ್ಚಿಲ್‌ರು ಹೇಳಿದ್ದು ಮಂಗರಾಯನಿಗೆ ಗೊತ್ತು. ಆದರೆ ಅದರ ಹೆದರಿಕೆ ಅವನಿಗಿಲ್ಲ— ಯಾಕೆಂದರೆ, ಮಾತನಾಡದೆ ಹಲ್ಲು ಕಿರಿದೇ ಅಭಿಪ್ರಾಯವನ್ನು ವ್ಯಕ್ತಮಾಡಬಲ್ಲ ಚತುರನವ, ಮರ್ಕಟ ಮಹಾನುಭಾವ!

* * *

೨. ಪುಂಡರ ಪ್ರತಿನಿಧಿ!

ಕ್ರಿಪ್ಸ್‌ಸಾಹೇಬರಿಗೆ ಎಲ್ಲ ಪಕ್ಷದ ಮುಂದಾಳುಗಳೂ ಭೆಟ್ಟಿಯಾಗುವಾಗ, ಈ ಭೆಟ್ಟಿಯಲ್ಲಿ ಪುಂಡರಿಗೇಕೆ ಪ್ರತಿನಿಧಿತ್ವವಿಲ್ಲ— ಎಂದು ಬೆಳಗಾಂವಿಯ 'ಪುಂಡ' ನೊಬ್ಬನು ಮಂಗರಾಯನನ್ನು ಕೇಳಿದ್ದಾನೆ. 'ಮಂಗರಾಯನ ಬವಲು ವೈಸರಾಯರಿಗೆ ಕೇಳಿದರೆ ಪುಂಡರಿಗೂ ಪ್ರತಿನಿಧಿತ್ವ ದೊರಕುವುದರಲ್ಲಿ ಸಂದೇಹವಿಲ್ಲ' ಎಂದು ಮಂಗರಾಯನ ಅಭಿಪ್ರಾಯ. ಆದರೆ ಒಂದು ಮಹತ್ತ್ವದ ಮಾತನ್ನುಮಾತ್ರ ಲಕ್ಷ್ಯದಲ್ಲಿಡಬೇಕು. ವೈಸರಾಯರಿಗೆ ಬರೆಯುವಾಗ ಪುಂಡರು ತಮ್ಮ ಪುಂಡತನಕ್ಕಾಗಿ ಒಂದು ಪ್ರಮಾಣಪತ್ರವನ್ನಿಡಬೇಕು. ಉದಾಹರಣೆಗಾಗಿ, ಮೊನ್ನೆ ಮೊನ್ನೆ ಮುಂಬಯಿ ಪ್ರಾಂತದ 'ಮಾಜಿ' ಮುಖ್ಯ ಪ್ರಧಾನರಿಂದ ದೊರೆತ ಸರ್ಟಿಫಿಕೇಟನ್ನು ತಮ್ಮ ಅರ್ಜಿಯ ಜೊತೆಯಲ್ಲಿಡಬೇಕು. ಎಂದರೆ, ಪುಂಡಪಕ್ಷದ ಅಸ್ತಿತ್ವವನ್ನು ವೈಸ್‌ರಾಯರು ಒಪ್ಪಬಹುದಾಗಿದೆ. ಹಂ— ನೆನಪಾಯಿತು ಪುಂಡರೆ, ಮುಂಚೆ, ಮಂಗರಾಯನ ಉಪದೇಶವನ್ನು ಕೇಳಿರಿ! ಇಲ್ಲವಾದರೆ ಆ ಸಭೆಯಲ್ಲಿ ಸಭ್ಯತೆಯಿಂದ ನಡೆಯದೆ ಹೋದೀರಿ. ಯಾವಾಗಲೂ ಇಂಗ್ಲಂಡಿನ ಹಿತವನ್ನೇ ನೋಡುವುದರಿಂದ— ಭಾರತದಲ್ಲಿದ್ದರೂ ಇಂಗ್ಲಂಡಿನ ಕಡೆಗೆ ಯೆ ಮುಖ ತಿರುಗಿಸಿದ-ಸಾಹೇಬರನ್ನು ಕಂಡೊಡನೆ ಆ ಸಭಾಗೃಹವು ಹನುಮಾನ್ ದೇವರ ಗುಡಿಯೆಂದು ಭ್ರಾಂತಿಗೊಳ್ಳಬೇಡಿರಿ. ಮತ್ತೊಂದು ಮಾತು, 'ಪ್ರಾಂತ ಹಾಳಾಗಲಿ. ಸದ್ಯಕ್ಕೆ ದೇಶಕ್ಕೆ ಸ್ವಾತಂತ್ರ್ಯ ದೊರಕಿದರೆ ಸಾಕು' ಎಂಬ ಘೋಷಣೆಯನ್ನು ಹಿಡಿಯಿರಿ. ಯಾಕೆಂದರೆ ಅಲ್ಲಿ 'ಪ್ರಾಂತ' ಎನ್ನುವವರೆಲ್ಲ 'ಮುಂಬಯಿ ಪ್ರಾಂತ' ಎನ್ನುವರು; ಕರ್ನಾಟಕ ಪ್ರಾಂತವಲ್ಲ. ಕೊನೆಯ ಮಾತೆಂದರೆ, ದಿಲ್ಲಿಯಲ್ಲಿದ್ದಾಗ ಮಂಗರಾಯನ ಮನೆಯಲ್ಲಿಯೆ ಇಳಿದುಕೊಳ್ಳಿರಿ. ಇಲ್ಲವಾದರೆ— ನಿಮಗೆ ನೈಲಿಗೆಯಾಗದೆ ಉಳಿಯದು.

* * *

೩. ಸ್ಯಾಂಡ್ ಆಟ ಈಜ!

ಯುದ್ಧದ ನಿಮಿತ್ತವಾಗಿ ಸಾಮ್ರಾಜ್ಯದ ಎಲ್ಲ ಕಡೆಗಳಿಂದ ಬಂದ ಸೈನಿಕರ ತಂಡಗಳು ಹಿಂದುಸ್ತಾನದ ಕೆಲವು ನಗರಗಳಲ್ಲಿ ನೆಲೆಸಿದ್ದು, ಈ ಸೈನಿಕರಿಂದ ನಾಗರಿಕರಿಗೆ— ವಿಶೇಷವಾಗಿ ಹೆಣ್ಣುಮಕ್ಕಳಿಗೆ- ಬಹಳೇ ತೊಂದರೆಯಾಗುತ್ತಿದೆ ಎಂದು ಮಂಗರಾಯನ ಕಡೆಗೆ ದೂರುಬಂದಿವೆ. ಪಾಪ! ಸರಕಾರವೂ ನಿರುಪಾಯವಾದ ಸಂದರ್ಭದಲ್ಲಿ ಮಂಗರಾಯನೇನು ಮಾಡಬಲ್ಲ? ಪಾಪ! ಸೈನಿಕರು ತಮ್ಮ ದೇಶವನ್ನು ಬಿಟ್ಟು ನಮ್ಮ ದೇಶಕ್ಕೆ ಬಂದಾಗ, ಆಗಾಗ ಅವರಿಗೆ ತಂತಮ್ಮ ಸಂಸಾರಚಿತ್ರಗಳ ಸ್ಮರಣೆಯಾದರೆ ತಪ್ಪೇನು? ಇನ್ನಿಷ್ಟು ಪಾಪ! ತಮ್ಮ ದೇಶಗಳಲ್ಲಿ, ತಮ್ಮ ಸಮಾಜಗಳಲ್ಲಿ ರೂಢವಿದ್ದ ಮತ್ತು ಯೋಗ್ಯವೆನಿಸಿದ ನಡತೆಗಳು, ಅದೇ ಸಾಮ್ರಾಜ್ಯದ ಒಂದು ಭಾಗವಾದ ಹಿಂದುಸ್ತಾನದಲ್ಲಿ ರೂಢವಿಲ್ಲ ಎಂಬುವನ್ನು ಅವರೇನು ಬಲ್ಲರು? ಅಂತೊ! ಪಾಪ! ತಮ್ಮ ದಾಸ್ಯದಲ್ಲಿದ್ದ ಹಿಂದುಸ್ತಾನದಲ್ಲಿ ಬೇಕಾದ್ದನ್ನು ಮಾಡಬಹುದೆಂದು ಅವರು ಇತಿಹಾಸದಲ್ಲಿ ಓದಿದ್ದು ಸುಳ್ಳು ಎಂಬುದು ಅವರಿಗೆ ತಿಳಿಯುವುದು ಹೇಗೆ? ಇದಲ್ಲದೆ ನಮ್ಮೆಲ್ಲರಿಗಾಗಿ ಯುದ್ಧದಲ್ಲಿ ಹೋರಾಡಿ ಬಂದ ವೀರಸೈನಿಕನಿಗೆ, ವಿಶ್ರಾಂತಿಗಾಗಿ ಮಂಗತನ-ಅನಂಗತನ ಬೇಡವೆ? ಸಾಮ್ರಾಜ್ಯಸತ್ತೆಯ ಭೋಗಗಳಲ್ಲಿ ಅದೊಂದು— ಏನೆಂದಿರಿ? ಸರಿ. ನಾಗರಿಕರು ತಂತಮ್ಮ ಹೆಂಡಂದಿರನ್ನು ಅಂತಹ ನಗರಗಳಿಂದ ಕಳುಹಿಸಿಕೊಡಬೇಕೆಂದೋ? ನಾ-ರಾ-ಯ-ಣ! ಹಾಗಾದರೆ ಸೈನಿಕರ ಮತ್ತು ನಾಗರಿಕರ ನಡುವೆ ಇನ್ನಿಷ್ಟು ಸ್ಪರ್ಧೆಗೆ ಕಾರಣ-

ನಾಧೀತು! ತಸ್ಮಾತ್, ಪ್ರತಿಯೊಬ್ಬ ಭಾರತೀಯನು ಧೃತರಾಷ್ಟ್ರನೆನಿಸಿ— ಅಥವಾ— ಹೆಂಗುಸರನ್ನು ಹೊರಗೆ ಬಿಡದ ಹಿಂದಿನ ಹಿರಿಯ ಆರ್ಯ ಸಂಸ್ಕೃತಿಯ ಪುನರುತ್ಥಾಪನೆ— ಅಥವಾ— ಸಾಕು— 'ಪ್ರಣಶ್ಯಂತಿ ಕುಲಧರ್ಮಾಃ ಸನಾತನಾಃ' ಎಂದು ಗೀತೆಯು ಯುದ್ಧದ ಎಚ್ಚರವನ್ನು ಕೊಟ್ಟಿಲ್ಲವೆ?— ಯುದ್ಧ ಎಂದರೆ ಸೈನಿಕರ ಮತ್ತು ನಾಗರಿಕರ ನಡುವೆ ಯುದ್ಧ ಎಂದು.

* * *

೪. ವಿದ್ಯಾಪೀಠವೆ? ಕರ್ನಾಟಕ ಉಪ್ಪಿಟ್ಟವೆ?

ಮುಂಬಯಿ ಪ್ರಾಂತದಲ್ಲಿಯ ಬೇರೆ ಬೇರೆ ಭಾಷೆಗಳು ತಮಗಾಗಿ ಒಂದು ವಿದ್ಯಾಪೀಠವನ್ನು ನಿರ್ಮಿಸುವಾಗ, ಕನ್ನಡಿಗರಿಗೂ ಬೇರೊಂದು ವಿದ್ಯಾಪೀಠ ಬೇಡವೆ?- ಎಂದು ವಾಚಕನೊಬ್ಬನು ಕಸಿವಿಸಿಯಿಂದ ಬರೆದುಕೊಂಡು ಮಂಗರಾಯನ 'ಮತಿಪ್ರಾಯ'ವನ್ನು ಕೇಳಿಕೊಂಡಿದ್ದಾನೆ. ಕನ್ನಡಿಗರೆ, ಮಂದಿಯ ನೋಡಿ ಮುನ್ನಡಿಗರೆ! ಮಂಗರಾಯನ ಮಹಾಮತಿಪ್ರಾಯವನ್ನು ಕೇಳುವಂಥಾತ್ತರಾಗಿರಿ:— ಅದೆಂತೆಂತೆನೆ:— **ಕನ್ನಡಿಗರಿಗೆ ಪ್ರತ್ಯೇಕವಾದ ವಿದ್ಯಾಪೀಠ ಬೇಡ, ಬೇಡ, ಬೇಡ.** ಅದೇಂಕಾರಣವೆನೆ:—

೧. ಕನ್ನಡವು ಪ್ರಾಂತಭಾಷೆಯಾಗುವ ಯೋಗ್ಯತೆಯುದಲ್ಲ. ಯಾಕೆಂದರೆ ಪ್ರಾಂತದಲ್ಲಿ ಮಂತ್ರಿಯಾದವನಿಗೆ ಕನ್ನಡದಲ್ಲಿ ಮಾತನಾಡಲು ಬರುವುದಿಲ್ಲ, ಮುಂಚೆ ಬಂದಿದ್ದರೆ ಈಗ ಮರೆಯುವುದು.

೨. ಕನ್ನಡಿಗರು ಉಜ್ಜ್ವಲ ದೇಶಭಕ್ತರು. ಅರ್ಥಾತ್, ಹಿಂದೀಭಾಷೆ— ಭಾರತದೇಶ ಇವೆರಡಕ್ಕಿಂತ ಸಂಕುಚಿತವಾದ ದೃಷ್ಟಿ ಅವರಿಗಿಲ್ಲ.

೩. ಇದಲ್ಲದೆ ವಿದ್ಯಾಪೀಠಕ್ಕೆ ದೊಡ್ಡ ಕಟ್ಟಡ ಬೇಕು. ಆದರೆ ಸಾರ್ವಜನಿಕ ಜೀವನದಲ್ಲಿ ಈಗಾಗಲೆ ಎಲ್ಲ ಮಣ್ಣನ್ನು ಕೊಟ್ಟು ಕಲ್ಲುಗಳನ್ನು ಪೂರಯಿಸಿದ್ದರಿಂದ, ವಿದ್ಯಾಪೀಠದ ಕಟ್ಟಡಕ್ಕೆ ಸಾಮಗ್ರಿಗಳು ದೊರೆಯಲಾರವು.

೪. ವಿದ್ಯಾಪೀಠದಲ್ಲಿ ಬರಿಯ ಉಚ್ಚ ಶಿಕ್ಷಣವೆ ಬೇಕು. ಆದರೆ ಕರ್ನಾಟಕದಲ್ಲಿ ಉಚ್ಚ-ನೀಚ ಶಿಕ್ಷಣವೆ ರೂಢವಾಗಿದೆ.

೫. ವಿದ್ಯಾಪೀಠಕ್ಕೆ ಕನ್ನಡಿಗರಾದ ದೊಡ್ಡವರು ಬೇಕು. ಆದರೆ ದೊಡ್ಡವರಿಗೆ ಕನ್ನಡ ಬರುವುದಿಲ್ಲ. ಕನ್ನಡಿಗರೆನಿಸುವವರು ದೊಡ್ಡವರೆನಿಸಿಲ್ಲ. ಕೊನೆಯದಾಗಿ,

೬. ದುಡ್ಡು ಬೇಕು-ಕ್ಷಮಿಸಿರಿ, ಅಲ್ಲ-ಅಂದರೆ-ನಿಮ್ಮ ದುಡ್ಡು ಬೇಕು— ಅರ್ಥಾತ್— ಅಥವಾ— ಯಾವ ಜಾತಿಯ ದುಡ್ಡು ಎನುವಿರಾ?

ಹೋಗಲಿ, ಅದಕಾಗಿ ನಮಗೆ ವಿದ್ಯಾಪೀಠವೆ ಬೇಡ. ಸದ್ಯದ ಉಪ್ಪಿಟ್ಟೇ ಸಾಕು— ಕಂಠದಲ್ಲಿ ಸಿಕ್ಕಿಕೊಳ್ಳಲಿಕ್ಕೆ!

* * *

೫. ಎಲೊ ಫೀವರ್!

ಕ್ರಿಸ್ತರು 'ಎಲೊ ಫೀವರ್' ಇದ್ದ ದೇಶಗಳಿಂದ ಬಂದರಷ್ಟೆ? 'ಎಲೊ ಫೀವರ್' ಎಂದರೇನು? ಎಂಬುದು ಬಹುಜನರಿಗೆ ತಿಳಿದಿಲ್ಲ. 'ಹಳದಿ ಜ್ವರ' ಎಂದು ಆ ಶಬ್ದದ ಭಾಷಾಂತರ. 'ಕಣ್ಣಿನ ಕಾಮಣಿ' ಎಂದು ಅದರ ಅರ್ಥ. ಸಾರಾಂಶ, ನೋಡಿದ್ದೆಲ್ಲ ಹಳದಿಯಾಗಿ ಕಾಣುವ ರೋಗವಿದ್ದ ದೇಶಗಳಿಂದ ಕ್ರಿಸ್ತರು ಬಂದದ್ದರಿಂದ, ಅವರಿಗೆ ಭಾರತದಲ್ಲಿ ಎಲ್ಲ ಹಾಗೇ ಕಂಡರೆ ತಪ್ಪೇನು? ಈ ಜ್ವರದ ಇನ್ನೊಂದು ವೈಶಿಷ್ಟ್ಯ: ರೋಗಿಯ ಜ್ವರ ಇಳಿದರೆ ಡಾಕ್ಟರನಿಗೆ ಸಂನಿಪಾತವಾಗುವುದಂತೆ!

* * *

೬. ಮ್ಯುನಿಸಿಪಾಲಿಟಿಯಲ್ಲಿ ಮರಾಟಿ

'ಮಂಗರಾಯಾ, ನಿನಗೊಂದು ಹೊಸಸುದ್ದಿ ಗೊತ್ತಿದೆಯೆ? ಧಾರವಾಡದ ಮ್ಯುನಿಸಿಪಾಲಿಟಿಯಲ್ಲಿ ಮರಾಟಿಯನ್ನು ಸಂರಕ್ಷಿಸುವುದಕ್ಕೆಂದು ಧಾರವಾಡದಲ್ಲಿರುವ ಕಡುಮರಾಟಿಗರು ಕೆಲವರು, ಈ ಸಲದ ಆಯ್ಕೆಗೆ ತಮ್ಮ ಪರವಾಗಿ ಒಬ್ಬ 'ಸಭ್ಯಗೃಹಸ್ಥ'ನನ್ನು ಹುರಿಯಾಳನ್ನಾಗಿ ನಿಲ್ಲಿಸಿದ್ದರು. ಧಾರವಾಡದ ಮಹಾಮಹಾ ವ್ಯಕ್ತಿಗಳು ಆ ಹುರಿಯಾಳನ್ನು ಎತ್ತಿಹಿಡಿಯಲು ಪ್ರಚಾರಮಾಡಿದರು. ನನ್ನ ಕಡೆಗೆ ಬಂದವರಲ್ಲಿ, ಧಾರವಾಡದ ಸುಪ್ರಸಿದ್ಧ ವಿದ್ಯಾಸಂಸ್ಥೆಯಲ್ಲಿ ಆಜೀವ ಸದಸ್ಯರೂ ಶಿಕ್ಷಕರೂ ಆಗಿ ಕೆಲಸ ಮಾಡುವ ಪದವೀಧರರೊಬ್ಬರು ಇದ್ದರು. ಆ ವಿದ್ಯಾಸಂಸ್ಥೆ ಕರ್ನಾಟಕದ ಎಲ್ಲ ಬಗೆಯ ಹಿತಗಳನ್ನು ನೋಡಲಿಕ್ಕೆ ಇದೆಯೆಂದೂ, ಅಲ್ಲಿಯ ಕೆಲಸಗಾರರೆಲ್ಲ ಕನ್ನಡ ನಾಡಿನ ಅಭಿಮಾನಿಗಳೇ ಇರುವರೆಂದೂ, ನನ್ನ ಭಾವನೆ ಇದುವರೆಗೂ ಇದ್ದಿತು. ಈಗಲೂ ಸಂಪೂರ್ಣ ಹೋಗಿದೆಯೆಂತಲ್ಲ; ಆದರೆ ಏನೋ ಒಂದು ಬಗೆಯ ಸಂದೇಹದೃಷ್ಟಿ ಬಂದುಬಿಟ್ಟಿದೆ. ಇಂತಹ ಸೋಗಿನ ಹುಲಿಗಳು ನಮ್ಮ ಸಂಸ್ಥೆಗಳಲ್ಲಿ ಇದ್ದು ಕೆಲಸಮಾಡುತ್ತಲಿದ್ದರೆ ಕನ್ನಡ— ಕರ್ನಾಟಕಗಳಿಗೇನು ಗತಿ?"

ಈ ಕಾಗದ ಬರೆದವರು ಧಾರವಾಡ ನಗರಸಭೆಯ ಒಬ್ಬ ಮತದಾರರಿರಬಹುದೆಂದು ಮಂಗರಾಯ ಕಲ್ಪಿಸುತ್ತಾನೆ. ಆದರೆ ಈ ಹೇಡಿತನದ ಪತ್ರಕ್ಕೆ ಉತ್ತರ ಕೊಡಲಿಕ್ಕೆ ಆತನಿಗೆ ಮನಸ್ಸಿಲ್ಲ. 'ಒಂದು ಸುಪ್ರಸಿದ್ಧ ವಿದ್ಯಾಸಂಸ್ಥೆ' 'ಆಜೀವ ಸದಸ್ಯರೂ ಶಿಕ್ಷಕರೂ ಆಗಿ ಕೆಲಸ ಮಾಡುವ ಪದವೀಧರರು' ಹೀಗೆಲ್ಲ ಹೆಸರು ಹೇಳದ ಹೇಡಿತನವೇಕೆ? ಇಂತಹ ಹೇಡಿಗಳ ಕನ್ನಡ-ಕರ್ನಾಟಕಗಳಿಗೆ ದಕ್ಷಿಣದಿಕ್ಕೇ ಗತಿ!

ಮುಂದರಿವ ಧೈರ್ಯದಲಿ ಮುಂದೆ
ಬಾರಯ್ಯಾ!
ಮಂಧಿಯಲಿ ಬಾಯ್ದೆರೆದು ಹೆಸರು
ಹೇಳಯ್ಯಾ!

* * *



ಕಳೆದ ಮಹಾಯುದ್ಧದಲ್ಲಿ ★ (೪ ನೆಯ ಭಾಗ)
ಭಾರತೀಯರು ಮಾಡಿದ ಸಹಾಯ

★

ಶ್ರೀಮಾನ್ ವಾಳ್ವೇಕರ ಗುರುರಾಯರು, ಬಿ. ಎ., ಎಲ್‌ಎಲ್. ಬಿ.

ಯುರೋಪದಲ್ಲಿಯ ಎಂದೂ ಕೆಲಸಕ್ಕೆ ಬಾರದ ಚಿಕ್ಕಪುಟ್ಟ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಕೊಡಿಸಲು ಬ್ರಿಟಿಶಸರಕಾರ ಹೋರಾಡುವುದಂತೆ; ಆದರೆ ತನ್ನ ಶಕ್ತಿಮೀರಿ ಸಂಕಟ ಕಾಲದಲ್ಲಿ ಸಹಾಯ ಸಲ್ಲಿಸಿದ ಭರತಖಂಡ ಪಾರತಂತ್ರ್ಯರೋಗದಿಂದ ನೆಲಹಿಡಿದಿದ್ದರೂ ಅದರ ಎಣಿಕೆಯಿಲ್ಲ ಯಾರಿಗೂ!

ದುರ್ಬುದ್ಧಿಯ ಪರಿಣಾಮ

ಹಿಂದುಸ್ಥಾನವು ಯುದ್ಧಕ್ಕೆ ಬೇಕಾದ ಸಾಮುಗ್ರಿಯನ್ನು ಉತ್ಸಾಹಪೂರ್ವಕವಾಗಿ ಪೂರಯಿಸಿದ ಬಗ್ಗೆ ಬ್ರಿಟಿಶರು ಭಾರತೀಯರನ್ನು ಹೊಗಳಿದರು. ಸಂಕಟದಲ್ಲಿ ಸಿಕ್ಕವರಿಗೆ ಸಹಾಯ ಮಾಡುವುದೇ ತಮ್ಮ ಧರ್ಮವೆಂದು ಭಾವಿಸಿದ ಭಾರತೀಯರ ಉಪಕಾರವನ್ನು ವ್ಯವಹಾರಕುಶಲರಾದ ಬ್ರಿಟಿಶರು ಕೂಡಲೆ ಮರೆತುಬಿಟ್ಟರು. ಇಷ್ಟೇ ಅಲ್ಲ, ವಿಜಯದ ಉಬ್ಬಿನಲ್ಲಿ ಮುಂದಿನ ವಿಚಾರವನ್ನೂ ಬದಿಗಿಟ್ಟರು. ಅದರ ಫಲವನ್ನು ಈಗ ಅವರಿಗೆ ಅನುಭವಿಸಬೇಕಾಗಿದೆ. ಮೊದಲಿನಿಂದಲೂ ಹಿಂದುಸ್ಥಾನದಲ್ಲಿಯ ಉದ್ಯೋಗ-ಧಂಧೆಗಳ ಬೆಳವಣಿಗೆಗೆ ತಡೆಹಾಕುವ ಧೋರಣವನ್ನು ಬ್ರಿಟಿಶ್ ಆಡಳಿತಗಾರರು ತಮ್ಮ ಕಣ್ಣಮುಂದಿಟ್ಟುಕೊಂಡಿದ್ದರು. ಈ ಧೋರಣದ ಮೂಲಕವೆ ಕಳೆದ ಮಹಾಯುದ್ಧಕ್ಕಿಂತ ಮೊದಲು ಹಿಂದುಸ್ಥಾನದಲ್ಲಿ ಸಾಕಷ್ಟು ಕಾರಖಾನೆಗಳೂ ಗಿರಣಿಗಳೂ ಇದ್ದಿಲ್ಲ. ತನಗೆ ಬೇಕಾದ ಅರಿವೆ ಅಂಚಡಿಗಳಿಗೂ, ಉಕ್ಕಿನ ಹಾಗೂ ಕಬ್ಬಿಣದ ಸಾಮಾನುಗಳಿಗೂ, ಔಷಧ, ರಾಸಾಯನಿಕ ದ್ರವ್ಯ ಮೊದಲಾದುವುಗಳಿಗಾಗಿಯೂ ಭಾರತವು ಪರಾವಲಂಬಿಯಾಗಿತ್ತು. ಹಿಂದೀ ಉದ್ಯೋಗಗಳನ್ನು ಕುಗ್ಗಿಸುವ ಬದಲು ಅವುಗಳನ್ನು ಹಿಗ್ಗಿಸುವ ಸ್ತುತ್ಯ ಉಪಕ್ರಮವನ್ನು ಹಿಂದಿನಿಂದಲೂ ಬ್ರಿಟಿಶರು ಮಾಡಿದ್ದರೆ, ಕಳೆದ ಮಹಾಯುದ್ಧದಲ್ಲಿ ಹಿಂದುಸ್ಥಾನವು ಇನ್ನೂ ಹೆಚ್ಚು ಸಹಾಯಮಾಡಬಹುದಾಗಿತ್ತು. ಹಿಂದುಸ್ಥಾನದ ಸ್ಟೇಟ್‌ಸೆಕ್ರೆಟರಿಗಳಾದ ಮಿಸ್ಟರ್ ಮಾಂಟೆಗ್ಯುರವರು ಸಹ ಹೀಗೆಯೆ ಅಭಿಪ್ರಾಯಪಟ್ಟಿದ್ದಾರೆ: "Now much more India could do for us and for herself now had her industries only developed in the past" ಹೊಸ ಕಾರಖಾನೆಗಳನ್ನು ಹಾಕಬೇಕೆಂದರೆ ಹೊರಗಿನಿಂದ ಯಂತ್ರ-ಸಾಮುಗ್ರಿಗಳನ್ನು ತರಿಸಬೇಕಾಗುತ್ತಿತ್ತು. ಯುದ್ಧದ ಕಾಲದಲ್ಲಿ ಅವುಗಳನ್ನು ತರಿಸುವುದು ದುಸ್ತರವಾಯಿತು. ಈ ಕಟು ಅನುಭವವು ಕಳೆದ ಮಹಾಯುದ್ಧದಲ್ಲಿ ಬಂದರೂ ಕೂಡ, ಯುದ್ಧ ಮುಗಿದನಂತರ ಬ್ರಿಟಿಶರ ಭಾರತೀಯ ಔದ್ಯೋಗಿಕ ಧೋರಣದಲ್ಲಿ ಹೇಳಿಕೊಳ್ಳುವಂತಹ ಬದಲಾವಣೆಯಾಗಲಿಲ್ಲ. ಯುದ್ಧದ ಕಾಲದಲ್ಲಿ ಹೊರಟ ಅನೇಕ ಕಾರಖಾನೆಗಳು ಯುದ್ಧದನಂತರ ಕುಕ್ಕರಿಸಿದುವು. ಸದ್ಯದ ಕಾಲದಲ್ಲಿ ಸಹ ಹಿಂದೀ ಉದ್ಯೋಗಗಳನ್ನು ಮಲಮಕ್ಕಳಂತೆ ನಡೆಯಿಸಿಕೊಳ್ಳುವ ಕ್ರಮ ತಪ್ಪಿಲ್ಲ. ವಿಮಾನಗಳ ಕಾರಖಾನೆ, ಮೋಟರುಗಳ ಕಾರಖಾನೆ, ಹಡಗುಗಳನ್ನು ಕಟ್ಟುವ ಕಾರಖಾನೆ ಮೊದಲಾದುವುಗಳ ಒದ್ದಾಟವು ಎಲ್ಲರೂ ಅರಿತ ಮಾತಾಗಿದೆ. ಸಾಕಷ್ಟು ವಿಮಾನಗಳಿಲ್ಲವೆಂದು ಸಿಂಗಾಪುರದಂತಹ ಅಭೇದ್ಯವಾದ ಆಯಕಟ್ಟಿನ ಸ್ಥಳವು ಕೈಬಿಟ್ಟು ಹೋಗಿ, ಸೋಲು ಪದರಿನಲ್ಲಿ ಬಿದ್ದರೂ, ಹಿಂದುಸ್ಥಾನದಲ್ಲಿ ವಿಮಾನಗಳನ್ನು ಕಟ್ಟುವ ಕಾರಖಾನೆಗಳನ್ನು ತೆಗೆಯುವ ಸುಬುದ್ಧಿ ಆಳರಸರಿಗೆ ಇದುವರೆಗೂ ಆಗದೆ ಇದ್ದದ್ದು ಶೋಚನೀಯವಾದ ಸಂಗತಿಯು ಸರಿ.

ಸಾಮುಗ್ರಿ ಸಹಾಯದ ಮಾದರಿ!

ಕಳೆದ ಮಹಾಯುದ್ಧವು ಹಿಂದುಸ್ಥಾನದ ಬಾಗಿಲಿಗೆ ಬಂದು ಬಡಿದಿದ್ದಿಲ್ಲ. ಅದರ ಬೇಗೆಯು ಭರತಖಂಡದಿಂದ ದೂರವಿರುವ ಬ್ರಿಟಿಶ್ ಸಾಮ್ರಾಜ್ಯದ ಭಾಗಗಳಲ್ಲಿ ಹೊತ್ತಿತ್ತು. ಕೆಲವು ಪ್ರದೇಶಗಳಲ್ಲಿ ಉರುವಲು ಸಹ ಸಾಕಷ್ಟು ಸಿಕ್ಕುತ್ತಿದ್ದಿಲ್ಲ. ಸಂನ್ಯಾಸಿಯು ಸಂಸಾರಿಯಾಗಬೇಕೆಂದು ಮದುವೆಯ ಸಿದ್ಧತೆ ಮಾಡಹತ್ತಿದರೆ ಜುಟ್ಟು ಜನಿವಾರದಿಂದ ಪ್ರಾರಂಭಮಾಡಬೇಕಾಗುತ್ತದೆ. ಅದರಂತೆಯೆ ಮೆಸೋಪೊಟೆಮಿಯಾದಲ್ಲಿ,

ಅಡಿಗೆಗೆ ಬೇಕಾದ ಕಟ್ಟಿಗೆಯನ್ನು ಕೂಡ ಹೊರಗಿನಿಂದ ತರಿಸಬೇಕಾಗುತ್ತಿತ್ತು. ಬಹಳ ಹೇಳುವುದೇನು, ಸಾಮಾನ್ಯವಾಗಿ ದೊರೆಯುವ ಕಲ್ಲು ಕೂಡ ಅಲ್ಲಿ ಸಿಕ್ಕುತ್ತಿದ್ದಿಲ್ಲ. ಈ ಮಾತಿಗೆ ಆಗಿನ ಕಾಲದ ವ್ಹಾಯಿಸ್‌ರಾಯರಾದ ಲಾರ್ಡ ಚೆಲ್ಮ್ಸ್‌ಫರ್ಡರ ಮಾತೇ ಸಾಕ್ಷಿ. ೧೯೧೯ ರ ಫೆಬ್ರುವರಿ ತಿಂಗಳಲ್ಲಿ ಲಾರ್ಡ ಚೆಲ್ಮ್ಸ್‌ಫರ್ಡರವರು ಹೀಗೆ ಹೇಳಿದರು:

" Taking the material side first, I think it is not yet fully appreciated now effectively India contrubuted to met war requirements........The forces in Meso• potamia, for which we were largely responsible were fighting in a country uterly deficient of the ordinary requirements of a modern army. There were no roads, railways or machanical transport facilities on the rivers. The country over which the troops had to move was devoid of timber, or of fuiel, even of ordinary stone. Everything, even fuel wood for cooking and fodder for the horses had consequently to be imported........".

ಇಂತಹ ಪ್ರದೇಶಗಳಿಗೆ ಸಾಮಗ್ರಿಗಳನ್ನು ಪೂರಯಿಸಿ ಸೈನ್ಯ ಕಳಿಸಿ, ಬ್ರಿಟಿಶ್ ಸಾಮ್ರಾಜ್ಯವನ್ನು ಸಂರಕ್ಷಿಸಿದ ಪುರಾತನ ಸಂಸ್ಕೃತಿಯ ಭಾರತಕ್ಕೆ ಇನ್ನೂ ಸ್ವಾತಂತ್ರ್ಯವಿಲ್ಲ. ಆದರೆ, ಯುರೋಪದಲ್ಲಿಯ ಕಾಸಿಗೆ ಘಂಟೇರಿನ ಚಿಕ್ಕಪುಟ್ಟ-ಎರಡನೆಯವರ ಸ್ವಾತಂತ್ರ್ಯಹರಣಮಾಡಿದ — ಜನಾಂಗಗಳ ರಕ್ಷಣೆಗಾಗಿ ಬ್ರಿಟಿಶರು ಹೋರಾಡುತ್ತಾರೆ. ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ಸರ್ವಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಕೋಟ್ಯವಧಿ ಸೈನಿಕರಿಂದಲೂ ಹಿಂದೀ ಅಧಿಕಾರಿಗಳಿಂದಲೂ ಕೂಡಿದ ಸೈನ್ಯವನ್ನು ಸಿದ್ಧಮಾಡಿದ್ದರೆ, ಜಗತ್ತಿನ ಮೇಲೆ ಸದ್ಯದ ಯುದ್ಧದ ಆಪತ್ತು ಎಂದೂ ಬರುತ್ತಿದ್ದಿಲ್ಲ. Guerilla warfareದ ಮಾತು ಮಾತ್ರ ನಡೆದಿದೆ. ಆವರ್ಲ್ಡ ಆಕ್ಷಿನ ಅಮಲು ಮೊದಲಿನಂತೆಯೆ ತೀವ್ರವಾಗಿದೆ. ಉಗುರುಗಳಿಂದ ಗೆರಿಲ್ಲಾ ವಾರಫೇರ್ ನಡೆಯಿಸಬೇಕೊ?

ಮ್ಯುನಿಶನ್ ಬೋರ್ಡ

೧೯೧೭ ರ ಪ್ರಾರಂಭಕ್ಕೆ ಈ ಬೋರ್ಡಿನ ಸ್ಥಾಪನೆಯಾಯಿತು. ಹಿಂದುಸ್ಥಾನದಲ್ಲಿಯ ಈಗಿನ ಸೈನ್ಯಾಧಿಪತಿಗಳಾದ ವಾವ್ಹೆಲ್ಲರು 'ಸಾಮಗ್ರಿಗಳು ಬೇಕು; ಅವುಗಳಿಲ್ಲದೆ ಯುದ್ಧದಲ್ಲಿ ಯಶದ ಆಶೆ ಇಲ್ಲ' ಎಂದು ಹೇಳಿದಂತೆ, ಆಗಿನ ಕಮಾಂಡರ್ ಇನ್ ಚೀಫರಾದ ಸರ್ ಚಾರ್ಲಸ್ ಮನ್ರೋರವರು ಸೈನ್ಯಾಧಿಪತಿಗಳಾಗಿ, ಕೂಡಲೆ ಸಾಮಗ್ರಿಯ ಸಿದ್ಧತೆಯಾಗಬೇಕೆಂದು ಸಾರಿದರು. ಹಿಂದುಸ್ಥಾನದಲ್ಲಿಯ ಉದ್ಯೋಗಗಳ ಬೆಳವಣಿಗೆ ಈ ಬೋರ್ಡಿನ ಗುರಿ ಇದ್ದಿಲ್ಲ. ಬೇರೆ ಬೇರೆ ತಜ್ಞರ ಸಲಹೆಗನುಸರಿಸಿ ಯುದ್ಧಕ್ಕೆ ಬೇಕಾಗುವ ಸಾಮಾನುಗಳನ್ನು ತಯಾರಿಸುವುದರಲ್ಲಿ, ಈ ಬೋರ್ಡಿನ ಬೇರೆ ಬೇರೆ ಸುಮಾರು ೧೨ ಶಾಖೆಗಳು ಕೆಲಸಮಾಡುತ್ತಿದ್ದುವು. ಯುದ್ಧದನಂತರ ಯುದ್ಧಕಾಲದಲ್ಲಿಯ ಉದ್ಯೋಗಗಳು ಬಾಳಬೇಕು ಬೆಳೆಯಬೇಕೆಂಬ ಭಾವನೆ ಬ್ರಿಟಿಶರಲ್ಲಿ ಬಾರದುದು ಭಾರತೀಯರ ದುರ್ದೈವವೇ ಸರಿ. ಪ್ರೊಫೇಸರ್ ಕಾಣಂದಿಕರರು ಈ ಬೋರ್ಡಿನ ಬಗ್ಗೆ ಹೀಗೆ ಬರೆದಿದ್ದಾರೆ: " The primary object of the Board was therefore the immediate supply of the requirements of the Allied armies in the Eastern theatres of war, and not the development of Indian industries........" ಬೇರೆ ಬೇರೆ ಪ್ರಾಂತಗಳಲ್ಲಿ ಈ ಬೋರ್ಡಿನ ಪರವಾಗಿ ಸರಕುಗಳ ಸಿದ್ಧತೆ ಹಾಗೂ ಸಂಗ್ರಹದ ಕೆಲಸ ಸಾಗಿತು. **ಕಂಟ್ರೋಲ್ ಪದ್ಧತಿ, ಮ್ಯುನಿಶನ್ ಬೋರ್ಡಿನ ಕೇಸ್, ಸರ್ ಥಾಮಸ್ ಹಾಲಂಡರ ಸೇವಾ ನಿವೃತ್ತಿ** ಮೊದಲಾದುವುಗಳ ಬಗ್ಗೆ ಬರೆಯುವುದು ಅಪ್ರಸ್ತುತವಾಗುತ್ತದೆ. ೧೯೧೮ ರ ಜುಲೈ ತಿಂಗಳವರೆಗೆ ಕೊನೆಗಾಣುವ ೧೫ ತಿಂಗಳಲ್ಲಿ, ಈ ಬೋರ್ಡಿನ ವೆಚ್ಚ ೨೩ ಕೋಟಿ ರೂಪಾಯಿ ಇತ್ತು. ಈ ರಕಮಿನಲ್ಲಿ ಪರದೇಶಗಳಲ್ಲಿ ಕೊಂಡ ಸರಕುಗಳ ಕ್ರಯ ಕೂಡಿಲ್ಲ. ಬೇರೆ ಬೇರೆ ಶಾಖೆಗಳ ಕೆಲಸದ ವಿಸ್ತಾರದ ಕಲ್ಪನೆ ಬರಬೇಕೆಂದು, ಒಂದೇ ಶಾಖೆಯ ಒಂದು ಅಂಗದ ಒಂದು ಉದಾಹರಣೆ ಕೊಡುತ್ತೇನೆ. ತೊಗಲು ಹಾಗೂ ಉಣ್ಣೆಯ ಶಾಖೆಗಳನ್ನು ತಕ್ಕೊಳ್ಳುವ. ಹದಮಾಡಿದ ತೊಗಲಿನ ನಿರ್ಗತವು ಹೇಗೆ ಹೆಚ್ಚಾಯಿತು ನೋಡಿ:

	ಹಂಡ್ರೆಡ್‌ವೇಟ್	ಕ್ರಯ
೧೯೧೩-೧೯೧೪	೧೮೭೦೦೦	೧೦ ಲಕ್ಷ ೩೦ ಸಾವಿರ ಪೌಂಡು
೧೯೧೪-೧೯೧೫	೨೧೭೦೦೦	,, ,, ೬೦ ,, ,,
೧೯೧೬-೧೯೧೭	೩೨೩೦೦೦	೩೦ ,, ,, ,,
೧೯೧೭-೧೯೧೮	೩೬೫೦೦೦	೨೦ ,, ೩೦ ,, ,,

೧೯೧೩-೧೪ರಲ್ಲಿ ಒಂದು ಲಕ್ಷ ಬೂಟಿನ ಜೋಡುಗಳು ಸಿದ್ಧವಾಗಿದ್ದುವು. ಮುಂದೆ ಸರಕಾರಕ್ಕಾಗಿ ೨೦ ಲಕ್ಷ ಜೋಡಿಗಳು ಸಿದ್ಧವಾದುವು. ಕಾನಪುರದಲ್ಲಿ ಸರಕಾರಿ ಕಾರಖಾನೆಯಲ್ಲಿ (The Government Harness Factory) ೧೯೧೩-೧೪ ರಲ್ಲಿ ೩೩ ಸಾವಿರ ಪೌಂಡಿನ ತೂಕದ ಸರಕುಗಳು ತಯಾರಾಗುತ್ತಿದ್ದುವು. ೧೯೧೮-೧೯ ರ ಮೊದಲಿನ ಮೂರು ತಿಂಗಳಲ್ಲಿ ಅವುಗಳ ಉತ್ಪತ್ತಿ ೨ ಲಕ್ಷ ಪೌಂಡಿಗೆ ಮುಟ್ಟಿತು.

೧೯೧೭ ರ ಪ್ರಾರಂಭಕ್ಕೆ ಬೋರ್ಡಿನವರು ಆರ್ಡಿನನ್ಸ್ ಫ್ಯಾಕ್ಟರಿಗಳನ್ನು ತಮ್ಮ ಆಡಳಿತೆಯಲ್ಲಿ ಸೇರಿಸಿಕೊಂಡರು. ಈ ಕಾರಖಾನೆಗಳ ನಗದು ವೆಚ್ಚವು (Cash Expenditure) ೧೯೧೩-೧೪ರಲ್ಲಿ ೫೦ ಲಕ್ಷ ರೂ. ಇತ್ತು. ಅದು ೧೯೧೮-೧೯ ನೆಯ ಸಾಲಿನ ಮೊದಲಿನ ಮೂರು ತಿಂಗಳಲ್ಲಿ, ೧ ಕೋಟಿ ೧೬ ಲಕ್ಷಕ್ಕೆ ಏರಿತು. ಪ್ರತಿ ತಿಂಗಳು ೨೪ ಲಕ್ಷ ರೂಪಾಯಿ ಬೆಲೆಯ ಶೇಗಿನ ಕಟ್ಟಿಗೆ (Timber) ಇಜಿಪ್ತ, ಸ್ಯಾಲೋನಿಕಾ, ಈಸ್ಟ ಆಫ್ರಿಕಾ, ಮೆಸೊಪೊಟೆಮಿಯಾಗಳಿಗೆ ರಫ್ತ ಆಗುತ್ತಿತ್ತು.

ಕ್ರಯ ಕಡಮೆ, ಕಷ್ಟ ಹೆಚ್ಚು !

ಹಿಂದುಸ್ಥಾನದಲ್ಲಿಯ ಸರಕುಗಳ ಧಾರಣೆ ಸರಕಾರದಿಂದ ನಿಯಂತ್ರಿತವಾಗಿತ್ತು. ಈ ಧಾರಣೆಯಿಂದ 'ಮ್ಯುನಿಶನ್ ಬೋರ್ಡಿ'ನವರು ಸರಕುಗಳನ್ನು ಕೊಳ್ಳುತ್ತಿದ್ದರು. ಈ ಧಾರಣೆಯು ಯುದ್ಧದಲ್ಲಿ ತೊಡಗದೆ ಇದ್ದ ದೇಶಗಳಲ್ಲಿಯ ಧಾರಣೆಗಿಂತ ಕಡಿಮೆ ಇತ್ತು. ಇದರಿಂದ ಮಿತ್ರರಾಷ್ಟ್ರಗಳಿಗೆ (Allies) ಲಾಭ ಆಯಿತು, ಮತ್ತು ಭಾರತೀಯರಿಗೆ ಹಾನಿಯಾಯಿತು—ಎಂದು ಬೇರೆ ಹೇಳುವ ಕಾರಣವಿಲ್ಲ. ಎಂದರೆ ಇದೊಂದು ಭಾರತೀಯರು ಮಾಡಿದ ಅಪ್ರತ್ಯಕ್ಷ ಸಹಾಯವೆ. ಹಿಂದುಸ್ಥಾನಕ್ಕೆ ಪರದೇಶಗಳಿಂದ ಸರಕುಗಳನ್ನು ತರುವುದು ಕಠಿನವಾಗಿತ್ತು. ಹಿಂದುಸ್ಥಾನವು ನಿತ್ಯದ ಉಪಯೋಗದ ಕೆಲವು ಸಾಮಾನುಗಳಿಗಾಗಿ ಸಹ ಪರಾವಲಂಬಿಯಾಗಿತ್ತು. ಮಾನಮಾನ ಮುಚ್ಚಿಕೊಳ್ಳುವ ಬಟ್ಟೆಗಳ ಬಹುಭಾಗವು ಬ್ರಿಟನ್ನಿನಿಂದ ಬರುತ್ತಿತ್ತು. ಹಡಗುಗಳು ಯುದ್ಧಕಾರ್ಯದಲ್ಲಿ ತೊಡಗಿದ್ದುವು. ಜರ್ಮನರು ಸಂಧಿಸಾಧಿಸಿ ಸರಕುಗಳನ್ನು ತುಂಬಿಕೊಂಡು ಬರುವ ಹಡಗುಗಳನ್ನು ಮುಳುಗಿಸುವ ಕ್ರಮ ನಡೆಯಿಸಿದ್ದರು. ಇಂತಹ ಕಾಲದಲ್ಲಿ ಯುದ್ಧೋಪಯೋಗಿ ಸಾಮಾನುಗಳಿಗೆ ಹಡಗುಗಳಲ್ಲಿ ಮೊದಲು ಸ್ಥಳಕೊಟ್ಟು, ಹಿಂದುಗಡೆ ತಮಗೆ ಬೇಕಾದ ಸರಕುಗಳಿಗೆ ಸ್ಥಳ ಕೊಡಿರೆಂದು ಭಾರತೀಯರು ಹೇಳಿದರು. ಇದರಿಂದ ಸರಕುಗಳ ಆಯಾತ ಕಡಿಮೆ ಆಯಿತು. ಆದರಿಂದ ಅವುಗಳ ಧಾರಣೆ ವಿಪರೀತ ಹೆಚ್ಚಾಯಿತು. ಒಂದು ಧೋತರ ಜೋಡಿಯ ಕ್ರಯವು ಮೂರು ನಾಲ್ಕು ಪಟ್ಟು ಹೆಚ್ಚಾಯಿತು. ಆದರೂ ಈ ಕಷ್ಟವನ್ನು, ಸಾಮ್ರಾಜ್ಯ ಸರಕಾರಕ್ಕೆ ಸಹಾಯಮಾಡುವುದಕ್ಕಾಗಿ ಭಾರತೀಯರು ಗುಣಗುಟ್ಟದೆ ಸಹಿಸಿದರು. ಬ್ರಿಟನಿನಿಂದಲೇ ಹೋಗಿ ಅಮೇರಿಕೆಯಲ್ಲಿ ವಸಹಾತುಮಾಡಿಕೊಂಡಿದ್ದ ಮತ್ತು ಮುಂದೆ ಬ್ರಿಟನಿನಿಂದ ಸಿಡಿದು ನಿಂತ ಸಧರ್ಮೀಯ—ಸಜಾತೀಯ— ಸವರ್ಣೀಯ ಅಮೇರಿಕನರು, ಬ್ರಿಟಿಶರಿಗೆ ಹಾಗು ಬ್ರಿಟಿಶರ ಮಿತ್ರರಾಷ್ಟ್ರಗಳಿಗೆ ಬೇಕಾದ ಸರಕುಗಳನ್ನು ಹೆಚ್ಚಿನ ಧಾರಣೆಯಿಂದ ಮಾರಿಕೊಂಡು ವಿಪುಲ ಸಂಪತ್ತಿಯನ್ನು ಸಂಪಾದಿಸಿಕೊಂಡರು. ಭಾರತೀಯರಿಗೆ ಬರುವ ಸಂಪತ್ತು ಹೋಯಿತು, ಕಷ್ಟ ಹೆಚ್ಚಾಯಿತು. ಅರಿಕೆ ಮಾಡಿಕೊಂಡರೆ ಸ್ವರಾಜ್ಯ ದೊರೆಯುವುದೆಂಬ ಭರವಸೆ ಕಡಿದು ಹೋಯಿತು. ಸಹಕಾರದ ಪರಮಾವಧಿಯಾದರೂ ಸ್ವರಾಜ್ಯ ದೊರೆಯುವುದಿಲ್ಲವೆಂದು ಮನಗಾಣಿಕೆಯಾಯಿತು. ಅಸಹಕಾರದ ಆಂದೋಲನ ಪ್ರಾರಂಭಮಾಡಬೇಕಾಯಿತು.

ಪರಿಪರಿಯ ಸಹಾಯ

ಕಲಕತ್ತೆಯ ಹತ್ತಿರವಿರುವ ಜಮಶೇಟಪುರದ ಟಾಟಾರವರ ಕಬ್ಬಿಣದ ಕಾರಖಾನೆಯು, ಯುದ್ಧಕ್ಕೆ ಬೇಕಾದ ಕಬ್ಬಿಣದ ಹಾಗೂ ಉಕ್ಕಿನ ಸಾಮಾನುಗಳನ್ನು ಹಗಲಿರುಳೂ ದುಡಿದು ಪೂರೈಯಿಸಿತು. ೧೮೦೦ ಮೈಲು ಉದ್ದವಾದ ರೇಲ್ವೆ ಮಾರ್ಗ ಕಟ್ಟಲಿಕ್ಕೆ ಬೇಕಾದ ಸಾಮಾನುಗಳು ಸಿದ್ಧವಾದುವು. ೨೨೯ ಎಂಜಿನುಗಳು ತಯಾರಾದುವು. ಆದರೂ ಯುದ್ಧ ಮುಗಿದ ಬಳಿಕ ಹಿಂದೀ ರೇಲ್ವೆಗಳಿಗೆ ಬೇಕಾಗುವ ಎಂಜಿನುಗಳನ್ನು ಹಿಂದೀ ಕಾರಖಾನೆಗಳಲ್ಲಿ ತಯಾರಿಸುವ ಕೆಲಸ ಪ್ರಾರಂಭವಾಗಲಿಲ್ಲ. ಯುರೋಪಿಯನ್ ಕಾರಖಾನೆಗಳಿಗೆ ಹಿಂದುಸ್ಥಾನದಂತಹ ದೊಡ್ಡ ಗಿರಾಯಿಕಿಯನ್ನು ಕಳೆದುಕೊಂಡರೆ. . ಅವುಗಳ ಅವಸ್ಥೆ ಏನಾದೀತು.

ಮ್ಯಾಂಗನೀಜ್, ಅಭ್ರಕ, ಊಲ್‌ಫ್ರ್ಯಾಮ್, ಸಾಲ್ಟ್‌ಪೀಟರ್, (ಸೋರುಪ್ಪು) ಇವುಗಳಿಗೆ ೨ ರಿಂದ ೫ ಪಟ್ಟಿನವರೆಗೆ ಕಡಿಮೆ ಧಾರಣೆ ದೊರೆಯಿತು. ಹಿಂದುಸ್ಥಾನದಿಂದ ಅಕ್ಕಿ, ಗೋದಿ, ಜವೆಗೋದಿ, ಗೋಯಿನ ಜೋಳ, ಕಡಲೆ, ಎಣ್ಣೆಕಾಳು, ಎಣ್ಣೆ ಮೊದಲಾದವುಗಳು, ಬ್ರಿಟಿಶರಿಗೆ ಹಾಗೂ ಅವರ ಮಿತ್ರರಾಷ್ಟ್ರಗಳಿಗೆ ಕಳಿಸಲ್ಪಟ್ಟುವು. ಆದರೆ ಅವುಗಳ ಕ್ರಯಗಳನ್ನು ಸರಕಾರದವರು ನಿಯಂತ್ರಿಸಿದ್ದರು. ಈಗಿನಂತೆ ಕೆಲವು ರೇಲ್ವೆ ಹಳಿಗಳನ್ನು ಕಿತ್ತುಕೊಂಡು ಪರದೇಶಗಳಿಗೆ ಕಳಿಸುವುದರಲ್ಲಿ ಬಂದಿತ್ತು. ವ್ಯಾಗನುಗಳೂ ರೇಲ್ವೆಹಳಿಗಳನ್ನು ಹಿಂಬಾಲಿಸಿದ್ದುವು. ಇದರಿಂದ ಭಾರತೀಯರಿಗೆ ಕಷ್ಟವಾಯಿತೆಂಬುದನ್ನು ಹೇಳುವ ಕಾರಣವಿಲ್ಲ. ಕಷ್ಟ ಸಹಿಸಿದಂತೆ ಅವರು ನಷ್ಟ ಸಹಿಸಬೇಕಾಯಿತು. ೩೦ ಲಕ್ಷ ಟನ್ ಗೋದಿಯ ಪೂರೈಕೆಯಾಯಿತು. ನಾಲ್ಕು ಕೋಟಿ ಮಾರು ಖಾಕಿ ಅರಿವೆ ಇಂಗ್ಲಂಡಿಗೆ ಹೋಯಿತು. ಇದು ಅಂದು ವರ್ಷಕ್ಕೆ ಬೇಕಾಗುವಷ್ಟಿತ್ತಂತೆ. ಸಂಯುಕ್ತ ಪ್ರಾಂತದಿಂದ ೫೦ ಸಾವಿರ ಟನ್ನು ಕರಡು ಹುಲ್ಲು (hay) ೧೯೧೮ರ ಮೇ ತಿಂಗಳೊಳಗಾಗಿ ಹೊರೆ ಕಟ್ಟಿಸಿದ್ಧವಾಗಿತ್ತು. ಇದರ ಮೇಲಿಂದ ಬೇಡಿದ್ದನ್ನೆಲ್ಲ ಪೂರೈಯಿಸಲು ಭಾರತೀಯರು ಸಿದ್ಧರಾಗಿದ್ದರೆಂಬುದು ಒಡೆದುಕಾಣುತ್ತದೆ. ಕೊನೆಗೆ. ಲಾರ್ಡ ಚೆಲ್ಮ್ಸಫರ್ಡರು ೬ನೆಯ ಫೆಬ್ರುವರಿ ದಿವಸ ಮಾಡಿದ ಭಾಷಣದಲ್ಲಿ ಒಂದು ಅವತರಣಿಕೆಯನ್ನು ಕೊಡುತ್ತೇನೆ: "To England we sent over 100,000 tons of hides, to Italy about 44000 tons with a total value of some 21 millions sterling....Timber for structural work exclusive of fuel and railway slippers to the extent of 200,000 tons were sent to the armies in the near East. Railway matirials of local manufacture sufficient to construct over 1800 miles of track and 1300 feet of budging were despatched, while, from our own stock, we spared 229 locomotives and 5900 vehicles. The unusual military demand for cotton clothing was criticaly met by Indian mills whilst a large fraction of the woollen goods required were also manufactured locally from indigeuons and imported Tibetan wool. Altogether 42 million articles of troops clothing were manufactured."

ಮಾಂಡಲಿಕ ಭೂಪಾಲರು ಧನಸಹಾಯ ಮಾಡಿದಂತೆ ಸಾಮಗ್ರಿ ಸಹಾಯ ಮಾಡಿದರೆಂಬುದನ್ನು ನಾವು ಮರೆಯಬಾರದು. ಈ ಎಲ್ಲರ ಸಹಾಯದ ಶ್ರೇಯಸ್ಸಿನಲ್ಲಿ ಧನವಂತರಂತೆ ದರಿದ್ರರೂ ಭಾಗಿಗಳಾಗಿದ್ದರೆಂಬುದರ ಅರಿವು ಆಳರಸರಿಗೆ ಇರಬೇಕು.

ವ್ಯಾಘ್ರನಿಗೆ

ಶ್ರೀ. ನರಸಿಂಹ ಕುಲಕರ್ಣಿ

★

೧

ತಂಪು ಕಂಪು ತುಂಬಿಕೊಂಡ
ದಿನದಲಿರುಳು ಕವಿದಕಾಡಿ-
ನಲ್ಲಿ ದೇವ ನಿನ್ನ ಬೀಡ-
ನೂರಬಿಟ್ಟನು ;

ರೂಪವತಿಯ ಹೃದಯದಲ್ಲಿ
ಕ್ರೂರ ಭಾವವಡಗಿದಂತೆ
ಬನದ ಸಿರಿಯ ಬಸಿರಿನಲ್ಲಿ
ನಿನ್ನ ವಾಸವು !

೨

ಕಳ್ಳ ತುಳಿವ ಹೆಜ್ಜೆಯಿಡುತ
ಅಲ್ಲಿ ಇಲ್ಲಿ ಮೂಸಿ ನೋಡಿ
ಗಾಳಿ ಸುಳಿದ ಸದ್ದಿಗಾಸೆ-
ಗಿವಿಯ ಚಾಚುವೆ ;

ಹಸಿದು ಕೆರಳಿ ಗುಡುಗುತಿರಲು
ಸಿಡಿಲಿಗಿಳೆಯು ನಡುಗುವಂತೆ
ನಿನ್ನ ಗುಡುಗಿನಬ್ಬರಕ್ಕೆ
ಬಾನು ಬಿರಿವುದು !

೩

ನೆಗೆದುಬರುವ ಭಂಗಿಯಲ್ಲಿ
ಕಂಟಿಮರೆಯನಂಟಿಕೊಂಡು
ಹುಗಿದ ಕಣ್ಣ ಮಿಂಚಿಸುತ್ತ
ಹೊಂಚುಹಾಕುವೆ ;

ಸುತ್ತಲೆಲ್ಲ ಚಿತ್ತವಿಟ್ಟು
ಬೆದರುಗಣ್ಣನರಳಿಸುತ್ತ
ಬಳುಕಿ ಬರುವ ಎರಳೆಯನ್ನು
ಬೇಟೆಯಾಡುವೆ !

೪

ಅದರ ನೋವು ನಿನ್ನನಲಿವು,
ಕರುಳು ನಿನ್ನ ಕೂಳಿಗಾಗಿ ;
ಮರಣ ನಿನ್ನ ಬದುಕಿನಲ್ಲಿ |
ರೂಪುಗೊಂಡಿತು ;

ಹಿಂಸೆಗೈವ ಹೃದಯದಲ್ಲಿ
ಹೆತ್ತಮರಿಯನಪ್ಪಿಕೊಂಡು
ಅಕ್ಕರದಲಿ ನೆಕ್ಕುತಿರುವ
ಕರುಣೆಯುಕ್ಕಿತೆ ?

ಪ್ರೇಮ

'ಬಸುರಿವಾಳ'

★

ತಾರೆಗೆಣೆಯ ಕಣ್ಣ ಹೊಳ್ಪು,
ಹವಳದಂಥ ತುಟಿಯ ಕೆಂಪು,
ಹೂವ ಹೋಲ್ವ ಕೆನ್ನೆನುಣ್ಪು,
ಕಾಯಕಾಂತಿ ಸಕಲ ಸೊಂಪು,

* * *

ತರುವ ಕೆಳೆಯು ಪ್ರೇಮವಲ್ಲ ;
ಸೊಬಗ ಹೊದೆದ ಭಾವಿ ಹಗೆಯು ;
ಇಂಥ ಚೆಲ್ವು ನಿಲ್ವುದಿಲ್ಲ.
ಒಪ್ಪುನಡೆಯು, ಸರಳ ಬಗೆಯು,

* * *

ಸಮದ ಮೋಹ, ಸುಲಭ ಕಾಮ-
ವಿರಲು ಮಾತ್ರ (ಇರ್ವರಲ್ಲು)
ಎಂದೂ ನಂದದಂಥ ಪ್ರೇಮ-
ದೀಪ ಬೆಳಗದಿರದು ಅಲ್ಲಿ !

* * *

ಸೋಗಿಗಾಗಿ ಆದ ಕೆಳೆಯು
ಒಡಕು ಕೆರೆಯ ನೀರ ಬೆಳೆಯು !

(೪೮೬ ನೆಯ ಪುಟದಿಂದ ಮುಂದುವರಿದುದು)

ಆಗುವುದಿಲ್ಲವೆ? ಹಾಗೆ ಮಾಡುವುದಾದರೆ ಕರ್ನಾಟಕದ ಪುನಶ್ಘಟನೆಯ ಪ್ರಯತ್ನಕ್ಕೆ ಎಳ್ಳುನೀರು ಬಿಟ್ಟೇ ಹೊರಡಬೇಕಾಗುವುದು.

ಹಾಗೆ ಎಳ್ಳು-ನೀರು ಬಿಟ್ಟು ಕುಳಿಗೆಟ್ಟರಾದರೂ ಸುಖಿಸಿಕ್ಕುವುದೆನ್ನಬೇಕೆ? ಯುರೋಪದ ಕ್ರೈಸ್ತರು ದೇಶೀಯರಾದ ಕಪ್ಪುಬಣ್ಣದ ಕ್ರೈಸ್ತರನ್ನು ಕಡೆಗಣಿಸಿ ನೋಡುವಂತೆ ನೋಡಿಸಿಕೊಳ್ಳುವ ಸಂದರ್ಭ ನಮ್ಮ ಕನ್ನಡಿಗರ ಪಾಲಿಗೆ ಬರುವುದು. ಈಗ ಕೂಡ ಇಲ್ಲವೆ—ಒಂದು ಬಗೆಯ ವಿಚಿತ್ರ ಪಕ್ಷಪಾತ ಪರಿಸ್ಥಿತಿ? ಕನ್ನಡ ವಿದ್ಯಾರ್ಥಿಗಳು ಎಷ್ಟು ಬುದ್ಧಿವಂತರಿದ್ದರೂ ಪರೀಕ್ಷೆಗಳಲ್ಲಿ ಹೆಚ್ಚಾಗಿ ಮೇಲಿನ ತರಗತಿಗಳಲ್ಲಿ ಬರುವುದಿಲ್ಲ; ಎಂತಲೆ ಅವರಿಗೆ ಸ್ಕಾಲರ್‌ಶಿಪ್ಪು, ಬಹುಮಾನ ಮೊದಲಾದ ಅನುಕೂಲತೆಗಳು ಹೆಚ್ಚಾಗಿ ಸಿಕ್ಕುವುದಿಲ್ಲ. ಮಹಾರಾಷ್ಟ್ರ ವಿ. ವಿ. ನಿಲಯಕ್ಕೆ ಸೇರಿದಮೇಲಂತೂ ಕನ್ನಡಿಗರು ಅವರ ದೃಷ್ಟಿಯಲ್ಲಿ 'ಕಾನಡಿ ಅಪ್ಪಾ' ಗಳು. ಎಂದಮೇಲೆ ಅಲ್ಲಿ ನಮ್ಮ ವಿದ್ಯಾರ್ಥಿಗಳಿಗೂ ಅಧ್ಯಾಪಕವರ್ಗಕ್ಕೂ ಯಾವ ಸ್ಥಾನ-ಮಾನಗಳು ದೊರೆತಾವು? ಎಂತಲೆ ಇಂದು ಮುಂಬಯಿ ಕರ್ನಾಟಕದ್ದೊಂದು, ವಿಶ್ವವಿದ್ಯಾಲಯದ ದೃಷ್ಟಿಯಿಂದ ದೊಡ್ಡ ಸಮಸ್ಯೆಯಾಗಿ ನಿಂತಿದೆ. ಈ ಸಮಸ್ಯೆಯನ್ನು ಬಿಡಿಸಲು ಹಗಲಿರುಳೂ ವಿಚಾರಿಸುವುದು ಪ್ರತಿಯೊಬ್ಬ ಸುಶಿಕ್ಷಿತ ಕನ್ನಡಿಗನ ಕರ್ತವ್ಯವಾಗಿದೆ. ಅಂತಹ ವಿಚಾರ-ಚರ್ಚೆಗಳನ್ನೊಳಗೊಂಡ ಯುಕ್ತವಾದ ಲೇಖನಗಳಿಗೆ ಜಯಂತಿ ಅವಶ್ಯವಾಗಿ ಎಡೆ ಕೊಡುವುದು. ವಿಶ್ವವಿದ್ಯಾನಿಲಯ ವಿಚಾರದಲ್ಲಿ, ಇನ್ನೂ ಹೇಳಬೇಕಾಗಿರುವ ಹಲವು ನಮ್ಮ ಮಾತುಗಳನ್ನು ಮುಂದಿನ ಸಲದ ಸಂಚಿಕೆಯಲ್ಲಿ ಹೇಳಬೇಕೆಂದಿರುವೆವು. ಓಕ್ಕವರ ವಿಚಾರಸಲಹೆಗಳನ್ನೂ ಅಪೇಕ್ಷಿಸುವೆವು.

—ಸಂಪಾದಕರು.

ನೀನಾರ ಕೊಲ್ಲದಿರು ★

(ಅನುವಾದಿತ ಕಥೆ)*

ಶ್ರೀ. ಕೋ. ರಾ. ಕೃಷ್ಣಮೂರ್ತಿ, ಬಿ.ಎ. ಚಿಂತಾಮಣಿ

★

ಅಹಿಂಸೆಯ ತತ್ತ್ವವನ್ನು ಧರ್ಮದ ಮೂಲವೆಂದು ಹೇಳುವ ಸಮಾಜವೇ 'ಕೊಲೆಗೆ ಪ್ರತಿ ಕೊಲೆ' ಎಂಬ ನ್ಯಾಯವನ್ನು ಹೇಳುವುದು. ಕೊಲೆಗೆ ಕಾರಣ ಹೆಚ್ಚಾಗಿ ಆ ಕೊಲೆಗಾರನಲ್ಲ; ಆತನಿಗೊದಗಿದ ವಿಚಿತ್ರ ಸನ್ನಿವೇಶಗಳು. ಎಂದಮೇಲೆ ಕೊಲೆಗಾರನನ್ನು ಕೊಲ್ಲುವ ಶಿಕ್ಷೆ ಸತ್ಯಸಮ್ಮತವೆನಿಸುವುದೆ?

★

ನನಗೆ ಹದಿನೆಂಟನೆಯ ವಯಸ್ಸು ಮೀರಿತ್ತು. ಭಾರತದೇಶದ ಚಿಕ್ಕ ಜಿಲ್ಲೆಯೊಂದರ "ಕಾರಾಗೃಹ" ದಲ್ಲಿ ನೌಕರಿಯಲ್ಲಿದ್ದೆ. ಕೆಲಸಕ್ಕೆ ಸೇರಿ ಇನ್ನೂ ಹದಿನೈದು ದಿನಗಳಾಗಿದ್ದರೂ, ಐದು ಮರಣದಂಡನೆಗಳಲ್ಲಿ ಹಾಜರಿರಲು ಅಪ್ಪಣೆಯಾಗಿತ್ತು.

ರಾತ್ರಿ ಹನ್ನೆರಡು ಘಂಟೆಯ ಸಮಯ. ನನ್ನ ಅಧೀನದಲ್ಲಿರುವ ಚಾಕರರು ಕಾರ್ಯಾಸಕ್ತರಾಗಿ ಎಚ್ಚರಿರುವರೋ ಇಲ್ಲವೋ ಎಂದು ನೋಡಲು ಹೊರಟೆ.

ವಿಪರೀತ ಕತ್ತಲು. ಅನೇಕ ಯೋಚನೆಗಳು ಸುಳಿಯತೊಡಗಿದುವು ಮನಸ್ಸಿನಲ್ಲಿ. ಮೈಗೆ ನಡುಕ ಹುಟ್ಟಿತು. ಅಪರಿಚಿತ ಶಬ್ದ ಕೇಳಿದರೆ ಎದೆಯಲ್ಲಿ ಅಂಜಿಕೆ. ಆ ಕತ್ತಲೆಯಲ್ಲಿ— ಭೂತಗಳಿರುವುದರ ಕಲ್ಪನೆಯಾಯಿತು. ನಾನು ಅಷ್ಟೇನೂ ಧೈರ್ಯಶಾಲಿ ಅಲ್ಲ. ಕತ್ತಲೆ, ಮೇಲಾಗಿ ನಿಶ್ಶಬ್ದತೆ. ಎರಡು ಸಲ ಏನೋ ಸದ್ದಾಯಿತು. 'ಯಾರಾದರೂ ದುಷ್ಟರು ನನ್ನ ಬೆನ್ನನ್ನು ಹತ್ತಿರುವರೇ' ಎಂದು ಹೆದರಿದೆ. ಛೇ! ಮರದಿಂದ ಹುಣಿಸೆಕಾಯಿ ಉದುರಿದ ಸದ್ದು ಅದು! ನಾನು ಸರ್ಕಾರಿ ನೌಕರ; ನನ್ನ ಮೇಲೆ ಯಾರು ಹೊಂಚು ಹಾಕಬೇಕು?

ಹೆಬ್ಬಾಗಿಲ ಬಳಿ ಬಂದೆ. "ನಿಲ್ಲು, ಯಾರಲ್ಲಿ?" ಎಂದು ಕಾವಲುಗಾರನ ಕೂಗು. ಆದರೂ ಮೈ ನಡುಗಿ ಕೈಯಲಿದ್ದ ಬೆತ್ತ ಕೆಳಗೆ ಬಿತ್ತು. "ಸ್ನೇಹಿತ" ಎಂದೆ. "ಸ್ನೇಹಿತನಾದರೆ ಮುಂದೆ ಹೋಗಬಹುದು" ಎಂಬ ಅಪ್ಪಣೆ ಪಡೆದು ಶೀಘ್ರದಿಂದ ಸಾಗಿದೆ.

ಕಾರಾಗೃಹ ದೊಡ್ಡದು. ಕತ್ತಲಾದರೂ, ನಿಶ್ಶಬ್ದದಿಂದಿದ್ದರೂ, ಅಲ್ಲಿ ಮೂರುಸಾವಿರ ಬಂದಿಗಳಿರುವರೆಂದು ಮನಸ್ಸಿನ ಮೇಲೆ ಪರಿಣಾಮವಾಗುವುದು. ಹೆಜ್ಜೆ ಇಟ್ಟರೆ ಶಬ್ದ ಪ್ರತಿಧ್ವನಿತವಾಗುತ್ತಿತ್ತು.

ಕೈಯಲ್ಲಿ ಲಾಂದ್ರವಿತ್ತು. ಗೋಡೆಯ ಮೇಲೆ ಭೂತದ ಆಕಾರದಲ್ಲಿ ನನ್ನ ನೆರಳು ಬಿದ್ದು ನನ್ನನ್ನು ಕುಬ್ಜನಂತೆ ಮಾಡುತ್ತಿತ್ತು.

ಈ ಗೋಡೆಗೂ ಜೀವವಿದೆ. ಈ ನಿಶ್ಶಬ್ದತೆಯಲ್ಲಿ, ಒಳಗೆ ಸಂಭವಿಸುವುದನ್ನು ಗಂಭೀರವಾಗಿ ನೋಡುತ್ತ ನಿಂತಿದೆ. ಹಗಲಿನಲ್ಲಿ ಬಂದಿಯು ಬೆವರು ಸುರಿಸುವುದನ್ನು ನೋಡುತ್ತಲಿದೆ; ರಾತ್ರಿ ಲಾಂದ್ರ ಹಿಡಿದು ಕಾವಲಿರುವವನನ್ನು ನೋಡುತ್ತದೆ. ಬಂದಿಗಳ ಆಗಮನ-ನಿಷ್ಕ್ರಮಣಗಳನ್ನೂ ವರ್ಷ ವರ್ಷ ನೋಡಿರುತ್ತದೆ.

ಕೆಲವು ಬಂದಿಗಳು ಆಯುಷ್ಯದ ಬಹುಕಾಲ ಇಲ್ಲಿಯೆ ಕಳೆವರು. ಇನ್ನು ಕೆಲವರು ಒಂದೆರಡು ಮಾಸಗಳನ್ನು ಮಾತ್ರ. ಬೇರೆ ಕೆಲವರು ಹೋಗುವುದೇ ಇಲ್ಲ— ಅವರ ಕುಂದಿದ ದೇಹ ಒಂದು ದಿನ ಇಲ್ಲೇ ಮಣ್ಣಾಗುವುದು.

ಯಾರೋ ನನ್ನನ್ನು ಹಿಂಬಾಲಿಸುತ್ತಿರುವರೆಂಬ ಭಾವನೆಗೆ ಕಾರಣವೇನು? ಪ್ರಾಯಶಃ ಈ ನಾಲ್ಕು ಗೋಡೆಗಳ ಪ್ರಪಂಚದಲ್ಲಿ ಸತ್ತವರ ಅತೃಪ್ತ ಆತ್ಮಗಳು, ಈಗ ಸಮಾಧಾನವಿಲ್ಲದೆ ಅಡ್ಡಾಡುತ್ತಿರುವುವೋ?

ಆ ಐದು ಜನರ ಕೊಟಡಿಗೆ ಹೋದೆ. ಬೆಳಗಾದರೆ ಅವರ ಮರಣ! ಕೊಲೆಗಾರನು ಹತ್ತಿರ ಬಂದರೆ ನಮ್ಮ ಮನಸ್ಸಿನಲ್ಲಿ ಒಂದು ಭಾವನೆ ಉದ್ರೇಕಗೊಳ್ಳುತ್ತದೆಯಂತೆ. ಕೊಲೆಗಾರ ಬಂದಾಗ ಒಬ್ಬಾಕೆ—ಅವನು ತನ್ನನ್ನು ಕೊಲ್ಲಲು ಬಂದಿರುವನೆಂದು ಗೊತ್ತಿರದಿದ್ದರೂ—ಮೂರ್ಛೆ ಬಿದ್ದಳಂತೆ. ಇದೊಂದು ಸಂಬಲು ಅನರ್ಹವಾದ ಮನಶ್ಶಾಸ್ತ್ರಕ್ಕೆ ಸಂಬಂಧಿಸಿದ ಸಮಸ್ಯೆ ಇರಬಹುದು. ಇರಲಿ.

ಆ ಐದು ಜನರೂ ಸಹೋದರರು. ಅವರಲ್ಲಿ ಮಾನಸಿಕ ವ್ಯತ್ಯಾಸವೇನೂ ತೋರಲಿಲ್ಲ. ಎಲ್ಲರೂ ನನ್ನಂತೆಯೇ ಇದ್ದರು. ಅವರು ಬಂಧಿತರಾಗಿರದಿದ್ದರೆ ಪಾತಕಿಗಳೆಂದು ನಾನೇನೂ ಗುರುತಿಸುತ್ತಿರಲಿಲ್ಲ.. ಹಾಗಿದ್ದರು, ಅವರು.

ಎಂಟಡಿ ಅಗಲ; ಹತ್ತಡಿ ಉದ್ದ— ಇದು ಕೊಟಡಿಯ ಅಳತೆ. ಕಲ್ಲಿನ ಹಾಸಿಗೆ. ಹೊದೆಯಲು ಒಂದೊಂದು ಕಂಬಳಿ. ಏಳಡಿಯ ಮೇಲೆ ಒಂದು ಕಿಟಕಿ. ಬಾಗಿಲಿಗೆ ಕಬ್ಬಿಣದ ಸಲಾಕೆಗಳು.

* E. A. Loughlin ಅವರ ಕತೆಯೊಂದರಿಂದ. ಕೋ.

ಕೊಟಡಿಯ ಹೊರಗೆ ಮಿಣಿಮಿಣಿ ದೀಪ. ಅಲ್ಲಿಂದಿಲ್ಲಿಗೆ ಸುತ್ತು ತ್ತಿರುವ ಸಿಪಾಯಿಯ ಕಾವಲು.

ಇಬ್ಬರು ನಿದ್ದೆಮಾಡುತ್ತಿದ್ದರು. ಉಳಿದ ಮೂವರು ಪಂಜರ ದಲ್ಲಿ ಸಿಕ್ಕ ಪ್ರಾಣಿಗಳಂತೆ ಪಿಳಿಪಿಳಿ ಕಣ್ಣುಬಿಡುತ್ತಾ ಮುದುರಿ ಕೊಂಡು ಮಲಗಿದ್ದರು.

ತಾವು ಬೆಳಗಾದರೆ ಕೊಲ್ಲಲ್ಪಡುತ್ತೇವೆಂದು ಅವರಿಗೆ ಗೊತ್ತಿತ್ತು. ಎಂತಹ ಪರಿಸ್ಥಿತಿ! ಪಶ್ಚಾತ್ತಾಪವೇ ಮಹತ್ತಾದ ಶಿಕ್ಷೆ. ಹಾಳಾದ ಹತ್ತು ಸಾವಿರ ಬೆಳ್ಳಿಯ ತುಂಡುಗಳಿಂದ ಅವರಿಗೆ ಈ ಅವಸ್ಥೆ. ಹಣದಾಸೆ ಈ ಸಂಕಟಕ್ಕೆ ಎಳೆಯಿತು. ಇಲ್ಲಿ ಈ ಕಾರಾಗೃಹದಲ್ಲಿ ಅವರಿಗೆ ಆಗಲೇ ಹತ್ತುಸಾವಿರ ಸಲ ಸತ್ತಂತೆ ಆಗಿದೆ. ತಮ್ಮ ಅಪರಾಧಕ್ಕಾಗಿ, ಪಾಪಕ್ಕಾಗಿ ದೇವನಲ್ಲಿ ಮೊರೆ ಇಟ್ಟಿದ್ದಾರೆ ಆದರೆ! ಆದರೆ ಏನು? ಮನುಷ್ಯ ಮಾಡಿದ ಕಾನೂನಿಗೆ ಅವರು ವಿರುದ್ಧ ಹೋಗಿದ್ದಾರೆ; ಅದಕ್ಕೋಸ್ಕರ ಕಾನೂನು ತನ್ನ ಮಾರ್ಗ ಹಿಡಿಯಲೆ ಬೇಕು?

* * *

ಮೊಕದ್ದಮೆಯ ಕತೆ ಹೀಗೆ; 'ಒಬ್ಬ ಬೇಸಾಯಗಾರ ಮಗಳ ಮದುವೆ ನಿಶ್ಚಯಿಸಿ, ಅಳಿಯನ ಮಗಳ ಜೀವನಕ್ಕೆ ಅನುವಾಗ ಲೆಂದು ಹತ್ತುಸಾವಿರ ರೂಪಾಯಿ ಸೇರಿಸಿಟ್ಟ. ಈ ಐದು ಜನರಿಗೆ ಈ ವಿಷಯ ತಿಳಿಯಿತು. ಹಣದ ಆಸೆ ಹಿಡಿಯಿತು ಇವರಿಗೆ ತತ್ಪರಿಣಾಮವಾಗಿ ಬೇಸಾಯಗಾರ ಅವನ ಹೆಂಡತಿ ಕೊಲ್ಲ ಲ್ಪಟ್ಟರು. ಸರಿ.

ಕಾರಾಗೃಹದ ಭೇಟಿ ಮುಗಿಸಿ ಮನೆಸೇರಿದೆ. ಹಾಗೆಯೆ ಮಲಗಿದೆ.

ಮೂರುವರೆ ಘಂಟೆಗೇ ನನ್ನನ್ನು ಎಬ್ಬಿಸಿದರು. ನನಗೆ ಸ್ವಲ್ಪ ಆಶ್ಚರ್ಯವಾಯಿತು. ಆದರೆ ಕೂಡಲೆ ಮರಣದಂಡನೆಯ ಜ್ಞಾಪಕವಾಯಿತು. ಏಕೋ ಎದೆ ಒಡೆಯಿತು. ವಿಳಂಬಮಾಡದೆ ನವುವಸ್ತ್ರ ಧರಿಸಿ ಹೊರಟೆ.

ಬೆಳಗಿನ ಜಾವ, ಮಿನುಗುವ ವಜ್ರಗಳಿಂದೊಪ್ಪುವ ನೀಲಿ ಬಟ್ಟೆಯಂತೆ ಆಕಾಶ. ಸುಳಿಯುವ ತಂಗಾಳಿ. ಅನತಿದೂರದಲ್ಲಿ ಗುಡ್ಡದ ಮೇಲೊಂದು ದೇಗುಲ. ಉರಿಯುತ್ತಿದೆ, ಅಲ್ಲೊಂದು ದೀಪ.

"ಭಾರತಭೂಮಿ ಎಂತಹ ಸುಂದರನಾಡು!" ಎಂಬ ಉದ್ಗಾರ ತೆಗೆದೆ; ಕೂಡಲೇ ಮರಣಶಿಕ್ಷೆಯ ನೆನಪಾಯಿತು. 'ಇಂತಹ ಶಾಂತತೆಯಲ್ಲಿ, ಇನ್ನೇನು ತುಸು ಹೊತ್ತಿನಲ್ಲಿ, ಈ ನಿರಭ್ರವಾದ ಆಕಾಶ ಎಂತಹ ಭಯಂಕರ ದೃಶ್ಯವನ್ನು ನೋಡಲಿದೆ?' ಎಂದು ಯೋಚಿಸಿದೆ. ಬೆಳಕು ಹರಿಯುವುದು. ಕತ್ತಲೆಯು ಅಳಿಯುವುದು; ಹಕ್ಕಿಗಳು ಕೂಗುವುವು; ಎಲ್ಲವೂ ಸಾಮಾನ್ಯವಾಗಿರುವುದು; ಹಿಂದಿನಂತೆ ಏನೇನೂ ನಡೆಯಲಿಲ್ಲ ಎಂದೇ ತೋರುವುದು!

ಕಾರಾಗೃಹದ ಬಳಿ ಬಂದೆ. ಬೇರೆ ಅಧಿಕಾರಿಗಳೂ ಬಂದಿದ್ದರು. ಕೈದಿಗಳಿಗೆಲ್ಲಾ ಎಚ್ಚರು, ಗಲ್ಲಿಗೇರಿಸುವ ಐವರನ್ನು ನೋಡ ಬೇಕೆಂದು. ಆ ಐವರಲ್ಲಿ ಇಬ್ಬರು ಸ್ನಾನಮಾಡುತ್ತಿದ್ದರು, ಕೊನೆಯ ಬಾರಿ. ಸ್ನಾನದನಂತರ ಅವರಿಗೆ ಬಿಸಿ ಬಿಸಿ ಹಾಲನ್ನು ಕೊಟ್ಟರು. ಅದು ಏನು ಅವರನ್ನು ಉತ್ತೇಜನಗೊಳಿಸಲಿಕ್ಕೋ! ನಗೆಗೇಡು! ಅವರಲ್ಲೊಬ್ಬನು ಹೀಗೆ ಯೋಚಿಸಿಬೇಕು: "ನನಗೇಕೆ ಈ ಹಾಲು? ನೀವು ನನ್ನನ್ನು ಕೊಲ್ಲುವಿರಿ; ಹಸಿದ ಹೊಟ್ಟೆಯಲ್ಲಿಯೇ ಈ ಲೋಕವನ್ನು ನಾನು ಬಿಡಬಲ್ಲೆ" ಎಂದು.

ಸ್ವಲ್ಪ ಅವಕಾಶ ಅವರಿಗೆ ಕೊಟ್ಟರು, ದೇವರಲ್ಲಿ ಮೊರೆ ಇಡಲು. ಆದರೆ ಅವರು ಮೇಳೆಗಳೆಯುತ್ತಿದ್ದರು: 'ಕೊನೆಯ ಕ್ಷಣದಲ್ಲಿ ಎಲ್ಲಿಂದಾದರೂ ಸಹಾಯಬಂದೀತೇ' ಎಂದು ಅವರ ಆಶೆ ಇರಬಹುದು. ಕಿರಿಯವನು ಪ್ರಾರ್ಥನೆ ಹೇಳಲು ತೊಡಗಿದನು. ಗಂಟಲು ಬಿಗಿಯಿತು. "ಅಯ್ಯೋ, ನನ್ನ ಗಂಟಲೇ!" ಎಂದು ಬಿಕ್ಕಿದನು.

ಕೋಳಗಳು ತೊಡಿಸಲ್ಪಟ್ಟುವು. ತೋಳುಗಳು ಹಿಂಬದಿಗೆ ಬಿಗಿಯಲ್ಪಟ್ಟುವು. ಹೆಬ್ಬಾಗಿಲಲ್ಲಿ ಜಿಲ್ಲಾವೈದ್ಯಾಧಿಕಾರಿಗೂ ಜಿಲ್ಲಾ ನ್ಯಾಯಾಧೀಶರಿಗೂ ಕಾಯುತ್ತಿರಬೇಕಾಯಿತು, ಹತ್ತು ನಿಮಿಷ ಕಾಲ. ಆ ಹತ್ತು ನಿಮಿಷಗಳು, ಹತ್ತು ಯುಗಗಳಂತೆ ಕಂಡುವು. 'ಆ ಅಧಿಕಾರಿಗಳೇನಾದರೂ ದಯೆತೋರಿದರೇ?' ಎಂದು ನಾನು ಯೋಚಿಸುತ್ತಿದ್ದೆ. ಆದರೆ, ಅವರು ಅರೆನಿದ್ದೆಯಲ್ಲಿ ಎದ್ದು ಬೇಸರ ದಿಂದ ಬಂದರು.

ಬಂದಿಗಳ ಚಹರೆಪಟ್ಟಿಯ ಪರೀಕ್ಷೆಯಾಯಿತು. ಇನ್ನೇನೂ ನಾವಕಾಶಕ್ಕೆ ಆಸ್ಪದ ಇಲ್ಲ; ಇನ್ನೇನೂ ಆಶೆ ಇಲ್ಲ; ಈ ಶಿಕ್ಷೆಯಿಂದ ಉಳಿಯಲು ಸಾಧ್ಯ ಇಲ್ಲ.

ಎರಡು ಎತ್ತರವಾದ ಕಂಭಗಳು. ಒಂದು ನಪುರಾದ ಜಾರುವ ಕುಣಿಕೆಯ ಹಗ್ಗ. ಸಶಸ್ತ್ರಧಾರಿ ಕಾವಲುಗಾರರು ಎಲ್ಲಕಡೆ. ಆದರೆ ಆ ಸಿಪಾಯಿಗಳಿಗೆ ಇಂತಹ ನೋಟ ಒಗ್ಗಿಹೋಗಿತ್ತು. ಅವರ ಮುಖದಲ್ಲಿ ಏನೂ ಆಶ್ಚರ್ಯ ಇರಲಿಲ್ಲ.

"ರಾಮ, ರಾಮ, ರಾಮ, ರಾಮ...." ಇದು ಕಿರಿಯವನು ಕೂಗುವುದು. ಆದರೆ ಅಣ್ಣ ಶಾಂತನಾಗಿದ್ದನು. ಯಾವ ದೇವರ ನಾಮವನ್ನೂ ಉಚ್ಚರಿಸದಿದ್ದನು. ಮಾನಸಿಕ ವೇದನೆಯೋ ಅತಿಯಾಗಿತ್ತು.

ಸೀಮೆಸುಣ್ಣದಿಂದ ವರ್ತುಲಗಳು ಬರೆಯಲ್ಪಟ್ಟಿದ್ದುವು. ಒಂದೊಂದರಲ್ಲಿ ಒಬ್ಬೊಬ್ಬರಂತೆ ನಿಲ್ಲಿಸಲ್ಪಟ್ಟರು. ಅವರ ಕಾಲುಗ ಳನ್ನೂ ಬಿಗಿದು ಕಟ್ಟಿದ್ದರು. ಕುತ್ತಿಗೆಗೆ ಕುಣಿಕೆಗಳು ಹಾಕಲ್ಪಟ್ಟುವು. ಹಾಗೆಯೇ ಅವರ ತಲೆಯ ಮೇಲೆ ಇದ್ದ ಕರಿಯ ಟೋಪಿಗಳು ಕಣ್ಣಿನ ಮೇಲೆ ಮುಸುಕಿನಂತೆ ಎಳೆಯಲ್ಪಟ್ಟುವು. ವರ್ತುಲಗಳ ಕೆಳಗೆ ಕಬ್ಬಿಣದ ಬಾಗಿಲುಗಳು ಇದ್ದುವು. ಮುಖ್ಯಾಧಿಕಾರಿಯು 'ಎಲ್ಲಾ ಸರಿಯಾಗಿದೆ' ಎಂದು ತಲೆ ಅಲ್ಲಾಡಿಸಲು, ಆ ಬಾಗಿಲುಗಳ,

ಕೇಳಿಸ್ತಿಳಿದುವು. ಏಕಕಾಲದಲ್ಲಿ ಇಬ್ಬರು ಸೋದರರು ಎರಡು ಅಕ್ಕಿಯ ಚೀಲಗಳಂತೆ ನಿರ್ಜೀವರಾಗಿ ಕೆಳಗಿಳಿದರು. ಮುಗಿಯಿತು! ಎಲ್ಲವೂ ಅತಿ ಜಾಗ್ರತೆಯಾಗಿ ನಡೆಯಿಸಲ್ಪಟ್ಟಿತ್ತು. ಕೆಳಗೆ ಗುಂಡಿಯಲ್ಲಿದ್ದ ಆ ಎರಡು,—ಹಿಂದೆ ಸಜೀವವಾಗಿದ್ದ ವಸ್ತುಗಳನ್ನು ನೋಡಿದೆನು. ಮನಸ್ಸು ಕರಗಿತು. ನಡೆದ ಕಾರ್ಯಕ್ರಮವನ್ನು ಮತ್ತೆ ಜ್ಞಾಪಿಸಿಕೊಂಡೆ. ಆ ಕಿರಿಯವನು ಅಂತ್ಯಕಾಲದಲ್ಲಿ 'ರಾಮ, ರಾ..'' ಎಂದು ದೇವನಾಮೋಚ್ಚಾರಮಾಡಿದ್ದನು. ಕೊನೆಯ "ಮ" ಎಂಬಕ್ಷರ ಬಾಯಿಯಿಂದ ಹೊರಡುವಷ್ಟರಲ್ಲಿ ಅವನ ಇಹಜೀವನ ಮುಗಿದಿತ್ತು. ನನ್ನ ಹೊರತು ಉಳಿದ ಅಧಿಕಾರಿಗಳ ಮುಖದಲ್ಲಿ ಯಾವ ಪರಿಣಾಮವೂ ಆದಂತೆ ತೋರಲಿಲ್ಲ. ಅದು ಅವರ ದೈನಿಕ ಕಾರ್ಯಕ್ರಮದಲ್ಲೊಂದು. ಹಾಯ್! ಒಬ್ಬ ಅಧಿಕಾರಿಯೋ, ಕಿರುನಗೆಯಿಂದ ನೋಡುತ್ತಿದ್ದನು. ಹೋಗಿ ಅವನನ್ನು ಕಪಾಳದಲ್ಲಿ ಹೊಡೆಯೋಣವೇ— ಎನ್ನಿಸಿತು.

*   *   *

ನನ್ನ ಮನಸ್ಸಿನಲ್ಲಿ ಆಗಿನಿಂದ ಒಂದು ತುಮುಲಯುದ್ಧ ನಡೆಯುತ್ತಿದೆ. ನಾನು ಇಬ್ಬರನ್ನು ಕೊಲ್ಲಲು ಸಹಾಯಕನಾಗಿದ್ದೆ. ಇದು ನ್ಯಾಯಸಮ್ಮತವಾದ ಖೂನಿ; ನ್ಯಾಯಸಮ್ಮತವಾದ ಕೊಲೆಗಡುಕತನ; ಕಟುಕತನ, ದುರ್ಗುಣ, ದುರಾಶೆ, ದ್ವೇಷ, ಕ್ರೂರತನ ಇವಿಲ್ಲದಿದ್ದರೆ ನಾವೆಷ್ಟು ಸುಖಿಗಳಾಗಿರುತ್ತಿದ್ದೆವು! ನ್ಯಾಯ, ನಿಸ್ವಾರ್ಥತೆ, ವಿವೇಚನೆ ಇವು ನಮಗಿರಬೇಕಾದ ಗುಣಗಳು. ಹತ್ತೊಂಬತ್ತು ನೂರು ವರುಷಗಳ ಹಿಂದೆ ಒಬ್ಬ ನಮ್ರನಾದ— ಯುಗಪ್ರವರ್ತಕನಾದ— ನಾಜರತ್ ದೇಶದವನು "ನೀನಾರ ಕೊಲ್ಲದಿರು" ಎಂದು ಬೋಧಿಸಿದನು; ಆದರೆ ನಾವು ಆ ಪಾಠ ಕಲಿಯಲಿಲ್ಲ.

ಆ ಪ್ರಾತಃಕಾಲ ಆರುಘಂಟೆಗೆ ಇನ್ನಿಬ್ಬರು ಖೈದಿಗಳು ಹೊರಕ್ಕೆ ತರಲ್ಪಟ್ಟರು. ಒಬ್ಬ ಎದೆಗುಂದಿದ್ದನು; ಇನ್ನೊಬ್ಬ ನಗುತ್ತಿದ್ದನು. ಮರಣವನ್ನು ಇದಿರುನೋಡುತ್ತಿರುವವನನ್ನು ಕುರಿತು "ಹೆದರಬೇಕಾದುದು ಏನೂ ಇಲ್ಲ, ತಮ್ಮಾ, ನಿನಗಾಗಿ, ನಾವು, ಅಲ್ಲಿ ಕಾಯುತ್ತಿರುವೆವು" ಎಂದನು.

ಏನು ಧೈರ್ಯ ಅದು! ಎಂತಹ ಉತ್ಸಾಹಕೊಡುವ ಭಾವನೆ! ಮುಖ್ಯಾಧಿಕಾರಿಗಳು ಮುಂಜಾನೆಯ ಉಪಾಹಾರಕ್ಕೆ ಹೋದರು; ಕೊಂಚ ತಡವಾಯಿತು.

ಸಾಯುವಾಗಲೂ ಅವನು ಧೈರ್ಯದಿಂದಿದ್ದನು. ನೆಟ್ಟಗೆ ನಿಂತಿದ್ದನು. ಕಿರಿಯವನ ಮುಖ ಬಣ್ಣಗೆಟ್ಟಿತ್ತು. ತುಂಬಾ ನಡುಗುತ್ತಿದ್ದನು. ಕೊಲ್ಲಲ್ಪಡುವುದಕ್ಕಿಂತ ಅರೆಘಳಿಗೆ ಮುಂಚೆಯೇ ಅವನ ಪ್ರಾಣಪಕ್ಷಿ ಹಾರಿಹೋಗಿರಬೇಕೆಂದು ನನ್ನ ಊಹೆ.

ಕೊನೆಯವನು ಎಲ್ಲರಿಗಿಂತ ಧೈರ್ಯವಂತ. ಪ್ರಾಯಶಃ ಅವನು ಅಣ್ಣನ ಮಾತಿನಲ್ಲಿ ನಂಬಿಕೆ ಇಟ್ಟಿರಬೇಕು. ಮರಣಕ್ಕೆ ಹೆದರಲಿಲ್ಲ. ಅವನ ಯಾಚನೆ, ಕೊನೆಯಯಾಚನೆ— ಒಂದು ಚಿಟಿಕೆ ನಶ್ಯ! ಕೇಳಲ್ಪಟ್ಟ ಅಧಿಕಾರಿ ನಶ್ಯ ಕೊಡಲು ಹಿಂಜರಿದನು. ಖೈದಿಯು "ಕೊಡದಿದ್ದರೆ ಈ ರಾತ್ರಿ ದೆವ್ವವಾಗಿ ಬಂದು ನಿನ್ನನ್ನು ಕಾಡುವೆ" ಎಂದನು. ಜೈಲರನು ಕೊಡಬಂದನು. ಮುಖ್ಯಾಧಿಕಾರಿಯು ಬೇಡವೆನ್ನದೆ "ಬೇಕಾದಷ್ಟು ಕೊಡು" ಎಂದನು. ಕುಣಿಕೆ ಹಾಕಲ್ಪಟ್ಟು ಎಳೆಯುವಾಗ ಖೈದಿಯು "ತಾಳಿ, ತಾಳಿ, ನೀವು ಗಂಟಲನ್ನು ನೋಯಿಸುತ್ತಿದ್ದೀರಿ" ಎಂದನು!

ಅಬ್ಬಾ! ನಾವೇನು ಅವನೊಡನೆ ಆಟವಾಡುತ್ತಿರುವೆವೆಂದು ಯೋಚಿಸಿದನೇ? ಇನ್ನೊಂದುಕ್ಷಣ. ಎಲ್ಲವೂ ಮುಗಿಯಿತು.

ನಾನು ನೋಡಿದ ಪ್ರಥಮ ಮರಣದಂಡನೆ ಇದು. ನನ್ನ ಕೆಲಸಕ್ಕೆ ತಿಲಾಂಜಲಿ ಕೊಡೋಣವೆನ್ನಿಸುತ್ತದೆ. ಸ್ಕೂಲಿನಲ್ಲಿ ಚರ್ಚಾಕೂಟದಲ್ಲಿ, ಉಗ್ರವಾದ ಶಿಕ್ಷೆಯು ನ್ಯಾಯವೆಂದು ನನ್ನ ವಾದವಾಗಿತ್ತು. ಈ ದೃಶ್ಯ ನೋಡಿದ ನನ್ನಲ್ಲಿ ಬದಲಾವಣೆ ಆಗಿದೆ.

ಹೀಗೆಲ್ಲ ನಡೆಯಬೇಕು ಈ ಪ್ರಪಂಚದಲ್ಲಿ; ಇಲ್ಲವೇ ಸಮಾಜಕ್ಕೆ ಧಕ್ಕೆತಗಲುವುದು. ಆದರೆ ನನಗೇಕೋ ಇದು ಅನಾಗರಿಕ ಲಕ್ಷಣವೆಂದು ತೋರುತ್ತದೆ. ಭಾವೀ ಜನಾಂಗದವರು ನಮ್ಮನ್ನು ಕ್ರೂರಿಗಳೆನ್ನುವರು. ನಾವೀಗ ಹಿಂದಿನಕಾಲದಲ್ಲಿ ಹಿಂಸೆಯಾಗುತ್ತಿದ್ದುದನ್ನು ಖಂಡಿಸುವುದಿಲ್ಲವೇ?

ಸರ್ವಮಾನ್ಯ!

ಚಳಿಗಾಲದಲ್ಲಿ ಶಕ್ತಿಯ ಬಗ್ಗೆ

ಸರ್ವೋತ್ಕೃಷ್ಟವೆಂದು

ರಕ್ತವರ್ಧಕವನ್ನೇ

ಎಲ್ಲ ಜನರು ಉಪಯೋಗಿಸುತ್ತಿರುವರು.



ಅಷ್ಟವರ್ಗ
ಚ್ಯವನಪ್ರಾಶ
●
ಸುವರ್ಣ
ಮಾಲಿನೀ ವಸಂತ
●
ಮಕರಧ್ವಜಗುಟಿ
●
ಮುಂತಾದ
ಶಕ್ತಿವರ್ಧಕ
ಔಷಧಗಳನ್ನು
ತರಿಸಿರಿ.

ಕರ್ನಾಟಕ ಕೇಂದ್ರ ಮರಾಠಾಗಲ್ಲಿ, ಹುಬ್ಬಳ್ಳಿ.

ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವೇ?

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

★

ಅರ್ಥ- ಕಾಮಗಳನ್ನೂ ಪುರುಷಾರ್ಥಗಳೆಂದು ಸಾರಿದ ಭಾರತೀಯರ ಸಂಸ್ಕೃತಿಯು, ಆಧ್ಯಾತ್ಮಿಕವೊಂದನ್ನೆ ಪ್ರಧಾನವಾಗಿ ಹೇಳುವುದೆಂದು ಹೇಳುವ ಜನರು ನಿಜವನ್ನು ಹೇಳುವರೆಂದು ಒಪ್ಪಬಹುದೆ? ಇಂತಹ ಪುರುಷಾರ್ಥಸಾಧನೆಯ ಕಾರ್ಯ ಪಾಶ್ಚಾತ್ಯರ ಅನುಕರಣವೆನಿಸುವುದೆ?

★

ಲೇಖಾಂಕ ೨

(೩) ನಾವು ಪಾಶ್ಚಾತ್ಯರ ಅನುಕರಣ ಮಾಡಬಾರದೇಕೆ?

ಪಾಶ್ಚಾತ್ಯ ರಾಷ್ಟ್ರಗಳ ಅನುಕರಣ ನಮಗೆ ಬೇಡವೆಂಬ ಮಾತಿನಲ್ಲಿ ಎರಡು ಸಂಗತಿಗಳನ್ನು ಒಪ್ಪಿಕೊಂಡಂತಿದೆ. ಮೊದಲನೆಯದೆಂದರೆ, ಅವರು ಅನುಭವಿಸಿದಂತಹ ಪರಿವರ್ತನ—ಸ್ಥಿತ್ಯಂತರಗಳು ಇಲ್ಲಿಯೂ ಒದಗಿದರೆ, ಭಾರತೀಯರೂ ಅವರಂತೆಯೇ—ಪಾಶ್ಚಾತ್ಯರಂತೆಯೇ—ವಿಚಾರಿಸಬಹುದು, ಆಚರಿಸಬಹುದು, ಎಂಬ ಭೀತಿ. ಈ ಒಪ್ಪಿಗೆಯಿಂದ 'ಆಧ್ಯಾತ್ಮಿಕತೆಯು ಭಾರತದ ವಿಶಿಷ್ಟಪ್ರತಿಭೆ' ಎಂಬ ಮಾತು ಹುರುಳಿಲ್ಲದಂತಾಗುವುದು. ಯುರೋಪದಲ್ಲಿ ಒದಗಿದಂತಹ ಆರ್ಥಿಕ ಸಾಮಾಜಿಕ ಸ್ಥಿತ್ಯಂತರಗಳು ಇಲ್ಲಿ ಒದಗಲಿಲ್ಲವಾದುದರಿಂದಲೇ ನಿರುಪಾಯವಾಗಿ ನಮ್ಮ ಭಾರತೀಯರ ಪರಮಾರ್ಥವೂ ಆಧ್ಯಾತ್ಮವೂ ತಡೆದುಕೊಂಡು ಉಳಿದಿದೆಯೆಂಬುದು ಸ್ಪಷ್ಟವಾಗುವುದು. ಭಾರತದ ಪ್ರತಿಭೆಯು ತಾನಾಗಿಯೇ ಆಧ್ಯಾತ್ಮಿಕವಾಗಿದ್ದರೆ ಅದು ಎಂತಹ ಪರಿಸ್ಥಿತಿಯಲ್ಲಿಯೂ ತನ್ನನ್ನು ರಕ್ಷಿಸಿಕೊಳ್ಳುತ್ತಿತ್ತು. ಪರಿಸ್ಥಿತಿ ಬದಲಾದಂತೆ 'ಪಾಶ್ಚಾತ್ಯರ ಅನುಕರಣ ಮಾಡಬಾರದು, ಮಾಡಬೇಡಿರಿ,' ಎಂದು ಸಾರಿಹೇಳಿ ಹೆಣಗಾಡಬೇಕಾಗಿದ್ದಿಲ್ಲ. ಆದುದರಿಂದ 'ಭಾರತದ ಆಧ್ಯಾತ್ಮಿಕತೆಯು ಅದರ ಪ್ರಕೃತಿಯಲ್ಲ; ವಿಕೃತಿಯು!' ಎಂದು ಕಂಡುಬರುತ್ತದೆ.

ಇನ್ನು ಎರಡನೆಯ ಮಾತೆಂದರೆ, ಭಾರತದ ಆಧ್ಯಾತ್ಮಿಕತೆಯು ನಿಜವೇ ಆಗಿದ್ದರೆ, ಇಂದಿನ ಭಾರತೀಯ ರಾಷ್ಟ್ರವಾದವೇ ವ್ಯರ್ಥವಾದುದು.. ಎಂದು ಒಪ್ಪಿಕೊಂಡಂತಾಗುವುದು. ನಮ್ಮ ರಾಷ್ಟ್ರೀಯ ಆಂದೋಲನದ ಬೇರುಗಳೇ ಜನತೆಯ ಅಸಂತೋಷದಲ್ಲಿವೆ. ಜನತೆಯ ಅಸಂತೋಷದ ಕಾರಣವೆಂದರೆ ಅವರ ಹೊಟ್ಟೆಬಟ್ಟೆಗಳ ಗೋಳು. **ಭಾರತೀಯ ಬಡವರ ಒಡಲುರಿಯ ಸುಣ್ಣವೇ ಭಾರತೀಯ ರಾಷ್ಟ್ರಧ್ವಜಕ್ಕೆ ಬಣ್ಣ ಕೊಟ್ಟಿದೆ.** ನಾವು ರಾಜಕೀಯ ಸ್ವಾತಂತ್ರ್ಯವನ್ನು ಪಡೆಯಲು ಹೋರಾಡುತ್ತಲಿದ್ದೇವೆ. ಅದೇಕೆ? ನಮ್ಮ ಜನತೆಯ ಐಹಿಕ ಅನವಸ್ಥೆಯನ್ನು—ಬಾಳುಬದುಕಿನ ದುರವಸ್ಥೆಯನ್ನು ದೂರಮಾಡಲಿಕ್ಕೆ! ಎಂದಮೇಲೆ ನಮ್ಮ ಜನಾಂಗವು ಜಗತ್ತಿನ ಯಾವುದೇ ಜನಾಂಗದಂತೆಯೇ – ಜನಾಂಗದಷ್ಟೆಯೇ – ತಮ್ಮ ಲೌಕಿಕಜೀವನದ ಏಳುಬೀಳುಗಳನ್ನು ಕುರಿತು ಆಸಕ್ತಿಯನ್ನೂ ಆಸೆಬುರುಕತನವನ್ನೂ, ಅವುಗಳನ್ನು ಸರಿಪಡಿಸಕೊಳ್ಳಲು ಹೊಂಚು ಹಂಚಿಕೆಗಳನ್ನೂ ತೋರಿಸುವುದೆಂಬುದು ಸ್ಪಷ್ಟವಾಗುವುದು. (ನಿಜವಾಗಿಯೂ ಇದೆಲ್ಲ ಬೆಳಕಿನಷ್ಟು ಸ್ಪಷ್ಟವಿದೆ. ಆದರೆ ಕಾಣಲೊಲ್ಲೆನೆಂಬುವರಷ್ಟು ಕುರುಡರು ಇನ್ನಾರು?) ಎಂದಮೇಲೆ 'ಪಾರಲೌಕಿಕ' 'ಪಾರಮಾರ್ಥಿಕ' ಎಂದು ಮೊಳಗುವ ಲಕ್ಷಣವು ಸುಳ್ಳಿರಬೇಕು; ಇಲ್ಲವೆ ಸತ್ತೆ–ಸಂಪತ್ತಿಗಳಿಗಾಗಿ ಹೋರಾಡುವ ನಮ್ಮ ರಾಷ್ಟ್ರೀಯತೆಯು ಸುಳ್ಳಿರಬೇಕು!

ನಮ್ಮ ಸ್ವತಃಸಿದ್ಧ ಆಧ್ಯಾತ್ಮಿಕತೆಯನ್ನು ಸಿದ್ಧಮಾಡಲು ಪೇಚಾಡುವವರು ಇತಿಹಾಸ–ಪುರಾಣಗಳ ಉದಾಹರಣೆಗಳನ್ನು ಹುಡುಕುವುದುಂಟು. ಹಿಂದಿನ ದೃಷ್ಟಾಂತಗಳನ್ನು ಕೊಡುವುದುಂಟು. ಆದರೆ ಈ ಬಗೆಯು ಇಬ್ಬದಿಗೂ ಧಾರೆಯುಳ್ಳ ಕತ್ತಿಯಂತೆ. ಪಾಶ್ಚಿಮಾತ್ಯರೂ ತಮ್ಮಲ್ಲಿಯ ಯಾಜ್ಞವಲ್ಕ್ಯ-ಜನಕರ ಕಡೆಗೆ ಬೆರಳುತೋರಿಸಬಲ್ಲರು. ಆಧುನಿಕ ಭೌತಿಕ ಸಂಸ್ಕೃತಿಗೆ ಆಧ್ಯಾತ್ಮಿಕತೆಯ ಕಳೆಯನ್ನು ಕೊಡಲು ಇಂತಹ ಸಜ್ಜನರು ಅಲ್ಲಿ ಇಂದಿಗೂ ಹೆಣಗುತ್ತಿರುವರು! ಸತ್ಕಾರ್ಯಗಳಿಗಾಗಿ ವಿನಿಯೋಗಿಸುವುದರಿಂದಲೂ ದಾನದಿಂದಲೂ ಧನಸಂಪಾದನೆಯು ಶುದ್ಧವಾಗುತ್ತದಾದರೆ, **ರೊಕ್‌ಫೆಲರ್‌ನ** ಸಂಪತ್ತಿಯು ಆಸುರಿಯೇಕೆ? ಲಕ್ಷಾವಧಿ ಜೀವಗಳನ್ನು ನರಕದಿಂದ ನಾಸ್ತಿಕತೆಯಿಂದ ತಪ್ಪಿಸಿ ತಿದ್ದಲು ಕ್ರೈಸ್ತಧರ್ಮವನ್ನು ದಿಗ್ದೇಶಗಳಲ್ಲಿ

ಹಬ್ಬಿಸಲು ಆತನ ಪ್ರಚಂಡ ದಾನಧರ್ಮವು ವೆಚ್ಚವಾಗುತ್ತಿಲ್ಲವೇ? ಕಾರ್ನೆಗಿಯಂತಹ ಕೋಟ್ಯಧೀಶರು ಜಾಗತಿಕ ಶಾಂತಿಗಾಗಿ ವಿಪುಲ ಧನಸಹಾಯವನ್ನು ಮಾಡಿಲ್ಲವೇ? ದಾನಶೂರತನವೂ ಧರ್ಮವೀರತನವೂ ದೀನಬಂಧುತನವೂ ಭಾರತದಂತೆ ಯುರೋಪ-ಅಮೇರಿಕೆಯಲ್ಲಿಯೂ ಧಾರಾಳವಾಗಿ ಕಂಡುಬರುತ್ತದೆ. ಎಂದ ಮೇಲೆ ಅವರೂ ಆಧ್ಯಾತ್ಮಿಕರೋ? ನಾವೂ ಜಡವಾದಿಗಳೋ !

ಒಂದು ಮಾತನ್ನು ನಾವು ಮರೆಯಬಾರದು. ಪೃಥ್ವಿಯ ಯಾವುದೇ ಭಾಗದಲ್ಲಿರಲಿ,ಭೂಗೋಲದ ಯಾವುದೇ ಖಂಡದಲ್ಲಿರಲಿ, ಎಲ್ಲ ಜನಾಂಗಗಳೂ ತಮ್ಮ ಪ್ರತಿನಿತ್ಯದ ಬದುಕಿನಲ್ಲಿ ಉದ್ದೇಶ, ಉಪಾಯಗಳಲ್ಲಿ ಒಂದೇ ತರದವಾಗಿರುತ್ತವೆ. ಒಡೆದುಕಾಣುವ ಭೇದಗಳೆಲ್ಲ ಬರೇ ರೀತಿಯವು. ಉಳಿದ ಖಂಡಗಳಲ್ಲಿಯಂತೆ ಭಾರತದ ಜನಸಾಮಾನ್ಯರೂ ಮುಖ್ಯವಾಗಿ ತಮ್ಮ ಬಾಳುವೆಗೆ ಬೇಕಾದ ವಸ್ತು-ವ್ಯವಸಾಯಗಳಲ್ಲಿಯೇ ತೊಡಗಿರುತ್ತಾರೆ. ಜಡಸಾಧನೆಗಳನ್ನು ಅಳವಡಿಸಿಕೊಳ್ಳುವುದರಲ್ಲಿಯೇ ತೊಡಗಿರುತ್ತಾರೆ. ಈ ಜಡವಾದಿತನವು ಉಪಭೋಗದ ಅಭಿರುಚಿಯಲ್ಲ ; ಅವರ ಉಪಜೀವಿಕೆಯ ಆವಶ್ಯಕತೆಯು. ಇದು ಇಂದಿನ ಸ್ಥಿತಿಯಲ್ಲ. ಎಂದಿನಿಂದಲೂ ಬಂದು ಎಂದೆಂದಿಗೂ ಇರುವ ಸಂಗತಿಯು. ಒಂದು ಜನಾಂಗದ ಸಂಸ್ಕೃತಿಯನ್ನು ಅವರಲ್ಲಿಯ ಮಹಾತ್ಮರ ಚರಿತ್ರಗಳಿಂದ ಅಳೆಯುವುದಲ್ಲ. ಭಾರತದ ಅವತಾರಿಗಳೂ, ಮಹಾತ್ಮರೂ, ರಮಣಯೋಗಿಗಳೂ ಭಾರತೀಯ ಜೀವನದ ಅಪವಾದಗಳೂ-ಆದರ್ಶಗಳೂ ಇರಬಹುದು; ಆದರೆ ಅವರು ನಮ್ಮ ಜೀವನದ ಮಾದರಿಗಳಲ್ಲ. ಜನತೆಯ ಸಂಸ್ಕೃತಿಯನ್ನು ಅಳೆಯುವುದಾದರೆ ಅರಿತುಕೊಳ್ಳುವುದಾದರೆ—ಆ ಜನರ ಬಹುಸಂಖ್ಯಾಕರ ಜೀವನದ ಸ್ಥಾನ-ಮಾನಗಳನ್ನೇ ಪ್ರಮಾಣವಾಗಿಟ್ಟುಕೊಳ್ಳಬೇಕು. ದೇಶದಲ್ಲಿಯ ಕೆಲವೇ ಶ್ರೇಷ್ಠಿಗಳು-ಬುದ್ಧಿಮತ್ತೆಯುಳ್ಳ ಪರಿಷ್ಕೃತರು—ಉಂಟುಮಾಡಿಕೊಂಡ ಪ್ರೀತಿಯ ಮತತತ್ತ್ವಗಳಾಗಲಿ, ಆಡಂಬರದ ಮಾತುಗಳಾಗಲಿ, ಜನತೆಯ ಬದುಕಿನ ತಾತ್ತ್ವಿಕ ತಳಹದಿಯನ್ನು ಸಾಮಾಜಿಕ ವಿಚಾರಭೂಮಿಕೆಯನ್ನು ಪ್ರತಿಬಿಂಬಿಸುವುದಿಲ್ಲ. ಅಷ್ಟೇಕೆ? ಇಂತಹ ಬೌದ್ಧಿಕ ಪರಿಷ್ಕೃತರು ಸಮಾಜಶ್ರೇಷ್ಠಿಗಳು ಕೂಡ ತಮ್ಮ ವ್ಯಾವಹಾರಿಕ ಜೀವನದಲ್ಲಿ ವ್ಯವಸಾಯದ ಒತ್ತಡದಲ್ಲಿ ತಮ್ಮ ಕಂಗೆಡಿಸುವಷ್ಟು ಎತ್ತರವಾಗಿ ಕಂಗೊಳಿಸುವ ಆದರ್ಶ-ಕಲ್ಪನೆಗಳ ಗೋಪುರಗಳಿಂದ ಕೆಳಗಿಳಿದು, ಸಾಮಾನ್ಯ ಜನರ ಪಾತಳಿಯ ಮೇಲೆಯೇ ಬರಬೇಕಾಗುತ್ತದೆ. ನಮ್ಮಲ್ಲಿಯ ಬಹುಸಂಖ್ಯಾಕ ಬುದ್ಧಿವಂತರು, ತಮ್ಮ ವಂಶದ- ಜಾತಿಯ—ಆಧ್ಯಾತ್ಮಿಕ ಶ್ರೇಷ್ಠತೆಯನ್ನು ನಿಶ್ಚಿತವಾಗಿ ನಂಬಿರುತ್ತಾರೆ. ಆರ್ಯರ ಆದರ್ಶಗಳನ್ನು ರಕ್ಷಿಸಿಕೊಳ್ಳುವ ಕುರಿತು ಪ್ರಚಂಡ ಚಪ್ಪಾಳೆಗಳಲ್ಲಿ ತಮ್ಮ ಆವೇಶದ ಮಾತುಗಾರಿಕೆಯನ್ನು ಮುಗಿಸುತ್ತಾರೆ! ಯಾವುದೋ ಒಂದು ಗೂಢವಾದ (ಮೂಢವಾದ?) ವಿಚಿತ್ರ ತರ್ಕಪದ್ಧತಿಯಿಂದ ಅವರು ಒಂದು ನಿರ್ಣಯಕ್ಕೆ ಬಂದಿರುತ್ತಾರೆ:— ಆತ್ಮಸಮರ್ಪಣೆ, ಸೇವಾವೃತ್ತಿ: ತ್ಯಾಗ, ಪ್ರಾಮಾಣಿಕತೆ. ಚಿತ್ತಶುದ್ಧಿ ಮುಂತಾದ ಉದಾತ್ತಗುಣಗಳೆಲ್ಲ ಭಾರತದ ಒಡೆತನದುವೂ ಒಡಹುಟ್ಟಿಬಂದ ಲಕ್ಷಣಗಳೂ ಆಗಿರುವುವೆಂದು ಅವರ ಮನವರಿಕೆ. ಮಾನವಜಾತಿಯನ್ನೇ ದುಃಖ-ದುರವಸ್ಥೆಗಳಿಂದ ಉದ್ಧರಿಸಿ ಜಡವಾದಿತನದ ಪಾಪದಿಂದ ಮುಕ್ತಮಾಡಿ ವಿಶ್ವವನ್ನೆ ಆರ್ಯಮಯವಾಗಿ ಮಾಡಬೇಕೆಂಬುದೇ— ನಮ್ಮ ಭಗವಂತನ ಅವತಾರಭೂಮಿಯಾದ— ಭರತಖಂಡದ ಜನ್ಮಸಿದ್ಧ ಕಾರ್ಯವೆಂದು ಅವರು ಕನವರಿಸುತ್ತಿರುತ್ತಾರೆ. ಇದೆಲ್ಲ ಮಾತು ಕಿವಿಗೆ ಬಹಳೇ ಇಂಪಾಗಿದೆ. ತಲೆಗೂ ತಂಪಾಗಿದೆ. ನಂಬಿಗೆ-ನಿರ್ಧಾರಗಳ ಆವೇಶದಿಂದ ಸಾರಿಹೇಳಿದರೆ ತುಂಬ ಉತ್ತೇಜಕವಾಗಿವೆ; ಆದರೆ ಇವೆಲ್ಲ ಹೊಂಗನಸುಗಳಿಂದ ಎಚ್ಚೆತ್ತು ನೋಡಿದರೆ, ಹೀಗೆಲ್ಲ ನಂಬುವ ನಮ್ಮ ಭಾರತೀಯ ಬುದ್ಧಿಜೀವಿಗಳು— ಸುಶಿಕ್ಷಿತ, ಸುಸಂಸ್ಕೃತ, ಉಷ್ಣರಕ್ತದ, ಸ್ವಾಭಿಮಾನಿ ತರುಣರು—ಹಿಂಬಾಲಿಸುವ ನಿಜವಾದ ಆದರ್ಶವೇನು? ಎಂಬುದನ್ನು ಮನಗಾಣಬೇಕು. ಕೆಲಮಟ್ಟಿಗೆ ಶಿಕ್ಷಣದ ಸೋಂಕು ಪಡೆಯಬೇಕು. (ಅದೂ ಶಿಕ್ಷಣದಿಂದ ಬರುವ ಸಂಸ್ಕಾರಕ್ಕಾಗಿ ಅಲ್ಲ; ಆದರೆ ಸಂತೆಯ ಬೆಲೆಯನ್ನು ಲೆಕ್ಕಿಸಿ) ಆಮೇಲೆ ಬಡಬಡಿಸುವ ಬಡಕ ಹೆಂಡತಿ ಮತ್ತು ಬೇಂಕಿನಲ್ಲಿ ಬಡ್ಡಿಗಿಟ್ಟ ಹಣಕ್ಕೆ ಹುಂಡಿ—ಇವೆರಡನ್ನು ಭದ್ರವಾಗಿಟ್ಟುಕೊಳ್ಳಲು (ಇಲ್ಲಿ ಮತ್ತೆ, ಹೆಂಡತಿಯ ರಕ್ಷಣೆಯೂ ಈಗಿತ್ತಲಾಗಿ ಜಾತೀಯ ದೊಂಬಿಗಳಿಂದ ಕಠಿಣವೇ ಆಗಿದೆ;) ಮೈಮುರಿದು ದುಡಿಯುವುದೇ ನಮ್ಮ ಆಧ್ಯಾತ್ಮಿಕ ಸಂಸ್ಕೃತಿಯ ಪ್ರಾತಿನಿಧಿಕ ಚಿತ್ರವು ! ಜಡವಾದಿಯಾದ ಪಾಶ್ಚಾತ್ಯ ತರುಣರು ಇದಕ್ಕಿಂತ ಬೇರೆ ಆದರ್ಶವನ್ನು ಹಿಂಬಾಲಿಸುವರೇ? ಜೀವನದ ಬೇಕು-ಬೇಡಿಕೆಗಳನ್ನೂ ಹಸಿವೆ-ಹುಮ್ಮಸಗಳನ್ನೂ ಪೂರೈಸಿಕೊಳ್ಳುವ ಚಿಂತೆ-ಚಟುವಟಿಕೆಗಳು ಜಡವಾದದ ಒಂದು ಕುರುಹಾದರೆ, ನಾವು ಭಾರತೀಯರು ಪಾಶ್ಚಾತ್ಯರಷ್ಟೇ ಜಡವಾದಿಗಳಾಗಿ ಹಿಂದಿನಿಂದಲೂ ಸಾಗಿಬಂದಿದ್ದೇವೆ. ನಮ್ಮ ಮತ್ತು ಅವರಲ್ಲಿರುವ ಭೇದವು ನಿವೃತ್ತಿ-ಪ್ರವೃತ್ತಿಗಳದಲ್ಲ; ಪ್ರವೃತ್ತಿಯೊಳಗಿನ ನಿರ್ಬಲ-ಸಬಲತೆಗಳದು.

(೪) ನಮ್ಮ ಪುರುಷಾರ್ಥಗಳೂ ಜೀವನದ ಧರ್ಮವೂ

ಬದುಕುಳಿಯುವುದೂ, ತನ್ನ ಪೀಳಿಗೆಯನ್ನು ಬೆಳಸಿ ಬಾಳುವಂತೆ ಮಾಡುವುದೂ ಇವೆರಡೂ ಪ್ರತಿಯೊಂದು ಜೀವಿಯ ಮೂಲದ ಕರ್ತವ್ಯಗಳು. ಮಾನವಜೀವಿಯು ಸ್ವಾಭಾವಿಕವಾಗಿಯೇ ಇವೆರಡೂ ಕರ್ತವ್ಯಗಳನ್ನು— ಸಹಜಧರ್ಮಗಳನ್ನು— ಅದಷ್ಟು ಅನುಕೂಲ ಪರಿಸ್ಥಿತಿಯಲ್ಲಿ ನೆರವೇರಿಸಲು ಯತ್ನಿಸುತ್ತಾನೆ ಇಂತಹ ಪರಿಸ್ಥಿತಿಯ ಅನುಕೂಲತೆಗಳನ್ನು ಉಂಟುಮಾಡಿಕೊಳ್ಳಲೂ ಅವುಗಳನ್ನು ನಿರಂತರವಾಗಿ ಸುಧಾರಿಸಿಕೊಳ್ಳಲೂ ಬೇಕಾದ ಸಾಮರ್ಥ್ಯದಿಂದಲೇ ಮನುಷ್ಯನು ಇತರ ಪ್ರಾಣಿಗಳಿಗಿಂತ ಮೇಲಿನವನೆನಿಸಿಕೊಳ್ಳುತ್ತಾನೆ. ಆದ್ದರಿಂದ ಸುಖದ ಹಸಿವೆಯು—ತನ್ನ ಮತ್ತು ತನ್ನವರ ನೆಮ್ಮದಿಯ ಚಿಂತೆಯು—ಒಂದು ಪ್ರಾಣಿಧರ್ಮದ

ಪ್ರೇರಣೆಯಾಗಿದೆ. ಅದು ಪುಣ್ಯವೂ ಅಲ್ಲ. ಪಾಪವೂ ಅಲ್ಲ. ಇನ್ನು ಮಾನವಕುಲದ ಹಿತದ ನೋಟದಿಂದ ಅದನ್ನು ಪುಣ್ಯವೆಂತಲೇ ಎಣಿಸಲು ಅಡ್ಡಿಯಿಲ್ಲ. ಆದರೆ ಇದು ಆಧ್ಯಾತ್ಮಿಕತೆಯಲ್ಲ. ಮಡದಿಮಕ್ಕಳು, ಬದುಕು-ಬಳಗ, ಸಂಪತ್ತು-ಸಮಾಜ ಇವೆಲ್ಲವುಗಳ ಇಚ್ಛೆಯನ್ನೂ ಏಷಣೆಯನ್ನೂ ತೊರೆದಾಗಲೇ ಆಧ್ಯಾತ್ಮಿಕತೆಯು ಮೈವೆತ್ತುವುದು. ಆದರೆ ಈ ಆಧ್ಯಾತ್ಮಿಕತೆಯು ವಿವೇಕಕ್ಕೆ ಒಪ್ಪುವಂತಹದಲ್ಲ. ಹೆಚ್ಚು ಹೆಚ್ಚು ಸೌಕರ್ಯ-ಸಲಕರಣೆಗಳನ್ನು ಅಳವಡಿಸಿಕೊಳ್ಳಲು ಕುಲ, ಗ್ರಾಮ, ಸಭೆ, ನಗರ ಮತ್ತು ರಾಷ್ಟ್ರಗಳನ್ನು ವಿಕಾಸಗೊಳಿಸಿಕೊಂಡು, ನಿಸರ್ಗದ ಶಕ್ತಿಗಳನ್ನು ಹೂಡಿ ಹದನಮಾಡಿ, ತನ್ನ ಪರಿಸ್ಥಿತಿಯನ್ನು ಹಸನುಗೊಳಿಸಿ, ಸುಖದ ಪೈರು ಬೆಳೆಸಿಕೊಳ್ಳುವುದೆಂದರೆ ಜಡವಾದಿತನವೆಂದಾದರೆ, ಕಾಡಾಡಿಯಾಗಿ ಅನಾಯಾಸವಾಗಿ ಸಿಗುವ ಹಣ್ಣು-ಕಾಯಿಗಳನ್ನು ತಿಂದು ಕಾಲಕಳೆಯುವ "ಯದೃಚ್ಛಾ ಲಾಭ ಸಂತುಷ್ಟ" ನಾದ ವಾನರನೇ ಆದರ್ಶನರನೆಂದು ತಿಳಿಯಬೇಕಾದೀತು. ಈ ತಿಳಿವಳಿಕೆ ಮನುಷ್ಯತ್ವದ ಅಪಮಾನವೇ ಸರಿ.

ನಿಜವಾಗಿಯೂ ಆಧ್ಯಾತ್ಮಿಕತೆಯನ್ನು ಪ್ರತಿಪಾದಿಸುವಂತಹುದು ಇಂತಹ ಅಪಮಾನವನ್ನು ಮಾಡಲು ಸಹ ಹಿಂಜರಿಯದೆ ಜಡವಾದದ ವಿರೋಧವನ್ನು ಬೆಳೆಸಬೇಕು. ಆದರೆ ಆಧ್ಯಾತ್ಮವಾದಿಗಳು ತಮ್ಮ ಅನುಕೂಲತೆಗಾಗಿ ಅಷ್ಟೊಂದು ದೂರ ತಮ್ಮ ಅರ್ಥವನ್ನು ಎಳೆಯುವುದಿಲ್ಲ. ಭಾರತೀಯ ಸಂಸ್ಕೃತಿಯಲ್ಲಿ ಮೇಲೆ ವಿವೇಚಿಸಿದ ಜಡವಾದಿ ಭೂಮಿಕೆಯು ಒಳಪಟ್ಟಿದೆ. ನಿವೃತ್ತಿಯನ್ನೂ ವೈರಾಗ್ಯದ ಪರಮಭಾಗ್ಯವನ್ನೂ ಅದೆಷ್ಟೇ ಕೊಂಡಾಡಿದರೂ, ಸಂತತಿ, ಸಂಪತ್ತು, ಮತ್ತು ಸುಸ್ಥಿತಿಗಳನ್ನು ಬಯಸುವ ಬೆಳೆಸುವ ಜಡವಾದಿಯಾದ ಐಹಿಕದೃಷ್ಟಿಯನ್ನು, ತಮ್ಮ ಆಧ್ಯಾತ್ಮಿಕತೆಗೆ ವಿರೋಧಕವೆಂದು ಹಿಂದಿನ ಹಿರಿಯರು ತಿಳಿದಿದ್ದಿಲ್ಲ. (ಆದರೆ ಇಂದಿನ ಅಧ್ಯಾತ್ಮವಾದಿಗಳ ದೃಷ್ಟಿಯಿಂದ, ಐತಿಹಾಸಿಕ ರಾಷ್ಟ್ರಪುರುಷರಾದ ಶಿವಾಜಿ, ಪ್ರತಾಪರಂಥವರು ಹೇಗೆ ದಾರಿತಪ್ಪಿದ ದೇಶಭಕ್ತ (mis guided patriots) ರೆಂದೆನಿಸಿಕೊಂಡರೋ, ಹಾಗೆಯೇ ಭಾರತೀಯ ಸಂಸ್ಕೃತಿಯ ಹಿಂದಿನ ಶಾಸ್ತ್ರಕಾರರೂ ದಾರಿ ತಪ್ಪಿದವರೆಂದು ಎಣಿಸಲ್ಪಡಬಹುದು. ಏಕೆಂದರೆ, ಪಾಪ, ಅವರಿಗೆ ತಮ್ಮ ಸಂಸ್ಕೃತಿಯು ಆಧ್ಯಾತ್ಮಿಕವೆಂದು ಗೊತ್ತೇ ಇದ್ದಿರಲಿಕ್ಕಿಲ್ಲ.) ಭಾರತೀಯ ಜೀವನದ ಉದ್ದೇಶಗಳು ನಾಲ್ಕು ಪುರುಷಾರ್ಥವಾಗಿವೆ. ಧರ್ಮ ಮತ್ತು ಮೋಕ್ಷಗಳ ಸಮವೆ ಒಳ್ಳೇ ಭಾವಿಕತನದಿಂದ "ಸಂಪುಟೀಕರಣ" ಮಾಡಿ ಕೂಡ್ರಿಸಿದರೂ, ಅರ್ಥ-ಕಾಮಗಳು ತಮ್ಮ ಅರ್ಥವನ್ನು ಕಳೆಕೊಳ್ಳುವುದಿಲ್ಲ. ಭಾರತೀಯರ ಸಂಸ್ಕೃತಿಯ ಮಂಟಪವು ಈ ನಾಲ್ಕೂ ಕಂಭಗಳ ಮೇಲೆ ನಿಂತಿದೆ. ಒಂದೇ ಮೋಕ್ಷದ ಮೇಲೆ ನಿಂತ ಡೇರೆಯಲ್ಲ.

ಇನ್ನು ಈ ನಾಲ್ಕು ಪುರುಷಾರ್ಥಗಳಲ್ಲಿ ನಮ್ಮ ಜನಾಂಗವು ಹೆಚ್ಚಾಗಿ ನಡುವಿನವೆರಡನ್ನೇ ನೋಡಿಕೊಂಡು ಬಂದಂತಿದೆ. ಅರ್ಥ-ಕಾಮಗಳ ಸಂಪಾದನೆಯು ಬಹಳವಾಗಿ ನಡೆಯುತ್ತದೆಂತಲೇ ಸಮಾಜದ ಸ್ಥಿರತೆಗಾಗಿ ಧರ್ಮದ ನಿಯಂತ್ರಣವನ್ನಿಟ್ಟು ಮಾಡಬೇಕಾಯಿತು. ವ್ಯಾಸಮಹರ್ಷಿಯು ಕಳವಳದಿಂದ ಕೂಗಿ ಸಾರಿದಂತೆ—'ಧರ್ಮದಿಂದಲೇ ಅರ್ಥಕಾಮಗಳನ್ನು ಪಡೆಯಿರಿ!' ಎಂದು ಒತ್ತಿ ಒತ್ತಿ ಹೇಳಬೇಕಾಯಿತು. ಈಗಿನ ಮಾತು ಒತ್ತಟ್ಟಿಗಿರಲಿ, ಮಹಾಭಾರತಕಾಲದಲ್ಲಿ ಧರ್ಮದ ಪ್ರತಿಷ್ಠೆ ಪ್ರೇರಣೆ ಅಷ್ಟೊಂದು ಜೀವಂತವಿರುವಾಗ ಕೂಡ ವ್ಯಾಸರು "ಒದರಿಕೊಂಡರೂ ಯಾರೂ ಕಿವಿಗೊಡಲಿಲ್ಲ" ಎಂದು ಒಪ್ಪಿಕೊಳ್ಳುವರು. ಬುದ್ಧಿಹೀನರೂ ಬಡವರೂ ಅಲ್ಲದೆ, ಬಲ್ಲವರು—ಭೀಷ್ಮದ್ರೋಣರಂಥವರು ಕೂಡ—ಧರ್ಮಕ್ಕಿಂತ ಅರ್ಥವನ್ನೇ ಹೆಚ್ಚು ಅಂಟಿಕೊಂಡಿದ್ದರು. 'ಮನುಷ್ಯನು ಅರ್ಥದ ದಾಸನು; ಅರ್ಥವು ಯಾರ ಆಳೂ ಅಲ್ಲ!..' ಎಂದು ತಿಳಿದು, ಅವರು ಬಹುಜನರು ಹೋದ ಹಾದಿಯನ್ನೇ ಹಿಡಿದಿದ್ದರು. ಇಂತಹ ಶ್ರೇಷ್ಠರ ನಡತೆಯನ್ನು ಇತರರು ಪ್ರಮಾಣವಾಗಿಟ್ಟುಕೊಂಡಿದ್ದರು. ಮೋಕ್ಷದ ಮಾತಂತೂ ಬೇಡ. ಮೋಕ್ಷ-ಸಿದ್ಧಿಗಾಗಿ ಸಾವಿರ ಜನರಲ್ಲಿ ಒಬ್ಬಾನೊಬ್ಬನು ಅದರ ಸಾಧನೆ ಮಾಡಿದರೆ ಹೆಚ್ಚು. ಇಂತಹ ಅಪರೂಪ ಸಾಧಕರಲ್ಲೂ ಎಲ್ಲಾದರೊಬ್ಬನಿಗೆ ಸಿದ್ಧಿ ಲಭಿಸಿದರೆ ಪುಣ್ಯ! ಅಂದಿನ ಆಧ್ಯಾತ್ಮಿಕತೆಯ ಈ ಸಹಸ್ರಾಂಶದ ಪ್ರಮಾಣವನ್ನು ಪ್ರತ್ಯಕ್ಷ ಭಗವಂತನೇ ಕೊಟ್ಟಿರುವನು. ಇದು ಭಾರತೀಯ ಸಂಸ್ಕೃತಿಯು ಶಿಖರಕ್ಕೆ ತಲ್ಪಿದಂದಿನ ಸುವರ್ಣಯುಗದ ಕತೆ! ಇದು ಭಾರತೀಯ ಸಂಸ್ಕೃತಿಯ ಆಧ್ಯಾತ್ಮಿಕತೆಯ ಚಿತ್ರ! ಇದಕ್ಕಿಂತ ಹೆಚ್ಚು ಆಧ್ಯಾತ್ಮವು ಇಂದು ನಮ್ಮ ಬಡ ಜನತೆಯಲ್ಲಿ ಇದೆಯೇ? ಜನತೆಯೇಕೆ, ಘನತೆಗೇರಿದ ಬಹುಜನ ಬಲ್ಲವರಲ್ಲಿದೆಯೇ?

ಜಡವಾದಿಯಾದ ಪಾಶ್ಚಾತ್ಯ ಸಂಸ್ಕೃತಿಯ ವಿರುದ್ಧ ಯಾವಾಗಲೂ ಒಗೆಯಲ್ಪಡುವ ಆರೋಪವೆಂದರೆ ಅಲ್ಲಿಯ ಕಾಮುಕತೆಯದು. ಈ ಸಂಗತಿಯಲ್ಲಿ ಕೂಡ ಭಾರತೀಯರ ಆತ್ಮಸಂಭಾವನೆಗೆ ಇಂದಿನ ವ್ಯವಹಾರದಲ್ಲಾಗಲೀ, ಹಿಂದಿನ ಶಾಸ್ತ್ರಗಳಲ್ಲಾಗಲೀ, ಪ್ರಮಾಣವಿಲ್ಲ. ಸ್ತ್ರೀಸೌಂದರ್ಯವನ್ನು ಬಣ್ಣಿಸುವುದರಲ್ಲಿ ಭಾರತೀಯ ಪ್ರತಿಭೆಯು ನೆಚ್ಚಮಾಡಿದಷ್ಟು ಕಲ್ಪಕತೆಯನ್ನೂ ರೋಚಕತೆಯನ್ನೂ ಇನ್ನಾವ ರಾಷ್ಟ್ರದ ಪ್ರತಿಭೆಯೂ ಕಾಣಿಸಿರಲಿಕ್ಕಿಲ್ಲ. ಸ್ತ್ರೀಶಬ್ದದ ಪರ್ಯಾಯವಾಗಿ ಬರುವ ನಮ್ಮ ಸಂಸ್ಕೃತಶಬ್ದಗಳನ್ನು ನೋಡಿದರೆ, ನಮ್ಮ ಜನರ ರಸಿಕತೆಯ ಆಳವು ಕಂಡುಬರುವುದು. ವಸ್ತುತಃ, ಯಾವುದೇ ಜನಾಂಗದ ಪ್ರಾಚೀನ ಇಲ್ಲವೇ ಮಧ್ಯಯುಗದ ಸಾಹಿತ್ಯವು, ಭಾರತೀಯ ಕಾವ್ಯ-ಪುರಾಣಗಳಲ್ಲಿ ತುಂಬಿತುಳುಕುವಷ್ಟು ಶೃಂಗಾರವನ್ನು ಬಣ್ಣಿಸಿಲ್ಲ. ಶೃಂಗಾರವು, ರಸರಾಜನಾಗಿ, ಮೋಕ್ಷಪರವಾದ ಭಕ್ತಿಯು ಕೂಡ ಶೃಂಗಾರಿಕ ರೂಪದಲ್ಲಿ ಬಣ್ಣಿಸಿದಷ್ಟು ಮತ್ತಾವ ರೀತಿಯಲ್ಲಿಯೂ ಹಾಡಲ್ಪಟ್ಟಿಲ್ಲ. ಬ್ರಹ್ಮಜ್ಞಾನಪರವಾದ ಬ್ರಹ್ಮಸೂತ್ರಗಳು ಕೂಡ ಕಾಮವಾಸನೆಯು ಶಿಶುವಿನಲ್ಲಿ ಬೀಜರೂಪವಾಗಿರುತ್ತದೆಂತಲೂ ಯೋಗ್ಯ ವಯಸ್ಸು ಬಂದಾಗ ಪೂರ್ಣ ಅಭಿವ್ಯಕ್ತಿಯನ್ನು

ಪಡೆಯುವುದೆಂತಲೂ ಸಾರಿದ್ದರಿಂದ, ಅದನ್ನು ಉಪಭೋಗಿಸ ಬೇಕೆಂದು ಧ್ವನಿತಮಾಡಿವೆ. ಜ್ಞಾನ, ಭಕ್ತಿ, ಮತ್ತು ಕರ್ಮ ಇವುಗಳ ಲ್ಲಿಯ ಭಕ್ತಿಮಾರ್ಗದ ಅತ್ಯಂತ ಲೋಕಪ್ರಿಯತೆಯನ್ನು ಅವಲೋ ಕಿಸಿದರೆ, ಜನತೆಯು ಕಾಮುಕತೆಯ ಬಗ್ಗೆ ಉದಾಸೀನವಾಗಿತ್ತೆಂದು ಹೇಳಲು ಬಂದೀತೇ! ಜನತೆಗೆ ಎಲ್ಲ ಭಗವದವತಾರಗಳಲ್ಲಿ ಕೃಷ್ಣನು ಹೆಚ್ಚು ಪ್ರಿಯನು. ಕೃಷ್ಣಾವತಾರದಲ್ಲಿಯೂ—ಗೀತೆಯನ್ನು ಸಾರುವ ರಾಜಕಾರ್ಯಧುರಂಧರನಾದ— ಯೋಗೀಶ್ವರನಿಗಿಂತಲೂ ಗೋಪಾಲಕೃಷ್ಣನೂ ರಾಧಾಕೃಷ್ಣನೂ ಅತ್ಯಂತ ಪ್ರಿಯನು. ಏಕೆಂದು ಬೇರೆ ಹೇಳಬೇಕಾಗಿಲ್ಲ.

ಇದೆಲ್ಲ ವಿವೇಚನೆಯನ್ನು ಮಾಡುವಾಗ, ಅಧ್ಯಾತ್ಮವಾದಿಗಳು ಒಪ್ಪಿಕೊಳ್ಳುವ ಸಾಂಪ್ರದಾಯಿಕ ಧರ್ಮಗ್ರಂಥ— ಪುರಾಣಗ್ರಂಥ ಗಳನ್ನು ಇದ್ದಂತೆಯೇ ಸತ್ಯವೆಂದು ಗ್ರಹಿಸಿ ಭಾರತೀಯ ಸಂಸ್ಕೃತಿಯ ಸ್ವರೂಪವನ್ನು ಚರ್ಚಿಸಲಾಗಿದೆ. ಭಾರತ ಮುಂತಾದ ಗ್ರಂಥಗಳನ್ನು ಐತಿಹಾಸಿಕ ದೃಷ್ಟಿಯಿಂದ ಸಂಶೋಧಿಸುವುದು ಇಲ್ಲಿ ಅಪ್ರಸ್ತುತ. ಭಾರತೀಯರ ಒಲವು ಹಿಂದಿನಿಂದಲೂ ಬಹುಸಂಖ್ಯಾಕವಾಗಿ ಅಧ್ಯಾತ್ಮ—ಪಾರಮಾರ್ಥಗಳ ಕಡೆಗಿತ್ತೇ? ಎಂಬುದೇ ಮುಖ್ಯ ಪ್ರಶ್ನೆ. ಅದು ಹಾಗಿದ್ದಿಲ್ಲ. ಈಗಲೂ ಹಾಗಿರುವುದಿಲ್ಲ. ಈಗಲೂ ಹಾಗಿರುವು ದಿಲ್ಲವೆಂದು ಸಿದ್ಧಮಾಡಲು ಮಾತ್ರ ಆದೊಂದೇ ದೃಷ್ಟಿಯಿಂದ ಪುರಾಣ ಗ್ರಂಥಗಳನ್ನು ಉದಾಹರಿಸಲಾಗಿದೆ. ಮತ್ತು ಹೀಗೆ ಉದಾಹರಿಸುವುದರಲ್ಲಿ ನಮ್ಮ ಸ್ವಂತ ಅಭಿಪ್ರಾಯದಿಂದ ವಿಧಾನ ಗಳನ್ನು ಅಲಿಪ್ತವಾಗಿ ಇಡಲು ಆದಷ್ಟು ಯತ್ನ ಮಾಡಲಾಗಿದೆ. ಕೃಷ್ಣ-ಭೀಷ್ಮರ ಕುರಿತು ಇಲ್ಲಿ ಅನಾದರವಿಲ್ಲ. ಅಂದಿನ ಜನತೆಯ ಅಧ್ಯಾತ್ಮಿಕತೆಯ ಕುರಿತು ಆಕ್ಷೇಪವಿದೆ. ಧರ್ಮವು ಅಂದು ಆಚಾರ ಪ್ರಭವವಾಗಿತ್ತು. ಸಾಮಾಜಿಕ ನಿಯಮನಿರ್ಬಂಧಗಳ ಸ್ವರೂಪ ದ್ದಾಗಿತ್ತು. ಸಮಾಜದ ಹಿಂದುಳಿದ ಅವಸ್ಥೆಯಲ್ಲಿ ನಿಯಮ ನಿರ್ಬಂಧಗಳನ್ನು ಪಾಪಪುಣ್ಯಗಳ ಪರಿಭಾಷೆಯಲ್ಲಿ ವಿವರಿಸಲಾಗು ತ್ತದೆ. ಮತ್ತು ಅಂತಹ ನಿಯಮಗಳ ಪ್ರಮಾಣವನ್ನು ಸ್ಥಾಪಿಸಲು ಅವುಗಳಿಗೆ ದೈವೀ ಪ್ರೇರಣೆಯ ಅಧಿಕಾರ ಕೊಡಲಾಗುತ್ತದೆ. ಪ್ರತಿಯೊರ್ವನು ಲೌಕಿಕ ವಸ್ತುವಿತ್ತಗಳನ್ನು ಗಳಿಸಬೇಕು. ತನ್ನ ಕಾಮನೆಗಳನ್ನು ಪೂರಯಿಸಿಕೊಳ್ಳಬೇಕು ಮತ್ತು ಸಾಮಾನ್ಯವಾಗಿ ಶಾರೀರಿಕ ಜೀವನದ ಭೋಗವನ್ನೂ ಅದರಿಂದೊದಗುವ ಮಾನಸಿಕ- ತೃಪ್ತಿಯ ಶಾಂತಿಯನ್ನೂ ಪಡೆಯಬೇಕು. ಆದರೆ ಇದೆಲ್ಲ— ಸ್ಥಾಪಿತ ವಾದ ತನ್ನ ಸಮಾಜದ ಕಟ್ಟಳೆ-ಕಟ್ಟಡಗಳ ಕೆಳಗೆಯೇ ನಡೆಯ ಬೇಕು. ಇದೇ ಧರ್ಮ. ಅವ್ಯವಸ್ಥೆ ಅನವಸ್ಥೆಗಳ ಉತ್ಪಾತಗಳ ದೊಡ್ಡ ಭಯದಿಂದ ತಾರಣಮಾಡುವ ಧರ್ಮ. ಇದೆಲ್ಲ ಧೂರ್ತ ವಾದ ದೂರದರ್ಶಿಯಾದ ವ್ಯಾವಹಾರಿಕ ವಿವೇಕವಹುದು; ಆದರೆ ಇದರಲ್ಲಿ ಆಧ್ಯಾತ್ಮಿಕತೆಯೇನಿದೆ?

ಮನೆಗೊಂದು ಅಂದ-ಚೆಂದದ ಒಡವೆ ಅವಶ್ಯವಲ್ಲವೆ?
ದಣಿವಾರಿಸಿಕೊಳ್ಳಲು ಹಿತವಾದ ಆಸನವು ಬೇಕಲ್ಲವೆ?

ಹುಬ್ಬಳ್ಳಿಯ
ಸದ್ಗುರು ಉದ್ಯೋಗ ಮಂದಿರ
ಇವರು
ತಯಾರಿಸಿದ

ಸುಂದರ ಆಕಾರದ
ಸುಲಭ ಬೆಲೆಯ

'ಸುಮನ'

ಕುರ್ಚಿಯನ್ನು
ಉಪಯೋಗಿಸಿರಿ.



★

ಮನವೊಪ್ಪುವ ಕೆಲಸಕ್ಕಾಗಿ ಇಲ್ಲಿಯೆ ಬನ್ನಿರಿ!

ಕುರ್ಚಿ, ಮೇಜು, ಕಪಾಟು. ಬಾಕು,
ಟೀಪಾಯ್, ಸೋಫಾಸೆಟ್ಟುಗಳು —
ಆದೇಕೆ—
ಯಾವುದೆ ತರದ ಹೊಸ ಮಾದರಿಯ ಕಟ್ಟಿಗೆಯ
ಸಾಮಾನುಗಳನ್ನೂ ಶಾಸ್ತ್ರೀಯವಾಗಿ, ಯೋಗ್ಯ ಬೆಲೆಗೆ,
ತಯಾರಿಸಿ ಕೊಡುವೆವು.

★

ಕರ್ನಾಟಕದಲ್ಲಿ ಔದ್ಯೋಗಿಕಶಿಕ್ಷಣ ಕೊಡುವ ಆದ್ಯ ಸಂಸ್ಥೆ!

ಬಡಿಗತನದ

ಶಾಸ್ತ್ರೀಯ ಶಿಕ್ಷಣವು ನಮ್ಮಲ್ಲಿ ದೊರೆಯುವುದು
ವಿವರಗಳಿಗಾಗಿ ಬನ್ನಿರಿ, ಇಲ್ಲವೆ
ಬರೆಯಿರಿ.

ಶ್ರೀ ಸದ್ಗುರು ಉದ್ಯೋಗ ಮಂದಿರ,
ಸ್ಟೇಶನ್ ರೋಡ್,
ಹುಬ್ಬಳ್ಳಿ.

ಬೀಸು ಬಿರುಗಾಳಿ !

ಶ್ರೀ. ಬಿ. ಎಚ್‌. ಶ್ರೀಧರ ಬಿ. ಎ. (ಆನರ್ಸ್)

೧

ಬಿರುಗಾಳಿ ಬಿರುಗಾಳಿ ಬಿರುಗಾಳಿ ಬೀಸು,
ಬ್ರಹ್ಮಾಂಡ ಮಂಡಲವ ಹೊಕ್ಕು ಹರಿದೀಸು !
ಪೊಸಮಲರ ಸೌಸವವ ಸೂಸು,
ಹಳಹೊದಿಕೆಗಳ ಹಿರಿದು ಬೀಸು;

ಕಾಲತೇಜಿಯನೇರಿ
ಕುರುಡುತನವನು ಹಾರಿ

ಶರಪಾತ ಗತಿಯಿಂದ
ಹರನೇತ್ರದುರಿಯಿಂದ

ಇದ್ದಂತೆ ಇರುವ ಶವದೊಟ್ಟಿಲನು ಸುಡಬಿಸುಟು ;
‘ ಇರಬೇಕು ’ ಎಂಬರಿವ ಬಿತ್ತಿ ಕಳೆ ಮೈ ಬುಗುಟು ;

ಬೀಸು ನಡೆ
ಹಾಸು ಹಡೆ

ಬೊಬ್ಬಿರಿದು ಫೂತ್ಕರಿಸು ಸತ್ತುವೃತಕಿಂತಲೂ
ಹಬ್ಬುವುರಿ ವಿಷಲೇಸು—ಕಾರದನು ಸುತ್ತಲೂ !

ವಿಕಟಾಟ್ಟಹಾಸದಲಿ
ಪ್ರಳಯೋಗ್ರ ವೇಷದಲಿ

ಕವಿದು ಬಾ ಬುವಿಗಿಂದು ಕಾಲಾಗ್ನಿರುದ್ರ,
ವಿವಿಧವಾವಿಷ್ಕರಿಸು ಬಾ ವೀರಭದ್ರ !

೨

ಹಳೆಯ ಜೀವನ ಸೂತ್ರ ಹರಿದು ಹಾಳಾಯ್ತು,
ಹುಳಿತು ಹಳಸಿದ ಹಿಟ್ಟಿನಂತೆ ಬಾಳಾಯ್ತು ;
ತುಕ್ಕು ಹಿಡಿದಿದೆ ಬುದ್ಧಿಯಲಗು,
ಸಿಕ್ಕದಾಯ್ತುತ್ಸಾಹ ಬೆಳಗು !

ಧರ್ಮದಾಸರ ದಂಡು
ಇಂದು ಜಾಡ್ಯದ ತುಂಡು ;

ಕತ್ತರಿಸಿ ಕಡೆಗಂಡು
ಹುಟ್ಟಿಸೈ ಹೊಸದೊಂದು !

ಪ್ರಾಣ ನರೆಯಾಯ್ತು, ಪುರುಷಾರ್ಥಸುಕ್ಕಾಯ್ತು, ಕಾ-
ಲಾಣೆ ಬೆಲೆಗಿಳಿಯಿತೀ ಜೀವನದ ವರ್ತನೆಯು–

ನೆಲೆನಿಂತ
ಕೊಳೆನೀರ

ತೊಳೆಬೀಸಿ ಸಾಗರೋತ್ತುಂಗ ವೀಚಿಯ ತೆರೆದು,
ಕೊಳವನ್ನೆ ಹೊಳೆಮಾಡು ಮುಸಲಧಾರೆಯ ಕರೆದು;

ಭೂಗರ್ಭದಾಳದಲಿ
ಹುದುಗಿ ಕಂಕಾಲದಲಿ

ಇಹ ಜೀವಚಿಹ್ನಗಳ ಮುಗುಚಿ ಈಡಾಡು,
ಅಹಹ ಜಂಝಾವಾತ ಬಾ ತೀಡು ತೀಡು !

೩

ಮಿಡಿಯ ಮಿಡಿಯಾಗಿಡಲು ಉಪ್ಪು ಬೆರಸಿದರೂ
ಮಿಡಿತನವು ಉಳಿಯಿತೇ ಕಳೆಯಲದರೊಗರು ?

ಕಟ್ಟು ಕಟ್ಟಳೆಯೆಲ್ಲ ಬೇಕು,
ಗುಟ್ಟರಿದು ಬದಲಿಸಲು ಬೇಕು !

ಒಂದರಲಿ ನೂರೊಂದ
ತೋರುವುದೆ ಜಗದಂದ ;

ಅದ ಕಾಣದವನಂಧ,
ಅವನಿಗೀಭವ ಬಂಧ !

ಹಗಲೆಂಬ ಭ್ರಾಂತಿಯಲಿ ಮುಚ್ಚಂಜೆಯಲಿ ಹುಡುಗ
ತೆಗೆದು ಹೊತ್ತಗೆಯೋದತೊಡಗಿದಂತಾಯ್ತೀಗ—

ಹಗಲಿಲ್ಲ,
ಇರುಳಲ್ಲ ;

ಇದು ನರಕವನು ವಿಾರಿ ಹೊಯ್ದಿರಕ, ಬಾಳುವೆಯ
ಹದಹೊತ್ತಿ ಹೊಗೆಸುತ್ತಿತಿದನೆಂತು ತಾಳಲಹ !

ಬಿರುಗಾಳಿ ಹೊಡೆದಾಳ,
ಬಿರ್ದಿಗಿರುವಳು ಕಾಳಿ !

ಕಡಗಿ ಬಾ; ಗುಡುಗಿ ಬಾ, ಕೃತಿ ನಿಕೃತಿಯೆನಿಸು,
ಹಡಗ ಹಾರಿಸಿ ವ್ಯೋಮಯಾನವನು ತರಿಸು !

ನಾನೂ ★ ಕವಿಯಾಗಿದ್ದೆ!

(ಬರೀ ಹರಟೆ)* ★

ಶ್ರೀ. ಕ. ರಾಧಾಕೃಷ್ಣನ್, ಬನಾರಸ

ಒಂದು ರಾತ್ರಿ ಪೇಟೆಯಲ್ಲಿ ಹೋಗುತ್ತಿದ್ದಾಗ, ಒಂದು ದೆವ್ವವನ್ನು ಕಂಡೆ; ಹೆದರದೆ ಮನೆಗೆ ಹಿಂದಿರುಗಿದೆ.

ಎಲ್ಲರಿಗೂ ನಾನು ಕಂಡ ದೆವ್ವದ ವಿಷಯ ಹೇಳಿದೆ; ಮರುದಿನ ಅದೇ ಹೊತ್ತಿನಲ್ಲಿ, ಅಲ್ಲೇ ಅದೇ ದೆವ್ವವನ್ನು ಕಂಡೆ!

ನಾಣಿಗೆ ಹೇಳಿದೆ, "ಯಾರೂ ಕಾಣದಿದ್ದುದನ್ನು ನೀನು ಕಂಡೆ; ರವಿಕಾಣದುದನು ಕಂಡವ ಕವಿ! ಆದ್ದರಿಂದ ನೀನೊಬ್ಬ ಕವಿ," ಎಂದನವ.

ಅಂದಿನಿಂದ ನಾನು ಕವಿಯಾದೆ! ನನ್ನ ಹೆಸರಿನ ಹಿಂದೆ "ಕವಿಮಾರ್ತಾಂಡ, ಕವಿರತ್ನಾಕರ, ಕವಿರಾಜೇಂದ್ರ" ಎಂದು ಬಿರುದು ಸೇರಿಸಿ, ಬರೀ ಪುಸ್ತಕದ ಮೊದಲ ಹಾಳೆಯ ಮೇಲೆ ಬರೆದೆ. "ಕಿಷ್ಕಿಂಧ" ಎಂದು ಗುಪ್ತನಾಮವಿಟ್ಟುಕೊಂಡೆ! ಆ ಹೊತ್ತಿನಿಂದ ನೂತನ ಪದ್ಯಸಾಹಿತ್ಯದ ಮೇಲಿನ, ಹಿಂದಿನಕಾಲದ ಪದ್ಯಗಳ— ಪುಸ್ತಕಗಳನ್ನೆಲ್ಲಾ ಕೊಂಡು ಮೇಜಿನ ಮೇಲಿಟ್ಟು ಓದಿದೆ. ಹಾಗೆ ಓದಿದ ರಾತ್ರಿಗಳೆಷ್ಟೋ! ಪುಸ್ತಕದ ಹಾಳೆ ತೆರೆದು ಓದುವ ರಭಸದಲ್ಲಿ ನಿದ್ದೆಮಾಡಿದ ಘಂಟೆಗಳೆಷ್ಟೋ!

ಎಷ್ಟು ಹುಡುಕಿದರೂ ನನ್ನ ಪ್ರಶ್ನೆಗೆ ಸರಿಯಾದ ಉತ್ತರ ದೊರೆಯಲಿಲ್ಲ. ನನಗೆ ಬೇಕಾದದ್ದು—ಕವಿಗಳೆಲ್ಲಾ ಹೇಗೆ ಕವನ ರಚಿಸುವರೆಂಬುದು. ಪುಸ್ತಕಗಳಲ್ಲಿ ಪದ್ಯಗಳಿದ್ದುವು. ಮೊದಲಿಲ್ಲದ, ಕೊನೆಯಿಲ್ಲದ ನೂರಾರು ಪದ್ಯಗಳನ್ನೋದಿದೆ. ಎಲ್ಲಾ ನಿಷ್ಫಲವಾಯಿತು. ಪದ್ಯಬರೆಯುವುದು ಹೇಗೆಂಬುದು ನನಗೆ ತಿಳಿಯಲಿಲ್ಲ.

ಯಾವುದೋ ಪದ್ಯದಲ್ಲಿ ಹೀಗಿದ್ದುದನ್ನು ಓದಿದೆ:

"ಪದ್ಯಬರೆಯೋಕೆ ಬೇಕು ಸ್ಫೂರ್ತಿ,
ಸುಮ್ಮನೆ ಗೀಚಿದರೆ ಬರ್‍ತದೆಯೆ ಕೀರ್ತಿ?"

ಅಂದೆಯೆ ಈ ಸ್ಫೂರ್ತಿಗೆ—ನನ್ನನ್ನು ಫೇಮಸ್ಸಾಗಿಮಾಡುವ ಆ ಹುಮ್ಮಸ್ಸಿಗೆ—ಕಾದೆ; ಅದು ಬಂದೂಬಂತು.

* * *

ಒಮ್ಮೆ ಕಾಲೇಜಿನಿಂದ ಸ್ತ್ರೀಯರ ಕಾಲೇಜಿನ ಹಾಸ್ಟೆಲ್ ಮೂಲಕ ನಿಶಾತ್‌ಬಾಗಿಗೆ ಹೊರಟೆ. ದಾರಿಯಲ್ಲಿ ಟೆನ್ನಿಸ್ ಆಡುತ್ತಿದ್ದ ನಮ್ಮ ಕ್ಲಾಸಿನ ಶಾರದೆಯನ್ನು ನೋಡಿದೆ. ಇದ್ದಕ್ಕಿದ್ದಂತೆಯೆ ಹುಮ್ಮಸ್ಸು ಬಂದಂತಾಯಿತು. ಹಿಂದಿರುಗಿ ಮನೆಗೆ ಹೋಗಿ ಬರೆದೆ:—

"ಶಾರಿ ನನ್ನ ಜೀವಗೆಳತಿ
ಅವಳಿಗೆನ್ನ ಮಮತೆಯತಿ,
ಬೇಕು ನನಗೆ ಅವಳ ಪ್ರೀತಿ
ಸಾಕು ನನಗೆ ಅವಳ ಮೂರ್ತಿ!"

ಮಾರನೆಯ ದಿನ ಅವಳಿಗೆ ಮದುವೆಯಾಗಿದೆಯೆಂದು ತಿಳಿಯಬಂತು; ಅಷ್ಟಕ್ಕೇ ನಿಲ್ಲಿಸಿ ಹರಿದುಬಿಟ್ಟೆ- ನಾನು ಬರೆದದ್ದನ್ನು. Inspiration ಬಂದದ್ದು Irritation ಗೆ ತಿರುಗಿತು.

* * *

ಒಂದು ದಿನ ರಾತ್ರಿ ನನ್ನ ಕೊಠಡಿಯ ಮೂಲೆಯಲ್ಲಿ, ಒಂದು ಹಲ್ಲಿ ಒಂದು ನೊಣವನ್ನು ಹಿಡಿದು ತಿಂದದ್ದನ್ನು ಕಂಡೆ. ಅಂದೆಯೆ ಬರೆದೆ ಈ ಕವಿತೆಯನ್ನು:

"ಹಲ್ಲಿಯೊಂದು ಗೋಡೆಮೇಲೆ ಕಾಯುತಿದ್ದಿತು;
ನೊಣವದೊಂದು ಕಿಟಿಕಿಗುಂಟ ಹಾರಿಬಂದಿತು.
ಹಾರಿಬಂದು ಗೋಡೆಮೇಲೆ ಕುಳಿತುಕೊಂಡಿತು;
ಹಲ್ಲಿ ಬಂದು ಫಕ್ಕನೇ ಹಿಡಿದುಬಿಟ್ಟಿತು.

ನಾನು ನೋಡುತಿದ್ದೆ,
ಅದು ನುಂಗಿಬಿಟ್ಟಿತು.
ನಾನು ಕಣ್ಣು ಬಿಟ್ಟೆ,
ಅದು ದೂರಹೋಯಿತು."

ಆಹಾ! ಸೊಗಸಾದ ಪುಟ್ಟ 'ಕಥನ-ಕವನ'!

ಒಂದು ದಿನ ಬೆಳಗು, ಒಂದು ಪ್ರಾಥಮಿಕ ಶಾಲೆಗೆ ಹೋದೆ. ಅಲ್ಲಿಯ ಹುಡುಗರು ಯಾರು ಯಾರೋ ಬರೆದ ಶಿಶುಗೀತಗಳನ್ನು ಹೇಳುತ್ತಿದ್ದರು. ನಾನೂ ಶಿಶುಗೀತ ಬರೆಯಬೇಕೆಂದುಕೊಂಡೆ. ಅಂದೆಯೆ ಮನೆಗೆ ಬಂದು ಹೀಗೆ ಬರೆದೆ;

> 'ಕಿಷ್ಕಿಂಧ'ರು ಆಶುಕವಿಗಳು. ಸ್ಫೂರ್ತಿದೇವತೆ ಅವರು ಕರೆದಾಗ ಕೈಕಟ್ಟಿ ಎದುರು ನಿಂತಿರುವಳು. ಅವರು ಕವಿತೆಗಾಗಿ ಕಂಡ ವಿಷಯಗಳೆಷ್ಟು? ಆಯ್ದ ಸನ್ನಿವೇಶಗಳೆಂತಹವು? ಬರೆದ ಪದ್ಯದ ಗತಿ ಎಂತಹದು? ಕವಿತೆಯ ಸ್ವಾರಸ್ಯವೆಂತಹದು?

★

* ಕವಿಗಳೆಲ್ಲರಲ್ಲಿ ಕ್ಷಮೆ ಕೇಳುವೆನು. —ಶ್ರೀ

" ಅಪ್ಪನ ಜೋಬಲಿ ಕೈಯಿಟ್ಟು,
ತೆಗೆದುಕೊಂಡ ಶ್ರೀವಚ್ಚ ಮೂರುಬೊಟ್ಟು. ||
ಕುಳಿತುಕೊಂಡು ಬಸ್ಸಿನಲಿ ಓಡಿಬಿಟ್ಟು,
ತಿಂದು ಬಂದನು ಅಂಗಡಿಯ ಬಿಸ್ಕಿಟ್ಟು ! || ೧ ||

ಸ್ಕೂಲಿಗೆ ಹೋಗುತ ಕಿಟ್ಟ ನೋಡಿದ,
ನನಗೊಂದು ಕೊಡೆಂದು ಕೇಳಿದ. ||
"ಕೊಡುವುದಿಲ್ಲ ಹೋಗೋ" ಶ್ರೀವಚ್ಚ ಎನಲು,
ಓಡಿದ ಮನೆಗೆ ಹೇಳಿಬಿಟ್ಟು ಬರಲು ! || ೨ ||

ಶ್ರೀವಚ್ಚ ಮನೆಗೆ ಹೋಗುತ್ತಾನೆ—

ಅಪ್ಪನು ಕೇಳಿದ " ಎಲ್ಲಿಂದ ಬಂದೆ? "
ಶ್ರೀವತ್ಸ ಹೇಳಿದ ಕದ್ದ ಕಥೆ ;
ಅಪ್ಪನ ಹೊಡೆತಕೆ ಬಾಸುಂಡೆ ಬರಲು,
ಶ್ರೀವಚ್ಚ ಅಂದಿಗೇ ಕಳವನು ಬಿಡಲು— || ೩ ||

ಆಹಾ ! ಈ ಪದ್ಯದಲ್ಲಿ ನೀತಿಯಿದೆ : 'ಮಕ್ಕಳು ಕದಿಯಬಾರದು' ಎಂದು. ಅನೇಕ ಶಿಶುಗೀತೆಗಳಂತೆ "ಕಾಟಾಚಾರಕ್ಕೆ, ಪುಟ ತುಂಬಿಸಲಿಕ್ಕೆ" ಇದು ಬರೆದುದಲ್ಲ. ಚಿಕ್ಕಮಕ್ಕಳಿಗೆ ನಾವು ಆಡುವ ಪ್ರತಿಮಾತಿನಲ್ಲೂ ಮಾಡುವ ಪ್ರತಿಕಾರ್ಯದಲ್ಲೂ ನೀತಿ ತೋರಬೇಕು. ಸುಳ್ಳು ಹೇಳಬಾರದು, ಕದಿಯಬಾರದು, ಇದು ಈ ಗೀತೆಯ ನೀತಿ. ಮುಂದೆ :

" ಅದರಿಂ ಬಾಲರೆ ಕೇಳಿರಿ ನೀವು,
ಸತ್ಯವ ನುಡಿವಗೆ ಇಲ್ಲವು ಸಾವು !
ಕದಿಯಲು ಬಾರದು ಖಂಡಿತ ನೀವು,
ಬೆಲ್ಲವ ಅರಿಸಿ ತಿನ್ನಿರಿ ಬೇವು !"

ಆಹಾ ! ಭಲಾ ! ಎಂತಹ ನೀತಿ ! ಈ ಪದ್ಯವನ್ನು ಈಗಿನ ಮಕ್ಕಳಿಗೆ ಕಲಿಸಿದರೆ ಮುಂದಿನ ಜನಾಂಗದಲ್ಲಿ ಕಳ್ಳರೂ, ಸುಳ್ಳುಗಾರರೂ ಇರುವುದೇ ಇಲ್ಲ. ಹುಡುಗರಿಗೆ ಈ ನೀತಿ ಇಂದು ಅರ್ಥವಾಗದಿದ್ದರೂ ಮುಂದೆ ಖಂಡಿತ ತಿಳಿಯುವುದು. ಇದಕ್ಕಿಂತ ಮಿಗಿಲಾಗಿ ಮತ್ತೊಂದು ನೀತಿಸೂತ್ರವಿದೆ. ಶ್ರೀಕೃಷ್ಣ ಪರಮಾತ್ಮ ಗೀತೆಯಲ್ಲಿ "ಸುಖದುಃಖೇ ಸಮೇಕೃತ್ವಾ" ಎಂದ. ಈ ನನ್ನ ವನದಲ್ಲಿ ನಾನು ಇನ್ನೊಂದು ಹೆಜ್ಜೆ ಮುಂದೆ ಹೋಗಿದ್ದೇನೆ. ಎಲ್ಲಿ ಸುಖಕಾಣಬೇಕು. ಈ ಜೀವನ ಬೇವು–ಬೆಲ್ಲದ ಮಿಶ್ರಣ. ಮು ಬೆಲ್ಲ ಕೆಲಸಕ್ಕೆ ಬಾರದು. ಬೆಲ್ಲ ಸಿಕ್ಕರೂ ಅದರಲ್ಲಿನ ಕಲ್ಲುಚೂರು ತಿಂದು "ಆಹಾ ! ಎಷ್ಟು ಸಿಹಿ" ಎನ್ನಬೇಕು. ಇದಕ್ಕಿಂತ ಬೇರೆ ನೀತಿ ಬೇಕೇ !

* * *

ಭಾವಗೀತಗಳನ್ನು ಬರೆಯಬೇಕೆನಿಸಿತು. ಹೀಗೆ ಒಂದು ದಿನ ಮುಂಜಾನೆ ಎದ್ದು ಕುಳಿತು, ಹುಮ್ಮಸ್ಸಿಗೆ ಕಾಯುತ್ತಲಿದ್ದೆ. ಅನಂತರ ಬರೆದೆ :

" ಹಸುರು ಹುಲ್ಲು ;
ಮಂಜು ಬೆಲ್ಲು
ನೋಡಿದೆಲ್ಲು
ಇತ್ತು ಕಲ್ಲು! "

ಆಹಾ ! ಕವಿಯು ಎಂತಹ ರಸಮಯ ದೃಶ್ಯವನ್ನು ವರ್ಣಿಸಿರುತ್ತಾನೆ. ಬೆಳ್ಳನೆ ಬೆಳಕು. ಆಗ ಹಚ್ಚನೆ ಹಸುರು ಹುಲ್ಲು. ಕಣ್ಣಿಗೆ ಹಬ್ಬಮಾಡುವಂತೆ ನಿಧಾನವಾಗಿ ಮಂಜು ಬೀಳುತ್ತಲಿದೆ. ಕವಿ ಸುತ್ತಲೂ ನೋಡುತ್ತಾನೆ. ಎಲ್ಲೆಲ್ಲೂ ಬರಿಕಲ್ಲು !

ಇದರಲ್ಲಿ ಜೀವನದ ಗುಟ್ಟು ತುಂಬಿದೆ. ಪ್ರಪಂಚದಲ್ಲಿ ಕಣ್ಣಿಗೆ ಕಟ್ಟಿದಂತೆ ಸುಖಕಾಣಬಹುದು ; ಆದರೆ ಕಣ್ಣಿದ್ದವರಿಗೆ ಸುಖದ ಒಳಗಣ ಕಲ್ಲು, ದುಃಖದ ನೋವು ಕಾಣುತ್ತದೆ. ಇಷ್ಟೇ ಅಲ್ಲವೇ ಪರಮಾತ್ಮ ಗೀತೆಯಲ್ಲಿ ಹೇಳಿದ್ದು ?

" ಸುಖದುಃಖೇ ಸಮೇಕೃತ್ವಾ
ಲಾಭಾಲಾಭೌ ಜಯಾ ಜಯೌ " ಎಂದು.

ಅನಂತರ,

" ಹಾಲು ಕರೆಯಲು ಬಂದ ಹುಡುಗಿ,
ರೂಪು ಗುಡಿಸುವೆನೆಂದು ಗಂಗಿ,
" ಅಣ್ಣ ಏಳು " ಎನುತ ತಂಗಿ,
ತೆಗೆದಿಟ್ಟಳೆನ್ನ ಹರಕು ಅಂಗಿ! "

ಭಲೆ ! ಸುಪ್ರಭಾತದಲ್ಲಿ ಕಾಣಬರುವ ದೃಶ್ಯಗಳನ್ನು ಕವಿ ರಸಮಯವಾಗಿ ಬೆಳಕಿಗೆ ತರುತ್ತಾನೆ; ಅರ್ಥಕ್ಕೆ ಎಲ್ಲಿಯ ಮಿತಿ ! ಬೆಳಸಿದಂತೆ ಗಿಡ; ಗಿಡದಂತೆ ಹಣ್ಣು !

* * *

ಈ ಪದ್ಯಗಳು ಸುಲಭವಾಗಿ ಸಾಮಾನ್ಯರಿಗೆ ಅರ್ಥವಾಗುವುದಿಲ್ಲವೆಂದು ಪತ್ರಗಳು ಬಂದುವು. ಅಂದೆಯೆ ಬರೆದ

" ನಾನೊಬ್ಬ ಕವಿ!
ನನ್ನ ಪದ್ಯ ಸವಿ!
ಓದಿದವನ ಕಿವಿ
ಹಾರುತ್ತೆ ಹ್ಯಾಂಗೆ ಹಾವಿ " *

ಈಗಿನ ಕಾಲದ ಜನರಿಗೆ ಇಂತಹ ಸಣ್ಣಪುಟ್ಟ ಪದ್ಯಗಳನ್ನು ಅರ್ಥ ಮಾಡಿಕೊಳ್ಳುವ ಯೋಗ್ಯತೆ ಬಂದಿಲ್ಲ. ಆದುದರಿಂದ ಇನ್ನುಮೇಲೆ ನಾನು ಬರೆದ ಪದ್ಯಗಳಿಗೆಲ್ಲ ಅರ್ಥ, ಸಾರಾಂಶ, ತಾತ್ಪರ್ಯ ಬರೆಯಬೇಕೆಂದು ತೀರ್ಮಾನಿಸಿ ಹಾಗೇ ಮಾಡಿದೆ.

* * *

ಒಂದು ರಾತ್ರಿ ಚಿಣಕವಾಡು ಬರೆಯಲೇ ಎನ್ನಿಸಿತು. ಆಗಲೇ ಕೂತು ಬರೆದೆ :

" ಅಪ್ಪ, ಎಲ್ಲಿಗೆ ಹೊರಟೆ ನೀ" ಎಂದೆ.
"ಹೊರಡುವ ಮುನ್ನ ನೀ ಇಂತು ಕೇಳಬೇಡ ಕಂದ !"
" ಬೇಸರದ ದನಿಯೇಕೆ, ಕೆಲಸ ಹೇಳಲ್ಲ ! "
" ಭಟ್ಟರ ಮನಿಯಾಗೆ ಊಟವಂತೆ ನಮಗೆಲ್ಲ ! "
" ಕರೆವರೇ ಮಕ್ಕಳನು ತಿರುಗಿ ಬಂದು ? "
" ಕರೆಯದಿದ್ದರು ಬರಲಾಗುವುದೇ ನಿನಗಿಂದು ? "

---

* ಹಾವಿ ಎಂದರೆ ಉಗಿ = Steam

" ಹಾದಿ ಯಾವುದು ಹೇಳು, ಯಾವ ಕ್ಲಾಸು ? "
" ಪಲ್ಲೀಸ್ವರದಿ ಕೇಳು ಮೂರನೆಯ ಕ್ಲಾಸು ! "
" ಈಗ ಹೊರಟಹುದೇನು ! ಏನು ಕೆಲಸ ?
" ಕೇಳ ತರಬೇಡ ನನಗೆ ಮತ್ತೆ ಮಂಜಿನ ! "

ಹೀಗೆಯೇ ಬೆಳೆಯಿಸಿ ಉದ್ದನೆಯ ಗೀತವನ್ನು ಮಾಡಿದೆ. ಎಲ್ಲರೂ ಮೆಚ್ಚಿದರು.

* * *

ಈಗಿನ ಕಾಲದ (ನನ್ನ ಸಮಕಾಲೀನ) ಕವಿಗಳಂತೆ ಇಂಗ್ಲ-ಕನ್ನಡ ಬೆರೆಸಿ ಪದ್ಯ ಬರೆಯೋಣವೆಂದು ಮೊದಲಿಟ್ಟದಿನ, ಈ ಪದ್ಯ ನನ್ನ ಕಣ್ಣಿಗೆ ಬಿತ್ತು :

" ಕನ್ನಡದಿ ಇಂಗ್ಲಿಷ್ ಬೆರೆಸಲದು
ಸಿನ್ನಗಳ ಲಿಪ್ಪಿನಲಿ ಹ್ಯೆಯೆಸ್ಸು
ಅದರಿಂ ಕುನ್ನಿಗೂ ಖಿಳ್ಳದಿರು. . . . "
[ಬರೆದವರ ಅಪ್ಪಣೆಯಿಲ್ಲದೆ ಮುದ್ರಿಸಿದ್ದು]

ಇದರಿಂದ ಈ ಹಾದಿಯಲ್ಲಿ ನನ್ನ ಶಕ್ತಿ ತೋರಿಸಲಾಗಲಿಲ್ಲ.

* * *

ಇಷ್ಟು ಪದ್ಯ ಬರೆದಮೇಲೆ, ಇವೆಲ್ಲ ಸೇರಿಸಿ ಒಂದು ಪುಸ್ತಕವನ್ನೇಕೆ ಮಾಡಿ-ಬಿಡಬಾರದೆನ್ನಿಸಿತು. ಕೆಲವು ಗ್ರಂಥಮಾಲೆಗಳ ಸಂಪಾದಕರಿಗೆ ಬರೆದೆ. ಅವರು ಸಮಯ ಬಿದ್ದಾಗ ಬರೆಯುವೆವೆಂದು ಬರೆದರು. ಸರಿ ! 'ನಾನೇ ಸ್ವಂತವಾಗಿ ಮುದ್ರಿಸುತ್ತೇನೆ' ಎಂದು ಮೊದಲಿಟ್ಟೆ. ಪುಸ್ತಕ ಅಚ್ಚುಹಾಕಿಸಲು ಆದ ತೊಂದರೆಯ ನೆನೆನೆನಪಿಗೆ ಇದನ್ನೂ ಬರೆದೆ.

" ದೇವನೊಬ್ಬ ಬಲ್ಲ,
ನನ್ನ ಗತಿಯನೆಲ್ಲ,
ಹೇಳಲಾರೆ ಸುಲ್ಲ, *
ಸುಖವೆಂಬುದಿಲ್ಲ ‖ ೧ ‖
ಪದ್ಯ ಬರಿ ಎಂದ್ರೆ,
ಸುಮ್ಗೆ ಆಗ್ತೈತ್ರಾ,
ಪೆನ್ಸಿಲ್ ಪೇಪರ್ ಇದ್ರೆ,
ಬರ್ಯೋಕೆ ಬರ್ತದ್ರಾ ? ‖ ೨ ‖
(ಬರುವುದೇ ? ಎಂಬ ಪ್ರಶ್ನೆ.)
" ಮುದ್ರಿಸಬೇಕು ಎಂದ್ರೆ
ಬೇಕು ನೋಡ್ರಿ ದುಡ್ಡು !
'ಸಾಲ ಕೊಡಿ' ಎಂದ್ರೆ
ಹೇಳ್ತಾರೆ, ಮನೆಯಿಂದ ಹೊರಡು ! ‖ ೩ ‖

ಮೇಲಿನ ಘಟನೆ ಕವಿಯ ಸ್ವಾನುಭವ. ಕವಿಯು ನಾಚಿಕೆಯಿಲ್ಲದೆ ನಡೆದ ಘಟನೆಯನ್ನೇ ಬರೆದಿದ್ದಾನೆ !

ಸಾಲಮಾಡಿ ಪುಸ್ತಕವನ್ನಂತೂ ಮುದ್ರಿಸಿದೆ. ಪುಸ್ತಕವನ್ನು ನನ್ನ ಪ್ರೀತಿಯ ಗೆಳೆಯನಿಗೆ ಅರ್ಪಿಸಿದೆ. ಆ ಅರ್ಪಣೆಯಲ್ಲಿ ಅವನನ್ನು ಹೀಗೆ ವರ್ಣಿಸಿದ್ದೆ :

" ನೀನು ಹುಲಿ, ನೀನು ಹೂ,
ನಾನು ಬೆಕ್ಕು ! ನಾನು ಮಣ್ಣು !
ನಾನು ಇಲಿ, ಎನಗೆ ಥೂ !
ನೀನು ಮುಕ್ಕು ! " * ನಿನಗೆ ಹೊನ್ನು ! "

" ನೀನು ಹೇಟು (Hat)
ನಾನು ಬೂಟು !
ನೀನು ಕೋಟು,
ನಾನು ಮೋಟು ! "

* * *

ನನ್ನ ಗುರುಗಳ ಕೈಯಿಂದ ಮುನ್ನುಡಿಯೊಂದನ್ನು ಬರೆಯಿಸಿದೆ.

* * *

ಒಂದು ಪುಸ್ತಕವನ್ನು ವಿಮರ್ಶೆಗೆ ಕಳುಹಿಸಿದೆ; ಬಂದ ವಿಮರ್ಶೆ ಹೀಗಿತ್ತು :

" ಶ್ರೀ. ಕಿಷ್ಕಿಂಧರ ಹೊಸ ಪುಸ್ತಕವೊನ್ನೆ ತಾನೆ ಹೊರಬಿದ್ದಿದೆ ರಟ್ಟಿನ ಮೇಲಣ ಬೊಂಬೆ, ಪುಸ್ತಕಕೊಳ್ಳಬೇಕೆಂದು ಆಶೆಹುಟ್ಟಿಸುವಷ್ಟು ಆಕರ್ಷಣೀಯವಾಗಿದೆ. ನೇಷನಲ್ ಕೊಂಗ್ರೆಸಿನ ಮೂರು ಬಣ್ಣ. ಒಂದು ಮೂಲೆಯಲ್ಲಿ ರವಿ; ಇನ್ನೊಂದು ಮೂಲೆಯಲ್ಲಿ ಒಂದು ದುಂಡನೆಯ ಮೇಜು, ಅದರ ಮೇಲೆ ದೀಪ. ಸುತ್ತಲೂ ಹರಡಿರುವ ಕಾಗದ. ಅದರ ಮುಂದೆ ಹಣೆಯ ಮೇಲೆ ಕೈಯಿಟ್ಟ ಕವಿ !

ಪುಸ್ತಕದ ಹೆಸರು ಬಹಳ ಚೆನ್ನಾಗಿದೆ. " ಸುವಾಸಿನಿ "— ಎಂತಹ ಹೆಸರು !

ಪುಸ್ತಕದಲ್ಲಿ ನೂರು ಪೇಜಿವೆ. —ರ ಮುನ್ನುಡಿಯಿದೆ. ಈ ಮುನ್ನುಡಿ ಬಹಳ ಸ್ವಾರಸ್ಯವಾಗಿದೆ ! ತರುಣಲೇಖಕರಿಗೆ ಇಲ್ಲಿ ಪಾಠವಿದೆ. ಮುನ್ನುಡಿಕಾರರು ಅನುಭವಿಗಳು. ಅವರ ಮಾತಿಗಿಂತ ಹೆಚ್ಚಿಗೆ ನಾವೇನೂ ಹೇಳಬೇಕಾಗಿಲ್ಲ. ಅವರೇ ಕಾಣಿಸಿರುವಂತೆ 'ಈ ಲೇಖಕರು ಈಗ ತಾನೇ ಅಡ್ಡದಾರಿಯಿಂದ ರಾಜವೀಧಿಗೆ ಬಂದಿರುವವರು. ಬರಿಗಾಲು. ಬೇಸಿಗೆಕಾಲ. ಕಾಲು ಉರಿಯುತ್ತಿವೆ. ಓಡುವ ಸ್ವಭಾವ. ಎಲ್ಲಿಯೂ ಮರದ ನೆಳಲಿಲ್ಲ. ಸಿಗುವವರೆಗೆ ಓಡಲಿ !'

ಪುಸ್ತಕದ ಬೆಲೆ ಆರೇ ಆಣೆ. ಪದ್ಯಗಳು ತಕ್ಕಮಟ್ಟಿಗೆ ಚೆನ್ನಾಗಿವೆ. ಲೇಖಕರು ಸಾಹಿತ್ಯಪ್ರಪಂಚಕ್ಕೆ ಹೊಸಬರು. ಆದ್ದರಿಂದ ಈ ಹಣ್ಣನ್ನು ಓಡುಕಬೇಕಾಗಿಲ್ಲ.

ನಾವು ಯಾವುದೋ ಪದ್ಯಗಳೋದುತ್ತಿರುವಾಗ, ಈ ಎರಡು ಸಾಲುಗಳನ್ನು ಕಂಡೆವು :

" ಕವಿಗೋಳ್ ಎಲ್ಲಾ ಈ ಮಾತ್ ಕೇಳ್ರಿ,
ಬರೆಯೋದ್ ಪದ್ಯ ನಿಲ್ಲಿಸಿಬಿಡ್ರಿ ! "

ನಾವಾದರೂ ಶ್ರೀ. ಕಿಷ್ಕಿಂಧರಿಗೆ ಇದನ್ನೆ ತಿಳಿಸಲು ಬಯಸುತ್ತೇವೆ."

* * *

ಭೌ, ಭೌ, ಭೌ, ನಾಯಿ ಬಗಳುತ್ತದೆ ; ದೇವಲೋಕ ಹಾಳಾಗುತ್ತದೆಯೇ ?

---

* "ಸುಲ್ಲ"ವು 'ಸುಳ್ಳ'ದ ತದ್ಭವವೆಂದು ಈಗ ತಾನೇ ಹೊವಾದ ವೈಯಾಕರಣ ಶಾಸ್ತ್ರಿಗಳು ಹೇಳಿದರು.

* ಮುಕ್ಕು ಎಂಬುದು ಮಧ್ಯ ಆಫ್ರಿಕದ ಮುಂಗುಸಿ.

ಮಾತಾ ಮೊಂಟೆಸೊರಿ ★ (ಚತ್ರಿರದ ಪರಿಚಯ)

ಶ್ರೀ. ಹ. ಮ. ಬಬಲೇಶ್ವರ ಮಾಂಟ್. ಡಿಪ್. ವಿಜಾಪುರ.

★

ಪೂರ್ವದವರೇನು, ಪಶ್ಚಿಮದವರೇನು! ಮನುಷ್ಯತ್ವದ ನಿಜವಾದ ಅರಿವು ಇದ್ದರೆ ಪೂರ್ವದವರು ಪಶ್ಚಿಮದವರಿಗೆ ಆತ್ಮೀಯರಾಗಿ ಕಾಣುವರು, ಪಶ್ಚಿಮದವರು ಪೂರ್ವದವರಿಗೆ ಆತ್ಮೀಯರಾಗಿ ಕಾಣುವರು. ಡಾ. ಮೊಂಟೆಸೊರಿಯವರನ್ನು ಜಗತ್ತೆಲ್ಲ 'ಮಾತಾ' ಎಂದು ಕರೆಯುವುದರ ಕಾರಣ, ಅವರಲ್ಲಿ ಜಾಗೃತವಾಗಿರುವ ಮನುಷ್ಯತ್ವವೆ!

★

ಚೆಲುವಾದ ನುಣ್ಪುವೆತ್ತ ಮುಖ, ಕಾಂತಿಯುತವಾದ ಎಣ್ಣೆ-ಗಣ್ಣುಗಳು, ಅಷ್ಟು ದೊಡ್ಡದೂ ಅಲ್ಲದ ಅಷ್ಟು ಸಣ್ಣದೂ ಅಲ್ಲದ ಮುಖಕ್ಕೊಪ್ಪುವ ನಾಸಿಕ, ಅರೆಬಿರಿದ ಅಲರಿನಂತಿರುವ ಬಾಯಲ್ಲಿ, ಸಾಲಿಟ್ಟ ಅಕ್ಕಿಯಂತಿರುವ ಹೊಳೆಯುವ ಹಲ್ಲುಗಳು. ಎಳೆ ಮಕ್ಕಳ ಮನಸೆಳೆಯುವ ಮೆಲುನಗೆ. ಪ್ರಶಾಂತವಾದ ತಿಳಿಗೊಳದ ಮೇಲೆ ಸುಳಿಗಾಳಿ ಬೀಸುವಾಗ,ಏದ್ದೇಳುವ ಎಲೆಗಳಂತಿರುವ ತಲೆಗೂದಲು. ಎಪ್ಪತ್ತೆರಡು ವರುಷದ ಮುದುಕಿಯಾಗಿದ್ದರೂ ನವಯೌವನದಲ್ಲಿ ಪಡೆದುಕೊಂಡಿದ್ದ ಸೌಂದರ್ಯದ ಛಾಯೆ ಇನ್ನೂ ಮರೆಯಾಗಿಲ್ಲ. ಅವರ ಜೊತೆಗೆ ಅರ್ಧ ಶತಮಾನಕ್ಕಿಂತಲೂ ಹೆಚ್ಚು ಕಾಲವನ್ನು ಮಕ್ಕಳ ಸರ್ವತೋಮುಖವಾದ ಬೆಳವಣಿಗೆಯ ಸಲುವಾಗಿ ಧಾರೆಯೆರೆದ ತಪಸ್ಸಿನ ಫಲವಾಗಿ ದೊರೆತ ಆತ್ಮತೇಜಸ್ಸು, ಅವರ ಮುಖದ ಸೌಂದರ್ಯಕ್ಕೆ ಅಧ್ಯಾತ್ಮದ ಒಪ್ಪನ್ನು ಕೊಟ್ಟಿದೆ. ಒಮ್ಮೆ ನೋಡಿದರೆ ಮತ್ತೆ ಮತ್ತೆ ನೋಡಬೇಕು ಎನ್ನಿಸುವುದು. ಒಮ್ಮೆ ಮಾತನಾಡಿದರೆ ಇನ್ನೂ ಮಾತನಾಡುತ್ತಿರಬೇಕು— ಬೇಗ ಮುಗಿಸಬಾರದು-ಎನ್ನಿಸುವುದು. ಏನಂಗುಣ ವಿಶಿಷ್ಟರು **ಡಾಕ್ಟರ್ ಮೇರಿಯಾ ಮೊಂಟೆಸೊರಿಯವರು.** ಅವರ ವಿಷಯ ಇಷ್ಟು ಹೇಳಿದರೆ ಆಯಿತು ಎಂದಲ್ಲ. ಮಕ್ಕಳ ಶಿಕ್ಷಣದ ಬಗೆಗೆ ಆಸ್ಥೆಯಿರುವವರು ಒಮ್ಮೆ ಅವರನ್ನು ಕಂಡೇ ತೀರಬೇಕು. ಮಕ್ಕಳ ಸರ್ವತೋಮುಖವಾದ ಬೆಳವಣಿಗೆಗೆ ತಮ್ಮ ಬಾಳನ್ನೇ ಅವರು ಧಾರೆಯೆರೆದಿದ್ದಾರೆ. ಇಂತಹ ಮುಪ್ಪಿನಲ್ಲಿಯೂ ಹಗಲಿರುಳು ಅದಕ್ಕಾಗಿ ದುಡಿಯುತ್ತಿದ್ದಾರೆ. ಎಂತಹ ಸಾಹಸದ ಜೀವನ ಅವರದು ? ಮದುವೆಯಾದರೆ ಕಾರ್ಯವಿಮುಖರಾಗಬಹುದೋ ಏನೋ ಎಂದು, ಮದುವೆಯನ್ನೆ ಮಾಡಿಕೊಳ್ಳಲಿಲ್ಲ. ಈಗ ಆಕೆ ಪ್ರಪಂಚದಲ್ಲಿಯ ತಾಯಂದಿರಿಗೆಲ್ಲ ಹಿರಿಯತಾಯಿಯಾಗಿದ್ದಾರೆ. ಜಗತ್ತಿನ ಎಲ್ಲ ದೇಶಗಳ ತಾಯಂದಿರೂ ತಮ್ಮ ಮಕ್ಕಳ ಬೆಳವಣಿಗೆಯ ವಿಷಯವಾಗಿ ಅವರಿಗೆ ಆಗಾಗ ಬರೆಯುತ್ತಲೇ ಇರುತ್ತಾರೆ. ಒಬ್ಬ ತಾಯಿ, 'ತನ್ನ ಮಗು ಬಹಳ ಸಿಡುಕಿನದು. ಏನು ಮಾಡುವುದು' ಎಂದು ಕೇಳಿದರೆ, ಮತ್ತೊಬ್ಬಳು 'ತನ್ನ ಮಗು ಕಿಡಿಗೇಡಿಯಾಗಿ ಸುತ್ತಲಿನ ಹುಡುಗರಿಗೆ ವಿಪರೀತ ತೊಂದರೆಕೊಡುತ್ತಲಿದೆ, ಅದಕ್ಕೇನು ಮಾಡುವುದು ?' ಎಂದು ಬರೆಯುತ್ತಾಳೆ. ಮೂರನೆಯವಳು 'ತನ್ನ ಮಗು ಶುದ್ಧ ಪೆಚ್ಚು, ಹಾಗೆಯೇ ಬಿದ್ದುಕೊಂಡಿರುತ್ತದೆ; ಅದಕ್ಕೇನು ಮಾಡುವುದು ?' ಎಂದು ಸಲಹೆ ಕೇಳುತ್ತಾಳೆ. ಹೀಗೆ ಒಂದಲ್ಲ, ಎರಡಲ್ಲ, ನೂರಾರು ಸಾವಿರಾರು ಪತ್ರಗಳಿಗೆ ಸರಿಯಾಗಿ ಉತ್ತರ ಬರೆಯಬೇಕಾಗುವುದು. ಅವರ ತಾಳ್ಮೆ ಅದೆಷ್ಟಿರಬೇಕು ! ಮಕ್ಕಳಲ್ಲಿ ಆಸ್ಥೆ ತೋರಿಸಿ, ಅವರ ಕೂಡ ಮಾತನಾಡುತ್ತಿರುವಾಗ, ನೂರಾರು ಉದಾಹರಣೆಗಳನ್ನು ಸ್ವಲ್ಪವೂ ಬೇಸರಪಡದೆ ಹೇಳಿ, ಸಂದೇಹಗಳನ್ನು ದೂರಮಾಡುತ್ತಾರೆ.

ಮಕ್ಕಳೆಂದರೆ ಅವರಿಗೆ ಪ್ರಾಣ. ಮಕ್ಕಳನ್ನು ಬಿಟ್ಟು ಅವರಿಗೆ ಬೇರೆ ಪ್ರಪಂಚವಿಲ್ಲ. ಕುಳಿತಾಗ ನಿಂತಾಗ ಯಾವಾಗಲೂ ಮಕ್ಕಳ ವಿಷಯವೇ ಅವರ ವಿಚಾರ. ಯಾವ ಸಭೆಯಲ್ಲಿ ಮಾತನಾಡಿದರೂ ಮಕ್ಕಳ ವಿಷಯವನ್ನೇ! ಭೆಟ್ಟಿಗಾಗಿ ಜನರು ಗುಂಪುಗಟ್ಟಿಕೊಂಡು ನಿಂತಾಗ, ಮೊದಲು ಅವರು ಮಾತನಾಡಿಸುವುದು ಕೈಗೂಸುಗಳನ್ನು. ಅವುಗಳ ಹತ್ತಿರ ಹೋಗಿ ಕೆನ್ನೆ ತಟ್ಟಿ, ಕೈ ಮುಟ್ಟಿ, ನಗಿಸಿ ನಕ್ಕು, ಆ ಮೇಲೆ ಹಿರಿಯರ ಕಡೆಗೆ ತಿರುಗಿ 'ಎಂತಹ ಮುದ್ದಾದ ಮಕ್ಕಳು, ಎಂತಹ ಮುದ್ದಾದ ಮಕ್ಕಳು !' ಎಂದು ಮುಖವರಳಿಸಿ ಮಾತಿಗೆ ಮೊದಲುಮಾಡುತ್ತಾರೆ.

ಮಕ್ಕಳೆಂದರೆ ಅವರಿಗೆ ಪ್ರಾಣ.. ಎಂದು ಹೇಳಿದೆನಲ್ಲ; ಅದು ಅಕ್ಷರಶಃ ನಿಜ. ನಾವು ಅವರಲ್ಲಿ ಶಿಕ್ಷಣ ಪಡೆಯುತ್ತಿದ್ದಾಗ ಒಮ್ಮೆ ಕೆಲವು ಜನ ಅವರೊಂದಿಗೆ ಕುಳಿತು ಫೋಟೊತೆಗೆಯಿಸಿಕೊಳ್ಳುವ ವ್ಯವಸ್ಥೆ ಮಾಡಿದೆವು. ಸರಿಯಾಗಿ ಬೆಳಗಿನ ೭ ಗಂಟೆಗೆ ಬರುವುದಾಗಿ ಆಶ್ವಾಸನವಿತ್ತರು. ಫೋಟೋಗ್ರಾಫರ್ ಆರುವರೆ ಗಂಟೆಗೆ ಬಂದು ಎಲ್ಲ ವ್ಯವಸ್ಥೆ ಮಾಡಿ, ನಮ್ಮೆಲ್ಲರನ್ನೂ ಸರಿಯಾಗಿ ಕುಳ್ಳಿರಿಸಿ ಮೊಂಟೆಸೊರಿಯವರಿಗಾಗಿ ದಾರಿಕಾಯತೊಡಗಿದ. ಎಂಟುವರೆ ಗಂಟೆಯಾದರೂ ಬರಲಿಲ್ಲ. ಫೋಟೋಗ್ರಾಫರ್ ಗೋಳಾಡಿದ ಸರಿಯಾಗಿ ಫೋಟೊ ಹೊರಡದೆಂದು ಹೇಳಿದ. ನಮ್ಮೆಲ್ಲರಿಗೂ

ನಿರಾಶೆಯಾಯಿತು. ಮುಖದಮೇಲೆ ಸೂರ್ಯಪ್ರಕಾಶ ಬೀಳ ತೊಡಗಿತು. ಕ್ಯಾಮರಾ ಅತ್ತಿತ್ತ ಸರಿಸುವುದಾಯಿತು. ಆದರೂ ಬರಲಿಲ್ಲ. ಕಡೆಗೆ ನಮ್ಮಲ್ಲಿಯ ಒಬ್ಬರು ಅವರ ಬೀಡಾರಕ್ಕೆ ಹೋಗಿ ವಿಚಾರಿಸಲಾಗಿ, ಅವರಿಗೆ ಮೈಯಲ್ಲಿ ಸ್ವಲ್ಪ ಅಸ್ವಸ್ಥತೆ ಯೆಂಬುದು ತಿಳಿದುಬಂದಿತು. 'ಅವರು ಹೊರಡುವುದು ಕಷ್ಟ-ಸಾಧ್ಯ'ಎಂದು ಅವರ ಹತ್ತಿರದ ಸಂಬಂಧಿಕರೊಬ್ಬರು ಹೇಳುತ್ತಿರುವಾಗ, ಸ್ವತಃ ಡಾ. ಮೊಂಟಿಸೊರಿಯವರೇ ಬಾಡಿದ ಮುಖದಲ್ಲಿ ಮುಗುಳುನಗೆ ತಂದುಕೊಂಡು 'ಇದೀಗ ಹೊರಟುಬರುತ್ತೇನೆ' ಎಂದು ಹೇಳಿ ಕಳುಹಿಸಿದರು. ನಮ್ಮೆಲ್ಲರಿಗೂ ನಿರಾಶೆಯಲ್ಲಿ ಹೋದ ಧೈರ್ಯ ಮರಳಿ ಬಂದಂತಾಯಿತು. ಮತ್ತೆ ಅವರ ದಾರಿ ನೋಡುತ್ತ ಕುಳಿತುಕೊಂಡಿದ್ದೆವು. ನಮ್ಮಲ್ಲಿ ಕೆಲವರು ನಾಲ್ಕು ಹೆಜ್ಜೆ ಮುಂದೆ ಹೋಗಿ, ಅವರು ಬರುವುದನ್ನು ಮೊದಲೇ ತಿಳಿದುಕೊಳ್ಳಲು ಉತ್ಸುಕರಾಗಿ ದಾರಿಕಾಯುತ್ತಿದ್ದರು. 'ಕಾರ್ ಬಂದಿತು, ಅಗೋ ಅವರು ಬಂದೇಬಿಟ್ಟರು,' ಎಂದು ಕೂಗಿಕೊಂಡು, ನಮ್ಮ ಕಡೆಗೆ ಬರುತ್ತಿದ್ದಾಗ, ನಮ್ಮಿಂದ ಸ್ವಲ್ಪ ಹೆಜ್ಜೆ ಹಿಂದೆ ಕಾರ್ ನಿಂತ ಸಪ್ಪಳು ಕೇಳಬಂದಿತು. ಆ ಕಾರಿನ ಹತ್ತಿರ ಚಿಕ್ಕ ಮಗುವೊಂದು ತನ್ನ ತಾಯಿಯ ಕಂಕುಳಲ್ಲಿ ಕುಳಿತುಕೊಂಡು, ಮೊಂಟಿಸೋರಿಯವರ ಕಾರನ್ನು ಕಂಡು ಕಿಲಿಕಿಲಿ ನಕ್ಕಿತು. ಕಾರು ಆಗ ಅಲ್ಲಿ ನಿಂತುಕೊಳ್ಳಲು ಇದೇ ಕಾರಣ. ಒಳಗಿನಿಂದ ಮೊಂಟಿಸೋರಿಯವರು ಆ ತಾಯಿಯನ್ನು ಹತ್ತಿರ ಕರೆದು, ಮಗುವನ್ನು ಆಡಿಸ ತೊಡಗಿದರು, ಕುಲುಕ ತೊಡಗಿದರು. ಮಗು ಮತ್ತೂ ನಗಲಾರಂಭಿಸಿತು. 'ಎಂತಹ ತುಂಟ ಹುಡುಗ!' ಎಂದರು ಮೊಂಟಿಸೊರಿಯವರು. ಹೀಗೆಯೇ ಬೆಳೆಯಿತು ಅವರ ಆಟ. ಫೋಟೊಗ್ರಾಫರ್ ಇದನೆಲ್ಲ ನೋಡುತ್ತ ಹಣೆಗಟ್ಟಿಸಿಕೊಂಡ. ಮತ್ತೆ ಹದಿನೈದು ನಿಮಿಷವಾದರೂ ಮೊಂಟಿಸೊರಿಯವರು ಕದಲಲಿಲ್ಲ. ಎಲ್ಲರೂ 'ಅವರನ್ನು ಬೇಗ ಕರೆಯಿರಿ' ಎಂದು ಉಸುರತೊಡಗಿದರು. ಆದರೆ ಹೋಗಿ ಕರೆದುಕೊಂಡು ಬರಲು ಯಾರಿಗೂ ಧೈರ್ಯಸಾಲಲಿಲ್ಲ. ಆಗಿನ ಫೋಟೊಗ್ರಾಫರನ ಪೆಚ್ಚುಮುಖವು ನೋಡುವ ಹಾಗಿತ್ತು.

ಇನ್ನೊಂದು ಸಲ, ನಿತ್ಯದ ಉಪನ್ಯಾಸ ಕೊಡಲು ಡಾ|| ಮೊಂಟಿಸೋರಿಯವರು ಒಂದು ಗಂಟೆ ತಡಮಾಡಿ ಬಂದರು. ಉಪನ್ಯಾಸ ಮಂದಿರದಲ್ಲಿ ಬರುವಾಗ, ಮುಗುಳುನಗೆ ಬೀರುತ್ತ ಬಂದು ಆಸನದ ಮೇಲೆ ಕುಳಿತು, ನಗುತ್ತ ಸುತ್ತಲೂ ನಮ್ಮೆಲ್ಲರ ಕಡೆಗೂ ನೋಡಿ 'ಇಂದು ನನಗೆ ಅದೆಷ್ಟು ಸಂತೋಷವಾಗುತ್ತದೆ!' ಎಂದು ಮಾತಿಗೆ ಪ್ರಾರಂಭ ಮಾಡಿದರು. ಎಲ್ಲರಿಗೂ ಆಶ್ಚರ್ಯವಾಯಿತು. ಹಿಂದೆ ೨-೩ ನಿಮಿಷ ತಡಮಾಡಿ ಬಂದಾಗ 'ದಯವಿಟ್ಟು ಕ್ಷಮಿಸಬೇಕು' ಎಂದು ಕ್ಷಮೆ ಕೇಳಿಕೊಂಡು ಉಪನ್ಯಾಸ ಪ್ರಾರಂಭಮಾಡುವವರು, ಇಂದು ಹೀಗೆಯೇಕೆ—? ಎಂದು. ಅವರು ತಮ್ಮ ಮಾತನ್ನು ಮುಂದುವರಿಸಿದರು: 'ಈಗ ನಾನು ಬಹು ಬೇಗನೆ ಬಂದು ಬಿಟ್ಟೆ. ಇಷ್ಟು ತೀವ್ರ ಬರಬಾರದು ಎನ್ನಿಸಿತು. ಮನಸ್ಸಾಗದ ಮನಸ್ಸಿನವಳಾಗಿ ಬಂದುಬಿಟ್ಟೆ!' ಎಂದು ಮತ್ತೆ ಎಲ್ಲರ ಕಡೆಗೂ ನೋಡಿ ನಕ್ಕುಬಿಟ್ಟರು. ಜನರೆಲ್ಲರೂ ಬಹು ಕುತೂಹಲದಿಂದ ಮುಂದೇನು ಹೊರಡುವುದು ಅವರ ಮುಖದಿಂದ?' ಎಂದು ಸ್ತಬ್ಧರಾಗಿ ಕುಳಿತುಕೊಂಡಿದ್ದರು. 'ಈ ನನ್ನ ಆನಂದಕ್ಕೆ ಕಾರಣ (ಹಿಂದುಸ್ತಾನದ) ನಿಮ್ಮ ಹುಡುಗರು. ಅವರ ಕೂಡ ಆಡುತ್ತಿರುವಾಗ ನಿಮ್ಮನ್ನು ಮರೆತು ಬಿಟ್ಟೆ!' ಎಂದರು.

ಆ ದಿವಸ ಡಾ. ಮೊಂಟಿಸೋರಿಯವರ ಹಸ್ತದಿಂದ ಅವರ ನೇತೃತ್ವದಲ್ಲಿಯೇ ನಮ್ಮೆಲ್ಲರಿಗಾಗಿ ಚಿಕ್ಕಮಕ್ಕಳ 'ಮೊಂಟಿಸೋರಿ' ಶಾಲೆಯೊಂದು ಪ್ರಾರಂಭವಾಯಿತು. ಆ ದಿನ ಭಾರತೀಯ ಹುಡುಗರ ಉತ್ಸಾಹವನ್ನು ಕಂಡು ತೆಗೆದ ಉದ್ಗಾರಗಳಿವು.

ಮೊಂಟಿಸೋರಿಯವರು ಉಪನ್ಯಾಸ ಕೊಡುವ ರೀತಿಯೇ ಬೇರೆ. ಅವರು ಮಾತನಾಡುವುದು ಇಟಲಿದೇಶದ ಭಾಷೆ; ಯಾರಿಗೂ ತಿಳಿಯದು. ಸುಮಾರು ೮೦-೮೫ ಪಾಠಗಳಾದರೂ ಜನರು ಬೇಸರಿಸಲಿಲ್ಲ. ಒಮ್ಮೊಮ್ಮೆ ಬಿಡುವಿನ ದಿನಗಳಲ್ಲಿ, ನಮ್ಮ ಬೀಡಾರದಿಂದ ೧೦-೧೫ ಮೈಲು ದೂರ ಅವರ ಉಪನ್ಯಾಸಗಳ ಏರ್ಪಾಡಾದಾಗ ಸಹ ಸಾಕ್ಷ್ಯ ಧಾವಿಸಿ ಅಲ್ಲಿ ಮುಗಿಬೀಳುತ್ತಿದ್ದೆವು. ಅಷ್ಟು ಆಕರ್ಷಕವಾದುದು ಅವರ ಭಾಷೆ. ಕುರ್ಚಿಯಲ್ಲಿ ಕುಳಿತುಕೊಂಡು, ಬಹು ನಿದಾನವಾಗಿ—ಗಂಗಾಪ್ರವಾಹದಂತೆ—ಬಹು ಶಾಂತವಾಗಿ ಮಾತನಾಡುತ್ತಾರೆ. ಮಾತನಾಡುತ್ತಿರುವಾಗ ಅವರ ಮನಸ್ಸಿನಲ್ಲಿಯ ಭಾವನೆಗಳು ಕಣ್ಣಲ್ಲಿ, ಮುಖದಲ್ಲಿ, ಕೈಬೆರಳುಗಳಲ್ಲಿ ಸೂಸಿ ಹರಿಯುತ್ತವೆ. ಅವರು ಮಾತನಾಡುವ ಭಾಷೆ ನಮಗೆ ತಿಳಿಯದಿದ್ದರೂ ಸರಿ; ಅವರ ವಿಚಾರಗಳ ಅರ್ಥ ಬೇಗನೆ ಆಗಿಬಿಡುತ್ತದೆ. ಅವರು ಇಟಲಿ ಭಾಷೆಯಲ್ಲಿ ಆಡಿದ ವಾಕ್ಯಗಳ ಭಾಷಾಂತರವು ಪ್ರತಿವಾಕ್ಯದ ಕೊನೆಗೆ ಇಂಗ್ಲೀಷ್ ಭಾಷೆಯಲ್ಲಾಗುತ್ತಿದ್ದರೂ, ಅದರ ಕಡೆಗೆ ಕೇಳುವವರ ಲಕ್ಷ್ಯವೆ ಅಷ್ಟು ಕಂಡು ಬರುತ್ತಿದ್ದಿಲ್ಲ. ಮೊಂಟಿಸೋರಿ ತತ್ತ್ವಗಳ ಮೇಲೆ ಇಂಗ್ಲಿಷ್ ಭಾಷೆಯಲ್ಲಿ ಹೇರಳವಾಗಿ ಪುಸ್ತಕಗಳಿವೆ. ಅವುಗಳನ್ನು ಓದಿ ಅರಗಿಸಿಕೊಂಡ ಅನೇಕ ವಿದ್ವಾಂಸರಿದ್ದಾರೆ. ಆದರೆ ಸ್ವತಃ ಡಾ|| ಮೊಂಟಿಸೋರಿಯವರ ಸಮ್ಮುಖದಲ್ಲಿ ಕುಳಿತು, ಅವರ ಅಮೃತ-ವಾಣಿಯಿಂದ ಬರುವ ಉಪನ್ಯಾಸಗಳನ್ನು ಕೇಳಿ, ಅವರ ತತ್ತ್ವಗಳನ್ನು ತಿಳಿದುಕೊಂಡವರಿಗೆ ಯಾವ ಘನವಿದ್ವಾಂಸರೂ ಸರಿಯಾಗಲಾರರು ಎಂಬುದು ಖಂಡಿತ. ರಸಮಯವಾಗಿ, ಸಜೀವವಾಗಿ, ಹೃದಯದಿಂದ ಹೊರಡುವ ಮಾತು, ನೇರವಾಗಿ ಹೃದಯಕ್ಕೆ ತಟ್ಟುವುದು. ಅವರ ಸಾನ್ನಿಧ್ಯದ ಫಲ ಎಂದಿಗೂ ವ್ಯರ್ಥವಾಗದು. ಅವರು ಆಡಿದ ಒಂದೊಂದು ಮಾತೂ ಜ್ಞಾನಭಾಂಡಾರದ ಹವಳ-ಮುತ್ತುಗಳು; ಪಚ್ಚ-ರತ್ನಗಳು. ಅದೆಲ್ಲವೂ ಅವರ ಅನುಭವದ ಅಮೃತ.

ತತ್ತ್ವಗಳನ್ನು ಎಷ್ಟು ರಸಮಯವಾಗಿ ವರ್ಣಿಸುತ್ತಾರೆ! ಅವು ಬೇಗ ಅರ್ಥವಾಗಲೆಂದು ತಮ್ಮ ಅನುಭವಕ್ಕೆ ಬಂದ ಅನೇಕ ಉದಾಹರಣೆಗಳನ್ನು ಹೇಳುತ್ತಾರೆ. ಒಂದು ಮಾತನ್ನು ಹೇ

ನಾಲ್ಕು ಉದಾಹರಣೆಗಳು. ತಮ್ಮ ಸ್ವಂತ ಉದಾಹರಣೆಗಳನ್ನಲ್ಲದೆ ತಮ್ಮ ನೇತೃತ್ವದಲ್ಲಿ ನುರಿತು ಬೇರೆ ಕಡೆಯಲ್ಲಿ ಕೆಲಸಮಾಡುತ್ತಿರುವ ಶಿಕ್ಷಣತಜ್ಞರ ಅನುಭವಗಳನ್ನೂ ಕಥೆಮಾಡಿ ಹೇಳುತ್ತಾರೆ. ಇಂತಹ ಶಿಕ್ಷಣತಜ್ಞರಿಂದ ದಿನಾಲು ಪತ್ರಗಳಿರುತ್ತವೆ. ಯಾವುವಾದರೂ ಸೋಜಿಗದ ಕೆಲವು ಪತ್ರಗಳಿದ್ದರೆ ತೀರಿತು, ಆ ದಿನದ ಉಪನ್ಯಾಸಕ್ಕೆ ಸೊನ್ನೆ.

ಡಾ॥ ಮೊಂಟೆಸೋರಿಯವರು ಹಿಂದುಸ್ಥಾನದಲ್ಲಿ ಶಿಕ್ಷಣ ಶಿಬಿರವನ್ನು ಪ್ರಾರಂಭಮಾಡುವುದಕ್ಕೆ ಕೆಲವು ತಿಂಗಳು ಮುಂಚೆ, ಹಾಲಂಡ್ ದೇಶದಲ್ಲಿ ತಮ್ಮ ಚಿಕ್ಕ ಶಾಲೆಯೊಂದನ್ನು ಪ್ರಾರಂಭಿಸಿ ಬಂದರು. ಅದರ ಪ್ರಗತಿಯ ಬಗ್ಗೆ ಆಗಾಗ ಕಾಗದಗಳು ಬರುತ್ತಲೇ ಇದ್ದುವು. ಒಮ್ಮೆ ಒಂದು ಕುತೂಹಲಪೂರ್ಣವಾದ ಪತ್ರ ಬಂದಿತು. ಆ ದಿನ ನಮ್ಮ ಪಾಠ ಅಷ್ಟಕ್ಕಷ್ಟೇ ಆಯಿತು. ಉಪನ್ಯಾಸದ ಪ್ರಾರಂಭದಲ್ಲಿಯೇ, ಡಾ॥ ಮೊಂಟೆಸೋರಿಯವರು ಅದರ ಪ್ರಸ್ತಾಪವನ್ನೆತ್ತಿ ಹೀಗೆ ಮಾತಾಡತೊಡಗಿದರು: 'ಈ ದಿನ ಹಾಲಂಡಿನಿಂದ ನನಗೆ ಒಂದು ಪತ್ರ ಬಂದಿದೆ. ನಾನು ಇಲ್ಲಿಗೆ ಬರುವಾಗ, ಹಾಲಂಡಿನಲ್ಲಿ ಪ್ರಾರಂಭಿಸಿದ ಸಣ್ಣ ಶಾಲೆಯನ್ನು ಅರ್ಧಕ್ಕೆ ಬಿಡಬೇಕಾಯಿತು. ಈ ಪತ್ರದಲ್ಲಿ, ಆ ಶಾಲೆಯಲ್ಲಿರುವ ೪ ವರುಷದ ಒಂದು ಮಗು ಹೇಗಿದೆಯೆಂಬುದನ್ನು ವರ್ಣಿಸಲಾಗಿದೆ. ನಿಮಗೆ ಸಮಾಧಾನವಾಗಲೆಂದೇ ಅದನ್ನು ಈಗ ಹೇಳುತ್ತಿದ್ದೇನೆ. ಯಾಕೆಂದರೆ ಪ್ರತಿನಿತ್ಯ ತತ್ತ್ವಗಳ ವ್ಯಾಖ್ಯೆಗಳನ್ನು ಕೇಳಿ ಕೇಳಿ ನಿಮಗೆ ಬೇಸರು ಬಂದಿರಬಹುದು. ಮತ್ತು 'ಕೃತಿಯಲ್ಲಿ ಅದನ್ನು ತರಲು ಸಾಧ್ಯವೇ?' ಎಂಬ ಸಂಶಯವೂ ಬಂದಿರಬಹುದು. ಆದುದರಿಂದ ನಾಲ್ಕು ವರುಷದ ಮಗು ಆ ಶಾಲೆಯಲ್ಲಿ ಏನು ಮಾಡುತ್ತದೆ ಎಂಬುದನ್ನು ಹೇಳುತ್ತೇನೆ, ಕೇಳಿ! ಆ ನಾಲ್ಕು ವರುಷದ ಮಗು ಭೂಮಿತಿಯ ಎಲ್ಲ ಆಕೃತಿಗಳನ್ನೂ ಗುರುತಿಸಬಲ್ಲದು. ವರ್ಣಮಾಲೆಗಳನ್ನೆಲ್ಲ ಓದಬಲ್ಲದು. ಹಲವು ವಸ್ತುಗಳ ಹೆಸರುಗಳನ್ನು ಓದುವುದಲ್ಲದೆ, ಸಸ್ಯಶಾಸ್ತ್ರದ ಅನೇಕ ಸಂಗತಿಗಳನ್ನೂ ಬಲ್ಲದು. ಸಸಿಗಳು, ಬೇರುಗಳು, ಹೂಗಳು, ಎಲೆಗಳು ಮುಂತಾದುವುಗಳ ಪರಿಚಯ ಸಾಕಷ್ಟಿದೆ. ಹತ್ತು ಲಕ್ಷದ ವರೆಗೆ ಅಂಕೆಗಳನ್ನು ಹೇಳಬಲ್ಲುದಲ್ಲದೆ, ಗಣಿತ ರಷ್ಟು ದೊಡ್ಡ ಅಂಕೆಗಳನ್ನು ಸ್ವಲ್ಪವೂ ತಪ್ಪಿಲ್ಲದೆ ಜೋಡಿಸಬಲ್ಲುದು. ನಕ್ಷೆಯಲ್ಲಿ ಪ್ರಪಂಚದ ಎಲ್ಲ ಭಾಗಗಳನ್ನೂ ಗುರುತಿಸುತ್ತದೆ. ಯುರೋಪ ಖಂಡದ ಎಲ್ಲ ದೇಶಗಳನ್ನೂ ತೋರಿಸಿ, ಅವುಗಳ ಬಾವುಟಗಳನ್ನು ತೋರಿಸುತ್ತದೆ. ಹಾಲಂಡ್ ದೇಶದ ಎಲ್ಲ ಪ್ರಾಂತಗಳನ್ನೂ ಹಾಗು ಯುರೋಪದ ಎಲ್ಲ ಮಹಾಸಾಗರ ಮತ್ತು ದ್ವೀಪಗಳನ್ನೂ ತಿಳಿದುಕೊಂಡಿದೆ. ಇದನ್ನು ನಿಮಗೆ ಧೈರ್ಯಕೊಡಲು ಹೇಳಿದುದು. ನಿಮ್ಮ ಹುಡುಗರು ಸಹ ನಾಲ್ಕು ವರುಷದವರಾದಾಗ ಹೀಗಾಗಬಲ್ಲರು, ಇದಕ್ಕೆ ಸಂದೇಹವಿಲ್ಲ. ನಿಮ್ಮ ಕಲಿಸುವಿಕೆ ಸರಿಯಾದ ದಾರಿಯನ್ನು ಹಿಡಿದಾಗ, ಹುಡುಗರು ಎಲ್ಲವನ್ನೂ ಅತಿ ಸುಲಭ ... ಕೊಳ್ಳುತ್ತವೆ. ಹೀಗೆ ನೀವು ಸರಿಯಾದ ಮಾರ್ಗವನ್ನು ಹಿಡಿದಾಗ, ಸಂಸ್ಕೃತಿಯು ಒಂದು ಸಮಸ್ಯೆಯಾಗಿ ತೋರಲಾರದು. ಮುಂದೆ ಮಕ್ಕಳ ಬೆಳವಣಿಗೆ ಅತಿ ಸ್ವಾಭಾವಿಕವಾಗಿ ಪರಿಣಮಿಸುವುದು. ಅಲ್ಲಿಯ ಶಿಕ್ಷಕರು ಮುಂದೆ ಹೀಗೆ ಬರೆದಿದ್ದಾರೆ:— 'ಮಕ್ಕಳು ನಿದಾನವಾಗಿ ಕೆಲಸ ಮಾಡುತ್ತಾರೆ. ಸ್ನೇಹಿತರಾಗಿ ಆಟವಾಡುತ್ತಾರೆ. ಕೊನೆಯ ಗಂಟೆ ಬಾರಿಸಿದಾಗ ಮತ್ತೆ ನಿದಾನವಾಗಿ ವಸ್ತುಗಳನ್ನು ಸರಿಯಾದ ಸ್ಥಳಗಳಲ್ಲಿಟ್ಟು, ಸ್ವಲ್ಪವೂ ಶಬ್ದ ಮಾಡದೆ ಶಾಲೆಯ ಹೊರಗೆ ನುಸುಳುತ್ತಾರೆ!' ಒಟ್ಟಿನಲ್ಲಿ ಹೇಳುವುದಾದರೆ ಬಳ್ಳಿ ಬೆಳೆದ ಹಾಗೆ ಮಕ್ಕಳು ಬೆಳೆಯಬೇಕು. ಈ ಮಟ್ಟಕ್ಕೆ ಬರಬೇಕಾದರೆ ನಾನು ಹಿಂದೆ ಹೇಳಿದ ಎಲ್ಲ ಮಾತೂ ಅತ್ಯವಶ್ಯವಾದುವುಗಳು!"

ಹೀಗೆ ಅವರು ಮಾತನ್ನು ಮುಗಿಸಿದರು. ಜನರೆಲ್ಲರೂ ಸ್ತಬ್ಧರಾಗಿ ಕುಳಿತಿದ್ದರು. ಎಲ್ಲರ ದೃಷ್ಟಿ ನೇರವಾಗಿ ಮಾತಾ ಮೊಂಟೆಸೋರಿಯವರ ಮೇಲೆ. ಮುಂದೆ ಅವರು ವಿಷಯಾಂತರ ಮಾಡಿದಾಗ ಎಲ್ಲರ ಬಾಯಿಂದ 'ಉಶ್ಯ್'ಎಂದು ನಿಟ್ಟುಸಿರು. ಒಬ್ಬರ ಮುಖವನ್ನು ಮತ್ತೊಬ್ಬರು ನೋಡಿದರು. ಎಲ್ಲರಿಗೂ ಆಶ್ಚರ್ಯ. ಎಲ್ಲರ ಮುಖದ ಮೇಲೂ ತಿಳಿನಗೆ. ಮತ್ತೆ 'ಹೀಗಾಗುವುದು ಸಾಧ್ಯವೆ?' ಎಂಬ ಸಂಶಯ. ಆ ದಿನದ ಮುಂದಿನ ಪಾಠ ಯಾರಿಗೂ ಅಷ್ಟು ಹಿಡಿಸಲಿಲ್ಲ. ಎಲ್ಲರೂ ಆ ನಾಲ್ಕು ವರುಷದ 'ಅದ್ಭುತ' ಮಗುವಿನ ಬಗ್ಗೆ ಮಾತನಾಡಿಕೊಂಡರು.

ಮಾತಾ ಮೊಂಟೆಸೋರಿಯವರಿಗೆ ಮಕ್ಕಳ ಮೇಲಿದ್ದಷ್ಟೇ ಪ್ರೀತಿ, ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ದುಡಿಯುವವರ ಮೇಲೂ ಇದೆ. ಶಿಕ್ಷಕವಿದ್ಯಾರ್ಥಿಗಳೆಂದರೆ ಬಹು ಆದರದಿಂದ ಬರಮಾಡಿಕೊಳ್ಳುತ್ತಾರೆ. ಅವರ ಹಲವು ಪ್ರಶ್ನೆಗಳಿಗೆ ಸ್ವಲ್ಪವೂ ಬೇಸರಪಡದೆ ಉತ್ತರಕೊಟ್ಟು ಮಾರ್ಗದರ್ಶಿಗಳಾಗುತ್ತಾರೆ. ಅವರ ದಿನದ—ನೂರೊಂದು—ತೀರ ಸಾಮಾನ್ಯ ಪ್ರಶ್ನೆಗಳಿಗೂ ಉತ್ತರವಿತ್ತು ಉತ್ತೇಜನ ಕೊಡುತ್ತಾರೆ. ಕೇವಲ ಅವರ ಶಾಲೆಗಳಿಗೆ ಸಂಬಂಧಪಟ್ಟ ವಿಷಯಗಳಿಗಷ್ಟೇ ಅಲ್ಲ; ಅವರ ನಿತ್ಯದ ಸ್ವಂತ ಜೀವನಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳ ಬಗ್ಗೆ ಕೂಡ ಸಲಹೆ ಕೊಡುತ್ತಾರೆ. ಒಮ್ಮೆ ನಿತ್ಯದ ಉಪನ್ಯಾಸ ನಡೆದಾಗ, ಒಬ್ಬ ಪಾರಸಿ ಹೆಣ್ಣು ಮಗಳು ಅದೇಕೋ ಮೂರ್ಛೆ ಬಂದು ನೆಲಕ್ಕೆ ಉರುಳಿದಳು. ಶಿಬಿರದಲ್ಲಿ ಗೊಂದಲವೆದ್ದಿತು. ಮೊಂಟೆಸೋರಿಯವರು ಆ ಹೆಣ್ಣುಮಗಳನ್ನು ತಮ್ಮ ಕಾರಿನಲ್ಲಿರಿಸಿ ಅವಳ ಬೀಡಾರಕ್ಕೆ ಕಳುಹಿ, ಮತ್ತೆ ಅರ್ಧಕ್ಕೆ ನಿಂತ ಉಪನ್ಯಾಸವನ್ನು ಹೀಗೆ ಮುಂದುವರಿಸಿದರು:—

'ಅನೇಕ ಕಾರಣಗಳಿಂದ ಜನರು ಮೂರ್ಛೆ ಹೊಂದುತ್ತಾರೆ. ಊಟದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದಾಗಲೂ ಮೂರ್ಛೆ ಹೊಂದುವುದುಂಟು. ಮೂರ್ಛೆ ಬರುವುದಕ್ಕೆ ಸ್ವಲ್ಪ ಮುಂಚೆ, ತಲೆ ಭಾರವಾಗಿ ತಿರುಗಿದಂತಾಗುತ್ತದೆ. ಆಗ ಸ್ವಲ್ಪ ನಿದಾನವಾಗಿ—ನೀಳವಾಗಿ—ಉಸುರಾಡಿಸಿದರೆ, ತಲೆಯ ಭಾರ ಕಡಿಮೆಯಾದಂತೆ

ಎನಿಸುವುದು. ಹೀಗೆ ಸ್ವಲ್ಪ ಸಮಯ ನೀಳವಾಗಿ ಉಸುರಾಡಿಸಿ, ಮೂರ್ಛೆಯನ್ನು ತಪ್ಪಿಸಿಕೊಳ್ಳಬಹುದು. '

ಮೊಂಟೆಸೋರಿಯವರು ಯುರೋಪ ಖಂಡದವರಾದರೂ ಆಂಗ್ಲರಂತೆ ತೀವ್ರವಾಗಿ ಶಿಷ್ಟಾಚಾರಗಳನ್ನು ಪಾಲಿಸುವುದಿಲ್ಲ. ಅವರ ಭೆಟ್ಟಿಗೆ ಹೋದಾಗ ಇಲ್ಲವೆ ಚಹಾ ಕುಡಿಯಲು ಹೋದಾಗ, ಇಂತಹ ಯಾವ ಶಿಷ್ಟಾಚಾರಗಳಿಗೂ ಮಹತ್ವ ಕೊಡದೆ ಬರಮಾಡಿಕೊಳ್ಳುತ್ತಿದ್ದರು. ಚಹಾ ಕುಡಿಯುವಾಗಲೂ ಅಷ್ಟೇ; ಹದಿನಾರಾಣೆ ಭಾರತೀಯರು. ಒಂದು ರವಿವಾರ ಸರಿಯಾಗಿ ೯॥ ಗಂಟೆಗೆ ಚಹಾ ಕುಡಿಯಲು ಬರಹೇಳಿದ್ದರು. ಯಾವುದೋ ಕಾರಣದ ಮೂಲಕ ೪ ಗಂಟೆಗೆ ಅವರಲ್ಲಿಗೆ ಹೋದೆ. ಮೇಲ್ಮಾಳಿಗೆಯಲ್ಲಿ ಜನರ ಮಾತು-ಕತೆ ಕೇಳಿಸಿತು. ಹಾಗೆಯೇ ಮರಳಿ ಹೋಗೋಣವೆಂದು ತಿರುಗುವುದರಲ್ಲಿದ್ದೆ. ಅಷ್ಟರಲ್ಲಿಯೆ ಅವರ ಸಂಬಂಧಿಕರೊಬ್ಬರು ಹೊರಗೆ ಬಂದು, ನನ್ನನ್ನು ನೋಡಿ ಕರೆದು, ಮಹಡಿ ಮೇಲೆ ಕರೆದುಕೊಂಡು ಹೋಗಿ ಮೊಂಟೆಸೋರಿಯವರಿಗೆ ಹೀಗೆ ಹೇಳಿದರು:—

'ಇಲ್ಲಿ ನೋಡಿರಿ. ಈತನಿಗಾಗಿ ನಾವು ಕಾಯುತ್ತಿದ್ದೇವೆ. ಆದರೆ ಈತ ಮಾತ್ರ ಇಲ್ಲಿಯವರೆಗೆ ಬಂದು ಮರಳಿ ಹೋಗುವುದರಲ್ಲಿದ್ದ' ಎಂದರು. ಎಲ್ಲರೂ ನಕ್ಕು ಬಿಟ್ಟರು. ನನಗೆ ಮುಖ ಮೇಲಕ್ಕೆತ್ತುವುದಾಗಲಿಲ್ಲ. ಸ್ವಲ್ಪ ಸಮಯವಾದ ನಂತರ ಮುಖವೆತ್ತಿದಾಗ, ಅಲ್ಲಿ ಯುರೋಪಿಯನ್ ಹಾಗು ಬೇರೆ ದೊಡ್ಡ ಮನೆತನದ ಹೆಣ್ಣುಮಕ್ಕಳಿದ್ದರು. ಆಗ ಅವರೆಲ್ಲರೂ ತಮ್ಮ ತಮ್ಮ ಕೆಲಸದಲ್ಲಿ ಮಗ್ನರಾಗಿದ್ದರು. ' ಉಳಿದುಕೊಂಡೆ ಜೀವ ' ಎಂದೆ.

೧೯೪೦ ನೆಯ ಫೆಬ್ರುವರಿ. ಶಿಕ್ಷಣಶಿಬಿರ ಮುಕ್ತಾಯವಾಗಿ ಒಂದೆರಡು ದಿನಗಳಾಗಿದ್ದುವು. ಬಹುತರ ಎಲ್ಲರೂ ತಮ್ಮ ತಮ್ಮ ಊರುಗಳಿಗೆ ಹೊರಟು ಹೋಗಿದ್ದರು. ಕೀರ ಸ್ವಲ್ಪ ಜನರು ಮಾತ್ರ ಇನ್ನೂ ಉಳಿದುಕೊಂಡಿದ್ದರು. ಒಂದು ಮಧ್ಯಾಹ್ನ, ಉಳಿದವರಲ್ಲಿ ೪–೬ ಜನರು ಊರಿಗೆ ಹೊರಡುವುದಾಗಿ ಬೀಳ್ಕೊಳ್ಳಲು ಮೊಂಟೆಸೋರಿಯವರ ಬಿಡಾರಕ್ಕೆ ಹೋಗಿದ್ದೆವು. ಅವರು ಎಲ್ಲರನ್ನೂ ಆದರದಿಂದ ಬರಮಾಡಿಕೊಂಡರು. ಬೇಡಬೇಡವೆಂದರೂ ಸ್ವಲ್ಪ ತಿನಿಸಿನೊಂದಿಗೆ ಚಹಾ ಕೊಟ್ಟರು. ಆ ಮೇಲೆ ಎಲ್ಲರೂ ತಮ್ಮ ತಮ್ಮ ಕೈಪುಸ್ತಕಗಳಲ್ಲಿ ಅವರ ಹಸ್ತಾಕ್ಷರಗಳನ್ನು, ಸಂದೇಶದೊಂದಿಗೆ, ಕೇಳಿಕೊಂಡರು. ಬಹು ಸಂತೋಷದಿಂದ ಎಲ್ಲರ ಬೇಡಿಕೆಗಳನ್ನೂ ಪೂರಯಿಸಿ ಮಾತಿಗೆ ಪ್ರಾರಂಭಿಸಿದರು. ಮೊದಲು ಕೆಲವು ಉಪದೇಶದ ಮಾತುಗಳಾದುವು. ಆಮೇಲೆ ಮಾತಿಗೆ ಮಾತು ಹೊರಟು ಅವರು 'ನಾನು ಪ್ರಪಂಚದಲ್ಲಿ ಅನೇಕ ಕಡೆಗೆ ಶಿಕ್ಷಣಶಿಬಿರಗಳನ್ನು ತೆರೆದು ಉಪನ್ಯಾಸ ಕೊಟ್ಟಿದ್ದೇನೆ. ಆದರೆ ಇಲ್ಲಿಯಷ್ಟು ಸಮಾಧಾನ ನನಗೆಲ್ಲಿಯೂ ಸಿಕ್ಕಿಲ್ಲ. ನನ್ನದೊಂದು ರೂಢಿಯಿದೆ. ನನಗೆ ಬೇಕಾದ ಕೆಲವು ಶಿಕ್ಷಕರಿಂದ ನನ್ನ ಕೈಪುಸ್ತಕದಲ್ಲಿ, ಅವರ ಒಂದೆರಡು ವಾಕ್ಯಗಳೊಂದಿಗೆ ರುಜು ಹಾಕಿಸಿಕೊಳ್ಳುವುದು ''ಎಂದು ನುಡಿದು, ತಮ್ಮ ಚಿಕ್ಕ ಪೆಟ್ಟಿಗೆಯಲ್ಲಿದ್ದ ಒಂದು ಕೈ ಪುಸ್ತಕವನ್ನು ತೆಗೆದು ನಮ್ಮ ಮುಂದೆ ಇಟ್ಟರು. ನಮ್ಮಲ್ಲಿಯ ಎಲ್ಲರೂ ತಮ್ಮ ಧ್ಯೇಯದ ಬಗ್ಗೆ ಇಲ್ಲವೆ ತಮ್ಮ ಮುಂದಿನ ಕಾರ್ಯದ ಬಗ್ಗೆ ಒಂದೆರಡು ಮಾತುಗಳನ್ನು ಬರೆದು ರುಜು ಹಾಕಿದರು. ಕೊನೆಗೆ ನನ್ನ ಸರದಿ ಬಂದಿತು. ಮೊದಲಿನಿಂದಲೂ 'ಏನು ಬರೆಯುವುದು' ಎಂದು ವಿಚಾರಿಸುತ್ತಲಿದ್ದೆ. ಏನೂ ಹೊಳೆಯಲಿಲ್ಲ. ಕಡೆಗೆ ' ಸುಮ್ಮನೆ ರುಜು ಹಾಕಿದರಾಯಿತು ' ಎಂದು ನಿರ್ಧರಿಸಿಕೊಂಡಿದ್ದೆ. ನನ್ನ ಸರದಿಬಂದಾಗ, ಅವರ ಹತ್ತಿರ ಹೋಗಿ ರುಜು ಹಾಕುವುದರಲ್ಲಿದ್ದೆ. ಅವರು ನನ್ನ ಭುಜದ ಮೇಲೆ ಕೈಯಿಟ್ಟು ' ಮಗೂ, ಮಕ್ಕಳಿಗಾಗಿ ನೀನು ಸಾಯಬಲ್ಲೆಯಾ ? ' ಎಂದು ಹೇಳಿದರು. ನಾನು ಬೆಪ್ಪನಂತೆ ಸುಮ್ಮನೆ ನಿಂತುಕೊಂಡೆ. ಮುಖ ಮೇಲಕ್ಕೆತ್ತುವುದಾಗಲಿಲ್ಲ. ಅವರ ಮಾತಿನ ಅರ್ಥವೇ ನನಗಾಗಲಿಲ್ಲ. ಅವರು ಮತ್ತೆ ಅದೇ ಪ್ರಶ್ನೆಯನ್ನೇ ಹಾಕಿದರು. ಆಗ ಪ್ರಶ್ನೆಯ ಅರ್ಥವಾದರೂ ನನಗೆ ಉತ್ತರ ಕೊಡಲು ಧೈರ್ಯಸಾಲಲಿಲ್ಲ. ಏನೆಂದು ಉತ್ತರ ಕೊಡುವುದು ? ಈ ಕೆಲಸ ನನ್ನಿಂದ ಸಾಧ್ಯವೇ ? ಅಷ್ಟರಲ್ಲಿ ನನ್ನ ಸಂಗಡಿಗರೊಬ್ಬರು ಮೈ ತಟ್ಟಿ ' ಹೂಂ ಅನ್ನು ' ಎಂದರು. ಆಗ ಮೊಂಟೆಸೋರಿಯವರ ಕಡೆಗೆ ನೋಡಿದೆ. ಸ್ವಲ್ಪ ಧೈರ್ಯ ಬಂದಿತು. 'ಅವರ ವರದಹಸ್ತದ ಆಶೀರ್ವಾದ ಇರುವಾಗ ಭಯವೇಕೆ ? ' ಎಂದು ' ಹೂಂ ತಾಯಿ' ಎಂದೆ, ಅವರ ಕೈಪುಸ್ತಕದಲ್ಲಿ " ನಾನು ಮಗುವಿಗಾಗಿ ಬಾಳುತ್ತೇನೆ. ಮಗುವಿಗಾಗಿ ಮಡಿಯುತ್ತೇನೆ, " ಎಂದು ಬರೆದು ರುಜು ಹಾಕಿದೆ. ಅವರು ಅದನ್ನು ಓದಿಕೊಂಡು ಕೈಕುಲುಕಿ ಬೀಳ್ಕೊಟ್ಟರು.

ಹೋದ ವರುಷ ಧಾರವಾಡದಲ್ಲಿ ಸಾಹಿತ್ಯ ಸಮ್ಮೇಳನ ನೆರೆದಾಗ, ನನ್ನ ಸ್ನೇಹಿತರೊಬ್ಬರು ಕನ್ನಡದ ಒರ್ವ ಸಾಹಿತಿಗಳಿಗೆ ನನ್ನ ಪರಿಚಯ ಮಾಡಿಕೊಡುವಾಗ ' ಇವರು ಡಾ॥ ಮೊಂಟೆಸೋರಿಯವರ ಹತ್ತಿರವಿದ್ದು ಶಿಕ್ಷಣ ಪಡೆದು ಬಂದಿದ್ದಾರೆ ' ಎಂದು ಹೇಳಿದರು. ಆಗ ಅವರು ' ಆ ಮಹಾತಾಯಿಯಿಂದ ನಾವು ಏನೂ ಕಲಿಯಬೇಕಾದದ್ದಿಲ್ಲ, ' ಎಂದರು. ನನ್ನ ಮನಸ್ಸು ಬಹು ನೊಂದುಕೊಂಡಿತು. ಅವರಿಗೆ ನಾನು ಹೇಳುವ ಉತ್ತರವಿಷ್ಟೆ : ಅವರು ಒಮ್ಮೆ ಡಾ॥ ಮೊಂಟೆಸೋರಿಯವರನ್ನು ಕಂಡು ಮಾತನಾಡಿಸಬೇಕು ಅಷ್ಟೇ!

" ಕಾಡುಕೋಣ " ದ ಗುರುತಿನ

ಕಾಗದವು

ಕನ್ನಡನಾಡಿನದು!

ಬರೆಯಲಿಕ್ಕೂ ಮುದ್ರಣಕ್ಕೂ ತಕ್ಕುದಾದುದು!

ಅಧಿಕೃತ ಪ್ರಸಾರಕರು : ಜಿ. ಕೆ. ಕೇಳಕರ

ಸ್ವದೇಶಿ ಪೇಪರ್ ಮಾರ್ಟ್, ಧಾರವಾಡ.

ಹೆಣ್ಣುಬಾಳು!

(ಒಂದು ಜೀವನಕಥೆ)

ಶ್ರೀ. ಸಿ. ಬಿ. ಬೆಲ್ಲದ, ಇಟಗಿ

★

ಹೋದ ಸಲದ ದೀವಳಿಗೆಯ ರಜೆಯ ದಿನಗಳನ್ನು ಕಳೆಯಲು ಧಾರವಾಡಕ್ಕೆ ಬರಬೇಕೆಂದು ರಾಜುವು ಪತ್ರದಿಂದ ತಿಳಿಸಿದ್ದ. ಆದರೆ ಅಷ್ಟರಲ್ಲಿ ನಾವೆಲ್ಲ ಕಾಲೇಜಿನ ಪ್ರೊಫೆಸರರೂ ವಿದ್ಯಾರ್ಥಿಗಳೂ ಕೂಡಿ ಬೇರೊಂದು ಪ್ರವಾಸದ ಕಾರ್ಯಕ್ರಮವನ್ನು ನಿರ್ಧರಿಸಿಕೊಂಡದ್ದರಿಂದ ಹೋಗಲು ಸಾಧ್ಯವಾಗಲಿಲ್ಲ. ಈ ಸಾರೆ ಕ್ರಿಸ್‌ಮಸ್ ರಜೆಯಲ್ಲಿ ಧಾರವಾಡದಲ್ಲಿ ಕ. ವಿ. ವ. ಸಂಘದ ಸುವರ್ಣಮಹೋತ್ಸವವೂ, ಪುಲಿಗೆರೆಯಲ್ಲಿ 'ಪಂಪ-ಮಹಾಕವಿಯ ಸಹಸ್ರ ಸಾಂವತ್ಸರಿಕೋತ್ಸವವೂ ಇದ್ದುದರಿಂದ, ಅಗತ್ಯ ಬರಲೇಬೇಕೆಂದು ಬಿಡುವಿನ ಮುನ್ನಾದಿನವೇ ಅವನದೊಂದು ಪತ್ರ ಬಂದಿತು. ಬಹುದಿನಗಳಿಂದ ರಾಜುವಿನ ಭೆಟ್ಟಿ ಆಗಿರಲಿಲ್ಲ. ಅಲ್ಲದೆ ಮನಸ್ಸಿಗೂ ಬೇಜಾರವಾಗಿದ್ದಿತು. ಏನೋ ಈ ಬಿಡುವಿನ ದಿನಗಳನ್ನು ಸ್ನೇಹಿತನ ಜೊತೆಯಲ್ಲಿ ಮೋಜಿನಿಂದ ಕಳೆಯೋಣವೆಂದು, ಮಾರನೆಯ ದಿನವೇ ಹೊರಟುಬಿಟ್ಟೆ.

ರಾಜಣ್ಣ ಧಾರವಾಡದಲ್ಲಿಯ ಸುಪ್ರಸಿದ್ಧ ತರುಣ ಲಾಯರು. ಪ್ರಾಪ್ತಿಯು ಚೆನ್ನಾಗಿದ್ದಿತು. ಅವನ ಮನೆ ಮಾಳಮಡ್ಡಿಯಲ್ಲಿ. ಚಿಕ್ಕದಾದರೂ ಚೊಕ್ಕಟವಾದ ಮನೆ. ಸುತ್ತಲೂ ಹೂದೋಟ; ಹೊರಗೆ ಕಂಪಾವುಂಡು. ನಾನಲ್ಲಿ ತಲ್ಪುವ ಹೊತ್ತಿಗೆ ಸಂಜೆಯು ಏಳು ಘಂಟೆಯಾಗಿರಬಹುದು. ಚಂದ್ರನನ್ನಣಕಿಸುವಂತೆ ವಿದ್ಯುದ್ದೀವಿಗೆಗಳು ಹೆಮ್ಮೆಯಿಂದ ಥಳಥಳಿಸುತ್ತಿದ್ದುವು. ಕಾಂಪಾವುಂಡನ್ನು ಪ್ರವೇಶಿಸಿ ನಾನು ನೇರವಾಗಿ ಒಳಗೆ ಹೊರಟೆ. ದ್ವಾರದ ಬಳಿಯಲ್ಲಿಯ ನಾಯಿಯ ಕಡೆಗೆ ನನ್ನ ದೃಷ್ಟಿಯಿರಲಿಲ್ಲ. ಅದು ಅಪರಿಚಿತನಾದ ನನ್ನನ್ನು ಕಂಡು, ಒಮ್ಮೆಲೆ, ಗಡುಸಾದ ಧ್ವನಿಯಲ್ಲಿ, ಮುಂದುವರಿಯದಂತೆ ವಾರ್ನಿಂಗ್ ಕೊಟ್ಟಿತು. ಬೆಚ್ಚಿಬಿದ್ದೆ. ಅದರ ಆಜ್ಞೆಯನ್ನು ಮನ್ನಿಸಲೇ ಬೇಕಲ್ಲವೇ? ನಿಂತೆ. ಅದು ಸುಮ್ಮನಾಗಲು, ಮತ್ತೆ ಮುಂದುವರಿಯಲು ಯತ್ನಿಸಿದೆ. ಪುನಃ ವಾರ್ನಿಂಗು, ಮತ್ತಿಷ್ಟು ಗಡುಸಾದ ಧ್ವನಿಯಲ್ಲಿ. ಈ ಸದ್ದನ್ನು ಕೇಳಿ ಒಳಗೆ ಯಾರೊಡನೆಯೊ ನಗುತ್ತ ಮಾತನಾಡುತ್ತ ಕುಳಿತಿದ್ದ ರಾಜುವು ತಾನೇ ಎದ್ದುಬಂದು ಬಿಟ್ಟ. ನಾಯಿಯು ತನ್ನ ಧಣಿಯನ್ನು ಕಂಡು ಬಾಲ ಅಲ್ಲಾಡಿಸುತ್ತ, ಪ್ರಸನ್ನವದನದಿಂದ ಅವನ ಮುಖ ನೋಡುತ್ತ ನಿಂತಿತು. ತನ್ನ ಕರ್ತವ್ಯಪಾಲನೆಯನ್ನು ದಕ್ಷತೆಯಿಂದ ಮಾಡುತ್ತಿರುವೆನೆಂದು ಅದು ತನ್ನ ಮೂಕಭಾಷೆಯಿಂದ ಅವನಿಗೆ [illegible] ತಿಳಿಸುತ್ತಿತ್ತೇನೋ! ರಾಜುವು ನನ್ನನ್ನು ಕಂಡು ನಗುಮೊಗದಿಂದ ಸ್ವಾಗತಿಸಿ ಒಳಗೆ ಕರೆದುಕೊಂಡು ನಡೆದ.

ನನ್ನ ಆಗಮನವನ್ನು ಕಂಡು, ರಾಜುವಿನ ಒಳಿಯಲ್ಲಿ ಮಾತನಾಡುತ್ತ ಕುಳಿತಿದ್ದ ತರುಣಿ ಒಳಗೆ ಹೊರಟುಹೋದಳು. ಅವಳ ವಯಸ್ಸು ಸುಮಾರು ೨೩–೨೪ ಇರಬಹುದು. ಶಾಂತ ಗಂಭೀರವಾದ ಮುಖಭಾವ, ಹವಣಿಯಾದ ಮೈಕಟ್ಟು, ನೋಟಕ್ಕೆ ರೂಪವತಿಯಾದರೂ ಚಂದ್ರನನ್ನಗಲಿದ ಕುಮುದದಂತೆ ಅವಳ ಮುಖಮಂಡಲವು ತೇಜೋಹೀನವಾಗಿದ್ದಿತು. ಈ ಅಪರಿಚಿತ ತರುಣಿಯ ದರ್ಶನದಿಂದ ನನ್ನ ಹೃದಯಾಂತರಾಳದಲ್ಲಿ ಅನೇಕ ವಿಚಾರತರಂಗಗಳೇಳಹತ್ತಿದುವು. ರಾಜುವಿನ ಪತ್ನಿ ಇಂದು ವಾದರೋ, ತನ್ನ ಹಿಂದೆ ಮೂವರು ಮಕ್ಕಳನ್ನು ಬಿಟ್ಟು ತೀರಿಕೊಂಡು ಎರಡು ವರ್ಷಗಳು ಸಂದುಹೋಗಿದ್ದುವು. ಅನಂತರ ಅದೆಷ್ಟೋ ಗುಣ-ರೂಪ ಸಂಪನ್ನೆಯರಾದ ಯುವತಿಯರು ಪಾಣಿ-ಗ್ರಹಣಕ್ಕಾಗಿ ಮುಂದು ಮಾಡಿದ ಕೈಗಳನ್ನು ರಾಜುವು ಧಿಕ್ಕರಿಸಿದ್ದನು. ಅವನ ಛಲದ ಮುಂದೆ ಅಪ್ಪೇಷ್ಟರುಗಳ ಆಟವೇನೂ

★

ಡಾಕ್ಟರ್ ರಂಗರಾಯನಿಗೆ ದುಡುಕಿ ನಡೆಯುವುದಕ್ಕೆ ಸಂದರ್ಭ ಸಿಕ್ಕಿದ್ದರೆ, ರತ್ನಳನ್ನು ನಿರಪರಾಧಿಯೆಂದು ಸಮಾಜ ಗಣಿಸುತ್ತಿದ್ದಿತೆ? ಎಂದೂ ಇಲ್ಲ! ಸಬಲರನ್ನು ಅಪರಾಧಿಗಳೆಂದು ಹೇಳಲು ಸಮಾಜಕ್ಕೆ ಧೈರ್ಯವಿರದು!

★

ನಾಗಲಿಲ್ಲ. ಕಡೆಗೆ ನಾನೇ ಒಂದು ದಿವಸ "ರಾಜು, ಮದುವೆಯಾಗಲು ನಿರಾಕರಿಸುತ್ತಿರುವೆಯೇಕೆ? ತೀರ ಇಳಿವಯಸ್ಸಿನಲ್ಲಿಯೂ ೪–೫ನೆಯ ಸಾರೆ ಮದುವೆಯಾಗುವವರು ನಮ್ಮಲ್ಲಿಲ್ಲವೇ? ನಿನ್ನದಿನ್ನೂ ತರುಣ ವಯಸ್ಸು; ನಿನಗದೇತರ ಸಂಕೋಚ ಬಂದಿದೆ! ನಿನ್ನ ಯೋಗಕ್ಷೇಮಕ್ಕಾದರೂ ಬೇಡವೇ? ಹೊರಗೆ ದುಡಿದು ಬೇಸತ್ತು ಬಂದ ಗಂಡುಸಿಗೆ ಮನೆಯೊಂದು ವಿರಾಮಸ್ಥಾನ! ತನ್ನಿನಿಯಳ ಮೃದು-ಮಧುರ ನುಡಿಗಳಿಂದ ಪುರುಷನ ದಣಿವೆಲ್ಲ ಹಾರಿ ಹೋಗುವುದು. ಅವನ ಹೃದಯವನ್ನಾವರಿಸಿದ್ದ ನಿರಾಶಾಂಧಕಾರವು, ತನ್ನವಳ ಮೊಗದಿಂಗಳ ದರ್ಶನದಿಂದ ಕ್ಷಣದಲ್ಲಿಯೇ ಮರೆಯಾಗುವುದು. ಸ್ತ್ರೀಯು ಪುರುಷನ ಸ್ಫೂರ್ತಿದೇವತೆ. ತನ್ನವನ ಬತ್ತಿದ ಆಶಾಲತೆಯನ್ನು ಸ್ನೇಹ-ಜಲಧಾರೆಯಿಂದ ಉತ್ತೇಜಿತಗೊಳಿಸಬಲ್ಲಳವಳು. ಇಂತಹ ಸ್ನೇಹ-ಶಾಂತಿಗಳ ಅಭಾವದಿಂದ ಮರುಭೂಮಿಯಾದ ನಿನ್ನ ಹೃದಯವನ್ನು ಪುನಃ ಸುಫಲಿತವನ್ನೇಕೆ ಮಾಡಬಾರದು? ಪಾಪ! ಮುದುಕಿ ರಂಗಮ್ಮ ಎಷ್ಟು ದಿನದವಳು?

ಚಿಕ್ಕಮಕ್ಕಳ ಪಾಲನೆ-ಪೋಷಣೆ ಮಾಡಲು ಯಾರೂ ಬೇಡವೇ?" ಎಂದು ಕೇಳಿದಾಗ, ರಾಜುವು ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟು "ರಾಮು, ಲೌಕಿಕದೃಷ್ಟಿಯಿಂದ ನೋಡಿದರೆ ನಿನ್ನ ಮಾತೇನೋ ನಿಜ; ಆದರೆ ವಿವಾಹವೆಂದರೆ ಕೇವಲ ಶರೀರಸಂಬಂಧ ಅರ್ಥಾತ್ ವಾಸನಾತೃಪ್ತಿಗಾಗಿ, ಸ್ತ್ರೀಪುರುಷರು ಮಾಡಿಕೊಂಡ ಒಂದು ಕರಾರುಮಾತ್ರವೆಂದು ನಾನು ಭಾವಿಸುವುದಿಲ್ಲ. ಅದು ಪರಸ್ಪರರ ಹೃದಯ ಸಮ್ಮಿಲನ. ನನ್ನ ಇಂದುವು ಇಂದು ದೃಶ್ಯ ಜಗತ್ತಿನಿಂದ ಮರೆಯಾಗಿದ್ದರೂ, ಅದೃಶ್ಯರೂಪದಿಂದವಳು ನನ್ನ ಬಳಿಯಲ್ಲಿಯೆ ಇದ್ದಾಳೆ. ಅವಳಾಕ್ರಮಿಸಿದ್ದ ನನ್ನ ಹೃದಯದಲ್ಲಿ ಇನ್ನಿತರರಿಗೆ ಸ್ಥಾನವೆಲ್ಲಿಯದು? ಕೇವಲ ನನ್ನ ಸುಖ-ಸೌಖ್ಯಗಾಗಿ ನಮ್ಮಿಬ್ಬರ ಪವಿತ್ರಪ್ರೇಮದ ಪ್ರತಾರಣೆ ಮಾಡಲಾರೆ. ಬಾರಿ-ಬಾರಿಗೆ ವಿವಾಹದ ಮಾತನ್ನೆತ್ತಿ ನನ್ನ ಹೃದಯದಲ್ಲಿಯ ಕಿಚ್ಚನ್ನು ಮರುಕೊಳಿಸಬೇಡ' ಎಂದು ನಿಷ್ಠುರವಾಗಿ ಹೇಳಿಬಿಟ್ಟ. ಅಂದಿನಿಂದ ನಾನವನ ಮುಂದೆ ಪುನಃ ವಿವಾಹದ ಪ್ರಸ್ತಾಪವನ್ನೇ ಎತ್ತಿಲ್ಲ; ಹೀಗಿದ್ದು ರಾಜುವಿನ ಬಳಿ ಸಲುಗೆಯಿಂದ ಮಾತನಾಡುತ್ತ ಕುಳಿತ ತರುಣಿ ಯಾರಿರಬಹುದು? ರಾಜುವು ತನ್ನ ನಿರ್ಧಾರವನ್ನು ಸಡಿಲಿಸಿ ಮತ್ತೆ ಮದುವೆಯಾಗಿರಬಹುದೇ? ಆಗಿದ್ದರೆ ಈ ಸಂಗತಿಯನ್ನು ನನಗೆ ತಿಳಿಸದಿರುತ್ತಿದ್ದನೇ? .. ಹೀಗೆ ನಾನು ವಿಚಾರ ಮಾಡುತ್ತ ಮುಂದೆ ಸಾಗಿದ್ದೆ. ಅಷ್ಟರಲ್ಲಿ ರಾಜುವಿನ ಚಿಕ್ಕ ಮಗು ಕಿಟ್ಟು, ಎಲ್ಲಿದ್ದನೋ? ನನ್ನನ್ನು ಗುರುತಿಸಿ 'ಚಿಕ್ಕಪ್ಪ ಬಂದ' ಎಂದು ಕುಣಿಯುತ್ತ ಬಂದು ನನ್ನನ್ನಪ್ಪಿಕೊಂಡು ನಿಂತ. ಪಾಪ, ತಾಯಿಯಿಲ್ಲದ ಆ ತಬ್ಬಲಿಮಗುವನ್ನು ಕಂಡು ನನಗೆ ಅತ್ಯಂತ ಕನಿಕರವೆನಿಸಿತು. ಅವನನ್ನೆತ್ತಿಕೊಂಡು ಮುದ್ದಿಸುತ್ತ, ಅವನಿಗಾಗಿ ತಂದಿದ್ದ ತಿಂಡಿಗಳನ್ನು ಕೊಟ್ಟೆ. ಅವನ್ನು ತೆಗೆದುಕೊಂಡು ಓಡುತ್ತ ಹೋಗಿ, ಅಡಿಗೆಮನೆಯಲ್ಲಿದ್ದ ರಂಗಮ್ಮನಿಗೆ ತೋರಿಸುತ್ತ, ನನ್ನ ಆಗಮನವನ್ನು ತಿಳಿಸಿದನಾತ. ಸ್ವಲ್ಪ ಹೊತ್ತು ಆಯಿತು. ಆಮಾತು ಈಮಾತು ಆಡುತ್ತ ಕುಳಿತಿದ್ದೆವು. ಅಷ್ಟರಲ್ಲಿ ಆಳುಮಗ ಊಟಕ್ಕೆ ಕರೆಯಲು ಬಂದದ್ದರಿಂದ, ನಾವಿಬ್ಬರೂ ಎದ್ದುಹೋಗಿ ಕೈಕಾಲು ತೊಳೆದುಕೊಂಡು ಎಲೆಯಮುಂದೆ ಕುಳಿತೆವು. ಈ ದಿನ ರಂಗಮ್ಮನೇ ಬಡಿಸಲಿಕ್ಕೆ ಮುಂದಾಗಿದ್ದರು.' ಅಷ್ಟೊಂದು ಮಮತೆಯವರಿಗೆ ನನ್ನ ಮೇಲೆ. ಆಷ್ಟೇಷ್ಟು ಮನೆಗೆ ಬಂದಾಗ ಅಜೀರ್ಣವಾಗುವಂತೆ ಅವರಿಗೆ ಸ್ವಲ್ಪ ಹೆಚ್ಚಿಗೇ ತಿಂಡಿ-ತಿನಿಸುಗಳನ್ನು ಹಾಕಿ, ತಮ್ಮ ಪ್ರೇಮವನ್ನು ವ್ಯಕ್ತಪಡಿಸುವುದೊಂದು ನಮ್ಮ ಹೆಣ್ಣು ಮಕ್ಕಳ ಸಂಪ್ರದಾಯ. ರಂಗಮ್ಮನಾದರೂ 'ರಾಮು, ಛಿಡೆ ಮಾಡಿಕೊಳ್ಳಬೇಡಪ್ಪಾ!' ಎಂದು ಅನ್ನುತ್ತ ನನ್ನ ಮಾತನ್ನು ಗಮನಿಸದೆ,ತಮಗೆ ತೃಪ್ತಿಯಾಗುವಂತೆಬಡಿಸಿದರು. ಅವರ ಪ್ರೇಮದ ಒತ್ತಾಯಕ್ಕಾಗಿ ನಾನು ಎಲ್ಲವನ್ನೂ ನಲಿಸಬೇಕಾಯಿತು. ಊಟ ಮುಗಿಸಿಕೊಂಡು ಬಂದು ಅಡಿಕೆಲೆಯಗಿಯುತ್ತ ನಾವಿಬ್ಬರೂ ವ್ಹರಾಂಡಾದಲ್ಲಿ ಕುಳಿತೆವು. ಅಷ್ಟರಲ್ಲಿ'ರತ್ನಾ, ಬಾ ಅಮ್ಮಾ, ಊಟಕ್ಕೆ ವೇಳೆಯಾಯಿತು,'ಎಂಬ ರಂಗಮ್ಮನ ಕೂಗು ಕೇಳಿಬಂದಿತು. ಪುನಃ ನನ್ನ ತಲೆಯಲ್ಲಿ ರತ್ನಳ ವಿಚಾರವು ಸುಳಿಯತೊಡಗಿತು. ಮನಬಿಚ್ಚಿ ಮಾತನಾಡದೆ ನಾನು ಹೀಗೆ ವಿಚಾರಮಗ್ನನಾದದ್ದನ್ನು ಕಂಡು ರಾಜುವು "ಏನು ರಾಮು, ಅದಾವ ಗಹನ ವಿಷಯವನ್ನು ಕುರಿತು ಯೋಚಿಸುತ್ತೀಯೆ? ರತ್ನಳ ವಿಷಯ ತಾನೇ?" ಎಂದು ಫಕ್ಕನೆ ನಕ್ಕುಬಿಟ್ಟ. ನಾನೂ ನಗುತ್ತ 'ಹೌದು ರಾಜು, ರತ್ನಳಾರು? ಇಷ್ಟೊಂದು ಸಲುಗೆಯಿಂದ ನಿನ್ನ ಕೂಡ ವರ್ತಿಸುವುದು ಹೇಗೆ?' ಎಂದು ಕೇಳಿದೆ. ಅದಕ್ಕೆ ರಾಜು "ಇಲ್ಲಿಯ ಅನಾಥ ಮಹಿಳಾಶ್ರಮದ ಸಂಚಾಲಕರಾದ ಶ್ರೀಮತಿ ರತ್ನಾದೇವಿಯರ ಹೆಸರನ್ನು ನೀನು ಪೇಪರಿನಲ್ಲಿ ನೋಡಿರಬಹುದಲ್ಲವೇ? ಅವರೇ ಇವರು" ಎಂದ.

"ಅವರಿಗೂ ನಿನಗೂ ಏತರ ಸಂಬಂಧ? ಅವರೇಕೆ ಇಲ್ಲಿ?" ನಾನು ಕುತೂಹಲದಿಂದ ಕೇಳಿದೆ.

ರಾಜುವು ನಗುತ್ತ "ರಾಮು, ನನ್ನ ಶೀಲ-ಸ್ವಭಾವಗಳನ್ನರಿತ ನೀನೂ, ಅಪರಿಚಿತರಂತೆ ನಮ್ಮ ಸಂಬಂಧವನ್ನರಿಯಲು ಇಷ್ಟೊಂದು ಉತ್ಸುಕನಾದುದನ್ನು ಕಂಡು ವಿಸ್ಮಯವಾಗುತ್ತದೆ. ಬೇರೆ ಏತರದು? ಸೋದರ-ಸೋದರಿಯರ ಪವಿತ್ರ ಸಂಬಂಧ! ಅವಳು ಇಲ್ಲಿ ಬಂದುದು ಏಕೆ ಮತ್ತು ಹೇಗೆ?..ಎಂಬುದು ತಿಳಿಯಬೇಕಾದರೆ ಅವಳ ಜೀವನ ವೃತ್ತವನ್ನೇ ಹೇಳಬೇಕಾಗುವುದು."ಎಂದು ಮಾತಿಗೆ ಮೊದಲು ಮಾಡಿದ:

'ಗದುಗಿನಲ್ಲಿ ನಮ್ಮ ಮನೆಯ ನೆರೆಯಲ್ಲಿಯೆ ರತ್ನಳ ತಂದೆ ಶ್ರೀನಿವಾಸರಾಯರ ಮನೆ. ಅವರಿಗೆ ಪೋಸ್ಟ್ ಖಾತೆಯಲ್ಲಿ ನೌಕರಿ. ಕೈತುಂಬ ಸಂಬಳ. ಅವರಿಗೆ ಇಬ್ಬರು ಮಕ್ಕಳು, ರತ್ನ ಹಾಗೂ ಅವಳ ಅಣ್ಣ ವಿಜಯ. ನಾವು ಮೂವರೂ ಬಾಲ್ಯದಿಂದಲೆ ಕೂಡಿ ಆಡಿ ಬೆಳೆದವರು. ಆ ಎಳೆಯ ವಯಸ್ಸಿನಲ್ಲಿ ನಾವದೆಷ್ಟೋ ಸವಿಗನಸುಗಳನ್ನು ಕಟ್ಟಿಕೊಂಡು ನಲಿಯುತ್ತಿದ್ದೆವು. ನಾವಾಗ ಸ್ವಾನಂದಸಾಮ್ರಾಜ್ಯದ ನಿರಂಕುಶ ಅಧಿಕಾರಿಗಳು. ಕಿರಿಯತನದಲ್ಲಿ ನಾವನುಭವಿಸಿದ ಆನಂದ-ಸುಖಗಳನ್ನು ಶಬ್ದಗಳಿಂದ ವರ್ಣಿಸುವುದು ಅಸಾಧ್ಯ. ಯೋಗಿಗಳು ಪರಮಾತ್ಮನ ಸ್ವರೂಪವನ್ನು ಪ್ರತಿಯೊಂದು ವಸ್ತುವಿನಲ್ಲಿಯೂ ಕಾಣುವಂತೆ, ಎಳೆಯ ಮಕ್ಕಳು ಚರಾಚರ ವಸ್ತುಗಳಲ್ಲಿಯೂ ಆನಂದ-ಸೌಂದರ್ಯಗಳನ್ನು ಕಂಡು ನಲಿದು, ಅನುಭವಿಸಿ ಸಂತೋಷಪಡಬಲ್ಲರು.

..ದಿನಗಳುರುಳಿದಂತೆ ನಮ್ಮಲ್ಲಿಯ ಅಂತರವು ಬೆಳೆಯತೊಡಗಿತು. ನಾನೂ ವಿಜಯನೂ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು, ಕಾಲೇಜುಶಿಕ್ಷಣಕ್ಕಾಗಿ ಇಲ್ಲಿಗೆ ಬಂದೆವು. ರತ್ನಳೂ ತನ್ನ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಕೆಲದಿನ ಹೈಸ್ಕೂಲಿಗೆ ಹೋಗಿ, ಮುಂದೆ ಓದನ್ನು ನಿಲ್ಲಿಸಿದ್ದಳು. ನಮಗಿಂತಲೂ ಚಿಕ್ಕವಳಾದ ರತ್ನ ಈಗ ಬೆಳೆದು ಪ್ರೌಢ ಸ್ತ್ರೀಯಂತೆ ಕಾಣುತ್ತಿದ್ದಳು. ಮೊದಲಿನ ಸಲುಗೆ ಈಗ ಅವಳಲ್ಲಿದ್ದಿಲ್ಲ. ಶ್ರೀನಿವಾಸರಾಯರು ವರಶೋಧನೆ ನಡೆಯಿಸಿದ್ದರು. ತಮ್ಮ ತಾ— ನಸೆಯ ಕಡೆಯ ಸಂಬಂಧಿಕನಾದ ಶ್ಯಾಮನಿಗೆ—

ಕೊಡಬೇಕೆಂಬುದು ಲಲಿತಮ್ಮನ ಆಗ್ರಹ. ಕಡೆಗೆ ಅವಳ ಮಾತಿಗೇ ಗೆಲುವಾಯಿತು.

..ಶ್ಯಾಮನು ಸುಸ್ವಭಾವಿ ; ಬಿ. ಏಜಿ. ವರೆಗೆ ಓದಿದವ; ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ನೌಕರಿ. ಅವನ ತಾಯಿ-ತಂದೆ ಅಣ್ಣ-ತಮ್ಮಂದಿರೂ ಒಳ್ಳೆಯವರು. ಹೀಗಿದ್ದುದರಿಂದ ರತ್ನಳ ಸಂಸಾರಶಕಟವು ಅಡೆ-ತಡೆಗಳಿಲ್ಲದೆ ಸರಾಗವಾಗಿ ಸಾಗಿದ್ದಿತು. ಇದನ್ನು ಕಂಡು ಲಲಿತಮ್ಮನಿಗೆ ತುಂಬಾ ಹಿಗ್ಗು. ಇತ್ತ ವಿಜಯನೂ ಎಮ್. ಎಸ್‌ಸಿ. ಪರೀಕ್ಷೆಯಲ್ಲಿ ಮೇಲ್ತರಗತಿಯಲ್ಲಿ ಉತ್ತೀರ್ಣನಾಗಿ ಹೈಸ್ಕೂಲಿನಲ್ಲಿ ಅಧ್ಯಾಪಕನಾಗಿದ್ದ. ಅವನ ಲಗ್ನವನ್ನು ತಮ್ಮ ಸಂಬಂಧಿಕರಲ್ಲಿಯ ಒಬ್ಬ ಗುಣ-ರೂಪಸಂಪನ್ನಳಾದ ಕನ್ಯೆಯೊಡನೆ ಮಾಡಿ, ಶ್ರೀನಿವಾಸರಾಯರು ಧಾರವಾಡಕ್ಕೆ ಬಂದು ಮಗನ ಹತ್ತಿರವೇ ವಾಸಿಸತೊಡಗಿದ್ದರು. ಈಗ ಅವರಿಗೆ ಯಾವ ತರದ ಚಿಂತೆಯೂ ಇದ್ದಿಲ್ಲ. ಸ್ವರ್ಗವು ಮೂರೇ ಬೆರಳು ಉಳಿದಂತಾಗಿತ್ತು.

..ಸಮುದ್ರದ ಭರತಿ-ಇಳಿತಗಳಂತೆ ಈ ಸಂಸಾರಸಾಗರದಲ್ಲಿಯೂ ಸುಖ-ದುಃಖಗಳು ಒಂದರ ಹಿಂದೊಂದರಂತೆ ಬರುತ್ತವೆ. ಮುಂದೆ ಎರಡು ವರ್ಷಗಳಲ್ಲಿಯೆ ಶ್ರೀನಿವಾಸರಾಯರು ಉಬ್ಬಸ-ರೋಗದಿಂದ ತೀರಿಕೊಂಡರು. ಹುಟ್ಟಲಿರುವ ಮೊಮ್ಮಗನ ಮುಖ ನೋಡಲು ಕೂಡ ಅವರಿಗೆ ಕಾಲನು ಅವಕಾಶಕೊಡಲಿಲ್ಲ. ಪತಿಯನ್ನಗಲಿರಲಾರದೆ ಮುಂದೆ ಆರು ತಿಂಗಳಲ್ಲಿಯೆ ಸಾಧ್ವಿ ಲಲಿತಮ್ಮನೂ ಅವರನ್ನು ಕೂಡಲು ವೈಕುಂಠಕ್ಕೆ ತೆರಳಿದರು. ಹೀಗೆ ವಿಧಿಲೀಲೆಯಿಂದ ಸಂಸಾರದ ಭಾರವೆಲ್ಲ ವಿಜಯನ ಮೇಲೆಯೆ ಬಿದ್ದಿತು. ರತ್ನಳಿಗಾದ ದುಃಖ ಅಷ್ಟಿಷ್ಟಲ್ಲ.

ಇದು ತನಗೊದಗಲಿರುವ ಭಾವೀ ಘೋರಸಂಕಟದ ಪೂರ್ವ-ಛಾಯೆ ಮಾತ್ರವೆಂಬುದು ಪಾಪ ಆಗ ರತ್ನಳಿಗೆ ಹೇಗೆ ತಿಳಿಯಬೇಕು? ಮೊದಲೇ ಸೂಕ್ಷ್ಮ ಪ್ರಕೃತಿಯವನಾದ ಶ್ಯಾಮನಿಗೆ, ಕಾರವಾರ ಜಿಲ್ಲೆಯ ಹವೆ ನೀರುಗಳು ಒಗ್ಗದ್ದರಿಂದ, ಮೇಲಿಂದ ಮೇಲೆ ಕಿರುಕುಳ ಜಾಡ್ಯಗಳು ತಲೆದೋರುತ್ತಿದ್ದುವು! ಅವನ್ನವನು ಗಮನಿಸದಲೆ, ತನ್ನ ಕೆಲಸವನ್ನು ತೃಪ್ತಿಕರವಾಗಿ ಮಾಡುತ್ತಾ, ಅಲ್ಪಾವಧಿಯಲ್ಲಿಯೇ ಮೇಲಧಿಕಾರಿಗಳ ಮರ್ಜಿಯನ್ನು ಸಂಪಾದಿಸಿದ್ದ. ತಮ್ಮ ದೇಹವನ್ನು ಬಲಿಗೊಟ್ಟಾದರೂ, ಅಧಿಕಾರಿಗಳ ಒಲವಿಗನುಸರಿಸಿ ನಡೆದು, 'ಬಢತಿ'ಯನ್ನಪೇಕ್ಷಿಸುವುದು ನೌಕರರ ಸ್ವಭಾವ-ಸಿದ್ಧ ಧರ್ಮವೆ ಸರಿ. ಶ್ಯಾಮನಿಗೆ ಈ ಸಾರೆ ಬಂದ ಜ್ವರ, ಕೆಮ್ಮು ಮಾತ್ರ ಮೊದಲಿನಂತೆ ಕಿರುಕುಳ ಉಪಚಾರದಿಂದ ತಗ್ಗಲಿಲ್ಲ. ಇಂತಹ ಸ್ಥಿತಿಯಲ್ಲಿಯೂ ಅವನು ತಿಂಗಳೊಪ್ಪತ್ತು ತನ್ನ ಕೆಲಸವನ್ನು ಸಾಗಿಸಿದ್ದನು. ಆದರೆ ಬರುಬರುತ್ತ ಶಕ್ತಿಯು ಕುಂದುತ್ತಾ ನಡೆದದ್ದರಿಂದ, ರತ್ನಳ ಆಗ್ರಹದ ಮೂಲಕವಾಗಿ ರಜೆ ತೆಕ್ಕೊಂಡು ಧಾರವಾಡಕ್ಕೆ ಬಂದು, ಕುಶಲ ವೈದ್ಯ-ಡಾಕ್ಟರರಿಂದ ರೋಗದ ನಿದಾನಮಾಡಿಸಿದ. ಅವರೆಲ್ಲರೂ ಒಮ್ಮುಖದಿಂದ, ಅದು ರಾಜಯಕ್ಷ್ಮವೆಂತಲೂ ಇಲ್ಲಿಯವರೆಗೆ ಬಿಟ್ಟದ್ದು ಮಹಾಪ್ರಮಾದವೆಂತಲೂ, ತುಸು ದಿವಸಗಳಲ್ಲಿಯೆ ಕೈಮೀರುವುದೆಂತಲೂ ಅಭಿಪ್ರಾಯಪಟ್ಟರು. ಇದನ್ನು ಕೇಳಿ ಆಪ್ತೇಷ್ಟರಿಗೆಲ್ಲ ದೊಡ್ಡ ಆಘಾತವೆನಿಸಿತು. ಉಪಚಾರಕ್ಕಾಗಿ ಮದನಪಲ್ಲಿಗೆ ಕರೆದೊಯ್ಯಬೇಕೆಂದು ನಿರ್ಧರಿಸಿದರು. ಮುಂದೆ ೨-೩ ದಿನಗಳಲ್ಲಿಯೆ ಶ್ಯಾಮನ ತಾಯಿ-ತಂದೆಗಳೂ ರತ್ನಳೂ ಅವನೊಡನೆ ಅಲ್ಲಿಗೆ ಹೊರಟುಹೋದರು. ಅಲ್ಲಿಯ ಆರೋಗ್ಯಕರವಾದ ಹವೆ, ನೀರು; ತಜ್ಞರ ಚಿಕಿತ್ಸೆಗಳ ಫಲವಾಗಿ, ಶ್ಯಾಮನ ಪ್ರಕೃತಿಯು ಸುಧಾರಿಸಿದಂತೆನಿಸಿತು. ಇದನ್ನು ಕಂಡು ಎಲ್ಲರಿಗೂ ಹಿಗ್ಗು. ದುಃಖಾಂಧಕಾರದಲ್ಲಿ ಕಂಗೆಟ್ಟಿದ್ದ ರತ್ನಳಿಗೆ ಆಶಾಕಿರಣವೊಂದು ಕಾಣತೊಡಗಿತು. ಆದರೆ ಈ ಸ್ಥಿತಿ ಕಡೆತನಕ ಉಳಿಯಲಿಲ್ಲ. ಮುಂದೆ ಕೆಲದಿನಗಳಲ್ಲಿಯೆ ರೋಗವು ಮೊದಲಿಗಿಂತ ಹೆಚ್ಚು ವೇಗದಿಂದ ಮುಖಮೆತ್ತಿ ನಿಂತಿತು. ಇದನ್ನು ಹದಕ್ಕೆ ತರಲು ಡಾಕ್ಟರರು ಮಾಡಿದ ಹಲವು ಬಗೆಯ ಉಪಾಯಗಳೂ ಸಫಲವಾಗಲಿಲ್ಲ. ಅವರಿಗೆ ನಿರಾಶೆಯೆನಿಸಿದರೂ ಇದನ್ನು ತೋರಗೊಡದೆ ಉಪಚಾರದ ಕ್ರಮವನ್ನು ಮುಂದುವರಿಸಿದ್ದರು. ರತ್ನಳಿಗೆ ಈಗೀಗ ತನ್ನ ಭೀಷಣ ಭವಿತವ್ಯದ ದೃಶ್ಯಗಳು ಮಸಕು-ಮಸಕಾಗಿ ತೋರ-ಹತ್ತಿದ್ದುವು. ಆಗಿನ ಅವಳ ಮನಃಸ್ಥಿತಿಯನ್ನು ಶಬ್ದಗಳಿಂದ ವರ್ಣಿಸುವುದು ಅಸಾಧ್ಯ. ಅವಳಿಗಾಗುವ ಯಾತನೆಯು, ಶ್ಯಾಮನು ಪಡುವುದಕ್ಕಿಂತ ಅದೆಷ್ಟೋಪಾಲು ಮಿಗಿಲಾಗಿದ್ದಿತು. ತನ್ನ ಪತಿಗೆ ಗುಣವಾಗಲೆಂದು ರತ್ನಳು ಅದೆಷ್ಟೋ ದೇವರಿಗೆ ಹರಕೆ ಹೊತ್ತಳು; ಮುಡಿಪು ಕಟ್ಟಿಟ್ಟಳು. ಆದರೆ ಅವಳ ಈ ಶುದ್ಧ-ಹೃದಯದ ಪ್ರಾರ್ಥನೆಯು, ಭಕ್ತಿಯ ಬೇಡಿಕೆಯು, ಕರುಳಿನ ಕೂಗು, ಆ ದೇವತೆಗಳ ಕಲ್ಲುಹೃದಯಗಳನ್ನು ಕರಗಿಸಲಿಲ್ಲ. ನಿರ್ಘೃಣನಾದ ವಿಧಿಯು, ಶ್ಯಾಮನನ್ನು ಬಲಿ ತೆಕ್ಕೊಳ್ಳದೆ ತಾನೆತ್ತಿದ ಕೊಡಲಿಯನ್ನು ಕೆಳಕ್ಕಿಳಿಸಲಿಲ್ಲ. ಮುಪ್ಪಿನ ತಾಯಿ-ತಂದೆಗಳನ್ನೂ ಪ್ರಾಯದ ಪತ್ನಿಯನ್ನೂ ದುಃಖಸಾಗರದಲ್ಲಿ ನೂಕಿ, ಶ್ಯಾಮ ಹೊರಟು ಹೋದ. ಹದಿನೇಳು ವರ್ಷದ ತುಂಬುಜವ್ವನದಲ್ಲಿಯೆ ರತ್ನ ವಿಧವೆಯಾದಳು. ಭರದಿಂದ ಬೆಳೆದು ನನೆ-ಕೊನರುಗಳಿಂದ ರಾರಾಜಿಸುತ್ತಿದ್ದ ಲತೆ, ಇನ್ನೂ ಪುಷ್ಪ-ಫಲಗಳಿಗೆ ಜನ್ಮವೀಯುವ ಮೊದಲೇ — ತಾನಾಶ್ರಯಿಸಿದ್ದ • ವೃಕ್ಷದ ನೆರವು ತಪ್ಪಿ— ಧರೆಗೊರಗಿತು.

ವಿಜಯನಿಗೆ ಹುಣ್ಣಿನ ಮೇಲೆ ಬರೆಯೆಳೆದಂತಾಯಿತು. ವಿಧವೆಯಾದ ತಂಗಿಯ ಸಾಂತ್ವನ-ಸಂರಕ್ಷಣೆ ಮಾಡುವ ಭಾರವನ್ನಾತ ವಹಿಸಬೇಕಾಯಿತು. ಶ್ಯಾಮನ ಚಿಂತೆಯಿಂದ ನಿದ್ದೆ-ನೀರಡಿಕೆಗಳ ಪರಿವೆಯಿಲ್ಲದೆ ಬೆಂದು-ಬೆಂಡಾದ ರತ್ನಳನ್ನು ತನ್ನ ಬಳಿಯಲ್ಲಿಯೆ ಇಟ್ಟುಕೊಂಡು, ಅವಳ ದುಃಖದ ಭಾರವನ್ನು ಕಡಿಮೆ ಮಾಡಲು ತನ್ನ ಶಕ್ತಿಮೀರಿ ಯತ್ನಿಸುತ್ತಿದ್ದ ವಿಜಯ. ದಿನಗಳೆದಂತೆ ಹೊಸ ಪರಿಸ್ಥಿತಿ ಮೈಗೂಡಿಸಿಕೊಂಡಳು ರತ್ನಾ. ಅವಳೀಗ ಮೊದಲಿನಂತೆ ದುಃಖದಲ್ಲಿಯೆ ಹೊತ್ತುಗಳೆಯುತ್ತಿರಲಿಲ್ಲ; ವಿಜಯನ ಮಗುವನ್ನು ಎತ್ತಿ ಆಡಿಸುವುದೊಂದು ಅವಳ ನಿತ್ಯಕರ್ಮ. ತನ್ನ ಅತೃಪ್ತ

ಆಶೆಯನ್ನವಳು ಈ ಮೂಲಕ ಪೂರ್ತಿಪಡಿಸಿಕೊಳ್ಳುತ್ತಿದ್ದಳೇನೊ! ಇದನ್ನು ಕಂಡು ವಿಜಯನಿಗೂ ಸಮಾಧಾನ.

ವಿಜಯನು ಸುಧಾರಕ. ಸನಾತನ ಪದ್ಧತಿಗಳನ್ನವ ಕಟುವಾಗಿ ಟೀಕಿಸುತ್ತಿದ್ದ. ಅದರಲ್ಲಿಯೂ ವಿಧವೆಯರ ಉನ್ನತಿಗಾಗಿ ಹಗಲಿರುಳೂ ತಳಮಳಿಸುತ್ತಿದ್ದ. ಈಗವನು ತನ್ನ ಮಾತಿಗೆ ಕೃತಿಯ ಸ್ವರೂಪವನ್ನು ಕೊಡುವ ಸಮಯ ಬಂದೊದಗಿತ್ತು. ರತ್ನಳು ಪುನರ್ವಿವಾಹಕ್ಕೆ ಒಪ್ಪಿಗೆ ಕೊಡುವಳೋ ಇಲ್ಲವೋ ಸಂದೇಹ. ಸಮಾಜದ ರೂಢಿ-ಬಂಧನಗಳ ಭೀತಿಯಿಂದ ಅವಳು ತನ್ನ ಹೃದಯವನ್ನು ಸುಟ್ಟು ಸೂರೆಗೊಳ್ಳುವುದನ್ನು ನೋಡುವುದು ವಿಜಯನಿಂದಾಗದು. ಅದಕ್ಕೆಂತಲೇ ಅವನು ಪುನರ್ವಿವಾಹ ವಿಚಾರಪೋಷಕವಾದ ಸಾಹಿತ್ಯಗಳನ್ನವಳಿಗೆ ಒದಗಿಸಿಕೊಟ್ಟಿದ್ದ. ಅಲ್ಲದೆ ಮಹಿಳಾಸೇವಾಸಮಾಜದಲ್ಲಾಗುತ್ತಿದ್ದ ವ್ಯಾಖ್ಯಾನಗಳಿಗೆ ಅವಳನ್ನು ಮೇಲಿಂದ ಮೇಲೆ ಕರೆದೊಯ್ಯುತ್ತಲಿದ್ದ. ರತ್ನಳಿಗೆ ಅಣ್ಣನ ಇಂಗಿತವು ಹೊಳೆಯದಿರಲಿಲ್ಲ.

ಒಂದು ದಿವಸ ರಾತ್ರಿ ವಿಜಯ-ರತ್ನರು ಮಾತನಾಡುತ್ತ ಕುಳಿತಿದ್ದರು. ಅವರಾ ಮಾತಿನ ಓಘವು ಆ ದಿವಸ ಕೇಳಿಬಂದ '**ವಿಧವಾ ವಿವಾಹ**' ಎಂಬ ಉಪನ್ಯಾಸದ ಕಡೆಗೆ ಹೊರಳಿತು. ರತ್ನಳ ಭಾವವನ್ನರಿಯಲು ಇದು ತಕ್ಕ ಸಮಯವೆಂದು ಯೋಚಿಸಿ "ನೋಡು ರತ್ನಾ, ನಮ್ಮಲ್ಲಿಯ ಬಾಲವಿಧವೆಯರು ಧರ್ಮದ ಹೆಸರಿನಲ್ಲಿ ಅದೆಷ್ಟು ಕಷ್ಟಸಹಿಸಬೇಕಾಗುವುದು? ವಿಶ್ವಾಮಿತ್ರನಂತಹ ತಪಸ್ವಿಗಳು ಕೂಡ ತಮ್ಮ ಭಾವನೆಗಳನ್ನು ಸಂಯಮಿಸಲು ಅಶಕ್ತರಾಗಿರಾಗ, ಪಾಪ ಈ ಅಬಲೆಯರೆಂತು ಸಮರ್ಥರಾಗಬಹುದು? ಕೇವಲ ಬಾಹ್ಯವೇಷದ ಬದಲಾವಣೆ ಮಾಡಿದರೇನು? ಅಂತರಂಗ ಶುದ್ಧಿಯಾಗಬಲ್ಲುದೇ? ಇಂತಹ ಧರ್ಮಾಡಂಬರದ ಫಲನಿಷ್ಪತ್ತಿಯಾದರೂ ಏನು? ಗುಪ್ತವ್ಯಭಿಚಾರ, ಶಿಶುಹತ್ಯೆಗಳಲ್ಲವೇ? ಇಂತಹ ಕಾರ್ಯಗಳಿಗೆ ಅಪ್ರತ್ಯಕ್ಷವಾಗಿ ಉತ್ತೇಜನ ನೀಡುವ ಈ ಧರ್ಮವು ಸನಾತನವಲ್ಲ; ಸೈತಾನರದು!" ಕಳವಳ ಮಿಶ್ರಿತ ಆವೇಶದಿಂದ ನುಡಿದನು ವಿಜಯ.

"ಅಣ್ಣಾ, ಹೀಗೆ ಭಾವನಾವಶನಾಗಿ ಆರ್ಯಧರ್ಮವನ್ನು ಆಕ್ಷೇಪಿಸಬೇಡ. ಮಾನವತೆಯನ್ನು ವಿಕಾಸಗೊಳಿಸಿ, ದೇವತ್ವದ ಮಟ್ಟಕ್ಕೆ ಮುಟ್ಟಿಸಲು ಹುಟ್ಟಿದೆ ಈ ಧರ್ಮ. ತತ್ತ್ವಗಳ ತಿರುಳನ್ನರಿತು ಆಚರಿಸಿದಾಗಲೇ ಅದರ ಉದ್ದೇಶದ ಸಫಲತೆ ಕಂಡುಬರುವುದು ಸಹಜ. ಹೆರವರ ಬಲುಮೆ, ಅಂಧಾನುಕರಣ ಮೂಲವಾದ ಆಚರಣೆಗಳು ನೀನೆನ್ನುವಂತೆ ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸುವುವೆಂಬುದು ನಿಜ; ಆದರೆ ಇದು ಆಚರಣೆಯಲ್ಲಿಯ ದೋಷವೇ ವಿನಾ ಧರ್ಮದ್ದಲ್ಲ! ಅಣ್ಣಾ, ಎಷ್ಟು ದಿನ ಭೋಗಿಸಿದರೇನು? ಇಂದ್ರಿಯಜನ್ಯ ಸುಖಗಳಿಂದ ತೃಪ್ತಿಯೆನ್ನುವುದಿದೆಯೆ? ಮನಶ್ಶಾಂತಿಯು ದೊರಕಬಲ್ಲದೇ? ಇಲ್ಲ! ನಿಜವಾದ ಸುಖಶಾಂತಿಗಳು ದೊರಕುವುದು ಇಂದ್ರಿಯದಮನ ಮನೋನಿಗ್ರಹಗಳಿಂದ ಮಾತ್ರ. ವಿಧವೆಯರು ಸ್ವೇಚ್ಛೆಯಿಂದ ಈ ಬಗೆಯ ತಪಸ್ವೀಜೀವನ ಕೈಕೊಂಡು, ಸಮಾಜಕ್ಕೆ ಅದೆಷ್ಟೋ ಬಗೆಯಿಂದ ಸೇವೆ ಸಲ್ಲಿಸುತ್ತ ತಮ್ಮ ಆತ್ಮೋನ್ನತಿ ಮಾಡಿಕೊಳ್ಳಬಹುದು. ಇಂತಹ ನಿಷ್ಕಾಮಕರ್ಮಿಗಳು ಪುರುಷರಿಗೂ ಆದರ್ಶಪ್ರಾಯರು. ಇಂದಿನ ಸನಾತನಿಗಳೂ, ಸುಧಾರಕರೂ ಎನ್ನಿಸಿಕೊಳ್ಳುವ ಪುರುಷರು, ತಮತಮಗೆ ಸರಿಕಂಡ ಮತಗಳನ್ನು ಸ್ತ್ರೀಯರ ಮೇಲೆ ಹೇರಲಿಚ್ಛಿಸುತ್ತಿರುವುದು ಶೋಚನೀಯವು. ಸ್ತ್ರೀಯರಿಗೆ ತಮ್ಮ ಮಾರ್ಗಗನ್ನಾರಿಸಿಕೊಳ್ಳಲು ಸ್ವತಂತ್ರತೆ ಕೊಟ್ಟು, ಅವರ ಮಾರ್ಗ ಮಧ್ಯದಲ್ಲುದ್ಭವಿಸಿದ ವಿಘ್ನಗಳನ್ನು ಪರಿಹರಿಸಲು ತಕ್ಕ ಸಹಾಯ-ಸಹಕಾರಗಳನ್ನೀಯುವುದು ಮಾತ್ರ ಪುರುಷರ ಕರ್ತವ್ಯ! ಇಂತಹ ಉದಾರ ವರ್ತನೆಯಿಂದಲೇ ಸ್ತ್ರೀ ಸಮಾಜದ ಉದ್ಧಾರ!" ಎಂದು ಶಾಂತಚಿತ್ತದಿಂದ ನುಡಿದಳು ರತ್ನ, ಆ ದಿನ.

....ತಂಗಿಯ ಈ ಉದಾತ್ತ ವಿಚಾರಸರಣಿಯನ್ನು ಕೇಳಿ, ಉದ್ವಿಗ್ನವಾದ ವಿಜಯನ ಮನಸ್ಸು ಸ್ವಲ್ಪ ಶಾಂತವಾಯಿತು. ಅವಳಿಚ್ಛೆಯಂತೆ ವನಿತಾವಿದ್ಯಾಲಯದಲ್ಲಿ ಹೆಚ್ಚಿನ ಶಿಕ್ಷಣ ಹೊಂದುವ ವ್ಯವಸ್ಥೆ ಮಾಡಿದ. ತನ್ನ ಶಿಕ್ಷಣಕ್ರಮ ಮುಗಿದ ನಂತರ ಯಾವುದೊಂದು ಬಗೆಯಿಂದ ಸಮಾಜಸೇವೆ ಮಾಡಬೇಕೆಂಬುದು ರತ್ನಳ ಉತ್ಕಟೇಚ್ಛೆ. ವಿಜಯನ ವಿಚಾರಗಳೂ ಇದಕ್ಕೆ ಪೋಷಕವಾಗಿದ್ದುವು. ಹೀಗೆಯೆ ನಾಲ್ಕು ವರ್ಷಗಳು ಸಂದಿದುವು.

ಈ ವರೆಗೆ ರತ್ನಳು ಪಟ್ಟ ಕಷ್ಟದಿಂದಲೇ ವಿಧಿಯು ತೃಪ್ತನಾಗಿರಲಿಲ್ಲವೇನೋ! ಪಿತಾ-ಪತಿಹೀನೆಯಾದ ಅವಳು ಭ್ರಾತೃಸುಖವನ್ನು ಕೂಡ ಹೊಂದುವಷ್ಟು ಭಾಗ್ಯಶಾಲಿನಿಯಾಗಿರಲಿಲ್ಲ. ಎಂಟು ದಿನಗಳ ವಿಷಮಶೀತಜ್ವರದನಂತರ ವಿಜಯನು ಕಾಲವಶನಾದ. ರತ್ನಳ ಇದ್ದದ್ದೊಂದು ಆಶಾಕಿರಣವೂ ಅಸ್ತವಾಯಿತು. ತನ್ನವರೆಂಬವರು ಯಾರೂ ಇಲ್ಲದೆ, ಆವಳೀಗ ಜಗತ್ತಿನಲ್ಲಿ ಏಕಾಕಿನಿ! ಸಾಯುವ ಮುನ್ನಾದಿನವೇ ವಿಜಯನು ನನ್ನನ್ನು ಹತ್ತಿರ ಕರೆದು ರತ್ನಳ ಹಸ್ತವನ್ನು ನನ್ನ ಕೈಯಲ್ಲಿ ಕೊಡುತ್ತ "ರಾಜು, ಇವಳು ನಿನ್ನ ಸೋದರಿ. ನಮ್ಮ ಸಮಾಜದ ಅದೂರದೃಷ್ಟಿಯ ಪರಿಣಾಮವಾಗಿ ನಿರ್ಮಿತವಾದ ದೂಷಿತ ವಾತಾವರಣದಲ್ಲಿ, ರತ್ನಳ ಭವಿತವ್ಯವು ಯಾವರೀತಿ ರೂಪುಗೊಳ್ಳುವುದೋ ಎಂಬ ವಿಚಾರದ ಶಲ್ಯವು ಹಗಲಿರುಳೂ ನನ್ನನ್ನು ಚುಚ್ಚುತ್ತಿದೆ. ನನ್ನ ಈ ಹೃದಯದ ಘಾಯವು, ನಿನ್ನ ಆಶ್ವಾಸನದಿಂದ ಮಾತ್ರ ಕಡಿಮೆಯಾಗಬಲ್ಲುದು. ಯಾವ ಎಡರುಗಳನ್ನೂ ಲೆಕ್ಕಿಸದೆ ನಿನ್ನ ಈ ಸಹೋದರಿಯ ರಕ್ಷಣೆಯ ಭಾರವನ್ನು ವಹಿಸುವೆನೆಂದು ವಚನ ಕೊಡುವೆಯಾ?" ಎಂದು, ಅದೊಂದು ಬಗೆಯ ದೀನದೃಷ್ಟಿಯಿಂದ ನೋಡುತ್ತಾ, ಕೇಳಿದನು ವಿಜಯ. ರಾಮು, ಅಗಿನ ದೃಶ್ಯವು ತೀರ ಹೃದಯಭೇದಕವಾಗಿದ್ದಿತು. ನನ್ನ ಬಾಯಿಂದ ಮಾತುಗಳೇ ಹೊರಡಲಿಲ್ಲ. ಮೂಕಾಶ್ರುಗಳೇ ವಿಜಯನಿಗೆ ಉತ್ತರಕೊಡುತ್ತಿದ್ದುವು. ರತ್ನಳ ನಯನಗಳಿಂದಂತೂ ಗಂಗಾ-ಯಮುನೆಗಳ ಪ್ರವಾಹಗಳು ಅವಿರತವಾಗಿ ಹರಿಯುತ್ತಿದ್ದುವು. ದುಃಖವನ್ನು ನಾವರಿಸಿಕೊಳ್ಳು... 'ನಿನ್ನ ಆಜ್ಞೆಯು ನನಗೆ ಶಿರಸಾವಹಾಸ್ಯ ವಿಜಯ!' ಎಂ...

ಕೊಟ್ಟೆ. ಅಂತಹ ಜ್ವರದ ತಾಪದಲ್ಲಿಯೂ ಅವನ ಮುಖದ ಮೇಲೆ ಒಂದು ಬಗೆಯ ಸಮಾಧಾನದ ಕಳೆ ಕಾಣಿಸಿಕೊಂಡಿತು, ನನ್ನ ಮಾತನ್ನು ಕೇಳಿ.

ಮುಂದೆ ಕೆಲದಿನಗಳಲ್ಲಿಯೆ ರತ್ನಳ ಮಾವಂದಿರು ಅವಳನ್ನು ಕರೆಯಲು ಬಂದರು. ಕಳಿಸುವ ಇಚ್ಛೆಯು ನನ್ನದಿಲ್ಲದಿದ್ದರೂ ಅವರ ಆಗ್ರಹವನ್ನೂ ರತ್ನಳ ಇಚ್ಛೆಯನ್ನೂ ಮೀರಲಾರದೆ ಸುಮ್ಮನಿರಬೇಕಾಯಿತು. ಮಾವನ ಮನೆಯಲ್ಲಿಯೂ ರತ್ನಳಿಗೆಲ್ಲ ಎಲ್ಲ ಬಗೆಯ ಸೌಕರ್ಯಗಳೂ ದೊರೆತಿದ್ದುವು. ಈ ರೀತಿ ಕೆಲವು ದಿನಗಳು ಸಾಗಿದುವು.

ಒಂದು ದಿವಸ ಸಾಯಂಕಾಲ, ಹಿತ್ತಲಿನಲ್ಲಿ ಅದಾವುದೋ ಪುಸ್ತಕದ ವಾಚನದಲ್ಲಿ ಮಗ್ನಳಾಗಿ ಕುಳಿತಿದ್ದಳು ರತ್ನ. ಸೂರ್ಯನ ಹೊಂಬಣ್ಣದ ಕಿರಣಗಳು ಅವಳ ಮುಖದ ಸೌಂದರ್ಯವನ್ನು ಇಮ್ಮಡಿಗೊಳಿಸಿದ್ದುವು. ಇದೇ ಸಮಯಕ್ಕೆ. ಪಕ್ಕದ ಮನೆಯಲ್ಲಿ ವಾಸಿಸುತ್ತಿದ್ದ ಡಾಕ್ಟರ್ ರಂಗರಾಯನು, ಹೂಗಿಡಗಳಿಗೆ ನೀರೆರೆಯಲು ಹಿತ್ತಲಲ್ಲಿ ಬಂದಿದ್ದ. ಆಕಸ್ಮಿಕವಾಗಿ ರತ್ನಳ ಮೊಗದಾವರೆಯು ಅವನ ನಯನಾಳಿಗಳನ್ನು ಸೆರೆಹಿಡಿಯಿತು. ಅವನ ಮನಸ್ಸು ರತ್ನಳ ಸೌಂದರ್ಯಸಾಗರದಲ್ಲಿ ಓಲಾಡಹತ್ತಿತು. ರಂಗರಾಯ ಸ್ತಂಭೀಭೂತನಾಗಿ ನಿಂತುಬಿಟ್ಟ. ಕೆಲಹೊತ್ತಿನ ಮೇಲೆ ಎಚ್ಚತ್ತು ತನ್ನ ಮನಸ್ಸನ್ನು ಆವರಿಸಿಕೊಂಡು, ಮಂದಗತಿಯಿಂದ ಹೊರಟು ಹೋದ. ಅಂದಿನಿಂದವನಿಗೆ ರತ್ನಳದೇ ನಿಧಿಧ್ಯಾಸ. ಸಮಯ ದೊರೆತಾಗಲೆಲ್ಲ ರತ್ನಳ ದರ್ಶನಲಾಭವನ್ನು ತೆಗೆದುಕೊಳ್ಳದೆ ಬಿಡುತ್ತಿರಲಿಲ್ಲ.

ಡಾಕ್ಟರ್ ರಂಗರಾಯನು, ಮಧ್ಯಮ ಜನವಸತಿಯ ಆ ಊರಲ್ಲಿ ಒಬ್ಬ ಪ್ರಮುಖ ವ್ಯಕ್ತಿ. ವಿದ್ಯಾವಂತ, ಸಮಾಜ ಸುಧಾರಕ. ಅವನ ಮಾತೇ ವೇದವಾಕ್ಯ ಆ ಊರಲ್ಲಿ. ಅಷ್ಟೊಂದು ನಂಬಿಗೆಯವನ ಮೇಲೆ. ಪ್ರಥಮ ಪತ್ನಿಯು ತೀರಿಕೊಂಡನಂತರ ಅವನು ಇದುವರೆಗೆ ಲಗ್ನವಾಗಿರಲಿಲ್ಲ. ಯಾರಾದರೂ ಕೇಳಿದರೆ "ಸುಧಾರಕನಾದ ನಾನು ವಿಧವಾವಿವಾಹವಾಗಿ, ಜನತೆಗೆ ಉದಾಹರಣೆ ಹಾಕಿ ಕೊಡಬೇಕಾಗಿದೆ" ಎಂದೂ ಎನ್ನುತ್ತಿದ್ದ. ಅವನ ದವಾಖಾನೆಯಲ್ಲಿದ್ದ ನರ್ಸಳಿಗೂ ಅವನಿಗೂ ಏನೋ ಸಂಬಂಧವಿದೆಯಂತಲೂ, ಅದಕ್ಕೆಂತಲೇ ಅವರು ಪಂಢರಪುರದಲ್ಲಿ ೪-೬ ತಿಂಗಳು ಇದ್ದು ಬಂದರೆಂದೂ ಜನರೇನೋ ಆಡಿಕೊಳ್ಳುತ್ತಿದ್ದರು. ಸ್ತ್ರೀಯರಿಗೆ ಇತ್ತೀಚೆಗೆ ಅವನ ಬಗ್ಗೆ ಸಂಕೋಚವೆನಿಸುತ್ತಿತ್ತು; ಪುರುಷರಿಗೆ ಇನ್ನೂ ಅವನಲ್ಲಿ ಆದರ ವಿಶ್ವಾಸ.

ರತ್ನಳಿಗೆ ರಂಗರಾಯನ ವರ್ತನದ ಬಗ್ಗೆ ಸಂದೇಹವೆನಿಸತೊಡಗಿತ್ತು; ಅಂತೆಯೇ ತಾನು ಕಾಹಿಲೆಯಿಂದ ಬಳಲುತ್ತಿದ್ದರೂ, ರಂಗರಾಯನ ಔಷಧ ತಕ್ಕೊಳ್ಳಲು ನಿರಾಕರಿಸುತ್ತಿದ್ದಳು. ಪಾಪ! ಮನೆಯವರೇನು ಬಲ್ಲರು ಅವಳ ಅಂತರಂಗದಲ್ಲಿದ್ದುದನ್ನು? ಒತ್ತಾಯದಿಂದ ಔಷಧ ಕೊಡಿಸತೊಡಗಿದರು. ಒಂದು ದಿವಸ ಔಷಧದ ಚೀಟನ್ನು ಬಿಚ್ಚಿ ರತ್ನ ಇನ್ನು ತೆಗೆದುಕೊಳ್ಳುವವಳು; ಬಾರಿ[illegible]ಂದು ಚೀಟಿ. ಅವಳ ಅಂತರಂಗದಲ್ಲಿಯ ಭೀತಿಯೇ ಮೈವೆತ್ತಂತೆ ಆ ಚೀಟಿ ಕಾಣಿಸಿಕೊಂಡಿತು. ರತ್ನಾ ಕಾತರಭಾವದಿಂದ ಅದನ್ನು ಬಿಚ್ಚಿ ಓದತೊಡಗಿದಳು. ಅದು ಈ ಬಗೆಯಾಗಿದ್ದಿತು:

" ರತ್ನಾ

ನಿನ್ನ ಸುರಮ್ಯ ಯವ್ವನವನ್ನು ವ್ಯರ್ಥ ಹಾಳುಗೆಡಹುತ್ತಿರುವುದೇಕೆ? ಪರಾಗಸೇವನೆಗಾಗಿ ಬಂದ ಭ್ರಮರಗಳಿಗೆ ಎಡೆಗೊಡುವುದು ರಮಣಿಯ ನೈಜಧರ್ಮವಲ್ಲವೆ? ನೀನಾದರೂ, ನಿನ್ನ ಪ್ರೇಮಪರಾಗಕ್ಕಾಗಿ ಹಂಬಲಿಸುತ್ತಿರುವ ತುಂಬಿಗೆ ನಿನ್ನ ಹೃದಯದಲ್ಲಿ ಎಡೆಗೊಡದಿರಲಾರೆಯೆಂದು ಆಶಿಸುವೆ. ನಿನ್ನಂತಹ ಸುಂದರ ಕಮಲಕುಸುಮವು, ಧರ್ಮ-ನೀತಿಗಳೆಂಬ ಬಿಸಿಲಿನಿಂದ ಬಣಗಿಹೋಗುವದನ್ನು ನೋಡುತ್ತ ನಿಷ್ಕ್ರಿಯನಾಗಿ ನಿಲ್ಲುವುದು ನನ್ನಂತಹ ರಸಿಕನಿಗೆ ಸಾಧ್ಯವಿಲ್ಲ. ಅಂತೆಯೆ ಸಮಾಜದ ರೀತಿ-ಭೀತಿಗಳನ್ನು ಲೆಕ್ಕಿಸದೆ, ನಾನೀಸಾಹಸಕ್ಕೆ ಕೈ ಹಾಕಿದ್ದೇನೆ. ಇನ್ನೆಲ್ಲಿಗಾದರೂ ಹೋಗಿ, ನಾವಿಬ್ಬರೂ ರಾಜ-ರಾಣಿಯರಂತೆ ನಮ್ಮ ಸುಖ ಸಂಸಾರವನ್ನು ಸಾಗಿಸೋಣ. ನೀನಿದಕ್ಕೆ ಒಪ್ಪದಿದ್ದರೂ ಉಪಾಯಾಂತರಗಳಿಂದ ಕಾರ್ಯಸಾಧಿಸಿಕೊಳ್ಳದಿರಲಾರೆ! ಸುಶಿಕ್ಷಿತೆಯಾದ ನೀನು, ವ್ಯರ್ಥ ಛಲತೊಡಲಾರೆಯೆಂದು ನಂಬಿರುವ

ನಿನ್ನ ಪ್ರೇಮಾಂಕಿತ "

ಕೆಳಗೆ ಸಹಿಇರಲಿಲ್ಲ.

ರಾಮಾ, ಈ ಪತ್ರ-ವಾಚನದಿಂದ ರತ್ನಳೆಷ್ಟು ವ್ಯಥೆಪಟ್ಟಿರಬಹುದು? ವರ್ಣಿಸುವುದಕ್ಕಿಂತ ಊಹಿಸುವುದೇ ಲೇಸು. ಕೋಪದಿಂದವಳ ಸರ್ವಾಂಗವು ಥರಥರ ಕಂಪಿಸತೊಡಗಿತು. ಆದರೆ ಮಾಡುವುದೇನು? ಅಬಲೆ, ರಂಗರಾಯನಂತಹ ಶಿಷ್ಟವ್ಯಕ್ತಿಯ ಆಚರಣೆಯ ಬಗ್ಗೆ ಆಕ್ಷೇಪಿಸಿದಲ್ಲಿ, ಪಕ್ಷಪಾತಿ ಪುರುಷ ಸಮಾಜ ಅದನ್ನು ನಂಬಬಹುದೆ? ತಾನು ತರುಣ ವಿಧವೆ. ಜನತೆಯ ದೃಷ್ಟಿಯಲ್ಲಿ ಸುಧಾರಕಳು. ತನಗೇ ದೋಷಬರುವ ಸಂಭವ ಹೆಚ್ಚು.. ಈ ಬಗೆಯ ವಿಚಾರಗಳಿಂದ ಅವಳು ತನ್ನ ಸಿಟ್ಟು ನುಂಗಲು ಯತ್ನಿಸಿದಳು. ಆದರೆ ಅವಳ ಪುಟ್ಟ ಹೃದಯದಲ್ಲಿ ಅವಕ್ಕೆ ಸ್ಥಾನ ಸಾಲದೆ, ಕಂಬನಿಗಳ ರೂಪದಲ್ಲಿ ಹೊರಬೀಳತೊಡಗಿತು. ಮನದಣಿ ಅತ್ತಳು. ತಾನು ಕಂಡು ಕೇಳಿದ ಅನೇಕ ಅನಾಥ ವಿಧವೆಯರ ದುರಂತಚಿತ್ರಗಳು ರತ್ನಳ ಕಣ್ಮುಂದೆ ಸುಳಿಯತೊಡಗಿ, ಅವಳನ್ನು ವಿಹ್ವಲಗೊಳಿಸಿದುವು. ಅಂತಹದೊಂದು ಚಿತ್ರದಲ್ಲಿ ಪಾತ್ರ ವಹಿಸುವ ಪ್ರಸಂಗವೀಗ ರತ್ನಳಿಗೆ ಬಂದಿತ್ತು.

.. ತನ್ನ ಭವಿತವ್ಯದ ಬಗ್ಗೆ ರತ್ನ ಯೋಚಿಸತೊಡಗಿದಳು: " ಇನ್ನೂ ಈ ನೀಚ ರಂಗರಾಯ ಯಾವ ಬಲೆಯನ್ನೊಡ್ಡುವನೊ! ಅಂತಹ ಪ್ರಸಂಗವೇ ಬಂದಲ್ಲಿ, ನನ್ನ ಬೆನ್ನು ಕಟ್ಟಿ ನನ್ನ ನಿರಪರಾಧಿತ್ವವನ್ನು ಸಿದ್ಧಪಡಿಸುವವರಾರು? ನನಗೆ ಆಶ್ರಯವೆಲ್ಲಿದೆ? ಧರ್ಮಬಂಧುವಾದ ರಾಜಣ್ಣನಾದರೂ ನನ್ನ ಮಾತನ್ನು ನಂಬುವನೆಂಬ ಭರವಸೆಯಾದರೂ ಏನು? ಈ ಹೇಡಿ ಸಮಾಜವಾದರೊ ತಪ್ಪಿತಸ್ಥರನ್ನು ಶಿಕ್ಷಿಸುವ ಸಾಮರ್ಥ್ಯವಿಲ್ಲದೆ, ನಿರಪರಾಧಿಗಳಾದ ನಮ್ಮಂತಹ ಅಬಲೆಯರ ಕೊರಳುಕೊಯ್ದು ತನ್ನ ಧರ್ಮವನ್ನು ಕಾಯ್ದುಕೊಳ್ಳುತ್ತ ಬಂದಿದೆ. ಇದೇ ಹಾಡು ನನಗೂ ಇಂತಹ

ಹೀನಬಾಳನ್ನು ಸಾಗಿಸುವುದಕ್ಕಿಂತ ಆತ್ಮಹತ್ಯೆ ಮಾಡಿಕೊಂಡು ಜೀವನ್ಮುಕ್ತಳಾಗುವುದು ಲೇಸು!"

..ಈ ಮನೋವ್ಯಥೆಯಿಂದ ರತ್ನಳ ಬೇನೆಯು ದ್ವಿಗುಣಿತ ವಾಯಿತು. ಯಾವ ಔಷಧೋಪಚಾರಗಳೂ, ನಾಟದಾಗಲು ಮನೆಯವರೆಲ್ಲ ಗಾಬರಿಯಾದರು. ನನಗೆ ರತ್ನಳ ಬೇನೆಯ ಸಮಾಚಾರವನ್ನು ಪತ್ರದಿಂದ ತಿಳಿಸಿದರು. ಕೂಡಲೆ ನಾನಲ್ಲಿ ಹೋಗಿ ನೋಡಿದೆ. ಕೇವಲ ಅಸ್ಥಿಪಂಜರವೇ ಉಳಿದಿತ್ತು ರತ್ನಳ ದೇಹದಲ್ಲಿ. ನನ್ನನ್ನು ಕಂಡು 'ಅಣ್ಣಾ' ಎಂದಳು ಮಾತ್ರ. ದುಃಖವು ಒತ್ತರಿಸಿದ್ದರಿಂದ ಹೆಚ್ಚು ಮಾತನಾಡಲಿಲ್ಲ. ಅವಳ ಶುಷ್ಕ-ಕಪೋಲದ ಮೇಲೆ ಅಶ್ರುಬಿಂದುಗಳು ಮುತ್ತಿನಂತೆ ಕಾಣಿಸಿಕೊಂಡುವು. ದುಃಖವನ್ನು ಹತ್ತಿಕ್ಕುವುದಾಗಲಿಲ್ಲ. ನಾನೂ ಅತ್ತೆ. ಅವಳ ಮನೋದಯವನ್ನರಿತು ನಾನವಳನ್ನು ನನ್ನ ಸಂಗಡಲೇ ಕರೆದುಕೊಂಡು ಬಂದೆ. ತಿಂಗಳೆರಡು ತಿಂಗಳಲ್ಲಿ ಅವಳ ಬೇನೆಯು ನಿಧಾನವಾಗಿ ಗುಣವಾಗತೊಡಗಿತು.

..ಒಂದು ದಿವಸ ರತ್ನ ತನ್ನ ಈ ಕರ್ಮಕಥೆಯನ್ನು ಹೇಳಿ '**ಅನಾಥಮಹಿಲಾಶ್ರಮ**'ವನ್ನು ತೆರೆಯಬೇಕೆಂದು ಮಾಡಿದ ತನ್ನ ಸಂಕಲ್ಪವನ್ನು ತಿಳಿಸಿದಳು. ಬಹುದಿನಗಳಿಂದ ಇಂತಹದೊಂದು ಸಂಸ್ಥೆಯ ಅವಶ್ಯವು ನನಗೂ ಎನಿಸತೊಡಗಿತ್ತು. ತತ್ಕಾಲವೇ ಅನುಮತಿಯನ್ನಿತ್ತು, ನಾನದರ ಸ್ಥಾಪನೆಯ ಯೋಜನೆಯಲ್ಲಿ ತೊಡಗಿದೆ. ಆಗ ನೆಟ್ಟಿದ್ದ ಸಸಿಯು ರತ್ನಳ ಕಾರ್ಯಕುಶಲತೆಯಿಂದ ಇಂದು ನವಪಲ್ಲವಗಳಿಂದ ಶೋಭಿಸುತ್ತ ಗಿಡವಾಗಿ ಬೆಳೆಯುತ್ತಿದೆ,"

ಇಷ್ಟೆಲ್ಲ ಹೇಳಿ, ಸ್ವಲ್ಪ ತಡೆದು ರಾಜುವು ಮತ್ತೆ ಮಾತಾಡತೊಡಗಿದ. "ನೋಡಿದೆಯಾ ರಾಮು, ವಿಧವೆಯರು ಎದುರಿಸಬೇಕಾಗಿರುವ ಎಡರು-ತೊಡರುಗಳನ್ನು? ಸಮಾಜದಲ್ಲಿಯ ಪುರುಷರು ಅವರನ್ನು ನೋಡುವ ಬಗೆಯನ್ನು! ಕೆಲ ಹೀನವೃತ್ತಿಯ ಪುರುಷರಿಂದ ಪ್ರೋತ್ಸಾಹಿತರಾಗಿ ವಿಧವೆಯರೇನಾದರೂ ತಪ್ಪುದಾರಿ ತುಳಿದರೊ, ಅದಕ್ಕೆ ಕಾರಣರಾದ ಪುರುಷರಿಗೆ ಯಾವ ದಂಡ-ದೋಷವೂ ಇಲ್ಲ; ಎಲ್ಲವೂ ಅಂತಹ ಸ್ತ್ರೀಯರ ಪಾಲಿಗೆ! ಅವರು ಸಮಾಜದಿಂದ ಬಹಿಷ್ಕೃತರು; ಅವರಿಗೆ ಮೋಕ್ಷದ ಮಾರ್ಗವಿಲ್ಲ; ಆಶ್ರಯಕ್ಕೆಡೆಯಿಲ್ಲ! ಅವರಿಗಾಗಿ ತೆರವಿರುವ ಮಾರ್ಗಗಳೆರಡೇ: ಆತ್ಮಹತ್ಯೆ ಇಲ್ಲವೆ ಪರಧರ್ಮಪ್ರವೇಶ! ಹಿಂದಿನ ಕಾಲದಲ್ಲಿ ಅವರು ಸತಿಹೋಗಿ ತಮ್ಮ ಜೀವನವನ್ನು ನೀಗುತ್ತಿದ್ದರೆ, ಇಂದವರು ಈ ಪರಿ ಸಮಾಜದ ಅಗ್ನಿಕುಂಡದಲ್ಲಿ ಬೀಳಬೇಕಾಗಿದೆ. ಇಂತಹ ಅನಾಥಸ್ತ್ರೀಯರ ಉದ್ಧಾರ-ಉನ್ನತಿಗಳಿಗಾಗಿಯೆ ಅನೇಕ ಸಂಘ-ಸಂಸ್ಥೆಗಳು ನೆರೆನಾಡುಗಳಲ್ಲಿ ಸ್ಥಾಪಿತವಾಗಿ ಬಹುದಿನಗಳಾದುವು. ಆದರೆ ನಮ್ಮ ಕರ್ನಾಟಕದಲ್ಲಿಯ ಈ ಕೊರತೆಯನ್ನು ಇದೀಗ ಈ 'ಅನಾಥ ಮಹಿಲಾಶ್ರಮ'ವು ಹೋಗಲಾಡಿಸಿದೆ. ಇದನ್ನು ಪ್ರೋತ್ಸಾಹಿಸಿ ಪೋಷಿಸುವುದು ನಮ್ಮೆಲ್ಲರ ಕರ್ತವ್ಯ" ಎಂದು ಹೇಳಿ, ತನ್ನ ಮಾತನ್ನು ಮುಗಿಸಿದ ರಾಜು.

ಇದನ್ನಾಲಿಸುತ್ತ ವಿಸ್ಮಯಮೂಕನಾಗಿ ಕುಳಿತಿದ್ದ ನನ್ನ ಬಾಯಿಂದ 'ರತ್ನಳ ಜೀವನವು ಅನುಕರಣೀಯ' ಎಂಬ ಉದ್ಗಾರವು ಸಹಜವಾಗಿಯೆ ಹೊರಟು ಹೋಯಿತು.

ಗನೋರಿಯಾ, ಪರಮಾರೋಗ, ಉಷ್ಣರೋಗದ ಮೇಲೆ

ಔಷಧ

೭ ದಿವಸಗಳಲ್ಲಿ ಈ ರೋಗ ಗುಣಹೊಂದುವುದು ಗ್ಯಾರಂಟಿ!

ಶರೀರದಿಂದ ಕೀವ ಬರುತ್ತಿದ್ದರೆ, ಧೋತರಕ್ಕೆ ಹಳದಿ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದಿಂದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲುಶೂಲಿ, ಅರ್ಧಾಂಗವಾಯು, ನಡುನೋಯುವುದು, ಸ್ತ್ರೀಯರ ಬಿಳಿ ಕೆಂಪು ನೆರಗು ಹೋಗುತ್ತಿದ್ದರೆ, ಹೊಲಿಕಟ್ಟು, ಗರ್ಮಿಯಿಂದ ಗರ್ಭಕೋಶನಾಶವಾಗಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ ಈ ಎಲ್ಲ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲುದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ, ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ-ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ ಕ್ಕೆ ೫ ರೂ. ಪೋಸ್ಟ್‌ಚಾರ್ಜು ೧೦ ಆಣೆ.

ಮಕ್ಕಳನ್ನು ಹಡೆಯುವದು ಸಾಕು

ಅಶಕ್ತ ಹೆಣ್ಣುಮಕ್ಕಳಿಗೆ ★ ರೋಗಗ್ರಸ್ತ ಸ್ತ್ರೀಯರಿಗೆ

ಬರ್ಥ್ ಕಂಟ್ರೋಲ್

★

ಏಳು ದಿವಸದ ಈ ಮಾತ್ರೆಗಳನ್ನು ಸೇವನಮಾಡಿದರೆ, ಮುಂದೆ ಖಂಡಿತವಾಗಿಯೂ ಮಕ್ಕಳಾಗುವುದಿಲ್ಲ. ಸ್ತ್ರೀಯರು ಪ್ರತಿ ತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿನೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವುದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿ ದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆ ಯಂತೆ ಊಟಕ್ಕೆ ಮೊದಲು ತಕ್ಕೊಳ್ಳಬೇಕು. ೭ ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ: ಹರವೀಪಲ್ಲೆ ಬಿಡಬೇಕು.

೭ ದಿವಸದ ಸಂಪೂರ್ಣ ಔಷಧದ ಕಿಮ್ಮತ್ತು

೫ ರೂಪಾಯಿ ಪೋಸ್ಟ್ ಚಾರ್ಜು ೧೦ ಆಣೆ.

ಏಜಂಟರು:

ಗದಗ ಫಾರ್ಮಸಿ, ಹುಬ್ಬಳ್ಳಿ, ಫಾರ್ಮಸಿ, ಬಾಗಲಕೋಟೆ

ವಿಳಾಸ:— ಹಾಲಪ್ಪಾ ದಾವಣಗೇರಿ, ಆಯುರ್ವೇದ ಔಷಧಗಳ ದವಾಖಾನೆ.

ಹಾಳಿನಿಂದ ಬಾಳು

ಪ್ರೊ. ಎಸ್. ಎಂ. ಕುಲಕರ್ಣಿ, ಎಂ. ಎ. ಬನಾರಸ

೨

ಬಾಳಿನಲ್ಲಿ ಸಂಭವಿಸುವ ಹಾಳಿನ ಹಾವಳಿಯನ್ನು ಹಿಂದಿನ ಲೇಖನದಲ್ಲಿ ಕಾಣಿಸಿರುವೆ. ಪ್ರಸ್ತುತ ಲೇಖನದಲ್ಲಿ ಹಾಳಿನ ತತ್ತ್ವವು ಜೀವನದ ಸರ್ವ ವ್ಯವಹಾರದಲ್ಲಿಯೂ ಕಂಡುಬರುತ್ತಿದ್ದು, ಅದು ಯಾವ ರೂಪದಲ್ಲಿ ಜರುಗುವುದು ಮತ್ತು ಅದನ್ನು ತಪ್ಪಿಸುವ ಕೆಲವು ಹಂಚಿಕೆಗಳಾವುವು ಎಂಬುದನ್ನು ವರ್ಣಿಸುವೆ. ಸ್ಥೂಲರೂಪದಲ್ಲಿ ಸಂಭವಿಸುವ ಹಾಳು ಗುರುತಿಸಲು ಸಾಧ್ಯವಿದ್ದು ಅದನ್ನು ಉಪಯುಕ್ತತೆಯಲ್ಲಿ ತರಲಿಕ್ಕೆ ಹೆಚ್ಚಿನ ವಿಚಾರ-ವಿನಿಮಯ ಬೇಕಾಗಿಲ್ಲ. ಎಂತಹ ಮೂರ್ಖನಿಗಾದರೂ ಇಂತಹ ಹಾಳು ಒಂದಿಲ್ಲೊಂದು ದಿನ ಸ್ಮೃತಿಗೆ ಬಂದು, ಅದರ ಸದುಪಯೋಗ ಮಾಡುವ ರೀತಿಯೂ ಕಂಡುಬರುತ್ತದೆ. ಆದರೆ ಜೀವನದ ಯಂತ್ರದಲ್ಲಿ ಕೆಲವೊಂದು ಭಾಗಗಳು ನಿರರ್ಥಕವಾಗಿ ಕಾರ್ಯ ಮಾಡುತ್ತ ತಮ್ಮ ಸವಕಳಿಯನ್ನು ಮಾತ್ರ ತಂದುಕೊಳ್ಳುವುವಲ್ಲದೆ, ಫಲಪ್ರದ ಕಾರ್ಯಗಳಾವುವನ್ನೂ ಮಾಡುವುದಿಲ್ಲ. ಇಂತಹ ಹಾಳಿನ ಉದಾಹರಣೆಯನ್ನು ಸುಮ್ಮನೆ ಉರಿಯಿಸುವ ಒಲೆಯಲ್ಲಿ ಇಲ್ಲವೆ ಸ್ಟೋವಿನಲ್ಲಿ ಕಾಣಬಹುದು. ದೊಡ್ಡ ಪ್ರಮಾಣದಲ್ಲಿ ಹೇಳಬೇಕೆಂದರೆ ದಶ-ಶತ-ಸಹಸ್ರ-ಲಕ್ಷ-ಕೋಟಿ ಸ್ಟೋವಿನಷ್ಟು ಉಷ್ಣತೆ ಕೊಡುವ ಸೂರ್ಯನಾರಾಯಣನು, ನಿಸರ್ಗಯಂತ್ರದಲ್ಲಿ ಅದೆಷ್ಟು ತನ್ನ ಶಕ್ತಿಯನ್ನು ಚದರಿಸಿ, ಮಾನವನ ಉಪಯುಕ್ತತೆಗೆ ನಿರಾದಿದವನಾಗಿದ್ದಾನೆಂದು ಕಲ್ಪಿಸಬಹುದು. ಇದೂ ಸ್ಥೂಲಜೀವನದ ಹಾಳೇ ಎಂದು ಹೇಳಬಹುದು. ಇದರಂತೆಯೆ ಮಾನವನ ವಿಚಾರಜೀವನದಲ್ಲಿಯೂ ಧಾರ್ಮಿಕ ನೈತಿಕ ಜೀವನದಲ್ಲಿಯೂ ಸದಾ ಒಂದು ರೀತಿಯ ಹಾಳು ನಮ್ಮ ಕಣ್ಣಮುಂದೆ ನಡೆಯುತ್ತಿದ್ದರೂ, ಜ್ಞಾನಾಂಧರಾದ ವೇಳೆಯಲ್ಲಿ ಅದು ನಮಗೆ ಕಾಣದೆ ಹೋಗಿ, ಅಮೌಲ್ಯವಾದ ನಮ್ಮ ಜೀವನವು ವ್ಯರ್ಥವಾಗಿ ಪರಿಣಮಿಸುತ್ತದೆ. ಸದ್ಯ ಒಂದೇ ಉದಾಹರಣೆಯನ್ನು ಹೇಳುವೆ. ಇಂತಹ ಹಾಳು, ಇಂಗ್ಲೀಷ್‌ನಲ್ಲಿ Red-tapism ಎಂದು ಕರೆಯುತ್ತಾರಲ್ಲ, ಆದರಲ್ಲಿ ಸಂಭವಿಸುವುದು. ಇದಕ್ಕೆ 'ಸರಕಾರೀ ಪದ್ಧತಿ' ಇಲ್ಲವೇ 'ಕಚೇರಿಕ್ರಮ' ಎಂದು ಕರೆಯಬಹುದು. ಕೋರ್ಟು-ಕಚೇರಿಗಳನ್ನು ಬಲ್ಲವರಿಗೆ ಈ ಕಚೇರಿಕ್ರಮದ ಅನುಭವ ತುಂಬಾ ಬಂದಿರಲಿಕ್ಕೆ ಸಾಕು. ಒಂದು ಚಿಕ್ಕ ಕಾರ್ಯಕ್ಕಾಗಿ ಕಚೇರಿಗೆ ಇಲ್ಲವೆ ಕೋರ್ಟಿಗೆ ಹೋದರೆ, ಎಷ್ಟೋ ವೇಳೆ ಕಾಯಬೇಕಾಗುವುದು, ಕಳೆಯಬೇಕಾಗುವುದು [illegible] ನಮಗೆ ಗೊತ್ತಿದ್ದ ಸಂಗತಿ. ಈ ಕಾಲಕೊಲ್ಲುವ ಜೀವನ ನಮ್ಮನ್ನು ಆಧುನಿಕ ಯುಗದಲ್ಲಿ ಸರ್ವದಾ ಅಂಟಿಕೊಂಡೇ ಇರುತ್ತದೆ. ಅಧಿಕಾರವು ಕೇಂದ್ರೀಕರಿಸಿದಂತೆ ಕಾರ್ಯಗಳು ಸುಲಭವಾಗಿಯೂ ತೀವ್ರವಾಗಿಯೂ ಜರಗುವುವು ಎಂಬ ರಹಸ್ಯವನ್ನು ಆಧುನಿಕ ಸರ್ವಾಧಿಕಾರಿಗಳು ಕಂಡುಕೊಂಡಿದ್ದಾರೆ. ಇದರಲ್ಲಿ ಒಂದುರೀತಿಯ ಸತ್ಯವಿದ್ದರೂ, ಅಂತ್ಯದಲ್ಲಿ ಇದರಿಂದ ಕ್ಷೇಮವಿಲ್ಲವೆಂದು ಕಂಡುಬಂದಿದೆ. ಇರಲಿ, ಇನ್ನು 'ಅಧಿಕಾರವನ್ನು ಕೇಂದ್ರೀಕರಿಸದೆ (centralise) ಅದನ್ನು ಅಲ್ಲಲ್ಲಿ ಹಂಚಿದರೆ (decentralise) ಈ ಮಾರ್ಗದಿಂದ ನಮ್ಮ ಹಿತವಾಗುವುದೋ?' ಎಂಬ ಪ್ರಶ್ನೆ. ಇವು ದೊಡ್ಡ ಪ್ರಶ್ನೆಗಳು. ಇವುಗಳ ಉತ್ತರವನ್ನು ಹೇಳುವುದು ಸುಲಭವಲ್ಲ, ಏಕೆಂದರೆ ಎಂತಹ ಅಮೌಲ್ಯ ಆದರ್ಶವಾದರೂ ಜನಜೀವನದಲ್ಲಿ ಅದರ ಅನುಕರಣವಾಗುವಾಗ, ಕೆಲವೊಂದು ಮಾನವ ಸಹಜ ದೋಷಗಳು ಅದಕ್ಕೆ ಅಂಟಿಕೊಂಡು ಬಿಡುತ್ತದೆ. ಅಂತೆಯೇ ಎಂತಹ ಬೆಲೆಯುಳ್ಳ ಸಮಾಜತತ್ತ್ವವಾದರೂ ಇನ್ನೂ ನಮ್ಮ ನಾಗರಿಕತೆಗೆ ಸೌಖ್ಯ ಶಾಂತಿ ತಂದಿರುವುದಿಲ್ಲ. ಈ ರೀತಿಯಲ್ಲಿ ನಮ್ಮ ನೈತಿಕ ಬಾಳಿನ ಹಾಳು ಹೇಳದಂತಾಗಿದೆ.

ನಮ್ಮ ಆವಶ್ಯಕತೆಗಿಂತ ಹೆಚ್ಚು ಸಂಗ್ರಹಿಸುವುದೆಂದರೆ ಸಮಾಜದಲ್ಲಿ ಬಡತನವನ್ನು ಹೆಚ್ಚಿಸಿದಂತಾಗುವುದು. ನೂರು ಜನ ಬಡವರು ತಿಂದು ಬದುಕಬಹುದಾದುದನ್ನು ಮೂರುಜನ ಸಿರಿವಂತರು ತಿಂದು ತೇಗುತ್ತ ಕುಳಿತರೆ, ನಾಡಿನ ಜನರ ಬಾಳು ಎಷ್ಟೊಂದು ಹಾಳಾಗುವುದು ?

ಮೇಲೆ ಹೇಳಿದ 'ಕಚೇರಿ ಪದ್ಧತಿ'ಯಲ್ಲಿ ಸಮಯದ ಹಾನಿಯಾಗುವುದಲ್ಲದೆ, ಆಗುವ ಕಾರ್ಯಗಳು ಕೂಡ ವ್ಯರ್ಥವಾಗುತ್ತವೆ. ಪ್ರತಿಯೊಂದು ಕಾರ್ಯಕ್ಕೂ ಒಂದು ನಿರ್ದಿಷ್ಟ ವೇಳೆಯಿರುವುದು. ಆ ವೇಳೆಯಲ್ಲಿ ಅದು ಪೂರ್ಣವಾಗದಿದ್ದರೆ ಅದರಿಂದ ಪ್ರಯೋಜನವಿಲ್ಲ. ಮನೆಗೆ ಬೆಂಕಿಹತ್ತಿದಾಗ ಅಗ್ನಿಶಾಮಕ ಪರಿಷ್ಠರು (Fire engineers) ತಮ್ಮ ಕಾಯಿದೆ ಕಾನೂನಿನ ಪ್ರಕಾರವಾಗಿಯೆ ಕಾರ್ಯಮಾಡಹತ್ತಿದರೆ ಏನಾಗುವುದು ? ಇದರ ಬಗ್ಗೆ ಒಂದು ಕತೆ ನೆನಪಿಗೆ ಬರುತ್ತದೆ. ಅದಾವುದೋ ಒಬ್ಬ ಪೋಲೀಸ್ ಪಾಟೀಲರು ಒಮ್ಮೆ ಒಬ್ಬರಲ್ಲಿಗೆ ಒಂದು ರಾತ್ರಿ ಊಟಕ್ಕೆ ಹೋಗಿದ್ದರಂತೆ. ಆ ಕಾಲಕ್ಕೆ ಪಕ್ಕದ ಮನೆಯೊಂದರಲ್ಲಿ ಕಳವಾಗಿ, ಕಳ್ಳನು ಓಡಹತ್ತಿದ್ದ. ಆ ಮನೆಯ ಯಜಮಾನನು ಪೋಲೀಸ್ ಪಾಟೀಲರಲ್ಲಿ ಧಾವಿಸಿ ಬಂದು, ತೀವ್ರವಾಗಿ ಆ ಕಳ್ಳನನ್ನು ಬಂಧಿಸಬೇಕೆಂದು ಬಿನ್ನವಿಸಿದ. ಆದರೆ ಪಾಟೀಲರು ಆ ಕಾಲಕ್ಕೆ ತಮ್ಮಅಧಿಕಾರದ ಚಿಹ್ನವಾದ ಡ್ರೆಸ್ಸನ್ನೂ

ಬಡಿಗೆಯನ್ನೂ ತಂದಿದ್ದಿಲ್ಲವಷ್ಟೇ! ಸರಿ, ಆ ಸಲಕರಣೆಗಳಿಲ್ಲದೆ ಕಳ್ಳನನ್ನು ಬಂಧಿಸುವುದು ಹೇಗೆ? ಅಂತೆಯೆ ಪಾಟೀಲರು ಹೇಳಿದರು: "ಅಯ್ಯಾ, ನನ್ನ ಅಧಿಕಾರದ ದೊಣ್ಣೆ ಹಿಡಿದಾಗ ಮಾತ್ರ ನಾನು ಕಳ್ಳನನ್ನು ಬಂಧಿಸಬಲ್ಲೆ. ಸ್ವಲ್ಪ ನಿಲ್ಲು; ಇದೀಗಲೆ ಹೋಗಿ ಡ್ರೆಸ್ಸ್‌ಮಾಡಿಕೊಂಡು, ದೊಣ್ಣೆ ತೆಗೆದುಕೊಂಡು ಬರುವೆ. ಇಲ್ಲದೆ ಹೋದರೆ ಆ ವ್ಯಕ್ತಿ 'ಬೇಕಾಯ್ದೆಸೀರ್ ಬಂಧನಮಾಡಿದ' ಎಂತ ನನ್ನ ಮೇಲೆ ಅಬ್ರೂಲುಕ್ಸಾನೀ ದಾವೇ ತರಬಹುದು ಅಲ್ಲವೆ?" ಎಂದು, ಅವರು ಮನೆಗೆ ಹೋಗಿ ದೊಣ್ಣೆ ತರುವ ವೇಳೆಯಲ್ಲಿ, ಕಳ್ಳನು ಎಷ್ಟು ದೂರ ಓಡಿದ್ದನೆಂಬುದನ್ನು ಕಲ್ಪಿಸಬಹುದು. ಹೀಗಿದೆ 'ಕಚೇರೀ ಕ್ರಮ'; ಅಧಿಕಾರಯುಕ್ತ ಕಾರ್ಯದ ಪರಿಣಾಮ. ಸಾಧಾರಣವಾಗಿ ನಮ್ಮ ನಾಗರಿಕತೆಯ ಎಲ್ಲ ಕಾರ್ಯನಿರ್ವಾಹದಲ್ಲಿಯೂ ಇದೇ ರೀತಿಯ ಪರಿಣಾಮವಾಗುತ್ತಿರುವುದು.

ಹಳ್ಳಿಗರ ಜೀವನದಲ್ಲಿ ಈ ಬಗೆಯ ಕಾಲ ಕೊಲ್ಲುವ ಕ್ರಮ-ವನ್ನು ಇಂದಿನ ನಮ್ಮ ಬಾಳಿನಲ್ಲಿ ಕಾಣಬಹುದು. ಚಿಕ್ಕ ಪುಟ್ಟ ವ್ಯಾಜ್ಯಗಳಲ್ಲಿ ಕೂಡ ಹಳ್ಳಿಗರು ಕಚೇರಿ-ಕೋರ್ಟುಗಳಿಗೆ ಹೋಗ-ಹತ್ತಿರುವುದರಿಂದ, ಈ 'ಕಚೇರಿಕ್ರಮ' ದಿಂದ ಅವರ ಸಮಯ-ದುಡ್ಡು-ದೇಹಪರಿಶ್ರಮ ಅದೆಷ್ಟು ಹಾಳಾಗಹತ್ತಿದೆಯೆಂಬುದನ್ನು ಕಲ್ಪಿಸಲು ಸಾಧ್ಯವಿದೆ. ನಾಲ್ಕು ರೂಪಾಯಿಯ ಬಗ್ಗೆ ವ್ಯಾಜ್ಯ ಹೂಡಿ ನಾನೂರು ರೂಪಾಯಿ ಹಾಳುಮಾಡಿಕೊಳ್ಳುವ ಹಳ್ಳಿಗರು ಎಷ್ಟು ಜನರಿಲ್ಲ? ಅವರ ದಾರಿದ್ರ್ಯಕ್ಕೆ ಈ ಹಾಳೇ ಸರ್ವಕಾರಣ-ವೆಂದು ಹೇಳುವುದು ಸಮಂಜಸವಲ್ಲವಾದರೂ, ಈ ಬಗೆಯ ಹಾಳಿ-ನಿಂದ ಅವರು ದರಿದ್ರರಾಗಲಿಕ್ಕೆ ಒಂದು ಕಾರಣವೆಂದಾದರೂ ಹೇಳಬಹುದಲ್ಲವೆ? ಇಂತಹ ಜೀವನದಿಂದ ಕೇವಲ ವೇಳೆ ದ್ರವ್ಯ ಹಾಳಾಗದೆ ಅವರ ನೈತಿಕ ಬಾಳಿಗೂ ಹಾನಿ. ತಮ್ಮಲ್ಲಿಯ ವ್ಯಾಜ್ಯ ತೀರಿಸಿಕೊಂಡರೆ ಕೇವಲ ವೇಳೆ ದುಡ್ಡು ಉಳಿಯುವುದ-ಲ್ಲದೆ, ಸೇಡು ತೀರಿಸಿಕೊಳ್ಳುವ ಹವ್ಯಾಸ ತಪ್ಪಿ ಅವರಲ್ಲಿ ಹೆಚ್ಚಾದ ಮೈತ್ರಿಭಾವನೆಯೂ ಬರಲಿಕ್ಕೆ ಸಾಧ್ಯ.

ಕೇವಲ ಹಳ್ಳಿಗರೇ ಏಕೆ, ನಾಗರಿಕರಾದ ನಾವು ಕೂಡ ಈ ಹಾಳಿನ ಹಾವಳಿಯಿಂದ ಮುಕ್ತರಾಗಿಲ್ಲ. ಒಂದು 'ನಾಗರಿಕ' ಉದಾಹರಣೆ ತೆಗೆದುಕೊಳ್ಳೋಣ. ಚಿಕ್ಕ-ದೊಡ್ಡ ನದಿಯ ದಡ-ದಲ್ಲಿರುವ ಪಟ್ಟಣಗಳು ನಮ್ಮಲ್ಲಿ ಅನೇಕವಾಗಿವೆಯಷ್ಟೆ? ಇಂತಹ ಪಟ್ಟಣಗಳಲ್ಲಿ ಇಂದು ವಿದ್ಯುಚ್ಛಕ್ತಿಯ ಬೆಳಕನ್ನು ಬಯ-ಸುವವರು ಮಾಡುತ್ತಿರುವುದೇನು? ಜಲಪ್ರವಾಹದಿಂದ ಜನಿಸ-ಬಹುದಾದ ನೈಸರ್ಗಿಕ ಶಕ್ತಿಯನ್ನು ಉಪಯೋಗಿಸುವವರು ಅತಿ ವಿರಳ. ಹೆಚ್ಚಾಗಿ ಎಂದರೆ ಕಲ್ಲಿದ್ದಲಿಯಿಂದ ನಡೆಯುವ 'ಪವರ್ ಹೌಸು' ಗಳನ್ನು ಕಟ್ಟಿಬಿಡುವವರೆ ಬಹಳ. ಇಂತಹ ಶಕ್ತಿಯ ಮನೆಗಳಿಗೆ ಕಲ್ಲಿದ್ದಲಿಯನ್ನು ನೂರಾರು ಮೈಲಿನಲ್ಲಿದ್ದ ಖಣಿ-ಗಳಿಂದ ರೈಲಿನ ಮೇಲೆ ತರುವರು. ಇದಿಲ್ಲದಿದ್ದರೆ ಕಟ್ಟಿಗೆ-ಯಿಂದಲೆ ಉರವಲನ್ನು ಬಯಸುವರು; ಅಡವಿಯ ಮರಗಳನ್ನು ಉರುಳಿಸಿ ನೆಲಸಮಮಾಡುವರು. ಇದರಿಂದ ನದಿಯಲ್ಲಿದ್ದ ಪ್ರವಾಹಗಳು ಮಳೆಗಾಲದಲ್ಲಿ ಉಕ್ಕೇರಿ ಬಂದು, ಜಲಪ್ರಳಯದ ಹಾವಳಿಗೆ ಆ ಜನರು ತುತ್ತಾಗುವರು. ಈ ಎಲ್ಲ ಹಾಳಿನಿಂದ ಉಳಿಯಲಿಕ್ಕೆ ಧೋರಣೆಬೇಕು; ವಿಚಾರಬೇಕು; ನಿಯಮಬೇಕು. ಇನ್ನೊಂದು ವಿಷಯ: ನಮ್ಮ ದೇಶದಲ್ಲಿ ನದಿಗಳಿಗೆ ಕೊರತೆಯಿಲ್ಲವಷ್ಟೆ? ಹಿಂದುಸ್ಥಾನದ ನಕ್ಷೆ ನೋಡಿದಲ್ಲಿ, ನಮ್ಮಲ್ಲಿಯ ನದಿಗಳು ಅನೇಕ ರೀತಿಯಾಗಿ ಪ್ರವಹಿಸುತ್ತಿದ್ದು, ಸುತ್ತುಮುತ್ತಲಿನ ಹಳ್ಳಿ-ಪಟ್ಟಣಗಳಿಂದ ದೂರವಾಗಿರುವುದಿಲ್ಲ. ಹೀಗಿದ್ದರೂ ಕೂಡ, ಸದ್ಯ ನಮ್ಮ ದೇಶದಲ್ಲಿ ಎಲ್ಲ ಕಡೆಯಲ್ಲಿಯೂ ರೈಲು-ಗಳಾಗಬೇಕೆಂದು ಅನೇಕರು ಈ ರೈಲ್ ಕಟ್ಟುವ ಕಾರ್ಯದಲ್ಲಿ ಕೋಟ್ಯವಧಿ ಹಣವನ್ನು ಹಾಕುತ್ತಾರೆ. ನದಿಗಳನ್ನೇ ಕೆಲವೆಡೆಯಲ್ಲಿ ಮಾರ್ಗಗಳನ್ನಾಗಿ ಮಾಡಬಹುದಲ್ಲವೆ? ಮೋಟರ್ ಯಂತ್ರದಿಂದ ನಡೆಯಬಹುದಾದ ದೋಣಿಗಳಿಂದ ಅನೇಕ ಕಡೆಯಲ್ಲಿ ಪ್ರವಾಸ ಮಾಡಬಹುದು. ಇದಕ್ಕೆ ರೈಲ್ ಹಳಿ ಹಾಕುವ ಖರ್ಚಿಲ್ಲ. ಹೀಗೆ ನಮ್ಮ ದೇಶದಲ್ಲಿಯ ಎಲ್ಲ ಚಿಕ್ಕ ದೊಡ್ಡ ನದಿಗಳನ್ನೂ ಜಲಮಾರ್ಗಗಳನ್ನಾಗಿ ಮಾಡುವುದರಿಂದ, ಇಂದು ರೈಲಿನಿಂದ ಆಗುವ ಖರ್ಚನ್ನೂ, ರೈಲಿಲ್ಲದೆ ಇರುವಲ್ಲಿ ಆಗುತ್ತಿರುವ ಪ್ರವಾಸದ ನಷ್ಟವನ್ನೂ ಉಳಿಸಬಹುದಲ್ಲವೆ? ನೌಕರಿಯಿಲ್ಲದೆ ಬಳಲುವ ಇಂದಿನ ನಮ್ಮ ಎಂಜಿನಿಯರ್ ಬಂಧುಗಳು ಈ ವಿಷಯಕ್ಕೆ ಗಮನಿಸಬಹುದು.

ನಿಜವಾಗಿ ವಿಚಾರಿಸಿ ನೋಡಿದಲ್ಲಿ, ಇಂದಿನ ನಮ್ಮ ನಾಗರಿಕತೆಯ ಜೀವನದಲ್ಲಿ ಸಾವಿರಾರು ಈ ಬಗೆಯ ನಿರರ್ಥಕ ವ್ಯವ-ಹಾರಗಳು ನಡೆಯುತ್ತಿರುತ್ತವೆ. ನಮ್ಮಲ್ಲಿಯ ಬಡತನಕ್ಕೆ ಕಾರಣವೆಂದರೆ ಈ ಹಾಳಿನ ಬಾಳು. ಬಡತನವೆಂದರೇನು? ದುಡ್ಡಿಲ್ಲದವರು ಬಡವರಲ್ಲ; ಧನಿಕರು ಶ್ರೀಮಂತರಲ್ಲ. ನಿಜವಾದ ಸಂಪತ್ತು ಮಾನವನ ವಿಚಾರಜೀವನದಲ್ಲಿದೆ, ಬುದ್ಧಿಜೀವನದಲ್ಲಿದೆ. ನಮ್ಮಲ್ಲಿ ಲಕ್ಷ್ಮೀ-ಸರಸ್ವತಿಯರ ವ್ಯಾಜ್ಯದ ಒಂದು ವದಂತಿ ಇದೆಯಲ್ಲ; ಅದು ಸುಳ್ಳಲ್ಲ! ಕಾಲ್ಪನಿಕವಾದರೂ ಅದರಲ್ಲಿ ಸತ್ಯವಿದೆ. 'ಮಣ್ಣಿನಲ್ಲಿ ಹೊನ್ನಿದೆ' ಎಂಬುದನ್ನರಿತವನಿಗೆ ದಾರಿದ್ರ್ಯವಿಲ್ಲ. 'ಸೌಖ್ಯದಿಂದಿರಲಿಕ್ಕೆ ಮಾನವನಿಗೆ ಎಷ್ಟು ಜಾಗೆ ಬೇಕು?' ಎಂದು ಯಾರೋ ಪ್ರಶ್ನಿಸಿದಾಗ, ಒರ್ವ ತತ್ತ್ವ-ದರ್ಶಿಯು 'ಆರಡಿ ಸಾಕು' ಎಂದು ಹೇಳಿದನಂತೆ! ಈ ತರದ ಉತ್ತರದಲ್ಲಿ ಒಂದುಬಗೆಯ ನಿರಾಶಾವಾದವಿದ್ದುದಾದರೂ, ಪೂರ್ಣ ವಿಚಾರಿಸಿ ನೋಡಿದಲ್ಲಿ ಅದು ಸತ್ಯವೇ ಇದೆಯೆಂಬುದನ್ನು ಹಾಳಿನ ಹಾವಳಿಯನ್ನರಿತವರು ಕಾಣಬಹುದು. ನಿಜ-ವಾಗಿಯೂ ಒರ್ವ ವ್ಯಕ್ತಿಗೆ ಅವಶ್ಯವಾದ ಪದಾರ್ಥಗಳೆಷ್ಟು? ಆಹಾರವೆಷ್ಟು, ವಸ್ತ್ರಗಳೆಷ್ಟು, ಇನ್ನಿತರ ಆವಶ್ಯಕಗಳೆಷ್ಟು—ಎಂಬುದನ್ನು ನಾವು ಕೇಳಿಕೊಳ್ಳುವುದಿಲ್ಲ. **ಥೋರೋ, ಟಾಲ್ಸ್ಟಾಯ್, ಮಹಾತ್ಮಾಗಾಂಧಿ** ಮುಂತಾದವರು ಈ ಪ್ರಶ್ನೆಗಳಿಗೆ ...

(ಹಾಳ ನೆಯ ಪುಟಕ್ಕೆ ಮುಂದುವರಿದಿದೆ.)

ನಮ್ಮೂರ ಮ್ಯುನಿಸಿಪಾಲಿಟಿ

(ಒಂದು ಉದ್ದೇಶಪೂರ್ವಕ ಉಪನ್ಯಾಸ)

ಶ್ರೀರಂಗ

ಊರ ಹೊಲಸನ್ನು ಕಳೆಯುವುದಕ್ಕೆಂದು ಬಂದ ಮ್ಯುನಿಸಿಪಾಲಿಟಿ, ಊರ ಬೀದಿ-ಬೀದಿಗಳಲ್ಲಿ ಹೊಲಸನ್ನು ಬಿತ್ತಿ ಬೆಳೆಯುತ್ತಲಿದೆ. ಈ ಬಿತ್ತಿಗೆಯ ಕಾರ್ಯದ ಮರ್ಯಾದೆಗಾಗಿ 'ಸ್ವಾರ್ಥ'ತ್ಯಾಗ ಮಾಡಿ ಮಾಡಿ, 'ಸ್ವಾಭಿಮಾನ'ದ ಹೋಳಿ ಆಡಿ ಆಡಿ, ಜನರು ಮುಂದುವರಿದು ನುಗ್ಗುತ್ತಲಿದ್ದಾರೆ.

★

'ನಮ್ಮೂರ ಮ್ಯುನಿಸಿಪಾಲಿಟಿ ಎಂಬ ಹೆಮ್ಮೆಯಾಕೆ? ನಮ್ಮೂರಲ್ಲಿ ಇಲ್ಲವೆ? ಇನ್ನೂ ಅನೇಕಕಡೆ ಇಲ್ಲವೆ?' ಎಂದು ಪ್ರಾರಂಭಕ್ಕೆಯೆ ಕುಠಾರವನ್ನೆತ್ತಿ ನನ್ನನ್ನು ಕೆಣಕಬೇಡಿರಿ. ಹೀಗೆ ಪ್ರಥಮವಿಘ್ನವಾದರೆ ನಾನು ಹೇಳಬೇಕೆಂದಿದ್ದ ನಮ್ಮೂರ ಇನ್ನೂ ಅನೇಕ ಮೋಜುಗಳನ್ನು ಹೇಳಲಿಕ್ಕಿಲ್ಲ! ಇದಲ್ಲದೆ 'ನಮ್ಮೂರ' ಎಂಬಲ್ಲಿ ನನಗೆ ಹೆಮ್ಮೆ ಇಲ್ಲ. ನಿಮ್ಮೂರಲ್ಲೂ ಮ್ಯುನಿಸಿಪಾಲಿಟಿ ಇದೆ, ನಮ್ಮ ದೇಶದ ಅನೇಕ ಊರುಗಳಲ್ಲಿ ಮ್ಯುನಿಸಿಪಾಲಿಟಿ ಇವೆ; ಅದೆಲ್ಲ ನನಗೆ ಗೊತ್ತು. ನಮ್ಮದೂ ನಿಮ್ಮದೂ ನಮ್ಮೆಲ್ಲರದೂ ಒಂದೇ ಕರ್ಮಭೂಮಿ ಅಲ್ಲವೆ? ಆದುದರಿಂದ ನಮ್ಮೆಲ್ಲರ ಕರ್ಮವೂ ಒಂದೇ, ಅತಏವ ನಾವೆಲ್ಲರೂ ಅನುಭೋಗಿಸುವುದು ಒಂದೇ. ಹೀಗಿರುವಾಗ 'ನಮ್ಮೂರ' ಎಂಬಲ್ಲಿ ನನಗೆ ಹೆಮ್ಮೆ ಹೇಗೆ ಇದ್ದೀತು? ಆದರೆ 'ಮ್ಯುನಿಸಿಪಾಲಿಟಿ' ಎಂಬ ಮಾತಿಗಾಗಿ ಹೆಮ್ಮೆ ಇದೆ, ಅದನ್ನು ಯಾರು ಏನು ಹೇಳಿದರೂ ಬಿಡುವಂತಿಲ್ಲ. ನಾನು ಇಲ್ಲಿ ಬರೆಯುವುದನ್ನು ಓದಿರಿ, ಆ ಮೇಲೆ ನನಗೆ ಯಾಕೆ ಇಂತಹ ಹೆಮ್ಮೆ ಎಂಬುದು ತಿಳಿಯುವುದು. ನಿಮಗೆ ಸಮಾಧಾನವಾಗದಿದ್ದರೆ ನಾಲ್ಕಾರು ಪಂಚಜನರನ್ನು ಕೇಳಿರಿ.

ಮೊದಲನೆಯದು: — ಇತ್ತಿತ್ತಲಾಗಿ ಸ್ಥಾನಿಕ ಸಂಸ್ಥೆಗಳಲ್ಲಿ ಒಂದು ಪಿಡುಗು ಹಬ್ಬಿದೆ, ಗೊತ್ತಿದೆಯೆ ತಮಗೆ? ಅದಕ್ಕೆ ಇಂಗ್ಲಿಷಿನಲ್ಲಿ supercession ಇಲ್ಲವೆ suspension ಎನ್ನುವರು; ಕನ್ನಡದಲ್ಲಿ — ಅಥವಾ ನಮಗೂ ನಿಮಗೂ ತಿಳಿಯುವ ಮಾತಿನಲ್ಲಿ ಹೇಳುವುದಾದರೆ 'ಉಚ್ಚಾಟನೆ' — ಎಂದು. ಎಂತೆಂತಹ ಮ್ಯುನಿಸಿಪಾಲಟಿಗಳು ಈ ಪಿಡುಗಿಗೆ ತುತ್ತಾಗಿವೆ! ಆದರೆ ನಮ್ಮದು ಆಯಿತೆ? ಇಲ್ಲ! ಇಲ್ಲ. ಹೀಗಿರುವಾಗ ನನ್ನಂತಹರು ಯಾಕೆ ಹೆಮ್ಮೆಪಡಬಾರದು? ಈಗ ಕೇಳುವಿರಲ್ಲವೆ ನಮ್ಮ ಮ್ಯು. ಪಾಟಿಯು ಹೇಗೆ ಪಿಡುಗಿನಿಂದ ಪಾರಾಯಿತೆಂದು? ಹೇಳುವೆ, ಚಿತ್ತೈಸಿರಿ. ಪ್ಲೇಗ ಪ್ರತಿಬಂಧಕ ಗುಳಿಗೆಗಳನ್ನು ನೋಡಿರುವಿರಾ? ಆ ತತ್ತ್ವದ ಒಂದು ಔಷಧಿ ಇದೆ ನಮ್ಮ ನಗರಸಭೆಯಲ್ಲಿ. ಅಥವಾ ಹೆಚ್ಚೇನು? ನಮ್ಮ ಮ್ಯುನಿಸಿಪಾಲಟಿಯೆ ಪ್ಲೇಗ ಪ್ರತಿಬಂಧಕ ಗುಳಿಗೆಯಂತಿದೆ, ಅಷ್ಟೊಂದು ಸಹಿಸಲಸಾಧ್ಯವಾದ ನಾತ ಇದುಗಿದೆ, ಆದಕಾಗಿ ಬೇಕಾದ್ದನ್ನು ಸಹಿಸಬಲ್ಲ ಮನುಷ್ಯನು ಕೂಡ ಅದರ ಹತ್ತಿರ ಬಾರದಿದ್ದಾಗ ಪಿಡುಗಿನ ಶಕ್ತಿ ಎಲ್ಲಿಯದು? ನಮ್ಮ ಮ್ಯುನಿಸಿಪಾಲಟಿಯು ಇಂತಹ ಆ್ಯಂಟಿಸೆಪ್ಟಿಕ್ ನಾತನ್ನು ಹೇಗೆ ಮೈಗೂಡಿಸಿಕೊಂಡಿತೆಂಬುದು ಇನ್ನು ಕೇಳಬೇಕಾದ ಪ್ರಶ್ನೆ. ಆದಕ್ಕೆ ಉತ್ತರವಾಗಿ

ಎರಡನೆಯದು: — ಸಾಮಾನ್ಯವಾಗಿ ಮ್ಯುನಿಸಿಪಾಲಟಿಗಳು ನಾಗರಿಕರ ಮತ್ತು ನಗರದ ದೃಷ್ಟಿಯಿಂದ ಕೆಲಸವನ್ನು ಕೈಕೊಳ್ಳಲು ಯತ್ನಿಸುವುವು. ಇದೇ ಏಕ್ಕ ಮ್ಯುನಿಸಿಪಾಲಿಟಿಗಳು ಮಾಡುವ ದೊಡ್ಡ ತಪ್ಪು. ನಗರದ ತುಂಬ ಕಾರಭಾರ ಮಾಡಿದರೆ ತಪ್ಪೀತೆ ಪಿಡುಗಿನ ಬಾಧೆ? ಈ ಮಾತನ್ನು ನಮ್ಮ ಮ್ಯುನಿಸಿಪಾಲಿಟಿಯು ತರ್ಕದಿಂದ ತಿಳಿದುಕೊಂಡಿದೆ, ಧೈರ್ಯದಿಂದ ಒಪ್ಪಿಕೊಂಡಿದೆ. ಆದಕಾಗಿ ಹೊರಗಿನಿಂದ ಯಾವ ರೋಗದ ಸಂಪರ್ಕವೂ ನಮ್ಮ ಮ್ಯು. ಪಾ. ಟಿಗೆ ತಗಲುವ ಹೆದರಿಕೆಯೆ ಇಲ್ಲ. ಅಥವಾ ಈ ಮಾತನ್ನು ಇನ್ನಿಷ್ಟು ಬಿಡಿಸಿ ಹೇಳುವೆ. ಮ್ಯುನಿಸಿಪಾಲಟಿಗೆ ಮೂಲ ಚುನಾವಣೆ. ಈ ಚುನಾವಣೆಯ ಕಾಲಕ್ಕೆ ಹುರಿಯಾಳುಗಳು 'ನಾನು ಹಾಗೆ ಮಾಡುವೆ, ಹೀಗೆ ಮಾಡುವೆ, ಆದಕಾಗಿ ನನಗೆ ಮತವನ್ನು ಕೊಡಿರಿ' ಎಂದು ಹೇಳುವ ವಾಡಿಕೆ. ಮುಂದೆ ಚುನಾಯಿಸಿದರೆ ಹಾಗೂ ಹೀಗೂ ಮಾಡಲೇಬೇಕಾಗಿ, ಪಿಡುಗಿಗೆ ಆಹುತಿಯಾಗುವ ಪ್ರಸಂಗ ಬರುವುದು. ಆದಕಾಗಿ ನಮ್ಮ ಹುರಿಯಾಳುಗಳು ಮೊದಲಿನಿಂದ

ದಕ್ಷತೆಯನ್ನು ವಹಿಸುವರು. ಹೇಗೆಂಬುದಕ್ಕೆ ಅವರು ಮತವನ್ನು ಬೇಡುವಾಗ ಹೇಳುವ ಮಾತುಗಳ ಮಾದರಿಯನ್ನು ಕೇಳಿರಿ. 'ನಾನು ಇಂತಹ ಜಾತಿಯವನಿರುವೆ, ಅದಕಾಗಿ ನನಗೆ ಮತವನ್ನು ಕೊಡಿರಿ.' ಇಲ್ಲವೆ 'ನನ್ನಲ್ಲಿ ನೂರು ರೂಪಾಯಿಯ ಕರೆನ್ಸಿ ನೋಟು ಇದೆ, ಅದಕ್ಕೆ ಚಿಲ್ಲರು ಬೇಕಾಗಿದೆ, ಆದ್ದರಿಂದ ನನಗೆ ನಿಮ್ಮ ಮತವನ್ನು ಕೊಡಿರಿ,' ಅಥವಾ 'ನಾನು ನಿಮ್ಮ ಮನೆಯಲ್ಲಿಯ ಶ್ರಾದ್ಧ-ಪಕ್ಷಗಳನ್ನು ನಡೆಸುವೆ, ಅದಕಾಗಿ—' ಮುಂತಾಗಿ. 'ಶ್ರಾದ್ಧಪಕ್ಷಗಳನ್ನು ನಡೆಸುವುದು' ಎಂಬ ಮಾತಿಗಾಗಿ ನಗಬೇಡಿರಿ. ಯಾಕೆಂದರೆ, ಅದು ಶಕ್ಯವಿದೆ, ಸುಲಭವಿದೆ, ಇಂದಿನ ಜೀವನದಲ್ಲಿ ಅನುಕೂಲವಿದೆ, ಮತ್ತು ನಮ್ಮವರು ಅದನ್ನು ಮಾಡಿಯೂ ತೋರಿಸಿದ್ದಾರೆ. ಶ್ರಾದ್ಧಪಕ್ಷಗಳ ರಹಸ್ಯವೇನು? ಸತ್ತವರನ್ನು ಮರ್ತ್ಯಭೂಮಿಗೆ ಆಹ್ವಾನಿಸುವುದು. ಅದನ್ನು ನಮಗಾಗಿ ನಮ್ಮ ಪುರಿಯಾಳುಗಳೇ ಮಾಡುವರು. ದೃಷ್ಟಾಂತಕ್ಕೆ, ಎಷ್ಟೋ ನಮ್ಮ ಪುರಿಯಾಳುಗಳು ಸತ್ತವರಿಂದಲೆ ಬಹುಮತವನ್ನು ಪಡೆದು ಆರಿಸಿ ಬರುವರು. ಇದ್ದವರಿಗಿಂತ ಸತ್ತವರ ಸಂಖ್ಯೆಯು ಯಾವಾಗಲೂ ದೊಡ್ಡದಿರುವುದರಿಂದ ಬಹುಮತವನ್ನು ದೊರಕಿಸಲು ಇದು ರಾಮಬಾಣ ಎಂದು ಹೇಳಬಹುದು. 'ಸತ್ತವರಿಗೆ ಮರಳಿ ಭೂಮಿಗೆ ಬಂದು ಮತ ಕೊಡುವ ಉತ್ಸಾಹ ಯಾಕೆ?' ಎನಬೇಡಿರಿ. ಪ್ರತ್ಯಕ್ಷ ನರಕದ ಅನುಭವವನ್ನು ಕಂಡ ಅವರಿಗೆ ಮ್ಯುನಿಸಿಪಾಲಿಟಿಗಾಗಿ ಮತ ಕೊಡಲು ಉತ್ಸಾಹವಿರಲಿ, ಇಲ್ಲದಿರಲಿ, ಅಧಿಕಾರವಿದೆ, ಕರ್ತವ್ಯವಾಗಿದೆ ಎಂದು ಹೇಳಬಹುದು. ಆದರೆ ಹೀಗೆ ಮಾಡುವುದು ಶಾಸನದ ವಿರುದ್ಧವಲ್ಲವೆ— ಎಂದೂ ದನಿ ಎಳೆಯಬೇಡಿರಿ. ಯಾಕೆಂದರೆ ಶಾಸನಭಂಗದಲ್ಲಿ ನುರಿತ ದೇಶಭಕ್ತರು ನಮ್ಮ ಮುಂದಾಳುಗಳು; ಶಾಸನಭಂಗವು ದೇಶಭಕ್ತಿಯ ಮೊದಲ ಸೂತ್ರವು. ಹಾಗೆ ಕೇಳಿದರೆ ಇಂತಹ ಸಂಶಯಗಳಿಗೆ ನಮ್ಮೂರಿನವರ ಹೃದಯದಲ್ಲಿ ಆಸ್ಪದವೆ ಇಲ್ಲ. ಅದಕ್ಕೆ ಕಾರಣವನ್ನು ಹೇಳುವುದಾದರೆ

ಮೂರನೆಯದು :— ನಮ್ಮೂರಿನವರಿಗೆ ಹೃದಯವೆ ಇಲ್ಲ. ಇದನ್ನು ಕೇಳಿ ಗಾಬರಿಗೊಂಡು ಎದೆಯನ್ನು ಬಡಿದುಕೊಳ್ಳಬೇಡಿರಿ. ಹೃದಯವಿಲ್ಲ, ಯಾಕೆಂದರೆ ಹೃದಯದ ಅಗತ್ಯವೆ ನಮಗಿಲ್ಲ. ದೇಹದೊಳಗೆ ರಕ್ತದ ಅಭಿಸ್ರವಣವನ್ನು ಮಾಡುವುದು ಹೃದಯದ ಕೆಲಸ, ಅದಕಾಗಿ ಹೃದಯದ ಅಗತ್ಯ. ಆದರೆ ರಕ್ತವೆ ಇಲ್ಲದಲ್ಲಿ ಹೃದಯದ ಕೆಲಸವೇನಿದೆ? ನಮ್ಮೂರಿನವರಿಗೆ ರಕ್ತವಿಲ್ಲ. ಅಲ್ಲಲ್ಲಿ, ಯಾರಿಗಾದರೊಬ್ಬರಿಗೆ ಇದ್ದರೆ ಅದನ್ನು ನಾವು ನಡೆಯಗೊಡುವುದಿಲ್ಲ. ಪಾಪ! ಕಣ್ಣಿಗೆ ಕಾಣಿಸದಂತೆ ಸೂಕ್ಷ್ಮಜೀವಿಗಳಾದ ಸೊಳ್ಳೆ (mosquito) ಗಳು ಬಾಯಿಬಿಟ್ಟು ಸುಳಿವಾಗ, ನಮ್ಮ ರಕ್ತವನ್ನು ಒಳಗಿಂದೊಳಗೆ ಬಚ್ಚಿಟ್ಟುಕೊಳ್ಳುವಷ್ಟು ನಿರ್ದಯರೆ ನಾವು? ಸುಳ್ಳೆನಿಸಿದರೆ ನಮ್ಮೂರಿಗೆ ಬಂದು ಬಂದು ನೋಡಿರಿ. ಹಗಲು-ರಾತ್ರಿ ಎಂಬ ಭೇದವಿಲ್ಲದೆ, ಆಶ್ರಮದ ಪಶು-ಪಕ್ಷಿಗಳಂತೆ ನಿರ್ಭಯದಿಂದ ಸ್ನೇಹದಿಂದ ನಮ್ಮ ಸುತ್ತಲೂ ಸುಳಿಯುತ್ತಿರುವುವು ಸೊಳ್ಳೆಗಳು. ವಸಂತಕಾಲದ ಕೋಕಿಲ-ಗಾಯನಕ್ಕಿಂತ ಇಂಪಾದ ಸೊಳ್ಳೆಸಂಗೀತಕ್ಕೆ ನೀವು ಮೈಮರೆತು ಕುಣಿದಾಡುವಿರಿ, ಆ ಗಾನಕ್ಕೆ ತಾಳಹಿಡಿಯಲು ಚಪ್ಪಾಳೆತಟ್ಟುವಿರಿ. ನಾವು ಸ್ವಾರ್ಥಿಗಳಾಗಿ ನಮ್ಮ ರಕ್ತವನ್ನು ನಮ್ಮ ಮೈಯಲ್ಲಿಯೆ ಇಟ್ಟುಕೊಂಡಿದ್ದರೆ, ಈ ಅಲ್ಪಜೀವಿಗಳು ಇಷ್ಟೊಂದು ಆನಂದದಿಂದ ಇರಬಹುದಾಗಿತ್ತೆ? ಇನ್ನು 'ಈ ಮಾತಿಗೆ ನಮ್ಮ ಮ್ಯುನಿಸಿಪಾಲಿಟಿಯ ಸಂಬಂಧವೇನು?' ಎನಬೇಡಿರಿ. ಯಾಕೆಂದರೆ ಮನೆಗಳನ್ನು ಕಟ್ಟಿಸುವಾಗ, ಬೀದಿಗಳನ್ನು ಹಾಕಿಸುವಾಗ ಸೊಳ್ಳೆಗಳು ನಿರಾಶ್ರಿತವಾಗದಂತೆ ನೋಡಬೇಕು ಎಂಬ ಕರಾರಿನ ಮೇಲೆಯೆ ಮ್ಯುನಿಸಿಪಾಲಿಟಿಯು 'ಪರವಾನಿಗೆ' ಯನ್ನು ಕೊಡುವುದು. ಉದಾಹರಣಾರ್ಥವಾಗಿ: ಹೊಲಸು ನೀರು ಹರಿದು ಮತ್ತೆಲ್ಲೂ ಹೋಗಕೂಡದು ಎಂಬ ನಿಯಮವಿದೆ ನಮ್ಮಲ್ಲಿ. ಅದು ಸಾರ್ಥಕವಾಗಿದೆ. ಯಾಕೆಂದರೆ, ಹೊಲಸು ನೀರು ಹರಿದು ಎತ್ತಲೊ ಹೋದರೆ ಸೊಳ್ಳೆಗಳ ಗತಿ ಏನು? ಅದಕಾಗಿ ಪ್ರತಿಯೊಂದು ಮನೆಯವರೂ ತಮ್ಮ ನೀರು ತಮ್ಮಲ್ಲಿಯೆ ನಿಲ್ಲುವಂತೆ ಮಾಡುವರು. ಒಮ್ಮೊಮ್ಮೆ ನೆರೆಯವನು ನಿರ್ದಯನೆಂದು ಕಂಡುಬಂದರೆ, ಉದಾರ ಹೃದಯದಿಂದ ಆತನ ಮನೆಮಗ್ಗುಲಲ್ಲೂ ಸೊಳ್ಳೆಗಳ ನಿವಾಸಸ್ಥಾನವಾಗುವಂತೆ ಏರ್ಪಾಡು ಮಾಡುವರು. ಇದು ನಮ್ಮೂರಲ್ಲಿ ಶಕ್ಯವಿದೆ. ಕಾರಣವೇನೆಂದರೆ

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ನಾಲ್ಕನೆಯದು :— ನಮ್ಮೂರ ಜನಜೀವಿತದಲ್ಲಿ ನಿಜವಾಗಿ ಡೆಮಾಕ್ರಸಿಯ (ಇದಕ್ಕೆ ಇಂಗ್ಲಿಷಿನಲ್ಲಿ ಡೆಮಾಕ್ರಸಿ, ಕನ್ನಡದಲ್ಲಿ ಪ್ರಜಾಸತ್ತಾತ್ಮಕ–ಎಂದರೆ ಸತ್ತ ಪ್ರಜೆಗಳ ಮತದಿಂದ ನಡೆಯುವ ಪದ್ಧತಿ– ಎನ್ನುವರು) ಪ್ರಭಾವವಿದೆ. ಹಗಲೆಲ್ಲ ಕ್ಷೌರಧಂದೆಯಲ್ಲಿ ತೊಡಗಿದವನನ್ನು ಸಾಯಂಕಾಲ ನೀವು ನಗರಸಭೆಯ ಅಧಿವೇಶನದ ಸದಸ್ಯನಾದುದನ್ನು ನೋಡಬಹುದು. ಕ್ಷೌರಿಕನಿಗೂ ನಗರಸಭೆಯ ಸದಸ್ಯತ್ವಕ್ಕೂ ವ್ಯತ್ಯಾಸವಿದೆ ಎಂಬ ಉಚ್ಚ ನೀಚ ಭಾವದ ಉದ್ಧಾಮತನ ನಮ್ಮಲ್ಲಿಲ್ಲ. ಅದರಂತೆಯೆ ಬೆಳಗಿನಿಂದ ರಾತ್ರಿಯ ವರೆಗೆ ಕುದುರೆಯ ಲಗಾಮನ್ನು ಹಿಡಿದು ಟಾಂಗಾ ನಡೆಯಿಸುವವನು ರಾತ್ರಿ ಆಡಳಿತೆಯ ಸೂತ್ರವನ್ನು ಹಿಡಿದು ನಗರಸಭೆಯನ್ನು ನಡೆಸಿದರೆ ನಮಗೆ ಸೋಜಿಗವಿಲ್ಲ. ಟಾಂಗೆಗೆ ಹೂಡಿದ ಕುದಿರೆಗಳಂತಹ ಸುಸಂಸ್ಕೃತ ಪಶುಗಳಿಗೂ ನಾಗರಿಕರಿಗೂ ಭೇದವಿದೆ ಎಂಬ ಮಿಥ್ಯಾಹಂಕಾರ ನಮಗಿಲ್ಲ. ಇದಲ್ಲವೆ ನಿಜವಾದ ಡೆಮಾಕ್ರಸಿ. ಶುನಿ ಚೈವ ಶ್ವಪಾಕೇಚ ಸಮಂ ಮ್ಯುನಿಸಿಪಾಲಿಟಿ! ಈ ಸಮತ್ವಬುದ್ಧಿಗಾಗಿಯೆ ಮೆಂಬರಿಕೆ ಯಾರಿಗೆ ದೊರೆತರೂ ನಮಗೆ ಮಹತ್ತ್ವವೆನಿಸುವುದಿಲ್ಲ, ಮತವನ್ನು ಯಾರಿಗೆ ಕೊಟ್ಟರೂ ನಮಗೆ ತಪ್ಪೆನಿಸುವುದಿಲ್ಲ. ಯಾಕೆಂದರೆ ಪ್ರತಿಯೊಬ್ಬ ನಾಗರಿಕನಿಗೆ ತನ್ನ ಕರ್ತವ್ಯದ ಅರಿವು ಸಾಕಷ್ಟಿದೆ. ತನ್ನ ಮನೆಯ ಮುಂದಿನ ಬೀದಿಯನ್ನು ತಾನಾಗಿಯೆ ಗುಡಿಸುವನು. ಈ ಸ್ವಾವಲಂಬಿತ್ವವನ್ನು ನೆರೆಯವನಿಗೆ ಕಲಿಸಲು ಆ ಕಸವನ್ನು ಅವನ ಮನೆಯ ಮುಂದೆ ಗುಂಪುಗೂಡಿಸುವನು. ತನ್ನ ದಾರಿಯನ್ನು ತಾನೇ ನೋಡಿಕೊಳ್ಳುವನು— ಎಂದರೆ, ಕೆಳಗಿದ್ದ ತಗ್ಗು-ದಿನ್ನೆ-ಕಲ್ಲು-ದೂಳುಗಳನ್ನು ನೋಡಿಕೊಂಡು ನಡೆಯುವನು. ತನ್ನ ಬಾವಿಯನ್ನು ತಾನೇ ಶೋಧಿಕೊಳ್ಳುವನು (ಒಮ್ಮೊಮ್ಮೆ ಅದಕ್ಕೆ 'ನೀರನ್ನು ಜಗ್ಗುವುದು– ಸೇದುವುದು' ಎಂದು ಹೇಳುವುದುಂಟು). ಹೀಗೆ ಕೇವಲ ಡೆಮಾಕ್ರಸಿಯ ದೃಷ್ಟಿಯಿಂದಲ್ಲ, ಇನ್ನೂ ಅನೇಕ ದೃಷ್ಟಿಗಳಿಂದ ನಮ್ಮ ಮ್ಯು. ಪಾ. ಟಿಯು ತೀರ ಆಧುನಿಕವಾಗಿದೆ. ಉದಾಹರಣೆಗಾಗಿ

ಐದನೆಯದು :— ಇಂದಿನ ಜೀವನಕ್ಕೆ ಧಾರ್ಮಿಕ ಇಲ್ಲವೆ ರಾಜಕೀಯ ಕಾರಣಗಳಿಗಿಂತ ಆರ್ಥಿಕ ಕಾರಣಗಳೆ ತಳಹದಿಯಾಗಿವೆ ಎಂದು ಹೇಳುವರಷ್ಟೆ! ಆ ಮಾತಿನ ಸತ್ಯತೆ ನಮ್ಮೂರಿನವರ ಜೀವನದಲ್ಲಿ ಕಂಡುಬರುವುದು. ನಮ್ಮ ಮ್ಯು. ಪಾ. ಟಿಯ ವ್ಯವಹಾರದಲ್ಲಿ ಕಂಡುಬರುವುದು. ಪ್ರಾರಂಭದ ಚುನಾವಣೆಯಿಂದ ಕೊನೆಯ ಕಮಿಟಿಗಳ ಆಯ್ಕೆ-ಆಡಳಿತಗಳ ವರೆಗೆ ಎಲ್ಲ ವ್ಯವಹಾರವೂ ಆರ್ಥಿಕ ತಳಹದಿಯ ಮೇಲೆ ನಿಂತಿದೆ. ನಮ್ಮ ಹುರಿಯಾಳು ಬೇಕಾದ್ದನ್ನು ಹೇಳಲಿ, ವೋಟ (vote)ನ್ನು ಕೊಡುವಾಗ ನಮ್ಮೂರ ಮತದಾರನು ಮಾತ್ರ ಆರ್ಥಿಕ ಸಮಸ್ಯೆಯ ದೃಷ್ಟಿಯಿಂದಲೆ ಕೊಡುವನು. From each candidate according to his ability to each voter according to his need (ಹುರಿಯಾಳಿನ ಶಕ್ತಿಗನುಸರಿಸಿ, ಮತದಾರನ ಅಗತ್ಯವನ್ನನುಲಕ್ಷಿಸಿ) ಆರ್ಥಿಕ ವಿನಿಯೋಗವನ್ನು ಮಾಡುವುದು ಡೆಮಾಕ್ರಸಿಯ ಒಂದು ಶ್ರೇಷ್ಠ ತತ್ತ್ವವಲ್ಲವೆ? 'ತಾಮ್ರದ ದುಡ್ಡು ತಾಯಿ-ಮಕ್ಕಳನ್ನು ಕೆಡಿಸಿತು' ಎಂಬುದು ಹಿಂದಿನ ಅಸಂಸ್ಕೃತ ಕಾಲದ ಗಾದೆಯ ಮಾತು; ಇಂದು ಅದೇ ತಾಮ್ರದ ದುಡ್ಡು ಚುನಾವಣೆಯಂತಹ ಸ್ಪರ್ಧೆಯ ಕಾಲದಲ್ಲಿ ಕೂಡ ಜಾತಿಜಾತಿಗಳನ್ನು ಕೂಡಿಸಿದೆ. ಅದಕ್ಕೆಂದೇ ನಾನು ಪ್ರಾರಂಭದಲ್ಲಿ ಹೇಳಿದೆ, 'ಮ್ಯುನಿಸಿಪಾಲಿಟಿ' ಎಂಬ ಮಾತಿಗಾಗಿ ನನಗೆ ಹೆಮ್ಮೆ ಎಂದು. ಮತ್ತೊಮ್ಮೆ ಹೇಳುವೆ, 'ನಮ್ಮೂರು' ಎಂಬುದಕ್ಕಾಗಿ ನನಗೆ ಏನೂ ಹೆಮ್ಮೆ ಇಲ್ಲ; ಬೇಕಾದರೆ ಇದನ್ನು ಓದಿದ ಮೇಲೂ 'ನಮ್ಮೂರಿ'ಗೆ ನಿಮ್ಮೂರು ಎಂದುಕೊಂಡರೆ ನನಗೇನೂ ಖೇದವಿಲ್ಲ. ಆದರೆ ಒಂದು ಮಾತನ್ನು ಮಾತ್ರ ನೀವು ಎಂದಿಗೂ ಮರೆಯಲಾಗದು. ಆ ಮಾತು

ಕೊನೆಯದು :— ನಮ್ಮ ಹುರಿಯಾಳುಗಳು ದೇಶಭಕ್ತರು, ಸತ್ಯಪ್ರಿಯರು, ತತ್ತ್ವಾವೇಶಭರಿತರು; ನಮ್ಮ ಮತದಾರರು ಕೋಶಭುಕ್ತರು, ಸತ್ತಪ್ರಿಯರು, ಹತ್ಯಾವೇಶಭರಿತರು. ಒಟ್ಟಾರೆ, ಇಬ್ಬರೂ ಅತ್ಯಂತ ಸುಶಿಕ್ಷಿತರು. ಇಲ್ಲವಾದರೆ ಹೆಮ್ಮೆ ಪಡುವಂತಹ ವಿಷಯವಾಗುತ್ತಿದ್ದಿತೆ ನಮ್ಮೂರ (ಅರ್ಥಾತ್ ನಿಮ್ಮೂರ) ಮ್ಯುನಿಸಿಪಾಲಿಟಿ ?

(೫೫ನೆಯ ಪುಟದಿಂದ ಮುಂದುವರಿದದ್ದು)

ಉತ್ತರಗಳು ಕೇವಲ ಕನಸುಗಾರರ ವೈಚಿತ್ರ್ಯಗಳಲ್ಲ. ಉಪವಾಸದಿಂದಲೂ ಉಪಜೀವಿಸಬಹುದೆಂದು ಹಿಂದೊಮ್ಮೆ ಲೇಖನದಲ್ಲಿ ಸಮರ್ಥಿಸಿದ್ದೆ. ನಾವು ತಿನ್ನುವ ಆಹಾರ, ಉಡುವ ಬಟ್ಟೆ, ತೊಡುವ ಆಭರಣ, ಇರಲಿಕ್ಕೆ ಕಟ್ಟುವ ಮನೆ ಮುಂತಾದ ಕಾರ್ಯಗಳಲ್ಲಿ ನಾವು ಇಂದು ಮಿತಿಮೀರಿ ಹಾಳುಮಾಡುತ್ತಿರುವೆವು. ನೂರು ಜನ ಬಡವರು ತಿನ್ನುವ ಆಹಾರವನ್ನು ಮೂರು ಜನ "ನಾಗರಿಕ"ರು ಇಂದು ತಿಂದು ಬಳಲುತ್ತಿರುವರು! ಅಷ್ಟೇ ಬಡವರು ತೊಡಬಹುದಾದ ಬಟ್ಟೆಯನ್ನು ಒರ್ವ "ನಾಗರಿಕ" ಮಾತ್ರ ತೊಟ್ಟು ತಿರುಗುತ್ತಿರುವನು. ಇರಲಿ [illegible]ಕಟ್ಟಿಸುವ ನಮ್ಮ ಇಂದಿನ ಅನೇಕ ಮನೆಗಳಿಂದ ಹೊರ [illegible]ನಾವೆಲ್ಲ ಹುಳುಗಳಂತೆ ಕಾಣಿಸುತ್ತೇವೆಂದು ಒರ್ವ ತತ್ತ್ವದರ್ಶಿ ವರ್ಣಿಸಿದ್ದಾನೆ. ಇದೂ ನಿಜವೇ! ಆದೇಕೆ ಅಷ್ಟು ದೊಡ್ಡ ಮನೆಗಳು ಬೇಕು ನಮಗೆ? "ಮಿಸುಪ ಹಯಶಾಲೆ, ಗಜಶಾಲೆಯೋಲಗಶಾಲೆ ಪೊಸಗೀತಶಾಲೆಯೊಪ್ಪುವ ಶಯನಶಾಲೆ...." ಇತ್ಯಾದಿ ವರ್ಣಿಸಿದ ಕವಿಯು ನಮ್ಮ ಇಂದಿನ ಮನೆಗಳನ್ನೂ ಹೀಗೆಯೇ ವರ್ಣಿಸಬಹುದಾಗಿದೆ. ಮೇಲೆ ಹೇಳಿದ ತತ್ತ್ವದರ್ಶಿ ಬರೆಯುತ್ತಾನೆ: "The houses are so vast and magnificent that the men and women in habiting them seem to be only vermin which infest the houses."

ಸರಿ! ಈ ಹಾಳಿನ ಪ್ರಸಂಗವು ಗಹನವಾದದ್ದು. ಎಲ್ಲಿ ನೋಡಿದರೂ ಈ ಹಾಳಿನ ಹಾವಳಿ ತಪ್ಪಿದ್ದಲ್ಲ. ಸಮಯ ಸಿಕ್ಕಂತೆ ಪುನಃ ಈ ಹಾವಳಿಯ ಪರಿಣಾಮ ವರ್ಣಿಸುವೆ.

ಸಿಡುಬು ಅಥವಾ ಮೈಲಿ

(ಉತ್ತರಕ್ಕೆ ಪ್ರತ್ಯುತ್ತರ)

ಶ್ರೀ. ಡಾ. ಎಚ್. ಪಿ. ಕುಲಕರ್ಣಿ, ಎಂ. ಬಿ. ಬಿ. ಎಸ್. ಅಥಣಿ

ಸಿಡುಬಿನ ನಿವಾರಣೋಪಾಯವೆಂದು ಮೈಲಿ ಚುಚ್ಚುವುದರ ಸಂಶೋಧನೆ ಯಾವ ದೇಶದಲ್ಲಿ ಆಗಿ ಆ ಪದ್ಧತಿ ಜಗತ್ತಿನಲ್ಲೆಲ್ಲ ಹಬ್ಬಿತೊ, ಅದೇ ದೇಶದಲ್ಲಿಯೆ ಇಂದು ಅದಕ್ಕೆ ಅಷ್ಟೊಂದು ಮಹತ್ತ್ವ ಉಳಿದಿಲ್ಲ. ಇದಕ್ಕೆ ಕಾರಣವೇನಿರಬಹುದು ?

★

'ಸಿಡುಬು ಅಥವಾ ಮೈಲಿ' ಈ ತಲೆಬರೆಹದ ಕೆಳಗೆ ಜೂನ್ ತಿಂಗಳ 'ಜಯಂತಿ'ಯಲ್ಲಿ ನಾವು ಬರೆದ ಲೇಖನಕ್ಕಾಗಿ, ಶ್ರೀ. **ಬಿದರಕುಂದಿ ವ್ಯಾಕ್ಸಿನೇಟರ್** ಅವರು ಜಯಂತಿಯಲ್ಲಿ ಒಂದು ಲೇಖನ ಬರೆದು ನಮ್ಮ ಮೇಲೆ ಹರಿಹಾಯ್ದಿದ್ದಾರೆ. ಅವರು ತಮ್ಮ ಲೇಖನದಲ್ಲಿ, ನಾನು ಬರೆದ ಲೇಖನದಿಂದ ಜನರಲ್ಲಿ ಭ್ರಮೆಯನ್ನುಂಟುಮಾಡಿರುವೆನೆಂದು ಬರೆದು, 'ಅಜ್ಞಾನಿಯಾದ' ನನ್ನಿಂದ ಬರೆಯಲ್ಪಟ್ಟ ಲೇಖನದ ದುಷ್ಪರಿಣಾಮವು ಜನಸಾಮಾನ್ಯರ ಮೇಲೆ ಆಗಬಾರದೆಂಬ ಅಂತಃಕರಣದಿಂದ (?) ನನ್ನ ಲೇಖನವನ್ನು ಟೀಕಿಸಿ, ಜನರಲ್ಲಿ ಆದ ಮತ್ತು ಆಗಬಹುದಾದ ಭ್ರಮೆಯನ್ನು ತಡೆಯಲು ಯತ್ನಿಸಿದ್ದಾರೆ. ಅದರಂತೆಯೆ ವೈದ್ಯ ಮತ್ತು ಡಾಕ್ಟರರ ಸಲುವಾಗಿ ತಾವೇ ವಕೀಲಿಯನ್ನು ಹಿಡಿದು, ಅವರಿಗೆ ನಮ್ಮ ಲೇಖನದಿಂದಾದ ವ್ಯಸನವನ್ನು ತಡೆಯಲು ಯತ್ನಿಸಿದ್ದಾರೆ.

ನನ್ನ ಲೇಖನವನ್ನು ಸಂಪೂರ್ಣವಾಗಿ ಓದದೆ, 'ತಾವು ವ್ಯಾಕ್ಸಿನೇಟರರು, ವ್ಯಾಕ್ಸಿನೇಶನ್ ವಿಷಯದಲ್ಲಿ ತಾವು ಅಂದದ್ದೇ ಪ್ರಮಾಣ, ಉಳಿದವರು ಎಷ್ಟೇ ಶಾಸ್ತ್ರೀಯ ರೀತಿಯಿಂದ ಅದನ್ನು ಅಭ್ಯಾಸಿಸಿದರೂ ಅವರಿಗೆ ಅದರ ಜ್ಞಾನವಾಗಲು ಸಾಧ್ಯವಿಲ್ಲ' ಎಂಬ ಭಾವನೆಯಿಂದ ತಮ್ಮ ಅಪೂರ್ತಿಜ್ಞಾನದ ಅಭ್ರಾಟವನ್ನೆ ಅವರು ಎಬ್ಬಿಸಿದ್ದಾರೆ.

ಬಿದರಕುಂದಿರಾಯರು, ೨-೩ ತಿಂಗಳು **ಹಾಫಕಿನ್ಸ್ ಇನ್‌ಸ್ಟಿಟ್ಯೂಟ್**‌ನಲ್ಲಿ ಇದ್ದು, ಚುಚ್ಚುವುದು ಹೇಗೆ ? ರಜಿಸ್ಟರ್ ಇಡುವುದು ಹೇಗೆ ?—ಎಂಬ ಮಾತುಗಳನ್ನು ಕಲಿತು, ಮುಂದೆ ಸರಕಾರದಿಂದ ಕಳಿಸಲ್ಪಟ್ಟ 'ಸೂಚನೆ'ಗಳನ್ನು ಓದಿ, ತಮ್ಮ 'ಮೈಲಿ' ವಿಷಯದ ಜ್ಞಾನವನ್ನು ಹೆಚ್ಚಿಸಿಕೊಂಡಿರಬಹುದು ! ಆದರೆ ನಾನು **ಎಮ್. ಬಿ. ಬಿ. ಎಸ್.** ಇದ್ದು, '**ಮೈಲಿ**' ವಿಷಯದ ಎಲ್ಲ ಸಂಗತಿಗಳನ್ನೂ ಸಂಪೂರ್ಣವಾಗಿ ಅಭ್ಯಾಸಮಾಡಿ, ಈ ಹೊತ್ತಿನ ವರೆಗಾದ ಶೋಧನೆಗಳನ್ನು ಅವಲೋಕಿಸಿ, ಅವುಗಳಲ್ಲಿ ಹೆಚ್ಚು ಗುಣಕಾರಿಯಾವುದು, ಯಾವುದನ್ನು ತ್ರಾಸ-ತಡೆಗಳಿಲ್ಲದೆ ಸಹಜವಾಗಿ ಎಲ್ಲರಿಗೂ ಕೊಡಲು ಬರುವುದು, .. ಇವೇ ಮೊದಲಾದ ಮಾತುಗಳನ್ನು ತಿಳಿದುಕೊಳ್ಳಲು ಪ್ರಯತ್ನ ನಡೆಯಿಸಿದಾಗ, ಕಳೆದ ಎಳೆಂಟು ವರ್ಷದಿಂದಲೂ, ಈ ಸಿಡುಬಿನಲ್ಲಿ Malandrinum ನ ಚೀಟಿಗಳನ್ನು ನಾನು ಹಂಚುತ್ತೇನೆ ; ಮತ್ತು ೧೯೪೦ ರಲ್ಲಿ ನೂರಾರು ಚೀಟಿಗಳನ್ನು ಕೊಟ್ಟಿದ್ದೇನೆ. ಇವುಗಳನ್ನು ತೆಗೆದುಕೊಂಡವರು Primary Vaccination (ಮೊದಲು ಮೈಲಿ ಚುಚ್ಚುವುದು) ಆಗದವರು. ಇವರಲ್ಲಿ ೬ ತಿಂಗಳ ಕೂಸಿನಿಂದ ೮ ವರ್ಷದ ವರೆಗಿನ ಹುಡುಗರೇ ಹೆಚ್ಚಾಗಿದ್ದರು. ನನ್ನ ಚೀಟಿಯಿಂದ 'ಹಾಗಾಯಿತು ಹೀಗಾಯಿತು' ಎಂದು ಯಾರಕಡೆಯಿಂದಲೂ ತಕರಾರುಗಳು ಬರಲಿಲ್ಲ. ಇವುಗಳನ್ನೆಲ್ಲ ಅವಲೋಕಿಸಿ ಹೊಮಿಯೋಪಥಿ ಪದ್ಧತಿಯನ್ನು ನಾನು ಸಂಪೂರ್ಣವಾಗಿ ಅಭ್ಯಾಸಿಸಿ, ಅದರ ಸಲುವಾಗಿ ಬರೆಯಲು ಹೊರಟಿದ್ದೇನೆ.

ಔಷಧೀ ಪ್ರಪಂಚದಲ್ಲಿ ಪ್ರಗತಿ, ಜನಸಾಮಾನ್ಯರ ಹಿತ ಇವೇ ನನ್ನ ಲೇಖನದ ಉದ್ದೇಶ ಹೊರತು, ಶ್ರೀ. ಬಿದರಕುಂದಿಯವರು ಚುಚ್ಚಿ ನುಡಿದಂತೆ 'ಜಾಹೀರಾತು ಬೀರುವುದಲ್ಲ'. " ಈ ಔಷಧದ ಪುಡಿಗಳಿಂದ ಬೇನೆಯನ್ನು ಪ್ರತಿಬಂಧಿಸಲುಬಹುದು (prevention) " ಈ ವಾಕ್ಯದಲ್ಲಿಯ '**ಬಹುದು**' ಕ್ರಿಯಾಪದವು ಶ್ರೀ. ಬಿದರಕುಂದಿರಾಯರನ್ನು ಬಹಳ ಬೆದರಿಸಿದೆಯೆಂದು ತೋರುವುದು. ಅಲೋಪಥಿ ಮತ್ತು ಹೋಮಿಯೋಪಥಿ ಎರಡೂ ಶಾಸ್ತ್ರಗಳಲ್ಲಿ ಸಿಡುಬಿನ ಮೇಲೆ ಇದ್ದ ಉಪಾಯಗಳ ತುಲನಾತ್ಮಕ ವಿಮರ್ಶೆಯನ್ನು ಮಾಡುವಾಗ, ಮೇಲೆ ಬರೆದ 'ಬಹುದು' ಈ ಕ್ರಿಯಾಪದವು ಉಪಯೋಗಿಸಲ್ಪಟ್ಟಿದೆ. ಅದರ ಅರ್ಥವು ಸಂಶಯಾರ್ಥದಲ್ಲಿ ಇರದೆ, ಪ್ರತಿಬಂಧಿಸುವ ಉಪಾಯಗಳಾದರೂ ಹೋಮಿಯೋಪಥಿ ಶಾಸ್ತ್ರದಲ್ಲಿ ಇವೆ—ಎಂಬುದನ್ನು ಸೂಚಿಸಲು ಉಪಯೋಗಿಸಿದುದಾಗಿದೆ. ಆ ಭಾಗವನ್ನು ಇಡಿಯಾಗಿ ಓದಿದ... ಈ ಅರ್ಥವು ಸ್ಪಷ್ಟವಿದ್ದುದು ಕಂಡುಬಾರದಿರದು. ಸಂ...

ಬೇರೆಮಾಡಿ, ವಿಂಗಡಿಸಿ ಓದಲು ಪ್ರಯತ್ನಪಟ್ಟರೆ, ನಾವು ಹೇಳಲು ಹೊರಟ ಅರ್ಥವು ಹೊರಡಲಿಕ್ಕಿಲ್ಲ. ಆದುದರಿಂದ ಆ ಭಾಗವನ್ನು ಪುನಃ ಅದೇ ಸಂದರ್ಭದಲ್ಲಿ ಓದಬೇಕಾಗಿ ಸೂಚಿಸುತ್ತೇವೆ.

“ಅನುಭವದ ವಿನಾ ಒಂದು ವಿಶಿಷ್ಟ ಸಿದ್ಧಾಂತವನ್ನು ಮುಟ್ಟುವುದು ಶಕ್ಯವಿಲ್ಲ. ಅದಕ್ಕೆ ಎಷ್ಟೋ ಕಾಲ ಆಯುಷ್ಯವನ್ನು ಸವೆಯಿಸಬೇಕಾಗುವುದು; ಅದನ್ನು ಬಿಟ್ಟು ಲೇಖಕ ಡಾಕ್ಟರರು ಹೋಮಿಯೋಪಥಿ ಅಲೋಪಥಿಗಳ ತಜ್ಞರಿದ್ದು, ಪರೆಗಲ್ಲಿಗೆ ತಿಕ್ಕದೆ, ಬರಿ ಜಾಹೀರಾತು ಬೀರಿದವರಂತೆ ಬರೆದದ್ದನ್ನು ಓದಿ ವ್ಯಸನವಾಗುತ್ತದೆ’ ಎಂದು ಶ್ರೀ. ಬಿದರಕುಂದಿ ರಾಯರು ಬರೆದಿರುತ್ತಾರೆ. ಆದರೆ ನನ್ನ ಲೇಖನದಲ್ಲಿಯ ಆಯೋವಾ ನಗರದ ವ್ಯಾಜ್ಯವು ತಜ್ಞರ ನಡುವೆಯೆ ಆದದ್ದು. ಅಲ್ಲಿಯ ಡಾಕ್ಟರರು ಜ್ಞಾನ ಸಂಪಾದಿಸಿ, ತಮ್ಮ ತಮ್ಮ ಶಾಸ್ತ್ರಗಳಲ್ಲಿ ಪೂರ್ಣ ಅನುಭವವನ್ನು ಪಡೆದವರು. ಅಂತಹವರಲ್ಲಿ ಅಲೋಪಥಿ ಡಾಕ್ಟರನು, ಹೋಮಿಯೋಪಥಿ ಉಪಚಾರದಿಂದ ರೋಗಿಗಳು ತೀವ್ರ ಗುಣ ಹೊಂದಿದ್ದನ್ನು ಕಣ್ಣಾರೆ ಕಂಡರೂ ಕೂಡ, ‘ತನ್ನ ಪದ್ಧತಿಯೇ ಶ್ರೇಷ್ಠ, ಉಳಿದವರದು ಶಾಸ್ತ್ರಸಮ್ಮತವಲ್ಲದ್ದು?’ ಎಂದು ತಿಳಿದುಕೊಂಡು, ಅಲ್ಲಿ ಉಪಚಾರಮಾಡಿದ ಹೋಮಿಯೋಪಥಿ ಡಾಕ್ಟರನ ಮೇಲೆ ವ್ಯಾಜ್ಯ ಹೂಡಿದನು. ಕೋರ್ಟಿನ ಮುಂದೆ ಇಬ್ಬರೂ ಡಾಕ್ಟರರು ತಮ್ಮ ಶಾಸ್ತ್ರಗಳ ಹೆಚ್ಚಳವನ್ನು ಸಿದ್ಧಪಡಿಸಲು ಪ್ರಯತ್ನಿಸಿದರು. ಆದರೆ ಈ ‘ಸ್ತುತ್ಯ’ ಕಾರ್ಯದಲ್ಲಿ ಆತನಿಗೆ ಯಶಸ್ಸು ದೊರೆಯಲಿಲ್ಲ. ‘ಹೋಮಿಯೋಪಥಿ ಶಾಸ್ತ್ರದ ಪ್ರಕಾರ ಮೈಲೀ ಬೇನೆಯನ್ನು ಉಪಚಾರ ಮಾಡಲು ಬರುವುದು, ಮತ್ತು ಆ ಪದ್ಧತಿಗನುಸರಿಸಿ ಉಪಚಾರ ಹೊಂದಿದವರೇ ಸಾವಿನ ತುತ್ತಿಗೆ ಅಥವಾ ವಿದ್ರೂಪತನದ ಬಾಳಿಗೆ ಈಡಾಗಲಿಲ್ಲ’ ಎಂಬ ತೀರ್ಪನ್ನು ಕೋರ್ಟಿನವರು ಕೊಟ್ಟರು. ‘ಆಯೋವಾ’ದ ಹೋಮಿಯೋಪಥಿ ಡಾಕ್ಟರನು ಉಪಚರಿಸಿದ ೩೦೦ ಜನರು Primary Vaccination (ಮೊದಲು ಮೈಲಿ ಚುಚ್ಚುವುದು) ಆಗದವರು.

ಕೆಳಗೆ ಕೊಟ್ಟ ಮಹನೀಯರ ಅರ್ಥಾತ್ ನಿಷ್ಣಾತ ಡಾಕ್ಟರರ ಅನುಭವಗಳನ್ನು ಓದಿದರೆ, ಈ ಪದ್ಧತಿಯು ಈಗಿನವರೆಗೆ ಕೊಟ್ಟ ಸೌಕರ್ಯದ ಮಟ್ಟಲು ತಿಳಿಯುವುದು. ‘ಹೋಮಿಯೋಪಥಿಕ್ ರೆಕಾರ್ಡರ್’ನಲ್ಲಿ A. L. Marey ಎಂಬವರು ಕೆಳಗಿನಂತೆ ಬರೆದಿದ್ದಾರೆ:

“In a family of five childern from six to seventeen years of age only the eldest was vaccinated. All except the eldest were given Malandrinum. None of the four took small-pox. The eldest took small-pox.”

[illegible] Bryant ಎಂಬ ಮತ್ತೊಬ್ಬರು ಹೀಗೆ ಬರೆದಿರುವರು :— [illegible] family of eight persons none of whom had been [illegible] the eldest boy took small-pox. One of his brothers slept with him and broke out all over; the mother expecting to be confined in a few days, we sent her away and I at once put the rest of the family on Malandrinum; none of them took small-pox.”

ಅದರಂತೆ ಡಾಕ್ಟರ್ Gurency ಎಂಬ ಪ್ರಸಿದ್ಧ ಹೋಮಿಯೋಪಾಥರ ಮತವಾದರೂ ‘Malandrinum ವು ಸಿಡುಬನ್ನು ತರಗೊಡುವುದಿಲ್ಲ’ ಎಂದಿದೆ. “Malandrinum has been given to members of unvaccinated childern who were directly exposed to the contagin of variola (small-pox) and they have invariably escaped the disease.” ಇಷ್ಟೇ ಏಕೆ? ವ್ಯಾಕ್ಸಿನೇಶನ್ ಪದ್ಧತಿಯಿಂದ ಮೈಲಿ ಚುಚ್ಚಿಸಿಕೊಳ್ಳುವುದಕ್ಕೆ ಇಂಗ್ಲೆಂಡಿನಲ್ಲಿ ಒತ್ತಾಯವಿದೆ; ಆದರೆ ಅಲ್ಲಿಯ ಕೆಲವರು ಈ ಪದ್ಧತಿಯಲ್ಲಿಯ ದುಷ್ಪರಿಣಾಮಗಳನ್ನು ಕಂಡು ಹಿಡಿದು, ಒತ್ತಾಯದಿಂದ ಚುಚ್ಚುವ ಆ ಕಾಯಿದೆಯನ್ನು ಕಿತ್ತೊಗೆಯಲು ‘National Anti Vaccination League’ (ನ್ಯಾಶನಲ್ ಅಂಟಿ ವ್ಯಾಕ್ಸಿನೇಶನ್ ಲೀಗ್) ವನ್ನು ಸ್ಥಾಪಿಸಿ, ಅದರ ಮುಖಾಂತರ ಮತ್ತು ‘Vaccination Inquirer’ (ವ್ಯಾಕ್ಸಿನೇಶನ್ ಇನ್‌ಕ್ವಾಯರರ್) ಎಂಬ ಪತ್ರಿಕೆಯ ಮುಖಾಂತರ, ವ್ಯಾಕ್ಸಿನೇಶನ್‌ನ ಸಲುವಾಗಿ ಸಪ್ರಮಾಣ ಟೀಕೆಯನ್ನು ಪ್ರಾರಂಭಿಸಿ, ಒತ್ತಾಯದ್ದಾಗಿದ್ದ ಆ ಕಾಯಿದೆಯನ್ನು ರದ್ದುಪಡಿಸಿ ವಿಜಯಶಾಲಿಗಳಾದರು. ಈಗ ಇಂಗ್ಲೆಂಡಿನಲ್ಲಿ ಮೈಲೀಬೇನೆಗಾಗಿ ಯಾವುದೇ ಪದ್ಧತಿಯಿಂದ ಉಪಚಾರ ಹೊಂದಬಹುದು. ಈ ಸಂದರ್ಭದಲ್ಲಿ ಜುಲೈ ೧೯೪೭ರ ‘ಹೋಮಿಯೊಪಥಿ ರೆಕಾರ್ಡರ್’ನಲ್ಲಿ ಸಂಪಾದಕೀಯ ಟಿಪ್ಪಣಿಯಲ್ಲಿ ಹೀಗೆ ಬರೆದುದನ್ನು ನೋಡಬೇಕು.

“Great Britain still recognises ‘conscience clause’ in respect to artificial immunisation of her armed forces and civilian population whether soldier or plain citizen, one has the privilege of refusing vaccination and serum prophylaxis without being classed as a law-breaker or a menace to the safety of the public. ...... How does this contrast with the ‘blackest blot’ on the pages of ‘United States’ history, when in 1917 some of her own soldiers were ‘sentenced to 20 years of imprisonment’ because they refused to be subjected to the routine innoculations prescribed by the Army Medical Board.” ಯಾವದೇಶದಿಂದ ‘ಜೆನರ್’ನ ಶೋಧನೆಯು ಜಗತ್ತಿನಲ್ಲಿ ಹಬ್ಬಿತೊ, ಆ ದೇಶದಲ್ಲಿಯೇ ಈಗ ಆ ಪದ್ಧತಿಗೆ ಅಷ್ಟೊಂದು ಮಹತ್ವ ಉಳಿದಿಲ್ಲ. ಇದರ ಕಾರಣವೇನೆಂದರೆ, ಶಾಸ್ತ್ರಾಭ್ಯಾಸವು ಮುಂದುವರಿದು, ಜೆನ್ನರನ ಔಷಧಕ್ಕಿಂತಲೂ ಪರಿಣಾಮಕಾರಿಯಾದುವುಗಳನ್ನು ಶೋಧಿಸಿರುತ್ತಾರೆ. ಅವುಗಳ ಉಪಯೋಗ

ದಿಂದ ಬೇನೆಯು ವಾಸಿಯಾಗುವದಲ್ಲದೆ, ಔಷಧದ ಸತ್ಪರಿಣಾಮ ದಿಂದ (Sequel) ಇನ್ನಿತರ ಬೇನೆ-ಬೇನೆ ಸರಿಕೆಗಳು ಬರುವುದಿಲ್ಲ.

ನಾವು ನಮ್ಮ ಮೊದಲಿನ ಲೇಖನದಲ್ಲಿ ಹೇಳಿದಂತೆ, ಹೋಮಿಯೋಪಥಿ ಔಷಧವನ್ನು ತೆಗೆದುಕೊಳ್ಳುವುದರಲ್ಲಿ ನೋವು-ಸರಳಿಕೆಗಳೇನೂ ಇಲ್ಲ. ಗುಣದಲ್ಲಿ ವ್ಯಾಕ್ಸಿನೇಶನ್‌ಗಿಂತಲೂ ಶ್ರೇಷ್ಠವಾದದ್ದು. ಆಬಾಲವೃದ್ಧರಿಗೂ ರುಚಿಸುವುದು. ಈ ಸಂದರ್ಭದಲ್ಲಿ ಡಾಕ್ಟರ್ K. A. McLaren. ಎಂಬವರು ಹೋಮಿಯೋಪಥಿ ಪದ್ಧತಿಯ ಪ್ರಕಾರ ಔಷಧವನ್ನು ಕೊಟ್ಟು ತಾವು ನೋಡಿದುದನ್ನು '**ಹೋಮಿಯೋಪಥಿ**' ಎಂಬ ಪತ್ರಿಕೆಯಲ್ಲಿ ಕೆಳಗಿನಂತೆ ಬರೆದದ್ದನ್ನು ಓದಿದಲ್ಲಿ ತಿಳಿಯುವುದು :

"Variolinum will cure small-pox. I have tried it out; I was called to see a man suffering from small-pox, and he had three childern. The childern had never been vaccinated and they were exposed to small-pox. I gave them all veriolinum. The eldest had small-pox-pustules without any pus in them, and only one day of temperature. The second child had one day of temperature and one or two fleeting nodules or pink-spots, the third child did not have any thing at all." ಈ ಪದ್ಧತಿಯ ಪ್ರಕಾರ ಔಷಧೋಪಚಾರ ಹೊಂದಿದಲ್ಲಿ, ಅಲೋಪಥಿ ಔಷಧದಿಂದಾಗುವ ದುಷ್ಪರಿಣಾಮಗಳೇನೂ ಇಲ್ಲ. ಈ ದುಷ್ಪರಿಣಾಮಗಳಾವುವು ಎಂಬುದನ್ನು ತಿಳಿದುಕೊಳ್ಳಲು ಶ್ರೀ. ಓದರಕಂದಿರಾಯರು ಕುತೂಹಲಿಗಳಾಗಿದ್ದಾರೆ. ಆದರೆ ಅವರಿಗೆ ವ್ಯಾಕ್ಸಿನೇಶನಿನ ಜ್ಞಾನದ ಕೂಡ, ಡಾಕ್ಟರನ ಜ್ಞಾನವಾದರೂ ಇದ್ದಿದ್ದರೆ, ಅವರು ಈ ಪ್ರಶ್ನೆಯನ್ನೇ ಎತ್ತುತ್ತಿದ್ದಿಲ್ಲ. ವ್ಯಾಕ್ಸಿನೇಟರನು ತನ್ನ ಚುಚ್ಚುವಿಕೆಯನ್ನು ಮುಗಿಸಿ ಪಾರಾದ ಮೇಲೆಯೆ ಈ ದುಷ್ಪರಿಣಾಮಗಳು ತೋರಲಾರಂಭಿಸುವುವು. ಆಕಾಲಕ್ಕೆ ಉಪಚರಿಸುವವನು ಡಾಕ್ಟರನು; ಚುಚ್ಚಿದ ವ್ಯಾಕ್ಸಿನೇಟರ್ ಅಲ್ಲ. ಮುಖ್ಯವಾಗಿ ಈ ವ್ಯಾಕ್ಸಿ-ನೇಶನಿನ ಪರಿಣಾಮವು ತ್ವಗ್ರೋಗಗಳಲ್ಲಿ ಉದ್ಭವಿಸುತ್ತದೆ. ಇದರಂತೆ ಇನ್ನಿತರ ಬೇನೆ-ಬೇಸರಿಕೆಗಳಾದರೂ ಹೆಚ್ಚುವುವು. ಮೈ-ಯೆಲ್ಲಾ ಹುರುಕು ಕಜ್ಜಿಗಳಾಗುವುವು. ಇಲ್ಲದಿದ್ದರೆ 'ಪೈಸು' ಗಳಾಗುವುವು, ತದ್ದುಗಳಾಗುವುವು. ತಲೆಯಲ್ಲಿ ತದ್ದಾಗಿ ರಸವಾಡಿ, ಕೂದಲು ಉದುರುವುವು. ಯಾವಾಗಲೂ ನೆಗಡಿಯಾದಂತೆಯಾಗಿ, ಮೂಗಿನಿಂದ ಹಳದಿಬಣ್ಣದ ಸುಂಬಳವು ಸೋರುತ್ತುವುದು. ಹುಡುಗರು ಸೊರಗುತ್ತ ಹೋಗುವುವು. ದವಿಮ್ಮನ ವಿಕಾರವಾದರೂ ಆಗುವುದು. ಆದರಂತೆಯೆ ಮಿದುಳಿನ ರೋಗವಾದರೂ ಬಾರದೆ ಇರಲಾರದು (Enceppititis) J. Compton Burnett M. D. ಯವರು 'Diseases of the skin' ಎಂಬ ತಮ್ಮ ಪುಸ್ತಕದಲ್ಲಿ ಕೆಳಗಿನಂತೆ ಹೇಳಿದ್ದಾರೆ:—

"Although I hold that vaccination, in due dose protects, on the homeo prophylactic principle, from small pox, still it is nevertheless a fruitful source of skin diseases." ಗ್ಲೀಸರೀನೇಟೆಡ್ ವ್ಯಾಕ್ಸಿನೇಶನಿನ ದುಷ್ಪರಿಣಾಮಗಳನ್ನು ಹೋಗಲಾಡಿಸಲು ಬಹು ಪ್ರಯತ್ನಪಟ್ಟು ಎಲ್ಲ ಔಷಧಗಳಲ್ಲಿ Malandrinum ಯ ಗುಣಕಾರಿಯು ಎಂದು ಕೆಳಗೆ ಹೇಳಿದ ಡಾಕ್ಟರನು ಕಂಡುಹಿಡಿದಿದ್ದಾನೆ. "Felleger of Philadelphia had more extensive experience in treating variola and effects of vaccination. He had given much thought, money, and years of study to the subject and came to rely upon malandrinum as a prophylactic for variola." ನಮ್ಮ ದೇಶದಲ್ಲಾದರೂ ವೈಲಿ ಚುಚ್ಚುವುದು ಒತ್ತಾಯದ್ದಾಗಿದೆ. ಆದರ ಆಧಾರದ ಮೇಲೆ ಎಷ್ಟು ಜೋರಿನಿಂದ ಆದರ ಉಪಯೋಗದ ಸಲುವಾಗಿ ಶ್ರೀ. ಓದರಕಂದಿಯವರು ಬರೆಯಲು ಯತ್ನಿಸಿರುವರು. ಆ ಒತ್ತಾಯವನ್ನು ತೆಗೆದರೆ ಅವರು ಹೇಳಿದ ಹೋದ ಮಹತಿಯು ಆ ಔಷಧದಲ್ಲಿ ಇದೆಯೊ ಅಥವಾ ಇಲ್ಲ ಯುವುದೊ ಎಂಬುದು ತಿಳಿಯುವುದು. ಅವರಿಗೆ ಇಚ್ಛೆಯಿದ್ದರೆ Glycerinated vaccine (ಗ್ಲೀಸರಿನೇಟೆಡ್ ವ್ಯಾಕ್ಸಿನ್) ಸಲುವಾಗಿ George Bernard Shaw (ಜಾರ್ಜ್ ಬರ್ನಾರ್ಡ್ ಶಾ)ರವರ Doctors Dilemma(ಡಾಕ್ಟರ್ಸ್ ಡೈಲೇಮಾ)ಎಂಬ ನಾಟಕಕ್ಕೆ ಬರೆದ ಪ್ರಸ್ತಾವನೆಯನ್ನು ಪೂರ್ಣವಾಗಿ ಓದಬೇಕು. ಇನ್ನು ನಾವು ಪದೇಪದೇ ಹೇಳುತ್ತಿದ್ದ 'ಹೋಮಿಯೋಪಥಿಕ್ ರೆಕಾರ್ಡರ್' ಎಂಬ ಪತ್ರಿಕೆಯನ್ನು ಸಂಬಳ ಆಷ್ಟೊಂದು ಹವಣಿಸಲಿಕ್ಕಿಲ್ಲ. ಆದರೆ ಆ ಪತ್ರಿಕೆಯು ಜಗತ್ತಿನಲ್ಲಿ ಹೋಮಿಯೋಪಥಿ ವಿಷಯದಲ್ಲಿ ಶ್ರೇಷ್ಠವಾದದ್ದು. ಆದರಲ್ಲಿ ಅಲೋಪಥಿ ಡಿಗ್ರಿಗಳನ್ನು ಗಳಿಸಿ ಮುಂದೆ ಹೋಮಿಯೋಪಥಿ ಅಭ್ಯಾಸಮಾಡಿ, ಔಷಧೀ ಪ್ರಪಂಚದಲ್ಲಿ ತಾವು ಪಡೆದ ಅನುಭವಗಳನ್ನು ಆದರಲ್ಲಿ ಬರೆದಿರುತ್ತಾರೆ. ಜಗತ್ತಿನ ಬಹುಭಾಗದಿಂದ ಲೇಖನಗಳು ಆ ಮಾಸಪತ್ರಿಕೆಗೆ

ಶರಣಸಂದೇಶ

(ವಾರಪತ್ರಿಕೆ)

ಸಂಪಾದಕರು: ಶ್ರೀ. ಹರ್ಡೇಕರ್ ಮಂಜಪ್ಪನವರು

ಹಿಂದೂ ಸಂಘಟನೆಯ ಗುರಿಯನ್ನಿಟ್ಟುಕೊಂಡು ಯಶಸ್ವಿಯಾಗಿ ಕಾರ್ಯಮಾಡುತ್ತಿರುವ ಕನ್ನಡ ವೃತ್ತಪತ್ರಿಕೆಯೆಂದರೆ ಇದೊಂದೆ. ದೇಶ-ವಿದೇಶದ ವರ್ತಮಾನಗಳನ್ನೂ ವಿಚಾರಪೂರ್ಣ ಲೇಖನಗಳನ್ನೂ ಇದರಲ್ಲಿ ಓದಬಹುದು.

ವಾರ್ಷಿಕ ವರ್ಗಣಿ ಅಂಚೆಯು ವೆಚ್ಚಸೇರಿ ೩-೦-೦ ಗಳು.

'ಶರಣಸಂದೇಶ'

ಪೋಸ್ಟ್ : ಆಲಮಟ್ಟಿ, ಜಿಲ್ಲಾ ವಿಜಾಪೂರ್

ಬರುತ್ತವೆ. ಪ್ರಸಿದ್ಧಿಸುವ ಮುನ್ನ ಆ ಲೇಖನಗಳನ್ನು International Henmamian Association (ಇಂಟರ್ ನ್ಯಾಶನಲ್ ಹೆನ್‌ಮಾಮಿಯನ್ ಅಸೋಸಿಯೇಶನ್)ಮುಂದೆ ಓದುತ್ತಾರೆ. ಅವರು ಅನುಮತಿಸಿದಲ್ಲಿ ಅದನ್ನು ಪತ್ರಿಕೆಯಲ್ಲಿ ಕೊಡುವುದುಂಟು. ಈ Association (ಅಸೋಸಿಯೇಶನ್) ನಲ್ಲಿ, ಜಗತ್ತಿನಲ್ಲಿಯ ವಿಖ್ಯಾತ ಡಾಕ್ಟರರು ಸದಸ್ಯರಾಗಿರುವರು. ಈಗಿನ ಸಾರ್ವಭೌಮರ (George VI) ಡಾಕ್ಟರರಾದ Sir John Weir ಇವರಾದರೂ ಅದರ ಸದಸ್ಯರಿರುವರು. ಇಂತಹವರೂ ತಮ್ಮ ತಮ್ಮ ಅನುಭವಗಳನ್ನು ಬರೆದು ಕಳಿಸುವರು. ಇವೆಲ್ಲವುಗಳು ನಂಬಲರ್ಹವಲ್ಲವೇ?

"ಇತಿಹಾಸಗಳ ಆಕ್ಷೇಪಣೆಗೆ ಉತ್ತರವು ವಿರುದ್ಧ ಚಳವಳಿಯವರು ಪ್ರತಿಪಾದಿಸಿದ ಇತಿಹಾಸದಲ್ಲಿಯೇ ಸಿಕ್ಕುವುದು. ಇತಿಹಾಸವು ಹಿಂದೆ ಸರಿದಂತೆ ಕಾಲವು ಮುಂದೋಡುತ್ತಿರುವುದು. ನಮಗೆ ಬೇಕಾದುದು ಇಂದಿನ ಸೌಕರ್ಯ" ಹೀಗೆಂದು ಶ್ರೀ. ಬಿದರಕುಂದಿರಾಯರು ನಮ್ಮ ಬರೆವಣಿಗೆಗೆ ಪ್ರತ್ಯುತ್ತರ ಸಿಕ್ಕುವ ಸ್ಥಳವನ್ನು ಹೇಳಿದ್ದಾರೆ. ರಾಯರೆ! ಹೋಮಿಯೋಪಥಿ ಶಾಸ್ತ್ರವು ಅಲೋಪಥಿ ವಿರುದ್ಧ ಚಳವಳಿಯಾಗಿ, ವ್ಯಾಪಾರಿಗಳಂತೆ ಮುಂದೋಡಲು ಪ್ರಯತ್ನಪಡುವುದಿಲ್ಲ. ಅಲೋಪಥಿ ಡಾಕ್ಟರರು, ತಾವು ಕೊಡುವ ಔಷಧಗಳ ಅಪೂರ್ಣತೆಯನ್ನು ಕಂಡು 'ಈ ಪದ್ಧತಿಗಿಂತಲೂ ಹೆಚ್ಚು ಗುಣಕಾರಿಯಾದದ್ದನ್ನು ಕಂಡುಹಿಡಿಯಲೇಬೇಕು' ಎಂಬ ಭಾವನೆಯಿಂದ ಮಾಡಿದ ಅಭ್ಯಾಸದ ಫಲವು 'ಹೋಮಿಯೋಪಥಿ'. ಈ ಶಾಸ್ತ್ರವನ್ನು ಮುಂದೆ ತಂದವರು ಅಥವಾ ಹೆಚ್ಚು ಫಲದಾಯಕ ಮಾಡಿದವರು ಒಂದು ಕಾಲದಲ್ಲಿ ಅಲೋಪಥಿ ಔಷಧ ಕೊಡುವವರೇ ಎಂಬ ಮಾತನ್ನು ಮರೆಯಬಾರದು. ಹೋಮಿಯೋಪಥಿಯು ರೋಗಿಗಳ ರೋಗಗಳನ್ನು ಪೂರ್ಣವಾಗಿ (cure) ಮಾಡುವುದನ್ನು ಕಂಡು, ಅಲೋಪಥಿಯವರಿಗೆ ಸಹನವಾಗದ ಫಲವೇ ಆಯೋವಾ, ವ್ಯಾಜ್ಯ, ಇಂಗ್ಲಂಡಿನಲ್ಲಿ Anti-vaccination League (ಆಂಟಿ ವ್ಯಾಕ್ಸಿನೇಶನ್ ಲೀಗ್) ಸ್ಥಾಪನೆ. ನೀವು ನಿಮ್ಮೂರಲ್ಲಿಯ 'ಹೋಮಿಯೋಪಥಿ" ಡಾಕ್ಟರರ ಕರಿಸುತ್ತಿದ್ದ British Homeopathic Association (ಬ್ರಿಟಿಶ್ ಹೋ. ಪ. ಅಸೋಸಿಯೇಶನ್) ನವರ Homeopathy ಎಂಬ ಮಾಸಪತ್ರಿಕೆಯನ್ನು ಚಾಳಿಸಿದಲ್ಲಿ ನಾವು ಹೇಳುವ ಮಾತು ಮನದಟ್ಟಾಗುವುದು. ಈ ಶಾಸ್ತ್ರವು ತಪ್ಪು ಎನ್ನುವದು ಮಾತ್ರ ಯಾರಿಗೂ ಸಾಧ್ಯವಿಲ್ಲ. ಅದು ಎಲ್ಲ ತರದ ಒರೆಗಲ್ಲಿಗೆ ಹತ್ತಿ, ತನ್ನ ನಿಜತ್ವವನ್ನು ಸಂಪೂರ್ಣವಾಗಿ ತೋರಗೊಟ್ಟಿದೆ.

ಕಾಲವು ಓಡುತ್ತದೆ. ಆದರೆ ಅದು ಓಡುವ ಮುನ್ನ ಆ ವರೆಗೆ ಆದ ಎಲ್ಲ 'ಜ್ಞಾನಶೋಧನೆಗಳನ್ನು' ಹೊತ್ತುಕೊಂಡು, ಅವುಗಳ ಸೌಕರ್ಯವನ್ನು ಜನರು ಹೊಂದಲೆಂಬ ಇಚ್ಛೆಯಿಂದ ತಾನು ಇತ್ತಿತ್ತಲಾಗಿ ಉಂಟುಮಾಡಿದ ಶೋಧನೆಗಳನ್ನು ಜನರಿಗೆ ತಿಳುಹಿ, ನಿರುಪಯೋಗಿಯಾದುವುಗಳನ್ನು ಬಿಟ್ಟುಬಿಟ್ಟಿದ್ದೇನೆಂದು ಸಾರುತ್ತಲೇ ಸಾಗುವುದು. ಅವ್ಯಾಹತವಾಗಿ ಸಾಗುತ್ತಿರುವ ಕಾಲವು ಹೊಸ ಶೋಧನೆಗಳನ್ನೂ ಹೊಸ ಸೌಕರ್ಯಗಳನ್ನೂ 'ಹೊಸಕಾಲದ ಹೊಸಮಕ್ಕಳಂತೆ' ಹರಿಸುತ್ತಲೇ ನಡೆಯುತ್ತದೆ ಎಂಬ ದಿಟವಾದ ಮಾತನ್ನು ಮರೆಯಲಿಕ್ಕಾಗದು. ಇಂದಿನ ಕಾಲದಲ್ಲಿ ನಮಗೆ ಬೇಕಾದುದು ಸೌಕರ್ಯ. ಆ ಸೌಕರ್ಯವನ್ನು ಪೂರಯಿಸುವುದಕ್ಕೆ ಸಾಧ್ಯ 'ಹೋಮಿಯೋಪಥಿ'ಯಿಂದಲೆ ಎಂಬ ಮಾತನ್ನು ಮನಗಾಣಬೇಕು.

ಇನ್ನು "ಹೋಮಿಯೋಪಥಿ ಡಾಕ್ಟರರು ಗದುಗಿನಲ್ಲಿ ಇದ್ದಾರೆ, ಅವರು ಕೂಡ ನಮ್ಮ ಕಡೆಯಿಂದ ವ್ಯಾಕ್ಸಿನೇಶನ್ ಮಾಡಿಸಿಕೊಂಡರು" ಎಂದು ಶ್ರೀ. ಬಿದರಕುಂದಿಯವರು ಹೇಳಿದ್ದಾರೆ. ಹೋಮಿಯೋಪಥಿ ಶಾಸ್ತ್ರವು ಮೇಲೆ ಹೇಳಿದಂತೆ ಸೌಕರ್ಯವನ್ನು ಸಲ್ಲಿಸುವುದು; ಅದರ ಉಪಯೋಗವನ್ನು ಮಾಡಿಕೊಳ್ಳುವುದು ಮಾಡಿಕೊಳ್ಳುವವರ ಸಾಮರ್ಥ್ಯವನ್ನವಲಂಬಿಸಿದೆ. ಅದರ ಉಪಚಾರವನ್ನು ಮಾಡುವುದರಲ್ಲಿ ತಪ್ಪು-ತಡೆಗಳುಂಟಾದರೆ, ಅದಕ್ಕೆ ಉಪಚಾರ ಮಾಡುವವರ ಜ್ಞಾನದ ಅಭಾವವೇ ಕಾರಣವಲ್ಲದೆ ಶಾಸ್ತ್ರದ್ದಲ್ಲ.

ಎಲ್ಲೆಡೆಯಲ್ಲಿಯೂ ಕಂಡುಬರುವ ಈ "ಸಂಪ್ರದಾಯ ಶರಣತೆಯು" ಔಷಧೀ ಪ್ರಪಂಚದಲ್ಲಿಯೂ ಸೇರಿಕೊಂಡದ್ದು ಸ್ವಲ್ಪ ಸೋಜಿಗವನ್ನುಂಟುಮಾಡಿದರೂ ಸಾಮಾನ್ಯವಾದದ್ದು. ಹೊಸ ನಿರ್ಮಾಣಕ್ಕೆ ತಿಳಿಯಾದ, ಸ್ಫುಟವಾದ ತಿಳಿವಳಿಕೆಯು ಅವಶ್ಯ. ಅದನ್ನು ಹರಡಲಿಕ್ಕೆ ಪ್ರಯತ್ನಿಸುವುದು ಪ್ರತಿಯೊಬ್ಬನ ಕರ್ತವ್ಯ. ನಮ್ಮ ಪ್ರಾಂತದಲ್ಲಿಯೂ ಈ ಹೊಸಶಾಸ್ತ್ರದ ಅಭ್ಯಾಸವು ಸಾಗಲಿ! ಅದರಿಂದ ಜನರಲ್ಲಿ ಶಾಸ್ತ್ರಜ್ಞಾನದ ಹೆಚ್ಚಳವಾಗಲಿ!!

ಆಧಾರ ಗ್ರಂಥಗಳು:—

1. Homeopathic Recorder. Volumes.
   LVI Jan. 41. No. 1.
   LVI May 41. „ 5.
   LVII July 41. „ 1.
2. Diseases of the skin. by J. Compton Burnett M. D.
3. Materia Medica of Nosodes. by Dr. H. C. Allen.
4. Dictionary of Materia Medica. by John. H. Clerke.
5. Doctors Dilemma. by Bernard Shaw.

ನಾಡಗುಡಿಯು ಮಾನವ ಮಾನ ! **ಅದಕಾಗಿ ಮುಡಿಪು ನಮ್ಮಯ ಪ್ರಾಣ !**

ಕನ್ನಡ ಸೈನಿಕ

“ ಸೊಕ್ಕಿದ ಹಗೆಗಳ ಬೊಗ್ಗಿಸಿ ಮೆರೆಯುವ ಸೋಲರಿಯದ ಕರಿನಾಡಗುಡಿ ! ”

ಸಂಪುಟ ೧	**ಬೇಕಾದಾಗ ಹೊರಡುವ ಪತ್ರಿಕೆ**	ಸಂಚಿಕೆ ೨

ಕ. ಸೈನಿಕನಿಗೆ ಬೆಂಬಲ

‘ಕನ್ನಡ ಸೈನಿಕ’ನ ಉನ್ನತಿಯನ್ನು ಹಾರಯಿಸಿ ಹರಸಿದ ಅನೇಕ ಪತ್ರಗಳು ನಮಗೆ ಬಂದಿವೆ. ಬಂದುವೆಲ್ಲ ಸಾಮಾನ್ಯವಾಗಿ ತರುಣವರ್ಗದವರಿಂದಲೆ. ಅನೇಕರ ಮನದಲ್ಲಿ ಹುದುಗಿದ್ದುದನ್ನೆ ‘ ಕನ್ನಡ ಸೈನಿಕ ’ನು ಬಯಲಿಗೆ ತರುತ್ತಲಿದ್ದಾನೆಂಬುದು ಆನಂದದ ಸಂಗತಿ. ಎಲ್ಲ ಪತ್ರಗಳನ್ನೂ ಇಲ್ಲಿ ಕೊಡಲು ಅವಕಾಶವಿಲ್ಲ. ಪತ್ರಬರೆದು ನಮ್ಮ ಕಾರ್ಯಕ್ಕೆ ಬೆಂಬಲ ಕೊಟ್ಟುದಕ್ಕೆ ‘ ಕನ್ನಡ ಸೈನಿಕ ’ನು ಹುರುಪುಗೊಂಡಿದ್ದಾನೆ. ಆ ಎಲ್ಲ ಪತ್ರಗಳ ಲೇಖಕರಿಗೆ ‘ ಕನ್ನಡ ಸೈನಿಕ ’ನು ಒಂದು ಮಾತನ್ನು ಹೇಳಬಯಸುತ್ತಾನೆ : ಹಿರಿಯರಂತೆ ಬರಿ ಹರಸಿ ಸುಮ್ಮನೆ ಕುಳಿತು ಬಿಡಬೇಡಿರಿ— ತರುಣರಂತೆ ನುಗ್ಗಿರಿ ! ‘ ನುಗ್ಗು ! ನುಗ್ಗು ! ನುಗ್ಗಿ ನಡೆ ಮುಂದೆ ’ ಇದೇ ಕನ್ನಡ ಸೈನಿಕನ ಕಹಳೆ.

ಆ ಪತ್ರಗಳ ಸಾರಾಂಶವನ್ನು ಹೀಗೆ ಕೊಡಬಹುದು : “ ೧೯೪೩ ನೆಯ ಮಾರ್ಚ್ ತಿಂಗಳಿಂದ ‘ ಜಯಂತಿ ’ಯಲ್ಲಿ ‘ ಕನ್ನಡ ಸೈನಿಕ ’ ಎಂಬ ವಿಶೇಷ ವಿಭಾಗವೊಂದನ್ನು ಪ್ರಾರಂಭಿಸಿದುದು ಬಹಳ ಆನಂದದ ಸಂಗತಿಯಾಗಿದೆ. ಅಲ್ಲಲ್ಲಿ ಕನ್ನಡಕ್ಕಿರುವ ಪ್ರತಿಬಂಧಕ ಸಂಗತಿಗಳನ್ನು ಬರೆದು ನಮ್ಮವರಿಗೆ ತಿಳಿಸಲು ಅನುಕೂಲವಾದದ್ದಕ್ಕಾಗಿ ನಮಗೆ— ತರುಣರಿಗೆ— ತುಂಬ ಹಿಗ್ಗು.

* * *

ಕೆಲವರು ‘ ಕನ್ನಡ ಸೈನಿಕ ’ನ ಬಗ್ಗೆ ವಿವರವನ್ನು ಕೇಳಿದ್ದಾರೆ ; ಅವರಿಗೆ ಉತ್ತರ : ‘ ಕನ್ನಡ ಸೈನಿಕ ’ವು ಸದ್ಯ ಜಯಂತಿಯ ಭಾಗವಾಗಿ ಹೊರಡುತ್ತಿದೆ. ಅಗತ್ಯವೆನಿಸಿದರೆ ನಡುವೆ ಮೇಲ್‌ಸಂಚಿಕೆ (ಸಪ್ಲಿಮೆಂಟ್)ಯ ರೂಪದಲ್ಲಿಯೂ ಹೊರಡಬಹುದು. ಅದಕ್ಕೇ ‘ ಬೇಕಾದಾಗ ಹೊರಡುವ ಪತ್ರಿಕೆ ’ ಎಂದು ನಿರ್ದೇಶಿಸಿ ಮಾಡಲಾಗಿದೆ. ಜಯಂತಿಯ ಚಂದಾದಾರರಿಗೆ ಅದು ಸಿಕ್ಕೇ ಸಿಕ್ಕುವುದು. ಕೇವಲ ‘ ಕನ್ನಡ ಸೈನಿಕ ’ಕ್ಕೆ ಚಂದಾದಾರರಾಗಬೇಕೆನ್ನುವವರು, ‘ ಒಂದು ವರುಷಕ್ಕೆ ಅಂಚೆವೆಚ್ಚ ಸಹಿತ ಒಂದು ರೂಪಾಯಿ ಚಂದಾ ’ ಎಂದು ತಿಳಿದುಕೊಳ್ಳಬೇಕು. ಮತ್ತೇನಾದರೂ ಬೇಕಿದ್ದರೆ ಬರೆಯಬೇಕು. ಪತ್ರಗಳು ಕಾರ್ಯಾಲಯಕ್ಕೆ ಪ್ರತಿತಿಂಗಳ **೧೫ ನೆಯ ತಾರೀಖಿನ** ಒಳಗೆ ತಲ್ಪಬೇಕು.

ಧಾರವಾಡದ ಮ್ಯುನಿಸಿಪಲ್ ಚುನಾವಣೆ

ಈ ಸಲ ನಡೆದ ಚುನಾವಣೆಯು ಸ್ವಲ್ಪ ಮಹತ್ತ್ವದುದು. ಅದಕ್ಕೆ ಕಾರಣವಿದೆ. ಹಿಂದೆ ಎಂದೂ ಇಲ್ಲದ ಕನ್ನಡ ಮರಾಠೀವಾದ, ಈ ಸಲದ ಮ್ಯುನಿಸಿಪಲ್ ಚುನಾವಣೆಯಲ್ಲಿ ತಲೆದೋರಿತ್ತು. ಕನ್ನಡವು ಮುನ್ನಡೆದಿರುವಾಗ ಮರಾಟಿಗರು ಮೇಲೇರಿಬರುವುದೆಂತು? ಆದರೂ ಒಂದೆರಡು ಮಾತುಗಳನ್ನು ಕನ್ನಡಿಗರ ಗಮನಕ್ಕೆ ತರುವುದು ಒಳ್ಳೆಯದು. ಇಲ್ಲಿಯ ಸ್ಥಳೀಯ ಹೆಸರಾದ ಹೈಸ್ಕೂಲಿನ ಶಿಕ್ಷಕರೊಬ್ಬರು— ಏಕಾಂತ ಮರಾಟಿಗಬ್ಬರವರು— ಚುನಾವಣೆಯ ಕಾಲದಲ್ಲಿ ಕನ್ನಡದ ವಿರೋಧವಾಗಿ ಕಾರ್ಯ ಮಾಡಿದರಂತೆ. ಹಾಗೆ ಮಾಡುವಾಗ ಅನೇಕರು ಅವರಿಗೆ ಛೀಹಾಕಿದರಂತೆ; ಆದರೇನು ? ಅವರು ತಮ್ಮ ಕಾರ್ಯ ಬಿಡಲಿಲ್ಲ. ಇಂತಹರಿಗೆ ಕನ್ನಡ ಸೈನಿಕನು ಎಚ್ಚರುಕೊಡುತ್ತಾನೆ: “ ಶ್ರೀಗಳೆ, ನೀವು ವಾಸಿಸಿರುವುದು ಕರ್ನಾಟಕದಲ್ಲಿ, ಕನ್ನಡನಾಡಿನ ಹೆಸರಿನ ಶಾಲೆಯಲ್ಲಿ ಶಿಕ್ಷಕರಾಗಿದ್ದೀರಿ, ಕನ್ನಡ ನಾಡಿನಲ್ಲಿ ಬೆಳೆದ ಅನ್ನವನ್ನು ಉಣ್ಣುತ್ತೀರಿ, ಕನ್ನಡ ನಾಡಿನ ಹವೆಯನ್ನು ಉಸಿರಾಡಿಸುತ್ತೀರಿ, ಕನ್ನಡ ಕೂಳುತಿಂದು ಉಂಡಮನೆಗೆ ಎರಡು ಬಗೆವ ಈ ಹವ್ಯಾಸವೇಕೆ ? ಮೋಸಮಾಡುವುದರಿಂದ ಪರಿಣಾಮವೇನಾಗುವುದೆಂಬುದನ್ನೂ ನೋಡಿಕೊಳ್ಳಿರಿ. ನೀವು ಎತ್ತಿಹಿಡಿಯಬೇಕೆಂದ ಕಾರ್ಯವು ಏನಾಯಿತು ? ನಿಮ್ಮ ಕಾರ್ಯಶಕ್ತಿಯ ಅರಿವು ಬಂದಿತೆ ? ಕನ್ನಡಕ್ಕೆ ಹಿಂದಿನ ಕಾಲವಿಲ್ಲ. ‘ ಕನ್ನಡ ಸೈನಿಕ ’ರು ಕಷ್ಟಬಡಲು ಸಿದ್ಧರಾಗಿದ್ದಾರೆ. ಎಚ್ಚರಿಕೆ, ಕನ್ನಡನಾಡಿನಲ್ಲಿ ಹೊಟ್ಟೆಗಾಗಿ ಬಂದು ಕನ್ನಡದ ದ್ರೋಹಬಗೆಯುವುದು ಅಪರಾಧ! ಇದನ್ನು ತಡೆದುಕೊಳ್ಳುವುದು ಕನ್ನಡಿಗರಿಗೆ ಕಠಿನವಾಗುವುದು.

* * *

ಚುನಾಯಿತರಾಗಿ ಬಂದವರಿಗೊಂದು ಸೂಚನೆ: ಧಾರವಾಡವು ಕನ್ನಡನಾಡಿನ ಕೇಂದ್ರವೆಂಬುದನ್ನು ಯಾರೂ ಮರೆಯಬೇಡಿ. ಕನ್ನಡನಾಡಿನಲ್ಲಿ ಚಳವಳಿಗಳೆಲ್ಲ ಧಾರವಾಡದಲ್ಲಿ ಹುಟ್ಟುವುವು. ನಿಮ್ಮ ಮೊದಲಿಗರ ಅಲಕ್ಷ್ಯದಿಂದ ಧಾರವಾಡವು ತನ್ನ ಸ್ಥಾನ-ಮಾನವನ್ನು ಕಳೆದುಕೊಳ್ಳತೊಡಗಿದೆ. ಇನ್ನೂ ಕಾಲ [illegible] ಈಗಲೆ ಎಚ್ಚರಾಗಿರಿ ! ನಿಮ್ಮ ಪ್ರತಿಯೊಂದು ಕಾ[illegible]

'ಕನ್ನಡ ನಾಡು' ಕಣ್ಣ ಮುಂದಿರಲಿ! ಉಳಿದ ಜಾತಿ-ಮತ-ಪಂಥಗಳನ್ನು ಬದಿಗಿರಿಸಿರಿ! ಕನ್ನಡನಾಡನ್ನು ಮುಂದೆ ತರಬೇಕೆಂದವರದೇ ಒಂದು ಪಕ್ಷ— ಎಂದರೆ ಇದಿ ಮ್ಯುನಸಿಪಾಲಿಟಿಯಲ್ಲಿ ಒಂದೇ ಪಕ್ಷವಾಗಲಿ! ಬೇರೆ ಬೇರೆ ಪಂಗಡಗಳಾಗಿ, ಇದ್ದ ತುಸು ಉತ್ಸಾಹವನ್ನೆಲ್ಲ ವಿರೋಧಿ ಪಂಗಡದವರ ಹುಳುಕು ತೆಗೆವುದರಲ್ಲಿ ಬಳಸಬೇಡಿ! ಧಾರವಾಡವು ಯಾವಾಗಲೂ ಕಣ್ಣ ಮುಂದೆ ಇರಲಿ! ಇದಿ ಧಾರವಾಡವು, ಕನ್ನಡನಾಡಿನ ಕೇಂದ್ರವಾದ ಧಾರವಾಡವು! ಧಾರವಾಡವನ್ನು ಸರ್ವಾಂಗಸುಂದರ ಮಾಡಲು ಹೆಣಗುವುದು ಪ್ರತಿಯೊಬ್ಬ ಚುನಾಯಿತ ಸದಸ್ಯನ ಕರ್ತವ್ಯ. ಅದರ ಕಡೆಗೆ ಲಕ್ಷ್ಯಹಾಕಲಿ, ಎಂದು ನಮ್ಮ ಒತ್ತಾಯದ ಸೂಚನೆ. ಜಾತಿ-ಮತ-ಪಂಗಡಗಳು ಕನ್ನಡನಾಡಿನ ಏಳ್ಗೆಯ ಮುಂದೆ ಅಡ್ಡ ಬಾರದಂತೆ ನೋಡಿಕೊಳ್ಳಬೇಕೆಂದು ಬೇಡುತ್ತೇವೆ.

ಬೆಳಗಾಂವಿಯ ಬೇನೆ

ಬೆಳಗಾಂವಿಯು ಮಹಾರಾಷ್ಟ್ರದ ಭಾಗವೆಂದು ಮರಾಟಿಗರಿಗೆ ಭ್ರಾಂತಿಯಾದಂತೆ ಕಾಣುತ್ತದೆ. ಬೀದಿಗಳ ಹೆಸರಿನ ಹಲಗೆಗಳೆಲ್ಲ ಮರಾಟಿಯಲ್ಲಿ. 'ಅದೇಕೆ?' ಎಂದು ಕೇಳುವವರು ಯಾರೂ ಇಲ್ಲವೆ? ಹಾಗೆ ಮಾಡಿದವರು ಯಾರು? ಅವರೆಲ್ಲ ಕನ್ನಡಿಗರೆಂಬ ಸೋಗಿನಲ್ಲಿ ಜಾರಿಕೊಳ್ಳುವ ಜಾರರು— ಎಂದು ತಿಳಿದು ಬಂದಿದೆ. ಅವರು ತಮ್ಮ ಕಾರ್ಯದ ಅರ್ಥಮಾಡಿಕೊಳ್ಳಲಿ. ಯಾವ ಮೋಹಕ್ಕಾಗಿ, ಯಾವ ಮುಕ್ತಿಯ ಆಶೆಗಾಗಿ ಬೀದಿಗಳ ಹೆಸರಿನ ಹಲಗೆಗಳನ್ನೆಲ್ಲ ಮರಾಟಿಯಲ್ಲಿ ಬರೆಯಿಸಿ ತೂಗುಹಾಕಿದ್ದಾರೆ? ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕೇಳುತ್ತೇವೆ.... ಯಾವ ಅಧಿಕಾರದಿಂದ? ಬೆಳಗಾಂವಿಯಲ್ಲಿ ೫೮ ಸಾವಿರ ಜನರು ಕನ್ನಡಿಗರೆಂದು ಮೊನ್ನೆಯ ಜನಗಣತಿ ಹೇಳುತ್ತಿದೆ. ಅನೇಕ ತೊಂದರೆಗಳಲ್ಲಿ ನಡೆದ ಆ ಜನಗಣತಿಯು ಸರಿಯೆಂದು ನಂಬಿದರೂ, ಅಲ್ಲಿ ಮರಾಟಿಗರ ಸಂಖ್ಯೆ ೨೦,೦೦೦ ಮಾತ್ರ. ಬಹುಸಂಖ್ಯಾಕರಿದ್ದ ಭಾಷೆಯಲ್ಲಿಯೆ ಬರೆಯಿಸುವುದು ನ್ಯಾಯಸಮ್ಮತವಲ್ಲವೆ? ಅದೂ ಹೋಗಲಿ. ಬಹುಸಂಖ್ಯಾಕರಿದ್ದ ಭಾಷೆಯಲ್ಲಿಯೂ ಬರೆಯಿಸಬಾರದೆ?

ಇರಲಿ, ಆ ಮಾತೇಕೆ ಈಗ? ಬೆಳಗಾಂವಿಯ ಕನ್ನಡಿಗರೆ, ಇದು ನಿಮ್ಮ ಹೊಣೆ. ನಿಮಗೆ ಅವು ಬೇಕೆಂದು ಎನ್ನಿಸಿದರೆ ಸುಮ್ಮನೆ ಕೂಡಿರಿ. ಬೇಡವೆಂದು ಎನ್ನಿಸಿದರೆ ಕೂಡಲೆ ಬರೆದು ತಿಳಿಸಿರಿ ಮ್ಯುನಸಿಪಾಲಿಟಿಯ ಅಧಿಕಾರಿಗಳಿಗೆ.... ಅವುಗಳನ್ನು ಬದಲು ಮಾಡಲಿಕ್ಕೆ! ಒಮ್ಮೆಲೆ ಬದಲುಮಾಡಲು ಹಣದ ಕೊರತೆಯೆಂದು ಮುಂದೂಡಲು ಪ್ರಯತ್ನಿಸಿದರೆ ಒಂದು ಮಾತನ್ನು ಹೇಳಿರಿ. "ನಮಗೆ ಬಣ್ಣದ ಮಾತು ಬೇಡ, ಕಾಗದದ ಮೇಲೆ ಬರೆಯಿಸಿ ಅಂಟಿಸಿರಿ" ಎಂದು. ಅವರು ಹಾಗೆ ಮಾಡದೆಹೋದರೆ [illegible] ಯೋಗ್ಯ ಉಪಾಯವನ್ನು ಕೈಕೊಂಡರೂ ಸರಿಯೆ.

ಕನ್ನಡಿಗರಾದ ಬೆಳಗಾಂವಿಯ ವ್ಯಾಪಾರಸ್ಥರು— ವರ್ತಕರು— ತಮ್ಮ ಅಂಗಡಿಗಳ ಹೆಸರ ಹಲಗೆಗಳನ್ನು ಕನ್ನಡದಲ್ಲಿ ಬರೆಯಿಸಿ ಹಚ್ಚಬೇಕು. ವ್ಯಾಪಾರಕ್ಕಾಗಿ ಬೇರೆ ಭಾಷೆಗಳಲ್ಲಿ ಬರೆಯಿಸುವುದೂ ಅವಶ್ಯವೆನಿಸಿದರೆ, ಕನ್ನಡದಲ್ಲಿ ಮೇಲೆ ದೊಡ್ಡ ಅಕ್ಷರಗಳಿಂದ ಬರೆಯಿಸಬೇಕು; ಉಳಿದ ಭಾಷೆಗಳಲ್ಲಿ ಅದರ ಕೆಳಗೆ ಸಣ್ಣಕ್ಷರಗಳಿಂದ ಬರೆಯಿಸಬೇಕು. ಬೆಳಗಾಂವಿಯಲ್ಲಿ ಕನ್ನಡತನವನ್ನು ಕಾಯ್ದುಕೊಳ್ಳಲು ಇದು ಮೊದಲನೆಯ ಉಪಾಯ-ಯೋಜನೆಯೆಂದು ನಮ್ಮ ಸೂಚನೆ.

ಒಂದು ವೇಳೆ ಇದನ್ನೆಲ್ಲ ಅಲಕ್ಷ್ಯಮಾಡಿದರೆ ಏನಾಗುವುದು ಗೊತ್ತುಂಟೂ? ಕೇಳಿರಿ. ಇದೀಗ ಮುಂಬಯಿ ಪ್ರಾಂತದಲ್ಲಿ ಭಾಷಾನ್ವಯ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಮುಂಬಯಿ ಸರಕಾರದವರು ಒಪ್ಪಿಗೆಯಿತ್ತು, ಪೂರ್ವಯೋಜನೆಗೆಂದು ಮಹಾರಾಷ್ಟ್ರದಲ್ಲಿ **ಜಯಕರ-ಜಠಾರ** ಮೊದಲಾದವರ ಸಮಿತಿಯೊಂದನ್ನು ನೇಮಿಸಿದುದು ಗೊತ್ತಷ್ಟೆ? ನಿಮ್ಮ ಈ ನಿರ್ಲಕ್ಷ್ಯವನ್ನು ಕಣ್ಣಮುಂದಿಟ್ಟುಕೊಂಡು ಮರಾಟಿಗರು ಏನು ಮಾಡುತ್ತಾರೆಂಬುದನ್ನು ಕನ್ನಡಿಗರು ಎಚ್ಚರದಿಂದ ನೋಡಬೇಕು. ಬೆಳಗಾಂವಿಯಲ್ಲಿ ಹೊರಡುವ ಮರಾಟಿ ತರುಣಭಾರತದ ಮಾರ್ಚ್ ತಿಂಗಳ ೧೭ ನೆಯ ತಾರೀಖಿನ ಸಂಚಿಕೆಯನ್ನು ನೋಡಿರಿ! ಅಲ್ಲಿಯ 'ಮರಾಠೀ ವಾಙ್ಮಯ ಚರ್ಚಾಮಂಡಲ' ದಿಂದ ಒಂದು ಠರಾವು ಪಾಸಾಗಿದೆ. 'ಬೆಳಗಾಂವಿಯನ್ನು ಮಹಾರಾಷ್ಟ್ರ ಯುನಿವ್ಹರ್ಸಿಟಿಯ ಕಾರ್ಯಕ್ಷೇತ್ರದಲ್ಲಿ ಸೇರ್ಪಡಿಸಬೇಕು' ಎಂದು. ಎಂತಹ ಮುಂಧೋರಣೆಗಳು ಮರಾಟಿಗರು. ಅವರಿಂದಲಾದರೂ ನಾವು ಪಾಠ ಕಲಿಯಬಹುದಲ್ಲವೆ—ಮುಂಜಾಗ್ರತೆಯಿಂದಿರುವುದಕ್ಕೆ? ಬೆಳಗಾಂವಿಯ ಕರ್ನಾಟಕ ಸಂಘದವರು ತಮ್ಮ ಮೊದಲನೆಯ ಕರ್ತವ್ಯವೆಂದು ಆ 'ಠರಾವ'ನ್ನು ನಿಷೇಧಿಸಿ— ಆ ನಿಷೇಧದ 'ಠರಾವ'ನ್ನು ಮಹಾರಾಷ್ಟ್ರ ವಿಶ್ವವಿದ್ಯಾಲಯ ಸಮಿತಿಯ ಕಾರ್ಯದರ್ಶಿಗಳಿಗೆ ಕಳಿಸಬೇಕು. ಮುಂದೆ ಇಂತಹ ಕುಚೋದ್ಯತನ ನಡೆಯದಂತೆ ಎಚ್ಚರುವಹುವುದಕ್ಕೆ, ಕರ್ನಾಟಕ ಸಂಘದ ಪರವಾಗಿ ಕರ್ನಾಟಕ ವಿಶ್ವವಿದ್ಯಾನಿಲಯದ ಬಗ್ಗೆ ಜನತೆಯಲ್ಲಿ ತಿಳಿವಳಿಕೆಯುಂಟಾಗುವಂತೆ, ಆಗಾಗ ಉಪನ್ಯಾಸಗಳನ್ನು ಏರ್ಪಡಿಸಬೇಕು. ಸ್ಥಳೀಯ ಕರ್ನಾಟಕಸಂಘವು ಎಚ್ಚತ್ತು ಕಾರ್ಯಮಾಡಿ 'ಕನ್ನಡ ಸೈನಿಕ'ನಿಗೆ ನೆರವಾಗಬೇಕೆಂದು ಸೈನಿಕನು ಕೇಳಿಕೊಳ್ಳುತ್ತಾನೆ.

ನುಂಗಲು ನೆವ

ಮಾರ್ಚ್ ತಿಂಗಳ ಸಹ್ಯಾದ್ರಿಯಲ್ಲಿ ಒಂದು ಲೇಖನ ಪ್ರಕಟವಾಗಿದೆ. ಹೈದರಾಬಾದ್ ಪ್ರಾಂತದಲ್ಲಿರುವ ಚಾಲುಕ್ಯರ ಕಲ್ಯಾಣವು ಮಹಾರಾಷ್ಟ್ರಕ್ಕೆ ಸೇರಿದುದಂತೆ. ಅದು ಐತಿಹಾಸಿಕ ವಿಷಯವಾದುದರಿಂದ, ಐತಿಹಾಸಿಕ ಸಂಗತಿಗಳ ಹಿನ್ನೆಲೆಯಿಟ್ಟು

ಖಂಡಿಸುವ ಲೇಖನ ಮುಂದೆ ಪ್ರಕಟವಾಗಲಿವೆ. ಈಗ ಹೇಳುವುದಿಷ್ಟೆ "ಮಹಾರಾಷ್ಟ್ರ ಕರ್ನಾಟಕದಲ್ಲೆಲ್ಲ ಹಬ್ಬಿದೆ. 'ಕರ್ನಾಟಕ' ಎಂಬುದೇ ಇಲ್ಲ" ಎಂಬುದಾಗಿ ಮರಾಟಿಗರು ಹೇಳುತ್ತಾರೆ. ಇದನ್ನೆಲ್ಲ ನಾವು ನಂಬಿ ಸುಮ್ಮನೆ ಕುಳಿತುಕೊಳ್ಳಬೇಕಲ್ಲವೆ ?

ಕಾರ್ಯಸಾಧನೆ.

ಕಿರ್ಲೋಸ್ಕರ ಕಾರಖಾನೆಯವರು ಮೊನ್ನೆ ಮೊನ್ನೆ ಹರಿಹರದಲ್ಲಿ ಶಾಖೆಯೊಂದನ್ನು ಪ್ರಾರಂಭಿಸಿದರು. ಮೈಸೂರು ಸರಕಾರವೂ ಅದಕ್ಕೆ ಸಂಪೂರ್ಣ ಸಹಕಾರವನ್ನು ಕೊಟ್ಟಿದೆ. ಇದರಿಂದ ಕನ್ನಡ ನಾಡಿನಲ್ಲಿ ಉದ್ಯೋಗ ಬೆಳೆದು ಕನ್ನಡಿಗರ ಹೊಟ್ಟೆಯ ಹಿಟ್ಟಿನ ಚಿಂತೆ ಬಿಟ್ಟರೆ ಅನುಕೂಲವೆ; ಆದರೆ ಬೇರೆಬೇರೆ ನೆಪಗಳಿಂದ ಮರಾಟಿಗರು ಅಲ್ಲಿ ನೆಲಸುವುದರಿಂದ, ಹರಿಹರ ಮರಾಟಿ ಕೇಂದ್ರವಾಗುವ ಸಂಭವ ಹೆಚ್ಚಾಗಿದೆ. ಹಾಗಾದರೆ ಕನ್ನಡಿಗರಿಗೆ ಎಲ್ಲ ರೀತಿಯಿಂದಲೂ ನಷ್ಟ. ಮೈಸೂರು ಸರಕಾರದ ಈ ಔದಾರ್ಯವು, ಅರಬನ-ಒಂಟೆಯ ಕತೆಯನ್ನು ನೆನಪಿಗೆ ತಂದುಕೊಡದಂತೆ ಮಾಡಲೆಂದು ನಮ್ಮ ಆಶೆ.

ಕನ್ನಡವನ್ನು ಕಡೆಗಣಿಸುವುದೇಕೆ ?

ಧಾರವಾಡ: ಈಗ ಕೆಲ ದಿನಗಳ ಹಿಂದೆ ಕರ್ನಾಟಕದ ಧುರೀಣರಲ್ಲಿ ಒಬ್ಬರಾದ ಶ್ರೀಮತಿ ಕಮಲಾದೇವಿಯವರು ಧಾರವಾಡಕ್ಕೆ ಬಂದಾಗಿನ ಸಂಗತಿಯಿದು. ಸಾರಸ್ವತ ಕಾಲನಿಯಲ್ಲಿ '**ಅಲ್ಲಿಯ ಜನರಿಗೆ ತಿಳಿವುದಕ್ಕೋಸುಗ**' ಅವರು ಕೊಂಕಣಿಯಲ್ಲಿ ಮಾತನಾಡಿದರಂತೆ. ಅನ್ನಪೂರ್ಣಾ ನಾಟ್ಯಗೃಹದಲ್ಲಿ ಇಂಗ್ಲಿಷಿನಲ್ಲಿ ಮಾತನಾಡಿದರಂತೆ. ಧಾರವಾಡದ ಸಾರ್ವಜನಿಕ ಭಾಷೆ ಇಂಗ್ಲಿಷೇ ? ಅಥವಾ ಸಾರಸ್ವತ ಕಾಲನಿಯಲ್ಲಿ '**ಜನರಿಗೆ ತಿಳಿಯಬೇಕೆಂದು**' ಇದ್ದ ಉದ್ದೇಶ ಸಾರ್ವಜನಿಕ ಭಾಷಣದಲ್ಲಿ ಬದಲಾಯಿತೊ ? ಎಲ್ಲರಿಗೂ ತಿಳಿವ ಭಾಷೆಯಾದ ಕನ್ನಡದಲ್ಲಿ ಮಾತನಾಡಿದ್ದರೆ ಹೆಚ್ಚು ಜನರಿಗೆ ಚೆನ್ನಾಗಿ ತಿಳಿಯಬಹುದಿತ್ತಲ್ಲ ? ಜಗತ್ತೆಲ್ಲ ಸಂಚಾರ ಮಾಡಿ ಬಂದ ಅನುಭವದ ಮಾತುಗಳನ್ನು ನಾಡಿನ ಭಾಷೆಯಲ್ಲಿ ಹೇಳಿದ್ದರೆ ಹೆಚ್ಚು ಜನರು ತಿಳಿದುಕೊಳ್ಳಬಹುದಿತ್ತಲ್ಲವೆ? ಇದೇನು ಇಂಗ್ಲಿಷಿನ ಮೋಹವೊ ?—ಛೆ ಹೇಗಾದೀತು ? ಅವರು ಕಾಂಗ್ರೆಸ್ ಭಕ್ತರು—ಅಲ್ಲಿ ರಾಷ್ಟ್ರಭಾಷೆಗೆ ಪ್ರಧಾನ್ಯ—ಅಥವಾ ಸಭೆಯ ನಿಯೋಜಕರ ಚಾಪಲವೊ? ಏನೇ ಆದರೂ ಇಂತಹ ಭಾಷಣಗಳು ಕನ್ನಡದಲ್ಲಿಯೆ ಆಗುವುದು ಯೋಗ್ಯ. ಶ್ರೀಮತಿಯವರಿಗೆ ಚೆನ್ನಾದ ಕನ್ನಡ ಬರುತ್ತಿದೆಯಲ್ಲವೆ ? ಕನ್ನಡವನ್ನು ಕಡೆಗಣಿಸುವುದೇಕೆ ? ಹೇಳಬಲ್ಲಿರಾ.

ಹೈದರಾಬಾದು :

(ಬರೆದು ಬಂದ ಸುದ್ದಿ) "ಇಲ್ಲಿಯ ಒಂದೇ ಒಂದು ××× ಕನ್ನಡ ಶಾಲೆಯ ವಾರ್ಷಿಕ ಉತ್ಸವವು ನ್ಯಾಯಾಸ್ಥಾನಪತಿಗಳಾದ ಶ್ರೀ ಸೈಯದ ಅಬ್ದುಲ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಆಗ ಶಾಲೆಯ ಕಮಿಟಿಯ ಕಾರ್ಯದರ್ಶಿಗಳು ತಮ್ಮ ವಾರ್ಷಿಕ ವರದಿಯನ್ನು, ಇಂಗ್ಲೀಷಿನಲ್ಲಿ ಮುದ್ರಿಸಿದ್ದುದನ್ನು ಓದಿದರು. ಇದನ್ನು ಖಂಡಿಸುತ್ತ ಶ್ರೀ. ಸೈಯದ ಅಬ್ದುಲ್‌ರವರು ಹೀಗೆ ಹೇಳಿದರು : 'ನಾವು ನಮ್ಮ ತಾಯ್ನುಡಿಯ ಏಳಿಗೆಯ ಬಗ್ಗೆ ತುಂಬಾ ಅಭಿಮಾನವುಳ್ಳವರಾಗಿರಬೇಕು. ನಮ್ಮ ಮಾತೃಭಾಷೆಗೆ ಹೆಚ್ಚು ಮಹತ್ತ್ವ ಕೊಡಬೇಕು. ನಿಮ್ಮ ವರದಿಯು ಇಂಗ್ಲೀಷಿನಲ್ಲಿರುವುದಕ್ಕಿಂತ ಕನ್ನಡದಲ್ಲಿ ಅಥವಾ ಉರ್ದುವಿನಲ್ಲಿ ಇದ್ದರೆ ಬಹಳ ಚೆನ್ನಾಗುತ್ತಿತ್ತು.'

ಇದಕ್ಕೆ ಹೊಣೆ ಯಾರು ? ನಾವೇ ನಮ್ಮ ನುಡಿಯನ್ನು ತಿರಸ್ಕರಿಸಿ ಅನ್ಯಭಾಷೆಗಳ ಮೋಹಕ್ಕೆ ಬಲಿಬಿದ್ದರೆ ನಮ್ಮ ಭಾಷೆಯ ಉದ್ಧಾರವಾದೀತೆ ? ನಮ್ಮ ನಾಯಕರ ಆಚರಣೆಯೆ ಹೀಗಾದ ಬಳಿಕ ಹಿಂಬಾಲಿಸುವವರ ಗತಿ ಹೇಗಾಗಬೇಕು ? ಇನ್ನು ಮುಂದಾದರೂ ನಮ್ಮ ಮುಂದಾಳುಗಳು—ಮುಂದಾಳುಗಳಾಗಿ ಉಳಿಯಬೇಕಿದ್ದರೆ— ಸಾರ್ವಜನಿಕ ವ್ಯವಹಾರದಲ್ಲಿ ಕನ್ನಡಕ್ಕೆ ಮನ್ನಣೆ ದೊರೆವಂತೆ ಮಾಡಬೇಕೆಂದು ನಮ್ಮ ಬೇಡಿಕೆ." ನಮ್ಮ ಬೇಡಿಕೆಯೂ ಇದೇ !

ಅಧ್ಯಕ್ಷರಿಗೆ ಬೆಂಬಲ.

ಕನ್ನಡ-ಹಿಂದಿಗೆ ತಳುಕುಬಿದ್ದಾಗ ಯಾವುದು ಪ್ರಾಧಾನ್ಯ ಪಡೆಯಬೇಕು ಎಂಬ ಪ್ರಶ್ನೆಗೆ 'ಕನ್ನಡವೆ ಪ್ರಾಧಾನ್ಯ' ಎಂದು ೨೬ನೆಯ ಸಾಹಿತ್ಯಸಮ್ಮೇಲನದ ಅಧ್ಯಕ್ಷರಾದ ಶ್ರೀ. ಎ. ಆರ್. ಕೃಷ್ಣಶಾಸ್ತ್ರಿಗಳು ಒತ್ತಿ ಹೇಳಿದ್ದಾರೆ. ಹಿಂದೀ ಪ್ರೇಮಿಗಳು ಮತ್ತೆ ಮತ್ತೆ ಈ ಪ್ರಶ್ನೆ ಎತ್ತುತ್ತಾರೆ. ನಮ್ಮ ಪ್ರಾಂತದಲ್ಲಿ ಹಿಂದಿ ಕೇವಲ ಅತಿಥಿ. ಅತಿಥಿ ಯಜಮಾನನನ್ನು ಪದಚ್ಯುತಮಾಡುವುದು ಸಾಧ್ಯವಿಲ್ಲ. ಪ್ರಾಂತದಲ್ಲಿ ಪ್ರಾಂತೀಯ ಭಾಷೆಗೆ ಪ್ರಾಧಾನ್ಯ. ರಾಷ್ಟ್ರದ ಪ್ರಶ್ನೆ ಬಂದಾಗ ಮಾತ್ರ ರಾಷ್ಟ್ರಭಾಷೆ.

ನಮ್ಮ ಕಾರ್ಯ

ಜಿಲ್ಲೆ—ತಾಲೂಕು ಸ್ಥಳಗಳಲ್ಲಿಯ ಕರ್ನಾಟಕ ಸಂಘಗಳು ಹಳ್ಳಿಗಳಲ್ಲಿ ಕರ್ನಾಟಕ ಸಂಘಗಳನ್ನು ಸ್ಥಾಪಿಸುವಂತೆ ಮಾಡಬೇಕು. ಕನ್ನಡ ಚಳವಳಿಗೆ ಕರ್ನಾಟಕ ಸಂಘಗಳು ಮೂಲಾಧಾರವಾಗಬೇಕು. ಕನ್ನಡದ ಕೂಗು, ಕನ್ನಡದ ಸಂಸ್ಕೃತಿ, ಪ್ರತಿ ಹಳ್ಳಿಗೂ ಹೋಗಬೇಕು. ಆಗ ಕನ್ನಡದ ಕೋಟೆ ಭದ್ರವಾಗುವುದು.

—ಸಂ. ಕ.

ಮನೆಯಲ್ಲಿಯೆ ಹೊಲಿಗೆ ಕಲಿಯಿರಿ!

ಶ್ರೀ. ಹಳಪೇಟೆ ಚಿಂತಾಮಣಿರಾಯರು ಟಿ. ಸಿ. ಡಿ.

ಹೊಲಿಗೆಯ ಶಿಕ್ಷಕರು ಕ. ಎ. ಬೋರ್ಡ್, ಧಾರವಾಡ

★

ಹತ್ತಿಚೊಣ್ಣ

(ಸುರವಾರು)

★

ಈ ತೊಡಪು, ನಮ್ಮ ಕಡೆಗಿಂತಲೂ ...ಡೋದೆ, ಕೊಲ್ಹಾಪುರ ಸಂಸ್ಥಾನಗಳ ...ಡೆಗೆ ಹೆಚ್ಚಾಗಿ ಉಪಯೋಗಿಸಲ್ಪಡುತ್ತದೆ. ...ದುರೆಯ ಸವಾರಿ ಮಾಡುವಾಗಲೂ ಮೋಟಾರು-ಸೈಕಲ್ಲುಗಳನ್ನು ಹತ್ತು...ವಾಗಲೂ ಉಪಯೋಗಿಸುವ ಬ್ರಿಚಿಸ್‌ಗಳಂತೆಯೆ ಇದಕ್ಕೂ ಅನುಕೂಲತೆಗಳಿರುವುದರಿಂದ ಇದಕ್ಕೊಳ್ಳೇ ಪ್ರಾಶಸ್ತ್ಯ ಬಂದಿದೆ. ಇದರ ವಿಷಯವಾಗಿ ಭಾರತೀಯನೊಬ್ಬನು, ಇಂಗ್ಲಂಡಿನ ಪ್ರಮುಖ ಹೊಲಿಗೆಯ ಮಾಸಪತ್ರಿಕೆಯೊಂದರಲ್ಲಿ ಬರೆದಾಗ, ...ಆ ಪತ್ರಿಕೆಯು ಈ ತೊಡಪನ್ನು ತುಂಬ ಹೊಗಳಿತ್ತು. ಅಂದಿನಿಂದ ಅಲ್ಲಿ ಕೂಡ 'ಸುರವಾರ'ವು ತುಂಬ ಜನಮೆಚ್ಚುಗೆಗೆ ಪಾತ್ರವಾಗಿದೆ.

ಈ ಹತ್ತಿಚೊಣ್ಣಕ್ಕೆ ಸಾಮಾನ್ಯವಾಗಿ ಯಾವುದೇ ಬಿಳಿಯ ಬಟ್ಟೆಯನ್ನು ಉಪಯೋಗಿಸಬಹುದು. ಬಿಳಿಯ ಖಾದಿ, ...ನ್, ಟಿ, ಡಾರ್ಕ್, ಲಾಂಗ್‌ಕ್ಲಾಥ್, ...ಸುಗಳಲ್ಲಿ ಯಾವುದನ್ನಾದರೂ ಉಪಯೋಗಿಸಬಹುದು. ಕತ್ತರಿಸುವಾಗ ಹಿಡಿಪಲ್ಲಿ ಹೋಗುವಂತೆ ಆಗುವ ಅಡ್ಡಬಟ್ಟೆಯಲ್ಲಿ ಇದನ್ನು ಕತ್ತರಿಸಬೇಕು.

...ಚೊಣ್ಣದೊಂದಿಗಿನ ಪೂರ್ಣ ಉಡು... ಬನಿಯನ್ನು, ಜಲ್ಪಾರ್, ಇಲ್ಲವೆ ಶೇರ್ವಾನಿ ಕೋಟು, ಎತ್ತರ ಕಡಿಮೆ ಇದ್ದ ಬಿಳಿಯ ಗಾಂಧೀ ಟೊಪ್ಪಿಗೆ. ಇವು ಒಳ್ಳೆ ಶೋಭೆಯನ್ನು ತರುವುವು.



ಬೇಕಾಗುವ ಅಳತೆಗಳು — (ಸುತ್ತಳತೆಗಳು.) ಆಸನ ೩೨ ಇಂಚು. ಕಣಕಾಲು ೮ ೩/೮ ಇಂಚು (ಮೊಣಕಾಲು, ಮೊಣಗಂಡಗಳ ನಡುವಿನ ಭಾಗ). ಮೊಣಗಂಡ ೯ ಇಂಚು. ಹದಡು ೮ ೩/೮ ಇಂಚು.

ಉದ್ದಳತೆಗಳು :— ಸೊಂಟದಿಂದ ಕಣಕಾಲು ೧೭ ಇಂಚು. ಮೊಣಗಂಡ ೧೯ ಇಂಚು. ಹದಡಿನವರೆಗೆ ೨೬ ಇಂಚು. ಇದೇ ಪೂರ್ಣ ಉದ್ದ.

ಚಿತ್ರಿಸುವುದು :— ಬ, ೦, ಕ ಕಾಟಕೋನ,

ಅ, ೦ ೧ ೩/೮" ಹೆಚ್ಚು ಸಡಿಲಿಗಾಗಿ ಮುಂದಿನವೆಲ್ಲ ಅ, ದಿಂದ ಅಳತೆಗಳು.

ಅ, ಇ=೯" ಎಂದರೆ ಆಸನದ ¼+೧ ೩/೮".

ಅ, ಡ=೧೭" ಕಣಕಾಲು.

ಅ, ಫ=೧೯" ಮೊಣಗಂಡ.

ಅ, ಕ=೨೬" ಹರಡು ಪೂರ್ಣ ಉದ್ದ.

(ಮೊಣಗಂಡದಿಂದ ತಳದವರೆಗೆ ನೇರಿಗೆ ನೇರಿಗೆ ಆಗುವಂತೆ ಬೇಕಾಗಿದ್ದಲ್ಲಿ ೨೬+೧ ೩/೮" ಅ, ದಿಂದ ಕ, ದ ವರೆಗೆ ಇಡಬೇಕು.)

ಇ, ಡ, ಫ, ಕ. ಬಿಂದುಗಳನ್ನು ಮುಂದಕ್ಕೆ ಬೆಳೆಯಿಸುವುದು.

ಇ, ಗ=೯ ೩/೮" ಅಂದರೆ ಆಸನದ ¼+೨.

ಡ, ದ=೪ ೩/೧೬" ಎಂದರೆ ಕಣಕಾಲಿನ ½.

ಫ, ಪ=೪ ೩/೮' ಎಂದರೆ ಮೊಣಗಂಡದ ½.

ಕ, ಚ=೪ ೩/೧೬" ಎಂದರೆ ಹದಡದ ½.

ಚ, ಪ, ದ, ಗ. ಗಳನ್ನು ಚಿತ್ರದಂತೆ ಕೂಡಿಸಿರಿ. ಇಂಥ ಎರಡು ತುಂಡುಗಳು ಬೇಕು. ಕತ್ತರಿಸುವಾಗ ಮೇಲ್ಬದಿಗೆ (ಬ, ೦) ೨ ಇಂಚು ಹೆಚ್ಚು. ಕೆಳಗೆ ೧ ೩/೮ ಇಂಚು (ಕ. ಚ) ಹೆಚ್ಚು ಬಟ್ಟೆ ಮಡಿಸುವುದಕ್ಕಾಗಿ ಇಡಬೇಕು. ಹೊಲಿಯುವಾಗ ಚ, ಪ, ದ, ಗ. ಭಾಗಕ್ಕೆ ಕಾಟನ್ನು (ಬಟ್ಟೆಯ ಅಂಚನ್ನು) ಕೊಡಲು ಮರೆಯಬಾರದು.

ತುಕುಡಿ (ಕಿಸ್ಸೆ) :— ಆಸನದ ಹತ್ತಿರ (ಕುಪ್ಪುಸಕ್ಕೆ ಕಂಕುಳ ಹಚ್ಚುವಂತೆ) ಒಂದು ತುಕುಡಿಯನ್ನು ಹಚ್ಚಬೇಕಾಗುವುದು. ಅದಕ್ಕೆ ಆಸನದ ೩ಪಟ್ಟು ಚೌಕು ಬಟ್ಟೆ ಬೇಕಾಗುವುದು.

ಬೇಕಾಗುವ ಬಟ್ಟೆ :— ೨೭'' ಅಗಲು ಉಳ್ಳ ಬಟ್ಟೆಯು ಮೇಲೆ ಹೇಳಿದ ಅಳತೆಯದಕ್ಕೆ ೧೪ ವಾರು ಬೇಕಾಗುವುದು.

ಸಾಮಾನ್ಯವಾಗಿ ಆಸನದ ೩ಕ್ಕೆ ಕಡಿಮೆಯಿಲ್ಲದಷ್ಟು ಅಗಲುಳ್ಳ ಬಟ್ಟೆಯು ಉದ್ದದ ೧೨ ಪಟ್ಟು+ನಾಲ್ಕೈದು ಇಂಚಿನಷ್ಟು ಬೇಕಾಗುವುದು.

ವಿ. ಸೂ :— ಇದರ ಕಾಗದದ ಕತ್ತರಿಸಿದ ಮಾದರಿಯು ಬೇಕಾದಲ್ಲಿ ಜಯಂತಿಯ ಚಂದಾದಾರರು ಎರಡಾಣೆಯ, ಚಂದಾದಾರರಲ್ಲದವರು ಐದಾಣೆಯ ಅಂಚೆ ಚೀಟಿಯನ್ನು ಕಳಿಸಿದಲ್ಲಿ, ವಿವರದೊಂದಿಗೆ ಕಳುಹಿಸಲಾಗುವುದು. **ಲೇ.**

ಹೊಲಿಗೆಯ ವರ್ಗ

★

ಕರ್ನಾಟಕ ಎಜ್ಯುಕೇಶನ್ ಬೋರ್ಡಿನಿಂದ ಪ್ರಾರಂಭವಾದ ಔದ್ಯೋಗಿಕ ವರ್ಗಗಳಲ್ಲೊಂದಾದ ಹೊಲಿಗೆಯ ವರ್ಗದಲ್ಲಿಯ ಶಿಕ್ಷಣದ ಲಾಭವನ್ನು ಇನ್ನಿತರರೂ ಪಡೆಯಲನುಕೂಲವಾಗಲೆಂದು, ಕೇವಲ ಐದು ಸ್ಥಳಗಳನ್ನು ಮಾತ್ರ ಹೊರಗಿನವರಿಗೆ ಕಾದಿರಿಸಲಾಗಿದೆ. ಇಚ್ಛೆಯುಳ್ಳವರು ೧ನೆಯ ಮೇ ೧೯೪೭ರೊಳಗಾಗಿ ಅರ್ಜಿ ಕಳಿಸಬೇಕು. ವಿಶೇಷ (ಶಿರ-ವೇಳೆ) ವಿವರಗಳಿಗಾಗಿ ಉತ್ತರಕ್ಕಾಗಿ ಅಂಚೆಯ ಚೀಟಿ ಇಟ್ಟು ಬರೆಯಿರಿ. ಇಲ್ಲವೆ ಭೆಟ್ಟಿಯಾಗಿರಿ.

ಕಾರ್ಯದರ್ಶಿ

ಕ. ಎ. ಬೋರ್ಡಿನ ಕೈಗಾರಿಕೆಯ
ವಿಭಾಗ, ಕೋಟೆ, ಧಾರವಾಡ.

ಸಾದರ ಸ್ವೀಕಾರ

೮೬. **ಸವಿನುಡಿ** (ವೀರಶೈವ ಕವಿಗಳ ಗ್ರಂಥಗಳಲ್ಲಿಯ ಸ್ಫುಟ ಪದ್ಯ-ವಚನಗಳ ಸಂಗ್ರಹ). ಸಂಗ್ರಹಕಾರರು ಶ್ರೀನಿರಂಜನ ವೀರರಾಜೇಂದ್ರಸ್ವಾಮಿಗಳು. ಪ್ರಕಾಶಕರು ಶ್ರೀಜಗದ್ಗುರು ಮುರುಘಾರಾಜೇಂದ್ರ ಮಠದ ಪಂಡಿತಮಂಡಲಿ, ಧಾರವಾಡ. ಫೂ. ಕ್ಯಾ. ೮. ೪೪ ಪುಟ; ಬೆಲೆ ೦-೪-೦.

೮೭. **ಉದಯಭಾರತ** (ಮಾಸಪತ್ರಿಕೆಯ ಪರ್ಯಾಯ ಸಂಚಿಕೆ). ಪ್ರಕಾಶಕರು ಶ್ರೀಮಾನ್ ಎ. ಶೇಷಪ್ಪಯ್ಯ, ಜನರಲ್ ಸೆಕ್ರೆಟರಿ ದ. ಕ. ಜಿಲ್ಲಾ ಹಿಂದೂ ಮಹಾ ಸಭಾ ಕಚೇರಿ, ಉಡುಪಿ. ಕ್ರಾ. ೧/೮ದ ೪೦ ಪುಟಗಳು. ಬೆಲೆ ೦-೪-೦.

ಉಡುಪಿಯ ಪರ್ಯಾಯ ಮಹೋತ್ಸವಕ್ಕೆ ಸಂಬಂಧಿಸಿದ ಸಚಿತ್ರ ಲೇಖನಗಳಲ್ಲದೆ ಹಿಂದೂ ಮಹಾಸಭೆಯ ಸಂದೇಶ ಸೂಚಕ ಲೇಖನಗಳನ್ನೂ ಈ ಸಂಚಿಕೆಯಲ್ಲಿ ಓದಬಹುದು.

೮೮. **ನವಯುಗ** (ವಾರಪತ್ರಿಕೆಯ ಪರ್ಯಾಯ ಮಹೋತ್ಸವ ಸಂಚಿಕೆ). ಸಂಪಾದಕರು ಶ್ರೀ. ಕೆ. ಕೆ. ಶೆಟ್ಟಿ; ವ್ಯವಸ್ಥಾ ಸಂಪಾದಕರು ಮತ್ತು ಪ್ರಕಾಶಕರು ಕೆ. ಎಚ್. ಶೆಟ್ಟಿ, ಉಡುಪಿ ಕ್ರಾ. ೧/೮ದ ೯೬ ಪುಟ, ಬೆಲೆ ೦-೮-೦.

ಪರ್ಯಾಯೋತ್ಸವ ವಿಷಯಕ ಲೇಖನವಲ್ಲದೆ ವಿವಿಧ ವಿಷಯಗಳನ್ನೊಳಗೊಂಡ ಹಲವು ಲೇಖನಗಳೂ ಕವನಗಳೂ ಕತೆಗಳೂ ಇದರಲ್ಲಿ ಪ್ರಕಟವಾಗಿವೆ. ಕರ್ನಾಟಕದಲ್ಲಿಯ ಕೆಲವು ಸಂಸ್ಥೆಗಳಿಗೆ ಸಂಬಂಧಿಸಿದ ವ್ಯಕ್ತಿಗಳ ಚಿತ್ರಗಳಲ್ಲದೆ, ಪರ್ಯಾಯೋತ್ಸವ ಚಿತ್ರಗಳೂ ಹಲವು ಯುದ್ಧ ಸಂಬಂಧದ ಚಿತ್ರಗಳೂ ಇದರಲ್ಲಿವೆ. ಹೊಸ ವಿಚಾರಗಳನ್ನು ಹರಡುವ ಉದ್ದೇಶವಿದರದು. ಎಲ್ಲರೂ ಸಂಗ್ರಹಿಸಿ ಓದಬೇಕು.

೮೯. **ಉಮರ್ ಕಥಾವಳಿ** (ಅನುವಾದಿತ ಕಥೆಗಳ ಸಂಗ್ರಹ) ಅನುವಾದಕರು ಶ್ರೀ. ಗುರುನಾಥ ಜೋಶಿ ಧಾರವಾಡ. ಧಾರವಾಡದ ಭಾರತೀಯ ಸಾಹಿತ್ಯ ಪ್ರಕಟನಾಲಯದ ಪ್ರಕಟನೆ. ಫೂ. ಕ್ಯಾ. ೮. ೪೬ ಪುಟ. ಬೆಲೆ ೦-೪-೦.

೯೦. **ಪುರಾಣ ನಾಮ ಚೂಡಾಮಣಿ** (ಪುರಾಣಗಳಲ್ಲಿ ಬಂದಿರುವ ನಾಮಪದಗಳ ಕೋಶ). ರಚಿಸಿದವರು ಶ್ರೀಮಾನ್ ಬೆನಗಲ್ಲ ರಾಮರಾಯರು ಎಂ. ಎ., ಎಲ್ ಎಲ್. ಬಿ. ಮತ್ತು ವಿದ್ವಾನ್ ಪಾನ್ಯಂ ಸುಂದರ ಶಾಸ್ತ್ರಿಗಳು, ಮೈಸೂರು ವಿ. ವಿ. ನಿಲಯದ ಕನ್ನಡ ಪ್ರಕಟನೆ. ಡೆ. ೮. ೭೩೬ ಪುಟಗಳು; ಬೆಲೆ ೨-೧೨-೦.



೧೮. ಬಿಡುಗಡೆಯ ಬೆಲೆ

ಬರೆದವರು : ಶ್ರೀ. ವಡಗೇನಹಳ್ಳಿ ಅಶ್ವತ್ಥನಾರಾಯಣರಾವ್, ಮನೋಹರ ಗ್ರಂಥಮಾಲೆಯ ೪೬ ನೆಯ ಕುಸುಮ.

ಇದೊಂದು ಸ್ವಯಂಸೇವಕನ ದಿನಚರಿ. ದಿನಚರಿಯ ಸಾಹಿತ್ಯ ನಮ್ಮ ಭಾಷೆಗೆ ಇನ್ನೂ ಹೊಸದು; ನಮ್ಮ ಜೀವನಕ್ಕೆ ಇನ್ನೂ ಹೊಸದು. ದಿನಂಪ್ರತಿ ನಡೆವ ಸಂಗತಿಗಳನ್ನೂ ಅವು ಮನದ ಮೇಲೆ ಮಾಡುವ ಮುದ್ರಣಗಳನ್ನೂ ಬರೆದಿಡುವ ಪದ್ಧತಿ ನಮ್ಮಲ್ಲಿ ಕಡಿಮೆ. ವೈಯಕ್ತಿಕ ಏಳಿಗೆಗೆ ದಿನಚರಿಯು ಹೆಚ್ಚು ಅನುಕೂಲ. ಸಾಮಾನ್ಯವಾಗಿ, ಪ್ರಕಟನೆಗಾಗಿಯಲ್ಲವೆಂದು ತಿಳಿದೆ ಅದನ್ನು ಬರೆಯಲಾಗುತ್ತದೆ. ಆದರಲ್ಲಿ ಮುಚ್ಚುಮರೆ ಯಾವುದೂ ಇರದೆ ಮನದಲ್ಲಿ ಮೂಡಿದುದೆಲ್ಲವೂ ಬಯಲಿಗೆ ಬಂದಿರುವುದು. ಒಬ್ಬನ ದಿನಚರಿಯನ್ನು ಅಭ್ಯಾಸಮಾಡುವುದರಿಂದ ಅವನ ಸ್ವಭಾವ-ಗುಣ- ಶೀಲ- ಧ್ಯೇಯ- ಕಾರ್ಯಗಳನ್ನು ಸಹಜವಾಗಿ ತಿಳಿಯಬಹುದಾಗಿದೆ. ಅಲ್ಲದೆ ಸಾಮಾಜಿಕ ಘಟನೆಗಳ ವರದಿಯು ಕೂಡ ಸಿಕ್ಕುವುದು.

ಈ ಗ್ರಂಥದಲ್ಲಿ ಒಬ್ಬ ಸ್ವಯಂಸೇವಕನು ತನ್ನ ಮೇಲೆ ಆದ ಸಾಂದರ್ಭಿಕ ಆಘಾತಗಳನ್ನು ಬರೆಯುತ್ತಹೋಗಿದ್ದಾನೆ. ೧೯೩೦ ರ ಮೊದಲುದಿನಗಳ ಪರಿಸ್ಥಿತಿಯೆ ಹಿನ್ನೆಲೆಯಾಗಿದೆ. ಸಾಮಾನ್ಯ ಘಟನೆಗಳು ಕೂಡ ತರುಣ ಹೃದಯದ ಮೇಲೆ ಯಾವ ಪರಿಣಾಮ ಮಾಡುತ್ತಿದ್ದುವೆಂಬುದು ಡಾರಿಯಾಗಿ ಕಾಣುವುದು. ಆ ಕಾಲದ ಸ್ಥಿತಿಯು ಪ್ರತಿಯೊಬ್ಬ ಧ್ಯೇಯವಾದಿ—ದುಡುಕಿನ-ತರುಣನನ್ನು ದೇಶದಕಾರ್ಯಕ್ಕಾಗಿ ಕರೆಯುತ್ತಿತ್ತು. ದೇಶಕಾರ್ಯದಲ್ಲಿ ಧುಮುಕುವುದು ಎಷ್ಟು ಕ್ರಮಪ್ರಾಪ್ತವಾದುದೆಂಬುದು ಕಾಣುವುದು. ತಮ್ಮತಮ್ಮ ಕೆಲಸಗಳನ್ನು ಬಿಟ್ಟು ದೇಶಕಾರ್ಯದ ಭಾರ ಹೊತ್ತು ನಾಯಕರ ನಿರ್ದೇಶದಂತೆ ದುಡಿವುದು. ಅದಕ್ಕೆ ಸಿಗುವುದು ಪ್ರತಿಫಲ: ಅಜ್ಞಾನದ ಅಂಧಕಾರದಲ್ಲಿ ಮುಸುಕಿದ ಜನತೆಯನ್ನು ಮೇಲೆ ಎಬ್ಬಿಸುವುದರಲ್ಲಿ ದೊರೆವ ಆನಂದ; ಕರ್ತವ್ಯಪಾಲನೆಯ ಫಲ. ಸಂಸಾರದ 'ದ್ರೋಹ' ಕಟ್ಟಿಕೊಂಡು ಸೆರೆಮನೆಯ ವಾಸ. ಇಡಿ ಭಾರತವೆ ಒಂದು ಸೆರೆಮನೆ. ನಿಸರ್ಗ ಸೌಂದರ್ಯವು ಒಮ್ಮೊಮ್ಮೆ ಈ ಸೆರೆಮನೆಯ ಗಡಿಗಳನ್ನು ಮೀರಿಸಿ ಆನಂದದಲ್ಲಿ ಮುಳುಗಿಸುವುದೇನೊ ನಿಜ. ಆದರೆ ಯಾವ ಕಾರ್ಯಮಾಡಲಿಕ್ಕೂ ಸ್ವಾತಂತ್ರ್ಯ ಎಲ್ಲ. ನಮ್ಮ ದೇಶದ ಹಿತ ನಾವು ನೋಡಲು ಅಧಿಕಾರವಿಲ್ಲ. ಈ ಅಧಿಕಾರವಿಲ್ಲದುದಕ್ಕೆ ಹೇಗೆ-ಎಷ್ಟು ಕಷ್ಟಸಂಕಟಗಳನ್ನು ಕಾರ್ಯಕರ್ತರು ಅನುಭವಿಸಬೇಕಾಗಿ ಬಂತು? ಇದೆಲ್ಲವನ್ನೂ ನೋಡಲು ಇದೊಂದು ಕನ್ನಡಿ.

ಸೆರೆಮನೆಯಲ್ಲಿಯ ಆಹಾರ,—ವಿಚಾರಿಸಿದರೆ ಮೈ ಜುಮ್ಮೆನ್ನುತ್ತದೆ. ಸೆರೆಮನೆಯಲ್ಲಿ ಒಂದು ಸಮಾಧಾನ. ಅಲ್ಲಿ ಅನೇಕ ನಾಯಕರೊಡನೆ ಒಂದೆಡೆಗೆ ಇದ್ದು ಅವರ ಅನುಭವದ ಪಾಠಗಳನ್ನು ಪಡೆಯಲು ಮಾತ್ರ ಹೆಚ್ಚಿನ ಅನುಕೂಲ. ನಾಯಕರು ಸೆರೆಮನೆಯ ಹೊರಗೆ ಇದ್ದಾಗ ಅವರ ಸ್ಥಾನ ಬೇರೆ ಇರುತ್ತದೆ. ಅವರ ಅಂತರಂಗದ ಬಗ್ಗೆ ಏನೂ ತಿಳಿವುದಿಲ್ಲ. ಸೆರೆಮನೆಯಲ್ಲಿ ಹಾಗಲ್ಲ.

ಸೆರೆಮನೆಯ ಸಂಕಟಗಳನ್ನು ದಾಟಿ ಹೊರಗೆ ಬಂದ ಕೂಡಲೆ, ಬೇನೆ ಬೆನ್ನಟ್ಟುವುದು. ಬೇನೆಯ ಬಳಲಿಕೆಯಿಂದ ಪಾರಾಗಿ ಉಳಿದಾಗ ಸಮಾಜದ ಕಡೆಗಣ್ಣಿಗೆ ಪಾತ್ರನಾಗಬೇಕು. ಹಿಂದೆ ಮಾಡುತ್ತಿದ್ದ ಕೆಲಸ ದೊರೆಯದು. ನಿರುದ್ಯೋಗವು ಬೆನ್ನು ಹತ್ತುವುದು. ರಾಷ್ಟ್ರಕಾರ್ಯವು ಅದೆಷ್ಟು ಸಂಕಟಮಯವಾದುದು ಎಂಬುದನ್ನು ತಿಳಿಯಬೇಕೆನ್ನುವವರು ಈ ಗ್ರಂಥವನ್ನು ಅವಶ್ಯ ಓದಬೇಕು. ಓದುವಾಗ ಕತೆ-ಕಾದಂಬರಿಯ ಕುತೂಹಲ ಉಂಟಾಗುತ್ತದೆ. ಇದಿಷ್ಟೆ ಸಾಕು, ಬರೆವಣಿಗೆಯ ಬಗ್ಗೆ ಹೇಳುವುದು. ವಾಕ್ಯಗಳು ಚಿಕ್ಕವಾಗಿವೆ. ಭಾವನೆಗಳು ಸ್ಪಷ್ಟವಾಗಿವೆ. ಯಾವ ಭಾಗದಲ್ಲಿಯೂ ಹೆಸರುಗಳು ಹೆಚ್ಚಾಗಿ ಬಾರದ್ದರಿಂದ ಓದುಗರಲ್ಲಿ ಒಂದು ಬಗೆಯ ಆತ್ಮೀಯತೆಯು ತಲೆದೋರಿ— ತಮ್ಮದೆ ದಿನಚರಿಯೆಂದು ಭಾಸವಾಗುವುದು. ಅದು ಇನ್ನಿಷ್ಟು ರುಚಿ ತರುವುದು. ಆದರೆ ಹೆಸರುಗಳು—ಸ್ಥಳನಿರ್ದೇಶಗಳು ಇಲ್ಲದ ಮೂಲಕ, ಸತ್ಯಸೃಷ್ಟಿಯಿಂದ ದೂರವಾದಂತೆ ಎನಿಸುವುದು. ಅಲ್ಲಿಯ ಕಾರ್ಯರಂಗದ—ಕಾರ್ಯಕರ್ತರ ಹೆಸರುಗಳು ಬಂದರೆ ಇದೊಂದು ಆ ಕಾಲದ ಇತಿಹಾಸವಾಗಲು— ಚೆನ್ನಾಗಿ ಕಲಾಪೂರ್ಣವಾಗಿ ಬರೆದ ಇತಿಹಾಸವಾಗಲು— ಅಡ್ಡಿಯಿಲ್ಲ.

ಇದೊಂದು ಸಂಗ್ರಾಹ್ಯವಾದ ಗ್ರಂಥ. ದೇಶಕ್ಕೆ ಆತ್ಮಾರ್ಪಣೆ ಮಾಡುವವರ ಮನೋವೃತ್ತಿಯನ್ನು ತಿಳಿವುದಕ್ಕೆ ಸಹಾಯವಾಗುವುದು. ಆತ್ಮಾರ್ಪಣೆ ಮಾಡುವುದು ಕಠಿಣಸಾಧ್ಯವಾದುದು. ಆಗಿನ ಮನದಲ್ಲಿ ಕಂಡುಬರುವ ಹೊಯ್ದಾಟವು ಇನ್ನಿಷ್ಟು ಕಂಡಿದ್ದರೆ ಇನ್ನೂ ಚೆನ್ನಾಗುತ್ತಿತ್ತೇನೊ!

—ನೆರಂಗ.

ನಗೆ ನೈವೇದ್ಯ

ಹೆಂಡತಿಗೆ ಹೇಳಿದ ಸಮಾಧಾನ

ಆಕೆ:— ಈ ಮನಿಯೊಳಗ ನನಗ ಮಾನಾ–ಮರ್ಯಾದೀ ಏನೂ ಇಲ್ಲದ್ಹಾಂಗ ಆಗೇದ. ನಾ ಅಂದರ ಒಬ್ಬ ಅಡಿಗಿಯಾಕಿ ಇದ್ದೀನಂತ ತಿಳಿದುಬಿಟ್ಟಾರ ಎಲ್ಲಾರೂ!

ಆತ:— ಛೇ ಛೇ! ಇದೇನಿದು ಹುಚ್ಚು ಮಾತು ನಿಂದು! ನೀ ಮಾಡಿದ ಅಡಿಗೀ ಊಟಾ ಮಾಡಿದರಂದರ, ಯಾರೂ ಹಾಂಗ ತಿಳಕೊಳ್ಳಲಾರರು ; ಗೊತ್ತಾಯಿತೇನು ?

* * *

ಹಲ್ಲಿನ ಸೆಟ್ಟು

" ನಿಮಗ ಚಳಿ ಚಳಿ ಅನಿಸಿ, ಆ ಮ್ಯಾಲ ಜ್ವರಾ ಬಂದುವು ಅಲ್ಲೇನು ? ಸರಿ! ಚಳಿ ಚಳಿ ಅನಿಸಿತಲ್ಲಾ ಆಗ, ಹಲ್ಲು ಕಟಕಟಾ ಅಂತ ಬಂಡಿಕ್ಕೊಂಡು ಬಾರಿಸತಿದ್ದೂ ಏನು ?"

" ಅದನ್ನ ನಾ ಏನೂ ನೋಡಲಿಲ್ಲ ಏನ್ರೆಪಾ!"

" ಅಂದರ ?"

" ಆಗ ನಾನು ಹಲ್ಲಿನ ಸೆಟ್ಟು ತೆಗಿದು ಡಬ್ಬಿಯೊಳಗ ಹಾಕಿ ಮುಚ್ಚಿ ಇಟ್ಟಿದ್ದೆ!"

* * *

ಗುಂಡನ ಸಾಹಸ

ಗುಂಡ:— ಅಪ್ಪಾ, ನಾ ದೊಡ್ಡವನಾದ ಮ್ಯಾಲೆ ಹಿಮಾಲಯದೊಳಗ ಎಲ್ಲಕ್ಕಿಂತ ಎತ್ತರ ಇರುವ ಶಿಖರ ಯಾವುದೂ ಅಂಬೂದನ್ನ ಕಂಡು ಹಿಡೀಬೇಕಂತ ಮಾಡೀನಿ!

ತಂದೆ:— ಭಲೆ ಭಲೆ! ನಿನ್ನ ಸಾಹಸದ ಅಪೇಕ್ಷೆಯನ್ನ ನೋಡಿ ನನಗ ತುಂಬಾ ಅಭಿಮಾನ ಅನಿಸತದ ನೋಡಪಾ ಗುಂಡ್ಯಾ!

ಗುಂಡ:— ಆದರ ಅಪ್ಪಾ, ಅಲ್ಲಿಯ ಥಂಡೀ ತಡಕೊಳ್ಳಲಿಕ್ಕೆ ಈಗಿನಿಂದಲೇ ರೂಢಿಮಾಡಿಕೊಳ್ಳಬೇಕು. ಅದಕಾಗಿ ದಿನಾ ಐದಾರು ಪ್ಲೇಟನಷ್ಟು ಆಯಿಸ್‌ಕ್ರೀಮು ತಿನ್ನೂ ಅಭ್ಯಾಸ ಇಡಬೇಕು; ಇಂದಿನಿಂದನೇ!

* * *

ಏನು ಓದಬೇಕು ?

" ಅಲ್ಲಾ ಸರ್, ಯಾವಾಗಲೂ ಓದತಿರಬೇಕೂ ಅಂತ ಹೇಳತೀರಿ. ನನ್ನ ಈ ಕೋರ್ಸು ಎಲ್ಲಾ ಮುಗಿದು ಪರೀಕ್ಷಾ ಆದಮ್ಯಾಲೆ, ನಾನು ಏನು ಓದತಿರಬೇಕು ?"

" ವರ್ತಮಾನ ಪತ್ರದೊಳಗ ದಿನದಿನಾ-ವಾರ ವಾರಾ ಬರತಿರತಾವ ನೋಡು.. ಜಾಹೀರಾತು 'ಕೆಲಸಗಾರರು ಬೇಕು' ಅಂತ! ಅವನ್ನ ಓದತಾ ಇರು!"

* * *

ಜಗಳವಿರದ ಗಂಡ–ಹೆಂಡರು

" ನೋಡ್ರಿ, ನನ್ನ ಮತ್ತು ನನ್ನ ಹೆಂಡತಿಯ ನಡುವೆ ಜಗಳಾ ಅಂತ ಎಂದೂ ಬಂದಿಲ್ಲ ನೋಡ್ರಿ!"

" ಎಂದೂ:— ಎಂದೂ ಬಂದಿಲ್ಲs ? ಅದು ಹ್ಯಾಂಗರೆಪ್ಪಾ!"

" ಅದರೊಳಗೇನದರೀ ದೊಡ್ಡ ವಿಷಯ! ಆಕಿ ತನ್ನ ಮನಸಿಗೆ ಬಂದ್ಹಾಂಗ ಇರತಾಳ; ನಾ ಆಕೀ ಮನಸಿಗೆ ಬಂದ್ಹಾಂಗ ಇರತೀನಿ!"

* * *

ಒಳ್ಳೆಯ ಲ್ಯಾಂಡ್‌ಲಾರ್ಡ್

" ಬಾಕಿಯಾಗಿ ಉಳಿದಿರೂ ಬಾಡಿಗೀ ಎಲ್ಲಾ ಕೊಡ್ರಿ; ಇಲ್ಲದಿದ್ದರೆ ಮನೀ ಬಿಟ್ಟು ಬಿಡ್ರಿ!"

" ನೋಡ್ರಿ, ನಮ್ಮ ಹಿಂದಿನ ಲ್ಯಾಂಡ್‌ಲಾರ್ಡ್‌ಗಿಂತಾ ನೀವು ಒಳ್ಳೆಯವರು ಇದ್ದೀರಿ 'ಬಾಡಿಗೀನೂ ಕೊಡ್ರಿ; ಮನೀನೂ ಬಿಡ್ರಿ' ಅಂತ ಎರಡೂ ರೀತಿಂದ ತಗಾದೀ ಹಚ್ಚಿಬಿಟ್ಟಿದ್ದ!"

* * *

ಕೋಟೆಗೆ ಮುತ್ತಿಗೆ

ಆಕೆ:— ಲಗ್ನ ಆಗೂದಕಿಂತಾ ಮೊದಲ, ನೀವು ಮುತ್ತಿಗೀ ಹಾಕಿದವರ್ಹಾಂಗ.. ಒಂದೇ ಸಮನೇ ನನ್ನ ಸುತ್ತಮುತ್ತಲೇನs ತಿರಗತಿದ್ದಿರಿ. ಈಗ ಯಾಕ ದೂರ ದೂರ..!

ಆತ:— ನೋಡು, ಇದರೊಳಗ ಆಶ್ಚರ್ಯ ಏನದ? ಕೋಟೆ ಕೈವಶ ಆಯಿತು; ಮುತ್ತಿಗೀ ಎಬ್ಬಿಸಿ ಬಿಟ್ಟೆ ?

* * *

ಐದು ನಿಮಿಷದೊಳಗೆ ಅಡಿಗೆ

ಆತ:— ಇನ್ನೂ ಅಡಿಗಿ ಆಗಲಿಲ್ಲ ಹೌದಲ್ಲೊ? ಸರಿ ಹೋಯಿತು. ನಾ ಇನ್ನ ಖಾನಾವಳಿಗೇ ಹೋಗಿ ಬಿಡತೀನಿ!

ಆಕೆ:— ಐದೇ ಐದು ನಿಮಿಷ ತಡೀರಿ ಹಾಂಗಾದರ!

ಆತ:— ಹ್ಯಾಂಗೇನು? ಐದು ನಿಮಿಷದೊಳಗs ಅಡಿಗೀ ಮಾಡಿ ತೋರಿಸುವಾಕಿ ಇದ್ದೀಯೇನು ?

ಆಕೆ:— ಛೇ, ಹಾಂಗಲ್ಲ! ಮುಖಾ ತೊಳಕೊಂಡು, ಪಾವಡರ್ ಹಾಕ್ಕೊಂಡು ನಾನೂ ನಿಮ್ಮ ಜೋಡೀ ಖಾನಾವಳಿಗೆ ಬಂದು ಬಿಡತೀನಿ ಊಟಕ್ಕ!

* * *

ಸರಿಯಾದ ವೇಳೆ

" ಅಲ್ರೀ, ಈ ರೇಲ್ವೆ ಕಂಪನೀಟ್ರೇನುಗಳ ಎಂದೂ ವೇಳೆಗೆ ಸರಿಯಾಗಿ ಬರೂದೇ ಇಲ್ಲವೇನ್ರೀ ?"

" ಬರದೇ ಏನ್ರೀ? ಬಂದಾಗ ಅದ ವೇಳೆ ಸರಿಯಾಗೇ ಇರತದ!"

* * *



ಸ್ವಯಂನಾಶದ ತತ್ತ್ವ

ಇಂದಿನ ಯುದ್ಧದ ಕ್ರಮದಲ್ಲಿ ಸ್ವಯಂನಾಶ (Scorched Earth) ವೂ ಒಂದು ನೀತಿಯಾಗಿದೆ. ದೇಶದಲ್ಲಿದ್ದ ಉದ್ಯಮ-ಕೇಂದ್ರಗಳೂ ಯಾಂತ್ರಿಕ ಕಾರಖಾನೆಗಳೂ ಶತ್ರುವಿನ ವಶವಾದರೂ ಅವನಿಗೆ ಉಪಯೋಗಕ್ಕಾಗಬಾರದೆಂದು, ತಮ್ಮದನ್ನು ತಾವೇ ನಾಶಪಡಿಸುವ ನೀತಿಯನ್ನು ಸ್ಟಾಲಿನರ ನೇತೃತ್ವದಲ್ಲಿ ರಶಿಯನ್ನರು ರೂಢಮಾಡಿದರು; ಯುದ್ಧದ ದೃಷ್ಟಿಯಿಂದ ಇದಕ್ಕೆ ಅತ್ಯಂತ ಮಹತ್ತ್ವವಿದೆ. ಸಿಂಗಾಪುರದ ನೌಕಾಕೇಂದ್ರವನ್ನೂ ಮಲಯದಲ್ಲಿ ವಿಮಾನಗೃಹಗಳನ್ನೂ ಡಚ್ ಈಸ್ಟ ಇಂಡೀಜದಲ್ಲಿ ಎಣ್ಣೆಯ ಕಣಿಗಳನ್ನೂ—ಮಿತ್ರರಾಷ್ಟ್ರದವರು ತಮ್ಮವನ್ನು ತಾವೇ-ಶತ್ರು ಅಲ್ಲಿಗೆ ಬರುವ ಮುಂಚೆ ನಾಶಪಡಿಸಿದುದು ಈ ಧೋರಣೆಯನ್ನನುಸರಿಸಿಯೆ. ದಕ್ಷಿಣ ಬರ್ಮಾ ಮತ್ತು 'ರಂಗೂನವು ಜಪಾನರ ವಶವಾದ್ದರಿಂದ, ಯುದ್ಧವು ನಮ್ಮ ದೇಶಕ್ಕೆ ಬಂದಿತು ಎನಲು ಅಡ್ಡಿ ಇಲ್ಲ. ಅದಕಾಗಿ ಸರಕಾರಕ್ಕೂ ಸಂಪತ್ತಿನ ಸ್ವಾಮಿಗಳಿಗೂ ಈ 'ಸ್ವಯಂನಾಶಪದ್ಧತಿ'ಯ ಬಗ್ಗೆ ವಿಚಾರಮಾಡಬೇಕಾಗಿದೆ. ಸಂಪತ್ತಿನ ಸ್ವಾಮಿಗಳ ಪರಿಯಿಂದ ಸರ್ ಪುರುಷೋತ್ತಮದಾಸರು ಒಂದು ಮಾತನ್ನು ಖಂಡತುಂಡವಾಗಿ ಹೇಳಿದ್ದಾರೆ. 'ಹಿಂದುಸ್ಥಾನವು ರಶಿಯಾಕ್ಕಿಂತ ಬೇರೆಯಾಗಿದೆ; ರಶಿಯಾದಲ್ಲಿ ಎಲ್ಲದರ ಒಡೆತನವು ಸರಕಾರಕ್ಕಿದೆ. ಆದುದರಿಂದ ತಾನು ಹಾಳುಗೆಡುಹಿದುದನ್ನು ತಾನೇ ಕಟ್ಟುವ ಶಕ್ಯತೆಯೂ ಹೊಣೆಯೂ ಸರಕಾರಕ್ಕಿದೆ. ಆದರೆ ನಮ್ಮಲ್ಲಿ ಇಂತಹ ಸ್ವಾಮಿತ್ವವು ವ್ಯಕ್ತಿಗಳಿಗೆ ಇಲ್ಲವೆ ಸರಕಾರೇತರ ಸಂಸ್ಥೆಗಳಿಗೆ ಇದೆ. ಹೀಗಿರುವಾಗ ಭಸ್ಮಾಸುರ ಮಸ್ತಕ ಧೋರಣೆಯನ್ನು ಸರಕಾರವು ವಿಚಾರ ಮಾಡದೆ ಸ್ವೀಕರಿಸಬಾರದು, ಇಲ್ಲವೆ ಅದಕ್ಕೆ ಒತ್ತಾಯಪಡಿಸಬಾರದು'—ಎಂದು. ಆದರೆ ಸರಕಾರವು ಅನೇಕ ಕಡೆ ಇಂತಹ ಕಾರಖಾನೆಗಳ ವಿಮೆಯನ್ನು ಕಡ್ಡಾಯವಾಗಿ ಇಳಿಸಬೇಕೆಂದು ಯೋಜಿಸಿದೆ. ಈ ಸಂದರ್ಭದಲ್ಲಿ ನಾಶದ ಭರತಿಯನ್ನು ಸರಕಾರವೆ ಮಾಡಬೇಕಲ್ಲವೆ?

ಪಾರತಂತ್ರ್ಯದ ಪರಿಣಾಮ

ಮೇಲಿನ ಸಂಗತಿಯನ್ನು ಮುಖ್ಯವಾಗಿ ಒಂದು ಮಹತ್ತ್ವದ ಪಾರತಂತ್ರ್ಯದ ಉದಾಹರಣೆ ಎಂದು ನಾವು ಕಾಣಿಸಿದ್ದೇವೆ. ಸಂರಕ್ಷಣಾ ಕಾರ್ಯದಲ್ಲಿ ವಿಘ್ನತರುವ ಉದ್ದೇಶದಿಂದ ಸರ್ ಪುರುಷೋತ್ತಮರು ಮಾತನಾಡಿಲ್ಲವೆಂಬುದು ಸ್ಪಷ್ಟವಿದೆ. ದೇಶದ ರಾಜಕೀಯ ಪರಿಸ್ಥಿತಿಗೆ ಸರಕಾರದ ಲಕ್ಷ್ಯವನ್ನು ಸೂಳಲು, ರಾಜಕೀಯ ಸ್ಥಿತಿಯ ಮಹತ್ತ್ವ ಈ ಸಂದರ್ಭದಲ್ಲಿ ಎಷ್ಟಿದೆ ಎಂದು ತೋರಿಸಲು ಅವರು ಇಂತಹ ಬಿಚ್ಚುಮಾತುಗಳನ್ನು ಹೇಳಿದ್ದಾರೆ. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವಿದ್ದರೆ, ಇಲ್ಲವೆ ಯುದ್ಧಧೋರಣೆಯನ್ನು ನಡೆಯಿಸುವ ಅಧಿಕಾರವಿದ್ದರೆ, ಕೊನೆಗೆ ಸರಕಾರದಲ್ಲಿ ಜನತೆಯ ಪ್ರೀತಿ-ವಿಶ್ವಾಸಗಳ ಪ್ರತಿನಿಧಿಗಳಿದ್ದರೆ, ಈ ಸಿರಿವಂತರಿಗೆ ಇಂತಹ ಸಂದೇಹಕ್ಕೆ ಆಸ್ಪದವಿರುತ್ತಿರಲಿಲ್ಲ. ಸದ್ಯದ ರಾಜಕೀಯ ಸ್ಥಿತಿಯಲ್ಲಿ ಮಾತ್ರ ಸರ್ ಪುರುಷೋತ್ತಮದಾಸರು ತಮ್ಮ ಅಭಿಪ್ರಾಯ ನ್ಯಾಯವಾದುದು ಎಂದರೆ ಆಶ್ಚರ್ಯವೆನಿಸಬೇಕಾಗಿಲ್ಲ.

(೧೦-೩-೪೨)

ಶಾಂತಿದೂತ ಸ್ಟ್ಯಾಫರ್ಡರು

ಸರ್ ಸ್ಟ್ಯಾಫರ್ಡ್ ಕ್ರಿಪ್ಸರು ಬ್ರಿಟಿಶ ಮಂತ್ರಿಮಂಡಳದಲ್ಲಿ ಸೇರಿದುದರ ಪರಿಣಾಮವು ಭಾರತದ ಬಿಕ್ಕಟ್ಟಿನ ಮೇಲೆ ಆಗಲೇಬೇಕೆಂದು ಹೋದ ಸಲ ಬರೆದುದು ಇಷ್ಟರಲ್ಲಿಯೆ ಸತ್ಯವಾಗಿದೆ. ಮುಖ್ಯ ಮಂತ್ರಿಗಳಾದ ಚರ್ಚಿಲ್‌ರು ಹಿಂದುಸ್ಥಾನದ ವಿಷಯಕ್ಕೆ ಒಂದು ಅಧಿಕೃತ ಹೇಳಿಕೆಯನ್ನು ಪಾರ್ಲಮೆಂಟಿಗೆ ಒಪ್ಪಿಸಿದ್ದಾರೆ. ಬ್ರಿಟಿಶ ಮಂತ್ರಿಮಂಡಳವು ಏಕಮತದಿಂದ ಒಪ್ಪಿಕೊಂಡ ಯೋಜನೆ ಯಾವುದೆಂಬುದನ್ನು ಅವರು ಹೇಳಿಲ್ಲ. ಆದರೆ ಆ ಯೋಜನೆಯನ್ನು ಭಾರತೀಯ ಮುಂದಾಳುಗಳೊಡನೆ ಚರ್ಚಿಸಲು ಸರ್ ಸ್ಟ್ಯಾಫರ್ಡ್ ಕ್ರಿಪ್ಸರು ಮಂತ್ರಿಮಂಡಳದ ಪರಿಯಿಂದ ಅಧಿಕೃತರಾಗಿ ಹಿಂದುಸ್ಥಾನಕ್ಕೆಯೆ ಬರುವವರಿದ್ದಾರೆಂಬುದು ಅತ್ಯಂತ ಮಹತ್ತ್ವದ ಸಂಗತಿಯಾಗಿದೆ. ಇದಲ್ಲದೆ ಮಿ. ಚರ್ಚಿಲ್‌ರ ಹೇಳಿಕೆಯಲ್ಲಿ ಇನ್ನೂ ಮಹತ್ತ್ವದ ಕೆಲವು ಸಂಗತಿಗಳು ಅಡಕವಾಗಿವೆ.

(೧) ಮಂತ್ರಿಮಂಡಳದ ಅಧಿಕೃತ ಪ್ರತಿನಿಧಿ ಬರುವುದರಿಂದ, ಈ ಬಿಕ್ಕಟ್ಟನ್ನು ಬಿಡಿಸಲೇ ಬೇಕೆಂಬ ನಿರ್ಧಾರ ಬ್ರಿಟಿಶ ಸರಕಾರಕ್ಕಿದೆ ಎನಬಹುದು.

(೨) ಭಾರತೀಯ ಮುಂದಾಳುಗಳೊಡನೆ ಚರ್ಚೆಮಾಡುವರೆಂದ ಮೇಲೆ, ವೈಸರಾಯ-ಭಾರತಮಂತ್ರಿ ಮೊದಲಾದ ಅಧಿಕಾರಿಗಳ ಮಾತನ್ನು ಕೇಳುವ ಪದ್ಧತಿಯನ್ನು ಬಿಟ್ಟಂತಾಗಿದೆ.

(೩) ಅಲ್ಪಸಂಖ್ಯಾಕರು ತಮ್ಮ ಹಟದಿಂದ ದೇಶದ ಪ್ರಗತಿಯನ್ನು ತಡೆಯುವ, ಬಹುಸಂಖ್ಯಾಕರು ಉಳಿದವರನ್ನು ಪೀಡಿಸುವ ಪ್ರವೃತ್ತಿಗೆ ಎಳ್ಳಷ್ಟು ಪ್ರೋತ್ಸಾಹವಿಲ್ಲ ಎಂದು ತಮ್ಮ ಯೋಜನೆಯ ವಿಷಯವಾಗಿ ಚರ್ಚಿಲ್‌ರು ಸ್ಪಷ್ಟವಾಗಿ ಹೇಳಿದ್ದಾರೆ. ಇದರಿಂದ ಮುಸ್ಲಿಂಲೀಗ್, ಮಹಾಸಭೆ ಇವರಿಗೆ ವಿಶೇಷವಾಗಿ ಎಚ್ಚರವನ್ನು ಕೊಡಲಾಗಿದೆ ಎಂದು ತಿಳಿಯಲು ಅಡ್ಡಿ ಇಲ್ಲ.

ಈ ವಿಷಯವಾಗಿ ಸರ್ ಸ್ಟ್ಯಾಫರ್ಡರ ಚರ್ಚೆ ಮುಗಿವ ವರೆಗೆ ಇಂಗ್ಲಂಡಿನಲ್ಲಾಗಲಿ ಭಾರತದಲ್ಲಾಗಲಿ ವ್ಯಕ್ತಿ ಇಲ್ಲವೆ ಪತ್ರಿಕೆಗಳು ಯಾವ ಚರ್ಚೆಯನ್ನೂ ನಡೆಯಿಸಬಾರದೆಂದು ಚರ್ಚಿಲ್‌ರು ಕೇಳಿಕೊಂಡದ್ದು ಯೋಗ್ಯವಾಗಿದೆ. ಇಲ್ಲವಾದರೆ, ಪ್ರತ್ಯಕ್ಷ ಭೆಟ್ಟಿಯಾಗಿ ಚರ್ಚಿಸುವ ತೊಂದರೆ ತೆಗೆದುಕೊಂಡುದರ ಲಾಭವೇನು? ಸದ್ಯಕ್ಕೆ ಇಂಗ್ಲಂಡಿನಲ್ಲಿ ಎಲ್ಲರಿಗೆ ಪ್ರಿಯರಾದ, ಎಲ್ಲರ ವಿಶ್ವಾಸಕ್ಕೆ ಪಾತ್ರರಾದ, ಕಾಮನ್ಸ್ ಸಭೆಯ ನೇತೃಗಳಾದ ಸರ್ ಸ್ಟ್ಯಾಫರ್ಡರನ್ನು ದೇಶದ ಹೊರಗೆ ಕಳುಹಲು ಚರ್ಚಿಲ್‌ರು ಸಿದ್ಧರಾಗಿದ್ದಾರೆ. ಇದರ ಮೇಲಿಂದ ಭಾರತದ ಬಿಕ್ಕಟ್ಟನ್ನು ಬಿಡಿಸುವ ಅವಸರವೂ ಹಟವೂ ಅವರಿಗಿಷ್ಟಿದೆ ಎಂಬುದು ಸ್ಪಷ್ಟವಾಗುವುದು.

(೧೧—೪—೪೨)

ತೂಕ ತಪ್ಪಿದೆಯೆ ?

ಬೇರೆ ಯಾರೂ ತಮ್ಮ ಅಭಿಪ್ರಾಯವನ್ನೂ ಚರ್ಚೆಯನ್ನೂ ಈ ವಿಷಯದಲ್ಲಿ ನಡೆಯಿಸಬಾರದೆಂದು ಮಿ. ಚರ್ಚಿಲ್‌ರು ಹೇಳಿದ್ದು ಯೋಗ್ಯವಾಗಿದೆ ಎಂದೆವಷ್ಟೆ! ಆದರೆ ಇನ್ನೊಂದು ದೃಷ್ಟಿಯಿಂದ ಚರ್ಚಿಲ್‌ರು ತಮ್ಮ ಮಂತ್ರಿಮಂಡಳದ ಯೋಜನೆಯ ವಿಷಯವಾಗಿ ಒಂದು ಮಾತನ್ನು ಹೇಳಬಾರದಾಗಿತ್ತು ಎಂದು ನಮ್ಮ ಅಭಿಪ್ರಾಯ. ಆ ಮಾತೆಂದರೆ, ತಮ್ಮ ಯೋಜನೆ ನ್ಯಾಯವಾದುದೂ ಕೊನೆಯದೂ (just and final) ಇದೆ ಎಂಬ. ಯಾಕೆಂದರೆ ಬೇರೆ ಪಕ್ಷಗಳಿಗೆ—ಅವರೆಲ್ಲರಿಗೂ ಹೆಚ್ಚು ಸಂಬಂಧ ಇದೆ—ಯೋಜನೆಯು ಗೊತ್ತಿಲ್ಲದಾಗ, ಅದು ನ್ಯಾಯವಾದುದು ಎಂದೆನ್ನುವುದು ಸಮಂಜಸವೆನಿಸುವುದಿಲ್ಲ. (ಅಥವಾ ಅನೇಕ ಮುಂದಾಳುಗಳಿಗೆ ಆ ಯೋಜನೆ ಈಗಾಗಲೆ ಗೊತ್ತಿದೆ ಎಂದು ತಿಳಿಯೋಣವೆ ?) ಇಂತಹ ಏಕಪಕ್ಷೀಯ ನಿರ್ಣಯಾತ್ಮಕ ಮಾತ, ಹೊಣೆಗಾರಿಕೆಯ ಮುಖ್ಯಮಂತ್ರಿಗಳಿಂದ ಒಂದುದಕ್ಕೆ ಅನಾವಶ್ಯಕವಾದ ತೊಂದರೆಯನ್ನುಂಟುಮಾಡಬಹುದು. ಅದರಂತೆಯೆ, ಸರ್ ಸ್ಟ್ಯಾಫರ್ಡ ಕ್ರಿಪ್ಸರು ನಮ್ಮ ಮುಂದಾಳುಗಳೊಡನೆ ಚರ್ಚೆಯನ್ನು ನಡೆಯಿಸುವ ಮುಂಚೆಯೆ ತಾವು ಹಾಕಿದ ಯೋಜನೆ 'ಕೊನೆಯದು' ಎಂಬುದರ ಅರ್ಥವೇನು ? ಕೊನೆಯ ಯೋಜನೆಯನ್ನು ಈಗಾಗಲೆ ಗೊತ್ತುಪಡಿಸಿದ್ದರೆ, ಈ ಚರ್ಚೆಗಳ ಅವಶ್ಯಕತೆ ಎಲ್ಲಿದೆ? (ಅಥವಾ ಕೇವಲ ತಮ್ಮ ಕೆಲವು ಪ್ರತಿಗಾಮಿ ಮಿತ್ರರ ಸಮಾಧಾನಕ್ಕಾಗಿ ಚರ್ಚಿಲ್‌ರು ಹೀಗೆ ಹೇಳಿದ್ದಾರೆಂದು ತಿಳಿಯೋಣವೆ ?) ಅಂತೂ— ಇದೊಂದು ಸಂಗತಿಯಲ್ಲಿ ಅಲಕ್ಷ್ಯವಾಗಿದೆ ಎನ್ನಬೇಕೆ? ಇಲ್ಲವೆ- ಈ ಶಬ್ದಗಳಿಗೆ ನಾವು ಹೇಳಿದಂತೆ ಬೇರೆ ತರದ ಮಹತ್ವವಿದೆಯೆ ?

(೧೩—೪—೪೨)

ಸಂಧಾನದ ಸಿದ್ಧತೆ

ಸರ್ ಸ್ಟ್ಯಾಫರ್ಡರು ಹಿಂದುಸ್ಥಾನಕ್ಕೆ ಸುರಕ್ಷಿತವಾಗಿ ಬಂದು ಮುಟ್ಟಿದ್ದಾರೆ. ಅವರು ದಿಲ್ಲಿಗೆ ಪ್ರಯಾಣ ಬೆಳಸುವಷ್ಟರಲ್ಲಿಯೆ ಅನೇಕ ಪಕ್ಷಮುಂದಾಳುಗಳೂ—ವೈಸರಾಯರ ಆಮಂತ್ರಣದ ಮೇರೆಗೆ—ದಿಲ್ಲಿಯ ಹಾದಿಯನ್ನೆ ಹಿಡಿದಿದ್ದಾರೆ. ಬ್ರಿಟಿಶ್,-ಅಮೇರಿಕಾ-ರಶಿಯಾ-ಚೀನ-ಭಾರತದೇಶಗಳಲ್ಲಿ ಎಲ್ಲ ಪ್ರಮುಖ ಪತ್ರಿಕೆಗಳೂ ಕ್ರಿಪ್ಸರ ಸಂಧಾನಕ್ಕಾಗಿ ಹೆಚ್ಚು ಆಶಾದಾಯಕತೆಯನ್ನೂ ಮಹತ್ವವನ್ನೂ ತೋರಿಸಿದ್ದಾರೆ. ಭಾರತದಲ್ಲಿ ಬೇರೆ ಬೇರೆ ಪಕ್ಷಗಳು ತನ್ನ ತಮ್ಮ ಬೇಡಿಕೆಗಳಿಗೆ ಒಂದು ಸ್ವರೂಪವನ್ನು ಕೊಡುವುದರಲ್ಲಿದ್ದಾರೆ. ಕೆಲವು ಪ್ರಮುಖ ಪಕ್ಷಗಳು 'ಈ ಸಂಧಾನವು ಸಫಲವಾಗುವುದಿಲ್ಲ' ಎಂದು ದನಿಯನ್ನು ಎಳೆಯುತ್ತಲಿವೆ; ಸರದಾರ ವಲ್ಲಭಭಾಯಿಯವರೂ ಮತ್ತೆ ಕೆಲವು ಮುಂದಾಳುಗಳೂ ಇಂತಹ ಅಭಿಪ್ರಾಯವನ್ನ ವ್ಯಕ್ತಮಾಡುತ್ತಲಿದ್ದಾರೆ. ಈ ಸಂದರ್ಭದಲ್ಲಿ ಕೆಲವು ಮಹತ್ವದ ಸಂಗತಿಗಳನ್ನು ಲಕ್ಷ್ಯದಲ್ಲಿಡಬಹುದಾಗಿದೆ. (೧) ಸರ್ ಸ್ಟ್ಯಾಫರ್ಡರಿಗೆ ಬ್ರಿಟಿಶ್ ಮಂತ್ರಿಮಂಡಳದಿಂದ ನಿರ್ಣಯಸ್ವಾತಂತ್ರ್ಯ ದೊರಕಿದೆಯೆ ಇಲ್ಲವೆ ಮಂತ್ರಿಮಂಡಳವು ಈಗಾಗಲೆ ಗೊತ್ತುಪಡಿಸಿದ ಮಾತುಗಳನ್ನು ವಿಚಾರದಯೆ ಅವರು ಚರ್ಚೆಯನ್ನು ನಡೆಯಿಸತ್ಕವರೆ? (೨) ವೈಸರಾಯರು ಈಗಾಗಲೆ ಕೆಲವರಿಗೆ ಆಮಂತ್ರಣಗಳನ್ನು ಕಳುಹಿದ್ದಾರೆ. ಇವರೊಡನೆ ಸರ್ ಸ್ಟ್ಯಾಫರ್ಡರು ಸರ್ವಸಾಮಾನ್ಯವಾಗಿ ಚರ್ಚೆಮಾಡುವರೆ ಇಲ್ಲವೆ ತಮ್ಮ ಗೊತ್ತಾದ ನಿರ್ಣಯದ ಮೇಲೆ ಇಂತಿಂತಹರಿಗೆ ಇಂತಿಂತಹ ಪಕ್ಷದ ಮುಂದಾಳು ಇಲ್ಲವೆ ಪ್ರತಿನಿಧಿ ಎಂಬ ಮತಿಯಿಂದ ಅಭಿಪ್ರಾಯವನ್ನು ಕೇಳುವರೆ? (೩) ಭಾರತಕ್ಕೆ ಸ್ವಾತಂತ್ರ್ಯ ಬೇಕೆಂದು ಸಾಮಾನ್ಯವಾಗಿ ಎಲ್ಲ ಪಕ್ಷಗಳೂ ಕೇಳುತ್ತಿರುವಾಗ, ಆ ಪ್ರಶ್ನೆಯನ್ನು ಬದಿಗಿಟ್ಟು ಕೇವಲ ಯುದ್ಧಕಾಲದ ಘಟನೆಗಾಗಿ ಬೇರೆ ಬೇರೆ ಪಕ್ಷಗಳಿಗೆ ಅಧಿಕಾರದ ಆಮಿಷವನ್ನೂ ಅಧಿಕಾರಸ್ಥಾನಗಳ ಪ್ರಮಾಣವನ್ನೂ ಮುಂದಿಡುವರೆ ?

(೨೨-೪-೪೨)

೫೦ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರಗಡ್ಡೆಯ ಗುಳಿಗೆ
ಬಾಟ್ಲಿಗೆ ೧ ರೂ.
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಮಹತ್ತ್ವದ ಮಾತು

ಸಂಧಾನದ ಫಲವೇನೆ ಆಗಲಿ, ಬ್ರಿಟಿಶರೂ ಅವರ ಶಾಂತಿದೂತರೂ ಒಂದು ಮಾತನ್ನು ಮರೆಯಲಾಗದು. ಭಾರತಕ್ಕೆ ಇಂದು ಸ್ವಾತಂತ್ರ್ಯ ಬೇಕಾದುದು ಭಾರತಕ್ಕೆ ಎಷ್ಟು ಇಷ್ಟವಿದೆಯೊ ಅಷ್ಟೆ — ಯುದ್ಧಕಾಲದಲ್ಲಿ ಅದಕ್ಕೂ ಹೆಚ್ಚಾಗಿ — ಭಾರತೀಯ ಸ್ವಾತಂತ್ರ್ಯವು ಇಂಗ್ಲಂಡಕ್ಕೆ ಇಷ್ಟವಿದೆ. ಸ್ವತಂತ್ರವಲ್ಲದ ಭಾರತದಿಂದ ಬ್ರಿಟಿಶರಿಗೂ ಪ್ರಜಾಪ್ರಭುತ್ವದ ರಾಷ್ಟ್ರಗಳಿಗೂ ಸಹಾಯವಾಗಲಿ ಸಹಾನುಭೂತಿಯಾಗಲಿ ಸಹಕಾರವಾಗಲಿ ಸಾಕಷ್ಟು ಸಿಕ್ಕಲಾರದು ಎಂಬುದು ಸಹಜಸಿದ್ಧವಾದ ಮಾತು. ಅಸಹಾಯವಾದ ಭಾರತಕ್ಕೆ ಹೆಚ್ಚಿನ ಅನಿಷ್ಟವೆಂಬುದಿಲ್ಲ, ಹೆಚ್ಚಿನ ಹೆದರಿಕೆಯೂ ಇಲ್ಲ. ಕಾಂಗ್ರೆಸಿನ ಅನೇಕ ಮುಂದಾಳುಗಳು ಹೇಳಿದಂತೆ 'ಸ್ವಾತಂತ್ರ್ಯ ಸಿಕ್ಕುವ ವರೆಗೆ ಭಾರತಕ್ಕೆ ಸ್ವಾತಂತ್ರ್ಯವನ್ನು ದೊರಕಿಸುವುದೊಂದೆ ಧ್ಯೇಯವಾಗಿದೆ'. ಬ್ರಿಟಿಶರಿಗೆ ಅಧೀನ ಇಲ್ಲವೆ ಇನ್ನೊಬ್ಬರಿಗೆ ಅಧೀನ ಎಂಬ ಪ್ರಶ್ನೆ ಭಾರತೀಯರ ದೃಷ್ಟಿಯಿಂದ ಏಳುವುದಿಲ್ಲ; ಅದಕ್ಕೆ ಮಹತ್ತ್ವವೂ ಇಲ್ಲ. ತನ್ನ ಮೇಲೆ ಅಧಿಕಾರವನ್ನು ನಡೆಯಿಸುವ ಪರಕೀಯ ಸತ್ತೆಯನ್ನು ಎದುರಿಸಿ ಹೋರಾಡುವುದು ಭಾರತದ ಮೊದಲ ಧ್ಯೇಯ. ಈ ಮಾತನ್ನು ಸರ್ ಸ್ಟ್ಯಾಫರ್ಡರು ತಿಳಿದುಕೊಳ್ಳಬೇಕು. ಇಲ್ಲಿಯ ಬ್ಯುರಾಕ್ರಸಿಯ ಅಧಿಕಾರಿಗಳಿಂದ ಈ ಮಾತು ಸರ್ ಸಾಹೇಬರಿಗೆ ತಿಳಿಯದು, ತಮ್ಮ ಬುದ್ಧಿಮತ್ತೆಯಿಂದ ತಾವೇ ತಿಳಿದುಕೊಳ್ಳಬೇಕು. ಈ ಮಾತನ್ನು ತಿಳಿದುಕೊಂಡರೆ, ೪ ರಿಂದ ೬ ವಾರಗಳ ವರೆಗೆ ಚರ್ಚೆಯನ್ನು ನಡೆಯಿಸುವ ಪರಿಶ್ರಮದ ಅಗತ್ಯವೆ ಉಳಿಯುವುದಿಲ್ಲ. ಒಂದು ವೇಳೆ ಈ ಮಾತನ್ನೆ ಮರೆತು 'ನೀವು ನೀವು ಒಂದಾಗಿರಿ' ಎಂಬ ಬಕೋಪನಿಷತ್ತನ್ನೆ ಪ್ರಾರಂಭಿಸಿದರೆ, ಕ್ರಿಪ್ಸರು ಇಲ್ಲಿ ಹೆಚ್ಚು ಹೊತ್ತುಗಳೆಯುವುದೆ ವ್ಯರ್ಥವೆನಿಸುವುದು.

ಐಕ್ಯವೆಂಬ ಅಪಪ್ರಚಾರ

ಭಾರತದಲ್ಲಿ ಐಕ್ಯಭಾವ ಇನ್ನೂ ಹೆಚ್ಚಾಗಿ ಬೇಕೆಂಬುದನ್ನು ಭಾರತೀಯರೆ ಚೆನ್ನಾಗಿ ಬಲ್ಲರು; ಅದಕ್ಕಾಗಿ ಅವರಿಗೆ ಇನ್ನೊಬ್ಬರಿಂದ ಉಪದೇಶ ಬೇಕಾಗಿಲ್ಲ. ಇದಲ್ಲದೆ ಐಕ್ಯವೆಂದರೇನು? ಇಡಿಯ ರಾಷ್ಟ್ರದ ಒಮ್ಮತವಿರಬೇಕೆಂದೇ? ಸರ್ವಾಧಿಕಾರಿಯ ದರ್ಪದ ನೆರಳಿನಲ್ಲಲ್ಲದೆ ಅಂತಹ ಅಖಿಲರಾಷ್ಟ್ರೀಯ ಏಕರೂಪತೆ ಮತ್ತೆಲ್ಲೂ ದೊರಕದು. ಇನ್ನು ಯುದ್ಧಧೋರಣೆಯ ಸಲುವಾಗಿ ಐಕ್ಯವೆನ್ನಬೇಕೆ? ಇಂದು ಇಂಗ್ಲಂಡಿನಲ್ಲಿದ್ದಂತೆ ನಮ್ಮಲ್ಲೂ ಯುದ್ಧದ ವಿಷಯವಾಗಿ— ರಶಿಯಾ ಚೀನಗಳ ವಿಷಯವಾಗಿ— ಪ್ರಜಾಪ್ರಭುತ್ವ ತತ್ತ್ವದ ವಿಷಯವಾಗಿ ಎಲ್ಲ ಪಕ್ಷಗಳೂ ಒಮ್ಮತದಿಂದ ಸಹಾನುಭೂತಿಯನ್ನು ವ್ಯಕ್ತಮಾಡಿಲ್ಲವೆ? ಇಂಗ್ಲಂಡಿನಲ್ಲಿದ್ದಂತೆ ನಮ್ಮಲ್ಲೂ ಭಿನ್ನಾಭಿಪ್ರಾಯದ ರಾಜಕೀಯ ಪಕ್ಷಗಳಿದ್ದರೆ ತಪ್ಪೇನು? ಕೂಲಿಕಾರ ಪಕ್ಷದವರಿಗೆ ಧನವಂತರ ರಾಜ್ಯದಲ್ಲಿ ವಿಶ್ವಾಸವಿಲ್ಲದಂತೆ, ನಮ್ಮಲ್ಲೂ ಪಕ್ಷಗಳು ಪರಸ್ಪರ ಅವಿಶ್ವಾಸವನ್ನು ತೋರಿಸಿದರೆ ಅದು ನ್ಯೂನತೆ ಯಾಕೆ? ಈ ಪಕ್ಷಗಳಲ್ಲಿ ಕೆಲವಕ್ಕೆ ಸದ್ಯ ಜಾತೀಯತೆಯ ಸ್ವರೂಪವಿರಬಹುದು; ಆದರೆ ಅದು ಹೊರಗಿನಿಂದ ಮಾತ್ರ. ನಿಜವಾಗಿ ಆರ್ಥಿಕದೃಷ್ಟಿಯನ್ನೆ ಮೂಲತಃ ಈ ಪಕ್ಷಗಳು ಅವಲಂಬಿಸಿವೆ ಎಂದು ಹೇಳಬಹುದು. ಇಲ್ಲವಾದರೆ ಮುಸಲ್ಮಾನ್ ಧರ್ಮದ ಪ್ರಸಾರವನ್ನು ಮುಸ್ಲಿಂ ಲೀಗವೂ ಹಿಂದು ಧರ್ಮದ ಪ್ರಚಾರವನ್ನು ಹಿಂದು ಮಹಾಸಭೆಯೂ ಕೈಕೊಳ್ಳುತ್ತಿದ್ದುವು. ವಸ್ತುಸ್ಥಿತಿ ಹಾಗಿಲ್ಲ. ತಮ್ಮತಮ್ಮ ಧರ್ಮವನ್ನಾಗಲಿ, ಧರ್ಮದ ಅನುಯಾಯಿಗಳ ಸಂಖ್ಯೆಯನ್ನಾಗಲಿ ಬೆಳೆಯಿಸುವುದು ಯಾವ ಸಂಸ್ಥೆಗೂ ಉದ್ದೇಶವಾಗಿರದಾಗ, ಜಾತೀಯತೆಯ ಭೂತವನ್ನೆಬ್ಬಿಸುವುದೇಕೆ?

(ತಾ. ೨೩. ೭. ೪೨)

ಹಣಕೊಡದೆ ನಿಲ್ಲಿಸಿಕೊಂಡಿರುವ

ಏಜಂಟರಿಗೆ ಎಚ್ಚರಿಕೆ!

ಜಯಂತಿಯ ೧-೨-೩ ನೆಯ ವರ್ಷಗಳಲ್ಲಿ ಏಜಂಟರಾಗಿ ಕಾರ್ಯಮಾಡಿದ ಅನೇಕರಿಂದ ಸಲ್ಲಬೇಕಾಗಿರುವ ದುಡ್ಡು ಇದುವರೆಗೂ ಸಂದಾಯವಾಗಲಿಲ್ಲ. ಸಾಮೋಪಾಯದಿಂದ ಅದೆಷ್ಟು ರೀತಿಯಾಗಿ ಕೇಳಿಕೊಂಡರೂ ಅವರು ದಾರಿಗೆ ಬರಲೊಲ್ಲರು. ಆದುದರಿಂದ ಅಂತಹರ ಮೇಲೆ ಕಾನೂನು ಪ್ರಕಾರ ಕೆಲಸ ನಡೆಯಿಸಬೇಕೆಂದು ನಾವು ನಿರ್ಣಯಿಸಿದ್ದೇವೆ. ಈ 'ಎಚ್ಚರಿಕೆ' ತಲ್ಪಿದ ಎರಡು ವಾರಗಳಲ್ಲಿ ಎಲ್ಲರೂ ಹಣ ಸಲ್ಲಿಸಿದರೆ ಸರಿ; ಇಲ್ಲದೆ ಹೋದರೆ ಹಣ ನಿಲ್ಲಿಸಿಕೊಂಡಿರುವ ಎಲ್ಲ ಏಜಂಟರನ್ನೂ ಕೋರ್ಟಿಗೆಳೆಯಲಾಗುವುದು. ಸದ್ಯ ರಾಣೆಬೆನ್ನೂರಿನ ಏಜಂಟರಾಗಿದ್ದ ಶ್ರೀ. ಎಂ. ಆರ್. ಕೆರೂರ ಅವರ ಮೇಲೆಯೂ ಅಥಣಿಯ ಏಜಂಟರಾಗಿದ್ದ ಶ್ರೀ. ಶ್ರೀನಿವಾಸ ಹೆರಕಲ್ಲರವರ ಮೇಲೆಯೂ ಎಪ್ರಿಲ್ ೧೫ನೆಯ ತಾರೀಖಿನ ವರೆಗೆ ದಾರಿ ನೋಡಿ, ದಾವಾ ದಾಖಲ್ ಮಾಡಲಾಗುವುದು.

ವ್ಯವಸ್ಥಾಪಕ :— **ಜಯಂತಿ, ಧಾರವಾಡ.**

ಕ್ರಿಪ್ಸರ ಕರಾರುಗಳು

ಕ್ರಿಪ್ಸ್‌ಸಾಹೇಬರು ದಿಲ್ಲಿಗೆ ಮುಟ್ಟಿದಂದಿನಿಂದ ಅವರು ತಂದ ಯೋಜನೆಯ ಬಗ್ಗೆ ತರ್ಕ-ವಿತರ್ಕಗಳು ನಡೆದಿವೆಯಷ್ಟೆ. ತಾ. ೨೫-೩-೪೨ಕ್ಕೆ ಅವರು ರಾಷ್ಟ್ರಾಧ್ಯಕ್ಷರೊಡನೆಯೂ ಜಿನಾ ಸಾಹೇಬರೊಡನೆಯೂ ಚರ್ಚಿಸಿದ ತರುವಾಯ, ಆ ಯೋಜನೆಯ ಬಗ್ಗೆ ವಿವರಗಳನ್ನೊಳಗೊಂಡ ತರ್ಕ ಒಂದು ಪ್ರಕಟವಾಗಿದೆ. ಮುಖ್ಯ ವಿವರಗಳು ಹೀಗೆ:— ಯುದ್ಧ ನಡೆವ ವರೆಗೆ ಯಾವ ಮಹತ್ತ್ವದ ಬದಲಾವಣೆಯನ್ನೂ ಮಾಡತಕ್ಕದ್ದಲ್ಲ; ವೈಸ-ರಾಯರ ಮಂತ್ರಿಮಂಡಳದಲ್ಲಿ ಮಾತ್ರ ಎಲ್ಲರೂ ಭಾರತೀಯ-ರಿದ್ದು, ಇಂಗ್ಲಂಡಿನ ಭಾರತಮಂತ್ರಿಗಳಿಗೆ ಅವರು ಹೆಸರಿಗೆ ಮಾತ್ರ ಅಧೀನರಾಗಿರತಕ್ಕದ್ದು; ಹಿಂದುಸ್ತಾನದ ಮುಂದಿನ ಯೋಜನೆ-ಯಲ್ಲಿ ಸಂಸ್ಥಾನಗಳನ್ನು ಬಿಟ್ಟು ಎರಡು ಸಂಯುಕ್ತ ಘಟಕ (Federation unit) ಗಳಿರಬೇಕು — ಒಂದು, ಸರಹದ್ದು ಪ್ರಾಂತ-ಸಿಂಧ-ಪಂಜಾಬಗಳು, ಇನ್ನೊಂದು ಬಂಗಾಲವನ್ನು ಬಿಟ್ಟು ಉಳಿದ ಭಾಗ; ಬಂಗಾಲವು ವಾಯುವ್ಯದ ಮುಸಲ್ಮಾನ ಘಟಕದಲ್ಲಿ ಸೇರದಿದ್ದರೆ, ಅದೊಂದು ಬೇರೆ ಮೂರನೆಯ ಘಟಕವಾಗಿರತಕ್ಕದ್ದು; ಇನ್ನು ಸದ್ಯದ ಭಾರತೀಯ ಕೇಂದ್ರ ಮಂತ್ರಿಮಂಡಳಕ್ಕೆ, ಸಂರಕ್ಷಣೆಯನ್ನು ಬಿಟ್ಟು ಎಲ್ಲ ಖಾತೆಗಳನ್ನೂ ಒಪ್ಪಿಸಬೇಕು; ಕೊನೆಯದಾಗಿ, ಈ ಮಂತ್ರಿಮಂಡಳದಲ್ಲಿ ಬೇರೆ ಬೇರೆ ಪಕ್ಷಗಳ ಪ್ರತಿನಿಧಿತ್ವ ಪ್ರಮಾಣ ಒಂದು ಪ್ರಕಟವಾಗಿದೆ.

ವಿಚಾರಯುಕ್ತ ವಿಮರ್ಶೆ

ಮೇಲೆ ಕಾಣಿಸಿದ ಮುಖ್ಯ ಮಾತುಗಳು ನಿಜವಾಗಿವೆ, ಎಂದು ತಿಳಿದು ಕೊಳ್ಳೋಣ. ಸಂರಕ್ಷಣಾಖಾತೆಯನ್ನು ಬ್ರಿಟಿಶರ ಕೈಯಲ್ಲಿಯೆ ಇಟ್ಟುದಕ್ಕೆ ಕ್ರಿಪ್ಸರ ಯೋಜನೆ ಯಾರಿಗೂ ಸಮ್ಮತವಾಗುವಂತಿಲ್ಲ. ಯುದ್ಧದಲ್ಲಿ ಹೊಣೆಯೂ ಘೋರಣೆಯೂ ತಮ್ಮದೆ ಆಗಿರಬೇಕೆಂಬುದು ಭಾರತೀಯರ ನ್ಯಾಯವಾದ ಹಟವಿದ್ದಾಗ, ಸಂರಕ್ಷಣಾಖಾತೆಯು ಕೈಯಲ್ಲಿಲ್ಲದಿದ್ದರೆ ಸಮಾಧಾನವಾಗುವುದು ಹೇಗೆ? ಕಾಂಗ್ರೆಸೂ ಮುಸ್ಲಿಂ ಲೀಗವೂ ಈ ವಿಷಯವಾಗಿ ಏಕಮತದಿಂದ ಹಟಹಿಡಿಯುವ ಚಿಹ್ನವಿದೆ. ಆದುದರಿಂದ ಇದರಲ್ಲಿ ಬದಲಾವಣೆಯಾಗಬಹುದೆಂದು ತಿಳಿಯಲು ಅಡ್ಡಿ ಇಲ್ಲ. ಇದಕ್ಕೂ ಮಹತ್ತ್ವದ ಯೋಜನೆಯ ಭಾಗವೆಂದರೆ, ಹಿಂದುಸ್ತಾನವನ್ನು ಮೂರು ಸಂಯುಕ್ತ ಘಟಕಗಳಲ್ಲಿ ಹಂಚುವುದು. ಈ ಮಾತನ್ನು ಕೇಳಿದ ಕೂಡಲೆ ಕಾಂಗ್ರೆಸಿಗೆ ಅಸಮಾಧಾನ, ಲೀಗಿಗೆ ದಿಗ್ವಿಜಯದ ಸಂತೋಷ ಆಗಬಹುದಾಗಿದೆ. ಆದರೆ ಕಾಂಗ್ರೆಸು ತಟ್ಟನೆ ಇದನ್ನು ನಿರಾಕರಿಸದೆ ಹೆಚ್ಚು ವಿಚಾರಯುಕ್ತವಾಗಿ ವಿಮರ್ಶೆ ಮಾಡುವುದು ಎಂದು ಆಶಿಸುತ್ತೇವೆ. ಹಿಂದು-ಮುಸಲ್ಮಾನ್ ಪ್ರಶ್ನೆಯ ಕೊನೆಯ ನಿರ್ಣಯವನ್ನು ಒಮ್ಮೆ—ಹೆಚ್ಚು ಬೇಗವಾದಷ್ಟು ಹೆಚ್ಚು ಅನುಕೂಲ—ಕೊಡಲೇಬೇಕಾಗಿದೆ. ಮುಸ-ಲ್ಮಾನ್ ಬಹುಸಂಖ್ಯಾಕ ಪ್ರಾಂತಗಳಿಗೆ ಮಿಕ್ಕವರೊಡನೆ ಇರುವ ಇಚ್ಛೆಯೆ ಇಲ್ಲದಿದ್ದರೆ, ಒತ್ತಾಯಪಡಿಸುವುದರಿಂದ—ಅದೂ ಯುದ್ಧದ ಕಾಲದಲ್ಲಿ—ಯಾರಿಗೂ ಸುಖವಿಲ್ಲ. ಇಷ್ಟಕ್ಕೆಯೆ ಈಗಿದ್ದ ದೇಶಭಾಗವನ್ನು ಕಣ್ಣುಮುಚ್ಚಿ ಬಿಟ್ಟುಬಿಡಬೇಕೆಂದಿಲ್ಲ. ಈ ಪ್ರಾಂತಗಳೂ ಹಿಂದುಸ್ತಾನಕ್ಕೆಯೆ ಸೇರಿವೆ. ಅಲ್ಲ ಅಥವಾ ಒಲ್ಲೆ ಎನುವವರು ತಮ್ಮ ಅಭಿಪ್ರಾಯವನ್ನು ಸಿದ್ಧಗೊಳಿಸುವ ಹೊಣೆಯನ್ನು ಹೊರಬೇಕು. ಸಾರ್ವಜನಿಕ ಮತಗಣನೆ (referendum) ಯಿಂದ ಅಲ್ಲಿಯ ಜನರು ಬೇರೆ ಘಟಕಗಳನ್ನು ಮಾಡಲಿಚ್ಛಿಸುತ್ತಿದ್ದರೆ ಮಾತ್ರ ಹಾಗೆಮಾಡಬಹುದು. ಹಾಗೆ ಮಾಡಿದಾಗಲೂ, ಬಹುಮತದ ನಿರ್ಣಯದಿಂದ ಹಿಂದು-ಸ್ತಾನದಲ್ಲಿ ಬೆರೆತುಕೊಳ್ಳಲು ಅವಕಾಶವಿರಬೇಕು; ಮುಖ್ಯವಾಗಿ ಯುದ್ಧ ಮುಗಿದ ನಂತರ ಇಂತಿಷ್ಟು ಕಾಲದಲ್ಲಿ ಎಂಬ ಅವಧಿನಿಯಮವಿರಬೇಕು. ಇಂದಿನ ಕಾಲದಲ್ಲಿ ಸ್ವತಂತ್ರವಾದ ಚಿಕ್ಕರಾಷ್ಟ್ರಘಟಕವನ್ನು ಮಾಡಿಕೊಂಡಲ್ಲಿ ಸುಖವೂ ಇಲ್ಲ, ಸುರಕ್ಷಿತತೆಯೂ ಇಲ್ಲ ಎಂಬುದು, ಬುದ್ಧಿವಂತನಿಗೆ ತಿಳಿದ ಮಾತಿದೆ. ಇದಲ್ಲದೆ, ಯುದ್ಧದ ಕಾಲದಲ್ಲಿ ಈ ವಿಭಜನೆಯನ್ನು ಮಾಡಕೂಡದು. ನಿಜವಾದ ವಿವರಗಳು ಗೊತ್ತಾಗುವ ಮುಂಚೆ ಹೆಚ್ಚಿನ ಚರ್ಚೆ ಅನವಶ್ಯ.

(೨೬-೩-೪೨)

ಕರ್ನಾಟಕ ಪ್ರಾಂತೀಕರಣ

ಯಾರು ಏನೆ ಎನ್ನಲಿ, ಹಿಂದುಸ್ತಾನದ ರಾಜ್ಯಘಟನೆಯಲ್ಲಿ ಮಾರ್ಪಾಡಾಗುವುದು ಅನಿವಾರ್ಯ; ಹಿಂದೀಯರಿಗೆ ಹೆಚ್ಚಿನ ಸ್ವಾತಂತ್ರ್ಯಹಕ್ಕುಗಳು ದೊರೆವುದು ಖಂಡಿತ. ಈ ಸಂಕ್ರಾಂತಿ-ಕಾಲದಲ್ಲಿಯೆ ಆಂಧ್ರರು ತಮ್ಮ ಪ್ರತ್ಯೇಕ ಪ್ರಾಂತೀಕರಣದ ಗುಲ್ಲನೆಬ್ಬಿಸಿ, ಸರ್ ಸ್ಟ್ಯಾಫ್ರ್ಡ್ ಕ್ರಿಪ್ಸರ ಕಿವಿಗೆ ಅಪ್ಪಳಿಸುವಂತೆ ಮಾಡಿದ್ದಾರೆ. ಅಲ್ಲದೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಡಾ. ಪಟ್ಟಾಭಿಸೀತಾರಾಮಯ್ಯನವರಂತಹ ಉಗ್ರ ಆಂಧ್ರ-ಪ್ರಾಂತಾಭಿಮಾನಿಗಳು ಇರುವುದರಿಂದ, ಈ ಸಮಯದ ಉಪ-ಯೋಗವನ್ನು ತಮ್ಮಧ್ಯೇಯಸಾಧನೆಗಾಗಿ ಅವರು ಮಾಡಿಕೊಳ್ಳದೆ ಇರರು. ಆದರೆ ಏಕೀಕರಣ ಪ್ರಾಂತೀಕರಣಗಳನ್ನು ಬೇಡುವ ಕನ್ನಡಿಗರು ಮೈಮರೆತು ಕುಳಿತುದರ ರಹಸ್ಯವೇ ನಮಗೆ ಗೊತ್ತಾಗಲೊಲ್ಲದು. ಆಂಧ್ರರಂತೆ ಕನ್ನಡಿಗರ ಸೊಲ್ಲು-ಗುಲ್ಲುಗಳು ಹಲವು ಬಗೆಯಿಂದೆದ್ದು, ಅವರ ಅಸ್ತಿತ್ವವನ್ನೂ ಪ್ರಾಂತೀಕರಣದ ಬಗೆಗಿರುವ ಅವರ ಉತ್ಕಟತೆಯನ್ನೂ ಸರ್ ಸಾಹೇಬರಿಗೆ ಚೆನ್ನಾಗಿ ತಿಳುಹಬೇಕಲ್ಲವೆ? ಅದಕ್ಕಾಗಿ ಕನ್ನಡ ಮಹಾಜನರೂ, ಮುಖ್ಯ ನಾಯಕರೂ, ಸಂಸ್ಥೆಗಳೂ, ಪತ್ರಿಕೆಗಳೂ ತಮ್ಮ ಮೌನವ್ರತ-ವನ್ನು ತೊರೆಯಬೇಕು. ಗೊತ್ತುವಳಿಗಳನ್ನು ಮಾಡಿ ಮೇಲಿ-ನವರಿಗೆ ತಿಳಿಸಬೇಕು!

ಮಗುವಿನ ಮೃದು ಚರ್ಮಕ್ಕೆ

★

ಬೇಕಾದುದು!

ಶುದ್ಧವಾದ ಮತ್ತು ಮೃದುವಾದ ಒಂದು ಸಾಬೂನು. ಮತ್ತು ಆ ಸಾಬೂನು ಪರಿಮಳಯುಕ್ತವಾಗಿಯೂ ಔಷಧಯುಕ್ತವಾಗಿಯೂ ಇರಬೇಕು. ಮೈಸೂರು ಗಂಧದ ಸಾಬೂನಿನಲ್ಲಿ ಇವೆರಡು ಗುಣಗಳೂ ಕೂಡಿವೆ. ಈ ಸಾಬೂನು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛ ಮಾಡುವುದಲ್ಲದೆ, ಕಾಂತಿಯನ್ನುಂಟು ಮಾಡುತ್ತದೆ.

ಮೈಸೂರು ಸ್ಯಾಂಡಲ್ ಸೋಪು



ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.



ಶಿಲಾಪ್ರವಂಗ

SHILAPRAVANG

★

ಯಾವುದೇ ವಿಧವಾದ ಉಷ್ಣತೆಯಿಂದ
ಬಳಲಿರುವ ನಿಮ್ಮ ಹೃದಯ, ಮಿದುಳು,
ರಕ್ತ, ವೀರ್ಯಗಳಿಗೆ, ಆಯಾಸವನ್ನು
ಹೋಗಲಾಡಿಸಿ, ತಂಪು ಕೊಟ್ಟು,
ಶರೀರದಲ್ಲಿ ನವಚೈತನ್ಯವನ್ನು ಹುಟ್ಟಿಸು
ವುದಕ್ಕೆ ಶ್ರೇಷ್ಠವಾದ ಔಷಧವು.

★

ಶ್ರೀಧೂತಪಾಪೇಶ್ವರ
ಪನವೇಲ, ಲಿಮಿಟೆಡ್.,

ಪನವೇಲ ಕುಲಾಬಾ

★

SHRI DHOOTAPAPESHWAR
PANVEL Ltd, PANVEL.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :—

ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd DHARWAR.

★ ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಚೆಲ್ವಿ!

ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಾಗಿ ಇರಬೇಕು, ದಟ್ಟವಾಗಿ ನೀಳವಾಗಿ ಬೆಳೆಯಬೇಕು!

ಹಾಗಾಗಬೇಕಾದರೆ 'ಮುಕುಲ' ಉಪಯೋಗಿಸಿರಿ!

ತರುಣ-ತರುಣಿಯರು ಬರಿಯ ಕಣ್ಣು ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆಯಿದ್ದರೂ ಅದು ವ್ಯರ್ಥವೆನಿಸುವುದು. ಅದಕ್ಕಾಗಿ.

ಆಯುರ್ವೇದ ಶಾಸ್ತ್ರರೀತ್ಯಾ ಶುದ್ಧ ಕೊಬ್ಬರಿಯೆಣ್ಣೆಯಲ್ಲಿ ತಯಾರಿಸಲಾದ 'ಮುಕುಲ' ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗರ

ಕರ್ನಾಟಕ ಶಾಖೆ : ಸ್ಟೇಶನ್‌ರೋಡು. ಹುಬ್ಬಳ್ಳಿ.

Printed by V. Y. Jathar at the Karnatak Printing Works, Dharwar. Edited and Published by M. G. Patil at Jayanti Office, Dharwar

ಮೇ ೧೯೪೨

ಕೆಲವು ಲೇಖಕರು :

'ಶ್ರೀಧರ'

ಎಸ್. ಟಿ. ಪಪ್ಪು

ಗೌರೀಶ ಕಾಯ್ಕಿಣಿ

ಎಂ. ಆರ್. ಹೆಗಡೆ

ಜಯಂತಿ

ಬಿಡಿ ನಾಲ್ಕಾಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ .... ವ್ಹಿ. ಪಿ. ಯಿಂದ ೩-೫-೦ .... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮರು   ಪಾಟೀಲ ಮಾಧವರಾಯರು

೪ನೆಯ ವರ್ಷ	**ನೋ॥ ೧೯೪೨**	**೧೨ನೆಯ ಸಂಚಿಕೆ**

ಮುಖ್ಯವಿಷಯುಗಳ ಪರಿವಿಡಿ

ಸಾಮಾಜಿಕನ ಸಂವಚನಗಳು (ವಿಚಾರತರಂಗ)	' ಸಾಮಾಜಿಕ '	೫೩೫
ಸಂಪಾದಕೀಯ	ಸಂಪಾದಕರು	೫೩೬
ಮಂಗನ ಮಲ್ಲಿನಾಥತನ	' ಮಲ್ಲಿನಾಥ '	೫೩೭
ಕನ್ನಡ ಸೈನಿಕ (ಜಯಂತಿಯ ಹೊಸವಿಭಾಗ)	' ಸಂ. ಕ. ಸೈ '	೫೩೯
ಕಳೆದ ಮಹಾಯುದ್ಧದಲ್ಲಿ ಭಾರತೀಯರ ಸಹಾಯ(ರಾಜಕೀಯ)	ಶ್ರೀ. ವಾಳ್ವೇಕರ್ ಗುರುರಾಯರು ಎಲ್‌ಎಲ್. ಬಿ.	೫೪೦
ನರ್ತಕಿ (ಒಂದು ಕಥೆ)	ಶ್ರೀ. ಎಂ. ಆರ್. ಹೆಗಡೆ, ಕುಮಟಾ	೫೪೩
ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವೆ ?(ವಿ. ಪ್ರ. ಪ್ರಬಂಧ)....	ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ	೫೪೮
ನಿರಾಶೆ (ಕವನ)	ಶ್ರೀ. ಜಿ. ಆರ್. ಹೆಗಡೆ, ಮುಂಬಯಿ	೫೫೩
ಬಲೀಂದ್ರ (ಕವನ)	ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು	೫೫೩
ನಡುಗಡಲು (ಕವನ)	ಶ್ರೀ. ನರಸಿಂಹ ಕುಲಕರ್ಣಿ	೫೫೩
ಉಚಿತ ರೈಲ್ ಟಿಕೀಟು (ವಿನೋದ ಲೇಖನ)	ಶ್ರೀ. ಸು. ತ. ಪಪ್ಪು ಎಂ. ಎ. ಪುಣೆ.	೫೫೪
ಸೌಂದರ್ಯಶಾಸ್ತ್ರ (ಪ್ರಬಂಧ)	ಶ್ರೀ. ಖಾನೋಳಕರ ಶ್ರೀಧರರಾಯರು ಪುಣೆ.	೫೫೭
ಬೇಬಿಯ ತಾಯಿ (ಸಣ್ಣಕಥೆ)	' ಬೀಚಿ ' ಬಳ್ಳಾರಿ	೫೬೧
ಮಾತಾ ಮೊಂಟೆಸೋರಿ (ಜೀವನ ಪರಿಚಯ)	ಶ್ರೀ. ಹ. ಮ. ಬಬಲೇಶ್ವರ, ಮಾಂಟ್. ಡಿಪ್	೫೬೪
ಪಾಕಿಸ್ತಾನದ ಸ್ವರೂಪವೇನು ? (ಪರಿಚಯಾತ್ಮಕ)	ಶ್ರೀ. ಮಿರ್ಜಿ ಅಣ್ಣಾರಾಯರು, ಮಾಂಜರಿ	೫೬೬
ಒಂದು ಬಯಕೆ (ಕವನ)	' ತಾರಕಾನಂದತನಯ '	೫೬೯
ಗೆಸ್ಟಪೋಗಳ ದುಷ್ಟತನ (ಸತ್ಯಕಥೆ)	' ತಂತ್ರಿ ' ಸಂಗ್ರಹಿಸಿದುದು	೫೭೦
ಕರ್ಣಾಟ ವಿಶ್ವವಿದ್ಯಾಲಯ (ಪರಿಸ್ಥಿತಿ ವಿಮರ್ಶೆ)	ಒರ್ವ ' ಅರಿಗ 'ನಿಂದ	೫೭೩
ಪುಸ್ತಕ ವಿಮರ್ಶೆ	ಬೇರೆ ಬೇರೆ ವಿಮರ್ಶಕರು	೫೭೬
ಸಾದರ ಸ್ವೀಕಾರ	....	೫೭೭
ನಗೀಗೆ ನೇವಿದ್ಯ	' ನಕಲೀ ನಾರಾಯಣಾಚಾರ್ರು '	೫೭೯
ನಾಲ್ಕೂನಿಟ್ಟಿನ ನೋಟ	' ನಿರೀಕ್ಷಕರು '	೫೮೦

ನೋ॥ ಸಂಚಿಕೆಗೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಂತಮ್ಮ ಚಂದಾಹಣವನ್ನು ಕೂಡಲೆ ಮನಿಯಾರ್ಡರ್ ಮೂಲಕ ಕಳುಹಬೇಕು. ಮುಂದೆ ಚಂದಾದಾರರಾಗಲು ಮನಸ್ಸಿಲ್ಲದವರು ದಯೆಯಿಟ್ಟು ಕೂಡಲೆ ಕಾಗದ ಬರೆದು ತಿಳಿಸಬೇಕು. ಸಂ. ಜ.

ಜೀವನ

ಸಂಪುಟ ೪ | ೧ನೆಯ ಮೇ ೧೯೪೨ | ಸಂಚಿಕೆ ೧೨

ಸಾಮಾಜಿಕನ ಸಂವಚನಗಳು

ದಾರಿ-ದಾರಿಗಳನು ಸುತ್ತುತ ದಿನಗಳನು ದೂಡುತಲಿರುವ ಹಲದಿನದ ಹಾದಿಕಾರಾ! ಅರಿತಿರುವೆಯಾ ನಿನ್ನ ಗುರಿಯಾವು-ದೆಂಬುದನು? ಗುರಿಯು ಗೊತ್ತಿಲ್ಲದೆ ಬರಿದೆ ಅಲೆಯುತಲಿದ್ದರೆ ನಿರ್ಣಯಿಸು ಮೊದಲು ಗುರಿಯಾವುದೆಂಬುದನು! ಗುರಿಯ ಅರಿವೊಂದಿರಲಿ, ನೆರವೆ ಬೇಕಾಗಿಲ್ಲ ಗುರುಗುರುಗಳೆಂಬರದು! ನಿನ್ನ ಮನದ ಅರಿವೆ ಗುರುವಾಗಿ ಗುರಿಯತ್ತ ನಿನ್ನನು ಕೈಹಿಡಿದು ಕರೆದೊಯ್ಯಬಲ್ಲದು. ನಿನ್ನ ನಿತ್ಯದ ಅನುಭವವೇ ನಿನ್ನ ದಾರಿಗೆ ಕೈಗಂಬಗಳ ನಿಲ್ಲಿಸುವುದು. ಗುರಿ-ಯಿಲ್ಲದೆ ನಡೆವವರ ದಾರಿಯಲಿ ನಿರಂತರವೂ ಕಲ್ಲು-ಮುಳ್ಳು-ಗಳ ಹಾಸಿಗೆ ಹರಹುವ ನಮ್ಮ ಕಾಲರಾಯ!

* * *

ದಾರಿದೋರುವೆನೆಂದು ಸಾರುತ್ತ ಬರುವ ವೀರಧೀರರನು ಕಣ್ಣುಮುಚ್ಚಿ ನಂಬದಿರಣ್ಣಾ! ಗುರಿಯು ನೆಲೆಯನವರು ನಿಲು-ಕಿರಬಹುದಾದರೂ ಹೊರಟ ದಾರಿಯನು ಅವರವರ ಪರಿಸ್ಥಿತಿ ಮನಸ್ಸಂಸ್ಕಾರ ಅರಸಿಕೊಂಡಿರುವುವು. ತನ್ನ ಹಿತವನು ಮೆಟ್ಟಿ, ತನ್ನ ಸೊಗವನ್ನೊಗೆದು, ಯಾರ ಮನವೂ ಅನ್ಯರೊರೆದ ದಾರಿಯನು ತುಳಿಯಲಾರದಣ್ಣಾ! ತುಳಿದಡೆಯು ಗುರಿಯ ವರೆಗೆ ನಡೆದು ನಿಲುಕಲಾರದಣ್ಣಾ! ನಡೆದು ನಿಲುಕುವೆನೆಂದು ನಡುಬಗಿದು ಹೊರಹೊರಟು, ನಿಂದಲಿಯೆ ನಿಂದು, ಕಂದರೆ-ಯೆಡೆ ಗೊಂದಲವೆಬ್ಬಿಸುವ ಹಂದೆಮಾನವರನ್ನು ಕೊಂದಿಕ್ಕಿ ಕಳೆವ ನಮ್ಮ ಕಾಲರಾಯ!

* * *

ಕುರುಡ ಕುರುಡನಿಗೆ ದಾರಿದೋರುವೆನೆಂಬುದಿದೆ ಲೋಕದ ರೀತಿಯಯ್ಯಾ! ಇದೆಲ್ಲದಕೂ ಕಾರಣ, ಹುಟ್ಟಿದವರೆಲ್ಲರಿಗೂ ಇರುವ ‘ಹಿರಿಯಾಳು ತಾನಾಗಬೇಕು’ ಎಂಬ ಹಂಬಲಯ್ಯಾ! ನಾನು ತಾನೆಂಬರನೂ ಈ ಹಂಬಲು ಅರಿವುಗೆಡಿಸುವುದಯ್ಯಾ! ದಿಟವ ಬಿಡಿಸಿ ಪಟಯನಾಡಲು ಪ್ರೇರಿಸುವುದಯ್ಯಾ! ಕಂಡುಂಡು ನಡೆಯಲು ಬೇಸರಿವ ಜನಜಂಗುಳಿ ಇವರಾಡುವ ಪಟಿಯನೆ ದಿಟವೆಂದು ತಿಳಿದು, ಇವರ ದಾರಿಯೆ ನೇರವೆಂದು ನಂಬಿ, ಗುರಿಯು ಕಾಣದೆ ಬಳಲಿ ಬಾಯಬಿಡುತಿರುವುದಯ್ಯಾ! ಅಯ್ಯಾ, ಇದನೆಲ್ಲ ನೋಡಿನೋಡಿ ಮರುಕವಟ್ಟು ಮಂಕುಗೊಳುತಿರುವನಯ್ಯಾ ನಮ್ಮ ಕಾಲರಾಯ!

* * *

ಊರಿಗೊಂದೇ ನೇರವಾದ ದಾರಿಯಲ್ಲದೆ ನೂರಾರು ಇರಲು-ಬಲ್ಲವೇನಯ್ಯಾ! ನೂರೆಂಟು ಜನರು ನಿತ್ಯನಿತ್ಯವೂ ಮುಂದೆ ಬಂದು ‘ನನ್ನದಾರಿ ಸತ್ಯ, ಅನ್ಯರದಾರಿ ಮಿಥ್ಯ’ ಎಂದು ಸಾರಿ ಬೇರೆ ಬೇರೆ ದಾರಿಗಳನೆ ತೋರುತ್ತಲಿಹರು. ನಂಬಬೇಕಾರನ್ನು, ನಚ್ಚಬೇಕಾರನ್ನು? ತಮ್ಮ ತಮ್ಮ ದಾರಿಗಳ ಬಗೆಗೆ ಹೆಮ್ಮೆಯ ಭರವಸೆಯೆಲ್ಲರಿಗೂ! ತಾವು ತೋರಿದ ದಾರಿಯೆ ನೇರ-ವಾದುದೆಂಬ ಹುರುಡು ಎಲ್ಲರಿಗೂ! ಈ ಹುರುಡಿನ ಹೋರಾಟವ ಕಂಡು, ಏನನೂ ಅರಿಯುವ ಮಾನವ ಜೀವಿ ಕಂಗೆಟ್ಟು ನಿಂತಿಹುದು. ಎಲ್ಲವನೂ ಬಲ್ಲ ಕಾಲರಾಯ ಕೈತಟ್ಟಿ ಕೆಲೆಯುತ್ತಲಿಹನು!

* * *

ನಾಲ್ಕನೆಯ ವರ್ಷ ಮುಗಿಯಿತು

ಕನ್ನಡಿಗರಿಗೆ ಇದೊಂದು ಸಂಚಿಕೆಯನ್ನು ಸಲ್ಲಿಸಿದರೆ ಜಯಂತಿ ತನ್ನ ನಾಲ್ಕನೆಯ ವರ್ಷವನ್ನು ಮುಗಿಸಿ ಐದನೆಯ ವರ್ಷದಲ್ಲಿ ಅಡಿಯಿಟ್ಟಂತಾಗುವುದು— ಎಂದು ಹೇಳಲು ತುಂಬ ಸಮಾಧಾನವೆನಿಸುತ್ತಲಿದೆ. ಮೂರನೆಯ ವರ್ಷದ ಕೊನೆಯೊಂದಿಗೆ ಜಯಂತಿ ತನ್ನ ಕಾರ್ಯವನ್ನು ಕೊನೆಗೊಳಿಸುವ ಸಂದರ್ಭವೂ ಒದಗಿದ್ದಿತು. ಆದರೆ ಅದರ ಕಾರ್ಯದ ಬೆಲೆಯ ಬಗೆಗೆ ವಿಶ್ವಾಸವುಳ್ಳ ಕೆಲವು ಸ್ನೇಹಿತರು ಅದರ ಆಡಳಿತದ ವ್ಯವಸ್ಥೆಗೊಂದು ಹೊಸರೂಪವನ್ನು ಕೊಟ್ಟರು ; ಜಯಂತಿ ತನ್ನ ಕಾರ್ಯವನ್ನು ಮತ್ತೆ ಉತ್ಸಾಹದಿಂದ ಮುಂದುವರಿಸುವಂತೆ ಮಾಡಿದರು. ಆ ಸ್ನೇಹಿತರ ಬೆಂಬಲವೂ ಕನ್ನಡ ವಾಚಕರ ನಿಜವಾದ ಸಹಕಾರವೂ ದೊರೆತುದರಿಂದ, ನಿರೀಕ್ಷಿತ ತೊಂದರೆ-ತೊಡಕುಗಳಾವುವೂ ಇಲ್ಲದೆ ನಾಲ್ಕನೆಯ ವರ್ಷ ಸಹಜವಾಗಿ ದಾಟಹೋಯಿತು. ಕಾಗದ–ಮುದ್ರಣಗಳ ಬೆಲೆಯ ಆಧಿಕ್ಯ ಎಂತಹ ಆರ್ಥಿಕ ಆಪತ್ತಿಯನ್ನು ತಂದೊಡ್ಡುವುದೋ ಎಂದಿದ್ದ ಹೆದರಿಕೆಯು ಈ ವರ್ಷದ ಮಟ್ಟಿಗಂತೂ ಬಯಲಾಯಿತು.

ಈ ವರ್ಷದ ಜಯಂತಿಯ ಅಂತರಂಗ–ಬಹಿರಂಗ ಸೌಂದರ್ಯವನ್ನು ಹೆಚ್ಚಿಸಿ ತೋರಿಸಬೇಕೆಂಬ ಆಶೆ ಬಹಳವಾಗಿದ್ದಿತಾದರೂ ಮಹಾಯುದ್ಧ ನಮ್ಮ ಆಶೆಯನ್ನು ಕರಗಿಸಿಬಿಟ್ಟಿತು. ಹಿಂದಿನ ವರ್ಷಗಳಷ್ಟು ಪುಟಗಳನ್ನು ಕೊಡಲಿಕ್ಕಾಗಲಿಲ್ಲ ; ಆದರೆ ಹಿಂದಿನ ವರ್ಷಗಳಿಗಿಂತ ಸುಮಾರು ೫೦೦–೬೦೦ ರೂಪಾಯಿಗಳನ್ನು ಕಾಗದದ ಬೆಲೆಯೆಂದು ಹೆಚ್ಚಾಗಿ ಕೊಡಬೇಕಾಯಿತು. ಅದರಂತೆಯೆ ಚಿತ್ರಗಳ ಗತಿ ; ಅದರಂತೆಯೆ ಮುದ್ರಣದ ಪರಿಸ್ಥಿತಿ !

ಇಲ್ಲಿಯವರೆಗೆ ಮೈಸೂರಿನ ಕಾಗದಗಳನ್ನು—ಜಯಂತಿಯ ಮೇಲಿನ ವಿಶ್ವಾಸದಿಂದ—ಯೋಗ್ಯದರಕ್ಕೆ ಒದಗಿಸಿಕೊಡುವ ಉಪಕಾರವನ್ನು, ಇಲ್ಲಿಯ ಕಾಗದ ವ್ಯಾಪಾರಿಗಳಾದ ಶ್ರೀ. ಜಿ. ಕೆ. ಕೆಳಕರ್ ಅವರು ಮಾಡಿದರು. ಆದರೆ ಸದ್ಯ ಕಲ್ಲಿದ್ದಲು ದೊರೆಯದುದರಿಂದ ಮೈಸೂರಿನ ಕಾಗದದ ಗಿರಣಿ ಕೆಲಸ ನಿಲ್ಲಿಸಿಬಿಟ್ಟಿದೆ. ಎಂದು ಪ್ರಾರಂಭವಾಗುವುದೋ ಗೊತ್ತಿಲ್ಲ. ಬೇರೆ ಕಡೆಯಿಂದ ಹೊಳಪಿನ ಹಾಳೆಗಳನ್ನು ತರಿಸಬೇಕೆಂದರೆ ರೇಲ್ವೆಯ ಅನುಕೂಲತೆಗಳಿಲ್ಲ. ಆದುದರಿಂದ ಐದನೆಯ ವರ್ಷದ ಮೊದಲನೆಯ ಸಂಚಿಕೆಯನ್ನು ಉರುಟು (ರಫ್) ಕಾಗದಗಳ ಮೇಲೆ ಮುದ್ರಿಸುವ ಅನಿವಾರ್ಯ ಪ್ರಸಂಗವೆಲ್ಲಿ ಬರುವುದೋ ಎಂಬ ಯೋಚನೆಯಲ್ಲಿ ಇದ್ದೇವೆ. ಹೀಗೆ ಉಪಯೋಗಿಸಬಹುದಾದ ಕಾಗದ ಕೀಳು ತರಗತಿಯದಾದರೂ ಬೆಲೆ ಮಾತ್ರ ಮೈಸೂರು ಕಾಗದಗಳಿಗಿಂತ ಹೆಚ್ಚು ಬೀಳುವುದೆಂಬುದೊಂದು ಪರಿಸ್ಥಿತಿಯ ಚಮತ್ಕೃತಿ.

ಅಭಿನಂದನೆಗಳು

ಜಯಂತಿಯ ಸಂಚಿಕೆಗಳು ಗಾತ್ರದಲ್ಲಿ ಚಿಕ್ಕವಾದರೂ ಬಹಿರಂಗ ಸೌಂದರ್ಯದ ಕೊರತೆಯಿಂದ ಕೂಡಿದ್ದರೂ ಪ್ರಕಟವಾದ ಲೇಖನಗಳ ಮೂಲಕ ಅವುಗಳ ಬೆಲೆ ಹೆಚ್ಚಿದೆಯೆಂಬುದು ಜಯಂತಿಯ ವಾಚಕರಿಗೆ ಚೆನ್ನಾಗಿ ಗೊತ್ತು. ಅಂತಹ ಲೇಖನಗಳನ್ನು ಸ್ವಯಂ ಪ್ರೇರಣೆಯಿಂದ ಒಪ್ಪಿಸಿಕೊಟ್ಟ ಲೇಖಕಮಿತ್ರರಿಗೆಲ್ಲ— ಹೆಸರು ಹೇಳುತ್ತ ಹೋದರೆ ಸ್ಥಳವು ಹೆಚ್ಚಬೇಕು— ನಮ್ಮ ಹೃತ್ಪೂರ್ವಕ ಅಭಿನಂದನೆಗಳು, ಅಭಿನಂದನೆಗಳು.

ಜಯಂತಿಯ ಆರ್ಥಿಕ ಕಷ್ಟವನ್ನು ನೀಗಿಸಿದವರು ಉದಾರರಾದ ಚಂದಾದಾರರು, ಪ್ರಾಮಾಣಿಕರಾದ ಅಲ್ಲಲ್ಲಿಯ ಏಜಂಟರು, ಜಾಹೀರಾತುಗಳನ್ನು ಕೊಟ್ಟ ನೆರವಿತ್ತ ವರ್ತಕರು, ಕಂಪನಿಗಳು. ಇಂತಹ ಗಂಡಾಂತರ ಕಾಲವನ್ನು ಮೆಟ್ಟಿ ನಿಲ್ಲುವಷ್ಟು ಜಯಂತಿಗೆ ಬಲವನ್ನು ತಂದುಕೊಟ್ಟವರಿವರು. ಇವರೆಲ್ಲರಿಗೂ ನಮ್ಮ ಆತ್ಮೀಯ ಭಾವದ ಅಭಿನಂದನೆಗಳು, ಅಭಿನಂದನೆಗಳು.

ಶ್ರೀ. ರಾಘವೇಂದ್ರ, ಶ್ರೀ. ಹುದ್ದಾರ, ಶ್ರೀ. ಅಮ್ಮಣಗಿಕರ್ ಇವರೆಲ್ಲ ತಮ್ಮ ಕಲಾಕೃತಿಗಳಿಂದ ಜಯಂತಿಯ ಸೌಂದರ್ಯವನ್ನು ಹೆಚ್ಚಿಸಿದರು. ಶ್ರೀ. ಪೋತದಾರ ಶ್ರೀನಿವಾಸರಾಯರು ದರದಲ್ಲಿ ರಿಯಾಯಿತಿಯನ್ನು ತೋರಿಸಿ ಪಡಿಯಚ್ಚುಗಳನ್ನು ಮಾಡಿ ಕೊಟ್ಟರು. ಸಮಯ ನಿರ್ಬಂಧ ತಪ್ಪದಂತೆ ಕರ್ನಾಟಕ ಪ್ರಿಂಟಿಂಗ್ ವರ್ಕ್ಸಿನ ಸಂಚಾಲಕರಾದ ಶ್ರೀ. ವಿ. ವೈ. ಜಠಾರ, ಬಿ. ಎಸ್‌ಸಿ. ಅವರು ಸಂಚಿಕೆಗಳನ್ನು ಮುದ್ರಿಸಿಕೊಟ್ಟರು. ಈ ಮೊದಲು ಹೇಳಿದಂತೆ ಶ್ರೀ. ಜಿ. ಕೆ. ಕೇಳಕರರು ಕಾಗದದ ಹೊಣೆಹೊತ್ತು ಒದಗಿಸಿಕೊಟ್ಟರು. ಇವರೆಲ್ಲರೂ ಜಯಂತಿಯ ಆಪ್ತಮಿತ್ರರು. ನಮ್ಮ ಅಭಿನಂದನೆ ಅಭಿನಂದನೆಗಳು ಇವರಿಗೂ ಅವಶ್ಯವಾಗಿ ಸಲ್ಲಬೇಕು.

ಜಯಂತಿಯ ವಾಚಕರಿಗೆ ಸುಪರಿಚಿತರಾದ ಶ್ರೀ. ವಿ. ಜಿ. ಹೆಗಡೆ ಮುಂಬಯಿ ಅವರು, ಕೇವಲ ಸ್ವಯಂಸ್ಫೂರ್ತಿಯಿಂದ ಜಯಂತಿಗೆ ನೆರವನ್ನು ಕೊಟ್ಟುದು ಖಂಡಿತ ನೆನೆದುಕೊಳ್ಳಬೇಕಾದ ವಿಷಯ. ಇವರು ಮುಂಬಯಿಯಲ್ಲಿ ಇದ್ದುಕೊಂಡು ಹಲವು ಚಂದಾದಾರರನ್ನು ಕೂಡಿಸಿಕೊಟ್ಟರು ; ಜಾಹಿರಾತುಗಳನ್ನೂ ಒದಗಿಸಿದರು. ಅಲ್ಲದೆ ಅಲ್ಲಿಯ ಕೆಲವೊಂದು ವ್ಯವಹಾರದ ವಿಚಾರದಲ್ಲಿ ನಮಗಾಗಿ ತೊಂದರೆ ತೆಗೆದುಕೊಂಡರು. ಇಂತಹ ಅಭಿಮಾನಿಗಳು ಅಲ್ಲಲ್ಲಿದ್ದು ನೆರವು ಕೊಟ್ಟರೆ ಜಯಂತಿಗೆ ಯಾವ ಭೀತಿಯೂ ಇಲ್ಲ. ಶ್ರೀ. ಹೆಗಡೆಯವರ ಉಪಕಾರವು ನಿಜವಾಗಿಯೂ ಸ್ಮರಣೀಯವಾದುದು.

ಉತ್ತರಕರ್ನಾಟಕದ ಧಾರವಾಡ, ವಿಜಾಪುರ, ಕಾರವಾರ ಜಿಲ್ಲಾ ಬೋರ್ಡುಗಳು ಕೆಲವೊಂದು ಹಳ್ಳಿಗಳಲ್ಲಿ ಹೊಸತಾಗಿ ವಾಚನಾಲಯಗಳನ್ನು ಸ್ಥಾಪಿಸಿದುದರಿಂದ, ಜಯಂತಿಯ ವಾಚಕವರ್ಗ ಕೆಲವೊಂದು ಮಟ್ಟಿಗೆ ಹೆಚ್ಚಲು ಅನುಕೂಲವಾಯಿತು. ಆದುದರಿಂದ ಆ ಜಿಲ್ಲಾ ಬೋರ್ಡುಗಳನ್ನೂ ಅಭಿನಂದಿಸಬೇಕಾಗಿದೆ.

—ಸಂಪಾದಕ

೧. ಪರಿಷತ್-ಪ್ರಪಂಚ

'ಕರ್ನಾಟಕಕ್ಕೂ ಪರಿಷತ್ತುಗಳಿಗೂ ಪೂರ್ವಜನ್ಮದ ಸಂಬಂಧವಿದೆಯೆ?' ಎಂದು ಕೊಂಕು ಬುದ್ಧಿಯ ವಾಚಕನೊಬ್ಬನು ಮಂಗರಾಯನನ್ನು ಕೇಳಿದ್ದಾನೆ. ಅದೇಕೊ! ಪೂರ್ವಜನ್ಮದ ಕರ್ಮದಂತೆ ಪರಿಷತ್ತುಗಳೂ ನಮ್ಮನ್ನು ಬಿಡುವುದಿಲ್ಲವಲ್ಲ-ಎಂದು ಈ ವಾಚಕನ ದೂರು. ಕೇಳಿರಿ, ಒಂದಾನೊಂದು ಕಾಲದಲ್ಲಿ ಏಕೀಕರಣ ಪರಿಷತ್ತು ಕೂಡಿತ್ತಂತೆ; ಮುಂದೆ ಎಂದೋ ಒಮ್ಮೆ ಶಿಕ್ಷಣ-ಪರಿಷತ್ತು ಕೂಡಿತ್ತಂತೆ; ಈಗ ಮತ್ತೆ ವಿಶ್ವವಿದ್ಯಾಲಯ ಪರಿಷತ್ತು ಕೂಡುವುದಿದೆಯಂತೆ. ಮಿಕ್ಕ ವಾಚಕರೆ, ಈ ಮಾತು ನಿಜವಿದ್ದರೆ ನಿಮಗೆ ಅನುಮಾನವೆನಿಸಬೇಕಲ್ಲವೆ? ಇಂದಿನದು ಪ್ರಚಾರ ಯುಗ. ಯಾವ ವಿಷಯದ ಪ್ರಚಾರವಾಗಬೇಕಾದರೂ ಪರಿಷತ್ತೇ ಮುಖ್ಯ ಸಾಧನ-ಯಾವ ಯಾವ ಕಾಲದಲ್ಲಿ ಯಾವ ಯಾವ ವಿಷಯದ ಪ್ರಚಾರವನ್ನು ಸಾಧಿಸಿಕೊಳ್ಳಬೇಕೆಂಬುದು ಮುಂದಾಳುಗಳು ನಿರ್ಣಯಿಸತಕ್ಕ ವಿಷಯ. ಅದರಂತೆ ನಮ್ಮ ಮುಂದಾಳುಗಳು ಒಂದೊಂದು ಕಾಲದಲ್ಲಿ ಒಂದೊಂದು ವಿಷಯವನ್ನು ಆಯ್ದುಕೊಂಡರೆ ತಪ್ಪೇನು? ಒಂದೇ ವಿಷಯವನ್ನು ಕೊನೆಯವರೆಗೂ ಹಿಡಿಯಬೇಕೆಂಬ ಹುಡುಗಹಟ ಯಾಕೆ? ಇದಲ್ಲದೆ ಜನತೆಯ ಸಹಾಯ ದೊರಕಬೇಕಾದರೆ, ಆಗಾಗ ಹೊಸ ವಿಷಯವನ್ನೆ ಮುಂದೆಮಾಡಬೇಕೆಂಬುದು ಸುಜ್ಞರಾದ ನಮ್ಮ ಮುಂದಾಳುಗಳಿಗೆ ಸುದೈವದಿಂದ ತಿಳಿದಿದೆ. ಉದಾಹರಣೆಗಾಗಿ, ಏಕೀಕರಣವು ಯಾವಾಗಲೂ ಮುಖ್ಯ ಎಂಬ ಹುಚ್ಚಿನಿಂದ ಕೊನೆಯವರೆಗೂ ಏಕೀಕರಣಪರಿಷತ್ತನ್ನೆ ನಡೆಯಿಸಿದರೆ ಜನರಿಗೆ ಬೇಜಾರಾಗಿ ಸಹಾಯ ದೊರೆಯದಂತಾಗಬಹುದು; ಒಂದು ಕಾಗದ ಬರೆಯಲು ಸ್ಟಾಂಪಿಗೂ ಹಣ ಇಲ್ಲದ ದುಃಸ್ಥಿತಿ ಈ ಪರಿಷತ್ತಿನ ಕಚೇರಿಗೆ—ಅಲ್ಲ, ಬಂದಿಲ್ಲ—ಬಂದರೆ ಹೇಗೆ—ಎಂದು ಮಂಗರಾಯನ ಸವಾಲು—ಅರ್ಥಾತ್ ಮುಂದಾಳುಗಳಿಗೆ ಉರುಲು. ಆದಕಾಗಿ, ಚಾಣಾಕ್ಷ ವಾಚಕರೆ, ಈ ಪರಿಷತ್‌ಪ್ರಪಂಚದ ರಹಸ್ಯವನ್ನು ತಿಳಿದುಕೊಳ್ಳಿರಿ, ಇಂದಿನ ಪ್ರಚಾರ-ಶಾಸ್ತ್ರದ ಮರ್ಮವನ್ನು ತಿಳಿದುಕೊಳ್ಳಿರಿ; ಕೇವಲ ಹಲ್ಲು ಕಿರಿದರಲ್ಲ, ಬಾಯಿ ತೆರೆದರೆ ಪ್ರಚಾರ ಎಂಬುದನ್ನೂ ತಿಳಿದುಕೊಳ್ಳಿರಿ—ಇನ್ನು ಘೋಷಿಸಿರಿ—

ಪರಿಷತ್ತುಗಳಿಗೆ ಬಲವಾಗಲಿ

ಪುಢಾರಿಗಳಿಗೆ ಗೆಲುವಾಗಲಿ—ಅಲ್ಲಲ್ಲ—ಅಂದರೆ ಅಂ—ಗೆಲುವಿನ ಪುಢಾರಿಯಾಗಲಿ.

* * *

೨. ಮರೆದೀವಿಗೆ ಮೋಜು

ವಿಮಾನದಾಳಿಗೆ ಪ್ರತ್ಯುಪಾಯವೆಂದು ಮುಖ್ಯ ನಗರಗಳಲ್ಲಿ ಮರೆದೀವಿಗೆ (Black out) ಯನ್ನು ಪ್ರಯೋಗದಲ್ಲಿ ತರುತ್ತಿದ್ದಾರಷ್ಟೆ? ಇದನ್ನು ನೋಡಿ ಶ್ರೀಮದ್ ಗೋರಿಲಾ ಸಿಂಪಿನೀರ್ಮಾಂಜನೇಯ ಪರಂಪರಾರೂಢ ಕುಲದೀಪಕನಾದ ಮಂಗರಾಯನಿಗೆ ಪೂರ್ವಸಂಸ್ಕಾರದ ಕನಸು ಕಂಡುವು. ಪುಷ್ಪಕವಿಮಾನಕಾಲದಲ್ಲೂ ವಿಮಾನದಾಳಿಯಾಗಲಿ ಮರೆದೀವಿಗೆಯಾಗಲಿ ಇದ್ದೀತೆ? ಇದ್ದಿರಲಿಲ್ಲ ಎಂದು ಸಾಹಿತ್ಯದ ಆಧಾರದಿಂದ ಹೇಳಬಹುದಾಗಿದೆ. 'ಸ್ತ್ರೀಸೌಂದರ್ಯ ಬೆಳದಿಂಗಳಿನಂತೆ' ಎಂದು ವರ್ಣಿಸಬೇಕೆಂದು ಕವಿಗಳಿಗಾಗಿ ನಿಯಮವಿದೆ. ಮರೆದೀವಿಗೆಯ ರೂಢಿ ಇದ್ದುದಾದರೆ ಆ ನಿಯಮಕ್ಕೆ ಅಪವಾದ ಇರಬೇಕಾಗಿತ್ತಲ್ಲವೆ? ಬ್ಲಾಕ್‌ಔಟಿನಲ್ಲಿ ಬೆಳದಿಂಗಳಿನಂತೆ ಬಾಲೆ ಬೆಳಗುತ್ತ ನಡೆದರೆ, ಪೋಲೀಸಿನ ಬಂಧನದಲ್ಲಿಯೆ ಸಿಲುಕಬೇಕಾಯಿತಲ್ಲವೆ? ಅಥವಾ—ತಡೆಯಿರಿ, ತಡೆಯಿರಿ—ಮಂಗರಾಯನಿಗೆ ನ್ಯಾ ತುರಿಸುತ್ತಲಿದೆ, ಅರ್ಥಾತ್, ಸ್ಫೂರ್ತಿ ಸುರಿಸುತ್ತಲಿದೆ—ಅದೆಂದರೆ, ಅಭಿಸಾರಿಕೆಯರ ಕಥೆಯನ್ನು ಕೇಳಿರುವಿರಷ್ಟೆ? ಯಾರಿಗೂ ತಿಳಿಯದಂತೆ, ಕಾಣದಂತೆ ಪ್ರಿಯಕರನ ಮನೆಗೆ ಹೋಗುತ್ತಿದ್ದರಂತೆ. ಈ ಅಭಿಸಾರಿಕೆಯರಿಗಾಗಿ ನಮ್ಮ ಕವಿಗಳು ತಮ್ಮ ಸಾಹಿತ್ಯದಲ್ಲಿ ಮರೆದೀವಿಗೆಯನ್ನು ನಿಲ್ಲಿಸುತ್ತಿರಬಹುದಲ್ಲವೆ? ಅಂತೂ ಪೂರ್ವದ ಭಾರತದಲ್ಲೂ ಬ್ಲ್ಯಾಕ್ ಔಟ್ ಇದ್ದಿತೆಂಬುದು ಅಭಿಮಾನದ ವಿಷಯ ಎಂದು ಮಂಗರಾಯನು ಹಲ್ಲು ಕಿರಿ—ಅಥವಾ, ನಿಮಗೆ ಕಾಣದಿದ್ದಲ್ಲಿ ಹಲ್ಲುಕಿರಿದಾದರೂ ಪ್ರಯೋಜನವೇನು? ಇನ್ನೊಂದು ಮೋಜು! ಪೂರ್ವದ ಭಾರತದಲ್ಲಿದ್ದಂತೆ ಇಂದು ಭಾರತದ ಪೂರ್ವದಲ್ಲೂ ಅದೇ ಪರಂಪರೆ ಇದೆ. ಭಾರತದ ಪೂರ್ವ ಎಂದರೆ ಮದ್ರಾಸು ಎಂದು ಬೇರೆ ಹೇಳಬೇಕಾಗಿಲ್ಲವಷ್ಟೆ? ನ್ಯಾ ಬಣ್ಣದ ಮರೆದೀವಿಗೆಯಾಗುವ ನಿಸರ್ಗಶಕ್ತಿಯುಳ್ಳ ಮದ್ರಾಸದಲ್ಲಿ—

ತಪ್ಪಾಯಿತು—ಬ್ಲ್ಯಾಕ್‌ಔಟಿನಲ್ಲಿ ಬರೆಯುವ ಲೆಕ್ಕಣಿಕೆಗೆ ಸರಿಯಾದ ದಾರಿಯೆ ಕಾಣದಂತಾಗಿದೆ.

* * *

೩. ಕ್ರಿಪ್ಸ್-ಕಾವ್ಯ; ಅರ್ಥಾತ್, ನವರಸಸಂಧಾನ !

೧. **ಶೃಂಗಾರ:**— ಹಿಂದುಸ್ತಾನ! ಪ್ಯಾರಾ ಹಿಂದುಸ್ತಾನ! ಹಿಂದುಸ್ತಾನದ ಮೇಲೆ ನನ್ನ ಪ್ರೇಮವಿದೆ!

೨. **ವೀರರಸ:**— ದುಷ್ಟರಾದ, ನೀಚರಾದ, ಕಟುಕರಾದ ಜಪಾನರನ್ನು ನಿರ್ಮೂಲಮಾಡುವ ಪ್ರತಿಜ್ಞೆಯನ್ನೆ ಎತ್ತಿದ್ದೇನೆ.

೩. **ಕರುಣ:**— ಚೀನಾದೇಶವನ್ನು ನೋಡಿದ್ದೇನೆ. ಅಯ್ಯೊ! ಅಲ್ಲಿ ಹೆಂಗುಸರ, ಹುಡುಗರ ಅವಸ್ಥೆಯನ್ನು ನೋಡಿದ್ದೇನೆ!

೪. **ಅದ್ಭುತ:**— ನನ್ನದೂ ಚರ್ಚಿಲ್‌ರದೂ ಹಿಂದುಸ್ತಾನದ ವಿಷಯದಲ್ಲಿ ಏಕಮತವಾಗಿದೆ.

೫. **ಹಾಸ್ಯ:**— ಯುದ್ಧ ಮುಗಿದ ಮೇಲೆ ಹಿಂದುಸ್ತಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ನಾವು, ಪ್ರಾಮಾಣಿಕವಾಗಿ ಧೈರ್ಯವಾಗಿ ಕೊಡು——ಅಲ್ಲ, ಒಪ್ಪುತ್ತೇವೆ.

೬. **ಭಯಾನಕ:**— ಏನು? ನಿಮ್ಮ ಸಂರಕ್ಷಣೆಯನ್ನು ನೀವು ಮಾಡಿಕೊಳ್ಳುವಿರಾ? ! ! !

೬. ಬೀಭತ್ಸ:— ನಾವು ಹೇಳಿದ್ದನ್ನು ಒಪ್ಪದಿದ್ದರೆ ಕೊಟ್ಟಿದ್ದನ್ನು ತಿರುಗಿ ತೆಗೆದುಕೊಳ್ಳುವೆ. ಎಚ್ಚರ!

೭. ರೌದ್ರ:— ಹಿಂದುಸ್ತಾನದ ಅಲ್ಪ-ಸಂಖ್ಯಾಕರನ್ನು ನಾವು ರಕ್ಷಿಸಲೇಬೇಕು— ನಾವು ಎಂದರೆ ತೀರ ಅಲ್ಪಸಂಖ್ಯಾಕರಾದ ಬ್ರಿಟಿಶರು!

೮. ಶಾಂತ:— ಹೊರಟು ಹೋದ ಮೇಲೆ!

* * *

೯. ಕೊನೆಯ ಬಾಂಬು!

[ವಿಶೇಷ-ನಮ್ರ ಸೂಚನೆ:- 'ಮೊದಲನೇ ಬಾಂಬು' ಎಂಬ ಅತ್ಯಂತ ವೀರಾವೇಶದ ಅಗ್ರ-ಲೇಖನವನ್ನೋದಿ ಸ್ಫೂರ್ತಿಗೊಂಡು]

ವಾಚಕರೆ, ಹೆದರಬೇಡಿರಿ! ಹಿಂದುಸ್ತಾನದ ವಿಶಾಖಪಟ್ಟಣದಲ್ಲಿ ಮೊದಲನೆಯ ಬಾಂಬು ಬಿದ್ದಿತು. ಅದಕ್ಕೆ ಹೆದರುವುದೇಕೆ? ಮೊದಲನೇದೆಂದೊ? ಧಿಕ್ಕಾರವಿರಲಿ! ನಿಮ್ಮ ಮೇಲೆಯೆ ಬಿದ್ದರೆ ಅದೇ ಕೊನೆಯ ಬಾಂಬು ಅಗುವುದೆಂಬುದನ್ನು ಮರೆತಿರುವಿರಾ? ಬಾಂಬು ಬಿದ್ದರೆ ಅಗುವುದೇನು? ಲಂಡನದ ಮೇಲೆ ಬಾಂಬು ಬಿದ್ದಿತು. ಚರ್ಚಿಲ್‌ರು ಜೀವದಿಂದಿಲ್ಲವೆ? ಜರ್ಮನಿಯ ಮೇಲೆ ಬಾಂಬು ಬಿದ್ದಿತು, ಹಿಟ್ಲರನು ಜೀವದಿಂದಿಲ್ಲವೆ? ವಿಶಾಖಪಟ್ಟಣದ ಮೇಲೆ ಬಾಂಬು ಬಿದ್ದಿತು, ಮುಬ್ಬಳ್ಳಿಯಲ್ಲಿ ಕ್ಷೇಮವಿಲ್ಲವೆ? ಇದಲ್ಲದೆ ನಮ್ಮ ಸಂಸ್ಕೃತಿ ಹೇಳುವುದೇನು? ನಾವು ಸಾಯುವುದೇ ಇಲ್ಲ, ಯಾಕೆಂದರೆ ನಾವು ಜೀವದಿಂದಲೆ ಇಲ್ಲ—ಅಲ್ಲ, ಅಂದರೆ ನಾವು ಅಮರರು! ಒಂದು ವೇಳೆ ಸತ್ತರೂ ಅಗುವುದೇನು? ಯಾಕೆಂದರೆ ನೆಪೋಲಿಯನನು ಸತ್ತಿಲ್ಲವೆ?— ಎಂದರೆ ಇಂದಿಗೂ ಇದ್ದಾನೆ ಎಂದು ಅರ್ಥ! ಇದಲ್ಲದೆ— ಇಂತಹ ನಮ್ಮ ಅಗ್ರ-ಲೇಖವನ್ನು ಓದಿಯೂ ನೀವು ಸತ್ತಿಲ್ಲವೆಂದ ಮೇಲೆ— ಅರ್ಥಾತ್ ಇನ್ನೇಕೆ ಸಾವಿನ ಹೆದರಿಕೆ ನಿಮಗೆ? ಆದರೆ, ವಾಚಕರೆ, ಒಂದು ಮಾತು. ಭಾರತೀಯರಾದ ನಾವು ಸತ್ಯದ ಮಾರ್ಗವನ್ನು ಹಿಡಿದಿದ್ದೇವೆ— ಆದ್ದರಿಂದ ಸತ್ತರೆ ಸತ್ತಿಲ್ಲ ಎಂದು ಮಾತ್ರ ಸಾಧಿಸಬೇಡಿರಿ, ಮತ್ತು ಅಹಿಂಸೆಯಲ್ಲಿ ನಮ್ಮ ವಿಶ್ವಾಸ. ಹಿಂಸಾತ್ಮಕ ಬಾಂಬಿನಲ್ಲಿ ಅಲ್ಲ. ಅದಕಾಗಿಯೂ ನಾವು ಬಾಂಬಿನಿಂದ ಸಾಯುವಂತಿಲ್ಲ. ಆದ್ದರಿಂದ, ಏಳಿರಿ— ನಿಮ್ಮ ಮೇಲೆಯೆ ಬಾಂಬು ಬಿದ್ದಿಲ್ಲವಾದರೆ, ಇದು ಮೊದಲನೇ ಬಾಂಬು; ಕೇಳಿರಿ— ನಿಮ್ಮ ಮೇಲೆಯೆ ಬಿದ್ದದ್ದರೆ, ಇದು ಕೊನೆಯ ಬಾಂಬು. ಇಂತಿದು ಸಂಯುಕ್ತ ಬಾಂಬ್‌ಪಾತದ ಸಂಕ್ಷಿಪ್ತ ಸಮಾಲೋಚನೆ ಸಮಾಪ್ತಂ. ವಿಮಾನದಾಳಿಯಿಂದ ಶಾಂತಿರಸ್ತು, ಇದನ್ನೋದಿದ್ದಕ್ಕೆ ಭ್ರಾಂತಿರಸ್ತು!'

(೫೪೨ನೆಯ ಪುಟದಿಂದ ಮುಂದುವರಿದುದು)

ಕಾಲುಕಸ ಮಾಡಿದರು. ಸುಮಾರು ೫೫ ವರ್ಷಗಳ ಹಿಂದೆ **ಸರ್ ಫಿರೋಜ ಶಹಾ ಮೇಥಾ** ಅವರು ರಾಷ್ಟ್ರೀಯ ಸಭೆಯಲ್ಲಿ ಮಾಡಿದ ಒಂದು ಭಾಷಣದಲ್ಲಿ ಹೀಗೆ ಗದ್ದರಿಸಿದ್ದರು : "Perhaps a good many of you remember the case of James II, who, when in the hour of peril, appealed to the Duke of Bedford (whose son had been judicially murdered by the king) for help to whom the old nobleman replied : "I had once a son whom I could have sent to your assistance. But I have not got him now." In the same way, in some hour of need, India might have to say something similar to England.'

ಸಾರಾಂಶ:— ಇಂಗ್ಲಂಡಿನ ಅರಸನಾದ ೨ನೆಯ ಜೇಮ್ಸನು ಡ್ಯೂಕ್ ಆಫ್ ಬೆಡ್‌ಫರ್ಡ್‌ನ (Duke of Bedford) ಮಗನಿಗೆ ಮರಣದ ಶಿಕ್ಷೆಯನ್ನು ವಿಧಿಸಿದ್ದನು. ಅರಸನು ಸಂಕಟದಲ್ಲಿ ಸಿಕ್ಕಾಗ ತನಗೆ ನೆರವಾಗಬೇಕೆಂದು ಡ್ಯೂಕನನ್ನು ಕೇಳಿದನು. ಆಗ ಡ್ಯೂಕನು ಅರಸನಿಗೆ ಹೀಗೆ ಉತ್ತರಕೊಟ್ಟನು: "ನನಗಿದ್ದ ಮಗನನ್ನು ನಿಮ್ಮ ನೆರವಿಗೆ ಕಳಿಸುತ್ತಿದ್ದೆನು. ಆದರೆ ಈಗ ನನಗೆ ಮಗನು ಉಳಿದಿಲ್ಲ." ಅದೇ ಮಾದರಿಯ ಉತ್ತರವನ್ನು ಗಂಡಾಂತರ ಬಂದಾಗ ಹಿಂದುಸ್ಥಾನವು ಇಂಗ್ಲಂಡಿಗೆ ಕೊಡುವ ಪ್ರಸಂಗ ಬರಬಹುದು.

ಸಮರದಲ್ಲಿ ಜೀವದ ಹಂಗುದೊರೆದು ಕಾದಿದವರಿಗೆ ವಿಕ್ಟೋರಿಯಾ ಕ್ರಾಸ್ (V. C.) ಬಹುಮಾನವು ದೊರೆಯುತ್ತದೆ. ೧೯೧೧ ರ ವರೆಗೆ ಭಾರತೀಯ ವೀರರು—ತಾನಾಜಿ ಅಥವಾ ಬಾಜೀಪ್ರಭುಗಳಿದ್ದರೂ—ಅವರು ಕಪ್ಪುಜನರಿದ್ದುದರಿಂದ, ಅವರು ಈ ಬಹುಮಾನಕ್ಕೆ ಅರ್ಹರಿದ್ದಿಲ್ಲ. ಚಕ್ರವರ್ತಿಗಳಾದ ಪಂಚಮ ಜಾರ್ಜರು, ಭಾರತೀಯರಿಗೂ ಇನ್ನುಮುಂದೆ ಈ ಬಹುಮಾನವು ದೊರೆಯುವುದೆಂದು ಸಾರಿದರು. ಮುಸಲ್ಮಾನರ ಆಳಿಕೆಯಲ್ಲಿ ಕೂಡ ಅನೇಕ ಭಾರತೀಯ ಶೂರರು ಶೌರ್ಯಸಾಹಸಾದಿ ಗುಣಗಳಿಗಾಗಿ ಇನಾಮುಗಳನ್ನು ದೊರೆಕಿಸಿದ್ದರು. ಕರ್ನಾಟಕದಲ್ಲಿ ರಕ್ತಮಾನ್ಯ ಇನಾಮು ದೊರೆಕಿಸಿದ ಹಲವು ಜನರು, ಇನಾಮ್ ಭೂಮಿಯ ಒಡೆಯರಿದ್ದಾರೆ. ಆದರೆ ಅವರ ವಂಶಜರನ್ನು ಬ್ರಿಟಿಶರು ನಿಃಶಸ್ತ್ರರನ್ನಾಗಿ ಮಾಡಿದ್ದರಿಂದ, ಅವರೆಲ್ಲ ಸಾಹಸದ ಕೆಲಸಕ್ಕೆ ಎರವಾದರು. ಮುಂದಿನ ಬರೆಹದಲ್ಲಿ ಕಳೆದ ಮಹಾಯುದ್ಧದಲ್ಲಿ 'ವಿಕ್ಟೋರಿಯಾ ಕ್ರಾಸ್' ಬಹುಮಾನವನ್ನು ಸಂಪಾದಿಸಿದ ಕೆಲವು ವೀರರ ಸಾಹಸ ಕೃತ್ಯಗಳನ್ನು ಕೊಟ್ಟು, ಇನ್ನು ಕೆಲವು ಸಂಗತಿಗಳನ್ನು ಹೇಳಿ, ಈ ಲೇಖನಮಾಲೆಯನ್ನು ಮುಗಿಸುವೆನು.

ಚಂದಾದಾರಿಗೆ

ಇದೇ ಮೇ ಸಂಚಿಕೆಗೆ ಹಲವು ಜನರ ಚಂದಾ ಅವಧಿ ಮುಗಿಯುವುದರಿಂದ, ಅವರೆಲ್ಲರೂ ನಮ್ಮ ಪತ್ರದ ದಾರಿಯನ್ನು ನೋಡದೆ ಕೂಡಲೆ ತಂತಮ್ಮ ವಾರ್ಷಿಕ ಚಂದಾ ಹಣದ ಮೂರು ರೂಪಾಯಿಗಳನ್ನು ಕಳುಹುವ ಉಪಕಾರ ಮಾಡಬೇಕು. ಬೇಡವಾಗಿದ್ದರೆ ಕಾಗದವೊಂದನ್ನು ಬರೆದು ಹಾಗೆ ಖಂಡಿತವಾಗಿ ತಿಳಿಸಬೇಕು. ಇಲ್ಲವಾದರೆ ಜೂನ್ ಸಂಚಿಕೆ ಒಂದು ವರ್ಷದ ಚಂದಾ ಹಣಕ್ಕೆ ವ್ಹಿ. ಪಿ. ಯಾಗಿ ಬರುವುದು ದಯೆಯಿಟ್ಟು ಸ್ವೀಕರಿಸಿ ಎಂದಿನಂತೆ ಸಹಕಾರ ನೀಡಬೇಕು.

ವ್ಯ. ಜ. ಧಾ.

ನಾಡಗುಡಿಯು ಮಾನವೆ ಮಾನ !   ಅದಕಾಗಿ ಮುಡಿಪು ನಮ್ಮಯ ಪ್ರಾಣ

ಕನ್ನಡ ಸೈನಿಕ

" ಸೊಕ್ಕಿದ ಹಗೆಗಳ ಬೊಗ್ಗಿಸಿ ಮೆರೆಯುವ ಸೋಲರಿಯದ ಕರಿನಾಡಗುಡಿ ! "

ಸಂಪುಟ ೧ | ಬೇಕಾದಾಗ ಹೊರಡುವ ಪತ್ರಿಕೆ | ಸಂಚಿಕೆ ೩

ಕ. ಸೈನಿಕನಿಗೆ ಬೆಂಬಲ

ಸೈನಿಕನ ಬಗೆಗೆ ಜನತೆಯಲ್ಲಿ ಆದರಹುಟ್ಟುತ್ತಲಿದೆಯೆಂಬುದು ಓದುಗರಿಂದ ಬರುವ ಕಾಗದಗಳಿಂದ ತಿಳಿಯುವಂತಿದೆ. ಹಲವ-ರಂತೂ ಸೂಚನೆ-ಸುದ್ದಿಗಳನ್ನು ಕಳುಹಿಸಿ, ಸೈನಿಕನನ್ನು ಪುಷ್ಟ-ಮಾಡಲು ಸಹಾಯ ಮಾಡುತ್ತಿದ್ದಾರೆ. ಇನ್ನೂ ಹೆಚ್ಚಿನ ಕಾರ್ಯ-ವಾಗಬೇಕೆಂದವರು—ನಾವು ಕೇಳದೆಯೂ—ಹಣಕಳುಹಿಸುತ್ತಿ-ದ್ದಾರೆ. ಸರಿ, ಒಟ್ಟಿನಲ್ಲಿ ಎಲ್ಲಬಗೆಯ ಬೆಂಬಲ ದೊರೆಯುತ್ತಿದ್ದರೂ ಯುದ್ಧ ಪರಿಸ್ಥಿತಿಯ ಮೂಲಕ ಕಾಗದವೇ ಸಿಕ್ಕದಂತಾಗಿ—ಬಹಳ ತೊಂದರೆಗೀಡಾಗಿದ್ದೇವೆ. ಕಾಗದವು ವಿಪುಲವಾಗಿ ಸಿಕ್ಕುತ್ತಿದ್ದರೆ, ಸೈನಿಕನು ಆಗಾಗ ಹೊರಬಂದು ಹೆಚ್ಚಿನ ಸೇವೆ ಮಾಡ-ಬಹುದಾಗಿತ್ತು.

ಆಂಧ್ರರು

ಭಾರತಕ್ಕೆ ಸರ್ ಕ್ರಿಪ್ಸರು ಬಂದ ಕೂಡಲೆ, ಆಂಧ್ರರು ತಮ್ಮ ಪ್ರಾಂತೀಕರಣದ ಮಾತನ್ನು ಮುಂದೆತ್ತಿದ್ದರು. ಆಗ ವಿಜಯ-ನಗರಂ,ದ ಮಹಾರಾಜರು ಗಾಂಧೀಜಿಯವರನ್ನುದ್ದೇಶಿಸಿ ಒಂದು ಪತ್ರಬರೆದದ್ದನ್ನು '**ಹರಿಜನ**'ದಲ್ಲಿ ಅನೇಕರು ಓದಿರಬಹುದು. ಅದರಲ್ಲಿ ಅವರು : "ಆಂಧ್ರಪ್ರಾಂತದ ಪ್ರಶ್ನೆಯನ್ನು ಕರ್ನಾಟಕ ಕೇರಳದಂತೆಯೆಂದು ತಿಳಿದಿದ್ದೀರಾ ? ಅವು ಆರ್ಥಿಕ ದೃಷ್ಟಿಯಿಂದ ಬೇರೆ ಪ್ರಾಂತಗಳಾಗಲು ಸಾಧ್ಯವಿಲ್ಲ" ಎಂದು ಮುಂತಾಗಿ ಬರೆದಿದ್ದಾರೆ. ಅದಕ್ಕೆ ಗಾಂಧೀಜಿಯವರು ಸರಿಯಾಗಿಯೆ ಉತ್ತರ ಕೊಟ್ಟಿದ್ದಾರೆ. ತಮ್ಮ ಪ್ರಾಂತದ ಮುನ್ನಡೆ ಬಯಸುವ ಮಹನೀ-ಯರು ನೆರೆಯವರ ಅಹಿತವಾಗದಂತೆ ನೋಡಿಕೊಳ್ಳಬೇಕು. ಕರ್ನಾಟಕದ ಆರ್ಥಿಕ ಪರಿಸ್ಥಿತಿಯ ಪರಿಜ್ಞಾನವಿಲ್ಲದ ಮಹಾ-ರಾಜರು ಹೀಗೆ ಹೇಳಿದ್ದಕ್ಕೆ ನಾವೇಕೆ ಬೇಸರುಪಟ್ಟುಕೊಳ್ಳಬೇಕು, ಎಂದೆನಿಸುವುದು. ಆದರೂ 'ದೊಡ್ಡ'ವರಿಂದ ಇಂತಹ ಮಾತು-ಗಳು ಬರಬಾರದು.

ಇದು ನೋಡಿ ; ಅದು ನೋಡಿ !

ಪ್ರಾಂತೀಕರಣದ ಮಾತನ್ನೆತ್ತಿ ಹೊಸಘಟನೆ ಸಿದ್ಧವಾಗುವ ಸಂದರ್ಭದಲ್ಲಿ ಕರ್ನಾಟಕವನ್ನು ಮರೆಯಬಾರದೆಂಬ ಮನವಿ-ಯನ್ನು ಮುಂದೊಡಲು ನಮ್ಮ ಪ್ರಾಂತದಲ್ಲಿಯೂ ಪ್ರಯತ್ನ ನಡೆಯಿತು. ಇಡಿ ಕ್ರಿಪ್ಸರ ಯೋಜನೆಯೆ ಕುಸಿಬಿದ್ದು ಹೋಯಿತು. ಈಗ ಹಿಂದಿನ ಮಾತಿಗೆ ಮರುಗಬೇಕಿಲ್ಲ. ಆದರೆ ಮುಂದಾಳು-ತನದಲ್ಲಿದ್ದವರು ಮಾಡುತ್ತಿದ್ದದನ್ನು ನೋಡಿದರೆ, ಇವರ ಮುಂದಾಳುತನಕ್ಕೆ ಮರುಕವುಂಟಾಗುತ್ತದೆ. ಆಂಧ್ರರು ಮಾಡುತ್ತಿದ್ದ ತಂತ್ರದಕಡೆಗೆ ಲಕ್ಷ್ಯಕೊಡುವುದಗತ್ಯ. ಆಂಧ್ರ ಪ್ರಾಂತೀಕರಣದ ಬಗ್ಗೆ ಮಹಾತ್ಮಾಜಿಯವರನ್ನೂ ಹೀಗಳೆದ ಮಹಾರಾಜ ಕುಮಾ-ರರಿಗೆ, ಕಾಂಗ್ರೆಸಿನ ಧುರೀಣ—ಮಹಾತ್ಮರ ಸನ್ನಿಧಿಯಲ್ಲಿದ್ದ—ಶ್ರೀ. ಪಟ್ಟಾಭಿಯವರೆ ಸಹಾಯಮಾಡಿ ಪ್ರಾಂತೀಕರಣದ ಬಗ್ಗೆ ಕರಡು ಬರೆದುಕೊಟ್ಟರಂತೆ. ಒಂದು ಧ್ಯೇಯಕ್ಕಾಗಿ ಎಲ್ಲ ಅಭಿಪ್ರಾಯ-ದವರೂ ಒಂದೆಡೆ ಸೇರುತ್ತಿರುವುದು ಕಾಣುವುದು ಎರಡನೆಯ ಪ್ರಾಂತದಲ್ಲಿ. ನಮ್ಮಲ್ಲಿಯೊ.......ಅನಾಸ್ಥೆ. ಕಾರ್ಯಮಾಡಬೇಕೆನ್ನು-ವವರಿಗೂ ಕೂಡ ಬೆಂಬಲ ಕೊಡಲಾರದಷ್ಟು ದೊಡ್ಡಿತೆ. ಈ ಸಂದರ್ಭದಲ್ಲಿ ಕನ್ನಡ ಸೈನಿಕನಿಗೆ ಎನಿಸಿದ್ದು ಇಂತು : 'ಕನ್ನಡ-ನಾಡು ನಾಯಕರಿಲ್ಲದ ನಾಡು; ಈಗಿದ್ದವರೆಲ್ಲ ನಾಯಕರಲ್ಲ ಕೇವಲ ನಾಯಿ-ಕರುಗಳು.'

ನಾಯಕರು ನಾಯಿ-ಕರುಗಳಾದದ್ದೇಕೆ?

ಕನ್ನಡವನ್ನು ಕಡೆಗಣಿಸಿದ್ದೆ ಇದಕ್ಕೆ ಕಾರಣ. ಇತರ ಪ್ರಾಂತಗಳಲ್ಲಿ ನಾಯಕರ ಕಣ್ಣುಮುಂದೆ ಅವರ ಪ್ರಾಂತವು ಇರುವುದು. ನಮ್ಮಲ್ಲಿ ಹಾಗಲ್ಲ, ಸಮಾಜದಲ್ಲಿ ಮುಂದಾಳಾಗಬೇಕೆಂಬ ಹಂಬಲು ! ಜನತೆಯ ಮನದೊಲವಿನ ಬಗೆಗೆ ಮಹತ್ತ್ವ ಕೊಡದೆ, ತಮ್ಮ ವೈಯಕ್ತಿಕ ವಿಚಾರದ ಮೋಹದಲ್ಲಿಯೆ ಮೆರೆಯುವುದು ಕಾಣುತ್ತದೆ. ವ್ಯಕ್ತಿಗತ ವಿಚಾರ ಹೆಚ್ಚಾದ ಹಾಗೆಲ್ಲ, ಮುಂದಾಳುತನ ದೂರವಾಗಿ 'ಇವರು ನಮ್ಮ ಮುಂದಾಳುಗಳೆ ?' ಎಂಬ ಸಂಶಯವು ಬರುತ್ತದೆ. ನಾಯಕರು ನಾಯಕತ್ವವನ್ನು ಕಳೆದು ಕೊಂಡು ನಾಯಿ-ಕರುಗಳಾಗುವರು.

ಕಳೆದ ಮಹಾಯುದ್ಧದಲ್ಲಿ ★ (೫ ನೆಯ ಭಾಗ)
ಭಾರತೀಯರು ಮಾಡಿದ ಸಹಾಯ

★

ಶ್ರೀಮಾನ್ ನಾಳ್ವೀಕರ ಗುರುರಾಯರು, ಬಿ. ಎ., ಎಲ್‌ಎಲ್. ಬಿ.

ಕಳೆದ ಮಹಾಯುದ್ಧದಲ್ಲಿ ಭಾರತೀಯರು ಬರಿ ಧನಸಹಾಯವನ್ನು ಒದಗಿಸಿ, ಹೇಡಿಗಳಂತೆ ಕೈಮುಚ್ಚಿ ಕುಳಿತುಕೊಂಡರೆ? ಇಲ್ಲ, ಲಕ್ಷಗಟ್ಟಲೆ ವೀರ ಭಾರತೀಯರು ಕಡಲನ್ನು ದಾಟಿಹೋಗಿ, ಬ್ರಿಟಿಷರಿಗಾಗಿ ತಮ್ಮ ನೆತ್ತರ ಕೊಡುಗೆಯನ್ನು ಕೊಟ್ಟರು. ವೈರಿಗಳ ನೆತ್ತರ ಹೊಳೆ ಹರಿಸಿದರು.

ಭೇದಭಾವ

ಹಿಂದಿನ ಬರೆಹಗಳಲ್ಲಿ ಭಾರತೀಯರು ಯುದ್ಧದಲ್ಲಿ ತೊಡಗಿದ ಬ್ರಿಟಿಶರಿಗೆ ಮಾಡಿದ ಧನಸಹಾಯ, ಸಾಮುಗ್ರಿಗಳ ಸಹಾಯದ ಸಂಕ್ಷೇಪ ವಿವೇಚನೆ ಮಾಡಿದ್ದಾಗಿದೆ. ಈ ಬರೆಹದಲ್ಲಿ ಮನುಷ್ಯಬಲ ಪೂರಯಿಸಿದ ವಿಷಯವನ್ನು ವಿಚಾರ ಮಾಡುವ. ಬ್ರಿಟಿಶರು ಹಿಂದೀಯರನ್ನು ನಿಃಶಸ್ತ್ರರನ್ನಾಗಿ ಮಾಡಿದ ಶ್ರೇಯಸ್ಸನ್ನು ಪಡೆದಂದಿನಿಂದಲೂ ಬಹು **ಭಾರತೀಯರಿಗೆ ಯುದ್ಧ** ಕಲೆಯು ಮರೆತು ಆದದ್ದು ಆಶ್ಚರ್ಯವಲ್ಲ. ಬ್ರಿಟಿಶ್ ಅಧಿಕಾರಿಗಳ ಕೈಕೆಳಗೆ ಕೆಲವರಿಗೆ ದಂಡಿನಲ್ಲಿ ಸಿಪಾಯಿಗಳಂತೆ ಕೆಲಸ ಮಾಡುವ—ಆತ್ಮಾಹುತಿ ಕೊಡುವ—ಭಾಗ್ಯವು ಪ್ರಾಪ್ತವಾಗಿತ್ತು. ಭಾರತೀಯರು ಬ್ರಿಟಿಶರಿಗಾಗಿ ಅವರ ಅಪ್ಪಣೆಯ ಮೇರೆಗೆ ಭೂಪೃಷ್ಟದ ಅನೇಕ ಭಾಗಗಳಲ್ಲಿ ಬೇರೆ ಬೇರೆ ಜನಾಂಗಗಳ ಕೂಡ ಕಲಿತನದಿಂದ ಕಾದಿ ಬ್ರಿಟಿಶರಿಗೆ ಯಶಸಂಪಾದಿಸಿ ಕೊಟ್ಟರು, ಅವರ ಸಾಮ್ರಾಜ್ಯವನ್ನು ವಿಸ್ತರಿಸಿದರು, ಭದ್ರಗೊಳಿಸಿದರು, ಬಲಪಡಿಸಿದರು. ಆದರೂ ಬ್ರಿಟಿಶರು ಭಾರತೀಯರಿಗೆ ದಂಡಿನಲ್ಲಿ ಅಧಿಕಾರದ ಸ್ಥಳಗಳನ್ನು ಕೊಡಲಿಲ್ಲ. ಅವರ ಮೇಲೆ ವಿಶ್ವಾಸವಿದೆ ಎಂದು ಬಾಯಿಂದ ಹೇಳಿದರೂ ಕೃತಿಯಲ್ಲಿ ವಿಶ್ವಾಸವಿಲ್ಲದಂತೆ ನಡೆದುಕೊಳ್ಳುತ್ತ ಬಂದರು. ಇದರ ಫಲ ಎಲ್ಲರಿಗೂ ಎಂದರೆ ಬ್ರಿಟಿಶರು ಭಾರತೀಯರು ಇಬ್ಬರಿಗೂ ದೊರೆಯತೊಡಗಿದೆ. ಭಾರತೀಯರಲ್ಲಿ ಶೌರ್ಯ-ಧೈರ್ಯ- ಸಾಹಸಾದಿ ಗುಣಗಳು ಇಲ್ಲವೆಂಬ ಮತವು ತೀರ ತಪ್ಪಾದದ್ದೆಂಬುದನ್ನು ಕಳೆದ ಮಹಾಯುದ್ಧದಲ್ಲಿ ಬ್ರಿಟಿಶ್ ರಾಜಕಾರಣಪಟುಗಳ ಹಾಗೂ ಸೇನಾನಾಯಕರು ವ್ಯಕ್ತಪಡಿಸಿದ ಅಭಿಪ್ರಾಯಗಳ ಮೇಲಿಂದ ನಿಚ್ಚಳವಾಗಿ ಕಾಣುತ್ತದೆ. ಆದರೂ ಸೈನ್ಯಖಾತೆಯು ಮತ್ತು ಸಂರಕ್ಷಣ ಖಾತೆಯು ಚಾಲಕತ್ವವು ಬ್ರಿಟಿಶರಿಗಾಗಿಯೆ ಮೀಸಲಾಗಿಡಬೇಕಲ್ಲದೆ ಅದನ್ನು ಭಾರತೀಯರಿಗೆ ಒಪ್ಪಿಸಬಾರದೆಂಬ ಮತಕ್ಕೆ ಭಾರತ ಮಂತ್ರಿಗಳು ಹಾಗೆಯೆ ಅಂಟಿಕೊಂಡಿದ್ದಾರೆ. ವರ್ಣಭೇದವು (Racial Descrimination) ಅಳಿದು ಹೋಗಿಲ್ಲ. ನಾವು ಹೆಚ್ಚಿನವರು ನೀವು ಕಡಿಮೆಯವರೆಂಬ ಭಾವನೆಯು ಬದಲಾಗಿಲ್ಲ. ಭಾರತೀಯರು ತಮ್ಮ ಹಣಕೊರೆದು ಮಣಿ ಮಾಡಿ ಬ್ರಿಟಿಶರನ್ನು ಅದರ ಮೇಲೆ ಕೂಡಿಸಿದರೂ ಬ್ರಿಟಿಶರು ತಮ್ಮ ಭೇದನೀತಿಯನ್ನು ಬಿಡುವುದಿಲ್ಲ, ಭೇದಭಾವವನ್ನು ಮರೆಯುವುದಿಲ್ಲ. ಹಿಂದುಸ್ಥಾನದ ವ್ಹಾಯಿಸರಾಯರಾದ ಲಾರ್ಡ್ ಹಾರ್ಡಿಂಜರು ಹಿಂದೀಯರ ರಾಜಭಕ್ತಿಯ ಬಗ್ಗೆ ಹೀಗೆ ಹೇಳಿದ್ದಾರೆ :--- " I have long known and never for an instant doubted the deep loyalty and attachment of the Indian people to the King Emperor and the throne and their readiness to make any sacrifice on their part to further and strengthen the interests of the Empire." **ಸಾರಾಂಶ :** ಹಿಂದೀಜನರ ಆಳವಾದ ರಾಜಭಕ್ತಿ ಮತ್ತು ಸಮ್ರಾಟರ ಮೇಲಿನ ಮಮತೆಯ ಹಾಗೂ ಸಾಮ್ರಾಜ್ಯವನ್ನು ಬಲಪಡಿಸುವುದಕ್ಕಾಗಿ ಬೇಕಾದ ಸಮರ್ಥ ತ್ಯಾಗವನ್ನು ಮಾಡುವ ಅವರ ಸಿದ್ಧತೆಯನ್ನು ನಾನು ಬಹುದಿವಸದಿಂದ ಬಲ್ಲೆ; ಅದರ ಬಗ್ಗೆ ನಾನು ಎಂದೂ ಸಾಶಂಕನಿದ್ದಿಲ್ಲ. ಆದರೆ ಭಾರತೀಯರಿಗೆ ಈ ಭಕ್ತಿ-ವಿಶ್ವಾಸ-ತ್ಯಾಗಗಳ ಫಲ ದೊರೆತದ್ದೇನು ? **ರಾಣಾ ಪ್ರತಾಪ, ಪುಲಕೇಶಿ, ಶಿವಾಜಿ, ರಣಜಿತ ಸಿಂಗ್** ಮೊದಲಾದ ವೀರಾಗ್ರೇಸರರ ದೇಶಬಾಂಧವರಿಗೆ ಬ್ರಿಟಿಶ ದಂಡಿನಲ್ಲಿ ಸುಭೇದಾರ್ ಮೇಜರ್, ಹವಾಲದಾರ್ ಪದಕ್ಕಿಂತ ಹೆಚ್ಚಿನ ಹುದ್ದೆಗಳು ದೊರೆಯುತ್ತಿದ್ದಿಲ್ಲ. ಕಡಿಮೆ ಹುದ್ದೆಗಳು

ದೊರೆತರೂ ಕೂಡ ಹಿಂದೀಯರು ಶೌರ್ಯ, ಧೈರ್ಯ, ಸಹಾ-ಸಾದಿ ಗುಣಗಳಲ್ಲಿ ಪ್ರಪಂಚದಲ್ಲಿಯ ಬೇರೆ ಯಾವ ಸೈನಿಕರಿಗಿಂತಲೂ ಮಿಗಿಲಾದವರೆಂಬ ಹೆಸರನ್ನು ಪಡೆದರು.

ಬ್ರಿಟಿಶಾರ್ಪಣೆ

ಮಹಾಯುದ್ಧವು ೧೯೧೪ ನೆಯ ಇಸ್ವಿಯ ಅಗಸ್ಟ ೪ ನೆಯ ತಾರೀಖಿಗೆ ಪ್ರಾರಂಭವಾಯಿತು. ೧೯೧೪ ನೆಯ ಇಸ್ವಿಯ ಸಪ್ಟಂಬರ್ ೮ ನೆಯ ತಾರೀಖಿಗೆ ವ್ಹಾಯಿಸರಾಯರು ೭೦,೦೦೦ ಸೈನಿಕರನ್ನು (Combatants) ಸಮುದ್ರದ ಆಚೆಗೆ ಕಳಿಸಿದ್ದೇವೆಂದು ಕಾನೂನು ಮಂಡಳಕ್ಕೆ ತಿಳಿಸಿದರು. ಮಹಾಯುದ್ಧ ಪ್ರಾರಂಭವಾದಾಗ ಹಿಂದುಸ್ಥಾನದಲ್ಲಿಯ ಬ್ರಿಟಿಶರ ದಂಡಿನಲ್ಲಿ, ೮೦ ಸಾವಿರ ಬ್ರಿಟಿಶರು, ೨ ಲಕ್ಷ ೩೦ ಸಾವಿರ ಭಾರತೀಯರು ಇದ್ದರು. ಹಿಂದುಸ್ಥಾನದಲ್ಲಿಯ ಹಿಂದೀಯರ ಹಣದಿಂದ ಸಿದ್ಧವಾದ ದಂಡಿಗೆ ಹಿಂದೀ ದಂಡೆಂದು ಕರೆಯುವುದು ವಸ್ತುಸ್ಥಿತಿಯನ್ನು ವಿಪರ್ಯಾಸ ಮಾಡಿದಂತಾಗುತ್ತದೆ. ಈ ದಂಡಿನ ಮೇಲೆ ಹಿಂದೀಯರಿಗೆ ಎಳ್ಳಷ್ಟೂ ಅಧಿಕಾರವಿಲ್ಲ. ಅದರ ವೆಚ್ಚವನ್ನು ಬ್ರಿಟಿಶರ ಹೇಳಿಕೆಯಂತೆ ಕೊಡುವುದರ ಆಚೆಗೆ–ಈ ದಂಡಿಗೆ–ಭಾರತೀಯರ ಸಂಬಂಧವೇ ಇಲ್ಲ. ಯುದ್ಧಕಾಲದಲ್ಲಿ ೮ ಲಕ್ಷ ಸೈನಿಕರನ್ನು ೪ ಲಕ್ಷ ಸೈನಿಕೇತರರನ್ನು (non-combatants) ಭರತಿ ಮಾಡುವುದರಲ್ಲಿ ಬಂದಿತು. ಮಹಾಯುದ್ಧಕ್ಕಿಂತ ಮೊದಲು ೧೫ ಸಾವಿರ ಸೈನಿಕರ ಭರತಿ ಪ್ರತಿತಿಂಗಳಿಗೂ ಆಗುತ್ತಿತ್ತೆಂಬ ಸಂಗತಿಯನ್ನು ಗಮನಕ್ಕೆ ತಂದುಕೊಂಡರೆ ಯುದ್ಧಕಾಲದಲ್ಲಿ ರಿಕ್ರೂಟಿಂಗ ಕೆಲಸವು ಎಷ್ಟು ಬತ್ತರದಿಂದ—ಎಷ್ಟು ರಭಸದಿಂದ ಸಾಗಿತ್ತೆಂಬುದು ಒಡೆದು ಕಾಣುತ್ತದೆ. ತಮ್ಮ ಆರೋಗ್ಯರಕ್ಷಣೆಯನ್ನು ಬದಿಗೆ ನೂಕಿ ಮಹಾತ್ಮಾಗಾಂಧಿಯವರು, ಸಾಮ್ರಾಜ್ಯ ರಕ್ಷಣೆಗಾಗಿ ಸೈನ್ಯಭರತಿಯ ಕಾರ್ಯ ಮಾಡಿದರು. ಹಿಂದುಸ್ಥಾನದಲ್ಲಿ ಕಳೆದ ಮಹಾಯುದ್ಧದ ಕಾಲದಲ್ಲಿ ಭರತಿ ಆದ ಸೈನಿಕರ ಹಾಗು ಸೈನಿಕ–ಸಹಾಯಕರ (non-combatants) ಒಟ್ಟು ಸಂಖ್ಯೆ ೧೧ ಲಕ್ಷ ೬೧ ಸಾವಿರ ೭೮೯ ಇತ್ತು. ೧೯೧೮ರ ಸಪ್ಟಂಬರ್ ತಿಂಗಳ ಕೊನೆಯವರೆಗೆ ಭರತಖಂಡದಿಂದ ಸಮುದ್ರದ ಆಚೆಗೆ ಕಳಿಸಲ್ಪಟ್ಟ ಭಾರತೀಯರ ಹಾಗೂ ಬ್ರಿಟಿಶರ ಸಂಖ್ಯೆ :—

	ಬ್ರಿಟಿಶ್	ಭಾರತೀಯರು
ಫ್ರಾನ್ಸಕ್ಕೆ	೧೮,೯೩೪	೧,೩೧,೪೯೬
ಪೂರ್ವ ಆಫ್ರಿಕಾ	೫,೪೩೩	೪೬,೯೩೬
ಮೆಸೊಪೊಟೆಮಿಯಾ	೧,೬೭,೫೫೧	೫,೮೮,೭೧೭
ಇಜಿಪ್ತ	೧೯,೧೩೬	೧೧,೬೧,೧೫೯
ಗ್ಯಾಲಿಪೋಲಿ	೬೦	೪,೪೨೮
ಸ್ಯಾಲೋನಿಕಾ	೬೬	೪,೯೩೮
ಏಡನ್	೭,೩೮೬	೨೦,೨೪೩
ಇರಾಣದ ಆಖಾತ	೯೬೮	೨೯,೪೫೭
	೨,೧೯,೫೩೪	೯,೫೩,೩೭೮

ಸಮರದಲ್ಲಿ ಮಡಿದವರ, ಗಾಯಹೊಂದಿದವರ, ಸೆರೆಸಿಕ್ಕಿದವರ, ಗೊತ್ತಿಲ್ಲದಂತೆ ಆದವರ ಸಂಖ್ಯೆ ಒಂದು ಲಕ್ಷಕ್ಕೆ ಮಿಕ್ಕಿತ್ತು.

ಸಾಹಸಿಗರೂ ಶೂರರೂ ಸರಿ !

ಹಿಂದೀ ಸೈನಿಕರು ಕೇವಲ ಸಂಖ್ಯೆಯಿಂದ ಹೆಚ್ಚಿದ್ದರೆಂತಲ್ಲ. ಕಲಿತನದಲ್ಲಿ ಸಾಹಸದಲ್ಲಿ ಅವರು ಯುರೋಪಿಯನರನ್ನು ಹಿಂದೆ ಹಾಕಿದ್ದರು. ' ತಾವು ಶ್ರೇಷ್ಠರು, ತಾವು ಉಚ್ಚರು, ತಮ್ಮಂತಹ ಜಾಣರಿಲ್ಲ, ಚತುರರಿಲ್ಲ ' ಎಂಬ ಹೆಮ್ಮೆಯಿಂದ ಉಬ್ಬಿದ ಯುರೋಪಿಯನರು, ಕಳೆದ ಮಹಾಯುದ್ಧಕ್ಕಿಂತ ಮೊದಲು, ಕಪ್ಪು ಜನರ ಸೈನ್ಯವನ್ನು ಕೆಂಪು ಜನಗಳಲ್ಲಿ ನಡೆದಿರುವ ಸಮರದಲ್ಲಿ ಉಪಯೋಗಿಸಬಾರದೆಂಬ ತಿಳಿವಳಿಕೆಯಿಂದ ಪ್ರೇರಿಸಲ್ಪಟ್ಟಿದ್ದರು. ಯುರೋಪದಲ್ಲಿ ಮೊದಲನೆಯ ತರಗತಿಯ ರಾಷ್ಟ್ರಗಳಾದ ಫ್ರಾನ್ಸ್ ಇಂಗ್ಲಂಡ್ ಒತ್ತಟ್ಟಿಗೆ ಹಾಗು ಜರ್ಮನ್ ಮತ್ತೊಂದು ಕಡೆಗೆ; ಹೀಗೆ ಬಣಗಳಾಗಿ, ಯುರೋಪಖಂಡದ ರಣರಂಗದಲ್ಲಿಯೆ ಭೀಕರ ಕಾಳಗ ನಡೆದಾಗ ಹಿಂದೀಯರಂತಹ ಕಪ್ಪು ಜನರ ಸೈನ್ಯದ ಸಹಾಯತಕ್ಕೊಂಡು ಕೆಂಪು ಜನರನ್ನು ಸೋಲಿಸುವ ಯತ್ನವಾದದ್ದು ಇದು ಮೊದಲನೆಯ ಉದಾಹರಣೆ ಎಂದು ಹೇಳಬಹುದು. ಇದಕ್ಕೂ ಮೊದಲು ಭಾರತೀಯ ಸೈನಿಕರು ಇಜಿಪ್ತ್, ಚೀನ್, ಸಾಯಪ್ರಸ್ ಮೊದಲಾದ ಸಮುದ್ರದ ಆಚೆಗಿರುವ ದೇಶಗಳಿಗೆ ಹೋಗಿ ಬ್ರಿಟಿಶರಿಗಾಗಿ ಹೋರಾಡಿದ್ದರು. ಆದರೆ ಯುರೋಪಿಯನ್ ಸೈನ್ಯದ ವಿರುದ್ಧ ಹೋರಾಡಿದ್ದಿಲ್ಲ. ಭಾರತೀಯರು ಫ್ರಾನ್ಸದ ಸಮರಭೂಮಿಯಲ್ಲಿ ಒಂದ ಸಂಕಟಗಳನ್ನೆಲ್ಲ ಎದುರಿಸಿ ಎಂದೂ ಅನುಭವಿಸದ ಚಳಿಯನ್ನು ಲೆಕ್ಕಿಸದೆ, ಹಿಮದಂತೆ ತಣ್ಣಗಿರುವ ನೀರಿನಿಂದ ತುಂಬಿದ ಕಂದಕಗಳಲ್ಲಿ (Trenches) ಜರ್ಮನ್‌ರಂತಹ ಕಡುಗಲಿಗಳ ಕೂಡ ಕಾದಿ ಶ್ರೇಯಸ್ಸನ್ನು ಸಂಪಾದಿಸಿದರು. ಚೀನದಲ್ಲಿ ಒಡಕನ್ನು ಹುಟ್ಟಿಸಿ, ಭೇದಭಾವದ ಬೀಜಗಳನ್ನು ಬಿತ್ತಿ ತಮ್ಮ ಜೋಳಿಯನ್ನು ಜೇಯಿಸಿಕೊಳ್ಳುವ ಯುರೋಪಿಯನ್ ಜನಾಂಗಗಳಲ್ಲಿ ಬ್ರಿಟಿಶರೊಬ್ಬರಿದ್ದರು. ೧೯೦೦ ರಲ್ಲಿ ಹಿಂದೀ ಸೈನಿಕರು ಚೀನದ ಸ್ವಾತಂತ್ರ್ಯಹರಣ ಮಾಡುವವರ ಸಹಾಯಕ್ಕೆ ಹೋಗಿದ್ದರು. ಆಗ ಜರ್ಮನ್ನರು ಹಿಂದೀ ಸೈನಿಕರಿಗೆ ' ಕೂಲಿ ' ಎಂದು ಕರೆದು ತುಚ್ಛೀಕಿಸಿದ್ದರು. ಆದೇ ಕೂಲಿ ಸೈನಿಕರು ಜರ್ಮನರನ್ನು ಫ್ರಾನ್ಸದಿಂದ ಹಿಮ್ಮೆಟ್ಟಿಸಿದ್ದರು. ಈಗ ಚೀನಿಯರ ಸ್ತೋತ್ರ ಮಾಡುವ ಬ್ರಿಟಿಶರಿಗೆ ಅವರ ಸತ್ವಹರಣದ ಕಾಲಕ್ಕೆ ಅವರ ಗುಣಗಳ ಅರಿವು ಇದ್ದಿಲ್ಲವೊ? ಅವರ ಹಿತಬಯಸುವ ಬುದ್ಧಿ ಆಗ ಮುಸಿಣಿಸಿತ್ತೊ? ಸತ್ತ ದನದ ಸುತ್ತಲೂ ಹದ್ದುಗಳು ನೆರೆಯುವಂತೆ ತಮ್ಮತಮ್ಮೊಳಗೆ ಬಡಿದಾಡುವ ಚೀನಿಯರಂತಹ ಸಂಪತ್ತುಳ್ಳ ಪುರಾತನ ಸಂಸ್ಕೃತಿಯ ರಾಷ್ಟ್ರೀಯರಿಗೆ " Dogs and Chinese are prohibited " ಎಂದು ಕಟ್ಟಿಗೆಯ ಫಲಕದ ಮೇಲೆ ಬರೆದು ಅವರನ್ನು ಗೌರವಿಸಿದ ಶ್ರೇಯಸ್ಸು ಈ

ಕೆಂಪು ಜನರಿಗಿದೆ. ಹೀಗೆ ಹೀಯಾಳಿಸಲ್ಪಟ್ಟ ಕಪ್ಪು ಜನಾಂಗಗಳಲ್ಲಿ ಒಬ್ಬರಾದ ಹಿಂದೀಯರು, ಜರ್ಮನರನ್ನು ಹಿಮ್ಮೆಟ್ಟಿಸಿದ ಕೀರ್ತಿಯನ್ನು ಪಡೆದರು. ಕಳೆದ ಮಹಾಯುದ್ಧದಲ್ಲಿ ಹಿಂದೀ ಸೈನ್ಯವು ಆಗಿನ ಕಾಲದ ಎಲ್ಲ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾಗಿತ್ತು. ಟ್ರೆಂಚ್ ಕಾಳೆಗದ ಹೊಸಪದ್ಧತಿಯಿಂದ ಅವರು ಬೆದರಲಿಲ್ಲ. ಯುರೋಪಿಯನರು ಅವರಿಗೆ ಕೊಟ್ಟ ಸಿಫಾರಸು ಪತ್ರಗಳಲ್ಲಿ ಮಾದರಿಗಾಗಿ ಒಂದೆರಡನ್ನು ಕೆಳಗೆ ಕೊಡುತ್ತೇನೆ.

ಹಿಂದೀ ಸೈನಿಕರು ಹಡಗುಗಳಿಂದ ಇಳಿದಾಗ **ರಾಯಟರ್**ನ ಸುದ್ದಿಗಾರನು ಹೀಗೆ ಬರೆದಿದ್ದಾನೆ:— "The whole city was seething with execitement while the troops disembarked.........It was a moving sight to see the Sikhs, Gurkhas, Panjabis, Baluchis & Princes with bijewelled turbans pass along through the dense masses of cheering spectators; every window, every balcony & roof thronged. As the troops proceeded, they were pelted with flowers while the people on the pavement pressed forward to grasp hands and pin flowers and Tricolours on their tunics."

ಸಾರಾಂಶ:— ಹಿಂದೀ ಸೈನಿಕರು ಹಡಗಗಳಿಂದಿಳಿಯುವಾಗ ಪಟ್ಟಣಿಗರೆಲ್ಲ ಉತ್ಸಾಹದಿಂದಲೂ ಆನಂದದಿಂದಲೂ ಪೂರಿತರಾಗಿದ್ದರು. ಹಿಂದೀ ಸೈನಿಕರನ್ನು ಉಲ್ಲಾಸದಿಂದ ಬರಮಾಡಿಕೊಳ್ಳುವ ನಾಗರಿಕರ ದಟ್ಟವಾದ ಗುಂಪುಗಳೊಳಗಿಂದ ಹೋಗುವ ಸೀಖ್, ಗುರ್ಖಾ, ಪಂಜಾಬಿ, ಹಾಗೂ ಬಲೂಚಿ ಸೈನಿಕರು ಮುತ್ತು ರತ್ನ, ಮಾಣಿಕ, ವೈಡೂರ್ಯಗಳಿಂದ ಥಳಥಳಿಸುವ ರುಮಾಲುಗಳನ್ನು ಧರಿಸಿದ ರಾಜಪುತ್ರರು ಹೋಗುತ್ತಿರುವ ನೋಟವು ಹೃದಯವನ್ನು ಹರ್ಷಗೊಳಿಸುವಂತಹದಿತ್ತೆಂದು ಬೇರೆ ಹೇಳಬೇಕೆ? ಎಲ್ಲ ಕಿಟಕಿ ಮೇಲುಪ್ಪರಿಗೆಗಳಲ್ಲಿಯೂ ಜನರು ಗುಂಪುಗುಂಪಾಗಿ ನೆರೆದಿದ್ದರು. ಸೈನಿಕರು ಮುಂದೆ ಸಾಗಿದಂತೆ ಅವರ ಮೇಲೆ ಪಟ್ಟಣಿಗರು ಹೂಗಳ ಮಳೆಗರೆದರು. ಹಾದಿಯ ಬದಿಗೆ ನಿಂತವರು ಪುಷ್ಪಗಳನ್ನರ್ಪಿಸಿದರು, ಪುಟ್ಟಪುಟ್ಟ ಪತಾಕೆಗಳನ್ನು ಕೊಟ್ಟರು. ಅದೇ ಸುದ್ದಿಗಾರನು ಹಿಂದೀ ಸೈನ್ಯದ ಸಿದ್ಧತೆಯ ಬಗ್ಗೆ ಹೀಗೆ ಬರೆದಿದ್ದಾನೆ:— "Underlying a purely friendly welcome was the intense admiration for Indians bearing efficiency and equipment. It was literally an Expeditionary force complete from mule batteries to the last pick and shovel."

'ಸೌಹಾರ್ದದ ಸ್ವಾಗತದ ಮರೆಗೆ ಭಾರತೀಯರ ಬಗೆಗೆ ಅವರ ಯೋಗ್ಯತೆಯ ಸಿದ್ಧತೆಯ ಬಗೆಗೆ ಅತೀವ ಆದರವಿತ್ತು. ಅದೊಂದು ತ್ವರೆಯಲ್ಲಿ ಸಿದ್ಧವಾದ ಪಡೆಯಾಗಿದ್ದರೂ ಹೇಸರುಗತ್ತೆಗಳ ತಂಡದಿಂದ—ಗುದ್ದಲಿ ಸಲಿಕೆಯ ವರೆಗೆ ಸಾಧನ ಸಾಹಿತ್ಯವಿತ್ತು. ಮಿತ್ರರಾಷ್ಟ್ರಗಳ ಸಕಲ ಸೈನ್ಯಗಳ ಅಧಿಪತಿಗಳಾದ ಫೀಲ್ಡ್ ಮಾರ್ಶಲ್ ಜನರಲ್‌ರಾದ ಫ್ರೆಂಚರ ಅಭಿಪ್ರಾಯ ಹೀಗಿದೆ:—

"The Indian troops had fought with utmost steadfastness and gallantry wherever they have been called upon." ಯಾವ ಸ್ಥಾನದಲ್ಲಿಯೂ ಭಾರತೀಯ ಸೈನವು ಅತ್ಯಂತ ಧೈರ್ಯ ಸ್ಥೈರ್ಯಗಳಿಂದ ಹೋರಾಡಿದೆ. **ಮಿಸ್ಟರ್ ಇ. ಆಶ್ಮೀಡ್ [illegible]** (Mr. E. Ashmede Bartllett) **ಟೆಲಿಗ್ರಾಫ್** ಎಂಬ ಪ್ರಸಿದ್ಧ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ:— The soldiers of India are perhaps the most highly trained in the world. They are nearly all long-service men who know their job thoroughly from A to Z. They are hardy, brave, and full of cheerfulness in the Field ...... some of their counter attacks have been models of dash and skill.

ಆಗಿನ ಕಾಲದ ಮುಖ್ಯ ಸಚಿವರಾದ **ಮಿಸ್ಟರ್ ಅಸ್ಕ್ವಿಥರು** (Asquith) ೧೯೧೫ರ ಮೇ ತಿಂಗಳಲ್ಲಿ ಗಿಲ್ಡ್‌ಹಾಲಿನಲ್ಲಿ ಮಾಡಿದ ಭಾಷಣದಲ್ಲಿ ಹೀಗೆ ಹೇಳಿದ್ದಾರೆ:— "Then again when we look to the actual achievements of the forces so spontaneously dispatched, so liberally provided, so magnificently equipped, the battlefields of France and Flanders bear undying tribute to their bravery and devotion."

ಸಮರಾಂಗಣದಲ್ಲಿ ಗಾಯಹೊಂದಿದ ಸೈನಿಕರ ಶುಶ್ರೂಷೆಯ ಪಥಕಗಳ (Ambulance corps) ಬಗ್ಗೆ ಮೆಸಪೊಟೆಮಿಯಾದಲ್ಲಿಯ ಸೇನಾಧಿಪತಿಗಳು ಹೀಗೆ ಬರೆದಿದ್ದಾರೆ:— "They (the members of the Bengal Ambulance corps) worked with the gratest gallantry under heavy shell fire" ಸಾರಾಂಶ—ಗುಂಡಿನ ಮಳೆ ಸುರಿಯುವಾಗ ಬಂಗಾಲದ ಶುಶ್ರೂಷಾ ಪಥಕದವರು ಅತಿ ಶೌರ್ಯದಿಂದ ಕೆಲಸಮಾಡಿದರು,

ಅಯೋಗ್ಯತೆಯ ಕಲಂಕ

ಮೇಲೆ ಕಾಣಿಸಿದ ಅಭಿಪ್ರಾಯಗಳಲ್ಲದೆ ಇನ್ನೂ ಅನೇಕ ಯುರೋಪಿಯನರ ಅಭಿಪ್ರಾಯಗಳನ್ನು ಕೊಡಬಹುದು. ಸ್ಥಳ ಸಂಕೋಚದಿಂದ ಹಾಗೆ ಮಾಡುವುದು ವಿಹಿತವಲ್ಲ. ಭಾರತೀಯರಿಗೆ ಯೋಗ್ಯತೆಯ ಬಗ್ಗೆ ಈ ಮಾದರಿಯ ಸಿಫಾರಸಿನ ಪತ್ರಗಳು ದೊರೆತರೂ ಪಕ್ಷಪ್ರಪಂಚದ ಪಾತಕವು ಬ್ರಿಟಿಶರ ಪದರಿನಲ್ಲಿ ಬೀಳುತ್ತಲೆ ನಡೆಯಿತು. ಮಹಾಯುದ್ಧ ಮುಗಿದ ಬಳಿಕ ಸಹ ಸೈನ್ಯಾಧಿಕಾರಿಗಳಿಗೆ ಬೇಕಾಗುವ ಶಿಕ್ಷಣ ಕೊಡುವ ಸಂಸ್ಥೆಗಳು ಹಿಂದುಸ್ಥಾನದಲ್ಲಿ ದೊರಡಲಿಲ್ಲ. ಇಂಗ್ಲಂಡಿನಲ್ಲಿಯ ಅಂತಹ ಸಂಸ್ಥೆಗಳಲ್ಲಿ, ಹಿಂದೀ ಯುವಕರಿಗೆ ಶಿಕ್ಷಣ ದೊರೆಯುವ ಅನುಕೂಲತೆಗಳು ಸಾಕಷ್ಟು ದೊರೆಯಲಿಲ್ಲ. ಕಾಂಗ್ರೆಸ್ಸು ಅರ್ಧ ಶತಮಾನದ ವರೆಗೆ 'ಈ ಅನ್ಯಾಯವನ್ನು ದೂರಮಾಡಿರಿ, ಇಲ್ಲದಿದ್ದರೆ ಇದರಿಂದ ನಿಮಗೆ ಕೇಡಾದೀತು' ಎಂದು ಹೇಳಿದರೂ ಆಳರಸರು ಅತ್ತ ಲಕ್ಷ್ಯಕೊಡಲಿಲ್ಲ. ಕಾಂಗ್ರೆಸಿನ ನಿರ್ಣಯಗಳನ್ನು

([illegible]ನೆಯ ಪುಟ ನೋಡಿರಿ)

★★★ ನರ್ತಕಿ ★★★

(ಒಂದು ಕಥೆ)

ಶ್ರೀ. ಎಮ್. ಆರ್. ಹೆಗಡೆ, ಕುಮಟಾ

★

ನೀಲಲೋಚನೆ ಮಾಡಬೇಕೆಂದುದೇನು, ಆದುದೇನು? ಯುವರಾಜನನ್ನು ಮನೆಗೆ ಬಾರದಂತೆ ಮಾಡಬೇಕೆಂದು ಆಡಿದ ಆಟ, ಯುವರಾಜ್ಞಿಯಾಗುವಂತೆ ಅನುಕೂಲತೆಯನ್ನು ಉಂಟುಮಾಡಿದುದು ಆಶ್ಚರ್ಯವಲ್ಲವೆ?

★

ದಿಲ್ಲಿಯಲ್ಲಿ ಇಂದು ಅಪೂರ್ವ ಸಂಭ್ರಮ. ಮೊಗಲ ಸಮ್ರಾಟ ಶಹಾಜಹಾನನು ಇಂದು, ತನ್ನ ಹಿರಿಯ ಮಗ ದಾರಾನನ್ನು ಯುವರಾಜನನ್ನಾಗಿ ಮಾಡಲಿದ್ದಾನೆ. ಎಲ್ಲರೂ ಆನಂದದಲ್ಲಿ ಮುಳುಗಿದ್ದಾರೆ. ತಮ್ಮ ತಮ್ಮ ಮನೆಯ ಮುಂದುಗಡೆಯನ್ನು ತಳಿರು-ತೋರಣಗಳಿಂದ ಸಿಂಗರಿಸಿದ್ದಾರೆ. ಯುವರಾಜನಾಗಲಿರುವ ದಾರಾನನ್ನು ಎದುರುಗೊಳ್ಳಲಿದ್ದಾರೆ, ಸ್ವಾಗತಿಸಲಿದ್ದಾರೆ.

ಸಾಮ್ರಾಜ್ಯದ ಎಲ್ಲ ಭಾಗಗಳಿಂದಲೂ ಎಲ್ಲ ತರದ ಜನರು ಬಂದು ಕೂಡಿದ್ದಾರೆ. ಎಲ್ಲಾ ಕಡೆಯಿಂದಲೂ ಒಂದುಗೂಡಿ ಬಿದ್ದಿರುವ ಸಂಪತ್ತು, ಇಂದು ಜನರಿಗೆ ಅತ್ಯಂತ ಪ್ರೀತಿಯವನಾದ ದಾರಾನನ್ನು ಸ್ವಾಗತಿಸುವುದಕ್ಕಾಗಿ ಕಾದು ಕುಳಿತಿದೆ. ಯುವರಾಜನ ಮೆರವಣಿಗೆಯನ್ನು ಕಾಣಲು, ಸ್ತ್ರೀಯರು ಸೌಧಾಗ್ರಗಳನ್ನೇರಿ ಕೈಯಲ್ಲಿ ಹೂಗಳನ್ನು ಹಿಡಿದು ನಿಂತಿದ್ದಾರೆ.

ದಾರಾನು ವಸ್ತ್ರಾಭರಣಗಳಿಂದ ಸಿಂಗರಿಸಿದ ಪಟ್ಟದಾನೆಯ ಮೇಲೆ, ರತ್ನಗಳನ್ನು ಕೆಚ್ಚಿದ ಬಂಗಾರದ ಅಂಬಾರಿಯಲ್ಲಿ ಕುಳಿತಿದ್ದನು. ದಾರಾನ ಆನೆಯ ಮುಂದೆ ಕೊರಳಲ್ಲಿ ಆಭರಣಗಳ ಸರಗಳನ್ನು ಹಾಕಿದ, ಜರಿಯ ತಡಿಯುಳ್ಳ, ಹಣೆಯಲ್ಲಿ ಬಂಗಾರದ ಅರಳೆಲೆ ಕಾಲಲ್ಲಿ ಬೆಳ್ಳಿಯ ಸರಪಳಿಗಳುಳ್ಳ ನೂರುಗಟ್ಟಲೆ ಆನೆ-ಕುದುರೆಗಳು ಸಾಲಾಗಿ ನಡೆದಿದ್ದುವು. ಇವುಗಳ ಮುಂದೆ ಸಶಸ್ತ್ರರಾದ ರಾವುತರು, ಸುಂದರವಾಗಿ ಅಲಂಕರಿಸಿಕೊಂಡು ಕುದುರೆಗಳನ್ನೇರಿ ನಡೆದಿದ್ದರು. ಅವುಗಳ ಮುಂದೆ ಕಾಲಾಳುಗಳು ನಡೆದಿದ್ದರು. ಮೆರವಣಿಗೆ ಅತಿ ವಿಜೃಂಭಣೆಯಿಂದ ಸಾಗಿತ್ತು.

ಮೆರವಣಿಗೆ ಮುಂದುವರಿದು ಬರುತ್ತಿತ್ತು. ದಾರಾ ಎಲ್ಲರಿಂದಲೂ ನಮಸ್ಕಾರಗಳನ್ನು ಕೊಳ್ಳುತ್ತ, ಎಲ್ಲರನ್ನೂ ಮುಗುಳು-ನಗೆಯಿಂದ ನೋಡುತ್ತ ಮುಂದುವರಿಯುತ್ತಲಿದ್ದ. ಅವನು ಹಾಗೆ ಆನಂದದ ಸಮಾಧಿಯೊಳಗೆ ಮುಳುಗಿರುವಾಗ, ಒಂದು ಹೂ ಬಂದು ಅವನ ಕಿರೀಟಕ್ಕೆ ತಾಗಿ ಅವನನ್ನು ಎಚ್ಚರುಗೊಳಿಸಿತು. ಅವನು ನೋಡಿದ; ತನಗೆ ಸಮೀಪವಾಗಿದ್ದ ಒಂದು ಚೆನ್ನಾಗಿ ಸಿಂಗರಿಸಿದ ಸೌಧದ ಮೇಲೆ ಒಬ್ಬ ಸ್ತ್ರೀಯು ನಿಂತು, ಎಲ್ಲರಂತೆ ಅವನೆಡೆಗೆ ಹೂವನ್ನೆಸೆದಿದ್ದಳು. ಅದರಲ್ಲಿ ಒಂದು ಹೂವು ದಾರಾನ ಕಿರೀಟಕ್ಕೆ ತಾಗಿತ್ತು. ದಾರಾ ನೋಡಿದ; ಅವಳ ಮೋಹಕರೂಪ, ನಗುಮೊಗ, ಆಕರ್ಷಕವಾದ ಕಣ್ಣು ಎಲ್ಲವನ್ನೂ ನೋಡಿದ; ಅವಳೂ ನೋಡಿದಳು. ಅವನು ಅವಳಲ್ಲಿಟ್ಟ ಕಣ್ಣು ಕಿತ್ತದಾದ; ಮೆರವಣಿಗೆ ಮುಂದೆ ಹೊರಟು ಹೋಯಿತು. ಆದರೆ ದಾರಾ ಮನಸ್ಸನ್ನು ಹಿಂದೆಯೇ ಬಿಟ್ಟು ಹೋದ.

* * *

ಅವಳು ದಿಲ್ಲೀನಗರದ ಅತಿಪ್ರಸಿದ್ಧ ನರ್ತಕಿ ನೀಲಲೋಚನಾ. ಯುವರಾಜನ ಅಂಬಾರಿ ಕಣ್ಣಿಗೆ ಕಾಣುವ ತನಕ ನೀಲಾ ಅಲ್ಲಿಯೆ ನಿಂತಿದ್ದಳು; ಕಡೆಗೆ ಒಳಗೆ ನಡೆದಳು. ದಿವಾಣಖಾನೆಗೆ ಬಂದಳು. ಸುತ್ತಲೂ ನೋಟಕರಿಗೂ ಗಿರಾಕಿಗಳಿಗೂ ಕುಳಿತುಕೊಳ್ಳುವುದಕ್ಕೆ ಮೆತ್ತನೆಯ ಹಾಸಿಗೆಗಳು ಸಿದ್ಧವಾಗಿದ್ದುವು. ಆತುಕೊಳ್ಳುವುದಕ್ಕೆ ದಿಂಬುಗಳನ್ನಿರಿಸಿದ್ದರು. ಸೇದುವುದಕ್ಕೆ ಅಣಿಗೊಳಿಸಿದ ಹುಕ್ಕಾಗಳಿಂದ ಸುಗಂಧ ವಾಸನೆ ಹೊರಡುತ್ತಿತ್ತು. ಅಲ್ಲಲ್ಲಿ ಪರಿಮಳದ ಎಣ್ಣೆಯ ದೀಪಗಳನ್ನು ಬೆಳಗಿಸಿದ್ದರು.

ಜಾಫರ್ ಅವಳ ಒಬ್ಬ ಗಿರಾಕಿ. ಅವಳು ಬಂದಾಗ ಜಾಫರ್ ಒಂದು ಹುಕ್ಕಾ ಸೇದುತ್ತ ಕುಳಿತಿದ್ದ. "ಯುವರಾಜರ ಮೆರವಣಿಗೆಯನ್ನು ನೋಡೋದಿಲ್ಲವೆ?" ಎಂದು ಕೇಳಿದಳು ನೀಲಾ. "ಇದೆಲ್ಲ ಮೆರವಣಿಗೆಯಿಂದ ನನಗೇನಾಗಬೇಕಾಗಿದೆ? ನಾನು ನಿತ್ಯವೂ ಅದನ್ನು ನೋಡುತ್ತಿಲ್ಲವೆ? ಇಂದೇನು ಹೆಚ್ಚಿಗೆ ಅವನಲ್ಲಿ?"

ಎಂದ ಜಾಫರ್.

"ಇರಲಿ! ಇಂದು ನೀನು ಕುಣಿಯೋದಿಲ್ಲವೆ? ದಿನದ ಹೊತ್ತಾಗಿ ಹೋಯ್ತು!" ಎಂದು ಅವನೇ ಕೇಳಿದ.

"ಇನ್ನೂ ವೇಳೆಗಳೆಯಲಿ, ನಿನಗೊಬ್ಬನಿಗಾಗಿ ಕುಣಿಯಲೆ? ಎಲ್ಲರೂ ಯುವರಾಜರ ಮೆರವಣಿಗೆ ನೋಡಲು ಹೋಗಿದ್ದಾರೆ. ಅವರೆಲ್ಲ ಬರಲಿ!"

"ನನಗೊಬ್ಬನಿಗಾಗಿ ಕುಣಿಯಲಾರೆಯಾ? ಎಲ್ಲರೂ ಸೇರಿ ಕೊಡುವಷ್ಟು ಹಣ ನಾನೊಬ್ಬನೆ ಕೊಟ್ಟರೂ ನನಗೊಬ್ಬನಿಗೋಸುಗ ಕುಣಿಯಲಾರೆಯಾ?"

"ಊ-ಹೂಂ!"

“ ನೀಲಾ, ನಿನ್ನ ರೀತಿಯೇ ವಿಲಕ್ಷಣ! ಎಲ್ಲರೂ ಹಣಕ್ಕಾಗಿ ಏನನ್ನೂ ಮಾಡಲಿಕ್ಕೆ ಸಿದ್ಧರಾಗುತ್ತಿರುವಾಗ ನೀನೇಕೆ ಈ ತೆರ? ಗಿರಾಕಿಗಳೆಲ್ಲ ನಿನ್ನಲ್ಲಿ ಪ್ರೇಮಯಾಚನೆಗಾಗಿ ಅನೇಕ ರೀತಿಯಿಂದ ಕಷ್ಟಪಡುತ್ತಾರೆ. ಏನನ್ನೂ ಕೊಡಲು ಸಿದ್ಧರಾಗಿದ್ದಾರೆ. ನೀನು ಸಿರಿಗಾಗಿ–ಸಂಪತ್ತಿಗಾಗಿ ಕುಣಿಯುತ್ತಿಲ್ಲವೆ? ನಾನು, ನನ್ನ ಹಣ, ನನ್ನಮನೆ ನನ್ನನ್ನು ಕೂಡ ನಿನಗಾಗಿ ಮೀಸಲಾಗಿ ಇರಿಸಿದ್ದೇನೆ. ಅದಕ್ಕಿಂತಲೂ ಹೆಚ್ಚಿಗೆ ನಿನಗೇನು ಬೇಕೋ ತಿಳಿಯದು. ನಾನಂತೂ ನಿರ್ಧಾರಮಾಡಿದ್ದೇನೆ; ನೀನು ನೀಡುವ ತನಕ ನಾನು ಬೇಡುವವನು! ”

ನೀಲಾ ಮಾತನಾಡಲಿಲ್ಲ. ಆತ ಹುಕ್ಕವನ್ನು ಕೆಳಕ್ಕಿಟ್ಟು ಅರೆಗಣ್ಣಿನಿಂದ ಅವಳನ್ನು ನೋಡುತ್ತಲಿದ್ದ. ಕೊನೆಗೆ ಜಾಫರ್ ಕೇಳಿದ: “ ನೀಲಾ, ನನ್ನಿಂದ ನಿನ್ನ ಗೌರವಕ್ಕೆ ಕುಂದುಬರುವುದೆಂದೆಣಿಸಿದೆಯಾ? ಅಂತಹ ಕುಂದಾದರೂ ನನ್ನಲ್ಲೇನಿದೆ? ನರ್ತಕಿಯ ಜೀವನಕ್ಕೆ ಕಾಲಿಟ್ಟೊಡನೆ ಮಾನಾಪಮಾನಗಳ ಪರಿವೆ ಮಾಡಬಾರದು ಎಂದೆನ್ನಿಸುತ್ತಿದೆ ನನಗೆ ”

“ ಎಲ್ಲಿಯವರೆಗೆ ನಾನು ನನ್ನ ಮನಸ್ಸಿಗೆ ಸಮಾಧಾನವಾಗುವಂತೆ ನಡೆಯುತ್ತಿದ್ದೇನೆಯೊ ಅಲ್ಲಿಯವರೆಗೆ ನನಗೆ ಯಾರ ಅಂಜಿಕೆಯೂ ಇಲ್ಲ. ಮಾನ–ಅಪಮಾನಗಳು ನನ್ನ ಮನಸ್ಸನ್ನು ಹೊಂದಿಕೊಂಡಿವೆ! ”

ಜಾಫರ್ ಒಂದು ನಂಜಿನ ನಗೆ ನಕ್ಕ.

ಮೆರವಣಿಗೆಯು ದೂರ ಹೋಗಿತ್ತು. ಮನೆಯ ಬಾಗಿಲಲ್ಲಿ ಗಿರಾಕಿಗಳು ಬರುವ ಸಪ್ಪಳು ಕೇಳಿಸಿತು. ನೀಲಾ ಬಾಗಿಲತನಕ ಬಂದು ಅವರನ್ನು ಕರೆತಂದು ಕುಳ್ಳಿರಿಸಿದಳು. ಹಿಮ್ಮೇಳದವರೂ ಬಂದರು. ನೀಲಲೋಚನಾ ಕುಣಿಯಲು ಪ್ರಾರಂಭಿಸಿದಳು. ಆದರೆ ಇಂದು ಕುಣಿಯಲು ಅವಳಿಗೆ ಉತ್ಸಾಹವಿಲ್ಲ; ಹೊಟ್ಟೆಯ ಪಾಡಿಗಾಗಿ, ಅವರು ಕೊಡುವ ದುಡ್ಡಿಗಾಗಿ ಕುಣಿಯುತ್ತಿದ್ದೇನೆಂದು ಎನ್ನಿಸತೊಡಗಿತ್ತು. ಹಿಮ್ಮೇಳದವರು ಬಾರಿಸುತ್ತಿದ್ದರು; ಅವಳು ಯಂತ್ರದಂತೆ ಕುಣಿಯುತ್ತಿದ್ದಳು. ಕಾಲುಗಳು ಅಭ್ಯಾಸದಿಂದ ಹೆಜ್ಜೆ ಇಡುತ್ತಿದ್ದುವು. ಮೈ, ಕೈಗಳೆಲ್ಲ ಅದಕ್ಕೆ ತಕ್ಕಂತೆ ಬಾಗುತ್ತಿದ್ದುವು. ಎರಡು ಮೂರು ಸಲ ತಾಳಕ್ಕೆ ಹೆಜ್ಜೆ ತಪ್ಪಿತು, ಅವಳಿಗೆ ಅದರ ಎಚ್ಚರವಿಲ್ಲ. ಹಿಮ್ಮೇಳದವರೆ ಅದನ್ನು ಸುಧಾರಿಸಿಕೊಂಡರು. ಗಿರಾಕಿಗಳಲ್ಲಿ ಅವಳ ಕುಣಿತದ ಕಡೆಗೆ ಲಕ್ಷ್ಯವಿಟ್ಟವರು ಕಡಿಮೆ. ಅವಳ ಲಾವಣ್ಯ ಸವಿಯುವುದರಲ್ಲಿಯೆ ಮಗ್ನರಾಗಿದ್ದರು. ಅವರಿಗೆ ಕುಣಿತದ ಪರಿವೆಯೆ? ಜಾಫರ್ ಮಾತ್ರ ಅದನ್ನು ತಿಳಿದವನಂತೆ ತೆಳ್ಳಗೆ ಮೀಸೆಯಲ್ಲಿಯೆ ಮುಸಿ ಮುಸಿ ನಗುತ್ತಲಿದ್ದ.

* * *

ರಾತ್ರಿ ಆರು ತಾಸಾಗಿದೆ. ಬಂದ ಗಿರಾಕಿಗಳೆಲ್ಲ ಹೊರಟು ಹೋಗಿದ್ದಾರೆ. ನೀಲಮ್ಮ ಹೋಗಿ ಮಲಗಿದ್ದಾಳೆ. ನಿದ್ದೆಯಿನ್ನೂ ಹತ್ತಿರಲಿಲ್ಲ. ದಾಸಿ ಬಾಗಿಲನ್ನು ಮುಚ್ಚಿ ದಿವಾಣಖಾನೆಯ ದೀಪಗಳನ್ನು ಒಂದೊಂದಾಗಿ ನಂದಿಸತೊಡಗಿದ್ದಾಳೆ. ಅಷ್ಟರಲ್ಲಿ ಯಾರೋ ಬಾಗಿಲನ್ನು ಬಡಿದಂತಾಯ್ತು. ದಾಸಿ ಬಾಗಿಲನ್ನು ತೆರೆದಳು.

ಬಾಗಿಲಲ್ಲಿ ರತ್ನಖಚಿತವಾದ ಆಭರಣಗಳಿಂದ ಕೂಡಿದ ಒಬ್ಬ ಯುವಕನು ನಿಂತಿದ್ದ. ಅವನನ್ನು ದಿವಾಣಖಾನೆಗೆ ಬರಮಾಡಿದಳು. ಒಡತಿಗೆ ಈ ಸುದ್ದಿಯನ್ನು ತಿಳುಹಿದಳು.

ನೀಲಾ ಗಡಬಡಿಸುತ್ತ ದಿವಾಣಖಾನೆಗೆ ಬಂದಳು. ಆ ಯುವಕನನ್ನು ನೋಡಿ ದಿಙ್ಮೂಢಳಾದಳು ಆಕೆ. ಇಬ್ಬರೂ ತುಸು ಹೊತ್ತು ಮಾತನಾಡಲಿಲ್ಲ. ಕಡೆಗೆ ನೀಲಲೋಚನೆಯೆ “ ಯುವರಾಜ, ” ಎಂದು ಅಂದಳು. ಬಗ್ಗಿ ಮೊಣಕಾಲೂರಿ ಕುರ್ನಿಸಾತ್ ಮಾಡಿದಳು.

“ ನಾನು ನಿನ್ನಲ್ಲಿಗೆ ಬರಲೇಬೇಕಿತ್ತು. ನಾನು ನನ್ನ ಮನಸ್ಸನ್ನು ಇಲ್ಲಿಯೇ ಬಿಟ್ಟುಹೋಗಿದ್ದೆ. ಆದರೆ ದರ್ಬಾರು ಮುಗಿದು, ಎಲ್ಲರ ಕಣ್ಣನ್ನು ತಪ್ಪಿಸಿ ಬರಲು ತಡವಾಗಿಹೋಯಿತು,” ಎಂದ ದಾರಾ ನಗುನಗುತ್ತ.

“ ನೀವು ಬಂದೇ ಬರುವಿರೆಂದು ನನಗೆ ಗೊತ್ತಿತ್ತು! ”

“ ಅದು ಹೇಗೆ? ”

“ ನನ್ನ ಮನಸ್ಸು ಹೇಳಿತು. ”

ದಾರಾ ಮೆತ್ತನೆಯ ಗಾದಿಯ ಮೇಲೆ ಕುಳಿತ. ನೀಲಲೋಚನೆ ಅವನ ಪಾದದೆಡೆಯಲ್ಲಿ ಕುಳಿತಳು.

ತುಸು ಹೊತ್ತು ಯಾರೂ ಮಾತನಾಡಲಿಲ್ಲ. ಅವನು ಇವಳನ್ನು ನೋಡುತ್ತಿದ್ದ; ಇವಳು ಅವನನ್ನು ನೋಡುತ್ತಿದ್ದಳು.

ದಾರಾ ಕೇಳಿದ: “ ನನಗಾಗಿ ಒಂದು ಹಾಡನ್ನು ಹೇಳುತ್ತೀಯಾ? ”

“ ಓಹೋ! ಅದಕ್ಕೇನಡ್ಡಿ? ಆದರೆ ಬಾರಿಸುವವರೆಲ್ಲ ನಿದ್ದೆ-ಹೋಗಿದ್ದಾರೆ. ನಾನು ಹೇಳುತ್ತೇನೆ ನೀವು ಕೇಳಬೇಕು. ”

ನೀಲಮ್ಮ ಹಾಡಿದಳು, ದಾರಾ ಕೇಳಿದ. ಇಬ್ಬರೂ ಸಂಗೀತ ಸುಧಾತರಂಗಿಣಿಯಲ್ಲಿ ಎಷ್ಟು ಹೊತ್ತು ಮುಳುಗಿದ್ದರೊ ಏನೊ.

* * *

ನೀಲಮ್ಮನ ಗಿರಾಕಿಗಳು ಈಗ ಅವಳಲ್ಲಿ ನಾವೀನ್ಯವನ್ನು ಕಾಣುತ್ತಿದ್ದಾರೆ. ಅವಳು ದಿನದಿನವೂ ಹೊಸ ಹೊಸ ಪರಿಯಿಂದ ಸಿಂಗರಿಸಿಕೊಳ್ಳುವಳು. ದಿನದಿನವೂ ಹೊಸ ಹೊಸ ನೃತ್ಯವನ್ನು ಮಾಡುವಳು. ಈಗ ಅವಳು ದುಡ್ಡಿಗಾಗಿ ಕುಣಿಯುತ್ತಿಲ್ಲ— ಎಂದು ಎನ್ನಿಸತೊಡಗಿದೆ. ಅವಳ ಉತ್ಸಾಹ ಬುಗ್ಗೆಯಾಗಿ ಪುಟಿದು, ಝರಿಯಾಗಿ ಹರಿದು, ಮನಸ್ಸಿಗೆ ಅಮಿತವಾದ ಆನಂದವನ್ನು ಕೊಡುತ್ತಿದೆ. ಅವಳ ಮೈಯಲ್ಲಿ ಹೊಸದೊಂದು ಶಕ್ತಿ

ಸಂಚಾರವಾದಂತಿದೆ. ಅವಳಿಗೆ ಆಯಾಸವೇ ಆಗುತ್ತಿಲ್ಲವೆಂದು ಎನ್ನಿಸತೊಡಗಿದೆ ಗಿರಾಕಿಗಳಿಗೆ. ಆದರೆ ಜಾಫರ್ ಇದನ್ನೆಲ್ಲ ಕಂಡು ತೆಳ್ಳಗೆ ನಗುತ್ತಿದ್ದ. ಅವನು ಅವಳ ನಡತೆಯ ಅರ್ಥವನ್ನೇ ವಿಪರ್ಯಾಸವಾಗಿ ಮಾಡುತ್ತಿದ್ದ. ಅವನು ಅವಳನ್ನು ನೋಡುತ್ತಿದ್ದ ಕಣ್ಣೇ ಬೇರೆ.

ರಾತ್ರಿ ಆರು **ತಾಸಾದ ಮೇಲೆ** ಯುವರಾಜ ಬರುತ್ತಲಿದ್ದ. ಅವಳು ಅವನಿಗಾಗಿ ಹಾಡುವಳು, ಕುಣಿಯುವಳು. ಅವಳು ಆಗ ಗಿರಾಕಿಗಳ ಮುಂದೆ ಕುಣಿದಂತೆ ಕುಣಿಯುತ್ತಲಿರಲಿಲ್ಲ. ಆ ರೀತಿಯೇ ಬೇರೆ. ಆಗ **ಅವರ** ಮನಸ್ಸಂತುಷ್ಟಿಗಾಗಿ; ಈಗ **ತನ್ನ** ಮನಸ್ಸಮಾಧಾನಕ್ಕಾಗಿ. ಆಗ ಅವಳು ಕುಣಿದದ್ದನ್ನು ಕಂಡು ಆನಂದಪಟ್ಟು ಜನರು ಅದರ ಬೆಲೆ ಕೊಡುತ್ತಿದ್ದರು. ಈಗ ತಾನು ಆನಂದಪಟ್ಟುಕೊಂಡು ಅದನ್ನು ಅವನಿಗೆ ಅರ್ಪಿಸಿ, ಅವನು ಆ ಆನಂದವನ್ನು ಅನುಭವಿಸುವುದನ್ನು ಕಾಣುವುದೇ ಅದರ ಕ್ರಯ—ಆ ಕುಣಿತದ ಬೆಲೆ. ಆಗ ಕುಣಿದರೆ ಆಯಾಸವಾಗುತ್ತಿತ್ತು, ಈಗ ಎಷ್ಟು ಕುಣಿದರೂ ತೃಪ್ತಿಯಿಲ್ಲ; ಆಯಾಸವಿಲ್ಲ. ಆಗ ಹಿಮ್ಮೇಳದವರಿದ್ದರೂ ಹೆಜ್ಜೆ ತಪ್ಪುತ್ತಿತ್ತು. ಈಗ ಪ್ರತಿಬಂಧವಿಲ್ಲದಿದ್ದರೂ ತಪ್ಪುವಂತಿಲ್ಲ.

ಈ ಸುಖವನ್ನು ಅನುಭವಿಸಲು ಕಳ್ಳತನದಿಂದ ಇನ್ನೊಂದು ವ್ಯಕ್ತಿ ಅಲ್ಲಿಗೆ ಬರುತ್ತಿತ್ತು, ನೋಡಿ ನಗುತ್ತಿತ್ತು.

* * *

"ನೀಲಾ, ದಿನದಿನವೂ ನಾನು ಇನ್ನು ಮುಂದೆ ಬರಲಾರೆ?"

"ಅದೇಕೆ, ಯುವರಾಜ?"

"ನಾನು ಬಂದರೆ ನನಗೂ ನಿನಗೂ ಕೂಡಿಯೆ ಗಂಡಾಂತರ ಒದಗದೆ ಬಿಡದು!"

"ಗಂಡಾಂತರ! ಅದೇನು?"

"ರಾಜರಿಗೆ ವೈರಿಗಳು ಹೆಚ್ಚು ನೀಲಾ! ತಂದೆಗೆ ಮಕ್ಕಳು ವೈರಿ; ಅಣ್ಣನಿಗೆ ತಮ್ಮ ವೈರಿ. ಎಲ್ಲರೂ ಸಮಯ ಸಾಧಿಸುತ್ತ ಕುಳಿತಿರುತ್ತಾರೆ. ನನ್ನನ್ನು ಕಾದುಕೊಂಡು ಒಂದು ಗುಪ್ತಚಾರರ ಪಡೆಯೇ ಇದೆ. ಬಾದಶಹನ ನಂಬುಗೆಯ ಗುಪ್ತಚಾರನೊಬ್ಬ, ನಾನು ನಿಮ್ಮ ಮನೆಗೆ ಬರುವುದನ್ನು ವಿಪರೀತವಾಗಿ ಹೇಳಿ ನಂಬಿಸಿದ್ದಾನೆ ಅವರನ್ನು!"

"ಏನು ಹೇಳಿದ್ದಾನಂತೆ ಆತ?"

"ನಾನು ದಿನದಿನವೂ ಸೂಳೆಯ ಮನೆಗೆ ಹೋಗುತ್ತೇನಂತೆ. ಅವಳ ನಡತೆ ಮೊಗಲ ಸಾಮ್ರಾಜ್ಯದ ಯುವರಾಜನಿಗೆ ಕುಂದಕವನ್ನು ತರುವಂತಿರುವುದಂತೆ. ಇಂದು ಬಾದಶಹರೇ ನನ್ನನ್ನು ಕರೆದು ಕೇಳಿದರು."

ನೀಲಲೋಚನೆ ಮಾತನಾಡಲಿಲ್ಲ. ಯುವರಾಜನನ್ನು ಬಳಸಿಕೊಂಡಿದ್ದ ಮೈ ನಿಮಿರಿಕೊಂಡು ಕುಳಿತಿತು. ಅವಳ ಕಣ್ಣಲ್ಲಿ ನೀರು ತುಂಬಿತ್ತು; ಅಪಮಾನ ರೋಷ ತುಂಬಿದಂತಿತ್ತು.

ಯುವರಾಜನೇ ಹೇಳಿದ: "ಮತ್ತೂ ಏನೇನೊ ಕಿವಿ ತುಂಬಿಸಿದ್ದಾನೆ. ನಾನು ಔರಂಗಜೇಬನನ್ನು ಕೂಡಿಕೊಂಡು ಬಾದಶಹನ ವಿರುದ್ಧ ಬಂಡಾಯ ಹೂಡಲು ತಯಾರಿ ಮಾಡುತ್ತಿದ್ದೇನಂತೆ. ನಾನು ಎಂದೂ ಸಿಂಹಾಸನಕ್ಕೆ ವಿರೋಧಿಯಾಗಲಿಕ್ಕಿಲ್ಲವೆಂದು ಬಾದಶಹರಿಗೆ ತುಂಬಾ ಮನವರಿಕೆಯಾಗಿದೆ; ಆದರೆ ಗುಪ್ತಚಾರರು ಅದಕ್ಕೆ ವಿರೋಧಕವಾದ ಆಧಾರಗಳನ್ನು ತೋರಿಸತೊಡಗಿದ್ದಾರಂತೆ."

"ಏನು, ಸಮ್ರಾಟರು ಗುಪ್ತಚಾರರ ಮಾತಿನಲ್ಲಿ ನಂಬುಗೆ ಇಡುವರೇ ಅಷ್ಟು? ತನ್ನ ಹೊಟ್ಟೆಯ ಮಕ್ಕಳಲ್ಲಿಲ್ಲದ ನಂಬುಗೆ ಗುಪ್ತಚಾರರಲ್ಲಿದೆಯೆ?"

"ನೀಲಾ, ಇದರಲ್ಲಿ ಅವರದೇನೂ ತಪ್ಪಿಲ್ಲ. ಅವರ ಪ್ರೀತಿಯ ಮಗ ಔರಂಗಜೇಬ್ ಅವರಿಗೆ ಸಂಪೂರ್ಣ ವಿರೋಧಿಯಾಗುವನೆಂದು ಯಾರಾದರೂ ಊಹಿಸಿದ್ದರೆ? ಇರಲಿ ನೀಲಾ, ನೀನು ಈಗ ಒಂದು ಕೆಲಸಮಾಡಬೇಕು: ನಾನು ದಿನಾಲು ಇಲ್ಲಿಗೆ ಬರುವುದಕ್ಕಿಂತ ನೀನೇ ಅಲ್ಲಿಗೆ— ಅರಮನೆಗೆ— ಬಂದು ಬಿಡುವುದು ಒಳ್ಳೆಯದಲ್ಲವೇ? ನನ್ನ ಅಂತಃಪುರದಲ್ಲಿಯೆ ಇರುವೆಯಂತೆ. ಅಲ್ಲಿ ಸಕಲ ಭೋಗಗಳನ್ನೂ ನಿನಗಾಗಿ ವಿಾಸಲಾಗಿರಿಸುತ್ತೇನೆ!"

ಇಷ್ಟು ಹೊತ್ತಿನ ತನಕ ಗಂಭೀರವಾಗಿ ಕುಳಿತಿದ್ದ ನೀಲಲೋಚನೆ ಈಗ ನಕ್ಕು ಬಿಟ್ಟಳು. ನಕ್ಕು ಹೇಳಿದಳು— "ಅಲ್ಲಿಗೆ ಏತಕ್ಕೆ ಬರಲಿ? ಅಂತಃಪುರದಲ್ಲಿಯ ಸ್ತ್ರೀಯರ ಸಂಖ್ಯೆಯನ್ನು ಹೆಚ್ಚಿಸಲಿಕ್ಕೆ?"

"ನಗಬೇಡ ನೀಲಾ, ನಿನ್ನನ್ನು ಪಟ್ಟದ ರಾಣಿಯನ್ನಾಗಿ ಮಾಡಬೇಕೆಂದಿದೆ. ಆದರೆ.... ಆದರೆ. ಹೋಗಲಿ, ಪಟ್ಟದ ರಾಣಿಯಾಗದೆ ಹೋದರೆ ನನ್ನ ಹೃದಯದ ರಾಣಿಯಾಗುವೆಯಂತೆ! ರಾಜ್ಯವನ್ನು ಆಳಲಾಗದಿದ್ದರೆ, ರಾಜ್ಯವಾಳುವ ನನ್ನನ್ನು ಆಳಬಹುದಂತೆ!"

"ಅದೇಕೆ? ಅದೇಕೆ ಯುವರಾಜ, ನಾನು ಪಟ್ಟದ ರಾಣಿ ಆಗಲಾರೆನೆ?"

"ಎಲ್ಲಾ ಆಗಬಹುದು, ಆದರೆ ಎರಡು ಕಟ್ಟಳೆಗಳಿವೆ. ಮೊದಲನೆಯದಾಗಿ ನೀನು ಇಸ್ಲಾಂ ಧರ್ಮ ಸ್ವೀಕರಿಸಬೇಕು!'

"ನಾನೇ ನಿಮ್ಮವಳಾಗಿರುವಾಗ ಅದಕ್ಕೆ ಧರ್ಮದ ತಡೆಯೆ?"

"ನೀನು ನಮ್ಮ ಧರ್ಮ ಸ್ವೀಕರಿಸಬಹುದು, ಆದರೆ ನೀನು ಅಮೀರ ಉಮರಾವರ ಮನೆತನದವಳೆಂದು ಬಾದಶಹ ಒಪ್ಪಬೇಕು. ಅದು ಅಸಾಧ್ಯವಲ್ಲವೆ?

"ನಾನಿಲ್ಲಿ ಸೌಖ್ಯವಾಗಿದ್ದೇನೆ; ಅಲ್ಲಿಗೆ ಬಂದು ಪಂಜರದೊಳಗಿನ ಪಕ್ಷಿಯಾಗಲಾರೆ!" ನೀಲಾ ಧೈರ್ಯವಾಗಿ ಹೇಳಿದಳು.

"ಹಾಗಾದರೆ ನಾನೊಬ್ಬನೇ ಅರಮನೆಯಲ್ಲಿರಲೆ?" ಅವನು ದೈನ್ಯಾಶೆಪಟ್ಟು ಕೇಳಿದ.

ಅವಳಿಗೆ ಮಾತನಾಡಲಾಗಲಿಲ್ಲ. ಗಂಟಲು ತುಂಬಿ ಬಂತು. ಕಣ್ಣಿಂದ ನೀರು ಸುರಿಯಿತು. ದಾರಾ ಅವಳನ್ನು ತಬ್ಬಿಕೊಂಡ.

" ಯುವರಾಜ ! "

" ಆಂ ! "

" ನನ್ನದೊಂದು ಮಾತನ್ನು ನಡೆಯಿಸುತ್ತೀರಾ ? "

" ಏನದು ನೀಲಾ ? "

" ನೀವು ಇನ್ನು ಮುಂದೆ ಇಲ್ಲಿಗೆ ಬರಲಾಗದು. ಗುಪ್ತಚಾರರ ಉಪಟಳದಿಂದ ನಿಮ್ಮನ್ನು ಕಾಯ್ದುಕೊಳ್ಳಬೇಕು ನೀವು. ಸಾರ್ವಭೌಮರಿಗೆ ಸ್ವಲ್ಪವೂ ಸಂಶಯ ಬಾರದಂತೆ ಇರಬೇಕು. ನೀವು ಚೆನ್ನಾಗಿದ್ದರೆ ಸಾಕು. ಎಲ್ಲಿದ್ದರೆ ಏನು ? ಮುಖ್ಯ ನನ್ನ ಹಣೆಯ ಬರೆಹ ಚೆನ್ನಾಗಿಲ್ಲ, ಎಂದುಕೊಳ್ಳುತ್ತೇನೆ, ಅಷ್ಟೇ ! "

" ನೀಲಾ ! "

" ಇದಕ್ಕೆ ಇದಿರಾಡಿದರೆ ನನ್ನ ಕೊರಳಾಣೆ! ನನ್ನ ನಿಮ್ಮ ಪ್ರೇಮದಾಣೆ! ಇಷ್ಟು ದಿನ ಕಳೆದಂತೆ ಇನ್ನುಮುಂದೆಯೂ ನಿಮ್ಮನ್ನು ಮನಸ್ಸಿನಲ್ಲಿಯೇ ನೆನೆಯುತ್ತ ಕಳೆಯುತ್ತೇನೆ. " ಅವಳಿಗೆ ಮುಂದೆ ಮಾತನಾಡಲಾಗಲಿಲ್ಲ ; ಅವನೂ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ.

ಕೊನೆಗೆ ಅವಳೇ ಕೇಳಿದಳು : " ನಿಮ್ಮ ವಿರುದ್ಧವಾಗಿ ಬಾದಶಹರಲ್ಲಿ ವಿಷವನ್ನು ತುಂಬಿಸಲು ಯತ್ನಿಸಿದವರು ಯಾರೆಂದು ಗೊತ್ತಿದೆಯೇ ತಮಗೆ ? "

" ಅಹುದು; ನಿಮ್ಮ ಮನೆಗೆ ನಿತ್ಯಬರುವ್ವಆ ಜಾಫರ್ ! "

" ಜಾಫರ್ ? " ಅವಳಿಗೆ ಆಶ್ಚರ್ಯ ಕೋಪ ಏಕಕಾಲದಲ್ಲಿ ಉಂಟಾದುವು. ಅವಳಿಗೆ ಎಲ್ಲವೂ ತಿಳಿಯಿತು.

* * *

ನೀಲಲೋಚನೆ ಮುಗುಳುನಗೆ ನಗುತ್ತ ತನ್ನ ಗಿರಾಕಿಗಳನ್ನೆಲ್ಲ ಬರಮಾಡಿದಳು. ಜಾಫರನೂ ಎಂದಿನಂತೆ ಬಂದು ಕುಳಿತ.

ಜಾಫರನ ಮುಖದ ಮೇಲಿನ ಬದಲಾವಣೆಗಳನ್ನು ಅವಳು ದಿನದಿನವೂ ಬಿಟ್ಟೂಬಿಡದೆ ನೋಡುತ್ತಲಿದ್ದಳು. ಆದರೆ ಅದರ ಕಡೆಗೆ ಹೆಚ್ಚಾಗಿ ಲಕ್ಷ್ಯವಿದ್ದಿಲ್ಲ. ಅವನು ಅಷ್ಟು ಕ್ರೂರನೂ ಸ್ವಾರ್ಥಿಯೂ ಆಗಿರಬಹುದೆಂದು ಆಕೆ ಎಣಿಸಿರಲಿಲ್ಲ. ಈಗ ಎಲ್ಲವೂ ನಿಚ್ಚಳವಾಗಿ ಕಾಣತೊಡಗಿತು. ಸಮ್ರಾಟನಿಗೆ ಚಾಡಿಯ ಮಾತುಗಳನ್ನು ಹೇಳಿ ಸ್ವಾರ್ಥಸಾಧಿಸಿಕೊಳ್ಳುವವನೆಂದು ಅವಳು ತಿಳಿದಿರಲಿಲ್ಲ. ಅವನನ್ನು ಹೇಗೆ ಸುಧಾರಿಸಿಕೊಳ್ಳಬೇಕೆಂಬುದು ಆಕೆಗೆ ತಿಳಿಯದಾಯಿತು. ಅವನನ್ನು ಏಕಾಂತದಲ್ಲಿ ಕರೆದೊಯ್ದು ನಾಲ್ಕು ಮಾತುಗಳನ್ನು ಬೋಧಿಸಬೇಕೆಂಬ ವಿಚಾರಬಂದಿತು. ಆದರೆ— ತನ್ನ ಮಾತುಗಳಿಗೆಲ್ಲ " ಹೂಂ " ಎಂದು, ಅವಕ್ಕೆಲ್ಲ ಸುಳ್ಳುಸಟ್ಟೆ ಸೇರಿಸಿ ಬಾದಶಹರ ಎದುರಿಗೆ ಹೇಳಿದರೆ ? ಮುಂದೇನು ಮಾಡುವುದು ? ಯುವರಾಜನಂತೂ ಪುನಃ ಪುನಃ ಇಲ್ಲಿಗೆ ಬಾರದಿರಲಿಕ್ಕಿಲ್ಲ. ಹಾಗಾದರೆ ಅವನ ಜೀವಕ್ಕೆ ತುಂಬಾ ಗಂಡಾಂತರವಿದೆ. ಅವನನ್ನು ಇಲ್ಲಿಗೆ ಬಾರದಂತೆ ತಡೆಯುವುದಾದರೂ ಹೇಗೆ ?— ಅವಳಿಗೆ ಥಳಕ್ಕನೆ ಒಂದು ವಿಚಾರ ಹೊಳೆಯಿತು. ಆಷ್ಟೊತ್ತಿಗೆ ಹಿಮ್ಮೇಳದವರು ಬಾರಿಸಲು ಪ್ರಾರಂಭಿಸಿದ್ದರು. ಅವಳು ಜಾಫರನಕಡೆಗೊಮ್ಮೆ ನೋಡಿ ನಕ್ಕಳು.

ಆ ದಿನ ರಾತ್ರಿ ಗಿರಾಕಿಗಳು ಮನೆಗೆ ಹೋಗುವಾಗ ೬–೭ ತಾಸು ರಾತ್ರಿಯಾಗಿರಬಹುದು. ಒಬ್ಬೊಬ್ಬರಾಗಿ ಹೊರಟುಹೋದರು. ಜಾಫರ್ ಒಬ್ಬನೇ ಕುಳಿತು ಸಣ್ಣಗೆ ನಗುತ್ತ ಹುಕ್ಕಾ ಸೇದುತ್ತಲಿದ್ದ.

ನೀಲಾ ಹೊರಗಿನ ಕಟಾಂಜನದ ಹತ್ತಿರ ಹೋಗಿ, ಶೂನ್ಯ-ದೃಷ್ಟಿಯಿಂದ ಆಕಾಶವನ್ನು ನೋಡುತ್ತ ನಿಂತಳು.

" ನೀಲಾ, ಇಂದಿನ ನೃತ್ಯವೇನೋ ಅತ್ಯಂತ ಸುಂದರವಾಗಿತ್ತು. ಆದರೆ ಕುಣಿಯುವಾಗ ಬಹಳ ಉದ್ವೇಗದಿಂದ ತುಂಬಿದ್ದೇಕೆ ? " ಜಾಫರ್ ಕೇಳಿದ— ಅವಳ ಹತ್ತಿರಕ್ಕೆಹೋಗಿ.

ಅವಳು ಮೆಲ್ಲನೆ ನಕ್ಕು ಜಾಫರನ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು " ಜಾಫರ್, ನೀನು ಒಂದು ದಿವಸ ಹೇಳಿದ್ದೆಯಷ್ಟೇ : ' ನೀನು ನೀಡುವತನಕ ನಾನು ಬೇಡುವುದು ' ಎಂದು ? ಇಂದು ನಾನೇ ನಿನ್ನಲ್ಲಿ ಬೇಡಬೇಕೆಂದಿದ್ದೇನೆ ಆ ಭಿಕ್ಷೆಯನ್ನು " ಎಂದಳು.

ಒಳಗೆ ದಿವಾಣಖಾನೆಯಲ್ಲಿ ದಾಸಿ ಮಾತನಾಡುತ್ತಿದ್ದ ಸಪ್ಪಳು ಕೇಳಬಂತು. ಅವಳಿಗೆ ಯುವರಾಜ ಬಂದುದು ಗೊತ್ತಾಯ್ತು. ಎದೆ ಡವಡವ ಎಂದು ಹೊಡೆದುಕೊಳ್ಳತೊಡಗಿತು. ಜಾಫರನಿಗೆ ಏನೂ ಕೇಳಿಸುವಂತಿರಲಿಲ್ಲ. ಅವನ ಸಂಪೂರ್ಣ ಲಕ್ಷ್ಯ ನೀಲೆಯ ಕಡೆಗಿತ್ತು. ಅವನು ಅವಳ ಸಲುಗೆಯನ್ನು ವಿಪರೀತವಾಗಿ ಕಲ್ಪಿಸಿಕೊಂಡು, ಅವಳನ್ನು ತನ್ನ ಬಾಹುಪಾಶದಲ್ಲಿ ಬಿಗಿದ. ನೀಲಾ ಬಾಗಿಲಲ್ಲಿ ಯುವರಾಜ ಬಂದುನಿಂತುದನ್ನು ಕಂಡಳು. ಜಾಫರನಿಗೆ ಕಾಣದ ಹಾಗೆ ಅವನ ಕುತ್ತಿಗೆಯ ಸುತ್ತ ತನ್ನ ಕೈಬಿಗಿದು ಹಿಡಿದಳು.

ಯುವರಾಜ ೧೦–೧೫ ನಿಮಿಷ ಅವರನ್ನು ನೆಟ್ಟದೃಷ್ಟಿಯಿಂದ ನೋಡುತ್ತ ನಿಂತ. ಏನನ್ನೂ ಮಾತನಾಡಲಿಲ್ಲ, ಹಿಂದಿರುಗಿದ.

ನೀಲಲೋಚನೆ ಒಂದು ನಿಟ್ಟುಸಿರನ್ನು ಬಿಟ್ಟಳು. ಜಾಫರನಿಂದ ತನ್ನನ್ನು ಬಿಡಿಸಿಕೊಂಡಳು. ಅವನು ತಿರುಗಿ ಅವಳನ್ನಪ್ಪಿ-ಕೊಳ್ಳಲು ಹೋದ. ನೀಲಾ ಅವನನ್ನು ನಿವಾರಿಸಿಕೊಳ್ಳಲು ಹಿಂದಕ್ಕೆ ನೂಕಿದಳು. ಜಾಫರನ ಜೋಲಿತಪ್ಪಿತು; ಕೆಳಕ್ಕೆ ಬಿದ್ದ. ನೀಲಮ್ಮ ಬೆಚ್ಚಿದಳು. ದೊಪ್ಪೆಂದು ಸಪ್ಪಳು ಕೇಳಿಸಿತು. ಕೆಳಕ್ಕೆ ಬಗ್ಗಿ ನೋಡಿದಳು. ಕೈಕಾಲು ನಡುಗಿತು. ಕಣ್ಣಿಗೆ ಬವಳಿ ಬಂತು. ತಾನೂ ಬೀಳುವಂತಾದಳು. ಸಾವರಿಸಿಕೊಂಡು ಒಳಕ್ಕೆ ನಡೆದಳು.

ಮರುದಿನ ಗಿರಾಕಿಗಳು ಬಂದಾಗ ದಾಸಿ, ತನ್ನ ಒಡತಿಯ ಮೈಯಲ್ಲಿ ನೆಟ್ಟಗಿಲ್ಲವೆಂದು ಹೇಳಿಬಿಟ್ಟಳು. ಕೆಲವರು

‘ಅರೆರೇ!’ ಎಂದುಕೊಂಡು ನಡೆದರು. ಮತ್ತೆ ಕೆಲವರು ‘ಏನು ಜಡ್ಡಾಗಿದೆ’ ಎಂದು ನೋಡುವ ಸಾಹಸಮಾಡಿದರು. ಆದರೆ ಯಾರಿಗೂ ಅವಳು ಭೆಟ್ಟಿಯಾಗಲಿಲ್ಲ. ಕೆಲವರು ಹಕೀಮರನ್ನು ಕರೆತರುವ ಪ್ರಯತ್ನ ಮಾಡಿದರು. ಆದರೆ ಯಾರಿಗೂ ಯಾವ ತರದಿಂದಲೂ ಒಳಗೆ ಪ್ರವೇಶ ಸಿಕ್ಕಲಿಲ್ಲ.

ನಾಲ್ಕನೆಯ ದಿನ ಯುವರಾಜನ ಮೆರೆವಣಿಗೆ ಹೊರಟಿತು. ವಿಜೃಂಭಣೆ ಮೊದಲಿನಂತೆಯೆ ಇತ್ತು.

ಮೆರೆವಣಿಗೆ ಅರಮನೆಯಿಂದ ನೆಟ್ಟಗೆ ನೀಲಲೋಚನೆ ಇದ್ದ ಬೀದಿಗೆ ಬಂತು. ಇಂದು ಆಕೆಯ ಮನೆಯ ಮುಂದಿನ ಕಟಾಂಜನ ಮೊದಲಿನಂತೆ ಸಿಂಗಾರವಾಗಿರಲಿಲ್ಲ; ಆದರೆ ಮೊದಲು ನಿಂತಲ್ಲಿಯೆ ಆಕೆ ನಿಂತಿದ್ದಳು. ಇಂದು ಅವಳು ಮೊದಲಿನ ನೀಲಲೋಚನೆಯಾಗಿರಲಿಲ್ಲ. ಹಾಗೆ ಕಾಣುತ್ತಲೂ ಇರಲಿಲ್ಲ. ಕಣ್ಣುಗಳು ಒಳಸೇರಿ ಹೋಗಿವೆ. ಕೂದಲು ಬಿಚ್ಚಿ ಬೀರಿವೆ. ಇದೀಗಲೆ ಹಾಸಿಗೆಯಿಂದ ಎದ್ದು ಬಂದಂತಿದೆ.

ಯುವರಾಜ ದಾರಾನ ಆನೆ ಕಟಾಂಜನದ ಹತ್ತಿರಕ್ಕೇ ಬಂದು ನಿಂತಿತು. ಎಲ್ಲರೂ ನೋಡುತ್ತಿದ್ದ ಹಾಗೆ ದಾರಾ ಕೈ ಮುಂದೆ ಮಾಡಿದ; ಅವಳ ದೇಹ ಬಾಗಿತು. ಸಾವಕಾಶವಾಗಿ ಆಕೆಯನ್ನೆತ್ತಿ ಆನೆಯ ಮೇಲೆ ಕುಳ್ಳಿರಿಸಿಕೊಂಡ. ಜನರು ಜಯಘೋಷಮಾಡಿದರು, ನೀಲಲೋಚನೆಗೆ ಏನೂ ತಿಳಿಯಲಿಲ್ಲ.

ನೀಲಾ ಆನಂದಾಶ್ರುಗಳನ್ನುದುರಿಸುತ್ತ ಕೇಳಿದಳು: “ಯುವರಾಜ, ಇದೇನು?”

“ನೀಲಾ, ನೀನೀಗ ನನ್ನ ಪಟ್ಟದ ರಾಣಿ! ನಾನು ನಿನ್ನನ್ನು ಅರಮನೆಗೊಯ್ಯುವೆ, ಅಲ್ಲಿ ಬಾದಶಹರು ಕಾದಿದ್ದಾರೆ!” ಎಂದ.

“ಕೊಲೆಗಾರ್ತಿಗೆ ಈ ಶಿಕ್ಷೆಯೇ ನಿಮ್ಮ ರಾಜ್ಯದಲ್ಲಿ?”

“ಹೌದು, ಹೌದು, ಕೊತವಾಲನ ಜನರು ಬಂದು ನೀನು ಕೊಲೆಗಾರ್ತಿ ಎಂದು ತಿಳಿಸಿದರು. ಆಗಲೇ ನಿನಗೆ ಯೋಗ್ಯ ಶಿಕ್ಷೆ ಕೊಡಲು ವಿಚಾರ ಮಾಡುತ್ತಲಿದ್ದೆ. ಅಷ್ಟೊತ್ತಿಗೆ ಕೊತವಾಲನ ಜನರು ಬಂದು, ಪ್ರೇತದ ಜೇಬಿನಲ್ಲಿ ಸಿಕ್ಕ ಕಾಗದವೊಂದನ್ನು ಕೊಟ್ಟರು,”

“ಅದೆಂತಹ ಕಾಗದವದು?”

“ಜಾಫರ್ ಔರಂಗಜೇಬನಿಂದ ನಿಯಮಿಸಲ್ಪಟ್ಟ ಗುಪ್ತಚಾರ! ನೀನು ಆವೊತ್ತು ಅವನನ್ನು ಕೊಲ್ಲದಿದ್ದರೆ ಬಾದಶಹರ ಕೊಲೆ ಇಷ್ಟೊತ್ತಿಗೆ ಆಗಿಯೆ ಆಗುತ್ತಿತ್ತು. ಅದರ ಎಲ್ಲ ಸಿದ್ಧತೆ ಆಗಿ ಮುಗಿದಿತ್ತು. ಅದಕ್ಕಾಗಿ ಔರಂಗಜೇಬನಿಂದ ಜಾಫರನಿಗೆ ಬಂದು ಕಾಗದವಿತ್ತು,”

ನೀಲಲೋಚನೆಗೆ ಮುಂದೇನೂ ಕೇಳಿಸಲಿಲ್ಲ, ಕಂಠ ತುಂಬಿ ಬಂತು, ಕಣ್ಣಲ್ಲಿ ನೀರು ಹರಿಯತೊಡಗಿತು.

ಮೆರೆವಣಿಗೆ ಮುಂದೆ ಸಾಗುತ್ತಲಿತ್ತು.

ಮನೆಗೊಂದು ಅಂದ-ಚಂದದ ಒಡವೆ ಅವಶ್ಯವಲ್ಲವೆ?
ದಣಿವಾರಿಸಿಕೊಳ್ಳಲು ಹಿತವಾದ ಆಸನವು ಬೇಕಲ್ಲವೆ?

ಹುಬ್ಬಳ್ಳಿಯ
ಸದ್ಗುರು ಉದ್ಯೋಗ ಮಂದಿರ
ಇವರು
ತಯಾರಿಸಿದ

ಸುಂದರ ಆಕಾರದ
ಸುಲಭ ಬೆಲೆಯ

‘ಸುಮನ’

ಕುರ್ಚಿಯನ್ನು
ಉಪಯೋಗಿಸಿರಿ.



★

ಮನಸ್ಸೊಪ್ಪುವ ಕೆಲಸಕ್ಕಾಗಿ ಇಲ್ಲಿಯೆ
ಬನ್ನಿರಿ!

ಕುರ್ಚಿ, ಮೇಜು, ಕಪಾಟು, ಬಾಕು,
ಟೀಪಾಯ್, ಸೋಫಾಸೆಟ್ಟುಗಳು—
ಅದೇಕೆ—
ಯಾವುದೆ ತರದ ಹೊಸ ಮಾದರಿಯ ಕಟ್ಟಿಗೆಯ
ಸಾಮಾನುಗಳನ್ನು ಶಾಸ್ತ್ರೀಯವಾಗಿ, ಯೋಗ್ಯಬೆಲೆಗೆ,
ತಯಾರಿಸಿ ಕೊಡುವೆವು.

★

ಕರ್ನಾಟಕದಲ್ಲಿ ಔದ್ಯೋಗಿಕಶಿಕ್ಷಣ ಕೊಡುವ ಆದ್ಯ ಸಂಸ್ಥೆ!

ಬಡಿಗತನದ

ಶಾಸ್ತ್ರೀಯ ಶಿಕ್ಷಣವು ನಮ್ಮಲ್ಲಿ ದೊರೆಯುವುದು.
ವಿವರಗಳಿಗಾಗಿ ಬನ್ನಿರಿ, ಇಲ್ಲವೆ
ಬರೆಯಿರಿ.

ಶ್ರೀ ಸದ್ಗುರು ಉದ್ಯೋಗ ಮಂದಿರ,
ಸ್ಟೇಶನ್ ರೋಡ್,
ಹುಬ್ಬಳ್ಳಿ.

ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವೆ?

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

★

ನಿಜವಾಗಿಯೂ ಭಾರತೀಯರ ಆಧ್ಯಾತ್ಮಿಕತೆಯು ಅವರ ಶ್ರೇಷ್ಠತೆಯೆನಿಸದು; ಭಾರತೀಯ ಸಮಾಜದ ದಾರಿದ್ರ್ಯ—ದುರವಸ್ಥೆಗಳ ಪರಿಣಾಮದ ಫಲವದು! ಹಸಿವೆ ಹೆಣಗಾಟಗಳ ಬೇಗೆಯಲ್ಲಿ ಬಳಲುವವರು ಕಲ್ಪಿಸಿಕೊಂಡ ಪನ್ನೀರದು! ಆವಶ್ಯಕತೆಗಳ ಸಲುವಾಗಿ ಉಂಟುಮಾಡಿಕೊಂಡ ಸದ್ಗುಣವದು!

★

ಲೇಖಾಂಕ ೩

(೫) ಯಾರು ಹೆಚ್ಚು ಯಾರು ಕಡಿಮೆ ?

ಪಾಶ್ಚಾತ್ಯ ಜನಾಂಗಗಳ ದಿನನಿತ್ಯದ ಬಾಳುವೆಯು ಹಿಂದಿನ ಲೇಖಾಂಕದಲ್ಲಿ ಹೇಳಿದುದಕ್ಕಿಂತ ಬೇರೆಯಿದೆಯೆ? ಅಹುದು ಎನ್ನುವವನು ನಿಜವಾಗಿಯೂ ತಿಳಿವಳಿಕೆಯುಳ್ಳವನಿರಲಾರನು. ಹಾರಿಗಳ್ಳತನದಿಂದ ಹಣವನ್ನು ಅಪಹರಿಸುವುದೂ ಕಾಡಾದಿ ನರಪಶುವಿನಂತೆ ಹೆಣ್ಣನ್ನು ಎತ್ತಿಕೊಂಡು ಹೋಗುವುದೂ—ಭಾರತದಂತೆ ಪಾಶ್ಚಾತ್ಯ ದೇಶಗಳಲ್ಲಿಯೂ ರೂಢಿಯಲ್ಲಿಲ್ಲ. ಭಾರತದಷ್ಟು ಬಡತನ ಮತ್ತು ದಡ್ಡತನವು ಆ ದೇಶಗಳಲ್ಲಿಲ್ಲವಾದ್ದರಿಂದ—ಅಲ್ಲಿಯ ಸಾಮಾನ್ಯ ಸ್ತ್ರೀ-ಪುರುಷರು ಇಲ್ಲಿಗಿಂತ ಹೆಚ್ಚು ಸುಸಂಸ್ಕೃತರಾಗಿದ್ದು, ಆತ್ಮಸಂರಕ್ಷಣೆಗಾಗಿ ಹೆಚ್ಚು ಸಮರ್ಥರಿರುವ ಸಂಭವವೇ ಹೆಚ್ಚಿದ್ದುದರಿಂದ, ಭಾರತದಲ್ಲಿಯ ಇಂತಹ ಅಪಹಾರ ಅತ್ಯಾಚಾರಗಳ ಪ್ರಮಾಣ ಹೆಚ್ಚಾಗಬಹುದು. ಏಕೆಂದರೆ ಹಸಿವೆ ಹೇಸುವ ಪಾಪವಿಲ್ಲ. ಆದರೆ ಸಾಮಾನ್ಯವಾಗಿ ಯುರೋಪದ ಜನರು ಭಾರತದವರಂತೆಯೆ, ಧರ್ಮಾವಿರೋಧವಾಗಿ ಅರ್ಥ-ಕಾಮಗಳನ್ನು ಗಳಿಸಲು ಹೆಣಗುವರು. ಕಾಯಿದೆಯ ವಿರುದ್ಧ ನಡೆಯುವ ಗಳಿಕೆಯು ಇಲ್ಲಿಯಂತೆ ಅಲ್ಲಿಯೂ ದಂಡನೆ ಪಡೆಯುತ್ತದೆ. ಕಾಯಿದೆಯಂತೆ ನಡೆಯುವ ಗಳಿಕೆಯಾಗಲಿ, ಸುಲಿಗೆಯಾಗಲಿ, ಅಲ್ಲಿಯಷ್ಟೇ ಆಸಕ್ತಿಯಿಂದ ಇಲ್ಲಿಯೂ ನಡೆಯುತ್ತಲಿದೆ. ಭೇದವಿದ್ದರೆ ಅದು ಅಂಶದ್ದು. ಇಲ್ಲಿಗಿಂತ ಅಲ್ಲಿಯ ಉತ್ಪೀಡಕರು ಹೆಚ್ಚು ಜಾಣರಿರಬಹುದು. ಹಾಗೆಯೇ ಅಲ್ಲಿಯ ಉತ್ಪೀಡಿತರು ಹೆಚ್ಚು ಜಾಗೃತರಿರಬಹುದು. ಇಷ್ಟೇ. ಇದರಲ್ಲಿ ಆಧ್ಯಾತ್ಮವೆಲ್ಲಿದೆ?

ಇನ್ನು ಮೋಕ್ಷಧರ್ಮದ ಕುರಿತು ಎರಡೂ ಸಂಸ್ಕೃತಿಗಳನ್ನು ಹೋಲಿಸಿ ನೋಡೋಣ. ಇಲ್ಲಿಯಷ್ಟೇ ಭಕ್ತಿಪ್ರಧಾನವಾದ ಜೀವನವು ಅಲ್ಲಿಯ ಸಮಾಜದಲ್ಲಿಯೂ—ಮೂರು ಶತಮಾನಗಳ ಹಿಂದೆ—ಇತ್ತು. ಇಲ್ಲಿಯೂ ಹಿಂದಿಗಿಂತ ಇಂದು ಭಕ್ತಿ-ಶ್ರದ್ಧೆಗಳು ಕಡಿಮೆಯಾಗುತ್ತ ಬಂದಿವೆ. ನಮ್ಮ ಆಧ್ಯಾತ್ಮಿಕತೆಯು ಸ್ವತಃಸಿದ್ಧವಾಗಿದ್ದಾದರೆ ಹೀಗಾಗಬಾರದಾಗಿತ್ತು. ತಮ್ಮ ಇಷ್ಟ-ದೇವತೆಗಳ ಪ್ರೀತ್ಯರ್ಥವಾಗಿ, ಕಲ್ಲು-ಸೊಲ್ಲುಗಳಲ್ಲಿ ಪ್ರಚಂಡ ಕಾವ್ಯಕಟ್ಟಡಗಳನ್ನು ಬರೆದು ಕೊರೆದು ಇತಿಹಾಸದಲ್ಲಿ ಅಮರವಾದ ನಮ್ಮ ಭಕ್ತಿಸಂಪ್ರದಾಯಗಳಂತೆಯೆ, ಪ್ರಾರ್ಥನಾ-ಮಂದಿರಗಳನ್ನೂ ಚಿತ್ರಶಿಲ್ಪವನ್ನೂ ನಿರ್ಮಿಸಿ, ಪ್ರಚಂಡ ಧರ್ಮ-ಯುದ್ಧಗಳನ್ನು ಹೂಡಿ ಮಡಿದು, ಅಲ್ಲಿಯ ಧರ್ಮವೀರರೂ ಅಮರರಾಗಿದ್ದಾರೆ. ಇಂದಿನ ಮಟ್ಟಿಗೆ ಧರ್ಮಸಂಸ್ಥೆಯು ಇಲ್ಲಿಯೂ ಕ್ಷೀಣವಾಗಿದೆ. ಭಕ್ತಿಯ ತೆರೆಯ ಮರೆಗೆ ಮತ-ಮತಾಂತರ ಬಳಿಯಲ್ಲಿ ನಡೆಯುವ ಅನೀತಿ-ಅನಾಚಾರಗಳು ಇಲ್ಲಿಯಂತೆ ಅಲ್ಲಿಯೂ ಅನಿರ್ಬಂಧವಾಗಿ ನಡೆಯುತ್ತಿದ್ದುವು. ನಮ್ಮ ಯಾವ ಸದ್ಗುಣದಲ್ಲಿಯೂ ಯುರೋಪದವರು ಹಿಂದಿಲ್ಲ. ಅವರ ಯಾವ ದುರ್ಗುಣದಲ್ಲಿಯೂ ನಾವು ಭಾರತೀಯರು ಹಿಂದಿಲ್ಲ. 'ಸಾಮಾನ್ಯ ಅಮೇರಿಕನನಾಗಲಿ ಇಂಗ್ಲಿಷನಾಗಲಿ ಭಕ್ತಿ-ಶ್ರದ್ಧೆಗಳಲ್ಲಿ ಕೇವಲ ಡಾಂಭಿಕನು; ಸಾಮಾನ್ಯ ಭಾರತೀಯನಷ್ಟೇ ಪ್ರಾಮಾಣಿಕ ಭಾವಿಕನು' ಎಂದು ಹೇಳುವುದರಲ್ಲಿ ಹೆಮ್ಮೆಯಷ್ಟೇ ಹೆಡ್ಡತನವೂ ಇರುವುದು. ಆತ್ಮದ ಮುಕ್ತಿಯು ಭಾರತೀಯ ಧರ್ಮಗಳಲ್ಲಿಯಂತೆ ಕ್ರೈಸ್ತಧರ್ಮದಲ್ಲಿಯೂ ಮುಖ್ಯ ಸಿದ್ಧಾಂತವು. ಯುರೋಪ ಅಮೇರಿಕೆಯ ಸಾಮಾನ್ಯ ನಾಗರಿಕನು ಇಲ್ಲಿಗಿಂತ ಹೆಚ್ಚು ಸುಶಿಕ್ಷಿತನೂ ಸಂಪನ್ನನೂ ಇದ್ದುದರಿಂದ, ತನ್ನ ಧರ್ಮದ— ಭಕ್ತಿಪಂಥದ— ತತ್ತ್ವವನ್ನು ಹೆಚ್ಚು ತಿಳಿದುಕೊಂಡು ನಂಬಬಲ್ಲನು; ಮತ್ತು ಅದರಂತೆ ಹೆಚ್ಚು ಸಮರ್ಪಕವಾಗಿ ಆಚರಿಸಬಲ್ಲನು. ನಮ್ಮಲ್ಲಿಯ ಸಾಮಾನ್ಯ ಬ್ರಹ್ಮ-

ಬಾಂಧವನಿಗಿಂತ ಅಲ್ಲಿಯ ಯಾವುದೇ ಧರ್ಮಗುರುವು ಎಷ್ಟೋ ಪಾಲು ಹೆಚ್ಚು ಧರ್ಮಜ್ಞಾನಿಯಾಗಿರುತ್ತಾನೆ. ತನ್ನ ವ್ಯವಸ್ಥಿತ ಶಿಕ್ಷಣದ ಮೂಲಕ ಜನರಲ್ಲಿ ಹೆಚ್ಚು ಧಾರ್ಮಿಕತೆಯನ್ನು ಪ್ರಚಾರಿಸಬಲ್ಲವನಿರುತ್ತಾನೆ. ಇದಕ್ಕೆ ವಿರುದ್ಧವಾಗಿ ಭಾರತೀಯ "**ಆಧ್ಯಾತ್ಮಿಕ**" ಸಂಸ್ಕೃತಿಯಲ್ಲಿ ಬೆಳೆದ ಸಾಮಾನ್ಯ ಭಾರತೀಯನ ಪರಮೇಶ್ವರನ ಮತ್ತು ಪರಲೋಕದ ಕುರಿತು ಇರುವ ಜ್ಞಾನವೆಂದರೆ, ಹಲವು ಲೋಕಭ್ರಮೆಗಳ ಮತ್ತು ಅರ್ಥವರಿಯದ ರೂಢಿವಿಧಿಗಳ ನೆನಪು ಮಾತ್ರ. ಪರಮೇಶ್ವರನಿಗಿಂತ ಪೋಲೀಸನೇ—ಪರಲೋಕಕ್ಕಿಂತ ಪ್ರಾಪ್ತಿಯ ವಿವಂಚನೆಯೇ—ನಮ್ಮ ಏಳು ಲಕ್ಷ ಹಳ್ಳಿಗಳಲ್ಲಿ ಉಳಿದು ಬೆಳೆದು ಅಳಿಯುವ ದುರ್ದೈವಿಜೀವಿಯ ಕನಸು-ಮನಸುಗಳನ್ನು ತುಂಬಿರುತ್ತವೆ. ಸಾಮಾನ್ಯ ಭಾರತೀಯನಿಗೆ ಸಂಸ್ಕೃತಿಯು ಸ್ವಲ್ಪವಿರಬಹುದು; ಅಧ್ಯಾತ್ಮವು ಏನೂ ಇಲ್ಲ. ಅವನದು ದಾಸ್ಯ-ದೈನ್ಯದಲ್ಲಿ ನುಗ್ಗಾದ ಸೌಮ್ಯ ಪ್ರಕೃತಿ!

"ಇದೆಲ್ಲ ನಿಜ. ಆದರೆ ಇಂದಿನ ಈ ಅವಸ್ಥೆಯಿಂದ ಭಾರತದ ಆಧ್ಯಾತ್ಮಿಕತೆಯ ಗತವೈಭವವನ್ನು ಅಲ್ಲಗಳೆಯಲು ಬರುವುದಿಲ್ಲ. ನಮ್ಮ ಸಂಸ್ಕೃತಿಯು ಸದ್ಯಕ್ಕೆ ಅವನತಿಗೀಡಾಗಿದೆ. ಅದರ ಪುನರುದ್ಧಾರಕ್ಕಾಗಿಯೆ ನಮ್ಮ ರಾಷ್ಟ್ರೀಯ ಆಂದೋಲನವಿದೆ. ತಿರುಗೊಮ್ಮೆ ಉಪನಿಷತ್ತಿನ ಉನ್ನತವಾತಾವರಣವು ಭಾರತದಲ್ಲಿ ಬರಲಿದೆ" ಎಂದು ಮುಂತಾಗಿ ಅಧ್ಯಾತ್ಮವಾದಿಗಳು ಎನ್ನುವುದುಂಟು. ಆದರೆ ಸ್ವಯಂಭೂಪ್ರತಿಭೆಯಾಗಿದ್ದ ನಮ್ಮ ಜನಾಂಗದ ಈ ಪಾರಮಾರ್ಥಿಕತೆಯು, ಮಹಮ್ಮದೀಯರ ಮೂರ್ತಿಭಂಜಕ ಆವೇಶ-ಆಕ್ರಮಣಗಳಲ್ಲಿಯೂ ಬದುಕುಳಿದ ಈ ಪಾರಲೌಕಿಕತೆಯು, ಇಂದು ಪಾಶ್ಚಾತ್ಯರ ಸಂಸ್ಕೃತಿಯ ಸ್ಪರ್ಶದಿಂದ ಹೀಗೆ ಕ್ಷಯ ಹೊಂದಬೇಕೇಕೆ? ಸಮಾಜದ ಶ್ರೇಷ್ಠಿಗಳ ಮಾತುಗಳೇ ಎಲ್ಲ ಜನತೆಯ ಮತದ ಮಾದರಿಯೆಂದು ತಿಳಿಯುವುದಾದರೆ, ಇಂದಿನ ಇಂಗ್ಲಂಡ್-ಅಮೇರಿಕೆಗಳಿಗೆ ಪಾರಮಾರ್ಥಿಕತೆಗಾಗಿ ಪದಕ ಸಿಕ್ಕಬೇಕು! ಅವರ ಕ್ರೈಸ್ತ ತತ್ತ್ವಗಳು ನಮ್ಮ ತತ್ತ್ವಗಳಿಗಿಂತ ಮಿಗಿಲೆಂದು ಹೇಳಲಾಗುವುದಿಲ್ಲ. ದೇವರು, ಆತ್ಮ, ಪಾಪ, ಪುಣ್ಯ ಮುಂತಾದ ಪಾರಮಾರ್ಥಿಕ ತತ್ತ್ವಗಳು ಯಾವ ಧರ್ಮದಲ್ಲಿ ಬರೆದಿದ್ದರೂ ಒಂದೇ ಅರ್ಥ ಕೊಡುತ್ತವೆ. ಒಂದೇ ಆಧ್ಯಾತ್ಮಿಕತತ್ತ್ವಗಳುಳ್ಳ ಎರಡು ಜನಾಂಗಗಳು-ಭಾರತೀಯರೂ ಇಂಗ್ಲಿಷರೂ-ಒಂದಕ್ಕೊಂದು ಎದುರಾದಾಗ, ಧರ್ಮದೇವತೆಯು ಪಕ್ಷಪಾತಮಾಡಿ, ಅಭ್ಯುದಯವನ್ನೆಲ್ಲ ಇಂಗ್ಲಿಷರಿಗೆ— ಪಾಶ್ಚಾತ್ಯರಿಗೆ— ಮತ್ತು (ಸತ್ತಮೇಲೆ ಸಿಕ್ಕುವ!) ನಿಃಶ್ರೇಯಸವನ್ನೆಲ್ಲ ನಮ್ಮ ಪಾಲಿಗೆ ಕೊಟ್ಟದ್ದರ ಕಾರಣವೇನು? "ವಿನಾದೈವೇನ" ಅವರು ಜೀವಿಸುವವರು. "ಅನಾಯಾಸವಾಗಿ" ನಾವು ಸಾಯುವವರು! ನಮ್ಮ ಅಧ್ಯಾತ್ಮವು ಪಾಶ್ಚಾತ್ಯರ ಪರಮಾರ್ಥಕ್ಕಿಂತ ಕೀಳೇ? ಛೇ! ಶಕ್ಯವಿಲ್ಲ! ಎಂದಮೇಲೆ ಅವರ ಜಡವಾದವು ನಮ್ಮ ಅಧ್ಯಾತ್ಮಕ್ಕಿಂತ ಮೇಲೇ? ಇದನ್ನು ಒಪ್ಪುವುದು ಆಧ್ಯಾತ್ಮತತ್ತ್ವವನ್ನು ಅವಮಾನಿಸಿದಂತೆ! ಭವಭೂತಿಯು ಹಾಡಿದ ಪ್ರೀತಿಯ ಸ್ವರೂಪದಂತೆ ಆಧ್ಯಾತ್ಮಿಕತೆಯು ಹೊರಗಿನ ಉಪಾಧಿಗಳನ್ನು ಅವಲಂಬಿಸಿರುವುದಿಲ್ಲ. ಯಾವ ಪರಿಸ್ಥಿತಿಯಲ್ಲಿಯೂ ಆತ್ಮದ ಉಜ್ಜ್ವಲತೆಯು ನಿಷ್ಕಲಂಕವಾಗಿಯೆ ಇರಬೇಕು. ಅಂತಹ ಆತ್ಮವನ್ನು ಒಳಪಟ್ಟು ಇರುವ ಶಕ್ತಿಯೇ ಆಧ್ಯಾತ್ಮಿಕತೆ. ಅದೂ ಕೂಡ— ಎಂತಹ ಐಹಿಕ ದುರವಸ್ಥೆಯಲ್ಲಿಯೂ ಕೂಡ ನಿಚ್ಚಳವಾಗಿರಬೇಕು. ನಮ್ಮದು ಹಾಗೆಯೆ ಉಳಿದಿಲ್ಲವೆಂದಮೇಲೆ, ಅದು ಹಾಗೆ ಉಳಿಯತಕ್ಕದಿದ್ದಿಲ್ಲವೆಂದು ಸ್ಪಷ್ಟವಾಯಿತು. ಎಂದರೆ ಆಧ್ಯಾತ್ಮಿಕತೆಯಾಗಲಿ ಧರ್ಮಪ್ರಧಾನ ವಿಚಾರ ಪದ್ಧತಿಯಾಗಲಿ ಸಮಾಜಜೀವನದ ಒಂದು ನಿತ್ಯಲಕ್ಷಣವಲ್ಲ. ಅದು ತಾತ್ಕಾಲಿಕವಾದ ಒಂದು ಗುಣವೆಂದಾಯಿತು. ಆ ಲಕ್ಷಣದ ಪರೆಯನ್ನು ತೊರೆದು ಪಾಶ್ಚಾತ್ಯ ರಾಷ್ಟ್ರಗಳು ಸಾಗಿಬಂದಿವೆ. ಭಾರತವು ಇನ್ನೂ ಆ ಪರೆಯನ್ನು ತೊರೆದು ಮುಂದುವರಿಯುವುದರಲ್ಲಿ ಇತ್ತು. ಸುವರ್ಣಭೂಮಿಯೆಂದು ಎಣಿಸಿಕೊಂಡ ಭಾರತವು ಭೌತಿಕವಿದ್ಯೆ ವೈಭವಗಳನ್ನು ಕುರಿತೂ ಉದ್ಯೋಗ-ಉನ್ನತಿಗಳನ್ನು ಕುರಿತೂ ಹಿಂದೆ ಎಂದೂ ತಿರಸ್ಕಾರ ತೋರಿಸಿಲ್ಲ. ಈ ದುರ್ದೈವೀ ದೇಶದ ಮೇಲೆ ಪರಚಕ್ರಗಳ ಪರಂಪರೆಯಾಗುವ ಪೂರ್ವದಲ್ಲಿ, ಭಾರತವು ಬಂಡವಾಳಗಾರಿಕೆಯ ಹೊಸ್ತಿಲಲ್ಲಿ ನಿಂತು ಸಾಮಾಜಿಕ ಅಭ್ಯುದಯದ ಕನಸನ್ನು ಕಾಣುತ್ತಿತ್ತು. ಎಂದರೆ ಎರಡು ಶತಮಾನಗಳ ಹಿಂದೆ ಯುರೋಪವು ಜ್ಞಾನ-ವಿಜ್ಞಾನಗಳ ಕೈಹಿಡಿದು ಎದ್ದು ಸಾಗಿದಂತೆ ಭಾರತವೂ ಭೌತಿಕಶಾಸ್ತ್ರಗಳನ್ನು ಬೆಳೆಯಿಸಿಕೊಳ್ಳುವ ಪ್ರಯತ್ನ ಮಾಡಿತ್ತು. ಆಗ ಯುರೋಪವು ಇನ್ನೂ ಧರ್ಮದ ಮುಷ್ಟಿನಲ್ಲಿಯೇ ಇತ್ತು. ಆದರೆ ಐತಿಹಾಸಿಕ ಉತ್ಪಾತಗಳ ಮೂಲಕ ನಮ್ಮ ಪ್ರಗತಿಯು ಕಟಿಯಿತು; ನಮ್ಮ ಭಾಗ್ಯದ ಕಲಶಕನ್ನಡಿಯು ಸಿಡಿದು ಹುಡಿಯಾಯಿತು; ಮತ್ತು ವಿನಾಶಕಾಲದ ವಿಪರೀತ ಬುದ್ಧಿಯು ತಲೆದೋರಿತು. ನಮ್ಮ ಗತಿಗೆಟ್ಟ ಬಾಳಿನ ಕೊರತೆ-ಕೊರಗುಗಳನ್ನೇ ನಾವು ಬಿರುದುಗಳನ್ನಾಗಿ ಮಾಡಿಕೊಂಡೆವು. ಗೊಡ್ಡುತನವನ್ನು ಸಾತ್ತ್ವಿಕತೆಯೆಂದೆವು. ಹೆಡ್ಡತನವನ್ನು ಭಾವಿಕತೆಯೆಂದೆವು. ಹೇಡಿತನವನ್ನು ಅಹಿಂಸೆಯೆಂದೆವು. ವ್ಯರ್ಥ ಜೀವನವನ್ನು ಪರಮಾರ್ಥವೆಂದೆವು. ಬಹಿರಂಗದ ಅಧಃಪಾತವನ್ನು ಅಂತರಂಗದ ಅಧ್ಯಾತ್ಮವೆಂದೆವು! ಆದರೆ ಯುರೋಪವು ಮಂತ್ರ-ತಂತ್ರಗಳ ಮೋಹಜಾಲದಿಂದ ಹೊರಬಿದ್ದು, ಯಂತ್ರ-ಸ್ವಾತಂತ್ರ್ಯಗಳ ಹೊಸ ಆಗಸವನ್ನೇರ್ಪಡಿಸಿಕೊಂಡು ಸಡಗರದಿಂದ ಸಾಗಿತು. ತಾತ್ಪರ್ಯವೇನೆಂದರೆ ನಮ್ಮ ಅಧ್ಯಾತ್ಮವು ಆಗಂತುಕವು.

ಇಲ್ಲಿ ಇನ್ನೊಂದು ಹೋಲಿಕೆಯನ್ನು ನೋಡಬಹುದು. ನಮ್ಮ ಮತದಂತೆ, ಭಾರತವು ಜಗತ್ತಿನ ಇತರ ಎಲ್ಲ ರಾಷ್ಟ್ರಗಳಿಗಿಂತ ಹೆಚ್ಚು ಆಧ್ಯಾತ್ಮಿಕವಿದೆ. (ಏಕೆಂದರೆ ಜಗತ್ತಿಗೇ ಶಾಂತಿಪಾಠ

ವನ್ನು ಕಲಿಸ ಬಲ್ಲದ್ದಾಗಿದೆ!) ಅದರಂತೆಯೆ ಅದು ಎಲ್ಲರಿಗಿಂತ ಹೆಚ್ಚು ಅಜ್ಞಾನ ಮತ್ತು ಅಖಂಡ ದಾರಿದ್ರ್ಯದಲ್ಲಿ ತೊಳಲಾಡುತ್ತಿದೆ. ಅದೇ ಮೇರೆಗೆ ಕೆಲವು ಶತಕಗಳ ಹಿಂದೆ ಇಂದಿಗಿಂತ ಯುರೋಪವು ಹೆಚ್ಚು ಧಾರ್ಮಿಕವೂ ಆಧ್ಯಾತ್ಮಿಕವೂ ಇತ್ತು, ಅದೇ ಮೇರೆಗೆ ಅದು ಹೆಚ್ಚು ದರಿದ್ರವೂ ದಷ್ಟತನದ್ದೂ ಆಗಿತ್ತು. ಈಗಲೂ ನಮ್ಮ ಭಾರತದ ಮಿಕ್ಕ ಪ್ರಾಂತಗಳಿಗಿಂತ ನಮ್ಮ ಹರಿದು ಹಂಚಿಹೋದ ಜನರುಳ್ಳ "**ಹರಿಜನ**" ಕರ್ನಾಟಕವು ಹೆಚ್ಚು ಅಜ್ಞಾನಿಯೂ ಅನರ್ಥಗೇಡಿಯೂ ಆಗಿದೆ. ಅದೇ ಮೇರೆಗೆ ನಮ್ಮ ಬಲ್ಲವರು ಉಳಿದ ಪ್ರಾಂತವರಿಗಿಂತ ಕಡಿಮೆ ಬುದ್ಧಿನಿಷ್ಠರೂ ಹೆಚ್ಚು ಭಾವನಾಮಯರೂ ಭಕ್ತಿಶ್ರದ್ಧೆಯುಳ್ಳವರೂ ಇರುವರು. ಮಹಾತ್ಮಿಕೆಯಲ್ಲಿ ನಮ್ಮ ನಿಷ್ಠೆ ಹೆಚ್ಚು. "ಕಾರಣಪುರುಷರಿಗಾಗಿ" ನಮ್ಮ ಕಳವಳ ಹೆಚ್ಚು. ಅಹಿಂಸೆ-ಅನುಭಾವಗಳಲ್ಲಿ ನಮ್ಮ ಆಸಕ್ತಿ ಹೆಚ್ಚು. ಮಿಕ್ಕ ಪ್ರಾಂತದ ಮುಂದಾಳುಗಳಿಗಿಂತ ನಮ್ಮ ಮುಖಂಡರಿಗೆ ಅಂತರಾತ್ಮನಿಂದ ಬರುವ ಆದೇಶ-ಸಂದೇಶಗಳು ಹೆಚ್ಚು. ಇವೆಲ್ಲ ಪ್ರಮಾಣಗಳಿಂದ ಒಂದು ಸಂಗತಿ ಒಡೆದು ಕಾಣುತ್ತದೆ. ಅದೇನೆಂದರೆ, ಅಜ್ಞಾನ-ಅನರ್ಥಗಳೂ ಐಹಿಕ ದುರವಸ್ಥೆಯೂ ಹೆಚ್ಚಾದಾಗ, ಹೆಚ್ಚಾದಲ್ಲಿ, ಆಧ್ಯಾತ್ಮಿಕತೆಯೂ ಪಾರಲೌಕಿಕ ಭಾವನೆಯೂ ಹೆಚ್ಚಾಗುತ್ತದೆ. ಸತ್ತೆ-ಸಂಪತ್ತಿ-ಸ್ವಾಸ್ಥ್ಯಗಳಿದ್ದಲ್ಲಿ ಅದು ಕಡಿಮೆ. ನಾವು ಇದನ್ನು 'ಅವನತಿ' 'ತತ್ತ್ವಭ್ರಷ್ಟತೆ' ಎಂದು ಹೀಯಾಳಿಸುವೆವು. ಆದರೆ ನಿಜವಾಗಿಯೂ ನಮ್ಮ ಆಧ್ಯಾತ್ಮಿಕತೆಯು ನಮ್ಮ ಶ್ರೇಷ್ಠತೆಯಲ್ಲ. ನಮ್ಮ ಸಾಮಾಜಿಕ ದುರವಸ್ಥೆ-ದಾರಿದ್ರ್ಯಗಳ ಪರಿಣಾಮವದು. ಹಸಿವೆ ಹೆಣಗಾಟಗಳ ಬೇನೆಯಲ್ಲಿ ಬಳಲುವವರು ಕಲ್ಪಿಸಿಕೊಂಡ ಪನ್ನೀರು ಅದು. ಆವಶ್ಯಕತೆಯಿಂದ ಉಂಟುಮಾಡಿಕೊಂಡ ಸದ್ಗುಣವದು. ಆದ್ದರಿಂದ ನಮ್ಮ ಸಂಸ್ಕೃತಿಯು ಸ್ವಭಾವತಃ ಆಧ್ಯಾತ್ಮಿಕವಲ್ಲ. ಆಗಂತುಕವಾಗಿ ಅಂಟಿಕೊಂಡ ಆಧ್ಯಾತ್ಮವನ್ನು ಹೋಗಲಾಡಿಸಿಕೊಂಡ ಹೊರತು ನಮಗೆ ಅಭ್ಯುದಯದ ಆರಂಭವಿಲ್ಲ.

(೬) ಸಂಸ್ಕೃತಿಯೂ ಅಧ್ಯಾತ್ಮವೂ ಸಮನ್ವಯವೆಂಬ ಸ್ವಾರ್ಥವೂ !

"ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವು" ಎಂದು ಸಾರಿಡೂರಿ ಹೇಳುವವರಿಗೆ ಎರಡು ಪ್ರಶ್ನೆಗಳನ್ನು ಕೇಳಬಹುದು. (೧) ಭಾರತೀಯ ಸಂಸ್ಕೃತಿಯೆಂದರೆ ಯಾರ ಸಂಸ್ಕೃತಿ? (೨) ಆಧ್ಯಾತ್ಮಿಕ ಸಂಸ್ಕೃತಿಯೆಂದರೇನು? ಇವೆರಡೂ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳಿಲ್ಲ. ನಮ್ಮ ಸಂಸ್ಕೃತಿಯು ದ್ರಾವಿಡರದೊ, ಆಮೇಲೆ ಬಂದ ಆರ್ಯರದೊ, ಇವರಿರ್ವರಿಗೂ ಹಿಂದಿನಿಂದ ಇದ್ದ ಗುಪ್ತಗಾಢಿನ ಮಂದಿಯಾದ ಆದಿ ದ್ರಾವಿಡರದೊ? ಸಮುದ್ರಗಳಿಂದಲೂ ಪರ್ವತಗಳಿಂದಲೂ ಸುತ್ತುವರಿಯಲ್ಪಟ್ಟ ನಮ್ಮ ಭಾರತವೆಂಬ ಭೂಖಂಡದ ಭೌಗೋಲಿಕ ಒಕ್ಕಟ್ಟನ್ನು ಬಿಟ್ಟರೆ, ಬಾಸ್ಯ ದಾರಿದ್ರ್ಯ ಮತ್ತು ದುಃಖಗಳ ಸಮಾನತೆಯನ್ನು ಬದಿಗಿಟ್ಟರೆ, ಮಿಕ್ಕ ಯಾವ ಮಹತ್ತ್ವದ ವಿಚಾರಗಳಲ್ಲಿಯೂ ನಮ್ಮ ನಾಡಿನವರಲ್ಲಿ ತೀವ್ರವಾದ ತೀರ್ಮಾನವಾಗದಂತಹ ಮತಭೇದಗಳೂ ರುಚಿಭೇದಗಳೂ ರೀತಿ-ರೂಢಿಗಳ ವ್ಯತ್ಯಾಸವೂ ತುಂಬಿಕೊಂಡಿದೆ. (ಇದು ವಸ್ತು-ಸ್ಥಿತಿ. ಇದನ್ನು ಇರಗೊಡಬೇಕೊ ಒಂದೇ ಸಂಸ್ಕೃತಿಯನ್ನು ಕಟ್ಟಲಾಗಬಾರದೊ ಎಂಬ ಸಂಗತಿಗಳು ಈ ಚರ್ಚೆಯಲ್ಲಿ ಅಪ್ರಸ್ತುತ.) ನಮ್ಮಲ್ಲಿ ಧರ್ಮಭೇದಗಳಿವೆ. ಅವುಗಳಲ್ಲಿ ಮತ್ತೆ ಒಡಕು ಹುಟ್ಟಿಸುವಷ್ಟು ಭಾಷಾಭೇದ ಸಾಂಸ್ಕೃತಿಕ ಭೇದಗಳಿವೆ. (ಭಾಷೆಯು ಸಂಸ್ಕೃತಿಯ ವಾಹನವಲ್ಲವೇ?) ಇವೆಲ್ಲ ಭೇದಗಳೊಳಗಿಂದ ಹಾಯ್ದು ಹೊಸ ಸಮಾಜರಚನೆಯನ್ನೇರ್ಪಡಿಸಿದ ವರ್ಗಭೇದಗಳಿವೆ.) ಕನ್ನಡ ಬ್ರಾಹ್ಮಣನಿಗೆ ಕಾಶ್ಮೀರಿ ಬ್ರಾಹ್ಮಣನಿಗಿಂತ ನೆರೆಯಪ್ರಾಂತದ ನಾಯರನು ಹೆಚ್ಚಿನ ಆಪ್ತನೆಂದು ತೋರುವನು. ಯುಕ್ತಪ್ರಾಂತದ ಹಿಂದುವಿಗೆ ದಕ್ಷಿಣದ ಸಜಾತೀಯನಿಗಿಂತ ದಿಲ್ಲಿಯ ಮುಸಲ್ಮಾನನು ಹಚ್ಚಿಗೆ ಕೂಡಿ ಹೋಗುವನು. ಆದರೆ ಇದೆಲ್ಲದರಲ್ಲಿ ಅಧ್ಯಾತ್ಮವೆಲ್ಲಿದೆ? ಭಾರತೀಯ ಸಂಸ್ಕೃತಿಯೆಂದರೆ ಯಾವ ಗುಂಪಿನ ಸಂಸ್ಕೃತಿ? ವರ್ಗಭೇದಗಳಂತೂ ಆರ್ಥಿಕ ನೆಲೆಯ ಮೇಲೆ ನಿಂತುವು. ತೆತ್ತಿ ತೀರಿಸಲಾರದ ಸಾಲಕ್ಕಾಗಿ, ತಾನು ತಿನ್ನಲಾರದ ಸಾಗುವಳಿಗಾಗಿ, ನಸುಕಿನಿಂದ ಸಂಜೆಯ ತನಕ— ಹುಟ್ಟಿನಿಂದ ಸಾವಿನತನಕ— ದುಡಿದು ಬೇಸತ್ತು, "ಮರಳಿ ಮಣ್ಣಿಗೆ" ಸೇರುವ ರೈತನಿಗೆ ಅಧ್ಯಾತ್ಮಕ್ಕಾಗಿ ತೆರವಿದೆಯೆ? ಆಡಂಬರಕ್ಕಾಗಿ ಗೀತೆಯನ್ನೋದಿ, ಗಂಗೆಯಲ್ಲಿ ಮುಳುಗಿ, ಗುಡಿಗಳಿಗಾಗಿ ಗುರುಗಳಿಗಾಗಿ ದಾನ-ಧರ್ಮಮಾಡಿ, ಮಡದಿ-ಮಕ್ಕಳೊಂದಿಗೆ ಬ್ಯಾಂಕ್ ಬುಕ್ಕು ಮತ್ತು ವಿಮಾಪೊಲಿಸಿಯ ಆಧಾರದಿಂದ ಸಂಸಾರಸಾಗರವನ್ನು ದಾಟಲು ನೋಡುವ ಜಮೀನ್‌ದಾರನಿಗಾಗಲಿ, ಕಾರಖಾನ್‌ದಾರನಿಗಾಗಲಿ ಆಧ್ಯಾತ್ಮಿಕತೆಯ ಬಗ್ಗೆ ತಾಳ್ಮೆಯಿದೆಯೆ? ಒರ್ವ ನಿಜಾಮನು ಕವಿಯಾಗಿರಬಹುದು, ಒರ್ವ ಬಜಾಜನು ಸಾಧುವಾಗಿರಬಹುದು, ಒರ್ವ ಬಿರ್ಲಾನು ಸಾಧಕನಾಗಿರಬಹುದು. ಆದರೆ ಇವರಂತಹ ಅಪವಾದಗಳಿಂದ ಸಾವಿರಾರು ಸಾವುಕಾರ ಬಂಡವಾಳಗಾರರ ಶೀಲ-ಸಂಸ್ಕೃತಿಯನ್ನು ಅಳೆಯಲು ಬರುವುದೆ? ತರುಣ ಬುದ್ಧಿಜೀವಿಗಳ ಮತ್ತು ಧಾರ್ಮಿಕ ವ್ಯವಸಾಯದವರ ಉಲ್ಲೇಖವಂತೂ ಹಿಂದೆಯೇ ಬಂದಿದೆ. ಇವರಲ್ಲಿ ಆಧ್ಯಾತ್ಮವಿದೆಯೆ? ಅರ್ಥಾತ್, ಭಾರತೀಯರಲ್ಲಿ ಒಂದೇ ಒಂದು ಅಖಂಡ ಸಂಸ್ಕೃತಿಯಿಲ್ಲ; ಒಂದಿದ್ದ ಮಟ್ಟಿಗೆ ಆ ಸಂಸ್ಕೃತಿಯು ಆಧ್ಯಾತ್ಮಿಕವಿರುವುದಿಲ್ಲ. ಒಮ್ಮೆ ನಮ್ಮೊಡನೆ ಮಾತಿನಲ್ಲಿ ಶ್ರೀಮಾನ್ ಬೇಂದ್ರೆಯವರು ತಮ್ಮ ಸವಿನುಡಿಯಲ್ಲಿ ಎಂದಿದ್ದರು:— "ಸಂಸ್ಕೃತಿಯು ಇನ್ನೂ ಉಂಟಾಗಿಲ್ಲವೆಂದು ನಂಬುವವರಲ್ಲಿ ನಾನೊಬ್ಬ. ಈಗಿರುವುದು ಬೇರೆ ಬೇರೆ ಜಾನಪದಗಳ ಪ್ರಕೃತಿಯು. ಭೂಗೋಲದ ಮೇರೆಗಳನ್ನು ಮೀರುವುದೇ

ಇತಿಹಾಸವು. ಇತಿಹಾಸದ ಮರ್ಯಾದೆಗಳನ್ನು ಮೀರಿ ಬಾಳುವುದೇ ಸಂಸ್ಕೃತಿಯು. ಆ ಬಾಳು ಇನ್ನೂ ಬರಬೇಕಾಗಿದೆ!" ಈ ಕವಿವಚನವೇ ಸತ್ಯವೆಂದು ತೋರುತ್ತದೆ. ಐತಿಹಾಸಿಕ ದೃಷ್ಟಿಯಿಂದ ಜನಾಂಗಗಳ ಪ್ರಕೃತಿಯೇ ಅವರವರ ಸಂಸ್ಕೃತಿಯಾಗಿದೆ.

ಇನ್ನು "ಆಧ್ಯಾತ್ಮಿಕ ಸಂಸ್ಕೃತಿ" ಎಂದರೇನು? ಇದೊಂದು ಹುರುಳಿಲ್ಲದ ಮಾತೆಂದು ನನ್ನ ಮತ. ಅಧ್ಯಾತ್ಮವು ಆತ್ಮವನ್ನು ಒಳಪಟ್ಟ ವಿಷಯವು. ಆತ್ಮವು ಮನುಷ್ಯಕೋಟಿಗೇ ಸಮಾನವಾದ–ಒಂದಾದ ಅಂಶವು. ಆದುದರಿಂದ ಆತ್ಮದ ಕುರಿತು ನಮ್ಮ ಭಾರತವು ಏನೇ ಸತ್ಯಗಳನ್ನು ಶೋಧಿಸಿದ್ದರೂ—ಸಿದ್ಧಾಂತಗಳನ್ನು ಮಂಡಿಸಿದ್ದರೂ— ಅವುಗಳ ಮೇಲೆ ಇಡಿ ಮನುಷ್ಯ-ಕೋಟಿಯ ಹಕ್ಕು ಇರುತ್ತದೆ. ಅಧ್ಯಾತ್ಮವು ಒಂದು ವಿದ್ಯೆ. ಎಲ್ಲ ವಿದ್ಯೆಗಳಲ್ಲಿ ಅದು ಮಿಗಿಲಿರಬಹುದು. ಆದರೂ ಅದು ವಿದ್ಯೆಯೆ. ವಿದ್ಯೆಯೆಂದಮೇಲೆ ಅದಕ್ಕೆ ಸೀಮೆ-ಸರಹದ್ದುಗಳು ಇರುವುದಿಲ್ಲ. ಸಂಸ್ಕೃತಿಯು ಸೀಮಾಬದ್ಧವಿರುತ್ತದೆ. ದೇಶ-ವಿಶಿಷ್ಟವಿರುತ್ತದೆ. ಆದುದರಿಂದ ಅಧ್ಯಾತ್ಮವು—ತತ್ತ್ವಜ್ಞಾನದಂತೆ, ಗಣಿತದಂತೆ, ವೈದ್ಯಕದಂತೆ— ಸಂಸ್ಕೃತಿಯ ಲಕ್ಷಣವಾಗಲಾರದು. ಗುರುತ್ವಾಕರ್ಷಣೆಯನ್ನು ಭಾಸ್ಕರಾಚಾರ್ಯನು ಕಂಡುಹಿಡಿದಿರಲಿ, ನ್ಯೂಟನನು ನೋಡಿಕೊಂಡಿರಲಿ; ಅದು ನಮ್ಮದೂ ಅಲ್ಲ, ಇಂಗ್ಲಿಷರದೂ ಅಲ್ಲ. ಸೃಷ್ಟಿಯ ನಿಯಮ. ವೈಜ್ಞಾನಿಕ ಶೋಧ-ಸಿದ್ಧಾಂತಗಳೆಲ್ಲ ಅಖಿಲ ಮಾನವತೆಯ ಸೊತ್ತು. ಅಧ್ಯಾತ್ಮವೂ ಹಾಗೆಯೆ. ಆದುದರಿಂದ "ಆಧ್ಯಾತ್ಮಿಕ ಸಂಸ್ಕೃತಿ"ಯೆಂದರೆ ವದತೋವ್ಯಾಘಾತವಾಗುವ ಮಾತು.

ಏಕೆಂದರೆ ಸಂಸ್ಕೃತಿಯು ಒಂದು ಜನಾಂಗದ ಜೀವನದ ರೀತಿಯಾಗಿರುತ್ತದೆ. ಈ ರೀತಿಯು ಸಾಮುದಾಯಿಕವಿರುತ್ತದೆ. ಸಮಾಜವು ತನ್ನ ಪರಿಸ್ಥಿತಿಯನ್ನು ಅಂಕೆಯಲ್ಲಿ ತಂದು, ಉಪಜೀವಿಕೆಯ ಉಪಾಯ-ಉಪಾಧಿಗಳನ್ನು ಅಳವಡಿಸಿಕೊಂಡು, ತನ್ನ ಬದುಕನ್ನು ಬೆಳಸಿಕೊಳ್ಳಲು ಅಣಿಯಾದ ರೀತಿಗಳೂ, ಅವುಗಳ ಪರಿಣಾಮಗಳಾಗಿ ಉಂಟಾದ ಉಪಯೋಗ ಉಪಭೋಗದ ವಿದ್ಯೆಗಳೂ ಸಂಸ್ಕೃತಿಯಲ್ಲಿ ಬರುತ್ತವೆ. ಆದುದರಿಂದ **ಸಂಸ್ಕೃತಿಯು ಅವಶ್ಯವಾಗಿ ಭೌತಿಕವಾಗಿರುತ್ತದೆ;** ಜಡವಸ್ತು ಸೌಕರ್ಯಗಳ ಬಳಕೆ-ಗಳಿಕೆಗಳ ಒಂದು ಮಾದರಿಯಾಗಿರುತ್ತದೆ. ಆದುದರಿಂದ ಅದು ಆಧ್ಯಾತ್ಮಿಕವಲ್ಲ. ಅಧ್ಯಾತ್ಮವು ಅತ್ಯಂತವಾಗಿ ವ್ಯಕ್ತಿಗತವಾದ ವಿಷಯವು. ಸಂಸ್ಕೃತಿಯು ಹಾಗಲ್ಲ. ಒಂದು ಸಮಾಜದ ವೇಷ, ಭಾಷೆ, ವಿಶಿಷ್ಟ ಆಹಾರ, ವಿವಿಧವಾದ ವಿಹಾರಗಳ ಪದ್ಧತಿಗಳು, ಬಾಳಿನ ಬಗೆಗಳಾದ ಭಿನ್ನಭಿನ್ನವಾದಿಕೆಗಳು, ನಡೆವಳಿಗಳು, ಪ್ರಾದೇಶಿಕವಾದ ದೇವತೆಗಳು, ಉತ್ಸವವಿಧಿಗಳು, ಇವೆಲ್ಲವನ್ನು ಪೀಳಿಗೆಯಿಂದ ಪೀಳಿಗೆಗೆ ತಿಳಿಸಿಹೇಳುವ ಭಾಷೆ, ಆ ಭಾಷೆಯಲ್ಲಿ ಪ್ರತಿಬಿಂಬಿತವಾಗುವ ಸಾಹಿತ್ಯರೂಪವಾದ ಆ ಸಮಾಜದ ಚಿತ್ರಗಳು– ಇವೆಲ್ಲ ಒಳಗೊಂಡು, ಸಂಸ್ಕೃತಿಯು ಸಾಮಾಜಿಕವಾಗಿ ಬೆಳೆಯುತ್ತದೆ. ಕೆಲವೊಂದೆ ಶ್ರೇಷ್ಠಿಗಳು ನಿರ್ಣಯಿಸಿ ನಿರ್ಮಾಣಮಾಡುವ ಯೋಜನೆಯಲ್ಲಿ ಸಂಸ್ಕೃತಿ–ಪ್ರಾಪಂಚಿಕ ಪರಿಸ್ಥಿತಿಯ ಪೆಟ್ಟುಕಟ್ಟುಗಳಿಂದ ಜನಜೀವನವು ತಾನಾಗಿ– ತಕ್ಕಂತೆ ಮಾರ್ಪಟ್ಟು ಸಂಸ್ಕೃತಿಯಾಗುತ್ತದೆ. ಆದ್ದರಿಂದ ಅದು ಆಧ್ಯಾತ್ಮಿಕವಿರುವುದಿಲ್ಲ. ಇನ್ನು ಪರಿಸ್ಥಿತಿಯು ಮನುಷ್ಯನ ಪ್ರಯತ್ನವನ್ನು ಮೀರಿ ಪ್ರಬಲವೂ ಪ್ರಖರವೂ ಆಗಿರುತ್ತಿದ್ದರೆ, ಅಂಥಲ್ಲಿಯ ಮನುಷ್ಯಸಮಾಜದ ಸ್ವಭಾವವು ದೈವವಾದಿಯಾಗಿ ಧಾರ್ಮಿಕವಾಗುತ್ತದೆ. ಆಗ ಸಮಾಜದ ಜಾಣರಾದ ಅಧಿಕಾರಿವರ್ಗದವರು, ಬಹುಸಂಖ್ಯಾಕರ ಈ ಪ್ರವೃತ್ತಿಯನ್ನು, ತಮಗೆ ಅನುಕೂಲವಾದ ಸಮಾಜರಚನೆಯನ್ನು ಭದ್ರವಾಗಿರಿಸಿಕೊಳ್ಳಲು ಧರ್ಮಸಂಸ್ಥೆಯನ್ನು ಸ್ಥಾಪಿಸಿ ಸಮಾಜಜೀವನವನ್ನು ಆಳುತ್ತಾರೆ. ಅಂದಿನ ಮಟ್ಟಿಗೆ ಸಮಾಜದ ಸಂಸ್ಕೃತಿಯು ಧರ್ಮಪ್ರಧಾನವಾಗುತ್ತದೆ. ಆದರೆ ಇಂತಹ ಅವಸ್ಥೆಯು ತಡೆಯುವುದಿಲ್ಲ. ಅನುಭವವು ಬೆಳೆದಂತೆ ಬುದ್ಧಿಕೌಶಲ್ಯವು ಬಲಿತಂತೆ— ಸಮಾಜವು ನೈಸರ್ಗಿಕ ಪರಿಸ್ಥಿತಿಯ ಭೀತಿಯನ್ನು ಮೀರಿ ಪ್ರಭಾವಿಯಾಗುತ್ತ ನಡೆದಂತೆ—ಧರ್ಮ

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಸರ್ವಮಾನ್ಯ !

ಚಳಿಗಾಲದಲ್ಲಿ ಶಕ್ತಿಯ ಬಗ್ಗೆ

ಸರ್ವೋತ್ಕೃಷ್ಟವೆಂದು

ರಕ್ತವರ್ಧಕವನ್ನೇ

ಎಲ್ಲ ಜನರು ಉಪಯೋಗಿಸುತ್ತಿರುವರು.



ಅಷ್ಟವರ್ಗ
ಚ್ಯವನಪ್ರಾಶ
●
ಸುವರ್ಣ
ಮಾಲಿನೀ ವಸಂತ
●
ಮಕರಧ್ವಜಗುಟಿ
●
ಮುಂತಾದ
ಶಕ್ತಿವರ್ಧಕ
ಔಷಧಗಳನ್ನು
ತರಿಸಿರಿ.

ಕರ್ನಾಟಕ ಕೇಂದ್ರ ಮಂಗಳಾಗಲ್ಲಿ, ಹುಬ್ಬಳ್ಳಿ.

ಸಂಸ್ಥೆಯ ಪ್ರತಿಷ್ಠೆ ಕುಗ್ಗುತ್ತ ನಡೆಯುತ್ತದೆ. ಆದರೆ ಸಮಾಜದ ಜೀವನದ ಆಧಾರವಾದ ಎಲ್ಲ ಉತ್ಪಾದನೆಯ ಸಾಮುಗ್ರಿಗಳ ಮೇಲಿನ ತಮ್ಮ ಒಡೆತನವನ್ನು ಸ್ಥಿರವಾಗಿರಿಸಿಕೊಳ್ಳಲು ಹೆಣಗಾಡುವ ಅಧಿಕಾರಾರೂಢ ವರ್ಗಗಳು, ಬಹುಜನ ಸಮುದಾಯವನ್ನು ತ್ಯಾಗಿಯಾಗಿಯೂ ತೃಪ್ತವಾಗಿಯೂ ಸೌಮ್ಯವಾಗಿಯೂ ಇಡುವಂತೆ ಅಧ್ಯಾತ್ಮದ ಪ್ರಚಾರವನ್ನು ಆರಂಭಿಸುವರು. ಪರಮಾತ್ಮನ ಕೋಪ-ಶಾಪಗಳ ಬೆದರಿಕೆಗೆ ಈಡಾಗದ ಜನಕ್ಕೆ ಮಂಕುಬಡಿಸಲು ಅಂತರಾತ್ಮನ ಅವತಾರವಾಗುವುದು, ಇಂತಹ ಆಧ್ಯಾತ್ಮಿಕ ವಿಚಾರಗಳನ್ನು ಪ್ರಚಾರದಲ್ಲಿ ತರುವ ಜನರಿಗೆ ಭೌತಿಕ ಭಾಗ್ಯ-ಭೋಗಗಳ ಬೇಸರಕ್ಕಿಂತಲೂ ಸಮಾಜದಲ್ಲಿ ಒದಗಬಹುದಾದ ಕ್ರಾಂತಿಯ ಬೆದರಿಕೆ ಹೆಚ್ಚು ಬಲವಾಗಿರುತ್ತದೆ. ಹೀಗೆ ನಮ್ಮ ಸಂಸ್ಕೃತಿಯು ಆಧ್ಯಾತ್ಮಿಕವಾಗಿದೆಯೆಂದು ನುಡಿಯುವವರು ಧೂರ್ತರಾಗಿರುತ್ತಾರೆ; ಅದನ್ನು ನಂಬುವವರು ಮೂರ್ಖರಾಗಿರುತ್ತಾರೆ.

ಇಂಥವರಲ್ಲಿ ಕೆಲವು ದೂರದರ್ಶಿಗಳು, ಹಿಂದೆ ಹೇಳಿದಂತೆ, ಪೂರ್ವ-ಪಶ್ಚಿಮ ಸಂಸ್ಕೃತಿಗಳಲ್ಲಿ ಸಮನ್ವಯ ಮಾಡಬೇಕೆಂದು ಸಾರುತ್ತಿರುತ್ತಾರೆ. ಆದರೆ ಇವರು ಬಯಸುವ ಸಮನ್ವಯದ ಕಾರ್ಯಕ್ರಮವು ಸೋಜಿಗದ್ದಾಗಿರುತ್ತದೆ. ಇಂದಿನ ಪಾಶ್ಚಿಮಾತ್ಯ ಸಂಸ್ಕೃತಿಯು ಬಂಡವಾಳಗಾರಿಕೆಯ ಸಂಸ್ಕೃತಿಯಾಗಿದೆ. ಅದರಲ್ಲಿ ಎರಡು ಅಂಶಗಳು ಒಳಿತಾಗಿರುತ್ತವೆ. ಒಂದು, ಅದು (ಬಂಡವಾಳಗಾರಿಕೆಯು) ಜೀರ್ಣ-ಶೀರ್ಣವಾದ ಹಿಂದಿನ ಸಮಾಜವ್ಯವಸ್ಥೆಯನ್ನು ನಷ್ಟಮಾಡುತ್ತದೆ. ಆದರೆ ಈ ಒಳಿತಿನ ಅಂಶವು ನಮ್ಮ ಸಂಸ್ಕೃತಿಗೆ ಹೊಂದಿಕೊಳ್ಳಲಾರದು. ಎರಡನೆಯ ಒಳಿತೇನೆಂದರೆ: ಯಾಂತ್ರಿಕ ಸೌಕರ್ಯಗಳ ಮೂಲಕ ವಿಪುಲವಾಗಿ ವಿವಿಧವಾಗಿ ಜೀವನದ ಆವಶ್ಯಕತೆಗಳನ್ನು ಪೂರಯಿಸಿ ಉಳಿಯುವಷ್ಟು ಸರಕು-ಸೊತ್ತುಗಳನ್ನು ಉಂಟು ಮಾಡುವುದು. ಇದನ್ನು ಕುರಿತೂ ಆಧ್ಯಾತ್ಮವಾದಿಗಳು ಡಾಂಭಿಕವಾದ ತಿರಸ್ಕಾರವನ್ನೇ ಕಾಣಿಸುತ್ತಾರೆ. ಬಂಡವಾಳಗಾರಿಕೆಯ ದೋಷವೆಂದರೆ ಎರಡು: ಉಂಟಾದ ಸೊತ್ತೆಲ್ಲ ಕೆಲವೆ ಒಡೆಯರ ಕೈಯಲ್ಲಿ ಶೇಖರಿಸುತ್ತ ನಡೆಯುವುದು. ಇದಕ್ಕೆ ಕಾರಣ ಸಾಮುದಾಯಿಕ ಉತ್ಪಾದನೆಯ ಮೇಲೆ ಇರುವ ವೈಯಕ್ತಿಕ ಒಡೆತನ. ಇದನ್ನು ನಮ್ಮ ಸಮನ್ವಯವಾದಿಗಳು ಆನಂದದಿಂದ ಸ್ವಾಗತಿಸುತ್ತಾರೆ! ವೈಯಕ್ತಿಕ ಒಡೆತನವು ಇವರಿಗೆ ಪವಿತ್ರವಾಗಿದೆ. ಶ್ರೀಮಂತರೂ ಸಂಸ್ಥಾನಿಕರೂ ಇವರಿಗೆ ಅವಶ್ಯರು. ಇಷ್ಟೇ, ಇಂಥವರು ದಾನಪುಣ್ಯದಿಂದ ಬಡವರ ಪಾಲಿಗೆ ಭಾಗ್ಯದೇವತೆಗಳಾಗಬೇಕು! ಎರಡನೆಯ ದೋಷವು ಲಾಭಗೂಳಿತನವು. ಇದನ್ನೂ ನಮ್ಮ ಸಮನ್ವಯಕಾರರು ನಿಂದಿಸುವುದಿಲ್ಲ. ಸಮನ್ವಯಕಾರರ ಆಧ್ಯಾತ್ಮಿಕ ಆಂದೋಲನಕ್ಕೆ ಆಧಾರವಾದ ಕೊಡುಗೈ ದೊರೆಗಳಾದ ಪತ್ತಕ ಶ್ರೇಷ್ಠಿಗಳ ಗಿರಣಿಗಳೂ ಕಾರಖಾನೆಗಳೂ ತಮ್ಮ ವ್ಯವಸಾಯದಲ್ಲಿ ಪ್ರಚಂಡ ಆದಾಯವನ್ನು ಎತ್ತಿಹಾಕುತ್ತವೆ. ಅಂತಹ ಉತ್ಪೀಡನೆಯ ಉತ್ಪನ್ನದ ಮೇಲೆಯೆ ಧನಿಕರು ದಾನಶೂರರೂ ಧರ್ಮವೀರರೂ ಆಗುತ್ತಾರೆ. ಇಂತಹವರ ಉಚ್ಚಾಟನೆಯು ಆಧ್ಯಾತ್ಮವಾದಕ್ಕೆ ಎಂದೆಂದಿಗೂ ಮಾನ್ಯವಿಲ್ಲ. ಬಡವರ ಆತ್ಮೋದ್ಧಾರವು ಸೇವಾಧರ್ಮದಲ್ಲಿದೆ, ಸಮಾಧಾನದಲ್ಲಿದೆ. ಬಲ್ಲಿದವರ ಉದ್ಧಾರವು ದಯಾಧರ್ಮದಲ್ಲಿದೆ, ದಾನದಲ್ಲಿದೆ. ದಯನೀಯವಾದ ದೀನಜೀವಿಗಳ ವರ್ಗವು ಹೆಚ್ಚಾದಂತೆ ದಯಾಧರ್ಮದ ಪುಣ್ಯಸಂಧಿಯು ಹೆಚ್ಚಲ್ಲವೆ? ಆದುದರಿಂದಲೆ ನಮ್ಮ ಸಂಸ್ಕೃತಿಯ ಆಧ್ಯಾತ್ಮಿಕತೆಯ ಪೋಷಣೆಗಾಗಿ, ಪಾಶ್ಚಾತ್ಯ ಸಂಸ್ಕೃತಿಯಿಂದ ಅದರ ಎರಡು ದೋಷಗಳನ್ನಷ್ಟೆ ಆಯ್ದು ನಮ್ಮಲ್ಲಿ ಅಡಕ ಮಾಡಿಕೊಳ್ಳಲು ಅಷ್ಟೊಂದು ಆತುರರಾಗಿದ್ದುದರಲ್ಲಿ ಆಶ್ಚರ್ಯವೇನು! ಆದರೆ ಇದೆಲ್ಲ ಆಧ್ಯಾತ್ಮವೇ?

ವಿ. ಸೂ : ಈ ಲೇಖನಾಂಕಗಳಲ್ಲಿಯ ವಿಚಾರಗಳನ್ನು ಸಮಂಜಸರೀತಿಯಲ್ಲಿ ಖಂಡಿಸಿ ಬರೆವ ಲೇಖನಗಳಿಗೂ ಅವಕಾಶ ಎಡೆಕೊಡಲಾಗುವುದು.

—ಸಂ. ಜ.

ನಿರಾಶೆ

ಶ್ರೀ. ಜಿ. ಆರ್. ಹೆಗಡೆ, ಮುಂಬೈ

★

ಬೇಸಗೆಯ ಬಿರುಬಿಸಿಲ ಬೇಗೆಯಲಿ ಬೆಂದು ಬೆಂ-
ಡಾಗಿ ಬಾಯ್ಬಿಡುತಿಹಳು ಭೂದೇವಿ. ನಿಷ್ಕರುಣೆ
ಆಗಸದ ಅರಸು ಕಣ್ತೆರೆಯದಿಹ—ಏವೆಯು ಗತಿ
ಆಸೆಗಾಸರವನೀಯುವುದು. ಬರಿ ಗರಿಮೋಡ
ತನಗಾಗಿ ಕಾದಿರ್ದ ಹೊಲ-ಹಳ್ಳಗಳ ಬಿಟ್ಟು
ಮಾರುತನ ಸಂಗದಿ ದಿಗಂಗನೆಯ ಬೆನ್ನಟ್ಟಿ,
ವ್ಯರ್ಥ ಪ್ರಣಯಕೆ ಓಡಿ ಆಯಾಸಗೊಳ್ಳುವುದು.
ಆಸೆಬಯಲಿಸಲಾಡುವುದು ನಿರಾಶೆಯು ಗಾಳಿ!
ಇಂದಿಲ್ಲಿ ಬೆಳಕಿಹುದು, ನಾಳೆ ಇರುವುದೆ ಏನು?
ಉಬ್ಬಸದ ಬಸಿಗೆಯೊಲು, ನಗೆಯ ಹುಮ್ಮಸ್ಸಿನೊಲು,
ಏರಿಕೆಯ ಕಾಲದೊಲು ಹಾರಿಕೆಯ ಹವಣದೊಲು,
ಮುಂದಿರುವ, ಇರಬಲ್ಲ, ಇಹನೆಂದು ಬೆದರಿಸುವ,
ಜೀವನದ ಕಗ್ಗತ್ತಲೆಯು ವಿಕಾರಾಕಾರ
ಗಳಿಂ ತುಂಬಿ ನಿಲ್ಲುವುದು ಕಣ್ಮುಂದೆ ನಿರಾಶೆ!

ಬಲೀಂದ್ರ

ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು.

★

'ಬಲಿ' ಎಂಬ ಪದವು ಸಾರ್ಥಕವಾಯ್ತು ನಿನ್ನಿಂದ
ಬಲಿರಾಜ! ತನ್ನೊಡಲ ಬೇಳ್ದೊಂಡ ವೀರಕಲಿ!
ನಿನ್ನಿಂದೆ ಬೆಳಗಿತಾ ಕ್ರತು ಪ್ರಖರ ತೇಜದಲಿ!
(ಅಸುರಗುರು ತಡೆಗಟ್ಟಲಾದುದೇನದರಿಂದ?)
ಅಸುರರಿಪು ಕೈತವದಿ ಮೋಸಗೈದನೆ ನಿನಗೆ?
ಹುಚ್ಚುಮಾತು ಬಲೀಂದ್ರ! ನೀ ಸುರರನಾಳ್ದವನ
ಪದವಿಗೆಳಸಿರಲು, ಮೋಕ್ಷಾಸುರಪನಾಳ್ದವನ
ವೈಕುಂಠಪದವಿಯನೆ ಒಸೆದಿತ್ತನೈ ನಿನಗೆ!
ಹರಿಯೊಸೆದು,—ಹರಿಕಾರನಾಗಿ,—ಬಾಗಿಲಕಾಯೆ,
ಪಾತಾಳವಾದೊಡೇಂ, ವೈಕುಂಠಕದು ಕೊರೆಯೆ?
ಇಂದ್ರಪದವಿಯು ಇದರ ಮುಂದೆ ಅದು ಬರಿ ಛಾಯೆ?
ನಿನ್ನ ದೃಢತೆಗೆ ಎಣೆಯೆ? ಮೋಕ್ಷ ಭಕ್ತಿಗೇಂ ದೊರೆಯೆ?
ನಿನ್ನ ಭಕ್ತಿಗೆ ಮೆಚ್ಚಿ, ಹರಿ ದ್ವಾರದಲಿ ರಕ್ಷೆ—
ಯಾಗಿಹನು! ನಿನ್ನ ಮೈಮೆಗೆ ಇದೆ ಮಹಾಸಾಕ್ಷಿ!

ನಡುಗಡಲು

ಶ್ರೀ. ನರಸಿಂಹ ಕುಲಕರ್ಣಿ

★

ದೃಷ್ಟಿಸೀಮೆಯ ದಾಟಿ
ಸಾಗಿಹುದು, ಮುನ್ನೀರು
ಮುಗಿಲಂಚ ಸೇರಿಹುದು.

ಕಣ್ಣಕ್ಕಿ ದಿಕ್ಕೆಲ್ಲ-
ವೀಕ್ಷಿಸಲು ಜಗವೆಲ್ಲ
ಜಲವಾಗಿ ಈಸುವುದು.

ತೂರಿ ಬರುತಿಹ ತೆರೆಯು
ಕಾಲರಕ್ಕಸನಂತೆ
ಅಪ್ಪಳಿಸಿ ಬರುತಿಹುದು.

ಕಡಲ ಬುಡವನೆ ಬಳಿದು
ನೆಗೆದು ಮೇಲೆದ್ದು ಬರೆ
ಸೃಷ್ಟಿಯನೆ ಪ್ರಳಯದಲಿ,

ಸೂಕುಮಾರ್ಭಟೆಯಿಂದ
ಉರುಳುರುಳಿ ನೊರೆಯಾಗಿ
ಧಡವನಪ್ಪಳಿಸುವುದು.

ಕಮಲದಲಿ ಕೋಮಲತೆ
ನೆಟ್ಟವನು ನಡುಗಡಲಿ-
ನುಗ್ರತೆಯ ನಿಲಿಸಿಹನೆ?

ಉಚಿತ ರೈಲ್-ಟಿಕೀಟು

★

ಶ್ರೀ. ಸು. ತ. ಪಪ್ಪು ಎಂ.ಎ. ಪುಣೆ

ಹಣ ಉಳಿಸಿಕೊಳ್ಳಬೇಕೆಂಬ ಹಂಬಲು ವಸಂತರಾಯರಂಥವರಿಗೂ ಇರಬೇಕೆ? ಅವರಿಗೆ ಪುಕ್ಕಟೆ ಟಿಕೀಟು ಸಿಕ್ಕಿರದಿದ್ದರೆ ಪಾಂಡವರ ವನವಾಸದುಃಖದಲ್ಲಿ ಪಾಲುಗಾರರಾಗುವ ಸಂದರ್ಭ ನಮಗೆಲ್ಲಿ ಸಿಕ್ಕುತ್ತಿದ್ದಿತು?

★

ಜಾನೇವರಿ ತಿಂಗಳ ಎರಡನೆಯ ತಾರೀಖು. ಮಧ್ಯಾಹ್ನದ ಹನ್ನೆರಡು ಗಂಟೆಯ ಪ್ಯಾಸಿಂಜರ್ ರೈಲಿನಿಂದ ನಾನು ಹುಬ್ಬಳ್ಳಿಯಿಂದ ಬೊಂಬಾಯಿಗೆ ಹೊರಟೆನು. ರೇಲ್ವೆಯ ನಿಲ್ದಾಣದಲ್ಲಿ ತುಂಬಾ ಗಲಾಟೆ. ರೈಲಿನಲ್ಲಿಯೂ ಹೆಚ್ಚಾದ ಜನಸಂದಣಿ. 'ಕ್ರಿಸ್ತಮಸ್' ಹಬ್ಬದ ರಜಾ ಮುಗಿದು, ಮರುದಿವಸವೇ ಎಲ್ಲ ಶಾಲೆ-ಕಾಲೇಜು, ಕಚೇರಿ-ಕಟ್ಟೆಗಳು ತೆರೆಯುತ್ತಿದ್ದವು. ಆದುದರಿಂದ ರೈಲಿನಲ್ಲಿ ಈ ತರದ ತಿಕ್ಕಾಟ, ನುಗ್ಗಾಟ. ರೈಲು ಹೊರಡಲು ನಾಲ್ಕು ನಿಮಿಷಗಳು ಉಳಿದಿದ್ದವು. ನಿಲ್ದಾಣದಲ್ಲಿಯ ಜನಪ್ರವಾಹವು ಧಾವಿಸುತ್ತ ರೈಲಿನ ಕಡೆಗೆ ಬರಹತ್ತಿತ್ತು. ಮೊದಲನೆಯ ಗಂಟೆಯಾಗಿತ್ತು. ಗಾರ್ಡ್, ಅಂಡರಗಾರ್ಡ್, ಡ್ರಾಯವ್ಹರ್ ಇವರೆಲ್ಲರೂ ರೈಲನ್ನು ಹೊರಡಿಸಲು ಸಜ್ಜರಾಗಿ ನಿಂತಿದ್ದರು. ಇಷ್ಟರಲ್ಲಿಯೆ ಒಬ್ಬ ರಾಯರು ದಡದಡ ಓಡುತ್ತ ಬಂದು, ನಾನು ಕುಳಿತ ಬಂಡಿಯಲ್ಲಿ ಒಳನುಗ್ಗಲು ಯತ್ನಿಸಿದರು. ಬಂಡಿಯ ಬಾಗಿಲಲ್ಲಿ ಜನ ಕಿಕ್ಕಿರಿದು ನಿಂತಿದ್ದರು. ಬಂಡಿಯ ಒಳಗಂತೂ ಒಬ್ಬರ ಮೇಲೊಬ್ಬರು ಏರಿ ನಿಂತಿದ್ದರು. ರಾಯರ ಹೆಗಲ ಮೇಲೆ ಒಂದು ದೊಡ್ಡ ಟ್ರಂಕು; ಒಂದು ಕೈಯಲ್ಲಿ "ಹೋಲ್ಡ್ ಆಲ್ (Hold All)" ಮತ್ತೊಂದು ಕೈಯಲ್ಲಿ ಫಲಾಹಾರದ ಡಬ್ಬಿ ಮತ್ತು ನೀರಿನಿಂದ ತುಂಬಿದ ತಿರುಗಣಿ ತಂಬಿಗೆ. ರಾಯರು ನಮ್ಮ ಬಂಡಿಯ "ಫುಟ್‌ಬೋರ್ಡ್"ನ ಮೇಲೆ ಏರಲು, ಬಾಗಿಲಲ್ಲಿ ನಿಂತ ಜನ "ಇಲ್ಲಿ ಜಾಗ ಇಲ್ಲ, ಮುಂದಿನ ಡಬ್ಬಿಯಲ್ಲಿ ನೋಡ್ರಿ; ಅಲ್ಲಿ ಯಾರೂ ಇಲ್ಲ!" ಎಂದರು. ಇಷ್ಟರಲ್ಲಿ ಎರಡನೆಯ ಗಂಟೆ ಬಾರಿಸಿತು; ಗಾರ್ಡ್ ಸೀಟಿ ಊದಿದ; ಎಂಜಿನ್ "ಕಿರ್" ಎಂದು ಕೂಗಿತು. ಗಾರ್ಡನು ರಾಯರನ್ನು ಒಳಗೆ ದಬ್ಬಿ ಬಾಗಿಲನ್ನಿಕ್ಕಿದನು. ರಾಯರ ಹೆಗಲ ಮೇಲಿನ ಟ್ರಂಕು ಒಬ್ಬ ಯುವತಿಯ ಪಾದದ ಮೇಲೆ ಬಿದ್ದಿತು. "ಏನು ರಾಯರೇ, ನಿಮಗೆ ಕಣ್ಣು ಕಾಣುವುದಿಲ್ಲೇನು?" ಎಂದು ಒಬ್ಬ ಮುದುಕಿಯು ಅರಚಿದಳು. ಮತ್ತೊಬ್ಬನು "ರಾಯರೇ, ನಮ್ಮ ಮೇಲೆ ಬೀಳಬೇಡ್ರಿ. ಇದು ನೋಡ್ರಿ, ನಿಮ್ಮ ಫಲಾಹಾರದ ಡಬ್ಬಿ ನಮ್ಮ ಮುಗುವಿನ ಮೋರೆಗೆ ಬಡಿಯುತ್ತಿದೆ. ಮುಂದೆ ಸರಿಯಬಾರದೆನ್ರೀ!" ಎಂದನು. ರಾಯರು ಯಾರಿಗೂ ಉತ್ತರವನ್ನೀಯದೆ ಬಂಡಿಯಲ್ಲಿ ಅತ್ತಿತ್ತ ನೋಡಹತ್ತಿದರು. ಅವರು ಜರತಾರಿ ರುಮಾಲ ಸುತ್ತಿದ್ದರು; ಮೈಮೇಲೆ ಊಲನ್ ಕೋಟು; ಕಾಲಲ್ಲಿ ಮದ್ರಾಸಿ ಚಪ್ಪಲಿ; ಮೂಗಿನ ಮೇಲೆ ಒಂದು ವಿಶಾಲವಾದ ದಪ್ಪ ಕನ್ನಡಕ. ಜನರಲ್ಲಿ ನುಗ್ಗುತ್ತ, ಅವರಿಂದ ಬೈಸಿಕೊಳ್ಳುತ್ತ, ರಾಯರು ಕೊಂಚ ಮುಂದೆ ಬಂದರು. ನಾನು ಇವರ ಗುರುತನ್ನು ಹಿಡಿದೆ. ಇವರು ನಮ್ಮ ವಸಂತರಾಯರು; ನನ್ನ ಮಿತ್ರರು. ಚಿಕ್ಕಂದಿನಿಂದ ನನ್ನ ಜೊತೆಯಲ್ಲಿ ಶಾಲೆ-ಕಾಲೇಜುಗಳಲ್ಲಿ ವ್ಯಾಸಂಗಮಾಡಿದವರು. ಇಷ್ಟೇ ಅಲ್ಲ, ಸದ್ಯ ಸರ್ಕಾರಿಯ ಒಂದು ದೊಡ್ಡ ಹುದ್ದೆಯ ಮೇಲೆ ಇದ್ದವರು. ನನ್ನನ್ನು ಕಂಡು ರಾಯರಿಗೆ ಜೀವದಲ್ಲಿ ಜೀವ ಬಂದು "ಏನು ಸ್ವಾಮಿ, ಇತ್ತೆಲ್ಲಿ?" ಎಂದು ನನ್ನನ್ನು ಕೇಳಿದರು. ನಾನು "ಬೊಂಬಾಯಿಗೆ ಹೊರಟಿದ್ದೇನೆ" ಎಂದೆನು. ರಾಯರು ಜನರನ್ನು ನೂಕುತ್ತ ಸರಿಸುತ್ತ ನನ್ನ ಹತ್ತಿರ ಬಂದರು. ರಾಯರ ಸ್ಥಿತಿಯನ್ನು ನೋಡಿ ನನಗೆ ಸ್ವಲ್ಪ ನಗು ಬಂತು. ರಾಯರಿಗೆ ಸ್ವಲ್ಪ ಜಾಗಮಾಡಿಕೊಟ್ಟೆನು. ಬಳಿಕ "ವಸಂತರಾವ್, ತಮ್ಮ ಪ್ರಯಾಣ ಎತ್ತ ಕಡೆಗೆ?" ಎಂದು ನಾನು ಕೇಳಿದೆನು. ವಸಂತರಾಯರು "ಬೊಂಬಾಯಿಗೆ ಹೊರಟಿದ್ದೇನೆ. ನಾಳೆ ಹನ್ನೊಂದು ಗಂಟೆಗೆ ಕಚೇರಿಯಲ್ಲಿ ಇರಲಿಕ್ಕೇ ಬೇಕು" ಎಂದರು. ಇಷ್ಟರಲ್ಲಿ ಧಾರವಾಡ ಸ್ಟೇಶನ್ ಬಂದಿತು. ಕೆಲವರು ಇಳಿದರು. ರಾಯರಿಗೆ ಕೂಡ್ರಲು ಚೆನ್ನಾಗಿ ಸ್ಥಳ ದೊರೆಯಿತು. ರೈಲು ಮುಂದೆ ಸಾಗಿತು.

(೨)

ನಾನು ರಾಯರ ಕ್ಷೇಮಸಮಾಚಾರ ಕೇಳಲಾರಂಭಿಸಿದೆನು:

ನಾನು:— ಇದೇನು ವಸಂತರಾವ್, ಸೆಕಂಡ್ ಕ್ಲಾಸ್ ಡಬ್ಬಿಯಲ್ಲಿ ಕೂಡ್ರುವುದನ್ನು ಬಿಟ್ಟು, ಕಾಲು ಸಹ ಇಡಲು ಸ್ಥಳವಿಲ್ಲದ ಮೂರನೆಯ ತರಗತಿಯ ಡಬ್ಬಿಯಲ್ಲಿ ತಾವು ಯಾಕೆ ಬಂದು ಸೇರಿರಬಹುದು?

ವಸಂತರಾಯ:—(ಯಾರಿಗೂ ಕೇಳದಂತೆ ನನ್ನ ಕಿವಿಯಲ್ಲಿ) ನಮ್ಮ ಪಕ್ಕದ ಮನೆಯಲ್ಲಿರುವ ಶಾನುಭೋಗರ ಶೀನಪ್ಪನವರು, ನಾನು ಬೊಂಬಾಯಿಗೆ ಹೋಗುವವನಿದ್ದೇನೆಂದು ಕೇಳಿ, ನನಗೆ ಪುಣೆಯ ಮಟ್ಟಿಗೆ ಉಪಯೋಗಕ್ಕೆ ಬರುವ ತಮ್ಮಲ್ಲಿದ್ದ "ರಿಟರ್ನ್ ಟಿಕೀಟ್"ನ ಅರ್ಧಭಾಗವನ್ನು ತಂದು ನನ್ನ ಕೈಯಲ್ಲಿಟ್ಟರು. ನಾನು ಅದನ್ನು ಓದಿ ನೋಡಿದೆನು. ನಾಳೆಯ ಮಧ್ಯರಾತ್ರಿಯಲ್ಲಿ

ಪೂಣೆ ಸ್ಟೇಶನಿಗೆ ತಲುಪಿದರೆ ನಡೆಯುವಂತಿತ್ತು. ಅಂದಮೇಲೆ ಸೆಕಂಡ್ ಕ್ಲಾಸ್ ಡಬ್ಬಿಯಲ್ಲಿ ಪ್ರವಾಸಮಾಡಿ ಹೆಚ್ಚು ರೊಕ್ಕವನ್ನು ರೈಲಿಗೆ ಯಾಕೆ ಬಡಿಯಬೇಕು ?—ಈ ರೀತಿಯಾಗಿ ಯೋಚನೆ ಮಾಡಿ, ಅವಸರವಸರದಿಂದ ಮನೆಯಿಂದ ಹೊರಟು “ ಥರ್ಡ್‌ಕ್ಲಾಸ್ ” ಡಬ್ಬಿಯಲ್ಲಿ ಸೇರಿದೆನು.

ನಾನು:— ತಮಗೆ ಈ ಟಿಕೀಟು ಉಚಿತ ಸಿಕ್ಕಂತಾಯಿತು !

ವಸಂತರಾಯ:— ಹೌದು, ಹೌದು! ಸ್ವಲ್ಪ ತೊಂದರೆಯನ್ನು ಅನುಭವಿಸಿದರೂ ರೊಕ್ಕ ಉಳಿಯುವುದಿಲ್ಲವೆ ?

ಇಷ್ಟರಲ್ಲಿ ನಮ್ಮ ರೈಲು ಅಳ್ನಾವರ ಸ್ಟೇಶನಿಗೆ ಬಂದಿತು ; ಮೂರು ನಾಲ್ಕು ಮಂದಿ ಖಾಕಿ “ ಸೂಟು ” ಹಾಕಿದ ದೊಡ್ಡ ‘ ಆಫೀಸರರು ” ಪ್ಲ್ಯಾಟಫಾರ್ಮಿನ ಮೇಲೆ ಬಂದರು. ಚಪರಾಶಿಗಳು ಅವರ ಸಾಮಾನುಗಳನ್ನೆಲ್ಲಾ ಫಸ್ಟ್‌ಕ್ಲಾಸ್ ಕ್ಯಾರೇಜಿನಲ್ಲಿ ಇಟ್ಟರು. ಆಫೀಸರರನ್ನು ಕಂಡೊಡನೆ, ವಸಂತರಾಯರು “ ಅಯ್ಯೋ, ಸತ್ತೆ!” ಎಂದವರೇ ನಾವು ಕುಳಿತ “ ಸೀಟಿ”ನ ಬುಡದಲ್ಲಿ ಅಡಗಿದರು. ಗಾಡಿಯು ಸ್ಟೇಶನಿನಿಂದ ಹೊರಡಲು, ಮತ್ತೆ ಸೀಟಿನ ಮೇಲೆ ಕುಳಿತರು.

ನಾನು:— ವಸಂತರಾಯರೇ, ಇದೇನು ವಿಲಕ್ಷಣ? ಇಷ್ಟು ಹೊತ್ತು ಸೀಟಿನ ಬುಡದಲ್ಲಿ ಯಾಕೆ ಸೇರಿದ್ದೀರಿ ?

ವಸಂತರಾಯ:— ಇದೇ ಗಾಡಿಯಲ್ಲಿ, ನನ್ನ ಮೇಲಿನ ಮೂವರು ಮೇಲಧಿಕಾರಿಗಳು ಫಸ್ಟ್‌ಕ್ಲಾಸ್ ಕ್ಯಾರೇಜಿನಲ್ಲಿ ಸೇರಿದರು. ಅವರು ನನ್ನ “ ಡಿ. ಎಫ್. ಓ., ಆರ್. ಎಫ್. ಓ., ಎಸ್. ಎಫ್. ಓ.,” (D. F. O., R. F. O., S. F. O.,) ಏನು ಹೇಳಲಿ, ನನ್ನ ಫಜೀತಿ !

ನಾನು:— ಅವರನ್ನು ಕಂಡು, ತಾವು ಜಿಂಕೆಯ ಮರಿಯಂತೆ ಇಷ್ಟು ಬೆದರಬೇಕೇ ?

ವಸಂತರಾಯ:— ನಿಮಗೆ ನಮ್ಮ ಸರಕಾರಿ ನಿಯಮಗಳೂ, ಉಪಚಾರಗಳೂ, ತೊಂದರೆಗಳೂ ಗೊತ್ತಿಲ್ಲವೆಂದು ತೋರುತ್ತದೆ. ನನ್ನಂತಹ ದೊಡ್ಡ ಸಂಬಳದ ಆಫೀಸರನನ್ನು ನನ್ನ ಮೇಲಧಿಕಾರಿಗಳು ಥರ್ಡ್‌ಕ್ಲಾಸ್ ಡಬ್ಬಿಯಲ್ಲಿ ಕಾಣಲು ನನ್ನ ಗತಿ ಏನಾದೀತು ? ಇದಲ್ಲದೆ ನನ್ನ ಹುಬ್ಬೆಗೊಪ್ಪುವ “ ಆಫೀಸಿಯಲ್ ಡ್ರೆಸ್ ”ನಲ್ಲಿ ನಾನಿಲ್ಲ ! ನನ್ನ ಮೇಲಧಿಕಾರಿಗಳು ಇಲ್ಲಿಯ ಅರಣ್ಯದಲ್ಲಿಯ ಸಂಚಾರವನ್ನು ತೀರಿಸಿಕೊಂಡು, ಜೊಂಬಾಯಿಗೆ ಹೊರಟಿರಬಹುದು. ಇನ್ನು ಅವರಿಗೆ ಕಾಣದಂತೆ ಪೂಣೆ ಸ್ಟೇಶನಿನವರೆಗೆ ಪ್ರವಾಸ ಮಾಡುವುದು ಬಹುಕಷ್ಟ !

ನಾನು:— ತಮ್ಮಂತಹ ದೊಡ್ಡ ಸಂಬಳದ ಆಫೀಸರರು, ತಮ್ಮ ಮೇಲಧಿಕಾರಿಗಳನ್ನು ಕಂಡು ಈ ಪರಿಯಾಗಿ ಭಯಭೀತರಾಗಬೇಕೆ?

ವಸಂತರಾಯ:— ನಿಮಗೆ ನಾನು ದೊಡ್ಡ ಆಫೀಸರನಾದರೂ, ನನ್ನ ಮೇಲಧಿಕಾರಿಗಳ ಮುಂದೆ ಜಿಕ್ಕಿನ ಮರಿಯಂತೆ ಮೆತ್ತಗಾಗಿ ನಮ್ರತನದಿಂದ ನಡೆಯಬೇಕಾಗುವುದು !

ಇಷ್ಟರಲ್ಲಿ ರೈಲು ಲೊಂಡಾ ಸ್ಟೇಶನಿನ ಹತ್ತಿರ ಬಂದಿತು. ವಸಂತರಾಯರು “ ಮುಂದೆ ಬರುವ ಸ್ಟೇಶನ್ ಯಾವುದು ? ” ಎಂದು ಕೇಳಿದರು. ನಾನು “ ಲೊಂಡಾ ಸ್ಟೇಶನ್ ” ಎಂದು ಉತ್ತರವನ್ನಿತ್ತೆನು. ವಸಂತರಾಯರು “ ಕಠಿಣ ಪ್ರಸಂಗ ಬಂದಿತು ! ಗಾಡಿ ಇಲ್ಲಿ ಇಪ್ಪತ್ತು ನಿಮಿಷ ನಿಲ್ಲುವುದು. ನನ್ನ ಆಫೀಸರರು ಪ್ಲ್ಯಾಟ್ ಫಾರ್ಮಿನ ಮೇಲೆ ತಿರುಗಾಡುವರು. ನನಗಂತೂ ಹೊರಗೆಹೋಗುವುದು ಅಸಾಧ್ಯ. ಗಾಡಿಯಲ್ಲಿ ಕೂಡ್ರುವುದಾದರೂ ಅಷ್ಟೇ ಕಷ್ಟ ! ಏಕೆಂದರೆ ಲೊಂಡಾ ಜಂಕಷನ್ ಸ್ಟೇಶನ್ ! ಇಲ್ಲಿ ಟಿಕೀಟ್ “ ಚಕ್ಕಿಂಗ್ ” ಆಗುವುದು. ಇದು ನಾನು ಕೊಂಡು ತಂದ ಟಿಕೀಟಲ್ಲ ! ಏನಾದರೂ ತೊಂದರೆ ಉಂಟಾಗಬಹುದೆಂದು ಅಂಜಿಕೆ ! ” ಎಂದರು.

ರೈಲು ಲೊಂಡಾ ಸ್ಟೇಶನಿಗೆ ಬಂದು ತಲುಪಿತು. ವಸಂತರಾಯರ ಮೇಲಧಿಕಾರಿಗಳು ತಮ್ಮ ಜೊಣ್ಣದ ಕಿಶೆಯಲ್ಲಿ ಕೈ ಹಾಕಿಕೊಂಡು, ಬಾಯಲ್ಲಿ ಚಿರೂಟ್(Cheroot) ಇಟ್ಟುಕೊಂಡು ಹೊಗೆ ಬಿಡುತ್ತ ಪ್ಲ್ಯಾಟ್‌ಫಾರ್ಮಿನ ಮೇಲೆ ಸಂಚರಿಸಲಾರಂಭಿದರು. “ ಛಿದ್ರೇಷ್ವನರ್ಥಾ ಬಹುಲಾ ಭವಂತಿ ” ಎಂಬ ಗಾದೆಯ ಮಾತು ನಿಜ. ಇಷ್ಟರಲ್ಲಿ ಟಿಕೀಟ್ ಚೆಕ್ಕರು” “ಟಿಕೆಟ್ ಟಿಕೆಟ್” ಎಂದು ಡಬ್ಬಿಯನ್ನು ಬಡಿಯುತ್ತ, ನಮ್ಮ ಹಿಂದಿನ ಡಬ್ಬಿಯಲ್ಲಿ ಸೇರಿದನು ! ಇಂತಹ ಗಂಭೀರ ಪರಿಸ್ಥಿತಿಯು ಒದಗಲು, ವಸಂತರಾಯರು ನಮ್ಮ ಡಬ್ಬಿಯ ಪಾಯಖಾನೆಯಲ್ಲಿ ಹೊಕ್ಕರು ! ರೈಲು ಲೊಂಡಾ ಸ್ಟೇಶನನ್ನು ಬಿಟ್ಟು ಮುಂದೆ ಸಾಗಿತು. ವಸಂತರಾಯರು ಪಾಯಖಾನೆಯಿಂದ ಹೊರಬಿದ್ದರು. ಅವರಸ್ಥಿತಿಯನ್ನು ನೋಡಿ ನಾನು ನಸುನಕ್ಕೆನು. “ವಸಂತರಾಯರೆ, ಇನ್ನಾದರೂ ತಾವು ಸೆಕಂಡ್‌ಕ್ಲಾಸ್ ಟಿಕೀಟು ಕೊಂಡು, ನಿರ್ಭಯದಿಂದ ತಮ್ಮ ಆಫೀಸರರ ಪಸ್ತ್ರಾಂದೋಲನೆ ಮಾಡಿ ಸುಖದಿಂದ ಪ್ರವಾಸ ಮಾಡಬಹುದು, ” ಎಂದೆ ನಾನು. ವಸಂತರಾಯರು “ ಛೆ, ಛೆ ! ಇನ್ನೇನು ಸ್ವಲ್ಪ ದಾರಿ ಉಳಿದಿದೆ. ಇದಲ್ಲದೆ ಇನ್ನು ಎರಡು ಗಂಟೆಗೆ ಕತ್ತಲೆಯಾಗುವುದು. ನನ್ನ ಆಫೀಸರರು ಆ ಮೇಲೆ ಹೊರಬೀಳುವುದಿಲ್ಲ. ಅವರು ಹೊರಬಿದ್ದರೂ ನನ್ನ ಗುರುತನ್ನು ಹಿಡಿಯಲಾರರು ; ಏಕೆಂದರೆ ನಾನು ರಾತ್ರಿ ವೇಳೆಯಲ್ಲಿ ಮಂಕೀ ಕ್ಯಾಪ್ ಹಾಕಿಕೊಂಡು ಕುಳಿತುಬಿಡುವೆನು. ಇನ್ನೊಂದೆರಡು ಗಂಟೆ ಹೇಗಾದರೂ ಕಳೆದರೆ ಆಯಿತೇ ಆಯಿತು. ಆ ಮೇಲೆ ಯಾವತರದ ಭೀತಿಯಿಲ್ಲ! ” ಎಂದರು. ರೈಲು ಬೆಳಗಾಂವಿ ಸ್ಟೇಶನಿಗೆ ಬಂದಿತು. ವಸಂತರಾಯರು ಥಟ್ಟನೆ ಎದ್ದು, ತಮ್ಮ ಟ್ರಂಕಿನೊಳಗಿನ ಶಾಲು ತೆಗೆದು, ಅದನ್ನು ತಮ್ಮ ಮೈಮೇಲೆ ಹಾಕಿಕೊಂಡು ಸೀಟಿನ ಬುಡದಲ್ಲಿ ಮಲಗಿಬಿಟ್ಟರು. ಸುದೈವ; “ ಟಿಕೀಟ ಚಕ್ಕರ್ ” ನಮ್ಮ ಬಂಡಿಯಲ್ಲಿ ಸೇರಲಿಲ್ಲ ! ಸೂಳೇಭಾಂವಿ ಸ್ಟೇಶನಿಗೆ ರೈಲು ಬರಲು, ವಸಂತರಾಯರು ಧೈರ್ಯದಿಂದ ಎದ್ದು ಕುಳಿತರು. “ ರಿಫ್ರೆಶ್‌ಮೆಂಟಕಾರ್”ನಿಂದ ಚಹಾ ತರಿಸಿ, ಒತ್ತಾಯದಿಂದ ನನಗೆ ಒಂದು ಕಪ್ಪು ಕೊಟ್ಟು, ತಾವೂ ಚಹಾಪಾನ ಮಾಡಿದರು.

* * *

“ಕಾಡುಕೋಣ” ದ ಗುರುತಿನ
++ ++ ++ ++ ಕಾಗದವು
ಕನ್ನಡ ನಾಡಿನದು!
ಬರೆಯಲಿಕ್ಕೂ ಮುದ್ರಣಕ್ಕೂ ತಕ್ಕುದಾದುದು!
ಅಧಿಕೃತ ಪ್ರಸಾರಕರು: ಜಿ. ಕೆ. ಕೇಳಕರ
ಸ್ವದೇಶಿ ಪೇಪರ್ ಮಾರ್ಟ್, ಧಾರವಾಡ.

(೩)

ಸಂಜೆಯ ಸಮಯ, ತಂಪುಗಾಳಿ ಬೀಸಹತ್ತಿದೆ. ನಮ್ಮ ಪ್ರವಾಸವು ಸುಖದಿಂದ ನಡೆದಿದೆ. ರೈಲು ಪಾಚ್ಛಾಪುರ ಸ್ಟೇಶನಿಗೆ ಬಂದಿತು. ಎರಡನೆಯ ಲಾಯಿನ್ ಮೇಲೆ ಹೋಗಿ ನಿಂತಿತು.

ವಸಂತರಾಯ:— ಓಹೊ! ಇಲ್ಲಿ “ಕ್ರಾಸಿಂಗ್” ಇರಬಹುದೇನು?

ನಾನು:— ಹೌದು, ಮೇಲ್ ಕ್ರಾಸಿಂಗ್!

ವಸಂತರಾಯ:—ಹಾಗಾದರೇನ್ರೀ! ಮೇಲ್ ಬಂಡಿ ಬರಲು ಅರ್ಧ ಘಂಟೆ ಅವಕಾಶವಿದೆ. ಇದೇ ಈಗ ಗೋಕಾಕ ರೋಡ್ ಸ್ಟೇಶನ್‌ನಿಂದ ಹೊರಟಿತಂತೆ. ಮೇಲ್ ಬಂಡಿ ಬಿಟ್ಟು ಐದು ನಿಮಿಷಗಳ ಮೇಲೆ ನಮ್ಮ ಬಂಡಿ ಹೊರಡುವುದು. ಅರ್ಧ ಗಂಟೆ ಗಾಡಿಯಲ್ಲಿ ಕಳೆಯುವುದು ನನ್ನಿಂದಾಗದ ಮಾತು. ಇಕೋ ಇದೀಗ ನನ್ನ ಆಫೀಸರರು ತಮ್ಮ ಮೀಸೆ ಹುರಿಮಾಡುತ್ತ, ಅತ್ತಿತ್ತ ನೋಡುತ್ತ ಸಂಚರಿಸುವರು. ನಡೆಯಿರಿ ಇಲ್ಲಿಂದ, ಆ ಕೊನೆಯ ಲಾಯಿನ್ ಮೇಲೆ ನಾಲ್ಕಾರು “ಗುಡ್ಸ್” ಡಬ್ಬಿಗಳು ನಿಂತಿವೆ. ಅವುಗಳ ಹಿಂಬದಿಯಲ್ಲಿ ಕುಳಿತು ಫಲಾಹಾರವನ್ನಾದರೂ ಮಾಡುವಾ. ನಾವು ಯಾರಿಗೂ ಕಾಣುವುದಿಲ್ಲ. ಕೆಲವು ಹೊತ್ತು ಹಾಳುಹರಟೆಯನ್ನು ಹೊಡೆಯೋಣ. ಮೇಲ್ ಬಂಡಿ ಬಂದು ಹೊರಟು ಹೋದ ಕೂಡಲೆ, ನಾವು ನಮ್ಮ ಬಂಡಿಯಲ್ಲಿ ಸೇರೋಣ!

ನಾವಿಬ್ಬರೂ “ಗುಡ್ಸ್ ವ್ಯಾಗನ್”ಗಳ ಹಿಂಬದಿಯಲ್ಲಿ ಕುಳಿತು, ಆ ಮಾತು ಈ ಮಾತು ಆಡುತ್ತ, ಫಲಾಹಾರ ನಡೆಯಿಸಿದೆವು. ಇಷ್ಟರಲ್ಲಿ ಮೇಲ್ ಬಂಡಿ ಬಂದಿತು. ಒಂದು ನಿಮಿಷದಲ್ಲಿ ಎಂಜಿನ್ “ಕಿರ್‍ರ್” ಎಂದು ಕೂಗಿತು. “ಫಕ್, ಫಕ್, ಫಕ್” ಎನ್ನುತ್ತ ಬಹು ಸಡಗರದಿಂದ ಹೊರಟು ಹೋಯಿತು! ಮೇಲ್ ಬಂಡಿಯು ಹೋಯಿತೆಂದು ತಿಳಿದು ನಾವು ನಮ್ಮ ಬಂಡಿಯಲ್ಲಿ ಕೂಡ್ರಲು ಬಹು ಗಡಿಬಿಡಿಯಿಂದ ಓಡಿದೆವು. ನಮ್ಮ ಗಾಡಿಯೆಲ್ಲಿದೆ!! ಇಷ್ಟು ಸಡಗರದಿಂದ ಹೋದದ್ದು ನಮ್ಮ ಗಾಡಿಯೇ ಆಗಿತ್ತು. ಮೇಲ್ ಬಂಡಿ ಮೊದಲನೆಯ ಲಾಯಿನಿನ ಮೇಲೆ ನಿಂತಿತ್ತು. ನಮಗೆ ಕೆಂಪು ಬಣ್ಣದ ಅಂಚೆಯ ಡಬ್ಬಿ ಕಾಣಿಸಿತು. ಪ್ರತಿಯೊಂದು ಡಬ್ಬಿಯ ಮೇಲೂ “ಪೂನಾ-ಟು-ಹುಬ್ಬಳ್ಳಿ” ಎಂದು ಬರೆದ ಹಲಗೆಗಳು ತೂಗಾಡುತ್ತಿದ್ದುವು. ನಾವಿಬ್ಬರೂ ಗಾಬರಿಯಾದೆವು. ಹೌಹಾರಿತು; ಮೋರೆ ಬಿಳುಪೇರಿತು. ಮಂಗನಂತೆ ಒಬ್ಬರನ್ನೊಬ್ಬರು ನೋಡಹತ್ತಿದೆವು. ಮಾಡುವುದೇನು? ನಮ್ಮ ಗಂಟುಮೊಟ್ಟೆಗಳೆಲ್ಲಾ ಗಾಡಿಯಲ್ಲಿ ಉಳಿದುವು!! ಬಕ್ಕ ನೆತ್ತಿ: ಮೈಮೇಲೆ ಒಂದು ಷರ್ಟು ಮಾತ್ರ! ಹಾಸಿಕೊಳ್ಳಲು ಇಲ್ಲ, ಹೊದ್ದುಕೊಳ್ಳಲು ಇಲ್ಲ!!

ವಸಂತರಾಯ:— ಅಯ್ಯೋ! ಏನವಸ್ಥೆ! ಮುಂದೇನು ಗತಿ? ನಾಳೆ ಬೆಳಗ್ಗೆ ಪುಣೇಕ್ಕೆ ತಲುಪುವ ರೈಲು ಇನ್ನಾವುದಿಲ್ಲ; ಇದೇ ಕೊನೆಯ ರೈಲು! ನಾಳೆಯ ಹನ್ನೊಂದು ಗಂಟೆಗೆ ಬೊಂಬಾಯಿ ಕಚೇರಿಯಲ್ಲಿ ಇರುವುದು ಇನ್ನು ಶಕ್ಯವಿಲ್ಲ. ನಾಳೆ ‘ಡ್ಯೂಟಿ’ ಮೇಲೆ ಇರದಿದ್ದರೆ, “ಕ್ರಿಸ್ತಮಸ್” ಹಬ್ಬದ ನನ್ನ ಹತ್ತುದಿನದ ರಜಾ ‘ಸಂಬಳವಿಲ್ಲದ ರಜಾ’ ಎಂದು ಎಣಿಸುವರು. ಎಂದರೆ ಮೂರು ನೂರು ರೂಪಾಯಿಗಳ ಹಾನಿ!! ಇದಲ್ಲದೆ, ನಮ್ಮ ಸಾಮಾನುಗಳೆಲ್ಲ ಆ ರೈಲಿನಲ್ಲಿಯೆ ಉಳಿದಿವೆ. ಅದರಲ್ಲಿ ಕೆಲವು ಸರಕಾರಿ ಮಹತ್ತ್ವದ ಕಾಗದಪತ್ರಗಳು!! ಇನ್ನು ಮೂರನೆಯ ತಾರೀಖಿನ ದಿನ ಕಚೇರಿಗೆ ಹೋಗುವುದು ಶಕ್ಯವಿಲ್ಲ. ನನಗೆ ದಂಡವಾಗಬಹುದು; ಅಥವಾ ನನ್ನನ್ನು ನೌಕರಿಯಿಂದ ಕಿತ್ತಿ ತಳ್ಳಿಬಿಡಬಹುದು! ಎಷ್ಟು ಅನರ್ಥ!! ಇದೆಲ್ಲಾ ಆ ಅರಿಷ್ಟ ಉಚಿತ ರೈಲ್ ಟಿಕೀಟಿನ ಪ್ರತಾಪ! ಸೆಕಂಡ್ ಕ್ಲಾಸ್ ಟಿಕೀಟು ಕೊಂಡಿದ್ದರೆ, ಸುಖದಿಂದ ಒಬ್ಬರ ಭಯವಿಲ್ಲದೆ, ತಕ್ಕ ವೇಳೆಗೆ ಸುರಕ್ಷಿತವಾಗಿ ಬೊಂಬಾಯಿಗೆ ತಲುಪುತ್ತಿದ್ದೆನು!

ನಾನು:— ನನಗಾದರೂ ಮೂರನೆಯ ತಾರೀಖಿನ ದಿನ ಹಾಯ್‌ಕೋರ್ಟಿನಲ್ಲಿ ಮಹತ್ತ್ವದ ಕೆಲಸವಿತ್ತು. ನನ್ನ ಕಾಗದಪತ್ರಗಳಾದರೂ ರೈಲಿನಲ್ಲಿಯೇ ಉಳಿದಿವೆ. ನಿಮ್ಮ ಉಚಿತ ಟಿಕೀಟು ನನಗೂ ತುಂಬಾ ತೊಂದರೆಮಾಡಿತು!

ವಸಂತರಾಯ:—ನಮ್ಮ ಗಂಟುಮೊಟ್ಟೆಗಳನ್ನು ಬಂಡಿಯಿಂದ ಕೆಳಗಿಳಿಸಿ ಸುರಕ್ಷಿತವಾಗಿಡಲು, ಮಿರ್ಜಿ ಸ್ಟೇಷನ್ ಮಾಸ್ತರರಿಗೆ ಒಂದು ತಂತಿಯನ್ನಾದರೂ ಕಳುಹಿಸಿರಿ!

ನಾನು:— ಬಂದದ್ದನೆಲ್ಲಾ ಭೋಗಿಸಲಿಕ್ಕೇ ಬೇಕು. ಹಾಯ್ ಕೋರ್ಟಿನಲ್ಲಿ ನಮ್ಮ “ಕೇಸು” ಕಿತ್ತಿ ಒಗೆದರೂ ಕಷ್ಟ! ಅಥವಾ “ಎಕ್ಸ್ ಪಾರ್ಟಿ ಡಿಕ್ರಿ” (Ex Parte Decree) ತೀರ್ಪು ಮಾಡಿದರೂ ಕಷ್ಟ!

ವಸಂತರಾಯ:— ಪುಣೆಯ ಕಡೆಗೆ ಹೋಗುವ ರೈಲು ಇಲ್ಲಿಂದ ಮತ್ತಾವಾಗ ಹೊರಡುವುದು?

ನಾನು:— ನಾಳೆಯ ಬೆಳಗಿನ ಜಾವದ ಆರು ಗಂಟೆಗಂತೆ!

ವಸಂತರಾಯ:— ರಾತ್ರಿಯನ್ನೆಲ್ಲಾ ಈ ಪುಷ್ಯಮಾಸದ ತೀಕ್ಷ್ಣ ಚಳಿಯಿಂದ ನಡುಗುತ್ತ ಈ ಸ್ಟೇಶನಿನಲ್ಲಿ ಮಲಗಿ ಕಳೆಯುವ ಪ್ರಸಂಗ ಒದಗಿತೇ!

ನಾನು:— ತಮ್ಮ ಸಂಗತಿಯ ಫಲ! ತಮ್ಮ ಉಚಿತ ರೈಲ್ ಟಿಕೀಟಿನ ಪ್ರತಾಪ!! ತಮ್ಮ ರೊಕ್ಕವನ್ನು ಉಳಿಸುವ ದುರಾಶೆ!!!

ಸೌಂದರ್ಯಶಾಸ್ತ್ರ

★

ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ

'ಸೌಂದರ್ಯಕ್ಕೂ ಶಾಸ್ತ್ರವಿರುವದೇ ರಾಯರ?' ಹೌದು ಸ್ವಾಮಿ ಇದನ್ನು ಓದಿದರೆ ಸ್ವಲ್ಪ ತಿಳಿಯುವುದು ಎಂದೆ.

ಶಾಸ್ತ್ರವೆಂದರಾದರೂ ಏನು? ಯಾವುದೊಂದು ವಿಷಯದ ಮೇಲೆ ಮೊದಲಿನಿಂದ ಈವರೆಗೂ ಆದಂಥ ವಿಚಾರ; ಆ ವಿಚಾರಗಳ ಸಮನ್ವಯದಿಂದ ಉಂಟಾದ ನೇಮಗಳು. ನೆಲದ ಒಡಲಲ್ಲಿರುವ ಪದಾರ್ಥ—ಕಲ್ಲು, ಮಣ್ಣು—ಗಳನ್ನು ನೋಡಿ, ನಿರೀಕ್ಷಣೆ ಮಾಡಿ, 'ಅವು ಹೇಗಾಗುತ್ತವೆ-' 'ಕಲ್ಲು ಎಲ್ಲೆಲ್ಲಿರುತ್ತದೆ'- 'ಕಲ್ಲಿನ ಪದರುಗಳು ಹೇಗಾಗುತ್ತವೆ' 'ಮಣ್ಣಿನಿಂದ ಕಲ್ಲು ಹೇಗೆ ಹುಟ್ಟುತ್ತದೆ.' 'ತರತರದ ಕಲ್ಲುಗಳಾಗುವುದಕ್ಕೆ ಕಾರಣಗಳೇನು' ಎಂಬಿವೇ ಮೊದಲಾದ ವಿಚಾರಗಳನ್ನೊಳಗೊಂಡ ವಿಷಯಕ್ಕೆ ಭೂಗರ್ಭಶಾಸ್ತ್ರವೆಂದು ಹೆಸರು. 'ಸ್ವರವೆಂದರೇನು, ಸ್ವರಗಳು ಹೇಗೆ ಹುಟ್ಟಿದುವು, ಸ್ವರಗಳ ಪ್ರಕಾರಗಳೆಷ್ಟು. ತೀವ್ರ-ಕೋಮಲಗಳೆಂದರೇನು, ಸ್ವರಗಳನ್ನು ಕೂಡಿಸಿದರೆ ಏನು ಆಗುವುದು, ಯಾವ ಸ್ವರಕ್ಕೆ ಯಾವ ಸ್ವರ ಗೆಳೆತನವು, ಯಾವ ಯಾವ ಸ್ವರಗಳನ್ನು ಬಿಟ್ಟರೆ ಮತ್ತು ಯಾವ ಯಾವ ಸ್ವರಗಳನ್ನುಪಯೋಗಿಸಿದರೆ ಯಾವ ಯಾವ ರಾಗಗಳಾಗುತ್ತವೆ, ರಾಗಕ್ಕೆ ತಾಲವು ಆವಶ್ಯವೋ ಇಲ್ಲವೋ?'- ಎಂಬಿವೇ ವಿಷಯಗಳ ವಿಚಾರಗಳ ಗಂಟಿಗೆ ಸಂಗೀತಶಾಸ್ತ್ರವೆಂದು ಹೆಸರು. 'ಸಮಾಜವು ಹೇಗೆ ಆಯಿತು, ಸಮಾಜದ ನಿಯಮಗಳೇನು, ನಿಯಾಮಕರು ಹೇಗೆ ಆಗುತ್ತಾ ಹೋಗುತ್ತಾರೆ, ಸಮಾಜದ ಶಾಂತಿ-ಪುಷ್ಟಿ-ತುಷ್ಟಿಗಳ ಬೆಳವಣಿಗೆಯೂ ಸ್ಥಿರತ್ವವೂ ಆಗುವುದಕ್ಕೆ ಜನರೇ ತಮಗೆ ಹಚ್ಚಿಕೊಂಡ ನೇಮಗಳಾವುವು, ಈ ನೀತಿ-ನಿಯಮಗಳು ದೇವಸೃಷ್ಟಿಯೊ ಮಾನವಸೃಷ್ಟಿಯೋ, ನೀತಿಯಲ್ಲಿ ಬದಲಾವಣೆಗಳಾಗುತ್ತವೆಯೊ, ನೀತಿಯೆಂಬುದು ಚಂಚಲವೊ ಸ್ಥಿರವೊ, ನೀತಿಯನ್ನು ಬೆಳೆಯಿಸಲಿಕ್ಕೆ ಏನು ಮಾಡುವುದಗತ್ಯ?' ಎಂಬಿವೇ ಮೊದಲಾದ ವಿಚಾರಕ್ಕೆ ನೀತಿಶಾಸ್ತ್ರವೆಂದು ಹೆಸರು. ಅದರಂತೆಯೇ ಯಂತ್ರಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಭೂಮಿತಿಶಾಸ್ತ್ರ, ಗಣಿತಶಾಸ್ತ್ರ ಮುಂತಾದ ಶಾಸ್ತ್ರಗಳಲ್ಲಿ ಮೊದಲು ಬರುವುದೇ ವಿಷಯ; ಅದರ ಶಾಸ್ತ್ರವೆಂದರೆ ಅದರ ವಿಚಾರ ಎಂಬರ್ಥವಾಗುವುದು. ಅದೇ ಮೇರೆಗೆ ಸೌಂದರ್ಯಶಾಸ್ತ್ರವೆಂದರೆ ಸೌಂದರ್ಯದ ವಿಷಯವಾಗಿ, ಸುಂದರವಾದಂಥ ವಸ್ತುಗಳ ವಿಷಯವಾಗಿ ಇದುವರೆಗೆ ಆದ ವಿಚಾರ, ಆ ವಿಚಾರಗಳ ಸಮನ್ವಯದಿಂದಾಗುವ ನಿಯಮಗಳು— ಎಂದರ್ಥ.

ಇನ್ನು ಸೌಂದರ್ಯವೆಂದರೇನು? 'ಸುಂದರಸ್ಯ ಭಾವಃ ಸೌಂದರ್ಯಂ!'-ನಿಜ! ಆದರೆ ಸುಂದರವೆಂದರಾದರೂ ಏನು? ನಮ್ಮ ಬಳಕೆಯ ಭಾಷೆಯಲ್ಲಿ ಎಷ್ಟೋ ಸಲ ಎಷ್ಟೋ ಶಬ್ದಗಳನ್ನು ನಮಗೆ ಬಂದ ಹಾಗೆ ನಾವು ಉಪಯೋಗಿಸುತ್ತೇವೆ. ಸೂಕ್ಷ್ಮವಾದ ಭೇದವನ್ನು ಎಣಿಸಿ ಅವುಗಳ ಉಪಯೋಗವಾಗುವುದಿಲ್ಲ. ಜಾಹೀರಾತಿನ ಭಾಷೆಯಂತೆ ನಮ್ಮ ಬಳಕೆಯ ಭಾಷೆ. ಒಂದು ಖಾನಾವಳಿಯ ಹಲಗೆಯ ಮೇಲೆ ಹೀಗೆ ಬರೆದಿತ್ತು: 'ದಿನಾಲು ಪಂಚಪಕ್ವಾನ್ನದ ಊಟ. ವ್ಯಂಜನ ಪದಾರ್ಥಗಳಿಗೆ ಮಿತಿಯೇ ಇಲ್ಲ. ಹೊಟ್ಟೆ ತುಂಬುವ ತನಕ ಊಟ. ಬೆಲೆ. ಸಾದಾ ೨ ಆಣೆ. ಮಸಾಲೇದಾರ್ ೪ ಆಣೆ' ಇದರೊಳಗಿನ ತಪ್ಪು ಎಷ್ಟೇ ಇದ್ದರೂ, ಜನಸಾಮಾನ್ಯರು ಹಲಗೆಯಲ್ಲಿಯ ಭಾಷೆ ತಪ್ಪಾಗಿದೆಯೆಂದು ಊಟದೊಳಗೂ ತಪ್ಪಾಗಿಯೇ ಊಟಮಾಡಬೇಕೆಂಬ ಹುಮ್ಮಸದವರಿರುವುದಿಲ್ಲ. ಅವರು ಒಳಗೆ ಹೋಗಿ ಜಗ್ಗಿ ಕೆಚ್ಚೇ ಕೆಚ್ಚುತ್ತಾರೆ. ಸಾಹಿತ್ಯದೊಳಗಿನ ಉದಾಹರಣೆಯನ್ನು ತೆಗೆದುಕೊಳ್ಳುವಾ. ಬೀಭತ್ಸ ಮತ್ತು ಅಶ್ಲೀಲ ಎಂಬೀ ಶಬ್ದಗಳು ಬಳಕೆಯೊಳಗೆ ಸಮಾನಾರ್ಥದಲ್ಲಿ ಉಪಯೋಗಿಸಲ್ಪಡುವುವು. ಆದರೆ ಸಾಹಿತ್ಯಶಾಸ್ತ್ರದಲ್ಲಿ ಅವುಗಳ ಬಳಕೆ ಬೇರೆ. ಬೀಭತ್ಸವು ರಸವಾಗಿದೆ. ಅಶ್ಲೀಲವು ದೋಷವಾಗಿದೆ. ಬೀಭತ್ಸರಸದ ಸಾಧನೆಯನ್ನು ಉತ್ತಮೋತ್ತಮ ಕವಿಗಳು ಮಾಡಿರುವರು; ವಿಶೇಷತಃ ವೀರರಸಾವಿಷ್ಕಾರದಲ್ಲಿ. ಆದರೆ ಅಶ್ಲೀಲವು ಎಲ್ಲೆಲ್ಲಿಯೂ ದೋಷವೆಂದೇ ಗಣಿಸಲ್ಪಡುವುದು. ಅದರಂತೆಯೆ ಸುಂದರವೆಂಬ ಶಬ್ದದ ಗತಿಯೂ ಆಗಿದೆ. ನಾವು ಪೇಟೆಯೊಳಗೆ ಕಾಯಿಪಲ್ಲೆ ಕೊಂಡುಕೊಳ್ಳುವಾಗ ಸುಂದರವಾದ ಬದನೆಕಾಯಿಗಳನ್ನು ನೋಡುವೆವು. ನಾವು ಕೊಳ್ಳುವ ತಂಬಾಕೂ ಸುಂದರವೇ, ಚಪ್ಪಲಿಗಳು ಸುಂದರವೇ! ಹಾದಿಯಲ್ಲಿ ಹೋಗುತ್ತಿರುವಾಗ ಒಬ್ಬ ಸುಂದರ ಕನ್ನಿಕೆಯನ್ನೂ ನೋಡುವೆವು. ಆಕೆಯ ಕೈಯಲ್ಲಿಯ ಬಳೆಗಳೂ ಸುಂದರವಾದುವುಗಳೇ. ಮನೆಗೆ ಬಂದು ಜಳಕಮಾಡಿ ಸುಂದರ ಹೂವು-ತುಳಸಿಗಳಿಂದ ದೇವರ ಪೂಜೆಯನ್ನು ಮಾಡುವೆವು. (ನಾನು ಎಷ್ಟೋ ವರ್ಷಗಳವರೆಗೆ ಸಂಧ್ಯಾವಂದನೆ-ದೇವರ ಪೂಜೆಯನ್ನು ಮಾಡುತ್ತಿದ್ದೆ. ಈಗ ಬಿಟ್ಟಿದ್ದೇನೆ. ಆದರೂ ಅದರ ಆನಂದವನ್ನು ಇನ್ನೂ ಮರೆತಿಲ್ಲ.)

★

'ಸೌಂದರ್ಯ' ಎಂದೊಡನೆ 'ಚೆಲುವಿಕೆ' ಎಂದು ಅರ್ಥವನ್ನು ಮಾಡಿಕೊಳ್ಳುವ ಜನರೇ ನಮ್ಮಲ್ಲಿ ಹೆಚ್ಚಾಗಿರುವರು. ಆದರೆ ಈ 'ಸೌಂದರ್ಯ' ಎಂಬ ಪದದಲ್ಲಿ ಅಡಕವಾಗಿರುವ ಅರ್ಥದ ಬಗ್ಗೆ ದೊಡ್ಡದೊಂದು ಶಾಸ್ತ್ರವಿದೆಯೆಂಬುದನ್ನು ಅರಿತುಕೊಳ್ಳಬೇಕಾಗಿದೆ.

★

ಧೂಪ-ದೀಪ-ನೈವೇದ್ಯದಿಂದ ಒಡಗೂಡಿದ ಪರಿಮಳದ ಸುಂದರವಾದ ಪೂಜೆ. ನನ್ನ ಎದುರಿಗೆ ಮೂರು ಚಿತ್ರಗಳಿರುವುವು. ಮೊದಲನೆಯದು ರವೀಂದ್ರನಾಥರದು, ಎರಡನೆಯದು ರಾಮಕೃಷ್ಣ ಪರಮಹಂಸರದು, ಮೂರನೆಯದು ಅರವಿಂದ ಘೋಷರದು. ಇನ್ನೊಂದು ಚಿಕ್ಕದು— ಗಾಂಧಿ. ಇವೆಲ್ಲ ಎಷ್ಟು ಸುಂದರವಾಗಿವೆ ! ರಮಣೀಯವಾಗಿವೆ ! ಆನಂದದಾಯಕವಾಗಿವೆ ! ಒಮ್ಮೆ ಬಾಲಗಂಧರ್ವರ ನಾಟಕ ನೋಡಲಿಕ್ಕೆ ಹೋಗಿದ್ದೆ. ಅವರ ಅನುಪಮೇಯವಾದ ಸಂಗೀತಕ್ಕೂ ಅಭಿನಯಕ್ಕೂ ಜನರು ಒನ್ಸ್‌ಮೋರ್ ಎನ್ನುತ್ತಿದ್ದರು. ಆದರೆ ದ್ರೌಪದೀ ನಾಟಕದಲ್ಲಿ ದುಃಶಾಸನನು ದ್ರೌಪದಿಯನ್ನು ಹಿಡಿದು ಎಳೆದಾಗ, ಆಕೆಯು ನೆಲದ ಮೇಲೆ ದೊಪ್ಪೆಂದು ಬೀಳುವಳು. ಅದಕ್ಕೂ Beauty ಎಂದರು ಕೆಲವರು ! ಈ ಎಲ್ಲ ವಿಚಾರಗಳನ್ನು ಪರಿಶೀಲಿಸಿದರೆ ತಮಗೆ ಉಪಯುಕ್ತವಾದದ್ದಕ್ಕೇ ಸುಂದರವೆಂದು ಕರೆಯುವ ರೂಢಿಯುಂಟೆಂಬ ಮಾತು ಗೊತ್ತಾಗುವುದು. ಹಾಗಾದರೆ ಉಪಯುಕ್ತವಾದದ್ದೆಲ್ಲ ಸುಂದರವಾಗಿದೆಯೆ ? ಅದೂ ಇಲ್ಲ. ಕತ್ತಲೆಯೊಳಗೆ ಹೋಗುವಾಗ ಹುಳು-ಹುಪ್ಪಡಿ ಬೆಟ್ಟಿಯಾದರೆ ಜಜ್ಜಬೇಕೆಂಬ ಉದ್ದೇಶದಿಂದ ಕೈಯೊಳಗೆ ಬಡಿಗೆಯನ್ನು ಹಿಡಿದುಕೊಂಡು ಹೋಗುವುದು ಸರಿಯೆ ! ಆಗ ಒಂದು ಗಡುತರವಾದ ಮೋತಿಯ ಬಡಿಗೆಯಷ್ಟು ಉಪಯುಕ್ತವಾದದ್ದಾವುದೂ ಇಲ್ಲ. ಆ ಹುರುಬರಕಾದ ಮೋತಿಯ ಬಡಿಗೆಗೆ ಸುಂದರವೆನ್ನಬಹುದೇ ? ಎನ್ನಲಿಕ್ಕೆ ಬರಲಾರದು.

ಉಪಯುಕ್ತವಾದ ವಸ್ತುವು ಸುಂದರವಾದದ್ದಲ್ಲವೆಂದಮೇಲೆ, ಯಾವ ವಸ್ತುವಿನಿಂದ ಸುಖವಾಗುತ್ತದೊ ಅದನ್ನು ಸುಂದರವೆಂದು ಕರೆಯೋಣ. ಸುಖವೆಂದರೇನು ? 'ಅನುಕೂಲ ವೇದನೀಯಂ ಸುಖಂ. ಪ್ರತಿಕೂಲ ವೇದನೀಯಂ ದುಃಖಂ'! ತಮಗೆ ಅನುಕೂಲವಾದದ್ದೇ ಸುಖ, ಪ್ರತಿಕೂಲವಾದದ್ದೇ ದುಃಖ. ಹೊರಗಿನ ವಸ್ತುವಿನಲ್ಲಿ ಸುಖ-ದುಃಖಗಳಿರುವುದಿಲ್ಲ. ಸುಖ-ದುಃಖಗಳಾಗುವುದು ಹೊರಗಿನ ವಸ್ತುವಿನಿಂದಲ್ಲ. ಆ ವಸ್ತುವು ನಮ್ಮ ಮನಸ್ಸಿನ ಮೇಲೆಯಾಗಲಿ, ದೇಹದ ಮೇಲೆಯಾಗಲಿ, ಅಂತಃಕರಣದ ಮೇಲೆಯಾಗಲಿ ಮಾಡುವ ಪರಿಣಾಮ. ಚಳಿಯಲ್ಲಿ ಬಿಸಿನೀರು ಎರಕೊಳ್ಳುವುದರಿಂದ ಸುಖವಾಗುತ್ತದೆ. ಅದೇ ಬೇಸಗೆಯಲ್ಲಿ ತಣ್ಣೀರಿನ ಸ್ನಾನದಿಂದ ಸುಖವಾಗುತ್ತದೆ. ಎಂದಮೇಲೆ ನೀರಿನಲ್ಲಿ ಯಾವ ಗುಣವು ಇರುತ್ತದೆಯೊ ಆ ಗುಣವು ನಮಗೆ ಅನುಕೂಲವಾಗಿದ್ದರೇನೇ ಅದಕ್ಕೆ ನಾವು ಸುಖವೆಂದು ಕರೆಯುತ್ತೇವೆ. ಜ್ವರ ಬಂದಾಗ ಔಷಧವನ್ನು ತೆಗೆದುಕೊಳ್ಳುತ್ತೇವಲ್ಲ ! ಛಳಿಜ್ವರಕ್ಕೆ; ಯಾವುದದು ? ಅದರ ನೆನಸಿನಿಂದ ಮೈಮೇಲೆ ಮುಳ್ಳುಬರುತ್ತದೆ. ಕ್ವಿನಾಯಿನ್—ಕೋಯಿನೇಲು ! ಅದನ್ನೂ ಕುಡಿಯುತ್ತೇವಲ್ಲ. ಅದು ಸುಖವೋ ದುಃಖವೋ ? ಅದು ನಾಲಗೆಗೆ ಕಹಿಯಾದರೂ ದೇಹಕ್ಕೆ ಅವಶ್ಯವಾಗಿರುವ ಆರೋಗ್ಯವನ್ನು ತಂದುಕೊಡುವುದಾದ್ದರಿಂದ, ಅದು ಸಿಹಿ ಎಂದು-ಅನುಕೂಲವೆಂದು-ನಾವು ಅದನ್ನು ಬುಡ್ಡುಕೊಟ್ಟು ಬಾಟ್ಲಿ ಬಾಟ್ಲಿ ಕುಡಿಯುತ್ತೇವೆ. ಆದ್ದರಿಂದ ತಣ್ಣೀರು, ಬಿಸಿನೀರು, ಕೋಯಿನೇಲು ಇವುಗಳಿಗೆ ಸುಂದರವೆನ್ನಬಹುದೇ ? ಕೋಯಿನೇಲು ಎಷ್ಟು ಆರೋಗ್ಯವನ್ನು ತಂದುಕೊಟ್ಟರೂ ಅದಕ್ಕೆ ಸುಂದರವಾದದ್ದೆಂದು ಅನ್ನುವುದನ್ನು ನಾನು ಕಂಡಿಲ್ಲ, ಕೇಳಿಲ್ಲ. ಎಂದಮೇಲೆ ಅನುಕೂಲವಾದದ್ದು— ಸುಖಕಾರಿಯಾದದ್ದೆಲ್ಲ ಸುಂದರವಾದದ್ದಲ್ಲ.

'ಉಪಯುಕ್ತವೂ, ಸುಖಕಾರಿಯೂ ಆದ ವಸ್ತುಗಳು ಸುಂದರವಾದುವುಗಳಲ್ಲ ಎಂದ ಮೇಲೆ, ಸೌಂದರ್ಯವಾದರೂ ಎಲ್ಲಿದೆ ?' ಎಂದು ಕೇಳಿದರೆ ಅದಕ್ಕೆ ಒಂದೇ ಉತ್ತರ: ನಮ್ಮಲ್ಲಿ ಹೊರಗಿನ ವಸ್ತುವಿನಲ್ಲಿ ಸುಖವೂ ಇಲ್ಲ, ಉಪಯುಕ್ತತೆಯೂ ಇಲ್ಲ, ಸೌಂದರ್ಯವೂ ಇಲ್ಲ. ಸೌಂದರ್ಯವು ವಸ್ತುನಿಷ್ಠವಾದದ್ದಲ್ಲ (objective) ಆತ್ಮನಿಷ್ಠವಾದದ್ದೆಂಬುದು (Subjective) ಹೊಳೆಯದೆ ಇರದು.

ಸೌಂದರ್ಯವು ಒಂದು ತರದ ಜ್ಞಾನವು— ಸಂವೇದನೆಯು. ಆ ಸಂವೇದನೆಯು ನಮ್ಮಲ್ಲಿ ಹುಟ್ಟುವುದೆಂದ ಮೇಲೆ, ನಾವೆಂದರಾದರೂ ಯಾರು ?....ಎಂಬುದನ್ನು ಸ್ವಲ್ಪ ತಿಳಿದುಕೊಳ್ಳುವುದವಶ್ಯವಾದದ್ದು. ನಮ್ಮಲ್ಲಿ ಎರಡು ವಿಭಾಗಗಳು : ಒಂದು ದೇಹ, ಎರಡನೆಯದು ಆತ್ಮ. ದೇಹ ಹೊರಗಿನದು, ಆತ್ಮ ಒಳಗಿನದು. ದೇಹದೊಳಗೆ ಪಂಚೇಂದ್ರಿಯಗಳು— ಕಣ್ಣು, ಮೂಗು, ಕಿವಿ, ನಾಲಗೆ, ತೊಗಲು ಇವು—ಐದು—ಪಂಚ ಜ್ಞಾನೇಂದ್ರಿಯಗಳು. ಹೊರಗಿನ ವಸ್ತುಗಳೆಲ್ಲ ವಿಷಯಗಳು. ಈ ವಿಷಯಗಳ ಜ್ಞಾನವು ಪಂಚ ಜ್ಞಾನೇಂದ್ರಿಯಗಳಿಂದ ಆಗುತ್ತದೆ. ವಸ್ತುವಿನ ರೂಪವನ್ನು ಕಣ್ಣು ಕಂಡುಹಿಡಿಯುತ್ತದೆ ; ಸ್ವರವನ್ನು ಕಿವಿಯು; ರಸವನ್ನು ನಾಲಗೆಯು; ಸ್ಪರ್ಶವನ್ನು (ಹುರಬರಕು ನುತ್ತಗೆ ಮುಂತಾದ್ದನ್ನು) ತೊಗಲು; ಪರಿಮಲವನ್ನು-ಗಂಧವನ್ನು- (ಸು, ದುರ್ ಎರಡು) ಮೂಗು. ಜ್ಞಾನೇಂದ್ರಿಯಗಳು ಹೊರಗಿನ ವಸ್ತುಗಳ ವಿಷಯಗಳನ್ನು, ಅವುಗಳ ಗುಣಗಳನ್ನು, ಅವಗುಣಗಳನ್ನು ಮನಸ್ಸಿಗೆ ಅರುಹುತ್ತವೆ. ಮನಸ್ಸು ಬುದ್ಧಿಯ ಮುಂದಿಡುತ್ತದೆ. ಬುದ್ಧಿಯು ಗ್ರಹಣಮಾಡುತ್ತದೆ. ಇಲ್ಲವೆ, ಸಂಶಯವುಂಟಾದಲ್ಲಿ ಏನಾದರೊಂದನ್ನು ನಿರ್ಧರಿಸಿ ಆತ್ಮನಿಗೆ ತಿಳಿಸುತ್ತದೆ. ಆತ್ಮನ ಪ್ರೇರಣೆಯಿಂದ ಕಾರ್ಯವಾಗುತ್ತದೆ. ಇದಾಯಿತು ಜ್ಞಾನವಾಗುವ ಕ್ರಮ. ಇದರಲ್ಲಿ ಇನ್ನೊಂದು ಕರಣವಿದೆ; ಇಂದ್ರಿಯವಿದೆ. ಇದು ಅಂತಃಕರಣ. ಸೌಂದರ್ಯಜ್ಞಾನವುಂಟಾಗುವುದು ಅಂತಃಕರಣದಲ್ಲಿ ಎಂದು ಹೇಳಬಹುದು.

ಒಂದು ಉದಾಹರಣೆಯನ್ನು ತೆಗೆದುಕೊಳ್ಳುವ. ಬಾಗಿಲಲ್ಲಿ ಭಿಕ್ಷುಕನು ಬಂದಿರುವನು. ಭಿಕ್ಷುಕನು ಕಣ್ಣಿಗೆ ಬೀಳುವನು. ಕಣ್ಣಿಗೆ ಬೀಳದಿದ್ದರೆ ಭಿಕ್ಷುಕನು ಬಂದಿರುವನೆಂಬ ಜ್ಞಾನವಾಗಲಾರದು. ಕಣ್ಣಿಗೆ ಬಿದ್ದಮೇಲೆ ಮುಂದೆ ಅವನು ಹೇಗೆ ಇದ್ದಾನೆಂಬ ವಿಚಾರ. ಮೊದಲು ನಮ್ಮ ಮನಸ್ಸು ಶುದ್ಧ ಸ್ವಚ್ಛ ಕನ್ನಡಿಯಂತೆ ಇರುವುದು ; ಅಥವಾ ಸರೋವರದಂತೆ ಇರುವುದು. ಈಗ ಅದರಲ್ಲಿ

ಸಾವಿರಾರು ತರಂಗಗಳೇಳುವುವು. ತಿರುಕನು ಏಕೆ ಬಂದಿಹನು? ದುಡ್ಡಿಗಾಗಿ, ಅನ್ನಕ್ಕಾಗಿ ಕಣ್ಣು ಮನಸ್ಸಿನ ಮುಂದೆ ಅವನನ್ನು ತಂದಿರಿಸುವುದು. ಮನಸ್ಸು ವಿಚಾರಮಾಡಹತ್ತುವುದು. ಎಂಥವ ನಿದ್ದಾನೆ? ಟೊಣಪನಿದ್ದಾನೆ. ಬುದ್ಧಿಗೆ ಕೇಳುವುದು. ಬುದ್ಧಿಯು ನಿರ್ಣಯಿಸುವುದು. ಟೊಣಪರಿಗೆ ಏನೂ ಹಾಕುವುದರಲ್ಲಿ ಅರ್ಥ ವಿಲ್ಲ. "ಹಾಂ ಹೋಗಪಾ ಮುಂದ! ಇನ್ನೊಂದು ಮನಿ!" ತಿರುಕನು ಅಶಕ್ತನಿದ್ದಾನೆ. ರೋಗಪೀಡಿತನಿದ್ದಾನೆ. ಮೈಯಲ್ಲಿ ಹರಕು ಅರಿವೆ! ನರಳುತ್ತಿರುವನು. ಮನಸ್ಸು ಕರಗುವುದು. ಅಂತಃಕರಣದಲ್ಲಿ ತರಂಗಗಳೇಳುವುವು. ಬುದ್ಧಿ ಸುಮ್ಮನಿರುವುದು. ಅಂತಃಕರಣದಲ್ಲಿ ಕನಿಕರಹುಟ್ಟಿ, ಕನಿಕರದ ಪ್ರೇರಣೆಯಿಂದಲೇ ಜೇಬಿಗೆ ಕೈ ಹೋಗಿ, ಒಂದು ಬಿಲ್ಲೆ ತಿರುಕನ ಕೈಯಲ್ಲಿ ಬೀಳುವುದು. ತಿರುಕರಾಕೆಯು ಇದ್ದರೆ ಇನ್ನಿಷ್ಟು ದಯೆ. ಆಕೆಯು ರೋಗಪೀಡಿತ ಳಿದ್ದರೆ ಇನ್ನಿಷ್ಟು ಕನಿಕರ. ಸ್ವಲ್ಪ ಚೆಲುವೆಯಿದ್ದಾಳೆ, ಸ್ವಲ್ಪಶೃಂಗಾರ, ಕಂಕುಳಲ್ಲಿ ಒಂದು ಹಸುಗೂಸಿದ್ದರೆ–ಹಡೆದು ನಾಲ್ಕಾರು ತಾಸು ಆದ ಕೂಸಿದ್ದರೆ– ಕನಿಕರದ ಪರಮಾವಧಿ. ಹೀಗೆ ಮುಂಜಾವದಿಂದ ಸಂಜೆಯವರೆಗೆ ನಮ್ಮ ಆತ್ಮದಲ್ಲಿ ಸಾವಿರಾರು ಮುದ್ರಣಗಳು, ಸಂಸ್ಕಾರಗಳು, ಒತ್ತುಗಳು (impressions) ಆಗುತ್ತಲೇ ಇರುತ್ತವೆ. ಈ ಸಂಸ್ಕಾರಗಳೆಲ್ಲ ಕೂಡಿ ಒಂದು ತತ್ತ್ವವಾಗಿ ಸದೈವ ಜಾಗೃತಾವಸ್ಥೆಯಲ್ಲಿರುತ್ತವೆ. ಅದೇ ಮಾನವನ ಶೀಲ.

ಒಳ್ಳೆಯದು. ಹೊರಗಿನ ವಸ್ತುವಿನ ಜ್ಞಾನವು ನಮ್ಮ ಇಂದ್ರಿಯ–ಮನಸ್ಸು–ಬುದ್ಧಿ–ಅಂತಃಕರಣ–ಆತ್ಮ–ಈ ರೀತಿಯಾಗಿ ಹರಿದು ನಮ್ಮಲ್ಲಿ ಬೆಳಕನ್ನುಂಟುಮಾಡುವುದು. ನಮಗೆ ಸಂಬಂಧಿಸಿದ್ದು ಅಂತಃಕರಣ. ಸೌಂದರ್ಯವೆಂಬುದೊಂದು ಭಾವನೆ. ಭಾವನೆಯ ತರಂಗವು ಅಂತಃಕರಣದಲ್ಲಿ ಹುಟ್ಟುವುದು. ಬುದ್ಧಿ ಬಹಳ ಬೆಳೆಯಿತೆಂದರೆ ಅಂತಃಕರಣ ಕಡಿಮೆಯಾಗುವುದು. ಅಂತಃಕರಣದವರಿಗೆ ಬುದ್ಧಿ ಕಡಿಮೆ. ಬುದ್ಧಿಗೂ ಅಂತಃಕರಣಕ್ಕೂ ಯಾವಾಗಲೂ ಬಡಿದಾಟ. ಬುದ್ಧಿಯ ಬೆಳವಣಿಗೆಯನ್ನು ಬಹಳಷ್ಟು ಮಾಡಿಕೊಳ್ಳುವವನು ತತ್ತ್ವಜ್ಞಾನಿಯಾಗುವನು; ವೇದಾಂತಿಯಾಗುವನು; ಶಾಸ್ತ್ರಜ್ಞನಾಗುವನು. ಅಂತಃಕರಣದ ಬೆಳವಣಿಗೆಯಾಯಿತೆಂದರೆ ಅವನು ಕಲೋಪಾಸಕನಾಗುವನು—ಸಂಗೀತ ನಿಪುಣನಾಗುವನು, ಕವಿಯಾಗುವನು, ಶಿಲ್ಪಿಯಾಗುವನು, ವಾಸ್ತುವಿದ್ಯಾವಿಶಾರದನಾಗುವನು. ವಿಶ್ವದೊಳಗಿನ ವಸ್ತುಗಳ ಸೌಂದರ್ಯರಸವನ್ನುಂಡು ಅದನ್ನೇ ಒಂದುಗೂಡಿಸಿ, ತನ್ನದೊಂದು ಸಮನ್ವಯವನ್ನು (Synthesis) ಚಿತ್ರಿಸುವವನೇ ಕಲೋಪಾಸಕ. ಜೇನ್ನೊಣಗಳು ವನದೊಳಗೆ ಅರಳಿರುವ ಅನೇಕ ಹೂವುಗಳ ಮಕರಂದವನ್ನುಂಡು ಮಧುವನ್ನು ಮಾಡುವಂತೆ ಕಲೋಪಾಸಕನ ಜೀವನ. ಜೇನುತುಪ್ಪದಲ್ಲಿ ಹೂವುಗಳ ಗುಣಗಳೂ ನೊಣಗಳ ಗುಣಗಳೂ ಕಾಣುವಂತೆ, ಕಲೋಪಾಸಕನ ಕಲಾಕೃತಿಯಲ್ಲಿ ತರತರದ ಸೌಂದರ್ಯಭಾವನೆಗಳ ಏಕೀಕರಣವೂ, ಕಲೋಪಾಸಕನ ಆತ್ಮೀಯತೆಯೂ ಕಂಡುಬರುವುವು.

ಹೌದು, ಇದೆಲ್ಲ ನಿಜ; ಆದರೆ ಸೌಂದರ್ಯವೆಂದರೇನು? ಸೌಂದರ್ಯವೆಂದರೆ ಪೂರ್ಣವಾದ ಅನುಭವ. ಯಾತರದು? ಯಾವುದೊಂದು ವಸ್ತುವಿನದು. ಸರಕಾರೀ ಕಚೇರಿಯಲ್ಲಿ ಪ್ರತಿಯೊಂದು ಪತ್ರವ್ಯವಹಾರದ ನಕಲು ಇರುವಂತೆ, ಯಾವ ವಸ್ತುವನ್ನು–ಸಂಗತಿಯನ್ನು–ನೋಡಿದರೂ ಅದರ ಮುದ್ರೆಯೊಂದು ನಮ್ಮ ಆತ್ಮದಲ್ಲಿ ಮೂಡಿರುತ್ತದೆ. ಅವುಗಳ ಚೊಕ್ಕಸವೆಂದರೆ ನಮ್ಮ ಸ್ಮರಣಶಕ್ತಿ. ಆ ಮುದ್ರೆಗಳು ಅಲ್ಲಿ ಇರುತ್ತವೆಯಷ್ಟೇ? ಅಷ್ಟೇ ಅಲ್ಲ, ಅವು ಬೆಳೆಯುತ್ತವೆ. ಆಯಾ ವಸ್ತುವಿನ ಸಂಪೂರ್ಣಚಿತ್ರವೊಂದು ನಮ್ಮ ಹೃದಯದಲ್ಲಿರುತ್ತದೆ. ನಮಗೆ ಯಾವುದಾದರೊಂದು ವಸ್ತುವಿನ ಪರೀಕ್ಷೆ ಮಾಡುವಾಗ, ಅದನ್ನು ನಮ್ಮ ಈ ಧ್ಯೇಯವಸ್ತುವಿನ–ಕಾಲ್ಪನಿಕ ವಸ್ತುವಿನ—ಒರೆಗೆ ಹಚ್ಚಿನೋಡಿ, ನಮ್ಮ ಮತವನ್ನು ನಾವು ವ್ಯವಹಾರದಲ್ಲಿ ಕೊಡುತ್ತಿರುತ್ತೇವೆ, ಸರಾಫರಂತೆ. ಒಂದು ಪಾಟ್ಲಿಯನ್ನು ಮುರಿಸಬೇಕಾಗಿದೆ (ಭಂಗಾರಕೊಳ್ಳುವ ಸಾಮರ್ಥ್ಯ ಯಾರಿಗಿದೆ ಇಲ್ಲಿ?). ಸರಾಫರ ಕಡೆಗೆ ನಾವು ಹೋದೆವೆಂದು ತಿಳಿಯುವಾ. ಅವನ ಪೆಟ್ಟಿಗೆಯಲ್ಲಿ ಒಂದು ಒರೆಗಲ್ಲು ಇರುತ್ತದೆ. ಅದರ ಸಂಗಡವೇ ಚಿಕ್ಕ ಚಿಕ್ಕ ಭಂಗಾರದ ಚೂರುಗಳಿರುತ್ತವೆ. ಆಯಾ ಭಂಗಾರದ ಗುಣವನ್ನು ತೋರಿಸುವ ಅಂಕೆಗಳು ಅವುಗಳ ಮೇಲಿರುತ್ತವೆ. ಸರಾಫನು ನಮ್ಮ ಭಂಗಾರವನ್ನು ಒರೆಗೆಹಚ್ಚಿ, ಆ ಮೇಲೆ ಇಲ್ಲಿರುವ ನಂಬರಿನ ಭಂಗಾರವನ್ನು ಅದರ ಜೊತೆಗೆ ತಿಕ್ಕಿ, ಭಂಗಾರದ ಗುಣವನ್ನು (ನಂಬರನ್ನು) ಕಂಡು ಹಿಡಿಯುವನು. ನಮ್ಮದೂ ಚೊಕ್ಕು–ಅವನದೂ ಚೊಕ್ಕು–ಇತ್ತೆಂದರೆ, ಅದೇ 'ಶಂಭರ್ ನಂಬರಿ' ಭಂಗಾರ. ಅದೇ ಮೇರೆಗೆ ನಮ್ಮಲ್ಲಿಯ ಕಾಲ್ಪನಿಕ ಪೂರ್ಣತೆಯ ಅನುಭವವು ಜಗತ್ತಿನ ವಸ್ತುವಿನಲ್ಲಿ ಸಿಕ್ಕ ಕೂಡಲೆ ಆತ್ಮಾನಂದವಾಗಿ "Beauty" (ಸೌಂದರ್ಯ) ಎಂಬ ಉದ್ಗಾರವು ತನ್ನಿಂದ ತಾನೆ: ನಮ್ಮ ಬಾಯಿಯಿಂದ ಹೊರಡುತ್ತದೆ. ನಾಟಕದಲ್ಲಿಯ ವನ್ಸಮೋರ್ (ಇನ್ನೊಮ್ಮೆ ಇನ್ನೊಮ್ಮೆ) ದೊಡ್ಡಾಟದಲ್ಲಿಯ "ಹೌದಪಾ ಹೌದ[illegible]!" "ಸೈಯಣಾ!" "ಭಲರೇ ಶಾಬಾಸ!" ಇವೆಲ್ಲ ಸೌಂದರ್ಯವನ್ನು ಕಂಡ ಹೃದಯದ ಉದ್ಗಾರಗಳು. ನನಗೊಂದು ಸಾಯಕಲ್ಲು ಕೊಳ್ಳುವುದದೆ. ಇವೊತ್ತು ರಾತ್ರಿ ನನಗೆ ನಿದ್ದೆಯೇ ಇಲ್ಲ. ಅದೇ ಧ್ಯಾನ. ಯಾತರ ಧ್ಯಾನ? ಸಾಯಕಲ್ಲು ಹೇಗಿರಬೇಕೆಂಬುದರ ಧ್ಯಾನ! [illegible] ಮನಸ್ಸಿನಲ್ಲಿ ನಾಳಿನ ಸಾಯಕಲ್ಲಿನ [illegible]ನ. [illegible]ಳ ಇಂಚಿನದು. ಎಡಗೈ–ಬಲಗೈಗೊಂದೊಂದು ಗಂಟೆ. ಇಂತಹದೊಂದು ನಾಸೀಪುಡೀ ಬಣ್ಣದ ಸೀಟು. ಮೇಲೆ ಚಕ್ರದ ಚಿತ್ರವಿರಬೇಕು. ಭಂಗಾರದ ಗೆರೆಗಳಿರಬೇಕು. ಮಡ್‌ಗಾರ್ಡಿನ ಮೇಲೆ ಇಲೆಕ್ಟ್ರಿಕ್ ದೀಪವಿರಬೇಕು. ಕಿಮ್ಮತ್ತು ನಲುವತ್ತು ರೂಪಾಯಿ! ನಾಳೆ ಅಂಗಡಿಗೆ ಹೋಗಿ ನೋಡೇ ನೋಡಿದೆ. ಯಾವುವೂ ಮನಸ್ಸಿನೊಳಗೆ ನಾಟಲಿಲ್ಲ. ಅಕೊ! ನೋಡಿರಿ, ಮೂಲೆಯೊಳಗೆ! ಹಾಂ, ಇದೇ–ಇದೇ–ಇದೇ! ಬೇಕು! ಕಿಮ್ಮತ್ತು ನಲುವತ್ತೈದು ರೂಪಾಯಿ! ಕೊಟ್ಟೆ; ಅಡ್ಡಿಯಿಲ್ಲ, ಐದು ಹೋದರೂ–ನಲುವತ್ತು

ಸಾಯಕಲ್ಲಿನದು, ಐದು ರೂಪಾಯಿ ಸನಗಾದ ಆನಂದದ್ದು. ಈ ಪ್ರೇಮಾನುಭವಕ್ಕೆ ಶಾಸ್ತ್ರದಲ್ಲಿ ಸೌಂದರ್ಯವೆನ್ನುವರು. ಮದುವೆ ಯೆಂದರೇನು ? ಸೌಂದರ್ಯಶೋಧನ ! ಆದುದರಿಂದಲೇ ಇಷ್ಟು ಹುಡುಕಬೇಕಾಗುತ್ತದೆ. ಇಲ್ಲದಿದ್ದರೆ ಎರಡು ನಿಮಿಷದಲ್ಲಿ ಮೂರು ಮದುವೆಗಳಾಗುತ್ತಿದ್ದುವು ! ವರಪಕ್ಷದ ಕಡೆಯಿಂದ-ಹುಡುಗಿ ಕೆಂಪು ಇರಬೇಕು ! ಬಹಳ ಗಿಡ್ಡಳಿರಬಾರದು, ಒಣಹಾಕುವ ಕೋಲಿನಂತೆ ಬಹಳ ಬೆಳೆದಿರಬಾರದು. ಅರಳಿ ಅಂಡಿಗೆಯಂತೆಯೂ ಇರಬಾರದು, ಬರದೊಗಿನ ಹೆಣದಂತೆಯೂ ಇರಬಾರದು. ಕುಲ-ಶೀಲ ಸಂಪನ್ನಳಾಗಿರಬೇಕು. ಇದೇ ಎಂದರೆ ಸೌಂದರ್ಯ ! ವಧೂ ಪಕ್ಷದಿಂದ-ಹುಡುಗ ಒಳ್ಳೆಯವನಿರಬೇಕು. ಹೆಂಡತಿ ಹೇಳಿದಂತೆ ಕೇಳುವವನಿರಬೇಕು, ತಾಯಿ-ತಂದೆ ಇಲ್ಲದಿದ್ದರೂ ಒಳಿತೇ. ಮನೆಯೊಳಗೆ ಬರೇ ರಾಧಾ-ಕೃಷ್ಣ ರಾಜ್ಯವೇ ಇರಬೇಕು, ಕಲಿತವ ನಿರಬೇಕು, ನೂರು ರೂಪಾಯಿ ಸಂಬಳವಿರಬೇಕು. ಆದುದರಿಂದಲೇ ಸುಭಾಷಿತಕಾರರೆಂದದ್ದು : " ಕನ್ಯಾ ವರಯತೇ ರೂಪಂ ಮಾತಾ ವಿತ್ತಂ ಪಿತಾ ಶ್ರುತಂ | ಬಾಂಧವಾಃ ಕುಲಮಿಚ್ಛಂತಿ ಮಿಷ್ಟಾನ್ನ ಮಿತರೇ ಜನಾಃ " ಎಂದು. ಕನ್ನಿಕೆಯನ್ನು ಕೇಳಿದರೆ ಆಕೆ ಹೇಳುವು ದೇನು ? ' ಕಾಮಣ್ಣನಂತೆ ಚೆಲುವನಿರಬೇಕು, ನನ್ನ ಗಂಡ ! ' ತಾಯಿಗೆ(ವ್ಯವಹಾರದಲ್ಲಿ ದುಡ್ಡೇ ದೊಡ್ಡಪ್ಪ ಎಂಬುದನ್ನು ಬಲ್ಲಳು ಆಕೆ.) ದುಡ್ಡು, ಉತ್ಪನ್ನ, ಪಗಾರ ! ತಂದೆಗೆ—ಬಿ. ಎ. ಎಲ್ಲಿ ಯಾದರೂ ಹೊಟ್ಟೇ ತುಂಬಿಕೊಂಡಾನು ! ಬಾಂಧವರಿಗೆ ಸತ್ಕುಲ ಪ್ರಸೂತ ಇರಬೇಕು. ನಮಗೆ ನಿಮಗೆ-ಮಿಷ್ಟಾನ್ನವಿದ್ದರೆ ಮದುವೆ ಒಳ್ಳೇಯದು-ಮುಖ್ಯವಾಗಿ ಜಿಲೇಬೀ ಪ್ರಸ್ಥ!

ಸೌಂದರ್ಯದ ಕೃತಿಗೆ ಕಲಾಕೃತಿಯೆಂದು ಹೆಸರು. ಸೌಂದರ್ಯ ವನ್ನು ವಿಶೇಷವಾಗಿ ಅನುಭವಿಸಿ, ಒಂದು ಪೂರ್ಣದೃಷ್ಟಿಯಿಂದ ನಿರೀಕ್ಷಿಸಿ, ಆ ಎಲ್ಲ ಭಾವನೆಗಳ ಸಮನ್ವಯವನ್ನು ಕಾವ್ಯರೂಪ ದಿಂದಾಗಲಿ, ಸಂಗೀತ ರೂಪದಿಂದಾಗಲಿ, ವಾಸ್ತುವಿನ ರೂಪದಿಂದಾ ಗಲೀ, ಚಿತ್ರರೂಪದಿಂದಾಗಲಿ, ರೂಪುಗೊಡುವವನು ಕಲಾ-ಕೋವಿದ. ಕಲೆಯು ಜೀವನದ ಅಭಿವೃದ್ಧಿಗೆ ಪೋಷಕವೂ, ಸಂತೋಷಕಾರಕವೂ ಆಗಿರುವುದಾದ್ದರಿಂದ, ಕಲೆಯ ಅಭಿವೃದ್ಧಿಯೇ ರಾಷ್ಟ್ರದ ಅಭಿವೃದ್ಧಿ ; ಅದೇ ಉತ್ಕರ್ಷ. ಅದೇ ಸಮಾಜದ ಶಾಂತಿ, ಸಮಾಜದ ಪುಷ್ಟಿ, ಅದೇ ಸಮಾಜದ ತುಷ್ಟಿಯೆಂದು ಹೇಳಿದಂತಾಯಿತು ? ಸೌಂದರ್ಯವೆಂದರೇನು ?

ಗನೋರಿಯಾ, ಪರಮಾರೋಗ, ಉಷ್ಣರೋಗದ ಮೇಲೆ

ಔಷಧ

೭ ದಿವಸಗಳಲ್ಲಿ ಈ ರೋಗ ಗುಣಹೊಂದುವುದು ಗ್ಯಾರಂಟಿ !

ಶರೀರದಿಂದ ಕೀವ ಬರುತ್ತಿದ್ದರೆ, ಧೋತರಕ್ಕೆ ಹಳದಿ ದಾಗು ಹತ್ತುತ್ತಿದ್ದರೆ ಶರೀರದಿಂದ ಬಾವು, ಶರೀರದಿಂದ ತೊಗಲು ಹಿಂದಕ್ಕೆ ಸರಿಯದಿದ್ದರೆ ಶರೀರದ ಮುಖ, ಘಾಯುವಾಗಿದ್ದರೆ, ಚಟ್ಟೆಪಿದ್ದು-ಪ್ಪ, ಉಷ್ಣದಿಂದ ಚೇ [illegible]

[illegible]

ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿನ ಸೇವಿಸಬೇಕು. ಈ ಔಷಧ ವನ್ನು ಬೇಗೆಯಲ್ಲಿ ತುಪ್ಪದಲ್ಲಿ, ಥಂಡ ಮಳೆಗಾಲದಲ್ಲಿ ಜೇನುತುಪ್ಪ ದಲ್ಲಿ ತಕೊಳ್ಳಬೇಕು.

ಪಥ್ಯ : ಹಸಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ ಕ್ಕೆ ೫ ರೂ. ಪೋಸ್ಟಚಾರ್ಜು ೧೦ ಆಣೆ.

ಮಕ್ಕಳನ್ನು ಹಡೆಯುವದು ಸಾಕು

ಅಶಕ್ತ ಹೆಣ್ಣುಮಕ್ಕಳಿಗೆ ★ ರೋಗಗ್ರಸ್ತ ಸ್ತ್ರೀಯರಿಗೆ

ಬರ್ಥ್ ಕಂಟ್ರೋಲ್

★

ಏಳು ದಿವಸದ ೬ ಮಾತ್ರೆಗಳನ್ನು ಸೇವನೆ ಮಾಡಿದರೆ, ಮುಂದೆ [illegible] ಪ್ರತಿತಿಂಗಳು [illegible] ಪ್ರತಿ ದಿವಸ [illegible] ಔಷಧ [illegible]

ಪಥ್ಯ : ಹಸಿಮೆಣಸಿನಕಾಯಿ ಬಿಡಬೇಕು.

೭ ದಿವಸದ ಸಂಪೂರ್ಣ ಔಷಧದ ಕಿಮ್ಮತ್ತು

೫ ರೂಪಾಯಿ ಪೋಸ್ಟ್ ಚಾರ್ಜು ೧೦ ಆಣೆ.

ಏಜಂಟರು :

ಗದಗ ಫಾರ್ಮಸಿ, ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ ಫಾರ್ಮಸಿ.

ವಿಳಾಸ :— ಹಾಲಪ್ಪಾ ದಾವಣಗೇರಿ, ಆಯುರ್ವೇದ ಔಷಧಗಳ ದವಾಖಾನೆ, ಗದಗ

ಬೇಬಿಯ ತಾಯಿ

"ಬೀಜಿ" ಬಳ್ಳಾರಿ

★

ಬೇಬಿಗಾಗಿ ತಾರೆ ಮಾವನ ಮಾತನ್ನೂ ಅಲ್ಲಗಳೆದು ವಸಂತನ ಮನೆಯಲ್ಲಿ ನಿಂತು ಬಿಟ್ಟಳು. ಆ ಮೇಲೆಯೂ ವಸಂತನಿಗೆ ಕಾವಿತೊಟ್ಟು ಗವಿಯನ್ನು ಸೇರಬೇಕೆಂಬ ಯೋಚನೆ ತಲೆದೋರಿರಬಹುದೆ?

★

ವಸಂತನ ವಯಸ್ಸು ಪುನಃ ಮದುವೆಯಾಗಲು ಹೆಚ್ಚಾಗಿದ್ದರೂ ವಿಧುರನಾಗಿರಲಂತೂ ಕಡಿಮೆಯಿದ್ದಿತು. ಆದೊಂದು ಬಗೆಯಲ್ಲಿ ತ್ರಿಶಂಕುವಾಗಿದ್ದ. 'ರಾಜಿ ನನ್ನನ್ನು ಹಾಳುಮಾಡಿದಳು' ಎಂದು ನಿತ್ಯವೂ ಅದೆಷ್ಟೋ ಸಲ ಎಂದುಕೊಳ್ಳುತ್ತಿದ್ದ; ಕೊರಗುತ್ತಿದ್ದ. ತನಗೆ ಹೆಂಡತಿಯಿಲ್ಲದುದಕ್ಕಿಂತಲೂ ಬೇಬಿಗೆ ತಾಯಿ ಇಲ್ಲದುದು ಹೆಚ್ಚು ಹಣ್ಣುಮಾಡಿದ್ದಿತು ಆವನನ್ನು. ತಾನು ಮದುವೆಯಾದರೆ ಬೇಬಿಗೆ ತಾಯಿ ಸಿಕ್ಕುವಳೆಂಬ ಭಾವನೆ. ಕಾವಿತೊಟ್ಟು ಗವಿಯನ್ನು ಸೇರಲು ಸಹ ಮನಸ್ಸಾಗುತ್ತಿದ್ದಿತು–ಆವನಿಗೆ–ಒಮ್ಮೊಮ್ಮೆ. ಆದರೆ ಬೇಬಿ? 'ಬೇಬಿಯನ್ನು ನೋಡಿಕೊಳ್ಳಲು ರಾಜಿ ಇದ್ದಿದ್ದರೆ ನಾನು ಕಾವಿತೊಡಬಹುದಾಗಿತ್ತಲ್ಲವೆ!' ಎಂದುಕೊಂಡ. 'ರಾಜಿಯಿದ್ದರೆ ಕಾವಿ ಏಕೆ ಬೇಕು?' ಎಂದುಕೊಂಡು ಮತ್ತೆ ಸುಮ್ಮನಾದ.

* * *

ರಾಜಿ ಗರ್ಭಿಣಿ. ಮನೆಯಲ್ಲಿ ಕೆಲಸವು ಬಹಳ. ಬೇರೆ ಮಾಡು-ವವರಿಲ್ಲ, ಅವಳಿಂದಾಗದು. ವಸಂತನಿಗೆ ಅಚ್ಚುಕಟ್ಟಾಗಿ ಯಾವುದೂ ಆಗುವಂತಿಲ್ಲ. ಆದರೆ 'ಅಡಿಗೆ ಹೊತ್ತಾಯಿತು, ಅದು ಸರಿಯಾಗಿಲ್ಲ, ಇದು ಸರಿಯಾಗಿಲ್ಲ' ಎಂದು ಎಂದೂ ವಸಂತ ಗುಣುಗುಟ್ಟಿರಲಿಲ್ಲ. 'ನನಗೆ ಕೆಲಸವು ಬಹಳ. ನನ್ನಿಂದ ಮುಗಿಯುವುದಾಗದು!' ಎಂದು ಎಂದೂ ರಾಜಿ ಹೇಳಿಡಿರಲಿಲ್ಲ. ಪರಸ್ಪರ ಸಹಾನುಭೂತಿಯು ಬೆಳೆದು, ಇಮ್ಮಡಿಯಾಗಿ, ಒಬ್ಬರ ತೊಂದರೆಗಾಗಿ ಇನ್ನೊಬ್ಬರು 'ಪಾಪ' ಎನ್ನುತ್ತಿದ್ದರು.

ಹೆರಿಗೆಯ ದಿನಗಳು ಹತ್ತಿರ ಬಂದುವು. ದಿನವೊಂದೂ ಗಂಡಾಂತರದ್ದಾಯಿತು. ಅನ್ನ ಕಾಣುವುದೇ ಕಷ್ಟವಾಯಿತು.

"ಏನೇ ಆಗಲಿ, ನೀವೇ ಹೋಗಿ ತಾರೆಯ ಮಾವನನ್ನು ಕೇಳಿರಿ" ಎಂದು ಮಲಗಿದಲ್ಲಿಂದಲೇ ಬಡಬಡಿಸಿದಳು–ರಾಜಿ.

"ಅವರು ಕಳಿಸಿಕೊಡುವರೋ? ...." ಎಂದು ಮೂಗೆಳೆದ ವಸಂತ. "ನಿನಗೆ ಆ ಸಲ ಕಾಯಿಲೆಯಾದಾಗ, ಅಕ್ಕನ ಮೋರೆ ನೋಡುತ್ತೇನೆಂದು ಅನ್ನ ಬಿಟ್ಟರೂ, 'ಗಂಡ ಸತ್ತು ವರ್ಷವಾಗಿಲ್ಲ; ಈಗೆಲ್ಲಿಯೂ ಹೋಗಕೂಡದು' ಎಂದು ಆಜ್ಞೆಮಾಡಿದ್ದರು ಅವಳ ಮಾವ" ಎಂದು ಮೋರೆ ಕೆಳಕ್ಕೆ ಹಾಕಿದ.

"ವರ್ಷವೂ ಆಯಿತಲ್ಲ. ಮದುವೆಯಾಗಿ ಎರಡು ವರ್ಷವಾಗು ವುದರೊಳಗೆ ಗಂಡ ಸತ್ತೇ ವರ್ಷವಾಯಿತು. ಅವಳ ಹಣೆಬರೆಹ.. ಹೇಳಿಯಂತೂ ಕೇಳಿರಿ.... ನಮಗೂ ಬೇರೆ ದಿಕ್ಕಿಲ್ಲ" ಎಂದು ಸಣ್ಣ ಮನಸ್ಸುಮಾಡಿಕೊಂಡಳು ರಾಜಿ.

ತಾರೆ ರಾಜಿಯ ಒಡಹುಟ್ಟಿದವಳು. ತಾಯ್ತಂದೆ ಇಲ್ಲದುದ-ರಿಂದ, ಸೋದರತ್ತೆಯ ಮನೆಯಲ್ಲಿಯೆ ಜೋಪಾನಳಾಗಿ, ಸೋದರತ್ತೆಯ ಮಗನ ಹೆಂಡತಿ ಆಗಿ, ವಿಧವೆಯೂ ಆಗಿ ಮೂಲೆಗೆ ಬಿದ್ದಿದ್ದಳು. ತಾರೆಯ ಮಾವನವರ ಮಾತೆಂದರೆ ಯಮಶಾಸನವೇ ಅವರ ಮನೆಯಲ್ಲಿ. ಬಹು ಹಟದವರು. ನಿಷ್ಠುರಿಗಳು. ಮೇಲಾಗಿ ತೀಕ್ಷ್ಣ ಸನಾತನಿಗಳು. ಹೊಲೆಯರನ್ನು **'ಹರಿಜನ'**ರೆಂದು, ಗುಡಿಯಲ್ಲಿ ತಂದು ಧರ್ಮಗ್ಲಾನಿ ಮಾಡಿದ **ಗಾಂಧಿಯ** ಹೆಸರೆಂದರೆ ಹಲ್ಲು ಮಸೆಯುತ್ತಿದ್ದರು. ಇನ್ನೂ ಚಿಕ್ಕವಳೆಂದೋ ಏನೋ.... ತಾರೆಯ ಕೇಶಮುಂಡನಕ್ಕೆ ಮಾತ್ರ ಹೆಚ್ಚು ಒತ್ತಾಯಮಾಡಿರಲಿಲ್ಲ. ವಸಂತನೂ ಅವರಿಗೆ ಜನ್ಮಶತ್ರುವೇ ಆಗಿದ್ದನು; ಆದಕ್ಕೆಲ್ಲ ಕಾರಣವಿದೆ. 'ತಾರೆಗೆ ಏಕೆ ಪುನರ್ವಿವಾಹ ವಾಗಕೂಡದು?' ಎಂದು ಯಾರಮುಂದೋ ಅಂದಿದ್ದನಂತೆ. ಇನ್ನು ಬೇಕೇನು!

ತಾರೆಯ ಹಟ, ಅವಳತ್ತೆಯ ಒತ್ತಾಯ, ವಸಂತನ ದಮ್ಮಯ್ಯಗಳು, ರಾಜಿಯ ಪತ್ರ ಎಲ್ಲವೂ ಕಲೆತು—ಆದು ಹೇಗೋ—ತಾರೆಯನ್ನು ಕಳಿಸಲು ಅವಳ ಮಾವ 'ಹೂಂ' ಎಂದಿದ್ದರು. ಹೆರಿಗೆಯಾಗಿ ಹದಿನೈದು ದಿನಗಳೊಳಗಾಗಿ ಬಂದೇ ತೀರಬೇಕೆಂದು ತಾರೆಗೆ ಕಟ್ಟಾಜ್ಞೆಮಾಡಿದ್ದರು. ಅಂತೂ ಅಕ್ಕನ ಹೆರಿಗೆಗೆ ನೆರವಾದಳು ತಾರೆ. ಹೆಣ್ಣು ಕೂಸನ್ನು ಹೆತ್ತು, ಹತ್ತು ದಿನಗಳಲ್ಲಿಯೆ ರಾಜಿ ಸ್ವರ್ಗಸ್ಥಳಾದಳು. ಮಗುವಿ ಗಿನ್ನೆಲ್ಲಿಯ ನಾಮಕರಣ? ಆಸ್ಪತ್ರೆಯಲ್ಲಿ ಯಾರೋ 'ಬೇಬಿ' ಎಂದಿದ್ದರು. ಆದು ಬೇಬಿಯೇ ಆಯಿತು.

ಒಳಗೆ ತಾರೆ, ಹೊರಗೆ ವಸಂತ, ಅತ್ತತ್ತು ಹೈರಾಣಾದರು. ತೊಟ್ಟಿಲಲ್ಲಿ ಬೇಬಿ ಮಾತ್ರ ನಕ್ಕು ನಕ್ಕು ಮಲಗಿತು. ಅಳುವವ ರನ್ನು ಸಮಾಧಾನಮಾಡಲು ಬೇಬಿಯೆ ಬೇಕಾಯಿತು.

* * *

"ಮಗುವಿಗೆ ಹಾಲುಬೇಕು" ಬಾಗಿಲ ಹಿಂದಿನಿಂದ ದನಿ ಬಂದಿತು.

೫೦. ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರದ ಗುಳಿಗೆ
ಬಾಟ್ಲಿಗೆ ೧ ರೂ.
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಟಣ್ಣನೆ ಎದ್ದ ವಸಂತ. ಕೈಯಲ್ಲಿ ಬಟ್ಟಲನ್ನು ಹಿಡಿದ; ಬಟ್ಟಲಲ್ಲೆರಡು ಹನಿಗಳು ಅವನ ಕಣ್ಣಿಂದ ತೊಟಕಿಕ್ಕಿದುವು. ಬಾಗಿಲ ಹಿಂದೆಯೂ ಉದುರಿದುವು.

* * *

ಅದೊಂದು ದಿನ ಸೂರ್ಯನು ಮುಳುಗಿದ್ದ, ಆದರೆ ಕತ್ತಲಾಗಿರಲಿಲ್ಲ. ವಸಂತ ಮನೆಗೆ ಬಂದ. ತಾರೆಯ ಸುಳಿವೇ ಇಲ್ಲ. ತೊಟ್ಟಿಲ ಬಳಿ ಹೋದ. ಬೇಬಿ ಇಲ್ಲ. ಒಳಗೆ ನಡೆದ. ಹಿತ್ತಲ ಬಾಗಿಲವರೆಗೂ ನಡೆದ. ಅಲ್ಲಿ ನಿಂತ ತಾರೆಯ ಕೈಗಳಲ್ಲಿ ಬೇಬಿ ಆಡುತ್ತಿದೆ. ಅದಕ್ಕೆ ಒತ್ತಿ ಒತ್ತಿ ತಾರೆ ಮುದ್ದಿಕ್ಕುತ್ತಿದ್ದಾಳೆ. ಮುದ್ದಿಕ್ಕಿದಂತೆಲ್ಲ ಬೇಬಿಯು ನಗುತ್ತಿದೆ. ಅದರೊಡನೆ ತಾರೆಯೂ ನಗುತ್ತಿದ್ದಾಳೆ. ತಾಯ್ತನದ ದೇವತೆಗೆ ಹಿಂದೆ ಪ್ರಭಾವಳಿ ಇಟ್ಟಂತೆ ಚಿನ್ನದ ಮುಗಿಲಿನ ಭೂಮಿಕೆ. ಮೈಮರೆತು ನಿಂತ ರಾಜಿಯನ್ನೂ ಮರೆತು ನಿಂತ. ತಾರೆಯನ್ನು ನೋಡಿ 'ನನ್ನ ಬೇಬಿಗೂ ತಾಯಿ ಇರುವಳು' ಎಂದುಕೊಂಡ. ಹಿರಿಹಿರಿ ಹಿಗ್ಗಿದ. ತಾರೆ ತಲೆಯೆತ್ತಿ ನೋಡಿದಳು. ಮೈ ಜುಮ್ಮೆಂದಿತು. ಬಹು ಸನಿಯದಲ್ಲೇ ವಸಂತ. ತನ್ನ ಹುಚ್ಚನ್ನು ನೋಡಿ ನಕ್ಕನೋ ಏನೋ ಎನಿಸಿತು. ನಾಚಿಕೆ. ಬೇಬಿಯನ್ನು ತೊಟ್ಟಿಲಲ್ಲಿ ಮಲಗಿಸಿ ಬಿಟ್ಟಳು. ವಸಂತ ಕುರ್ಚಿಯಲ್ಲಿ ಕುಳಿತ. ಕುಳಿತವನು ಹಾಗೆಯೇ ಕುಳಿತುಬಿಟ್ಟ. ಕಣ್ಣಲ್ಲಿ ಶೂನ್ಯ ದೃಷ್ಟಿ. ಮನಸಿನಲ್ಲಿ ಏನೋ! ಒಮ್ಮೆಲೆ ಬೇಬಿ ಅತ್ತಿತು, ಎಚ್ಚತ್ತ. ತೊಟ್ಟಿಲನ್ನು ತೂಗಿದ. ಬೇಬಿ ಅಳುತ್ತಲೇ ಇತ್ತು. ಕೈಯಲ್ಲಿ ಎತ್ತಿಕೊಂಡ. ಸುಮ್ಮನಾಗಲಿಲ್ಲ. ಎತ್ತಿಕೊಳ್ಳಲು ಸಹ ಬಾರದು. ಎರಡು ವಾರಗಳ ಬತ್ತಿ ಅದು. ಇನ್ನೂ ಹೆಚ್ಚಾಗಿ ಅಳಲು ಹತ್ತಿತು. ಒಳಗಿನಿಂದ ಓಡಿ ಬಂದಳು ತಾರೆ.

"ಬೇಬಿಗೇನಾಯಿತು?" ಬಹು ಆತುರದಿಂದ ಕೇಳಿದಳಾಕೆ.

"ಅವರಮ್ಮನ ನೆನಪಾಗಿದೆ." ಹರಳು ಕರಗುವಂತೆ ನುಡಿದ ವಸಂತ. ಗಂಟಲುಬ್ಬಿ ಬಂದಿತು ಅವನಿಗೆ. ಕೂಸನ್ನು ತಾರೆ ಕೈಗೆ ತೆಗೆದುಕೊಂಡಳು. ತೊಡೆಯ ಮೇಲೆ ಮಲಗಿಸಿಕೊಂಡು ಕೈ, ಕಾಲು, ಮೋರೆ, ನಾಲಗೆ ಒಮ್ಮೆಲೆ ಕುಣಿಸುತ್ತ 'ಳ್ಳ ಳ್ಳ ಳ್ಳ ಳ್ಳ ಳ್ಳಾಯೀ' ಮಾಡಿದಳು. ಮರುಕ್ಷಣದಲ್ಲಿಯೇ ಬೇಬಿ ಅಳುವುದನ್ನು ನಿಲ್ಲಿಸಿ ಎರಡೂ ಮುಂಗೈಗಳನ್ನು ಬಾಯಲ್ಲಿ ಇಟ್ಟುಕೊಂಡು ಕಾಲುಗಳನ್ನು ಬಡಿಯುತ್ತಿದ್ದಿತು; ಆಡುತ್ತಿದ್ದಿತು. ತಾರೆಯ ನಿಡಿದಾದ ಮೂಗನ್ನು ಗಟ್ಟಿಯಾಗಿ ಹಿಡಿಯಿತು. 'ಬಿಡಮ್ಮ, ಬಿಡು' ಎನ್ನುತ್ತ ಬೇಬಿಯ ಹಿಡಿತದಿಂದ ತನ್ನ ಮೂಗನ್ನು ಬಿಡಿಸಿಕೊಂಡಳು ತಾರೆ. 'ಕಳ್ಳೀ' ಎನ್ನುತ್ತ ಕೆನ್ನೆಗೆ ಮೃದುವಾಗಿ ಏಟಿಟ್ಟಳು. ಬೇಬಿ ಬೊಚ್ಚುಬಾಯಿ ತೆರೆಯಿತು. ತಾರೆಯೂ ನಕ್ಕಳು. ಕುಳಿತಲ್ಲಿಂದ ವಸಂತನೂ ನಗುತ್ತಿದ್ದ.

"ಬೇಬಿಯ ಭಾಷೆ ನಿನಗೆ ಚೆನ್ನಾಗಿ ಬರುತ್ತದೆ" ಎಂದು ಮತ್ತೆ ನಕ್ಕ.

"ಇನ್ನೂ ಕಲಿಯುತ್ತಿದ್ದೇನೆ, ಪೂರ್ತಿ ಬರುವುದಿಲ್ಲ!" ಎನ್ನುತ್ತ ಬೇಬಿಗೆ ಮುತ್ತಿಕ್ಕಿದಳು ತಾರೆ.

"ಬೇಬಿ ನಮ್ಮ ಭಾಷೆ ಕಲಿಯುವುದರೊಳಗಾಗಿ, ಬೇಬಿಯ ಭಾಷೆ ನಿನಗೆ ಪೂರ್ಣ ಬರುತ್ತದೆ" ಎಂದು ಮೇಲಕ್ಕೆದ್ದ.

ಕೈಕಾಲು ಮೋರೆ ತೊಳೆದುಕೊಂಡು ಬಂದು ಮಣೆಯ ಮೇಲೆ ಕುಳಿತ. ತಾರೆ ಎಲೆಹಾಕಿ ನೀರಿಟ್ಟಳು. ಅಡ್ಡ ಸೆರಗು ಕಟ್ಟಿ ಉಪ್ಪಿನ ಪಾತ್ರೆಗೆ ಹೋದಳು.

"ಐ! ಮರೆತೇಬಿಟ್ಟೆ. ನಿಮ್ಮ ಕಾಗದ ಬಂದಿದೆ!" ಎಂದು, ತಂದುಕೊಟ್ಟು, ತಪ್ಪು ಮಾಡಿದವರಂತೆ ಹಿಂದಿನ ಗೋಡೆಗೆ ಕಾಲಿಟ್ಟು, ಒಂಟಿಗಾಲಿನಿಂದ ನಿಂತಳು. ಕೈಯಲ್ಲಿ ಉಪ್ಪು ಹಾಗೆಯೇ ಇದ್ದಿತು. ವಸಂತ ತಲೆ ತಗ್ಗಿಸಿ ಪತ್ರವನ್ನೋದಿದ. ಮಣೆಯಿಂದೆದ್ದವನೇ ತನ್ನ ಕೋಣೆಗೆ ಹೋಗಿ ಕುಳಿತ. ಮತ್ತೆ ಓದಿ ಮೂಗಿಗೆ ಬೆರಳಿಟ್ಟ. ಎಷ್ಟು ಹೊತ್ತಾಯಿತೋ ವಸಂತನಿಗೆ ತಿಳಿಯದು. ಏಕೆ ಹೀಗೆ ಕುಳಿತನೋ ತಾರೆಗೂ ತಿಳಿಯದು. ಕಡೆಗೆ ಬಾಗಿಲ ಬಳಿ ಬಂದು 'ಎಲೆಯಲ್ಲಿ ಅನ್ನ ಹಾಕಿದೆ' ಎಂದಳು.

"ನನಗೆ ಹಸಿವು ಇಲ್ಲ. ನೀನು ಊಟ ಮುಗಿಸಿ ಬಿಡು!" ಎಂದು ಅಲ್ಲಿಂದಲೇ ಹೇಳಿದ.

"ಪತ್ರ ಎಲ್ಲಿಯದು?" ಎಂದು ಅನುಮಾನಿಸುತ್ತ ನುಡಿದು, ಎಡಗಾಲಿನ ಹೆಬ್ಬೆರಳಿನಿಂದ ನೆಲವನ್ನು ಚಿಮ್ಮುತ್ತ ನಿಂತಳು ತಾರೆ.

"ಎಲ್ಲಿಯದೂ ಅಲ್ಲ....ಬೇರೆ" ಎನ್ನುತ್ತ ಗೋಡೆಯ ಕಡೆಗೆ ನೋಡಿದ ವಸಂತ.

ಎಲೆಯಲ್ಲಿಯ ಅನ್ನವನ್ನು ಪಾತ್ರೆಗೆ ತುಂಬಿ ತಾರಾ ಮಲಗಿಬಿಟ್ಟಳು. ಪಕ್ಕದಲ್ಲಿ ಬೇಬಿ ನಿದ್ರೆಯ ಆಳದಲ್ಲಿ ಇಳಿಯುತ್ತಿದ್ದಿತು. ಮಗುವನ್ನೇ ನೋಡುತ್ತ ಮಲಗಿದಳು, ನಿದ್ರೆ ಬಂದಿತು. ಅವಳಿಗೇನು ಗೊತ್ತು.. ಪತ್ರವು ತನ್ನ ಮಾವನದೆಂದು? ತನ್ನನ್ನು ಕಳುಹುವುದಾಗಿ ಇದೆ ಎಂದು? ಬೇಬಿಯ ಪಕ್ಕದಲ್ಲಿದ್ದಾಗ ಆಕೆಗೆ ಮಾವ ಹೇಗೆ ನೆನಪಾಗಬೇಕು?

ವಸಂತನ ಕೋಣೆಯಲ್ಲಿ ಬೆಳಗಿನವರೆಗೂ ದೀಪವು ಉರಿಯುತ್ತಲೇ ಇದ್ದಿತು. ತಾರೆಯ ಶ್ವಾಸೋಚ್ಛ್ವಾಸವೂ ಅದರ ನೆಳಲಲ್ಲಿಯೊ ಎನ್ನುವಂತೆ ಮಗುವಿನದೂ ಕೇಳುತ್ತಿತ್ತು. ಬೆಳಗಾದ ಮೇಲೆ ಕುರ್ಚಿಯಿಂದೆದ್ದು ವಸಂತ, ಹಾಗೆಯೆ ಇದ್ದ ಹಾಸಿಗೆಯನ್ನು ಸುತ್ತಿಟ್ಟ.

* * *

ದಿನಗಳು ಉರುಳಿದುವು. ತಾರೆಯೇನೋ ದಿನೇ ದಿನೇ ಬೇಬಿಗೆ ಹೆಚ್ಚು ಹೆಚ್ಚು ತಾಯಿಯಾಗುತ್ತಿದ್ದಳು. ಬೇಬಿಯೊಂದಿಗೆ ಆಡುವ ಭರದಲ್ಲಿ ಊಟವನ್ನು ಸಹ ಮರೆಯುತ್ತಿದ್ದಳು. ಎಷ್ಟೋಸಲ ಊಟಕ್ಕೆ ಕುಳಿತಾಗಲೂ ಎದ್ದೆದ್ದು ಬಂದು ತೊಟ್ಟಿಲಲ್ಲಿ ಇಣಿಕಿ ಹೋಗುತ್ತಿದ್ದಳು. ಆದರೆ ವಸಂತನು ಮಾತ್ರ ಒಮ್ಮೊಮ್ಮೆ ಗಂಟೆಗಳವರೆಗೂ ಮೂಗಿಗೆ ಬೆರಳಿಟ್ಟು ಕೂಡುತ್ತಿದ್ದ. ಅದರ ಅರ್ಥವೇ ಆಗುತ್ತಿರಲಿಲ್ಲ ತಾರೆಗೆ, ರಾಜಕ್ಕನ ನೆನಪಿಗಾಗಿ ಇರಬಹುದು ಎಂದು ಕೊಂಡು ನೊಂದುಕೊಳ್ಳುತ್ತಿದ್ದಳು. ಕೂಡಲೆ ಬೇಬಿಯೊಂದಿಗೆ ಆಡಿ, ಇವರೆಲ್ಲರನ್ನೂ ಮರೆತು ಬಿಟ್ಟು ಬಿಡುತ್ತಿದ್ದಳು.

ವಸಂತ ಬೇಸತ್ತು ಮನೆಗೆ ಬಂದ. ಉಸ್ಸೆಂದು ಮೇಜಿನ ಮುಂದೆ ಕುಳಿತ. ಪತ್ರವೊಂದು ಕಣ್ಣಿಗೆ ಬಿದ್ದಿತು. ಯಾರಿಂದ ಏನೆಂದು ಗೊತ್ತಾಯಿತು. ಓದಲು ಸಹ ಹೆದರಿದ ಅದನ್ನು. ತಾರೆಗೆ ಹೇಳಬೇಕೋ ಬೇಡವೋ? ಹೇಳದಿದ್ದರೆ ಅವಳಿಗೆ ದ್ರೋಹ–ಹೇಳಿದರೆ ಬೇಬಿಗೆ! ಮಗುವಿಗೆ ಸ್ನಾನಮಾಡಿಸಿ ಎತ್ತಿಕೊಂಡು ತಾರೆ ಹೊರಕ್ಕೆ ಬಂದಳು. ತೊಟ್ಟಿಲಲ್ಲಿ ಮಲಗಿಸಿದಳು. ಮಗುವಿಗೆ ಬಟ್ಟೆ ಹೊದಿಸುತ್ತ ಹೇಳಿದಳು :

"ನಿಮ್ಮ ಕಾಗದ ಬಂದಿದೆ!"

"ಅಹುದು."

"ಎಲ್ಲಿಯದು?" ಎಂದು ಆ ಕಡೆ ನೋಡಿದಳು. ವಸಂತನ ಗಲ್ಲಗಳ ಮೇಲೆರಡು ಕಂಬನಿಗಳು ತಳತಳಿಸುತ್ತಿದ್ದುವು.

"ಎಲ್ಲಿಯದು?" ಎಂದು ಪುನಃ ಕೇಳಿ ಮೇಜಿನ ಬಳಿ ಬಂದಳು ತಾರೆ.

"ನೀನೇ ಓದು!" ಎಂದು ಕೊಟ್ಟುಬಿಟ್ಟ. ಬೇಬಿ ಅಳಲು ಮೊದಲು ಮಾಡಿತು. ವಸಂತ ತನ್ನ ಕೋಣೆಗೆ ಹೋಗಿ ಬಾಗಿಲನ್ನು ಹಾಕಿಕೊಂಡ.

ಸಾಯಂಕಾಲ ಕುರ್ಚಿಯ ಮೇಲೆ ಕುಳಿತಿದ್ದ. ಒಳ ಬಾಗಿಲಲ್ಲಿ ಕುಳಿತು ತಾರೆ ತನ್ನ ಸಾಮಾನುಗಳನ್ನು ಪೆಟ್ಟಿಗೆಗೆ ಹಾಕಿಕೊಳ್ಳುತ್ತಿದ್ದಳು. ಆ ಪತ್ರವನ್ನು ನೋಡಿದ ಮೇಲೆ ಒಬ್ಬರಿಗೊಬ್ಬರು ಮಾತನ್ನೆ ಆಡಿರಲಿಲ್ಲ.

'ಬಹು ನಿಷ್ಠುರವಾಗಿ ಬರೆದಿದ್ದಾರೆ ಮಾವನವರು" ಮೆಲ್ಲಗೆ ನುಡಿದಳು ತಾರೆ.

"ಅಹುದು!"

"'ನನ್ನ ಮನೆ ನಿನಗೆ ಎರವಾಗುತ್ತದೆ' ಎಂದು ಬರೆದಿದ್ದಾರೆ."

"ಅಹುದು!"

"........."

"........."

"'ಲೋಕಾಪವಾದ ಬರುತ್ತದೆ' ಎಂದು ಬರೆದಿದ್ದಾರೆ!"

"ಅಹುದು!"

"ಹಾಗಾದರೆ......"

"............."

"ಬೇಬಿ?"

"ರಾಜಿಯ ಬಳಿ ಹೋಗುತ್ತಾಳೆ!"

ಇಬ್ಬರೂ ಬಿಕ್ಕಿ ಬಿಕ್ಕಿ ಅತ್ತರು. ಅಳುವವರನ್ನು ಅಣಕಿಸುವಂತೆ ತೊಟ್ಟಿಲಲ್ಲಿ ಗೊರಕೆಹೊಡೆಯುತ್ತಿದ್ದಿತು ಬೇಬಿ.

ಗಾಡಿಯಲ್ಲಿ ತಾರೆ. ಕೈಯಲ್ಲಿ ಬೇಬಿ. ಕೆಳಗೆ ವಸಂತ. ಗಾಡಿ ಕೂಗಿತು. ಕಡೆಯ ಮುತ್ತೊಂದನ್ನು ಕೊಟ್ಟು ತಾರೆ ಬೇಬಿಯ ಮುಖವನ್ನು ನೋಡಿದಳು. ರಾಜಿಯ ಮೋರೆ ಹರಿದು ಹಚ್ಚಿದೆ. ಗಾಡಿ ಕದಲಿತು. ವಸಂತ ಕೈಯೊಡ್ಡಿದ. ಬೇಬಿಯನ್ನು ತಾರೆ ವಸಂತನ ಕೈಯಲ್ಲಿಟ್ಟಳು. ಬೇಬಿ ಅಳಲು ಮೊದಲು ಮಾಡಿತು. ತಾರೆ ಕಣ್ಣು ಮುಚ್ಚಿಕೊಂಡಳು—ಆದರೆ ಕಿವಿಯನ್ನಲ್ಲ; ಮೈದುಂಬಿತು. ಗಾಡಿಯ ಬಾಗಿಲನ್ನು ತೆರೆದಳು. ಇಳಿಯಲು ಕಾಲನ್ನಿಟ್ಟಳು.

"ಬೇಡ ತಾರೆ, ಬೇಡ" ಎಂದು ಅಡ್ಡ ನಿಂತ ವಸಂತ. ಅವಳಿಗೆ ಯಾವುದೂ ಕೇಳದು.

"ನಿನಗೆ ಅವರ ಮನೆ ಇಲ್ಲವಾಗುತ್ತದೆ!"

"ನನಗೆ ಬೇಬಿ ಇದೆ!"

"ಲೋಕಾಪವಾದ ಬರುತ್ತದೆ!"

"ನನಗೆ ಬೇಬಿ ಇದೆ!"

ಕೆಳಕ್ಕಿಳಿದು ಆಗಲೇ ಮಗುವನ್ನೆತ್ತಿಕೊಂಡಿದ್ದಳು. 'ಬೇಬಿ, ಅಳಬೇಡ' ಎಂದು ಕೂಗುತ್ತ ಗಾಡಿ ಹೊರಟೇಬಿಟ್ಟಿತು. 'ಇನ್ನೇಕೆ ಅಳಲಿ' ಎನ್ನುವಂತೆ ಬೇಬಿ ಗಂಭೀರವಾಗಿ ಹೆಬ್ಬೆರಳು ಚೀಪುತ್ತ ತಾರೆಯ ಕೈಯಲ್ಲಿ ಒರಗಿದ್ದಿತು.

* * *

ಪತ್ರದಲ್ಲಿ ಬರೆದಿದ್ದಂತೆ ತಾರೆಯ ಮಾವನವರು 'ತಾರೆ ಸತ್ತಳು' ಎಂದು ನೀರು ಹಾಕಿಕೊಂಡರಂತೆ.

ಮಾತಾ ಮೊಂಟೆಸೊರಿ ★ (ಜೀವನವೃತ್ತ)

ಶ್ರೀ. ಹ. ವ. ಬಬಲೇಶ್ವರ, ಮಾಂಟ್. ಡಿಪ್.

★

ಸ್ತ್ರೀಶಿಕ್ಷಣದ ವಿಷಯದಲ್ಲಿ ಪಶ್ಚಿಮದ ರಾಷ್ಟ್ರಗಳೂ ಕಗ್ಗತ್ತಲೆಯಲ್ಲಿ ಇರುವಾಗ ಮೂಡಿದ ಚುಕ್ಕಿಯಿವಳೆ. ಅಲ್ಪಮತಿಗಳೆಂದೂ ಮೂಢರೆಂದೂ ಹಿಂದೆ ಬೀಳುತ್ತಲಿದ್ದ ಹುಡುಗರ ಉದ್ಧಾರಕ್ಕಾಗಿ ಇಳೆಗೆ ಇಳಿದುಬಂದ ದೇವತೆಯಿವಳೆ. ಎಂತಲೆ ಮಕ್ಕಳಿಲ್ಲದಿದ್ದರೂ ಮಾತೆಯರಿಗೆ ಮಾತೆಯಾಗಿ ಮಿರುಗುತ್ತಿದ್ದಾಳೆ.

★

ಕ್ರಿ. ಶಕದ ೧೮೭೦ ನೆಯ ವರ್ಷ; ಇಟಲಿದೇಶದ ಸ್ವಾತಂತ್ರ್ಯ ಯುದ್ಧದ ಕೊನೆಕೊನೆಯ ಭಾಗದಲ್ಲಿ, **ಮೇರಿಯಾ ಮೊಂಟೆಸೊರಿಯವರ** ಜನ್ಮ ಒಂದು ಮಧ್ಯಮವರ್ಗದ ಮನೆತನದಲ್ಲಾಯಿತು. ಆಗ ದೇಶದಲ್ಲಿ ಸಾಮಾಜಿಕ ಕಲ್ಪನೆ ಬಹು ಸಂಕುಚಿತ ಸ್ಥಿತಿಯಲ್ಲಿದ್ದಿತು. ಪಶ್ಚಿಮದೇಶಗಳಲ್ಲಿಯೂ ಸ್ತ್ರೀ-ಶಿಕ್ಷಣಕ್ಕೆ ಅಷ್ಟು ಮಹತ್ತ್ವವಿದ್ದಿಲ್ಲ. ಬಹಳವಾದರೆ ಸ್ವಲ್ಪ ಅಕ್ಷರ ಜ್ಞಾನಮಾಡಿಕೊಂಡು ಶಿಕ್ಷಿಕೆಯರಾಗಲು ಮಾತ್ರ ಸ್ತ್ರೀಯರಿಗೆ ಅಧಿಕಾರವಿದ್ದಿತು. ಇಂತಹ ಪರಿಸ್ಥಿತಿಯಲ್ಲಿ ಮೊಂಟೆಸೊರಿ-ಯವರು ತಾಯಿ-ತಂದೆಗಳಿಗೆ ಮುದ್ದಾಗಿ, ಊರವರಿಗೆ ಕಣ್ಣಾಗಿ ಬೆಳೆದರು. ಹನ್ನೊಂದು ವರ್ಷದವರಾದಾಗಲೇ ಅವರಿಗೆ ಏನಾದ-ರೊಂದು ಸ್ವತಂತ್ರ ಉದ್ಯೋಗ ಮಾಡುವ ಇಚ್ಛೆಯುಂಟಾಯಿತು. ಆಗ ಸ್ತ್ರೀಯರಿಗಿದ್ದುದೆಂದರೆ ಅದೊಂದೇ ಉದ್ಯೋಗ; ಶಿಕ್ಷಿಕೆ-ಯಾಗುವದು. ಅದರಂತೆಯೆ ಶಿಕ್ಷಿಕೆಯಾಗಿ ಆಕೆ ಕೆಲಸಕ್ಕೆ ಪ್ರಾರಂಭ ಮಾಡಿದರು. ಆಗಿನ ಕಾಲದ ಶಾಲೆಗಳಲ್ಲಿ ನಡೆಯುವ ಶಿಕ್ಷಣಕ್ರಮವು ಅವರ ಮನಸ್ಸಿಗೆ ಬರಲಿಲ್ಲ. ಹೀಗೆ ಮನಸ್ಸಿಲ್ಲದೆ ವ್ಯರ್ಥಕಾಲ ಕಳೆಯುವದು ಸರಿಯಲ್ಲವೆಂದು ಅದನ್ನು ಬಿಟ್ಟು-ಕೊಟ್ಟು, ಎಂಜನಿಯರಾಗಲು ನಿಶ್ಚಯಿಸಿದರು.

ಈ ಹೊಸ ಪ್ರಯೋಗದಿಂದವರು ಹೆಚ್ಚು ತೊಂದರೆಗೀಡಾದರು. ಆ ಕಾಲೇಜಿನಲ್ಲಿ ಇವರೊಬ್ಬರೇ ಹೆಂಗುಸರು. ಮುಂಜಾನದಲ್ಲಿ ತಾಯಿ ಅವರನ್ನು ಶಾಲೆಗೆ ಮುಟ್ಟಿಸಬೇಕು? ಸಾಯಂಕಾಲ ತಂದೆ ಮನೆಗೆ ಕರೆದು ತರಬೇಕು. ಬಿಡುವಿನ ಸಮಯದಲ್ಲಿ ದೂರ ಒಂದು ಕೋಣೆಯಲ್ಲಿ ಏಕಾಕಿನಿಯಾಗಿ ಕಾಲಕಳೆಯ-ಬೇಕು. ಇಂತಹ ಸ್ಥಿತಿಯಲ್ಲಿಯೆ ತಮ್ಮ ಅಭ್ಯಾಸವನ್ನು ಸಾಗಿಸಿದರು. ಈ ಕಾಲದಲ್ಲಿ ಮೊಂಟೆಸೊರಿಯವರು ಗಣಿತ-ಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸಮಾಡಿದರು. ಹೀಗೆಯೆ ಅಭ್ಯಾಸ ಮಾಡುತ್ತಿರುವಾಗ ಅವರ ಮನಸ್ಸು ವೈದ್ಯಕದ ಕಡೆಗೆ ಹರಿಯಿತು. ಅಲ್ಲಿ ಕೂಡ ಇವರೊಬ್ಬರೇ ಹೆಂಗುಸರು. ಅದೆಷ್ಟು ಅಡಚಣೆಗಳು ಬಂದರೂ, ಕೈಕೊಂಡ ಅತಿ ಕಠಿನವಾದ ವಿದ್ಯಾಭ್ಯಾಸವನ್ನು ಮುಗಿಸಿ, ರೋಮ್ ವಿಶ್ವವಿದ್ಯಾಲಯದಲ್ಲಿ ಎಂ. ಡಿ. ಪದವಿಯನ್ನು ದೊರಕಿಸಿದರು. ಡಾಕ್ಟರರಾದ ನಂತರ ರೋಮ್ ನಗರದಲ್ಲಿರುವ—ಮೆದುಳು ಕೆಟ್ಟರೋಗಿಗಳ—ಆಸ್ಪತ್ರೆಯಲ್ಲಿ ಸಹಾಯ್ಯಕ ಡಾಕ್ಟರರಾಗಿ ನಿಯಮಿಸಲ್ಪಟ್ಟರು. ಈ ಆಸ್ಪತ್ರೆಯಲ್ಲಿ ತಲೆ ಕೆಟ್ಟವರನ್ನಷ್ಟೆ ಅಲ್ಲದೆ, ಮೂಢಮತಿ ಹಾಗು ಮಂದಮತಿಗಳಾದ ಬಾಲಕರನ್ನೂ ಸೇರಿಸಿದ್ದರು. ಡಾ. ಮೊಂಟೆಸೊರಿಯವರ ಲಕ್ಷ್ಯ ಬಾಲಕರ ಕಡೆಗೆ ಹರಿಯಿತು. 'ಇವರನ್ನು ಹೇಗೆ ಸುಧಾರಿಸುವದು?' ಎಂಬ ಯೋಜನೆ ಹಗಲಿರುಳೂ ಅವರನ್ನು ಬಾಧಿಸತೊಡಗಿತು. ಆದುದರಿಂದಲೆ ಆಗ ಪ್ರಚಾರದಲ್ಲಿದ್ದ ಆ ವಿಷಯಕವಾದ ಅನೇಕ ಪುಸ್ತಕಗಳನ್ನು ಓದತೊಡಗಿದರು. ಕಡೆಗೆ "ಈ ಮೂಢಮತಿ-ಗಳಾದ ಬಾಲಕರಿಗೆ ಯಾವ ಔಷಧೋಪಚಾರದಿಂದಲೂ ಪ್ರಯೋ-ಜನವಿಲ್ಲ. ಯೋಗ್ಯ ಶಿಕ್ಷಣದಿಂದಲೇ ಇವರ ಪ್ರಗತಿಯಾಗಬೇಕು," ಎಂಬ ನಿರ್ಧಾರಕ್ಕೆ ಬಂದರು.

ಅವರು ತಮ್ಮ ಈ ಹೊಸ ವಿಚಾರವನ್ನು ೧೮೯೮ರಲ್ಲಿ **ಟೂರಿನ್** ನಗರದಲ್ಲಿ ಸೇರಿದ ಶಿಕ್ಷಣ ಪರಿಷತ್ತಿನಲ್ಲಿ ಮಂಡಿಸಿದರು. ಪರಿಷತ್ತಿನಲ್ಲಿ ಒಂದು ಬಗೆಯ ಹೊಸ ಬೆಳಕು ಕಂಡುಬಂದಿತು. ಡಾ. ಮೊಂಟೆಸೊರಿಯವರು ಹೊಸ ಸಿದ್ಧತೆಯಿಂದ ಮೂಢಮತಿಗಳನ್ನು ತಿದ್ದುವ ವಿಧಾನವನ್ನು ತೋರಿಸಿ ಕೊಡಲು ರೋಮ್ ವಿದ್ಯಾ-ಪೀಠದವರು ಅವರನ್ನು ಉಪನ್ಯಾಸಕರನ್ನಾಗಿ ಆಮಂತ್ರಿಸಿದರು. ಆ ವೇಳೆ ಇಂತಹ ಹುಡುಗರ ಮನೋವಿಕಾಸಕ್ಕಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಿ, ಡಾ. ಮೊಂಟೆಸೊರಿಯವರನ್ನು ಅದಕ್ಕೆ ವಿದ್ಯಾಧಿಕಾರಿಗಳನ್ನಾಗಿ ನಿಯಮಿಸಿದರು. ಅಂದಿನಿಂದ ಇವರ ಕಾರ್ಯಕ್ಷೇತ್ರ ವೈದ್ಯಕದಿಂದ ಶಿಕ್ಷಣಕ್ಕೆ ಜಾರಿಕೊಂಡಿತು. ಇದರಿಂದ ಇವರು ಒಮ್ಮೆಲೆ ವೈದ್ಯಕವೃತ್ತಿಯನ್ನು ಬಿಟ್ಟುಕೊಟ್ಟರೆಂದಲ್ಲ, ಒಳ್ಳೆಯ ಡಾಕ್ಟರರೆಂದೂ ಮೊಂಟೆಸೊರಿಯವರು ಪ್ರಸಿದ್ಧಿಹೊಂದಿದ್ದಾರೆ. ಎಂತಹ ಮಧ್ಯರಾತ್ರಿಯಲ್ಲಿಯೂ

ಕೂಡ ಅವರು, ಭಯಂಕರವಾದ ರೋಗಗಳಿಂದ ನರಳುತ್ತಿದ್ದವರ ಮನೆಗೆ ನಿರ್ಭಯದಿಂದ ಹೋಗುತ್ತಿದ್ದರು. ಬಡ ರೋಗಿಗಳಿಗೆ ಸ್ವತಃ ಆರೈಕೆ ಮಾಡುತ್ತಿದ್ದರು. ಅವರಿಗೆ ಪಥ್ಯಕ್ಕೆ ಬೇಕಾದ ವಸ್ತುಗಳನ್ನು ತಂದುಕೊಟ್ಟು ರೋಗದಿಂದ ಪಾರು ಮಾಡುತ್ತಿದ್ದರು. ಕೆಲಸವಿಲ್ಲದೆ ಬಳಲುತ್ತಿದ್ದ ರೋಗಿಗಳಿಗೆ ನೌಕರಿಯನ್ನು ಸಹ ಹುಡುಕಿ ಕೊಟ್ಟ ಅನೇಕ ಉದಾಹರಣೆಗಳಿವೆ. ದುಃಖ ಪಡುವವರನ್ನು ಕಂಡು ಮನಸ್ಸು ಕರಗಿ, ಅದರ ನಿವಾರಣೆಗಾಗಿ ಅವರು ಯಾವಾಗಲೂ ಸಿದ್ಧರಾಗುತ್ತಿದ್ದರು. ಡಾಕ್ಟರರಿದ್ದಾಗ ತೋರಿಸಿದ ತನ್ಮಯತೆ, ಏಕಾಗ್ರತೆ ಮತ್ತು ಪರಿಶ್ರಮ ಹಾಗು ಅಸಾಧಾರಣ ಉದ್ಯೋಗಗಳೆಲ್ಲವೂ ಅವರ ನೂತನ ಶಿಕ್ಷಣ-ಕ್ಷೇತ್ರದಲ್ಲಿ ಸೇರಿಕೊಂಡವು. ಅಷ್ಟೇ ದಕ್ಷತೆಯಿಂದ ಬೆಳಗಿನ ಎಂಟು ಗಂಟೆಯಿಂದ ಸಾಯಂಕಾಲದ ಎಂಟು ಗಂಟೆಯವರೆಗೂ, ಮಂದ ಬುದ್ಧಿಯವರಾದ ಚಿಕ್ಕ ಮಕ್ಕಳಿಗೆ ವಿದ್ಯೆ ಕೊಡುವ ಕ್ರಮದಲ್ಲಿ ಕಾಲಕಳೆಯುತ್ತಿದ್ದರು. ರಾತ್ರಿ ತಾವು ಶಾಲೆಯಲ್ಲಿ ಪಡೆದ ಅನುಭವಗಳನ್ನು ಚಿಂತನೆಮಾಡಿ, ಮರುದಿನ ಮಕ್ಕಳಿಗೆ ಹೇಗೆ ಪಾಠ ಹೇಳಬೇಕು ಎಂಬುದನ್ನು ನಿರ್ಧರಿಸುತ್ತಿದ್ದರು, ಅಲ್ಲದೆ ತಮಗೆ ಉಪಯೋಗವಾಗುವ ಗ್ರಂಥಗಳನ್ನು ಓದುತ್ತಿದ್ದರು. ಅವೆಲ್ಲವುಗಳ ಟಿಪ್ಪಣಿ ತೆಗೆದು ಬರೆದಿಡುತ್ತಿದ್ದರು.

ಹೀಗೆಯೆ ಡಾ. ಮೊಂಟೆಸೊರಿಯವರ ಜೀವನ ಶಾಂತಿಮಯವಾಗಿ ಸಾಗಿತು. ಇನ್ನೂ ಅವರ ಕೀರ್ತಿ ಎಲ್ಲೆಡೆಯಲ್ಲಿಯೂ ಹಬ್ಬಿಕೊಂಡಿರಲಿಲ್ಲ. ಕೇವಲ ತಮ್ಮ ಪ್ರಯೋಗಗಳಲ್ಲಿಯೆ ಅವರು ಮಗ್ನರಾಗಿಬಿಟ್ಟಿದ್ದರು. ಆಗ ಹೆಚ್ಚು ಅನುಭವಪಡೆಯಲು ಪ್ಯಾರಿಸ್ ನಗರಕ್ಕೆ ಹೋಗಿ, ಅಲ್ಲಿ ಇಂತಹ ಹುಡುಗರಿಗೆ ಕಲಿಸುತ್ತಲಿದ್ದ ಕ್ರಮವನ್ನು ಅರಿತುಕೊಂಡು ಬಂದರು. ಅನೇಕ ಗ್ರಂಥಗಳನ್ನು ಅಭ್ಯಾಸ ಮಾಡಿದರು. ಇದೆಲ್ಲದರಿಂದ ದೊರೆತ ಅನುಭವದಿಂದ, ಬೇರೆಬೇರೆ ರೀತಿಯಾಗಿ ಹುಡುಗರಿಗೆ ಅಭ್ಯಾಸ-ಕ್ರಮವನ್ನು ಯೋಜಿಸಿ, ಒಳ್ಳೆಯ ಯಶಸ್ಸನ್ನು ಸಂಪಾದಿಸಿದರು.

ಇವರ ಯಶಸ್ಸು ಅಪೂರ್ವವಾದದ್ದು. ಇವರ ಶಿಕ್ಷಣದಲ್ಲಿದ್ದ ಮೂಢಮತಿಯಾದ ಹುಡುಗನೊಬ್ಬ, ಸಾರ್ವಜನಿಕ ಪರೀಕ್ಷೆಯೊಂದರಲ್ಲಿ ಮೇಲ್ತರಗತಿಯಲ್ಲಿ ಉತ್ತೀರ್ಣನಾದ. ಜನರೆಲ್ಲರೂ ಆಶ್ಚರ್ಯಪಟ್ಟರು. ಮೊಂಟೆಸೊರಿಯವರು ಕೂಡ ವಿಚಾರದಲ್ಲಿ ಬಿದ್ದರು. 'ಸರ್ವಸಾಧಾರಣ ಹುಡುಗರಿಗಿಂತ ತಮ್ಮ ಹುಡುಗ ಬುದ್ಧಿಶಾಲಿಯಾದುದು ಹೇಗೆ? ಬುದ್ಧಿಶಾಲಿ ಹುಡುಗ ಏಕೆ ಹಿಂದುಳಿಯಬೇಕು!' ಈರೀತಿಯಾಗಿ ಅವರು ಯೋಚನೆ ಮಾಡುತ್ತಿರುವಾಗ ಅವರ ಅಸಾಧಾರಣವಾದ ಶಿಕ್ಷಣಪದ್ಧತಿಯು ಜನ್ಮವಾಯಿತು. ತಾವು ಕೈಕೊಂಡ ಶಿಕ್ಷಣಕ್ರಮದಿಂದ ಮಂದ-ಬುದ್ಧಿಯವರಾದ ಹುಡುಗರೂ ಹೆಚ್ಚು ಬುದ್ಧಿಶಾಲಿಗಳಾಗುತ್ತಿರುವಾಗ, ಅದೇ ಶಿಕ್ಷಣಪದ್ಧತಿಯನ್ನು ಸಾಮಾನ್ಯ ಹುಡುಗರ ತರಬೇತಿನಲ್ಲಿ ಸ್ವಲ್ಪ ಹೆಚ್ಚುಕಡಿಮೆ ಪ್ರಮಾಣದಲ್ಲಿ ಉಪಯೋಗಿಸಿದರೆ ಹೇಗೆ?....ಎಂದು ವಿಚಾರಿಸಿ, ಈ ಉದ್ಯಮಕ್ಕೆ ಕೈಹಾಕಿದರು. ಇದರಲ್ಲಿ ಅವರಿಗೆ ಅತಿ ಸುಲಭವಾಗಿ ಯಶಸ್ಸು ದೊರೆಯಿತು. ಇವರ ಶಿಕ್ಷಣಕ್ರಮವನ್ನು ಅಭ್ಯಾಸಮಾಡಲು ಬೇರೆ ಬೇರೆ ದೇಶಗಳಿಂದ ಶಿಕ್ಷಣತಜ್ಞರು ಬರತೊಡಗಿದರು. ಡಾ. ಮೊಂಟೆಸೊರಿಯವರಿಗೆ ರೋಮ್ ಮಹಾರಾಜ್ಞಿಯ ಸಹಾಯ ಬೇರೆ ದೊರೆಯಿತು. ಅವರ ಸ್ವತಂತ್ರವಾದ ಶಾಲೆಯೊಂದು ಸ್ಥಾಪಿಸಲ್ಪಟ್ಟು, ಅಲ್ಲಿ ತಮ್ಮ ಪದ್ಧತಿಯ ಮೇರೆಗೆ ಶಿಕ್ಷಕರನ್ನು ತರಬೇತುಮಾಡಲು ಶಾಲೆಯೊಂದನ್ನು ತೆರೆದರು. ಹೀಗೆ ಪ್ರಪಂಚದಲ್ಲಿ ಎಲ್ಲ ಕಡೆಗೂ ಇವರ ಕೀರ್ತಿ ಹರಡಿತ್ತು. ಹಲವು ದೇಶಗಳ ಸರಕಾರದವರು ಇವರನ್ನು ಕರೆಯಿಸಿಕೊಂಡು, ತಮ್ಮಲ್ಲಿಯೇ ಶಿಕ್ಷಕರನ್ನು ತರಬೇತುಮಾಡಲು ಕೇಳಿಕೊಂಡರು. ಆ ಮೇರೆಗೆ ಎಲ್ಲ ಕಡೆಗೂ ಹೋಗಿ ಶಿಕ್ಷಣಕೇಂದ್ರಗಳನ್ನು ತೆರೆದು, ಅಸಂಖ್ಯ ಜನ ಶಿಕ್ಷಕರನ್ನು ತರಬೇತುಮಾಡುವ ಭಾರವನ್ನು ಹೊತ್ತು, ಇವರು ಕೆಲಸ ಮಾಡಿದರು. ಇವರ ಎಲ್ಲ ಶಿಕ್ಷಣ-ಕೇಂದ್ರಗಳೂ ಬಹು ಯಶಸ್ವಿಯಾಗಿವೆ. ಇವರ ಹೆಸರಿನಿಂದ ಅನೇಕ ಕಡೆಗೆ ಸಂಘಗಳು ಹುಟ್ಟಿಕೊಂಡಿವೆ; ಪತ್ರಿಕೆಗಳು ಪ್ರಕಟಿಸಲ್ಪಡುತ್ತವೆ. ಇವರು ತಮ್ಮ ಶಿಕ್ಷಣಕ್ರಮದ ವಿಷಯವಾಗಿ ಬರೆದ ಹಲವು ಪುಸ್ತಕಗಳು, ಪ್ರಪಂಚದ ಎಲ್ಲ ಪ್ರಮುಖ-ಭಾಷೆಗಳಲ್ಲಿಯೂ ಅಚ್ಚಾಗಿವೆ.

ಮಹಾತ್ಮಾ ಗಾಂಧಿಯವರು ದುಂಡುಮೇಜಿನ ಪರಿಷತ್ತಿಗಾಗಿ ಇಂಗ್ಲಂಡಿಗೆ ಹೋಗಿ ಮರಳುವಾಗ, ಕೇವಲ ಮೊಂಟೆಸೊರಿಯವರನ್ನು ಕಾಣಲು ಇಟಲಿ ದೇಶಕ್ಕೆ ಹೋಗಿ, ಅವರನ್ನು ಹಿಂದುಸ್ತಾನಕ್ಕೆ ಬರಲು ಆಮಂತ್ರಿಸಿದರು. ಈ ಆಮಂತ್ರಣಕ್ಕೆ ಪುಷ್ಟಿಕೊಟ್ಟು ಥಿಯಾಸೊಫಿಕಲ್ ಸೊಸೈಟಿಯವರು, ಡಾ. ಮೊಂಟೆಸೊರಿಯವರನ್ನು ೧೯೩೯ನೆಯ ಇಸ್ವಿಯ ಕೊನೆಯ ಭಾಗದಲ್ಲಿ ಹಿಂದುಸ್ತಾನಕ್ಕೆ ಕರೆಯಿಸಿಕೊಂಡೇ ಬಿಟ್ಟರು. ಮದ್ರಾಸಿನ ಒಂದು ಭಾಗವಾದ ಅಡೆಯಾರದಲ್ಲಿ ಮೊಂಟೆಸೊರಿ ಶಿಕ್ಷಣಕೇಂದ್ರವು ಸ್ಥಾಪಿಸಲ್ಪಟ್ಟು, ಅವರ ನೇತೃತ್ವದಲ್ಲಿ ಮೊದಲನೆಯ ಶಿಕ್ಷಣಶಿಬಿರವು ಪ್ರಾರಂಭವಾಯಿತು. ಸುಮಾರು ೩೦೦ ರಷ್ಟು ಜನರು ಶಿಕ್ಷಣ ಪಡೆದರು. ಭಾರತದ ಬೇರೆ ಬೇರೆ ಪ್ರಾಂತಗಳಿಂದಷ್ಟೇ ಅಲ್ಲದೆ, ಬರ್ಮಾ, ಸಿಲೋನ್, ಸ್ಟ್ರೇಟ್ಸ್ ಆಫ್ರಿಕಾ ದೇಶಗಳಿಂದ ಕೂಡ ಜನರು ಬಂದು ಶಿಕ್ಷಣ ಪಡೆದುಕೊಂಡರು.

ಡಾ. ಮೊಂಟೆಸೊರಿಯವರು ಇನ್ನೂ ಮದ್ರಾಸಿನಲ್ಲಿಯೇ ಇದ್ದಾರೆ. ಯುದ್ಧದ ಪ್ರಖರ ವಾತಾವರಣವು ಅವರನ್ನು ಹಿಂದುಸ್ತಾನದಲ್ಲಿಯೇ ಉಳಿಸಿದೆ. ಅದರಿಂದ ಭಾರತೀಯರಿಗೆ ಅದೆಷ್ಟೋ ಉಪಯೋಗವಾಗುತ್ತಿದೆ. ಅವರು ಇಷ್ಟರಲ್ಲಿಯೆ ಪಕ್ಷಿನ ಅಭ್ಯಾಸಕ್ಕಾಗಿ ತಮ್ಮ ಶಿಕ್ಷಣಕ್ರಮದ ಬೇರೊಂದು ಶಿಕ್ಷಣ ಶಿಬಿರದ ಏರ್ಪಾಡನ್ನು ಮಾಡುತ್ತಿದ್ದಾರೆ. ಅವರ ಹಾರೈಕೆ ಬೇಗನೆ ಕೈಗೂಡಬೇಕಷ್ಟೆ!

ಪಾಕಿಸ್ತಾನದ ಸ್ವರೂಪವೇನು?

ಶ್ರೀ. ಮಿರ್ಜಿ ಅಣ್ಣಾರಾಯರು, ಮಾಂಜರಿ

★

'ಪಾಕಿಸ್ತಾನ್' ಎಂಬ ಹೆಸರನ್ನು ಕೇಳಿದರೆ ಯಾವ ಸಮಂಜಸ ಭಾರತೀಯನಿಗೂ ಸಂತಾಪ-ಅಸಮಾಧಾನಗಳುಂಟಾಗದಿರವು. ಹರಿದು ಹಂಚಿ ಆಳುವ ರಾಜನೀತಿಯನ್ನು ಅರಿತ ಬ್ರಿಟಿಷ್ ಆಡಳಿತ 'ಪಾಕಿಸ್ತಾನ'ದ ಮರ್ಕಟಕ್ಕೆ ಮದ್ಯವನ್ನು ಕುಡಿಸತೊಡಗಿದೆ. ಹಿಂದು-ಮುಸಲ್ಮಾನರ ನಿಜವಾದ ಸ್ನೇಹವೇ ಈ ಕೋತಿಯ ಕೊರಳಿಗೆ ಉರುಲಾಗಬೇಕು, ಇಷ್ಟೆ!

★

ಭಾರತಖಂಡವು ಒಂದು ರಾಷ್ಟ್ರವಿದೆ; ಎಲ್ಲ ದೃಷ್ಟಿಯಿಂದಲೂ ಸ್ವಾವಲಂಬಿಯಾಗಿರಲು ತಕ್ಕುದಾದ ಅಖಂಡ ದೇಶವಿದೆ. ಇದರಲ್ಲಿ ಎರಡು ಭಾಗಮಾಡುವುದರ ಪರಿಣಾಮವು ತನುವಿನಲ್ಲಿ ತುಂಡುಗಡಿದುದರ ಪರಿಣಾಮಕ್ಕೆ ಸಮನಾದುದು. ಇದನ್ನು ಅರಿತು ಕೂಡ ಕೆಲಜನ ಸಂಪ್ರದಾಯವಾದಿಗಳು ಜಾತೀಯತೆಯನ್ನು ಮುಂದೆ ಮಾಡಿ ಇಬ್ಭಾಗಮಾಡಲು ಯತ್ನಿಸುತ್ತಿದ್ದಾರೆ. '**ಹಂಚಿ ಆಳು**' ಎಂಬ ನೀತಿಯನ್ನು ಅನುಸರಿಸುವ ಅರಸರೂ ಅಂಥವರಿಗೆ ಬೆಂಬಲಕೊಡುತ್ತಲಿದ್ದಾರೆ. ಇವರೆಲ್ಲರೂ ಮಾಡಬಯಸುವ ಪಾಕಿಸ್ತಾನದ ಸ್ವರೂಪವಾದರೂ ಏನು?

ಮೊದಲು '**ಪಾಕಿಸ್ತಾನ್**' ಎಂಬ ಶಬ್ದವನ್ನು ಕೆಂಬ್ರೀಜ್ ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸಮಾಡುವ ಭಾರತೀಯ ಮುಸಲ್ಮಾನ್ ವಿದ್ಯಾರ್ಥಿಯೊಬ್ಬನು ರಚಿಸಿದನು. ಅವನು **ಪಂಜಾಬ**, **ಅಫಗಾನಿಸ್ತಾನ್**, **ಕಾಶ್ಮೀರ**, ಮತ್ತು **ಸಿಂಧ** ಪ್ರಾಂತಗಳ ಮೊದಲಕ್ಷರಗಳನ್ನೂ, ಬಲೂಚಿಸ್ತಾನದ ಕೊನೆಯ '**ಸ್ತಾನ್**'ವನ್ನೂ ಸೇರಿಸಿ '**ಪಾಕಿಸ್ತಾನ್**' ಎಂಬ ಶಬ್ದವನ್ನು ಸಿದ್ಧಮಾಡಿದನು. ಆಗ ಅವನ ವಿಚಾರವಿಷ್ಟು: ಭಾರತದ ಮುಸಲ್ಮಾನರು ಭಾರತದ ಪಾಕಿಸ್ತಾನದಲ್ಲಿ ಬಂದು ಸೇರಬೇಕು. ಎಂದರೆ ಯುರೋಪ್ ಖಂಡದಲ್ಲಿಯ ತುರ್ಕಸ್ತಾನದಂತೆ ಇದೂ ಒಂದು ಮುಸಲ್ಮಾನರ ಸ್ವತಂತ್ರ ರಾಜ್ಯವಾಗುವುದು— ಎಂದು. ಆದರೆ ಬಹುದಿನಗಳವರೆಗೆ ಈ ವಿಷಯದತ್ತ ಯಾರೂ ಮನಸ್ಸುಹಾಕಿರಲಿಲ್ಲ.

ಮುಂದೆ ೧೯೩೦ನೆಯ ಇಸ್ವಿಯಲ್ಲಿ, ಮುಸ್ಲೀಮ್‌ಲೀಗಿನ ಅಧಿವೇಶನ ಲಖನೌದಲ್ಲಿ ಸೇರಿದ್ದಿತು. ಅದರ ಅಧ್ಯಕ್ಷರಾಗಿದ್ದ ದಿವಂಗತ **ಸರ್ ಇಕಬಾಲ್** ಅವರು, ಈ ಪಾಕಿಸ್ತಾನದ ವಿಷಯವನ್ನು ಎತ್ತಿ ಹಿಡಿದರು. ಇಷ್ಟೇ ಅಲ್ಲ; ಅದಕ್ಕಾಗಿ ದೇಶದ ತುಂಬ ಚಳವಳಿ ಹೂಡಲೂ ಹೇಳಿದರು. ಅದರಂತೆ ಸ್ವತಃ ಕಾರ್ಯವನ್ನೂ ಕೈಕೊಂಡರು. ಅವರಿಗೆ **ದಿ. ಫಜಲೆ ಹುಸೇನ್** ಮೊದಲಾದವರು ಸಹಾಯಕರಾಗಿ ಕೆಲಸಮಾಡಿದರು. ಇದರ ಪರಿಣಾಮವಾಗಿ ಪಾಕಿಸ್ತಾನದ ಯೋಚನೆಗೆ ಚೈತನ್ಯಸಿಕ್ಕಂತಾಯಿತು. ಮುಂದೆ ಈ ವಿಷಯವನ್ನು ಕುರಿತು ಮುಸಲ್ಮಾನ್ ರಾಷ್ಟ್ರಗಳ ಕೂಡ ಪತ್ರ-ವ್ಯವಹಾರವೂ ನಡೆಯಿತು. ಆದರೂ ಭಾರತೀಯ ಮುಸಲ್ಮಾನರು ಅತ್ತ ಲಕ್ಷ್ಯಹಾಕದುದರಿಂದ, ಕೆಲವು ದಿನ ಆ ವಿಚಾರವು ಸುಮ್ಮನೆ ಇದ್ದಿತು.

ಇಲ್ಲಿ ಬ್ರಿಟಿಷ್ ಸರಕಾರವು ಸಂಘಶಾಸನವನ್ನು ಸ್ಥಾಪಿಸಲು ನಿಶ್ಚಯಿಸಿತು. ಅದರಂತೆ ಪ್ರತಿಯೊಂದು ಪ್ರಾಂತಗಳಿಗೂ ಸ್ವಾತಂತ್ರ್ಯಕೊಟ್ಟಿತು. ದೇಶದ ಜನತೆಯಲ್ಲಿ ಹೊಸ ಜಾಗೃತಿಯು ತಲೆದೋರಿತು. ಇದಕ್ಕೆ ಕಾಂಗ್ರೆಸ್ ಹಾಗೂ ಮುಸ್ಲೀಮ್‌ಲೀಗಗಳೆರಡೂ ವಿರೋಧಿಸಿದುವು. ಆದರೆ ಆ ವಿರೋಧದಲ್ಲಿ ವ್ಯತ್ಯಾಸವಿದೆ; ವೈವಿಧ್ಯವಿದೆ. ಕಾಂಗ್ರೆಸ್ಸು ರಾಷ್ಟ್ರೀಯ ದೃಷ್ಟಿಯಿಂದ ನಿರಾಕರಿಸಿದರೆ, ಮುಸ್ಲೀಮ್‌ಲೀಗವು ಮುಸ್ಲೀಮ್ ಸಂಸ್ಕೃತಿಯ ಸಂರಕ್ಷಣೆಯ ದೃಷ್ಟಿಯಿಂದಲೂ ಭಾರತದಲ್ಲಿ ತಮ್ಮ ಸ್ವತಂತ್ರ ಸತ್ತೆಯನ್ನು ಸ್ಥಾಪಿಸುವ ಧೋರಣೆಯಿಂದಲೂ ನಿರಾಕರಿಸಿತು. ಅಲ್ಲದೆ 'ಪ್ರಸ್ಥಾಪಿತ ಸಂಘಶಾಸನದಲ್ಲಿ ತಮಗೆ ಸಾಕಷ್ಟು ಸ್ಥಳಗಳು ಸಿಕ್ಕಲಿಲ್ಲ— ಒಂದು ವೇಳೆ ಬ್ರಿಟಿಷ್ ಹಿಂದುಸ್ತಾನದಲ್ಲಿ ಸಿಕ್ಕರೂ ಸಂಸ್ಥಾನಗಳಲ್ಲಿ ಸಿಕ್ಕುವ ಸಂಭವವಿಲ್ಲ' ಎಂಬುದೂ ಒಂದು ಕಾರಣವಾಯಿತು—. ಪಾಕಿಸ್ತಾನದ ಸ್ವಪ್ನ ಕಾಣಲಿಕ್ಕೆ.

ಪಾಕಿಸ್ತಾನದ ವಿಚಾರಕ್ಕೆ ಪುಟ ದೊರೆಯಲೆಂದು ದೇಶದ ತುಂಬ ಮುಸಲ್ಮಾನರು ಚಳವಳಿ ಹೂಡಿದರು. ಆ ದೃಷ್ಟಿಯಿಂದ ಕಾರ್ಯ

ಮಾಡಲು ಪಂಜಾಬ್, ಹೈದರಾಬಾದ್‌ಗಳಲ್ಲಿ ಕಾರ್ಯಾಲಯಗಳನ್ನು ಕೂಡ ತೆರೆದರು. ಆದರೆ ಅವುಗಳಿಗೆ ಆ ಅರ್ಥದ ಹೆಸರನ್ನು ಮಾತ್ರ ಇರಿಸಿರಲಿಲ್ಲ. ಹೈದರಾಬಾದಿನಲ್ಲಿರುವ ಸಂಸ್ಥೆಗೆ '**ಮುಸ್ಲಿಮ್ ಕಲ್ಚರ್ ಸೋಸೈಟಿ**' ಎಂದು ಕರೆದರೆ, ಪಂಜಾಬದಲ್ಲಿರುವುದಕ್ಕೆ '**ಮುಸ್ಲಿಮ್ ಬ್ರಾದರ್ ಹುಡ್**' ಎಂದು ಕೂಗಿದರು. ಅವುಗಳ ಕಾರ್ಯಮಾತ್ರ, ಅದೇನೋ 'ಗೋಚರ್ಮವನ್ನು ಹೊತ್ತ ಹುಲಿಯಂತೆ' ಎನ್ನುತ್ತಾರಲ್ಲ—ಹಾಗೆ ಇದ್ದಿತು.

ಹೈದರಾಬಾದಿನಲ್ಲಿರುವ ಸಂಘದ ಪ್ರಧಾನ ಕಾರ್ಯಕರ್ತರು **ಶ್ರೀ. ಸೈಯದ್ ಅಬ್ದುಲ್ ಲತೀಫ್ ಸಾಹೇಬ್** ಎಂಬವರು. ಇವರು ೧೯೩೯ ನೆಯ ಇಸ್ವಿಯಲ್ಲಿ ಲಾಹೋರಿನಲ್ಲಿ ಕೂಡಿದ ಮುಸ್ಲಿಮ್ ಲೀಗಿನ ಅಧಿವೇಶನದಲ್ಲಿಯೆ, ಆ ಆ ದೇಶದ ಪ್ರಕಾರ ಪಾಕಿಸ್ತಾನದ ರೂಪ-ರೇಖೆಗಳು ಹೇಗಿರಬೇಕೆಂಬ ಯೋಜನೆಯೊಂದನ್ನು ಸಿದ್ಧಪಡಿಸಿದರು. ಆ ಯೋಜನೆಯ ಮೊದಲು ಮಾತಿನಲ್ಲಿ ಅವರು ಹೇಳುವುದು ಹೀಗೆ: 'ಭಾರತವು ಒಂದು ರಾಷ್ಟ್ರವಲ್ಲ. ಇಲ್ಲಿ ಭಿನ್ನ ಭಿನ್ನ ಜಾತಿಯ ಜನರು ವಾಸಿಸುತ್ತಾರೆ. ಅವರಲ್ಲಿ ಸಾಂಸ್ಕೃತಿಕ ಐಕ್ಯ ಇಲ್ಲವೇ ಇಲ್ಲ. ಇಸ್ಲಾಂ ಹಾಗೂ **ವೈದಿಕ**ಧರ್ಮಗಳಲ್ಲಿ ಬಹಳಷ್ಟು ಅಂತರವಿದೆ. ಸಾಮಾಜಿಕದೃಷ್ಟಿಯಿಂದಲೂ ಎರಡೂ ಬೇರೆ ಬೇರೆಯಾಗಿವೆ. ಇಷ್ಟೇ ಏಕೆ? ಒಂದಕ್ಕೊಂದು ವಿರೋಧವಾಗಿಯೂ ಇವೆ. ಭಾರತದಲ್ಲಿ ಇವೆಲ್ಲ ಮಾತಿನಲ್ಲಿ ಐಕ್ಯತೆಯ ಕೊರತೆ ಇರುವಾಗ, ಭಾಷೆಯ ದೃಷ್ಟಿಯಿಂದಲಾದರೂ ಐಕ್ಯತೆಯಿದೆಯೆನ್ನಬೇಕೆ? ಅದೂ ಇಲ್ಲ! ಅದೂ ಹೋಗಲಿ, ಇವೆರಡೂ ಸಂಸ್ಕೃತಿಗಳಿಗೆ ಸಮಾನವಾದ ಬೇರೆ ದೇಶೀಯ ಭಾಷೆಯಾದರೂ ಇದೆಯೇ? ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಭಾರತವು ಅಖಂಡವಾಗಿರುವದು ಅಶಕ್ಯವು. ಅದರಿಂದ ಇದನ್ನು ಎರಡು ಭಾಗಮಾಡುವುದಗತ್ಯವು. ಅಲ್ಲದೆ ಬಹುಸಂಖ್ಯಾಕ ಹಿಂದುಗಳಲ್ಲಿ ಅಲ್ಪಸಂಖ್ಯಾಕ ಮುಸಲ್ಮಾನರಿರುವುದೂ ಅವರಿಗೆ ಸುರಕ್ಷಿತವಲ್ಲ.'

ಇವೆಲ್ಲ ಮಾತುಗಳ ಆಧಾರವಿಟ್ಟು ಲತೀಫ್ ಸಾಹೇಬರು, ಭರತ-ಖಂಡವನ್ನು ಅದರ ಸಂಸ್ಕೃತಿ-ಧಾರ್ಮಿಕತೆಗಳ ತಳಹದಿಯ ಮೇಲೆ ಹದಿನೈದು ತುಂಡುಗಳನ್ನಾಗಿ ವಿಭಾಗಿಸಿದ್ದಾರೆ. ಅವುಗಳಲ್ಲಿ ನಾಲ್ಕು ಮುಸಲ್ಮಾನರಿಗೆ, ಉಳಿದುವುಗಳು ಹಿಂದುಗಳಿಗೆ. ಪಾಕಿಸ್ತಾನದಲ್ಲಿ ಬರುವ—ಅವರು ತಕ್ಕೊಳ್ಳಬಯಸುವ—ನಾಲ್ಕು ತುಂಡುಗಳೆಂದರೆ (೧) **ಉತ್ತರ ಪಶ್ಚಿಮ ಮಂಡಲ** = ಪಂಜಾಬ, ಸರಹದ್ದುಪ್ರಾಂತ, ಕಾಶ್ಮೀರ, ಖೈರಪುರ್, ಭಾವಲಪುರ್, ಸಿಂಧ, ಬಲುಚಿಸ್ತಾನಗಳಿಂದ ಕೂಡಿದ್ದು. ಇಲ್ಲಿ ವಾಸಿಸುವ ಸೀಖ್ ಹಿಂದೂ ಜನರು ಅಲ್ಲಿಂದ ಹೊರಟು, ಕಾಶ್ಮೀರದ ಪೂರ್ವಭಾಗದಲ್ಲಿಯೂ ಕಾಂಗಡಾದ ಹಿಂದೂ ಭಾಗದಲ್ಲಿಯೂ ಹೋಗಿ ನೆಲೆಸಬೇಕು. ಅದರಂತೆ ಕಾಶ್ಮೀರದ ಮಹಾರಾಜರಿಗೆ ಏನನಾದರೂ ಪ್ರತಿಕ್ರಿಯಕೊಟ್ಟು ಅವರ ರಾಜ್ಯದ ಕೆಲವು ಭಾಗವನ್ನು ಪಾಕಿಸ್ತಾನಕ್ಕೆ ಕೂಡಿಸಿಕೊಳ್ಳುವುದು. (೨) **ಉತ್ತರ-ಪೂರ್ವಭಾಗ** = ಇದರಲ್ಲಿ ಆಸಾಮು-ಬಂಗಾಲಗಳು ಸೇರಿವೆ. ಇಲ್ಲಿಯ ಹಿಂದುಗಳು ಬಿಹಾರ ಪ್ರಾಂತದಲ್ಲಿ ಹೋಗಿ ನೆಲೆಸಬೇಕು. ಅಲ್ಲಿಯ ಮುಸಲ್ಮಾನರು ಬಂಗಾಲ-ಆಸಾಮುದಲ್ಲಿ ಬಂದು ಇರಬೇಕು. (೩) **ದಿಲ್ಲಿ ಲಖನೌ ವಿಭಾಗ** = ಇದರಲ್ಲಿ ಸಂಯುಕ್ತಪ್ರಾಂತ, ಬಿಹಾರದೊಳಗಿನ ಮುಸಲ್ಮಾನರ ಸ್ಥಳಗಳು ಸೇರುವುವು. ಅಲ್ಲಿರುವ ಮಥುರಾ, ಹರಿದ್ವಾರ ಮೊದಲಾದ ಹಿಂದೂ ತೀರ್ಥಗಳ ಮೇಲೆ ಹಿಂದುಗಳ ಅಧಿಕಾರ ಉಳಿಯುವುದು. ಆ ಕ್ಷೇತ್ರ ಸ್ಥಳದಲ್ಲಿ ಕೆಲವು ಹಿಂದುಗಳು ವಾಸಿಸಲೂ ಕೂಡ ಅಧಿಕಾರವು ಇದೆ. ಅವರಿಗೆ ಮುಸಲ್ಮಾನರಿಂದ ಏನೂ ತೊಂದರೆಯಾಗಲಿಕ್ಕಿಲ್ಲ. (೪) **ದಕ್ಷಿಣವಿಭಾಗ**: ಇದರಲ್ಲಿ ಹೈದರಾಬಾದ್, ಮದ್ರಾಸ ಇಲಾಖೆಯ ಕೆಲವು ಭಾಗಗಳೂ ಸೇರಿವೆ. ಹೀಗೆ ನಾಲ್ಕು ಪ್ರಾಂತಗಳು ಪಾಕಿಸ್ತಾನಕ್ಕೆ ಸೇರಿದ ಮೇಲೆ, ಉಳಿದ ಭಾರತದ ಭಾಗಗಳಲ್ಲಿಯ ಹಲಕೆಲವು ಮುಸಲ್ಮಾನರು ಈ ಪಾಕಿಸ್ತಾನದಲ್ಲಿ ಹೋಗಿ ತಳವೂರಬೇಕು. ಅಲ್ಲಿಯ ಹಿಂದುಗಳು ತಳಕೀಳಬೇಕೆಂದೂ ಸೂಚಿಸಿದ್ದಾರೆ. ಈ ನಾಲ್ಕು ಪ್ರಾಂತಗಳನ್ನುಳಿದು ಉಳಿದ ಭಾರತದಲ್ಲಿ, ಭಾಷೆಯ ಪ್ರಕಾರ ಎಂದರೆ ಬಂಗಾಲ, ಹಿಂದಿ, ಉಡಿಯಾ. ತೆಲುಗು, ತಮಿಳು, ಕನ್ನಡ, ಮರಾಟಿ, ಗುಜರಾತಿ, ಮಲಿಯಾಳ, ಎಂದು ಮೊದಲಾದ ಭಾಗಗಳನ್ನು ಮಾಡಬಹುದು. ಈ ಯೋಜನೆಯಲ್ಲಿ ಲತೀಫ್ ಸಾಹೇಬರು ಹರಿಜನರಿಗೆ ಒಳ್ಳೆಯ ಸುಂದರ ಸ್ಥಾನವನ್ನು ಕೊಟ್ಟಿದ್ದಾರೆ. ಹರಿಜನರು ತಮ್ಮ ಇಚ್ಛೆಯಿದ್ದಲ್ಲಿ—ಸಮಾಜದ ಸಹಕಾರ ಸಿಕ್ಕುವಲ್ಲಿ (!) ವಾಸವಾಗಿರಬಹುದಂತೆ. ಇದೇ ಪ್ರಕಾರ ಬೌದ್ಧ, ಜೈನ, ಹಾಗೂ ಕ್ರೈಸ್ತರಿಗೂ ಒಪ್ಪಿಗೆಯಿದೆ. ಅವರಿಗೆ ಪಾಕಿಸ್ತಾನದಲ್ಲಿ ಬಹುಸಂಖ್ಯಾಕ ಮುಸಲ್ಮಾನರಿಂದ ಏನೂ ತೊಂದರೆಯಾಗಲಿಕ್ಕಿಲ್ಲ (!). ಇದರಲ್ಲಿ ಆರ್ಯಸಮಾಜದವರು ಎಲ್ಲಿರಬೇಕೆಂಬುದನ್ನು ಹೇಳಲಿಲ್ಲ.

ಮೇಲಿನ ಯೋಜನೆಯು ಮುಸ್ಲಿಮ್‌ಲೀಗಿನ ಆಜ್ಞೆಯ ಮೇರೆಗೆ ಮಾಡಿದ್ದಾದರೂ ಇನ್ನೂ ಲೀಗಿನಿಂದ ಸ್ವೀಕೃತವಾಗಿಲ್ಲ. ಆದರೂ ಸಿಂಧಪ್ರಾಂತೀಯ ಲೀಗವು ತನ್ನ ಒಂದು ಅಧಿವೇಶನದಲ್ಲಿ ಇದನ್ನು ಸ್ವೀಕಾರಮಾಡಿದೆ. ಈಗ ಮುಸ್ಲಿಮ್‌ಲೀಗವು ಈ ಯೋಜನೆಯ ವಿಚಾರಣೆಗಾಗಿ ಮಿ. **ಜಿನ್ನಾ**, ಸರ್ ಸಿಕಂದರ **ಹಯಾತ್ ಖಾನ್** ಮಿ. ಅಬ್ದುಲ್ **ಅಜೀಜ್, ಖ್ವಾಜಾ ಸರ್ ನಾಜೀಮುದ್ದೀನ್, ಸರ್** ಅಬ್ದುಲ್ಲಾ **ಹಾರೂನ್, ಸರದಾರ್ ಔರಂಗಜೇಬ್ ಖಾನ್** ಮತ್ತು **ನವಾಬ್ ಜಾದಾ ಲಿಯಾಖತ್ ಅಲೀಖಾನ್** ಮೊದಲಾದವರ ಕಮಿಟಿಯೊಂದನ್ನು ನಿಯಮಿಸಿದೆ.

ಲತೀಫ್ ಸಾಹೇಬರ ಈ ಯೋಜನೆಯ ಕುರಿತು ವಿಚಾರ-ವಿವಾದ-ವಿವೇಚನೆಗಳು ಬೇಕಷ್ಟಾಗಿವೆ, ಆಗಲಿವೆ. ಭಾರತದ ಎಲ್ಲ ರಾಷ್ಟ್ರೀಯ ಪತ್ರಿಕೆಗಳೂ ಇದನ್ನು ಅಲ್ಲಗಳೆದಿವೆ. ಕೆಲವು ಮುಸಲ್ಮಾನರೂ ಇದನ್ನು ವಿರೋಧಿಸಿದ್ದಾರೆ. ಸಿಂಧದ ಒರ್ವ ಸಹೃದಯ ಮುಸಲ್ಮಾನ್ ಗೃಹಸ್ಥನು ಎನ್ನುವದು ಹೀಗೆ: "ಈ ಯೋಜನೆಯು ದೇಶದ ದೃಷ್ಟಿಯಿಂದ ಹಾನಿಕರವು. ಮೇಲಾಗಿ

ಮುಸಲ್ಮಾನ್ ಸಂಸ್ಕೃತಿಯು ದೃಷ್ಟಿಯಿಂದಲೂ ದೂಷಿತವಾಗಿದೆ. ಮುಂದಾಗುವ ಮುಸ್ಲಿಮ್ ಪ್ರಾಂತಗಳಲ್ಲಿಯಾದರೂ ಮುಸ್ಲಿಮ್ ಸಂಸ್ಕೃತಿಯು ಸುಧಾರಿಸುವುದೆಂಬುದಕ್ಕೆ ಆಧಾರವೇನು ? " ಮುಸ್ಲಿಮ್‌ಲೀಗಿನಲ್ಲಿರುವ ಕೆಲ ಜನರೂ ವಿರೋಧಿಸಿರುವರು. ಅವರು ಹೇಳುವ ಕಾರಣವಿದು : " ಪಾಕಿಸ್ತಾನದೊಳಗಿನ ಕೆಲ ಪ್ರಾಂತಗಳು ಹಿಂದೂ ಜನರಿಂದ ಸುತ್ತಲ್ಪಟ್ಟಿರುವುದರಿಂದ ಅವುಗಳ ಏಳಿಗೆಗೆ ತೊಡಕಾಗುವುದು. ದಕ್ಷಿಣ ಪ್ರಾಂತವಾದ ಹೈದರಾಬಾದಿನ ಸ್ಥಿತಿಯಂತೂ ತೀರ ಶೋಚನೀಯವಾಗುವುದು. ಅದು ಬಹಳ ದಿನ ಸ್ವತಂತ್ರವಾಗಿ ಬಾಳಲೂ ಸಾಧ್ಯವಿಲ್ಲ. ಹದಿನೆಂಟನೆಯ ಶತಮಾನದಲ್ಲಿ ಮಹಾರಾಷ್ಟ್ರರ ದಾಳಿಯಿಂದ ಆದ ನಿಜಾಮನ ಗತಿಯಂತಾಗಬಹುದು. ಆಗ ನಿಜಾಮನಿಗೆ ಈಸ್ಟ್ ಇಂಡಿಯಾ ಕಂಪನಿಯಾದರೂ ನೆರವಿಗೆ ಇತ್ತು ! ಇದರಂತೆ ಉತ್ತರದಲ್ಲಿರುವ ಲಖನೌಪ್ರಾಂತ, ಬಂಗಾಲ-ಆಸಾಮ ಪ್ರಾಂತಗಳಿಗೂ ರಜಪೂತ, ಸೀಖ, ಗುರ್ಖ, ನೇಪಾಳಿ ಮೊದಲಾದ ಜನರ ಭಯವೂ ತಪ್ಪಿದ್ದಲ್ಲ!' ಈ ಪ್ರಕಾರ ಲತೀಫರ ಯೋಜನೆಗೆ ವಿರೋಧಕ ವಿಚಾರಗಳೆದ್ದು, ಇದೀಗ ಇನ್ನೊಂದು ಯೋಜನೆಯು ಸಿದ್ಧವಾಗಲಿದೆ. ಆಗಲಿದೆಯೇಕೆ ? ಆಗಿಯೂ ಇದೆ.

ಆ ಯೋಜನೆಯೆಂದರೆ ಕಲಕತ್ತೆಯ ಒಬ್ಬ ಮೌಲವೀ ಸಾಹೇಬರು ನಿರ್ಮಿಸಿದುದು. ಮಿ. ಲತೀಫರ ದಕ್ಷಿಣಮಂಡಲವು (ಹೈದರಾಬಾದ್) ಇವರ ದೃಷ್ಟಿಯಿಂದ ಯೋಗ್ಯವಾಗಿಲ್ಲ. ಯಾಕೆಂದರೆ ಅದು ಅನ್ಯ ಮುಸಲ್ಮಾನ್ ಪ್ರಾಂತಗಳಿಂದ ದೂರವಾಗಿ ನಿಲ್ಲುವುದು ಅಷ್ಟು ಸುರಕ್ಷಿತವಲ್ಲ. ಅದರಿಂದ ಅವರು ಯೋಜಿಸುವುದು ಹೀಗೆ: " ಸಂಯುಕ್ತಪ್ರಾಂತದೊಳಗಿನ ಹಿಂದುಗಳನ್ನು ಹೊರಗಟ್ಟಿ, ಉತ್ತರ ಹಿಂದುಸ್ತಾನವನ್ನು ಸಂಪೂರ್ಣ ಮುಸಲ್ಮಾನರದನ್ನಾಗಿಯೆ ಮಾಡಬೇಕು. ಮತ್ತು ಕಾಶ್ಮೀರ, ಹೈದರಾಬಾದಿನ ಒಡೆಯರು ತಮ್ಮ ತಮ್ಮ ರಾಜ್ಯಗಳನ್ನು ಅದಲುಬದಲುಮಾಡಿಕೊಳ್ಳಬೇಕು ; ಮಾಡಿಸಬೇಕು. ಎಂದರೆ ಹೈದರಾಬಾದಿನ ಅರಸು ಕಾಶ್ಮೀರದ ಅರಸನಾಗಬೇಕು " ಈ ಮೌಲವೀ ಮಹನೀಯರು ಹಿಂದುಸ್ತಾನದಲ್ಲಿಯ ಈಗಿನ ಹನ್ನೊಂದು ಪ್ರಾಂತಗಳಲ್ಲಿ ಏಳು ಪ್ರಾಂತಗಳನ್ನು ಪಾಕಿಸ್ತಾನಕ್ಕೆ ಸೇರಿಸುವರು. ಆ ಪ್ರಾಂತಗಳಿವು: (೧) ಸಿಂಧ (೨) ಸರಹದ್ದು (೩) ಪಂಜಾಬ (೪) ಸಂಯುಕ್ತಪ್ರಾಂತ (೫) ಬಿಹಾರ (೬) ಬಂಗಾಲ (೭) ಆಸಾಮು. ಈ ರೀತಿ ಕಲಕತ್ತೆಯಿಂದ ಕ್ವೇಟಾದವರೆಗೆ, ಹಾಗೂ ಹಿಮಾಲಯದಿಂದ ವಿಂಧ್ಯಗಿರಿಯವರೆಗೆ ಮೌಲವೀ ಸಾಹೇಬರ ಪಾಕಿಸ್ತಾನವು ಕಾಲುಚಾಚುವುದು.

ಈ ಯೋಜನೆಯನ್ನು ವ್ಯವಹಾರದಲ್ಲಿ ತರಬೇಕಾದರೆ, ೧೩,೨೦,೦೦,೦೦೦ ಹಿಂದೂ ಜನರು ಮೇಲೆ ಹೇಳಿದ ೭ ಪ್ರಾಂತಗಳನ್ನು ಬಿಟ್ಟು ಹೊರಬಿದ್ದು, ಮುಂಬೈ ಮದ್ರಾಸ, ಮೊದಲಾದ ಪ್ರಾಂತಗಳಲ್ಲಿ ಬರಬೇಕಾಗುವುದು. ಈ ಪ್ರಾಂತಗಳಲ್ಲಿರುವ ೫೭,೦೦೦೦೦ ಮುಸಲ್ಮಾನರು ಆ ಪ್ರಾಂತಗಳಲ್ಲಿ ಹೋಗಬೇಕಾದೀತು. ಇದರಲ್ಲಿ ಮತ್ತೊಂದು ಜಟಿಲವಾದ ಸಮಸ್ಯೆಯೆಂದರೆ ಒಂದೆಡೆಗೆ ಬೆಳೆಯುಳ್ಳ ಭೂಮಿಯಾದರೆ, ಇನ್ನೊಂದೆಡೆಗೆ ಬಡಕಲು ಭೂಮಿಯಾಗುವುದು. ಮುಂಬಯಿ, ಮದ್ರಾಸು, ಓಡಿಸಾ, ಮಧ್ಯಪ್ರಾಂತಗಳ ಜನಸಂಖ್ಯೆಯು ಸುಮಾರು ೮ ಕೋಟಿ ೬೦ ಲಕ್ಷವಿದೆ. ಅದರಲ್ಲಿ ಮುಸಲ್ಮಾನರು ಸುಮಾರು ೫೭ ಲಕ್ಷ ಜನರಿದ್ದಾರೆ. ಅವರಷ್ಟು ಹೋದರೆ, ಇಲ್ಲಿ ೮ ಕೋಟಿ ೩ ಲಕ್ಷ ಜನ ಉಳಿಯುವುದು. ಮೌಲಾನಾ ಸಾಹೇಬರು ಉತ್ತರದೊಳಗಿನ ೧೨ ಕೋಟಿ ೨೦ ಲಕ್ಷದಷ್ಟು ಹಿಂದೂಜನರನ್ನು ಇತ್ತ ಕಳಿಸಲಿದ್ದಾರೆ. ಇದು ಯಾವ ಮಾನವನೆಂಬವನಿಗಾದರೂ ಯೋಗ್ಯ ಕಂಡೀತೆ ? ಈ ದಕ್ಷಿಣಪ್ರಾಂತಗಳ ಒಟ್ಟು ಕ್ಷೇತ್ರಫಲವು ೩,೩೭,೪೮೫ ಚದರು ಮೈಲು ಇದ್ದು, ಅಲ್ಲಿ ೨೦ ಕೋಟಿ ೨೩ ಲಕ್ಷ ಜನರು ಜೀವಿಸಿರಲು ಸಾಧ್ಯವೆ ? ಇದು ಆರ್ಥಿಕದೃಷ್ಟಿಯಿಂದ ಅಸಂಭವನೀಯವು ; ಅನುಚಿತವು. ಯಾಕೆಂದರೆ ದಕ್ಷಿಣದಲ್ಲಿ ಚದರು ಮೈಲಿಗೆ ಸು. ೫೭೨ ಜನರು ನಿಂತರೆ, ಉತ್ತರದಲ್ಲಿ—ಬೆಳೆಯುಳ್ಳ ಭಾಗದಲ್ಲಿ—ಚದರು ಮೈಲಿಗೆ ಸು. ೧೩೩ ಜನರು ಮಾತ್ರ ನಿಲ್ಲುವರು.

ಮೌಲಾನಾ ಸಾಹೇಬರು ಕೇವಲ ಮುಸಲ್ಮಾನರ ಹಿತದ ದೃಷ್ಟಿಯಿಂದ ಈ ಯೋಜನೆಯನ್ನು ಹೂಡಿದ್ದಾರೆ. ಅವರು ಹಿಂದುಗಳ ಹಿತಾಹಿತಗಳತ್ತ ಕಣ್ಣೆತ್ತಿ ಕೂಡ ನೋಡಲಿಲ್ಲ ; ಅಷ್ಟೆ ಏಕೆ ? ಹಿಂದುಗಳ ನಾಶವನ್ನೇ ಬಯಸಿ ಹೀಗೆ ಹಂಚಲು ಹೇಳುವರೆನ್ನಬಹುದು. ಹೇಗೆಂದರೆ ಸುಮಾರು ೭೫ ಲಕ್ಷ ಮುಸಲ್ಮಾನರು ವಾಸಿಸುವ ಸ್ಥಳದಲ್ಲಿ ೧೧½ ಕೋಟಿ ಹಿಂದುಗಳನ್ನು ಹೊಗಿಸಲು ವಿಚಾರಿಸುತ್ತಿದ್ದಾರಲ್ಲವೆ ?

ಹಿಂದುಗಳ ಬಹಳಷ್ಟು ತೀರ್ಥ-ಕ್ಷೇತ್ರಗಳು ಉತ್ತರಹಿಂದುಸ್ಥಾನದಲ್ಲಿಯೇ ಇವೆ. ಹಿಂದುಗಳ ದೃಷ್ಟಿಯಿಂದ ಗಂಗಾನದಿಯೂ ಕಾಶಿಯೂ ಸ್ವರ್ಗಸಮವಾದುವು. ಮೌಲಾನಾ ಸಾಹೇಬರು ಹೇಳುವರೆಂದು ಹಿಂದುಗಳು ತಮ್ಮ ಸ್ವರ್ಗಸದೃಶವಾದ ವಾಸಸ್ಥಳವನ್ನು ಬಿಡಬೇಕೆ ?

ಇರಲಿ, ಇತ್ತೀಚಿಗೆ ಪಂಜಾಬದ ಪ್ರಧಾನ ಮಂತ್ರಿಗಳಾದ ಮಾನ್ಯ **ಸರ್ ಸಿಕಂದರ್ ಹಯಾತ್ ಖಾನ್**ರೂ ಒಂದು ಹೊಸಯೋಜನೆಯನ್ನು ಮಾಡಿದ್ದಾರೆ.ಅವರು ಮಾಡಿದುದು ಹಿಂದುಸ್ತಾನದಲ್ಲಿ ಏಳು ಹೋಳುಗಳನ್ನು. ಅವುಗಳಲ್ಲಿ (೧) ಆಸಾಮು, ಬಂಗಾಲ, ಮತ್ತು ಬಂಗಾಲದ ಸಂಸ್ಥಾನಗಳು. (೨) ಬಿಹಾರ, ಓಡಿಸಾ ಮತ್ತು ಬಂಗಾಲದ ಪಶ್ಚಿಮದ ಎರಡು ಮೂರು ಜಿಲ್ಲೆಗಳು. (೩) ಸಂಯುಕ್ತಪ್ರಾಂತ ಹಾಗೂ ಅದರ ಸಂಸ್ಥಾನಗಳು (೪) ಮದ್ರಾಸ ತ್ರಾವಣಕೋರ, ಮದ್ರಾಸದ ಸಂಸ್ಥಾನಗಳು, ಮತ್ತು ಕುರ್ಗ, (೫) ಮುಂಬೈ, ಹೈದರಾಬಾದ್, ಪಶ್ಚಿಮಭಾರತದ ಸಂಸ್ಥಾನಗಳು. ಮೈಸೂರು, ಮತ್ತು ಮಧ್ಯಪ್ರಾಂತದ ಸಂಸ್ಥಾನಗಳು (೬) ರಜಪೂತಸಂಸ್ಥಾನಗಳು (ಬಿಕಾನೇರ್ ಮತ್ತು ಜೇಸಲ್‌ಮೆರ್‌ಗಳನ್ನು

ಉಳಿದು), ಗ್ವಾಲ್ಹೇರ, ಮಧ್ಯಪ್ರಾಂತ, ವರ್ಹಾಡ ಪಂಜಾಬದ ಸಂಸ್ಥಾನಗಳು, ಬಲುಚಿಸ್ತಾನ್, ಬಿಕಾನೇರ ಮತ್ತು ಜೆಸಲಮೇರ್,

ಸರ್ ಸಿಕಂದರ ಸಾಹೇಬರ ಈ ಯೋಜನೆಯು ಹೊರಬೀಳುವ ಮೊದಲು, ಕಾಂಗ್ರೆಸ್ಸು ಹಿಂದುಸ್ತಾನದಲ್ಲಿ ಹನ್ನೊಂದು ಪ್ರಾಂತಗಳಲ್ಲಿಯೂ ತನ್ನ ಕೈಯಲ್ಲಿ ರಾಜ್ಯಸೂತ್ರವನ್ನು ತಕ್ಕೊಂಡಿದ್ದಿತು. ಅದರಿಂದ ಕಾಂಗ್ರೆಸ್ಸಿನ ಶಕ್ತಿಯನ್ನು ಕಡಿಮೆಮಾಡಲೆಂದು ಈ ಯೋಜನೆಯನ್ನು ಹೂಡಿದರು. ಈ ಯೋಜನೆಯಿಂದ ಆಸಾಮ್, ಸೀಮಾಂತ ಪ್ರಾಂತಗಳಿಂದ ಕಾಂಗ್ರೆಸ್ಸು ಕಾಲು ಕಿತ್ತುವುದೆಂದೂ, ಅಲ್ಲಿ ಮುಸ್ಲಿಮ್ ಲೀಗಿನ ಪ್ರತಿಷ್ಠೆ ಬೆಳೆಯುವುದೆಂದೂ ಅವರು ಊಹಿಸಿದ್ದರು. ಮೇಲಾಗಿ ಈ ಯೋಜನೆಯಿಂದ ಕೇಂದ್ರಶಾಸನ ಸಭೆಯಲ್ಲೂ ಮುಸಲ್ಮಾನರ ಸಂಖ್ಯೆಯು ಹೆಚ್ಚುವುದು. ಬ್ರಿಟಿಶ್ ಹಿಂದುಸ್ತಾನದಲ್ಲಿ ಮುಸಲ್ಮಾನರಿಗೆ ೮೩ ಸ್ಥಳಗಳು ಸಿಕ್ಕುತ್ತವೆ. ಮತ್ತು ಭಾರತೀಯ ಸಂಸ್ಥಾನಗಳಲ್ಲಿ ೧೨೫ ರಲ್ಲಿ ೪೨ ಸ್ಥಳಗಳು ಸಿಕ್ಕುವುವು. ಇವೆಲ್ಲವೂ ಕೂಡಿ ಆಗ ಮುಸಲ್ಮಾನರ ಸ್ಥಳಗಳು ೧೨೫. ಕೇಂದ್ರಶಾಸನದಲ್ಲಿ ಈಗ ಎಲ್ಲಿ ಮುಸಲ್ಮಾನರಿಗೆ ೮೩ ಸ್ಥಳಗಳು ಸಿಕ್ಕುವವೋ ಅಲ್ಲಿ ಈ ಸಿಕಂದರರ ಯೋಜನೆಯಿಂದ ೧೨೫ ಸ್ಥಳಗಳು ದೊರೆಯುವುವು.

ಸರ್ ಸಿಕಂದರ್ ಸಾಹೇಬರ ಯೋಜನೆಯು ಪಾಕಿಸ್ತಾನದ ರೂಪರಚನೆಯಲ್ಲವಾದರೂ, ಅದರ ಆದರ್ಶವೂ ಪಾಕಿಸ್ತಾನವೆ. ತಮ್ಮ ಜಾತಿಯ ವರ್ಗದ ಜನತೆಯ ಕೈಯಲ್ಲಿ ಅಧಿಕಾರಬರಬೇಕು. ಎಂಬುವ ಮನೋಭಾವನೆಯನ್ನು ಬದಿಗಿಟ್ಟು ವಿಚಾರಿಸಿದರೆ, 'ಭಾರತವು ಅಖಂಡವಾದ ದೇಶವು, ಅದು ಎಂದೂ ಎರಡಾಗಲು ಶಕ್ಯವಿಲ್ಲ!' ಎಂಬುದು ಯಾರಿಗೂ ಹೊಳೆಯುವುದು. ಮತ್ತು ಪಾಕಿಸ್ತಾನದ ಕನಸನ್ನು ಕಾಣುವವರಿಗೆ ದೇಶ, ಸಮಾಜಗಳ ಮುಸಲ್ಮಾನ್ ಸಮಾಜದ ಹಿತಗಳು ಕಾಣವು. ಅಂಥ ಮಂದಿಗೆ ಭಾರತಾಂಬೆಯು ಸುಬುದ್ಧಿಯನ್ನೀಯಲಿ! *

* ಹಿಂದಿಯಲ್ಲಿ ಶ್ರೀಯುತ ಉಮಾಶಂಕರರು ಇಲ್ಲಿಯವರೆಗೆ ಮುಸಲ್ಮಾನರು ಹೊರಡಿಸಿದ ಮೂರು ಪ್ರಸಿದ್ಧ ಸ್ಕೀಮುಗಳನ್ನು ಸಂಗ್ರಹಿಸಿದ್ದಾರೆ. ಅದರ ಆಧಾರದಿಂದ ಈ ಬರಹವನ್ನು ಬರೆಯಲಾಗಿದೆ.

*ಒಂದು ಬಯಕೆ

★

"ಶ್ರೀತಾರಕಾನಂದ ತನಯ"

೧

ಗುಡ್ಡದಾ ಮೇಲೊಂದು ಗುಡಿಸಿಲೊಳು ವಾಸ,
ಗೂಡಿಟ್ಟ ಜೇನುಗಳ ಝೇಂಕಾರ ಗಾನ,
ಮೆಳೆಗಳೊಳು ನುಸುಳುತ್ತ ತಳ್ಳಿ ಯಂತ್ರಗಳ
ತಳುತಳುವಿ ಹಳ್ಳಗಳನಿಳಿಯುವಾ ಹೊಳೆಯು—

೨

ಜೇಡಿಮಣ್ಣಿನ ಗೂಡ ಮಾಡೊಳಗೆ ಕಟ್ಟಿ
ಹಾಡುವಾ ಹಕ್ಕಿಗಳ ಪಟಪಟನಿನಾದ;
ಸಲಸಲವು ದಾರಿಗನು ಬಂದು ಬಾಗಿಲಿಗೆ
ನಲವಿನಲಿ ನಲಿದುಂಬ ಹಿಟ್ಟುರೊಟ್ಟಿಗಳ—

೩

ಬಳ್ಳಿ ಕೆಂದಳಿರುಟ್ಟು ಬಾಗಿಲನು ಬಳಸೆ,
ಮಂಜು ಕುಡಿಯುವ ಕಂಪಿನಲರುಗಳ ಬಿರಿಸೆ,
ನೀಲಿ ಸೀರೆಯನುಟ್ಟು ಕಂದು ಮುಸುಕೆಳೆದು
ಗಾಲಿನೂಲುತ ಗಾನವೆಳೆದಿರಲು "ಸರಳೆ"—

೪

ವೈವಾಹವಾಹನವು ಬೇಗುಲಕೆ ಬಂದು,
ಸೇವೆಯನು ಸಲ್ಲಿಸಿದ ಹಳನೆನಪತಂದು,
ಗಾಳಿಯನ್ನುಬ್ಬಿಸುತ ಗಂಟೆಗಳು ಮೊಳಗೆ,
ತೋಪಿನೊಳು ಗೋಪುರವು ಸಗ್ಗದೆಡೆಗೇಳೆ—

೫

ಪ್ರೀತಿಯಲಿ ನಾವಂದು ತೊಟ್ಟಪಣದಂತೆ,
ನೀತಿಯಲಿ ತನಿಹೊಂದಿ ಬಾಳುತಿರುವಂತೆ,
ಮೂಡಿದೀ ಬಯಕೆಗಳು ಕೈಗೂಡಲೆಂದು,
ಬೇಡುವೆನು ಬೆಂದೊಡಲ ಸಂತಯಿಸು ಎಂದು!

* ಎಸ್. ರೋಜರ್ಸ್‌ರವರ "A wish" ಎಂಬ ಕವನದ ಆಧಾರದ ಮೇಲೆ ಬರೆದದ್ದು.

ಗೆಸ್ಟಪೋಗಳ ★ ದುಷ್ಟತನ

(ನಡೆದ ಸಂಗತಿಯೊಂದು)* ★

ಇದೊಂದು ಕಲ್ಪಿತವಾದ ಗುಪ್ತ ಪೋಲೀಸರ ಕಥೆಯಲ್ಲ, ನಿಜವಾಗಿಯೂ ನಡೆದ ಸಂಗತಿ! ಹಿಟ್ಲರನು ತನಗೆ ಆಗದವರನ್ನು ಹುಡುಕಿ ಹುಡುಕಿ ದಂಡಿಸುವುದಕ್ಕಾಗಿ ಎಷ್ಟೆಷ್ಟು ದುಷ್ಟ ಕಾರ್ಯಗಳನ್ನು ಹೂಂಚುತ್ತಿರುತ್ತಾನೆ ನೋಡಿರಿ!

★

'ಶಂಕ್ರಿ'

ಇಂದಿನ ಈ ಯುದ್ಧದ ಪ್ರಸಂಗಗಳಲ್ಲಿ ಕೊಲೆಯು ಸಾಮಾನ್ಯ ಸಂಗತಿಯಾಗಿದೆ. ಅದರ ಸಲುವಾಗಿ ಸರಕಾರಗಳು ಲಕ್ಷಾಂತರ ವೆಚ್ಚ ಮಾಡುತ್ತಿವೆ. ಪ್ರತಿನಿತ್ಯ ಹತ್ತಾರು ಕೇಂದ್ರ-ಗಳಿಂದ ಹಿಟ್ಲರನ ಹತ್ಯಾಕಾಂಡದ ಇತಿಹಾಸವನ್ನು ಜರ್ಮನ್ ಜನತೆಯು ಆತುರತೆಯಿಂದ ಕೇಳುತ್ತಿರುತ್ತದೆ.

ಈ ಯುದ್ಧ ಪ್ರಾರಂಭವಾದಾಗ ನಾನು **ಪ್ಯಾರಿಸ್**‌ನಲ್ಲಿದ್ದೆ. ಅಲ್ಲಿ ಒಟೊಸ್ಟ್ರಾಜರ್‌ನೊಂದಿಗೆ ಇರುತ್ತಿದ್ದೆ. ರೇಡಿಯೋದಲ್ಲಿ ಪ್ರತಿನಿತ್ಯ ಎಲ್ಲಿಂದಲೋ ವಿಚಿತ್ರ ಸುದ್ದಿ ಬರುತ್ತಿತ್ತು. ಅದೊಂದು ಸ್ವತಂತ್ರಕೇಂದ್ರವೆಂಬುದು ತಿಳಿದುಬಂದಿತು. ಆ ಕೂಗು ಜರ್ಮನಿಯಲ್ಲಿಯದೇ ಎಂಬುದಾಗಿ ಭಾಸವಾಗುವಂತೆ ಇರುತ್ತಿತ್ತು. ಸುದ್ದಿ ಹೇಳುವಾಗ, ಪ್ರತಿದಿನ ತನ್ನ ಹಿಂದೆ ಗೆಸ್ಟಪೋದವರು ಬೆನ್ನುಹತ್ತಿರುವರೆಂದು ಹೇಳಿದರೂ, ಮರುದಿನವೆ ಯಾವುದೊ ಒಂದು ಸ್ಥಳದಿಂದ—**ಕೊಲೊನ್, ಹ್ಯಾಂಬರ್ಗ್ ಬ್ರೆಸ್ಲೊ**—ಅಥವಾ ಮತ್ತೊಂದಾವುದಾದರೊಂದು ಮೂಲೆಯಿಂದ ಆ ದನಿ ಕೇಳಬರುತ್ತಿತ್ತು. ಜರ್ಮನಿಯಲ್ಲಿದ್ದವರು ಈ ವಿಷಯವನ್ನೆಲ್ಲ ನಂಬಬಹುದಾಗಿದೆ. ಆದರೆ ಜರ್ಮನಿಯನ್ನೂ ಜರ್ಮನ್ ಗೆಸ್ಟಪೋದವರ ಚಾಣಾಕ್ಷತನವನ್ನೂ ತಿಳಿದವರು ನಗೆಯಾಡ-ಬಹುದಾಗಿದೆ. ಆದರೆ ನಾನು ಪ್ಯಾರಿಸಿನಲ್ಲಿದ್ದಾಗ ಈ ಸ್ವತಂತ್ರ ಕೇಂದ್ರವು ಪ್ಯಾರಿಸಿನಲ್ಲಿತ್ತು. ಈ ಸುದ್ದಿಯನ್ನು ಕೇಳಿ ಜರ್ಮನರು ನಗಬಹುದಾಗಿದೆ.

ಒಬ್ಬನಿಗೆ ಮಾತ್ರ ಇದೆಲ್ಲವೂ ಸಾಹಸವೆ! ಒಬ್ಬನೇ— ಗೆಳೆಯರಿಲ್ಲದವನು—ನಿರ್ಗತಿಕ—ಗೆಸ್ಟಪೋದವರ ಕಣ್ಣಲ್ಲಿ ಒತ್ತುವವ— ಇಂತಹನೊಬ್ಬನು, ಜೀವದ ಅಪಾಯದೊಳಗಿದ್ದು ಗುಪ್ತಕೇಂದ್ರ ನಡೆಯಿಸುವುದು ನಿಜವಾಗಿಯೂ ಸಾಹಸವೆ! ಇದು ಮೊದಲನೆಯ ಗುಪ್ತಕೇಂದ್ರ— ಹೇಳಿಕೊಳ್ಳುವಂತಹ ಗುಪ್ತಕೇಂದ್ರವೆಂದರೆ ಇದೊಂದೆ.ಹಿಟ್ಲರನ ವಿರುದ್ಧ ಒಂಟಿಯಾಗಿ ಹೋರಾ-ಡುವ ಒಟೊಸ್ಟ್ರಾಜರನ ಅಸಾಮಾನ್ಯಕಾರ್ಯವಿದು. ಈ ಕಾರ್ಯಸಾಧನ ಅವನೊಬ್ಬನದೆ ಅಲ್ಲ; ಅವನ ಸುಖ-ದುಃಖ ಸಮಭಾಗಿಯಾದ ಶೂರ ರುಡೊಲ್ಫ್ ಫ್ರೊರ್ಮಿಸ್ ಅವನ ಕರ್ಮ-ಕೌಶಲ್ಯವೂ ಇದರಲ್ಲಿ ಸೇರಿದೆ. ಇವನೊಬ್ಬ ಜರ್ಮನಿಯ ಅತ್ಯುಚ್ಚ ರೇಡಿಯೊ ತಂತ್ರವಿಶಾರದನು.

ಫ್ರೊರ್ಮಿಸ್‌ನು ಅಷ್ಟು ಎತ್ತರನಾದವನಲ್ಲ; ಆದರೆ ಎದೆಗಾರ. ಮೊದಲ ಮಹಾಯುದ್ಧದಲ್ಲಿ ಜರ್ಮನಿಯೊಂದಿಗೆ ಪ್ಯಾಲೆಸ್ಟಾಯಿನ್‌ನಲ್ಲಿ ಚೆನ್ನಾಗಿ ಹೋರಾಡಿದವ. ಜರ್ಮನಿಯಲ್ಲಿಯೆ ಮೊಟ್ಟಮೊದಲು ರೇಡಿಯೊ ಯಂತ್ರವನ್ನು ಸ್ಥಾಪಿಸಿದುದಕ್ಕೆಂದು ಪದವಿಯೊಂದನ್ನು ಪಡೆದವ. ಅನಂತರ ರೇಡಿಯೊ ಯಂತ್ರದಲ್ಲಿ ಅನೇಕ ಸಂಶೋಧನೆ ಮಾಡಿದವ. ಲಘುತರಂಗ (Short wave) ರೇಡಿಯೊ, ರುಡೊಲ್ಫ್ ಫ್ರೊರ್ಮಿಸನ ವೈಶಿಷ್ಟ್ಯ. ಈ ರುಡೊಲ್ಫನ ಕರ್ಮಕೌಶಲ್ಯವು ಅವನನ್ನು ಜರ್ಮನಿಯ ರೇಡಿಯೊ ವಿಭಾಗ-ದಲ್ಲಿ ಉಚ್ಚ ಪದವಿಗೆ ತಂದಿತು. ಕೊನೆಗೆ ಸ್ಟುಟ್‌ಗಾರ್ಟ ಕೇಂದ್ರ-ದಲ್ಲಿ ಮುಖ್ಯ ಅಧಿಕಾರಿಯೂ ಆದನು. ಆ ಸ್ಥಾನದಿಂದ ಅನೇಕ ಸಂಶೋಧನ-ಪ್ರಯೋಗಗಳನ್ನು ಮಾಡಿದ್ದರಿಂದ, ಇಡಿ ಜರ್ಮನಿಯಲ್ಲಿ ಅವನು ಹೆಸರನ್ನು ಪಡೆದನು.

ಇವನಿಗೆ ಹಿಟ್ಲರನ ವೃತ್ತಿ ಸರಿಬಂದಿರಲಿಲ್ಲ. ಅದಕ್ಕಾಗಿ ಅವನ ವಿರುದ್ಧ ಗುಪ್ತವಾಗಿ ಒಟೊಸ್ಟ್ರಾಜರನೊಂದಿಗೆ ಸೇರಿಕೊಂಡಿದ್ದ. ಒಮ್ಮೆ ಸ್ಟುಟ್‌ಗಾರ್ಟ್‌ನಿಂದ ಹಿಟ್ಲರನು ಮಹತ್ತ್ವದ ಭಾಷಣ ಮಾಡುವಾಗ, ರೇಡಿಯೊ ತಂತಿಯನ್ನು ಕತ್ತರಿಸಿ ಬಿಟ್ಟನು. ಕೂಡಲೆ ಗೆಸ್ಟಪೋದವರು ಸುತ್ತಾಡಿ ಹುಡುಕಿದರೂ ಅಪರಾಧಿಯು ಪತ್ತೆಯಾಗಲಿಲ್ಲ. ಆದರೆ ಸ್ಟುಟ್‌ಗಾರ್ಟ್‌ನಿಂದ ಭಾಷಣ ಮಾಡುವಾಗಲೇ ಅನೇಕ ಯಾಂತ್ರಿಕ ದುರ್ಘಟನೆಗಳು ಸಂಭವಿಸಿದ ಮೂಲಕ, ಫ್ರೊರ್ಮಿಸ್‌ನು ಕೆಲಸದಿಂದ ದೂರಮಾಡಲ್ಪಟ್ಟನು. ಮರುಕ್ಷಣವೆ ಕೈದು. ದೈವಯೋಗದಿಂದ ಪಾರಾದನು; ಮತ್ತೆ ತನ್ನ ತಂತ್ರವನ್ನು ಹೂಡಿದನು. ಆಸ್ಟ್ರಿಯಾ, ಟರ್ಕಿ, ಹಂಗರಿ ಮುಂತಾದ ದೇಶಗಳನ್ನು ಸುತ್ತಿ, ಪ್ರಾಗದಲ್ಲಿದ್ದ ಒಟೊಸ್ಟ್ರಾಜರನನ್ನು ಕೂಡಿಕೊಂಡನು. ಯಾವುದಾದರೊಂದು ಉಚ್ಚ ಪದವಿಯಲ್ಲಿ ಇರುವುದೆ ಫ್ರೊರ್ಮಿಸ್‌ನ ಸ್ವಭಾವಕ್ಕೆ ಒಗ್ಗಿದ ಮಾತು.

ಈ ಪುನರ್ಮಿಲನದಿಂದ ಗೆಸ್ಟಪೋದವರು ಎಚ್ಚತ್ತರು.ಹಿಟ್ಲರನ ವಿರುದ್ಧ ಹುಯಿಲೆಬ್ಬಿಸುವ ಈ ಗುಪ್ತಕಾರಸ್ಥಾನವನ್ನು ಬಯಲಿಗೆ ಎಳೆಯಬೇಕಲ್ಲದೆ ಅವರನ್ನು ನಾಶಮಾಡಬೇಕೆಂದು ನಿರ್ಣಯ ಮಾಡಿದರು.

* ಪತ್ರಿಕೋದ್ಯಮಿ ಡಗ್ಲಸ್ ರೀಡ್ ಅವರ ಬರೆಹದ ಆಧಾರದಿಂದ.

ಒಬ್ಬೊಂಟಿಗನಾಗಿ ರೇಡಿಯೋದ ಸಹಾಯದಿಂದ ಹೋರಾಡುವುದು ಫ್ರೊರ್ಮಿಸ್‌ನ ವಿಚಾರ-ಕಾರ್ಯ. ಅವನೆ ಅದರ ವಿವರವನ್ನೆಲ್ಲ ಸಿದ್ಧಪಡಿಸಿದನು. ಮುಖ್ಯ ಅಡ್ಡಿಯೆಂದರೆ ದುಡ್ಡಿನದು. ಕಳ್ಳತನದಿಂದ ಸಾಗುವ ಈ ಕಾರ್ಯಕ್ಕೆ ದುಡ್ಡೆಲ್ಲಿಂದ ಬರಬೇಕು? ಇದು ಕೇವಲ ಜರ್ಮನರ ಸಾಹಸ; ಯಹೂದಿಗಳ ಕೈಯಿಲ್ಲ ಇದರಲ್ಲಿ—ಅದಕ್ಕೇ ಅವರ ದುಡ್ಡೂ ಬಾರದು ಇದಕ್ಕೆ. ಅಂತೂ ಗೆಳೆಯರಿರ್ವರೂ ಕೆಲವೊಂದು ಹಣವನ್ನು ಹೇಗೋ ಕೂಡಿಸಿದರು—ಕಾರ್ಯಪ್ರವೃತ್ತರಾದರು.

ತುಂಬ ಮಹತ್ತ್ವದ ಮಾತೆಂದರೆ, ಈ ಗುಪ್ತಕೇಂದ್ರಕ್ಕಾಗಿ ಸ್ಥಳ ಹುಡುಕುವುದು. ಆ ಸ್ಥಳವು ಗುಪ್ತವಾಗಿರಬೇಕಲ್ಲದೆ ಯಂತ್ರ-ಯೋಜನೆಗೆ ಅನುಕೂಲವಿರಬೇಕು. ಗುಪ್ತವೆಂದರೆ ಗೆಸ್ಟಪೋದವರ ಕಣ್ಣಿಗೆ ಮಣ್ಣೆರಚುವಂತಹದಿರಬೇಕು. ಕೊನೆಗೆ ಒಂದು ಸ್ಥಳವನ್ನು ಹುಡುಕಿದರು. ಪ್ರಾಗ್ ಪಟ್ಟಣದ ನೈರುತ್ಯಕ್ಕೆ ನಾಲ್ವತ್ತುಮೈಲಿ ದೂರ; ಮೋಲ್ಡೊ ಕೊಳ್ಳದಲ್ಲಿ, ನದಿಯ ದಂಡೆಯ ಮೇಲೆ **ಜಾಹೊರ್ಜಿ** ಎಂಬ ಹೆಸರಿನ ಛತ್ರ; ಪಟ್ಟಣದಿಂದ ದೂರ ಕೊಳ್ಳದ ಮಧ್ಯದಲ್ಲಿ. ಸುತ್ತಲೂ ಗುಡ್ಡಗಳು. ಸ್ಥಳವು ಅತ್ಯಂತ ಯೋಗ್ಯವಾದುದೆಂದು ತಿಳಿಯಿತು. ಆ ಛತ್ರ (Inn) ದಲ್ಲಿ ಇವರು ತಂಗಿದರು. ಇವರ ವಿಲಕ್ಷಣ ಆಚಾರ-ವಿಚಾರಗಳಿಗಾಗಿ ಛತ್ರಾಧಿಪನು ಎಂದೂ ತಲೆತುರಿಸಿಕೊಳ್ಳುತ್ತಿದ್ದಿಲ್ಲ. ಅವನೂ ಒಬ್ಬ ಸ್ವದೇಶಾಭಿಮಾನಿ. ಆಗ ಹೇಮಂತಕಾಲ; ಛತ್ರದಲ್ಲಿಯ ಮಿಕ್ಕ ಅತಿಥಿಗಳು ಆ ಕೊಳ್ಳದ ಚಳಿಯನ್ನು ತಡೆಯದೆ ತೆರಳಿದರು. ಆದುದರಿಂದ ಆ ಸ್ಥಳವು ಅತೀವ ಏಕಾಂತದ್ದಾಯಿತು—ಅದೊಂದು ಸ್ಮಶಾನದ ಏಕಾಂತತೆಯಂತೆ ಗಭೀರವಾಗಿತ್ತು.

ಈ ಸ್ಥಲದಲ್ಲಿ ಫ್ರೊರ್ಮಿಸ್‌ನು—ಸ್ವದೇಶಾಭಿಮಾನಿ—ಹಿಟ್ಲರ ವಿರೋಧಿ-ಫ್ರೊರ್ಮಿಸನು, ತನ್ನ ಗುಪ್ತ ಕೇಂದ್ರವನ್ನು ನಿರ್ಮಿಸಿದನು. ಅದೊಂದು ಅದ್ಭುತಯಂತ್ರವನ್ನು ನಿರ್ಮಿಸಿದ್ದನು. ಹಿಟ್ಲರನು ಪ್ರಾಗಪಟ್ಟಣವನ್ನು ಪ್ರವೇಶಿಸುವವರೆಗೆ ಅದು ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಲ್ಪಡುತ್ತಿತ್ತು. ಅದೊಂದು ಹೊಚ್ಚಹೊಸ ಯೋಜನೆ. ಈ ಗುಪ್ತಕೇಂದ್ರದಿಂದ ಹಿಟ್ಲರ್ ವಿರೋಧಿ ಸಂಗತಿಗಳನ್ನು ದಿನಕ್ಕೆ ನೂರುಬಾರಿ, ನೂರು ಬೇರೆಬೇರೆ ಮಟ್ಟಗಳಿಂದ ಹಿಟ್ಲರನ—ಜರ್ಮನಿಯ—ಎದೆಯು ಬಿರಿವಂತೆ ಸುದ್ದಿ ಹೇಳುತ್ತಿದ್ದನು. ಯಂತ್ರವು ಮೇಲಟ್ಟದ ಒಳಮಾಳಿಗೆಯಲ್ಲಿ ಮುಚ್ಚಿಡಲ್ಪಟ್ಟಿತ್ತು. ಫ್ರೊರ್ಮಿಸ್‌ನ ಕೋಣೆಯಲ್ಲಿ ಸ್ಪಷ್ಟನುಡಿ (Micro phone) ಮಾತ್ರ ಕಾಣುತ್ತಿತ್ತು. ಹಾಸಿಗೆಯ ಮೇಲೆ ಮಲಗಿಕೊಂಡು ಜರ್ಮನ್ ಜನತೆಯೆದುರು ತನ್ನ ಎದೆಯನ್ನು ಬಿಚ್ಚಿಡುತ್ತಿದ್ದನಾತ.

ಸ್ಟ್ರಾಜರ್‌ನಾಗಲಿ, ಫ್ರೊರ್ಮಿಸ್‌ನಾಗಲಿ ತಮ್ಮ ಮೇಲಿನ ಗಂಡಾಂತರವನ್ನು ಕಡೆಗಣಿಸಿದ್ದಿಲ್ಲ—ಅಥವಾ ಭದ್ರತೆಯ ಮೋಹದಲ್ಲಿಯೂ ಇದ್ದಿಲ್ಲ. ತಮ್ಮ ಜೀವ ಒತ್ತೆಯಾಗಿದೆಯೆಂಬುದನ್ನು ಅವರು ಬಲ್ಲರು. ಕೊನೆಗೆ ಗೆಸ್ಟಪೊದವರ ಕಣ್ಣಿಗೆ ಬಿದ್ದು ನಾಶಹೊಂದಿದರವರು. ಸ್ಟ್ರಾಜರನು ಹೇಳಿದಂತೆ, ಅವರ ವೈರಿ ಗೆಸ್ಟಪೊದವರಲ್ಲ; ದುಡ್ಡಿನ ಕೊರತೆ. ಅದರ ಮೂಲಕ ಹೊಸ ಯೋಜನೆಗಳನ್ನು ಕೈಕೊಳ್ಳುವುದಕ್ಕಾಗುತ್ತಿದ್ದಿಲ್ಲ; ಭದ್ರತೆ ಪಡೆವುದಕ್ಕಾಗುತ್ತಿದ್ದಿಲ್ಲ. ಎಷ್ಟೇ ಎಚ್ಚರಪಟ್ಟುಕೊಂಡಿದ್ದರೂ ಸಾಧ್ಯವಾಗಲಿಲ್ಲ.

ಸಾಧ್ಯವಾಗದುದಕ್ಕೆ ಇನ್ನೊಂದು ಕಾರಣ—ಹೆಣ್ಣಿನ ತೊಡಕು.

೧೯೩೯ನೆಯ ಜನವರಿ ೧೬ಕ್ಕೆ, ಫ್ರೊರ್ಮಿಸ್‌ನನ್ನು ಸ್ಟ್ರಾಜರನು ಕೊನೆಯಸಲ ಕಂಡನು. ಆಗ ಅವನು ಫ್ರೊರ್ಮಿಸ್‌ನನ್ನು ಕೇಳಿದ್ದನು: ‘ ಏನಾದರೂ ಸಂಶಯಬರುವಂತಾಗಿದೆಯೆ ’ ಎಂದು. ನಿನ್ನೆಯ ದಿನ ‘ಗಂಡಹೆಂಡರ ಜೊತೆಯೊಂದು ಬಂದಿದೆ’ ಎಂದು ಆತ ಹೇಳಿದನು. ಬಂದಿದ್ದ ಆ ಹೆಣ್ಣುಮಗಳು —ಅತೀವ ಸುಂದರಿಯಾಗಿದ್ದಳು. ‘ ಇದೇನೊ ಚೆನ್ನಾದ ಲಕ್ಷಣವಲ್ಲ ’ ಎಂದನು ಸ್ಟ್ರಾಜರನು. ಅಲ್ಲದೆ ಆ ದಂಪತಿಗಳ ಮೇಲೆ ಕಣ್ಣಿಡಲು ಛತ್ರಾಧಿಪನಿಗೆ ತಿಳಿಸಿದನು. ಆದರೆ ಫ್ರೊರ್ಮಿಸ್‌ನು ತಿಳಿದನು: ‘ ಅವರು ಒಳ್ಳೆಯವರು ಇರಬಹುದು ’ ಎಂದು. ಅವನ ತಿಳಿವಳಿಕೆ ಸರಿಯಾಗಿತ್ತೆ?

ಅವರನ್ನು ಒಳ್ಳೆಯವರಾದ ನಿರುಪದ್ರವಿಪ್ರಾಣಿಗಳೆಂದು ಫ್ರೊರ್ಮಿಸ್‌ನು ತಿಳಿದುಕೊಂಡನಲ್ಲವೆ? ಏನುಕಾರಣ? ಕಾರಣ ಚೆಲುವೆ! ಸ್ಟ್ರಾಜರನು ಸಂಶಯಗೊಂಡ ಆ ಚೆಲುವೆ! ಸಂಶಯ ಬಂದುದು ಸ್ಟ್ರಾಜರನಿಗೆ; ಫ್ರೊರ್ಮಿಸ್‌ನಿಗಲ್ಲ. ಇದೇ ವಿಚಿತ್ರ. ಫ್ರೊರ್ಮಿಸ್‌ನಾದರೂ ತನ್ನ ಕಾರ್ಯಕ್ಕೆ ಹೊಸಬನಲ್ಲ! ಜಗತ್ತಿನ ಬಹುಭಾಗವನ್ನು ಸುತ್ತಿದನನು. ಪ್ಯಾಲೆಸ್ಟಾಯಿನ್‌ನಲ್ಲಿ ಹೋರಾಡಿದವನು. ಆಯಾ ದೇಶದ ಹೆಂಗುಸರ ಸ್ವಭಾವಗಳನ್ನೆಲ್ಲ ಅರಿತವನು. ಅಲ್ಲದೆ ಗೆಸ್ಟಪೋದವರು ಬೆನ್ನಟ್ಟಿದ್ದುದರ ಅರಿವೂ ಇರುವವನು. ಸಿಕ್ಕರೆ ಸದೆಬಡೆಯುವರೆಂಬುದನ್ನು ಚೆನ್ನಾಗಿಯೆ ಅರಿತವನು. ಅಲ್ಲದೆ ತಾನು ಮಾಡುತ್ತಿರುವ ಕಾರ್ಯವೊ ಅತಿ ಗೂಢ—ಭಯಂಕರ! ಹೀಗಿದ್ದು ಚೆಲುವೆಯೊಬ್ಬಳ ಚೆಂದವಾದ ಮೊಗಕ್ಕೆ ಮನಸೋತುದು ಅಚ್ಚರಿಯಲ್ಲವೆ? ಸೋತಮನವು ಅವನನ್ನು ಅರಿವುಗೇಡಿಯನ್ನಾಗಿ ಮಾಡಿತು. ಇದಕ್ಕೇನು ಪ್ರೇಮವೆನ್ನಬಹುದೆ? ಅಂದೆಯೆ ನೋಡಿದ್ದಾನೆ. ಚೆಲುವೆಯ ಮೋಹ ಎಲ್ಲವನ್ನೂ ಮರೆಮಾಡಿತು. ಮಾಡಬೇಕಾದ ಕಾರ್ಯವು ಕ್ಷಣಹೊತ್ತು ಕಣ್ಮರೆಯಾಯಿತು. ಕ್ಷಣಿಕವಾದುದು—ಬಲವಾದ ಪೆಟ್ಟುಕೊಟ್ಟಿತು. ಬಣ್ಣದ ಹೆಣ್ಣೇ ಎಲ್ಲವನ್ನೂ ಮಣ್ಣುಗೂಡಿಸಿ ಬಿಟ್ಟಿತು.

ಅವಳು ಆಗಾಗ ಇವನ ಸಮೀಪ ಬಂದು ಅತ್ತಿತ್ತ ಸುಳಿದಾಡುವಳು. ಕಣ್ಣು ಮಿಟುಕಿಸುವಳು. ಕೈಮೇಲೆ ಕೈಯಿಡುವಳು. ಆಗೆಲ್ಲ ಇವನ ಮೈ ಜುಮ್ಮುಗಟ್ಟುವುದು—ಅರಿವು ಹಾರುವುದು. ಅವಳ ಈ ಚೇಷ್ಟೆಯೆಲ್ಲ ನಟನೆಯೆಂದು ತಿಳಿಯದವನು ಅವಳ

ಹೃದಯದ ಆಳವನ್ನು ಹೇಗೆ ತಿಳಿದಾನು? ನಗುತ್ತಲೆ ಇರಿಯಬೇಕೆಂದ ಅವಳ ನಿರ್ಧಾರದ ವಾಸನೆಕೂಡ ಇವನಿಗೆ ಹತ್ತಿರಲಿಲ್ಲ. ದುರ್ಬಲ ಮಾನವನೆ, ನಗುಮೊಗದ ಹೆಣ್ಣಿನ ನಗುವಿನ ಹಿಂದೆ ಹುದುಗಿದ ಬಗೆ ತಿಳಿಯದಾದೆಯಾ.?

ತಾನು ಈ ರೀತಿ ಆ ಚೆಲುವೆಯೊಡನೆ ಸಲುಗೆ ಬೆಳೆಯಿಸುತ್ತಿದ್ದುದನ್ನು ಸ್ಕ್ರಾಜರನಿಗೆ ತಿಳಿಸಿದ್ದಿಲ್ಲ--ತಿಳಿಸಬಯಸಲಿಲ್ಲ. ಹೆಣ್ಣಿನ ಸಲುಗೆಯ ಮಾತನ್ನು ಏನು ಆಡುವುದೆಂದೊ ಅಥವಾ ಅದೊಂದು ಬಗ್ಗೆಯ ಅಸೂಯೆ ಕಾರಣವೋ! ಏನೇ ಇರಲಿ, ಈ ಆಳವಾದ ವಿಷಯ ಸ್ಕ್ರಾಜರನ ಗಮನಕ್ಕೆ ಬಾರದೆ ಹೋಯಿತು. ಅವನು ತೆಗೆದುಕೊಂಡ ಸಂಶಯವು ಪರಿಣಾಮವಾಗದೆ ಹೋಯಿತು.

ಈ ಚೆಲುವೆಗೆ ಗಂಡನೊಬ್ಬನಿದ್ದುದೂ ನಿಜ. ಒಂದು ದಿನ ಆಕೆ ತನ್ನ ಗಂಡನೊಡನೆ ಜಗಳದ ನಾಟಕವನ್ನಾಡಿದಳು. ಸಿಡಿದುಕೊಂಡು ಹೋಗಿ, ಫ್ಲೊರ್ಮಿಸ್‌ನ ಬಳಿ ಬಂದು ತನ್ನ ಬಯಕೆಯೊಂದನ್ನು ಸೂಚಿಸಿದಳು: "ನಾವಿಬ್ಬರೂ ಫೋಟೊ ತೆಗೆಯಿಸಿಕೊಳ್ಳೋಣ; ಆ ಚಿತ್ರವನ್ನು ನೋಡಿ ಅವನು (ಗಂಡನು) ಅಸೂಯೆಪಡಲಿ—ತನ್ನನ್ನು ಬಿಡಲಿ" ಎಂದು. ಅವಳ ನೋಟದಲ್ಲಿಯ ಕೊಂಕು, ಮಾತಿನಲ್ಲಿಯ ಮಾಟ ಇವನ್ನು ಫ್ಲೊರ್ಮಿಸ್ ತಿಳಿಯದೆ, ಅವಳೊಂದಿಗೆ ಕೈಯಲ್ಲಿ ಕೈಹಾಕಿಕೊಂಡು ಫೋಟೊ ತೆಗೆಯಿಸಿಕೊಂಡ. ಗಂಡನ ಸೋಗಿನವ—ಸಿಡಿದುಕೊಂಡಂತೆ ನಟಿಸಿದ; ಹೆಂಡತಿಯನ್ನು ಬಿಟ್ಟುಹೋದ. ಅವನ ಜೊತೆಗೆ ಅವರಿಬ್ಬರ ಫೋಟೊಕೂಡ ಹೋಯಿತು—ಗೆಸ್ಟಪೋದವರ ಕಡೆಗೆ. ಅಲ್ಲಿ ಪರೀಕ್ಷೆಯಾಗಿ, ತಾವು ಹುಡುಕುತ್ತಿದ್ದ 'ಮಿಕ'ವು ಬಲೆಯಲ್ಲಿ ಬಿದ್ದಿದೆಯೆಂದು ತಿಳಿದು, ಗೆಸ್ಟಪೋದವರು ಗೆಲುವಿನ ಮೊಗದವರಾದರು.

'ಮಿಕ' ಸಿಕ್ಕಿದೆಯೆಂದು ದೃಢವಾದಕೂಡಲೆ, ಗಂಡನಾದವನೂ ಜೊತೆಗೆ ಇನ್ನೊಬ್ಬನೂ (ಇಬ್ಬರೂ ಗೆಸ್ಟಪೋದವರೆ) ಛತ್ರಕ್ಕೆ ಬಂದು,ಆ ಚೆಲುವೆಯೊಂದಿಗೆ ಚಿನ್ನಾಟವಾಡತೊಡಗಿದರು. ಆ ಚೆಲುವೆಯ ಅಂತ್ಯವಾದರೂ ಸಮಾಪಿಸಿತ್ತು. ಜನವರಿ ೨೧ನೆಯದಿನ ತಮ್ಮ ಮರ್ಸಿಡಿಸ್ ಮೋಟರನ್ನು ಸಜ್ಜುಗೊಳಿಸಿ ಅವರು ಎಲ್ಲ ಸಿದ್ಧತೆಮಾಡಿದರು.

ಚೆಲುವೆಯ ಇತ್ತೀಚಿನ ಚಟುವಟಿಕೆಗಳು ಸ್ವಲ್ಪ ಸಂಶಯ ತಂದರೂ ಮೋಹವು ಮತ್ತೆಮತ್ತೆ ಮುಂದೂಡುತ್ತಿತ್ತು. ಆಗಾಗ ಸ್ಕ್ರಾಜರನ 'ಸಾವಧಾನ' ಎಚ್ಚರಿಸುತ್ತಿದ್ದರೂ ಅವಧಿ ಆಳವು ಮೀರಿತ್ತು.

ಛತ್ರಕ್ಕೆ ದೂರನುಡಿ (Telephone)ಯ ವ್ಯವಸ್ಥೆಯಿರಲಿಲ್ಲ. ಅದೊಂದು ಫ್ಲೊರ್ಮಿಸ್ಸನ ದುರ್ದೈವ. ಕೂಗಿದರೆ ಪೋಲಿಸರು—ಚೆಕ್ ಪೋಲಿಸರು ಕೂಡ ಬರುವಂತಿಲ್ಲ. ಏಕಾಂತವೆಂದು ದೂರ ಬಂದುದೇ ಈಗ ಮುಳ್ಳುವಾಗತೊಡಗಿತು.

ಈ ದಂಪತಿಗಳು ಒಂದೇ ಕೋಣೆಯಲ್ಲಿರುತ್ತಿದ್ದರು—ಫ್ಲೊರ್ಮಿಸ್‌ನ ಕೋಣೆ ಅದೆ ಅಟ್ಟದ ಮೇಲೆ, ಎರಡುಕೋಣೆಯಾಚೆಗಿದ್ದುದು. ಆ ಚೆಲುವೆಯ ಗಂಡನು ತಲೆನೋವಿನ ಸೋಗಿನ ಮೂಲಕ ಮೊದಲೆ ಮಲಗಿಕೊಂಡನು. ಫ್ಲೊರ್ಮಿಸ್‌ನು ಅವಳು ಇಬ್ಬರೂ, ಅಂದು ರಾತ್ರಿ ಬಹಳ ಹೊತ್ತಿನವರೆಗೆ ದಿವಾಣಖಾನೆಯಲ್ಲಿ ಹರಟುತ್ತ ಕುಳಿತರು.

ಚೆಲುವೆಯು ಮೈಮುರಿಯುತ್ತ—ಮುಂದೆ ಸರಿಯುತ್ತ ಅವನ ಸಾಮೀಪ್ಯವನ್ನು ಪಡೆದಳು. ಸಲುಗೆಯಿಂದ ತನ್ನ ಬೇಟವನ್ನು ತೋಡಿಕೊಂಡಳು. ಗಂಡನ ಬಗೆಗೆ ತಿರಸ್ಕಾರವನ್ನು ತೋರಿಸಿದಳು. ಅವಳಿಗಾದರೂ ತನ್ನ ಸಾವು ಕೂಡ ಸಮೀಪಿಸಿದೆಯೆಂಬುದು ತಿಳಿಯದ ಮೂಲಕ, ತನ್ನ ನಟನೆಯನ್ನು ಅವಳು ಚೆನ್ನಾಗಿಯೆ ಮಾಡಿದಳು. ಅವಳ ಕೈ ನೇವರಿಸುವುದು. ಅಲಸಿದ ಕಣ್ಣುಗಳು ಅರೆಮುಚ್ಚಿ, ಮನದ ಬಯಕೆಯನ್ನು ಬಯಲಿಗೆ ತರುತ್ತಿದ್ದುವು.

ಇವರ ಸಲುಗೆಯಾಟ (?) ನಡೆದಾಗ, ಛತ್ರಾಧಿಪನು ತನ್ನ ಮಡದಿ-ಮಕ್ಕಳೊಂದಿಗೆ ತನ್ನ ಮನೆಯಲ್ಲಿ ನೆಮ್ಮದಿಯಾಗಿ ನಿದ್ದೆಹೋಗಿದ್ದನು.

ಫ್ಲೊರ್ಮಿಸ್‌ನ ಅಂತರಾತ್ಮವು ಅಂದಿನ ಸಲುಗೆಯನ್ನು ನಟನೆಯೆಂದು ತಿಳಿದಿರಬಹುದಾದರೂ 'ಹೆಣ್ಣಿನಿಂದೇನಾದೀತು ಮಣ್ಣು?' ಎಂಬ ನಿರ್ಭೀತಿಯಲ್ಲಿ ಮೈಮರೆವ ಸ್ವಭಾವ ಅವನದಾಗಿತ್ತು. ರಾತ್ರಿಯ ೧೦ ಗಂಟೆ ಬಾರಿಸಿತು. ಮಲಗಲು ಎದ್ದರು. ಅಟ್ಟದ ಪಾವಟಿಗೆಗಳನ್ನು ಏರುತ್ತಿದ್ದರು. ಪಾವಟಿಗೆಗಳ ಎದುರಿಗೆ ಇದ್ದ ಕೋಣೆಯೇ ದಂಪತಿಗಳದು.

ಚೆಲುವೆಯು ತನ್ನ ಕೋಣೆಯ ಬಾಗಿಲನ್ನು ತೆರೆದು ಒಳಗೆ ಹೋಗುವಂತೆ ನಟಿಸಿ, ಒಮ್ಮೆಲೆ ಫ್ಲೊರ್ಮಿಸ್‌ನ ಕೈಹಿಡಿದು ಸೆಳೆದಳು. ಆಗ ಎಚ್ಚತ್ತ ಫ್ಲೊರ್ಮಿಸ್‌ನೂ ಹಿಂದಕ್ಕೆ ಜಗ್ಗಿದ. ಅವಳು ಇವನ ಮುಂಗೈಯನ್ನು ಚಿವುಟಿದಳು. ಆಗ ಫ್ಲೊರ್ಮಿಸ್‌ನೇ ಅವಳಿಗೆ ಗುಂಡುಹಾಕಿರಬಹುದೊ; ಅಥವಾ ಆ ಕೋಣೆಯಿಂದ ಹೊರಬಂದ ಗಂಡನ ಸೋಗಿನ ಗೆಸ್ಟಪೋ—ಫ್ಲೊರ್ಮಿಸ್‌ನಿಗೆ ಗುಂಡು ಹಾಕುವಾಗ—ಚೆಲುವೆಗೂ ಗುಂಡುತಾಕಿತೋ! ಅದನ್ನು ಹೇಳಬಹುದಾದರೂ ಹೇಗೆ? ಚೆಲುವೆಗೆ ಗುಂಡು ತಾಗಿತು.

ಗುಂಡುಗಳು ಹಾರಿದ ಸದ್ದು ಛತ್ರದ ಕಾವಲುಗಾರನನ್ನು ಎಚ್ಚರಿಸಿತು. ಅವನು ಮುಂದೆಬಂದು ನೋಡುತ್ತಾನೆ, ಭಯಂಕರ ನೋಟ! ಗೆಸ್ಟಪೋದವರು ಕಾವಲುಗಾರನನ್ನು ಕೋಣೆಯೊಳಗೆ ಹಾಕಿ, ಫ್ಲೊರ್ಮಿಸ್‌ನ ಹೆಣವನ್ನು ಅವನ ಕೋಣೆಯಲ್ಲಿ ಎಳೆದು ಒಗೆದು ಹೋದರು. ಫ್ಲೊರ್ಮಿಸ್‌ನ ಮೈಮೇಲಿನ ಅರಿವೆಗಳೆಲ್ಲ ಪೆಟ್ರೋಲ್‌ಮಯವಾಗಿದ್ದುವು. ಜೋಬಿನಲ್ಲಿ ಕೊಳ್ಳಿಬೊಂಬುಗಳಿದ್ದುವು.

ಛತ್ರಾಧಿಪನಿಗೆ ಇದಾವುದೂ ತಿಳಿಯದು. ಕಾವಲುಗಾರ ಕಂಗೆಟ್ಟು ಬಾಗಿಲನ್ನು ಮುರಿದು ಯಜಮಾನನಿಗೆ ಸ್ಥಿತಿಗತಿಯನ್ನು

(೫೭೪ನೆಯ ಪುಟಕ್ಕೆ ಮುಂದುವರಿದಿದೆ.)

ಕರ್ಣಾಟ ವಿಶ್ವವಿದ್ಯಾನಿಲಯ!

ಒರ್ವ ಅರಿಗನಿಂದ

★

ಮಹಾರಾಷ್ಟ್ರರು ತಮ್ಮ ಸೀಮೆಯಲ್ಲಿ ಆಕ್ರಮಣ ನಡೆಯಿಸಿರುವರೆಂಬ ಕನ್ನಡಿಗರ ಆಕ್ರೋಶದಲ್ಲಿ ಯಾವ ಹುರುಳೂ ಇಲ್ಲ. ನಿದ್ದೆಹೋಗಿರುವ ಕನ್ನಡಿಗರು ಎದ್ದು ಕೆಲಸಮಾಡತೊಡಗಿದರೆ, ಯಾರ ಆಕ್ರಮಣ ಏನು ಮಾಡಬಲ್ಲದು?

★

ಭಾರತವರ್ಷದ ಏಳ್ಗೆಯ ಮಿಗಿಲಾದ ಹೊಣೆಗಾರಿಕೆಯಲ್ಲಿ ಕರ್ಣಾಟವೂ ತನ್ನ ವೈಭವಶಾಲಿಯಾದ ಪೂರ್ವಪರಂಪರೆಗೆ ತಕ್ಕಂತೆ ಭಾಗವಹಿಸಬೇಕಾಗಿದ್ದರೆ ಕನ್ನಡಿಗರು ಬೇಗನೆ ಕಾರ್ಯೋನ್ಮುಖರಾಗಬೇಕು. ಪ್ರಸ್ತುತ, ವಿದ್ಯಾಪೀಠದ ವಿಚಾರದಲ್ಲಿಯೆ ಕನ್ನಡಿಗರು ಕೈಕೊಳ್ಳತಕ್ಕ ಕೆಲಸಗಳು ಎರಡುಬಗೆಯವಾಗಿವೆ. ೧. ತಮ್ಮ ಸಂರಕ್ಷಣ ೨. ತಮ್ಮ ಶಕ್ತಿವಿಕಸನ.

೧. ಸ್ವಸಂರಕ್ಷಣ ವಿಚಾರ: ಒಂದು ಹೊಲದವನು ತನ್ನ ಹೊಲದ ಬಾಂದು-ಬದುವುಗಳ ವಿಷಯಕ್ಕೆ ಸಂಪೂರ್ಣ ದುರ್ಲಕ್ಷ್ಯ ಮಾಡಿದ್ದಾಗ, ನೆರೆಯ ರೈತನು ಆತನ ದುರ್ಲಕ್ಷ್ಯತನದ ಸಂಧಿಯನ್ನು ಸಾಧಿಸಿ ತನ್ನ ಹೊಲದ ಸೀಮೆಯನ್ನು ಹೆಚ್ಚು ಮಾಡಿಕೊಂಡರೆ, ಇಂದಿನ ಜಗತ್ತಿನ ರೀತಿಯಿಂದ ಅದು ತಪ್ಪು ಎಂದು ಹೇಳುವುದು ಕಷ್ಟ. ಏಕೆಂದರೆ ತನ್ನ ಕರ್ತವ್ಯವನ್ನು (ತನ್ನ ಹೊಲದ ಸೀಮೆ ಸರಹದ್ದುಗಳನ್ನು ಸರಿಯಾಗಿ ನೋಡಿಕೊಳ್ಳುತ್ತಿರಬೇಕೆಂಬ ಕರ್ತವ್ಯವನ್ನು) ಕಡೆಗಣಿಸಿದ ಪ್ರಾಯಶ್ಚಿತ್ತವನ್ನು ಆತನಿಗೆ ಅನುಭವಿಸಲಿಕ್ಕೆ ಬೇಡವೆ? ಇಲ್ಲವಾದರೆ ವೈರಿಗಳಿಗೆ ಉತ್ತೇಜನವನ್ನು ಕೊಟ್ಟಂತೆ ಆಗದೆ ಇರದು. ಮಹಾರಾಷ್ಟ್ರರು ತಮ್ಮ ಸೀಮೆಯಲ್ಲಿ ಆಕ್ರಮಣವನ್ನು ನಡೆಯಿಸಿರುವರೆಂಬ ಆಕ್ರೋಶವು ವ್ಯರ್ಥ. ನಿದ್ದೆಹೋದ ಕನ್ನಡಿಗರು ಎಚ್ಚರಿಯುವುದೇ ಇದಕ್ಕೆ ಸರ್ವೋತ್ಕೃಷ್ಟವಾದ ಉಪಾಯವು.

ಕನ್ನಡಿಗರು ಈ ವಿಚಾರದಲ್ಲಿ ಇನ್ನೂ ಎಚ್ಚತ್ತಿಲ್ಲವೆಂದು ವಿಷಾದದಿಂದ ಒಪ್ಪಿಕೊಳ್ಳಬೇಕಾಗುತ್ತದೆ. ಇದು ಕಟುಸತ್ಯ. ಕಂಡುದನ್ನಾಡಿದರೆ ಕೆಂಡದಂತಹ ಸಿಟ್ಟು ಹಲವರಿಗೆ ಬರಬಹುದು. ಅದಕ್ಕಾಗಿ ಮೊದಲೇ ಅಂತಹರ ಕ್ಷಮೆ ಬೇಡುತ್ತೇನೆ. ನಮ್ಮ ಎಚ್ಚರಗೇಡಿತನದ ಒಂದು ಉದಾಹರಣವನ್ನು ನೋಡಿ: ಮುಂಬೈ ವಿಶ್ವವಿದ್ಯಾನಿಲಯಕ್ಕೆ ಈ ಇಲಾಖೆಯೊಳಗಿನ ಮಾಧ್ಯಮಿಕ ಶಾಲೆಗಳನ್ನೆಲ್ಲ ಜೋಡಿಸಿಕೊಂಡಿರುವರಷ್ಟೆ! ಇವುಗಳಲ್ಲಿ ಕರ್ಣಾಟ, ಮಹಾರಾಷ್ಟ್ರ, ಗುಜರಾತಗಳೆಂಬೀ ಬಗೆಯಾದ ವಿಭಾಗಗಳನ್ನು ಮಾಡಿದುದುಂಟು. ಈ ವಿಭಾಗಗಳಲ್ಲಿ ಕರ್ಣಾಟದ ಯಾವ ಶಾಲೆಗಳೂ ಮಹಾರಾಷ್ಟ್ರ ವಿಭಾಗಕ್ಕೆ ಸೇರದಂತೆ ನೋಡಿಕೊಳ್ಳುವುದು ನಮ್ಮ ವಿಶ್ವವಿದ್ಯಾನಿಲಯದ ಪ್ರತಿನಿಧಿಗಳ ಕರ್ತವ್ಯವಾಗಿಲ್ಲವೆ? ಅದರಂತೆಯೆ ಉತ್ತರ ಕರ್ಣಾಟದ ಮಾಧ್ಯಮಿಕ ಶಿಕ್ಷಕಸಂಘದವರೂ ಈ ವಿಷಯದಲ್ಲಿ ಜಾಗರೂಕರಾಗಿರಬೇಕಾಗಿಲ್ಲವೆ? ಮುಂಬೈ ವಿಶ್ವವಿದ್ಯಾನಿಲಯಕ್ಕೆ ಸೇರಿದ ಮಾಧ್ಯಮಿಕ ಶಾಲೆಗಳ ಪಟ್ಟಿಯನ್ನು ನಿರೀಕ್ಷಿಸಿದರೆ ಅದರಲ್ಲಿ, ಮಹಾರಾಷ್ಟ್ರ ವಿಭಾಗದಲ್ಲಿ ೧. **ಜಮಖಂಡಿ**, ೨. **ಕುಂದಗೋಳ**, ೩. **ಬನಹಟ್ಟಿ**, ೪. **ಕುರಂದವಾಡ**, ೫. **ಮುಧೋಳ**, ೬. **ಶಹಾಪುರ**, ಈ ಆರು ಊರುಗಳ ಶಾಲೆಗಳೂ ಇದ್ದುದನ್ನು ಕಾಣಬಹುದು! ಇನ್ನು ಸೊಲ್ಲಾಪುರದಂತಹ ಊರಿನ ಮಾತು ಏತಕ್ಕೆ?

ಕರ್ಣಾಟರು ಈ ವಿಷಯದಲ್ಲಿ ತಮ್ಮ ವಿರೋಧವನ್ನು ತೋರಿಸದಿದ್ದರೆ ಈ ವಿಭಾಗಗಳು ಮಹಾರಾಷ್ಟ್ರಕ್ಕೆ ಸೇರಲು ಅಡ್ಡಿಯಿಲ್ಲವೆಂಬ ಮೂಕ ಸಮ್ಮತಿಯನ್ನಿತ್ತಂತೆಯೆ ಆಗುವುದಿಲ್ಲವೆ?

ತನಗೆ ಅನಾಯಾಸವಾಗಿ ಸಿಕ್ಕುತ್ತಿದ್ದರೆ, ಅಥವಾ ಒಂದು ಭಾಗದವರು ತಾವಾಗಿ ಮಹಾರಾಷ್ಟ್ರಕ್ಕೆ ಸೇರಲು ಸಿದ್ಧರಾಗಿದ್ದು ಅಲ್ಲಿ ಯಾರ ಪ್ರತಿರೋಧವೂ ಇಲ್ಲವಾಗಿದ್ದರೆ, ಅದನ್ನು ಮಹಾರಾಷ್ಟ್ರರಾದರೂ ತಮ್ಮಲ್ಲಿ ಅಳವಡಿಸಿಕೊಳ್ಳದೆ ಸುಮ್ಮನೆ ಬಿಡುವುದು ಸಾಧ್ಯವೆ?

ಮಹಾರಾಷ್ಟ್ರ ವಿಶ್ವವಿದ್ಯಾನಿಲಯದ ಚಳವಳಿಗಾಗಿ ಒಂದು ಸಮಿತಿಯು ಪುಣೆಯಲ್ಲಿ ಹದಿನಾಲ್ಕು ವರುಷಗಳ ಹಿಂದೆಯೆ ಸ್ಥಾಪಿತವಾಗಿದೆ. ಅದು ೧೮೬೦ನೆಯ ಇಸವಿಯ ೨೧ನೆಯ ಕಾಯಿದೆಗನುಸರಿಸಿ ರಜಿಸ್ಟರೂ ಆಗಿದೆ. ಈ ಸಮಿತಿಯ ಕಾರ್ಯಕಾರಿ ಮಂಡಲವನ್ನು ಆರಿಸುವ ಕುರಿತು ಘಟನೆಯಲ್ಲಿ ಒಂದು ನಿಯಮವನ್ನು ಮಾಡಿದ್ದುಂಟು: An executive body of about twenty members consisting of one member each of the district in Maharashtra..and other Southern Maratha States (shall be elected eveny year)· ಈ

ನಿಯಮದಂತೆ ಕಾರ್ಯನಿರ್ವಾಹಕ ಮಂಡಳಕ್ಕೆ ಸದಸ್ಯರನ್ನು ಆರಿಸತಕ್ಕ **ಮಹಾರಾಷ್ಟ್ರದ ಜಿಲ್ಲೆಗಳಲ್ಲಿ ಬೆಳಗಾಂವಿಯ** ಹೆಸರನ್ನೂ ಸೇರಿಸಿಕೊಂಡಿದ್ದಾರೆ !

ಶ್ರೀಮಾನ್ ಖೇರರು ಪ್ರಧಾನ ಸಚಿವರೂ ಶಿಕ್ಷಣ ಮಂತ್ರಿಗಳೂ ಆಗಿದ್ದಾಗ, ಮಹಾರಾಷ್ಟ್ರ ವಿದ್ಯಾಪೀಠದ ಸಂಚಾಲಕರಲ್ಲಿ ಶ್ರೀಮಾನ್ ಜಯಕರ, ಶ್ರೀ. ಜಗತಾಪ, ಶ್ರೀ. ಗಾಡಗೀಳ, ಶ್ರೀ. ಪೋತದಾರ ಪ್ರಭೃತಿಗಳು ಸೇರಿ, ಅವರಿಗೆ ಒಂದು ಹೇಳಿಕೆಯನ್ನು ಸಲ್ಲಿಸಿದ್ದಾರೆ. ಅದರಲ್ಲಿ ಅವರು ' the territorial limits of the Maharashtra University would be conterminous with the boundaries of the Marathi speaking districts of the Presidency ......All high schools in this area will be recognised by the University and all colleges within the area (outside Poona) will be affiliated to it ' ' ಮಹಾರಾಷ್ಟ್ರವೆಂದರೆ ಮರಾಠಿ ಮಾತನಾಡುವ ಜನಗಳ ಪ್ರದೇಶ' ಎಂದು ಹೇಳಿ, ಈ ಪ್ರದೇಶದೊಳಗಿನ ಎಲ್ಲ ಹೈಸ್ಕೂಲು ಮತ್ತು ಕಾಲೇಜುಗಳನ್ನೂ ಮಹಾರಾಷ್ಟ್ರ ವಿದ್ಯಾಪೀಠಕ್ಕೆ ಸೇರಿಸಿಕೊಳ್ಳಬೇಕೆಂದು ತಿಳಿಸಿದ್ದಾರೆ.

ಈ ಸಮಿತಿಯವರು ಬೆಳಗಾಂವಿ ಮತ್ತು ಜಮಖಂಡಿ, ಮುಧೋಳ, ಕುಂದಗೋಳ ಮೊದಲಾದ ಊರುಗಳನ್ನೂ ತಮ್ಮಲ್ಲಿ ಎಣಿಸಿದ್ದಾರೆ. ಈ ಸಮಿತಿಯ ಪ್ರಮುಖರೇ ಇಂದು ಮುಂಬೈ ಸರಕಾರದಿಂದ ನಿಯಮಿಸಲ್ಪಟ್ಟ ಮಹಾರಾಷ್ಟ್ರ ವಿಶ್ವವಿದ್ಯಾಪೀಠದ ವಿಚಾರಣಾ ಮಂಡಳದಲ್ಲಿಯೂ ಇರುವರು.

ಆದುದರಿಂದ ಬೆಳಗಾಂವಿ ಜಿಲ್ಲೆ ಮತ್ತು 'ದಕ್ಷಿಣ ಮಹಾರಾಷ್ಟ್ರ' ಎಂದು ಹೇಳುವ ಕನ್ನಡ ಸಂಸ್ಥಾನಗಳು ಇವನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಮಹಾರಾಷ್ಟ್ರರು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡದೆ ಇರಲಾರರು. ಬೆಳಗಾಂವಿಜಿಲ್ಲೆ ಮತ್ತು ದ.ಮ. ಸಂಸ್ಥಾನಗಳು ಮ. ವಿದ್ಯಾಪೀಠಕ್ಕೆ ಸೇರಬೇಕೆಂದು ನಾಮದಾರ ಖೇರರನ್ನು ಕೇಳಿಕೊಂಡ ಶ್ರೀ. ಜಯಕರ, ಶ್ರೀ ಗಾಡಗೀಳರೆ ಇಂದು ಮುಂಬೈ ಸರಕಾರದ ಸಮಿತಿಯಲ್ಲೂ ಇರುವುದರಿಂದ, ಈ ಕಮಿಟಿಯು ಏನು ನಿರ್ಣಯಿಸುವುದೆಂಬುದನ್ನು ಬೇರೆ ಹೇಳುವ ಆವಶ್ಯಕತೆಯೇ ಇಲ್ಲ.

ಆದ ಕಾರಣ ಕನ್ನಡಿಗರ ಒಕ್ಕಟ್ಟು ಮತ್ತು ಸತ್ತ್ವಗಳ ಪರೀಕ್ಷೆಯ ಕಾಲವೇ ಇದೀಗ ಪ್ರಾಪ್ತವಾಗಿದೆ.

ಹಿಂದೆ ಬಳ್ಳಾರಿಯ ಬಗೆಗೆ ಇಂತಹದೇ ಒಂದು ಕುತ್ತ ಬಂದಿತ್ತು. ಆಂಧ್ರ ವಿಶ್ವವಿದ್ಯಾನಿಲಯಕ್ಕೆ ಬಳ್ಳಾರಿಯನ್ನು ಸೇರಿಸಬೇಕೆಂದು, ಮದ್ರಾಸಿನ ಅಂದಿನ ಶಿಕ್ಷಣ ಮಂತ್ರಿಗಳು ನಿರ್ಣಯಿಸಿದಂತೆಯೆ ಆಗಿದ್ದಿತು. ಇಂತಹ ಸಂದರ್ಭದಲ್ಲಿ ಶ್ರೀಮಾನ್ ಕಡಪಾ ರಾಘವೇಂದ್ರರಾಯರು ತಮ್ಮ ಸಹಕಾರಿಮಿತ್ರರೊಂದಿಗೆ ಅವಿಶ್ರಾಂತ ಪರಿಶ್ರಮಪಟ್ಟು ಬಳ್ಳಾರಿಯನ್ನು ಆಂಧ್ರರ ಬಲೆಯೊಳಗಿಂದ ಬಹು ಮಟ್ಟಿಗೆ ಬಿಡಿಸಿದರು. ಶ್ರೀ. ಬೆಳವಿ ಹತ್ತರಾಯರೂ ಈ ಕೆಲಸದಲ್ಲಿ ಶ್ರೀ. ಕಡಪಾ ರಾಘವೇಂದ್ರರಾಯರಿಗೆ ತುಂಬ ನೆರವನ್ನಿತ್ತರು. ಶ್ರೀ. ಆಲೂರ ವೆಂಕಟರಾಯರು ಬಳ್ಳಾರಿಯ ಕನ್ನಡ ಪರಂಪರೆಯ ಬಗ್ಗೆ ಐತಿಹಾಸಿಕ ಆಧಾರಗಳ ಪ್ರಕಟನೆ ಹೊರಡಿಸಿದರು. ಕನ್ನಡ ಮುಂದಾಳುಗಳು ಹಲವು ಬಾರಿ ಮದರಾಸಿನ ಯಾತ್ರೆ ಮಾಡಬೇಕಾಯ್ತು. ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸಮಾಡಿ ಜನಾಭಿಪ್ರಾಯವನ್ನು ಒಂದುಗೂಡಿಸಲಾಯ್ತು. ಇಂತೇ ಬಗೆಯಾಗಿ ಇಂಗ್ಲಿಷ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು, ಕನ್ನಡಿಗರ ನ್ಯಾಯವಾದ ಬೇಡಿಕೆಯನ್ನು ಸಾಧಾರವಾಗಿ ಮಂಡಿಸಿದ್ದಾಯ್ತು. ಇಂತಿವೆಲ್ಲ ಪ್ರಯತ್ನಗಳ ಫಲವಾಗಿ, ಬಳ್ಳಾರಿಯು ಆಂಧ್ರ ವಿಶ್ವವಿದ್ಯಾಲಯದ ಹೊಟ್ಟೆಯಲ್ಲಿ ಅರಗಿ ಕರಗಿ ಹೋಗದೆ ಹೊರಗೆ ಉಳಿಯಿತು.

ಇದೇಬಗೆಯಾಗಿ ನಮ್ಮ ಇಂದಿನ ಮುಂದಾಳುಗಳೂ, ತಲೆಯಾಳುಗಳೂ, ಬಾಯಾಳುಗಳೂ, ಕೈಯಾಳುಗಳೂ ಎಲ್ಲರೂ ಒಂದೇ ಗುರಿಯಿಂದ ಸಂಘಟಿತರೀತಿಯಿಂದ ಕೆಲಸಮಾಡಿ ಬೆಳಗಾಂವಿ, ಜಮಖಂಡಿ, ಮುಧೋಳ, ಶಹಾಪೂರ, ಕುಂದಗೋಳ ಮೊದಲಾದುವುಗಳನ್ನು ಮಹಾರಾಷ್ಟ್ರದ ಜಾಲದಿಂದ ಉಳಿಸಿಕೊಳ್ಳುವರೇ ? ಕರ್ನಾಟಕಕ್ಕೆ ಬಂದ ಈ ಗಂಡಾಂತರವನ್ನು ದೂರಮಾಡುವರೆ ?

೨. **ಸ್ವಶಕ್ತಿ ವಿಕಸನ :** ಸ್ವ-ಶಕ್ತಿವಿಕಸನಕ್ಕಾಗಿ ಕರ್ನಾಟಕಕ್ಕೆ ಒಂದು ವಿದ್ಯಾಪೀಠವು ಬೇಕು. ಸರ್ವಾಂಗ ಪರಿಪೂರ್ಣವಾದ ವಿದ್ಯಾಪೀಠವು ಸ್ಥಾಪನವಾಗಬೇಕಾದರೆ ಕೋಟ್ಯವಧಿ ರೂಪಾಯಿಗಳು ಬೇಕು. ' ವಿಶ್ವವಿದ್ಯಾನಿಲಯ ' ಎಂಬ ಹೆಸರನ್ನಿಟ್ಟರೂ

(೩೭೩ ನೆಯ ಪುಟದಿಂದ ಮುಂದುವರಿದುದು)

ತಿಳಿಸಿದನು. ಛತ್ರಾಧಿಪನೂ ಗಾಬರಿಗೊಂಡ. ಕಾವಲುಗಾರನನ್ನು ಪೋಲಿಸರನ್ನು ಕರೆಕಳುಹಲು ಸಮೀಪದ ಹಳ್ಳಿಗೆ ಕಳುಹಿದ. ಹಳ್ಳಿಯಿಂದ ಪಟ್ಟಣಕ್ಕೆ ಸುದ್ದಿ ಮುಟ್ಟುವಷ್ಟರಲ್ಲಿ, ಕೊಲೆಗಡುಕರು ವೇಗವುಳ್ಳ ಮರ್ಸಿಡಿಸ್ ಮೋಟರಿನಲ್ಲಿ ಕುಳಿತು, ಊರ ಗಡಿ—ದೇಶದ ಗಡಿ—ಯನ್ನೂ ದಾಟಿದ್ದರು.

ಛತ್ರದಲ್ಲಿ ಜೆಲವೆಯೂ ಕಾಣಲಿಲ್ಲ, ಅವಳ ಗಂಡನೂ ಇಲ್ಲ. ಆದರೆ ಆ ದಂಪತಿಗಳ ಕೋಣೆಯ ಹಿಮ್ಮಗ್ಗಲಿನ ಕಿಟಕಿಯಿಂದ ಹೆಗ್ಗದ ಏಣಿಯೊಂದು ಇಳಿಬಿದ್ದಿತ್ತು. ಆ ಜೆಲುವೆಯನ್ನು ಮೋಟರಿನಲ್ಲಿ ಸಾಗಿಸಿದ್ದರೂ, ಅವಳು ಗುಂಡಿನ ಏಟಿನ ಗಾಯದ ಮೂಲಕ ಬದುಕಲಿಲ್ಲ. ಆದರೆ ಆ ಗಂಡನ ಸೋಗಿನ ಗುಂಡನಿಗೆ ೧೦ ಸಾವಿರ ಮಾರ್ಕುಗಳ ಇನಾಮು ಗೆಸ್ಟಪೊ ಅಧಿಪತಿಯಿಂದ ದೊರೆಯಿತು—ಫ್ರೊಮ್ಸ್‌ನ ತಲೆ ತಂದುದಕ್ಕೆ.

ಈ ಕೊಲೆಯ ಹಿಂದಿನ ತಂತ್ರವೂ ಸವಿರೇರಿಸುವಂತಹದು. ಅದೊಂದು ಹಿಟ್ಲರನ ತಂತ್ರ. ಯಾವುದೇ ದೇಶವನ್ನು ಕೈವಶಮಾಡಿಕೊಳ್ಳುವ ಮುನ್ನ, ಪತ್ರಿಕೆಗಳಲ್ಲಿ ಆ ದೇಶದ ಬಗ್ಗೆ ಅಪಪ್ರಚಾರ ಮಾಡುವುದು. ಅದರಂತೆ ಯಾವನೊಬ್ಬನ ಕೊಲೆಯ ಮುನ್ನ, ಅಪಪ್ರಚಾರದ ಅಲಗಿನಿಂದ ಅವನನ್ನು ಮೊದಲು ಕೊಂದು, ಆಮೇಲೆ ನಿಜವಾಗಿ ಕೊಂದರೆ ಜನತೆಯಲ್ಲಿ ಗಲಭೆ ಕಡಿಮೆಯಾಗುವುದು..... ಎಂಬುದು ಅವನ ತಂತ್ರಸಾರ.

ವಿಶ್ವದೊಳಗಿನ ಎಲ್ಲ ವಿದ್ಯೆಗಳ ಪ್ರತಿಯೊಂದು ಶಾಖೆಯ ಅಧ್ಯಯನ, ಅಧ್ಯಾಪನಗಳೂ ಸರ್ವಾಂಗಪರಿಪೂರ್ಣವಾಗಿ ನಡೆಯಿಸುವ ಏರ್ಪಾಟವನ್ನು ಒಂದೇ ಕೇಂದ್ರದಲ್ಲಿ ಮಾಡುವುದೆಂದರೆ ಒಂದು ದುಸ್ತರದ ಮಾತಾಗಿದೆ. ಹಿಂದೂದೇಶದ ಪ್ರತಿಯೊಂದು ಪ್ರಾಂತದವರೂ, ತಮ್ಮ ವಿಶ್ವವಿದ್ಯಾನಿಲಯವು ಎಲ್ಲ ವಿದ್ಯೆಗಳ ಅಧ್ಯಯನ-ಅಧ್ಯಾಪನದ ಕೇಂದ್ರವಾಗಬೇಕೆಂಬ ಹಿರಿಗುರಿಯನ್ನು ಇಟ್ಟುಕೊಳ್ಳುವುದು ಸ್ತುತ್ಯವಾಗಿದ್ದರೂ, ಎಲ್ಲಕ್ಕೂ ಕೈಯಿಕ್ಕಿ ಪ್ರತಿಯೊಂದು ಶಾಖೆಯನ್ನೂ ಅಸಮಾಧಾನಕರವಾದ ಸ್ಥಿತಿಯಲ್ಲಿ ಸಾಗಿಸುವುದಕ್ಕಿಂತ, ತಮ್ಮ ತಮ್ಮ ಪ್ರಾಂತದ ಆಶೆ-ಆಕಾಂಕ್ಷೆಗಳನ್ನೂ, ಪ್ರಾಕೃತಿಕ ಅನುಕೂಲತೆಗಳನ್ನೂ ಅನುಲಕ್ಷಿಸಿ, ತಮ್ಮ ತಮ್ಮ ವಿದ್ಯಾಪೀಠಗಳಲ್ಲಿ, ಅಂತಹ ಆವುದೊಂದೊ ಎರಡೊ ಜ್ಞಾನ-ಶಾಖೆಗಳ ಅಧ್ಯಯನ ಅಧ್ಯಾಪನದ ಯೋಜನೆಯನ್ನೇ—ಜಗತ್ತಿನ ಆ ವಿಷಯದ ಇನ್ನಾವ ವಿದ್ಯಾಪೀಠಕ್ಕೂ ಸರಿದೊರೆಯೆನಿಸುವಂತೆ—ನಡೆವಳಿಯಲ್ಲಿ ತಂದರೆ ಲೇಸಾಗಲಿಕ್ಕಿಲ್ಲವೆ? ಸಾಹಿತ್ಯ, ಸಂಗೀತ, ಕಲೆಗಳಿಗಾಗಿ ಒಂದು; ಔದ್ಯೋಗಿಕ ಶಿಕ್ಷಣ, ಯಾಂತ್ರಿಕ ಶಿಕ್ಷಣ, ಶಾಸ್ತ್ರೀಯ ಸಂಶೋಧನಗಳಿಗಾಗಿ ಇನ್ನೊಂದು; ಇತಿಹಾಸ, ರಾಜಕಾರಣ, ಅರ್ಥಶಾಸ್ತ್ರಾದಿಗಳಿಗೆ ಮತ್ತೊಂದು; ಶಿಕ್ಷಣ, ಮಾನಸಶಾಸ್ತ್ರ, ಸಮಾಜಶಾಸ್ತ್ರ ಮೊದಲಾದುವುಗಳಿಗೆ ಮಗುದೊಂದು; ಹೀಗೆ ವಿದ್ಯಾಪೀಠವು ಒಂದೊಂದು ಪ್ರಾಂತದ ವೈಶಿಷ್ಟ್ಯವಾಗಿ ಬಿಟ್ಟರೆ ಅದೆಷ್ಟು ಒಳಿತಾದೀತು! ಯುದ್ಧವಿದ್ಯಾವಿಶಾರದರಾಗುವುದಕ್ಕೆ ಪಂಜಾಬಿಗೆ; ವ್ಯಾಪಾರ, ಉದ್ಯೋಗಗಳ ಅಧ್ಯಯನಕ್ಕಾಗಿ ಗುರ್ಜರನಾಡಿಗೆ; ಭೌತಶಾಸ್ತ್ರಗಳು, ಯಂತ್ರವಿದ್ಯೆಗಾಗಿ ಕರ್ಣಾಟಕಕ್ಕೆ; ಅರ್ಥಶಾಸ್ತ್ರ ರಾಜಕಾರಣಕ್ಕಾಗಿ ಮಹಾರಾಷ್ಟ್ರಕ್ಕೆ; ಲಲಿತಕಲೆಗಳು, ಸಾಹಿತ್ಯಕ್ಕಾಗಿ ಬಂಗಾಳಿಗೆ....... ಹೋಗಬಹುದಲ್ಲವೆ? ಒಂದೊಂದು ಬಗೆಯಾಗಿ ಪ್ರತಿಯೊಂದು ಪ್ರಾಂತವೂ ತನ್ನ ವೈಶಿಷ್ಟ್ಯವನ್ನು (ಅದು ವಿಭಜನೆಗೆ ಕಾರಣವಾಗದಂತೆ) ಬೆಳಸಿಕೊಂಡರೆ ಅದೆಷ್ಟು ಚೆನ್ನಾಗುವುದು? ಹಣದ ಉಳಿತಾಯವಾಗಿ ಗುಣವು ಹೆಚ್ಚುವುದು!

ಭಾಷಾನುಗುಣ ಪ್ರಾಂತರಚನೆಯಾಗತಕ್ಕುದಿರುವುದರಿಂದ, ಪ್ರತಿಯೊಂದು ಪ್ರಾಂತಕ್ಕೂ ತನ್ನ ಭಾಷೆ, ಸಂಸ್ಕೃತಿಯ ರಕ್ಷಣ ಮತ್ತು ಪೋಷಣಕ್ಕಾಗಿ, ಸ್ವಭಾಷೆಯ ಅಧ್ಯಯನದ ಸಂಪೂರ್ಣ ಅನುಕೂಲತೆಯನ್ನು ಒದಗಿಸಿಕೊಡುವ ಒಂದು ಆವಶ್ಯಕ ಅಂಗವಂತೂ ಪ್ರತಿಯೊಂದು ವಿದ್ಯಾಪೀಠಕ್ಕೂ ಇರಲೇಬೇಕು. ಅಲ್ಲದೆ ಇನ್ನುಳಿದ ಜ್ಞಾನಶಾಖೆಯ ಯಾವುವಾದರೂ ಭಾಗಗಳನ್ನು ತಮ್ಮ ವಿದ್ಯಾಪೀಠದ ಅಧ್ಯಯನ ಅಧ್ಯಾಪನದ ವಿಶೇಷ ಮಾತನ್ನಾಗಿ ಮಾಡಿಕೊಂಬುದು ಯೋಗ್ಯವಾಗಿದೆ. ಹೀಗೆ ಮಾಡದೆ ಎಲ್ಲಕ್ಕೂ ಕೈಹಾಕುವುದರಿಂದ, ಯಾವುದೂ ಪರಿಣತ ಸ್ಥಿತಿಗೆ ಬಾರದೆ ಎಲ್ಲವೂ ಅಸಮಾಧಾನಕರವಾಗುವ ಹೆದರಿಕೆಯುಂಟು. ಆಕ್ಸಫರ್ಡು ಸಾಹಿತ್ಯದ ಅಭ್ಯಾಸಕ್ಕಾಗಿ ಹೆಸರಾಗಿದೆ; ಕೆಂಬ್ರಿಜ್ಜು ಗಣಿತಶಾಸ್ತ್ರಕ್ಕಾಗಿ ಕೀರ್ತಿವೆತ್ತಿದೆ. ಹೀಗೆ ನಮ್ಮಲ್ಲೂ ಆಗದೆ? ಶೃಂಗೇರಿ-ಉಡುಪಿ ವಿದ್ಯಾಪೀಠವು ಸಂಸ್ಕೃತ ಅಧ್ಯಯನ-ಅಧ್ಯಾಪನದ ಕೇಂದ್ರವೆಂದು ಹೆಸರಾಗಿ, ಜಗತ್ತಿನ ಸಂಸ್ಕೃತ ವಿದ್ಯಾವ್ಯಾಸಂಗಿಗಳ ಮನಸ್ಸನ್ನೇ ತನ್ನೆಡೆಗೆ ಸೆಳೆಯಲಾರದೆ? ಬೆಂಗಳೂರಿನ ಭೌತಶಾಸ್ತ್ರ-ಸಂಶೋಧನಮಂದಿರವು ಆಧುನಿಕ ಶಾಸ್ತ್ರೀಯ ವಿಷಯಗಳ ಅಧ್ಯಯನ ಅಧ್ಯಾಪನ ಕೇಂದ್ರವಾದರೆ, ಅದು ಭಾರತದ ಉಳಿದ ಪ್ರಾಂತಗಳಿಗೂ ಉಪಯುಕ್ತವಲ್ಲವೆ?

ಒಂದೊಂದು ಶಾಸ್ತ್ರದಲ್ಲಿಯೂ ಅನಂತ ಶಾಖೆಗಳು ತಲೆದೋರಿವೆ. ಅವೆಲ್ಲವುಗಳ ಅಧ್ಯಯನ ಅಧ್ಯಾಪನದ ಸಂಪೂರ್ಣ ಯೋಜನೆ-ಯನ್ನು ಕೈಕೊಳ್ಳುವುದಕ್ಕೇ ಕೋಟ್ಯಂತರ ಹಣ ಬೇಕು. ಹೀಗಿರು-ವಲ್ಲಿ, ಎಲ್ಲ ಜ್ಞಾನದ ಶಾಖೋಪಶಾಖೆಗಳಿಗೆಲ್ಲಕ್ಕೂ ತಕ್ಕೆಬಿದ್ದರೆ ಅದು ಅಮರುವುದೇ?

ಈ ದೃಷ್ಟಿಯಿಂದ ಉತ್ತರ ಕರ್ನಾಟವು ಇಂದು ತಾನು ಸ್ಥಾಪಿಸಿ-ಕೊಳ್ಳತಕ್ಕ ವಿದ್ಯಾಪೀಠದಲ್ಲಿ ಕನ್ನಡ, ಇತಿಹಾಸ, ಸಾಹಿತ್ಯ, ಸಂಸ್ಕೃತಿಗಳ ಹೊರತು ಇನ್ನಾವ ಜ್ಞಾನಶಾಖೆಗಳನ್ನು ಸಹಜವಾಗಿ ಕಲಿಸು-ವುದಕ್ಕೆ ಸಾಧ್ಯವೊ ಅಷ್ಟನ್ನೇ ಒಳಗೊಂಡಂತಹ ಒಂದು ಯೋಜನೆ-ಯನ್ನು ಏರ್ಪಡಿಸಿದರೆ, ಅದರಲ್ಲಿ ಏನೂ ತಪ್ಪಾಗಲಿಕ್ಕಿಲ್ಲ. ತಮ್ಮಲ್ಲಿ ಒಕ್ಕಲುತನ ಕಾಲೇಜು ಇಲ್ಲ, ಮೆಡಿಕಲ್ ಕಾಲೇಜು ಇಲ್ಲ....... ಎಂದು ಸುಮ್ಮನಾದ ಕೊರತೆಗಳನ್ನೇ ಹಿರಿದಾಗಿಸಿಕೊಂಡು ಕೈಕಾಲು-ಗೆಡುವ ಕಾರಣವಿಲ್ಲ.

ಒಂದು ಪ್ರಾಂತಕ್ಕೆ ಒಂದೇ ವಿಶ್ವವಿದ್ಯಾಲಯವಿರಬೇಕೆಂಬ ಕಲ್ಪನೆಯೂ ತಪ್ಪು. ಸಂಯುಕ್ತಪ್ರಾಂತಕ್ಕೆ ನಾಲ್ಕು ಇವೆ! ಮದರಾಸಿಗೆ ಮೂರಿವೆ. ಅಣ್ಣಾಮಲೆ ವಿದ್ಯಾಪೀಠವು ಒಬ್ಬ ದಾನಶೌಂಡನ ಕೊಡುಗೆಯಿಂದಲೇ ಸ್ಥಾಪನವಾಗಿದೆ. ಅದರಂತೆ ಕರ್ನಾ-ಟಕದಲ್ಲಿ **ಶಿರಸಂಗಿ ವಿಶ್ವವಿದ್ಯಾಲಯ**ವಾಗುವುದು (ಆ ಸಂಸ್ಥಾನದ ಚಾಲಕರು ಹುಮ್ಮಸುಗೊಂಡರೆ) ಅಸಾಧ್ಯವಿಲ್ಲ. ಸೊಲ್ಲಾಪುರದ **ಕಾಡಾದಿ** ಮತ್ತು **ವಾರದ** ಮನೆತನದವರೂ, ಗದುಗಿನ **ಮಾನವಿ**ಯವರೂ ಮನಸು ಮಾಡಿದರೆ, ಈ ಗಳಿಗೆಯಲ್ಲಿ ಒಂದು ವಿಶ್ವ-ವಿದ್ಯಾಲಯವು ತಲೆಯೆತ್ತಿ ನಿಲ್ಲಬಹುದು. ಆದರೆ ಈ ಮಹಾಜನಗಳಲ್ಲಿ ಈ ವಿಚಾರದ ಆವೇಶವುಂಟಾಗುವಂತೆ ಮಾಡುವಂತಹ ದಿವ್ಯದೃಷ್ಟಿಯ ಸಂಯೋಜಕರು ಬೇಕಾಗಿದ್ದಾರೆ!.......ಯೋಜಕ-ಸ್ತತ್ರ ದುರ್ಲಭಃ.

ಕರ್ನಾಟಕ ವಿಶ್ವವಿದ್ಯಾನಿಲಯ ಸ್ಥಾಪನೆಯ ವಿಚಾರವು ಇದೀಗ ಸ್ವಲ್ಪ ಗಾಳಿಯಲ್ಲಿ ಸಂಚರಿಸುತ್ತಲಿದೆ. ಇದಕ್ಕಾಗಿ ಒಂದು ಸಮ್ಮೇಲನವೂ ಕೂಡಲಿದೆ. ಆಗ ಮೇಲಣ ನಾಲ್ಕು ಮಾತುಗಳು ಉಪಯುಕ್ತವಾಗಬಹುದೆಂಬ ಆಶೆಯಿದೆ.

ಕ. ವಿಶ್ವವಿದ್ಯಾನಿಲಯದ ಸ್ಥಾಪನೆಯ ವಿಚಾರವೂ, ಈ ನಿಟ್ಟಿನಲ್ಲಿ ಪ್ರಯತ್ನಗಳೂ ಅತ್ಯಂತ ಪ್ರಶಂಸನೀಯವೆಂಬಲ್ಲಿ ಸಂದೇಹವಿಲ್ಲ.

ಆದರೆ ಈ ಕ. ವಿಶ್ವವಿದ್ಯಾನಿಲಯ ಸ್ಥಾಪಿಸಬೇಕೆಂಬ ಗೋಪುರ ಕಟ್ಟುವ ಹುಮ್ಮಸದಲ್ಲಿ, ಆ ಗೋಪುರವನ್ನು ಅದಾವ ನೆಲದ ಮೇಲೆ ಕಟ್ಟಬೇಕಾಗಿದೆಯೊ ಆ ನೆಲವೇ ಕನ್ನಡಿಗರ ಕೈಬಿಡುವ ಭೀತಿಯುಂಟಾಗಿರುವಾಗ, ಆ ಗೋಪುರದ ಯೋಜನೆ—ಯೋಚನೆಗಿಂತ ಮೊದಲು, ನಮ್ಮ ಕಾಲಕೆಳಗಿನ ನೆಲವು ಸರಿದು ನಿಂತವರೇ ಮುಕ್ಕರಿಸಿಬೀಳದಂತೆ ನೋಡಿಕೊಂಬುದು ಮೊದಲ ಕೆಲಸವಲ್ಲವೆ?

೭೫ ಗಾಂಧೀಸಾಹಿತ್ಯ
(ಪ್ರಸಾದದೀಕ್ಷೆ)

ಸಂಪಾದಕರು : ಶ್ರೀ. ಸಿದ್ದವ್ವನಹಳ್ಳಿ ಕೃಷ್ಣಶರ್ಮರು.

ಮಹಾತ್ಮಾ ಗಾಂಧಿಯವರ ವಿವಿಧ-ಮುಖವಾದ ಸಾಹಿತ್ಯರಾಶಿಯನ್ನು ಕನ್ನಡಕ್ಕೆ ತರಬೇಕೆಂಬ ಸಂಕಲ್ಪದಿಂದ ಹೊರಟ ಲೇಖಕರು, ಈ ಮೊದಲನೆಯ ಕೃತಿಯನ್ನು ಕನ್ನಡ ವಾಚಕಲೋಕಕ್ಕೆ ನೀಡಿದ್ದಾರೆ. 'ಪ್ರಸಾದದೀಕ್ಷೆ' ಯ ಹೆಸರು ಉತ್ತರ ಕರ್ನಾಟಕದಲ್ಲಿ ಬಹುಜನರಿಗೆ ಪರಿಚಿತದ್ದಾಗಿದೆ. ಇದಕ್ಕೆ ಕಾರಣವೆಂದರೆ, ಮಹಾತ್ಮಾ ಗಾಂಧಿಯವರನ್ನು ಅಸಹನೆಯಿಂದ ಕಾಣುವ ಕೆಲವು ಮರಾಟಿ ವೃತ್ತಪತ್ರಗಳು ಈ ಪುಸ್ತಕದ ವಿಚಾರದಲ್ಲಿ ಮಾಡಿದ ಅಪಪ್ರಚಾರ. 'ಅಶ್ಲೀಲ ಸಾಹಿತ್ಯ' ದ ಮೊದಲನೆಯ ವರ್ಗದಲ್ಲಿಯು ಸೇರುವಂತಹದೆಂದು ಮನಸ್ಸಿಗೆ ಬಂದಂತೆ ವಿಮರ್ಶಿಸಿ, ಕೈಗೆ ಬಂದಂತೆ ಅವು ಬರೆದುವು. ನಿಜವಾಗಿ ನೋಡಿದರೆ ಪ್ರತಿಯೊಬ್ಬ ಗೃಹಸ್ಥ-ಗೃಹಿಣಿಯರೂ ಓದಿ ಮನಃಸ್ವಾಸ್ಥ್ಯವನ್ನೂ ದೇಹ-ಸ್ವಾಸ್ಥ್ಯವನ್ನೂ ಪಡೆಯಬಹುದಾದ ವಿಷಯವಿವೇಚನೆ, ಇದರಲ್ಲಿ ಸಂಗ್ರಥಿತವಾದ ಪತ್ರಭಾಗಗಳಲ್ಲಿ ಇದೆ. ಮಹಾತ್ಮರು ತಮ್ಮ ಅತ್ಯಂತ ವಿಶ್ವಾಸದ ಶಿಷ್ಯೆಯಾದ ಶ್ರೀಮತಿ ಪ್ರೇಮಾ ಕಂಟಕ ಅವರಿಗೆ, ಅವರ ಪ್ರಶ್ನೆಗಳಿಗೂ ಜಿಜ್ಞಾಸೆಗಳಿಗೂ ಉತ್ತರವಾಗಿ ಬರೆದ ಕಾಗದಗಳಲ್ಲಿಯ ಆಯ್ದ ಭಾಗಗಳಿವು. ಒಟ್ಟು ೯೦ ಭಾಗಗಳಿವೆ. ಗಾಂಧಿಯವರ ಆದರ್ಶಮಾರ್ಗದಲ್ಲಿ ನಡೆಯುವ ಸಾಧಕನಿಗೆ ಆಗಾಗ ತಲೆದೋರಬಹುದಾದ ಹಲವು ಶಂಕೆ-ಆತಂಕಗಳಿಗೆ ಇಲ್ಲಿಯ ವಿವಿಧ ವಿಷಯ ವಿವೇಚನೆಯು, ಖಂಡಿತವಾಗಿ ಸಮಾಧಾನವನ್ನು ಹೇಳುವಂತಹದಾಗಿದೆ. ಸ್ತ್ರೀ, ಸ್ತ್ರೀ-ಪುರುಷ, ಸ್ತ್ರೀಮಾಸಿಕಧರ್ಮ, ಸಂಕರವಿವಾಹ ಇವೇ ಮೊದಲಾದ ಲೌಕಿಕ ವಿಷಯಗಳನ್ನು ಮೊದಲು ಮಾಡಿ ಅನಾಸಕ್ತಿ, ಅಂತಃಶುದ್ಧಿ, ಅಂತರ್ವಾಣಿ, ಮೊದಲಾದ ಆಧ್ಯಾತ್ಮಿಕ ವಿಚಾರಗಳ ವರೆಗಿನ ಅನೇಕ ಸಂಗತಿಗಳು ಇದರಲ್ಲಿ ಬಂದು ಹೋಗಿವೆ. ಭಾಷಾಂತರ ಚೆನ್ನಾಗಿದೆ. ಬರೆಹ ಬಲ್ಲವರೆಲ್ಲ ಓದಿ, ತಮ್ಮ ಜೀವನದಲ್ಲಿ ಮಹಾತ್ಮಾ ಗಾಂಧಿಯವರಂತಹ ಶಾಂತಿ-ಪುಷ್ಟಿ-ತುಷ್ಟಿಗಳನ್ನು ತಂದುಕೊಳ್ಳಲು ಹವಣಿಸಿದಲ್ಲಿ— ಈ ಗ್ರಂಥಪ್ರಕಾಶನದ ಕಾರ್ಯ ಪ್ರಯೋಜನಕಾರಿಯಾಗುವುದು.

— ಬಿ. ಪಿ. ಎಸ್. ರಾವ್

೧೦ ಪ್ರಾಥಮಿಕ ಶಾಲೆಗಳಿಗಾಗಿ ಆಟಗಳು

ಬರೆದವರ . ' ನಾಡಿಗೇರ ಕೆ. ಜಿ. ಮತ್ತು ಶ್ರೀ. ಹ . ಜ., ಬಿ. ಎ., ಡಿಪ್. ಪಿ. ಇ.
ಮಲ್ಲಸ ' ವ್ಯಾಯಾಮಶಾಲೆಯ ಎರಡನೆಯ ಪ್ರಕಟನ.

ಇತ್ತೀಚಿಗೆ ಕನ್ನಡದಲ್ಲಿಯೂ ವ್ಯಾಯಾಮ ವಿಷಯದ ಮೇಲೆ ಸಾಹಿತ್ಯ ಮುಂದೆ ಬರುತ್ತಲಿದೆ. ಸಮಾಜದ ಏಳಿಗೆಗೆ ಈ ಬಗೆಯ ಸಾಹಿತ್ಯ ಅತ್ಯಗತ್ಯ.

ಈ ಹೊತ್ತಗೆಯಲ್ಲಿ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗಾಗಿ, ಅಲ್ಲಿಯ ಶಿಕ್ಷಕರಿಗೆ ಕೈಪಿಡಿಯಾಗುವಂತೆ ವಿಷಯ ವಿವೇಚನೆಯಿದೆ. ಶ್ರೀ. ನಾಡಗೀರರು ತಮ್ಮ 'ಶರೀರ-ಶಿಕ್ಷಣ' ದಲ್ಲಿ ತಾತ್ತ್ವಿಕ ವಿಧಾನವನ್ನು ಹೆಚ್ಚಾಗಿ ಮಂಡಿಸಿದ್ದರು. ಈ ಹೊತ್ತಗೆಯಲ್ಲಿ ಶ್ರೀ. ಹಲಸಿಗಿಯವರೊಂದಿಗೆ ಸಹಕರಿಸಿ, ಪ್ರತಿನಿತ್ಯದ ಉಪಯೋಗಕ್ಕೆ ಬೀಳು-ವಂತೆ— ಅಭ್ಯಾಸಕ್ರಮಕ್ಕೆ ಸರಿಹೋಗುವಂತೆ—ಮಕ್ಕಳ ವಯೋಮಾನಕ್ಕೆ ಅನು-ಗುಣವಾಗುವಂತೆ—ಆಟಗಳನ್ನು ಸೂಚಿಸಿ-ದ್ದಾರೆ. ನಿಜವಾಗಿಯೂ ಇದು ಪ್ರಾಥಮಿಕ ಶಾಲೆಯ ವ್ಯಾವಹಾರಿಕ ಕೈಪಿಡಿ. ಚಿಕ್ಕ ಮಕ್ಕಳ ಮನೋವೃತ್ತಿಗೆ ತಕ್ಕಂತೆ ಚಟುವಟಿಕೆಗಳು ಇದರಲ್ಲಿವೆ. ಸಾಭಿನಯ ಗೀತಗಳು (ಅವುಗಳ ಬೇರೆ ಪಟ್ಟಿಯೊಂದೂ) ಇವೆ. ಚಿಕ್ಕದಾದರೂ ಚೊಕ್ಕಟವಾಗಿದೆ; ಉಪಯುಕ್ತವಾಗಿದೆ.

ಮಲ್ಲಸಜ್ಜನ ವ್ಯಾಯಾಮಶಾಲೆಯವರು ಇನ್ನು ಮುಂದೆ ಇಂತಹ ಸಾಹಿತ್ಯವನ್ನು ಹೆಚ್ಚಾಗಿ ಹೊರಡಿಸಲಿ ಎಂದು ನಮ್ಮ ಹಾರಯಿಕೆ.

೫೧ ಕನ್ನಡ ನೋಟ
(ಪ್ರಬಂಧ ಸಂಗ್ರಹ)

ಶ್ರೀಮಾನ್ ಇಮಾರತಿಯವರು ಬರೆದುದನ್ನು ರಂಗಮಂಗಳಂಜನೋದ್ಯಾನದವರು ಪ್ರಕಟಿಸಿದ್ದಾರೆ.

ಕನ್ನಡನಾಡಿನ ಒಳಹೊರಗಿನ ಕನ್ನಡಿಗರು, ತಮ್ಮ ವ್ಯಕ್ತಿತ್ವವಾದ ಕನ್ನಡತನವನ್ನು ಸಂರಕ್ಷಿಸಿಕೊಳ್ಳದಿರುವುದರಿಂದ ಆಗಿರುವ ವೈಯಕ್ತಿಕ ಹಾಗು ಸಾಮುದಾಯಿಕ ಹಾನಿಯ ಚಿತ್ರಗಳು ಇದರಲ್ಲಿಯ ಐದೂ ಪ್ರಬಂಧಗಳಲ್ಲಿ ಚೆನ್ನಾಗಿ ಮೂಡಿ ನಿಂತಿವೆ; ಅದರಂತೆಯೆ ಕನ್ನಡತನವನ್ನು ಸಂರಕ್ಷಿಸುವುದೆಂದರೆ ಏನೆಂಬುದರ ಸ್ಫುಟವಾದ ಸೂಚನೆಗಳೂ ಅಲ್ಲಲ್ಲಿ ಮಿನುಗುತ್ತಿವೆ. 'ಇಮಾರತಿ' ಯವರಲ್ಲಿ ಕಂಡುಬರುವಂತಹ 'ಕನ್ನಡ ನೋಟ' ಕನ್ನಡಿಗರೆಲ್ಲರ ಕಣ್ಣಲ್ಲಿಯೂ ಮನೆಮಾಡಿದರೆ, ಪ್ರಯತ್ನವಿಲ್ಲದೆ ನಮಗೆ ಪ್ರಾಂತದ ಏಕೀಕರಣವು ಸಾಧಿಸಬಹುದು. ಕನ್ನಡಿಗರ ಜೀವನವಿಕಾಸಕ್ಕೆ ಅನುಕೂಲ ವಾತಾವರಣ ಸಹಜವಾಗಿಯೆ ಸಿಕ್ಕಬಹುದು.

—ಸಂ.....ಕ.

ಸಾದರ ಸ್ವೀಕಾರ

೯೧. **ಕನ್ನಡ ಬಾವುಟ** (ಕೈಬರೆಹದ ದ್ವೈಮಾಸಿಕ ಪತ್ರಿಕೆ). ಸಂಪಾದಕರು ಶ್ರೀ. ಅ. ರಾ. ಕುಲಕರ್ಣಿ, ಚಿತ್ರಕಾರರು ಶ್ರೀ. ನಾನಾಸಾಹೇಬ ದೇಸಾಯಿ. ಹಳೇ ಹುಬ್ಬಳ್ಳಿಯ ಕನ್ನಡಿಗರ ಕೂಟದಿಂದ ಪ್ರಕಾಶಿತವಾಗುವುದು.

ಉತ್ಸಾಹಿಗಳಾದ ಎಳೆಯರ ಬರೆಹಗಳಿಂದಲೂ ಸುಂದರವಾದ ಚಿತ್ರಗಳಿಂದಲೂ ಸಂಚಿಕೆ ತುಂಬ ರಮಣೀಯವಾಗಿದೆ. ಹುಬ್ಬಳ್ಳಿಯಲ್ಲಿರುವ ಹಿರಿಯ ಸಾಹಿತಿಗಳ ಒಂದೆರಡು ಲೇಖನಗಳೂ ಇದರಲ್ಲಿ ಕಾಣಿಸಿಕ್ಕುವುವು. ಎಳೆಯರ ಈ ಕಾರ್ಯವು ಪ್ರಶಂಸನೆಗೆ ಅರ್ಹವಾಗಿದೆ.

೯೨. **ಯಶೋಧರ ಚರಿತೆಯ ಸಂಗ್ರಹ** (ಜನ್ನಕವಿ ಕೃತ). ಸಂಪಾದಕರು ಶ್ರೀಮಾನ್ ಕೆ. ವಿ. ರಾಘವಾಚಾರ್ಯರು ಎಂ. ಎ., ಬಿ. ಟಿ. ಮೈಸೂರು. ಮೈಸೂರು ವಿ. ವಿ. ನಿಲಯದ ಕನ್ನಡ ಪ್ರಕಟನೆ. ಕ್ರಾ. ಅ. ೮೦+೧೬೬ ಪುಟ. ಬೆಲೆ ೦-೧೨-೦.

೯೩. A Grammar of the oldest kanarese Inscriptions (ವ್ಯಾಕರಣ ಗ್ರಂಥ). ಲೇಖಕರು ಡಾ. ಎ. ಎನ್. ನರಸಿಂಹಯ್ಯ ಎಂ. ಎ., ಎಲ್. ಟಿ., ಪಿ. ಎಚ್. ಡಿ. (ಲಂಡನ್). ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಪ್ರಕಟನೆ. ಡೆ. ಅ. ೨೨+೩೭೬ ಪುಟಗಳು. ಬೆಲೆ: ೨-೧೨-೦.

೯೪. **ಹುಬ್ಬಳ್ಳಿ ಗಜೆಟ್** (ವಾರಪತ್ರಿಕೆಯ ೪ನೆಯ ಜನ್ಮದಿನಾಂಕ). ಸಂಪಾದಕರು: ಶ್ರೀ. ನಾ. ಸು. ಹರಡೀಕರ; ಸಹ ಸಂಪಾದಕರು: ಶ್ರೀ. ರಾ. ವೆ. ಕರಿಗುದರಿ ಅವರು. ಕ್ರಾ. ಫೋಲಿಯೊ ೬೪ ಪುಟ. ಬೆಲೆ ೦-೪-೦. ಪ್ರಕಾಶಕರು ಶ್ರೀ. ಬಿ. ಕೆ. ನಾಡಕರ್ಣಿ, ಮನೆ ನಂ. ೧೦೫೨೭, ದಾಜೀಬಾನಪೇಟೆ, ಹುಬ್ಬಳ್ಳಿ.

'ಹುಬ್ಬಳ್ಳಿ ಗಜೆಟ್' ತನ್ನ ಕಾರ್ಯ-ಪ್ರಭಾವದ ಮೂಲಕ, ಬೇಗನೆ ಅಖಿಲ ಕರ್ನಾಟಕದ ಗಜೆಟ್ಟಾಗುವ ಚಿಹ್ನ ಈ ಸಂಚಿಕೆಯಿಂದ ವ್ಯಕ್ತವಾಗುವುದು. ಉತ್ತಮವಾದ ಕಾಗದದ ಮೇಲೆ ಅಂದವಾದ ಅಚ್ಚು. ತಜ್ಞರಾದ ಹಲವು ಲೇಖಕರಿಂದ ಬರೆಯಿಸಿದ ಅಭ್ಯಾಸಪೂರ್ಣವಾದ ಲೇಖನಗಳು. ಹಲವು ಚಿತ್ರಗಳು. ಗಾತ್ರದ ಮಾನದಿಂದ ಬೆಲೆ ತೀರ ಕಡಿಮೆ. ಯಾವ ಕೆಲಸವನ್ನು ಮಾಡಿದರೂ ಡಾ. ಹರಡೀಕರರು ಪ್ರಾಮಾಣಿಕತನದಿಂದಲೂ ಮನಃಪೂರ್ವಕವಾಗಿಯೂ ಅಚ್ಚುಕಟ್ಟಾಗಿಯೂ ಮಾಡುವವರು. ಹುಬ್ಬಳ್ಳಿಯ ಮಟ್ಟಿಗಿರುವ ಅವರ ಸದ್ಯದ ಕಾರ್ಯ-ಕ್ಷೇತ್ರದ ವ್ಯಾಪ್ತಿ ಅಖಿಲಕರ್ನಾಟಕದಷ್ಟಾಗಿ ಪರಿಣಮಿಸಿ; ಕನ್ನಡನಾಡಿನ ಎಲ್ಲ ಸ್ಥಳೀಯ ಸಂಸ್ಥೆಗಳೂ ಕರ್ತವ್ಯಬುದ್ಧಿಯಿಂದ ಕೆಲಸ ಮಾಡಿ ಜನತೆಗೆ ಅನುಕೂಲತೆಯನ್ನುಂಟು ಮಾಡುವಂತಾಗಲೆಂದು ನನ್ನ ಹಾರಯಿಕೆ.

೯೫. **ನವಭಾರತ** (ಮಂಗಳೂರಿನ ಮತ್ತೊಂದು ವಾರಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು; ಶ್ರೀಮಾನ್. ಕೆ. ವಾಸುದೇವ ಶೆಣೈ ಮಂಗಳೂರು. ಕ್ರಾ. ಫೋ. ೪ ಪುಟ. ಬಿಡಿಸಂಚಿಕೆಯ ಬೆಲೆ: ೦-೦-೬.

೯೬. **ಆರೋಗ್ಯ ಶಾಸ್ತ್ರಸಾರ** (ಪಠ್ಯ ಪುಸ್ತಕ). ಲೇಖಕರು ಶ್ರೀಮಾನ್ ಆರ್. ಎಲ್. ಪಾಟೀಲ, ಬಿ. ಎಸ್‌ಸಿ., ಬಿ. ಟಿ. ಅಧ್ಯಾಪಕರು ಗಂಡುಮಕ್ಕಳ ಟ್ರೇನಿಂಗ್ ಕಾಲೇಜ್, ಧಾರವಾಡ. ಪ್ರಕಾಶಕರು ಶ್ರೀ. ಗುರುನಾಥ ಜೋಶಿ, ಭಾರತೀಯ ಸಾಹಿತ್ಯ ಪ್ರಕಟನಾಲಯ, ಲೈನ್‌ಬಜಾರ್, ಧಾರವಾಡ. ಕ್ರಾ. ೧೬ ದ ೭೨ ಪುಟಗಳು. ಬೆಲೆ ೦-೪-೦.

೯೭. **ಗೃಹವಿಜ್ಞಾನ ಶಾಸ್ತ್ರ** ಅಥವಾ ಗೃಹಶಿಕ್ಷಣದ ಕೈಗನ್ನಡಿ. (ವಿವಿಧ ವಿಷಯ ಪರಿಚಯಾತ್ಮಕ ಗ್ರಂಥ). ಶ್ರೀ. ಬಸವ-ಕುಮಾರ ಕೌಜಗೇರಿ (ಮಾಸ್ಟರ್ ಎಮ್. ಎ. ಉಪ್ಪಿನ, ಪ್ರೈವೇಟ್ ಟೀಚರ್ ಗದಗ) ಅವರು. ಪ್ರಕಾಶಕರು ಶ್ರೀ. ಪಶುಪತಯ್ಯಾ ಚೆನ್ನಯ್ಯಾ ಶಾಬಾದಿಮಠ, ಬುಕ್‌ಡಿಪೋ. ಗದಗ. ಕ್ರಾ. ಅ. ೧೫೨ ಪುಟ; ಬೆಲೆ ೦-೮-೦.

೯೮. **ಒಗಟಿನ ಮಾಲೆ** (ಗುರು-ಸಿದ್ದೇಶ್ವರ ಗ್ರಂಥಮಾಲೆಯ ೧ ನೆಯ ಪುಷ್ಪ). ಲೇಖಕರು ಶ್ರೀ. ಬಸವಕುಮಾರ ಕೌಜಗೇರಿ, ಗದಗ. ಪ್ರಕಾಶಕರು ಮೇಲಿನ ಶ್ರೀ. ಶಾಬಾದಿಮಠ ಅವರು. ಫೂ. ಕ್ಯಾ. ಅ. ೫೦ ಪುಟ. ಬೆಲೆ ೦-೨-೦.

ಗಂಡ-ಹೆಂಡಿರು ಹೆಸರು ಹೇಳುವಾಗ ಉಪಯೋಗಿಸಬಹುದಾದ— ೫ ಭಾಷೆಗಳ ಒಗಟುಗಳು ಇವರಲ್ಲಿವೆ. ಎಲ್ಲ ಭಾಷೆಯ ಒಗಟುಗಳಲ್ಲಿಯೂ ಭಾಷಾದೋಷಗಳು ತುಂಬ ಇವೆ.

೯೯. **ಭಜನಾಮಾಲೆ** (ಪದ್ಯಗಳ ಸಂಗ್ರಹ). ಸಂಗ್ರಾಹಕರು ಶ್ರೀ. ಬಸವ ಕುಮಾರ ಕೌಜಗೇರಿ, ಗದಗು. ಶ್ರೀ. ಗುರು-ಸಿದ್ದೇಶ್ವರ ಗ್ರಂಥಮಾಲೆಯ ೨ನೆಯ ಪುಷ್ಪ. ಫೂ. ಕ್ಯಾ. ಅ. ೪೪ ಪುಟಗಳು. ಬೆಲೆ ೦-೨-೦.

೧೦೦. **ಶ್ರೀಮಂತ್ ಕೃಷ್ಣಾಷ್ಟಕ** (ಅನ್ವಯ ಭಾವಾರ್ಥಗಳುಳ್ಳದ್ದು). ಶ್ರೀ. ಕೌಜಲಗಿ ಬಂಡಾಚಾರ್ಯ, ಧಾರವಾಡ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ಡೆಮಿ ೧೬ ದ ೫೦ ಪುಟ. ಬೆಲೆ ೦—೪—೦.

ಕನ್ನಡನಾಡಿನ ಮಾಧ್ವಬ್ರಾಹ್ಮಣರ ಮನೆಗಳಲ್ಲೆಲ್ಲ 'ಕೃಷ್ಣಾಷ್ಟಕ'ದ ಹೆಸರನ್ನು ಕೇಳದವರು ಇಲ್ಲವೆ ಇಲ್ಲ. ಹೆಂಗುಸರು ಹುಡುಗರು ಮೊದಲುಮಾಡಿ ಎಲ್ಲರೂ ಪ್ರೀತಿಯಿಂದ ಅದನ್ನು ಕೇಳುವರು, ಹೇಳುವರು. ಇದಕ್ಕೆ ಕಾರಣವೆಂದರೆ ಈ ಅಷ್ಟಕಕ್ಕೆ ಉಪ-ಯೋಗಿಸಿದ ಛಂದಸ್ಸಿನ ನರ್ತನ, ಅನು-ಪ್ರಾಸ-ಯಮಕಪ್ರಾಸಗಳ ಆಕರ್ಷಣ. ಆದರೆ ಭಾಷಾಕ್ಲಿಷ್ಟತೆಯ ಮೂಲಕ ಇದನ್ನು ಶುದ್ಧವಾಗಿ ಹೇಳುವವರ ಸಂಖ್ಯೆ ತೀರ

ಕಡವೆ. ಹೇಳುವ ಸ್ತೋತ್ರಗಳನ್ನು ಅರ್ಥ ತಿಳಿದುಕೊಂಡು ಹೇಳಿದರೆ ಅಶುದ್ಧ ಪಾಠಕ್ಕೆ ಆಸ್ಪದ ಉಳಿಯುವುದಿಲ್ಲ. ಹೀಗೆ ಅರ್ಥ ತಿಳಿದುಕೊಳ್ಳಲು ಅನುಕೂಲವಾಗುವಂತೆ ಇದರಲ್ಲಿ, ಅನ್ವಯ-ಭಾವಾರ್ಥಗಳನ್ನು ಬರೆದಿದ್ದು ಮುದ್ದಾಗಿ ಶುದ್ಧವಾಗಿ ಮುದ್ರಿಸಲಾಗಿದೆ. 'ಕೃಷ್ಣಾಷ್ಟಕ'ದ ಪ್ರೇಮಿಗಳು ಅವಶ್ಯವಾಗಿ ಈ ಪುಸ್ತಕದ ಪ್ರಯೋಜನವನ್ನು ಪಡೆದುಕೊಳ್ಳಬೇಕು.

೧೦೧. **ಶೈಕ್ಷಣಿಕ ಮನಶ್ಶಾಸ್ತ್ರ** ಶ್ರೀ. ವಿ. ಕೆ. ಜವಳಿ, ಬಿ. ಎ., ಬಿ. ಟಿ., ಡಿಪ್. ಪಿ. ಇ., ಅಧ್ಯಾಪಕರು ಗಂ. ಟ್ರೇ. ಕಾಲೇಜ್, ಧಾರವಾಡ ಅವರು ಲೇಖಕರು. ಧಾರವಾಡದ ಕರ್ನಾಟಕ ಸಾಹಿತ್ಯ ಭಾಂಡಾರದವರು ಪ್ರಕಾಶಕರು. ಕ್ರಾ. ಅ. ೧೯೬ ಪುಟ. ಬೆಲೆ ೧—೪—೦.

೧೦೨. **ಆಟಗಳು** (ಪ್ರಾಥಮಿಕ ಶಾಲೆಗಳಿಗಾಗಿ): ಬರೆದವರು, ಶ್ರೀ. ಕೆ. ಜಿ. ನಾಡಿಗೇರ ಮತ್ತು ಶ್ರೀ. ಕೆ. ಜಿ. ಹಲಸಗಿ ಬಿ. ಎ., ಡಿಪ್. ಪಿ. ಇ. ಅವರು. ಕ್ರಾ. ಅ. ೪೮ ಪುಟ. ಬೆಲೆ ೦—೪—೦. ಪ್ರಕಾಶನ ಸ್ಥಳ: ಮಲ್ಲಸಜ್ಜನ ವ್ಯಾಯಾಮಶಾಲೆ, ಧಾರವಾಡ.

೧೦೩. **ವಾಣಿ** (ಸಚಿತ್ರ ಮಾಸಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು ಎಂ. ಆರ್. ರಾಜಗೋಪಾಲ, ವಾಣಿ ಪಬ್ಲಿಶಿಂಗ್ ಹೌಸ್, ಮಲ್ಲೇಶ್ವರಂ. ಕ್ರಾ. ೪ ದ ೫೦ ಪುಟ. ವಾರ್ಷಿಕ ಚಂದಾ ೨-೦-೦.

ಕಳೆದ ಫೆಬ್ರುವರಿ ತಿಂಗಳಿಂದ ಬೆಂಗಳೂರು ನಗರದಲ್ಲಿ ಪ್ರಕಟವಾಗುತ್ತಲಿದೆ. ಕನ್ನಡ ನಾಡಿನ ಹಲವು ಸುಪ್ರಸಿದ್ಧ ಲೇಖಕರ ಲೇಖನಗಳನ್ನೂ ಕವಿತೆಗಳನ್ನೂ ನಮಗೆ ಬಂದಿರುವ ಈ ಮೊದಲನೆಯ ಸಂಚಿಕೆಯಲ್ಲಿ ಕಾಣುತ್ತೇವೆ. ವಾಣಿ ಬಹುಕಾಲ ಬಾಳಲಿ !

೧೦೫. **ಕನ್ನಡಿಗ** (ಮೂರನೆಯ ವರ್ಷದ ಸಂಚಿಕೆ) ಬೆಂಗಳೂರು ಸೇಯಂಟ್ ಜೋಸೆಫ್ಸ್ ಕಾಲೇಜಿನ ಕನ್ನಡ ಸಂಘದಿಂದ ಪ್ರಕಾಶಿತವಾದುದು. ಡೆ. ಅ. ೮೦ ಪುಟಗಳು.

ನೋಡಿದೊಡನೆಯೆ ಕೈಯಿಂದೆತ್ತಿಕೊಳ್ಳಬೇಕೆನ್ನುವಂತಹ ಆಕರ್ಷಕವಾದ ಚಿತ್ರಯುಕ್ತ ಬಹಿರಂಗ; ಕನ್ನಡದ ಅಭಿಮಾನದಿಂದ ಹೊರಹೊರಟ ಅನೇಕ ವಿವಿಧ ಲೇಖನಗಳುಳ್ಳ ಅಂತರಂಗ. ಈ ಸಂಘದ ಸದಸ್ಯರ ಕನ್ನಡದ ಅಭಿಮಾನ ಕಾರ್ಯರೂಪಕ್ಕೆ ಹೆಚ್ಚುಹೆಚ್ಚಾಗಿ ಇಳಿಯಲಿ; 'ಕನ್ನಡಿಗ' ಆ ಕಾರ್ಯಕ್ಕೆ ಪ್ರತೀಕವಾಗಿ ಪರಿಣಮಿಸುತ್ತ ಚಿರಾಯುವಾಗಿ ಬಾಳಲಿ !

೧೦೫. **ಸ್ವಾತಂತ್ರ್ಯವೀರ ಸಾವರಕರರ ಸಂಕ್ಷಿಪ್ತ ಚರಿತ್ರೆ ಮತ್ತು ಲಾವಣಿ.** ವಿದ್ವಾನ್ ಶ್ರೀ. ಎನ್. ವಿಷಕಂಠರಾಯರು ಲಾವಣಿ ಬರೆದವರು; ಚರಿತ್ರಲೇಖಕರು ಶ್ರೀಮಾನ್ ಎಸ್. ಬಿ. ಮಂಜುನಾಥರಾಯರು. ಪ್ರಕಾಶಕರು, ಮೈಸೂರು ಹಿಂದೂ ಮಹಾಸಭಾ, ಶಿವಮೊಗ್ಗಾ. ಡೆ. ಅ. ೨೦ ಪುಟ, ಬೆಲೆ: ೦-೧-೦.

೧೦೬. **ಗ್ರೀಕರ ತತ್ತ್ವಶಾಸ್ತ್ರಸಂಗ್ರಹ:** ಬರೆದವರು ಶ್ರೀಮಾನ್ ಕೆ. ಆರ್. ಶ್ರೀನಿವಾಸಯ್ಯಂಗಾರ್, ಎಂ. ಎ. ಅವರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ೧೬ನೆಯ ಗ್ರಂಥ. ಕ್ರಾ. ಅ. ೮೦+೮೨ ಪುಟಗಳು. ಬೆಲೆ ೧-೦-೦

೧೦೭. **ಮಾರ್ಕ್ಸ್‌ವಾದ.** ಲೇಖಕರು, ಎನ್. ಜಿ. ಕುಲಕರ್ಣಿ, ಸುಲ್ತಾನ್ ಬರಘಾರ್, ಹೈದರಾಬಾದ್. ಪುರೋಗಾಮಿ ಗ್ರಂಥಮಾಲೆಯ ೧ನೆಯ ಗ್ರಂಥ. ಕ್ರಾ. ಅ. ೧೪ ಪುಟಗಳು, ಬೆಲೆ: ೦-೨-೦.

೧೦೮. **ರೈತರ ಸಮಸ್ಯೆ.** ಲೇಖಕರೂ ಪ್ರಕಾಶಕರೂ ಮೇಲಿನ ಶ್ರೀ. ಎನ್. ಜಿ. ಕುಲಕರ್ಣಿಯವರೆ. ಕ್ರಾ. ಅ. ೧೦ ಪುಟ ಬೆಲೆ: ೦-೨-೦.

೧೦೯. ಶಿಕ್ಷಣಶಾಸ್ತ್ರ ಲೇಖಕರು ಶ್ರೀಮಾನ್ ಎಸ್. ಜಿ. ಬೈಚವಾಳ, ಎಂ. ಎ., ಟ್ರೇನಿಂಗ್ ಕಾಲೇಜ ಫಾರ್‌ಮೆನ್, ಧಾರವಾಡ. ಪ್ರಕಾಶಕರು ರಾಮಾಶ್ರಯ ಬುಕ್ ಡಿಪೊ, ಧಾರವಾಡ. ಕ್ರಾ. ಅ. ೧೯೨ ಪುಟ, ಬೆಲೆ: ೧-೦-೦.

೧೧೦. **ಗಣಿತಶಾಸ್ತ್ರದ ಸ್ವರೂಪ:** ಲೇಖಕರು ಶ್ರೀ. ಸಿ. ಎನ್. ಶ್ರೀನಿವಾಸಅಯ್ಯಂಗಾರ್, ಡಿ. ಎಸ್. ಸಿ. ಅವರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆಯ ೩೬ನೆಯ ಗ್ರಂಥ. ಫೂ. ಕ್ಯಾ. ಅ. ೫೬ ಪುಟ, ಬೆಲೆ ೦-೨-೦.

೧೧೧. **ಸತ್ತ್ವಶಾಲಿ ರಶಿಯಾ** ಪರಿಚಯಾತ್ಮಕ ಗ್ರಂಥ), ಮೂಲ ಇಂಗ್ಲಿಷ್ ಲೇಖಕರು ಶ್ರೀಮಾನ್ ನಿತ್ಯನಾರಾಯಣ ಬ್ಯಾನರ್ಜಿ. ಅನುವಾದಕರು: ಶ್ರೀಮಾನ್ ಡಿ. ಎಸ್. ಶರ್ಮರು. ಧಾರವಾಡದ ಮಿಂಚಿನಬಳ್ಳಿಯ ೫ನೆಯ ವರ್ಷದ ೧ನೆಯ ಕುಡಿ, ಕ್ರಾ. ಅ. ೧೬೬+೩೦ ಪುಟ. ಬೆಲೆ: ೧-೪-೦.

೧೧೨. **ಕೊರವಂಜಿ** (ತಿಳಿನಗೆಯ ಮಾಸಪತ್ರಿಕೆ) ಸಂಪಾದಕರು ಡಾಕ್ಟರ್ ರಾ. ಶಿವರಾಮ ಅವರು. ಸಲಹೆಗಾರರು ಶ್ರೀ. ನಾ. ಕಸ್ತೂರಿ, ಎಂ. ಎ. ಡೆ. ಅ. ೩೨ ಪುಟ, ಬಿಡಿಸಂಚಿಕೆಯ ಬೆಲೆ ೦-೨-೦. ಪ್ರಕಾಶಕರು ಶ್ರೀ. ಬಿ. ಎನ್. ಗುಪ್ತ, ಪ್ರಜಾಮತ ಮುದ್ರಣಾಲಯ, ಬೆಂಗಳೂರು ನಗರ.



ನಗೀಗೆ ನೇವಿದ್ಯಾ

ಗೆಲವು-ಸೋಲು

ಮನೆಯ ಉಪಾಧ್ಯಾಯರು ಪಾಠ ಹೇಳುತ್ತಿದ್ದಾರೆ. ಒಳಗೆ, ಮನೆಯ ಯಜಮಾನ— ಯಜಮಾನತಿ ಆದೇಕೋ ಜಗಳವಾಡುತ್ತಿದ್ದಾರೆ. ಪಾಠ ಹೇಳುತ್ತ ಉಪಾಧ್ಯಾಯರು ಗುಂಡನನ್ನು ಕೇಳಿದರು :

"ಏನಪಾ ಗುಂಡಾ, ಸದ್ಯ ನಡೆದಿರುವ ಮಹಾಯುದ್ಧದಲ್ಲಿ ಸೋಲು ಯಾರಿಗೆ, ಗೆಲವು ಯಾರಿಗೆ? ನೀನು ಊಹಿಸಿ ಹೇಳಬಲ್ಲೆಯಾ?"

"ಇದರೊಳಗ ಊಹಿಸಿ ಹೇಳುವುದು ಏನಿದೆ ಸರ್? ಹನ್ನೆರಡು ತಿಂಗಳೂ ನಾನು ಕಣ್ಣಾರೆ ನೋಡತಿರತೇನಲಾ; ಅವ್ವನಿಗೆ ಗೆಲವು, ಅಪ್ಪನಿಗೆ ಸೋಲು!"

* * *

ಅಭ್ಯಾಸದ ಕಡೆಗೆ ಲಕ್ಷ್ಯ!

"ಏ ಗುಂಡ್ಯಾ, ಪಾಠದ ಕಡೆ ನಿನ್ನ ಲಕ್ಷ್ಯವೇ ಇಲ್ಲ ನೋಡು! ಮುಂದೀ ಹಾಳ ಹರಟೀ ಕೇಳೂದs ನಿನ್ನ ಸ್ವಭಾವ ಆಗೇದ. ಇಷ್ಟೊತ್ತಿನ ವರೆಗೆ ನಿನ್ನ ಲಕ್ಷ್ಯ ಎಲ್ಲಿತ್ತು?"

"ನೀವು ಆಡತೀರೂ ಮಾತಿನ ಕಡೆಗೇ ನನ್ನ ಲಕ್ಷ್ಯ ಇತ್ತು ಸರ್! ಇನ್ನೆಲ್ಲೂ ಇರಲಿಲ್ಲ!"

* * *

ಫೌಜದಾರರು, ಜೋಯಿಸರು!

"ಫೌಜದಾರ ಸಾಹೇಬರೆ, ಹುಂ ಹುಂ.. ಸ್ವಲ್ಪ ಬೇಗನೆ ಏಳ್ರಿ....ನನ್ನ ಮ್ಯಾಲ ಉಪಕಾರಾ ಮಾಡ್ರಿ! ಇಂದ ಬೆಳಗಿನಿಂದs ನಮ್ಮಾಕಿ ಎಲ್ಲಿಯೋ ಕಣ್ಣಿಗೆ ಕಾಣದ್ಹಾಂಗ ಮಾಯಾಗಿ ಬಿಟ್ಟಾಳ!"

"ಸರಿ ಸರಿ! ಅದಕ್ಕ ನನ್ನ ಕಡೆ ಯಾಕ ಬಂದಿರಿ? ಪ್ರಶ್ನೀ ಹೊತ್ತಿಗಿ ತಗದು ನೋಡಬೇಕು?"

"ನಾನು ನೋಡತಿದ್ದೆ ಎಲ್ಲಾ ಖರೇನ್ರೀ! ಆದರ ಹೊತ್ತಿಗೀ ನೋಡಿದರ ಈಗ ದುಡ್ಡು ಯಾರು ಕೊಡತಾರ? ದಯಮಾಡಿ ಬೇಗನೇ ಏಳ್ರೀ ಫೌಜದಾರ್ ಸಾಹೆಬ್!"

* * *

ಏನು ಮುರಿದsದ!

"ಈ ಮೋಟಾರ್ ಸೈಕಲ್ಲನ್ನ ನಿಮ್ಮ ಕಡೆಯಿಂದ ಮಾರಲಿಕ್ಕೆ ತೆಗೆದುಕೊಳ್ಳುವಾಗ, ನೀವು ಒಪ್ಪಿಕೊಂಡ ಕರಾರು ನಿಮ್ಮ ನೆನಪಿನಲ್ಲಿ ಇರಬಹುದು!"

"ಅದೇನರೆಪ್ಪಾ, ಒಪ್ಪಿಕೊಂಡ ಕರಾರು?"

"ತೆಗೆದುಕೊಂಡ ಆರು ತಿಂಗಳೊಳಗ, ಏನು ಮುರಿದರೂ ಹೊಸದನ್ನು ಹಾಕಿಕೊಡತೇವಿ ಅಂತ ಹೇಳಿದ್ದಿರಲ್ಲಾ?"

"ಹಾಂ ಹಾಂ! ಹೌದು; ಈಗ ಏನು ಮುರಿದsದ ಅಂತೀರಿ?"

"ಏನು ಮುರಿದsದ ಅಂತ ಕೇಳತೀರೇನು? ನನ್ನ ಮುಂದಿನ ನಾಲ್ಕು ಹಲ್ಲು ಮುರಿದಾವ! ಎಡಗೈಯ ಎಲುವು ಮುರಿದsದ! ಕುತ್ತಿಗೀ ಹತ್ತಿರದ ಮೂಳೆ ಮುರಿದsದ!"

* * *

ಒಂದು ಪ್ರತಿ!

"ಇಷ್ಟು ಸಣ್ಣ ಪುಸ್ತಕ ಕಾಣಿಸತಿದ್ದರೂ ಇದರ ಯೋಗ್ಯತಾ ಬಹಳ ದೊಡ್ಡದದ! ಅಂತಲೇ ಇದರ ಬೆಲೆ ೫ ಆಣೆ! ಯಾರಾದರೂ ಓದಲಿಕ್ಕೆ ಕೈಯೊಳಗ ಒಮ್ಮೆ ತೊಗೊಂಡರೆ ಸಾಕು; ಹಾಂಗs ನಕ್ಕುನಕ್ಕು ಸಾಯಬೇಕು!"

"ಹೀಂಗೇನು? ಕೊಡ್ರಿ ಹಾಂಗಾದ್ರ ಒಂದು ಪ್ರತಿ! ನಮ್ಮ ದೊಡ್ಡಪ್ಪನಿಗೆ ಕಾಣಿಕೆಯಾಗಿ ಕಳಿಸತೇನೆ. ಅವನಿಗೆ ಮಕ್ಕಳಿಲ್ಲ, ಪಾಪ!"

* * *

ಇತಿಹಾಸದ ಪ್ರಶ್ನೆ

ಶಿಕ್ಷಕ:— ರಾಮೂ, ಹೇಳು ೧೬ ನೂರಾ ೨೭ರೊಳಗ ಏನಾಯಿತು?

ರಾಮು:— ಶಿವಾಜೀ ಮಹಾರಾಜ ಹುಟ್ಟಿದನ್ರೀ ಮಾಸ್ತರ್!

ಶಿಕ್ಷಕ:— ಶಾಬಾಸ್! ನೀನು ಹೇಳಪ್ಪಾ ಗುಂಡಾ, ೧೬೩೭ ರೊಳಗ ಏನಾಯಿತು?

ಗುಂಡ:— ಶಿವಾಜಿ ಮಹಾರಾಜ ಹತ್ತು ವರ್ಷದವನಾದರಿ ಮಾಸ್ತರಾ!

* * *

ಆಫೀಸಿನ ಕೆಲಸ

"ಏನಸಾ ನೀನು, ಆಫೀಸಿನ ಕೆಲಸಾ ಎಲ್ಲಾ ಮನಿಗೇನೇ ಒಯ್ಯೂದು ಮಾಡತೀ! ನಾನು ನೋಡು; ಒಂದು ದಿನಾನೂ ಒಯ್ಯೂದಿಲ್ಲ!"

"ಒಯ್ದು ಮಾಡದವನರೇ ಏನು ನೀನು? ಮನ್ಯಾಗ ಹೇಣ್ತಿ ಹೇಳಿದ ಕೆಲಸಾ ಮಾಡೂದರೊಳಗ, ವ್ಯಾಳ್ಯಾ ಎಲ್ಲೆ ಉಳೀತsದ ನಿನಗ?"

* * *

ಹೇಳಿದಂತೆ ನಡೆಯುವ ಶಿಷ್ಯ

ಶಿಕ್ಷಕ:— ಏನೋ ರಾಮೂ, ನೀನು ನಿನ್ನ ನೆರೆಯಲ್ಲಿ ಕುಳಿತ ವಿದ್ಯಾರ್ಥಿಗೆ ಪೇಪರ್ ಬರೆದುಕೊಟ್ಟೆಯೋನು?

ವಿದ್ಯಾರ್ಥಿ:— ಹೌದು ಸರ್! ನೀವೇ ಆಗಾಗ ಹೇಳತಿರೂದಿಲ್ಲೇನ್ರಿ.. 'ನೆರೆಹೊರೆಯವರಿಗೆ ಸಹಾಯಮಾಡಬೇಕು' ಅಂತ?

* * *

ನಿಯಮ ಪಾಲನೆ

ಪ್ರವಾಸಿಕ:— ಟಿಕೀಟ್ ಕಲೆಕ್ಟರ್ ಸಾಹೇಬ್, ಇಲ್ಲಿ ನೋಡ್ರಿ! ಈ ಕಂಪಾರ್ಟಮೆಂಟನೊಳಗ ಹದಿನಾರು ಜನ ಕೂಡ್ರಬೇಕೂ ಅಂತ ಬರೆದದೆ; ನೋಡ್ರಿ!

ಟಿ. ಕಲೆಕ್ಟರ್:— ಹೌದು, ನೋಡಿದ್ದೇನೆ. ಹದಿನಾರು ಜನ ಕುಳಿತುಕೊಳ್ಳಬೇಕು. ಹೆಚ್ಚಿನವರು ಎದ್ದು ನಿಂತುಕೊಳ್ಳಬೇಕು! ತಿಳಿಯಿತೇನು?



ಬಣ್ಣ ಬದಲಾಯಿಸಿತು

ಸರ್ ಸ್ಟ್ಯಾಫರ್ಡ್ ಕ್ರಿಪ್ಸರು ಹಿಂದುಸ್ಥಾನವನ್ನು ಮುಟ್ಟಿದಾಗ ಮತ್ತು ಹಿಂದುಸ್ಥಾನವನ್ನು ಬಿಡುವಾಗ ಮಾಡಿದ ಎರಡು ಭಾಷಣಗಳನ್ನು ಹೋಲಿಸಿ ನೋಡಿದರೆ, ೧೫-೨೦ ದಿವಸಗಳಲ್ಲಿ ಸಾಹೇಬರ ಬಣ್ಣ ಎಷ್ಟರಮಟ್ಟಿಗೆ ಬದಲಾಯಿಸಿತೆಂಬುದು ಸ್ಪಷ್ಟವಾಗುವುದು. ‘ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಬೇಕೇಬೇಕು, ಯುದ್ಧ ಮುಗಿದಾಕ್ಷಣ ಹಿಂದುಸ್ಥಾನವು ಸ್ವತಂತ್ರ ರಾಷ್ಟ್ರವೆಂದೇ ನಾವು ಒಪ್ಪಿಕೊಳ್ಳುವೆವು. ಹಿಂದೆ ನಾವು ಮಾಡಿದ ಅನೇಕ ತಪ್ಪುಗಳನ್ನು ಇಂದು ಹಿಂದುಸ್ಥಾನವು ಮರೆಯಬೇಕು ’ —ಎಂದು ಮುಂತಾಗಿ ಕ್ರಿಪ್ಸರು ಪ್ರಾಮಾಣಿಕತೆಯ ಶೈಲಿಯಲ್ಲಿ, ಕಳಕಳಿಯ ದನಿಯಲ್ಲಿ ಮಾತನಾಡುತ್ತ ದಿಲ್ಲಿಯಲ್ಲಿ ತಮ್ಮ ಬೀಡಾರವನ್ನು ಹೂಡಿದರು. ಅದೇ ಕ್ರಿಪ್ಸರು ದಿಲ್ಲಿಯನ್ನು ಬಿಡುವಾಗ ಹೀಗೆ ಹೇಳಿದರು : ‘ ಹಿಂದುಸ್ಥಾನದ ಜನತೆಗಳು (peoples) ತಮ್ಮ ಘಟನೆಯನ್ನು ಸಿದ್ಧಪಡಿಸಿಕೊಳ್ಳುವವರೆಗೆ ಬ್ರಿಟಿಶ್ ಸರಕಾರವು ಹಿಂದುಸ್ಥಾನದ ಬೇರೆ ಬೇರೆ ಜನತೆಗಳಿಗೆ ಕೊಟ್ಟ (ಅಭಯ) ವಚನಗಳನ್ನು ನಡೆಯಿಸುವುದು ತನ್ನ ಕರ್ತವ್ಯವೆಂದು ತಿಳಿಯುವುದು. ’ ಈ ಬೇರೆ ಬೇರೆ ಜನತೆಗಳೆಂದರೆ ಸಂಸ್ಥಾನಿಕರು, ಮುಸಲ್ಮಾನರು, ಹರಿಜನರು— ಎಂಬುದನ್ನು ಲಕ್ಷ್ಯದಲ್ಲಿಟ್ಟರೆ, ಕ್ರಿಪ್ಸರ ದೊಡ್ಡ ಮಾತುಗಳಲ್ಲಿ ಹಳಸಿದ ಹಳೆಯ ಹಾಡೇ ಇದೆ ಎಂದು ಹೊಳೆಯುವುದಿಲ್ಲವೆ ?

ಅಖಿಲರಿಂದಲೂ ಅರ್ಧಚಂದ್ರ !

ಸರ್ ಸ್ಟ್ಯಾಫರ್ಡರು, ತಮ್ಮ ಯೋಜನೆಗೆ ಯಶಸ್ಸು ದೊರೆಯದೆ ಹೋದ ಮೇಲೆ ಮೇಲಿನ ಮಾತನ್ನು ಹೇಳಿದ್ದು. ಅವರ ಯೋಜನೆಗೆ ಯಶಸ್ಸು ದೊರೆಯಲಿಲ್ಲ ಎಂಬುದು ಗೌರವದ ಮಾತೆನಿಸುವುದು, ಸತ್ಯದ ದ್ಯೋತಕವಲ್ಲ. ಸತ್ಯವೆಂದರೆ ಅವರ ಯೋಜನೆ ಹಿಂದುಸ್ಥಾನದ ಒಂದು ಪಕ್ಷಕ್ಕೂ ಸ್ವೀಕರಿಸಲು ಯೋಗ್ಯ ಎನಿಸಲಿಲ್ಲ. ಕಾಂಗ್ರೆಸ್, ಮುಸ್ಲಿಂ ಲೀಗ, ಹಿಂದುಮಹಾಸಭೆ, ಶೀಖ, ರಾಜಾ ಆಂಬೇಡಕರರು, ಸಪ್ರು-ಜಯಕರ-ಪಕ್ಷಾತೀತ ಪ್ರಭೃತಿಗಳು—ಯಾರ ಮತವನ್ನು ನೋಡಿದರೂ ‘ ಕ್ರಿಪ್ಸರ ಯೋಜನೆ ತ್ಯಾಜ್ಯ ’ ಎಂದೇ ಖಂಡಿತವಾಗಿದ್ದಿತು. ಕಾಂಗ್ರೆಸು ಮತ್ತು ಪಕ್ಷಾತೀತ ಪರಿಷತ್ತು ಇವುಗಳನ್ನು ಬಿಟ್ಟು ಮಿಕ್ಕವರು ಕ್ಷುಲ್ಲಕ ಇಲ್ಲವೆ ಕ್ಷಣಿಕ ಕಾರಣಗಳಿಗಾಗಿ ಈ ಯೋಜನೆಯನ್ನು ತಿರಸ್ಕರಿಸಿದ್ದು ನಿಜ. ಆದರೂ ಪಕ್ಷೋಪಪಕ್ಷಗಳಲ್ಲಿ ಪರಸ್ಪರ ಅವಿಶ್ವಾಸವನ್ನು ಹೊತ್ತಿಸುವ ರಾಜನೀತಿಗೆ ಈ ಸಲ ಒಂದೆಡೆಯಲ್ಲೂ ಪುಟವು ದೊರೆಯಲಿಲ್ಲವೆಂಬುದು ಮಹತ್ತ್ವದ ಮಾತಾಗಿದೆ. ಅದರಂತೆಯೆ ಚರ್ಚೆ ಬಹುದಿವಸಗಳ ವರೆಗೆ ನಡೆದುದೂ, ಕ್ರಮೇಣ ಕ್ರಿಪ್ಸರ ಉದಾತ್ತಧೋರಣೆ ಎಂದಿನ ಸಂಕುಚಿತ ಸಾಮ್ರಾಜ್ಯವಾದದ ಸ್ವಾರ್ಥಕ್ಕಿಳಿದುದೂ ಮಹತ್ತ್ವದ ಸಂಗತಿಗಳೇ ಆಗಿವೆ. ದೊಡ್ಡ ಉದ್ದೇಶವನ್ನು ಸಾರಿ ಸಣ್ಣ ಕೆಲಸವನ್ನು ಸಾಧಿಸಬೇಕಾಗಿ ಬಂದು, ಕ್ರಿಪ್ಸರು ತಮ್ಮ ಯೋಗ್ಯತೆಯ ಆಹುತಿಯನ್ನು ಮಾಡಿದರೆಂದು ಹೇಳಲು ಅಡ್ಡಿ ಇಲ್ಲ.

ಸಾಹೇಬರಿಂದಲೆ ಸಂಧಾನ ಮುರಿಯಿತು

ಸಂಧಾನವು ಮುರಿದುದಕ್ಕೆ ಕ್ರಿಪ್ಸರ ಕೊನೆಯಿಲ್ಲದ ಮಾತುಗಾರಿಕೆಯೆ ಕಾರಣವಾಯಿತು. ಈ ಸಂದರ್ಭದಲ್ಲಿ ರಾಷ್ಟ್ರಪತಿಗಳಾದ ಮೌಲಾನಾ ಆಝಾದರು ತಮ್ಮ ಪತ್ರದಲ್ಲಿ ಬರೆದ ಒಂದು ವಾಕ್ಯವನ್ನು ಕಾಣಿಸಬಹುದು. “ you had referred both privately and in the course of public statements to a national government and a cabinet consisting of ministers ’. ಯುದ್ಧಕಾಲದಲ್ಲಿಯೂ ಹೊಣೆಗಾರಿಕೆಯ ಮತ್ತು ಸಕಲಪಕ್ಷೀಯ ಮಂತ್ರಿಮಂಡಳವು ಅಧಿಕಾರವನ್ನು ನಡೆಸುವುದು ಎಂಬ ಅಭಿಪ್ರಾಯವನ್ನು ಕ್ರಿಪ್ಸರು ತಮ್ಮ ಮಾತುಗಳಿಂದ ಎಲ್ಲರಲ್ಲೂ ಹುಟ್ಟಿಸಿದ್ದರು. ‘ ಕೇವಲ ಸಂರಕ್ಷಣೆ ಮತ್ತು ಯುದ್ಧನೀತಿ ಇವುಗಳಿಗಾಗಿ ಈ ಭಾರತೀಯ ಮಂತ್ರಿಮಂಡಳಕ್ಕೆ ಎಷ್ಟರಮಟ್ಟಿಗೆ ಅಧಿಕಾರವಿರಬೇಕು ಎಂಬುದೇ ಕೊಡು-ಕೊಂಬುವ ದೃಷ್ಟಿಯ ಚರ್ಚೆಯಿಂದ ಗೊತ್ತುಮಾಡತಕ್ಕದ್ದಿದೆ ’—ಎಂದು ಕ್ರಿಪ್ಸರ ಹೇಳಿಕೆಯಿಂದ ಎಲ್ಲರಿಗೂ ಎನಿಸಿತ್ತು. ರಾಷ್ಟ್ರಪತಿಗಳು ಅತ್ಯಂತ ಚಾತುರ್ಯದಿಂದ ಈ ಸಂಗತಿಯನ್ನು ಸಾಹೇಬರ ಮುಂದೆ ಎತ್ತಿ ಹಿಡಿದಿದ್ದಾರೆ. ಮೊದಲಿನಿಂದಲೂ ಇಂತಹ ವಾತಾವರಣವನ್ನು ಎಬ್ಬಿಸಿ, ಕೊನೆಗೆ ಕ್ರಿಪ್ಸ್ ಸಾಹೇಬರು ಹೇಳಿದ್ದೇನು ? ‘ಮಂತ್ರಿಮಂಡಳಕ್ಕೆ ಪೂರ್ಣ ಹೊಣೆಗಾರಿಕೆ ಇಲ್ಲ. ಅದು ಸದ್ಯದ ವೈಸ್‌ರಾಯರ ಕಾರ್ಯನಿರ್ವಾಹಕ ಸಮಿತಿಯಂತೆಯೆ—ಆದರೆ ಬೇರೆ ಬೇರೆ ಎಲ್ಲ ಪಕ್ಷಗಳ ಪ್ರತಿನಿಧಿ ಎನಿಸಿ—

ನಡೆಯತಕ್ಕುದು ! ' ಎಂದರೇನು ? ರಾಷ್ಟ್ರಕ್ಕೆ ನಿರ್ಣಯಸ್ವಾತಂತ್ರ್ಯ ವಿಲ್ಲ, ಕೇವಲ ಬ್ರಿಟಿಶರಿಗೆ ಕೊಡುತ್ತಿರುವ ಸಹಾಯಕ್ಕೆ ಸರ್ಟಿಫಿಕೇಟನ್ನು ಕೊಡುವ ಸ್ವಾತಂತ್ರ್ಯ !

ಕಾಂಗ್ರೆಸಿನ ಕಾರ್ಯದಕ್ಷತೆ

ಸರ್ ಸ್ಟ್ರ್ಯಾಫರ್ಡರು ಹಿಂದುಸ್ತಾನದ ಹವೆಗಾಗಿಯೊ ಇಂಗ್ಲಂಡಿನಿಂದ ನೂಕಿದ ಒತ್ತಾಯಕ್ಕಾಗಿಯೊ ತಮ್ಮ ಮಾತನ್ನೂ ಧೋರಣೆಯನ್ನೂ ಬದಲಾಯಿಸತೊಡಗಿದರಷ್ಟೆ ! ಹಾಗೆ ಅವರು ಬದಲಾಯಿಸಿದ್ದಷ್ಟಕ್ಕೇ ಅವರ ಯೋಜನೆ ಮಣ್ಣುಗೂಡಬೇಕಾಗಿದ್ದಿಲ್ಲ. ಕೊನೆಗೆ ಹಿಂದುಸ್ತಾನದ ಭವಿತವ್ಯದ ಬಗ್ಗೆಯಾದರೂ ಮೊದಲು ಹೇಳಿದ ಮಾತನ್ನೆ ಅವರು ಹಿಡಿಯಬಹುದು ಎಂಬ ಆಶೆ ಇದ್ದಿತು. ಆ ಮಾತೆಂದರೆ, ' ಯುದ್ಧದ ತರುವಾಯದಲ್ಲಿ ಹಿಂದುಸ್ತಾನವು ಸ್ವತಂತ್ರರಾಷ್ಟ್ರವೆನಿಸುವುದು '. ಆ ಮಾತನ್ನು ಹಿಡಿಯುವುದೆಂದರೆ ಅದನ್ನು ಬರಿಯ ಬಾಯಿಯಿಂದ, ಅಲಂಕಾರವಾಗಿ ಹೇಳುವುದಿಷ್ಟೇ ಇಲ್ಲ. ಹಿಂದುಸ್ತಾನವು ಯುದ್ಧದ ತರುವಾಯದಲ್ಲಿ ಯಾವ ನೆವವಿಲ್ಲದೆ ಸ್ವತಂತ್ರವೆನಿಸಬೇಕಾದರೆ, ಯುದ್ಧದಲ್ಲಿ ಹಿಂದುಸ್ತಾನವು ಹೆಚ್ಚಿನ ಹೊಣೆಗಾರಿಕೆಯನ್ನು (ಬರಿಯ ಯುದ್ಧಕಾರ್ಯದಲ್ಲಿ ಸಹಕಾರವಷ್ಟೇ ಅಲ್ಲ) ಹೊರಬೇಕಾಗುವುದಲ್ಲವೆ ? ಯುದ್ಧದ ನಿಮಿತ್ತವಾಗಿ ಹಿಂದುಸ್ತಾನಕ್ಕೆ ಕೇಡು ಇಲ್ಲವೆ ಕೊರತೆ ಬಂದರೆ, ಮುಂದಿನ ಸ್ವಾತಂತ್ರ್ಯ ಕೇವಲ ಕಲ್ಪನೆ ಎನಿಸುವುದು. ಹಿಂದುಸ್ತಾನಕ್ಕೆ ಕೇಡು ಇಲ್ಲವೆ ಕೊರತೆ ಬಾರದಂತೆ ನೋಡುವುದು ಭಾರತೀಯನ ಕೆಲಸ. ನೋಡಲು ಭಾರತೀಯನಿಗೆ ಹೆಚ್ಚಿನ ಅಧಿಕಾರ. ಈ ವಿಷಯ ಮೌಲಾನಾ ಅಝಾದರು ಹೀಗೆಂದಿದ್ದಾರೆ: 'The peril that faces India affects us more than it can possibly affect any foreigner.' ಸಂರಕ್ಷಣೆಯ ಹೊಣೆ ನಮ್ಮದಿದ್ದರೂ ಸಂರಕ್ಷಿಸುವ ಅಧಿಕಾರ ಇಲ್ಲವೆ ಸ್ವಾತಂತ್ರ್ಯ ನಮ್ಮ ಕೈಯಲ್ಲಿಲ್ಲದ ವರೆಗೆ ಆ ಹೊಣೆಯನ್ನು ನಾವು ವಹಿಸುವುದು ಜಾಣತನವಲ್ಲ ಎಂದು ಕಾಂಗ್ರೆಸು ಸ್ಪಷ್ಟವಾಗಿ ಹೇಳಿದೆ.

ಮಾತುಗಾರಿಕೆಯೆ ? ' ಮಾತುಜಾರಿಕೆ 'ಯೆ ?

ಕಾಂಗ್ರೆಸು ಎತ್ತಿದ ಪ್ರಶ್ನೆಗಳಿಗೆ ಕ್ರಿಪ್ಸರು ಉತ್ತರವನ್ನು ಕೊಡಲು ಯತ್ನಿಸಿಲ್ಲ, ಇಲ್ಲಿಗೆ ತಡೆದಿದ್ದರೆ ಕ್ರಿಪ್ಸರ ಬುದ್ಧಿಮತ್ತೆಯನ್ನು ಬಿಟ್ಟು ಮತ್ತಾವುದರ ಬಗ್ಗೆಯೂ ಸಂಶಯಬರುತ್ತಿರಲಿಲ್ಲ. ಆದರೆ ಕ್ರಿಪ್ಸರು ಅಷ್ಟಕ್ಕೆ ತಡೆಯದೆ ಕಾಂಗ್ರೆಸಿನ ಅಭಿಪ್ರಾಯಕ್ಕೆ ಅಪಾರ್ಥಗಳನ್ನು ಎಬ್ಬಿಸಿ, ಮುಖ್ಯ ಮಾತುಗಳನ್ನೆ ಜಾರಿಸಲು ಯತ್ನಿಸಿದ್ದಾರೆ! ಬುದ್ಧಿಮತ್ತೆಯಂತೆ ಇವರ ನೀತಿಯಲ್ಲಿ ಪ್ರಾಮಾಣಿಕತೆಯ ಬಂಡವಾಳವೂ ಕಡಿಮೆಯಾಗಿದೆ ಎನಬಾರದೇಕೆ ? ಕೇಳಿರಿ ಸಾಹೇಬರ ಸರ್ವಜ್ಞತೆಯನ್ನು ! ' ಅಝಾದರು ಬೇಡಿದ ಪದ್ಧತಿಯನ್ನು ಜಾರಿಯಲ್ಲಿ ತಂದರೆ........ಅದನ್ನು ಎಲ್ಲ ಅಲ್ಪಸಂಖ್ಯಾಕ ಪಕ್ಷಗಳೂ ನಿರಾಕರಿಸುವುವು, ' ಸರ್ ಸ್ಟ್ರ್ಯಾಫರ್ಡರು ಹೆಸರಾದ ವಕೀಲರಾಗಿದ್ದರೂ ಅದನ್ನು ಬಿಟ್ಟು ಬಹಳದಿನಗಳಾದುದರ ಪರಿಣಾಮ ಅವರ ಬುದ್ಧಿಮತ್ತೆಯ ಮೇಲೆ ಆದಂತಿದೆ, ಎಲ್ಲ ' ಅಲ್ಪಸಂಖ್ಯಾಕ ಪಕ್ಷಗಳು ! ' ಎಂದರೆ ಯಾವುವು ? ಒಂದೇ ಒಂದು ಮುಸ್ಲಿಂಲೀಗ್ (ಇದರಲ್ಲಿ ಅಂಬೇಡಕರ ಎಂಬ ವ್ಯಕ್ತಿಯನ್ನೂ ಸೇರಿಸಿದೆ); ಅದೂ ಹೋಗಲಿ, ಕಾಂಗ್ರೆಸಿನ ಬಹುಮತವನ್ನು ನೀರುವುದು, ಎಲ್ಲ ಅಲ್ಪಸಂಖ್ಯಾಕರು ಒಂದೆಡೆ ಸೇರಿದರೂ (ಇದೂ ಅಸಂಭವವೆ) ಶಕ್ಯವಾಗಿಲ್ಲ, ಆಗುವಂತಿಲ್ಲ. ಇದಲ್ಲದೆ ಎಲ್ಲ ಅಲ್ಪಸಂಖ್ಯಾಕ ಪಕ್ಷಗಳು ಎಂದರೆ ಒಂದು ಬಹುಸಂಖ್ಯಾಕ ಪಕ್ಷ ಎಂದೂ ಅರ್ಥವಾಗುವುದಿಲ್ಲ. ಕೊನೆಗೆ ಎಲ್ಲ ಅಲ್ಪಸಂಖ್ಯಾಕರೂ ಎಲ್ಲ ಬಹು ಸಂಖ್ಯಾಕರೂ ಕೂಡಿಯೆ ನಿರಾಕರಿಸಿದ ತಮ್ಮ ಯೋಜನೆಗಿಂತ ಬರಿಯ ಅಲ್ಪಸಂಖ್ಯಾಕರೆ ನಿರಾಕರಿಸಬಹುದಾದ ಕಾಂಗ್ರೆಸ್ ಯೋಜನೆ ಒಳಿತು ಎಂಬುದು ಸಾಹೇಬರಿಗೆ ಹೊಳೆದಿರಲಿಕ್ಕಿಲ್ಲವೆ! ವಿದೇಶೀಯರ ಸರ್ವಾಧಿಕಾರಿತ್ವಕ್ಕಿಂತ ಸ್ವದೇಶೀಯ ಬಹುಸಂಖ್ಯಾಕರ ಸರ್ವಾಧಿಕಾರಿತ್ವ ಹೆಚ್ಚು ಇಷ್ಟ ಎಂಬುದು ರಶಿಯಾದಲ್ಲಿದ್ದುಕೊಂಡ ಅನುಭವದಿಂದಲಾದರೂ ಕ್ರಿಪ್ಸರು ತಿಳಿದುಕೊಳ್ಳಬಹುದಾಗಿತ್ತು.

ಪ್ರಾಮಾಣಿಕತೆಗೆ ಪ್ರಮಾಣವಿಲ್ಲ

ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಬಹುದು. ಕ್ರಿಪ್ಸರು ಪ್ರತಿನಿತ್ಯ ತಪ್ಪದೆ ತಮ್ಮ ದೂತಸಂಚಾರದ ಪ್ರಶಂಸಾಪ್ರಚಾರವನ್ನು ನಡೆಯಿಸಿದ್ದರಷ್ಟೆ. ಅಂತಹ ಪ್ರಸಂಗಗಳಲ್ಲಿ ಅವರು ಮೇಲಿಂದಮೇಲೆ ' ಈ ಸಲ ನಮ್ಮಲ್ಲಿ ವಿಶ್ವಾಸವನ್ನಿಡಿರಿ, ನನ್ನಲ್ಲಿ ವಿಶ್ವಾಸವನ್ನಿಡಿರಿ, ನಮ್ಮ ಪ್ರಾಮಾಣಿಕತೆಯಲ್ಲಿ ವಿಶ್ವಾಸವನ್ನಿಡಿರಿ ' ಎಂದು ಹೇಳುತ್ತಿದ್ದರು. ನೂರಾರು ವರ್ಷ ಪಾರತಂತ್ರ್ಯದಲ್ಲಿ ಬೆಳೆದ ಭಾರತೀಯರಿಗೆ ವಿಶ್ವಾಸವನ್ನಿಡುವುದಕ್ಕಿಂತ ವಿಶ್ವಾಸವನ್ನಿಟ್ಟುಕೊಳ್ಳುವುದು ಹೆಚ್ಚು ಮಹತ್ತ್ವದ್ದೆನಿಸಿದರೆ ಆಶ್ಚರ್ಯವಲ್ಲ. ವಿಶ್ವಾಸವನ್ನು ದೊರಕಿಸಲು ಸರ್ ಸ್ಟ್ರ್ಯಾಫರ್ಡರು ಮಾಡಿದ್ದೇನು? ಒಂದೇ ಉದಾಹರಣೆಯನ್ನು ನೋಡಬಹುದು : ' ಸಂರಕ್ಷಣಾಖಾತೆಯನ್ನು ಭಾರತೀಯರಿಗೆ ಒಪ್ಪಿಸಬೇಕು ' ಎಂಬ ಮಾತನ್ನು ಬಿಟ್ಟೂ ಬಿಡದೆ ಎಲ್ಲ ಪಕ್ಷಗಳು— ಬಹುಸಂಖ್ಯಾಕ, ಅಲ್ಪಸಂಖ್ಯಾಕ, ನಿಃಸಂಖ್ಯಾಕ—ಹಟ ತೊಡಲಿಲ್ಲವೆ ? ಅದಕ್ಕೆ ಕ್ರಿಪ್ಸರ ಉತ್ತರ ವೇನು ? ಎಂದಿಗೂ ಸಾಧ್ಯವಿಲ್ಲವಂತೆ ! ಇಂತಹರಲ್ಲಿ ವಿಶ್ವಾಸವನ್ನಿಡುವುದೆ ? ' ಎಲ್ಲರೂ ಒಪ್ಪಿದ ಯೋಜನೆಯನ್ನು ನಾವು ಒಪ್ಪುವೆವು ' ಎಂದು ಕ್ರಿಪ್ಸರೂ ಮತ್ತೂ ಹೇಳಿದರೆ ಹೆಚ್ಚೆಚ್ಚು ಅಸತ್ಯವೇ ಎನಿಸಬಹುದಲ್ಲವೆ ? ' ಯುದ್ಧಕಾಲದ ವರೆಗೆ ಮಾತ್ರ, ಮುಖ್ಯನೀತಿಗೆ ಬಾಧೆ ತಾರದಂತೆ, ಯುದ್ಧಕಾರ್ಯಕ್ಕೆ ಅಡ್ಡಿಯಾಗದಂತೆ, ಆಸ್ಟ್ರೇಲಿಯಾ ಮೊದಲಾದ ಸ್ವತಂತ್ರ ದೇಶಗಳಲ್ಲಿದ್ದಂತೆ ನಾವು ಸಂರಕ್ಷಣಾಖಾತೆಯನ್ನು ವಹಿಸುವೆವು ' ಎಂದು ಪಕ್ಷಭೇದವಿಲ್ಲದೆ, ಏಕಮತವಾಗಿ ಬೇಡಿದರೆ ಸಾಹೇಬರಿಗೆ ಒಪ್ಪಿಗೆ ಇಲ್ಲ (ಅಥವಾ ನಮ್ಮಲ್ಲಿ ವಿಶ್ವಾಸವಿಲ್ಲವೊ)! ಹೀಗಿರುವಾಗ ಅಭಿವಚನಗಳ ಪ್ರಾಮಾಣಿಕತೆಯನ್ನು ನಂಬುವುದು ಹೇಗೆ ? ಕ್ರಿಪ್ಸರನ್ನು ನೋಡಿ

ಯಾದರೂ ನಂಬಬೇಕೆಂದರೆ, ಮೇಲೆ ಹೇಳಿದಂತೆ ಅವರದೂ ಬಣ್ಣ ಬದಲಾಯಿಸಿತು.

ಕೊನೆ ಎಲ್ಲಿ ?

ಸಂಧಾನವು ಮುರಿದುದಕ್ಕೆ ಭಾರತೀಯರ ಮೇಲೆ ಯಾವ ಪರಿಣಾಮವಾಗಿದೆ ಎಂಬುದು ಮಿತ್ರ ಸಹಾಯಕ ರಾಷ್ಟ್ರಗಳಿಗೆ ಮಹತ್ತ್ವದ ವಿಷಯವಾಗಿದೆ. ಆದರೆ ಅದನ್ನು ಚರ್ಚಿಸುವುದು ಅಪ್ರಸ್ತುತವೆನಿಸುವುದು. ಭಾರತೀಯರ ಮೇಲೆ ಯಾವ ಪರಿಣಾಮವಾಗಿದ್ದರೂ ಡಿಫೆನ್ಸ ಆಫ್ ಇಂಡಿಯಾ ಆಕ್ಟು ಜಾರಿಯಲ್ಲಿರುವವರೆಗೆ ಅದು ತಿಳಿಯುವಂತೆಯೂ ಇಲ್ಲ, ಅದಕ್ಕೆ ಮಹತ್ತ್ವವೂ ಇಲ್ಲ. ಸಾಮಾನ್ಯವಾಗಿ ಒಂದು ಮಾತನ್ನು ಹೇಳಬಹುದು. ಪಂಡಿತ ಜವಾಹರರು ಹೇಳುತ್ತಿರುವ ಮಾತು ಪ್ರತಿಯೊಬ್ಬ ಭಾರತೀಯನೂ ಹೇಳುತ್ತಿದ್ದಾನೆನಬಹುದು. ಅದೆಂದರೆ, 'ಇನ್ನೆಂದಿಗೂ ಭಾರತೀಯರು ಮೋಸದಲ್ಲಿ ಸಿಕ್ಕಲಾರರು ; ಪರಕೀಯರೆಂದರೆ—ಅವರು ಯಾವದಿಕ್ಕಿನಿಂದಲೆ ಬರಲಿ—ಅವರಿಂದ ಸ್ವಾತಂತ್ರ್ಯ ದೊರೆಯದು; ಯಾರಿಗೂ ಭಾರತವು ಶರಣುಹೋಗದು ; ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ನಮಗೆ ಸ್ವಾತಂತ್ರ್ಯ ಕಟ್ಟಿಟ್ಟದ್ದು; ಅದಕಾಗಿ, ದೇಶದ ಮೇಲೆ ದಾಳಿಯಾದರೆ ಪ್ರತಿಯೊಬ್ಬ ಭಾರತೀಯನೂ ಅದನ್ನು ಎದುರಿಸುವನು, ಹೋರಾಡಲು ಸಿದ್ಧನಾಗುವನು. ಸರಕಾರದ ಯುದ್ಧಕಾರ್ಯ ಬೇರೆ, ನಮ್ಮ ಯುದ್ಧಕಾರ್ಯ ಬೇರೆ ಎಂಬುದು ಅನಿವಾರ್ಯವಾಗಿದ್ದರೂ, ಹೊರಗಿನ ಶತ್ರುವನ್ನು ಎದುರಿಸುವುದರಲ್ಲಿ ಸದ್ಯಕ್ಕೆ ನಮಗೂ ಸರಕಾರಕ್ಕೂ ವಿರೋಧವಿಲ್ಲ.' ಪಂಡಿತರ ಮಾತಿನಲ್ಲಿ ಸಾಹಸ ಇದೆ, ಸ್ವಾಭಿಮಾನ ಇದೆ; ಆದರೆ ಅನಿವಾರ್ಯವಾದ ಒಂದು ಅಸಹಾಯತೆಯೂ ಇದೆ. ಈ ಅಸಹಾಯತೆಗೆ ಒಂದು ಉತ್ತರವನ್ನು ಕೊಟ್ಟು, ಈ ಆಶೆಗೆ ಒಂದು ಉಪಾಯವನ್ನು ಯೋಚಿಸುವುದು ಕಾಂಗ್ರೆಸಿನಂತಹ ಅಖಿಲರಾಷ್ಟ್ರೀಯ ಮತ್ತು ಹೊಣೆಗಾರಿಕೆಯ ರಾಜಕೀಯ ಸಂಸ್ಥೆಯ ಅಗತ್ಯಕರ್ತವ್ಯವಾಗಿದೆ.

ಮುಂದಾಳುಗಳ ಕರ್ತವ್ಯ

ಇನ್ನೊಂದು ದೃಷ್ಟಿಯಿಂದಲೂ ಕಾಂಗ್ರೆಸು ಮಹತ್ತ್ವದ ಕೆಲಸವನ್ನು ಕೈಕೊಳ್ಳಬೇಕಾಗಿದೆ. ಸದ್ಯಕ್ಕೆ ಸ್ವಾತಂತ್ರ್ಯದ್ದಾಗಲಿ, ಪಾಕಿಸ್ತಾನದ್ದಾಗಲಿ ವಿಚಾರವನ್ನು ಕೆಲದಿವಸ ಮರೆತರೆ ಯಾರಿಗೂ ಹಾನಿ ಇಲ್ಲ ಎಂದು ಹೇಳಬಹುದು. ಹೀಗೆ ಹೇಳುವುದರಲ್ಲಿ ಈ ವಿಷಯಗಳನ್ನು ಪೂರ್ತಿಯಾಗಿ ಬಿಟ್ಟುಕೊಡಬೇಕೆಂದಲ್ಲ. ಇಂದಿನ ಯುದ್ಧದ ತರುವಾಯ ನಮ್ಮ ಸ್ವಾತಂತ್ರ್ಯ—ನಾವು ಜಾಗರೂಕರಾಗಿದ್ದರೆ ಮಾತ್ರ—ನಮಗೆ ದೊರೆಯದೆ ಗತ್ಯಂತರವಿಲ್ಲ. ಗೆದ್ದ ರಾಷ್ಟ್ರಗಳು ಮತ್ತೆ ನಮ್ಮನ್ನು ಪಾರತಂತ್ರ್ಯದಲ್ಲಿರಿಸಲು ಹೋರಾಡಲಾರವು. ಅದರಂತೆಯೆ ಪಾಕಿಸ್ತಾನದ ವಿಷಯ. ಮುಸಲ್ಮಾನರಿಗೆ ಅಷ್ಟೊಂದು ಹಟವಿದ್ದರೆ ಅವರನ್ನು ಒತ್ತಾಯದಿಂದ ನಮ್ಮಲ್ಲಿ ಸೇರಿಸುವುದರಲ್ಲಿ ಸುಖವಿಲ್ಲ; ನಮಗೆ ರಾಷ್ಟ್ರವು ಅಖಂಡವಾಗಿ ಉಳಿಯಬೇಕೆಂಬ ಹಟವಿದ್ದರೆ ಮಿಕ್ಕ ಮುಸಲ್ಮಾನರನ್ನು ಒಲಿಸಲು ಇಲ್ಲವೆ ಎಲ್ಲ ಮುಸಲ್ಮಾನರೊಡನೆ ಹೋರಾಡಲು ನಾವು ಸಿದ್ಧರಾಗಬೇಕು. ಅಂತೂ ಈ ವಿಷಯಗಳಲ್ಲಿ ನಿಶ್ಚಿತವಾದೊಂದು ಧೋರಣೆ ಶಕ್ಯವಿದೆ. ಆದರೆ ಸದ್ಯಕ್ಕೆ ಅತ್ಯಂತ ಮಹತ್ತ್ವದ್ದಾದ ವಿಷಯವೆಂದರೆ ಯುದ್ಧದಿಂದ ನಮ್ಮ ದೇಶಕ್ಕಾಗಬಹುದಾದ ಹಾನಿ-ಅನರ್ಥಗಳು. ದೇಶದ ಸಂರಕ್ಷಣೆಗಾಗಿ ಭಿನ್ನಾಭಿಪ್ರಾಯವಿಲ್ಲವಷ್ಟೆ ? ದೇಶದ ಸಂರಕ್ಷಣೆಯ ಕೆಲಸವನ್ನು ಎಲ್ಲ ಪಕ್ಷಗಳ ಮುಂದಾಳುಗಳು ಒಂದೆಡೆ ಸೇರಿ ಸಂಘಟಿಸಬಹುದಲ್ಲವೆ? ಜನರ ಕುಂದು-ಕೊರತೆಗಳನ್ನರಿತ, ಜನರ ಪ್ರೀತಿವಿಶ್ವಾಸಗಳಿಗೆ ಪಾತ್ರರಾದ ಮುಂದಾಳುಗಳು ಒಂದೆಡೆ ಸೇರಿ, ಸಂರಕ್ಷಣೆಗಾಗಿ ಉಪಾಯ-ಉಪದೇಶಗಳನ್ನು ಏಕಮತದಿಂದ ಕೈಕೊಂಡರೆ, ಸರಕಾರದ ಪ್ರಯತ್ನಕ್ಕೆ ಪುಷ್ಟಿ ದೊರೆಯುವುದು; ಸರಕಾರಕ್ಕೆ ಒಗ್ಗದಿದ್ದರೂ ಜನರಿಂದ ಪುಷ್ಟಿ ದೊರೆಯುವುದು. ಆದುದರಿಂದ ಕಾಂಗ್ರೆಸು ಈ ವಿಷಯದಲ್ಲಿ ತಾನೇ ಪ್ರತ್ಯೇಕವಾಗಿ ಯೋಜನೆಯನ್ನು ಮಾಡದೆ, ಮಿಕ್ಕವರ ಮಿಕ್ಕ ಪಕ್ಷಗಳ— ವಿಶ್ವಾಸವನ್ನೂ ಸಹಕಾರವನ್ನೂ ದೊರಕಿಸಿ ದೇಶದ ಆತ್ಮವಿಶ್ವಾಸವನ್ನು ಹೆಚ್ಚಿಸಬೇಕೆಂದು ಬಯಸುತ್ತೇವೆ, ಬೇಡುತ್ತೇವೆ.

ಸಾಹಿತಿಗಳಿಬ್ಬರಿಗೆ ಶ್ರದ್ಧಾಂಜಲಿ

ಪ್ರಸಿದ್ಧ ಕನ್ನಡ ಸಾಹಿತ್ಯಿಕರಾದ ಶ್ರೀಮಾನ್ ಗಳಗನಾಥರೂ, ಶ್ರೀಮಾನ್ ಉಲ್ಲಾಳ ಮಂಗೇಶರಾಯರೂ ಇದೀಗ ಈಚೆ ದಿವಂಗತರಾಗಿ ಕನ್ನಡಿಗರನ್ನು ಅಗಲಿದರು. ಇವರಿಬ್ಬರೂ ಮಾಡಿದ ಕಾರ್ಯ ದೊಡ್ಡದು; ಇದು ವರೆಗೂ ತಮ್ಮ ಕಾರ್ಯವನ್ನು ಮಾಡುತ್ತಲಿದ್ದರು. ಇಬ್ಬರ ಅಗಲಿಕೆಗಾಗಿ ಕನ್ನಡಿಗರಿಗೆ ತುಂಬಬಾರದಂತಹ ಹಾನಿಯಾಯಿತು. ಇಬ್ಬರಿಗೂ ಜಯಂತಿ ತನ್ನ ಶ್ರದ್ಧೆಯ ಅಂಜಲಿಯನ್ನು ಅರ್ಪಿಸುತ್ತಲಿದೆ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

The United Karnatak Insurance Company Ltd

ಹೆಡ್ ಆಫೀಸ್ **ಧಾರವಾಡ.**

Jayanti 1946-47

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

ಹಣಕೊಡದೆ ನಿಲ್ಲಿಸಿಕೊಂಡಿರುವ

ಏಜಂಟರಿಗೆ ಎಚ್ಚರಿಕೆ !

ಜಯಂತಿಯ ೧-೨-೩ ನೆಯ ವರ್ಷಗಳಲ್ಲಿ ಏಜಂಟರಾಗಿ ಕೆಲಸಮಾಡಿದ ಅನೇಕರಿಂದ, ಸಲ್ಲಬೇಕಾಗಿರುವ ದುಡ್ಡು ಇದುವರೆಗೂ ಸಂದಾಯವಾಗಲಿಲ್ಲ. ಸಾಮೋಪಾಯದಿಂದ ಅದೆಷ್ಟು ರೀತಿಯಾಗಿ ಕೇಳಿಕೊಂಡರೂ ಅವರು ದಾರಿಗೆ ಬರಲೊಲ್ಲರು. ಆದುದರಿಂದ ಅಂತವರ ಮೇಲೆಲ್ಲ ಕಾನೂನು ಪ್ರಕಾರ ಕೆಲಸನಡೆಯಿಸಬೇಕೆಂದು ನಾವು ನಿರ್ಣಯಿಸಿದ್ದೇವೆ. ಈ ಎಚ್ಚರಿಕೆ ತಲ್ಪಿದ ಎರಡು ವಾರಗಳಲ್ಲಿ ಎಲ್ಲರೂ ಹಣ ಸಲ್ಲಿಸಿದರೆ ಸರಿ; ಇಲ್ಲದೆ ಹೋದರೆ ಅವರನ್ನೆಲ್ಲ ಅನಿವಾರ್ಯವಾಗಿ ಕೋರ್ಟಿಗೆಳೆಯಲಾಗುವುದು.

ಕಳೆದ ತಿಂಗಳಲ್ಲಿ ಪ್ರಕಟಿಸಿದ್ದ ಇಬ್ಬರಲ್ಲಿ ಅಥಣಿಯ ಏಜಂಟರಾದ ಶ್ರೀ. ಶ್ರೀನಿವಾಸ ಪೆರೆಕಲ್ಲರವರು ಏಪ್ರಿಲ್ ತಿಂಗಳ ಕೊನೆಯೊಳಗಾಗಿ ಹಣಸಲ್ಲಿಸುವುದಾಗಿ ಹೊಣೆಗಾರರಾದ ಸದ್‌ಗೃಹಸ್ಥರಿಂದ ಹೇಳಿಸಿದ್ದಾರೆ. ರಾಣೆಬೆನ್ನೂರಿನ ಶ್ರೀ. ಎಂ. ಆರ್. ಕೆರೂರ ಅವರಿಂದ ಯಾವ ಹೇಳಿಕೆಯೂ ಬಂದಿಲ್ಲವಾದುದರಿಂದ, ಬೇಸಗೆಯ ಬಿಡುವು ಮುಗಿದೊಡನೆಯೆ ಅವರ ಮೇಲೆ ದಾವಾಹಾಕಲಾಗುವುದು.

ಅಲ್ಲದೆ (೧) ಕೆ. ಬಿ. ತೋಂಟದಾರ್ಯ ಅಂಡ್ ಬ್ರದರ್ಸ್ ಬೆಳಗಾಂವಿ, (೨) ಎನ್. ಅಚ್ಯುತರಾವ್ ಹರಿಹರ, (೩) ಜೆ. ಆರ್. ಕುಲಕರ್ಣಿ ಇಳಕಲ್ಲ, (೪) ದಿ ಸ್ಟೂಡಂಟ್ಸ್ ಹಾಲ್ ಬುಕ್‌ಸೇಲರ್ ಮೈಸೂರು, (೫) ಕೆ. ಬಿ. ಹಿರೇಮಠ ಸವಣೂರು, (೬) ಟಿ. ಎಸ್. ಹುಯಿಲಗೋಳ ಗದಗ, (೭) ಬಿ. ಪಿ. ಅಠಲಗಿ ರಬಕವಿ, (೮) ಐ. ಎ. ನೂಲಿನ ರಾಮದುರ್ಗ ಇವರ ಮೇಲೆಯೂ ದಾವಾಹಾಕಬೇಕೆಂದು ನಿರ್ಣಯಿಸಲಾಗಿದೆ. ಮೇ ತಿಂಗಳ ೩೦ನೆಯ ತಾರೀಖಿನ ವರೆಗೆ ದಾರಿ ನೋಡಿ, ಇವರೆಲ್ಲರಿಗೂ ವಕೀಲರಿಂದ ನೋಟೀಸನ್ನು ಕೊಡಿಸಲಾಗುವುದು.

ವ್ಯವಸ್ಥಾಪಕ ಜಯಂತಿ, ಧಾರವಾಡ

ಮಗುವಿನ
ಮೃದು
ಚರ್ಮಕ್ಕೆ
★
ಬೇ
ಕಾ
ದು
★ ದು!

ಶುದ್ಧವಾದ ಮತ್ತು ಮೃದುವಾದ ಒಂದು ಸಾಬೂನು. ಮತ್ತು ಆ ಸಾಬೂನು ಪರಿಮಳಯುಕ್ತವಾಗಿಯೂ ಔಷಧಯುಕ್ತವಾಗಿಯೂ ಇರಬೇಕು. ಮೈಸೂರು ಗಂಧದ ಸಾಬೂನಿನಲ್ಲಿ ಇವೆರಡು ಗುಣಗಳೂ ಕೂಡಿವೆ. ಈ ಸಾಬೂನು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛ ಮಾಡುವುದಲ್ಲದೆ, ಕಾಂತಿಯನ್ನುಂಟು ಮಾಡುತ್ತದೆ.

★

ಮೈಸೂರು
ಸ್ಯಾಂಡಲ್
ಸೋಪು

ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

Printed by V. Y. Jathar at the Karnatak Printing Works, Dharwar. Edited and Published by M. G. Patil at Jayanti Office, Dharw







ಜಯಂತಿ

ಜೂನ್ ೧೯೪೨

ಸದ ಪುಸ್ತಕಾಲಯ
ಬೆಳಗಾವಿ

ಎಚ್. ಎಸ್. ಪಾಟೀಲ, ಆರ್. ವಿ
ಜಾಗೀರದಾರ, ರಾ. ಭ. ಪಾಸಣಗಿ,
ಕ. ರಾಧಾಕೃಷ್ಣನ್ ಇತ್ಯಾದಿ.

ಬೆಲೆ ನಾಲ್ಕಾಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ .... ವ್ಹಿ. ಪಿ. ಯಿಂದ ೩-೫-೦ .... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮರು

೫ನೆಯ ವರ್ಷ	ಜೂನ್ ೧೯೪೨	೧ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಸಾಮಾಜಿಕನ ಸಂವಚನಗಳು (ವಿಚಾರತರಂಗ)	' ಸಾಮಾಜಿಕ '	೧
ಸಂಪಾದಕೀಯ	ಸಂಪಾದಕರು	೨
ಮಂಗನ ಮಲ್ಲಿನಾಥತನ	' ಮಲ್ಲಿನಾಥ '	೩
ಕಳೆದ ಮಹಾಯುದ್ಧದಲ್ಲಿ ಭಾರತೀಯರ ಸಹಾಯ(ರಾಜಕೀಯ)	ಶ್ರೀ. ವಾಳ್ವೇಕರ್ ಗುರುರಾಯರು, ಎಲ್ಎಲ್. ಬಿ.	೫
ಷಾಡ್ಗುಣ್ಯಯುಕ್ತಾ (ಒಂದು ಕಥಾ ಚಿತ್ರ)	ಶ್ರೀ. ' ಶ್ಯಾಮು 'ಬಳ್ಳಾರಿ	೯
ಬುದ್ಧಿಯೊ ಭಾವನೆಯೊ (ವಿಷಯದ ಮತ್ತೊಂದು ಬದಿ)	ಶ್ರೀ. ರಾ. ಭ. ಹಾಸಣಗಿ, ವಿದ್ವಾನ್	೧೪
ನಂದನವಸಂ (ಕವನ)	ಶ್ರೀ. ಪಾದೇಕಲ್ಲು ಶಂಕರ ನಾರಾಯಣಭಟ್ಟರು	೨೨
ಮದುವೆ (ಹರಟೆ)	ಶ್ರೀ. ಕ. ರಾಧಾಕೃಷ್ಣನ್, ಬನಾರಸ	೨೩
ಕಾಲ್ಪನಿಕ ಸಂಭಾಷಣೆ	ಜಯಂತಿಯ ' ಜೇನ್ನೊಣ '	೨೬
ಪ್ರಾದೇಶಿಕ ವಿಶ್ವವಿದ್ಯಾಲಯ	ಶ್ರೀ. ಆರ್. ವಿ. ಜಾಗಿರದಾರ, ಎಂ. ಎ. (ಲಂಡನ್)	೨೯
ತಿಮ್ಮ (ಸಣ್ಣ ಕತೆ)	ಶ್ರೀ. ಸುಬ್ರಾಯ ಶರ್ಮ, ತಲವಾಟ	೩೩
ವಿಧವೆ (ಕವನ)	ಶ್ರೀ. ' ಆತ್ರೇಯ '	೩೫
ಸವತಿ (ಹರಟೆ)	ಶ್ರೀ. ಎಚ್. ಎಸ್. ಪಾಟೀಲ, ಎಂ. ಎ., ಬಿ. ಕಾಮ್.	೩೬
ಮಾತಾ ಮೊಂಟೆಸೋರಿ (ಶಿಕ್ಷಣತತ್ತ್ವದ ಪರಿಚಯ)	ಶ್ರೀ. ಹ. ಮ. ಬಬಲೇಶ್ವರ, ಮಾಂಟ್. ಡಿಪ್.	೩೮
ಸಾದರ ಸ್ವೀಕಾರ	....	೪೦
ಕನ್ನಡ-ಸೈನಿಕ (ಜಯಂತಿಯ ಹೊಸವಿಭಾಗ)	' ಸಂ. ಕ. ಸೈ '	೪೧
ಪುಸ್ತಕ ವಿಮರ್ಶೆ	ವಿಮರ್ಶಕರು	೪೩
ನಗೀಗೆ ನೇವಿದ್ಯ	' ಸಕಲೀ ನಾರಾಯಣಾಚಾರ್ರು '	೪೪
ನಾಲ್ಕೂ ನಿಟ್ಟಿನ ನೋಟ	' ನಿರೀಕ್ಷಕರು '	೪೫

ಜೂನ್ ಸಂಚಿಕೆಗೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಂತಮ್ಮ ಚಂದಾಹಣವನ್ನು ಕೂಡಲೆ ಮನಿಯಾರ್ಡರ್ ಮೂಲಕ ಕಳುಹಬೇಕು. ಮುಂದೆ ಚಂದಾದಾರರಾಗಲು ಮನಸ್ಸಿಲ್ಲದವರು ದಯೆಯಿಟ್ಟು ಕೂಡಲೆ ಕಾಗದ ಬರೆದು ತಿಳಿಸಬೇಕು. ಸಂ. ಜ.

ಜಯಂತಿ

ಸಂಪುಟ ೫ | ೧ನೆಯ ಜೂನ್ ೧೯೪೨ | ಸಂಚಿಕೆ ೧

ಸಾಮಾಜಿಕನ ಸಂವಚನಗಳು

ಪರಮಾರ್ಥವನೇ ಪುರುಷಾರ್ಥದ ಚರಮಸೀಮೆಯೆಂದೊರೆದು, ಲೌಕಿಕವನು ಹಳಿದು ಗಳಹುವ ಗಣಂಗಳೆ ನೀವು ಕೇಳಿರಯ್ಯಾ! ಪರಮಾರ್ಥವನ್ನು ಸಾಧಿಸುವುದಕ್ಕೆ ಮೊದಲು ಬೇಕಲ್ಲವೆ ನೀವು? ನೀವಿದ್ದಲ್ಲಿಯೆ ಮನವಿರುವುದಲ್ಲವೆ? ಮನವಿದ್ದಲ್ಲಿಯೆ ಭಾವನೆಯಿರುವುದಲ್ಲವೆ? ಪರಮಾರ್ಥವೆಂಬ ವಿಷಯ, ಭಾವನೆಯ ಬಳ್ಳಿಗೆ ಅರಳಿದ ಮುಗಿಲಮಲ್ಲಿಗೆಯೆಂಬುದನು ಅದೆಂದೋ ಕಂಡಿರುವ ನಮ್ಮ ಕಾಲರಾಯ!

* * *

ನೀವು ಹುಟ್ಟುವುದು ಪರಮಾರ್ಥದಿಂದಲ್ಲ, ಲೌಕಿಕದಿಂದಣ್ಣಾ! ನೀವು ಬೆಳೆಯುವುದು ಪರಮಾರ್ಥದಿಂದಲ್ಲ, ಲೌಕಿಕದಿಂದಣ್ಣಾ! ಹಡೆದ ತಂದೆ-ತಾಯಿಗಳು ಲೌಕಿಕರು; ಒಡಲ ಹೊರೆಯುವ ಅನ್ನೌಷಧಿಗಳು ಲೌಕಿಕಗಳಣ್ಣಾ! ಒಡಲಲ್ಲಿ ನೆಲಸಿದ ಮನಸ್ಸು ಲೌಕಿಕ; ಮನಸು ಪಡೆವ ಪ್ರತ್ಯಕ್ಷಾನುಭವಗಳು ಲೌಕಿಕವಣ್ಣಾ! ಇಂತಿರುವಾಗ, ಲೌಕಿಕವನೆಲ್ಲ ಕುರುಡುಗಣ್ಣಿಂದ ನೋಡಿ ಕಳೆಯೆಂಬ ಪರಮಾರ್ಥಿಗಳನು, ಹುಟ್ಟುವುದಕ್ಕೆ ಮೊದಲೆ ಹೆಣಗಳ ಲೋಕದಲ್ಲಿ ಇಕ್ಕೆನ್ನುವ ನಮ್ಮ ಕನುಗಣ್ಣ ಕಾಲರಾಯ!

* * *

ಹೆತ್ತ ತಂದೆ-ತಾಯಿಗಳು ಹುಸಿಯೆ? ಹೊತ್ತು ನಿಂತ ದೇಹವಿದು ಹುಸಿಯೆ? ಒಡನಾಡುವ ಜನಜಂಗುಳಿ ಹುಸಿಯೆ? ಹಿಡಿದ ಹಡೆದ ಮಡದಿಮಕ್ಕಳು ಹುಸಿಯೆ? ಇವರೆಲ್ಲರಿಂದ ದೊರೆಯುವ ಹಿಗ್ಗು-ಕುಗ್ಗುಗಳು ಹುಸಿಯೆ? ಹುಸಿಯೆಂದು ಹೇಳುವವರು ಹಾಗೆಯೆ ಏಕೆ ಹುಟ್ಟಲಿಲ್ಲ! ಹುಸಿಯೆಂದು ಹೇಳುವವರು ಹಸಿವೆ-ನೀರಳ್ಕೆಗಳಿಂದ ಬಾಯಿಬಿಡುತಿಹರಲ್ಲ! ಹುಸಿಯೆಂದು ಹೇಳುವವರೆ ಕಾಮವಾಸೆಯಿಂದ ಕಂಗೆಟ್ಟು ತಿರುಗುವರಲ್ಲ! ಆ ಹುಸಿಯಾಳುಗಳೆ ಆಳುಗಳೆಲ್ಲರನೂ ಆಳಲು ಅಳುಪುವರಲ್ಲ? ಇದೆಂತಹ ಪರಮಾರ್ಥವೆಂದು ಕೆಣಕಿ ಕೆಣಕಿ ಕೇಳುವ ನಮ್ಮ ಕಿಡಿಗೇಡಿ ಕಾಲರಾಯ!

* * *

ಪರಮಾರ್ಥ ಹಿರಿಯುದೆಂದು ಅರಿಪುವ ಹಿರಿಯರೆ! ಅರೆದು ಒರೆದು ನೋಡಿದ್ದೀರಾ ನಿಮ್ಮ ನಿಮ್ಮ ಮನಸು ಹೃದಯಗಳನ್ನು? ಹಿಂಜಿ ಹಿಗ್ಗಲಿಸಿ ನೋಡಿದ್ದೀರಾ ನಿಮ್ಮ ನಿಮ್ಮ ಅರಿ-ಅಪೇಕ್ಷೆಗಳನು? ಅವು ನೋಡುವುವೇನು, ಬೇಡುವುವೇನು, ಕಾಡುವುವೇಕೆ ಬಲ್ಲಿರೇನಯ್ಯಾ? ಕನ್ನಡ ನಾಡ ಕಬ್ಬಿಗರಣ್ಣ—ಸತ್ಯಸಂಶೋಧಕ ಸರ್ವಜ್ಞಮೂರ್ತಿ—ಕಂಡುಂಡ ಮಾತನು ಹೇಳಿದ್ದಾನೆ ಕೇಳಿರಯ್ಯಾ! ಎಲ್ಲರ ಒಳಗಿನೊಳಗು ಬಯಸುವುದು ಬೆಚ್ಚನೆಯ ಮನೆ, ವೆಚ್ಚಕ್ಕೆ ಹೊನ್ನು, ಇಚ್ಛೆಯನರಿವ ಸತಿ! ಇವುಗಳ ಭಾವವೆ ಮೋಕ್ಷ ಅಭಾವವೇ ಲೌಕಿಕವೆನ್ನುವ, ಎಲ್ಲವನು ಬಲ್ಲ ಕಾಲರಾಯ!

* * *

ಪರಮಾರ್ಥದ ಹಿಡುಗನ್ನು ಹರಡುತಿರುವ ಪರದೇಶಿಗಳೆ ನೀವು ಕೇಳಿ ಭೋ! ಮುಕ್ಕುತಿಹ ಮುಕ್ಕುತಿಹ ಮಾನವ ಕುಲವನೀ ಹಿಡುಗು ನೋಡಿಭೋ! ಕಕ್ಕುತಿಹ ಕಕ್ಕುತಿಹ ಕೂರನಂಜನಿದು ಕೇಳಿಭೋ! ಬಿಕ್ಕುತಿದೆ ಬೀಳುತಿದೆ ಮಾನವ ಸಮಾಜ ಕೇಳಿಭೋ! ಲೌಕಿಕದಲ್ಲಿ ಪರಮಾರ್ಥವಿದೆ, ಪರಮಾರ್ಥದಲ್ಲಿ ಲೌಕಿಕವಿದೆಯೆನ್ನುವ ವ್ಯವಹಾರಯೋಗಿ ನಮ್ಮ ಕಾಲರಾಯ! ಈ ವ್ಯವಹಾರಯೋಗದಿಂದಲೆ ಮಾನವರಿಗೆ ಮೋಕ್ಷ ದೊರೆಕೊಳುವುದೆಂದು ಸಾರುವನಾತ ಎತ್ತಿ ಕೈಯ!



ಜಯಂತಿಯ ಲೆಕ್ಕಾಚಾರ

ಜಯಂತಿ ಕನ್ನಡಕ್ಕಾಗಿ ಎಷ್ಟು ದುಡಿಯಬೇಕಾಗಿದೆಯೆಂಬುದನ್ನೂ ಹೇಗೆ ಮುಂದುವರಿಯಬೇಕಾಗಿದೆಯೆಂಬುದನ್ನೂ ನಾವೂ ಒಂದು ಬಗೆಯಾಗಿ ಕಲ್ಪಿಸಿಕೊಂಡಿದ್ದೇವೆ. ಆದರೆ ಕಲ್ಪನೆಯಂತೆ ಕೆಲಸ ಮಾಡಲಿಕ್ಕಾಗಲೊಲ್ಲದು. 'ಜಯಂತಿ ಹಾಗೆ ಇರಬೇಕು, ಹೀಗೆ ಇರಬೇಕು' ಎಂದು ಹಲವು ಮಹನೀಯರಿಂದ ಆಗಾಗ ಸೂಚನೆಗಳು ಬರುತ್ತಲಿವೆ. ಆದರೆ 'ಹಾಗೆ ಹೀಗೆ' ಇರಬೇಕಾದರೆ ಬೇಕಾದ ಹಾಗೆ ಹಣದ ಹೊನಲನ್ನು ಹರಿಸಬೇಕಾಗುವುದು. ಜಯಂತಿಯ ವಾಚಕರು ಸಾಕಷ್ಟು ಜನರಿದ್ದಾರೆಂಬ ಸಮಾಧಾನ ನಮಗೆ ಇದ್ದರೂ, ಕೊಂಡು ಓದುವವರ ಸಂಖ್ಯೆ ಬೇಕಷ್ಟು ಇಲ್ಲವೆಂದು ಅಸಮಾಧಾನವೂ ಇದೆ. ಈಗ ಕಾಗದಕ್ಕಾಗಿ ವೆಚ್ಚಮಾಡುತ್ತಿರುವ ಹಣವೆಂದರೆ ಮೊದಲಿನ ಎರಡು-ಮೂರು ವರ್ಷಗಳಿಗಿಂತ ಸುಮಾರು ನಾಲ್ಕರಷ್ಟು ಹೆಚ್ಚಾಗಿರುವುದು. ಆದುದರಿಂದಲೆ ಚಿತ್ರಗಳನ್ನೂ ಕೆಲವೊಂದು ಪುಟಗಳನ್ನೂ ಕಡಿಮೆಮಾಡಿ ಹೆಚ್ಚಿನ ವೆಚ್ಚವನ್ನು ತುಂಬಿಕೊಳ್ಳ-ಬೇಕೆಂದು ಹವಣಿಸಿದೆವು. ಆದರೂ ಲೆಕ್ಕಾಚಾರ ಸರಿ ಹೊಂದುತ್ತಲಿಲ್ಲ. ಪ್ರತಿಯೊಂದು ಸಂಚಿಕೆಯ ನಿಂದಿತ ಬೆಲೆಯೆಂದು ನಮಗೆ ಸಲುವಳಿಯಾಗುತ್ತಲಿರುವ ಮೂರಾಣೆಗಳಲ್ಲಿ, ಎರಡಾಣೆಗಿಂತ ಹೆಚ್ಚುಹಣವನ್ನು ಬರಿ ಕಾಗದವೇ ತಿನ್ನುತ್ತಲಿದೆ. ಒಂದಾಣೆ ಮೂರು ಪೈಗಳು ಮುದ್ರಣಕ್ಕಾಗಿ ಹೋಗುತ್ತವೆ. ಪ್ರತಿ ಸಂಚಿಕೆಗೂ ಮೂರು ಪೈಯಂತೆ ಹಾನಿ ಇಲ್ಲಿಯೆ ಆಗುತ್ತಿರುವಾಗ, ಕಾರ್ಯಾಲಯದ ಆಡಳಿತದ ವೆಚ್ಚಕ್ಕೇನು ಮಾಡಬೇಕು? ಒಳ್ಳೆಯ ಲೇಖನ ಬರೆಯುವ ಲೇಖಕರಿಗೆ ಪ್ರತಿ-ಫಲವನ್ನು ಎಲ್ಲಿಂದ ಕೊಡಬೇಕು? ಸಂಚಿಕೆಯ ಬೆಲೆಯನ್ನು—ಮಿಕ್ಕೆಲ್ಲ ಪತ್ರಿಕೆಗಳಂತೆ—ಹೆಚ್ಚಿಸಬೇಕೆಂದರೆ, ಈಗಿರುವ ವರ್ಗಣಿದಾರರಲ್ಲಿಯೂ ಅನೇಕರು ಕಡಿಮೆಯಾಗಬಹುದು. ಆದುದರಿಂದಲೆ ಬೆಲೆಯನ್ನು ಹೆಚ್ಚಿಸುವ ಗೊಡವೆಗೆ ಹೋಗದೆ, ಒಳ್ಳೆಯ ಭವಿಷ್ಯದ ಕಡೆಗೆ ದೃಷ್ಟಿಯನ್ನಿರಿಸಿ, ಬಂದ ನಷ್ಟವನ್ನು ಕೈಯಿಂದ ತುಂಬಬೇಕೆಂಬ ಗಟ್ಟಿಮುಟ್ಟಾದ ಮನಸ್ಸಿನಿಂದಲೆ ಜಯಂತಿಯ ಸಂಚಾಲಕರು ಅದನ್ನು ಮುಂದುವರಿಸುತ್ತಿದ್ದಾರೆ.

ನಮ್ಮ ಪ್ರಾರ್ಥನೆ

ಚಂದಾದಾರರ ಸಂಖ್ಯೆ ಹೆಚ್ಚಿದರೆ ಸಂಚಿಕೆಯ ಸರಾಸರಿ ಬೆಲೆ ಕಡಿಮೆಯಾಗುವುದರಿಂದ, ಈಗ ಆಗುತ್ತಿರುವ ನಷ್ಟ ಕಡಿಮೆಯಾಗಬಹುದು. ಒಂದುವರೆ ಕೋಟಿಯಷ್ಟು ಜನಸಂಖ್ಯೆಯಿರುವ ಕನ್ನಡನಾಡಿನಲ್ಲಿ ಇದಕ್ಕಾಗಿ ಆತೆ ಪಟ್ಟರೆ ಅಸಮಂಜಸವೇನೂ ಕಾಣುವುದಿಲ್ಲ. ಜಯಂತಿಯಂತಹ ಪತ್ರಿಕೆಯ ಆವಶ್ಯಕತೆಯಿದೆಯೆಂದು ವ್ಯಕ್ತಪಡಿಸುತ್ತಿರುವ ಬಹು ಜನರ ಅಭಿಪ್ರಾಯವನ್ನು ನೋಡಿದರೆ, ಹಾಗೆ ನಾವು ಕನ್ನಡಿಗರಲ್ಲಿ ಬಿನ್ನವಿಸಿಕೊಳ್ಳುವುದು ತಪ್ಪೂ ಅಲ್ಲ. ಆದುದರಿಂದಲೆ ಕನ್ನಡ ಲೋಕದಲ್ಲಿ ನಮ್ಮ ಪ್ರಾರ್ಥನೆಯಿಷ್ಟು:

"ಮಹನೀಯರೆ, ದೇಹಪುಷ್ಟಿಯಂತೆ ಮನಃಪುಷ್ಟಿಯ ಆವಶ್ಯ-ಕತೆಯೂ ನಮಗೆ ಇದೆ. ದೇಹಪುಷ್ಟಿಗಾಗಿ ಉಣ್ಣಲು ಉಡಲು ವೆಚ್ಚಮಾಡುವಂತೆ ಮನಃಪುಷ್ಟಿಗಾಗಿ ಓದಲು ವೆಚ್ಚಮಾಡುವುದೂ ಅತ್ಯಾವಶ್ಯಕವಾಗಿದೆ. ಉಣ್ಣಲು ತಿನ್ನಲು ನೂರಾರು ರೂಪಾಯಿಗಳನ್ನು ವೆಚ್ಚಮಾಡುವವರು ಓದುವುದಕ್ಕೆ ಮೂರು ರೂಪಾಯಿಗಳನ್ನು ವೆಚ್ಚಮಾಡುವುದೆಂದರೆ ಹೆಚ್ಚೂ ಎನಿಸದು; ಹಾಳೂ ಎನಿ-ಸದು. ಆದುದರಿಂದ, ಓದುಬರೆಹ ಬಲ್ಲವರೆಲ್ಲ ತಮ್ಮದನ್ನೇ ಆಗಿ ಪ್ರತಿ ತಿಂಗಳೂ ಜಯಂತಿಯ ಪ್ರತಿಯೊಂದನ್ನು ಪಡೆಯುತ್ತಿರಬೇಕು, ಎಂದರೆ ಮೂರು ರೂಪಾಯಿ ಕೊಟ್ಟು ಚಂದಾದಾರರಾಗಬೇಕು. ಓದಲಿಕ್ಕೆ ಇಷ್ಟವಿಲ್ಲದವರು ಜಯಂತಿಯಂತಹ ಪತ್ರಿಕೆಗಳು ನಾಡಿಗೆ ಆವಶ್ಯಕವೆಂಬ ದೇಶಭಕ್ತಿಯ ಬುದ್ಧಿಯಿಂದಲಾದರೂ ವರ್ಷಕ್ಕೆ ಮೂರು ರೂಪಾಯಿಗಳ ಕಾಣಿಕೆಯನ್ನು ಅದಕ್ಕೆ ಸಲ್ಲಿಸಬೇಕು. ದೇವರಿಗೆ ಧರ್ಮಕ್ಕೆ ಕೊಟ್ಟ ಕಾಣಿಕೆ, ಪೂಜಾರಿ-ಪುರೋಹಿತರ ಹೊಟ್ಟೆಯನ್ನು ಮಾತ್ರ ತುಂಬಬಹುದು. ಜಯಂತಿಗೆ ಕೊಟ್ಟ ಕಾಣಿಕೆಯಿದು, ನಾಡಿನ ವರ್ತಮಾನ-ಭವಿಷ್ಯಜೀವನಗಳಲ್ಲಿ ನೂತನ ತೇಜಸ್ಸು ತಿಳಿವುಗಳನ್ನು ತುಂಬುವುದು. ಆದಕ್ಕಾಗಿ ಈಗಾಗಲೆ ಚಂದಾದಾರರಾಗಿ ಇರುವವರು ಇನ್ನುಮುಂದೆಯೂ ಚಂದಾದಾರರಾಗಿ ಉಳಿಯಬೇಕಲ್ಲದೆ, ತಮ್ಮ ಪರಿಚಯದವರನ್ನೂ ಚಂದಾದಾರರಾಗುವಂತೆ ಪ್ರಚೋದಿಸಬೇಕು. ಇದುವರೆಗೆ ಚಂದಾದಾರರಾಗಿ ಇರದವರು, ಕರ್ತವ್ಯಬುದ್ಧಿಯಿಂದ ಚಂದಾದಾರರಾಗಿ ಜಯಂತಿಯ ಕಾರ್ಯದಲ್ಲಿ ಸಹಕರಿಸಬೇಕು!"

ಮುಳುಂಗಿದ ಹಣ

ಇದುವರೆಗಿನ ಅವಧಿಯಲ್ಲಿ ಜಯಂತಿಯ ಹಣವನ್ನು ಮುಳುಗಿಸಿಕೊಂಡ ಮಹನೀಯರೇನು ಕಡಿಮೆಯಿಲ್ಲ. ನಂಬುಗೆಯನ್ನು ಕೊಟ್ಟು ಏಜಂಟರಾಗಿ ಕೆಲಸ ಮಾಡುತ್ತ, ನಂಬುಗೆಗೇಡಿಗಳಾಗಿ ನಿಂತವರು ನೂರಾರು ಜನರು. ಸುಮಾರು ೧೬೦೦ ರೂಪಾಯಿಗಳಷ್ಟು ಹಣ ಇಂತಹ ಏಜಂಟರಿಂದ ಬರಬೇಕಾಗಿದೆ. ಇದರೊಳಗೆ ಕೈಗೆ ಸಿಕ್ಕುವ ಗಂಟಿಗಿಂತ ಕನ್ನಡಿಯೊಳಗಿನ ಗಂಟೇ ಹೆಚ್ಚಾಗಿದೆಯೆಂಬುದರ ಅನು-ಭವ ದಿನದಿನಕ್ಕೆ ಬರುತ್ತಲಿದೆ. ಆದರೂ ಈ ಹಣ ಸಿಕ್ಕಬಹುದೆಂಬ ಹುಚ್ಚು ನಂಬುಗೆ, ಪತ್ರವ್ಯವಹಾರದ ವೆಚ್ಚವನ್ನು ಮಾತ್ರ ತಿಂಗತಿಂಗಳೂ ಹೆಚ್ಚಿಸದೆ ಬಿಡುತ್ತಿಲ್ಲ. ನಮ್ಮ ಆ ಏಜಂಟರ ಮೈ-ಮನಸ್ಸು ತುಂಬ ಗಟ್ಟಿಯಾಗಿವೆ; ಎಂತಲೆ ನಮ್ಮ ಪತ್ರಗಳಲ್ಲಿಯ ಮಾತಿನ ಬಾಣಗಳು ಅವರನ್ನು ಏನು ಮಾಡಲಿಕ್ಕೂ ಅಸಮರ್ಥವಾಗಿ ಬಿಟ್ಟಿವೆ.

ಏಜಂಟರಂತೆಯೆ ಚಂದಾದಾರ ಸಭ್ಯಗೃಹಸ್ಥರು ಕೆಲವರಿಂದಲೂ ಹಣ ಬರಬೇಕಾಗಿದೆ. ಆ ಹಣದ ಸಂಖ್ಯೆಯೂ ೭೦೦–೮೦೦ ಕ್ಕೆ

(ಆನೆಯ ಪುಟ ನೋಡಿರಿ)

೧. 'ಸಾಧಾರ ಸ್ವಾಭಿಮಾನ'

ಕರ್ನಾಟಕದ ಸೃಷ್ಟಿ-ಸ್ಥಿತಿ-ಸಂಹಾರಗಳ (ಇದೊಂದು ಅಲಂಕಾರ, ಲಕ್ಷ್ಯದಲ್ಲಿರಲಿ) ಸರ್ವೇಶ್ವರರಾದ ತ್ಯಾಗಸೀರ ಹಿರಿಯರೊಬ್ಬರು ತಮ್ಮ ಒಂದು ಅಧ್ಯಕ್ಷ ಭಾಷಣದಲ್ಲಿ 'ಕನ್ನಡ ನಾಡು-ನುಡಿಗಳ ಸಾಧಾರ ಸ್ವಾಭಿಮಾನವನು ಬೆಳೆಸುತ್ತ ಹೋಗುವುದು ನಮ್ಮೆಲ್ಲರ ಕರ್ತವ್ಯ' ಎಂದಿದ್ದಾರಷ್ಟೆ? ಇದನ್ನೋದಿದ ವಾಚಕನೊಬ್ಬನು 'ಸಾಧಾರ' ರೂಢಿಯಂತೆ ಅಚ್ಚಿನ ದೋಷವಿರಬಹುದು, ಸರಿಯಾದ ಶಬ್ದ 'ಸ್ವಾಧಾರ' ಎಂದಿರಬಹುದು ಎಂದು ಬರೆದು ಮಂಗರಾಯನ ಅಭಿಪ್ರಾಯವನ್ನು ಕೇಳಿದ್ದಾನೆ. ಪಾಪ! ಆ ವಾಚಕನ ಕಲ್ಪನೆ ತೀರ ತಪ್ಪಾಗಿದೆ. ಅವನಿಗೆ ಹಿರಿಯರ ಅರ್ಥಗಾಂಭೀರ್ಯವೆ ತಿಳಿದಿಲ್ಲ! ಸ್ವಾಭಿಮಾನವು ಸಾಧಾರವಿರಬಹುದಾಗಿದೆ. ಇನ್ನೂ ತಿಳಿಯಲಿಲ್ಲವೆ? ಹಾಗಿದ್ದರೆ ಇಂಗ್ಲಿಷಿನಲ್ಲಿ ಕೇಳಿರಿ. ಸ್ವಾಭಿಮಾನವು reasonable ಇರಬಹುದಾಗಿದೆ. ಇಂಗ್ಲಿಷೂ ತಿಳಿಯುವುದಿಲ್ಲವೆ? ಹಾಗಾದರೆ ಉದಾಹರಣೆಗಾಗಿ ಆ ಹಿರಿಯರ ವಾಕ್ಯಗಳನ್ನೆ ಮಂಗರಾಯನು ಎತ್ತಿ ತೋರಿಸುವ; ನಮ್ರರಾಗಿ, ಕಿವಿನಿಲ್ಲಿಸಿ ಕೇಳಿರಿ—

(೨) 'ಕರ್ನಾಟಕಕ್ಕೆ ಒಂದು ಬಂದರ, ಒಂದು ವಿಶ್ವವಿದ್ಯಾಲಯ ಇರುವಂತೆ ಯತ್ನ ಮಾಡಬೇಕು' [ಒಂದರ ಬದಲು 'ಎರಡು' ಎಂದರೆ ಅದು ನಿರಾಧಾರ-ಸಾಧಾರವಲ್ಲ-ಸ್ವಾಭಿಮಾನ-ತಿಳಿಯಿತೆ?]

(೩) 'ಅಖಂಡ ಕರ್ನಾಟಕದಲ್ಲಿ ಕೇವಲ ಕನ್ನಡಿಗರೆ ಇರುವರೆಂದಲ್ಲ, ಕನ್ನಡೇತರರೂ ಇರುವರು.' [ಕರ್ನಾಟಕದಲ್ಲಿಯೆ ಹುಟ್ಟಿ ಸಾಯುವವರು ಸಾರ್ವಜನಿಕ ಜೀವನದಲ್ಲಿ ಕನ್ನಡೇತರರೆನಿಸಬಾರದು. ಅಖಂಡ ಕನ್ನಡಿಗರೆನಿಸಬೇಕು—ಎಂಬುದು ನಿರಾಧಾರ.]

(೪) 'ಹಿಂದುಸ್ತಾನದಲ್ಲಿ ಏಕರಾಷ್ಟ್ರೀಯತೆಯ ಕಲ್ಪನೆಯು ಆಸೇತು ಹಿಮಾಚಲ ನೆಲೆಸಿದೆ. ಹಲವು ಮುಸಲ್ಮಾನ್ ಬಾಂಧವರು ಪಾಕಿಸ್ತಾನದ ಬೇಡಿಕೆಯನ್ನು ಮಾಡಿರುವರು. ಹಲವರು ದ್ರಾವಿಡಸ್ತಾನ ಮಾಡಬೇಕೆಂದು ಹೊರಟಿರುವರು. ಹಲವರು ಆಂಧ್ರಪ್ರಾಂತವನ್ನು....' [ಇಷ್ಟರಲ್ಲಿಯೆ ಮೊದಲಿನ ವಾಕ್ಯವೂ ಮುಂದಿನ ವಾಕ್ಯಗಳೂ ಪರಸ್ಪರ ವಿರುದ್ಧವಾಗಿವೆ ಎಂದು ಬಾಯಿ ಹಾಕುವುದು ನಿರಾಧಾರ ಸ್ವಾಭಿಮಾನ, ಜೋಕೆ!)

(೮) 'ಹಿಂದುಸ್ತಾನವು ಹಳ್ಳಿಗಳ ರಾಷ್ಟ್ರವು. ನೂರಕ್ಕೆ ೯೦ ಪಾಲು ಜನರು ಹಳ್ಳಿಗಳಲ್ಲಿ ಇರುವರು.' [ಸ್ವರಾಜ್ಯ ಸಿಗುವವರೆಗೆ ಈ ಪ್ರಮಾಣ ಹೀಗೇ ಉಳಿದೀತೆ, ಉಳಿಯಬೇಕೆ? ಎಂದು ಹಲ್ಲು ಕಿರಿಯುವುದೂ ನಿರಾಧಾರ ಸ್ವಾಭಿಮಾನವೆ!] ತಾತ್ಪರ್ಯವೇನೆಂದರೆ—ಯಾನ ಅಭಿಮಾನವೂ ಪೂರ್ತಿಯಾಗಿ ಒಂದೇ ಭಾವನೆಯದ್ದಿರದೆ ಸಂಯುಕ್ತವಾಗಿದ್ದರೆ ಕರ್ನಾಟಕ— ಏನೆಂದಿರಿ? ಹೊತ್ತು ಕೊಲ್ಲುವುದು ಎಂದರೆ ಇಂಗ್ಲಿಶದಲ್ಲಿ Time killing ಇದು ಸಾಧಾರ ಅಹಿಂಸೆಯಲ್ಲವೆ? ಹೆಹೆ! ಜೈ!

* * *

೨ ಬುದ್ಧಿಯ Black-out (ಬ್ಲ್ಯಾಕ್‌ಔಟ್)!

ಮದ್ರಾಸದ ಶಾಸನಸಭೆಯ ಕಾಂಗ್ರೆಸಿಗರು ರಾಜಾಜಿಯವರ ಅಧ್ಯಕ್ಷತೆಯಲ್ಲಿ ಪಾಕಿಸ್ತಾನವನ್ನು ಒಪ್ಪಬೇಕೆಂದು ನಿರ್ಣಯಿಸಿದ್ದನ್ನು ಕಂಡು, ಮದ್ರಾಸದಲ್ಲಿ ಬುದ್ಧಿಗೂ ಬ್ಲ್ಯಾಕ್‌ಔಟ್ (black out=ಮರೆದೀವಿಗೆ) ಇದೆಯೆ-ಎಂದು ಮಂಗರಾಯನ ತಲೆಯಲ್ಲಿ ಬೆಳಕು ಮಿನುಗುತ್ತಲಿದೆ. ವಾಚಕರೆ, ಕೈಯಲ್ಲಿ ಕಡ್ಡಿಪೆಟ್ಟಿಗೆಯನ್ನು ಸಿದ್ಧವಾಗಿರಿಸಿ ನಿಲ್ಲಿರಿ (ಮಂಗರಾಯನ ತಲೆಯೊಳಗಿನ ಬೆಳಕು ಯಾವಾಗ ನಂದೀತು ನಿಯಮವಿಲ್ಲ), ಬಾಯಿಯಲ್ಲಿ (ಆಸ್ತಿಕ-ಆಸ್ತಿಕ ಎಂಬಂತೆ) 'ಸೇವಾಗ್ರಾಮ್-ಸೇವಾಗ್ರಾಂ' ಎಂಬ ಮಂತ್ರ ಗುಣುಗುತ್ತಿರಿ, ಮದ್ರಾಸ-ಅಲ್ಲ-ರಾಜಾಜಿಸ್ತಾನ್ ಝಿಂದಾಬಾದ್ ಎನ್ನಿರಿ, ಮತ್ತು-ಅಯ್ಯೊ! ಹಾಳು! ತಲೆ ತುರಿಸುವುದರಲ್ಲಿ ಮಂಗರಾಯನು ತಲೆಯೊಳಗಿನ ಬೆಳಕನ್ನೆ ಆರಿಸಿಬಿಟ್ಟನು! ಕೊರೆಯಿರಿ! ಕಡ್ಡಿಯನ್ನು ಕೊರೆಯಿರಿ ಹಾಂ!-ಥೂ!—ರಾಜಾಜಿಯವರ ಗೊತ್ತುವಳಿಯ ಮೇಲೆಯೆ ಆ ಕಡ್ಡಿಯನ್ನು ಒಗೆದಿರಲ್ಲ? ಇನ್ನು ಮತ್ತೆ ಹಾಳಾದ ಹಿಂದುಸ್ತಾನ ಒಂದಾಗಿಯೆ ಉಳಿಯಬೇಕಾಯಿತಲ್ಲ? ದೇಶ ಒಂದು, ಸರಕಾರಗಳೆರಡು (ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್)! ನೋಡಿದಿರಾ, ಒಂದಾಗಿ ಉಳಿಯುವ ಮೂರ್ಖತನವನ್ನು? ಕೊರೆಯಿರಿ, ಇನ್ನೊಂದು ಕಡ್ಡಿಯನ್ನು ಕೊರೆಯಿರಿ! ಕೊರೆದು ಮಾಡುವುದೇನು ಎನ್ನುವಿರಾ? ಲಂಕಾದಹನದಕ್ಷಮಾರುತಿಯ ಕುಲೋದ್ದೀಪಕನಾದ ಮಂಗರಾಯನು-ಅಥವಾ, ಶಾಂತಂ ಪಾಪಂ! ಪಾಕಿಸ್ತಾನದ ಧೂಪಂ! ರಾಜಾಜಿಯ ಕೋಪಂ! ಕಡ್ಡಿಗೆ ಬಂದಿತಲ್ಲ ಒಳ್ಳೇ ತಾಪಂ!

* * *

೪ ಮತಗಣನೆಯ ಮರ್ಮ

ತಮ್ಮ ತಮ್ಮ ಮತವನ್ನು ಕೊಡುವಾಗ ಕೈ ಎತ್ತುವುದೊಂದು ರೂಢಿ ಇದೆಯಷ್ಟೆ? ಈ ರೂಢಿಯ ಇತಿಹಾಸವೇನೆಂದು ಜಾತಿಸಹಜ ಕುತೂಹಲದಿಂದ ಮಂಗರಾಯನು ಶೋಧಿಸುವಾಗ, ಸಶಾಸ್ತ್ರೀಯ ವಿವೇಚನೆಗೊಳಗಾದ ಕೆಲವು ಸಂಗತಿಗಳು ಅವನ ದೃಷ್ಟಿಪಥವನ್ನಿದಿರಿಸಿದುವು. ವಾಚಕರ ಬುದ್ಧಿಯ ಮೇಲೂ ಬೆಳಕು ಬೀಳಲೆಂದು ಕೆಲವು ಮಹತ್ವದ ಮಾತುಗಳನ್ನಾಯ್ದು ಮಂಗರಾಯನು ಮಾಣಿಕ್ಯಮಾಲೆಯನ್ನು ಪವಣಿಸುತ್ತಲಿದ್ದಾನೆ; ಎಂತೆನೆ:—

ತನ್ನ ಮತವನ್ನು ಸೂಚಿಸಲು ಮೊದಲು ಎಲ್ಲ ಪ್ರಾಣಿಗಳಲ್ಲೂ ಸರ್ವಸಾಮಾನ್ಯವಾದ ಒಂದೇ ಒಂದು ರೀತಿ ಇದ್ದಿತಂತೆ. ಅದೇಂದರೆ, ಕಾಲನ್ನು ಎತ್ತುವುದು ಇಲ್ಲವೆ 'ಬ್ಯಾ' ಎನ್ನುವುದು. ಅವರೆ ಕ್ರಮೇಣ ಎರಡು ವಿಶಿಷ್ಟಜಾತಿಯ ಪ್ರಾಣಿಗಳು ಈ ರೀತಿಗಳಲ್ಲಿ ಹೆಚ್ಚಾದ ಪ್ರಾವೀಣ್ಯವನ್ನು

ಪಡೆದುವು. ಆಗ ಮನುಷ್ಯಪ್ರಾಣಿಗೆ ಪೇಚಿನ ಪರಿಸ್ಥಿತಿ ಬಂದಿತು. ಇವಲ್ಲದೆ ಮನುಷ್ಯನ ದೇಹ-ರೂಪವೂ ಈ ರೀತಿಗಳಿಗೆ ಅನನುಕೂಲವೆನಿಸಿತು. ಮುಂಗಾಲ್ಗಳನ್ನು ಕೈಗಳನ್ನಾಗಿ ಮಾರ್ಪಡಿಸಿದ ಚಾತುರ್ಯಕ್ಕಾಗಿ ಹಿಂಗಾಲನ್ನು ಎತ್ತುವುದು ಮನಸ್ಸಿನಿಗೆ ಕಠಿನವೆನಿಸಿತು. ಅದರಂತೆಯೆ, ಬರಿಯ 'ಬ್ಯಾ' ಘೋಷವು ನಿಂಗಡಿಸಲೂ ಶಕ್ಯವಾಗುವಂತಿರಲಿಲ್ಲ. ಆದಕಾಗಿ ಚಾಯ್ದುರದು ('ಜ್ಯಾ' ಎಂದು ಕೂಗುವ ಸಂಸ್ಕಾರದ ಪರಿಣಾಮವಿದು) ಮುಂಗಾಲನ್ನು (ಇವಕ್ಕೆ ಈಗ ಕೈ ಎನ್ನುವರು) ಎತ್ತಿ ತನ್ನ ಮತವನ್ನು ತೋರಿಸುವ ರೂಢಿಯನ್ನು ಮಾನವನು ಹುಡುಕಿಕೊಂಡನು. ಕೈಯನ್ನು ಮೇಲಕ್ಕೆತ್ತುವುದಕ್ಕೂ ಒಂದು ಕಾರಣವಿದೆ. ಹಾಗೆ ಮಾಡಿದರೆ ತಲೆಯನ್ನು ತಗ್ಗಿಸಲು ಇಲ್ಲವೆ ನಿರಿಯಿಸಲು ಅನುಕೂಲವಾಗುವುದು. ಈ ಪದ್ಧತಿ ಮಾನವ ಪ್ರಾಣಿಗೇ ಸಹಜವಾದುದು, ಬ್ರಿಟಿಶರಿಂದ ಬಂದುದಲ್ಲ ಆದಕಾಗಿಯೆ A. I. C. C. ಯಂತಹ ದೇಶಾಭಿಮಾನಿಗಳ ಸಭೆಯಲ್ಲೂ ಕೈ ಎತ್ತುವ ರೂಢಿ ಇದೆ; ಅಹಿಂಸೆಯೆ ತಳಹದಿಯಾದುದರಿಂದ ಒಬ್ಬರೊಬ್ಬರ ಮೇಲೆ ಅಲ್ಲ—ಎಂದು ಬೇರೆ ಹೇಳಬೇಕಾಗಿಲ್ಲ. ಇಂತು ಮುಗಿದುದು—ಕೈಯಲ್ಲ, ಮಾತು. ಹಹ !

* * *

೪ ವಿಶ್ವ-ಕರ್ನಾಟಕ-ಲಯ

ಅಲ್ಲಲ್ಲ- ವಿಶ್ವ- ಕರ್ನಾಟಕ- ವಿದ್ಯಾಲಯದ ಸಮ್ಮೇಳನವೊಂದು ಕೂಡ್ರಬೇಕೆಂದು ಮಂಗರಾಯನ ಮಹಾಸೂಚನೆ ಇದೆ. ವಾಚಕರೆ, ಭ್ರಾಂತಿಗೊಳಗಾಗಬೇಡಿರಿ. ಈಗೊಂದು ಸಮ್ಮೇಳನ ಕೂಡ್ರಲಿದೆ— ನಿಲ್ಲಲು ಕಾಲಿಲ್ಲವೆಂದಲ್ಲ- ಎಂಬುದು ಮಂಗ-ಮಹಾರಾಯನಿಗೆ ಗೊತ್ತಿದೆ. ಆದರೆ ಆ ಸಮ್ಮೇಳನ ಕರ್ನಾಟಕ—ವಿಶ್ವವಿದ್ಯಾಲಯಕ್ಕಾಗಿ ಇವೆರಡರೊಳಗೆ ವ್ಯತ್ಯಾಸವೇನೆಂದು ರಾಮಾನುಜಾಚಾರ್ಯರಾ ಶಂಕರಾಚಾರ್ಯ ಮೋಣ್ ಶ್ರೀಮದಾನಂದತೀರ್ಥಾಚಾರ್ಯರಾ ಮಹಾ ಬಸವೇಶ್ವರಾದಿ ಸದ್ಗುರುವರ ಸತ್ಕುಲ ಪ್ರಸೂತ ಸನ್ಮತಾಭಿಮಾನಿ ಕನ್ನಡಿಗರಿಗೆ ಹೇಳಬೇಕೆ? 'ಕರ್ನಾಟಕ— ಎಂದರೆ ಯಾವ ಕರ್ನಾಟಕ?' ಎಂಬ ಪ್ರಶ್ನೆ ಏಳುವುದು. ಒಬ್ಬೊಬ್ಬ 'ಸದ್ಗುರುವರರ' ಪಂಥಾನುಸರಣದ ಒಂದೊಂದು ಕರ್ನಾಟಕವಿರುವಾಗ, ಕರ್ನಾಟಕ ವಿಶ್ವವಿದ್ಯಾಲಯ ಎಂದರೆ ಅರ್ಥವಿದೆಯೆ? ಇಂತಹ ವಿಷಯದಲ್ಲಿ ಪಂಥಾಭಿಮಾನವೆ?- ಎನಬೇಡಿ. ಯಾಕೆಂದರೆ ಆಧುನಿಕ ಕರ್ನಾಟಕದ ಧ್ವಜದ ಮೇಲೆಯೆ ಈ ಸಂದೇಶವನ್ನು ಕೊರೆದಿದೆ— 'ಪಂಥಾಭಿಮಾನವಿಲ್ಲದಿದ್ದರೆ ಏಂಥಾಭಿಮಾನ' ಎಂದು. ಅದ್ದರಿಂದ ಅಪ್ಪ-ಅಲ್ಲ- ಅಂದ್ರೆ— ವಿಶ್ವಕರ್ನಾಟಕ ವಿದ್ಯಾಲಯದ ಸಮ್ಮೇಳನವೆ ಕೂಡ್ರಬೇಕೆಂದು ಮಂಗರಾಯನ ಹಟ. ಈ ಗೊತ್ತುವಳಿಯನ್ನು ಮಂಗರಾಯನು ಮಂಡಿಸುವನು; ಯಥಾಪ್ರಕಾರ ಸದ್ಗುರುವರರ ಶಿಷ್ಯರು ತುಂಡಿಸುವರು; ಯಾವ ಶಿಷ್ಯ ಮೊದಲು ಮಾತನಾಡಬೇಕೆಂದು ವಾದಕ್ಕೆ ಬಿದ್ದರೆ ಅನುಮಂಗರಾಯನು ಮೋದಿಸುವನು- ತಾವೆಲ್ಲರೂ ಕಿವಿಗಳನ್ನು ನಿಲ್ಲಿಸಿ ಗೊತ್ತುವಳಿಯನ್ನು ಸ್ವೀಕರಿಸಬಹುದಲ್ಲವೆ? ಹೆಹೆಹೆ !

* * *

ಪುಸ್ತಕ ದೊರೆಯುವ ಸ್ಥಳ:
ವಾಗ್ವಿಲಾಸ ಬುಕ್ ಡಿಪ್ಪೊ, ಹುಬ್ಬಳ್ಳಿ.

(೨ನೆಯ ಪುಟದಿಂದ ಮುಂದುವರಿದುದು)

ನೀಕ್ಷಬಹುದು. ಸದ್ಗೃಹಸ್ಥರೆಂಬ ವಿಶ್ವಾಸದ ಮೂಲಕ, ಪತ್ರ ಬರೆದು ಅವರನ್ನು ಬಿನ್ನವಿಸಿಕೊಂಡು ಸಾಕಾಗಿ ಹೋಯಿತು. ಅವರಿಗೆ ಬರೆದ ಪತ್ರದ ವೆಚ್ಚ ಅವರಿಂದ ಬರುವ ಹಣದಷ್ಟೇ ಆಗಿದೆಯೆಂದು ಹೇಳಿದರೆ, ಎಂತಹ ಹುಚ್ಚರೆಂದು ಹಲವು ಜನರು ನಗಬಹುದಾಗಿದೆ ನಮಗೆ. ನಮ್ಮ ಕನ್ನಡದಲ್ಲೊಂದು ಜಾನಪದ ಗಾದೆಯಿದೆ! 'ಕೊಟ್ಟು ಕೇಳುವುದೊಂದು ಕಿಸಿವಾಯಿ, ಅಟ್ಟು ಕರೆಯುವುದೊಂದು ಕಿಸಿವಾಯಿ!' ಈಗ ನಾವು ಕೊಟ್ಟು ಕೇಳುತ್ತಲಿದ್ದು ಆ ಬಿರುದಿಗೆ ಪಾತ್ರರಾಗಿದ್ದೇವೆ. ಇನ್ನು ಮೇಲೆಯೂ ಹಾಗಾಗದಂತೆ ಎಚ್ಚರಿಕೆ ವಹಿಸುತ್ತಲಿದ್ದೇವೆ. ಜನರು ನಮ್ಮ ವಿಶ್ವಾಸವನ್ನು ದುರುಪಯೋಗಪಡಿಸಿಕೊಳ್ಳದೆ, ನಂಬುಗೆಯಿಂದ ನೆರವನ್ನು ಕೊಡುತ್ತಿರಬೇಕು.

ಮನೋಹರ ಗ್ರಂಥಮಾಲೆಯ ಸಾಹಿತ್ಯೋತ್ಸವ

ಕಳೆದ ಮೇ ತಿಂಗಳ ಮೊದಲನೆಯ ವಾರದಲ್ಲಿ ಗದುಗಿನಲ್ಲಿದು ವಿಜೃಂಭಣೆಯಿಂದ ಜರುಗಿತು. ಮನೋಹರ ಗ್ರಂಥಮಾಲೆಯ ಸಂಪಾದಕರಾದ ಶ್ರೀಮಾನ್ ಜಿ. ಬಿ. ಜೋಶಿಯವರು, ಮಗನ ಮದುವೆಗಿಂತ ಹೆಚ್ಚಿನ ಆಸ್ಥೆ ವಹಿಸಿ, ವೆಚ್ಚ ಹೊತ್ತು, ವೈಯಕ್ತಿಕವಾಗಿ ಈ ಉತ್ಸವವನ್ನು ನೆರವೇರಿಸಿದರು. ಸಣ್ಣ ಕತೆಯ 'ಶ್ರೀನಿವಾಸ'ರು ಅಧ್ಯಕ್ಷರಾಗಿದ್ದರಲ್ಲದೆ, ಕನ್ನಡ ನಾಡಿನ ಎಲ್ಲ ಭಾಗಗಳಿಂದಲೂ ಹೆಸರುಹೊಂದಿದ ಸಾಹಿತಿಗಳು ದಯೆಮಾಡಿಸಿದ್ದರು. ನಡೆದ ಕಾರ್ಯದ ದೃಷ್ಟಿಯಿಂದ ನೋಡಿದರೆ, ಅಖಿಲಕರ್ನಾಟಕ ಸಾಹಿತ್ಯ ಸಮ್ಮೇಳನಗಳ ಸಾಮುದಾಯಿಕ ಕಾರ್ಯಕ್ಕಿಂತ ಅಚ್ಚುಕಟ್ಟಾಗಿಯೂ ಸುಸಂಘಟಿತವಾಗಿಯೂ ಇದ್ದಿತೆಂದು ಹೇಳಬಹುದು. ವೈಯಕ್ತಿಕವಾಗಿ ಇಂತಹ ಉತ್ಸವವನ್ನು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮಾಡಿದ ಶ್ರೀ. ಜಿ. ಬಿ. ಜೋಶಿಯವರ ಕಾರ್ಯ ಅಭಿನಂದನೀಯವಾಗಿದೆ.

ಮತ್ತೆ ಮತ್ತೆ ಹೇಳಬೇಕಾದ ಮಾತು

ಜಯಂತಿ ಬೆಳೆದು ಬಾಳಬೇಕಾದರೆ ಕನ್ನಡಿಗರ ಕೈನೆರವು ಅತ್ಯಂತ ಅವಶ್ಯವಾಗಿದೆ. ಕನ್ನಡ ಭಾಗ್ಯವಿಧಾತ, ಕನ್ನಡ ಮಹಾಜನರಿಂದ ಜಯಂತಿಯೂ ಜಯಂತಿಯಿಂದ ಕನ್ನಡ ಕುಲವೂ ತೊಳಗಿ ಬೆಳಗುವಂತೆ ಮಾಡಲಿ; ಜಯಂತಿಯ ಐದನೆಯ ವರ್ಷ ಅದಕ್ಕೆ ತಕ್ಕ ಕಾಲವಾಗಿ ಪರಿಣಮಿಸಲಿ !

—ಸಂಪಾದಕ

ಕಳೆದ ಮಹಾಯುದ್ಧದಲ್ಲಿ ★ (೬ ನೆಯ ಭಾಗ)

ಭಾರತೀಯರು ಮಾಡಿದ ಸಹಾಯ

★

ಶ್ರೀಮಾನ್ ನಾಳ್ವೇಕರ ಗುರುರಾಯರು, ಬಿ. ಎ., ಎಲ್ ಎಲ್. ಬಿ.

ಕಳೆದ ಮಹಾಯುದ್ಧದಲ್ಲಿ ತಮ್ಮ ಕ್ಷಾತ್ರತೇಜಸ್ಸನ್ನು ವೈರಿಗಳಿಗೆ ತೋರಿ, ಮಿತ್ರಪಕ್ಷದ ಸೈನ್ಯಾಧಿಕಾರಿಗಳಿಂದ ಹೊಗಳಿಸಿಕೊಂಡ ಭಾರತೀಯ ವೀರರು ಎಷ್ಟೊಂದು ಜನರು? ಪ್ರತಾಪಸಿಂಹ ಮಹಾರಾಜರು, ರಿಸಾಲ್‌ದಾರ್ ಬದಲೂಸಿಂಗ್, ಜಮಾದಾರ್ ಗೋವಿಂದ-ಸಿಂಗ್ ಇವರೆಲ್ಲರ ಕಾಳೆಗದ ಕತೆ, ಕಲ್ಪಿತ ಕಾದಂಬರಿಗಿಂತ ಅದ್ಭುತವಾಗಿರುವುದು.

ರಾಜಪುತ್ರರ ನೆರವು

ಭಾರತಖಂಡದಲ್ಲಿ ಸಾವಿರಾರು ಸಣ್ಣ ದೊಡ್ಡ ರಾಜರಿದ್ದಾರೆ. ಅವರಲ್ಲಿ ಕೆಲವರು ಸೂರ್ಯ-ಚಂದ್ರ ವಂಶದವರೆಂದು ಹೇಳಿಕೊಳ್ಳುತ್ತಾರೆ. ಅನೇಕರು ಭಟ್ಟಂಗಿಗಳ ಕಡೆಯಿಂದ—ಸೇವಕರಿಂದ— ಹೊಗಳಿಸಿಕೊಳ್ಳುವುದರಲ್ಲಿಯೇ ತೃಪ್ತಿಗೊಳ್ಳುವುದರ ಆಚೆಗೆ ತಮ್ಮ ಕಾರ್ಯಕ್ಷೇತ್ರವನ್ನು ಬೆಳೆಯಿಸುವುದಿಲ್ಲ. ಅವರಿಗೆ ದೊರೆಯುವ ಶಿಕ್ಷಣ, ಅವರ ಸಂಗಾತಿಗಳ ನಡತೆ ಮೊದಲಾದುವುಗಳಿಗೆ ಅನುಸರಿಸಿ ಅವರು ನಡೆದುಕೊಳ್ಳುತ್ತಾರೆ. ಮಾಂಡಲಿಕ ಭೂಪರಿಗನುಗುಣವಾಗಿ ಅವರ ಕೃತಿ ಇರುತ್ತದೆ. ಇಷ್ಟೇ ಅಲ್ಲ, ದಾಸೋಚಿತ ಸೇವೆಯಲ್ಲಿ ಮುಂದುವರಿಯುವುದೇ ಜೀವಿತದ ಅಂತಿಮಧ್ಯೇಯವೆಂದು ಇವರ ತಿಳಿವಳಿಕೆ ಇರಬೇಕು. ಇವರ ಕಲಿತನವು ಹೇಗೆ ಅಡಗಿತೊ, ಇವರ ಕ್ಷಾತ್ರತೇಜವು ಹೇಗೆ ಅಳಿದುಹೋಯಿತೊ ತಿಳಿಯದಾಗಿದೆ. ಬಳಕೆಯಿಲ್ಲದ ವಸ್ತುವಿನಂತೆ ಇವರ ವೀರವೃತ್ತಿಯು ಹಾಳಾಗಿಹೋಗಿರಬೇಕು. ಸಾಮ್ರಾಜ್ಯಸೇವೆಗಾಗಿ ಸದಾ ಸಿದ್ಧರಾಗಿರುವ—ಸಮ್ರಾಟರಲ್ಲಿ ಸಂಪೂರ್ಣ ಭಕ್ತಿಯುಳ್ಳ—ಅರಸರುಗಳಿಗೆ ಸಹ, ಬ್ರಿಟಿಶ್ ಸೈನ್ಯದಲ್ಲಿ ಸೇನಾನಾಯಕರ ಅಥವಾ ಅದಕ್ಕೂ ಕಡಿಮೆ ತರಗತಿಯ ಅಧಿಕಾರದ ಸ್ಥಳಗಳು ದೊರೆತ ಉದಾಹರಣೆಗಳೂ ತೀರ ಅಪರೂಪ. ಕೆಲವು ರಜಪೂತ ಅರಸರೂ ಅವರ ಸಿಪಾಯಿಗಳೂ ಕಳೆದ ಮಹಾಯುದ್ಧದಲ್ಲಿ ವೀರಾವೇಶದಿಂದ ಹೋರಾಡಿದರು. ಮೊನಸು ಹುಳಿತರೂ ಹೋಳವೆನಿಸದು. ಹಿಂದಿನ ಕ್ಷತ್ರಿಯ ವಂಶಜರೆಂದು ಹೇಳಿಕೊಳ್ಳುವವರು, ಸಮಯಬಂದಾಗ ಯುರೋಪದ ರಣರಂಗದಲ್ಲಿ ಕೂಡ ಹೇಗೆ ಕಾದುತ್ತಾರೆಂಬುದು ಕಳೆದ ಮಹಾಯುದ್ಧದ ಇತಿಹಾಸದಲ್ಲಿ ಮೂಡಿನಿಂತಿದೆ. ಅವರಿಗೆ ಕೂಡ ಮೇಲ್ತರದ ದಂಡಿನ ಅಧಿಕಾರಿಗಳಿಗೆ ಬೇಕಾಗುವ ಶಿಕ್ಷಣ ದೊರಕಿಸುವುದಕ್ಕೆ ಸಾಕಷ್ಟು ಆಸ್ಪದವಿಲ್ಲ. ಹಿರಿಯ ಮಗನಿಗೆ ಅರಸೊತ್ತಿಗೆ, ಕಿರಿಯವರಿಗೆ ದಂಡಿನಲ್ಲಿಯ ದೊಡ್ಡ ಅಧಿಕಾರದ ಸ್ಥಳ ಹೀಗೆ ಕ್ರಮವಿರುವ ವ್ಯವಸ್ಥೆಯಾಗಿದ್ದರೆ, ಅನೇಕ ಕ್ಷತ್ರಿಯ ಅರಸರ ಮನೆತನದೊಳಗಿಂದ ಹಲವು ಜನ ಕಡುಗಲಿಗಳು ಮಿನುಗುತ್ತಿದ್ದರು. ಬ್ರಿಟಿಶ್ ಆಳಿಕೆಯ ೩೦೦ ವರ್ಷಗಳ ಕಾಲದಲ್ಲಿ, ಇಂತಹ ಕ್ಷತ್ರಿಯರಿಗೆ ಅಧಿಕಾರದ ಸ್ಥಳಗಳೆಷ್ಟು ದೊರೆತಿವೆ? ಇಂತಹ ಕಠಿನ ಪರಿಸ್ಥಿತಿಯಲ್ಲಿ ಕೂಡ ಕೆಲವು ರಜಪೂತ ಅರಸರು ತಮ್ಮ ವಂಶದ ವೀರವೃತ್ತಿಗನುಗುಣವಾಗಿ ಸಾಮ್ರಾಜ್ಯದ ಅನೇಕ ಸಮರಭೂಮಿಗಳಲ್ಲಿ ಕಾದಿದರು. ಬಿಕಾನೇರದ ಮಹಾರಾಜರು, ಜೋಧಪುರದ ಮಹಾರಾಜರು, ಮಹಾರಾಜಾ ಸುಮರಸಿಂಗರು, ಪತಿಯಾಲಾದ ಮಹಾರಾಜರು-ಮೊದಲಾದವರು, ಕಳೆದ ಮಹಾಯುದ್ಧದಲ್ಲಿ ಪ್ರತಾಪಶಾಲಿಗಳೆನಿಸಿಕೊಂಡರು.

ಪ್ರತಾಪಸಿಂಹ ಮಹಾರಾಜರು

೭೦ ವರ್ಷದ ವಯೋವೃದ್ಧರಾದ ಜೋಧಪುರದ ಪ್ರತಾಪಸಿಂಹ ಮಹಾರಾಜರು ತಮ್ಮ ಸೈನಿಕರೊಡನೆ, ಜರ್ಮನರನ್ನು ಹಿಮ್ಮೆಟ್ಟಿಸಲಿಕ್ಕೆ ಫ್ರಾನ್ಸಿ ರಣಾಂಗಣಕ್ಕೆ ಹೋದರು. ಪ್ರತಾಪಸಿಂಹರು ಈ ಮೊದಲು ಸಹ ಬೇರೆ ಬೇರೆ ರಣಕ್ಷೇತ್ರಗಳಲ್ಲಿ ಕಾದಿದ್ದರು. ೧೯೦೦ ರಲ್ಲಿ ಬ್ರಿಟಿಶ್ ದಂಡುಗಳ ಸಂಗಡ ಹೋದ ಜೋಧಪುರದ ಲ್ಯಾನ್ಸರ್‌ಸರ (ಭಲ್ಲೆಯಾಳುಗಳ) ನಾಯಕತ್ವವನ್ನು ಇವರೇ ವಹಿಸಿದ್ದರು. ಸಮರದಲ್ಲಿ ಹಿಂದುಳಿದುಕೊಂಡು ಹುಕುಂ ಕೊಡುವುದರಲ್ಲಿ ಸಂತುಷ್ಟರಾಗಿರುವ ನಾಯಕರು. ಪ್ರತಾಪಸಿಂಹ

ರಲ್ಲ. ಜನರಲ್ ಫ್ರೆಂಚರ ಭಾವನೆಯಲ್ಲಿ ಉಳಕೊಂಡಿರಲು ಅವರು ಒಪ್ಪಲಿಲ್ಲ. ಜೋಧಪುರ ಲಾನ್ಸರ್ಸ್‌ರ ಕೂಡ ರಣಕ್ಷೇತ್ರದ ಮುಂಭಾಗದಲ್ಲಿ ಹೋರಾಡಲು ಹೊರಟರು. ನಿಜವಾದ ರಜಪೂತನು ಸಾವಿಗೆ ಅಂಜುವನೆ? ಸಮರದಲ್ಲಿ ಸಾವು ಬಂದರೆ ವೀರಸ್ವರ್ಗ ಸಿಕ್ಕುವುದೆಂಬುದೇ ಅವರ ಭಾವನೆ. ತಮ್ಮ ಥಳಥಳಿಸುವ ಹದನಾದ ಕತ್ತಿಗಳಿಗೆ ಅರಿಯ ನೆತ್ತರನ್ನು ಕುಡಿಸಲು ಹವಣಿಸುತ್ತಿರುವ ಜೋಧಪುರದ ಲಾನ್ಸರ್ಸ್‌ರ ಬಗ್ಗೆ ಜನರಲ್ ಎಲನ್‌ಬಿಯವರು (General Allenby) ಪ್ರತಾಪಸಿಂಹರಿಗೆ ಹೀಗೆ ಬರೆದಿದ್ದಾರೆ. "Congratulate you (Sir Pratap Singh) on the brilliant exploits of your regiment, the Jodhpur Lancers, who, on the 23rd September, took the town of Haifa, at a gallop, killing many Turks with their lances in the streets of the town and capturing 700 prisoners. Their gallant colonel Dalpat Singh fell gloriously at the head of his regiment He was burned with full military honours this afternoon. ಸಾರಾಂಶವೇನೆಂದರೆ: 'ಒಂದೇ ಹಾರಿಕೆಯಿಂದ ಹೈಫಾ ಪಟ್ಟಣವನ್ನು ವಶಮಾಡಿಕೊಂಡ 'ಜೋಧಪುರ ಲಾನ್ಸರ್ಸ್' ಎಂಬ ನಿಮ್ಮ ರೆಜಿಮೆಂಟಿನ ಮಿಂಚಿನ ಸಾಹಸಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಜೋಧಪುರದ ಲಾನ್ಸರ್ಸ್‌ರು ಹೈಫಾ ಪಟ್ಟಣದ ಬೀದಿಗಳಲ್ಲಿ ಅನೇಕ ತುರ್ಕರನ್ನು ಬರ್ಚಿಗಳಿಂದ ಇರಿದು ಕೊಂದರು. ೭೦೦ ತುರ್ಕರನ್ನು ಸೆರೆಯಾಳುಗಳನ್ನಾಗಿ ಮಾಡಿದರು. ಅವರ ಶೂರನಾಯಕರಾದ **ದಲಪತಸಿಂಗರಿಗೆ** ತನ್ನ ಸೈನಿಕರ ಮುಂದಾಳಾಗಿ ಕಾದುತ್ತಿರುವಾಗ ಸಮರದಲ್ಲಿ, ಪ್ರತಾಪಶಾಲಿಗಳಿಗೆ ಯುಕ್ತವಾದ ಮರಣ ಬಂದಿತು. ಈ ದಿನ ಮಧ್ಯಾನ ವೀರಾಗ್ರೇಸರನಿಗೆ ಸಲ್ಲತಕ್ಕ ವೈಭವದಿಂದ ಅವನನ್ನು ಭೂಮಿತಾಯಿಯ ಉಡಿಯಲ್ಲಿ ಹಾಕಿದೆವು'!

ಪಾಲಿಸ್ಟಾಯಿನ್‌ನಲ್ಲಿಯ ೫೫ನೆಯ ಕುದುರೆ ಸವಾರರ (55th Cavalry Division) ಮೇಲಧಿಕಾರಿಗಳಿಂದ ಮೇಜರ್ ಜನರಲ್ ಎಚ್. ಎಮ್. ಮೆಕೆಂಡ್ರ್ಯೂ (Major General H. M Macandrew) ಅವರು ಪ್ರತಾಪಸಿಂಹರಿಗೆ ಹೀಗೆ ಬರೆದಿದ್ದಾರೆ:— "My dear Pratap, The Jodhpur Lancers as usual did splendidly. Their charge across the river with 8 Machine guns and six guns firing on them was a great sight. I am sorry that you had fever and were not with us, but I hope to see you back soon." ಸಾರಾಂಶವೇನೆಂದರೆ: "ನನ್ನ ಪ್ರಿಯ ಪ್ರತಾಪ, ಜೋಧಪುರ ಲಾನ್ಸರ್ಸ್‌ರು ವಾಡಿಕೆಯಂತೆ ವೀರಾವೇಶದಿಂದ ಹೋರಾಡಿದರು. ತೋಪುಗಳು ಗುಂಡಿನ ಮಳೆಗರೆಯುವಾಗ ನದಿಯ ಆಚೆಗಿನ ಅವರ ಸಾಹಸದ ಹಲ್ಲೆಯು ನೋಟವು ದರ್ಶನೀಯವಾಗಿತ್ತು. ನೀವು ಕಾಯಿಲೆಯಿಂದ ಬಳಲುತ್ತಿದ್ದುದರಿಂದ ನಮ್ಮ ಸಂಗಡ ಇದ್ದಿಲ್ಲವೆಂಬುದನ್ನು ನೋಡಿ ನನಗೆ ವಿಷಾದವಾಗುತ್ತದೆ. ಆದರೆ ಕೂಡಲೆ ನಿಮ್ಮನ್ನು ಕಾಣುವೆನೆಂದು ನಾನು ಆಶಿಸುತ್ತೇನೆ."

ನಾನಾತರದ ಐಶ್ವರ್ಯವನ್ನನುಭವಿಸಿದ ಹಾಗೂ ಸಮರದಲ್ಲಿ ಸುಖ-ಸಾಧನೆಗಳನ್ನು ದೊರಕಿಸಿಕೊಳ್ಳಲು ಸಾಧ್ಯವಿದ್ದರೂ ಕೂಡ ಪ್ರತಾಪಸಿಂಹರು, ಸಾಮಾನ್ಯ ಸಿಪಾಯಿಗಳಂತೆ ಸವಾರರಂತೆ ದುಡಿಯಲು—ತಮ್ಮ ಕೆಲಸ ತಾವೆ ಮಾಡಿಕೊಳ್ಳಲು—ಹಿಂಜರಿಯುತ್ತಿದ್ದಿಲ್ಲ. ತಮ್ಮ ಬೂಟುಗಳನ್ನು ಒರಸಿಕೊಳ್ಳಲಿಕ್ಕೆ, ತಮ್ಮ ಕುದುರೆಯ ಮೇಲೆ ಜೀನುಹಾಕಲಿಕ್ಕೆ ಸಹ—ಅವರು ಸಿದ್ಧರಿರುತ್ತಿದ್ದರು. ಸುಖಲೋಲುಪನಿಗೆ ಜಯಶ್ರೀಯು ವರಕೊಡುವುದಿಲ್ಲವೆಂಬುದು ಅವರ ನಂಬುಗೆ.

೭೦ ವರ್ಷ ವಯಸ್ಸಿನ ಪ್ರತಾಪಸಿಂಹರ ಸಮರಸಿದ್ಧತೆ ವೀರಾವೇಶ, ಸಾವನ್ನು ಸರಿಸಿ ಸಮರಾಂಗಣದಲ್ಲಿ ಸಾಗಿಬರುವ ಅರಿಗಳನ್ನು ಎದುರಿಸುವ ಅವರ ಶೌರ್ಯ, ಧೈರ್ಯ, ಸಾಹಸಾದಿಗಳು ಇವೆಲ್ಲ—ಭರತಭೂಮಿಯಲ್ಲಿಯ ಬೇರೆ ಭೂಪಾಲರು ಅನುಕರಿಸತಕ್ಕಂತಹವಾಗಿವೆ. ಷಡುಹರಯದ ಅರಸರೆಲ್ಲ ಅಂಜುಬುರುಕರಿದ್ದಾರೆ. ರಾಜರಂತೆಯೆ ಪ್ರಜರು. ಒಬ್ಬ ಪ್ರಸಿದ್ಧ ಆಂಗ್ಲಕವಿಯು ಹೇಳಿದಂತೆ, ಅಂಜುಬುರುಕನಿಗೆ ನಿತ್ಯ ಸಾವು ಕಟ್ಟಿಟ್ಟದ್ದಿದೆ. ವೀರನಿಗೆ ಒಂದೇ ಸಲ ಸಾವು ಬರುತ್ತದೆ. ಪ್ರಜೆಗಳನ್ನು ಕಷ್ಟಕ್ಕೆ ಗುರಿಮಾಡಿ ನಾನಾತರದ ಸುಖೋಪಭೋಗಗಳಲ್ಲಿ ಕಾಲಕಳೆಯುವ ರಾಜರಿಗೆ ತಮ್ಮ ಹಿಂದಿನ ಹಿರಿಯರ ಎದೆಗಾರಿಕೆಯ ಅರಿವು ಇರಬಾರದೆ? ಕ್ಷತ್ರಿಯರೆಂದು ಜನಗಣನೆಯಲ್ಲಿ—ಜಾತಿಯ ಸದರಿನಲ್ಲಿ—ಬರೆಯಿಸಿದಮಾತ್ರಕ್ಕೆ ಕ್ಷತ್ರಿಯನಾಗಬಲ್ಲನೆ? ಕ್ಷಾತ್ರವೃತ್ತಿಯಿಂದ ಜೀವನ ಸಾಗಿಸಲಿಕ್ಕೆ ಬ್ರಿಟಿಶ್ ಆಡಳಿತದಲ್ಲಿ, ಸಾಕಷ್ಟು ಸೌಕರ್ಯಗಳಿಲ್ಲದ್ದರಿಂದ, ಆ ತೇಜಸ್ಸು ಲೋಪಹೊಂದುತ್ತಾ ನಡೆಯಿತು. ಪ್ರಸಂಗ ಬಂದಾಗ ಭಾರತೀಯ ಸಿಪಾಯಿಗಳು, ಈಗ ಕೂಡ ಸಾಹಸವನ್ನು ಮಾಡಬಲ್ಲರೆಂಬುದನ್ನು, ಕಳೆದ ಮಹಾಯುದ್ಧದ ಇತಿಹಾಸವು ಘಂಟಾಘೋಷದಿಂದ ಹೇಳುತ್ತಲಿದೆ.

ಯುರೋಪಿಯನರಿಗಿಂತ ಹೆಚ್ಚು

ಇಂಗ್ಲಂಡಿನಲ್ಲಿಯ ಹೆಸರಾದ '**ಮಾರ್ನಿಂಗ್ ಪೋಸ್ಟ್**' ಎಂಬ ಪತ್ರಿಕೆಯು, ೫೭ನೆಯ ರಾಯಿಫಲ್ಸ್ (57th Rifles) ರ ಸಾಹಸವನ್ನು ಹೀಗೆ ವರ್ಣಿಸಿದೆ: "The advance of the 57th Rifles across nearly a mile of open ground, under heavy fire, is a deed of which the best European troops might feel proud; and they were only repulsed by the enemy by the use of poisonous gas. It was manhood pitted against devilish science and for the moment, German cunning prevailed. But there are failures as glorious as successes and our Indian army added in that repulse to the long record of valorous deed that have made and held the Empire." ಸಾರಾಂಶ:

ಎಡೆಬಿಡದೆ ಗುಂಡಿನ ಸುರಿಮಳೆ ನಡೆದಿರಲು ಒಂದು ವಿಸ್ತಾರವಾದ ಬೈಲನ್ನು ದಾಟುವಾಗ ೩೭ನೆಯ ರಾಯಫಲ್ಸ್‌ರ ಮುನ್ನುಗ್ಗುವಿಕೆಯು, ಉತ್ತಮೋತ್ತಮ ಯುರೋಪೀಯರು ಕೂಡ ಹೆಮ್ಮೆಪಡತಕ್ಕಂತಹದಿತ್ತು. ಅವರ ಮುನ್ನುಗ್ಗುವಿಕೆಯನ್ನು ನಿಲ್ಲಿಸುವುದು ಬೇರೆ ಉಪಾಯಗಳಿಂದಾಗದೆಂದು ಜರ್ಮನ್‌ರು ವಿಷವಾಯುವನ್ನು ಪ್ರಯೋಗಮಾಡಿದರು. ರಾಕ್ಷಸೀ ಶಾಸ್ತ್ರದ ಹಾಗೂ ಈ ವೀರರ ನಡುವೆ ತುಮುಲ ಕಾಳಗ ನಡೆಯಿತು. ಕೆಲವು ಕಾಲ ಜರ್ಮನ್‌ರ ಕುವಿದ್ಯೆಗೆ ಯಶ ದೊರೆಯಿತು. ಆದರೆ ಕೆಲವು ಸಂದರ್ಭಗಳಲ್ಲಿ ಜಯದಷ್ಟೇ ಅಪಜಯವು ತೇಜೋಮಯವಾಗಿರುತ್ತದೆ. ಈ ಸಲದ ಹಿನ್ನುಗ್ಗುವಿಕೆಯಿಂದ ಸಹ ನಮ್ಮ ಹಿಂದೀ ಸೈನಿಕರು, ಸಾಮ್ರಾಜ್ಯವನ್ನು ಸ್ಥಾಪಿಸಿದ ಹಾಗು ಸ್ಥಿರಗೊಳಿಸಿದ ತಮ್ಮ ಪರಾಕ್ರಮದ ಮಾಲಿಕೆಗೆ ಹೆಚ್ಚಿನ ವೈಭವವನ್ನು ತಂದುಕೊಟ್ಟರು.

'ವ್ಹಿ. ಸಿ.' ಪಡೆದವರು

ವ್ಹಿಕ್ಟೋರಿಯಾ ಕ್ರಾಸ್ ಎಂಬ ಬಹುಮಾನವನ್ನು ದೊರಕಿಸುವುದು ಸಾಮಾನ್ಯ ಕೆಲಸವಲ್ಲ. ಕಳೆದ ಮಹಾಯುದ್ಧದಲ್ಲಿ 'ವ್ಹಿಕ್ಟೋರಿಯಾ ಕ್ರಾಸ್' ಪಡೆದವರ ಪರಾಕ್ರಮವನ್ನೂ ಕಲಿತನವನ್ನೂ; ತಮ್ಮ ಜೀವಹೋದರೂ ಚಿಂತೆಯಿಲ್ಲ, ತಮ್ಮ ಸಂಗಡಿಗರ ಮೇಲಧಿಕಾರಿಗಳ ಜೀವವನ್ನುಳಿಸುವುದರಲ್ಲಿ ಅವರು ತೋರಿಸಿದ ಎದೆಗಾರಿಕೆಯನ್ನೂ ವರ್ಣಿಸಲು ಕವಿಯೇ ಬೇಕು. ರಿಸಾಲ್‌ದಾರ್ ಬದಲುಸಿಂಗನು ತನ್ನ ಸೈನಿಕರ ತಂಡವನ್ನುಳಿಸಲು ಮಾಡಿದ ಸಾಹಸದಲ್ಲಿ ಜೀವಕ್ಕೆರವಾದನು. ಅವನು ಸಮರದಲ್ಲಿ ಮಡಿದರೂ ಕೀರ್ತಿರೂಪದಲ್ಲಿ ಚಿರಂಜೀವಿಯಾಗಿದ್ದಾನೆ. ಹಿಂದೀ ಸೈನಿಕರ ಪರಾಕ್ರಮವು ಚಿರವಾಗಿ ಬೆಳಗುವಂತೆ ಮಾಡಿದ ಶ್ರೇಯಸ್ಸು ರಿಸಾಲದಾರ್ ಬದಲುಸಿಂಗನಿಗಿದೆ. ವ್ಹಿಕ್ಟೋರಿಯಾ ಕ್ರಾಸ್ ಸ್ವೀಕರಿಸಲಿಕ್ಕೆ ಅವನು ಉಳಿಯಲಿಲ್ಲ. ಅವನ ಮರಣದ ನಂತರ ಅವನ ಹೆಸರಿನಿಂದ ವ್ಹಿಕ್ಟೋರಿಯಾ ಕ್ರಾಸ್ ಕೊಡುವುದರಲ್ಲಿ ಬಂದಿತು. ವ್ಹಿಕ್ಟೋರಿಯಾ ಕ್ರಾಸ್ ಪಡೆದವರೆಲ್ಲರ ಬಗ್ಗೆ ಸಂಕ್ಷೇಪವಾಗಿ ಸಹ ಬರೆಯಲು ಸಾಧ್ಯವಿಲ್ಲ. ಆದರೆ ಅವರಲ್ಲಿ ಶ್ರೇಷ್ಠನಾದ **ಜಮಾದಾರ್ ಗೋವಿಂದಸಿಂಗನನ್ನು** ಮರೆಯುವುದು ಶಕ್ಯವಿಲ್ಲ. ವಿಖ್ಯಾತ ಬರೆಹಗಾರರಾದ ಸೇಂಟ್ ನಿಹಾಲ ಸಿಂಗರು ಅವನ ಸಾಹಸವನ್ನು ಮೈಮೇಲೆ ರೋಮಾಂಚವುಂಟಾಗುವಂತೆ ವರ್ಣಿಸಿದ್ದಾರೆ. ಅವರ ಸಾರಾಂಶವನ್ನು ಕೆಳಗೆ ಕೊಡುತ್ತೇನೆ :—

'ಕ್ಯಾಂಬ್ರಾಯ (Cambrai) ಹತ್ತಿರ ಗೋವಿಂದ ಸಿಂಗನ ತಂಡದ (Squadron) ಸುತ್ತಲೂ ಮೂರೂ ದಿಕ್ಕುಗಳಿಂದ ಜರ್ಮನ್‌ರು ಮುತ್ತಿದರು. ಇನ್ನೊಂದು ದಿಕ್ಕಿಗೆ ಹೊಳೆ ಇತ್ತು. ಜರ್ಮನರನ್ನು ಹಿಮ್ಮೆಟ್ಟಿಸಿ ಈ ಇಕ್ಕಟ್ಟಿನೊಳಗಿಂದ ಪಾರಾಗಿ ಜೀವದಿಂದ ಉಳಿಯಬೇಕು; ಇಲ್ಲದಿದ್ದರೆ ಈ ಸಾಹಸದಲ್ಲಿ ಸತ್ತು ಕೀರ್ತಿರೂಪದಿಂದುಳಿಯಬೇಕು—ಹೊರತು ಜೀವದ ಆಶೆಗಾಗಿ ವೈರಿಗಳಿಗೆ ಶರಣು ಹೋಗಬಾರದೆಂದು ನಿಶ್ಚಯವಾಯಿತು. ಈ ತಂಡದ ಮುಖ್ಯಾಧಿಕಾರಿಯು ತಮ್ಮ ಮುಖ್ಯ ಛಾವಣಿಯಿಂದ ಸಹಾಯದ ಅಪೇಕ್ಷೆಮಾಡುತ್ತಿದ್ದನು. ತಮಗೊದಗಿದ ಗಂಡಾಂತರದ ಸುದ್ದಿಯನ್ನು ಮುಖ್ಯ ಛಾವಣಿಗೆ ಮುಟ್ಟಿಸುವುದು ಅವಶ್ಯವಿತ್ತು. ಆದರೆ ಅದು ಅತಿ ದುಸ್ತರವಾಗಿತ್ತು. ಒಂದುವರೆ ಮೈಲು—ಜರ್ಮನ್ ತೋಫುಗಳು ಕಾರುತ್ತಿರುವ ಉರಿಯೊಳಗಿಂದ ಹಾಯ್ದು ಹೋಗುವ ದುರ್ಧರ ಪ್ರಸಂಗ. ಎಂಟು ಜನ ಹಿಂದೀ ವೀರರು ಒಬ್ಬರಹಿಂದೊಬ್ಬರು, ಈ ಪ್ರದೇಶದೊಳಗಿಂದ—ಕುದುರೆಗಳನ್ನೇರಿ ಹಾರುಗಾಲಿನಿಂದ ಓಡಿಸುತ್ತ ಹೋಗಿ—ತಮ್ಮ ಮುಖ್ಯಾಧಿಕಾರಿಯ ಸಂದೇಶವನ್ನು ಮುಖ್ಯ ಛಾವಣಿಗೆ ಮುಟ್ಟಿಸಲು ಯತ್ನಿಸಿದರು. ಆದರೆ ಅವರ ಕುದುರೆಗಳ ಮೈತುಂಬ ಹಾಗು ಅವರೆಲ್ಲರ ಮೈತುಂಬ ಕಸೂತಿ ಹಾಕಿದಂತೆ ಗುಂಡುಗಳು ನಟ್ಟಿದ್ದನ್ನು ವೀರ ಗೋವಿಂದ ಸಿಂಗನು ಕಣ್ಣಾರೆ ಕಂಡನು. ಅವನ ನೆತ್ತರವು ಕಾಯ್ದು ಸಳಮಳ ಕುದಿಯಹತ್ತಿತು. ಸಾವಿಗಂಜದ ಗೋವಿಂದಸಿಂಗನು ತಮ್ಮ ಮುಖ್ಯಾಧಿಕಾರಿಗೆ ಸಂದೇಶವನ್ನು ಮುಟ್ಟಿಸುವ ಕೆಲಸವನ್ನು ತನಗೊಪ್ಪಿಸಬೇಕೆಂದು ಅರಿಕೆಮಾಡಿಕೊಂಡನು. ಅವನ ಬೇಡಿಕೆಗೆ ಮನ್ನಣೆ ದೊರೆಯಿತು. ಗೋವಿಂದಸಿಂಗನು ತಡವಿಲ್ಲದೆ ಕುದುರೆಯನ್ನೇರಿ, ವಾಯುವೇಗದಿಂದ ಮುಂದುವರಿದನು. ಜರ್ಮನ್‌ರ ಗುರಿ ಇಷ್ಟೊಂದು ಸರಿಯಾಗಿದ್ದಿತು; ಕುದುರೆಯ ಎರಡೂ ಮುಂಗಾಲುಗಳ ಕೆಳಗಿಂದ ಮೇಲಿನವರೆಗೆ ವರ್ತುಲಾಕಾರವಾಗಿ ಗುಂಡುಗಳು ನೆಟ್ಟಿದ್ದುವು. ಕುದುರೆಯು ಮುಖ್ಯ ಛಾವಣಿಯು ೬೦೦ ಯಾರ್ಡು ದೂರದಲ್ಲಿದ್ದಾಗ ನೆಲಕ್ಕುರುಳಿತು. ಆದರೆ ಆ ರಾಥೋರ್ ವೀರನನ್ನು ತಡೆದು ನಿಲ್ಲಿಸುವ ಸಾಮರ್ಥ್ಯವು ಜರ್ಮನ್ನರ ತುಬಾಕಿಗಳಲ್ಲಿದ್ದಿಲ್ಲ. ಅವನಿಗೆ ಒಂದು ಗುಂಡು ಸಹ ಬಡಿಯಲಿಲ್ಲ. ಮುಖ್ಯ ಛಾವಣಿಯ ಸೈನ್ಯಾಧಿಪತಿಯು ಉತ್ತರವನ್ನು ಕೊಟ್ಟನು. ಗೋವಿಂದಸಿಂಗನು ಮರಳಿ ಮತ್ತೊಂದು ಕುದುರೆಯನ್ನೇರಿ ಹಿಂದಿರುಗಿದನು. ಆದರೆ ಅರ್ಧ ಹಾದಿಗೆ ಅವನ ಕುದುರೆಯು ಜರ್ಮನ್ ಮಶಿನ್‌ಗನ್ನಿನ ಗುಂಡಿಗೆ ಬಲಿಬಿತ್ತು. ಜರ್ಮನ್‌ರು ಗುಂಡುಹಾಕುತ್ತ ಗೋವಿಂದಸಿಂಗನನ್ನು ಬೆನ್ನಟ್ಟಿದರು. ಸ್ವಲ್ಪ ಹೊತ್ತು ಅವನು ಚಿಗರಿಯ ಓಟದಿಂದ ಓಡಿದ, ಜರ್ಮನ್‌ರ ಕೈಗೆ ಸಿಕ್ಕಲಿಲ್ಲ; ಅವರ ಗುಂಡಿಗೆ ತುತ್ತಾಗಲಿಲ್ಲ. ಆದರೆ ಅಷ್ಟರಲ್ಲಿ ಮೂರೂ ಕಡೆಯಿಂದ ಸುತ್ತುಗಟ್ಟಲ್ಪಟ್ಟ ಗೋವಿಂದಸಿಂಗನ ತಂಡದವರು ಗುಂಡು ಹಾರಿಸಲಾರಂಭಿಸಿದರು. ಜರ್ಮನ್‌ರು ಗೋವಿಂದಸಿಂಗನನ್ನು ಬೆನ್ನಟ್ಟುವುದನ್ನು ಬಿಟ್ಟು ಓಡಿದರು. ಆದರೆ ಮತ್ತೆ ಸಾವಿನ ಕೊಳ್ಳದೊಳಗಿಂದ ಹಾದು ಹೋಗಿ ಸಂದೇಶವನ್ನು ಮುಖ್ಯ ಛಾವಣಿಗೆ ಮುಟ್ಟಿಸಬೇಕಾಯಿತು. ಗೋವಿಂದಸಿಂಗನು ಮತ್ತೆ ಮುಂದಕ್ಕೆ ಬಂದನು. ಅವನ ಮೇಲೆ ಪರಮೇಶ್ವರನ ವಿಶೇಷ ಅನುಗ್ರಹವಿದೆಯೆಂದು ಅವನ ಸೈನಿಕರು ತಿಳಿದರು. ಅವನಿಗೆ ಬೇಕಾದ ಕುದುರೆಯನ್ನಾರಿಸಲು

ಗೀತಾಗಾಂಭೀರ್ಯ

ಶ್ರೀಕೃಷ್ಣನ ಸಮಾಜಧರ್ಮ

ಬರೆದವರು : 'ಶ್ರೀರಂಗ'

" ಸಾವಿರಾರು ವರ್ಷಗಳ ಹಿಂದೆ ಪ್ರಸ್ಥಾನತ್ರಯಿಗಳ ಮೇಲೆ ಇಪ್ಪತ್ತೊಂದು ಭಾಷ್ಯಗಳಿದ್ದುವೆಂದು ತಿಳಿದು ಬರುತ್ತದೆ. ಅವುಗಳಲ್ಲಿ ಈ ಗ್ರಂಥಕಾರರ ವಿಚಾರಗಳಂತಹ ವಿಚಾರಗಳು ಕಂಡುಬರುತ್ತವೆ..........

" ....ಪರಂಪರೆ, ಸಂಪ್ರದಾಯ, ಧರ್ಮ, ಪರಮಾತ್ಮ, ಭಕ್ತಿ, ಪ್ರಕೃತಿ, ಪುರುಷ, ಸೃಷ್ಟಿಕ್ರಮ ಮೊದಲಾದುವುಗಳಿಂದ ಶ್ರೀರಂಗರು ಅಲಿಪ್ತರಾಗಿದ್ದು, ಗೀತೆಯಂತಹ ಗ್ರಂಥದ ಬಗ್ಗೆ ಬರೆದದ್ದು ಒಂದು ರೀತಿಯಿಂದ ಅಪೂರ್ವವೆಂದೇ ಹೇಳಬಹುದು. " — ಕರ್ಮವೀರ ಹುಬ್ಬಳ್ಳಿ

ಬೆಲೆ ಸಾದಾಪ್ರತಿ ೩-೦-೦; ಉತ್ತಮಪ್ರತಿ ೩-೮-೦

ಬೇಕಾದವರು ಗ್ರಂಥಕರ್ತರಿಗಾಗಲಿ, ಜಯಂತಿ ಕಾರ್ಯಾಲಯಕ್ಕೆ ಆಗಲಿ ಬರೆದು ತರಿಸಿಕೊಳ್ಳಬೇಕು.

ಅವಕಾಶ ದೊರೆಯಿತು. ಗುಂಡಿಗೆ ಏರಿದ ಗೋವಿಂದಸಿಂಗನ ಬಲಿ ತೆಕ್ಕೊಳ್ಳುವುದಕ್ಕಾಗಿ ಜರ್ಮನರು ಬೇರೆ ಕಾಯಕವನ್ನು ಮಾಡಿದರು. ಅವರು ತಮ್ಮ ತೋಪುಗಳಿಂದ ಶೆಲ್ಲುಗಳನ್ನು (Shells) ಎಸೆಯಲಾರಂಭಿಸಿದರು. ಒಂದು ಶೆಲ್‌ಹೋಲಿನಲ್ಲಿದ್ದ (Shell-hole) ಸ್ನೇಹಿತನ "ಸಾವಿನ ದವಡೆಯಲ್ಲಿ ಯಾಕೆ ಸಿಗುತ್ತಿ?" ಎಂಬ ಶಬ್ದಗಳು ಗೋವಿಂದಸಿಂಗನ ಕಿವಿಗೆ ಬಿದ್ದುವು. ತನ್ನ ಸಂಗಡಿಗರನ್ನುಳಿಸಲು ಆತ್ಮಾಹುತಿಕೊಡಲು ಸಿದ್ಧನಾದವನು ಹಿಂದಿರುಗುವನೆ ! ಜೆಂಕಿಯ ಮಳೆಗೆ ಬೆದರುವನೆ ? ಒಂದು ಶೆಲ್ಲು (Shell) ಕುದುರೆಯ ಹಿಂಭಾಗದಲ್ಲಿ ಬಿತ್ತು. ಅದರ ಹಿಂಭಾಗವು ನಾಸುಪೆಕಾಳಿನಷ್ಟು ತುಣುಕಾಗಿ ದಿಕ್ಕು ದಿಕ್ಕುಗಳಿಗೆ ಹಾರಿಹೋಯಿತು. ಕುದುರೆಯ ನೆತ್ತರಿನಿಂದ ಗೋವಿಂದಸಿಂಗನ ಮೈಯೆಲ್ಲ ಮುಳುಗಿತ್ತು. ಅವನು ಕುದುರೆಯ ಮುಂಭಾಗಸಹಿತ ನೆಲಕ್ಕೆ ಬಿದ್ದನು. ತಾನೂ ಗಾಯಗೊಂಡಿದ್ದೇನೆಂದು ಅವನಿಗೆ ಭಾಸವಾಯಿತು. ಈ ಭಾಸದಿಂದ ಓಡಿದರೆ ಛಾವಣಿಮುಟ್ಟುವುದರಲ್ಲಿಯೇ ಸಾಯುವೆನು. ತಾನು ಮುಟ್ಟಿಸಬೇಕಾದ ಸಂದೇಶವು ಮುಟ್ಟಲಿಕ್ಕಿಲ್ಲವೆಂದು ಅವನು ಮೆಲ್ಲಗೆ ನಡೆಯಲಾರಂಭಿಸಿದನು. ಛಾವಣಿಗೆ ಮುಟ್ಟಿದಬಳಿಕ ತನಗೆ ಗಾಯವಾಗಿಲ್ಲವೆಂಬುದನ್ನೂ ತಾನು ಮೂರನೆಯಸಲ ಸಾವಿನ ಸೆಳವಿನೊಳಗಿಂದ ಪಾರಾಗಿರುವೆನೆಂಬದನ್ನೂ ಕಂಡು ಅವನಿಗೆ ಬಹಳ ಆಶ್ಚರ್ಯವಾಯಿತು. ಅವನ ದೇಹದಂತೆ ಅವನ ಸಾಹಸವೃತ್ತಿಯೂ ಅಚ್ಚಳಿಯದೆ ಉಳಿದದ್ದನ್ನು ನೋಡಿ ಸೇನಾಧಿಪತಿಗೆ ಅಭಿಮಾನವೆನಿಸಿತು. ಗೋವಿಂದಸಿಂಗನು ಮತ್ತೆ ಮರಳಿ ಹೋಗಲು ಸಿದ್ಧನಿದ್ದೇನೆಂದು ಹೇಳಿದನು. ಆದರೆ ಅಷ್ಟರಲ್ಲಿಯೆ ಬ್ರಿಟಿಶ್‌ದಂಡು ಮುನ್ನುಗ್ಗಿ ಇರುಕಿನಲ್ಲಿ ಸಿಕ್ಕಿಕೊಂಡಿದ್ದ ಗೋವಿಂದಸಿಂಗನಿದ್ದ ತಂಡದವರನ್ನು ಪಾರುಮಾಡಿತು.

ಭಾರತೀಯರ ಪಾತ್ರತೆ

ಪುರಾಣೇತಿಹಾಸಕಾಲದಲ್ಲಿಯ ಭಾರತೀಯರ ಪರಾಕ್ರಮವನ್ನು ವರ್ಣಿಸಿ, ಅವರ ವಂಶಜರು— ಗೋತ್ರಜರೆಂದು ಇಂದಿನ ಭಾರತೀಯರು ತಮ್ಮ ಪಾತ್ರತೆಯನ್ನು ಸಿದ್ಧಪಡಿಸಲು ಯತ್ನಿಸುವುದಿಲ್ಲ. ಹಿಂದಿನ ಹಾಗು ಇಂದಿನ ಯುದ್ಧಕಲೆಯಲ್ಲಿ ಮಹದಭ್ಯಂತರವಿದೆಯೆಂಬುದನ್ನು ಅರಿಯದಷ್ಟು ಭಾರತೀಯರು ಮಂದಮತಿಗಳಲ್ಲ. ಕಾಲಕ್ಕನುಸರಿಸಿ ದಂಡಿನ ಶಿಕ್ಷಣವನ್ನು ಕೊಡುವ ಏರ್ಪಾಡನ್ನು ಹಿಂದಿನವರು ಮಾಡಿದ್ದರು. ಪಾಶ್ಚಾತ್ಯರ ಹೊಸ ಯುದ್ಧಪದ್ಧತಿಯನ್ನು ಹಾಗೂ ಹೊಸ ಹೊಸ ಆಯುಧಗಳ ಉಪಯೋಗವನ್ನು ತಮ್ಮ ಸೈನಿಕರಿಗೆ ಕಲಿಸುವುದಕ್ಕಾಗಿ ಮಹಾರಾಜ ಶಿಂಧೆ ಮೊದಲಾದವರು ಪಾಶ್ಚಾತ್ಯ ಯುದ್ಧವಿದ್ಯಾ ಶಿಕ್ಷಕರ— ಶಾಸ್ತ್ರಜ್ಞರ— ಸಹಾಯ ಪಡೆದಿದ್ದರು. ಅವರು ಕೇವಲ ಕತ್ತಿ-ಕಠಾರಿಗಳನ್ನವಲಂಬಿಸಿಕೊಂಡು ಕುಳಿತಿದ್ದಿಲ್ಲ. ಹೋದ ಯುದ್ಧದಲ್ಲಿ ಕಂದಕದ ಪದ್ಧತಿಯೂ ಹೊಸತಾಗಿ ಬಳಕೆಯಲ್ಲಿ ಬಂತು. ಈ ಯುದ್ಧದಲ್ಲಿ ಬೇರೆ ಪದ್ಧತಿಗಳು ಉಪಯೋಗದಲ್ಲಿ ಬಂದಿವೆ. ನಾನಾತೆರದ ವಿಮಾನಗಳ ಸಹಾಯ ವಿಲ್ಲದೆ, ದಂಡಿನಿಂದ ಹಾಗು ನೌಕಾಪಡೆಯಿಂದ ವೈರಿಗಳನ್ನು ಜೇರಿಗೆ ತರುವುದಾಗುವುದಿಲ್ಲವೆಂಬ ಕಟು ಅನುಭವವು, ಸಕಲಶಾಸ್ತ್ರಪಾರಂಗತರಾಗಿದ್ದೇವೆಂದು ಹೊಗಳಿಕೊಳ್ಳುವ ಬ್ರಿಟಿಶರಿಗೆ ಬಂದಿದೆ. ಜರ್ಮನರಷ್ಟು ಜಪಾನಿಗಳಷ್ಟು ಸಿದ್ಧತೆ ಇಲ್ಲದ್ದರಿಂದ, ಯಶಸ್ವಿಯಾಗಿ ಅನೇಕ ಪ್ರದೇಶಗಳನ್ನು ಹಾಳುಮಾಡಿ ಅವರು ಹಿಂದೆಸರಿಯಬೇಕಾಯಿತು. ಹಿಂದೀಯರನ್ನು ಹೀಯಾಳಿಸುವ ಹಳಿಯುವ ಹೋರೆಯನ್ನು ಬಿಟ್ಟು, ಬ್ರಿಟಿಶರು ಹಿಂದಿನ ಮಹಾಯುದ್ಧದಲ್ಲಿ ಭಾರತೀಯರು ಮಾಡಿದ ಸಾಹಸದ ನೆನಪುಮಾಡಿಕೊಂಡು, ಇಂದಿನ ಮಹಾಯುದ್ಧದಲ್ಲಿ ಅವರಿಗೆ ದಂಡಿನ ಪೂರ್ಣಾಧಿಕಾರವನ್ನು ಕೊಟ್ಟು, ಅವರಲ್ಲಿ ನಂಬುಗೆ ವಿಶ್ವಾಸವನ್ನು ಹುಟ್ಟಿಸಿ, ಸ್ವ-ಪರಹಿತಸಾಧಿಸಿದ ಶ್ರೇಯಸ್ಸನ್ನು ಪಡೆಯಲೆಂದೂ ಮಾನವಕುಲದ ಪ್ರಗತಿಯನ್ನು ಮುಂದುವರಿಸಿದ ಪುಣ್ಯಪಡೆಯಲೆಂದೂ ಸರ್ವಶಕ್ತ ಪರಮೇಶ್ವರನಲ್ಲಿ ಪ್ರಾರ್ಥನೆ.

ಷಾಡ್ಗುಣ್ಯಯುಕ್ತಾ

(ಒಂದು ಚಿತ್ರ)

ಶ್ರೀ. “ ಶ್ಯಾಮೂ ” ಬಳ್ಳಾರಿ

★

ಗಂಡಹೆಂಡಿರ ಕಾದಾಟದ ಕೊಂಕುಮಾತುಗಳಲ್ಲಿಯೆ ಒಲವಿನ ಝರಿ ಹೇಗೆ ಹರಿದುಕೊಂಡು ಬರುವುದು ಗೊತ್ತೇನು? ಗೊತ್ತಿರಬಹುದಾದ ಸಂಗತಿಯೆ ಆದರೂ ಬಹುಜನರು ಗೊತ್ತು ಮಾಡಿಕೊಂಡಿರುವುದಿಲ್ಲ. ಈ ಚಿತ್ರದಲ್ಲಿಯ ಬಾಳನ್ನು ಮನಸಿನ ಕಣ್ಣಿಂದ ನೋಡಿರಿ!

★

“ಏಯ್! ಏನು ಮಾಡುತ್ತಾ ಇದ್ದೀಯೇ ? ”

“ ಏನು ? ”

“ ಕೊಂಚ ಸುಣ್ಣಬೇಕು, ತಾಂಬೂಲಕ್ಕೆ ! ”

“ ಕೋಣೆಯಲ್ಲಿ ಗಡಿಗೆಯಲ್ಲಿ ಇದೆಯಲ್ಲ ? ”

“ ನನಗೆ ಗೊತ್ತು, ಕೊಂಚ ತಂದುಕೊಡೂ ಅಂತ ಹೇಳಿದ್ದು, ತಿಳಿಯಿತೇ ? ”

“ ನಾನು ಈಗ ಗಡಿಗೆ ಮುಟ್ಟಲಾರೇ....ಅಂತ ಹೇಳಿದ್ದು ; ತಿಳಿಯಿತೇನ್ರೀ ? ”

“ ಏನೂ ? ”

“ ಮಡಿ ಉಟ್ಟಿದ್ದೇನೆ ! ”

“ ಏತಕ್ಕೆ ? ”

“ ಅಚ್ಚಿಗೆ ಮುಸುರಿ ಹಾಕಬೇಕು ! ”

“ ಆಮೇಲೆ ? ”

“ ಅಡಿಗೆಯ ಮನೆ ಸಾರಿಸಬೇಕು ! ”

“ ಸಾರಿಸಿ ? ”

“ ರಂಗವಲ್ಲಿ ! ”

“ ಹಾಕಿ— ? ”

“ ಸರೀ ! ನೀರು ಹಾಕಿಕೊಳ್ಳಬೇಕು ! ”

“ ಸ್ನಾನಮಾಡಿ— ? ”

“ ಎಸರು.”

“ ಇಷ್ಟೂ— ? ”

” ಕುಂಭ ಬೇಯಿಸಬೇಕಲ್ಲವೇ ? ಏನು ತಪ್ಪಿದರೂ ಅದು ತಪ್ಪೋಲ್ಲ ನಮಗೆ ! ಮೂರುಹೊತ್ತೂ ನೈವೇದ್ಯ ಆದರಾಗಲಿ ! ಬೀದಿ ಬೀದಿ ಮೆರೆವಣಿಗೆ ಹೊರಡಲು ರಾಯರಿಗೆ ಶಕ್ತಿಯಿರಬೇಡವೇ ? ”

“ .... ”

“ ಹೊರಡುತ್ತಾ ಇದ್ದೀನಿ ಮತ್ತೆ. ಅಚ್ಚಿ ಕಾದಿದ್ದಾಳೆ ! ”

“ ಕೊಂಚ ಸುಣ್ಣಬೇಕೆಂದರೆ, ಇಷ್ಟು ದಂಡಕ ಓದಬೇಕೇನು ? ”

“ ಒಂದು ಹೆಜ್ಜೆ ಕೋಣೆಯಲ್ಲಿ ಇಟ್ಟರೆ ಸಿಕ್ಕೋ ಸುಣ್ಣಕ್ಕೆ, ನನ್ನ ದಂಡಕ ನೀವಷ್ಟು ಸಾಗಿಸಿ ಸೆಳೆಯೋದು ಏತಕ್ಕೆ ? ”

“ .... ”

“ ಹೊತ್ತಾಗುತ್ತೆ. ನಿಮಗೇನು ? ಹೇಳುತ್ತಿರಿ ಬೇಕಾದಷ್ಟು ಸುದ್ದಿ ! ಸುಣ್ಣ ಬೇಕೋ ಬೇಡವೋ ? ತೇಲಿಸಿದರೆ, ಬಾಗಿಲು ಹಾಕಿಕೊಳ್ಳಬೇಕು ! ”

“ ಇನ್ನೂ ಮಾರು ಹೊತ್ತಿಲ್ಲ, ಆಗಲೇ ಮಡಿಯೇನು ನಿನಗೆ ? ”

“ ಇನ್ನೂ ಮೋರೆ ಸಹ ತೊಳೆದಿಲ್ಲ ; ಆಗಲೇ ಸುಣ್ಣವೇನು ನಿಮಗೆ ? ”

“ ನನ್ನ ಸುಣ್ಣಕ್ಕೆ ಈವೊತ್ತೇನು ಹೊಸದೇನೆ ? ”

“ ನನ್ನ ಮಡಿಗೆ ಮಾತ್ರ ಈವೊತ್ತು ಹೊಸದೇನು ? ”

“ .... ”

“ ಬೇಗನೇ ತೇಲಿಸಿರಿ. ಪಿಳಿಪಿಳಿ ನೋಡ್ತಾಯಿದ್ರೆ ಆಗೋಲ್ಲ ! ”

“ ಹರಟೆ ಹೆಚ್ಚಾದರೆ ಮಾತ್ರ ಆಗುತ್ತೇನು ! ಸುಣ್ಣ ತೆಗೆದು ಕೊಂಡು ಬಾ ಮತ್ತೆ ! ”

“ ಹಾಗೇ ಕೂತಿರಿ, ಹಾಗಾದ್ರೆ ! ”

“ ಹೋಗ್ತೀಯಲ್ವೇ ! ಸುಣ್ಣ ತರ್ತೀಯಲ್ವೇ ? ”

“ ಏಳ್ತೀರಲ್ಲ ? ಸುಣ್ಣ ತಂದುಕೊಳ್ಳುತ್ತೀರಲ್ಲ ? ”

“ ಇದೋ ನೋಡು. ತೀರಾ ಕೂತುಬಿಟ್ಟಿದ್ದೇನೆ.”

“ ಇದೋ ಕೇಳ್ರೀ, ತೀರಾ ಮಡಿ ಉಟ್ಟಿದ್ದೇನೆ.”

“ ಹೇಳಿದ ಮಾತು ಕೇಳೋಲ್ಲಲ್ಲ ! ”

“ ಕೇಳೋ ಮಾತು ಹೇಳೋಲ್ಲಲ್ಲ ! ”

“ .... ”

“ .... ”

“ ಸರೀ ಹೋಗು ! ”

“ ಹೋಗಲಿ, ಕೂತಿರ್ರಿ ! ”

“ ನನಗೆ ಅವಸರಕ್ಕೆ ಸಿಗದೆ ಹೋದ್ರೆ ನೋಡ್ತೀನೇಳು.”

“ ನನಗೆ ಕೆಲಸವಿಲ್ಲದೆ ಹೋದರೆ ಮಾತಾಡ್ತಾ ಕೂತಿರುತ್ತೇನೇಳ್ರಿ.”

“ .... ”

“ ಅಬ್ಬ. ಹಾಳು ಸುಣ್ಣದ ಸಲುವಾಗಿ ಇಷ್ಟು ಗೊಂದಲವಮ್ಮ !”

“ .... ”

“ ನಿಧಾನವಾಗಿ ನೋಡಿಕೊಳ್ಳಿ, ”

“ .... ”

“ .... ”

" ಹೊರಟೇ ಹೋದಳು. ಇವಳ ಕಡೆಯಿಂದ ಸುಣ್ಣ ತರಿಸಲಾರದೆ ಹೋದೆ....ನಾನೇ ಮೊದಲೇ ತಂದುಕೊಂಡಿದ್ದರೆ, ಇಷ್ಟು ಹೊತ್ತಿಗೆ ಹಾದಿಯಲ್ಲಿ ಹಾಳು ಬೆಕ್ಕನ್ನ ದಾಟುತ್ತಾಯಿದ್ದೆ!

೨

" ಒಂದು ಸಲ ಒಳಕ್ಕೆ ಬರಬೇಕು ! "

" .... "

" ನಿಮ್ಮನ್ನೇ ಕರೆದದ್ದು ! "

" .... "

" ಕಿವಿ ಕೇಳ್ಸೋದಿಲ್ಲೇನು ! "

" ಏನು ? "

" ಬೇಗ ಬಂದ್ರೆ ಉಪ್ಪಿಟ್ಟು ಹಾಕುತ್ತೇನೆ; ಇಲ್ದಿದ್ರೆ ಆಗೋಲ್ಲ!"

" ಅಂದರೇ ? "

" ತಡಮಾಡಿದರೆ, ನೀವೇ ಹಾಕಿಕೊಳ್ಳಬೇಕು ! "

" ಇದಕ್ಕಿಂತ ಅದೇ ಉತ್ತಮ ; ಹೋಗಿ ನಿನ್ನ ಕೆಲಸ ನೋಡಿಕೋ ! "

" ತಟ್ಟೆ ಸಹ ನೀವೇ ತೊಳೆದುಕೊಳ್ಳುತ್ತೀರೇನು ? "

" ಅದೇನು ? "

" ಇನ್ನ ಸ್ನಾನಮಾಡಬೇಕು ; ಅಂದ್ರೆ ತಟ್ಟೆ ನೀವೆ ತೊಳೀಬೇಕಾಗುತ್ತೆ! "

" ಹೋಗಲಿ, ಮಧ್ಯಾಹ್ನ ತೆಗೆಯುವೆಯಂತೆ ! "

" ಅಂತೂ ನೀವೀಗ ಏಳೋಲ್ಲಲ್ಲ ? "

" .... "

" ಇದೇನು ಕರ್ಮ ಅಮ್ಮಾ ! ಮಾಡಿದ್ದು ತಿನ್ನಲಿಕ್ಕೆ ಬೇಜಾರು! ....ಭೂಮಿಯಮೇಲೆ ನಮ್ಮಮ್ಮ, ಕಕ್ಕೀ ಇಬ್ಬರೇ ಕೊಟ್ಟು ಹುಟ್ಟಿದ್ದಾರೆ ! "

" ಎಂದರೇನು ? "

" ನಮ್ಮ ಕಕ್ಕಿಯ ಅಳಿಯ, ಅನಾಚಾರವಾಗುತ್ತೇನೋ ಅಂತ, ನಮ್ಮ ರತ್ನನ್ನ ಕೂಡಿಸಿ....ತಾನೇ ಸ್ವತಃ ಅಡಿಗೆ ಮಾಡುತ್ತಾನೆ. ನಮ್ಮಮ್ಮನ ಹಿರಿಯ ಅಳಿಯ ಹೊರಟೆಯಿಂದ ಹೊತ್ತಾದರೆ, ತನ್ನ ಬೆಕ್ಕ ತಟ್ಟೆ ತಾನೇ ತೊಳೆದುಕೊಳ್ಳುತ್ತಾನೆ ! "

" ಬಾಯಿ ಮುಚ್ಚು! "

" ನಂದು ಮುಗೀ ಕಣ್ರೆ....ಮುಟ್ಟಬೇಡಿರಿ! "

" ....ನಾನ್ಸೆನ್ಸ್! "

" ಅಮ್ಮೋ! ಈ ಲೋಯರ್ ಸೆಕೆಂಡರೀಗೇ ಇಷ್ಟು ಇಂಗ್ಲೀಷಾದ್ರೆ, ಇನ್ನ ಬಿಯ್ಯೇ ಆಗಿದ್ರೆ ನೆಲಾಕಾಣಿಸುತ್ತಿದ್ದಿಲ್ಲೇನೋ ಪಾಪ ! "

" .... "

" .... "

" ಚಿಪ್ಪುಟಿ ಜಗಳ ಕಾಯುತ್ತಾಳೆ ಪೋಲಿ. ನಾಲ್ಕು ಬಾರಿಸಿದರೆ ಬುದ್ಧಿ ಬರುತ್ತೆ ; ಆದರೆ—ಆದರೂ—ಇನ್ನುಮೇಲೆ ಪ್ರತಿಯೊಂದು ಕೆಲಸವನ್ನೂ ಸಕಾಲದಲ್ಲಿ ಸ್ವಯವಾಗಿ ಮಾಡಿಕೊಳ್ಳೋ ಪದ್ಧತಿ ಆಲೋಚಿಸಬೇಕು ! "

೩

" ಅಡಿಗೆ ಏನು ಈ ಹೊತ್ತು ? "

" ಅನ್ನ ಮಾಡಿದ್ದೇನೆ ! "

" ಅದಕ್ಕೆ ಆಧಾರ ಏನು ? "

" ಮೂರು ಪಾವಿನ ತಪ್ಪೇಲಿ ! "

" ತಪ್ಪೇಲಿ, ಒಲೆ, ಇನ್ನ...."

" ಸೌದೆ, ಬೆಂಕಿ, ಇಜ್ಜಲಿ.... "

" ಮಾತಾಡಿದರೆ ತಲೆಹರಟೆ ! ನಾಚಿಕೆ ಇದ್ದಿದ್ರೆ ಸರಿ ! "

" ನನಗೇಕೆ ನಾಚಿಕೆ ? ನೀವು ತಂದ ತರಕಾರಿ ಕೊಳೆತು ಹೋಗುತ್ತಾ ಇದೆಯನೋ, ಪಾಪ ! ಅಲ್ವೇ !

" ಅಜ್ಜೀನ ಕಳಿಸು ಅಂದೆನಲ್ಲ ಸಂತೆಗೆ ? "

" ನಾನು ನಿಮ್ಮನ್ನ ಹೋಗು ಅನ್ನಲಿಲ್ಲವೇ ? "

" ಅವಳಾದರೇ ಏನು ? "

" ನೀವಾದರೆ ಏನು ? "

" ಸಂತೆಯೊಳಗಿನಿಂದ ತರಕಾರಿ ನಾನು ಹೊತ್ತು ತರಬೇಕೇನು ? "

" ಒಲೆಯ ಮುಂದೆ ಕೂತು ನಾನು ಸ್ವಯವಾಗಿ ಅಡಿಗೆ ಮಾಡಬೇಕೇನು ? "

" .... "

" ನೀವು ಬೀದಿಯಲ್ಲಿ ಇಸ್ಪೇಟ್, ನಾನು ಮನೆಯಲ್ಲಿ ಕವಡೀ ಆಡುತ್ತಾ ಕುಳಿತಿದ್ರೆ .... ಎಷ್ಟು ಚೆನ್ನಾಗಿರುತ್ತೋ ಆಲೋಚನೆ ಮಾಡಿದ್ದೀರೇನು ? "

" ಮಾತಾಡಿಸಿದರೆ ನೀನು ಹದ್ದು ಮೀರುತ್ತೀಯೇ ! ಛೀ ! "

" ಹೋಗುತ್ತೀರೇನು ಕಣ್ರಿ ? "

೪

" ಅಡಿಗೆಯಾಗಿದ್ದರೆ ಬಡಿಸಬಹುದು! "

" ಈ ಹಾಳು ಊಟ ಯಾವಾಗಲೂ ಇದ್ದಿದ್ದೇ. ಈ ಮಾತ್ರದ ಮಹಾಭಾಗ್ಯಕ್ಕೆ ಆಟ ಬಿಟ್ಟು ಬಂದಿರೇನು ಪಾಪ ! "

" ಹೇಳಿ ತರಲಿಕ್ಕೇ ಬಂದೆನಲ್ಲ ! "

" ಅಹುದು. ಅಜ್ಜಿ ನಾಲ್ಕು ಸಲ ಬಂದರೂ ಸರೀ ! "

" ಅಂತೂ ಬಂದೆನಲ್ಲ ? "

" ಪಾಪ, ನೀವು ಹೀಗೆ ಬಂದಿದ್ದರಿಂದ ನಿಮ್ಮ ಸ್ನೇಹಿತರಿಗೆ ಎಷ್ಟು ಕಷ್ಟವಾಯಿತೋ ಪಾಪ ! ಹೋಗ್ರಿ, ಆಟ ಮುಗಿಸಿ ಮತ್ತೆ ಬನ್ನಿ ! "

" .... "

" ನಿಮ್ಮನ್ನೇ ! ಹೇಳ್ತಾ ಇದ್ರೆ ಹಾಗೆ ಪಿಳಿಪಿಳಿ ನೋಡ್ತೀರೇನು ? "

" ಬಡಿಸೂ ಅಂದ್ರೆ ಇದೇನು ಉಪನ್ಯಾಸ ಕಣೇ ನಿಂದು ?"

" ನೀವು ಹಾಗೆ ನಿಂತಿರಲಿಕ್ಕೇ ಬಡಿಸಬೇಕೇನು ? ಅಷ್ಟು ಆತುರವಿದೆಯೇನು ? "

" ತೀರಾ ಕೂತು ಹೊತ್ತು ಕಳೆಯೋದು ಏಕೆ-ಅಂತ !"

" ಹೋದ ಹೊತ್ತು ಹೇಗೂ ಹೋಗಿದೆ. ಇನ್ನೊಂದು ಆಟ.... ! "

" ಪ್ರಾಣಾ ತಿನ್ನದೆ ಹಾಗೇ ಇಟ್ಟು ಬದುಕಲಿಕ್ಕೆ ಬಿಡು ! ಎಲೆಯಲ್ಲಿ ನಾಲ್ಕು ಅಗುಳು ಹಾಕಿದೆಯಂದ್ರೆ, ನೀನಿನ್ನು ಕಾಶಿಗೆ ಕೂಡಾ ಹೋಗಬೇಕಾದದ್ದಿಲ್ಲ. "

" ಮತ್ತೆ ನಿಮ್ಮ ಮಾತೋ—ಮತ್ತೆ ? "

* * *

" ಸಪ್ಪನ ತೊವ್ವೆ ಎಲ್ಲೀ ? "

" ಹುಳಿಯಲ್ಲಿವೆ ನೋಡಿ, ತೊವ್ವೆಯ ಆ ಬೇಳೆಯ ಕಾಳುಗಳು ! "

" ಬೇರೇ ಮಾಡಬಾರದಾಗಿತ್ತೇನು ? "

" ಆ ರಾದ್ಧಾಂತ ಸಿದ್ಧಾಂತಗಳೆಲ್ಲ ಇದುವರೆಗೇ ಆಗಿಹೋಗಿವೆ. ಇನ್ನು ಮಾಡಿದ್ದು ನಾನು ಬಡಿಸೋದೂ, ಬಡಿಸಿದ್ದು ನೀವು ಸುಮ್ಮನೆ ಊಟಮಾಡುವುದೂ ಎರಡೇ ಬಾಕೀ ! "

" ಅಷ್ಟೇ ಏನು ? "

" ಅಬ್ಬಾ ! ಮೊಸರು ಎಷ್ಟು ಹುಳಿಯಾಗಿದೆ ? "

" ನಿನ್ನೆ ಸಪ್ಪೆಯಾಗಿದೆಯೆಂದು ಗೊಂದಲಹಾಕಿದಿರಲ್ಲ ! "

" ಸೀಯಾಗಿ ಆಗುವಂತೆ ಹೆಪ್ಪುಹಾಕಬಾರದೇ ? "

" ಸಪ್ಪೆಗೆ ಎದುರು ಹುಳಿಯಾಗಲಿ, ಸೀಯಲ್ಲ ! "

೫

" ಎಲ್ಲಿಗೊ ಪ್ರಯಾಣ ? "

" ಇನ್ನೆಲ್ಲಿಗೆ, ಮಾಮೂಲೀ ! "

" ಕೆಲಸವಿದೆ ! "

" ಏನಾದರೂ ಕೆಲಸ ಹಚ್ಚುತ್ತೀಯೇನು ? "

" ಹಳ್ಳಿಗೆ ಹೋಗಿ ಗುತ್ತಿಗೆ ಕಾಳು, ದುಡ್ಡು ತರಬೇಕು ! "

" ಕೊಂಡು ಬಿಟ್ಟೆ ! " .

" ಬಂದಮೇಲೆ ಇಸ್ಪೇಟೋ, ಚದುರಂಗವೋ ಆಡಿದ್ರೆ ಸರಿ, ಜೀವನ ಮಾತ್ರ ನಡೆಯುತ್ತೆ ! "

" .... "

" ಈವೊತ್ತು ಇದು ನಿಮಗೆ ತಪ್ಪೋಲ್ಲ ! "

" .... "

" ಹೋಗೇ ತೀರಬೇಕು ! "

" .... "

" ಅದಕ್ಕೇ ಈವೊತ್ತು ಉಪ್ಪಿಟ್ಟು ಮಾಡಿ ಹಾಕಿ, ಬೇಗನೆ ಊಟಕ್ಕೆ ಹಾಕಿದ್ದು ! ಈ ತಿಂಗಳು ಇಷ್ಟು ಕಷ್ಟಬಟ್ಟರೇ ಸರಿ, ಹತ್ತು ಖಂಡುಗ ಕಾಳೂ, ಎಂಟುನೂರು ರೂಪಾಯಿ ಕೈಗೆ ಬರುತ್ತೆ. ನಿಮಗೆ ದಿನಾಲು ಒಂದು ರೂಪಾಯಿ ದಂಡಕ್ಕೆ. ಮತ್ತೂ ವರ್ಷದ ವರಿಗೂ ಸ್ವೇಚ್ಛೆ. ಅದೃಷ್ಟಜಾತಕ ; ಕೊಟ್ಟು ಹುಟ್ಟಿದ್ದೀರಿ ! ಅದೇ ಯೆಂದೇ, ಇಲ್ಲವೆಂದೇ ; ಎಲ್ಲವೂ ನನ್ನ ಮೇಲೆ. "

"..................."

" ಗುತ್ತಿಗೆ ಹಣ ಬಾರದೆ ದಿನಕಳೆಯೋದು ಕಷ್ಟವಾಗಿದೆ. ನಿಮ್ಮ ಸಿಗರೇಟ್ ಈ ವರ್ಷದಲ್ಲಿ ಐವತ್ತು ರೂಪಾಯಿ ಸುಟ್ಟಿದೆ ! "

" ಅಹುದು ಕಣೇ ! ಅಂದಹಾಗೆ ಪೆಟ್ಟಿಗೆ ಆಗಿ ಹೋಯಿತು. ಈವೊತ್ತು ಒಂದು ರೂಪಾಯಿ ಕೊಡಬೇಕು ನೋಡು ! "

" ಮುಂಚೆ ಹಳ್ಳಿಗೆ ಹೋಗಿ ಬಂದು ನಂತರ ಕೇಳೋದು. ಇಲ್ಲಿಗೆ ಆರೇ ಮೈಲು. ಗಾಡಿಯಲ್ಲಿ ಹೋಗಿ ! "

" ರೈತರು ಈಗ ಸಿಕ್ಕುತ್ತಾರೆಯೇ ? "

" ಸಿಗದೆ ಏನು ? "

" ಹೊಲಗಳಿಗೆ ಹೋಗಿದ್ರೆ ? "

" ನೀವೂ ಹೊಲಕ್ಕೇ ಹೋಗಿ; ಬೇಡವೆಂದವರಾರು ? "

" .... "

" ಕೈ ಚಾಚಿದ್ರೆ ಲಾಭವಿಲ್ಲ. ಕೊಡ್ತೀನೆ ಅಂತ ನಾನು ಹೇಳಿದ್ದೀನೆ, ಕೊಡೋದೆ. ಆದರೆ ನೋಡ್ರಿ. ಬೇಗ, ಈಗಲೇ ಹೊರಟರೆ ಒಂದು ರೂಪಾಯಿ. ತಡ ಮಾಡಿದ್ರೆ ಅರ್ಧ ರೂಪಾಯಿ ! ಹೋಗ್ತಾ ಹೋಗ್ತಾ ಹಾದಿಯಲ್ಲಿ ಎಲ್ಲಾದರೂ ಆಟಕ್ಕೆ ಕೂತು ತಡಮಾಡಿದ್ರೆ ಮಾತ್ರ ನಾಲ್ಕೇ ಆಣೆ, ತಿಳಿಯಿತೇ ?

೬

" ಅಬ್ಬಾ ! ಹಾಳು ವಸೂಲು ! ಆಗಲಿ— "

" ಏನಾಯಿತು ಕಣ್ರೆ ? "

" ಬಿಸಿಲು ಉರಿದು ಹೋಯಿತು ! "

" ಅಯ್ಯೋ, ಪಾಪ ! ಹೋಗಿ ಉದ್ಧಾರ ಮಾಡಿದ್ದು ಯಾರನ್ನು ? "

" ಸತ್ತು ಬಂದರೇ ? "

" ಸತ್ತ ಮೇಲೆ ಹೇಗೆ ಬಂದಿರಿ ಕಣ್ರೀ ? "

" ಕೊಂಚ ನೀರಾದರೂ ಕೊಡಬಾರದೇ ? "

" ಅದರೂ ಅಂದರೆ ? "

" ಇಂಥಾ ಹೊತ್ತಿನಲ್ಲಾದರೂ ಇಷ್ಟು ಕಾಫಿ ಮಾಡಿಕೊಟ್ಟರೆ ! "

" ಮೋಸ ಕೂಡ ಹಾಕಲೇನು ? "

....

" ಇದು ನಂಗ್ಬೇಡ !"

" ಏಕೆ ? "

" ಹುಳಿಯಾಗಿರುತ್ತೆ. "

" ಕೊಂಚ ತೆಗೆದುಕೊಂಡು ನೋಡಿ. ಎಷ್ಟು ನಿಂಬೇಹಣ್ಣು ಹಾಕಿ, ತುಪ್ಪದ ವಗ್ಗರಣೆ ಕರಿಬೇವೂ ಹಾಕಿದ್ದೇನೆ ! "

“ ಇಷ್ಟು ಮಾಡಿದ್ದೀಯೇನು, ನನಗಾಗಿ ? ”

“ ನಿಮಗಾಗಿ ಮಾತ್ರವೇ ಅಲ್ಲ. ನೀವು ಕುಡಿದು ಮಿಕ್ಕಿದ್ದನ್ನ ನಾನೂ ಕುಡೀತೀನೇಳ್ರಿ. ”

※ ※ ※

“ ಎಲ್ಲೀ ದುಡ್ಡು ? ”

“ ಇದೋ ನೂರು ರೂಪಾಯಿಯವು ಐದು, ಹತ್ತು ರೂಪಾಯಿಯವು ಇಪ್ಪತ್ತೊಂಬತ್ತು, ಚಿಲ್ಲರು ಒಂಭತ್ತು ರೂಪಾಯಿ!”

“ ಕಾಳು ಎಲ್ಲಿ ? ”

“ ಬೆಳಿಗ್ಗೆ ಗಾಡಿಗಳು ಬರುತ್ತವೆ! ”

“ ಐದು ನೂರು-ಇನ್ನೂರಾ ತೊಂಭತ್ತು-ಮೇಲೆ ಒಂಭತ್ತು. ಏನು ಒಂದು ರೂಪಾಯಿ ಹಿಂದಕ್ಕೆ ತೆಗೆದೀರಲ್ಲ ? ”

“ ನೋಡು, ಇದಕ್ಕೆ ಮುಂಚೆ ನೀನೂ.......”

“ ಹೀಗೆ ಕೊಡೀ, ಹೇಳ್ತೀನೆ ! ”

“....................”

“ ಮೊದಲು ಕೊಡಿರಿ! ”

“ ಅಲ್ಲೇ ನನ್ನ ಕೈಯಿಂದ ನಿನ್ನ ಕೈಗೆ, ನಿನ್ನ ಕೈಯಿಂದ ನನ್ನ ಕೈಗೆ ! ಏನು ಈ ಹಾಳು ತಿರುಗೋದು. ಅದು ನಂದೇ ಅಲ್ವೇ ? ”

“ ದುಡ್ಡಿನ ವಿಷಯ ನಿಮಗೆ ಸ್ವಾತಂತ್ರ್ಯ ಕೊಟ್ಟರೆ ನಾಳೇ ಇಸ್ಪೇಟಿನಲ್ಲಿ ಸೋಲುತ್ತೀರಿ....ಹೀಗೆ ಮೊದಲು ಕೊಡ್ರಿ! ”

“....................”

“ ಇದೋ ತಡಮಾಡಿದ್ರೀ ಅಂದ್ರೆ, ಹಿಂದಿನ ಮಾತೇ ! ಹೊತ್ತಾದರೆ ಎಂಟಾ....”

“ ಅಬ್ಬಾ, ಕೊಲ್ಲುತ್ತೀಯೆ ? ತೊಗೋ.”

“ ಎಂಟುನೂರು ಸರಿಹೋಯಿತು ; ಇದೋ ತೊಗೊಳ್ಳಿ.”

“ ಹಾಳು ಹಟ ಸುಡ, ನಿನ್ನ ಕೈಯಿಂದ ಕೊಡಬೇಕೆಂದೇನು ? ”

“ ಶಂಖದಲ್ಲಿ ಬಂದದ್ದು ತೀರ್ಥ ! ಗಡಿಗೆಯಲ್ಲಿದ್ದರೆ ನೀರು ! ನನ್ನ ಕೈಯಿಂದ ಆಗದೆ ಹೋದರೆ, ಕೈ ಕೈಯಲ್ಲೇ ಹಾರಿಸಬೇಕು ಎಂದೇನು ? ಸಾಕು. ಕೊಂಚ ನಿಮ್ಮ ಕುದುರೆ ಇಳಿಯಿರಿ! ”

೭

“ ಏನ್ರೀ ! ನಿಮ್ಮನ್ನ ದಯೆನೋಡಬಾರದು ನೋಡ್ರಿ! ”

“ ಏನು ತಪ್ಪು ಮಾಡಿದ್ದೇನೆ ? ”

“ ಊರೆಲ್ಲಾ ತಿರಿಗಿದರೂ ಸಿಕ್ಕಲಿಲ್ಲಂತೆ.”

“ ಈ ಹೊತ್ತು ಛಾವಡಿಯಲ್ಲಿ ಹಾಕಿದ್ದೀನಿ ಮುಕಾಂ ! ”

“ ಮಾಡಿಟ್ಟ ಕಾಫೀ ತಿಂಡಿ ಆರಿಹೋಯಿತು ನಿಮ್ಮಿಂದ. ನನಗೋ ಹಾಳು ಹಸಿವು.”

“ ನೀನು ತಿನ್ನಬಾರದಾಗಿತ್ತೇ ? ”

“ ನಾಚಿಕೆಗೇಡಮ್ಮಾ ಇಂದು. ಇನ್ನು ಮೇಲೆ ನಿಮ್ಮಲ್ಲಿ ಕಲಿಯಬೇಕು! ”

“ ಬೇಗ ಕೊಡು ಮತ್ತೆ ; ನಂಗೂ ಹಸಿವೆ....”

“ ಹೌದು ನಿಂತೇ ತಿನ್ನುವಂತಿರಿ, ಇನ್ನೇನು ಕೈತೊಳೆಯೋದೇ ತಡ....”

“ ಇಲ್ಕಣೇ! ಇದೋ ಅಂಗೀ ಬಿಚ್ಚುತ್ತೇನೆ. ಆಟ ರುಚಿಯಾಗಿತ್ತು ಕಣೇ ! ”

“ ಹೋಗಿರಿ ನನಗೇನು ? ಇನ್ನು ನಾಳಿನಿಂದ ಮಧ್ಯಾಹ್ನ ಮಾಡೋಲ್ಲ. ನಿಮ್ಮಿಂದ ನನಗೂ ಉಪವಾಸ ! ಮಾಡಿದ್ದು ಇಷ್ಟುಹೊತ್ತಿಗೆ ನುಂಗಲಿಕ್ಕೆ ಹೀಗಾದ್ರೆ ಹೇಗೆ ಬಾಳೊ ? ”

“ ಇನ್ನು ಮೇಲೆ ಸರಿಯಾಗಿ ಬರುತ್ತೀನೇಳು! ”

“ .... ಇನ್ನೇನು ಆಯಿತಲ್ಲ ಹೋಗಿಬರುತ್ತೇನೆ, ಆದರೆ, ತಾಂಬೂಲದಾನ....”

“ ಹೊತ್ತಾಗುತ್ತೆ. ಅವರು ನಿಮ್ಮನ್ನ ಸೇರಿಸೋಲ್ಲ! ”

“ ಅವರ ಹಣ ಹೋಗೋದು ಬಿಡೋದು ನನ್ನ ಮೋಜು. ಅವರದೇನು ? ”

“ ಇದೋ....”

“ ನಿಮಗೆ ನಾಚಿಕೆಯಿದ್ದಿದ್ರೆ ಸರಿ. ಮಡೀಯಿಲ್ಲ, ಮೈಲಿಗೆಯಿಲ್ಲ! ರಾತ್ರಿಯಿಲ್ಲ, ಹಗಲು ಇಲ್ಲ ! ಈಗ ಬೇರೆ ಮಡಿ ಉಟ್ಕೊಗೋಬೇಕು....”

“ ಹೇಗೂ ಮೈಲಿಗೆಯಾಗಿದೆಯಲ್ಲ ?.... ಅದೇನು ತಲೆಯ ಮೇಲೇನೋ ಹುಳು....ಇಲ್ಲಿ ಬಾ. ”

“ ಈ ವಿದ್ಯೆಯೆಲ್ಲಾ ನನಗೆ ಗೊತ್ತು! ಇದರಲ್ಲಿ ನೀವು ಪಂಡಿತರೇ ! ಇದೋ ದೀಪಹಚ್ಚೋಹೊತ್ತಿಗೆ ಬರಬೇಕು ತಿಳಿಯಿತೋ ? ಇಲ್ದಿದ್ರೆ ರಾತ್ರಿ....”

೮

“ ದೀಪ ಹಚ್ಚೋದು ಅಂದ್ರೆ ಎಂಟೇನು ಲೆಕ್ಕ ಹೇಳ್ರಿ ! ”

“ ಛಳಿಯಾಗುತ್ತೆ ಕಣೇ !....”

“ ನಾನು ಕೇಳಿದ್ದಕ್ಕೆ ಇದೇನು ಉತ್ತರ ? ”

“ ಮತ್ತೆ ನಾನು ಹೇಳಿದ್ದೋ....? ”

“ ಇವರಿಗೆ ಕತ್ತಲುಮುಂಜು ಆದರೂ ಕೊಡಲಿಲ್ಲವಲ್ಲ ದೇವರು ! ದೀಪ ಹಚ್ಚೋ ಹೊತ್ತಿಗೆ ಮನೆ ಸೇರ್ತಿದ್ರು! ”

“ ನನ್ನ ಕಣ್ಣು ಹೋಗಬೇಕೂ ಅಂತೀಯೇನೇ ? ”

“ ಇಲ್ಲಿ ಈ ದೊಡ್ಡ ಮನೆಯಲ್ಲಿ, ಒಬ್ಬಳೇ ಇದ್ದು ದೆವ್ವ ಏನಾದರೂ ಬಡಿಯಬೇಕೇನು ? ”

“ ಇಷ್ಟರಲ್ಲೇ ? ”

“ ಕೊಂಚ ಮುಂಚೆ ಬಂದರೆ ಏನು ? ಬೇಡಿಕೊಂಡೆನಲ್ಲ ? ”

“ ನಾಳೆಯಿಂದ ಸರಿಯಾಗಿ ಬರುತ್ತೀನೆ; ರಿಸ್ಟುವಾಚ್ ಕೊಂಡು ಕೊಡು ಮತ್ತೆ! ”

“ ರಿಸ್ಟುವಾಚ್‌ಗಳನ್ನು ಮಾರೋ ಅವರು ಬುದ್ಧಿಯನ್ನುಕೂಡಾ ಮಾರುತ್ತಾರೇನ್ರೀ ? ”

" ಛೇ ! "

" ಅಯ್ಯೋ ಪಾಪ !...."

೯

" ಎಲೆಗಳು ಇಲ್ಲ. "

" ತಟ್ಟೆಗಳಿಡು ! "

" ರಾತ್ರಿಯಲ್ಲಿ ನಾನು ತೊಳೆಯಲಾರೆ ಕಣ್ರೀ ! "

" ಈಗ ಎಲೆ ಕೊಯ್ಯಲಿಕ್ಕೆ ನನಗೆ ಮಾತ್ರ ಕತ್ತಲಲ್ಲವೇನು ? "

" ಹಗಲೆಲ್ಲ ಏನು ಮಾಡಿದಿರಿ ? "

" ನೀನು ಮುಂಚೆಯೇ ಏತಕ್ಕೆ ಹೇಳಲಿಲ್ಲ. " ?

" ಮನೆಯಲ್ಲಿ ಏನು ಇದೆಯೋ ಏನು ಇಲ್ಲವೋ ನೋಡಿಕೋ ಬಾರದೇನು ? "

" ನೀನು ಹೇಳಿದ್ದು ತರೋದೇ ನಂದು ಜವಾಬ್ದಾರೀ ! "

" ಆದರೆ ಎಲೆ ಹಾಕಿಕೊಂಡರೆ ಬಡಿಸೋದು ನನ್ನ ಜವಾ-ಬ್ದಾರೀ ! "

* * *

" ಸಾರು ಮಾಡಿಲ್ಲವೇನು ? "

" ಮೆಣಸು ಆಗಿಹೋಗಿವೆ ! "

" ಮಜ್ಜಿಗೆಹುಳಿಯಾದರೂ ? "

" ಕರಿಬೇವು ತರಿಸಿದ್ದೀರೇನು ? "

" ಹಾಗಾದ್ರೆ ಏನು ಉಣ್ಣಬೇಕು ? "

" ಹುಳಿಯಿದೆ ನೋಡ್ರಿ. ಉಪ್ಪಿನಕಾಯಿ, ಮೊಸರೂ ಇದೆ! "

" ತುಪ್ಪ ಚೆನ್ನಾಗಿ ಕಾಸಿಲ್ಲ. "

" ನಿಮಗಾಗಿ ನಾಳೆ ಅಂಗಡೀತುಪ್ಪ ತರಿಸುತ್ತೇನೇಳಿ. ಮನೆ ಬೆಣ್ಣೆ ನಿಮಗೆ ರುಚಿ ಸಾಲದು !"

" ....ಇನ್ನು ಏಳೂ ಅಂದೆಯೇನು ? "

" ಇನ್ನು ಕೂಡ್ರೂ ಅಂತ ಮಾತ್ರ ನಾನು ಕೇಳಿದೆನೇನು ? "

" .... "

" ಅದೋ ! ಅಂದ್ರೆ, ಸಾಕು, ಏಳೋದು, ಎದ್ದು ಓಡೋದು ! ಒಬ್ಬಳೇ ಇಲ್ಲಿ ನಾನು ಹೇಗೆ ಉಣಬೇಕು ? ಪಶ್ಚಾತ್ತಾಪ ಕೂಡ ಇಲ್ಲವಮ್ಮಾ !"

" ಈಗಲೇ ಏಳೂ ಅಂದೆಯಲ್ಲ ? "

" ಅಹುದು ಮತ್ತೆ! ಏಳಲೇ ಏಳಲೇ ಅಂತ ಗೊಂದಲ ಹಾಕಿದ್ರೆ ಏನು ಮಾಡೋದು ? ಗೊತ್ತಿರಬೇಕಾಗಲಿ ! "

೧೦

" ಅದೃಷ್ಟವಂತನಾದ ಗಂಡನಿಗೆ, ಊಟಮಾಡಿ ಏಳುವಲ್ಲಿಗೆ ತಾಂಬೂಲ ಮಡಿಸಿ ಕೈಗೆ ಕೊಡೋ ಹೆಂಡತಿ ಸಿಕ್ತುತ್ತಾಳೆ ! "

" ಕೊಟ್ಟುಹುಟ್ಟಿದ ಹೆಣ್ಣುಮಗಳಿಗೆ, ತನ್ನ ಜತೆಯಲ್ಲೇ ಉಂಡು, ತನ್ನ ಜತೆಯಲ್ಲೇ ತಾಂಬೂಲ ಹಾಕಿಕೊಳ್ಳುವ ಗಂಡನು ಸಿಗುತ್ತಾನೆ ! "

* * *

" ಮಗ್ಗಲುಹಾಸಿಗೆ ಬರಸಿದ್ದೀಯೇನು ? "

" ಆಗಲೇ ತುಳಿದು ಕೊಳೆಮಾಡಿದಿರೇನ್ರೀ ! "

* * *

" ಕಣ್ಣುಮುಚ್ಚಿ ಹೋಗುತ್ತದೆ."

" ಇಷ್ಟು ಅತಿಶಯ ಆದ್ರೆ ಹೇಗೆ ಕಣ್ರಿ ? "

* * *

" ಅಬ್ಬಾ ! ಛಳಿ ಕೊಲ್ಲುತ್ತಾ ಇದೆ."

" ಶಾಲಿನ ಮೇಲೆ ರಗ್ಗು ಕೂಡ ಹೊದಿಸಲೇನು ? "

" ಹಾಗೆ ಹೋಗೋ ಛಳಿಯಲ್ಲ ; ಇನ್ನೂ ಹೆಚ್ಚು ! "

" ಅಯ್ಯೋ ! ಮಲೇರಿಯಾ ಬರುತ್ತೇನೋ ಪಾಪ ! ಕ್ವೈನಾ ತರಲೇ ? "

" ಅದಲ್ಲ ಕಣೇ ...."

" .... "

" .... "

" ಹೋಗಲಿ, ನನಗೊಬ್ಬನಿಗೇ ಏನು. ನೋಡೋಣ ! "

" ಆ ಮಾತಿನ ಮೇಲೇ ನಿಲ್ಲಿ ! "

* * *

" ಅದೇನೋ ನೋಡೇ, ಹಿತ್ತಲಿನಲ್ಲಿ ಬೆಳ್ಳಗೆ........"

" ಅಮ್ಮೋ ! ಹೆದರಿಕೆಯಾಗುತ್ತೆ ಕಣ್ರೀ ! ಒಬ್ಬಳೇ ಇಲ್ಲಿ ಮಲಗಲಾರೇ ! "

" ಈಗ ನನ್ನ ಮಾತಿನ ಮೇಲೇ ನಿಲ್ಲುತ್ತೇನೆ. ನಾನು ಕಣ್ಣು ಮುಚ್ಚಿಕೊಳ್ಳುತ್ತೇನೆ. ಕಿಟಕೀ ಹಾಕು ! "

" ಅಯ್ಯೋ ! ಇಲ್ಲಿ ನೋಡಿರಿ ! "

" ನಂಗೆ ನಿದ್ದೆ........"

" ಜೆಳಿಗ್ಗೆ ರೂಪಾಯಿ........"

" ಎಲ್ಲೀ....ಈಗ ಕೊಟ್ರೆ ನಿದ್ದೆ ಬರೋಲ್ಲ! "

" ಅಯ್ಯೋ ಪಾಪ! ಈಗ ಛಳಿ ಇಲ್ಲೇನೋ !...."

" .... "

" ಕಾಡುಕೋಣ " ದ ಗುರುತಿನ

ಕಾಗದವು

ಕನ್ನಡನಾಡಿನದು !

ಬರೆಯಲಿಕ್ಕೂ ಮುದ್ರಣಕ್ಕೂ ತಕ್ಕುದಾದುದು.

ಅಧಿಕೃತ ಪ್ರಸಾರಕರು : ಜಿ. ಕೆ. ಕೇಳಕರ

ಸ್ವದೇಶಿ ಪೇಪರ್ ಮಾರ್ಟ್, ಧಾರವಾಡ.

ಬುದ್ಧಿಯೊ...ಭಾವನೆಯೊ...?

(ವಿಷಯದ ಮತ್ತೊಂದು ಬದಿ)

ಶ್ರೀ. ರಾ. ಭ. ಹಾಸಣಗಿ ' ವಿದ್ವಾನ್ '

★

ಭಾವನೆ ಬುದ್ಧಿಗಳ ಅತಿಯೋಗದಲ್ಲಿಯೂ ಸುಖವಿಲ್ಲ; ಹೀನಯೋಗದಲ್ಲಿಯೂ ಸುಖವಿಲ್ಲ. ಇವೆರಡರ ಸಮಯೋಗದಲ್ಲಿಯೆ ವ್ಯಕ್ತಿಯ ಸುಖ, ಸಮಾಜದ ಶಾಂತಿ, ದೇಶದ ಪ್ರಗತಿ ಇವೆಲ್ಲ ಅಡಗಿಕೊಂಡಿವೆ.

★

ಮೇಲಿನ ಶಿರೋನಾಮವುಳ್ಳ ಲೇಖನಗಳೆರಡು ಜಯಂತಿಯ ೧೯೪೧ ನೆಯ ನವಂಬರ್. ೧೯೪೨ ನೆಯ ಜನವರಿ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಅವುಗಳಲ್ಲಿ ಒಂದನ್ನು ಶ್ರೀ. ಬುರ್ಲಿ ಬಿಂದು-ಮಾಧವರು, ಭಾವನೆ-ಬುದ್ಧಿಗಳಲ್ಲಿ ಯಾವುದು ಮೇಲೆಂದು ವಿಚಾರಿಸುತ್ತ, ಭಾವನೆಯು ಮೇಲಿನದೆಂದು ತಿಳಿಸುವುದಕ್ಕಾಗಿ ಬರೆದಿದ್ದಾರೆ. ಇವರ ಅಭಿಪ್ರಾಯವನ್ನು ಪಕ್ಷವಾಗಿ ಇಟ್ಟುಕೊಂಡು, ಮೇಲಿನ ಶಿರೋನಾಮದಿಂದಲೇ ಖಂಡನಾತ್ಮಕವಾದ ಲೇಖನವನ್ನು ಶ್ರೀ. ಗೌರೀಶ ಕಾಯಕಿಣಿಯವರು ಬರೆದಿದ್ದಾರೆ. ಇದೇ ಎರಡನೆಯದು. ಇವರಿಬ್ಬರಿಗೂ ಬುದ್ಧಿ-ಭಾವನೆಗಳ ಯಥಾರ್ಥಜ್ಞಾನವು ಇದ್ದಂತೆ ಕಾಣುವುದಿಲ್ಲ. ಶ್ರೀ. ಬುರ್ಲಿಯವರು ತಮ್ಮ ಅಭಿಪ್ರಾಯ-ಸಿದ್ಧಾಂತಗಳನ್ನು ವಿವೇಚಿಸಿ ಬರೆಯುವಾಗ, ಕೆಲವು ಅಸ್ಪಷ್ಟ ಹಾಗೂ ವಿಸಂಗತವಾದ ಅಭಿಪ್ರಾಯಗಳನ್ನು ಹೇಳಿದ್ದಾರೆ. ಅದರ ಖಂಡನೆ ಮಾಡಹೊರಟ ಕಾಯಕಿಣಿಯವರು ಮೊದಲಿನವರ ಅಭಿಪ್ರಾಯ, ವಿಚಾರಸರಣಿಗಳನ್ನು ಖಂಡಿಸುವ ಜೋರಿನಲ್ಲಿ, ತಮ್ಮ ಹೆಜ್ಜೆಯು ಹೇಗೆ ಬೀಳುವುದೆಂಬುದನ್ನು ನೋಡಲೇ ಇಲ್ಲ. ಅದಕ್ಕಾಗಿಯೇ ಬುರ್ಲಿಯವರಿಗಿಂತ ಹೆಚ್ಚು ಜಾರಿಬಿದ್ದಿದ್ದಾರೆ. ಇವರ ಲೇಖನವು ಶಬ್ದಗಳ ಹಾರಾಟಮಾತ್ರವಲ್ಲದೆ ವಸ್ತುವಿವೇಚನೆಯಲ್ಲಿ ನಿಂತಂತೆ ಕಾಣುವುದಿಲ್ಲ. ಅತಃ ಅದೇ ವಿಷಯವನ್ನು ಮೂರನೆಯವನಾಗಿ ನಿಂತು ನೋಡುವ ಉದ್ದೇಶದಿಂದ ಪ್ರಕೃತ ಲೇಖನದಲ್ಲಿ ಪ್ರವೃತ್ತನಾಗಿದ್ದೇನೆ.

ಇವರ ವಿಚಾರಸರಣಿಯನ್ನು ವಿವೇಚಿಸುವುದಕ್ಕಿಂತ ಮುಂಚೆ, ಇವರು ಮಾಡಬೇಕಾಗಿದ್ದ ವಾದಕ್ಕೆ ವಿಷಯವಾಗ-ಬಹುದಾದ ' ಬುದ್ಧಿ-ಭಾವನೆಗಳಾವವು ? ' ಎಂಬುದನ್ನು ಮೊದಲು ಹೇಳಬೇಕಾಗುತ್ತದೆ. ಅದನ್ನು ವಿಭಾಗಿಸಿದರೆ ಪ್ರಧಾನವಾಗಿ (೧) **ಕೇವಲ ಬುದ್ಧಿ** (೨) **ಕೇವಲ ಭಾವನೆ** (೩) **ಸಮಾನ ಬುದ್ಧಿಭಾವನೆ** (೪) **ಬುದ್ಧಿಪ್ರಧಾನ ಭಾವನೆ** (೫) ಭಾವನಾಪ್ರಧಾನಬುದ್ಧಿಗಳೆಂದು ವಿಭಾಗಿಸಬೇಕಾಗುತ್ತದೆ. ಇವುಗಳಲ್ಲಿ ಮೊದಲಿನವೆರಡು ವ್ಯವಹಾರದಲ್ಲಿ ಕೆಲಸಕ್ಕೆ ಬಾರದುವು. ಎಂದರೆ ಕೇವಲ ಬುದ್ಧಿಯವನು ಕ್ಷಣತ್ರುಟಿತವಾಗುವ ಚಾಪಲಚಿತ್ತನಾಗಿ ಕೆಲಸಕ್ಕೆ ಬರುವುದಿಲ್ಲ ; ಹುಚ್ಚುಕಪಿಯಾಗುತ್ತಾನೆ. ಅದರಂತೆಯೆ ಶುದ್ಧಭಾವನೆಯವನು ಉನ್ಮಾದಾವಸ್ಥೆಯ ಹುಚ್ಚುಭಂಗಿಯಾಗುತ್ತಾನೆ; ಅಥವಾ ವ್ಯವಹಾರಾತೀತ (ವ್ಯವಹಾರಕ್ಕೆ ಬಾರದ) ವಾದ ಆನಂದ (?) ಸಾಮ್ರಾಜ್ಯದಲ್ಲಿ ತೇಲುವವ (ಹುಚ್ಚ) ನಾಗುತ್ತಾನೆ. ಕಾರಣ ಇವರಿಬ್ಬರೂ (ಇವೆರಡೂ) ಕೆಲಸಕ್ಕೆ ಬರುವಂತಿಲ್ಲ. ಅತಃ ಇವು ವಾದಕ್ಕೆ ವಿಷಯವಾಗುವುದಿಲ್ಲ. ಹಾಗೆಯೇ ಸಮಾನ ಬುದ್ಧಿ-ಭಾವನೆ (ಯುಳ್ಳವನು)ಯು ವಾದಕ್ಕೆ ವಿಷಯವಾಗದಿರದು. ಅದು ಸರ್ವಾಪೇಕ್ಷಿತವೂ ಆವಶ್ಯಕವೂ ಉಚ್ಚವೂ ಆಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಇನ್ನುಳಿದುವು ಬುದ್ಧಿಪ್ರಧಾನಭಾವನೆ, ಭಾವನಾಪ್ರಧಾನ ಬುದ್ಧಿ. ಇವುಗಳು ವಾದಕ್ಕೆ ವಿಷಯವಾಗುತ್ತವೆ. ಇವುಗಳಲ್ಲಿ ಯಾವುದು ಮುಖ್ಯ, ಆವಶ್ಯಕ, ಅಪೇಕ್ಷಣೀಯ? ಯಾವುದು ಅಮುಖ್ಯ, ಅನಾವಶ್ಯಕ, ನಿರಪೇಕ್ಷಣೀಯ?— ಎಂದು ವಿಚಾರವು ಹುಟ್ಟುತ್ತದೆ. ಕಾರಣ ಇವರಿಬ್ಬರೂ ಇದೇ ವಿಷಯವನ್ನು ಲಕ್ಷ್ಯವಾಗಿಟ್ಟುಕೊಂಡು ವಿಚಾರಮಾಡಿರಬಹುದೆಂದು ಪ್ರಕೃತಕ್ಕೆ ಹೊರಳುವ :

ವಿಚಾರಕ್ಕೆ ವಿಷಯವಾದ ಬುದ್ಧಿ-ಭಾವನೆಗಳ ಸ್ವರೂಪವೆಂತಹದೆಂಬುವನ್ನು ಪಕ್ಷ-ಪ್ರತಿಪಕ್ಷದವರಿಬ್ಬರೂ ಸರಿಯಾಗಿ ತಿಳಿದುಕೊಂಡಿಲ್ಲ. ಅತಏವ ಅವುಗಳ ಸ್ವರೂಪವನ್ನು ಬರೆದಿಲ್ಲ. ಇವರಲ್ಲಿ ಶ್ರೀ. ಬುರ್ಲಿಯವರು ಭಾವನೆಯೆಂದರೆ ಹೃದಯ (ಮನಸ್ಸು) ಎಂದೂ ಬುದ್ಧಿಯೆಂದರೆ ತರ್ಕವೆಂದೂ ತಿಳಿದು, ತಮ್ಮ ವಿಚಾರಸರಣಿಯನ್ನು ಹೆಣೆದಿದ್ದಾರೆ. ಇದು ಸರಿಯಾದು-

ದಲ್ಲವೆಂಬುದು ಮುಂದೆ ನಾನು ಹೇಳುವ ಬುದ್ಧಿ-ಭಾವನೆಗಳ ಸ್ವರೂಪ ಬಿಡಿಸುವುದರಿಂದ ತಿಳಿಯಬಹುದು. ಇವರಂತೆಯೆ ಶ್ರೀ. ಕಾಯಕಿಣಿಯವರು ಕೂಡ ತಪ್ಪು ಬರೆದಿದ್ದಾರೆ. ಇವರು ಬುದ್ಧಿ-ಭಾವನೆಗಳ ಸರಿಯಾದ ಅರ್ಥವನ್ನು ಅಥವಾ ತಾವು ತಿಳಿದ ಸ್ವರೂಪವನ್ನು ಸ್ಪಷ್ಟವಾಗಿ ಬರೆದಿಲ್ಲ. ಒಮ್ಮೆ ಇವರು ಬುದ್ಧಿಯೂ ತರ್ಕವೂ ಒಂದೆಂಬುದನ್ನು ಒಪ್ಪುತ್ತಾರೆ. ಇನ್ನೊಮ್ಮೆ 'ಬುದ್ಧಿ ಬೇರೆ, ತರ್ಕ ಬೇರೆ' ಎಂದೂ 'ತರ್ಕವು ಬುದ್ಧಿಯ ಕಾರ್ಯವಾದ ವಿಚಾರ, ಅನುಮಾನದ ಕಟ್ಟು' ಎಂದೂ ಹೇಳುತ್ತಾರೆ. ಅದ-ರಂತೆಯೇ ಅದಕ್ಕಿಂತ ಹೆಚ್ಚಾಗಿ ಭಾವನೆಯ ವಿಷಯದಲ್ಲಿ ವೇಚಾಡಿದ್ದಾರೆ; ಬರೀ ವಾಗಾಡಂಬರದಿಂದ ಮೋಹಗೊಳಿಸಲು ಯತ್ನಿಸಿದ್ದಾರೆ. ಇವರು ಭಾವನೆಯನ್ನು ಆರಂಭದಲ್ಲಿ ಎರಡು ವಿಧವಾಗಿ ವಿಂಗಡಿಸಿದ್ದಾರೆ. 'ಜನರ ತಿಳಿಗೆಳಿಕೆಯಲ್ಲಿ ವಿಷಯವಾದ ಭಾವನೆಯೊಂದು, ಬುದ್ಧಿಯ ವಿರುದ್ಧ ಅಧಿಕಾರದ ಹಕ್ಕಿಗಾಗಿ ನಿಂತ ಸಹಜಸ್ಫೂರ್ತಿಯ ಪ್ರೇರಣಾಶಕ್ತಿಯ ಭಾವನೆಯು ಇನ್ನೊಂದು' ಎಂದು ಬಿಡಿಸಿದ್ದಾರೆ. ಹೀಗೆ ವಿಂಗಡಿಸಿ, ಮುಂದೆ ಅಲ್ಲಲ್ಲಿಯೆ ಭಾವನೆಯ ಸ್ವರೂಪವನ್ನು ಅಸ್ಪಷ್ಟ-ಸಂದಿಗ್ಧವಾದ ಅನಿಶ್ಚಿತವಾದ— ಪರಸ್ಪರ ವಿರುದ್ಧವಾದ— ಅರ್ಥಗಳನ್ನು ಕೊಡುವ ಶಬ್ದನಿಕರವನ್ನು ಎರಚಿದ್ದಾರೆ. ಒಂದುಕಡೆ ಭಾವ-ನೆಯು ಇಚ್ಛಾರೂಪವೆಂದು ಅಭಿಪ್ರಾಯ ಪಟ್ಟಿದ್ದಾರೆ. 'ಅದು ಕ್ರಾಂತಿಪ್ರವಣತೆಯ ಒಂದು ಎನಿಸಿಕೆಯೇ— ಭಾವನೆಯೇ ಸರಿ' ಎಂಬ ಮಾತಿನಿಂದಲೂ, ಇನ್ನೊಂದುಕಡೆಗೆ ಪ್ರವೃತ್ತಿಯಿಂದ ಭಾವನೆಯು ಹುಟ್ಟುವದೆಂದೂ, ಮತ್ತೊಂದೆಡೆ 'ಪ್ರವೃತ್ತಿಯಿಂದ ಹುಟ್ಟಿದ ಇಚ್ಛೆಯು ಭಾವನೆ' ಎಂದೂ ಹೇಳಿದ್ದಾರೆ. ಇದು ಪ್ರವೃತ್ತಿಗಳನ್ನು ಹೀಗೆ ಶುದ್ಧಮಾಡುವ— ತಜ್ಜನ್ಯಭಾವನೆ ......ಗತಿಯ ಪ್ರಚೋದನೆಯು ಭಾವನೆಯದಿದ್ದರೂ...." ಮುಂತಾದ ಮಾತಿನಿಂದ ತಿಳಿಯುವಂತಿದೆ. ಕ್ರಾಂತಿಪ್ರವಣತೆ ಎನಿಸಿಕೆ ಭಾವನೆ, ಪ್ರಚೋದನೆ ಇವೆಲ್ಲವೂ ಪರ್ಯಾಯಶಬ್ದಗಳೆಂದು ಕಾಯಕಿಣಿಯವರು ತಿಳಿದಂತಿದೆ. ಸಹಜಸ್ಫೂರ್ತಿಯೆ ಪ್ರೇರಣಾಶಕ್ತಿಯೆ ಭಾವನೆಯೆಂದು ಹೇಳುವಲ್ಲಿ ಕಾಯಕಿಣಿಯವರಿಗೆ ಯಾವ ಅಭಿಪ್ರಾಯವಿದೆಯೊ? ಇವೆಲ್ಲವೂ ಒಂದೇ ಎಂದೇ? ಮೊದಲಿನ ಸಹಜಸ್ಫೂರ್ತಿ-ಪ್ರೇರಣಾಶಕ್ತಿಗಳು ಪರ್ಯಾಯವಾಚಕ ಪದಗಳು— ಅದರ ಸಂಬಂಧಿಯು ಭಾವನೆಯೆಂದು ಕಾಯಕಿಣಿಯವರ ಅಭಿಪ್ರಾಯವೇನೋ ತಿಳಿಯುವಂತಿಲ್ಲ. ಕಾರಣ ಇವರು ವಸ್ತುವಿವೇಚನೆಮಾಡುವಾಗ ಸ್ಪಷ್ಟವಾಗಿ ಬಿಡಿಸದೆಯೆ, ಶಬ್ದಗಳ ಮಾಟವನ್ನು ಮಾಡಿದ್ದಾರೆಂದು ಹೇಳಬೇಕಲ್ಲದೆ, ವಿಷಯನಿರೂಪಣೆಯನ್ನಲ್ಲವೆಂದೂ ಸಹ ಹೇಳಬೇಕಾಗುತ್ತದೆ.

ಪ್ರಕೃತಕ್ಕೆ ಬೇಕಾದ ಬುದ್ಧಿ, ಭಾವನೆ, ಶ್ರದ್ಧೆ, ಇವುಗಳನ್ನು ಸ್ವರೂಪದಿಂದ ತಿಳಿಯುವುದು ಯುಕ್ತವೆನಿಸುತ್ತದೆ. ಇವುಗಳನ್ನು ಒಂದೊಂದಾಗಿ ವಿವೇಚಿಸುವ. ಬುದ್ಧಿ, ಜ್ಞಾನ ಇವೆರಡೂ ಪರ್ಯಾಯವಾಚಕ ಶಬ್ದಗಳಾಗಿವೆ. ಬುದ್ಧಿಯೆಂದರೆ ತಿಳಿವಳಿಕೆಯೆಂದು ಕನ್ನಡದಲ್ಲಿ ಹೇಳಬೇಕಾಗುತ್ತದೆ. ಬುದ್ಧಿಯು ಎಷ್ಟು ವ್ಯಾಪಕವಾಗಿದೆಯೆಂಬುದನ್ನು ನೋಡಿದರೆ, ಇವರು ತಿಳಿದ ಬುದ್ಧಿಯ ಅಸಂಬದ್ಧತೆಯು ಸ್ಪಷ್ಟವಾಗುತ್ತದೆ. ನಮಗೆ ಪ್ರಧಾನವಾಗಿ ನಾಲ್ಕು ತೆರನಾಗಿ ತಿಳಿವಳಿಕೆಯು ಬರುತ್ತದೆ. **ಪ್ರತ್ಯಕ್ಷ, ಅನುಮಿತಿ, ಉಪಮಿತಿ, ಶಾಬ್ದ**ಗಳೆಂದು. ಪಂಚೇಂದ್ರಿಯ ದ್ವಾರಾ ಬರುವ ಜ್ಞಾನಕ್ಕೆ **ಪ್ರತ್ಯಕ್ಷ**ವೆಂದು ಹೆಸರು. ಎಂದರೆ ಕಣ್ಣಿನಿಂದ ರೂಪ(ಬಣ್ಣ) ಗಳನ್ನು-ಸೌಂದರ್ಯವನ್ನು ನೋಡುವುದು. ಮೂಗಿನಿಂದ ವಾಸನೆ ತಿಳಿಯುವುದು ಮುಂತಾದುವುಗಳೆಲ್ಲ ಪ್ರತ್ಯಕ್ಷವೆಂದು ಹೆಸರು. ಸಮರ್ಪಕವಾದ ಕಾರ್ಯಕಾರಣಭಾವವನ್ನು ಊಹಿಸಿ ನಿರ್ಣಯಿಸುವ ಜ್ಞಾನಕ್ಕೆ **ಅನುಮಿತಿ ಜ್ಞಾನ**ವೆಂದು ಹೆಸರು. ಪರಸ್ಪರ ಹೋಲಿಕೆಯಿಂದ ಪದಾರ್ಥ (ವಸ್ತು) ವನ್ನು ತಿಳಿದುಕೊಳ್ಳುವುದನ್ನೇ ಉಪಮಿತಿಯೆಂದು ಹೆಸರು. ಇನ್ನೊಬ್ಬರು ಹೇಳುವ ಮಾತಿನಿಂದ ತಿಳಿದುಕೊಳ್ಳುವುದಕ್ಕೆ **ಶಾಬ್ದಜ್ಞಾನ**ವೆಂದು ಹೆಸರು. ಇಷ್ಟು ವ್ಯಾಪ್ತವಾಗಿರುವ ಬುದ್ಧಿಯ ಸ್ವರೂಪವನ್ನು ತಿಳಿದುಕೊಂಡರೆ, ಮೊದಲಿನವರಿಬ್ಬರ ಬುದ್ಧಿವಿಷಯಕವಾದ ತಿಳಿವಳಿಕೆಯು ಎಷ್ಟು ಸಂಕುಚಿತವಾದುದೂ ಅಸಮರ್ಪಕವಾದುದೂ ಆಗಿದೆಯೆಂಬುದು ಸ್ಪಷ್ಟವಾಗುವಂತಿದೆ.

ಬುದ್ಧಿಯ ಸ್ವರೂಪವನ್ನು ತಿಳಿದುಕೊಂಡ ಮೇಲೆ, ಇದಕ್ಕೂ ತರ್ಕಕ್ಕೂ ಹೋಲಿಸಿ ನೋಡಿದರೆ, 'ಬುದ್ಧಿ ಬೇರೆ ತರ್ಕ ಬೇರೆ, ಯೆಂದು ಕಾಣದೆ ಇರದು. ಆದುದರಿಂದ ಬುದ್ಧಿಯ ಕಾರಣವು ತರ್ಕವೆಂದು ಹೇಳಬೇಕಾಗುತ್ತದೆಯೇ ಹೊರತು, ಬುದ್ಧಿಯ ಕೆಲಸ ತರ್ಕವೆಂಬ ಕಾಯಕಿಣಿಯವರ ಅಭಿಪ್ರಾಯವು ಸರಿಯಾಗಿ ಕಾಣುವುದಿಲ್ಲ. ಕೆಲಸವೆಂದರೆ ಕ್ರಿಯೆ. ಅದು ಆತ್ಮನಲ್ಲಿ ಇರುತ್ತದೆಯೇ ಹೊರತು ಬೇರೆ ವಸ್ತುಗಳಲ್ಲಿರುವುದಿಲ್ಲ. ಬುದ್ಧಿಯು ಹೇಗೆ ಆತ್ಮನಲ್ಲಿರುವ ಪದಾರ್ಥ ಅಥವಾ ಶಕ್ತಿಯೊ, ಹಾಗೆಯೇ ಕ್ರಿಯೆಯೂ ಆಗಿದೆ. ಕಾಯಕಿಣಿಯವರು 'ಆ ಬುದ್ಧಿಯು ಒಂದು ಶಕ್ತಿ, ಅದರ ಕೃತಿಯು ವಿಚಾರ, ಅನುಮಾನ. ಆ ಕೆಲಸವನ್ನು ನಿಯಂತ್ರಿಸುವ ಕಟ್ಟಳೆಯೇ ತರ್ಕ!' ಎಂಬುದಾಗಿ ಬರೆದಿದ್ದಾರೆ. ಹಾಗೆಯೇ ಇದನ್ನೇ ಸಂಗೀತಕ್ಕೆ ತಾಳದ ಕಟ್ಟನ್ನು ದೃಷ್ಟಾಂತಕ್ಕೆ ಕೊಟ್ಟಿದ್ದಾರೆ. ಒಂದು ವಸ್ತುಸಿದ್ಧಿ (ತಿಳುವಳಿಕೆ) ಗಾಗಿ ಕಾರ್ಯಕಾರಣಗಳನ್ನು ಕಲ್ಪಿಸುವ ಊಹೆಗೆ ತರ್ಕವೆಂದು ಹೆಸರು, ಇದಕ್ಕೆ ಅನುಮಾನ, ತರ್ಕ-ಚರ್ಚೆ, ಮುಂತಾದ ಹೆಸರುಗಳು ಸಲ್ಲುತ್ತವೆ. ಹೀಗಿರುವಲ್ಲಿ ವಿಚಾರ, ಅನುಮಾನಗಳನ್ನು ನಿಯಂತ್ರಿಸುವ ಕಟ್ಟು ತರ್ಕವೆಂದು ಹೇಳಿದರೆ 'ತರ್ಕಕ್ಕೆ ತರ್ಕವೇ ಕಟ್ಟು' ಎಂದು ಹೇಳಿದಂತಾಗಲಿಲ್ಲವೆ? ಇದರಂತೆಯೆ ಇದರ ದೃಷ್ಟಾಂತವಿದೆ. ತಾಳಸಹಿತವಾದ ಗೀತೆಗೆ ಸಂಗೀತವೆಂದು ಹೆಸರು. ತಾಳವಿಲ್ಲದಿದ್ದರೆ ಗೀತೆ ಹಾಡು ಎಂದು ಹೇಳಿಸಿಕೊಳ್ಳುತ್ತದೆ. ಅದಕ್ಕಾಗಿಯೇ ಗೀತೆ ತಾಳ..

ಎಲ್ಲವೂ ಸೇರಿ "ಲಯಂ ಸಂಗೀತಮುಚ್ಯತೆ," ಎಂದು ಹೇಳಿದ್ದಾರೆ. ಕ್ರಿಯಾದಿಯಾದ ಸಂಗೀತಕ್ಕೆ ತಾಳವೂ ಒಂದು ಪಾದವಾಗಿದೆಯೆ ಹೊರತು, ಕಟ್ಟಳೆಯಲ್ಲ. ಹೀಗಿರುವಾಗ ಇಂತಹ ದೃಷ್ಟಾಂತಗಳನ್ನು ಕೊಟ್ಟು ವಸ್ತುವಿವೇಚನೆಮಾಡಿದರೆ, ಒಂದು ಸುಳ್ಳಿಗೆ ಇನ್ನೊಂದು ಸುಳ್ಳು ಹೇಳಿ ದೃಷ್ಟಾಂತ ಕೊಟ್ಟಂತೆ.

ಇನ್ನು ಭಾವನೆಯೆಂದರೇನೆಂಬುದನ್ನು ನೋಡುವ. ಭಾವನೆಯೆಂಬುದೊಂದು ಆವೇಶ, ಅಥವಾ ವಸ್ತುವಿನ ತನ್ಮಯತೆ. (ಬರ್ಲಿಯವರು ತಿರಸ್ಕರಿಸಿದ ಮನೋವಿಕಾರವೆಂದು ಹೇಳಿದರೂ ತಪ್ಪಾಗುವುದಿಲ್ಲ.) ಮಾನವನು ಒಂದು ವಸ್ತು (ಭಾವ) ವನ್ನು ನೋಡುತ್ತಾನೆ. ಗೋಚರವಾಗುತ್ತದೆ. ಆಗ ಆ ವಸ್ತುವು ಮನಸ್ಸಿನಲ್ಲಿ ಪ್ರತಿಬಿಂಬಿಸುತ್ತದೆ. ಭಾವಾವೇಶವಾಗುತ್ತದೆ. ಈ ಭಾವಾವೇಶಕ್ಕೆ ಭಾವನೆಯೆಂದು ಹೆಸರು. ಉನ್ಮಾದ, ಮೂರ್ಛೆ, ಕಲಾವಿದರ ಭಾವಾವೇಶ, ತತ್ತ್ವಜ್ಞಾನಿಗಳ ಬ್ರಹ್ಮಾನಂದ ಇವೆಲ್ಲವೂ ಭಾವನೆಯ ರೂಪಾಂತರಗಳಾಗಿರುತ್ತವೆ. ಅಸತ್ (ದುಷ್ಟ) ವಿಷಯಕವಾದ ಆವೇಶಕ್ಕೆ ಮೂರ್ಛೆ ಮೊದಲಾದ ಹೆಸರು; ಸತ್ (ಶುದ್ಧ) ವಿಷಯಕವಾದ ಆವೇಶಕ್ಕೆ ಆನಂದ, ತನ್ಮಯತೆ ಮುಂತಾದ ಹೆಸರು ಇವೆ. ಇವೆಲ್ಲವೂ ಅಂತಃಕರಣದಲ್ಲಿ ಉಂಟಾಗುವ ವಿಭಿನ್ನ ಅವಸ್ಥೆಗಳೇ ಹೊರತು ಬೇರೆಯಲ್ಲ. ಕಾರಣ ಹೃದಯವೇ ಭಾವನೆಯೆಂಬ ಅಭಿಪ್ರಾಯವೂ ಕಾಯಕಿಣಿಯವರ ಅಸ್ಪಷ್ಟ–ವಿರುದ್ಧವಾದ ಅಭಿಪ್ರಾಯವೂ ಸಹ ಅವಿಚಾರ-ರಮಣೀಯವಾಗಿವೆ; ಅತಏವ ಅಸಂಗತವಾಗಿವೆಯೆಂದು ಹೇಳಬೇಕಾಗುತ್ತದೆ.

ಇನ್ನು ಶ್ರದ್ಧೆಯ ವಿಷಯ: ಶ್ರದ್ಧೆಯೆಂದರೆ ನಂಬಿಕೆ. ಶಾಸ್ತ್ರದಲ್ಲಿ ಹೇಳಿದ, ಪರಂಪರಾ ಪ್ರಾಪ್ತವಾದ, ಆಪ್ತರು ಹೇಳಿದ ವಿಷಯಗಳಲ್ಲಿರುವ ವಿಶ್ವಾಸಕ್ಕೆ ನಂಬಿಕೆಯೆಂದು ಹೇಳಬಹುದು. ಇದು ನಿಘಂಟುಪ್ರಾಪ್ತವಾದ ಅರ್ಥವಿದೆ. ಇದು ಯಾವುದರಲ್ಲಿ ಒಳಪಡುವುದೆಂಬುದನ್ನು ತಿಳಿಯಬೇಕಿದ್ದರೆ, ಪ್ರಕೃತ ಲೇಖನದವರು ಹೇಳಿದ ಗೀತೆಯಲ್ಲಿಯ ಮನಸ್ಸು, ಬುದ್ಧಿ, ಅಹಂಕಾರಗಳನ್ನು ಸ್ವರೂಪತಃ ತಿಳಿದುಕೊಳ್ಳಬೇಕು. ಸಂಕಲ್ಪ-ವಿಕಲ್ಪಾತ್ಮಕವಾದದ್ದು ಮನಸ್ಸು; ಪದಾರ್ಥಬೋಧನೆಯಿಂದ ಉಂಟಾದ ನಿಶ್ಚಯವೇ ಬುದ್ಧಿ; ಅಭಿಮಾನಮೂಲಕವಾಗಿರುವುದು ಅಹಂಕಾರ—ಎಂದು ಗೀತಾದೃಷ್ಟಿಯಿಂದ ತಿಳಿದುಕೊಳ್ಳಬೇಕಾಗುತ್ತದೆ. ಶ್ರದ್ಧೆಯೆಂದರೆ ನಂಬಿಕೆಯೆಂದು ಹಿಂದೆ ಹೇಳಿದ್ದೇವೆ, ನಂಬಿಕೆಯಿದ್ದಲ್ಲಿ ಬುದ್ಧಿಯ ಗತಿಯು ಇರಲು ಸಾಧ್ಯವಿಲ್ಲ, ಕಾರಣ ಶ್ರದ್ಧೆಯು ಬುದ್ಧಿಗಿಂತ, ಭಾವನೆಯಲ್ಲಿ (ಮನಸ್ತತ್ತ್ವದಲ್ಲಿ) ಹೆಚ್ಚಾಗಿಯೇ ಒಳಪಡುತ್ತದೆ. ಕಾರಣ ಶ್ರದ್ಧೆಯ ವಿವರಣೆಯು ಸಹ ಇವರದು ತಪ್ಪಾಗಿದೆ.

ಇನ್ನು ಇವರು ಹೇಳಿರುವ ವಿಷಯ, ರೀತಿ, ಇವುಗಳನ್ನು ಸ್ವಲ್ಪ ನೋಡುವ. ಪೂರ್ವಲೇಖಕರಿಬ್ಬರೂ 'ಇವನೇನು ಭಾವನಾಪ್ರಧಾನ ಮನುಷ್ಯ!' ಎಂಬ ಜನರ ಮಾತಿನಲ್ಲಿ ತೆಗಳಿಕೆಯೇ ವಿಷಯವಾಗಿದೆಯೆಂಬುದನ್ನು ಒಪ್ಪಿಕೊಂಡಿದ್ದಾರೆ. ಕಾಯಕಿಣಿಯವರು ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿದ್ದರೂ ವಿಚಾರಸರಣಿಯಿಂದ ಒಪ್ಪಿಕೊಂಡಿದ್ದಾರೆ. ನಿಜವಾಗಿ ವಿಚಾರಿಸಿ ನೋಡಿದರೆ, ಮೇಲಿನ ಮಾತಿನಲ್ಲಿ ತೆಗಳಿಕೆಯ ಪ್ರಮಾಣದಲ್ಲಿಯೆ ಹೊಗಳಿಕೆಯೂ ಅಂತರ್ಹಿತವಾಗಿದೆಯೆಂಬುದು ತಿಳಿದುಬರುವಂತಿದೆ. ಅದನ್ನು ಹಿಂದೆ ನಾವು ಹೇಳಿದ ಭಾವನೆಯ ಅನೇಕ ಮುಖದ ವಿಭಾಗದಿಂದ ತಿಳಿಯಬಹುದು. ಸದ್ವಿಷಯಕವಾದ, ಸತ್ಫಲಕವಾದ ಭಾವನೆಯು ಹೊಗಳಿಕೆಯ ವಿಷಯವಾಗುತ್ತದೆ. ಸಾಧು, ಕವಿ, ಕಲಾವಿದ, ಸಿದ್ಧ ಇವರ ಭಾವನೆಯು ಇದಕ್ಕೆ ದೃಷ್ಟಾಂತವಾಗಿದೆ. ಉನ್ಮಾದಾದಿಗಳು ತೆಗಳಿಕೆಗೆ ವಿಷಯವಾಗುತ್ತವೆ. ಇಷ್ಟಲ್ಲದೆ ಭಾವನಾಪ್ರಧಾನನೆಂಬ ಮಾತಿನಲ್ಲಿ ಕೇವಲ ತೆಗಳಿಕೆಯೇ ವಿಷಯವಾಗಿದೆಯೆಂದು ಹೇಳುವುದು ವಿವೇಕಯುಕ್ತವಾದುದಲ್ಲ.

'ಬುದ್ಧಿಯ ಸಾಮ್ರಾಜ್ಯವೇ ಆಗಿದೆ' ಎಂಬ ಬರ್ಲಿಯವರ ಮಾತಿನಲ್ಲಿ ಏನಿದೆಯೆಂಬುದನ್ನು ನೋಡುವ. ಪ್ರಪಂಚದ ಮಾನವರನ್ನು ಪ್ರಧಾನವಾಗಿ ಭಾವನಾಪ್ರಧಾನರು, ಬುದ್ಧಿ-ಪ್ರಧಾನರು, ಶ್ರದ್ಧಾವಂತರು, ಎಂದು ಮೂರು ವಿಧವಾಗಿ ವಿಂಗಡಿಸಬಹುದು. ಇವುಗಳಲ್ಲಿ ಶ್ರದ್ಧೆಯು ಬುದ್ಧಿಯ ಅಂಶಕ್ಕಿಂತ ಭಾವನೆಯಲ್ಲಿ ಹೆಚ್ಚು ಒಳಪಡುವುದೆಂಬುದನ್ನು ಹಿಂದೆಯೇ ಹೇಳಿದೆ. ಆದರಿಂದ ಬುದ್ಧಿಪ್ರಧಾನರಲ್ಲದವರನ್ನು ಭಾವನಾವಂತರೆಂದು ಕರೆಯಲು ಬರುತ್ತದೆ. ಕಾರಣ ಬುದ್ಧಿಪ್ರಧಾನರಿಗಿಂತ ಭಾವನಾಪ್ರಧಾನರ ಸಂಖ್ಯೆಯು ಹೆಚ್ಚಿದೆಯೆಂಬುದು ಸ್ವತಸ್ಸಿದ್ಧವಾಗುತ್ತದೆಯೆಂದು ಹೇಳಬಹುದು. ಆದುದರಿಂದ ಬರ್ಲಿಯವರ "ಜಗಜ್ಜೀವನವೆಲ್ಲ ಭಾವನೆಯ ಸಾಗರದಲ್ಲಿ ತೇಲುತ್ತಿದೆ" ಎಂಬ ಮಾತಿನಲ್ಲಿ ಬಹುಮಟ್ಟಿಗೆ ಸತ್ಯಾಂಶವಿದೆಯಾದರೂ "ಎಲ್ಲಿ ನೋಡಿದರೂ ಬುದ್ಧಿಯ ಸಾಮ್ರಾಜ್ಯವೇ ಆಗಿದೆ" ಎಂಬ ಮಾತಿನಲ್ಲಿಯೂ ಅರ್ಥವಿಲ್ಲದೆಯಿಲ್ಲ. ಇದನ್ನು ಒಂದು ದೃಷ್ಟಾಂತದಿಂದ ಸ್ಪಷ್ಟಪಡಿಸಬಹುದು. ಭಾವನಾ-ಪ್ರಧಾನರು ತಗ್ಗು-ದಿನ್ನೆಗಳಿಲ್ಲದ ಮಂದವಾಗಿ ಹರಿಯುತ್ತಿರುವ ತುಂಬಿದ ಪ್ರವಾಹದಂತಿದ್ದರೆ, ಬುದ್ಧಿಪ್ರಧಾನರು ಕಲ್ಲು-ಬಂಡೆಗಳ ಮೇಲೆ ಜಿಗಿದು ಹಾರುತ್ತ ಪ್ರಚಂಡವಾಗಿ ಆರ್ಭಟಿಸುತ್ತ ಓಡುವ ನದಿಯಂತಿರುತ್ತಾರೆ. ನಿಷ್ಪಂದವಾಗಿ ಹರಿಯುತ್ತಿರುವ ಮಂದ-ಗಾಮಿನಿಯಾದ ನೂರಾರು ನದಿಗಳ ಮಧ್ಯದಲ್ಲಿ, ಒಂದೇ ಒಂದು ಆರ್ಭಟಿಸುವ ನದಿಯು ತನ್ನ ಅಸ್ತಿತ್ವವನ್ನು ಯೋಜನದವರೆಗೆ ಜಾಹೀರು ಮಾಡಿಕೊಳ್ಳುವಂತೆ, ಬುದ್ಧಿವಂತ ಜನರು ತಮ್ಮತಮ್ಮ ಮಾತುಗಾರಿಕೆಯಿಂದ ತಮ್ಮ ಅಸ್ತಿತ್ವವನ್ನೂ ಪ್ರಭುತ್ವವನ್ನೂ ಸ್ಥಾಪಿಸಿಕೊಳ್ಳುತ್ತಾರೆ; ದಿಗಂತದಲ್ಲಿ ಹರಡುತ್ತಾರೆ. ಆದುದರಿಂದ ಭಾವನಾಪ್ರಧಾನರಿಗಿಂತಲೂ ಬುದ್ಧಿಪ್ರಧಾನರ ಸಾಮ್ರಾಜ್ಯವು ಜಗತ್ತಿನಲ್ಲಿ ಎಲ್ಲೆಲ್ಲಿಯೂ ಕಾಣುತ್ತದೆ,– ಆಗಿದೆಯೆಂದು ಹೇಳಿದರೆ ಇದು ಆಲಂಕಾರಿಕವಿದ್ದರೂ ಅಸತ್ಯದ ಮಾತಲ್ಲ.

" ಭಾವನೆಯಲ್ಲಿಯೇ ಕ್ರಾಂತಿಯು— ಪ್ರಗತಿಯು— ಬೀಜ-ವಿದೆ " ಎಂಬ ಶ್ರೀ. ಬುರ್ಲಿಯವರ ಮಾತಿನ ಮೇಲೆ ' ಕ್ರಾಂತಿ-ಪ್ರಗತಿಗಳ ಬೀಜವೆಲ್ಲಿ ? ' ಎಂಬುದೊಂದು ಪ್ರಶ್ನೆಯನ್ನು ಹಾಕಿಕೊಂಡರೆ, ಅಗನ್ನು ವಿಭಾಗಿಸಿ ' ಕ್ರಾಂತಿಯೆಂದರೇನು ? ಪ್ರಗತಿಯೆಂದರೇನು ? ಬೀಜವೆಂದರೇನು ? ಎಲ್ಲಿ ಯಾವಾಗ ಹಾಗೆ ಇರುತ್ತದೆ ? ' ಮುಂತಾದ ಉಪಪ್ರಶ್ನೆಗಳನ್ನು ಇಟ್ಟುಕೊಂಡು ವಿಚಾರಿಸುತ್ತ ಹೋದರೆ, ಅದೊಂದು ದೀರ್ಘಲೇಖನವೇ ಆಗುವುದರಲ್ಲಿ ಸಂದೇಹವಿಲ್ಲ. ಆದರೆ ಅದು ಪ್ರಕೃತವಲ್ಲ. ಪ್ರಕೃತದಲ್ಲಿ 'ಶ್ರೀ. ಬುರ್ಲಿಯವರ ಮೇಲಿನ ಮಾತಿನಲ್ಲಿ ಅರ್ಧ ಸತ್ಯವಿದೆ, ಅರ್ಧ ಅಸತ್ಯವಿದೆ' ಎಂದು ಕಾಯಕಿಣಿಯವರು ಹೇಳಿ ವಿವೇಚಿಸಲು ಪ್ರಯತ್ನಿಸಿದ್ದಾರೆ. ಅದನ್ನು ಸ್ಪಷ್ಟಪಡಿಸಲು ಯತ್ನಿಸಿದ್ದಾರೆ. ಆದರೆ ಕಾಯಕಿಣಿಯವರ ಪ್ರಯತ್ನವು ಫಲಿಸಲಿಲ್ಲ ; ವಿಸಂಗತವೂ, ವಿರೋಧಯುಕ್ತವೂ ಆಗಿದೆ. ಇವರ ' ಅರ್ಧ ಸತ್ಯ, ಅರ್ಧ ಅಸತ್ಯ ' ಎಂಬುದಕ್ಕೆ, ಭಾವನೆಯಲ್ಲಿಯೇ ಕ್ರಾಂತಿಯ ವಿಚಾರವಿದೆಯೆಂದೂ, ಭಾವನೆಯಲ್ಲಿ ಪ್ರಗತಿಯ ಬೀಜವಿಲ್ಲವೆಂದೂ ತಿಳಿಯಬೇಕಾಗಿದೆಯೇ ? ಆದರೆ ಉಪಪಾದನೆಯ ದೃಷ್ಟಿಯಿಂದಲೂ ಉಪಸಂಹಾರದ ಮಾತಿನಿಂದಲೂ ಇವರ ಪೂರ್ವೋತ್ತರ ವಿರೋಧವು ಕಾಣದೆ ಇರುವುದಿಲ್ಲ. ಆರಂಭದಲ್ಲಿ ಅರ್ಧ ಸತ್ಯವಿದೆಯೆಂದು ಪ್ರತಿಜ್ಞೆಮಾಡಿ ' ಕ್ರಾಂತಿಯ ಬೀಜವು ಭಾವನೆ-ಯಲ್ಲಿಲ್ಲ ' ಎಂದು ಮುಂದಿನ ವಾಕ್ಯ ಬರೆದು ವಿವೇಚಿಸುತ್ತ ' ಭಾವನೆಯು ಕ್ರಾಂತಿಗೆ— ಅದೇಕೆ ಪ್ರತಿಯೊಂದು ಕ್ರಿಯೆಗೆ-ಬಲಿಕೊಡುವ ಶಕ್ತಿಕೇಂದ್ರ ಅಹುದು ; ಆದರೆ ಅದರ ಬೀಜವು ಮೂಲ ಪ್ರವೃತ್ತಿಗಳಲ್ಲಿಯೇ ಇರುತ್ತದೆ ' ಎಂದು ಬರೆದಿದ್ದಾರೆ. ಇಲ್ಲಿ ಶಕ್ತಿಕೇಂದ್ರವೆಂದರೇನು ? ಬಲಿಕೊಡುವುದೆಂದರೇನು ? ಬೀಜವಿರುವುದೆಂದರೇನು ? ಬೀಜದ ಅಸ್ತಿತ್ವಕ್ಕೂ ಬಲಿಕೊಡುವ ಶಕ್ತಿಯ ಅಸ್ತಿತ್ವಕ್ಕೂ ಏನಾದರೂ ಭೇದವಿದೆಯೇ? ಇದಾವುದನ್ನೂ ಬಿಡಿಸಿ ಹೇಳದೆ—ಇಲಿಯನ್ನು ಹೊಡೆಯಹೋಗಿ ಭೇತಾಳನನ್ನು ಎಬ್ಬಿಸಿದಂತೆ— ಯಾವುದೋ ವಿಚಾರಖಂಡನೆ ಮಾಡಹೋಗಿ, ಯಾವುದನ್ನೋ ತಂದೊಡ್ಡಿದಂತಾಗಿ, ಮಾಡಿದ ಕೆಲಸವು ಶಬ್ದದ ಹಾರಾಟವೋ ವಸ್ತುವಿನ ಭ್ರಾಂತಿಯ ಸಂತೆಯೋ ತಿಳಿಯದಾಗಿದೆ. 'ಇದು ಅರ್ಧಸತ್ಯದ ಮಾತು' ಎಂದು ಮುಗಿಸಿದವರು ಯಾವ ಸತ್ಯತೆಯನ್ನೂ ಕಾಣಿಸಲಿಲ್ಲ. ಇನ್ನು ಅಸತ್ಯದ ಮಾತು : ' ಭಾವನೆಯಲ್ಲಿಯೇ ಪ್ರಗತಿಯ ಬೀಜವಿರುತ್ತದೆ, ಇದು ಸತ್ಯ-ವಲ್ಲ ' ಎಂದು ಪ್ರಾರಂಭಮಾಡಿದ್ದಾರೆ. ಪ್ರತಿಯೊಂದು ಕ್ರಿಯೆಗೆ ಬಲಿಕೊಡುವ ಶಕ್ತಿಕೇಂದ್ರವಾದ ಭಾವನೆಯು, ಪ್ರಗತಿಗೆ ಅದೇಕೆ ಬಲಿಕೊಡಲಾರದು ?— ಎಂಬುದನ್ನು ಯೋಚಿಸಿದಂತೆ ಕಾಣುವುದಿಲ್ಲ. ಪ್ರಗತಿಯೂ ಒಂದು ಕ್ರಿಯಾರೂಪವೆಂಬುದನ್ನು ಕಾಯಕಿಣಿಯವರು ಅರಿತಂತೆ ಕಾಣುವುದಿಲ್ಲ. ಇದೊಂದು ಗೊಂದಲದಲ್ಲಿ ಇನ್ನೂ ಎಷ್ಟೋ ಸಿದ್ಧಾಂತ (?) ಗಳನ್ನು ಎರಚಿದ್ದಾರೆ.

ಲೋಕಪರಿಸ್ಥಿತಿಯು ಮಾನವನ ಪ್ರವೃತ್ತಿಗೆ ಕಾರಣವಾಗುತ್ತದೆಯೆಂಬುದು ಲೋಕಸಮ್ಮತವೂ ಸ್ವಭಾವಸಿದ್ಧವೂ ಆಗಿದೆ ; ಇದನ್ನು, ಪರಿಸ್ಥಿತಿ ಪ್ರವೃತ್ತಿಗಳ ಪ್ರತಿಕ್ರಿಯೆಯಿರುತ್ತದೆಯೆಂದು ಕಾಯಕಿಣಿಯವರು ಅಲ್ಲಗಳೆದಿದ್ದಾರೆ.

ಕ್ರಾಂತಿಯ ಬೀಜವೂ, ಪ್ರತಿಯೊಂದು ಚಟುವಟಿಕೆಗಳೂ ಪ್ರವೃತ್ತಿಗಳಲ್ಲಿ ಇವೆಯೆಂದು ಹೇಳುವಾಗ, ಪ್ರವೃತ್ತಿಯ ಸ್ವರೂಪ-ಜ್ಞಾನವು ಕಾಯಕಿಣಿಯವರಿಗೆ ಇದ್ದಂತೆ ಕಾಣುವುದಿಲ್ಲ. ಪ್ರವೃತ್ತಿಯೆಂದರೆ : ಯಾವುದಾದರೊಂದು ವಿಷಯದ ಮೇಲೆ ಪ್ರಾಪ್ತ್ಯಾಕಾಂಕ್ಷೆಯು ಹುಟ್ಟಿದಮೇಲೆ, ಪ್ರಾಪ್ತಿಗಾಗಿ ಮಾಡುವ ಕಾರ್ಯಾರಂಭಕ್ಕಿಂತ ಮೊದಲು ಆತ್ಮನಲ್ಲಿ ಉಂಟಾಗುವ ಚೇಷ್ಟೆ (ಚಟುವಟಿಕೆಯೆಂದರೂ ತಪ್ಪಾಗುವುದಿಲ್ಲ) ಎಂದರ್ಥವು. ಕಾಯಕಿಣಿಯವರ ಮೇಲಿನ ಮಾತಿನಿಂದ ಚಟುವಟಿಕೆಯ ಬೀಜವು ಚಟುವಟಿಕೆಯಲ್ಲಿಯೇ ಇದೆಯೆಂದು ಹೇಳಿದಂತಾಗುತ್ತದೆ. ಇದು ಎಂತಹ ವಿಚಾರಶೂನ್ಯವಾದ ಮಾತೆಂಬುದನ್ನು ಪ್ರತ್ಯೇಕ ಹೇಳಬೇಕಿಲ್ಲ.

ಹಾಗೆಯೇ ಕ್ರಿಯೆಯ ಸುಷ್ಠು-ದುಷ್ಟತೆಗಳನ್ನೂ, ಪ್ರಗತಿ-ಅಧೋಗತಿಗಳನ್ನೂ ನಿರ್ಣಯಿಸಿ........ನಿಯಂತ್ರಿಸುವ ಕೆಲಸವು ಬುದ್ಧಿಯ ಕೆಲಸವೆಂದು ಬರೆದಿದ್ದಾರೆ.' ಇಲ್ಲಿ ಧರ್ಮ-ಧರ್ಮಿಗಳ ಜ್ಞಾನವೂ, ಶಬ್ದಾರ್ಥಗಳ ಸಂಬಂಧ ಜ್ಞಾನವೂ ಸ್ವಲ್ಪವೂ ಇಲ್ಲವೆನ್ನಬೇಕಾಗುತ್ತದೆ. ಯಾಕೆಂದರೆ ಸುಷ್ಠು-ದುಷ್ಟತೆಗಳಾಗಲಿ, ಒಳಿತು ಕೆಡಕುಗಳಾಗಲಿ, ಪ್ರಗತಿ-ಅಧೋಗತಿಗಳಾಗಲಿ ಅಚೇತನವಾದ ಕ್ರಿಯೆಗಳಲ್ಲಿರಲು ಸಾಧ್ಯವಿಲ್ಲ. ಅತ-ಏವ ಇರುವುದಿಲ್ಲ. ಹೀಗಿದ್ದರೂ ಕಾಯಕಿಣಿಯವರು ಎಲ್ಲ ವಿಷಯಗಳಲ್ಲಿಯೂ ನಿಶ್ಶಂಕೆ ಬರೆದಿರುವಾಗ, ಇವರ ತುಸಿಚೆಯಲ್ಲಿ ಅದೆಷ್ಟು ಅಸಂಬದ್ಧ ವಸ್ತುವಿವೇಚನೆಯ ಬೀಜಗಳನ್ನು ಇಟ್ಟುಕೊಂಡಿದ್ದಾರೆಯೋ ತಿಳಿಯಲು ಬರುವಂತಿಲ್ಲ.

" ಮಾನವತೆಯ ಬುಡದಲ್ಲಿ ಭಾವ (ನೆ) ದ ಅಧಿಷ್ಠಾನವೇ ಹೆಚ್ಚು " ಎಂಬ ಬುರ್ಲಿಯವರ ಮಾತನ್ನು ಕಾಯಕಿಣಿಯವರು ಸಂಪೂರ್ಣ ಅಲ್ಲಗಳೆದಿದ್ದಾರೆ. ಇದರ ವಿಚಾರಕ್ಕೆ ಸಾಂಖ್ಯಮತದವರು, ಜಗತ್ತಿನ ಉತ್ಪತ್ತಿಯ ವಿಷಯದಲ್ಲಿ ಹೇಳುವ ಕಥೆಯು ಸ್ವಾರಸ್ಯವಾದ ಅರ್ಥವನ್ನೂ ತೀರ್ಪನ್ನು ಕೊಡುವಂತಿದೆ. " ಪುಷ್ಕರ-ಪಲಾಶದಂತೆ ನಿರ್ಲಿಪ್ತನಾದ ಪುರುಷನಮುಂದೆ, ಕರ್ತೃಳಾದ ಪ್ರಕೃತಿಯು ನೃತ್ಯಮಾಡಲು ಆರಂಭಿಸುತ್ತಾಳೆ. ಆ ನೃತ್ಯದಿಂದ ಭಾವಾವಿಷ್ಟನಾದ ಪುರುಷನು ಪ್ರಕೃತಿಯಲ್ಲಿ ಬೆರೆಯುವನು. ಆಗ ಜಗತ್ತು ಉತ್ಪತ್ತಿಯಾಗುತ್ತದೆ " ಎಂಬುದು ಆ ಕಥೆ. ಇದರಿಂದ ಜಗತ್ತಿನ ಆವಿರ್ಭಾವವೇ ಭಾವನಾಮೂಲಕ (ಭಾವನೆಯಿಂದ) ವಾಗಿದೆಯೆಂದು ಅರ್ಥವಾಗುತ್ತದೆ. ಆದುದರಿಂದ ಮಾನವನೇ ಏಕೆ, ಜಗತ್ತಿನ ಚರಾಚರಪ್ರಾಣಿಗಳೆಲ್ಲವೂ ಭಾವನಾಧಿಷ್ಠಾನವಾಗಿವೆಯೆಂದೇ ಹೇಳಬೇಕಾಗುತ್ತದೆ.

ಅದರಂತೆಯೇ ಜಗತ್ತಿನ ಜೀವನಪ್ರವಾಹವು ಭಾವನೆಯನ್ನೇ ಅವಲಂಬಿಸಿದೆಯೆಂದೂ ಹೇಳಬೇಕಾಗುತ್ತದೆ. ಬುದ್ಧಿಮತ್ತೆಯು ಮಾನವತೆಯ ಲಕ್ಷಣವೆಂದಮಾತ್ರಕ್ಕೆ, ಮಾನವನು ಭಾವನಾಧಿಷ್ಠಾತೃವಾಗಿರಬಾರದೆಂಬುದಕ್ಕೆ ನಿಯಾಮಕವೇನು? ಮಾನವನ ಆರಂಭ ಅಥವಾ ಬಾಲ್ಯಾವಸ್ಥೆಯಲ್ಲಿ ಭಾವನಾಮಯತೆಯು ಇದ್ದು ಜ್ಞಾನವು ಸುಪ್ತವಾಗಿರುತ್ತದೆ. ಇದು ಪ್ರಾಣಿಸಾಮಾನ್ಯವಿದೆ. ಅಂತಹ ಸುಪ್ತಜ್ಞಾನವನ್ನು—ತನಗಿತ್ತ (ಪ್ರಾಕೃತಿಕವಾಗಿ ಬಂದ) ಸಾಮಗ್ರಿಸಂಪತ್ತಿಯಿಂದ—ಜ್ಞಾನವನ್ನು ಬೆಳಸಿಪ್ರಜ್ವಲಗೊಳಿಸಿಕೊಳ್ಳಬೇಕು ; ಹಾಗೂ ಉಜ್ವಲಗೊಳಿಸಿಕೊಳ್ಳಬೇಕು. ಹೆಸರು-ಆಕಾರಗಳಿಂದ ಮಾನವನಾಗಿದ್ದರೂ ಗುಣ-ಕರ್ಮಗಳಿಂದ ಪ್ರಾಣಿಯಾದ ತಾನು, ಜ್ಞಾನೋಜ್ವಲತೆಯಿಂದ ಲಕ್ಷಣಯುಕ್ತನಾದ ಮಾನವನಾಗಬೇಕು ; ಎಂದರೆ ಬುದ್ಧಿಯನ್ನು ಸಂಪಾದಿಸಿಕೊಳ್ಳಬೇಕು. ಇಷ್ಟೇ ಅಲ್ಲದೆ "ಬುದ್ಧಿಮತ್ತೆಯು ಮಾನವನ ಲಕ್ಷಣ" ಎಂಬ ಮಾತಿಗೆ ಬೇರೆ ಅರ್ಥವಿಲ್ಲ. ಕಾಯಕಿಣಿಯವರಂತೆ ಅರ್ಥಮಾಡಿದಲ್ಲಿ, ಜ್ಞಾನಾರ್ಜನೆಯನ್ನು ಮಾಡುವ ಅವಶ್ಯಕತೆಯೇ ಮಾನವನಿಗೆ ಬರುತ್ತಿರಲಿಲ್ಲ, ಬರಲಾರದು. ಆದುದರಿಂದ ಬುರ್ಲಿಯವರ "ಮಾನವತೆಯ ಬುಡದಲ್ಲಿ ಭಾವದ ಅಧಿಷ್ಠಾನವೇ ಹೆಚ್ಚು" ಎಂಬ ಮಾತಿನಲ್ಲಿ ಅಲಂಕಾರಕ್ಕಿಂತ ಸತ್ಯತೆಯೇ ಹೆಚ್ಚಿದೆಯೆಂದು ಹೇಳಬೇಕಾಗುತ್ತದೆ.

ಶ್ರೀ. ಬುರ್ಲಿಯವರು ಕೊಟ್ಟ ರಾಜ-ಮಂತ್ರಿಗಳ ದೃಷ್ಟಾಂತವನ್ನು ಕಾಯಕಿಣಿಯವರು ಅಲ್ಲಗಳೆದಿದ್ದಾರೆ; ಅದನ್ನು ಸ್ವಲ್ಪ ನೋಡುವ: ಬುರ್ಲಿಯವರು ಕೊಟ್ಟ ದೃಷ್ಟಾಂತವು ಸರಿಯಾಗಿದೆಯೆಂದು ಸರ್ವದೃಷ್ಟಿಯಿಂದ ಹೇಳಲು ಬಾರದಿದ್ದರೂ, ಬಾಧಕವಲ್ಲವೆಂದು ಹೇಳಬೇಕಾಗುತ್ತದೆ. ವಿವಕ್ಷಿತವಾದ ಭೂಯೋಧರ್ಮಗಳು ದೃಷ್ಟಾಂತದಲ್ಲಿ ಸಾಕಾಗುತ್ತವೆಯಾದುದರಿಂದ, ದೃಷ್ಟಾಂತವನ್ನು ಅಲ್ಲಗಳೆಯುವುದು ಸರಿಯಾಗಲಾರದು. ಬುದ್ಧಿ-ಭಾವನೆಗಳ ಸ್ಥಾಯಿ ಅಸ್ತಿತ್ವದ ಕಾಲ-ಅವಕಾಶದ ವಿವೇಚನೆಯನ್ನು ಹಿಂದೆ ಸ್ವಲ್ಪವಾಗಿ ಹೇಳಿದ್ದೇವೆ. ಅದರಿಂದಲೂ ದೃಷ್ಟಾಂತದ ಸುಸಂಬದ್ಧತೆಯನ್ನು ನಾವು ತಿಳಿಯಬಹುದು. ಅದನ್ನೇ ಇನ್ನೊಮ್ಮೆ ಸ್ಪಷ್ಟವಾಗಿ ಹೇಳುವುದಾದರೆ "ಭಾವನೆಯು ಅನಾದ್ಯನಂತವಾಗಿ ಒಂದೇಸವನೆ ಹರಿಯುತ್ತಿರುವ ವಸ್ತುವಾಗಿದೆ. ಬುದ್ಧಿಯು ಆಗಾಗ ಅವಶ್ಯಕವಿದ್ದಾಗ ಬಂದು ಲಯಹೊಂದುವುದಾಗಿರುತ್ತದೆ" ಎಂದರೆ ಭಾವನೆಯು ಚಿರಸ್ಥಾಯಿ, ಬುದ್ಧಿಯು ಅಸ್ಥಿರಸ್ಥಾಯಿ! ಒಂದು ವಸ್ತುವು ಭಾವನಾಗೃಹೀತವಾಯಿತೆಂದರೆ ಅದೇ ವಸ್ತುವು ಪುನಃ ಬುದ್ಧಿಗೃಹೀತವಾಗುತ್ತದೆ. ಬುದ್ಧಿಯು ಅದೃಶ್ಯ. ಮರೆಯಾದ ಮೇಲೆಯೂ ಆ ವಸ್ತುವು ಭಾವನಾರೂಪದಿಂದ (ಸಂಸ್ಕಾರರೂಪದಿಂದ) ಅಂತಃಕರಣವಲ್ಲಿರುತ್ತದೆ. ಅಂತಃಕರಣದಲ್ಲಿ ಇರುವ ಅಥವಾ ಉಂಟಾದ ಭಾವನೆಯನ್ನು ಬಲಿಸಿ, ಶುದ್ಧಮಾಡಿ ಹರಿಯಿಸಿ, ಪವಿತ್ರವಾದ ಚರಮಸ್ಥಾನಕ್ಕೆ ಮುಟ್ಟಿಸುವ ಕೆಲಸವು ಬುದ್ಧಿಯದಾಗಿ ಇರುತ್ತದೆ. ಭಾವನೆಯು ಶುದ್ಧವೂ ಚರಮಗತವೂ ಆದ ಮೇಲೆ ಬುದ್ಧಿಯ ಆವಶ್ಯಕತೆಯಿರುವದಿಲ್ಲ. ಅಲ್ಲಿಂದ ಭಾವನೆಯು ಸರಿದಾಡದಂತೆ ನೋಡಿಕೊಳ್ಳಲು ಶ್ರದ್ಧೆಯು ಸಮರ್ಥವಿರುತ್ತದೆ. ಅತಃ ಶ್ರದ್ಧೆಯಿದ್ದರೆ ಸಾಕು. ಕಾರಣ ಬುದ್ಧಿಯು, ಭಾವನೆಯೆಂಬ ರಾಜಕುಮಾರನನ್ನು ರಾಜ್ಯನಿರ್ವಹಣದ ಸಾಮರ್ಥ್ಯವುಳ್ಳವನನ್ನಾಗಿ ಮಾಡುವ ಹೊಣೆಗಾರಿಕೆಯುಳ್ಳ ಮಂತ್ರಿಯಂತೆ ಇರುತ್ತದೆ. ಕಾರಣ ಬುರ್ಲಿಯವರ ದೃಷ್ಟಾಂತವು ಸರಿಯಾದುದಿದೆಯೆಂಬುದರಲ್ಲಿ ಸಂದೇಹವಿಲ್ಲ.

ಭಾವನೆಯು ನೀತಿಬಾಹಿರವಾಗಿದೆ. ಬುದ್ಧಿಯು ಶುದ್ಧ ಇಲ್ಲವೆ ಅಶುದ್ಧವಿರುವುದೆಂಬುದು ಕಾಯಕಿಣಿಯವರ ಸಿದ್ಧಾಂತ. ಆದರೆ ಭಾವನೆಯು ಯಾವಾಗಲೂ ಭಾವಾನುಗುಣವಾಗಿರುತ್ತದೆ. ಭಾವವು ಶುದ್ಧವಿದ್ದರೆ ಭಾವನೆಯು ಶುದ್ಧವಿರುತ್ತದೆ. ಅಶುದ್ಧವಿದ್ದರೆ ಭಾವನೆಯೂ ಅಶುದ್ಧವಿರುತ್ತದೆ. ಒಬ್ಬ ಕವಿಗೆ ಶುದ್ಧವೂ ಸುಂದರವೂ ಆದ ಭಾವವೊಂದು ಗೋಚರವಾದರೆ, ಅವನಿಗಾದ ಭಾವಾವೇಶವು ಶುದ್ಧವೆನಿಸುತ್ತದೆ. ಅದೆಂದಿಗೂ ನೀತಿಬಾಹಿರವೆಂದು ಹೇಳಿಸಿಕೊಳ್ಳುವುದಿಲ್ಲ. ಇದಲ್ಲದೆ ಕಾಯಕಿಣಿಯವರ ಸಿದ್ಧಾಂತದಂತೆ ನೋಡಿದರೆ, ಇಂದು ಲೋಕದಲ್ಲೆಲ್ಲ ಉತ್ತಮವೂ ನೈತಿಕವೂ ಎಂದು ಹೆಸರುಗೊಂಡ ಕಲಾಕೃತಿಗಳೆಲ್ಲವೂ ತ್ಯಾಜ್ಯ ಹೇಯ, ದೂರತಃ ಪರಿವರ್ಜನೀಯಗಳಾಗುತ್ತಿದ್ದುವು. ಯಾಕೆಂದರೆ ಕಲಾಕೃತಿಗಳು ಭಾವುಕರ ಭಾವನೆಯ ಪ್ರತಿಬಿಂಬವೆಂಬುದು ಸರ್ವಸಮ್ಮತ ವಿಷಯವಿದೆ. ಇದರಂತೆಯೇ ಬುದ್ಧಿಯ ವಿಷಯವೂ ಸಹ ಇರುವುದೆಂದು ಹೇಳಿದರೆ ಸಾಕೆನಿಸುತ್ತದೆ. ಹೀಗಿರುವಾಗ ಮೇಲಿನ ಸಿದ್ಧಾಂತವು ಅದಾವ ಸಿದ್ಧವೋ—ಅಂತವೋ—ತಿಳಿಯುವುದಿಲ್ಲ.

ಇನ್ನು ಕಾವಲುಗಾರನ ಕೆಲಸ, ಬುದ್ಧಿಯ ಕೆಲಸಗಳಿಗೆ ಅಭಾವಾತ್ಮಕ ಭಾವಾತ್ಮಕತೆಗಳನ್ನು ಕಲ್ಪಿಸುವಾಗ ಕಾಯಕಿಣಿಯವರು, ಅಭಾವ-ಭಾವಗಳ ಸ್ವರೂಪ ಕಲ್ಪನೆಯನ್ನು ಹೇಗೆ ಮಾಡಿಕೊಂಡಿದ್ದಾರೆಯೋ ಇದನ್ನು ಸ್ಪಷ್ಟಪಡಿಸಿ ತಿಳಿಸಿದ್ದರೆ ಚೆನ್ನಾಗಿರುತ್ತಿತ್ತು—ಎಂದಲ್ಲದೇ ಮತ್ತೇನೂ ಹೇಳುವಂತಿಲ್ಲ. ಹೇಳಿದರೆ ದೀರ್ಘವಾಗುವುದೆಂಬ ಭಯ ಬೇರೆ. ಕೇವಲ ಶಬ್ದಗಳ ಹಾರಾಟ-ಖಟಾಟೋಪಗಳು ವಸ್ತುವಿವೇಚನೆಗೆ ಬರುವುದಿಲ್ಲವೆಂಬುದನ್ನು ಕಾಯಕಿಣಿಯವರು ತಿಳಿದುಕೊಂಡಿದ್ದರೆ ಚೆನ್ನಾಗಿತ್ತು.

ಬುರ್ಲಿಯವರ ಚಿನ್ನ-ಒರೆಗಲ್ಲುಗಳ ದೃಷ್ಟಾಂತವನ್ನು ಅಲ್ಲಗಳೆದು ವಿವೇಚಿಸುವಾಗ "ಭಾವನೆಯು ಹುಟ್ಟುವತನಕ ಬುದ್ಧಿಯು ಬೇಕೇಬೇಕು. ಎಲ್ಲ ಚಿನ್ನದ ಪರೀಕ್ಷೆಯಾಗುವ ತನಕ ಒರೆಗಲ್ಲು ಬೇಕಾಗುತ್ತದೆ" ಎಂದು ಹೇಳಿದ್ದಾರೆ. ಇದರಿಂದ ಕಾಯಕಿಣಿಯವರು, ಜಗತ್ತಿನಲ್ಲಿ ಎಲ್ಲ ಚಿನ್ನದ ಒರೆಹಚ್ಚಿ ನೋಡಿದ ಮೇಲೆ ಅಥವಾ ಒಬ್ಬ ಮನುಷ್ಯನ ಹತ್ತಿರ ಸೇರಬರುವ ಎಲ್ಲ ಚಿನ್ನಗಳನ್ನು ಒರೆಹಚ್ಚಿದ ಮೇಲೆ, ಅಲ್ಲಿ ಒರೆಗಲ್ಲಿನ

ಆವಶ್ಯಕತೆಯಿರುವುದಿಲ್ಲ ; ಆದರೆ ಒಕೆಹಚ್ಚಿದ ಮೇಲೆಯೆ ಚಿನ್ನದ ಉಪಯೋಗ ಆವಶ್ಯಕತೆಗಳು ಹೆಚ್ಚಿರುತ್ತವೆಯೆಂಬುದನ್ನು ಒಪ್ಪಿಕೊಳ್ಳಲೇಬೇಕು. ಹಾಗೆಯೇ ಚರಮ ಭಾವನೆಯ ಶುದ್ಧಿಯಾದ ನಂತರ, ಬುದ್ಧಿಯ ಆವಶ್ಯಕತೆಯೂ ಇರುವುದಿಲ್ಲ. ಮತ್ತು ಸಂದೇಹಕ್ಕೆ ಎಡೆಯಿಲ್ಲ. ಅಥವಾ ಬಂಗಾರದ ನೀರನ್ನು ಉಜ್ಜಿ ತಿಕ್ಕುವ ಆವಶ್ಯಕತೆಯು ಹೇಗಿರುವುದಿಲ್ಲವೋ, ಅದರಂತೆಯೇ ಶುದ್ಧವಾದ ಭಾವನೆಯ ಶೋಧನೆಗೂ ಬುದ್ಧಿಯ ಆವಶ್ಯಕತೆ ಇರುವುದಿಲ್ಲವೆಂಬ ಅಭಿಪ್ರಾಯವು ಹೊರಬೀಳುವುದೆಂಬ ಕಲ್ಪನೆಯು ಕಾಯಕಿಣಿಯವರಿಗೆ ಹೊಳೆಯದೆ ಇರುವುದು ಆಶ್ಚರ್ಯದ ಸಂಗತಿಯಾಗಿದೆ.

ಬುದ್ಧಿ-ಭಾವನೆಗಳಲ್ಲಿ ಪ್ರತಿಸ್ಪರ್ಧಿತೆಯೇ ಇಲ್ಲವೆಂದು ಹೇಳುವುದಕ್ಕೆ ಇವೆರಡೂ ಏಕಜಾತೀಯವಲ್ಲವೆಂಬುದನ್ನು ಕಾರಣವನ್ನಾಗಿ ಹೇಳಿದ್ದಾರೆ. ಆದರೆ ಬುದ್ಧಿ-ಭಾವನೆಗಳೆರಡೂ ಆತ್ಮನ ವಿಶೇಷ ಗುಣಗಳಾಗಿವೆ. ಆ ಅಂಶದಿಂದ ಸ್ಪರ್ಧಾರ್ಹತೆ ಇದೆಯೆಂಬುದು ಕಾಯಕಿಣಿಯವರಿಗೆ ತಿಳಿಯಲಿಲ್ಲ. ಅದಲ್ಲದೆ ರಾಜ-ಪ್ರಜೆಗಳಲ್ಲಿ, ಗುರು-ಶಿಷ್ಯರಲ್ಲಿ, ನಿಯಮ-ನಿಯ್ಯಾಮಕರಲ್ಲಿಯೂ ಸಹ ವಿವಕ್ಷಿತವಾದ ಒಂದು ಶಕ್ತಿಯ ಸ್ಪರ್ಧೆಯು ನಡೆಯುತ್ತದೆ. ಅದರಂತೆ ಪರೀಕ್ಷ್ಯ-ಪರೀಕ್ಷಕರಲ್ಲಿಯೂ ಒಂದಂಶದಿಂದ ಸ್ಪರ್ಧೆಯು ನಡೆಯುವುದು. ಆದುದರಿಂದ ಬುದ್ಧಿ-ಭಾವನೆಗಳಲ್ಲಿ ಸ್ಪರ್ಧಾ ಸ್ವರೂಪಯೋಗ್ಯತೆಯೇ ಇಲ್ಲವೆಂಬ ಶ್ರೀ. ಕಾಯಕಿಣಿಯವರ ವಿಚಾರವು ಯುಕ್ತವಲ್ಲ.

'ಜೀವನದಲ್ಲಿ ತರ್ಕಕ್ಕೆ ಅಷ್ಟೊಂದು ಪ್ರತಿಷ್ಠೆಯೇ ಇಲ್ಲ' ಎಂಬುದು ಶ್ರೀ. ಬುರ್ಲಿಯವರ ಮತ. ಅದು ತೀರ ಸುಳ್ಳೆಂಬುದು ಕಾಯಕಿಣಿಯವರ ಹಟ. ಇದನ್ನು ಸ್ವಲ್ಪ ನೋಡುವಾಗ. ಕಾಯಕಿಣಿಯವರು 'ಜೀವನದಲ್ಲಿ' ಎಂಬ ಶಬ್ದಕ್ಕೆ ವ್ಯಾಪ್ತಿಯನ್ನು ತಿಳಿಯದೆ, ವ್ಯಾಪಕವಾದ ಅರ್ಥ ಕೊಡುತ್ತದೆಯೆಂದು ಹೇಳಿ, ಅನುಭವದ ಸಾಕ್ಷಿಗೆ ಹಾರಿದ್ದಾರೆ. ಆ ಅನುಭವವನ್ನು ಸಹ ತಮ್ಮ ವೈಯಕ್ತಿಕ ಅನುಭವವನ್ನೇ ಹಿಡಿದಿದ್ದಾರೆ. ವಿಚಾರ-ವಾದಗಳ ಸಮಯದಲ್ಲಿ, ವೈಯಕ್ತಿಕ ಅನುಭವಸಾಕ್ಷಿಯು ಸ್ವಪಕ್ಷದ ನಿರುತ್ತರತೆಯ ಪರ್ಯಾಯಶಬ್ದವಿರುತ್ತದೆ. ಅದು ಸೋಲಿನ ಚಿಹ್ನೆಯೆಂದು ಹೇಳಿಸಿಕೊಳ್ಳುತ್ತದೆಂಬುದು ಕಾಯಕಿಣಿಯವರಿಗೆ ತಿಳಿದಂತೆ ಕಾಣದು. ಪ್ರಕೃತ ಬುರ್ಲಿಯವರ 'ಜೀವನದಲ್ಲಿ' ಎಂಬ ಶಬ್ದಕ್ಕೆ 'ಮಾನವನ ಜೀವನದಲ್ಲಿ' ಎಂದು ಅರ್ಥಮಾಡಿಕೊಂಡರೂ, ಅನಾದ್ಯನಂತವಾದ (ನಮಗೆ ತಿಳಿಯದ ಆದ್ಯಂತಗಳುಳ್ಳ) ಅಖಂಡ ಬ್ರಹ್ಮಾಂಡದೊಳಗಿನ ಮಾನವರ ಜೀವನ ಪ್ರವಾಹದಲ್ಲಿ ತರ್ಕಕ್ಕೆ ಯಾವ ಸ್ಥಾನವಿದೆಯೆಂಬುದನ್ನು ವಿಚಾರಿಸಿದರೆ ಅತ್ಯಲ್ಪವೆಂದೇ ಹೇಳಬೇಕಾಗುತ್ತದೆ. ಮಾನವ ಸಮುದಾಯದಲ್ಲಿ ಬುದ್ಧಿಜೀವಿ(ಪ್ರಧಾನ)ಗಳ ಸಂಖ್ಯೆಯೇ ಬಹಳ ಕಡಿಮೆಯಿರುತ್ತದೆ. ಆ ಬುದ್ಧಿಪ್ರಧಾನರಲ್ಲಿಯೂ ತಾರ್ಕಿಕರ ಸಂಖ್ಯೆ ಕಡಿಮೆಯಿರುತ್ತದೆ. ತಾರ್ಕಿಕರಾದರೂ ಪ್ರತಿನಿತ್ಯವೂ ತರ್ಕ ಮಾಡುತ್ತಲೇ ಇರುವರೆಂದು ಹೇಳಲು ಸಾಧ್ಯವಿಲ್ಲ. ದಿವಸದಲ್ಲಿಯಾದರೂ ಕೆಲವು ವೇಳೆಯಲ್ಲಿ—ವಸ್ತುನಿರ್ಣಯ, ವಾದ, ಚರ್ಚೆ, ವಿಚಾರವಿನಿಮಯಗಳ ಕಾಲದಲ್ಲಿ ಮಾತ್ರ— ಉಪಯೋಗಿಸುತ್ತಾರೆ. ಎಂದರೆ ಮೇಲೆ ಹೇಳಿದ ಕೆಲವು ನಿಯಮಿತ ಸಂದರ್ಭಗಳಲ್ಲಿ ಮಾತ್ರ ತರ್ಕಕ್ಕೆ ಸ್ಥಾನವಿದೆಯೇ ಹೊರತು, ಬೇರೆಯ ಕಾರ್ಯರಂಗಾದಿ ಜೀವನದ ಬಹುಭಾಗದಲ್ಲಿ ತರ್ಕಕ್ಕೆ ಎಡೆಯಿರಲು ಸಾಧ್ಯವಿಲ್ಲ ; ಅತಏವ ಇರುವುದಿಲ್ಲ. ಆದುದರಿಂದ ಬುರ್ಲಿಯವರ "ಜೀವನದಲ್ಲಿ ತರ್ಕಕ್ಕೆ ಅಷ್ಟೊಂದು ಪ್ರತಿಷ್ಠೆಯಿಲ್ಲ ; ಕೆಲವು ವಿಶೇಷ ಸಮಯಗಳಲ್ಲಿಯೇ ತರ್ಕದ ಉಪಯೋಗ" ಎಂಬ ಮಾತು ನಿಜವಾಗಿಯೂ ಸತ್ಯಭೂಯಿಷ್ಠವಾಗಿದೆ. ಇದನ್ನು ತಿಳಿಯದೆ ಸುಮ್ಮನೇ ಹಾರಾಡುವುದು ಕಾಯಕಿಣಿಯಂತಹವರಿಗೆ ಶ್ರೇಯಸ್ಕರವೇ ?

ಇನ್ನೊಂದು ಕಡೆ "ಬುದ್ಧಿಯ ಪ್ರತಿಕ್ರಿಯೆ ಆಶ್ಚರ್ಯದ್ದು, ಪ್ರಶಂಸೆಯದು" ಎಂದು ಕಾಯಕಿಣಿಯವರು ಬರೆದಿದ್ದಾರೆ. ಹಾಗಾದರೆ ಆಶ್ಚರ್ಯ, ಪ್ರಶಂಸೆಗಳು ಬುದ್ಧಿಯ ಪ್ರತಿಬಂಧಕ, ವೈರಿಗಳೆಂದು ಇವರ ಸಿದ್ಧಾಂತವೇ ? ನಾವು ತಿಳಿದಂತೆ ಪ್ರತಿಕ್ರಿಯೆಯೆಂಬ ಶಬ್ದಕ್ಕೆ 'ಮುಯ್ಯಿ' ಎಂಬ ಅರ್ಥವನ್ನು ಮಾತ್ರ ರೂಢಿಯಲ್ಲಿ ಕಂಡಿದ್ದೇವೆ. ಅಥವಾ ಈ ತಮ್ಮ ಲೇಖನದಲ್ಲಿ ಬರೆದ ಕೆಲವು ಶಬ್ದಗಳಿಗೆ ಕಾಯಕಿಣಿಯವರು ಬೇರೆ ಸ್ವತಂತ್ರವಾಗಿ ಸಂಕೇತಗಳನ್ನು ಕಲ್ಪಿಸಿಕೊಂಡಿದ್ದಾರೆಯೇ ? ಹಾಗಿದ್ದರೆ ವೈಯಕ್ತಿಕ ಸಂಕೇತಾರ್ಥವನ್ನು ಕಲ್ಪಿಸಿ, ರೂಢ್ಯರ್ಥದ ಶಬ್ದವನ್ನು ಪ್ರಯೋಗಿಸುವುದು ಸಾರ್ವಜನಿಕ ದೃಷ್ಟಿಯಿಂದ ಹಿತವಾಗಲಾರದಲ್ಲವೆ ?

'ಅಧಿಷ್ಠಾನ'ವೆಂದರೇನು ? 'ಪ್ರತಿಷ್ಠೆ'ಯೆಂದರೇನು ? ಎರಡೂ ಸಮಾನಾರ್ಥಕವೇ ? ಸ್ವತಂತ್ರವೆಂದರೇನು ?—ಎಂದು ಕಾಯಕಿಣಿಯವರು ಪ್ರಶ್ನಿಸಿದ್ದಾರೆ. ನಿಜ. ಇವೆರಡೂ ಸಮಾನಾರ್ಥಕವೆಂದು ಸಿದ್ಧಮಾಡಿ ತೋರಿಸಬಹುದು. ಇವೆರಡೂ ಶಬ್ದಗಳು ಸ್ಥಾಧಾತುವಿನಿಂದ ನಿಷ್ಪನ್ನವಾದುವು. ಅಧಿ, ಮತ್ತು ಪ್ರತಿ ಎಂಬ ಉಪಸರ್ಗಗಳಿಂದ ವಿಭಿನ್ನವಾಗಿವೆ. ಆದರೆ ರೂಢಿಯಲ್ಲಿ ಇವೆರಡೂ ಶಬ್ದಗಳು ವಿಭಿನ್ನವಾದ ಅರ್ಥಗಳಲ್ಲಿ ಪ್ರಯುಕ್ತವಾಗುತ್ತವೆ. ಅಧಿಷ್ಠಾನವೆಂದರೆ 'ಸ್ವತಃ ಸಿದ್ಧವಾಗಿರುವ ಉನ್ನತಸ್ಥಾನ'ವೆಂದೂ, ಪ್ರತಿಷ್ಠೆಯೆಂದರೆ 'ಸ್ವಭಾವತಃ ಇಲ್ಲದ ಸ್ಥಾನವನ್ನು ಕಾಲಾನುಕ್ರಮದಲ್ಲಿ ಒದಗಿಸಿಕೊಡುವ ಅಥವಾ ಪಡೆದ ಸ್ಥಾನ' ಎಂದೂ ವ್ಯವಹಾರದಲ್ಲಿ ಅರ್ಥವಿದೆ. ಇವುಗಳಲ್ಲಿ ಅಧಿಷ್ಠಾನವು ಭಾವನೆಗಿದೆ; ಪ್ರತಿಷ್ಠೆಯನ್ನು ಬುದ್ಧಿಯು ಪಡೆದಿದೆಯೆಂದು ಹೇಳಬಹುದು. 'ಸ್ವತಂತ್ರವೆಂದರೇನು ?' ಎಂಬುವ ಕಾಯಕಿಣಿಯವರ ಪ್ರಶ್ನೆಗೆ "ಇತರರ ಸಹಾಯವನ್ನು ಅಪೇಕ್ಷಿಸದೆ ಇರುವುದು ಸ್ವತಂತ್ರವಾದುದು" ಎಂದು ಹೇಳಬಹುದು. ಇದೂ ಸಹ ಬುದ್ಧಿಗಿಂತ ಭಾವನೆಗೇ ಹೆಚ್ಚು ಅನ್ವಯಿಸುತ್ತದೆ ಎಂಬುದನ್ನು ಈ ಲೇಖನದಲ್ಲಿಯ ಹಿಂದಿನ ವಿವರಣೆ-ಸಂದರ್ಭಗಳಿಂದ ತಿಳಿಯು-

ವಂತಿದೆ. ಬುದ್ಧಿಯನ್ನೇ ಕುದುರೆಯನ್ನಾಗಿ ಮಾಡಿದ—ಎಂದರೆ ಹಿಡಿತವಿಲ್ಲದ ಬುದ್ಧಿಯಿಂದ—ಕುತರ್ಕದಿಂದ ಬುರ್ಲಿಯವರು ಹೇಳಿದಂತೆ ಭೀತಿ, ಹೃದಯಕಂಪಾದಿಗಳು ಉಂಟಾಗುವುದರಲ್ಲಿ ಸಂದೇಹವಿಲ್ಲ. ಆದರೆ ಮಿತಹಿತ ಬುದ್ಧಿಯಿಂದ ಅದು ಆಗಲಾರದು. '**ನಿರ್ದಯತೆ, ಪಶುತ್ವಾದಿಗಳು ಬುದ್ಧಿ-ತರ್ಕಗಳಿಂದ ಬರುವುವು**' ಎಂಬ ಬುರ್ಲಿಯವರ ಮಾತು ಸತ್ಯವಲ್ಲ, ಅವು ಲೋಭ, ದರ್ಪ ಅಹಂಕಾರಾದಿಗಳಿಂದ ಉಂಟಾಗತಕ್ಕ ವಸ್ತುಗಳು. ನಿರ್ದಯತೆ, ಪಶುತ್ವಾದಿಗಳ ಜೊತೆಗೆ, ಧೂರ್ತ, ವಿಧ್ವಂಸ, ದೀರ್ಘಸೂತ್ರಿತ್ವಾದಿಗಳನ್ನು ಸೇರಿಸುವುದು ಯುಕ್ತವೆನಿಸುವುದಿಲ್ಲ. ಇವುಗಳಲ್ಲಿ ಒಂದು ದೋಷ, ಇನ್ನೊಂದು ಗುಣ. ಒಂದು ಹೇಯ, ಇನ್ನೊಂದು ಉಪಾದೇಯವಾಗಿವೆ. ದೀರ್ಘಸೂತ್ರಿಯೆಂಬುದಕ್ಕೆ ಗೀತೆಯಲ್ಲಿ ಸೋಮಾರಿಯೆಂಬ ಅರ್ಥ ವಿದ್ದರೂ, ಇಂದಿನ ವ್ಯವಹಾರದಲ್ಲಿ ಆ ಶಬ್ದಕ್ಕೆ 'ಕಾರ್ಯ ಮತ್ತು ಅದರ ಫಲ, ಮತ್ತು ಪ್ರಾಪ್ತಿ ಇವುಗಳ ಅಂತರದಲ್ಲಿರುವ ಎಡರು-ತೊಡರುಗಳ ಮತ್ತು ಅವುಗಳ ನಿವಾರಣೋಪಾಯಾದಿಗಳ ಪರಿಚಯವುಳ್ಳವ—ಸೂಕ್ಷ್ಮವಿಚಾರಿ' ಎಂದು ಅರ್ಥವಿದೆ. ಇದೆಲ್ಲವನ್ನೂ ತಿಳಿಯದೆ ಖಂಡನೆಗೆ ಹೊರಟದ್ದು ಯುಕ್ತವೆನಿಸುವುದಿಲ್ಲ.

ಕಾಯಕಿಣಿಯವರು "ಸಂಸ್ಕೃತಿಯಲ್ಲಿ ದಿಕ್ಕಿನಂತೆ ಭೇದ ಕಲ್ಪಿಸುವುದು ತರವಲ್ಲ" ಎಂದು ಹೇಳುತ್ತಾರೆ. ಆದರೆ ಇದು ತರವಲ್ಲವೆಂದು ಹೇಳಬೇಕಾಗುತ್ತದೆ ನಮಗೆ. ಯಾಕೆಂದರೆ ದೇಶದ ವಿಭಜನೆಗೆ ಸಂಸ್ಕೃತಿಯು ಎಲ್ಲೆಯೂ ಕಾರಣವಿರುತ್ತದೆ. ಭಾರತವು ಒಂದು ದೇಶ, ಅದರದೊಂದು ವಿಶಿಷ್ಟ ಸಂಸ್ಕೃತಿಯಿದೆ. ಇತರ ಸಂಸ್ಕೃತಿಯೊಂದಿಗೆ ಅದು ಲಯಹೊಂದಕೂಡದು. ಅದು ತನ್ನ ವೈಶಿಷ್ಟ್ಯದಿಂದ ಹೊಳೆಯಬೇಕು. ಮೆರೆಯಬೇಕು. ಅದಕ್ಕಾಗಿ ಮೊದಲಿನ ಭಾರತವು ಸ್ವತಂತ್ರವಾದ ರಾಷ್ಟ್ರವಾಗಬೇಕು. ಪಾರತಂತ್ರ್ಯವನ್ನು ಸಹಿಸಲಾರದು. ಇದರಂತೆಯೆ ಭಾರತದೊಳಗಿನ ಪ್ರಾಂತವಿಭಜನೆಯ ವಿಷಯವೂ ಇದೆ. ಇಲ್ಲದಿದ್ದರೆ ಭಾಷಾನುಗುಣ ಪ್ರಾಂತವಿಭಜನೆಯಾಗಲಿ, ಕರ್ನಾಟಕದ ಸಂಸ್ಕೃತಿಯ ರಕ್ಷಣೆಗಾಗಿ ಕರ್ನಾಟಕವು ಪ್ರತ್ಯೇಕ ಪ್ರಾಂತವಾಗಿರಬೇಕು—ಅದಕ್ಕೊಂದು ಸ್ವತಂತ್ರವಾದ ವಿಶ್ವ-ವಿದ್ಯಾನಿಲಯ ಬೇಕು—ಮುಂತಾದುವುಗಳ ಪ್ರಚಾರದ ಆವಶ್ಯಕತೆಗಳಾಗಲಿ ಬೇಕಾಗುತ್ತಿರಲಿಲ್ಲ.

ಭಾವನೆಯಿಂದ ಉಂಟಾಗುವ ಕೆಡುಕು. ಬುದ್ಧಿಯಿಂದುಂಟಾಗುವ ಕೆಡುಕು ಇವು ಫಲದಿಂದ ಒಂದೇ ಸಮವಿರುತ್ತವೆ. ಬೆಂಕಿಯನ್ನು ನೋಡಿ ಹಣ್ಣೆಂಬ ಭಾವನೆಯಿಂದ ತೆಗೆದು ಸುಟ್ಟುಕೊಂಡರೆ ಆಗುವ ನೋವಿಗಿಂತ 'ಇದು ಬೆಂಕಿ; ಇದನ್ನು ತೆಗೆದುಕೊಂಡರೆ ಸುಡುತ್ತದೆ' ಎಂದು ತಿಳಿದಮೇಲೆ ಸುಟ್ಟುಕೊಂಡ ನೋವು ಕಡಿಮೆಯಿರುವುದಿಲ್ಲ. ತಿರುಗಿ ವಿಚಾರಮಾಡಿದರೆ 'ತಿಳಿದೂ ತಿಳಿದೂ ಸುಟ್ಟುಕೊಂಡೆನಲ್ಲ?' ಎಂದು, ಬುದ್ಧಿಪೂರ್ವಕ ಮಾಡಿಕೊಂಡವನು ಚಿಂತಿಸುತ್ತಾನೆ. ಇದರಿಂದ ಬುದ್ಧಿಯಿಂದಾಗುವ ಕೆಡುಕು ಸ್ವಲ್ಪ ಹೆಚ್ಚೆಂದೇ ತಿಳಿಯಬೇಕಾಗುತ್ತದೆ. ಇನ್ನು ಶಾಸ್ತ್ರದಲ್ಲಿ ಹೇಳಿದ ಪಾಪ-ಪುಣ್ಯಗಳ ದೃಷ್ಟಿಯಿಂದ ನೋಡಿದರೂ ಇದೇ. ಸ್ಪಷ್ಟವಾಗುತ್ತದೆ. ಭಾವಪರವಶನಾಗಿ (ತಿಳಿಯದೆ) ಮಾಡಿದ ಅಪರಾಧಕ್ಕೆ ಪ್ರಾಯಶ್ಚಿತ್ತವಿದೆ. ಮತ್ತು ಅದು ಪಶ್ಚಾತ್ತಾಪದಿಂದ ಶುದ್ಧಿಯಾಗುತ್ತದೆ. ಆದರೆ ಅದೇ ತಿಳಿದುಮಾಡಿದ ಪಾಪಕ್ಕೆ ಮೋಕ್ಷವೇ ಇರುವುದಿಲ್ಲ. ಅದನ್ನು ಅನುಭವಿಸಿಯೆ ತೀರಬೇಕು. ಆದುದರಿಂದ ಯಾವುದರ ಕೆಡುಕು ಹೆಚ್ಚೆಂದು ಅಳೆಯಹೋದ ಕಾಯಕಿಣಿಯವರ ವಿಚಾರಸರಣಿಯು ಬಹಳ ಕೆಡುಕಾಗಿ ಇರುತ್ತದೆಯೆಲ್ಲವೆ?

ಹೀಗೆ ಬುರ್ಲಿಯವರು ಇಪ್ಪತ್ತು ವಿಧಾನಗಳನ್ನು ಹೂಡಿ ಅಸಂಬದ್ಧವಾಗಿ ಬರೆದಿರುವರೆಂದು ಹೇಳಿ ಖಂಡಿಸಹೊರಟ ಕಾಯಕಿಣಿಯವರು, ಕೇವಲ ಶಬ್ದಬ್ರಹ್ಮಾಂಡದೊಳಗೆ ಪೀಕಲಾಟ-ಮಾಡುತ್ತ ಶಾಖಾಗ್ರಾಹೀ ಪಾಂಡಿತ್ಯದಿಂದ ಸುಮಾರು ಇನ್ನೂರು ವಿಧಾನಗಳನ್ನು ಹೂಡಿ, ಬಹಳ ಕಡೆಗೆ ವಿಫಲರೂ, ದಿಙ್ಮೂಢರೂ ಆದುದನ್ನು ನೋಡಿದರೆ ಪಾಪವೆನಿಸುತ್ತದೆ. ಕಾಯಕಿಣಿಯವರು ಬರೆದ ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ವಿಚಾರಿಸುತ್ತ ಕುಳಿ-ತರೆ ಅದೊಂದು ಪುಸ್ತಕವಾಗಬಹುದು. ಕಾರಣ ಇಲ್ಲಿ ಬರೆದ-ದ್ದರಲ್ಲಿಯೆ, ಅವರ ವಿಚಾರಸರಣಿಯು ಎಷ್ಟು ಅಸಂಗತವೂ ತರ್ಕಶೂನ್ಯವೂ ಆಗಿದೆಯೆಂಬುದು ವಾಚಕರಿಗೆ ತಿಳಿಯಲು ಶಕ್ಯ-ವಿದೆಯೆಂದು ತಿಳಿದು ಇಷ್ಟಕ್ಕೇ ನಿಲ್ಲಿಸುತ್ತೇನೆ.

ಇವರಂತೆಯೆ ಬುರ್ಲಿಯವರು ಸಹ ಕೆಲವು ಅಸಂಗತವಾದ ವಿಷಯಗಳನ್ನು ಹೇಳಿದ್ದಾರೆ. ಅದನ್ನು ಅಲ್ಲಲ್ಲಿ ಸ್ವಲ್ಪವಾಗಿ ವಿವೇಚಿಸಲಾಗಿದೆ. ಅದೆಂದರೆ 'ಪಾಶ್ಚಾತ್ಯರಲ್ಲಿ ಬುದ್ಧಿಗೆ ಬೆಲೆ ಹೆಚ್ಚು; ಭಾರತದಲ್ಲಿ ಭಾವನೆಗೆ ಬೆಲೆ ಹೆಚ್ಚು' ಮುಂತಾಗಿ ಬರೆದಿದ್ದಾರೆ. ಇದು ಸರಿಯಾದುದಲ್ಲ. ನಮ್ಮ ಭಾರತವು ಬುದ್ಧಿ-ಭಾವನೆಗಳಿಗೆ ಸಮನಾದ ಸ್ಥಾನವನ್ನು ಕೊಟ್ಟಿದೆ. ಮಾನವನ ಸಾಧನ ಚತುಷ್ಟಯಗಳಲ್ಲಿ ಭಾವನೆ-ಬುದ್ಧಿಗಳಿಗೆ ಸಮಾನವಾದ ಸ್ಥಾನಗಳನ್ನು ಕೊಟ್ಟಿದ್ದಾರೆ. "ನಹಿ ಜ್ಞಾನೇನ ಸದೃಶಂ" ಎಂದು ಹಾಡಿದ್ದಾರೆ. ಕಾರಣ ಬುದ್ಧಿ-ಭಾವನೆಗಳಿಗೆ ಸಮವಾದ ಸ್ಥಾನವನ್ನು ಪ್ರಾಚೀನಕಾಲದಿಂದಲೂ ಭಾರತವು ಕೊಟ್ಟಿದೆ-ಯೆಂದು ಹೇಳಬೇಕಲ್ಲದೆ, ತಾರತಮ್ಯವನ್ನು ಕಲ್ಪಿಸುವುದು ಉಚಿತವಲ್ಲ.

ಇನ್ನು ಲೇಖನದ ಪರಮೋದ್ದೇಶವಾದ ಬುದ್ಧಿಪ್ರಧಾನ ಭಾವನೆ, ಭಾವನಾಪ್ರಧಾನ ಬುದ್ಧಿ ಇವುಗಳನ್ನು ಕುರಿತು, ಸದ್ಯದ ಪರಿಸ್ಥಿತಿ-ಗನುಸರಿಸಿ ಎರಡು ಮಾತಿನಿಂದ ವಿವೇಚಿಸಬೇಕೆನಿಸುತ್ತದೆ. ಈ ಕೆಲಸವು ಪ್ರಕೃತ ಲೇಖನದಲ್ಲಿ ಪ್ರಸಂಗಾನುಪ್ರಸಂಗದಿಂದ ಅಲ್ಲ-ಲ್ಲಿಯೇ ವಿವೇಚಿಸಿದ ಅಂಶವನ್ನು ಕೂಡಿಸಿ ಹೇಳುವುದರಿಂದ ಮಾಡಿದಂತಾಗುತ್ತದೆ. ಎಂದರೆ ಒಂದುಮಾತಿನಿಂದ ಹೇಳ-ಬರುವಂತಿಲ್ಲ. ಒಂದಂಶದಿಂದ ಭಾವನೆಯು ಶ್ರೇಷ್ಠವೆಂದು

ಹೇಳಿದರೆ ಇನ್ನೊಂದಂಶದಿಂದ ಬುದ್ಧಿಯು ಶ್ರೇಷ್ಠವೆಂದು ಹೇಳ-ಬೇಕಾಗುತ್ತದೆ. ಅರ್ಥಾತ್ ಅಂಶಭೇದ—ದೃಷ್ಟಿಭೇದಗಳಿಂದ ಇವುಗಳಲ್ಲಿಯ ಮೇಲು-ಕೀಳುಗಳು ಎಂದಂತಾಯಿತು. ಆ ದೃಷ್ಟಿ-ಗಳನ್ನು ಬೇಕಾದಂತೆ ವಿಂಗಡಿಸಿಕೊಳ್ಳಬಹುದು. ಯಾವುದು ವ್ಯಾಪಕ, ಯಾವುದು ವ್ಯಾಪ್ಯ? ಯಾವುದು ಅತ್ಯಾವಶ್ಯಕ—ಯಾವುದು ಅನಾವಶ್ಯಕ?—ಯಾವುದು ಪ್ರಗತಿಪರ—ಯಾವುದು ಪ್ರಗತಿರಹಿತ?—ಯಾವುದು ಸ್ವಾಭಾವಿಕ—ಯಾವುದು ಅಸ್ವಾ-ಭಾವಿಕ?— ಮುಂತಾದ ದೃಷ್ಟಿಯಿಂದ ತೂಗಬೇಕಾಗುತ್ತದೆ.

ಹಾಗೆ ಹೇಳುವುದಾದರೆ, ಬುದ್ಧಿಗಿಂತ ಭಾವನೆಯು ವ್ಯಾಪಕ, ಚಿರಸ್ಥಾಯಿ; ಬುದ್ಧಿಯು ವ್ಯಾಪ್ಯ, ಅಲ್ಪಸ್ಥಾಯಿ ಎಂಬು-ದನ್ನು, ಅನಾದ್ಯನಂತವಾದ ಬ್ರಹ್ಮಾಂಡದಲ್ಲಿಯ ಮಾನವನ ಜೀವನದಲ್ಲಿ ಅನಂತವಾಗಿ ಹರಿಯುತ್ತದೆಯೆಂದೂ ಹೇಳಿದೆ. ಸಾಂಖ್ಯದೃಷ್ಟಾಂತದಿಂದ ಸ್ಪಷ್ಟಪಡಿಸಿದೆ. ಹಾಗೂ ಭಾವನೆಯು ಸ್ವಾಭಾವಿಕವಾದುದು ಎಂದು ಹೇಳಿದೆ. ಕಾರಣ ನಿತ್ಯದ ಉಪ-ಯೋಗದ ದೃಷ್ಟಿಯಿಂದ ಸ್ವಾಭಾವಿಕವಾದ ಭಾವನೆಯು ಶ್ರೇಷ್ಠ-ವಾಗಿ, ಆವಶ್ಯಕತೆಯನ್ನು ಬುದ್ಧಿಗಿಂತ ಹೆಚ್ಚು ಪಡೆದಿದೆಯೆಂದು ಹೇಳಬೇಕಾಗುತ್ತದೆ.

ಇನ್ನು ಪ್ರಗತಿಯ ದೃಷ್ಟಿಯಿಂದ ವಿಚಾರಿಸಿದರೆ ಭಾವನೆಗಿಂತ ಬುದ್ಧಿಯು ಮೇಲಿನದು. ಪ್ರಗತಿಯ ಕನಸನ್ನು ಭಾವನೆಯೇ ಕಂಡರೂ, ಅದಕ್ಕಿರುವ ಎಡರು-ತೊಡರುಗಳನ್ನು ಹೋಗಲಾಡಿಸಿ ದೇಶ-ಕಾಲಗಳಿಗೆ ಅನುಕೂಲವಾಗುವಂತೆ ಗುಣಿಸಿ ಸಿದ್ಧಮಾಡಿ, ಭಾವನಾಪ್ರಧಾನನನ್ನು ಮುಂದೆ ಕರೆದೊಯ್ಯುವ ಕೆಲಸವು ಬುದ್ಧಿ ಪ್ರಧಾನರಿಗೆ. ಕಾರಣ ಬುದ್ಧಿಪ್ರಧಾನರು ಪ್ರಗತಿಯ ದೃಷ್ಟಿಯಿಂದ ಮೇಲಿನವರೆಂದೂ ಆವಶ್ಯಕ—ಅತ್ಯಾವಶ್ಯಕರೆಂದೂ ಹೇಳಬೇಕಾ-ಗುತ್ತದೆ. ಇದರಂತೆಯೆ ಪ್ರಭುತ್ವದ ದೃಷ್ಟಿಯಿಂದಲೂ ಬುದ್ಧಿ-ಪ್ರಧಾನರು ಮೇಲಿನವರಿರುತ್ತಾರೆ. ಜಗತ್ತಿನ ಶ್ರದ್ಧಾ ಮತ್ತು ಭಾವನಾಪ್ರಧಾನ ಮಾನವರನ್ನು ಏಕರೂಪದಿಂದ ನಡೆಯಿಸಿ ಕೊಂಡು, ಹೆಜ್ಜೆಯಿಂದ ಹೆಜ್ಜೆ ಹಾಕಿಸುತ್ತ, ಮೆಟ್ಟಲಿನಿಂದ ಮೆಟ್ಟಲಿಗೆ ಏರಲಿಕ್ಕೆ— ಕಾಲಗತಿಯನ್ನನುಸರಿಸಿ— ಒಯ್ಯುವ ಕೆಲಸವು ಬುದ್ಧಿಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಮಾನವನ ನಿಸರ್ಗಸಿದ್ಧವಾದ ಮೇಲ್ತರಗತಿಯ ಅಧಿಷ್ಠಾನವು ಭಾವನೆಗಿದೆ. ಕಾರ್ಯರಂಗದಲ್ಲಿ ಕೆಲಸಕ್ಕೆ ಬರುವುದು ಭಾವನೆಯಲ್ಲದೆ ಬುದ್ಧಿಯಲ್ಲ. ಸಾಮ್ರಾಜ್ಯ ಮಾಡುತ್ತ ಜಗತ್ತನ್ನು ನಿಯಂತ್ರಿಸುವ ಪ್ರತಿಷ್ಠೆಯು ಬುದ್ಧಿಗಿದೆ ಯೆಂದು ಹೇಳಬಹುದು. ಕಾರಣ ಇವುಗಳೊಳಗಿನ ಮೇಲು-ಕೀಳುಗಳ ತಾರತಮ್ಯವನ್ನು ಅಳೆಯುವುದು ಅಶಕ್ಯವೂ ಅಪ್ರ-ಯೋಜಕವೂ ಇರುವುದಾಗಿ ಕಂಡರೂ, ಇಂದು ನಮ್ಮ ಆವಶ್ಯ-ಕತೆಯ ದೃಷ್ಟಿಯಿಂದ, ಬುದ್ಧಿಪ್ರಧಾನ ಭಾವನೆಗಿಂತ ಭಾವನಾ ಪ್ರಧಾನ ಬುದ್ಧಿಯು ಪ್ರಗತಿಪರ, ಅತಏವ ಮೇಲಿನದೆಂದು ಹೇಳ-ಬೇಕಾಗುತ್ತದೆ.

ಮನೆಗೊಂದು ಅಂದ-ಚೆಂದದ ಒಡವೆ ಅವಶ್ಯವಲ್ಲವೆ?
ದಣಿವಾರಿಸಿಕೊಳ್ಳಲು ಹಿತವಾದ ಆಸನವು ಬೇಕಲ್ಲವೆ?

ಹುಬ್ಬಳ್ಳಿಯ
ಸದ್ಗುರು ಉದ್ಯೋಗ ಮಂದಿರ
ಇವರು
ತಯಾರಿಸಿದ

ಸುಂದರ ಆಕಾರದ
ಸುಲಭ ಬೆಲೆಯ

'ಸುಮನ'

ಕುರ್ಚಿಯನ್ನು
ಉಪಯೋಗಿಸಿರಿ.



★

ಮನವೊಪ್ಪುವ ಕೆಲಸಕ್ಕಾಗಿ ಇಲ್ಲಿಯೆ
ಬನ್ನಿರಿ!
ಕುರ್ಚಿ, ಮೇಜು, ಕಪಾಟು, ಬಾಕು,
ಟೀಪಾಯ್, ಸೋಫಾಸೆಟ್ಟುಗಳು—
ಅದೇಕೆ—
ಯಾವುದೇ ತರದ ಹೊಸ ಮಾದರಿಯ ಕಟ್ಟಿಗೆಯ
ಸಾಮಾನುಗಳನ್ನೂ ಶಾಸ್ತ್ರೀಯವಾಗಿ, ಯೋಗ್ಯಬೆಲೆಗೆ,
ತಯಾರಿಸಿ ಕೊಡುವೆವು.
ಕರ್ನಾಟಕದಲ್ಲಿ ಔದ್ಯೋಗಿಕಶಿಕ್ಷಣ ಕೊಡುವ ಆದ್ಯ ಸಂಸ್ಥೆ!
ಸ್ಕಾಲರಶಿಪ್ಪು ಕೊಟ್ಟು ಶಿಕ್ಷಣ ಕೊಡುವ ಹೊಸಯೋಜನೆಯ
ಸೂಚಕ ಪತ್ರಿಕೆಯನ್ನು ಇಂದೇ ಪಡೆಯಿರಿ.

ಬಡಿಗತನದ
ಶಾಸ್ತ್ರೀಯ ಶಿಕ್ಷಣವು ನಮ್ಮಲ್ಲಿ ದೊರೆಯುವುದು.
ವಿವರಗಳಿಗಾಗಿ ಬನ್ನಿರಿ, ಇಲ್ಲವೆ
ಬರೆಯಿರಿ.

ಶ್ರೀ ಸದ್ಗುರು ಉದ್ಯೋಗ ಮಂದಿರ,
ಸ್ಟೇಶನ್ ರೋಡ್,
ಹುಬ್ಬಳ್ಳಿ.

ಜೂನ್ ತಿಂಗಳಿಂದ ಹೊಸವರ್ಗಗಳು ಪ್ರಾರಂಭವಾಗುವವು.
"ಸೂಚಕಪತ್ರ ಪ್ರವೇಶಪತ್ರ"ಗಳಿಗೆ ೧॥ ಆಣೆ ಸ್ಟ್ಯಾಂಪಿನೊಡನೆ
ಇಂದೇ ಬರೆಯಿರಿ. ವ್ಯವಸ್ಥಾಪಕ.
ಉತ್ತಮ ಕೆಲಸ ಮಾಡುವ ಬಡಿಗರು ಬೇಕಾಗಿದ್ದಾರೆ;
ಬೇಕಾದವರು ಅರ್ಜಿಮಾಡಿರಿ. ಅಥವಾ ಭೆಟ್ಟಿಯಾಗಿರಿ!

"ನಂದನ ವನಂ"

ಶ್ರೀ. ಪಾದೆಕಲ್ಲು ಶಂಕರನಾರಾಯಣಭಟ್ಟ

★

[ಲಲಿತ ರಗಳೆ]

ಇಲ್ಲಿ ವೃಂದಾವನವೊ! ಸಲ್ಲಲಿತ ನಂದನವೊ!
ಮಲ್ಲಿಗೆಯ ಲತೆಯಿಂದೆ ಮಲ್ಲಳಿಯ ದನಿಯಿಂದೆ
ಅಲ್ಲಲ್ಲಿ ಸುರಯಿ ಸಂಪಗೆ ಬಕುಳ ಕುಳದಿಂದೆ—
ಎಲ್ಲಿಯುಂ ತನಿಗಂಪನೆಲ್ಲಿಯುಂ ಸಲೆತಂಪ
ಚೆಲ್ಲುತುಂ, ಗೆಲ್ಲು ಗೆಲ್ಲುಗಳಲ್ಲಿ ಚೆಲ್ಲದಿಂ
ಫುಲ್ಲ ಫುಲ್ಲನೆ ತೊಂಗಿ ತೂಗಿ ವನದೇವಿಯಂ,
ಅಲ್ಲಿ ಭೂಜಜಾತಿ ಸಿಂಗರಗೊಳಿಸಿ ಕೈಗಳಿಂ
ಉಲ್ಲಸದಿ ಜಗುಳ್ಚ ಪೂವಿನ ಸರಗಳೆಂಬಿನಂ:—

ಬಂದಿಹ ಬಸಂತಂಗೆ ಪೊಂದಿ ಜವ್ವನದೇಳ್ಗೆ-
ಯಿಂದ ಮಂಗಳಂ ಕೊಡುವೆನೆಂದವಳ್ ನೆನೆದಿರಲ್,
ಮಂದಾನಿಲಂ ವಾರ್ತೆ ತಂದಿರಲ್, ಕಂದರ್ಪ-
ನಂದು ಕುಸುಮೇಷುಗಳನೊಂದಿಸುತೆ ಬಿಲ್ಲಿನಿಂ-
ದೊಂದೊಂದ ಪಿಂದೆಳೆದು ಮುಂದೆಸೆವನೆಂಬಿನಂ—
ಅಂದವಾ ನನೆಗೊನೆಗಳೆತ್ತಲುಂ-ಸುತ್ತಲುಂ!

ತಿಳಿ ಜಳದೊಳೆಳ ಮೀನ್ಗಳಲೆದಾಡೆ-ಸುಳಿದಾಡೆ,
ನಳನಳಿಸಿ ಬೆಳೆದ ತಾವರೆ ತಲೆಯನೊಲೆದಾಡೆ,
ಬಿಳಿಯಂತೆ ಚಕ್ಕವಕ್ಕಿಗಳಲ್ಲಿ ತೇಲಾಡೆ.
ಇಳಿದಾಗಸವನಲ್ಲಿ ಭೃಂಗ ಸಂಕುಳ ಪಾಡೆ,
ಬಳಸಿರಲ್ ತರುಲತಾ ನಿಚಯಮಾಯೆಡೆ ನೋಡೆ,—
ಕೊಳನೊ, ತಾವರೆವನವೊ ಬನದೊಡತಿನೋಳ್ಪ ಪೊಸ-
ಪೊಳೆವ ಕೈಗನ್ನಡಿಯೊ! ತಿಳಿಯಲೆಂತೆಂಬಿನಂ—
ಪಳಿಕಿನಂತೆಸೆವ ಪುಷ್ಕರಿಣಿಗಳೆತ್ತಲುಂ!

ಎಳವಳ್ಳಿಯುಯ್ಯಲೆಯೊಳಾಡಿ-ಸಂತಸಗೂಡಿ,
ಬಳಿಯ ಮಾಮರನೇರಿ-ನಲವೇರಿ-ಗೆಲವೇರಿ,
ಸೆಳೆಗೊಂಬನಲುಗಿಸಲ್ ಮಾಲುತಿಹ-ಜೋಲುತಿಹ
ಕಳಿವಣ್ಣಗೊಂಚಲಂ ತಾಂ ಕಂಡು-ಮುಂಕೊಂಡು,
ಇಳಿದಿಳಿದು ಬಾಗುತುಂ-ತೂಗುತುಂ-ಬೀಗುತುಂ,
ಪಿಳಿದದರ ಕೆಸಕ್ಕಿಂದೆ—ಸವಿಯುತಾ ಸೊಕ್ಕಿಂದೆ,
ಕಳಕಳನಿನಾದಮಂ ಮಾಡುತಿವೆ-ಕೂಡುತಿವೆ
ಗಿಳಿಗಳಾಯೆಡೆಯಲ್ಲಿ-ಪಸುರೆಲೆಗಳೆಡೆಯಲ್ಲಿ!

ಕೊರಳಿನಿಂದಿಂಚರಂ ಪೊರಪೊಣ್ಮೆ-ಗರಿಯುಣ್ಮೆ,
ತಿರುತಿರುಗೆ ತಂಬೆಲರ ತೆರೆತೆರೆಗೆ ಮೈಗೊಟ್ಟು—
ಕರಿಪಕ್ಕಗಳನೆರಡ ಬಿಡಿಸುತ್ತೆ-ಮಡಿಸುತ್ತೆ
ಸರಿದು ಪೂಗಿಡದಿಂದೆ-ಮರದಿಂದೆ-ಪೊದರಿಂದೆ,
ಮೊರೆಯುತಿವೆ ಕೋಗಿಲೆಯ ಬಳಗಂಗಳೆತ್ತಲುಂ!

ಬಣ್ಣ ಬಣ್ಣದ ಪೀಲಿಗಳನರಳಿಸುತ ನೆಗೆದು—
ತಣ್ಣೆಳಲ ನೆರೆಸೇರೆ-ಪೆಣ್ಣವಿಲ್ ಬಳಿಸಾರೆ—
ಮಿಣ್ಣ ಮಿಣ್ಣನೆ ಕಾಲನೆತ್ತುತುಂ-ಸುತ್ತುತುಂ
ತಿಣ್ಣ ತಿಣ್ಣನೆ ಕುಣಿದು ಕೇಗುತುಂ-ಕೂಗುತುಂ,
ಕಣ್ಣಿಗಿಂಬಾಗುತುಂ-ಬಿನದಕೆಡೆಯಾಗುತುಂ
ಬಣ್ಣಿಸಲ್ ಬಾರದಿಹ ಮೋರಂಗಳೆತ್ತಲುಂ!

ಫಲಭರಿತವಾದ ಚೆಂದೆಂಗಿನಿಂ-ಕಂಗಿನಿಂ;
ನೆಲಕೆ ಗೊನೆಮೊಗಮಿರ್ಪ ಸವಿಬಾಳೆಸಾಲಿನಿಂ;
ಪಲವು ಪಣ್ಕಾಯಿಗಳ-ಕಳಿಕೆಗಳ-ಮೊಳಕೆಗಳ-
ನೊಲವಿಂದೆ ತಾಳುತುಂ-ಜನಕಾಗಿ ಬಾಳುತುಂ
ನೆಲಸಿ ಬೆಳೆದುದ್ದವಾಗಿಹ ಬಕ್ಕೆವಲಸಿನಿಂ;
ಕುಲುಕಿ ಮುನ್ನೆಗೆಯುತ್ತೆ ಕೊಂಬೆಯಿಂ-ರೆಂಬೆಯಿಂ
ಹಲುಕಿರಿಯುತಣಕಿಸುತಲಿರ್ಪ ಮುಸು-ಮಂಗನಿಂ;
ವಿಲಸಿತಾನಂದ ಸಾಮ್ರಾಜ್ಯೋಪಭೋಗಮಂ
ಸಲೆ ಪೊಂದುತಭಿನಂದಿಸುತಲಿಂದಿರೇಶನಂ
ನಲವಿಂದೆ ಪಾಡುತುಂ-ಬೇಡುತುಂ-ನೋಡುತುಂ
ನಲಿನಲಿಯುತಾಡುತುಂ-ತಲೆಯನೊಲೆದಾಡುತುಂ
ಬಲುಬಗೆಯೊಳಲೆದು ಸಂತಸಗಡಲೊಳಾಡುತುಂ!
ಕಿಲಕಿಲನೆ ನಸುನಗುತಲಿರುತಿರ್ಪ 'ರಸಿಕ'ನಿಂ;
ಚೆಲುವಿನಾಗರವಾಗಿ ರಾರಾಜಮಾನಮೆನೆ—
ಲಲಿತಂ-ಮನೋಜ್ಞಮಿಂತಿದು ನಂದನಂವನಂ!!

ಮದುವೆ

(ಹರಟೆಯೊಂದು)

ಶ್ರೀ. ಕಣ್ಣಮಡಕಲ ರಾಧಾಕೃಷ್ಣನ್

★

ಯಾರ ಮದುವೆ ಯಾರಿಗೆ ಏನೇ ತರಲಿ, ನಮ್ಮ ಶ್ರೀವತ್ಸನಿಗಂತೂ ಅದು ಲಾಡು ತರಲೇ ಬೇಕು. ಇದಕ್ಕಾಗಿ ಅವನು ಏಟು ತಿಂದಿದ್ದಾನೆ; ಬೈಗಳಿಗಂತೂ ಕೊನೆಯೇ ಇಲ್ಲ. ಆದರೆ ಲಾಡು ಮೇಲಿನ ಮೋಹ ಮಾತ್ರ ತೀರಿಲ್ಲ. ಬೈದಷ್ಟೂ ಹೊಸದಾಗಿದೆ; ಹೊಡೆದಷ್ಟೂ ಹಿರಿದಾಗಿದೆ. ಲಾಡು ಮಾಡದ ಮದುವೆಗೆ ಅವನು ಕಾಲಿಡುವುದಿಲ್ಲ. ಊಟಕ್ಕೆಂದು ಅವನನ್ನು ಕರೆದರೆ ನೇರವಾಗಿ ಒಂದು ಪ್ರಶ್ನೆ ಬರುತ್ತದೆ: "ಇಂದು ಲಾಡು ಮಾಡಿದ್ದೀರಾ ?"

ಹಿಂದೆ ನಾವೆಲ್ಲ, ಒಮ್ಮೆ ಮಲ್ಲೇಶ್ವರದಲ್ಲಿ ಒಂದು ಮದುವೆಯ ಊಟಕ್ಕೆ ಹೋಗಿದ್ದೆವು. ಅಲ್ಲಿ ಲಾಡು ಒಡಿಸಿದ್ದರು. ಸಂಜೆ ಬೇರೊಂದು ಮನೆಗೆ ಹೋಗಿದ್ದಾಗ, ಅಲ್ಲಿ ಶ್ರೀವತ್ಸನದು ಭಾರಿ ಗಲಾಟೆ. ಅಲ್ಲಿ ನಾವು ಅವನಿಗೆ ಲಾಡು ತರಲಿಲ್ಲವಂತೆ. ಕಂಡ-ಕಂಡವರ ಮನೆಯಲ್ಲಿ ಕೇಳಿದಾಗೆಲ್ಲ ಲಾಡು ಬೇಕೆಂದರೆ ಸಿಗುವುದು ಹೇಗೆ? ಅಂತೂ ಗಲಾಟೆ ತಡೆಯದೆ, ತಂದು ಬಾಯಿಗೆ ತೆತ್ತಿದ್ದಾಯಿತು.

* * *

ಮದುವೆ, ಹಬ್ಬ, ಹರಿದಿನ ಎಂದರೆ ಜನ ಎಷ್ಟು ನಲಿದಾಡುತ್ತಾರೆ! ಹಬ್ಬಗಳಲ್ಲೆಲ್ಲ ಹಿರಿಯ ಹಬ್ಬ ಮದುವೆ. ಮದುವೆಯಷ್ಟೇ ಹಿರಿದಾಗಿ ಹಬ್ಬಗಳನ್ನು ನೆರವೇರಿಸುವ ಜನ ನಮ್ಮಲ್ಲಿಲ್ಲದೆ ಇಲ್ಲ. ಆದರೆ, ಮದುವೆ! ಎಷ್ಟು ಜನ, ಏನು ತಿಂಡಿ, ಊಟ, ಗಾಡಿ, ಗಲಾಟೆ........ ಇದರಲ್ಲಿ ಮರೆತು ಮರೆಯಾದ ನೂತನ ಜೀವನದ ಸೊಬಗು.... ಎಲ್ಲರ ಮೊಗದಲ್ಲೂ ಒಂದು ತೆರದ ಸಂತೋಷ.. ಅರ್ಥವಿದ್ದೂ ಇರದ ನಲಿವು.. ಮದುವೆಯಾಗುವುದು ಯಾರಿಗೋ!.... ಅವರಿಗಿಂತ ನಲಿದಾಡುವರು ಮದುವೆಗೆ ಬಂದ ಜನ!.... ತಮ್ಮ ಹಿಂದಿನ ದಿನಗಳನ್ನು ನೆನೆಸಿ ಗತವೈಭವದ ಸವಿ ನೆನಪುಗಳನ್ನು ತಂದುಕೊಳ್ಳುವ ಹಿರಿಯರು.. ಬರಲಿರುವ ದಿನಗಳನ್ನು ಹಾರಯಿಸಿ, ಕಾದಿರುವ ವೈಭವಕ್ಕೆ ಅಣಿ ಮಾಡಿ ಎದುರು ನೋಡುವ ತರುಣರು........ ಏನನೂ ಅರಿಯದ ಬಾಲರು...... ಎಲ್ಲರೂ ಒಂದೇ ಈ ಜಾತ್ರೆಯಲ್ಲಿ!

* * *

ಸಾವಿರ ಸುಳ್ಳಾದರೂ ಹೇಳಿ ಜನ ಮದುವೆ ಮಾಡುತ್ತಾರೆ. ಮದುವೆಯ ವ್ಯಾಪಾರದಲ್ಲಿ ಸುಳ್ಳಿನ ಆಟ ಎಷ್ಟು ಕಾಣಬರುತ್ತದೆ! ಒಂದೂ ಸುಳ್ಳನ್ನು ಹೇಳದೆ ಮಾಡಿರುವ ಮದುವೆಯನ್ನು ನಾನಿನ್ನೂ ಕಾಣಬೇಕಾಗಿದೆ! ಈ ಕಾಳಗದಲ್ಲಿ ಎರಡೂ ಕಡೆಯ ಕೋಳಿಗಳೂ ಭಾರಿಯವೇ! ಗಂಡಿನ ಕಡೆಯವರು ಒಂದು ತೂಕವಾದರೆ, ಹೆಣ್ಣಿನ ಕಡೆಯ ತಟ್ಟೆ ಕೆಳಗೇ ಹೋಗುತ್ತದೆ. ವರನ ವರ್ಣನೆಮಾಡುವಾಗ, ಅವನು ಮಾಡಿರುವ ಪರೀಕ್ಷೆಗಳ ಪಟ್ಟಿಯು ಮೊದಲ ಸುಳ್ಳು. ಮದುವೆಗೆ ಮುಂಚೆ ವರ ಇಂಟರ್‌ಮಿಡಿಯೆಟ್ ಆಗಿದ್ದರೂ, ಮದುವೆಯಾದಮೇಲೆ ತಾನಾಗಿ ತಿಳಿದುಬರುತ್ತದೆ: 'ಆಗಲೇ ಎರಡುವರ್ಷ ಆಗಿದೆ; ಮತ್ತೆರಡು ವರ್ಷ ಯೋಚನೆಯಿಲ್ಲ' ಎಂದು. ವರನ ಆಸ್ತಿಯ ವಿಷಯ ಲೋಕವಿದಿತವಾದದ್ದು—ಮದುವೆಗೆ ಮೊದಲು. ವರನ ತಂದೆ ಗತಿಸಿದ ಮೇಲೆ ಮಕ್ಕಳ ಆಸ್ತಿ ಕಾಣಬೇಕು! ಬೆಳಗಾದರೆ ಏನು ಮುಲ್ತಾನಿ ಜನ! ಎಷ್ಟು ಜನ ಸಾಲಕೊಟ್ಟವರು! ಸಾಹುಕಾರ ಸತ್ತಮೇಲೇ ಸಾಲದ ಸುದ್ದಿ ತಿಳಿಯುವುದು.

★

ಮದುವೆಯೆಂದರೆ 'ಸಂತೋಷದ ಸುಗ್ಗಿ' 'ಸೊಗಸಿನ ಹಬ್ಬ' ಎಂಬ ರೂಢಿ ನಮ್ಮ ನಾಡಿನಲ್ಲಿ ಇದೆ. ಆದರೆ ಈ ಮಾತುಗಳಲ್ಲಿ ತಥ್ಯವಿಲ್ಲ. ಮದುವೆಯೆಂದರೆ ವಿವಿಧ ಭಾವನೆಗಳ ಜಾಗೃತಪ್ರವಾಹ. ಶೃಂಗಾರ, ವೀರ, ಕರುಣೆ, ಭಯಾನಕ, ಬೀಭತ್ಸ ಈ ಎಲ್ಲ ಭಾವಗಳೂ ಸ್ಥಾಯಿಯಾಗಿರುವುವು.

★

ಮದುವೆಯಲ್ಲಿ ವಧುವಿಗೆ ನೂರಾರು ಎರವಲು ಆಭರಣ ಹಾಕಿ, ಅನಂತರ ಕೀಳುವ ಪದ್ಧತಿ ನಮಗೇನು ಹೊಸದಲ್ಲ!

ಇನ್ನು ವಧುವಿನ ಕಡೆಯ ಸುಳ್ಳಿನ ಕಂತೆಗಂತೂ ಕೊನೆ-ಮೊದಲಿಲ್ಲ. ಈ ಕಾಲದಲ್ಲೂ ಮೈನೆರೆದದ್ದನ್ನು ಮುಚ್ಚುವ ಮೂರ್ಖ ಮಂದಿ ಇದ್ದಾರೆ. ವಯಸ್ಸು ಸುಳ್ಳು ಹೇಳಿ ಮಾಡದ ಮದುವೆಯಿಲ್ಲ. ಜಾತಕ ತಪ್ಪುಕೊಟ್ಟು ಸರಿತೂಗಿಸದ ಜಾಗವಿಲ್ಲ. ಸಂಗೀತ ಬಂದರೂ ಹುಡುಗಿ ಸಲಕರಣೆಯಿಲ್ಲದೆ ಬಾಯಿ ಬಿಡಲಾರಳು! ಅಯ್ಯೋ ಪಾಪ!

ಇನ್ನು ಪುರೋಹಿತರ ಸುಳ್ಳುಗಳ ಪಟ್ಟಿ ಕೊಡಬೇಕಾಗಿಲ್ಲ. ಅನ್ನದಲ್ಲಿ ಎಲ್ಲಾ ಅಗುಳನ್ನು ಹಿಸುಕಿ ಯಾರೂ ನೋಡುವುದಿಲ್ಲ!

* * *

ಜನ ಆಶೆಯಿಂದ ಹೊಸ ಮನೆ ಕಟ್ಟುತ್ತಾರೆ; ಆದರೆ ಆ ಮನೆ ಶಾಶ್ವತವಾಗಿ ತನ್ನದೇ ಎಂಬ ಧೈರ್ಯ ಎಷ್ಟುಮಂದಿಗಿದೆ? ಹಾಗೇ! ಮದುವೆ ಮಾಡುವುದು ಕಷ್ಟವಲ್ಲ; ಅನಂತರ ಮಾಡಿ

ದವನ ಬಾಳು! ಅದು ಬಾಳೇ; ಬಾಳಿನ ಹೆಸರಿನ ಅಳುಗೋಳೇ? ಅದಕ್ಕೇ ಮಂದಿಯ ಬಾಯಲ್ಲಿ ಸದಾ "ಮನೆ ಕಟ್ಟಿ ನೋಡು; ಮದುವೆ ಮಾಡಿ ಬಾಳು!" ಎಂದಿರುವುದು.

* * *

ಮದುವೆಯೆಂದರೆ ಹುಡುಗರಿಗೆ ಭಾರಿ ಹಬ್ಬ. ಮದುವೆಗೆ ಮೂರು ದಿನ ಮುಂದಿನಿಂದ ಮುಂದಾಲೋಚನೆಮಾಡಿಕೊಂಡು, ಯಾರಾರು ಎಷ್ಟೆಷ್ಟು ತಿಂಡಿ ತಿನ್ನಬೇಕೆಂದು ಯೋಜನೆಮಾಡಲಿಕ್ಕೆ ಮೊದಲಿಡುತ್ತಾರೆ. ಮದುವೆಯ ಊಟಗಳಲ್ಲಿ ಪಂಥ ಹಾಕಿಕೊಂಡು ತಿನ್ನುವ ಜನರನ್ನು ನೋಡಬೇಕು! ತಿಂದಮೇಲೆ ಮೂರು ದಿನ ಹೊಟ್ಟೆನೋವಿನಿಂದ ನರಳುವುದನ್ನ ಕಾಣಬೇಕು* ಹುಡುಗರಿಗೆ ತಿಂಡಿಯ ಹಬ್ಬ ಆದರೆ, ಹೆಂಗುಸರಿಗೆ ಮಾತಿನ ಸಮಾರಾಧನೆ! ಪುರೋಹಿತರ ಮೇಲೆ ತಪ್ಪು ಕಂಡು ಹಿಡಿವ ಸ್ತ್ರೀಯರು; ಬೀಗರಲ್ಲಿ ಎಲ್ಲರಲ್ಲೂ ತಪ್ಪು ಕೆದಕಿ ಮದುವೆಗಳನ್ನು ಜಗಳಗಳನ್ನಾಗಿ ಮಾಡಿದವರು: ಮೇಳಗಾರನಿಂದ ಅಳಿಯನ ವರೆಗೆ ಆಡುವ ಜನ; ತಮ್ಮ ಮಕ್ಕಳಿಗೆ, ತಮ್ಮ ಗಂಡಂದಿರಿಗೆ ಸರಿಯಾಗಿ ಕಾಫಿರಾಕ್ಷಸನ ಸರಬರಾಯಿ ಆಗಲಿಲ್ಲವೆಂದು ಹೊಡೆದಾಡುವ ಹೆಂಗಳೆಯರು. ಇದನೆಲ್ಲ ನೋಡಿದರೆ, ಆಗ ಖಂಡಿತವಾಗಿಯೂ "ಸ್ತ್ರೀಯೇವ ಮೂಲಂ ಸಕಲಸ್ಯ ಪುಂಸಾಂ" ನೆನಪಿಗೆ ಬಂದು ನಿಜ ಎನ್ನಿಸುತ್ತದೆ.

* * *

'ಕಾಫೀ ಸಮಾರಾಧನೆ' ಎಂದೆ! ನಿಜ. ಅದರಷ್ಟು ದೊಡ್ಡ ಕೆಲಸ ಯಾವುದೂ ಇಲ್ಲ. ಕಾಫಿಯ ನಲ್ಲಿಗಳನ್ನಿಡದೇ ಇದ್ದರೆ, ಮದುವೆಯಲ್ಲಿ ಸಮಾಧಾನವೇ ಇಲ್ಲ. ಕಳ್ಳತನದಲ್ಲಿ ಕದ್ದು ಕುಡಿವ ಪುರೋಹಿತರು; ಹೇಗಿದೆಯೆಂದು ಕೈ ಅದ್ದಿ ನೆಕ್ಕಿ, ಇತರರಿಗೆ ಎಂಜಲು ಬಡಿಸುವ ಅಡಿಗೆಯವರು. ತಮ್ಮ ಯಜಮಾನರಿಗೆ ಕಾಫಿ ಇಲ್ಲದೆ ಕೋಳಿಯ ಕೂಗೇ ಕೇಳಿಸುವುದಿಲ್ಲವೆಂದು, ಸೀರೆಯ ಸೆರಗಿನಲ್ಲಿ ಮುಚ್ಚಿಟ್ಟುಕೊಂಡು ಸರಬರಾಯಿ ಮಾಡುವ ಸ್ತ್ರೀಯರು! ಯಾರಿಗೂ ಬೇಡವಾದ ಮಕ್ಕಳು..... !

* * *

ಮದುವೆ ಆನಂದ ಎಂದೆ, ನಿಜ. ಒಬ್ಬೊಬ್ಬರಿಗೆ ಒಂದೊಂದು ತೆರದ್ದು. ಮದುವೆಯ ಗಂಡಿಗೆ ಆಗುವ ಆನಂದ ನಾನು ಹೇಳಿ ತಿಳಿಸಬೇಕಾಗಿಲ್ಲ. ಎಲ್ಲರೂ ಒಂದು ಮನೆಯ ಅಳಿಯಂದಿರೇ! ಜೊತೆಗೊಬ್ಬ ಸಂಗಾತಿ. ಜೀವನದ ಬೆಳಕು, ಹೃದಯದ ದೇವಿ—ಹೀಗೇ ನೂರೆಂಟು. ವಧುವಿಗಂತೂ ಜೀವನದ ದೇವ ಬರುತ್ತಾನೆ. ಅವರದು ಬಣ್ಣಿಸಲಾರದ ಆನಂದ. ವಧುವಿನ ತಂದೆ-ತಾಯಿಗೆ ಹೆಚ್ಚಿಗೆ ಆನಂದ; ಹಾಗೇ ವಿಪರೀತ ದುಃಖ.

ಸಾಕಿ ಸಲಹಿದ ತಾಯಿ ಕಣ್ಣೀರಿಡುತ್ತಾಳೆ. ಆದರೆ ಒಂದು ಹೊರೆ ತಪ್ಪಿತೆಂದು ಸಂತಸಪಡುತ್ತಾಳೆ. ಅತ್ತೆಮಾವಂದಿರಿಗಾದರೂ, ಮನೆಗೊಬ್ಬ ಮಗಳು ಬರುತ್ತಾಳೆ; ಎದುರು ಮಾತನ್ನಾಡದೆ, ಬೈದಷ್ಟೂ ಸುಮ್ಮನಿರುವವಳು. ತನ್ನ ಮಗನಿಗೆ, ತಾನು ಹೆತ್ತು ಹೊತ್ತು ಸಾಕಿದವನನ್ನು ಮಂತ್ರದಿಂದ ಮಾಟಮಾಡಿ ಒಲಿಸಿಕೊಳ್ಳುವ ಮೋಹಿ.....

ಮದುವೆಯೊಂದು ತೆರದ ಬಿಟ್ಟಿ ಜಾಹೀರಾತಿನ ಪ್ರದೇಶ. ಮದುವೆಗೊದಗಿರುವ ಗಂಡು-ಹೆಣ್ಣುಗಳಿಗೆ ಒಳ್ಳೆಯ ಜಾಹೀರಾತು. ಅದೇ ಕೆಲಸಕ್ಕೇ ಬರುವ ಏಜಂಟರೂ ಇರುತ್ತಾರೆ. ನಿಮ್ಮ ಮಗಳಿಗೆ ವರ ಬೇಕಾದಲ್ಲಿ ನಿಮ್ಮ ನಂಟರೊಬ್ಬರ ಮನೆಯ ಮದುವೆಗೆ ಹೋಗಿ; ಸುತ್ತಲೂ ಕಣ್ಣಿಡಿ!

ಮದುವೆಯೆಂದರೆ ಮನೆಯಲ್ಲಿಯ ವಿಧವೆಯರಿಗೆ ಭಾರಿ ದುಃಖದ ಪ್ರಸಂಗ. ಆ ವಿಧವೇ ಕಿರಿಯವಳಾಗಿ ರೂಪವತಿಯಾಗಿದ್ದರೆ ಎಲ್ಲರೂ "ಅಯ್ಯೋ ಪಾಪ" ಎಂದು ನಿಟ್ಟುಸಿರನ್ನು ಬಿಡುವವರೆ! ಎಲ್ಲಾ ತರುಣರೇ! "ಆ ವಿಧವೆಯನ್ನು ನಿಮ್ಮಲ್ಲಿ ಯಾರಾದರೂ ಮದುವೆಯಾಗಲಿಕ್ಕೆ ಸಿದ್ಧರಿದ್ದೀರಾ?" ಎಂದು ಕೇಳಿದರೆ, ಹಿತ್ತಲಬಾಗಿಲಿಂದ—ಹಿಂದೆಮುಂದೆ ನೋಡದೆ—ಹೊರಡುವ ಉತ್ತರರೇ! ಆ ವಿಧವೆ ಮುದುಕಿಯಾದರೆ! ಆಕೆಯನ್ನು ಕೇಳದೆ ಮದುವೆಯ ಕಾರ್ಯಕ್ರಮವೇ ನಡೆಯದು. ಆಕೆಯೇ ಸೂತ್ರಧಾರಿ! ಪುರೋಹಿತನಿಗಂತೂ ಆಕೆಯನ್ನು ಕಂಡರೆ ಭಯ!!

ಮದುವೆಯಲ್ಲಿ ತರುಣರ ತಂಡವೊಂದು ಹಾಜರಿರುತ್ತದೆ. ಇವರ ಜೊತೆಗೆ ಇವರೆಂದಂತೆ ಕುಣಿವ ಸ್ತ್ರೀಯರ ಗುಂಪೊಂದು. ಅವಲಕ್ಷಣ, ಅನ್ಯಾಯ, ಮಾನವಿಲ್ಲದ ನಡತೆ ಇವೆಲ್ಲ ಇವರಲ್ಲಿ ಕೇಂದ್ರವಾಗಿರುತ್ತವೆ. ಇವರೆಲ್ಲ ಕಾರಣವಾದಿಗಳು! ಏನೇ ಕಾರ್ಯವಾಗಲಿ, ಅದಕ್ಕೆ "ಯಾಕೆ?" ಎಂಬುದು ಅವರ ಮೊದಲ ಪ್ರಶ್ನೆ. ಇತರರಿಗೆ ನೋಯಿಸದ—ಒಲಿಯದ—ಸ್ವಭಾವ ಇವರದು. ಮತ್ತೆ—ಬೇರೆಯವರಲ್ಲಿ ತಪ್ಪು ಕಂಡುಹಿಡಿದು ನಕ್ಕು ಕಾಲಕಳೆವ ಜಾತಿ—ಹಾಸ್ಯವಿಲ್ಲದ ಅಶ್ಲೀಲ ಹಾಸ್ಯದಲ್ಲಿ ತೇಲುವ ಜನ. ಇವರ ದನಿಗೆ ಮಾರ್ದನಿ ಮೂಡಿಸುವ ಇವರ ಕಾಂತೆಯರು!

ಮದುವೆಯ ಮನೆಯೆಂದರೆ ಭಿಕ್ಷುಕರಿಗೆ ಸುಗ್ಗಿ. ಕಂಡದ್ದಷ್ಟು, ಕಾಣದಷ್ಟು ಎತ್ತಿಹಾಕುವ ಜನ. "ಮದುವೆಯ ಮನೆ! ಶುಭಕಾರ್ಯ! ಓಡಿಸಬೇಡಿ" ಎಂದು ನಮಗೇ ನ್ಯಾಯಹೇಳಿ, "ಮದುವೆಯ ಮನೆ ಸೋಮಾರಿಗಳ ಸತ್ರ" ಎಂದು ಹಕ್ಕನ್ನು ಸ್ಥಾಪಿಸುವ ಜನ! ಜಟಕಾದವರು, ಹಾಲು ಮಾರುವವಳು, ಅಂಗಡಿಯವನು, ಕೂಲಿಯವನು—ಎಲ್ಲರೂ ಸುಳ್ಳು ಹೇಳಿ, ಹಣ ಕೀಳುವ ಧೀರರು.

ಮದುವೆಯ ಮನೆಯಲ್ಲಿ ಸಂಗೀತ ಯಾರಿಗೆ ತಾನೇ ಬೇಕಾಗಿರುತ್ತದೆ! ಮದುವೆಯ ಗಂಡಿಗೆ ಒಡತಿಯ ಪಕ್ಕದಲ್ಲಿ ಕೂತು ಅವಳನ್ನು ಮಾತನಾಡಿಸುವುದಕ್ಕಿಲ್ಲ, ಎದ್ದು ಹೋಗುವುದಕ್ಕಿಲ್ಲ

* ನಾನೊಮ್ಮೆ ಒಂದು ಮದುವೆಗೆ ಹೋಗಿದ್ದಾಗ, ಬರಿ ಕರಿಸಾರು ಚಟ್ನಿಯಲ್ಲಿ ಒಬ್ಬ ಅಯ್ಯಂಗಾರು ಭೋಜನ ಮಾಡಿದ್ದರು. ಆ ವಿತರಣೆಯ ವಿವರಣೆಗಿದು ಸಮಯವಲ್ಲ ಎನ್ನಿ. —ಲೇ.

ಎಂಬ ಪೇಚಾಟ. ಹೆಂಗುಸರಿಗೆ ತಮ್ಮ ಪಾಂಡಿತ್ಯಪ್ರದರ್ಶನವಾಗಬೇಕೆಂಬಾಶೆ. ಆಶೆಯಿದ್ದರೂ "ಬರುವುದಿಲ್ಲ" ಎಂದು ಹೇಳಿಕೊಳ್ಳುವ ಬಿಂಕ. "ನೀ ಹೇಳೇ! ನೀ ಹೇಳೇ" ಎಂಬ ಗಲಾಟೆಯಾಗಿ, ಕೊನೆಗೆ ಬರುವುದು ಕರ್ಕಶ ಧ್ವನಿ. ಹೊತ್ತು ಹೋಗದು! ಆ ಗದ್ದಲದಲ್ಲಿ ಮತ್ತೇನು ಮಾಡಬೇಕು! ಆ ಗುಂಪಿನಲ್ಲಿ, ಸಂಗೀತ ತಿಳಿಯದ ವಿದ್ವಾಂಸರ ಎದುರಿನಲ್ಲಿ. ಸಂಗೀತ ಜೀಡವಿದ್ದ ವಿಧ್ವಂಸರ ನಡುವೆ, ತಾಳ-ಮೇಳ-ಶ್ರುತಿಗಳೊಂದಿಗೆ "ನಗುಮೋಮು" ಹಾಡಿದರೆ ಕೇಳುವವರಿಗೆಲ್ಲ ಹೇಗೆ ನಗುಮೊಗವಿದ್ದೀತು. ಹಾಡು ಹೇಳುವವರ ಮೊಗದಲ್ಲಂತೂ ನಗುಮೊಗ ಬರೆದದ್ದೇ ಅಲ್ಲವಲ್ಲ!

ಒಮ್ಮೆ ಓದಿದ್ದು ನೆನಪಿದೆ:— ಶ್ವಾನ ತಾ ಬೊಗಳುತಿರಲಾನೆಯವನೊಂದು ಗಾನವೆಂದಂತೆ.

ಮದುವೆಯಲ್ಲಿ ರೂಪಪ್ರದರ್ಶನಕ್ಕೇನು ಕೊರತೆಯಿಲ್ಲ! ರೂಪವಿರಲಿ ಇಲ್ಲದಿರಲಿ, "ನಾ ರಂಭೆ" ಎಂದು ಮೆರೆವ ಹೆಂಗುಸರು! "ಜನವೆಲ್ಲ ನನ್ನನ್ನೇ ನೋಡಲಿ, ನನ್ನ ಭುಜಗಳ ಹುಲುಕಾಟ ನೋಡಿ ಆನಂದಿಸಲಿ; ನನ್ನ ಇಮಿಟೇಷನ್ ಬೆಂಡೋಲೆಯನ್ನು ವಜ್ರದ್ದೆನ್ನಲಿ" ಎನ್ನುವ ಹೆಂಗುಸರಿಗೆ ಸರಿಯಾಗಿ, ಚಕೋರ ಪಕ್ಷಿಯಂತೆ ಬಾಯಿಗೆ ಬದಲು ಕಣ್ಣು ಬಿಟ್ಟುಕೊಂಡಿರುವ— 'ಎಲ್ಲಾ ಹೆಂಗುಸರೂ ನನ್ನನ್ನೇ ನೋಡಲಿ ಮೆಚ್ಚಲಿ' ಎಂದು ಒಂದು ಸಿಲ್ಕು ಶಾಲು, ಬಾಡಿಗೆ ಉಂಗುರ, ಹಳೆಯ ಗಡಿಯಾರ ಹಾಕಿಕೊಂಡು ಮೆರೆವ—ತರುಣರು. ಕೆಲಸವಿಲ್ಲದಿದ್ದರೂ ಮದುವೆಯ ಗಂಡಿನೊಡನೆ ಪಿಸುಗುಟ್ಟಿ, ಏನೋ ಭಾರಿ ಕಾರ್ಯವಿದ್ದವರಂತೆ ಹೆಂಗುಸರ ಸಾಲಿನ ಮುಂದೆ ಹೋಗಿ, ಅಲ್ಲಿ ಇಲ್ಲದವರನ್ನು ಹುಡುಕಾಡಿ......

ಮದುವೆಯೆಂದರೆ ಅದರ ಹಿಂದೆ ಮನಸ್ತಾಪ ಬರಲೇ ಬೇಕು. ಅದೊಂದು ಪುಟ್ಟ ಮದುವೆಯ ಗಂಡು. ಅದಿಲ್ಲದೆ ಮದುವೆ ಹೇಗಾದೀತು! ಕಾರಣ ಇರಲಿ, ಇಲ್ಲದಿರಲಿ ಹೊಡೆದಾಡುವ ಆಶೆ.

ಮದುವೆಗಳಲ್ಲಿ ಮಕ್ಕಳೆಂದರೆ ತೀರ ಅಸಡ್ಡೆ! ಹೆಂಗುಸರು ತಾವು ಸ್ನಾನಮಾಡಿ, ಲಕ್ಷಣವಾಗಿ ಬಣ್ಣ ಬಳೆದು, ಪೀತಾಂಬರಗಳನ್ನುಟ್ಟು, ಇದ್ದಷ್ಟು ಮೆಯ್ದು, ಮೆರೆವಣಿಗೆಗೆ ಸಿದ್ಧರೇ ವಿನಾ 'ತಮ್ಮ ಮಕ್ಕಳಿಗೆ ಸ್ನಾನವಾಯಿತೇ, ಅವರು ತಿಂದರೇ! ಅವರೆಲ್ಲಿ?' ಎಂದು ವಿಚಾರಿಸುವ ಪ್ರಾಣಿಯೇ ಇಲ್ಲ. ಅದು ಗಂಡುಸರ ಇಲಾಖೆಗೆ ಸೇರಿದ್ದಲ್ಲ: ಹೆಂಗುಸರು ನೋಡಿಕೊಳ್ಳುವುದಿಲ್ಲ— ಮಕ್ಕಳು ದೇವರಂತೆ! ಅವರಿಗೇ ಹೇಗೆ?

* * *

ಮದುವೆ, ಮುಂಜಿ, ತಿಂಡಿಗಳೇ ಆಧಾರವಾದ ಪುರೋಹಿತರೊಂದೆಡೆ! ಅವರ ಪುಣ್ಯವೇ ಪುಣ್ಯ. ಸುಳ್ಳೋ ನಿಜವೋ, ಹೇಳಿದ್ದೆಲ್ಲ ಒಂದು. ಕನ್ನಡ ಬಾರದಿರುವವರಿರುವ ಮದುವೆಯಲ್ಲಿ "ಪ್ರಿಯಾ ಬಾ ಬಾರೋ" ಕೂಡ ಒಂದು ಮಂತ್ರ.

ಸರ್ವಮಾನ್ಯ!
ಚಳಿಗಾಲದಲ್ಲಿ ಶಕ್ತಿಯ ಬಗ್ಗೆ
ಸರ್ವೋತ್ಕೃಷ್ಟವೆಂದು
ರಕ್ತವರ್ಧಕವನ್ನೇ
ಎಲ್ಲ ಜನರು ಉಪಯೋಗಿಸುತ್ತಿರುವರು.



ಅಶ್ವವರ್ಗ
ಚ್ಯವನಪ್ರಾಶ
ಸುವರ್ಣ
ಮಾಲಿನೀ ವಸಂತ
ಮಕರಧ್ವಜಗುಟಿ
ಮುಂತಾದ
ಶಕ್ತಿವರ್ಧಕ
ಔಷಧಗಳನ್ನು
ತರಿಸಿರಿ.

ಕರ್ನಾಟಕ ಕೇಂದ್ರ ಮರಾಠಾಗಲ್ಲಿ, ಹುಬ್ಬಳ್ಳಿ.

ಇವರೇ ಮದುವೆಗೆ ಸೂತ್ರಧಾರಿ! ಬಾಯಿ ಬಿಟ್ಟಾಗಲೆಲ್ಲ ದಕ್ಷಿಣೆಯೆಂದು ಬೇಳುವ ಜನ! ತಾವೇ ಅರ್ಥ ಅರಿಯದ ಕರ್ಮಗಳನ್ನು ಮಾಡಿಸಿ, ಅವಶ್ಯಕ ಕರ್ಮಗಳನ್ನೇ ಮರೆದು, ಬೂದಿ ಬಳಿವ ಆಷಾಢಭೂತಿಗಳು. ಹತ್ತಾರು ಜನರೆದುರಿಗೆ ಮೋಸಮಾಡಲು ಧೈರ್ಯವಿರುವ ಇವರನ್ನು ನಿಜವಾಗಿಯೂ ಕೊಂಡಾಡಲೆ ಬೇಕು!

ಮದುವೆಯೇನೋ ಆಯಿತು. ಎಲ್ಲರ ಆಶೀರ್ವಾದಗಳೂ ಬಂದಿವೆ! ಎಲ್ಲಾ ಎದುರು ನೋಡುತ್ತಾರೆ—ಇವರಿರ್ವರೂ ಮುಂದೇ ಹೇಗೆ ಜೀವನ ತಳ್ಳುತ್ತಾರೆಂದು! ಜೀವನ ತಳ್ಳುವುದೇನು ಭಾರಿ ಕಾರ್ಯವಲ್ಲ, ಜೀವನದಲ್ಲಿ ಘನತೆಯಿದೆ: ಒಂದು ಗುರಿಯಿದೆ, ಒಂದೇ ದಾರಿಯಿದೆ. ಆ ಗುರಿಗೆ ನಮ್ಮೆಲ್ಲರನ್ನೊಯ್ಯಲು ಮದುವೆ ಒಂದು ಸಾಧನ. ಜೀವನದಲ್ಲಿ ಬೆಳಕು ಬರಬೇಕು. ಜೀವನವೆಂದರೆ "ಹುಟ್ಟು, ನುಡಿ, ಸಾವು" ಅಲ್ಲ. ಜೀವನದಲ್ಲಿ ಅರ್ಥ ಇದೆ; ಸೊಗಸಿದೆ. ಅದನ್ನು ತಿಳಿಯಬೇಕು. ನಮ್ಮ ಜೀವನ ಇತರರಿಂದ ಕಲಿತದ್ದಾದರೂ ಇತರರಿಗೆ ಮಾದರಿಯಾಗಿರಬೇಕು "ನಮ್ಮ ಪ್ರಯತ್ನಗಳು ಇನ್ನು ಮೇಲೆ ಹೆಚ್ಚು ಬಲವುಳ್ಳವು. ನಾವಿಬ್ಬರು ಸೇರಿದ್ದೇವೆ. ನಾವು ಸಾಧಿಸಿಯೇ ತೀರುತ್ತೇವೆ."

ಮದುವೆಯ ಕಾಣಿಕೆ ಇದು.

ಕಾಲ್ಪನಿಕ ಸಂಭಾಷಣೆ

★

ಜಯಂತಿಯ 'ಜೆನ್ನೋಣ'

ಜಪಾನಿಗಳ ನೀಚತನದ ಬಗೆಗೆ ಎಷ್ಟು ಬರೆದರೂ ಕಡಿಮೆಯೆ. ಆದರೆ ಈ ಸಂಭಾಷಣೆಯು ಚಿಕ್ಕದಾದರೂ ಎಲ್ಲವನ್ನೂ ತಿಳಿಯಾಗಿ ತಿಳಿಸುವುದು. ಇದನ್ನು ಬರೆದವನು ಚೀನಾದ ತತ್ತ್ವಜ್ಞಾನಿಯಾದ ಲಿನ್ ಯುೂಟೆಂಗ್‌ನು. ಇದರಲ್ಲಿ ಬರುವ ಪಾತ್ರಗಳು ಎರಡು. ಹಿರೋಟಾ (ಜಪಾನದ ರಾಜತಂತ್ರ ಪ್ರವೀಣ), ಅವನ ಮುಗ್ಧ ಮಗುವೊಂದು. ಮಗುವು ತಂದೆಗೆ ಪ್ರಶ್ನೆಗಳನ್ನು ಕೇಳುವುದು. ರಾಜಕಾರ್ಯದಲ್ಲಿ ಹುಲಿಯಂತಿದ್ದರೂ ಆ ಮುಗ್ಧ ಮಗುವಿನ ಎದುರು ಆ ತಂದೆ ಇಲಿಯಂತೆ ಆಗಬೇಕಾದ ಸಂದರ್ಭವನ್ನು ಲಿನ್ ಯುೂಟೆಂಗ್‌ನು ಚೆನ್ನಾಗಿ ಚಿತ್ರಿಸಿದ್ದಾನೆ.

ಮಗು :— ಅಪ್ಪಾ ! ಇಂದು ಮಧ್ಯಾಹ್ನ ನಮ್ಮಲ್ಲಿಗೆ ಚಹಕ್ಕೆ ಬರುವವರು ಯಾರು ?

ಹಿರೋಟಾ :— ಅವರು..........ವಾಂಗ್ ಶುಂ ಫು ಯಿ. (ಇವರು ಕೆಲಕಾಲ ಚೀನಾದ ಪರರಾಷ್ಟ್ರಮಂತ್ರಿಯಾಗಿದ್ದರು ; ಈಗ ದಿಲ್ಲಿಯಲ್ಲಿದ್ದಾರೆ.)

ಮಗು :— ಎಂದರೆ ಅವರು ಯಾರು ?

ಹಿರೋಟಾ : — ಆತ ಚೀನಾದೇಶದವನು.

ಮಗು :— ಚೀನಾದವರೊಡನೆ ಗೆಳೆತನ ಬೆಳೆಯಿಸುತ್ತಿಯೇನು, ಅಪ್ಪಾ ! ಚೀನಾದವರು ನಮ್ಮಷ್ಟು—ಜಪಾನದವರಷ್ಟು—ನಮ್ಮ ಅರ್ಧದಷ್ಟು ಕೂಡ ಒಳ್ಳೆಯವರಲ್ಲವೆಂದು ಹೇಳಿದ್ದೀಯೆ ; ಅಲ್ಲದೆ ನಮ್ಮ ಉಪಾಧ್ಯಾಯರು ಶಾಲೆಯಲ್ಲಿ ಚೀನಿಗಳ ಬಗೆಗೆ ಅನೇಕ ಬಗೆಯಾಗಿ—ಅಲ್ಲದ ಸಲ್ಲದ ಸಂಗತಿಗಳನ್ನು—ಹೇಳುತ್ತಿರುತ್ತಾರೆ.

ಹಿರೋಟಾ :— ಸುಮ್ಮನೆ ಕುಳಿತಿರು ; ಹೆಚ್ಚು ಮಾತು ಬೇಡ !

ಮಗು :— ಅಪ್ಪಾ........ನಾನೂ ಬರಲೆ ? ವಾಂಗ್ ಶುಂಫುಯಿಯವರನ್ನು ನಾನೂ ನೋಡಬೇಕೆಂದಿದ್ದೇನೆ!

ಹಿರೋಟಾ :— ನಿನ್ನನ್ನು ಕರೆದುಕೊಂಡು ಹೋಗಬಹುದಿತ್ತು, ಮಗು! ಆದರೆ ಇಲ್ಲದ ಪ್ರಶ್ನೆಗಳನ್ನು ಕೇಳುವ ವಿಚಿತ್ರ ಚಟವೊಂದಿದೆ. ನಿನಗೆ ಇಂದು ನಾವು—ಚೀನಾ ಜಪಾನ್ ಸಂಬಂಧದ ಬಗ್ಗೆ ಮಾತನಾಡುವವರಿದ್ದೇವೆ; ನಿನಗದು ತಿಳಿಯದು.

ರಾಜಕಾರಣಿಗಳ ಪರಸ್ಪರ ವಿರೋಧದಲ್ಲಿ ದ್ವೇಷದ ನಂಜು ಹೊತ್ತುತಿದ್ದರೆ ಅದೊಂದು ಆಶ್ಚರ್ಯವಲ್ಲ. ಪರಸ್ಪರ ಸ್ನೇಹದ ಮಾತಿನಲ್ಲಿ ಕೂಡ ಅದರ ನಂಜು ಆಟವಾಡುತ್ತಿರುತ್ತದೆ. ಎಂತಲೆ ಇಂದು ಮಿತ್ರರಾಷ್ಟ್ರವಾಗಿ ಇದ್ದವುಗಳು ನಾಳೆ ಶತ್ರುರಾಷ್ಟ್ರಗಳಾಗಿ ಪರಿಣಮಿಸುವುವು.

★

ಮಗು :— ಚೀನಾ-ಜಪಾನ್ ಸಂಬಂಧದ ಮಾತುಗಳು ತಿಳಿಯದಷ್ಟು ಗಡುಚಾಗಿವೆಯೆ ?

ಹಿರೋಟಾ :— ಅಹುದು....ಮತ್ತೆ !

ಮಗು :— ಅದೇಕೆ ? ಅವು ತಿಳಿಯಲು ಗಡುಚಾಗಿವೆಯೇಕೆ ?

ಹಿರೋಟಾ :— ಚೀನಾದವರೊಡನೆ ಗೆಳೆತನ ಬೆಳೆಯಿಸ ಬೇಕೆಂದು ನಮ್ಮ ಬಯಕೆ ಇದೆ; ಆದರೆ ಅವರಿಗೆ ಹಾಗೆ ಎನಿಸುವುದಿಲ್ಲ !

ಮಗು :— ಏಕೆ ? ನಮ್ಮ ಬಗ್ಗೆ ಅವರಿಗೆ ತಿರಸ್ಕಾರವೆ ?

ಹಿರೋಟಾ :— ಅಹುದು, ಯುರೋಪಿಯನರಿಗಿಂತ ಹೆಚ್ಚಿನ ತಿರಸ್ಕಾರವಿದೆ ನಮ್ಮಲ್ಲಿ.

ಮಗು :— ಅದೇಕೆ ? ಯುರೋಪಿಯನರಿಗಿಂತ ನಾವು ಕೆಟ್ಟವರಾಗಿದ್ದೇವೆಯೆ ?

ಹಿರೋಟಾ :— (ಮಾತು ಮರೆಯಿಸಬೇಕೆಂದು) .... ನೀನು....ಆ ಬೆರಳಿಗೆ ದಾರಸುತ್ತುವುದನ್ನು ನಿಲ್ಲಿಸುವಿಯೊ ಇಲ್ಲವೊ ?

ಮಗು :— (ಹಟದಿಂದ) ನಾವು ಒಳ್ಳೆಯ ಗೆಳೆಯರಾಗಿದ್ದರೆ ಅವರು ನಮ್ಮನ್ನು ತಿರಸ್ಕರಿಸಬೇಕೇಕೆ ?

ಹಿರೋಟಾ :— ಮಂಚುಕುವೊ ಸಲುವಾಗಿ !

ಮಗು :— ಮಂಚುಕುವೊ ನಮ್ಮದೇಶವೊ, ಅವರದೊ ?

ಹಿರೋಟಾ:—(ಉತ್ತರ ಕೊಡಲಾರದೆ) ಮತ್ತೆ—ಆ ದಾರದಿಂದ ಮಂಗತನ ಮಾಡತೊಡಗಿದೆಯಾ ? ಆ ದಾರದ ಎಳೆಗಳನ್ನು ಜಮಖಾನೆಯ ಮೇಲೆ ಕೆಡಹುತ್ತೀ ನೋಡು !

ಮಗು :—ಹಾಗಾದರೆ, ಚೀನಾದವರೊಡನೆ ಗೆಳೆತನ ಬೆಳೆಯಿಸುವುದು ಹೇಗೆ ?

ಹಿರೋಟಾ :— ಅವರಿಗೆ, ನಾವು ಸಾಲವಾಗಿ ಹಣಕೊಡುವೆವು; ಸಲಹೆಗಾರರನ್ನು ಕೊಡುವೆವು.

ಮಗು :— ಅವರಲ್ಲಿ ಯುರೋಪಿಯನ್ ಸಲಹೆಗಾರರು ಈಗಾಗಲೆ ಇಲ್ಲವೆ ? ಆ ಯುರೋಪಿಯನರೂ ಚೀನಾದವರೊಡನೆ ಗೆಳೆತನ ಬೆಳೆಯಿಸಬೇಕೆಂದಿರುವರೊ ? ಚೀನಾಕ್ಕೆ ಅವರೂ ದುಡ್ಡು ಕೊಡುವರೇನು ?

ಹಿರೋಟಾ :— ಅವರೂ ಕೊಡುವರು ; ಆದರೆ ಅವರಿಂದ ಕೊಡಗೊಡಬಾರದು ನಾವು. ಅವರು ದುಡ್ಡುಕೊಟ್ಟರೆ ಚೀನಾದ ಮೇಲೆ ಪ್ರಭುತ್ವ ಪಡೆಯುವರು. ಇದೆಲ್ಲ ನಿನಗೆ ತಿಳಿದಿರಬೇಕು, ಚಿಣ್ಣಾ !

ಮಗು :— ಮತ್ತೆ....ನಾವು ದುಡ್ಡು ಕೊಟ್ಟರೆ !....

ಹಿರೋಟಾ :— ನಾವು ದುಡ್ಡು ಕೊಡುವುದು, ಅವರ ಗೆಳೆತನ ಸಂಪಾದಿಸುವುದಕ್ಕೆ ; ಅವರಿಗೆ ಸಹಾಯಮಾಡಲಿಕ್ಕೆ !

ಮಗು :— ಹೀಗಿದ್ದರೆ ಚೀನಾದವರು ಯುರೋಪಿಯನರಿಗಿಂತ ನಮ್ಮಿಂದಲೇ ಹಣ ತೆಗೆದುಕೊಳ್ಳುವರು !

ಹಿರೋಟಾ :— ಇಲ್ಲ, ಮಗು, ನಾವು ಒತ್ತಾಯಪಡಿಸದೆ ತೆಗೆದುಕೊಳ್ಳುವುದಿಲ್ಲ.

ಮಗು :— ಇದು ನಿಜವಾಗಿಯೂ ಆಶ್ಚರ್ಯದ ಸಂಗತಿ ! ಅವರಿಗೆ ಬೇಡವಾದಾಗ, ಸಹಾಯತೆಗೆದುಕೊಳ್ಳಿರೆಂದು ಬಲುಮೆಯೇಕೆ ?

ಹಿರೋಟಾ :— (ಉಪಾಯಗಾಣದೆ). ಆ ನಿನ್ನ ಬೆರಳನ್ನು ಬಾಯಲ್ಲಿಟ್ಟುಕೊಳ್ಳಬೇಡ ; ದಂತವೈದ್ಯನ ಕಡೆಗೆ ಇನ್ನೂ ಹೋಗಿಲ್ಲವೊ ?

ಮಗು :— ಆದಾಯಿತು ಬಿಡು ; ನೀನು ಚೀನೀ ಮನುಷ್ಯ ಆಗಿದ್ದರೆ, ಜಪಾನಿಗಳನ್ನು ನಂಬುತ್ತಿದ್ದೆಯಾ ?

ಹಿರೋಟಾ :— ಇಲ್ಲಿ ನೋಡು, ಮಗು, ಚೀನಾದವರೊಂದಿಗೆ ನಾವು ಗೆಳೆಯರ ಹಾಗೆ ಇಲ್ಲ. ಆದರೆ ಈಗ ಗೆಳೆಯರಾಗಬೇಕೆಂದು ಇದ್ದೇವೆ. ಅವರಿಗೆ ಹಣ ಕೊಡಬೇಕೆಂದಿದ್ದೇವೆ ; ಸಲಹೆಗಾರರನ್ನು ಕಳಿಸಬೇಕೆಂದಿದ್ದೇವೆ. ಅವರ ದೇಶವನ್ನು ಸಂರಕ್ಷಿಸಬೇಕೆಂದಿದ್ದೇವೆ. ಅವರ ದೇಶವನ್ನು ಚೊಕ್ಕಟಮಾಡಬೇಕೆಂದಿದ್ದೇವೆ. ಆದುದರಿಂದ ಅವರಿಗೆ ನಮ್ಮ ನಿಜವಾದ ಉದ್ದೇಶವು ತಿಳಿಯುವಂತೆ ಮಾಡುತ್ತೇವೆ !

ಮಗು :— ನಮ್ಮ ದೇಶದ ನಿಜವಾದ ಉದ್ದೇಶವೇನು ಹಾಗಾದರೆ ?

ಹಿರೋಟಾ :— ಹುಚ್ಚಾ, ನಾನಾಗಲೆ ಹೇಳಲಿಲ್ಲವೆ ? ನಾವು ನಿಜವಾಗಿ ಸಹಾಯಮಾಡಲು ಸಿದ್ಧರಿದ್ದೇವೆಂಬುದನ್ನು ವಾಂಗ್ ಶುಂಘುಯಿಗೆ ತೋರಿಸಬೇಕೆಂದಿದ್ದೇವೆ.

ಮಗು :— ವಾಂಗ್ ಶುಂಘುಯಿಯು ಹುಚ್ಚನೇನು ?

ಹಿರೋಟಾ :— ಅದು ಹೇಗಪ್ಪಾ, ಅವನೊಬ್ಬ ಕಾನೂನು-ಪಂಡಿತ ; ತುಂಬ ಜ್ಞಾನಿ !

ಮಗು :— ನಾನೂ ಮುಂದೆ ವಾಂಗ್ ಶುಂಘುಯಿಯಂತೆ ಆಗಬಹುದೇನು ?

ಹಿರೋಟಾ :— ಹೆಚ್ಚು ಅಭ್ಯಾಸಮಾಡಿ ಪ್ರಯತ್ನಮಾಡು !

ಮಗು :— ಈಗ ನಾನೇ ವಾಂಗ್ ಶುಂಘುಯಿಯೆಂದು ತಿಳಿ. ನಮ್ಮ ದೇಶದ ಉದ್ದೇಶಗಳನ್ನು ಹೇಗೆ ನನ್ನ ಮುಂದೆ ಹೇಳುತ್ತೀಯೆ ? ಹೇಳು ನೋಡೋಣ !

ಹಿರೋಟಾ :— ಅದರಲ್ಲೇನು, ಚಿನ್ನಾ ! ನಾವು ಹೇಗೆ ಹಣ ಕೊಡುವೆವು ; ಹೇಗೆ ಸೈನಿಕ ಸಲಹೆಗಾರರನ್ನು ಕೊಡುವೆವು ; ಹೇಗೆ ದೇಶದ ಸಂರಕ್ಷಣೆ ಮಾಡುವೆವು ಎಂಬುದನ್ನೆಲ್ಲ— ಹೇಳುವೆವು.

ಮಗು :— ಈಗ ಹೇಳು : ನೀವು ಇಷ್ಟೆಲ್ಲ ಕಷ್ಟಪಡುವುದು ಏತಕ್ಕಾಗಿ ? ಚೀನಾವನ್ನು ತನ್ನಷ್ಟಕ್ಕೆ ಬಿಟ್ಟುಬಿಡಬಾರದೆ ?

ಹಿರೋಟಾ :— ಇಲ್ಲಿ ಕೇಳು ; ಇದು ಚೀನಾದ ವ್ಯಾಪಾರವನ್ನು ಕಸಿದುಕೊಳ್ಳಬೇಕೆಂದೂ ಚೀನಾದಿಂದ ಯುರೋಪಿಯನ್ನರನ್ನು ಹೊರಗೆಹಾಕಬೇಕೆಂದೂ ನಮ್ಮ ಮನೀಷೆ. ನಾವು ಚೀನಾದವರಿಗೆ ಬೇಕಾದಷ್ಟು ಮಾರಬಹುದು, ಚೀನಾದವರು ನಮ್ಮಲ್ಲಿ ಬೇಕಾದಷ್ಟು ಕೊಳ್ಳಬಹುದು ; ಇದೇ ಒಳ್ಳೆಯದು. ಏಕೆಂದರೆ ವಿಶಾಲ-ಏಸಿಯದ ಭಾವನೆಯು ಒಳ್ಳೆಯದು. ರಸಿಯನರ ವಿರುದ್ಧ ನಮ್ಮೊಡನೆ ಸೇರುವಂತೆ ಚೀನಾದವರನ್ನು ಒಲಿಸಿಕೊಳ್ಳಬೇಕು. ನಮ್ಮಲ್ಲಿ ಕಬ್ಬಿಣವಿಲ್ಲ ; ಹತ್ತಿಯಿಲ್ಲ ; ರಬ್ಬರು ಇಲ್ಲ. ಒಂದು ವೇಳೆ ಯುದ್ಧ ಪ್ರಾರಂಭವಾದರೆ ಒಂದು ವರುಷಕ್ಕಿಂತ ಹೆಚ್ಚಿನ



ಆಹಾರ ಸಾಮಗ್ರಿ ನಮ್ಮಲ್ಲಿಲ್ಲ. ಚೀನಾದ ಸಹಾಯದಿಂದ ರಶಿಯವನ್ನು ಸದೆಬಡಿಯಲಿಕ್ಕಾಗುವುದು.

ಮಗು :— ಇದನ್ನೆಲ್ಲ ವಾಂಗ್ ಶಂಘಾಯಿಗೆ ಹೇಳುವಿಯೇನು.... ಮತ್ತೆ ?

ಹಿರೋಟಾ :— ರಾಜತಂತ್ರಿಯ ಮಗನಾದ ನೀನು ಇದನ್ನು ಈಗಾಗಲೆ ಕಲಿತದ್ದು ಒಳ್ಳೆಯದೆ. ನಾವು—ರಾಜತಂತ್ರಪ್ರವೀಣರು—ನಮ್ಮ ಮನದಲ್ಲಿದ್ದುದನ್ನು ನೇರವಾಗಿ ಹೇಳುವುದಿಲ್ಲ. ಆದರೆ ಬೇರೆಯವರಲ್ಲಿಯ—ಸುಳ್ಳಿನ ಮರೆಯಲ್ಲಿಯ ಸತ್ಯವನ್ನು ತಿಳಿಯಲು ಕಲಿತಿರುತ್ತೇವೆ. ವಾಂಗ್ ಶಂಘಾಯಿಗೆ ಇದನ್ನೇನು ಹೇಳಬೇಕಾಗಿಲ್ಲ!

ಮಗು :— ಹಾಗಾದರೆ, ಏನು ಹೇಳುವುದು ಅವರಿಗೆ?

ಹಿರೋಟಾ :—ಇಷ್ಟೇ ಹೇಳುವುದು : "ಇಂದಿನಿಂದ ಚೀನಾ-ಜಪಾನದ ಸಹಕಾರಯುಗವು ಪ್ರಾರಂಭವಾಯಿತು. ಏಶಿಯದ—ಜಗತ್ತಿನ—ಶಾಂತತೆಯನ್ನು ಕಾಪಾಡುವುದೆ ನಮ್ಮ ಧ್ಯೇಯ" ಎಂದು ಮುಂತಾಗಿ.

ಮಗು :— ಹೀಗೇನು ? ಇದನ್ನೆಲ್ಲ ಎಲ್ಲಿ ಕಲಿತೆ? ಶಾಲೆಯಲ್ಲಿ ಕಲಿಸುವರೇನು ಇಂತಹ ಭಯಾನಕ ವಿಷಯವನ್ನು .... ಇಷ್ಟು ಅಂದವಾಗಿ ಹೇಳಲು ?

ಹಿರೋಟಾ :— ನಿನಗೆ ಶಾಲೆಯಲ್ಲಿ ಕಲಿಸುತ್ತಿರುವುದೇ ಅದನ್ನು !

ಮಗು :— ಅಲ್ಲಾ, ಅಪ್ಪಾ ! ನಿಮ್ಮ ಇಂಗಿತವನ್ನು ವಾಂಗ್ ಶಂಘಾಯಿ ಮತ್ತು ಅವನ ದೇಶದವರು ತಿಳಿದು, ನಿಮ್ಮ ಸಹಾಯವನ್ನು ನಿರಾಕರಿಸಿದರೆ, ಚೀನಾದ ವ್ಯಾಪಾರವನ್ನು ಕಸಿದುಕೊಳ್ಳುವುದು ಹೇಗೆ? ಆಮೇಲೆ ಮುಂದೆಯೇನು ಮಾಡುವಿರಿ ?

ಹಿರೋಟಾ :— ಆ ಮೇಲಿನದನ್ನು ಸಾಮ್ರಾಜ್ಯಸೇನೆಯು ನೋಡಿಕೊಳ್ಳುವುದು.

ಮಗು :— ಈ ರೀತಿ ಗೆಳೆತನ ಬೆಳೆಯಿಸುವುದು ಹೇಗೆ? ಇದರಿಂದ ಅವರು ನಮ್ಮನ್ನು ಮೊದಲಿಗಿಂತಲೂ ಹೆಚ್ಚು ತಿರಸ್ಕರಿಸುವರು; ಈ ಸೇನೆಯ ಪದ್ಧತಿ ನಿನಗೆ ಸೇರುವುದೆ ?

ಹಿರೋಟಾ :— ಹುಶ್ ! ಗಟ್ಟಿಯಾಗಿ ಮಾತನಾಡಬೇಡ ! ಯಾರಾದರೂ ಕೇಳಿಯಾರು ! .... ನೀನು ಬೇಗನೆ ದಂತವೈದ್ಯನ ಕಡೆಗೆ ಹೋಗು ! ಹೋಗಪ್ಪಾ! ಆ ದಾರದ ಎಳೆಗಳನ್ನು ಕೆಳಗೆ ಕೆಡುಹಬೇಡ !

ಆ ಮಗುವು ಆ ದಾರವನ್ನು ಎಳೆಯುತ್ತ ಹೊರಗೆ ಹೋಗುವುದು. ಹಿರೋಟಾನು ನಿಡಿದಾದ ಉಸಿರೊಂದನ್ನು ಎಳೆಯುವನು; ಕೆಳಗೆ ಕೈ ಚೆಲ್ಲುವನು.

ಗನೋರಿಯಾ, ಪರಮಾರೋಗ, ಉಷ್ಣರೋಗದ ಮೇಲೆ

ಔಷಧ

೭ ದಿವಸಗಳಲ್ಲಿ ಈ ರೋಗ ಗುಣಹೊಂದುವುದು ಗ್ಯಾರಂಟಿ !

ಶರೀರದಿಂದ ಕೀವ ಬರುತ್ತಿದ್ದರೆ, ಧೋತರಕ್ಕೆ ಹಳದಿ ಡಾಗು ಹತ್ತುತ್ತಿದ್ದರೆ ಶರೀರದಿಂದ ಬಾವು, ಶರೀರದಿಂದ ತೊಗಲು ಹಿಂದಕ್ಕೆ ಸರಿಯದಿದ್ದರೆ ಶರೀರದ ಮುಕ್ತು ಘಾಯವಾಗಿದ್ದರೆ, ಚಟ್ಟಿಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು, ನಡುಸೋಯುವುದು, ಸ್ತ್ರೀಯರ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು, ಗರ್ಮಿಯಿಂದ ಗರ್ಭಕೋಶನಾಶವಾಗಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲು ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ, ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ-ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ : ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ ಕ್ಕೆ ೩ ರೂ. ಪೋಸ್ಟ್ ಚಾರ್ಜು ೧೦ ಆಣೆ.

ಮಕ್ಕಳನ್ನು ಹಡೆಯುವದು ಸಾಕು

ಅಶಕ್ತ ಹೆಣ್ಣುಮಕ್ಕಳಿಗೆ ★ ರೋಗಗ್ರಸ್ತ ಸ್ತ್ರೀಯರಿಗೆ

ಬರ್ಥ್ ಕಂಟ್ರೋಲ್

★

ಏಳು ದಿವಸದ ಈ ಮಾತ್ರೆಗಳನ್ನು ಸೇವನೆ ಮಾಡಿದರೆ, ಮುಂದೆ ಖಂಡಿತವಾಗಿಯೂ ಮಕ್ಕಳಾಗುವುದಿಲ್ಲ, ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ : ಪ್ರತಿ ದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆ ೧ ಗುಳಿಗೆ ಯಂತೆ ಊಟಕ್ಕೆ ಮೊದಲು ತಕ್ಕೊಳ್ಳಬೇಕು. ೭ ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ : ಹರಬೀಜಲ್ಲೆ ಬಿಡಬೇಕು.

೭ ದಿವಸದ ಸಂಪೂರ್ಣ ಔಷಧದ ಕಿಮ್ಮತ್ತು

೫ ರೂಪಾಯಿ ಪೋಸ್ಟ್ ಚಾರ್ಜು ೧೦ ಆಣೆ

ಏಜಂಟರು :

ಗದಗ ಫಾರ್ಮಸಿ, ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ ಫಾರ್ಮಸಿ.

ವಿಳಾಸ :— ಹಾಲಪ್ಪಾ ದಾವಣಗೇರಿ, ಆಯುರ್ವೇದ ಔಷಧಗಳ ದವಾಖಾನೆ, ಗದಗ

ಪ್ರಾದೇಶಿಕ ವಿಶ್ವವಿದ್ಯಾಲಯ

ಶ್ರೀ. ಆರ್. ವಿ. ಜಾಗಿರದಾರ, ಕರ್ನಾಟಕ ಕಾಲೇಜ್, ಧಾರವಾಡ

★

ನಮಗೀಗ ಯಾವ ಬಗೆಯ ವಿಶ್ವವಿದ್ಯಾಲಯವು ಆವಶ್ಯಕ, ಸುಲಭಸಾಧ್ಯ? ವಿಶ್ವವಿದ್ಯಾಲಯಗಳು ತಮ್ಮ ಶಿಕ್ಷಣದ ಭಾಷೆಯೆಂದು ಯಾವ ಭಾಷೆಯನ್ನಿರಿಸಿ ಕೊಳ್ಳಬೇಕು? ವಿಶ್ವವಿದ್ಯಾನಿಲಯದ ಶಿಕ್ಷಣಕ್ಕೆ ಅರ್ಹನಾಗಬೇಕಾದ ವಿದ್ಯಾರ್ಥಿಯ ಜ್ಞಾನದ ಮಟ್ಟವೇನಿರಬೇಕು?

★

ಪ್ರಶ್ನಗಳ ಪ್ರಸ್ತಾವ

ಮಹಾರಾಷ್ಟ್ರ ವಿಶ್ವವಿದ್ಯಾಲಯ ವಿಚಾರಣಾಸಮಿತಿಯು ಈಗಾಗಲೆ ತನ್ನ ಕಾರ್ಯಕ್ಕೆ ಉಜ್ಜುಗಿಸಿದೆ. ವಿಚಾರಣೆಯ ಮೊದಲ ಹೆಜ್ಜೆಯಾಗಿ ಸಮಿತಿಯವರು ಒಂದು ಪ್ರಶ್ನಾವಲಿಯನ್ನು ಹೊರಡಿಸಿದ್ದಾರೆ. ವಿಶ್ವವಿದ್ಯಾಲಯದ ವಿಷಯಕ್ಕೆ ಸಂಬಂಧಪಟ್ಟ ಎಲ್ಲ ಮಾತುಗಳೂ ಈ ಪ್ರಶ್ನಾವಲಿಯಲ್ಲಿ ಸಮಾವಿಷ್ಟವಾಗಿವೆ. ತಜ್ಞರು ತಂತಮಗೆ ಹೆಚ್ಚು ನಿಕಟವಾದ ತಂತಮ್ಮ ಅನುಭವಕ್ಕೆ ಹೊಂದಿದ ಸಂಗತಿಗಳ ಬಗ್ಗೆಯೆ ಉತ್ತರಗಳನ್ನು ಕಳುಹಿಸಬೇಕೆಂದು ಹೇಳಿಕೊಳ್ಳುವುದರಲ್ಲಿ ಸಮಿತಿಯವರು ಮುಖ್ಯ ವಿಷಯದ ಮಹತ್ತ್ವವನ್ನು ಕಂಡುಹಿಡಿದಿದ್ದಾರೆ. ಸದ್ಯಕ್ಕೆ ಈ ಲೇಖವನ್ನು ಬರೆಯುವುದರಲ್ಲಿ ಆ ಪ್ರಶ್ನಾವಲಿಗೆ ಉತ್ತರಗಳನ್ನು ಕಾಣಿಸುವ ಉದ್ದೇಶ ನಮಗಿಲ್ಲ; ಅಂತಹ ತಜ್ಞತೆಯ ಹೊಣೆಯನ್ನೂ ನಾವು ಹೊರಲಿಚ್ಛಿಸುವುದಿಲ್ಲ. ಆದರೆ ಇಂದು ವಿಶ್ವವಿದ್ಯಾಲಯಗಳ ಪ್ರಶ್ನೆ ಕರ್ನಾಟಕಕ್ಕೂ ಸಂಬಂಧಿಸಿದೆ. ಪ್ರಾದೇಶಿಕ ವಿಶ್ವವಿದ್ಯಾಲಯವು ಕರ್ನಾಟಕಕ್ಕೂ ಒಂದು ಬೇಕೆಂದು ಕನ್ನಡಿಗರಿಗೂ ಎನಿಸುತ್ತಲಿದೆ; ಈ ವಾತಾವರಣದಲ್ಲಿ ಮ. ವಿ. ವಿ. ಸಮಿತಿಯ ಪ್ರಶ್ನಾವಲಿಯ ಸಹಾಯದಿಂದ ಪ್ರಾದೇಶಿಕ ವಿಶ್ವವಿದ್ಯಾಲಯಗಳ ಸ್ಥಾಪನೆಯ ವಿಷಯವಾಗಿ ಸಾಮಾನ್ಯದೃಷ್ಟಿಯಿಂದ ವಿಚಾರಮಾಡುವುದು ಹೆಚ್ಚು ಸುಲಭ, ಅಗತ್ಯ, ಅನುಕೂಲ ಎಂದು ಕಂಡು ನಾವೀ ಲೇಖಕ್ಕೆ ತೊಡಗಿದ್ದೇವೆ.

ವಿಚಾರಿಸತಕ್ಕ ವಿಷಯಗಳು

ಸಮಿತಿಯವರ ಪ್ರಶ್ನಾವಲಿಯಿಂದ ವಿಶ್ವವಿದ್ಯಾಲಯದ ವಿಷಯದಲ್ಲಿ ಮಹತ್ತ್ವದ್ದಾದ ಕೆಲವು ಮುಖ್ಯ ಮಾತುಗಳನ್ನು ತೆಗೆಯಬಹುದಾಗಿದೆ. (೧) ಮುಂಬಯಿ ಪ್ರಾಂತದಲ್ಲಿ ಬೇರೆ ವಿಶ್ವವಿದ್ಯಾಲಯಗಳನ್ನು (ಈಗ ಇದ್ದುದು ಒಂದೆ) ಸ್ಥಾಪಿಸುವ ಸಮಯ ಮತ್ತು ಅಗತ್ಯ ಇದೆಯೆ? (೨) ಹೊಸತಾಗಿ ಸ್ಥಾಪಿಸಬೇಕಾದ ವಿಶ್ವವಿದ್ಯಾಲಯಗಳ ಸ್ವರೂಪ ಎಂತಹದಿರಬೇಕು? [ಸದ್ಯಕ್ಕೆ ವಿಶ್ವವಿದ್ಯಾಲಯಗಳಲ್ಲಿ ಮೂರು ಮಾದರಿ ಇವೆ— (i) Affiliating and examining— ಸದಸ್ಯತ್ವ ಮತ್ತು ಪರೀಕ್ಷೆಯ ಅಧಿಕಾರ ಇದ್ದ ಮಾದರಿ, (ii) Unitary and teaching— ಸ್ಥಾನಿಕವಾಗಿದ್ದು ಒಂದೇ ಕ್ರಮದ ಶಿಕ್ಷಣವನ್ನು ಕೊಡುವಂತಹ ಮಾದರಿ, ಮತ್ತು (iii) Federal— ಸಂಯುಕ್ತ (ಬೇರೆ ಸಂಸ್ಥೆಗಳು ಇದರ ಘಟಕಗಳು) ಮಾದರಿ. ಈ ಮೂರನ್ನೂ ಪ್ರಶ್ನಾವಲಿಯಲ್ಲಿಯೆ ಕಾಣಿಸಿದೆ. ಮುಂಬಯಿ ವಿಶ್ವವಿದ್ಯಾಲಯವು ಮೊದಲನೆಯ ಮಾದರಿಯದು. ಶಾಲೆ-ಕಾಲೇಜುಗಳು ಇದಕ್ಕೆ ಕೆಲವು ಕರಾರುಗಳನ್ನೊಪ್ಪಿ ಸದಸ್ಯರಾಗುವವು. ಈ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಪರೀಕ್ಷಿಸುವ ಅಧಿಕಾರ ವಿಶ್ವವಿದ್ಯಾಲಯಕ್ಕೆ.] (೩) ಶಿಕ್ಷಣದ ಭಾಷೆ ಯಾವುದಿರಬೇಕು? ಪ್ರಾಂತಭಾಷೆಯೆ ಇರುವುದಾದರೆ ಅದರ ಅನುಕೂಲತೆ-ತೊಂದರೆಗಳಾವುವು? (೪) ವಿಶ್ವವಿದ್ಯಾಲಯವನ್ನು ಸೇರುವ ಮುಂಚೆ ವಿದ್ಯಾರ್ಥಿಯು ಎಷ್ಟರಮಟ್ಟಿಗೆ ಅರ್ಹತೆಯನ್ನು ಪಡೆದಿರಬೇಕು? (ಸದ್ಯಕ್ಕೆ ಮ್ಯಾಟ್ರಿಕ್ಯುಲೇಶನ್ ತರಗತಿ ದಾಟಿದರೆ ವಿಶ್ವವಿದ್ಯಾಲಯ ಸೇರುವ ಅರ್ಹತೆ ಇದೆ.) (೫) ಮೇಲಿನ ಶಿಕ್ಷಣದ ಶಾಲೆಗಳಿಗೂ ವಿಶ್ವವಿದ್ಯಾಲಯಕ್ಕೂ ಯಾವ ಸಂಬಂಧವಿರತಕ್ಕದ್ದು? (೬) ವಿಶ್ವವಿದ್ಯಾಲಯಕ್ಕೂ ಸಾರ್ವಜನಿಕರಿಗೂ ಯಾವ ರೀತಿಯ ಹೊಂದಿಕೆ ಇರಬೇಕು?

ಪ್ರಾದೇಶಿಕ ವಿಶ್ವವಿದ್ಯಾಲಯಗಳು

ಮುಂಬಯಿ ಪ್ರಾಂತದಲ್ಲಿ ಸದ್ಯಕ್ಕೆ ಒಂದೇ ವಿಶ್ವವಿದ್ಯಾಲಯ

ಇದೆ; ಹೆಚ್ಚು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದು ಅತ್ಯಗತ್ಯವಿದೆ, ಎಂಬ ಮಾತನ್ನು ಸುಮಾರು ಇಪ್ಪತ್ತು ವರ್ಷಗಳ ಹಿಂದೆಯೆ ತಜ್ಞರದೊಂದು ಸಮಿತಿ ಹೇಳಿದೆ. ಈ ಇಪ್ಪತ್ತು ವರ್ಷಗಳಲ್ಲಿ ಆ ಮಾತಿಗೆ ಬಲವನ್ನು ಕೊಡುವ ಸಂಗತಿಯೆ ಬೆಳೆದಿದೆ. ಸದ್ಯದ ವಿಶ್ವವಿದ್ಯಾಲಯವು ಇಡಿಯ ಮುಂಬಯಿ ಪ್ರಾಂತವನ್ನು (ಸಿಂಧವೂ ಇದರಲ್ಲಿಯೆ ಸೇರಿದೆ)ತನ್ನ ಆಡಳಿತಕ್ಕೆ ಒಳಪಡಿಸಿದೆ. ಕ್ಷೇತ್ರವು ಇಷ್ಟು ತೀರ ವಿಶಾಲವಾದುದಕ್ಕೆ ಉಚ್ಚ-ಶಿಕ್ಷಣವು ಹೆಚ್ಚಾಗಿ ಪ್ರಚಾರವಾಗಲು ಅನುಕೂಲವೆನಿಸುವುದಿಲ್ಲ. ಒಂದು ವಿಶ್ವವಿದ್ಯಾಲಯ, ಅದರ ಸದಸ್ಯತ್ವದಲ್ಲಿದ್ದ ಇಂತಿಷ್ಟು ಸಂಸ್ಥೆಗಳು; ಆ ಸಂಸ್ಥೆಗಳನ್ನು ಸೇರದವರಿಗೆ ಉಚ್ಚಶಿಕ್ಷಣದ ಲಾಭವೆ ದೊರೆಯುವಂತಿಲ್ಲ. ಸದ್ಯದ ಅನುಭವದಲ್ಲಿ ಹೇಳುವುದಾದರೆ ನಾಲ್ಕಾರು ನಗರಗಳಲ್ಲಿ ಇರುವ ಶಕ್ತಿ ಇದ್ದವರಿಗೆಯೆ ವಿಶ್ವವಿದ್ಯಾಲಯದ ಪರಿಚಯ. ಇದಲ್ಲದೆ, ಇಂದು ಮಾತೃ-ಭಾಷೆಗಳ ರೂಢಿ ಶಾಲೆಗಳಲ್ಲಿ ಕಡ್ಡಾಯವಾಗಿದೆ. ಮುಂಬಯಿ ಪ್ರಾಂತದಲ್ಲಿ ಗುಜರಾತಿ, ಮರಾಠಿ, ಕನ್ನಡ, ಉರ್ದು ಮತ್ತು ಸಿಂಧಿ ಎಂಬ ಐದು ಮಾತೃಭಾಷೆಗಳ ಸಂಬಂಧ ವಿಶ್ವವಿದ್ಯಾ-ಲಯಕ್ಕೆ ಬರುವುದು. ಶಿಕ್ಷಣಕ್ರಮದಲ್ಲಿ, ಪರೀಕ್ಷಾಕ್ರಮದಲ್ಲಿ, ಪಾಠಕ್ರಮ (syllabus)ದಲ್ಲಿ ಏಕರೂಪತೆಯಾಗಲು ತಜ್ಞತೆಯಾಗಲಿ ದೊರೆಯುವುದು ಈ ಪರಿಸ್ಥಿತಿಯಲ್ಲಿ ಅಸಂಭವನೀಯವೆ. ಹೀಗೆ ಇನ್ನೂ ಅನೇಕ ಕಾರಣಗಳಿಗಾಗಿ ನಮ್ಮ ಪ್ರಾಂತದಲ್ಲಿ ಹೆಚ್ಚು ವಿಶ್ವವಿದ್ಯಾಲಯಗಳಿರುವುದು ತೀರ ಅಗತ್ಯವಾಗಿದೆ ಎನಬಹುದು.

ವಿಶ್ವವಿದ್ಯಾಲಯಕ್ಕೆ ಚೈತನ್ಯಬೇಕು

ವಿಶ್ವವಿದ್ಯಾಲಯಗಳು ಹೆಚ್ಚಾಗಿ ಬೇಕೆಂಬುದರಿಂದಲೆ ಸಮಾಧಾನವಾಗುವಂತಿಲ್ಲ. ಸದ್ಯದ ನಮ್ಮ ಸಾಮಾಜಿಕ ಮತ್ತು ರಾಷ್ಟ್ರೀಯ ಜೀವನದಲ್ಲಿ ವಿಶ್ವವಿದ್ಯಾಲಯಗಳು ಒಂದು ಉಪಯುಕ್ತತೆಯನ್ನು ತಾಳಬೇಕಾದರೆ ಅವುಗಳಲ್ಲಿ ಅಂತಹ ಚೈತನ್ಯಬೇಕಾಗುವುದು. ಅದಕಾಗಿಯೆ ಅವುಗಳ ಸ್ವರೂಪ ಎಂತಹದಿರಬೇಕು ಎಂಬ ಪ್ರಶ್ನೆಗೆ ಮಹತ್ತ್ವವಿದೆ. ಸದ್ಯದ ನಮ್ಮ ವಿಶ್ವವಿದ್ಯಾಲಯದ ಸ್ವರೂಪವೇನು? ಕೆಲವು ಕರಾರುಗಳ ಮೇಲೆ ಬೇರೆ ಬೇರೆ ವಿದ್ಯಾಲಯ (ಉಚ್ಚಶಿಕ್ಷಣದ ಸಂಸ್ಥೆ) ಗಳನ್ನು ತನ್ನ ಸದಸ್ಯತ್ವದಲ್ಲಿ ಸೇರಿಸಿಕೊಂಡು, ಆ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಪರೀಕ್ಷಿಸುವ ಎಲ್ಲ ಅಧಿಕಾರವನ್ನು ಯುನಿವರ್ಸಿಟಿಯು ತನ್ನ ಕಡೆಗಿಟ್ಟುಕೊಳ್ಳುವುದು. ಎಂದರೆ ಫೀ ಹಣವನ್ನು ಪಡೆದು ಪರೀಕ್ಷೆಗಳನ್ನು ನಡೆಯಿಸುವ ದಳ್ಳಾಳಿ ವ್ಯವಹಾರವನ್ನು ಬಿಟ್ಟರೆ ಯುನಿವರ್ಸಿಟಿಗೆ ಬೇರೆ ಮಹತ್ತ್ವದ ಕೆಲಸವೆ ಇಲ್ಲವೆಂದು ಹೇಳ-ಬಹುದು. 'ಪಾಠಕ್ರಮ (syllabus) ವನ್ನು ಯುನಿವರ್ಸಿಟಿಯೆ ಸಿದ್ಧಪಡಿಸುವುದಲ್ಲ' ಎಂದು ಕೆಲವರಿಗೆ ಎನಿಸಬಹುದು. ಆದರೆ ಯುನಿವರ್ಸಿಟಿಯು ಗೊತ್ತುಪಡಿಸುವುದು ಪಾಠಕ್ರಮವನ್ನಲ್ಲ, ಹೆಚ್ಚಾಗಿ ಪಠ್ಯವಿಷಯ ಮತ್ತು ಪಠ್ಯಪುಸ್ತಕಗಳನ್ನು; ಇದಲ್ಲದೆ ಉಚ್ಚಶಿಕ್ಷಣವನ್ನು ನಡೆಯಿಸುವ ಶಿಕ್ಷಕರನ್ನು ನಿಯಮಿಸುವುದರಲ್ಲಾಗಲಿ, ಶಿಕ್ಷಣಕ್ರಮದಲ್ಲಿ ಏಕರೂಪತೆಯನ್ನು ತರುವುದಕ್ಕಾಗಲಿ ವಿಶ್ವವಿದ್ಯಾಲಯಕ್ಕೆ ಅಧಿಕಾರವಿಲ್ಲ. ಇಷ್ಟೆಯೇಕೆ? ಬೇರೆ ಬೇರೆ ವಿದ್ಯಾಲಯಗಳಲ್ಲಿ ಹೆಚ್ಚು ಕಡಮೆಯಾಗಿರುವ ವೇತನ (ಫೀ) ವನ್ನು ಒಂದುಗೊಳಿಸಲಾಗದು ವಿಶ್ವವಿದ್ಯಾಲಯ. ಬೇರೆ ಬೇರೆ ಸಂಸ್ಥೆಗಳಲ್ಲಿ ಬೇರೆ ಬೇರೆ ಬೋಧಕ ಗ್ರಂಥಗಳನ್ನುಪಯೋಗಿಸಿದರೂ ಅದನ್ನು ತಡೆವುದಾಗಲಿ, ಅದರ ಗೊಡವೆಯಾಗಲಿ ಯುನಿವರ್ಸಿಟಿಯ ಅಧಿಕಾರಕ್ಕೆ ಸೇರಿಲ್ಲ. ಸದ್ಯದ ಮಾದರಿಯು ನಮ್ಮ ಇಂದಿನ ಜೀವನಕ್ಕೆ—ವಿದ್ಯೆಯ ಪ್ರಸಾರಕ್ಕೆ ಅನುಕೂಲವಲ್ಲ ಎಂಬುದನ್ನು ಅನೇಕ ತಜ್ಞರು ಹೇಳುತ್ತಿದ್ದಾರೆ. ಅದರಂತೆಯೆ, unitary and teaching—ಸ್ಥಾನಿಕವಾಗಿದ್ದು ಒಂದೇತರದ ಶಿಕ್ಷಣಕ್ರಮವನ್ನು ಕೊಡುವ ಮಾದರಿಯೂ ಸಮಾಧಾನಕಾರಕವೆನಿಸದು ಎಂದೂ ಹೇಳಬೇಕಾಗುವುದು. ನಮ್ಮಲ್ಲಿ ಇಂದು ಬೆಳೆಯುತ್ತಿರುವ ಏಕರಾಷ್ಟ್ರೀಯ ಭಾವನೆ, ಮತ್ತು ನಮ್ಮ ಇಂದಿನ ಪ್ರಗತಿಗೆ ಅಗತ್ಯವಾದ ಔದ್ಯೋಗಿಕ ಮತ್ತು ವೈಜ್ಞಾನಿಕ ಜ್ಞಾನಪ್ರಸಾರ—ಇವೆರಡನ್ನು ಮುಖ್ಯವೆಂದು ಲಕ್ಷ್ಯದಲ್ಲಿಟ್ಟುಕೊಂಡರೆ ಈ ಮಾದರಿಯ ಕೊರತೆ ನಮಗೆ ಸ್ಪಷ್ಟವಾಗಿ ತೋರುವುದು. ಇಂದು ನಮಗೆ ಪ್ರಾರಂಭದ ಶಿಕ್ಷಣವೆ ಸಾಕಷ್ಟಾಗಿ ಇರುವುದಿಲ್ಲ; ಒಕ್ಕಲುತನ, ಉದ್ಯೋಗ, ಹಳೆಯ ಇಲ್ಲವೆ ಪಶ್ವಿಯ ಕಸಬುಗಳು, ಯಾಂತ್ರಿಕ ಜ್ಞಾನ— ಇಂತಹವುಗಳಿಗೆ ಸಂಬಂಧಿಸಿದ ಶಿಕ್ಷಣಸಂಸ್ಥೆಗಳಂತೂ ಇಲ್ಲವೇ ಇಲ್ಲ; ಇಂತಹ ಸಂಸ್ಥೆಗಳು ಪ್ರದೇಶ-ಪ್ರದೇಶಗಳಿಗೆ ಬೇರೆಬೇರೆತರದ್ದಾಗಿರಬಹುದು. ಹೀಗಿರುವಾಗ ಪ್ರಾಥಮಿಕ ಸಂಸ್ಥೆಗಳೂ ಕಸಬಿನ ಸಂಸ್ಥೆಗಳೂ ಎಲ್ಲ ಕಡೆಯೂ ಬೆಳೆಯಬೇಕಾಗಿವೆ. ಈ ಕೆಲಸವು ಸ್ಥಾನಿಕ ಅನುಭವ-ಅನುಕೂಲಗಳ ಮೇಲೆಯೆ ನಿಲ್ಲತಕ್ಕದ್ದು. ಇಂತಹ ಸಂಸ್ಥೆಗಳಿಗೆ ಏಕರೂಪತೆಯಾಗಲಿ ಪರತಂತ್ರತೆಯಾಗಲಿ ಸಹಾಯಕವಾಗುವುದಿಲ್ಲ. ಆದ್ದರಿಂದ ನಮ್ಮಲ್ಲಿ ಬೇಕಾದ ವಿಶ್ವವಿದ್ಯಾಲಯವು ಇವುಗಳಿಂದ ನೀಗದ ಉಚ್ಚಶಿಕ್ಷಣ, ಇವುಗಳಲ್ಲಿರಬೇಕಾದ ಪರಸ್ಪರ ಸಹಕಾರ, ಮತ್ತು ಇವುಗಳಿಂದ ದೊರೆಯುವ ಶಿಕ್ಷಣಕ್ಕೊಂದು ಏಕರಾಷ್ಟ್ರೀಯ ಧೋರಣೆ—ಈ ಮೂರು ಮಾತುಗಳನ್ನು ನಡೆಯಿಸುವಂತಹದಾಗಬೇಕು. ಕೆಳಗಿನ ಸಂಸ್ಥೆಗಳ ಘಟಕಗಳಾಗಿ ವಿಶ್ವವಿದ್ಯಾಲಯವು ಇವುಗಳ ಸಂಯುಕ್ತಸಂಘ (federal) ವಾದರೆ ಅದು ನಮ್ಮ ಜೀವನಕ್ಕೆ ಪೋಷಕವಾದ ಮಾದರಿಯಾಗಬಹುದು. (ಹೀಗೆ ಹೇಳಿದರೆ, ಇ[illegible] ಘಟಕಗಳು ಈಗಾಗಲೆ ಇದ್ದಲ್ಲಿಯೆ ವಿಶ್ವವಿದ್ಯಾಲಯ ವಿರತಕ್ಕುದು, ಇಲ್ಲವಾದರೆ ಇಲ್ಲ ಎಂಬ ಅರ್ಥವಲ್ಲ).

ಶಿಕ್ಷಣದ ಭಾಷೆ

ಶಿಕ್ಷಣದ ಭಾಷೆ ಯಾವುದಿರತಕ್ಕುದು? ಎಂಬ ಪ್ರಶ್ನೆಯು ಇಂದು ಬಹಳ ಮಹತ್ತ್ವದ್ದಾಗಿದೆ. ನಾವು ಮೇಲೆ ಹೇಳಿ-ದಂತೆ ಸಂಯುಕ್ತ ಘಟನೆಯ ಮಾದರಿಯ ವಿಷಯವಾಗಿಯೆ

ಮಾತನಾಡುವುದಾದರೆ, ಮಾತೃಭಾಷೆಯೆ (ಎಂದರೆ ಪ್ರಾದೇಶಿಕ ಇಲ್ಲವೆ ಪ್ರಾಂತಭಾಷೆಯೆ) ಶಿಕ್ಷಣದ ಭಾಷೆಯಾಗಬೇಕು ಎಂಬುದು ಅನಿವಾರ್ಯವಾಗುವುದು. ಸ್ಥಾನಿಕವಾದ ಘಟಕ-ಸಂಸ್ಥೆಗಳಲ್ಲಿ ಮಾತೃಭಾಷೆಯೆ ರೂಢವಾಗಬೇಕಾದಾಗ, ಉಚ್ಚ ಶಿಕ್ಷಣದಲ್ಲೂ ಅದೇ ಭಾಷೆಯೆ ಮಾಧ್ಯಮಿಕವಾಗಬೇಕಲ್ಲವೆ? ಆದರೆ ಈ ಪ್ರಶ್ನೆಗೆ ಖಂಡತುಂಡವಾದಬಂದೇ ಒಂದು ಉತ್ತರವನು ಇಂದಿನ ಪರಿಸ್ಥಿತಿಯಲ್ಲಿ ಕೊಡುವಂತಿಲ್ಲ. ಸ್ಥಾನಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಂತಭಾಷೆ ಅನಿವಾರ್ಯವಾದಂತೆ ವಿಶ್ವವಿದ್ಯಾಲಯದ ಉಚ್ಚ ಶಿಕ್ಷಣದಲ್ಲೂ ಅನಿವಾರ್ಯ ಎಂದು ಹೇಳುವಂತಿಲ್ಲ. ಒಂದು, ಉಚ್ಚ ಶಿಕ್ಷಣವು ಪ್ರತಿಯೊಬ್ಬನಿಗೂ (ಎಂದರೆ ಸಾಮಾನ್ಯ ಮನುಷ್ಯನಿಗೆ) ಅಗತ್ಯ ಎಂದು ಹೇಳುವಂತಿಲ್ಲ. ಇನ್ನೊಂದು. ನಮ್ಮ ಏಕರಾಷ್ಟ್ರೀಯತೆಯ ಭಾವನೆಯನ್ನು ಉಳಿಸಿ ಬೆಳೆಸಿಕೊಳ್ಳುವುದಾದರೆ ಉಚ್ಚ ಶಿಕ್ಷಣವು ಅಖಿಲರಾಷ್ಟ್ರೀಯ ಸ್ವರೂಪದ್ದಾಗಬೇಕು. ಮೂರನೆಯದು, ಜ್ಞಾನವನ್ನೆ ಉಚ್ಚ ಶಿಕ್ಷಣವು ಗುರಿಯಾಗಿಟ್ಟುಕೊಳ್ಳುವುದರಿಂದ ನಮ್ಮ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗೆ ಹೊರಗಿನಿಂದಲೂ ಜ್ಞಾನವನ್ನು ದೊರಕಿಸುವುದಕ್ಕೆ ಶಕ್ಯವಾದಷ್ಟು ಅನುಕೂಲವಾಗಿರಬೇಕು. ಈ ಮೂರು ಮಾತುಗಳಿಗಾಗಿ, ಪ್ರಾಂತಭಾಷೆಯೊಂದನ್ನೆ ವಿಶ್ವವಿದ್ಯಾಲಯದಲ್ಲಿ ಮಾಧ್ಯಮಿಕವಾಗಿಟ್ಟುಕೊಳ್ಳುವುದು ಶ್ರೇಯಸ್ಕರವಾಗುವುದಿಲ್ಲ ಎಂದು ನಮ್ಮ ಅಭಿಪ್ರಾಯ. ಪ್ರಾಂತಿಕಭಾಷೆಗಳಲ್ಲಿ ಪಾರಿಭಾಷಿಕ ಶಬ್ದಕೋಶವಿಲ್ಲ ಎಂಬ ಆಕ್ಷೇಪಕ್ಕೆ ನಾವು ಸ್ಥಾನವನ್ನೆ ಕೊಡುವಂತಿಲ್ಲ. ಪ್ರತಿಯೊಂದು ಪ್ರಾಂತಭಾಷೆ ಹೀಗೆ ಹೇಳದಲ್ಲಿ, ಪಾರಿಭಾಷಿಕ ಕೋಶವನ್ನು ಸಿದ್ಧಪಡಿಸುವುದರಲ್ಲಿ ದುಡ್ಡು-ಹೊತ್ತು-ಬೆವರುಗಳನ್ನು ಸುರಿಸಬಹುದು. ಆದರೆ ನಮ್ಮ ಅಖಿಲರಾಷ್ಟ್ರೀಯತೆಯ ದೃಷ್ಟಿಯಿಂದ ಇಡಿಯ ದೇಶಕ್ಕೆ ಸರ್ವಸಾಮಾನ್ಯವಾದ ಪಾರಿಭಾಷಿಕ ಕೋಶವಿಲ್ಲದೆ ಹೋದರೆ ನಮ್ಮ ಉಚ್ಚ ಶಿಕ್ಷಣಕ್ಕೆ 'ನೀಚ' ಧ್ಯೇಯವೆ ಅನಿವಾರ್ಯವಾಗುವುದು. ಸದ್ಯಕ್ಕಂತೂ ಅಂತಹ ಕೋಶ ಸಿದ್ಧವಾಗುವವರೆಗೆ, ಸದ್ಯದ ಇಂಗ್ಲಿಶ್ ಶಬ್ದಗಳನ್ನೆ ಇಟ್ಟುಕೊಂಡರೆ ಜ್ಞಾನಕ್ಕೆ ಕುಂದು ಇಲ್ಲ. ಆದಕಾಗಿ ಅಭಿಮಾನಕ್ಕೂ ಕುಂದು ಬಾರದು. ಸ್ಥಾನಿಕ ಸಂಸ್ಥೆಗಳಲ್ಲಿ ಪ್ರಾಂತಭಾಷೆ, ವಿಶ್ವವಿದ್ಯಾಲಯದಲ್ಲಿ ಮತ್ತೊಂದು ಭಾಷೆ ಎಂಬ ನಮ್ಮ ಮಾತು ಅಸಂಗತವೆನಿಸಲಿಕ್ಕಿಲ್ಲವೆ ಎಂದು ಸಂಶಯ ಉಂಟಾಗಬಹುದು. ಆದಕಾಗಿ ನಾವು ಇನ್ನಿಷ್ಟು ಸ್ಪಷ್ಟವಾಗಿ ಹೇಳುವೆವು. ಸ್ಥಾನಿಕ ಸಂಸ್ಥೆಯ ಪ್ರತಿಯೊಬ್ಬ ವಿದ್ಯಾರ್ಥಿಯೂ ವಿಶ್ವವಿದ್ಯಾಲಯಕ್ಕೆ ಹೋಗಬೇಕಾಗಿಲ್ಲ (ಮುಂದೆ ಈ ಮಾತು ವಿವರವಾಗಿ ಕಾಣಿಸಲ್ಪಟ್ಟಿದೆ); ವಿಶ್ವವಿದ್ಯಾಲಯದಲ್ಲಿ ಪ್ರಾಂತಭಾಷೆ ಇರಲೇಕೂಡದೆಂದೂ ನಾವು ಹೇಳಿಲ್ಲ; ವಿಶ್ವವಿದ್ಯಾಲಯದ ಉಚ್ಚ ಶಿಕ್ಷಣದ ಹವ್ಯಾಸವಿದ್ದವರಿಗಾಗಿ ಮಿಕ್ಕವರೊಡನೆ ವಿಚಾರವಿನಿಮಯಮಾಡಲು ಅನುಕೂಲವಾಗುವಂತಹ ಭಾಷೆಯನ್ನು ಕಲಿಸುವ ಏರ್ಪಾಡು ಇರತಕ್ಕುದು. ಅಖಿಲರಾಷ್ಟ್ರೀಯತೆಯ ಮಾತನ್ನು ನಾವು ಎತ್ತುವುದರಿಂದ, ಹಿಂದೀ ಭಾಷೆಯ ಅಗತ್ಯವನ್ನು ನಾವು ಸೂಚಿಸುತ್ತಿದ್ದೇವೆ ಎಂದು ಯಾರೂ ತಿಳಿಯಬಾರದು. ಯಾಕೆಂದರೆ ವಿಶ್ವವ್ಯವಹಾರವನ್ನೂ ಜ್ಞಾನಸಂಪಾದನೆಯನ್ನೂ ಲಕ್ಷ್ಯದಲ್ಲಿಟ್ಟರೆ ಹಿಂದಿಗಿಂತ ಇಂಗ್ಲಿಶ್ ಭಾಷೆಯೆ ಹೆಚ್ಚು ಉಪಯುಕ್ತ ಎಂದು ಹೇಳಬಹುದಾಗಿದೆ. ಇದಲ್ಲದೆ ತನಗೂ ತನ್ನವರಿಗೂ ಪೋಷಕವಾಗಲು, ಮುಂಚಿನಿಂದಲೆ ಕಲಿತುದರಿಂದ ಹೆಚ್ಚು ಸುಲಭವಾಗಿ ತಿಳಿದುಕೊಳ್ಳಲು ಪ್ರಾಂತಭಾಷೆಯು ಇರತಕ್ಕುದೆ ಎಂದೂ ನಾವು ಅಭಿಪ್ರಾಯಪಡುತ್ತೇವೆ. ಪ್ರಾಂತಭಾಷೆ ಮಾಧ್ಯಮಿಕವಾದುದರಿಂದ ನಮ್ಮ ದೇಶದ ಏಕರಾಷ್ಟ್ರೀಯತೆಗೆ ಯಾವ ರೀತಿಯಿಂದಲೂ ಭಂಗಬಾರದೆಂಬುದು ಸಂಯುಕ್ತವಾದರಿಯನ್ನು ಚರ್ಚಿಸುವಾಗಲೆ ಸೂಚಿಸಿದ್ದೇವೆ.

ಉಚ್ಚ ಶಿಕ್ಷಣಕ್ಕೆ ಪ್ರವೇಶ

ವಿಶ್ವವಿದ್ಯಾಲಯದ ಉಚ್ಚ ಶಿಕ್ಷಣಕ್ಕೆ ಅರ್ಹನಾಗಬೇಕಾದರೆ ವಿದ್ಯಾರ್ಥಿಯು ಜ್ಞಾನದ ಯಾವ ಮಟ್ಟನ್ನು ಮುಟ್ಟಿರಬೇಕು? ಎಂಬುದೂ ವಿಚಾರಮಾಡಬೇಕಾದ ಸಂಗತಿಯೆ. ಆದರೆ ತೀರ ಸಾಮಾನ್ಯದೃಷ್ಟಿಯಿಂದ ಬರೆದ ಈ ಲೇಖನದಲ್ಲಿ ಈ ಮಾತನ್ನು ಹೆಚ್ಚು ವಿವರಗೊಳಿಸುವುದು ಶಕ್ಯವಿಲ್ಲ. ನಮ್ಮ ಸದ್ಯದ ಕ್ರಮದಲ್ಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಯಾದವನಿಗೆ ವಿಶ್ವವಿದ್ಯಾಲಯದಲ್ಲಿ ಪ್ರವೇಶವಿದೆ. ಆದರೆ ಮ್ಯಾಟ್ರಿಕ್ಯುಲೇಶನಿನ ಅಭ್ಯಾಸಕ್ರಮವನ್ನು ನೋಡಿದರೆ, ಈ ವಿದ್ಯಾರ್ಥಿಯು ಉಚ್ಚ ಶಿಕ್ಷಣವನ್ನು ಪಡೆಯುವ ಯೋಗ್ಯತೆಯವನು ಎಂದು ಹೇಳಲಿಕ್ಕಾಗದು. ಭಾಷೆ, ಗಣಿತ, ವಿಜ್ಞಾನಶಾಸ್ತ್ರಗಳು, ಇತಿಹಾಸ-ಭೂಗೋಲ ಈ ವಿಷಯಗಳನ್ನೆಲ್ಲ ಒತ್ತಾಯವಾಗಿ ಕಲಿಯುವವನಿವನು; ಪ್ರತಿಯೊಂದು ವಿಷಯದ ಅಭ್ಯಾಸಕ್ರಮವೂ ಪ್ರಾರಂಭದಶೆಯಲ್ಲಿಯೆ ಇರುವುದು; ಎಂದರೆ ಕಲಿಸಿದ್ದನ್ನಷ್ಟೆ ಕಲಿಯುವ ದಶೆಯಲ್ಲಿ. ಇದಲ್ಲದೆ ಪ್ರತಿಯೊಂದು ವಿಷಯವು ಒಂದಕ್ಕೊಂದು ಅಸಂಬದ್ಧವಾದುದು ಎಂದೇ ಈ ತರಗತಿಯ ಕ್ರಮ. ಯಾವುದಾದರೊಂದು ವಿಷಯ ಒಂದು ರೀತಿಯಲ್ಲಿ ಮಹತ್ತ್ವದ್ದಾಗಿದೆ, ಪ್ರತಿಯೊಂದಕ್ಕೂ ತತ್ತ್ವವಿದೆ, ಪರಸ್ಪರಸಂಬಂಧವಿದೆ ಎಂಬುದರ ಜ್ಞಾನ ಈ ಕ್ರಮದಲ್ಲಿರುವುದಿಲ್ಲ. ತಾನಾಗಿಯೆ ತಿಳಿದುಕೊಳ್ಳುವ, ವಿಚಾರಮಾಡುವ, ಪ್ರಯೋಗಮಾಡುವ ಶಕ್ತಿಯಾಗಲಿ ಕುತೂಹಲವಾಗಲಿ ಮ್ಯಾಟ್ರಿಕ್ಯುಲೇಶನಿನ ಮಟ್ಟಿಗೆ ತಟ್ಟಿಲ್ಲ. ಇಂತಹನನ್ನು ವಿಶ್ವವಿದ್ಯಾಲಯಕ್ಕೆ ಸೇರಿಸಿದರೆ ಅವನ ಬುದ್ಧಿಶಕ್ತಿಗೆ ತಡೆಯಾಗಲಿ ಸಂಕೋಚವಾಗಲಿ ಬರುವುದು ಸ್ವಾಭಾವಿಕ. ಆದರೆ ಇಷ್ಟರಿಂದ ಮ್ಯಾಟ್ರಿಕ್ಯುಲೇಶನಿನ ಅಭ್ಯಾಸಕ್ರಮವನ್ನು ಬದಲಾಯಿಸಿದರೆ ನಮಗೆ ಸಮಾಧಾನ ಎಂದು ತಿಳಿಯಕೂಡದು. ಈ ತರಗತಿಗೂ ವಿಶ್ವವಿದ್ಯಾಲಯದ ತರಗತಿಗೂ ಬಹಳ ಅಂತರವಿದೆ. ಈ ಅಂತರವನ್ನು ಬೇರೆ ರೀತಿಯಿಂದಲೆ ತುಂಬಿಕೊಳ್ಳಬೇಕು. ವಿದ್ಯಾರ್ಥಿಗೆ ಸ್ವತಂತ್ರವಾದ ವಿಚಾರಶಕ್ತಿ, ಪ್ರಯೋಗಕುತೂಹಲ ಹುಟ್ಟದವರೆಗೆ ಅವನು ಉಚ್ಚ ಶಿಕ್ಷಣಕ್ಕೆ ಅನರ್ಹನು. ಆದಕಾಗಿ, ಅಂತಹದೊಂದು ತರಗತಿಯನ್ನು ಏರ್ಪಡಿಸಿ—ಈ ಅಧಿಕಾರ ವಿಶ್ವವಿದ್ಯಾ

ಲಯಕ್ಕೆ ಸೇರತಕ್ಕುದು—ಉಚ್ಚ ಶಿಕ್ಷಣದ ಅರ್ಹತೆಯನ್ನು ನಿರ್ಣಯಿಸಬೇಕಾಗುವುದು. ಈ ಶಿಫಾರಸಿನ ತರಗತಿ (Qualifying Standard) ಯ ಮೂಲತತ್ತ್ವಗಳನ್ನು, ಸ್ವತಂತ್ರ ವಿಚಾರಶಕ್ತಿಯನ್ನು, ಪ್ರಯೋಗ (Experiment) ಕ್ಕೆ ಪ್ರೋತ್ಸಾಹವನ್ನು ವಿದ್ಯಾರ್ಥಿಯು ಅರಿಯಬೇಕು; ಇಲ್ಲಿ ಶಿಕ್ಷಕರು ಬೇಕಾಗಿಲ್ಲ, ಅದಕಾಗಿ ಪರೀಕ್ಷೆಯು ಅಗತ್ಯವೂ ಇಲ್ಲ. ನಿರ್ದೇಶಕರು ಮತ್ತು ಕೊನೆಗೆ ಅವರ ಶಿಫಾರಸು ಇಷ್ಟಿದ್ದರೆ ಸಾಕು. ಈ ನಿರ್ದೇಶಕರು (Tutors) ವಿಶ್ವವಿದ್ಯಾಲಯಕ್ಕೆ ಅಧೀನರಾಗಿರಬೇಕೆಂದು ಬೇರೆ ಹೇಳಬೇಕಾಗಿಲ್ಲ.

ವಿಶ್ವವಿದ್ಯಾಲಯ ಮತ್ತು ಶಿಕ್ಷಣಶಾಲೆಗಳು

ಶಾಲೆಗಳು (ಮಾಧ್ಯಮಿಕ ಮತ್ತು ಉಚ್ಚ) ವಿಶ್ವವಿದ್ಯಾಲಯದ ಕ್ರಮಕ್ಕೆ ತಳಹದಿಯಂತಿದ್ದುದರಿಂದ ಇವೆರಡರ ಪರಸ್ಪರ ಸಂಬಂಧವು ಮಹತ್ತ್ವದ್ದೆಂದು ತಿಳಿಯಲ್ಪಡುವುದು. ಇಂದು ಇಂತಹ ಶಾಲೆಗಳಲ್ಲಿಯು ಕೊನೆಯ ಒಂದೆರಡು ತರಗತಿಗಳ ಮೇಲೆ ವಿಶ್ವವಿದ್ಯಾಲಯದ ನಿರೀಕ್ಷಣೆ ಇರುವುದು. ಇದಲ್ಲದೆ ಮ್ಯಾಟ್ರಿಕ್ಯುಲೇಶನ್ ತರಗತಿಯ ಅಭ್ಯಾಸಕ್ರಮವು ವಿಶ್ವವಿದ್ಯಾಲಯದ ಅಧಿಕಾರಕ್ಕೆಯೆ ಒಳಪಟ್ಟಿರುವುದು. ಶಾಲೆಗಳು ಸಂಪೂರ್ಣ ಸ್ವತಂತ್ರವಾದರೆ ವಿಶ್ವವಿದ್ಯಾಲಯದ ಪ್ರವೇಶದ ಅರ್ಹತೆಯಲ್ಲಿ ಏಕರೂಪತೆ ಉಳಿಯುವುದಿಲ್ಲ ಎಂಬ ದೃಷ್ಟಿಯಿಂದ ಇಂದಿನ ಪರಿಸ್ಥಿತಿ ಸಮಂಜಸ ಎನಿಸಬಹುದು; ಆದರೆ ಇನ್ನೊಂದು ದೃಷ್ಟಿಯಿಂದ ನೋಡಿದರೆ, ಈ ಸ್ಥಿತಿ ಅನ್ಯಾಯಕಾರಕವಾಗಿದೆ ಎಂದೆನಿಸುವುದು. ಮೊದಲು 'ಮ್ಯಾಟ್ರಿಕ್ಯುಲೇಶನ್ ಇದು ವಿಶ್ವವಿದ್ಯಾಲಯವನ್ನು ಪ್ರವೇಶಿಸಲು ತಕ್ಕುದಾದ ತರಗತಿಯಲ್ಲ' ಎಂದು ಮೇಲೆಯೆ ಸೂಚಿಸಿದ್ದೇನೆ. ಒಂದುವೇಳೆ, ತರಗತಿ ತಕ್ಕುದೆ ಆಗಿದೆ ಎಂದು ತಿಳಿಯುವಾ. ಆಗಲೂ ಶಿಕ್ಷಕರು, ಅವರ ಯೋಗ್ಯತೆ, ಅವರ ಅನುಭವ ಇವುಗಳ ಮೇಲೆ ಅಧಿಕಾರವಿಲ್ಲದೆ ಬರಿಯ ಅಭ್ಯಾಸಕ್ರಮದ ಮೇಲೆಯೆ ಅಧಿಕಾರವನ್ನಿಟ್ಟುಕೊಂಡರೆ ಲಾಭವೇನು? ಇದಲ್ಲದೆ ಇಂದಿನ ಸ್ಥಿತಿಯಲ್ಲಿ, ವಿಶ್ವವಿದ್ಯಾಲಯದ ಇಂತಹ ಅಧಿಕಾರವಿದ್ದುದರಿಂದ, ಎಲ್ಲ ವಿದ್ಯಾರ್ಥಿಗಳಿಗೂ ವಿಶ್ವ-ವಿದ್ಯಾಲಯದ ಪ್ರವೇಶ ಗುರಿಯಾಗುವುದು ಇಲ್ಲವೆ ಸುಲಭವಾಗುವುದು. ಹೀಗಾದರೆ ವಿಶ್ವವಿದ್ಯಾಲಯದ ಅಧಿಕಾರದ ಮೂಲವ ಕಡಿದಂತಾಗುವುದು. ನಿಜವಿದ್ದ ಮಾತೆಂದರೆ. ಇಂತಹ ಶಾಲೆಗಳಿಗೂ ವಿಶ್ವವಿದ್ಯಾಲಯಕ್ಕೂ ಹೀಗೆ ಅನವಶ್ಯವಾದ ಸಂಬಂಧವೆ ಇರಬೇಕಾಗಿಲ್ಲ. ಇಂದು ಆ ಸಂಬಂಧಕ್ಕಾಗಿ ಉಚ್ಚ ಶಿಕ್ಷಣದ ಧ್ಯೇಯವಿಲ್ಲದವರು, ಸಂಪಾದನೆಗಾಗಿ--ಹೊಟ್ಟೆತುಂಬಿಕೊಳ್ಳುವುದಕ್ಕಾಗಿ—ಕಲಿಯಬೇಕೆನ್ನುವವರು ಇವರೇ ಹೆಚ್ಚಾಗಿ ವಿಶ್ವ-ವಿದ್ಯಾಲಯವನ್ನು ತುಂಬಿ, ಅದರ ಗೌರವವನ್ನೂ ತಮ್ಮ ವಯಸ್ಸನ್ನೂ ವ್ಯರ್ಥವಾಗಿ ಕಳೆಯುವರು. ಶಾಲೆಯ ಶಿಕ್ಷಣದಲ್ಲಿಯೆ ಅವರಿಗೆ ಕೆಲಸ ದೊರೆಕಿಸುವ ಯೋಗ್ಯತೆಯನ್ನು ತಂದುಕೊಟ್ಟು, ಆ ಯೋಗ್ಯತೆಯ ಪರೀಕ್ಷೆಯನ್ನು ಆಡಳಿತದ ಸರಕಾರವು ನಡೆಯಿಸಿದರೆ ವಿದ್ಯಾರ್ಥಿಗಳಿಗೆ ಹಿತ, ವಿಶ್ವವಿದ್ಯಾಲಯಕ್ಕೆ ಗೌರವ, ಸಮಾಜಕ್ಕೆ ಅನುಕೂಲ.

ಕಾಲಕ್ಕೆ ಪ್ರಾತಿನಿಧ್ಯ

ಹೊಸತೊಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರೆ ಸರಕಾರದೊಡನೆ, ಈಗಿದ್ದ ಸಂಸ್ಥೆಗಳೊಡನೆ, ಪ್ರಾದೇಶಿಕವಾಗಿ ಸೇರ್ಪಡೆಯಾಗಬಹುದಾದ ಸಂಸ್ಥಾನಗಳೊಡನೆ, ಕೊನೆಯದಾಗಿ ಸಾರ್ವಜನಿಕರೊಡನೆ ಅದರ ಸಂಬಂಧವೇನಿರತಕ್ಕುದು ಎಂಬುದು ಸಮಿತಿಯವರ ಪ್ರಶ್ನೆಗಳಲ್ಲಿ ಒಂದಾಗಿದೆ. ಇದೆಲ್ಲದರ ವಿವರವನ್ನು ಕೊಡುವುದು ಕೆಲವು ಕಾರಣಗಳಿಗಾಗಿ ಇಲ್ಲಿ ಪ್ರಸ್ತುತವೆನಿಸುವುದಿಲ್ಲ. ಆದರೆ ಇವೆಲ್ಲಕ್ಕೂ ಸಂಬಂಧಿಸಿದ ರೀತಿಯಲ್ಲಿ ಒಂದು ಮಾತನ್ನು ಹೇಳಬಹುದು. ವಿಶ್ವವಿದ್ಯಾಲಯದಲ್ಲಿ ಯಾರಿಗೇ ಪ್ರತಿನಿಧಿತ್ವವಿರಲಿ ಇಲ್ಲದಿರಲಿ, **ಕಾಲಕ್ಕೆ ಪ್ರಾತಿನಿಧ್ಯ** ಮಾತ್ರ ಇರಲೇಬೇಕು. ಎಂದರೆ ಕಾಲಕ್ಕನುಗುಣವಾಗಿ ಸಾಮಾಜಿಕ ಜೀವನಕ್ಕೆ ಪೋಷಕವಾಗುವಂತೆ ಇರಬೇಕು. ಸರಕಾರದೊಡನೆ ಒಂದು ರೀತಿಯಿಂದ ಸಂಬಂಧವಿರಲೇಬೇಕಾಗುವುದು, ಅದೆಂದರೆ ಸರಕಾರದ ಹೊಣೆಗಾರಿಕೆಯ ಸಂಬಂಧ. ವಿಶ್ವವಿದ್ಯಾಲಯದಂತಹ ಸಂಸ್ಥೆಯನ್ನು ಏರ್ಪಡಿಸುವುದು ಕೇವಲ ಸಾರ್ವಜನಿಕರಿಗೆ ಶಕ್ಯವಲ್ಲ, ಹಾಗಾಗುವುದು-ಜಾತಿಮತಪಂಥಗಳ ಪರಸ್ಪರ ಅವಿಶ್ವಾಸವಿದ್ದ ನಮ್ಮ ದೇಶದಲ್ಲಿ—ಇಷ್ಟವೂ ಅಲ್ಲ. ಅತ್ಯಂತ ಸಮಾಜಪೋಷಕವಾದ ಈ ಸಂಸ್ಥೆಯನ್ನು ಸರಕಾರದ ಧನಸಹಾಯದಿಂದಲೆ ದೃಢವಾಗಿ ನಿಲ್ಲಿಸಬಹುದು. ಸರಕಾರವು ತತ್ತ್ವತಃ ಯಾವ ಜಾತಿ-ಮತ-ಪಂಥಗಳಿಗೂ ಸೇರಿದ್ದಲ್ಲವಾದ್ದರಿಂದ, ವಿಶ್ವವಿದ್ಯಾಲಯದ ಉದಾತ್ತಕಾರ್ಯಕ್ಕೆ ಅವಿಶ್ವಾಸದ ಕಲಂಕವೂ ತಗಲುವಂತಿಲ್ಲ. ಆದರೆ ಯಾವ ಕಾರಣಕ್ಕಾಗಿಯೂ ಆಡಳಿತಗಾರವಾದ ಸರಕಾರವು ತನ್ನ ಆಧಿಪತ್ಯವನ್ನು ವಿಶ್ವವಿದ್ಯಾಲಯದ ಆಡಳಿತದಲ್ಲಿ ನಡೆಯಿಸಬಾರದು. ಎಂದರೆ, ಈ ಉದಾತ್ತ ಕಾರ್ಯಕ್ಕೆ ವಿಶಾಲವಾದ ಧ್ಯೇಯ ಉಳಿಯಬಹುದು. ಸಾರ್ವಜನಿಕರಿಗೂ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದು ಕರ್ತವ್ಯವೆನಿಸಬೇಕು. ಜಾತಿ-ಮತ-ಪಂಥಗಳನ್ನು ದೃಷ್ಟಿಯಲ್ಲಿಟ್ಟುಕೊಂಡ ಸಹಾಯವನ್ನು ನಿರಾಕರಿಸಬೇಕು. ಬೇರೆ ಬೇರೆ ಬೌದ್ಧಿಕ ವ್ಯವಸಾಯದವರಿಗೆ, ಉದ್ದಿಮೆಗಾರರಿಗೆ ವಿಶ್ವವಿದ್ಯಾಲಯದ ಆಡಳಿತದಲ್ಲಿ ಪ್ರಾತಿನಿಧ್ಯವನ್ನು ಕೊಟ್ಟರೆ ಅವರ ಸಲಹೆ-ಅನುಭವಗಳಿಂದ ಅನುಕೂಲವೆ ಆಗಬಹುದು. ಸಂಸ್ಥಾನಗಳು ತಂತಮಗಾಗಿ ವಿಶ್ವವಿದ್ಯಾಲಯಗಳನ್ನು ಏರ್ಪಡಿಸದಿದ್ದರೆ, ಆ ಕೆಲಸವನ್ನು ಆ ಪ್ರದೇಶದ ವಿಶ್ವವಿದ್ಯಾಲಯವು ವಹಿಸಬಹುದಾಗಿದೆ. ಇಲ್ಲಿಯೂ ಕೂಡ ಅಖಿಲ ರಾಷ್ಟ್ರೀಯತೆಯ ಧೋರಣೆಯನ್ನು ಮರೆಯಲಾಗದು.

(೪೭ ನೆಯ ಪುಟಕ್ಕೆ ಮುಂದುವರಿಯುವುದು.)

ತಿಮ್ಮ

(ಸಣ್ಣ ಕತೆ)

ಶ್ರೀ. ಸುಬ್ರಾಯ ಶರ್ಮಾ ತಲವಾಟ

ಬಂಡವಾಳಗಾರರು ಬಡವರನ್ನು ಕಾಣುವ ಕಣ್ಣುಗಳು ಎಂತಹವೊ! ಅವರಿಗೆ ಬಡವರೆಂದರೆ ಮಾನವರಲ್ಲ; ದುಡಿಯುವ ಯಂತ್ರಗಳು! ಸಾಕಿದ ನಾಯಿಗಿರುವ ಬೆಲೆಯನ್ನು ಬಡವರಿಗೆ ಕೊಡಲಾರರು! ಪಾಪ, ತಿಮ್ಮನ ಬಡತನದ ಭೀಕರ ಪರಿಣಾಮ ನೋಡಿರಿ!

★

"ಏ ಕರಿಯಾ, ತಿಮ್ಮ ಇನ್ನೂ ಬರಲಿಲ್ಲೇನೊ?" ಎಂದು ದಿಂಬಿಗೊರಗಿ ಕುಳಿತ ಭೀಮರಾಯರು ಕೂಗಿದರು.

"ಇಲ್ಲ ಸ್ವಾಮಿ! ಅವನಿಗೆ ಬಹಾಳ ಜ್ವರಾ ಅಂತೆ; ತೀರ ಸಾಯೋಕೆ ಬಿದ್ದಿದಾನೆ!" ಎಂದು ಕಂಬಕ್ಕೊರಗಿ ನಿಂತ ಕರಿಯ ಉತ್ತರನಿತ್ತ.

"ಥೂ, ಸೂ××ಮಗನೆ! ನಾ ಹೇಳಿದ್ದೇನೋ ನಿನಗೆ? ಕರೆದುಕೊಂಡು ಬಾ ಅಂತ ಹೇಳಿದರೆ, ಬಾಯಿ ಕಳೀತಾ ನಿಂತೆಯಲ್ಲಾ! ಹೋಗು ಕೊಗೊಂಡು ಬಾ ಅವನ್ನ! ಜ್ವರ ಅಂತೆ ಜ್ವರ! ಕಳ್ಳ ಸೂ××ಮಕ್ಕಳು!" ಎಂದು ದಿಂಬಿನಿಂದ ಸ್ವಲ್ಪ ಸೆಡೆದು ಕುಳಿತು, ಜೋರಾಗಿ ಗದರಿಸಿದರು....ರಾಯರು.

"ಅಂವ ಬರೋಹಾಂಗಿಲ್ಲಗ್ರಿ; ಬಾಳಾ ಜ್ವರವಾಗ ಅದಾನ್ರೀ; ಹೇಳೂ ಅಂತ ಹೇಳಿದಾನ್ರಿ!" ಎಂದು ನಡುಗುವ ಧ್ವನಿಯಲ್ಲಿ ಉತ್ತರ ಕೊಟ್ಟು, ಭೀಮರಾಯರನ್ನೇ ನೋಡುತ್ತ ನಿಂತ ಕರಿಯ.

"ಹಲ್ಲು ಮುರಿದು ಬಿಡುತ್ತೇನೆ ನೋಡು, ಮತ್ತೆ ಮಾತೆತ್ತಿದರೆ! ಯಾವ ದೊಡ್ಡ ಸಾಹುಕಾರನಂತೆ ಆ ಸೂ××ಮಗ! ನನ್ನ ಮಾತಿಗೆ ಅಲ್ಲಿಂದಲೇ ಉತ್ತರಾ ಹೇಳಿ ಕಳುಹಿಸುತ್ತಾನಲ್ಲ! ಎಷ್ಟು ಏರಿ ಹೋದಿರೋ ಬೋ××ಮಕ್ಕಳಿರಾ! ಅವನನ್ನ ಎಳಕೊಂಡು ಬಾ ಇಲ್ಲಿ! ಇಂದು ನೆಲ್ಲೂರಿಗೆ ಹೋಗಿ ಅಕ್ಕಿಯನ್ನು ತರಲೇಬೇಕು! ಇಂದು ಬಿಟ್ಟರೆ ಸಾಧ್ಯವೇ ಇಲ್ಲ. ದ್ಯಾವಣ್ಣ ಸತ್ತ ಸುದ್ದೀನ, ಅಂಚಿನ ಮನೆ ಬಾಪ್ಪಯ್ಯ ತಿಳಿದರೆ, ಅವರು ಅಕ್ಕೀ ತರಿಸಿಯಾರು! ಹೋಗಿ ಎಳೆದು ತಾ ಅವನ್ನ, ನೋಡತೀನೆ!" ಎಂದು ಮೀಸೆ ಹುರಿಮಾಡುತ್ತ ಭೀಮರಾಯರು ಗುಡುಗಿದರು.

ಇನ್ನು ಮಾತನಾಡಿದರೆ ಚೆನ್ನಾಗಿ ಬೀಳುತ್ತದೆಂಬುದು ಕರಿಯನಿಗೆ ಗೊತ್ತು; ಸುಮ್ಮನೇ ಅಲ್ಲಿಂದ ಹೊರಟು ನಡೆದ.

ಸ್ವಲ್ಪ ಹೊತ್ತಿನಲ್ಲಿಯೆ, ನಡುಗುತ್ತ—ಕೈಯಲ್ಲಿ ದೊಣ್ಣೆ ಹಿಡಿದ ತಿಮ್ಮ ಬಂದು ನಿಂತ. ಒಂದು ಪಂಚೆಯನ್ನು ಸೊಂಟಕ್ಕೆ ಬಿಗಿದಿದ್ದ. ಹರಕು ಕಂಬಳಿಯೊಂದನ್ನು ಹೊದ್ದಿದ್ದ. ಶರೀರ ಕೃಶವಾಗಿದೆ. ಕಣ್ಣುಗಳು ಗುಳಿಬಿದ್ದಿವೆ. ನೆಲಕ್ಕೆ ಸರಿಯಾಗಿ ಬಗ್ಗಿ ನಮಸ್ಕರಿಸಿ ನಿಲ್ಲುವುದರೊಳಗೆ ರಾಯರು ಗುಡುಗಿದರು:

"ಏ ತಿಮ್ಮಾ! ಸಾಹುಕಾರನಾಗಿ ಹೋದೆಯಲ್ಲೊ! ಎಲಾ ಸೂ××ಮಗನೆ! ಇಲ್ಲಿಯವರೆಗೆ ಬರಲಿಕ್ಕಾಗೋದಿಲ್ಲಾ ನಿನಗೆ? ತಿಂದದ್ದು ಹೆಚ್ಚಿತಲ್ವೇ ನಿನಗೆ? ಅಲ್ಲಾ, ಎಷ್ಟು ಸೊಕ್ಕೋ ನಿಂದು? ಅಲ್ಲಿಂದಲೇ ಹೇಳಿಕಳುಹಿಸುತ್ತೀಯಲ್ಲಾ! ನಾನೆಂದರೆ ನಿನ್ನ ಕಾಲಕೆಳಗಿನ ಕಸಾ ಅಲ್ವೇ? ನಾನಿಲ್ಲದಿದ್ದರೆ ಮಣ್ಣು ಮುಕ್ಕಬೇಕಾಗಿತ್ತು ಮಣ್ಣು....ಗೊತ್ತೊ?" ಎಂದು ಎದ್ದು ನಿಂತು, ಭೀಮರಾಯರು ಗರ್ಜಿಸಿದರು.

ತಿಮ್ಮ ನಡುಗುತ್ತ ಹೇಳಿದ: "ಬುದ್ಧೀ, ನಾ ಎಂದಾದರೂ ಹಾಂಗೆ ಹೇಳೀನೇನ್ರಿ ದೇವ್ರು! ನಂಗೆ ಬಾಳಾ ಜ್ವರ! ಏಳೋಕೆ ಆಗಾಕಿಲ್ರೀ! ಅದಕಾಗಿ ಹೇಳಿದೆ ಸಾಮಿ! ತಮ್ಮ ಮ್ಯಾಗೆ ಯಾಕ್ಟಂಟು ಮಾಡತೇನಾ? ದಣೀರು ತಾವಿದ್ರೇ ಅಲ್ವೇ ನಮ್ಮ ಬಾಳು?" ಎಂದು ನುಡಿದು, ಮತ್ತೆ ಬಗ್ಗಿ ನಮಸ್ಕಾರ ಮಾಡಿದ.

"ಅದೆಲ್ಲಾ ಹಾಳಾಗಲಿ! ಈಗ ಹನ್ನೊಂದು ಘಂಟೆಯಾಗಿ ಹೋಯ್ತು! ನೆಲ್ಲೂರಿಗೆ ಹೋಗಬೇಕು! ಒಂದು ಖಂಡ್ಗ ಅಕ್ಕೀ ತರದಿದ್ದರೆ ಗತಿ ಇಲ್ಲ! ಇನ್ನೆರಡು ತಾಸಿನಲ್ಲಿಯೆ ತರದಿದ್ದರೆ ಬೇರೆಯವರ ಪಾಲಾಗಿ ಬಿಡತದೆ! ಏಳು, ನಾನೂ ಬರತೇನೆ!" ಎಂದು ವಸ್ತ್ರದ ನೆರಿ ಸರಿಮಾಡುತ್ತ ಹೇಳಿದರು ರಾಯರು.

"ಅಯ್ಯೋ ದೇವ್ರೇ, ಸಾಯೋಕೆ ಬಿದ್ದಿದ್ದೇನಲ್ರೀ! ನನ್ಹತ್ರ ಅಲ್ಲಿಗೆ ಬರಾಕಾಕ್ಕೈತೇನ್ರೀ? ನೀವೇ ನೋಡ್ರಿ! ಇಂದೊಂದು ದಿನ ಕಳೀಲಿ, ನಾಳೇ ಸ್ವಲ್ಪ ಗೆಲುವಾಗಬೌದು! ನಾ ಹೋಗಿ ತರತೀನಿ ಸಾಮಿ!" ಎಂದು ಹೇಳಿ ತಿಮ್ಮ ನಿಲ್ಲಲಾರದೆ ಕುಳಿತ.

"ಅದೆಲ್ಲಾ ಸುಳ್ಳು! ಈಗಿಂದೀಗ ಬರಲೇಬೇಕು! ನಾಳೆಗೆ ಆದರೆ ನಿನ್ನ ಕರೀತಿದ್ನಾ? ನಾಳೆಗೆ ಹಾಗಿರಲಿ, ಮಧ್ಯಾಹ್ನದ ಮೇಲೆ ಸಹಾ ಆಗೋದಿಲ್ಲ! ಅಲ್ಲದೆ ಒಂದೇ ಪಾರಿಗೆ ತರಬೇಕು! ಈ ಕರಿಯನಿಂದ ಆಗೋದಿಲ್ಲೆಂದೇ ನಿನ್ನನ್ನು ಕರೆಯಿಸಿದ್ದು!" ಎಂದು ಛತ್ರಿಯನ್ನು ಹಿಡಿದು ಭೀಮರಾಯರು ಹೊರಟೇಬಿಟ್ಟರು.

ತಿಮ್ಮನು ಕಾಲಿಗೆ ಬಿದ್ದು, ಕಣ್ಣೀರನ್ನು ಹರಿಸುತ್ತ "ಒಡೆಯಾ" ಎಂದು ಮುಂದೆಯೇನೋ ಹೇಳುವುದರಲ್ಲಿದ್ದ; ಭೀಮರಾಯರು "ಅದೊಂದೂ ಬೇಡ. ಹೊರಡು! ಇಲ್ಲದಿದ್ದರೆ ನಿಂತ ಹೆಜ್ಜೆಯಲ್ಲಿ ನನ್ನೆಲ್ಲಾ ಹಣವನ್ನೂ ಇಟ್ಟುಬಿಡು! ಸೂ ×× ಮಗನೆ. ನಿನಗೆ

೫೦ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರಗಡ್ಡೆಯ ಗುಳಿಗೆ
ಬಾಟ್ಲಿಗೆ ೧ ರೂ.
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಹಣಕೊಟ್ಟದ್ದು ಕೂತು ತಿನ್ನಲಿಕ್ಕೇ ಅಂತ ಮಾಡಿದ್ದೀಯಾ? ನಾನು ಹೇಳಿದಂತೆ ಮಾಡಿಯಬೇಕು ತಿಳಿಯಿತೇ? ಜ್ವರ ಅಂತೆ ಜ್ವರ! ನಾನೊಂದನ್ನೂ ಕೇಳುವುದಿಲ್ಲ. ಹೊರಡು!" ಎನ್ನುತ್ತ ಮುಂದೆ ನಡೆದರು.

ತಿಮ್ಮನು ಕಣ್ಣೀರಿಡುತ್ತ "ಅಯ್ಯೋ ದ್ಯಾವರೇ, ನನ್ನೊಂದು ತೊಗೊಂಡು ಹೋಗಪ್ಪಾ ಮಾರಾಯಾ! ಈ ಕಷ್ಟ ಬ್ಯಾಡೇ ಬ್ಯಾಡೋ! ನಾ ಸಾಯತೀನಿ!" ಎನ್ನುತ್ತ ಮೊಣ್ಣೆಯೂರು-ತ್ತೂರುತ್ತ ಅಡಿಯಿಡಲಾರಂಭಿಸಿದ.

* * *

ನೆಲ್ಲೂರಿಗೆ ಎರಡು ಮೈಲಿದಾರಿ ನಡೆಯಬೇಕು. ಸಣ್ಣ ಗಟ್ಟವನ್ನೂ ಹತ್ತುವುದಿದೆ. ತಿಮ್ಮನು ಪ್ರಾಣವನ್ನು ಒತ್ತೆ ಇಟ್ಟು ನಡೆಯಲಾರಂಭಿಸಿದ. ನೆಲ್ಲೂರಿಗೆ ಹೋಗಬೇಕಾದರೆ ಹನ್ನೊಂದೂವರೆ ಆಯಿತು. ಇಬ್ಬರೂ ದ್ಯಾವನೆಂಬ ರೈತನ ಮನೆಗೆ ಹೋದರು. ದ್ಯಾವ ಹಿಂದೆಯೆ ಸತ್ತು, ಆಗ ತಾನೆ ದಹನ ಕ್ರಿಯೆ ಮುಗಿಸಿದ್ದರು. ದ್ಯಾವನ ಹೆಂಡತಿ ಮತ್ತು ಎಳೆಯ ಮಕ್ಕಳು ಅಳುತ್ತಲೇ ಇದ್ದರು. ಮನೆತುಂಬ ರೋದನವೇ ರೋದನವಾಗಿತ್ತು.

ಸಣ್ಣ ಹುಲ್ಲಿನ ಗುಡಿಸಲು; ಅಲ್ಲಿಯೇ ಒಲೆ. ಕೂಡ್ರುವ ಜಾಗವೂ ಅಲ್ಲಿಯೆ; ಮಲಗುವುದೂ ಅಲ್ಲಿಯೇ. ಸಣ್ಣ ಚಿಟ್ಟೆ ಹೊರಗಡೆ ಇದೆ. ಅಲ್ಲಲ್ಲಿ ಹರಕು ಬಟ್ಟೆಗಳು ಬಿದ್ದಿವೆ. ಒಲೆಯ ಬೂದಿಯನ್ನು ಸಹ ತೆಗೆದಿರಲಿಲ್ಲ. ಮಣ್ಣು ಮಡಕೆಗಳು ಬರಿಯ ವಾಗಿ ಬಿದ್ದಿವೆ. ಒಂದೆರಡು ಒಡೆದು ಹೋಗಿವೆ. ಮನೆ-ಯಲ್ಲಿ ದ್ಯಾವನ ಹೆಂಡತಿ ಮತ್ತು ಮೂರು ಚಿಕ್ಕಚಿಕ್ಕ ಮಕ್ಕಳ ಹೊರತು ಮತ್ತಾರೂ ಇಲ್ಲ. ಬಾಗಿಲ ಸಂದಿಯಲ್ಲಿ ಒಂದು ಅಕ್ಕಿಯ ಮೂಡೆ ಇದೆ.

ಭೀಮರಾಯರು ಹೋದಕೂಡಲೆ ದ್ಯಾವನ ಹೆಂಡತಿಯನ್ನು ಕರೆದು ದರ್ಪದಿಂದ ಹೇಳಿದರು: "ಆ ಅಕ್ಕೀ ಮೂಡೆ ಇತ್ತ ಹೊರಳಿಸು!"

ಆಕೆ ಮತ್ತೂ ಹೆಚ್ಚು ಅಳಲಾರಂಭಿಸಿದಳು. ಆದರೆ ರಾಯರು ಮತ್ತೂ ಜೋರಿನಿಂದ ಹೇಳಿದರು: "ಎಲೇ ತಿಮ್ಮಾ! ನಿಂತೇನು ನೋಡುತ್ತೀಯೋ? ತಗೊ!"

"ಹೌದ್ರೀ, ಒಡೆಯಾ" ಎಂದು ತಿಮ್ಮ ಎನ್ನುವಾಗಲೇ, ಭೀಮರಾಯರು ಕಠೋರವಾಗಿ ಕೂಗಿ "ಥೂ, ಸೂ × × ಮಗನೆ, ಹೇಳಿದಷ್ಟು ಮಾಡು! ನಿನ್ನ ಪುರಾಣವೆಲ್ಲಾ ಆ ಮೇಲೆ! ಸ್ವಲ್ಪ ತಡೆದರೆ ರಾಮೈಯನವರು ಬರತಾರೆ! ಸಾಹುಕಾರರ ಹಣ ನಿಮಗೇನು ಗೊತ್ತು? ದುಡ್ಡು ಸುಮ್ಮನೇ ಸುರಿಯೋದಿಲ್ಲ; ತೊಗೋ!"

ತಿಮ್ಮ ಇದನ್ನು ಕೇಳಿ, ಕಳವಳದಿಂದ—ಅಳುತ್ತಲೆ, ಪ್ರಯತ್ನಪಟ್ಟು—ಅಕ್ಕಿಯ ಮೂಡೆಯನ್ನು ಹೊರಗೆ ಉರುಳಿಸಿದ. ಅವನಿಗೆ ಸಾಕುಸಾಕಾಯಿತು. ತಲೆಯ ಮೇಲೆ ಕೈಯಿಟ್ಟು ಕುಳಿತ. ಇಷ್ಟು ಕಷ್ಟವಾದರೂ, ಹಣವನ್ನೇ ಅಪೇಕ್ಷಿಸುವ ಭೀಮರಾಯರಿಗೆ ಕನಿಕರವಿದೆಯೇ? ಕಲ್ಲೆದೆಯಲ್ಲವೇ ಅವರದು? ಕೂಗಿ ಹೇಳಲಾರಂಭಿಸಿದರು: "ಹೂಂ ತೊಗೊಳ್ಳೋ ತಲೆಗೆ! ತಡಮಾಡಬೇಡ! ಯಾಕೋ! ಕೇಳೊಲ್ಲೇನೋ? ತೊಗೊಳ್ಳೋ ಹಾಳುಮುಂಡೇ ಮಗನೆ!" ಎಂದು ಕೂರಗೊಡಲಿಲ್ಲ. ತಿಮ್ಮ ಸಾಹಸಪಟ್ಟ; ಎತ್ತಲಾಗಲಿಲ್ಲ. ಆದರೆ ರಾಯರು ಕೇಳಬೇಕಲ್ಲ!

"ಥೂ ಹಾಳುಮುಂಡೇಮಗನೆ! ಬೇಕೆಂತ ನಟನೆ ಮಾಡತೀಯಾ? ನಾನೂ ಹಿಡಿಯುತ್ತೇನೆ, ನೋಡೋಣ!" ಎಂದು ಕೈಕೊಟ್ಟರು. ಇಬ್ಬರ ಪ್ರಯತ್ನದ ಫಲವಾಗಿ ಅದು ತಿಮ್ಮನ ತಲೆಯನ್ನೇರಿತು. ರಾಯರಿನ್ನೂ ಕೈಯನ್ನು ಬಿಟ್ಟಿರಲಿಲ್ಲ. ತಿಮ್ಮ ಮುಗ್ಗುರಿಸಿ ಬೀಳಲಾದ. "ಎಲೆ ಎಲೆ, ಯಾಕೋ? ಚಾಂಡಾಲಾ! ಕೆಡಹಿದರೆ ಬೀಳುತ್ತೆ ನೋಡು! ನಡೆ, ಹೂಂ!" ಎನ್ನುತ್ತ ಅವನ ಜೊತೆಗೆ ಹೊರಟರು.

ತಿಮ್ಮನಲ್ಲಿ ವಿದ್ಯುತ್ತಿನ ಗತಿ ಬಂದುಬಿಟ್ಟಿತ್ತು. ಅವನು ಜೀವದ ಪರಿವೆ ಇಲ್ಲದೆ ನಡೆಯಲಾರಂಭಿಸಿದ. ಬೆವರು ಧಾರಾಳವಾಗಿ ಹರಿಯುತ್ತಿದೆ; ಅವನಿಗದರ ಕಡೆ ಲಕ್ಷ್ಯವಿರಲಿಲ್ಲ. ನಡೆಯುವುದೊಂದೇ ಅವನ ಕೆಲಸವಾಗಿತ್ತು. ರಾಯರು "ಏ, ಹಾಳುಮುಂಡೇಮಗನೆ! ಸ್ವಲ್ಪ ನಿಧಾನವಾಗಿ ನಡೆಯಲಿಕ್ಕೇನಾಗುತ್ತೋ? ನನ್ನ ಬಿಟ್ಟೇಹೋಗತೀಯಾ?" ಎಂದು ಶಕ್ತಿಮೀರಿ ನಡೆಯಲಾರಂಭಿಸಿದರು.

ಬಿಸಿಲಿನತಾಪ ಬಹಳವಾಗುತ್ತ ನಡೆಯಿತು. ನೆಲದಮೇಲೆ ಕಾಲಿಡುವುದೇ ಅಸಾಧ್ಯ. ಕೊಡೆ ಇದ್ದರೂ ರಾಯರು ಬಿಸಿಲತಾಪದಿಂದ ಉಸಿರನ್ನು ಬಿಡಲಾರಂಭಿಸಿದರು. ತಿಮ್ಮನ ಮೈಯಿಂದ ಬಂತೂ ಬೆವರ ಹೊಳೆಯೇ ಹರಿಯಲಾರಂಭಿಸಿತು. ಗಟ್ಟವನ್ನು ಹತ್ತುತ್ತಲೇ ಅವನ ಕಾಲು ತರತರ ನಡುಗಲು ಮೊದಲು ಮಾಡಿದುವು. ತಲೆತಿರುಗಹತ್ತಿ, ಕಣ್ಣು ಕತ್ತಲೆಯಾಗಿ, ದಾರಿ ಕಾಣದಂತೆ ಆಯಿತು. ಕಾತರಿಸುತ್ತ "ಅಪ್ಪಾ!" ಎಂದು ಕೂಗುತ್ತ ಬಿದ್ದುಬಿಟ್ಟ. ಅಕ್ಕಿಯ ಮೂಡೆ ಒಡೆದು ಅಕ್ಕಿಯೆಲ್ಲಾ ಬೀರಾಡಿತು. ಭೀಮರಾಯರು ಏದುತ್ತ "ಥೂ..ಕು..ಲಗೇ..ಡಿ! ನಿನ್ನ..ಮಾರಿಗೆ ಬೆಂ..ಕೀ..ಹಾಕ! ಅಕ್ಕೀ ಎಲ್ಲಾ

ಚೆಲ್ಲಿ..ದಿ.. ಅಲ್ಲೋ!" ಎಂದು ಕೂಗಿದರು. ತಿಮ್ಮ ಕಣ್ಣೆರಡು ಬಿಟ್ಟ. ಮಾತಿಲ್ಲ ಕತೆಯಿಲ್ಲ. ರಾಯರಿಗಿತ್ತ ಲಕ್ಷ್ಯವಿರಲಿಲ್ಲ. ಬಿದ್ದ ಅಕ್ಕಿಯನ್ನು ನೋಡಿ, ಸಾಧ್ಯವಾದಷ್ಟನ್ನು ಬಟ್ಟೆಯಲ್ಲಿ ಕಟ್ಟಿ ಹೆಗಲಿಗೇರಿಸಿದರು. ಅಲ್ಲದೆ "ಏಳೋ!" ಎಂದು ತಿಮ್ಮನನ್ನು ಕೂಗಿದರು. ತಿಮ್ಮ "ನೀ..ರು.." ಎಂದ. ರಾಯರು ಕೂಗುತ್ತಲೇ "ಥೂ ನಿನ್ನ! ಇಲ್ಲೆಲ್ಲಿದೆ ನೀರು? ಸಾಯುವುದು ಇದೇ ಕಾಲಕ್ಕೋ? ಅಕ್ಕಿಯನ್ನು ಮನೆಗೆ ಮುಟ್ಟಿಸಿ ಸಾಯಲಾಗುತ್ತಿರಲಿಲ್ಲವೇ? ಸುಮ್ಮನೆ ನಿಮಗೆ ಹಣಕೊಟ್ಟು ಸಾಕುವುದು ನೋಡು! ಅಲ್ಲೇ ಅಕ್ಕಿಯ ಹತ್ತಿರವಾದರೂ ಹೋಗಿ ಬಿದ್ದುಕೋ! ಕಾಗೆಬಂದು ತಿಂದಾವು! ಮನೆಗೆ ಹೋಗಿ ಕರಿಯನನ್ನು ಕಳುಹುತ್ತೇನೆ!" ಎಂದು ಅಕ್ಕಿಯ ಗಂಟನ್ನು ಹೆಗಲಿಗೇರಿಸಿ, ಉಸಿರಿಡುತ್ತ ನಡೆದರು. ಹೆಜ್ಜೆಹೆಜ್ಜೆಗೊಮ್ಮೆ ಬಾಯಿಗೆ ಬಂದಂತೆ ತಿಮ್ಮನನ್ನು ಶಪಿಸಲಾರಂಭಿಸಿದರು.

* * *

ಕರಿಯ ಬಂದು ನೋಡುವಾಗ, ತಿಮ್ಮನಿಗೆ ಇತ್ತಿನ ಸ್ಮೃತಿ ಇರಲಿಲ್ಲ. ಕರಿಯನು "ಅಯ್ಯೋ ತಿಮ್ಮಣ್ಣಾ!" ಎಂದು ಅತ್ತನು. ತಿಮ್ಮ ಒಮ್ಮೆ ಕಣ್ಣು ಹೊರಳಿಸಿದ; ಯಾವರೀತಿಯ ದ್ವೇಷದ ಭಾವನೆಯೂ ಇರಲಿಲ್ಲ. ಮತ್ತೆ ಕಣ್ಣುಮುಚ್ಚಿದವನು ತೆರೆಯಲೇ ಇಲ್ಲ.

ವಿಧವೆ

★

"ಆತ್ರೇಯಂ" ರಚಿಸಿದುದು

ಬಾಳಿನಲಿ ತಾನಿಲ್ಲ, ಬಾಳು ತನ್ನೊಳಗಿಲ್ಲ;
ಸಂತಸದ ಸುಖವಿಲ್ಲ, ಹಬ್ಬದುತ್ಸವವಿಲ್ಲ;
ಅನವರತ ಕಣ್ಣೀರ ಝರಿಯೊಂದು ಹರಿಯುತಿದೆ,
ಬಾಳಿನಾ ಬೇಗೆಯಲಿ ಜೀವ ಬೆಂಡಾಗುತಿದೆ. ೧

ಅಮರಕಲ್ಪನೆಯಲ್ಲಿ ಅವಿರಾಮ ಸಂಚಾರ,
ಮ್ಲಾನಹೃದಯದಲೊಂದು ನೀರವಹಾಹಾಕಾರ,
ಚಿತ್ರದಾ ಭಿತ್ತಿಯಲಿ ಮನದ ಪ್ರೇಮಾಗಾರ-
ನಾ ಚಿತ್ರಸುಳಿಯುತಿದೆ; ಇವೆ ತನ್ನ ಪರಿವಾರ! ೨

ನಿಜಮಧುರ ಜೀವನದ ಮೋಹಕಪ್ರತಿರೂಪ-
ಎದೆಯೊಳಗೆ ಮೂಡಿತ್ತು ಸುಖದ ದೂತನ ರೂಪ;
ಒಂದೊಮ್ಮೆ ಬಿಂಬಿಸಿತ್ತು ಅಂದಿನಾ ದರ್ಪಣವು,
ಜೀವನದ ಪ್ರಿಯಲಕ್ಷ್ಯ-ಮನದ ಸುಖತರ್ಪಣವು! ೩

ಬಾಳಿನಾಧ್ರುವತಾರೆ—ಮನದ ಮೋಹನಮೂರ್ತಿ,
ವಿಶ್ವದಾ ಒಡಲಲ್ಲಿ ಬಿಟ್ಟು ತನ್ನಯ ಕೀರ್ತಿ,
ಅನಂತ್ಯದಾಪಥದಿ ಅನುದಿನವು ನಡೆಯುತಿದೆ—
ಕರುಣಾಪ್ರವಾಹವನು ಸುರಿಸುತಿದೆ ಹರಿಸುತಿದೆ! ೪

ಮಾನಸಿಕ ಮಂದಿರದ ಶಾಂತ ಪೂಜಾರಿಣಿ,
ಕವಿಯ ಕಲ್ಪನೆಯಲ್ಲಿ ತಾಂಡವವಿಹಾರಿಣಿ,
ಕ್ರೂರಕಾಲನ ಲೀಲೆ–ನರ್ತನದ ಸ್ಮೃತಿಚಿತ್ರ!
ಎಂದಿಗೂ ಚಂದ್ರನನು ಕಳಕೊಂಡ ನಕ್ಷತ್ರ! ೫

ಕರುಣೆಯಾ ತೆರೆಯಲ್ಲಿ ಮುರಿದೊಂದು ನೌಕೆಯಲಿ,
ಮನದ ಅಭಿಲಾಷೆಯನು ಭಾವಾರ್ದ್ರಹೃದಯದಲಿ,
ಬಚ್ಚಿಟ್ಟು ವಿಶ್ವದಾ ಕಣ್ಣು ತಪ್ಪಿಸಿಯಾಕೆ
ಸಾಗುವಳು ಅಸ್ಪಷ್ಟರೋದನದ ಸಂಗಾತಿ! ೬

ಅಶ್ರುಧಾರೆಯನವಳ ಅಸ್ಫುಟಕ್ರಂದನವ
ನೋಡುತಿವೆ ಕೇಳುತಿವೆ ಆಕಾಶಾಂಭೋಧಿ-
ತೆರೆಯಾತರಂಗಗಳು, ಪವನನಿಚಲೋರ್ಮಿಗಳು;
ನೋಡಿಯೂ ಕೇಳಿಯೂ ಗಂಭೀರವಾಗಿಹವು! ೭

ಕುಸುಮಿತಾರಣ್ಯದಲಿ ಸ್ವಚ್ಛಂದ ಸಂಚಾರ,
ಅಸ್ಪಷ್ಟಗಾನದಲಿ ಹೆಣೆಯುವಾ ಸುಮಹಾರ,
ಷಡೃತುಗಳ ಶೃಂಗಾರ ಅಮೃತಮಯ ದಿವಸಗಳು,
ಪ್ರೇಮದಾ ರಾತ್ರಿಗಳು ಅಂದಿನಾ ನಿಮಿಷಗಳು— ೮

ತೆರೆಯ ಮರೆಯಲಿ ನಿಂದು ಕೆಣಕುತಿವೆ ತನ್ನನ್ನು:
ಕೊಲ್ಲುತಿವೆ ಮನವನ್ನು; ಆದೊಡೇನಿವುಗಳನು
ಮರೆಯುವುದು ಸಾಧ್ಯವೇ? ಜೀವನದಿ ಸೇರಿದಾ
ಸಂತತದ ಸಂಗಾತಿಗಳನು ಬಿಡಲಾಪುದೇ? ೯

ಸ್ವರ್ಗದಾ ಬಯಲೊಂದು, ಮಧ್ಯದಲಿ ಮಾಮರವು,
ಪುಷ್ಪಿಸಿದೆ ಬೀರುತಿದೆ ಪರಿಮಳವ; (ಆ ಸರವು
ಹೆಚ್ಚುತಿವೆ) ಪ್ರೇಮದಾ ಹಕ್ಕಿಗಳ ಜೊತೆಯೊಂದು
ಮೆರೆಯುತಿದೆ ಹಾಡುತಿವೆ ಬಾಹ್ಯವನೆ ಮರೆತಿಂದು! ೧೦

ಸವತಿ

(ಹರಟೆ)

ಶ್ರೀ. ಎಚ್. ಎಸ್. ಪಾಟೀಲ, ಎಂ.ಎ., ಬಿ.ಕಾಮ್.

ಇಬ್ಬರು ಹೆಂಡಿರನ್ನು ಮಾಡಿಕೊಳ್ಳುವ ಸುಶಿಕ್ಷಿತ ಮಹನೀಯರು ಇಂದಿನ ಕಾಲದಲ್ಲಿ ಇಲ್ಲವಾದರೂ, ಎಲ್ಲರೂ ತಂತಮ್ಮ ಹೆಂಡಿದಿರಿಗೆ ಸವತಿಯೊಬ್ಬಳನ್ನು ಒದಗಿಸಿ ಕೊಟ್ಟೇಕೊಡುತ್ತಾರೆ. ಹಿಂದಿನ ಕಾಲದಲ್ಲಿ ಸವತಿಯರು ಮೂರ್ತಿಮತ್ತಾಗಿ ಇದ್ದರೆ, ಇಂದಿನ ಕಾಲದ ಸವತಿಯರು ಮನೋಮಯರಾಗಿ ಇರುತ್ತಾರೆ. ಆದರೆ ಇಂದಿನ ಸವತಿಯರ ಕಾಟವನ್ನೂ ಸುಶಿಕ್ಷಿತರ ಹೆಂಡಿದಿರು ತಾಳದೆ ತೊಳಲಾಡುತ್ತಿದ್ದಾರೆ.

'ಇಂದಿನ ಸುಧಾರಣೆಯ ಒಂದು ಉಪಯುಕ್ತವಾದ ಅಂಗವೆಂದರೆ, ಈಗಿನ ಹುಡಗರು ತಮ್ಮ ಹೆಂಡಂದಿರಿಗೆ ಹೊಂದಿಕೊಂಡಿರುವುದು! ಆದರಿಂದ ಆ ಹುಡುಗಿಯರಿಗೆ ಸವತಿಯರ ಕಾಟವು ಇಲ್ಲದಂತಾಗಿದೆ' ಎಂದು ಹಿರಿಯರು ಹೇಳುವುದುಂಟು. ಈ ಹೇಳಿಕೆಯನ್ನು ಕೊಂಚ ತೀಕ್ಷ್ಣವಾಗಿ ಪರಿಶೀಲಿಸುವದು ಆವಶ್ಯಕವಾದ ಮಾತು. ಇಂದು ನಿಜವಾಗಿಯೂ ಸವತಿಯರು ಇಲ್ಲದಂತಾದರೆ?

ಒಮ್ಮೆಲೆ ಕೇಳಿದ ಈ ಪ್ರಶ್ನೆಗೆ 'ಅಹುದು' ಎಂಬ ಸಹಜವಾದ ಉತ್ತರವು ದೊರೆಯುವುದು. ಆದರೆ ಮೊದಲು 'ಸವತಿ' ಈ ಶಬ್ದದ ವ್ಯಾಖ್ಯೆಯನ್ನು ಹೇಳಿದಮೇಲೆ, ತುಸು ವಿಚಾರಮಾಡಬೇಕಾಗುತ್ತದೆ—ಉತ್ತರವನ್ನೀಯಲಿಕ್ಕೆ! 'ಸವತಿ' ಎಂದರೆ ಮದುವೆಯಾದ ಎರಡನೆಯ ಹೆಂಡತಿ—ಅಥವಾ ಬೇರೆ ಹೆಂಡತಿ—ಎಂಬ ಅರ್ಥವನ್ನು ತೆಗೆದುಕೊಂಡರೆ, ಇಂತಹ ವ್ಯಕ್ತಿಯ ಹೆದರಿಕೆಯಾಗಲಿ ದರ್ಪವಾಗಲಿ ಈಗಿನವರಿಗೆ ಕಡಿಮೆ ಎಂದು ಯಾರಾದರೂ ಹೇಳಬಹುದು. ಆದರೆ 'ಸವತಿ' ಎಂದರೆ ಗಂಡನ ಬಗೆಯಲ್ಲಿ ತಾನು ಪಡೆದ ಸ್ಥಾನದ ಮೇಲೆ ದಾಳಿಯನ್ನು ಮಾಡುವವಳು— ಎಂಬರ್ಥವನ್ನು ತೆಗೆದುಕೊಂಡರೆ, ಅಂತಹ ಕಾಟವು ಈಗಿನವರಿಗೂ ತುಂಬಾ ಉಂಟು ಎಂಬುದು, ಕೆಳಗೆ ಕಾಣಿಸಿದ ಕೆಲವು ಉದಾಹರಣೆಗಳನ್ನು ಓದಿದಮೇಲೆ ಮನವರಿಕೆಯಾಗಬಹುದು.

ಮೊದಲಿನ ಹೆಂಗುಸರನ್ನು ಸವತಿಯರು ಪ್ರತ್ಯಕ್ಷವಾಗಲಿ, ಅಪ್ರತ್ಯಕ್ಷವಾಗಲಿ ಪೀಡಿಸುತ್ತಿದ್ದರಂತೆ! ಅದರಂತೆಯೇ ಈಗಿನ ಹೆಂಗುಸರನ್ನು ಪೀಡಿಸುವ ಸವತಿಯರೂ ಈಗ ಇದ್ದಾರೆ. ಅದನ್ನು ಮನಗಾಣಬೇಕಾದರೆ, ಇಂದಿನ, 'ಸಮಾಜದ ಕನ್ನಡಿ' ಎಂದು ಹೇಳುವ ಸಾಹಿತ್ಯವನ್ನು ಪರಿಕಿಸಬೇಕು. ಅದರೊಳಗೆ ಹೊಳೆಯುವ ನಾಟಕಗಳು, ಮಿನುಗುವ ಚಿಕ್ಕ-ಸಿಲ್ಕ್-ಕತೆಗಳು, ಕಣ್ಣು ಮಿಳುಕಿಸುವ ಕಾದಂಬರಿಗಳು—ಇವುಗಳಿಗೆ ಸಾಮಾನ್ಯವಾಗಿ ವಸ್ತು ಏನಿರುತ್ತದೆ? ಇವುಗಳಿಗೆ ತಳಪದಿಯೇನಿರುತ್ತದೆ? ನಿರಾಶೆ ಹೊಂದಿದ ಪ್ರೇಮ! ನಮ್ಮ ಸಾಹಿತ್ಯದ ರಣರಂಗದಲ್ಲಿ ಸತ್ತಂತೆ ಬಿದ್ದಿರುವ ಅನೇಕ ಕತೆ-ಕಾದಂಬರಿ-ನಾಟಕಗಳಿಗೆ ಪ್ರಾಮುಖ್ಯವಾಗಿ ಇರುವ ವಿಷಯಗಳೆಂದರೆ ಇವು! ಚಿಕ್ಕಂದಿನಲ್ಲಿ ಪ್ರೀತಿಸುವ ಒಬ್ಬ ಹುಡುಗಿಯನ್ನು 'ಅಪರಿಹಾರ್ಯವಾದ' ಕಾರಣಗಳಿಂದ ಮದುವೆಯಾಗದೆ, ಬೇರೊಬ್ಬಳನ್ನು ವಿವಾಹವಾಗಿ ಆ 'ಸತ್ತ' ಪ್ರೇಮವನ್ನು ನೆನೆಸುತ್ತ ಬಳಲುವ ಯುವಕನ ಜೀವನ! ಇಲ್ಲವೆ ಅಜ್ಞಾನಾವಸ್ಥೆಯಲ್ಲಿ ಮದುವೆಯಾಗಿ, ಮುಂದೆ ತಿಳಿಯುಹತ್ತಿದಮೇಲೆ (?) 'ಇವಳಿಗಿಂತ ಚೆನ್ನಾಗಿದ್ದ ಹೆಂಡತಿಯು ನನಗೆ ಸಿಕ್ಕಿದ್ದರೆ, ನಾನು ಹೆಚ್ಚು ಸುಖಿಯಾಗಿರುತ್ತಿದ್ದೆ' ಎಂದು ಹಲುಬುವ ಪರಯದವನ ಚರಿತೆ. ಇವೆಲ್ಲವುಗಳನ್ನು ಮುಂದಿನ ಶತಮಾನದ ಒಬ್ಬ ಕನ್ನಡಿಗನು ಓದಿದನೆಂದರೆ, ಅವನಿಗೆ 'ಈಗಿನ ಹೆಂಗಳೆಯರಿಗೆ ಸವತಿಯರ ಕಾಟ ಇದ್ದಿಲ್ಲ' ಎಂಬ ವಿಚಾರವು ಹೊಳೆಯಬಹುದೆ? ದೆವ್ವ-ಭೂತಗಳಾಗಿ ಇಲ್ಲವೆ ಖಟ್ಲೆ-ಕಜ್ಜಾಯಗಳಾಗಿ ಹಿಂದಿನವರು ಕಾಡುತ್ತಿದ್ದರೆ, ಕುಟುಂಬಸೌಖ್ಯಕ್ಕೆ ಕೀಲಿಯು ಕೈಯಂತಿದ್ದ ಗಂಡನ ಮನಸ್ಸನ್ನೆ ಆಕ್ರಮಿಸಿಕೊಂಡು ಪೀಡಿಸುವವರು ಇಂದಿನ ಸವತಿಯರು!

ಗಂಡನ ಮನಸ್ಸನ್ನು ಆವರಿಸಿಕೊಂಡು ಕಾಡುವ ಸವತಿಯರದೊಂದು ಬಗೆಯಾದರೆ, ಹೆಂಡತಿಯ ಮನಸ್ಸನ್ನು ಹೊಕ್ಕು, ಸಂಸಾರವನ್ನು ಹದಗೆಡಿಸುವ ಸವತಿಯರದು, ಇನ್ನೊಂದು ಪಡೆಯಿರುತ್ತದೆ. ಇಂದು ಯುವಕರು ಹೊಟ್ಟೆತುಂಬಿಕೊಳ್ಳುವುದಕ್ಕಾಗಿ ಹೊರಗಿನ ಸ್ಥಲಗಳಿಗೆ ಹಲವಾರು ಉದ್ಯೋಗ-ಉದ್ಯಮಗಳನ್ನು ಕೈಕೊಳ್ಳಲಿಕ್ಕೆಂದು ಹೋಗಬೇಕಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಗಂಡ-ಹೆಂಡಿರಿಬ್ಬರೇ ಇರುವ ವೇಳೆ ಬಂದರೆ, ಹೆಂಡತಿಗೆ ಅಡಿಗಡಿಗೆ ಸವತಿಯ ಭಯ. ಗಂಡನು ಡಾಕ್ಟರನಿದ್ದರೆ 'ನರ್ಸ್'ನ ಭಯ! ಗಂಡನು ನಟನಿದ್ದರೆ ಬೇರೆ ನಟಿಯರ ಭಯ! ಗಂಡನು ಚಿತ್ರಕಾರ-ಶಿಲ್ಪಕಾರನಿದ್ದರೆ ಅವನಪ್ರತೀಕ(Model)ದ ಭಯ! ಗಂಡನು ಶಿಕ್ಷಕನಿದ್ದರೆ ಅವನ ಶಿಷ್ಯರ ಭಯ! ಇಂತು ಹೊಟ್ಟೆಯ ಪೋರಿಯಲ್ಲಿ, ಅವನ ಸಂಗಡ ಕೆಲಕಾಲವನ್ನಾದರೂ ಕಳೆಯಬೇಕಾದ ಬೇರೆ ಯಾವುದೇ ಹೆಣ್ಣುಮಗಳಿದ್ದರೂ, ಆಕೆಯು

ವಿಷಯವಾಗಿ ಹೆಂಡತಿಯ ಮನಸ್ಸಿನಲ್ಲಿ 'ಸವತಿಯ ಮತ್ಸರ'! ಇದು ಇಂದಿನ ವೈಶಿಷ್ಟ್ಯವೆಂದೇನು ಹೇಳಲಿಕ್ಕಾಗುವುದಿಲ್ಲ; ಆದರೂ ಪ್ರಪಂಚದಲ್ಲಿ ಆರ್ಥಿಕ ಪರಿಸ್ಥಿತಿಯು ಬದಲಾದಂತೆ, ಸವತಿಯರ ಕಾಟವು ಬೇರೆಬೇರೆ ಸ್ವರೂಪವನ್ನು ತಾಳಹತ್ತಿದೆ, ಇಷ್ಟೆ!

ಕಾಡುತ್ತಲಿದ್ದರೂ ಕಾಣುವ ಸವತಿಯರದೊಂದು ಪಂಗಡ ವಾದರೆ, ಕಾಣದೆ ಕಾಡುವ ಸವತಿಯರದೊಂದು ಬಗೆ ಬೇರೆ ಇದೆ. ಮೇಲಿನ ಒಂದೆರಡು ಸಂದರ್ಭಗಳಲ್ಲಿ, ಸವತಿಯ ಸ್ಥಾನಗಳಲ್ಲಿದ್ದವರನ್ನು ಬಿಡಲಿಕ್ಕೆ ಅಥವಾ ಮರೆಯಲಿಕ್ಕೆ ಗಂಡ ಸಿಗೆ ಶಕ್ಯವಾಗಿದ್ದರೆ, ಈ ಮೂರನೆಯ ಬಗೆಯವಳನ್ನು ತಪ್ಪಿಸು ವುದು ಅವನ ಕೈಯಲ್ಲಿಯೂ ಇರುವುದಿಲ್ಲ; ಅಥವಾ ಆಕೆಯನ್ನು ಇಲ್ಲದಂತಾಗಲಿ ಕಾಡದಂತಾಗಲಿ ಮಾಡುವುದು ಹೆಂಡತಿಗೂ ಸಾಧ್ಯವಿರುವುದಿಲ್ಲ. ಇದೊಂದು ಅದೃಶ್ಯವಾದರೂ ಅನಿವಾರ್ಯ ವಾದ ಸಮೂನೆ. ಒಂದು ಬರೆಹವನ್ನು ಬರೆಯಲಿಕ್ಕೆ ಕುಳಿತ ಒರ್ವ ಸಾಹಿತಿಯನ್ನು ಕೆಣಕಿ ನೋಡಿರಿ; ಒಂದು ಸಂಶೋಧನ ದಲ್ಲಿ ತೊಡಗಿದ ವ್ಯಾಸಂಗಿಯನ್ನು ತಡವಿ ನೋಡಿರಿ; ಒಂದು ವ್ಯಾಪಾರದಲ್ಲಿ ನಿರತನಾದ ಶ್ರೇಷ್ಠಿಯನ್ನು ಮಾತನಾಡಿಸಿ ನೋಡಿರಿ, ಇಲ್ಲವೆ ಆನಂದದಿಂದ ಅಂಗಸಾಧನೆಯನ್ನು ಮಾಡು ತ್ತಿರುವ ಒಬ್ಬ ಜಟ್ಟಿಯನ್ನು ಮುಟ್ಟಿ ನೋಡಿರಿ! ಎಂದರೆ ಅವರ ಮನದನ್ನೆಯ ಪರಿಚಯ ಮಾತ್ರ ಆಗುವುದಲ್ಲದೆ, ಅಂತಹರ ಸಂಗಡ ಇಡಿಯ ಜನ್ಮದಲ್ಲಿ 'ಸಂಸಾರ ಸಾಗಿಸಬೇಕಾಗಿರುವ ಅವರ ಹೆಂಡತಿಯರ ಪಾಡೂ ಗೊತ್ತಾಗುವುದು. ಅವರು ಸಾಹಿತಿಯ 'ಕೈ ಹಿಡಿದಿದ್ದರೆ' ಸ್ಫೂರ್ತಿಯು ಅವರ ಸವತಿ. ಎಂದರೆ ಸಾಹಿತಿಗೆ ಸ್ಫೂರ್ತಿಯು ಪ್ರಸನ್ನಳಾದ ಸಮಯದಲ್ಲಿ ಅಲ್ಲಿಗೆ ಹೆಂಡತಿಯು ಬರುವಂತಿಲ್ಲ; ಮತ್ತು ಸಾಮಾನ್ಯವಾಗಿ ಹೆಂಡತಿಯ ಸಹವಾಸದಲ್ಲಿ ಅವನು ಇದ್ದಾಗ ಅಲ್ಲಿ ಸ್ಫೂರ್ತಿಯು ಸುಳಿಯುವಂತಿಲ್ಲ. ಇದೇ ಬಗೆಯಾಗಿ ವ್ಯಾಸಂಗಿಯ ಹೆಂಡತಿಗೆ ವಿದ್ಯೆಯು ಸವತಿ. ವ್ಯಾಪಾರಿಯ ಹೆಂಡತಿಗೆ ಲಕ್ಷ್ಮಿಯು ಸವತಿ. ಜಟ್ಟಿಯ ಹೆಂಡತಿಗೆ ಸಾಕ್ಷಾತ್ ಶಕ್ತಿಯೆ ಸವತಿ! ಇಂತಹ ಸವತಿಯರ ಕಾಟವನ್ನು ತಪ್ಪಿಸಿಕೊಳ್ಳಲು ಆವಾವ ಹೆಂಡತಿಗೆ ಸಾಧ್ಯ!

ಇಂತು ಇಂದಿನ ಸವತಿಯರ ಕಾಟವು—ಹೆಚ್ಚಾಗಿ, 'ಮಾನಸಿಕ' ವಾದುದಿರುತ್ತದೆ. ಹಿಂದಿನವರಂತೆ ಫ್ಯಾಶನ್ನಿಗಾಗಲಿ, ಪರಂಪರೆ ಯೆಂದಾಗಲಿ, ಇಲ್ಲವೆ ಮತ್ತಾವ ಕಾರಣದಿಂದಾಗಲಿ ಹೊರಗಿನ ಸಂಬಂಧವನ್ನು ಈಗಿನವರೇನು ಇಡುವುದಿಲ್ಲ. ನಿನ್ನಿನ ಪೀಳಿಗೆ ಯಂತೆ ಮೋಕ್ಷವನ್ನು ಪಡೆಯುವುದಕ್ಕಾಗಲಿ, ಮನೆತನವನ್ನು ನಡೆಯಿಸುವುದಕ್ಕಾಗಲಿ, ಗಂಡುಮಗುವಿಗಾಗಿಯಾಗಲಿ ಈಗಿ ನವರು ಎರಡನೆಯ ಹೆಂಡತಿಯನ್ನು ಮದುವೆಯಾಗುವುದಿಲ್ಲ. ಆದರೆ ಈಗಿನ ಸವತಿಯರ ಬಡಿದಾಟವು ಮನೆಯ ಅಥವಾ ಮನೆ- ತನದ ಸಲುವಾಗಿ ಇರದೆ, ಗಂಡ-ಹೆಂಡತಿಯರ ಮನಸ್ಸಿನ ಸಲು ವಾಗಿ ಇರುತ್ತದೆ. 'ಸಂಪೂರ್ಣವಾಗಿ ತನ್ನವನೆ ಆಗಿರಬೇಕು.' ಎಂದು ತನ್ನ ಗಂಡನ ವಿಷಯವಾಗಿ ಈಗಿನ ಹೆಂಡತಿಯರ ಹಟ. ಆದರೆ ಹಲವಾರು ಕಾರಣಗಳಿಂದ ದಿನದ ಕೆಲವುಭಾಗವನ್ನಾದರೂ ಬೇರೆಯವರೊಡನೆ, ಇಲ್ಲವೆ ಬೇರೆಯವರಿಗಾಗಿ ಕಳೆಯುವ ಪ್ರಸಂಗಗಳು ಇಂದಿನ ಗಂಡಸರಿಗೆ ಬಂದಿರುತ್ತವೆ. ಆಗ ಅಂತಹರು, ಕಾಣದ ಸವತಿಯರಿದ್ದರೆ ಹೆಂಡತಿಯು ಗಂಡನಿ ಗಾಗಿ ಕನಿಕರಪಡಬೇಕಾಗುತ್ತದೆ: ಕಾಣುವವರಿದ್ದರೆ, ಕೋಪಿಸ ಬೇಕಾಗುತ್ತದೆ; ಮತ್ತು ಕೇವಲ ಕಾಡುವವರಿದ್ದರೆ ಕಷ್ಟಪಡ ಬೇಕಾಗುತ್ತದೆ.

ಸವತಿಯರ ಕಡೆಯಿಂದ ಬಡಿದಾಡುವ ಕೆಲವು ಜನರೂ ಇದ್ದಾರೆ. ಒಬ್ಬ ಮನುಷ್ಯನನ್ನು ಅತ್ಯಂತ ಒಲುಮೆಯಿಂದ ಬೇರೊಬ್ಬಳು ಸ್ವೀಕರಿಸಿದರೆ ಅದಕ್ಕೆ ಅವಳದೇನು ತಪ್ಪು? 'ಹಾಗೆ ಕೇಳಿದರೆ ಅವಳೇ ಆ ಮನುಷ್ಯನ ಪ್ರೇಮಕ್ಕೆ ನಿಜವಾದ ಬಾಧ್ಯಸ್ಥಳು' ಎಂದು ವಾದಿಸುವ ಒಂದು ಪಂಗಡವೂ ಇದೆ. ಆದರೂ ಇಂತಹ ಸವತಿಯರ ಕಾಟವಿದ್ದರೂ ಅಥವಾ ಅವರ 'ಕಾಟ' ಇದ್ದರೆಯೆ ಗಂಡ-ಹೆಂಡಂದಿರು ಸಂಸಾರದಲ್ಲಿ ಸುಖದಿಂದ ಇರಬಹುದು ಎಂದಿಷ್ಟೆ ಇಂದಿನ ಹೊಸ ಬಗೆಯ ಸವತಿಯರ ವಿಷಯವಾಗಿ ಹೇಳಬಹುದು.

(೩೨ನೆಯ ಪುಟದಿಂದ ಮುಂದುವರಿದುದು.)

ಕೊನೆಯ ಮಾತು

ಪ್ರಾದೇಶಿಕ ವಿಶ್ವವಿದ್ಯಾಲಯಗಳ ಬಗ್ಗೆ ತಜ್ಞರು ಇನ್ನೂ ಅನೇಕ ಮಾತುಗಳನ್ನು ಹೇಳಬಹುದು. ಹಾಗೆ ಹೇಳಬಹುದಾದ ಅನೇಕ ಮಾತುಗಳೂ ಇವೆ. ಸದ್ಯದ ಲೇಖವು ತಜ್ಞತೆಯ ಪ್ರದರ್ಶನವಾಗಿಲ್ಲ. ಮಹಾರಾಷ್ಟ್ರ ವಿಶ್ವವಿದ್ಯಾಲಯ ವಿಚಾರಣಾ ಸಮಿತಿಯ ವಿವರ್ಣಾವಾದಂದಿನಿಂದ ಪ್ರಾದೇಶಿಕ- ವಿಶ್ವವಿದ್ಯಾಲಯಗಳ ಕಾಲ ಬಂದಿತೆಂಬ ಸಂತೋಷವನ್ನೂ. ಅದೇ ರೀತಿ ಕರ್ನಾಟಕ ಪ್ರಾಂತಕ್ಕೂ ಇಂತಹ ಹಂಬಲವಿದ್ದುದರಿಂದ ಆ ಬಗ್ಗೆ ಕೆಲವು ಮುಖ್ಯ ತತ್ತ್ವಗಳನ್ನೂ ವ್ಯಕ್ತಮಾಡುವ ಪ್ರಯತ್ನ ಇಲ್ಲಿದೆ. ಇಷ್ಟರಲ್ಲಿಯೆ ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತೊಂದು ಸೇರತಕ್ಕದ್ದಿದೆ. ಅದನ್ನೂ ಲಕ್ಷ್ಯದಲ್ಲಿಟ್ಟುಕೊಂಡು ಸಮಯಾನುಸಾರವಾದ ಕೆಲವು ಮಾತುಗಳನ್ನು ಕಾಣಿಸಿದ್ದೇವೆ. ವಿಶ್ವವಿದ್ಯಾಲಯವು ಉಚ್ಚ ಶಿಕ್ಷಣವನ್ನೆ ಧ್ಯೇಯವಾಗಿರಿಸಬೇಕು; ತಾತ್ಕಾಲಿಕ ರಾಜಕೀಯ ಸಾಮಾಜಿಕ ಭೇದೋಪಭೇದಗಳಿಂದ ಅಲಿಪ್ತವಾಗಿರಬೇಕು; ನಮ್ಮದು ಬೆಳೆವ ದೇಶ, ಒಂದು ರಾಷ್ಟ್ರ ವೆನಿಸಿ ಬೆಳೆವ ದೇಶ ಎಂಬುದನ್ನು ಲಕ್ಷ್ಯದಲ್ಲಿಡಬೇಕು— ಎಂಬ ಅಭಿಪ್ರಾಯಗಳನ್ನು ಗೃಹೀತವಾಗಿಟ್ಟುಕೊಂಡಿದ್ದೇವೆ; ಇದನ್ನು ಮತ್ತೊಮ್ಮೆ, ಕೊನೆಯದಾಗಿ ವಾಚಕರ ಲಕ್ಷ್ಯಕ್ಕೆ ತರ- ಬಯಸುವೆವು.

ಮಾತಾ ಮಾಂಟೆಸೋರಿ (ಶಿಕ್ಷಣತತ್ತ್ವದ ಪರಿಚಯ)

ಶ್ರೀ. ಹ. ಮ. ಬಬಲೇಶ್ವರ, ಮಾಂಟ್. ಡಿಪ್.

★

ತಾವು ಅಡಿಯಿಟ್ಟಂತೆ ತಮ್ಮ ಮಕ್ಕಳನ್ನೂ ಅಡಿಯಿಡಲು ಹಚ್ಚಬೇಕೆಂದು ಪ್ರತಿಯೊಬ್ಬ ಹಿರಿಯರ ಹವಣಿಕೆ. ಆದರೆ ಪ್ರತಿಯೊಂದು ಮಾನವಜೀವಿಗೂ ಒಂದು ವ್ಯಕ್ತಿತ್ವವಿರುವುದು. ಅದಕ್ಕನುಸಾರವಾಗಿ ಮನಸ್ಸಿನ ಒಲವು ಇರುವುದು. ಈ ಒಲವುಗಳೆ ಹಿರಿಯತನ-ಕಿರಿಯತನಗಳಲ್ಲಿ ಹೋರಾಟವನ್ನು ಹೆಚ್ಚಿಸುವುವು!

★

ಬಿತ್ತಿ ಸೃಷ್ಟಿಯಲ್ಲಿ ಹುಟ್ಟುವುದು; ಸೃಷ್ಟಿ ಅದನ್ನು ಒಂದು ವಿಧಾನದಲ್ಲಿ ಬೆಳೆಯಿಸುವುದು. ಬಿತ್ತಿಯ ಬೆಳವಣಿಗೆ ಸೃಷ್ಟಿಗೆ ಸಂಬಂಧಪಟ್ಟುದು. ಹೀಗೆಯೆ ಮಕ್ಕಳ ಬೆಳವಣಿಗೆ. ಮಗು ಸೃಷ್ಟಿಯಲ್ಲಿ ಹುಟ್ಟುತ್ತದೆ. ಸೃಷ್ಟಿಯೇ ಅದನ್ನು ಒಂದು ವಿಧವಾಗಿ ಬೆಳೆಯಿಸುತ್ತದೆ. ಇದಕ್ಕೆ ಪ್ರತಿಯಾಗಿ ತಾಯಿ-ತಂದೆಗಳೂ ಗುರುಹಿರಿಯರೂ ಅಡ್ಡ ಬಂದರೆ, ಮಗುವು ಸ್ವಾಭಾವಿಕವಾಗಿ ಬೆಳೆಯುವುದನ್ನು ತಡೆದಂತಾಗುವುದು. ಮತ್ತು ಹೀಗೆ ಒಮ್ಮೆ ಬೆಳಗೆಯಲ್ಲಿ ತಡೆದು ನಿಂತ ಮಗುವು ಮುಂದೆ ಸ್ವಾಭಾವಿಕವಾಗಿ ಬೆಳೆಯಲಾರದು. ಇದು ಸೃಷ್ಟಿಯ ನಿಯಮ.

ಹಾಗಾದರೆ ಮಕ್ಕಳ ಶಿಕ್ಷಣದಲ್ಲಿ ಶಿಕ್ಷಕರ ಹಾಗು ತಾಯಿ-ತಂದೆಗಳ ಸ್ಥಾನ ಯಾವುದು?— ಕೇವಲ ತೋಟಿಗನದು! ತೋಟಿಗನು ಬೆಳೆ ಹುಲುಸಾಗಿ ಬರಲು ತೋಟವನ್ನು ಸರಿಪಡಿಸಿ, ಹೊಸ ಮಣ್ಣನ್ನು ಹರಡಿ ನೀರೆರೆಯುವಂತೆ, ಶಿಕ್ಷಕನಾದವನು ಮಕ್ಕಳ ಸುತ್ತಲಿನ ಪರಿಸ್ಥಿತಿಯನ್ನು ಅವರ ಬೆಳವಣಿಗೆಗೆ ಸರಿಹೋಗುವಂತೆ ಸಿದ್ಧಗೊಳಿಸುವುದು. ಮಕ್ಕಳ ಸರ್ವತೋಮುಖವಾದ ಬೆಳವಣಿಗೆ ಅವರ ಸುತ್ತಲಿನ ಪರಿಸ್ಥಿತಿಯ ಮೇಲೆ ಅವಲಂಬಿಸಿರುತ್ತದೆಂಬುದು ಶಿಕ್ಷಕರಾದವರಿಗೆ ತಿಳಿದಿರಬೇಕು. ಕೇವಲ ಪರಿಸ್ಥಿತಿಯನ್ನಲ್ಲದೆ ಅವರ ಒಲವನ್ನೂ ಅರಿತವರಾಗಿರಬೇಕು. ಇದನ್ನರಿಯದೆ ಹಿರಿಯರಾದವರು, ಕಿರಿಯರ ಶಿಕ್ಷಣ ತಮಗೆ ಸಂಬಂಧಪಟ್ಟದೆಂದುಕೊಂಡು ಮತ್ತು ತಮ್ಮ ತಿಳಿವಳಿಕೆಯಿಂದ ಮಕ್ಕಳ ಒಲವನ್ನು ಉಪೇಕ್ಷಿಸಿ, ಅವರಿಗೆ ವಿರೋಧವಾಗಿ ನಡೆದುಕೊಂಡು, ತಾವೂ ಹಾಳಾಗುವುದಲ್ಲದೆ ಚಿಕ್ಕಮಕ್ಕಳನ್ನೂ ಹಾಳು ಮಾಡುವರು. ಇಂತಹ ಸಂಗತಿಗಳು ಹೇರಳವಾಗಿವೆ. ಇದಕ್ಕೆ ಒಂದು ಉದಾಹರಣೆ ಸಾಕು:— ಬಹು ದೊಡ್ಡ ಡಾಕ್ಟರರಾಗಿ ಇಲ್ಲದೆ ಬ್ಯಾರಿಸ್ಟರರಾಗಿ ಅಪರಿಮಿತ ಹಣ ಗಳಿಸಿದ ಹಿರಿಯರು, ತಮ್ಮ ಮಕ್ಕಳೂ ತಮ್ಮ ವೃತ್ತಿಯನ್ನೇ ಅವಲಂಬಿಸಿ ತಮ್ಮ ಹಾಗೆಯೆ ಹಣ ಸಂಪಾದಿಸಲು ಬಯಸುತ್ತಾರೆ. ಮಕ್ಕಳ ಒಲವು ಆ ಕಡೆಗಿದ್ದರೆ ಸರಿ; ವಿರೋಧವಾಗಿದ್ದರೆ ತೀರಿತು, ತಂದೆ-ಮಕ್ಕಳಲ್ಲಿ ತಿಕ್ಕಾಟ. ಮಕ್ಕಳ ಒಲವು ಸಂಗೀತದಲ್ಲೊ ಅಥವಾ ಬೇರೆ ಯಾವುದಾದರೂ ಲಲಿತಕಲೆಯಲ್ಲಿಯೊ ಇದ್ದುಕೊಂಡಿದ್ದರೆ, ಈ ತಿಕ್ಕಾಟ ಬಹು ಜೋರಾಗಿ ಸಾಗುತ್ತದೆ. ಪರಸ್ಪರರಲ್ಲಿ ವೈಮನಸ್ಯವುಂಟಾಗಿ ವಿಪರೀತಕ್ಕೆಳೆಯುತ್ತದೆ. ಮಕ್ಕಳು ತಮ್ಮ ಸ್ವಭಾವಕ್ಕನುಸರಿಸಿ ವಿರೋಧಿಸುತ್ತಾರೆ. ಹಿರಿಯರು ಅದು ಉದ್ಧಟತನವೆಂದೂ ತಮಗೆ ಕಿರಿಯರಿಂದಾಗುವ ಅವಮಾನವೆಂದೂ ಬಗೆದು, ಮಕ್ಕಳಿಗೆ ಅನೇಕ ಬಗೆಯ ಶಿಕ್ಷೆ ವಿಧಿಸಿ, ತಮ್ಮ ದೃಷ್ಟಿಯಿಂದ ದಾರಿಗೆ ತರಲೆಳಸುತ್ತಾರೆ. ಗಟ್ಟಿಯಾದ ಮಕ್ಕಳು ಸರಿಯಾಗಿ ಪ್ರತಿಭಟಿಸುತ್ತಾರೆ. ಕಡೆಗೆ ತಮ್ಮ ಒಲವಿಗೆ ವಿರೋಧವಾಗಿ ಇರುವುದಕ್ಕಿಂತ ಬೇರೆ ಎಲ್ಲಿಗಾದರೂ ಹೋಗಿ ಬಿಡುವುದು ಹೆಚ್ಚು ಉತ್ತಮವೆಂದು, ಮನೆಬಿಟ್ಟು ಹೊರಟು ಹೋಗುತ್ತಾರೆ. ಹೇಡಿಯಾದ ಹುಡುಗರಿದ್ದರೆ ಹಿರಿಯರ ದಂಡನೆಗೆ ಹೆದರಿ, ಹೇಗೋ ಅವರಿಷ್ಟದಂತೆ ನಡೆಯಲು ಯತ್ನಿಸುತ್ತಾರೆ. ಹೀಗೆ ಹಿರಿಯರ ಇಷ್ಟದಂತೆ ವಿದ್ಯೆ ಕಲಿಯುವ ಹುಡುಗರು ಎಷ್ಟು ಪ್ರಗತಿ ಹೊಂದುತ್ತಾರೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಶಾಲೆಯಲ್ಲಿ ಕಲ್ಲಾಗಿ, ಮನೆಯಲ್ಲಿ ಕೂಳಿಗೆ ಭಾರವಾಗಿ, ಎಲ್ಲರಿಗೂ ಬೇಡವಾಗಿ ಜೀವನ ಸಾಗಿಸುತ್ತಾರೆ. ಹೀಗೆ ಪರಸ್ಪರರಲ್ಲಿ ವಿರೋಧವುಂಟಾದಾಗ ಯಾರಿಗೆ ಲಾಭವಾಗುತ್ತದೆ? ಯಾರಿಗೆ ಹಿತವಾಗುತ್ತದೆ? ಹುಡುಗರು ಹಾಳಾಗುತ್ತಾರೆ; ಹಿರಿಯರೂ ಹಾನಿಗೊಳಗಾಗುತ್ತಾರೆ. ಹೀಗೆ ಹುಡುಗರು ಹಾಳಾಗುವುದಕ್ಕೆ ಹಿರಿಯರಿಗೆ ಮಕ್ಕಳ ಮಾನಸಶಾಸ್ತ್ರ ಗೊತ್ತಿರದಿರುವುದೇ ಕಾರಣ.

ಮೇಲೆ ಹೇಳಿದಂತೆ ಮಕ್ಕಳ ಸ್ವಾಭಾವಿಕವಾದ ಒಲವನ್ನು ಅರಿಯುವುದು ಶಿಕ್ಷಕನ ಆದ್ಯ ಕರ್ತವ್ಯ; ಆದಕ್ಕೆ ಮಕ್ಕಳ

ಮಾನಸಶಾಸ್ತ್ರದ ಅಭ್ಯಾಸ ಅತ್ಯವಶ್ಯವಾದುದು. ಮೊಂಟೆಸೋರಿ ಪದ್ಧತಿಯ ಮೇರೆಗೆ, ಕೆಲವು ವಿಶಿಷ್ಟವಾದ ಸಮಯದಲ್ಲೇ ಮಕ್ಕಳು ಕೆಲವು ವಿಷಯಗಳನ್ನು ಗ್ರಹಣ ಮಾಡುತ್ತವೆ. ಇದಕ್ಕೆ ಜ್ಞಾನೋದಯದ ಕಾಲವೆಂದೆನ್ನಬಹುದು. ಒಂದು ಸಂಗತಿಯನ್ನು ಮಾತ್ರ ನೆನಪಿನಲ್ಲಿಟ್ಟುಕೊಂಡಿರಬೇಕು. ಈ ಕಾಲ ಬಹುಕಾಲದವರೆಗೆ ಉಳಿಯದೆ, ಕೆಲವೇ ಕಾಲವಿದ್ದು ಮುಂದೆ ಒಂದು ವಿಷಯದ ಗ್ರಹಣಶಕ್ತಿ ಕಡಿಮೆಯಾಗುತ್ತ ಹೋಗಿ, ಕೊನೆಗೆ ಅದು ಸಂಪೂರ್ಣ ಕಡಿಮೆಯಾಗಿ, ಬೇರೊಂದು ವಿಷಯದ ಗ್ರಹಣಶಕ್ತಿ ಬರುತ್ತದೆ. ಇದನ್ನು ವಿಶದಪಡಿಸಲಿಕ್ಕೆ ಭಾಷಾಜ್ಞಾನದ ಉದಾಹರಣೆ ಸಮರ್ಪಕವಾಗಿದೆ. ಒಬ್ಬ ಗೃಹಸ್ಥ ತನ್ನ ಪ್ರಾಂತವೊಂದನ್ನು ಬಿಟ್ಟು ಬೇರೊಂದು ಪ್ರಾಂತದಲ್ಲಿ ಹೋಗಿ ನೆಲಸಿದ್ದಾನೆಂದು ತಿಳಿಯೋಣ. ಆತನ ಸಂಗಡ ಆತನ ಎರಡುವರೆ ಮೂರು ವರುಷದ ಮಗುವೊಂದು ಇದೆ. ಇವರಿಬ್ಬರಲ್ಲಿ ಯಾರು ಅತಿ ಸುಲಭವಾಗಿ ಹಾಗು ಅತ್ಯುತ್ತಮವಾಗಿ ಮತ್ತು ತೀವ್ರವಾಗಿ ಪರಭಾಷೆಯನ್ನು ಕಲಿಯುತ್ತಾರೆ? ಮಗುವಿನ ತಂದೆ ಅನೇಕ ಪುಸ್ತಕಗಳ ಹಾಗು ಶಿಕ್ಷಕರ ಸಹಾಯದಿಂದ ೪–೬ ತಿಂಗಳು ಕಷ್ಟಪಟ್ಟರೂ ಹೊಸ ಭಾಷೆ ಅವಗತವಾಗಲಾರದು. ಒಂದು ವೇಳೆ ಭಾಷೆ ಬಂದರೂ ಅಷ್ಟು ಚೆನ್ನಾಗಿ— ಆ ಪ್ರಾಂತದ ಜನರು ಆಡುವಷ್ಟು ಸ್ಪಷ್ಟವಾಗಿ—ಬಾರದು. ಅದೇ ಚಿಕ್ಕ ಮಗುವು, ಯಾರ ಸಹಾಯವೂ ಇಲ್ಲದೆ ಎರಡು ಮೂರು ತಿಂಗಳುಗಳಲ್ಲಿ, ಮಕ್ಕಳ ಕೂಡ ಬೆರೆತು ಆಡುವಾಗ, ಭಾಷೆಯನ್ನು ಕಲಿತುಕೊಂಡು ಬಿಡುತ್ತದೆ. ಮತ್ತು ಆ ಮಗು ಆಡುವ ಭಾಷೆ, ಆ ಪ್ರಾಂತದವರು ಆಡುವ ರೀತಿಯಿಂದ ಸ್ವಲ್ಪವೂ ಭಿನ್ನವಾಗಿರುವುದಿಲ್ಲ. ಯಾಕೆಂದರೆ ಮಗು ಆ ವಯಸ್ಸಿನಲ್ಲಿ ಭಾಷೆಗೆ ಸಂಬಂಧಪಟ್ಟ ವಿಷಯಗಳನ್ನು ಸೂಕ್ಷ್ಮವಾಗಿ ಗ್ರಹಣಮಾಡಿಕೊಳ್ಳುತ್ತಿರುತ್ತದೆ. ಮಗುವಿನ ತಂದೆ ಆ ಸೂಕ್ಷ್ಮ ಗ್ರಹಣ ಶಕ್ತಿಯನ್ನು ತನ್ನ ವಯಸ್ಸಿನ ಮೂಲಕ ಕಳೆದುಕೊಂಡಿರುತ್ತಾನೆ. ಮಗುವು ಕೂಡ ಕೆಲವು ಸಮಯದ ನಂತರ ಆ ಶಕ್ತಿಯನ್ನು ಕಳೆದುಕೊಂಡು, ಬೇರೊಂದು ವಿಷಯದ ಬಗ್ಗೆ ಆತುರವಾಗಿ ಕುಳಿತುಕೊಂಡಿರುತ್ತದೆ. ಹೀಗೆ ಮಗುವಿನ ಒಲವು ಯಾವ ಕಡೆಗಿದೆಯೆಂಬುದನ್ನು ಸೂಕ್ಷ್ಮವಾಗಿ ಅರಿತುಕೊಂಡು, ಅದಕ್ಕೆ ಸರಿಹೋಗುವಂತೆ ಶಿಕ್ಷಣ ಕೊಡಬೇಕು. ಎಂದರೆ ಮಕ್ಕಳು ನಿರಾಯಾಸವಾಗಿ ಹೊಸ ಹೊಸ ವಿಷಯಗಳನ್ನು ಬೇಗನೆ ಕಲಿತುಕೊಳ್ಳುತ್ತಾರೆ.

ಮಕ್ಕಳ ಶಿಕ್ಷಣದಲ್ಲಿ ಇನ್ನೊಂದು ಮಹತ್ವದ ಸಂಗತಿಯೆಂದರೆ ಮಕ್ಕಳ ಚಂಚಲವಾದ ಮನಸ್ಸನ್ನು ಸೆಳೆದುಕೊಳ್ಳುವುದು ಮತ್ತು ಬಹುಕಾಲದ ವರೆಗೆ ಒಂದೇ ವಿಷಯದ ಮೇಲಿರುವಂತೆ ಮಾಡುವುದು. ಇದು ಅತಿ ಕಠಿನವಾದ ವಿಷಯ. ಒಮ್ಮೆ ಮಕ್ಕಳ ಚಂಚಲ ಮನಸ್ಸನ್ನು ಒಲಿಸಿಕೊಳ್ಳುವ ವಿದ್ಯೆಯನ್ನು ಕರಗತಮಾಡಿಕೊಂಡರೆ, ಅವರ ಮುಕ್ಕಾಲು ಪಾಲು ಶಿಕ್ಷಣ ಮುಗಿದಂತಾಯಿತೆಂದು, ಪ್ರಸಿದ್ಧ ಮನಃಶಾಸ್ತ್ರ ಪಂಡಿತರು ಅಭಿಪ್ರಾಯಪಡುತ್ತಾರೆ. ಆದರೆ ಮೊಂಟೆಸೋರಿ" ಶಾಲೆಗಳಲ್ಲಿ ಇದು ಎಷ್ಟು ಕಷ್ಟವಾಗುವುದಿಲ್ಲ. ಅಲ್ಲಿಯ ಸಲಕರಣೆಗಳೇ ಹಾಗಿವೆ. ಮಕ್ಕಳು ಅವುಗಳೊಂದಿಗೆ ಆಟವಾಡುತ್ತಿರುವಾಗಲೇ ಅದೆಷ್ಟೋ ವಿದ್ಯೆಯನ್ನು ಕಲಿತುಬಿಡುತ್ತವೆ. ಉದಾ:— ಮಗು ಸಣ್ಣ ದೊಡ್ಡ ಚಚ್ಚೌಕಾದ ಮರದ ತುಂಡುಗಳಿಂದ ಗೋಪುರವನ್ನು ಸಿದ್ಧಗೊಳಿಸುವಾಗ, ಅದಕ್ಕೆಷ್ಟು ಶ್ರಮವಾಗುವುದಿಲ್ಲ. ಶಿಕ್ಷಕರು ಹಾಗು ಉಳಿದ ಮಕ್ಕಳು ಗೋಪುರಕಟ್ಟುವಾಗ, ಅದು ಚೆನ್ನಾಗಿ ನಿರೀಕ್ಷಿಸುತ್ತದೆ. ತಾನೂ ಹಾಗೆಯೆ ಕಟ್ಟಬೇಕೆಂದು ಇಷ್ಟಪಟ್ಟು ಕಟ್ಟಲು ಆರಂಭಮಾಡುತ್ತದೆ. ಒಮ್ಮೆ ತಪ್ಪಿದರೆ ಮತ್ತೊಮ್ಮೆ; ಆಗಲೂ ತಪ್ಪಿದರೆ ಮತ್ತೆ ಹಲವು ಬಾರಿ ಪ್ರಯತ್ನಪಡುತ್ತದೆ. ಎಷ್ಟೋ ಕಾಲ ಕಳೆದುಹೋದದ್ದು ಅದಕ್ಕೆ ಗೊತ್ತಾಗುವುದಿಲ್ಲ. ಹಾಗೆಯೆ ತನ್ನ ಕಾರ್ಯದಲ್ಲಿ ಅದು ನಿರತವಾಗಿರುತ್ತದೆ. ಹೀಗೆ ಈ ಗೋಪುರವನ್ನು ೭೨ ಸಲ ಕಟ್ಟಿ ಕೆಡಿಸಿದ ಉದಾಹರಣೆಯನ್ನು ಡಾ. ಮೊಂಟೆಸೋರಿಯವರು ಸ್ವತಃ ಕಂಡಿದ್ದಾರೆ. ೭೨ನೆಯ ಸಲ ಗೋಪುರ ಸರಿಯಾದಾಗ, ಮಗುವಿನ ಮುಖದ ಮೇಲೆ ಶ್ರಮದ ಗುರುತಿರದೆ ಸಂತೋಷದ ಎಳನಗೆ ಇದ್ದಿತು. ಅದಕ್ಕೆ ಹಿಡಿದ ಕಾರ್ಯವನ್ನು ಮಾಡಿಯೇ ಬಿಟ್ಟೆನಲ್ಲವೆಂಬ ಆನಂದ. ಹೀಗೆ ಸರಿಯಾಗಿ ಗೋಪುರ ಕಟ್ಟಿದಾಗ ಮಗು ಅದೆಷ್ಟು ವಿದ್ಯೆಯನ್ನು ಕಲಿತುಕೊಂಡಿತು! ಅದಕ್ಕೆ ಗೋಪುರ ಸರಿಯಾಗಿ ನಿಂತಾಗಿನ ಆಕಾರದ ಕಲ್ಪನೆ ಇರಬೇಕು; ವಿವಿಧ ಆಕಾರದ ಚಚ್ಚೌಕುಮರದ ತುಂಡುಗಳ ಸ್ಥಳವನ್ನು ಹುಡುಕಿ ತೆಗೆಯಬೇಕು. ಮತ್ತು ಕೆಲಸ ಕೆಟ್ಟುಹೋದಾಗ 'ಮತ್ತೆ ಪ್ರಾರಂಭಮಾಡಬೇಕು' ಎನ್ನುವ ತಾಳ್ಮೆ ಬೇಕು. ಹೀಗೆ ಅನೇಕ ಬಗೆಯ ಸಲಕರಣೆಗಳು ಶಾಲೆಯಲ್ಲಿರುವಾಗ, ಅದೆಷ್ಟು ವಿಷಯಗಳನ್ನು ಮಗು ಕಲಿಯುತ್ತದೆ!

ಮಗುವಿಗೆ ಆಟದಲ್ಲಿದ್ದಷ್ಟು ಆಸ್ಥೆ ಬೇರೊಂದರಲ್ಲಿರುವುದಿಲ್ಲ. ಆದಕಾರಣ ಡಾ. ಮೊಂಟೆಸೋರಿಯವರು ಎಲ್ಲ ವಿಷಯಗಳನ್ನು ಆಟದ ರೂಪವಾಗಿಯೇ ತಿಳಿಸಿಕೊಡಲು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಇತಿಹಾಸ, ಭೂಗೋಲ, ವಿಜ್ಞಾನ, ಭಾಷೆ, ಲೆಕ್ಕ ಎಲ್ಲವನ್ನೂ ಕೆಲವು ವಿಶಿಷ್ಟವಾದ ಸಲಕರಣೆಗಳ ಸಹಾಯದಿಂದ ಕಲಿಸಿಕೊಡುವರು. ಮತ್ತು ಮಕ್ಕಳು ಹೀಗೆ ಕಲಿಯುವಾಗ ತಾವು ಶಿಕ್ಷಣಪಡೆಯುತ್ತೇವೆಂಬುದು ಗೊತ್ತಿರುವುದಿಲ್ಲ. ಹೀಗೆ ಆಟವಾಡಿಸುತ್ತ ಮಕ್ಕಳಿಗೆ ಶಿಕ್ಷಣಕೊಡುವ 'ಮಾಯಾಜಾಲ'ವನ್ನು ಮೊಂಟೆಸೋರಿ ಶಾಲೆಗಳಲ್ಲಿ ಕಾಣಬಹುದು.

ಸಾದರ ಸ್ವೀಕಾರ

೧. ಋಗ್ವೇದ (ಪರಿಚಯಾತ್ಮಕ). ಬರೆದವರು: ಶ್ರೀಮಾನ್ ಎಂ. ಎ. ಕೃಷ್ಣಸ್ವಾಮಿ ಎಂ. ಎ. ಮೈಸೂರು. ವಿ. ವಿ. ನಿಲಯದ ಪ್ರಚಾರ ಪುಸ್ತಕ ಮಾಲೆಯ ೫೮ನೆಯ ಪುಸ್ತಕ. ಫೂ. ಕ್ಯಾ. ಅ. ೬೪ ಪುಟಗಳು. ಬೆಲೆ ೦-೨-೦.

೨. ಹಿಂದೂ ದೇಶದ ಭೂಚರಿತ್ರೆ (ಭೂಗರ್ಭ ಪರಿಚಯ). ಬರೆದವರು: ಶ್ರೀಮಾನ್ ವೈ. ನಾಗಪ್ಪ ಎಂ. ಎಸ್‌ಸಿ.; ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ೧೫ನೆಯ ಗ್ರಂಥ. ಕ್ರೌ. ಅ. ೧೨+೨೭೪ ಪುಟಗಳು. ಬೆಲೆ ೦-೧೨-೦

೩. **ನಾಯಿಕೊಡೆ** (ಐದು ಲಲಿತ ಪ್ರಬಂಧಗಳ ಸಂಗ್ರಹ): ಲೇಖಕು: ಶ್ರೀ. ಸಿ. ಕೆ. ನಾಗರಾಜರಾವ್, ಬೆಂಗಳೂರು. ಬೆಂಗಳೂರಿನ ಮಯೂರ ಗ್ರಂಥಮಾಲೆಯ ೪ನೆಯ ಕುಸುಮ. ಸಿಕ್ಕುವ ಸ್ಥಳ ಸತ್ಯಶೋಧನ ಪುಸ್ತಕ ಭಾಂಡಾರ, ಕೋಟೆ, ಬೆಂಗಳೂರು ನಗರ. ಕ್ರೌ. ಅ. ೭೨ ಪುಟ.

ಇವರಲ್ಲಿ ‘ಮಹಾ ಉದಾರಿ’ ‘ಪಬ್ಲಿಕ್ ಪೀಸ್’ ‘ರಸಿಕ ಶಿಖಾಮಣಿ’ ‘ಅಂತೂ ಬಂತು’ ‘ಬೇರಿರೋಗ’ ಎಂಬ ಐದು ಲಲಿತ ಪ್ರಬಂಧಗಳಿವೆ. ಎಲ್ಲವುಗಳಲ್ಲಿಯೂ ಮುಗುಳು-ನಗೆಯುಕ್ಕರಿಸುವ ಬೇರೆ ಬೇರೆ ಸ್ವಭಾವ ಚಿತ್ರಗಳುಂಟು. ಹೇಳಿದ ರೀತಿಯಲ್ಲಿಯೂ ಒಂದು ಹೊಸತನವುಂಟು. ಈಗಾಗಲೆ ದಿವಂಗತ ಶರಚ್ಚಂದ್ರ ಚಟ್ಟೋಪಾಧ್ಯಾಯರ ಕೆಲವು ಕಾದಂಬರಿಗಳನ್ನು ಅನುವಾದಿಸಿ ಕೊಟ್ಟು, ಲೇಖಕರು ಕನ್ನಡಿಗರಿಗೆ ಪರಿಚಯದವರಾಗಿಯೆ ಇದ್ದಾರೆ. ಇದೀಗ ಅವರ ಸ್ವತಂತ್ರ ಕೃತಿ. ಎಲ್ಲರೂ ಓದಿ ನೋಡಬೇಕು.

೪. ತೊದಲ್ನುಡಿ (ಕವಿತೆಗಳ ಸಂಗ್ರಹ). ಉತ್ತರ ಕನ್ನಡ ಜಿಲ್ಲೆಯ ಹೊಸ ಕವಿಗಳಾದ ‘ಪರ್ಣಕುಟಿ’ಯ ಎ. ಜಿ. ಅವರು ಬರೆದುದು. ಕುಮಟೆಯ ರಾಮಕೃಷ್ಣ ಮುದ್ರಣಾಲಯದಲ್ಲಿ ಅಚ್ಚಾಗಿದೆ. ಫೂ. ಕ್ಯಾ. ಅ. ೧೪ ಪುಟ. ಬೆಲೆ ೦-೨-೦.

‘ತಾಯಸೇವೆ’ ಎಂಬ ಕವನದಲ್ಲಿಯ ಕಾವ್ಯಕ್ಕಿಂತ ಕೂಳು ಮೊದಲು ಬೇಕಾಗುವುದೆಂಬುದನ್ನು ಸಾಧಿಸಿದ ರೀತಿ ಚೆನ್ನಾಗಿದೆ. ‘ಸೂರ್ಯಾಸ್ತ’ ಕವನದಲ್ಲಿಯ ಚಿತ್ರದ ಬಣ್ಣನೆ ಬಹು ರಮಣೀಯವಾಗಿದೆ. ‘ಕೆಂಬಣ್ಣಗಳ ಕೂಟ’ ಎಂಬ ಕವನ ಶ್ರೀ. ಚಟ್ಟೋಪಾಧ್ಯಾಯರ ಕವಿತೆಯೊಂದರ ಅನುವಾದ. ‘ಹುಚ್ಚ’ ಎಂಬುದು ರತ್ನನ ಪದಗಳ ಅನುಕರಣವಾದರೂ ಕವನದ ವಸ್ತುವಿನಲ್ಲಿ ಹೊಸತನವಿದೆ. ‘ನೌಕೆ’ ಎಂಬ ಕವನವೂ ಸರಸಕಲ್ಪನೆಯಿಂದ ಕೂಡಿದೆ. ಮುದ್ರಣದ ವಿಷಯಕ್ಕೆ ತೋರಿಸಿದ ಅಲಕ್ಷ್ಯವು ಇದರಲ್ಲಿಯ ಕವನಗಳಲ್ಲಿ ಇದ್ದ ಗುಣಗಳನ್ನು ಮರೆಯಿಸಿಬಿಡುವಷ್ಟು ಸಶಕ್ತವಾಗಿದೆ. ಮೈ ಮೇಲಿನ ಉಡಿಗೆ-ತೊಡಿಗೆಗಳನ್ನು ನೋಡಿ ಮುಂದಕ್ಕೆ ಕರೆಯುವ ಮಹನೀಯರೇ ಲೋಕದಲ್ಲಿ ಹೆಚ್ಚಾಗಿದ್ದಾರೆಂಬುದನ್ನು ಮರೆತು ನಡೆಯಲಾಗದು.

೫. ಚಾತುರ್ಮಾಸ ಮಹಾತ್ಮ್ಯೆಯ ವರ್ಣನೆ: ಬರೆದವರು ‘ಕಾವ್ಯರಸಿಕ ಜಿನದತ್ತತನಯ’ ಹುಬ್ಬಳ್ಳಿ. ಪ್ರಕಾಶಕರು: ಜಿನವಾಣಿ ಪ್ರಸಾರಕ ದಿಗಂಬರ ಜೈನ-ಶಾಸನಮಾಲಾ, ಮಾಲಗಾಂವ, ಸಂಸ್ಥಾನ ಮಿರಜಿ. ಕ್ರೌ. ಅ. ೬೮ ಪುಟಗಳು. ಸದುಪಯೋಗವೇ ಬೆಲೆ.

‘ಪರಮಪೂಜ್ಯ ಶ್ರೀಸ್ಯಾದ್ವಾದ ಕೇಸರಿ, ಸ್ವಸ್ತಿಶ್ರೀ ಪಾಯಸಾಗರ ನಿರ್ಗ್ರಂಥಮುನಿ ಮಹಾರಾಜರವರು ಹುಬ್ಬಳಿಗೆ ದಯಮಾಡಿಸಿ ಚಾತುರ್ಮಾಸವನ್ನು ಕಳೆದ ಸಂಗತಿಯನ್ನು ಲೇಖಕರು ಪದ್ಯದಲ್ಲಿ ವರ್ಣಿಸಿ ಹೇಳಿದ್ದಾರೆ. ೯೦ ಸಂಧಿಗಳಿಂದ ಕೂಡಿದ ಈ ಗ್ರಂಥವು, ೧-೩ ಸಂಧಿಗಳನ್ನು ಬಿಟ್ಟರೆ ನಿಕ್ಕಿದ್ದೆಲ್ಲ ಸಾಂಗತ್ಯ ವೃತ್ತದಲ್ಲಿದೆ. ವೃತ್ತಕ್ಕೆ ಅನುಗುಣವಾದ ತಿಳಿಗನ್ನಡ ಭಾಷೆಯಿದೆ. ಭಾವುಕರು ಓದಬಹುದಾಗಿದೆ.

೬. ಚಿತ್ರ (ಮೂರು ಕತೆಗಳು). ಮೂಲ ಬಂಗಾಲಿ ಲೇಖಕರು ದಿವಂಗತ ಶ್ರೀ. ಶರಚ್ಚಂದ್ರ ಚಟೋಪಾಧ್ಯಾಯರು. ಅನುವಾದಕರು ಶ್ರೀ. ‘ಮಲ್ಲಾರಿ’ ಅವರು. ಪ್ರಕಾಶಕರು ಶ್ರೀ. ಮೇವುಂಡಿ ಮಲ್ಲಾರಿ, ಶುಕ್ರವಾರಪೇಟೆ, ಧಾರವಾಡ. ಕ್ರೌ. ಅ. ೭೬ ಪುಟಗಳು; ಬೆಲೆ ೦-೧೦-೦.

೭. **ಬೆಳಕಿನ ಕತ್ತಲೆ** (ಕತೆಗಳ ಸೂಡು) ಬರೆದವರು ‘ಮಲ್ಲಾರಿ’. ಪ್ರಕಾಶಕರು ಶ್ರೀ. ಮೇವುಂಡಿ ಮಲ್ಲಾರಿ, ಶುಕ್ರವಾರ-ಪೇಟೆ, ಧಾರವಾಡ. ಕ್ರೌ. ಅ. ೧೦೮ ಪುಟ-ಗಳು. ಬೆಲೆ ೦-೧೨-೦.

೮. **ತಾರಾಮಂಡಲ** (ಕವಿ ರವೀಂದ್ರರ ಕೆಲವು ಕೃತಿಗಳ ಅನುವಾದ ಸಂಗ್ರಹ). ಅನುವಾದಕರು ಶ್ರೀಮಾನ್ ಪದ್ಮರಾಜ ಹುನಗುಂದ, ಮ್ಯುನಿಸಿಪಲ್ ಚೀಫ್ ಆಫೀಸರ್ ವಿಜಾಪುರ. ಲೇಖಕರೇ ವಿಜಾಪುರದಲ್ಲಿಯ ತಮ್ಮ ‘ಶಾಂತಿನಿಕೇತನ’ದಲ್ಲಿ ಪ್ರಕಟಿಸಿದ್ದಾರೆ. ಕ್ರೌ. ಅ. ೧೬+೧೦೮ ಪುಟ. ಬೆಲೆ ಉತ್ತಮ ಪ್ರತಿಗೆ ೧-೧೦-೦; ಸಾದಾ ಪ್ರತಿಗೆ ೧-೨-೦.

೯. **ವೀರವಾಣಿ** (ಮಾಸಪತ್ರಿಕೆ) ಸೊಲ್ಲಾಪುರದಲ್ಲಿ ಐದು ವರ್ಷಗಳಿಂದಲೂ ಪ್ರಕಟವಾಗುತ್ತಲಿದೆ. ಸಂಪಾದಕರು ಶ್ರೀ. ಸ. ಭೂ. ಪಂ. ಲೋಕನಾಥಶಾಸ್ತ್ರಿಗಳು, ಮೂಡುಬಿದರೆ; ಶ್ರೀ. ವಿ. ಭೂ. ಪಂ. ಕೆ. ಭುಜಬಲಶಾಸ್ತ್ರಿಗಳು, ಆರಾ; ಶ್ರೀ. ಪಂ. ಧರಣೇಂದ್ರ ಕುಮಾರ ಶಾಸ್ತ್ರಿಗಳು, ಮುಂಬಯಿ. ಪ್ರಕಾಶಕರು ಶ್ರೀ. ವಿ. ಪಿ. ಶಾಸ್ತ್ರಿ, ಒಡೆಯರು ಕಲ್ಯಾಣ ಪಾವರ್ ಪ್ರಿಂಟಿಂಗ್ ಪ್ರೆಸ್, ಸೊಲ್ಲಾಪುರ. ಡೆ. ಅ. ೨೦ ಪುಟಗಳು.

ನಾಡಗುಡಿಯು ನಮನವೆ ಮಾನ! ಅದಕಾಗಿ ಮುಡಿಪು ನಮ್ಮಯ ಪ್ರಾಣ!

ಕನ್ನಡ ಸೈನಿಕ

“ ಸೊಕ್ಕಿದ ಹಗೆಗಳ ಬೊಗ್ಗಿಸಿ ಮೆರೆಯುವ ಸೋಲರಿಯದ ಕರಿನಾಡಗುಡಿ ! ”

ಸಂಪುಟ ೧ || ಬೇಕಾದಾಗ ಹೊರಡುವ ಪತ್ರಿಕೆ || ಸಂಚಿಕೆ ೪

ಕ. ಸೈನಿಕನ ಸಮಾಚಾರ

ಹಿತಚಿಂತಕರು ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ‘ ಬೇಕಾದಾಗ ಹೊರಡುವ ಪತ್ರಿಕೆ ’ ಎಂದು ಬರೆದರೂ ತಿಂಗಳಿಗೊಮ್ಮೆಯೆ ಬರುತ್ತಿದೆಯಲ್ಲ!—ಎಂಬುದೊಂದು ಪ್ರಶ್ನೆ. ಅಹುದು, ಇದಕ್ಕೆಲ್ಲ ಕಾರಣ ಪ್ರಪಂಚದ ಮಹಾಯುದ್ಧ. ಕಾಗದದ ಕೊರತೆ. ಆದರೂ ನಾವು ಆಶ್ವಾಸನ ಕೊಡುತ್ತೇವೆ: ಬೇಗನೆ ‘ ಕನ್ನಡ ಸೈನಿಕ ’ ನು ವಾರಕ್ಕೊಮ್ಮೆಯಾದರೂ ಕಹಳೆಯನ್ನೂದುವ ಸಿದ್ಧತೆಯಲ್ಲಿದ್ದಾನೆ. ಹೆಚ್ಚು ಕಾತರರಾಗಬೇಡಿರಿ; ಸೈನಿಕನ ಹೆಜ್ಜೆ ಚಿಕ್ಕವಿದ್ದರೂ ಗಟ್ಟಿಯಾಗಿವೆ. ಮುಂದಕ್ಕೆ ನುಗ್ಗುವ ಹಂಚಿಕೆಗಾಗಿ ಹೊಂಚುಹಾಕುತ್ತಿದ್ದಾನೆ. ಸ್ವಲ್ಪ ತಾಳ್ಮೆಬೇಕು. ಹಿಂದೆ ತಡೆದಷ್ಟು ದಿನ ಮುಂದೆ ತಡೆಯಬೇಕಿಲ್ಲ. ಬೇಗನೆ ‘ ವಾರಾವತಾರ ’ ವಾಗುವುದು. ಸೈನಿಕನ ಕೂಗು ವಾರಕ್ಕೊಮ್ಮೆಯಾದರೂ ಕೇಳುವುದು. ಕೇಳಿರಿ—ಮುಂದೆ ನಡೆಯಿರಿ !

ಮತ್ತೆ ಬೆಳಗಾಂವಿ

ಸದ್ಯಕ್ಕೆ ಬೆಳಗಾಂವಿ ಜಿಲ್ಲೆಯು ನಮ್ಮ ಕಾರ್ಯಕ್ಷೇತ್ರವಾಗಿದೆ. ಮರಾಟಿಗರ ಮುನ್ನಡೆಯನ್ನು ತಡೆದು ನಮ್ಮ ಪ್ರಭಾವವನ್ನು ಸ್ಥಾಪಿಸುವುದೆ ಮುಖ್ಯ ಕಾರ್ಯ. ಮರಾಟಿಗರಾದರೂ ಇದನ್ನು ಅರಿತು ದಿನದಿನಕ್ಕೆ ತಮ್ಮ ಅಡಿಯನ್ನು ಮುಂದೂಡುತ್ತಿದ್ದಾರೆ. ಇದೇ ಜೂನ್ ತಿಂಗಳಲ್ಲಿ, ಬೆಳಗಾಂವಿಯಲ್ಲಿ ಮರಾಟಿ ಶಿಕ್ಷಕರ ಟ್ರೇನಿಂಗ್ ಕಾಲೇಜು ಒಂದು ಸ್ಥಾಪನೆಯಾಗುವುದಿದೆ. ವಿದ್ಯೆಯ ಪ್ರಸಾರದ ದೃಷ್ಟಿಯಿಂದ ಭಾರತದಲ್ಲಿ ಎಷ್ಟು ಶಿಕ್ಷಣಸಂಸ್ಥೆಗಳು ಬೆಳೆಯುವುವೊ ಅಷ್ಟು ಒಳ್ಳೆಯದೆ. ಆದರೆ ಬೆಳಗಾಂವಿಯಲ್ಲಿ ಮರಾಟಿ ಟ್ರೇನಿಂಗ್ ಕಾಲೇಜು ಆಗುವುದೆಂದರೆ ಕನ್ನಡಿಗರ ಕೊರಳಿಗೊಂದು ಭಾರವಾದ ಗುದ್ದು. ಇಂತಹ ಬೇರೆ ಬೇರೆ ಕಾರಣಗಳಿಂದ ಪರಪ್ರಾಂತೀಯರು ನಮ್ಮಲ್ಲಿ ನೆಲಸಿ, ಈ ನೆಲವೆ ತಮ್ಮದೆಂದು ಸಾರುವ ಚಾತುರ್ಯ—ನಮ್ಮ ಔದಾರ್ಯದ ಮೂಲಕ—ಉದಾಸೀನತೆಯ ಮೂಲಕ—ಇಡೀ ಭಾರತದಲ್ಲಿ ಕರ್ನಾಟಕದಲ್ಲಿಯೆ ಮಾತ್ರ ಸಾಧಿಸಿದೆ. ಸೋಗಿನ ರಾಷ್ಟ್ರೀಯ ವೃತ್ತಿಯ ಪಿಡುಗು ನಮ್ಮ ಪ್ರಾಂತದಲ್ಲಿದ್ದಷ್ಟು ಭಾರತದ ಬೇರಾವ ಪ್ರಾಂತದಲ್ಲಿಯೂ ಇದ್ದಂತೆ ಇಲ್ಲ. ಮಿಕ್ಕವರಿಗೆಲ್ಲರಿಗೆ ತಂತಮ್ಮ ಪ್ರಾಂತ ಮುಖ್ಯ— ಅದರ ಮೂಲಕ ಭಾರತ ದೇಶ.

ಬೆಳಗಾಂವಿ ಜಿಲ್ಲೆಯನ್ನು ಈಗಾಗಲೆ ‘ ಅರ್ಧ ಮರಾಟಿ-ಅರ್ಧ ಕನ್ನಡ ’ ಎಂದು ಹೇಳುವ ಕನ್ನಡ ಜನರೇ ಇದ್ದಾರೆ. ಅವರಿಗೆ ಇನ್ನೂ ಮರಾಟಿಯ ಮೋಹ ಬಿಟ್ಟಿಲ್ಲ. ಅವರ ಎದುರಿಗೆ ಇನ್ನೂ ತಿಲಕ, ಗೋಖಲೆ, ಶಿವಾಜಿ ಇವರೆ ಕಾಣುತ್ತಾರೆ. ಕರ್ನಾಟಕದ ಗತವೈಭವದ ಅರಿವು ಅವರಿಗಿಲ್ಲ. ಅಲ್ಲದೆ ಇತ್ತೀಚಿನ ಕನ್ನಡಿಗರ ಮುನ್ನಡೆಯ ಮಾತನ್ನೂ ಅವರು ತಿಳಿದಿಲ್ಲ. ಅದಕ್ಕೆಂದೆ ಕನ್ನಡಿಗರಾದ ನಮ್ಮವರಿಂದಲೆ ಈ ಹೊಡೆತ. ಇದಕ್ಕೆ ಸರಿಯಾದ ಉದಾಹರಣೆ, ಬೆಳಗಾಂವಿಯಲ್ಲಿ ಚೆನ್ನಾಗಿ ಸಿಕ್ಕುತ್ತದೆ. ಈ ಸಲದ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿ ಆರಿಸಿ ಬಂದವರು ಶ್ರೀ. ಪೋತದಾರ ಭೀಮರಾಯರು. ಇವರ ಹೆಸರು, ಕುಲ, ಗೋತ್ರ—ಎಲ್ಲವೂ ಕನ್ನಡವೆ. ಆದರೆ ಇವರ ಕೃತಿ-ಮಾತು ಎಲ್ಲವೂ ಮರಾಟಿ ಮೋಹವನ್ನು ಲೇಪಿಸಿಕೊಂಡುವಾಗಿವೆ. ಹಿಂದೆ ಕೆಲ-ಕಾಲ ಇವರೇ ಅಧ್ಯಕ್ಷರಾಗಿದ್ದು, ಕನ್ನಡದ ಹಿತವನ್ನು ಎಷ್ಟು ಕಾಯ್ದಿರುವರೆಂಬುದು ಎಲ್ಲರಿಗೂ ಗೊತ್ತಿದ್ದ ಮಾತೆ. ಬೆಳಗಾಂವಿಯಲ್ಲಿಯ ಬೀದಿಯ ಹೆಸರಿನ ಹಲಗೆಗಳು ಮರಾಟಿಯಲ್ಲಿಯೆ ಇದ್ದುದು ಇಂತಹ ಅಧ್ಯಕ್ಷರಿಗೆ ಲಾಂಛನಾಸ್ಪದವೆಂದು ವಿಮಾದದಿಂದ ಹೇಳಬೇಕಾಗುತ್ತದೆ. ಅದೂ ಹೋಗಲಿ, ಮರಾಟಿಯಲ್ಲಿ ಬರೆಯಿಸಿದರೂ ಕನ್ನಡನಾಡಿನ ಪೂಜ್ಯವ್ಯಕ್ತಿಗಳ ಹೆಸರನ್ನು ತಪ್ಪು ಬರೆಯಿಸುವ ಹೊಣೆಯಾರದು ? ಪೂಜ್ಯ ಬಸವಣ್ಣನವರ ಹೆಸರು

ಕನ್ನಡನಾಡು ಒಂದಾಗಿ ಮುಂದೆ ಬರಬೇಕೆಂಬುದೆ ಕನ್ನಡ ಸೈನಿಕನ ಹಂಬಲು!

ಬೆಳಗಾಂವಿಯಲ್ಲಿ 'ಬಸವಾಣ' ಎಂದಾಗಿದೆ. ಇದೊಂದು ಬಗೆಯ ಅಪಮಾನವಲ್ಲವೆ?

ಈ ಸಲದ ಚುನಾವಣೆಯಲ್ಲಿ ಮೊದಲಿಗರಾಗಿ ಬರಲಿಲ್ಲವೆಂದು ಶ್ರೀ. ಪೋತದಾರರಿಗೆ ವಿಷಾದವಾಗಿದೆಯಂತೆ. ಆರಿಸಿ ಬಂದಿದ್ದಾರೆ, ಇದೇ ಅವರ ಪುಣ್ಯವೆಂದು ಹೇಳಬಹುದು. ಕನ್ನಡಿಗರು ಎಚ್ಚತ್ತುದರ ಫಲವನ್ನು ಇವರ ಸ್ಥಾನ ಅಲುಗಾಡುತ್ತಿರುವುದರಲ್ಲಿ ಕಾಣಬಹುದು. ಇನ್ನಾದರೂ ಶ್ರೀಯುತರಿಗೆ ಕನ್ನಡನಾಡಿನ ಸೇವೆಯ ಕಡೆಗೆ ಮನಸ್ಸು ಹರಿಯಲಿ, ಮುಪ್ಪಿನಲ್ಲಿ ಮಾನಪಾತ್ರರಾಗಿ ಬದುಕಲಿ—ಎಂದು ಕನ್ನಡ ನಾಡಿನ ಹೆಸರಿನಿಂದ ಹಾರೈಸುತ್ತೇವೆ.

ಕ. ವಿ. ವಿ. ಪರಿಷತ್ತು

ಬೆಳಗಾಂವಿಯಲ್ಲಿ ಈ ಪರಿಷತ್ತು ಕೂಡುವುದಿದೆ. ಈಗಿನ ಈ ಪರಿಷತ್ತಿನ ನಿಯೋಜಕರಲ್ಲಿ ಚುನಾವಣೆಯ ಆಸೆಯಿದ್ದವರೂ ಇರಬಹುದಾಗಿದೆ. ಅದೇನು ತಪ್ಪಲ್ಲ, ಕೆಡುಕಲ್ಲ. ಆದರೆ ನಮಗೆ ಹೆದರಿಕೆಯೆಂದರೆ, ಪರಿಷತ್ತನ್ನು ಚುನಾವಣೆಯ ಒಂದು ಪ್ರಚಾರಘಟಕವನ್ನಾಗಿಯಷ್ಟೇ ಮಾಡಿಕೊಳ್ಳಬಾರದೆಂದು. ಹಿಂದೆ ಕರ್ನಾಟಕ ಏಕೀಕರಣ ಪರಿಷತ್ತಿನನಂತರದ ಔದಾಸೀನ್ಯವು ನಮಗೆ ಉದಾಹರಣೆಯಾಗಿದೆ. ಮುಂದಾಳುಗಳು ತಮ್ಮ ಮುಂದಾಳುತನದ ಅವಧಿಯಲ್ಲಿ ಸದಾ ನಾಡ ಹಿತಚಿಂತನ ಮಾಡುತ್ತಿರುವುದೇ ಕರ್ತವ್ಯವೆಂದು ನಮ್ಮ—ಗಟ್ಟಿಯಾದ—ಸೂಚನೆ. ಆದಕ್ಕಿಂದೇ ಪರಿಷತ್ತು ನೆರೆಯಿಸಿದನಂತರ—ಚುನಾವಣೆಯಾದ ಕೂಡಲೆ—ಕರ್ನಾಟಕವನ್ನು ಮರೆತು ಬಿಡುವ ಸಂಭವವಿದೆಯೆಂಬ ನಮ್ಮ ಹೆದರಿಕೆಯ ಮೂಲಕ, ನಿಯೋಜಕರಿಗೆ ಈ ಮಾತನ್ನು ಸೂಚಿಸಬಯಸುತ್ತೇವೆ. ಪರಿಷತ್ತಿನ ಧ್ಯೇಯ ಒಂದೇ; ಕರ್ನಾಟಕಕ್ಕೆ ವಿಶ್ವವಿದ್ಯಾಲಯವನ್ನು ಪಡೆಯುವುದು.

ಕನ್ನಡನಾಡಿನ ಸಂಘ-ಸಂಸ್ಥೆಗಳು

ಹಿಂದಿನ ತಲೆಮಾರಿನವರೆಲ್ಲರೂ ಪರಪ್ರಾಂತಗಳಿಗೆ ತಮ್ಮ ತಲೆ ಮಾರಿಕೊಂಡವರಿದ್ದಾರೆ. ಅವರಿಗೆ ಪರಭಾಷೆಯೆ ಪ್ರಾಣವಾಯು. ಅವರ ಪ್ರತಿಯೊಂದು ಕಾರ್ಯದಲ್ಲಿ ಕೆಲವಂಶ ಪರಪ್ರಾಂತದ ಭಾಷೆ-ಸಂಸ್ಕೃತಿಗಳ ಮಿಶ್ರಣ ಕಂಡುಬರುತ್ತಿದೆ. ಇಂತಹರು ಇಂದು ಅಧಿಕಾರದಲ್ಲಿದ್ದಾರೆ. ಅವರ ತಲೆಗೂದಲು ಬೆಳ್ಳಗಾಗಿವೆ. ಜನತೆಯಲ್ಲಿ ಕೆಲಕಾಲ ಮನ್ನಣೆಯಿತ್ತು. ಇಂತಹರು ಇಂದು ಕನ್ನಡನಾಡಿನ ಸಂಘ-ಸಂಸ್ಥೆಗಳ ತಲೆಯ ಮೇಲೆ ಕುಳಿತು ಮಣಿಸು ಅರೆಯುತ್ತಿರುವರು. 'ಕನ್ನಡ' 'ಕನ್ನಡ' ಎಂಬ ಕೂಗು ಇವರ ಕಿವಿಗೆ ಕೀಸರು. 'ಕನ್ನಡ' ಎಂದು ಕೂಗುವವರು ಇವರ ಕಣ್ಣಿಗೆ ಹುಣ್ಣು. ಇಂತಹ ಸಂದರ್ಭದಲ್ಲಿ ಈಗಿನ ತರುಣರು—ಕನ್ನಡನಾಡಿನ ಮುನ್ನಡೆಯೆ ತಮ್ಮ ಏಕಮೇವಾದ್ವಿತೀಯ ಧ್ಯೇಯವೆಂದು ತಿಳಿದ ತರುಣರು—ಕಾರ್ಯಮಾಡುವ ಹಂಬಲ ತೋರುತ್ತಿದ್ದಾರೆ. ಕಾರ್ಯಕ್ಕೆ ದೇಹಶಕ್ತಿ-ಬುದ್ಧಿಶಕ್ತಿಯಷ್ಟೆ ಸಾಲದು—ಅಧಿಕಾರಪದವೂ ಬೇಕು. ಆದರೆ ಸಂಘಸಂಸ್ಥೆಗಳ ಸಂಚಾಲಕತ್ವದಲ್ಲಿ ಕನ್ನಡೇತರ ಕಣ್ಣುಕಪ್ಪಡಿಗಳು ಕುಳಿತಿರುವಾಗ, ಕನ್ನಡದ ಕೋಕಿಲೆಗಳಿಗೆ ಸ್ಥಾನವೆಲ್ಲಿ? ಆದರೆ ಸ್ಥಾನ ಬದಲಾಗುತ್ತಿದೆ. 'ಕನ್ನಡ ಸೈನಿಕ'ರು ತ್ಯಾಗಬುದ್ಧಿಯಿಂದ ಹಿಂದೆ ಸರಿಯುತ್ತಿದ್ದಾರೆ. ಹಿಂದೆ ಸರಿದುದು ಮುಂದೆ ಬರಬೇಕೆಂಬ ಹಟದಿಂದಲೆ ಎಂಬುದು ಸ್ಪಷ್ಟವಿದೆ. ಕೆಚ್ಚೆದೆಯ ಕನ್ನಡಿಗರಿಗೆ ನಮ್ಮ ಸೂಚನೆಯೊಂದು: ಯಾವ ಕಾರಣದಿಂದಲೂ ಸಂಘ-ಸಂಸ್ಥೆಗಳ ಸಂಚಾಲಕತ್ವವನ್ನು ಪರಕೀಯರ ಕೈಯಲ್ಲಿ ಕೊಟ್ಟು ಕನ್ನಡನಾಡನ್ನು ಕಂಗೆಡಿಸಬೇಡಿರಿ! ಈಗಾಗಲೆ ನಮ್ಮ ಪ್ರಾಂತ ೫೦ ವರುಷ ಹಿಂದೆ ಬಿದ್ದಿದೆ. ಇಡಿನಾಡಿನಲ್ಲಿ ಹೇಳಿಕೊಳ್ಳುವ ಒಬ್ಬ ಮುಂದಾಳು ಕೂಡ ಇಲ್ಲ. ಯಾವ ದೃಷ್ಟಿಯಿಂದಲೂ ನಮ್ಮ ಪ್ರಾಂತ ಮುಂದೆ ಇಲ್ಲ. ಈ ಸ್ಥಿತಿಯನ್ನು ಮುಂದುವರಿಸಬೇಡಿರಿ!

ಸಾಹಿತ್ಯ ಸಮ್ಮೇಲನ

ಈ ವರುಷದ ಸಾ. ಸಮ್ಮೇಲನಕ್ಕೆ ಮೂರು ಊರುಗಳಿಂದ ಕರೆ ಬಂದಿದೆಯೆಂದು ತಿಳಿದಿದೆ. ಸಾಂಗಲಿ, ಸೊಲ್ಲಾಪುರ, ಶಿವಮೊಗ್ಗೆ. ಶಿವಮೊಗ್ಗೆಯ ಕರ್ನಾಟಕ ಸಂಘದವರ ಕಾರ್ಯದಿಂದ ಅಲ್ಲಿ ಕನ್ನಡದ ಮುನ್ನಡೆ ಚೆನ್ನಾಗಿದೆ. ಅಡಿಗಲ್ಲು ಭದ್ರವಾಗಿದೆ. ಅದಕ್ಕೆ ಸಮ್ಮೇಲನವನ್ನು, ಗಡಿನಾಡಾದ ಸಾಂಗಲಿ ಅಥವಾ ಸೊಲ್ಲಾಪುರದಲ್ಲಿ ನೆರವೇರಿಸುವಂತೆ ಪ್ರಯತ್ನ ಮಾಡಬೇಕೆಂದು ಪರಿಷತ್ತಿನವರಿಗೆ ಬಿನ್ನವಿಸಬಯಸುತ್ತೇವೆ.

ಒಂದು ಸೂಚನೆ

ಕನ್ನಡನಾಡಿನ ಹಿತಬಯಸುವವರು ಕನ್ನಡದ ಸಮಸ್ಯೆಗಳನ್ನು ತಿಳಿದಿರಬೇಕು. ಅದರ ಬಗ್ಗೆ ವಿಚಾರಿಸಬೇಕು. 'ಕನ್ನಡ ನುಡಿ'ಯಲ್ಲಿ ಅಚ್ಚಾಗುತ್ತಲಿರುವ 'ಕನ್ನಡದ ಸಮಸ್ಯೆಗಳು' ಎಂಬ ಲೇಖನಮಾಲೆಯನ್ನು ಅಗತ್ಯವಾಗಿ ಓದಲು, ಸಿದ್ಧತೆಯಲ್ಲಿದ್ದ ಕನ್ನಡ ಸೈನಿಕರಿಗೆ ನಮ್ಮ ಸೂಚನೆ.

'ಕನ್ನಡನಾಡನ್ನು ಕಟ್ಟುವುದರೊಳಗಾಗಿ ಕನ್ನಡಕುಲ ನೂರು ಬಣವಾದರೆ ಏನನ್ನು ಕಟ್ಟಬೇಕು?'

ಸಿ. ಶ್ರೀ.

ಪುಸ್ತಕ ವಿಮರ್ಶೆ

೯೧. ಪುರಾಣನಾಮ ಚೂಡಾಮಣಿ

ಲೇಖಕರು : ಶ್ರೀ. ಬೆಸಗರ‍ಹಳ್ಳಿ ರಾಮಣ್ಣ (?)

ಲೇಖಕರು : ಶ್ರೀ. ಬೆನಗಲ್ ರಾಮರಾವ್, ಎಂ. ಎ., ಎಲ್‌ಎಲ್. ಬಿ. ಮತ್ತು ಶ್ರೀ. ಸಾಸ್ಯಂ ಸುಂದರಶಾಸ್ತ್ರಿ, ವಿದ್ವಾನ್ ಅವರು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ೧೫ನೆಯ ಗ್ರಂಥವಿದು. ಆ ಮಾಲೆಯಲ್ಲಿ ಪ್ರಕಟವಾಗಿರುವ ಇದುವರೆಗಿನ ಗ್ರಂಥಗಳಲ್ಲೆಲ್ಲ ಇದೇ ದೊಡ್ಡದಾಗಿದೆ; ಎಂದರೆ ಡೆಮಿ ಅಷ್ಟಪತ್ರದ ೬೨೬ ಪುಟಗಳನ್ನು ಒಳಗೊಂಡುದಾಗಿದೆ. ವ್ಯೆಯಕ್ತಿಕವಾಗಿ ಯಾರಾದರೂ ಇದನ್ನು ಪ್ರಕಟಿಸಿದ್ದಲ್ಲಿ ಐದು ರೂಪಾಯಿಗಳಿಗಿಂತ ಬೆಲೆಯನ್ನು ಕಡಿಮೆಯಾಗಿ ಇರಿಸುವುದಕ್ಕೆ ಸಾಧ್ಯವೆ ಇರಲಿಲ್ಲ. ಆದರೆ ಜ್ಞಾನಪ್ರಸಾರವನ್ನೆ ಮುಖ್ಯ ಗುರಿಯನ್ನಾಗಿರಿಸಿಕೊಂಡು ಗ್ರಂಥಪ್ರಕಟನೆಯ ಕಾರ್ಯವನ್ನಾರಂಭಿಸಿದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹಣಗಳಿಸುವ ಆಶೆಯಿಲ್ಲ. ಎಂತಲೆ ಇಷ್ಟೊಂದು ಬೃಹದಾಕಾರದ ಗ್ರಂಥವನ್ನೂ ಬರಿ ೩ ರೂಪಾಯಿ ೧೨ ಆಣೆ ಬೆಲೆಯಲ್ಲಿ ಒದಗಿಸಿಕೊಟ್ಟಿದೆ.

ಗ್ರಂಥಕ್ಕಿರುವ ಹೆಸರಿನಿಂದಲೆ ಅನೇಕರು ಇದರಲ್ಲಿಯ ವಿಷಯವೇನಿರಬಹುದೆಂಬುದನ್ನು ತಿಳಿದಿರಬಹುದು. ಭಾರತೀಯ ವೈದಿಕಪುರಾಣಗಳಲ್ಲಿರುವ ನಾಮಪದಗಳ ಸಂಕ್ಷಿಪ್ತ ಚರಿತ್ರಕೋಶವಿದಾಗಿದೆ. ಪುರಾಣಗಳೆಂದರೆ ಭಾರತೀಯರ ಕಾಲಕಾಲದ ಇತಿಹಾಸ-ಸಂಸ್ಕೃತಿಗಳನ್ನು ಒಡಲೊಳಗೆ ಅಡಗಿಸಿಟ್ಟುಕೊಂಡು ಸಂರಕ್ಷಿಸಿರುವ ಭಾಂಡಾರಗಳಾಗಿವೆ. ಭಾರತೀಯನೆನಿಸಿಕೊಳ್ಳುವ ಪ್ರತಿಯೊಬ್ಬನಿಗೂ ಪುರಾಣಗಳ ಪರಿಚಯವಿರಬೇಕಾದುದು ಅತ್ಯಂತ ಅವಶ್ಯ. ಆದರೆ ಇಂದು ಅವೆಲ್ಲ ಪುರಾಣಗಳು—ಸರಿಯಾದ ಉಪಯೋಗವಿಲ್ಲದ ಮೂಲಕ— ಪುರಾಣದ ಪುರೋಹಿತರ ಮತ್ತು ಸನಾತನ ಸಂಪ್ರದಾಯದ ಮುದುಕರ— ವಿಧವೆಯರ— ಸೊತ್ತುಗಳಾಗಿ ಉಳಿತಿವೆ. ಮಿಕ್ಕವರಿಗೆ ಪುರಾಣದ ಆವಶ್ಯಕತೆಯೇ ಕಾಣುತ್ತಿಲ್ಲ. ಅನುಷ್ಠಾನಕ್ಕಲ್ಲವಾದರೂ ಕೇವಲ ಅಭ್ಯಾಸಕ್ಕಾಗಿಯಾದರೂ ನಾವು ಪುರಾಣಗಳ ಪರಿಚಯ ಮಾಡಿಕೊಳ್ಳಬೇಕಾಗಿದೆ. ನಮ್ಮ ಹೊಸಬಾಳಿನ ಕಟ್ಟಡವನ್ನು ಈ ಹಳಬಾಳಿನ ನೆಲಗಟ್ಟಿನ ಮೇಲೆಯೆ ನಿಲ್ಲಿಸಬೇಕಾಗಿದೆ. ಆದರೆ ಇಂದು ಬಹುಜನರಿಗೆ ರಾಮನಿಗೆ ತಾಯಿಯಾರೆಂಬುದು ಗೊತ್ತಿಲ್ಲ, ಪಾಂಡವ-ಕೌರವರಲ್ಲಿ ಎಂತಹ ಸಂಬಂಧವಿದ್ದಿತೆಂಬುದರ ಕಲ್ಪನೆಯಿಲ್ಲ. 'ರಾಮಾಯಣ' 'ಮಹಾಭಾರತ'ಗಳಂತಹ ಮಹಾಪುರಾಣಗಳ ಹಣೆಯಬರೆಹವೆ ಹೀಗಾಗಿರುವಾಗ, ಮಿಕ್ಕ ಪುರಾಣಗಳ ವಿಷಯವನ್ನಂತೂ ಹೇಳುವುದೇ ಬೇಕಿಲ್ಲ. ಅವುಗಳ ಹೆಸರುಗಳನ್ನು ಕೂಡ ಕೇಳದವರೇ ಬಹುಜನರಿದ್ದಾರೆ ನಮ್ಮಲ್ಲಿ.

ಸ್ವಸ್ವರೂಪಜಾಗೃತಿಯ ಇಂದಿನ ಕಾಲದಲ್ಲಿ, ತಮ್ಮ ಪೂರ್ವಪರಂಪರೆಯನ್ನೆಲ್ಲ ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯೂ ಇಂದು ಜಾಗೃತವಾಗುತ್ತ ನಡೆದಿದೆ. ಆದರೆ ಪ್ರತಿಯೊಬ್ಬನೂ ಪ್ರತಿಯೊಂದು ಪುರಾಣಗ್ರಂಥವನ್ನೂ ಪೂರ್ಣವಾಗಿ ಓದಿ ತಿಳಿದುಕೊಳ್ಳುವುದೆಂದರೆ ಶಕ್ಯವೂ ಇಲ್ಲ; ಅವಶ್ಯವೂ ಅಲ್ಲ. ಜನಸಾಮಾನ್ಯರೆಲ್ಲ ಈ 'ಪುರಾಣನಾಮ ಚೂಡಾಮಣಿ'ಯನ್ನು ಹತ್ತಿರವಿರಿಸಿಕೊಂಡು ಓದುತ್ತಲಿದ್ದರೆ ನಮ್ಮ ಭಾರತೀಯ ಪುರಾಣಗಳ ಹೆಸರುಗಳು ಬಹ್ವಂಶದಿಂದ ಗೊತ್ತಾಗುವುವಲ್ಲದೆ, ಬೇರೆ ಬೇರೆ ಪುರಾಣಗಳಲ್ಲಿ ಬಳಕೆಗೊಂಡ ನಾಮಪದಗಳ ಪರಿಚಯವಾಗಿ ಆ ನಾಮಪದಕ್ಕೆ ಸಂಬಂಧಿಸಿದ ಪೌರಾಣಿಕ ಕಥೆಯೂ ಸ್ವಲ್ಪಮಟ್ಟಿಗೆ ಅವಗತವಾಗುವುದು.

"ಈ ಗ್ರಂಥವನ್ನು ರಚಿಸುವಲ್ಲಿ ಜನಸಾಮಾನ್ಯರಲ್ಲೆಲ್ಲ ಪ್ರಸಿದ್ಧವಾಗಿರುವ ರಾಮಾಯಣ, ಭಾರತ, ಭಾಗವತಗಳೊಳಗಣ ಕಥಾಭಾಗಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರವೇ ಅಲ್ಲದೆ, ದೇವೀಭಾಗವತ, ಮಾರ್ಕಂಡೇಯ ಪುರಾಣ, ಹರಿವಂಶ, ಲಿಂಗಪುರಾಣ, ಸ್ಕಾಂದಪುರಾಣ, ಅಧ್ಯಾತ್ಮರಾಮಾಯಣ, ತತ್ತ್ವಸಂಗ್ರಹರಾಮಾಯಣ ಮುಂತಾದ ಇನ್ನೂ ಕೆಲವು ಗ್ರಂಥಗಳಲ್ಲಿಯ ವಿಷಯಗಳನ್ನೂ ತಕ್ಕಮಟ್ಟಿಗೆ ಅಲ್ಲಲ್ಲಿ ಅವಕಾಶವಾಗಿ ಸಂಗ್ರಹಿಸಲಾಗಿದೆ. ಈ ಕಾರ್ಯವನ್ನು ಪೂರಯಿಸುವಲ್ಲಿ ಆ ಆ ಮೂಲ ಗ್ರಂಥಗಳನ್ನು ಧಾರಾಳವಾಗಿ ಪರಿಶೀಲಿಸಿರುವುದಷ್ಟೇ ಅಲ್ಲದೆ, ಆ ವಿಷಯಕವಾದ ಸಂಸ್ಕೃತ, ಇಂಗ್ಲಿಷ್, ಮರಾಠಿ, ಹಿಂದಿ, ತೆಲುಗು ಕೋಶಗಳನ್ನು ಕೂಡ ಯಥೋಚಿತವಾಗಿ ಉಪಯೋಗಿಸಿಕೊಂಡಿದ್ದೇವೆ" ಎಂಬುದಾಗಿ ಲೇಖಕರು ತಮ್ಮ ಅರಿಕೆಯಲ್ಲಿ ಹೇಳಿದ್ದಾರೆ.

ಭಾರತೀಯ ಪುರಾಣವಾಙ್ಮಯವು ಅನಂತಪಾರವಾಗಿದೆ. ಒಂದೇ ಎರಡೇ ವ್ಯಕ್ತಿಗಳು ಅದನ್ನೆಲ್ಲ ಓದಿ ಕಾಣುವುದು ಅಶಕ್ಯಸಂಗತಿ. ಆದುದರಿಂದ ಈ ಗ್ರಂಥದಲ್ಲಿರುವ ಕೊರತೆಗಳನ್ನೆ ಮುಂದೆಮಾಡಿ ಮೂದಲಿಸುವುದು ವಿಧಾಯಕ ವಿಮರ್ಶೆಯೆನಿಸದು. 'ಇಷ್ಟರಮಟ್ಟಿಗಾದರೂ ಪ್ರಯೋಜನಕಾರಿಯಾದ ಕಾರ್ಯವನ್ನು ಮಾಡಿ, ಪುರಾಣವಾಙ್ಮಯದ ಪ್ರಾಥಮಿಕ ಪರಿಚಯ ಮಾಡಿಕೊಳ್ಳಬಯಸುವವರಿಗೆ ಈ ಗ್ರಂಥಲೇಖನದ ಮೂಲಕ ಅನುಕೂಲತೆಯನ್ನು ಕಲ್ಪಿಸಿಕೊಟ್ಟಿದ್ದಾರಲ್ಲಾ' ಎಂದು ಲೇಖಕರಿಬ್ಬರನ್ನೂ ಮನಸಾರೆ ಅಭಿನಂದಿಸಬೇಕಾದೆ. ಇವರ ಕೃತಿಯ ಬೆಲೆಯನ್ನರಿತು, ಅದನ್ನು ಅಂದವಾಗಿ ಅಚ್ಚುಹಾಕಿಸಿ ಕನ್ನಡಿಗರ ಕೈಗೆ ಸಲ್ಲಿಸಿದ ಮೈಸೂರು ವಿಶ್ವವಿದ್ಯಾನಿಲಯದ ಉಪಕಾರವನ್ನೂ ಹೊಗಳಿ ಹಾಡುವುದು ನಮ್ಮ ಕರ್ತವ್ಯವಾಗಿದೆ. ಅಕ್ಷರಬಲ್ಲ ಕನ್ನಡಿಗರೆಲ್ಲರ ಮನೆಮನೆಯಲ್ಲೂ ಇರಬೇಕಾದ ಗ್ರಂಥವಿದು.

—ಟಿ. ಪಿ. ಎಸ್. ರಾವ್

ನಗೀಗೆ ನೇವಿದ್ಯ

ಮತದಾನದ ಕಾರಣ

" ನನಗ ನಿಮ್ಮ ಮತಗಳನ್ನ ಕೊಡದೆ, ಆ ವಕೀಲ ವೆಂಕಟರಾಯರಿಗೆ ಮತಕೊಟ್ಟು ಚುನಾವಣೆಯಲ್ಲಿ ಆರಿಸಿ ತಂದಿರಿ ; ಆ ವೆಂಕಟ ರಾಯರ ತಲೀಮ್ಯಾಲೇನು ಕೋಡು ಅವs ಅಂತ ತಿಳಿದೀರೇನು ? "

" ಇದೇನು ಮಾತರೀ ನಿಮ್ಮದು ಕೋನಪ್ಪ ಗೌಡರs? ಅವರ ತಲೀಮ್ಯಾಲ ಕೋಡಿಲ್ಲಾ ಅಂಬೂದು ಗೊತ್ತು ಅದ್ದರಿಂದ್ಲನೇ ಅವರನ್ನ ಆರಿಸಿ ತಂದಿವಿ ; ತಿಳೀತೇನು ? "

* * *

ತಿಳಿಗೇಡಿಗಳ ಆಯುಷ್ಯ

" ಅಲ್ರೀ ಗುಂಡೇರಾವ್, ತಿಳಿಗೇಡಿ ಜನರು ಸುಮಾರು ಎಷ್ಟು ವರ್ಷಗಳವರೆಗೆ ಬದುಕಿ ಇರತಾರೆ ? "

" ನನಗೇನೂ ಗೊತ್ತಿಲ್ಲೇನ್ರಿಪಾ ಆ ವಿಷಯ ! ಈಗ ತಮಗ ವಯಸ್ಸೆಷ್ಟು ಹೇಳ್ರಿ ನೋಡೋಣ ! "

" ಇರಬಹುದನ್ರಿ, ಸುಮಾರು ಐವತ್ತು–ಐವತ್ತೈದು ! "

" ಸರಿ ಸರಿ, ಗೊತ್ತಾದ್ಹಾಂಗ ಆಯಿತು ಬಿಡ್ರಿ! ಇಷ್ಟು ವಯಸ್ಸಿನವರೆಗೆ ಬದುಕಿರ ಬಹುದು ಅವರು !

* * *

ಅಪರಾಧಿಯ ಸಂರಕ್ಷಣೆ

ನ್ಯಾಯಾಧೀಶ :— ಇವರ ಮನೀ ಕೀಲೀ ಮುರಿದು ಒಳಗೆ ನುಗ್ಗಿದಿ ಹೌದಲ್ಲೊ?

ಅಪರಾಧಿ :— ನಾ ಯಾಕ್ರೀ ಕೀಲೀ ಮುರೀಲಿಕ್ಕೆ ಹೋಗಲಿ? ಬೇಕಾದಂಥಾ ಕೀಲಿ ಇದ್ದರೂ ತಗೀಲಿಕ್ಕೆ ಬರುವಂಥಾ ಕೀಲೀಕೈ ನನ್ನ ಕಡೆ ಅದಾವು. ಅಲ್ಲದೆ ನುಗ್ಗೂದು ಪಗ್ಗೂದು ನಾಯಾಕ ಮಾಡಲಿ ದೇವ್ರು ! ಮೆಲ್ಲಾಕ s ಹಾಂಗs ಒಳಗ ನಡೆದು ಹೋದ್ನಿರಿ !

* * *

ಕೊಡುಗೆಯ ಔಚಿತ್ಯ

ಹಳೆಯ ವಿದ್ಯಾರ್ಥಿಯೊಬ್ಬ ಕಾಲೇಜಿನ ಪ್ರಿನ್ಸಿಪಾಲರ ಬಳಿ ಬಂದು ಹೇಳಿದ :

" ಮಹಾಶಯರೆ, ನಾನು ಈ ಕಾಲೇಜಿನ ಹಳೆಯ ವಿದ್ಯಾರ್ಥಿ ಎಂಬುದನ್ನು ತಾವೂ ಬಲ್ಲಿರಿ. ನನ್ನ ಪ್ರೀತಿಯ ವಿಷಯಕ್ಕೆ ಸಂಬಂಧಿಸಿದ ಕೊಡುಗೆಯನ್ನೇನಾದರೂ ಈ ಕಾಲೇಜಿಗೆ ಕೊಡಬೇಕೆಂದು ಆಸೆಪಟ್ಟುಕೊಂಡಿದ್ದೇನೆ...."

ಪ್ರಿನ್ಸಿಪಾಲರು ನಡುವೇ ಹೇಳಿಬಿಟ್ಟರು:

" ಸರಿ ಸರಿ, ಹಾಗಿದ್ದರೆ ವಿದ್ಯಾರ್ಥಿಗಳಿಗೆ ಮಲಗಿಕೊಳ್ಳುವುದಕ್ಕೆ ಕಾಟ್ಸ್ ಕೊಟ್ಟು ಬಿಡಿರಿ ! "

* * *

ನ್ಯಾಯಾಧೀಶರಿಗೆ ಸಮಾಧಾನ

ನ್ಯಾಯಾಧೀಶ :— ಮ್ಯಾಲಿಂದ ಮ್ಯಾಲೆ ನಿನ್ನ ತುಡುಗು ಕಳವುಗಳ ಅಪರಾಧದ ವಿಚಾರಣೆ ಮಾಡಿ ಮಾಡಿ ಬೇಸತ್ತು ಹೋಗಿದ್ದೇನೆ!

ಅಪರಾಧಿ :— ಈ ಸಾರೆ ತುಡುಗೂ ಕಳವಿನ ಆರೋಪ ಇಲ್ಲ ದೇವ್ರು ! ಕೊಲೆ ಮಾಡಿದ ಅಪರಾಧಕ್ಕಾಗಿ ಕೋರ್ಟಿಗೆ ಬಂದೀನಿ !

* * *

ಪುಟ್ಟ್ಯಾನ ಅಲಾರ್ಮ್

" ಏನ್ರಾಯರs, ನೀವು ನಿಮ್ಮ ಆ ಅಲಾರ್ಮ್ ಟೈಂಪೀಸನ್ನ ಮಾರಿಬಿಟ್ಟರಂತ ?"

" ಹೌದು, ನಿಮಗ್ಯಾರು ಹೇಳಿದರು ? ನೋಡ್ರಿ, ನಿರುಪಯುಕ್ತ ವಸ್ತುಗಳನ್ನ ಮನಿಯೊಳಗ ಇಟ್ಟುಗೊಂಡು ಏನ್ ಮಾಡೂದು ? ನಮ್ಮ ಪುಟ್ಟ್ಯಾ ಹುಟ್ಟಿದಾಗಿನಿಂದ ಅದರ ಅವಶ್ಯಕತಾನೇ ಅನಿಸಲಿಲ್ಲ ನಮಗ ! '

* * *

ನೆನಪು–ಮರೆವು

ಆಕೆ :— ಗಂಡs ಅಂದರೆ ಹೆಂಡತಿಗೆ ಗುಲಾಮನಾಗಿ ಇರತಾನs ಅಂತ ನಾನು ಎಲ್ಲಿಯೋ ಓದಿದ ಹಾಂಗ ನೆನಪದ !

ಆತ :— ಇರಬಹುದು ನೆನಪು. ಗಂಡ ಗುಲಾಮನಾಗಿ ಇರಬೇಕಾದರೆ ಹೆಂಡತಿ ರೂಪವತಿಯೂ ಶ್ರೀಮಂತೆಯೂ ಇರಬೇಕಾಗತsದ ಅಂಬೂದನ್ನೂ ಆ ಪುಸ್ತಕದೊಳಗ ಬರೆದsದ; ಅದನ್ನ ಓದಿದ್ದು ನೆನಪಿನೊಳಗ ಉಳಿದಿಲ್ಲ ಕಾಣಿಸತsದ !

* * *

ರಾಯರ ಪಥ್ಯ

" ಏನ್ರೀ ರಾಯರs ಹಾಸಿಗೀ ಮ್ಯಾಲೆ ಬಿದ್ದುಕೊಂಡೇ ಚಹಾ ಕುಡೀಲಿಕ್ಕೆ ಹತ್ತಿದ್ದೀರಲ್ಲಾ" !

" ಹೌದರೀ ಮಾಡಬೇಕೇನು ? ಡಾಕ್ಟರು ಸ್ಪಷ್ಟವಾಗಿ ಹೇಳಿಬಿಟ್ಟಾರ : ಮುಂಜಾನೆ ಎದ್ದು ಚಹಾ ಕುಡೀಬ್ಯಾಡ್ರೀ. . ಅಂತ !

* * *

ಮುಂದಾಳಾಗುವ ಹಂಬಿಕೆ

ಆತ:— ನಾನು ಮಂದಿಗೆಲ್ಲಾ ಮುಂದಾಳು ಅಂತ ಮೆರೆವಣಿಗೀ ಮಾಡಿಸಿಕೊಳ್ಳತೀನಿ. ಆದರೆ ನೀನೊ ! ಇನ್ನೂ ಬಿಡಗೂ ಬಿನ್ನಾಣಾ ಮಾಡತs ಹುಡುಗರ್ಹಾಂಗ ತಿರುಗಾಡತೀ ! ಇದಕ್ಕ ಏನು ಅನಬೇಕು ?

ಆಕೆ :— ' ಮಂದಿ ಮೆಚ್ಚುವಂತೆ ನಡಕೊಂಡಲ್ಲೇ ನಾನು ಒಬ್ಬ ಮುಂದಾಳಾದೆ ' ಅಂತ ಯಾವಾಗಲೂ ಹೇಳತಿರತೀರೆಲಾ, ನೀವೇ !

* * *



ಮದ್ರಾಸದ ಮುನ್ನುಡಿ?

ಕಳೆದ ತಿಂಗಳು (೧-೫-೪೨) ನಾವು ಕೊಟ್ಟ ಒಂದು ಸೂಚನೆ, ಮುಂದೆ ಕೆಲವೇ ದಿನಗಳಲ್ಲಿ ಮದ್ರಾಸದಲ್ಲಿ ನಿಶ್ಚಿತರೂಪವನ್ನು ತಾಳಿತು. ಅದೆಂದರೆ, ಸದ್ಯದ ಯುದ್ಧವನ್ನು ಎದುರಿಸುವುದಕ್ಕಾಗಿ ಎಲ್ಲ ರಾಜಕೀಯ ಪಕ್ಷಗಳೂ ಒಂದಾಗಬೇಕೆಂಬುದು. ತಾ. ೨೩-೪-೪೨ ಕ್ಕೆ ಮದ್ರಾಸ ಶಾಸನ ಸಭೆಯ ಕಾಂಗ್ರೆಸ್ ಸದಸ್ಯರು ಶ್ರೀ. ರಾಜಗೋಪಾಲಾಚಾರಿಯವರ ಅಧ್ಯಕ್ಷತೆಯಲ್ಲಿ ಸಭೆಗೂಡಿ, ಒಂದು ನಿರ್ಣಯವನ್ನು ಅಖಿಲ ಭಾರತ ರಾಷ್ಟ್ರೀಯ ಸಮಿತಿ (A I. C. C.) ಗೆ ಕಳುಹಿಸಿದ್ದಾರೆ. ಆ ನಿರ್ಣಯದಲ್ಲಿ ಈ ಮುಖ್ಯ ಸಂಗತಿಗಳು ಕಂಡುಬರುವವು:—

(೧) ಸದ್ಯದ ಪ್ರಸಂಗದಲ್ಲಿ ರಾಷ್ಟ್ರೀಯ (ಎಂದರೆ ಸಕಲ ಪಕ್ಷೀಯ) ಸರಕಾರವನ್ನು ಸ್ಥಾಪಿಸಲು ಎಲ್ಲ ಪ್ರಯತ್ನಗಳನ್ನು ಕೈಕೊಳ್ಳುವುದು ಕಾಂಗ್ರೆಸಿನ ಕರ್ತವ್ಯವಾಗಿದೆ.

(೨) ಮುಸ್ಲಿಂ ಲೀಗಿನ ಹಟವಿದ್ದುದರಿಂದ, ಸಂಬಂಧಿಸಿದ ಜನರ ಅನುಮತಿಯನ್ನು ಪಡೆದು, ಯುದ್ಧ ಮುಗಿದ ಮೇಲೂ ಲೀಗವು ಹಾಗೇ ಅಭಿಪ್ರಾಯಪಡುತ್ತಿದ್ದರೆ, ಪಾಕಿಸ್ತಾನ ತತ್ತ್ವವನ್ನು ಕಾಂಗ್ರೆಸು ಒಪ್ಪಬೇಕು; ಮತ್ತು ಸದ್ಯಕ್ಕೆ ರಾಷ್ಟ್ರೀಯ ಸರಕಾರದ ಸ್ಥಾಪನೆಗೆ ಸಹಕಾರ ನೀಡಲು ಲೀಗವನ್ನು ಕೇಳಿಕೊಳ್ಳಬೇಕು.

(೩) ಸದ್ಯದ ಪ್ರಸಂಗದಲ್ಲಿ ಶಾಸನಸಭೆಯ ಸದಸ್ಯರು ಏನನ್ನೂ ಮಾಡದಿದ್ದರೆ ಆತ್ಮಘಾತುಕವೂ ಭವಿಷ್ಯದಲ್ಲಿ ಕಷ್ಟಪ್ರಾಯವೂ (Suicidal for the present and disastrous for the future) ಎನಿಸದಿರದು.

ಅಶುಭಸ್ಯ ಶೀಘ್ರಂ?

ಮೇಲಿನ ಮೂರು ಮಾತುಗಳಲ್ಲಿ ಕೊನೆಯದನ್ನು ಒಂದೇಸವನೆ (ಕಾಂಗ್ರೆಸು ಅಧಿಕಾರವನ್ನು ಬಿಟ್ಟಂದಿನಿಂದ) ನಾವು ಈ ನಮ್ಮ ಸೋಟದಲ್ಲಿ ಹೇಳುತ್ತ ಬಂದಿದ್ದೇವೆ. (ಅರಿಯದವರು ನಮ್ಮನ್ನು ಕಾಂಗ್ರೆಸ್ ವಿರೋಧಿಗಳೆಂದು ಅಲ್ಲಗಳೆದರೂ, ನಮಗೆ ಮಾತ್ರ ನಾವು ಗೆದ್ದೆವೆನ್ನುವುದಕ್ಕಿಂತ ಮುಂದಾಳುಗಳಿಗೆ ಬುದ್ಧಿ ಬರುತ್ತಲಿದೆ ಎಂಬುವದರಲ್ಲಿ ಹೆಚ್ಚು ಸಂತೋಷವಿದೆ.) ಆದರೆ ಬುದ್ಧಿ ಬರಲು ವಿಲಂಬವಾದುದಕ್ಕೆ ಕಾಂಗ್ರೆಸು ಎಂತಹ ಪ್ರಾಯಶ್ಚಿತ್ತವನ್ನು ಸ್ವೀಕರಿಸಬೇಕಾಯಿತು! ಪಾಕಿಸ್ತಾನದ ತತ್ತ್ವವನ್ನು ಒಪ್ಪಿಕೊಳ್ಳುವುದು! ಎರಡು ವರ್ಷಗಳಿಗೆ ಮುಂಚೆ ಪ್ರಾಂತಿಕ ಮಂತ್ರಿಮಂಡಲಗಳಿಗೆ ರಾಜೀನಾಮೆಯನ್ನು ಕೊಟ್ಟು, ಲೀಗಿನವರಿಗೆ ಇಂತಹ ಆಮಂತ್ರಣವನ್ನು ಕೊಟ್ಟಿದ್ದರೆ, ಇಷ್ಟರಲ್ಲಿ ಕಾಂಗ್ರೆಸ್-ಲೀಗಗಳ ಸಂಬಂಧವೆ ಬೇರೆಯಾಗಬಹುದಾಗಿದ್ದಿತು. ಆದರೆ ಈಗ? ಪಾಕಿಸ್ತಾನಕ್ಕೆ ಒಪ್ಪದ ಮುಸಲ್ಮಾನರನ್ನು ಬಾಂಧವರೆಂದು ಕೂಡ ಕರೆಯುವಂತಿಲ್ಲ! ಹೀಗೆ ಪಾಕಿಸ್ತಾನಕ್ಕೆ ಒಪ್ಪುವುದಾದಲ್ಲಿ ಒಂದು ಮಾತನ್ನು ಲಕ್ಷ್ಯಿಸಬೇಕು. ಪಾಕಿಸ್ತಾನವು ಕಾಂಗ್ರೆಸಿಗೆ ನಿಜವಾಗಿಯೆ ಅನಿವಾರ್ಯವಾಗಿದೆಯೆ? ಸದ್ಯಕ್ಕೆ ಹಿಂದುಸ್ತಾನದ ರಕ್ಷಣೆಗಿಂತ ಪಾಕಿಸ್ತಾನವು ಮಹತ್ತ್ವದ್ದೆ? ಮುಂದೆ ನಮ್ಮಿಂದ ಬೇರೆಯಾಗುವ ಹಟವಿದ್ದವರ ಸಹಕಾರವು ಅಷ್ಟೊಂದು ಅನಿವಾರ್ಯ ಇಲ್ಲವೆ ಅನುಕೂಲ ಎನಿಸಬಹುದೆ? ಇದಲ್ಲದೆ-ಪಾಕಿಸ್ತಾನವೆಂದರೆ ಎಲ್ಲ ರೀತಿಯಿಂದಲೂ ಯಾವ ಸಹಾಯದ ಅಪೇಕ್ಷೆಯಿಲ್ಲದೆಯೂ ಮಿಕ್ಕ ಹಿಂದುಸ್ತಾನದಿಂದ ಸಿಡಿದುಹೋಗುವುದು ಎಂಬ ಮಹತ್ತ್ವದ ಮಾತು ಮುಸಲ್ಮಾನರಲ್ಲಿ ಅನೇಕರಿಗೆ ತಿಳಿದಿದೆಯೆ? ಕೊನೆಗೆ, ಪಾಕಿಸ್ತಾನವು ಇಂದಿನ ಸಂಸ್ಥಾನಗಳಂತೆ ಹಿಂದುಸ್ತಾನವನ್ನು ಇನ್ನಿಷ್ಟು ಹರಕು-ಮುರುಕಾಗಿಸಲಿಕ್ಕಿಲ್ಲ ಎಂಬ ಭರವಸೆ ಇದೆಯೆ? ಅಥವಾ-ಇದೊಂದು ಅನಿಷ್ಟ (lesser evil ಎಂದಿದೆ ಆ ನಿರ್ಣಯದಲ್ಲಿ), ಅದಕಾಗಿ ಬೇಗ ತೊಲಗಲಿ—ಎಂಬ ಅವಸರದ ವಿಚಾರಶೂನ್ಯತೆಯ ಘೋರಣೆಯೆ ಇದು?

ಪಾಕಿಸ್ತಾನವೆಂಬುದು ಪಿಡುಗು

ಮೇಲಿನ ಪ್ರಶ್ನೆಗಳಿಗೆ ಉತ್ತರ ಕೊಡುವ ಅವಸರ ನಮಗಿಲ್ಲ; ಯಾಕೆಂದರೆ, ಇವೆಲ್ಲವುಗಳಿಗಿಂತ ಮಹತ್ತ್ವದ್ದಾದ ಬೇರೊಂದು ಘೋರಣೆಯನ್ನೆ ನಾವು ಸೂಚಿಸುವವರಿದ್ದೇವೆ. ಅದೆಂದರೆ, ಪಾಕಿಸ್ತಾನದ ಅಸಂಬದ್ಧತೆ. ಸದ್ಯಕ್ಕೆ ಪಾಕಿಸ್ತಾನವನ್ನು ಒಪ್ಪಿಕೊಳ್ಳಲು ಯಾವ ಕಾರಣವೂ ಇಲ್ಲ, ಅವಸರವೂ ಇಲ್ಲ, ಎಂದು ನಮ್ಮ ಅಭಿಪ್ರಾಯ. ಈಗ ದೇಶವನ್ನು ರಕ್ಷಿಸಬೇಕಾಗಿದೆ. ಮುಂದಿನ ಮಾತು ಮುಂದೆ. ಇಂದಿನವರೆಗೆ ಮಿಕ್ಕವರಂತೆ ಈ ಮುಸಲ್ಮಾನ್ ಬಂಧುಗಳು ನಮ್ಮೊಂದಿಗೆ ಭಾರತದಲ್ಲಿಯೆ ಹುಟ್ಟಿ, ಬೆಳೆದು, ಬಾಳಿ, ಭಾರತಕ್ಕೆ ಋಣಿಯಾಗಿದ್ದಾರೆ. ಯಾವ ಪ್ರತಿಫಲದ ಅಪೇಕ್ಷೆಯನ್ನೂ

ಮಾಡದೆ ಭಾರತದ ರಕ್ಷಣೆಗೆ ಅವರು ಮುಂದಾಗುವರೆಂಬುದಕ್ಕೆ ನಮಗೆ ಸಂದೇಹವಿಲ್ಲ. ಆದರೆ ಅವರಿಗೆ ಯೋಗ್ಯರೀತಿಯಿಂದ ಸವಾಲನ್ನು ಇನ್ನೂ ಯಾರೂ ಹಾಕಿಲ್ಲ. ಭಾರತದ ರಕ್ಷಣೆಯ ಕೆಲಸದಲ್ಲಿ ಒಂದಾಗಲಿ; ಯುದ್ಧದ ತರುವಾಯ, ಸ್ವತಂತ್ರ ಹಿಂದುಸ್ತಾನದಲ್ಲಿ ಇರುವ ಇಚ್ಛೆ ಇಲ್ಲದ ಬೇಕಾದವರು ಹೊರ ಬೀಳಬಹುದು. ಒಂದು ಜಾತಿಯ ಹೆಸರಿನಿಂದ, ಒಂದು ಅವಿಶ್ವಾಸದ ನೆವದಿಂದ, ಒಂದು ಆರೋಪ-ಪ್ರತ್ಯಾರೋಪಗಳ ಹೋಳೀಹುಣ್ಣಿಮೆಯಲ್ಲಿ ಹೊರಬೀಳುವುದೇಕೆ? ಹೊರಬೀಳುವ ಮುಂಚೆ ಅವನ್ನು ಒಪ್ಪಿಕೊಳ್ಳುವುದೇಕೆ? ಅದನ್ನು ಒಪ್ಪಿಕೊಂಡರೆ ಹರಿಜನಸ್ತಾನ, ದ್ರವಿಡಸ್ತಾನ, ಕಿರಿಸ್ತಾನ-ಕುರಿಮರಿಸ್ತಾನ ಎಂಬುವುಗಳನ್ನು ಒಪ್ಪಬಾರದೇಕೆ? ಯುದ್ಧದ ತರುವಾಯ ಹಿಂದುಸ್ತಾನವೆ ಹರಿದುಹಂಚಿ ನಮ್ಮಿಂದ ಹಾಳಾಗುವುದಿದ್ದರೆ, ಇಂದು ದುಷ್ಟರ ಬಾಂಬುಗಳಿಂದ, ಪರದಾಳಿಯ ಹಾವಳಿಯಿಂದ ಹಾಳಾಗುವುದೆ ಲೇಸಲ್ಲವೆ? ಇರಲಾಗದ ಹಿಂದುಸ್ತಾನವನ್ನು ರಕ್ಷಿಸುವುದೆಂತರೆ ರಾಜಾಜಿಯಂತಹರ ತರ್ಕಕಲ್ಪನೆಗೂ ಮೀರಿದ ಮಾತು— ಎಂದು ನಮಗೆನಿಸುವುದು. ಪಾಕಿಸ್ತಾನವನ್ನು ಹೊರಗೆ ಹಾಕಬೇಕೆಂದರೆ ಇಂದು ಅದು ರೋಗವಲ್ಲ, ಸಿಡುಗು ಆಗಿದೆ; ಅನೇಕ ಆಹುತಿಗಳನ್ನು ಒಯ್ಯುವುದು.

(೨೭-೪-೪೨

ಬುದ್ಧಿ ಬಡಗುಂದಿದೆ

ಹೀಗೆ ಪಾಕಿಸ್ತಾನವೆಂಬುದು ಒಪ್ಪಬೇಕಾದ ತತ್ತ್ವವಲ್ಲ. 'ಇಂದು ದೇಶದ ಸಂರಕ್ಷಣೆ ಮುಖ್ಯ, ಅದಕಾಗಿ ಯಾವುದನ್ನು ಒಪ್ಪಿದರೂ ತಪ್ಪಲ್ಲ' ಎಂಬುದು ಆತ್ಮವಂಚನೆಯಾಗುವುದು. ಇಲ್ಲವಾದರೆ, ಹಿಟ್ಲರನೂ ಜಪಾನವೂ ಹೇಳುವುದನ್ನು ಒಪ್ಪಿ ಇಡಿಯ ಜಗತ್ತನ್ನೆ ಶಾಂತಿಯಲ್ಲುಳಿಸಬಹುದಲ್ಲ? ಪಾಕಿಸ್ತಾನವನ್ನು ಒಪ್ಪುವುದು ನಮ್ಮ ದೇಶವನ್ನು ಜರ್ಮನಿ-ಜಪಾನಗಳಿಂದಲೆ ಸಂರಕ್ಷಿಸುವುದಕ್ಕಾಗಿ ಎಂದೂ ಹೇಳಲಾಗದು. ಯಾಕೆಂದರೆ ಜಾತಿ-ಜನಾಂಗಗಳಿಗನುಸರಿಸಿ ಉಚ್ಚನೀಚಭಾವವನ್ನು ಒಪ್ಪುವ (racial culture) ಹಿಟ್ಲರವಾದಕ್ಕೂ ಪಾಕಿಸ್ತಾನಕ್ಕೂ ವ್ಯತ್ಯಾಸವಿಲ್ಲ. ಇಂದು ಹಿಂದುಗಳಿಂದ ಭಿನ್ನರೆಂದು ಹೊರಬಿದ್ದ ಮುಸಲ್ಮಾನರೇ, ನಾಳೆ ಹಿಂದುಗಳಿಂದ ತಾವು ಉಚ್ಚರೆಂಬ ಅಹಂಕಾರದಿಂದ ಹಿಂದುಸ್ತಾನದ ಮೇಲೆಯೆ ಬಿದ್ದರೆ, ಅದು ಪಾಕಿಸ್ತಾನದ ತತ್ತ್ವಕ್ಕೆ ಅನಿವಾರ್ಯವಾದ ತರ್ಕವೆ ಎನಿಸುವುದು. 'ಈ ಸಂಕಟಸಮಯದಲ್ಲಿ ಆಡಳಿತದ ಸೂತ್ರ ನಮ್ಮ ಕೈಯಲ್ಲಿರಬೇಕು, ಇಲ್ಲದಿದ್ದರೆ ನಾವು ಗೋಳಿಗೀಡಾಗುವೆವು, ಆದಕಾಗಿ ಹೇಗಾದರೂ ಮಾಡಿ ಅದನ್ನು ದೊರಕಿಸಬೇಕು' ಎಂಬ ಸದಿಚ್ಛೆಯಿಂದಲೆ ರಾಜಾಜಿಯವರು ಹೀಗೆ ಹೇಳಿರಬಹುದು. ಆದರೆ ಜಾತಿ-ಮತ-ಸಂಘಗಳನ್ನು ಮೀರಿ, ದೇಶದ ತುಂಬ ಶಾಖೋಪಶಾಖೆಯಾಗಿ, ಜನರಿಗೆ ಬೇಕಾಗಿ ಹರಡಿದ ಕಾಂಗ್ರೆಸ್ ಸಂಸ್ಥೆಗೆ ಸಂಕಟ ಸಮಯದಲ್ಲಿ ಆಡಳಿತವನ್ನು ವಶಪಡಿಸಿಕೊಳ್ಳುವುದು— ಧೈರ್ಯಸಿದ್ಧತೆಗಳಿದ್ದಲ್ಲಿ— ಕಠಿಣವಾಗದು. ಯುದ್ಧ ಮುಗಿದ ಮೇಲೆ, ಆಗಲೂ ಮುಸಲ್ಮಾನರ ಇಚ್ಛೆ ಇದ್ದರೆ, ಪಾಕಿಸ್ತಾನದ ಮಾತು; ಈಗ ಹೆದರಬೇಕಾಗಿಲ್ಲ—ಎಂದರೆ ಯಾರಿಗೂ ಸಮಾಧಾನವಾಗುವಂತಿಲ್ಲ. ಯಾಕೆಂದರೆ! (೧) ಪಾಕಿಸ್ತಾನದ ಮೇಲೆಯೆ ಕಣ್ಣಿಟ್ಟವರು ನಮ್ಮ ಪಕ್ಷದಲ್ಲಿರುವಾಗ, ಯುದ್ಧಕ್ಕಾಗಿ ನಮಗೆ ಅಷ್ಟೊಂದು ಆತ್ಮೀಯತೆ ಎನಿಸದು, ಯುದ್ಧ ಮುಗಿವುದೂ ಸಂತೋಷವೆನಿಸದು; (೨) ಪಾಕಿಸ್ತಾನವು ಕೇವಲ ಮುಸಲ್ಮಾನರ ಇಚ್ಛೆಯನ್ನೆ ಅವಲಂಬಿಸಿಲ್ಲ; ಈ ಮುಸಲ್ಮಾನರು ಯಾರೊಡನೆ ಆರ್ಥಿಕ, ಔದ್ಯೋಗಿಕ, ಸಾಮಾಜಿಕ ಸಂಬಂಧಗಳನ್ನಿಟ್ಟುಕೊಂಡಿರುವರೊ ಆ ಮುಸಲ್ಮಾನೇತರರ ಅಭಿಪ್ರಾಯಕ್ಕೂ ಈ ವಿಷಯದಲ್ಲಿ ಅಷ್ಟೇ ಬೆಲೆ ಇದೆ— ಎಂಬುದನ್ನು ಮರೆಯುವಂತಿಲ್ಲ. ಒಟ್ಟು, ಅನ್ಯಪಹಾರ್ಯವಾದ ಸದಿಚ್ಛೆಯು ರಾಜಾಜಿಯವರ ಬುದ್ಧಿಶಕ್ತಿಯನ್ನು ಅತ್ಯಂತ ನಿರ್ವಿಣ್ಣ ಮಾಡಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ.

(೨೮-೪-೪೨

ಕಾಂಗ್ರೆಸ್ಸಿನ ಕಿಂಕರ್ತವ್ಯತಾಮೂಢತೆ

ಆದರೆ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಈ ಬುದ್ಧಿನಿರ್ವಿಣ್ಣತೆ ಕಾಂಗ್ರೆಸಿಗೆಯೆ ಅಂಟಿಕೊಂಡ ಬೇನೆ ಎಂದೂ ರಾಜಾಜಿಯವರು ಅದರ ಪೂರ್ವಚಿಹ್ನವೆಂದೂ ಸ್ಪಷ್ಟವಾಯಿತು ಯಾಕೆಂದರೆ ೧೫೦ ಜನರು ಇವರಿಗೆ ವಿರುದ್ಧ ಮತ ಕೊಟ್ಟರೂ ಒಬ್ಬನಾದರೂ ಇವರು ಕೇಳಿದ ಪ್ರಶ್ನೆಗೆ ಸಮಾಧಾನಕಾರಕವಾದ ಉತ್ತರವನ್ನು ಕೊಡಲಿಲ್ಲ. 'ಮುಸ್ಲಿಂ ಲೀಗಿನ ಬೇಡಿಕೆ ಮತ್ತು ಪಾಕಿಸ್ತಾನ್ ಎಂಬವುಗಳಿಗೆ ಜಿನಾ ಇವರೇ ಸ್ಪಷ್ಟ ಸ್ವರೂಪವನ್ನು ಕೊಟ್ಟಿಲ್ಲ' ಎಂದರು ಬಾಬು ರಾಜೇಂದ್ರ ಪ್ರಸಾದರು. ಹಾಗಿದ್ದರೆ ರಾಜಾಜಿಯವರ ಗೊತ್ತುವಳಿ, ಮುಸ್ಲಿಂಲೀಗಕ್ಕೆ ಸ್ಪಷ್ಟವಲ್ಲದ್ದನ್ನು ಸ್ಪಷ್ಟಗೊಳಿಸುವ ಒತ್ತಾಯಕ್ಕರಿಸುವ— ಅದಕಾಗಿ ಅದನ್ನು ಬಯಲಿಗೆಳೆಯುವ—ಯುಕ್ತಿ ಎಂದು ತಿಳಿಯಬಾರದೇಕೆ? ಪಂಡಿತ ಜವಾಹರರು ಬರಿಯ ದೇಶಾಭಿಮಾನದ ಮತ್ತು ಸ್ವಾಭಿಮಾನದ ಗುಡುಗನ್ನು ಹಾಕಿದರು; ಅದಕ್ಕೆ ರಾಜಾಜಿಯವರೆ 'ಲೀಗನ್ನು ಸೋಲಿಸಲು' ಆಹ್ವಾನ ಕೊಟ್ಟರು. 'ವರ್ಕಿಂಗ್ ಕಮಿಟಿಯ ಐವರು ಲೀಗದ ಐವರೊಡನೆ ಮಾತುಕತೆಯಾಡಲಿ' ಎಂಬ ಮೌಲಾನಾ ಆಝಾದರಾದರೂ ಮುಸ್ಲಿಂಲೀಗಿನ ಅಧಿಕಾರವನ್ನು ಒಪ್ಪಿಕೊಂಡಂತೆಯೆ ಆಗಲಿಲ್ಲವೆ? ಮುಂದಾಳುಗಳೆ ಹೀಗೆ ಭ್ರಮೆಗೊಂಡು ಮಾತನಾಡುವಾಗ, ಕಾಂಗ್ರೆಸಿಗೆಯೆ ಬುದ್ಧಿನಿರ್ವಿಣ್ಣತೆ ಬಡಿದಿದೆ ಎಂದು ಹೇಳಬಾರದೇಕೆ? 'ಇಂದಿಗೂ ಹಿಂದು-ಮುಸ್ಲಿಮರ ತೊಡಕನ್ನು ನಾವು ಬಿಡಿಸದಾದೆವು; ಈಗಲೂ ಮುಸ್ಲಿಂಲೀಗನ್ನು ಸೋಲಿಸಲಾರೆವು; ಲೀಗವನ್ನು ಒಪ್ಪುವಂತಿಲ್ಲ, ಲೀಗದ ಶಕ್ತಿಯನ್ನು ತಪ್ಪಿಸುವಂತಿಲ್ಲ' ಎಂದು ಮೊರೆಯಿಡುವ ರಾಜಗೋಪಾಲಾಚಾರಿಯವರು, ಕಾಂಗ್ರೆಸಿನ ರಾಜನೀತಿಯ ಬುದ್ಧಿಬಡತನವನ್ನೆ ಬಯಲಿಗೆಳೆದಿದ್ದಾರೆ.

ಹಾದಿಬಿಟ್ಟ ಹೊಣೆಗಾರಿಕೆ

ಕಾಂಗ್ರೆಸು ತಾಳಿದ ಧೋರಣೆಯಾಗಲಿ ಒಪ್ಪಿದ ಗೊತ್ತುವಳಿಯಾಗಲಿ ತಪ್ಪಾದುವೆಂದರೆ, ರಾಜಾಜಿಯವರದು ಸರಿಯಾದುದೆಂದಲ್ಲ. ನಿಜವಿದ್ದ ಮಾತೆಂದರೆ ಕಾಂಗ್ರೆಸ್ಸೂ ಆಚಾರ್ಯರೂ ಮರೆಮುಸುಕಿನ ಹಿಂದಿನಿಂದ ಪರಿಸ್ಥಿತಿಯನ್ನು ನೋಡುತ್ತಲಿದ್ದಾರೆ; ಆದಕಾಗಿ ಇಬ್ಬರ ದೃಷ್ಟಿಯೂ ಸಮರ್ಪಕವಾಗಿಲ್ಲ. ರಾಜಾಜಿಯವರಿಗೆ ನಿರಾಶೆಯ ಅವಸರದ ಮರೆಮುಸುಕು; ಕಾಂಗ್ರೆಸಿಗೆ ಅಭಿಮಾನದ-ಹಟದ-ಮರೆಮುಸುಕು. ಜಪಾನರನ್ನು ಎದುರಿಸುವ ಆವೇಶ ಆಚಾರ್ಯರಿಗೆ; ಬ್ರಿಟಿಶರನ್ನು ಬಯಲಿಗೆಳೆಯುವ ಕಾತರ ಕಾಂಗ್ರೆಸಿಗೆ. ಸದ್ಯದ ಹೊಣೆಗಾರಿಕೆಗಾಗಿ ರಾಜಾಜಿಯವರು ತತ್ತ್ವವನ್ನು ಮರೆತರೆ, ತತ್ತ್ವಕ್ಕಾಗಿ ಕಾಂಗ್ರೆಸು ಸದ್ಯದ ಹೊಣೆಗಾರಿಕೆಯನ್ನು ಮರೆತಿದೆ. ಬುದ್ಧಿವಂತಿಕೆ ಮಾತ್ರ ಇವೆರಡರ ಮಧ್ಯವಲ್ಲಿದೆ. ಸದ್ಯದ ಹೊಣೆಗಾರಿಕೆಯನ್ನು ಅರಿತು, ಶಾಶ್ವತ-ತತ್ತ್ವವನ್ನೂ ತಿಳಿದು ವರ್ತಿಸಿದರೆ ಈ ಯಾವವೇ ತೊಡಕು ಬಿಡುವುದೆಂಬುದರಲ್ಲಿ ಸಂದೇಹವಿಲ್ಲ. ಸದ್ಯದ ಹೊಣೆಗಾರಿಕೆ ಯಾವುದು? ದೇಶವನ್ನು ರಕ್ಷಿಸುವುದು, ಜನತೆಯ ಶೀಲ (morale) ವನ್ನು ಉಳಿಸಿಕೊಳ್ಳುವುದು. 'ಜಪಾನರು ಒಂದು ಭಾಗವನ್ನು ಆಕ್ರಮಿಸಿದಾಗ ಬ್ರಿಟಿಶರು ಅದೇ ಭಾಗದ ಮೇಲೆ ಬಾಂಬುಗಳನ್ನು ಎಸೆದರೆ ನಮ್ಮ ಗತಿ ಏನು, ದಾರಿಯಾವುದು?' ಎಂಬ ರಾಜಾಜಿಯವರ ಪ್ರಶ್ನೆ ಸದ್ಯದ ಹೊಣೆಗಾರಿಕೆಯ ಸ್ವರೂಪವನ್ನು ಸ್ಪಷ್ಟವಾಗಿ ತಿಳಿಸುವುದು. ಇಂತಹ ಸಮಯದಲ್ಲಿ ಹಿಂದುಗಳು ಮುಸಲ್ಮಾನರು ಪರಸ್ಪರ ವಿಶ್ವಾಸವಿಲ್ಲದುದಕ್ಕಾಗಿ ಒಂದೊಂದು ಪಕ್ಷವನ್ನು ವಹಿಸಿದರೆ! ಯಾವ ಅಭಿಮಾನದ ಗುಡುಗೂ ನಮ್ಮನ್ನು ಉಳಿಸದು. ಅದಕಾಗಿ —ಆತ್ಮರಕ್ಷಣೆಗಾಗಿ— ಪರಸ್ಪರ ಸಂಬಂಧಕ್ಕಾಗಿ—ಒಬ್ಬರೊಬ್ಬರ ಸುರಕ್ಷಿತತೆಗಾಗಿ—ಎಲ್ಲರಿಗೂ ಒಂದೇ ಗಂಡಾಂತರವೆಂಬುದಕ್ಕಾಗಿ-ಇಂತಹ ಕಾರಣಗಳಿಗಾಗಿ ಹಿಂದು-ಮುಸಲ್ಮಾನರ ಐಕ್ಯ ಅವಶ್ಯವಲ್ಲವೆ? ಈ ಪ್ರಶ್ನೆಯನ್ನು ಎದುರಿಸದೆ ಕಾಂಗ್ರೆಸು ತನ್ನ ಹೊಣೆಗಾರಿಕೆಯಲ್ಲಿ ಹಾದಿಬಿಟ್ಟಿದೆ.

ಐಕ್ಯವೋ? ಅವಿಶ್ವಾಸವೋ?

ರಾಜಾಜಿಯವರೂ ಅದರಂತೆಯೆ ಹೆಜ್ಜೆ ತಪ್ಪಿದ್ದಾರೆ. 'ಹಿಂದು-ಮುಸಲ್ಮಾನರ ಐಕ್ಯ ಅವಶ್ಯ' ಎಂದ ಮಾತ್ರಕ್ಕೆ, ಪಾಕಿಸ್ತಾನವನ್ನೆ ಒಪ್ಪಬೇಕೆಂಬ ಅವಸರ ಅವರಿಗೆ. ಆದರೆ ಇಂದು ಹಿಂದು-ಮುಸಲ್ಮಾನರ ಐಕ್ಯ ಅವಶ್ಯ ಎಂದರೆ ಯಾವ ದೃಷ್ಟಿಯಿಂದ? ಧಾರ್ಮಿಕವೆ? ರಾಜಕೀಯವೆ? ಆರ್ಥಿಕವೆ? ಒಂದೂ ಅಲ್ಲ. **ಇಂದಿನ ಐಕ್ಯವು ಕೇವಲ ಆತ್ಮರಕ್ಷಣೆಗಾಗಿ.** ಹಿಂದುಗಳು ಮುಸಲ್ಮಾನರು ದೇಶದ ತುಂಬ ಕೂಡಿಯೆ ವಾಸವಾಗಿದ್ದು 'ಒಬ್ಬರ ನಷ್ಟವು ಇನ್ನೊಬ್ಬರಿಗೂ ಅನಿಷ್ಟ' ಎಂಬ ದೃಷ್ಟಿಯಿಂದ. ಒಂದೇ ಬೀದಿಯಲ್ಲಿದ್ದವರು ಕಳ್ಳರಿಗಾಗಿ ಕಾವಲಿಟ್ಟಾಗ, ಎಲ್ಲರೂ ಕೂಡಿಕೊಂಡು ಒಬ್ಬ ಕಾವಲುಗಾರನನ್ನು ನಿಯಮಿಸುವರೊ, ಇಲ್ಲವೆ ಬೇರೆಬೇರೆ ಜಾತಿಯವರು ತಂತಮ್ಮ ಜಾತಿಯ ಕಾವಲುಗಾರರನ್ನು ನಿಯಮಿಸುವರೊ? ಒಬ್ಬ ಕಾವಲುಗಾರನನ್ನು ನಿಯಮಿಸಲು ಪರಿಸ್ಥಿತಿಯಿಂದ ಅನಿವಾರ್ಯವಾದ ಪರಸ್ಪರ ವಿಶ್ವಾಸವೆ ಈಗ ದೇಶದ ತುಂಬ ಹಿಂದು-ಮುಸಲ್ಮಾನರಲ್ಲಿ ಹುಟ್ಟಬೇಕಾಗಿದೆ, ಹುಟ್ಟುವುದು ಶಕ್ಯವಿದೆ—ಅದೇಕೆ?—ಸಹಜವಿದೆ ಎಂಬ ಮಹತ್ತ್ವದ ಮಾತನ್ನೆ ರಾಜಾಜಿಯವರು ಮರೆತಿದ್ದಾರೆ. 'ಯುದ್ಧ ಮುಗಿದ ಮೇಲೆ ನೀವು ಬೇರೆ, ನಾವು ಬೇರೆ' ಎಂಬ ಧೋರಣೆಯಿಂದ, ಯುದ್ಧದಂತಹ ಗಂಡಾಂತರ ಸಮಯದಲ್ಲಿ ಪರಸ್ಪರ ವಿಶ್ವಾಸಹುಟ್ಟುವುದು ಹೇಗೆ?

(೮-೫-೪೨)

ಹಿತದ ಹಾದಿ

ಪಾಕಿಸ್ತಾನದ ತತ್ತ್ವವನ್ನು ಒಪ್ಪದೆಯೆ ಹಿಂದು-ಮುಸಲ್ಮಾನರು ಇಂದು ಒಂದಾಗುವುದು ಶಕ್ಯವಿದೆಯೆ? ಇಲ್ಲ— ಎಂದೇ ಬಹು ಜನರು ಉತ್ತರ ಕೊಡುವರೆಂಬುದು ನಮಗೆ ಗೊತ್ತು. ಮುಸ್ಲಿಂ ಲೀಗವು ಪಾಕಿಸ್ತಾನಕ್ಕೆ ವಿರುದ್ಧವೆನಿಸಬಹುದಾದ ಒಂದು ಯೋಜನೆಯನ್ನೂ ಮುಟ್ಟುವುದಿಲ್ಲ— ಎಂದು ಹೇಳಿಲ್ಲವೆ? ಹೇಳಿದೆ; ನಿಜ. ಆದರೆ ಒಂದು ಮಾತನ್ನು ನಾವಿಲ್ಲಿ ಎಲ್ಲ ಧುರೀಣರ, ವಿಚಾರಶಕ್ತಿ ಇದ್ದವರ ಲಕ್ಷ್ಯಕ್ಕೆ ತರಬಯಸುವೆವು. ಅದೆಂದರೆ, ಪಾಕಿಸ್ತಾನವು ಹಿಂದುಸ್ತಾನದ ರಾಜಕೀಯ ಧ್ಯೇಯಕ್ಕೆ ಮಾತ್ರ ಸಂಬಂಧಿಸಿದೆ. ಎಂದರೆ— ಹಿಂದುಸ್ತಾನದ ರಾಜಕೀಯ ಸ್ಥಾನವು ಯಾವುದು, ಎಂತಹುದು ಇರಬೇಕೆಂದಾಗ ಮಾತ್ರ ಪಾಕಿಸ್ತಾನದ ಪ್ರಶ್ನೆ ಏಳುವುದು. ಹಿಂದುಸ್ತಾನಕ್ಕೆ ಪ್ರಜಾಪ್ರಭುತ್ವ ಪದ್ಧತಿಯ, ಬಹುಮತದ ಆಡಳಿತದ ಸ್ವಾತಂತ್ರ್ಯವೆ ಧ್ಯೇಯವಾಗಿದೆ ಎಂಬ ಹಟ ಹೆಚ್ಚಿದಂತೆ ಪಾಕಿಸ್ತಾನದ ಬೇಡಿಕೆಯೂ ಬಲಗೊಳ್ಳುತ್ತಲಿದೆ. ಹೀಗಿರುವಾಗ ಸದ್ಯಕ್ಕೆ ಆ ರಾಜಕೀಯ ಪ್ರಶ್ನೆಯನ್ನು ಬದಿಗಿಟ್ಟರೆ ಪಾಕಿಸ್ತಾನದ ಪ್ರಶ್ನೆಯೂ ಬದಿಗೆ ಸರಿಯಲಿಕ್ಕಿಲ್ಲವೆ? 'ರಾಜಕೀಯ ಧ್ಯೇಯವನ್ನು ಬಿಡುವುದು ಶಕ್ಯವಿಲ್ಲ' ಎಂದು ಕಾಂಗ್ರೆಸಿನ ಹಟವಿದ್ದಂತೆ, ಪಾಕಿಸ್ತಾನದ ನೀರಿಲ್ಲದೆ ತುತ್ತನ್ನು ನುಂಗುವುದಿಲ್ಲೆಂದು ಮುಸ್ಲಿಂ ಲೀಗಿನ ಹಟ. ಈ ಅಭಿಮಾನವೀರರಿಗೆ ಒಂದು ಬೇಡಿಕೆ ಇದೆ; ರಾಜಕೀಯ ಧ್ಯೇಯವನ್ನು ಪೂರ್ತಿಯಾಗಿ ಬಿಡಬೇಕಾಗಿಲ್ಲ, ಆದರೆ ಯುದ್ಧದಂತಹ ಸಂಕ್ರಾಂತಿಸಮಯದ ತರುವಾಯ ಜೀವನದ ನೆಲೆ-ಬೆಲೆಗಳೆ ಬದಲಾಯಿಸಬಹುದಾದ್ದರಿಂದ, ಅಲ್ಲಿಯವರೆಗೆ ತಮ್ಮ ಭಾವನಾವೇಶವನ್ನು ತಡೆಯಬೇಕು; ಅದರಂತೆಯೆ, ಮುಸಲ್ಮಾನ್ ಬಂಧುಗಳೂ ಪಾಕಿಸ್ತಾನವನ್ನು ಬಿಡಬೇಕಾಗಿಲ್ಲ, ಆದರೆ ಮುಂದೆ ಪಾಕಿಸ್ತಾನ ಪೂರ್ತಿಗೊಳ್ಳಲು ಇಂದು ಮುಸಲ್ಮಾನರು ಉಳಿದು ಬೆಳೆಯಬೇಕು. ಅದಕಾಗಿ ಯುದ್ಧ ಮುಗಿಯುವ ವರೆಗೆ ಅವರೂ ಪಾಕಿಸ್ತಾನವನ್ನು ಮರೆಯಬೇಕು. ಹೀಗೆ ಎರಡೂ ಪಕ್ಷದವರು ಬುದ್ಧಿಯ ಚುರುಕನ್ನೂ ಹೃದಯದ

ವಿಶಾಲತೆಯನ್ನೂ ತೋರಿಸಿದರೆ ಹಿಂದು-ಮುಸಲ್ಮಾನರಲ್ಲಿ— ಆತ್ಮರಕ್ಷಣೆಯ ಹೊಣೆಗಾರಿಕೆಗಾಗಿ— ಐಕ್ಯವಾಗುವುದು ಅನಿವಾರ್ಯವೆನಿಸುವುದು. ಇದೇ ಇಂದಿನ ಪರಿಸ್ಥಿತಿಯಲ್ಲಿ ಹಿತದ ಹಾದಿಯಾಗಿದೆ, ಎಂದು ನಮ್ಮ ಖಂಡಿತವಾದ ಅಭಿಪ್ರಾಯ.

ಮುಂದೇನು ?

ಆದರೆ ಸದ್ಯದ ವಾತಾವರಣವನ್ನು ನೋಡಿದರೆ ದೇಶಕ್ಕೂ ಅದರ ಹಿತಕ್ಕೂ ಒಂದು ಹಾದಿಯಾಗುವ ಲಕ್ಷಣವೆ ಇದ್ದಂತೆ ತೋರುವುದಿಲ್ಲ. ರಾಜಾಜಿಯವರು ಕಾಂಗ್ರೆಸಿನಲ್ಲಿಯ ತಮ್ಮ ಅಧಿಕಾರಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು 'ಈ ಸ್ಥಿತಿಯಲ್ಲಿ ನಾನು ಕಾಂಗ್ರೆಸಿನ ಪ್ರತಿನಿಧಿಯಾಗಲಾರೆ, ಆದ್ದರಿಂದ ಜಿನ್ನಾಸಾಹೇಬರೊಡನೆ ಸಂಧಿಸುವ ಅಧಿಕಾರವಾಗಲಿ ಉಪಯುಕ್ತತೆಯಾಗಲಿ ನನ್ನಲ್ಲಿಲ್ಲ' ಎಂದು ತಾರ್ಕಿಕ ಸತ್ಯಾಗ್ರಹವನ್ನು ತಾಳಿದ್ದಾರೆ; 'ಪತ್ರವ್ಯವಹಾರದಿಂದ ಸಂಧಾನದ ಶರ್ತುಗಳ ವಿಚಾರವನ್ನು ಕೂಡ ಮಾಡುವುದು ಶಕ್ಯವಿಲ್ಲ' ಎಂದು ಜಿನ್ನಾಸಾಹೇಬರು ಶಾಸಕರ ಅಧಿಕಾರಿಯೊಬ್ಬನಿಗೆ ಬರೆದು ತಿಳುಪಿಸಿದ್ದಾರೆ; ಅಝಾದ್ ಸಾಹೇಬರು ಅಮೇರಿಸಾಹೇಬರೊಡನೆ ವಾಗ್ಯುದ್ಧವನ್ನು ಹೂಡಿದ್ದಾರೆ; ಜವಾಹರರು ಜಪಾನ್–ಜರ್ಮನಿಗಳನ್ನು ವೀರವಾಣಿಯಿಂದ ಮಾತ್ರ ಪ್ರತಿಭಟಿಸುತ್ತಿದ್ದಾರೆ (ಅಥವಾ ಕೆರಳಿಸುತ್ತಿದ್ದಾರೆನ್ನೋಣವೆ ?); ಸಾವರಕರರು ಪಾಕಿಸ್ತಾನ ವಿರೋಧಕ ದಿನಾಚರಣೆಯ ಮಂತ್ರಘೋಷಣೆಯಲ್ಲಿ ಇದ್ದಾರೆ. ಇವುಗಳಲ್ಲೊಂದೂ ಜಪಾನರ ಮುನ್ನಡೆಯನ್ನು ತಡೆದಿಲ್ಲ, ಬ್ರಿಟಿಶ್ ರಾಜನೀತಿಯನ್ನು ಹೊರಗೆಡಹಿಲ್ಲ. ಈ ಪರಿಸ್ಥಿತಿಯನ್ನು ನೋಡಿದರೆ ಯಾವ ಬುದ್ಧಿವಂತನಾದರೂ ವಿವಂಚನೆಗೊಳಗಾಗಬಹುದಾಗಿದೆ. ಇಪ್ಪತ್ತೆರಡು ವರ್ಷ ಮಹಾತ್ಮರ ಬಲಗೈ ಎನಿಸಿ, ಬುದ್ಧಿಬಲವೆನಿಸಿ ಅಸಹಕಾರ ತತ್ತ್ವದ ಪ್ರಚಾರವನ್ನು ಮಾಡಿದ ರಾಜಾಜಿಯವರು 'ಸದ್ಯದ ಪರಿಸ್ಥಿತಿಯನ್ನು ಅಹಿಂಸಾತ್ಮಕ ಅಸಹಕಾರದಿಂದ ಎದುರಿಸಲು ಶಕ್ಯವಿಲ್ಲ' ಎನ್ನುತ್ತಿದ್ದಾರೆ; ಅದೇ ಅಹಿಂಸೆಯ ತತ್ತ್ವಕ್ಕಾಗಿ ಅಷ್ಟೊಂದು ಶ್ರದ್ಧೆ ಇಲ್ಲದವರೆಂದು ತಿಳಿಯಲ್ಪಟ್ಟ ಪಂಡಿತ ಜವಾಹರರು, ಈಗ ಅಹಿಂಸಾತ್ಮಕ ಅಸಹಕಾರವೆ ಯೋಗ್ಯ ಎನ್ನುತ್ತಿದ್ದಾರೆ! ಮುಂದಾಳುಗಳೇ ವಿಪರೀತ ಗೊಂದಲದಲ್ಲಿದ್ದಾಗ—ಪಾಪ! –ಹಿಂದಾಳುಗಳಿಗೆ ಮುಂದೇನು!

(೧೫–೫–೪೨)

ಯಾರ ಮುನಿಸು-ಯಾರ ಮುಯ್ಯಿ!

'ಬ್ರಿಟಿಶ್ ಸರಕಾರವು ಬೇರೆ ಸಾಧನದ ಶಕ್ಯತೆಯನ್ನು ಮಾಡಿಕೊಡಲು ಒಪ್ಪದ್ದರಿಂದ ನಾವು ಅಹಿಂಸೆಯನ್ನು ಬಿಡತಕ್ಕದ್ದಲ್ಲ' ಎಂಬ ಅಭಿಪ್ರಾಯವಿದೆ ವರ್ಕಿಂಗ್ ಕಮಿಟಿಯ ಗೊತ್ತುವಳಿಯಲ್ಲಿ. ಇದರರ್ಥವೇನು ? ಅರ್ಥವನ್ನು ತಿಳುಹಿಸುವ ಉದ್ದೇಶದಿಂದ ಉದಾತ್ತ ಉಪನ್ಯಾಸವನ್ನೆ ಯಾರಾದರೂ ಮಾಡಬಹುದೆಂದು ನಾವೇ ಅದನ್ನಿಲ್ಲಿ ಸಾಮಾನ್ಯರ ಭಾಷೆಯಲ್ಲಿ ಬಿಡಿಸಿ ಹೇಳುತ್ತೇವೆ. ಬ್ರಿಟಿಶ್ ನೀತಿಗಾಗಿ ಕಮಿಟಿಯವರು ಕನಲಿದ್ದಾರೆ. ಆ ಸಿಟ್ಟನ್ನು ಈ ಕೊಂಕುನುಡಿಯಿಂದ ಆಡಿದ್ದಾರೆ. ಹೊಣೆಗಾರಿಕೆಯ ಸಂಸ್ಥೆಗೆ ದೇಶಕ್ಕೆ ದಾರಿಯನ್ನು ತೋರಿಕೊಡುವ ಸಂದರ್ಭದಲ್ಲಿ ಇಂತಹ ಅಸಹಾಯತೆಯ ಮುನಿಸು ತರವಲ್ಲ. ಜನತೆಗೆ ಶಸ್ತ್ರಶಿಕ್ಷಣವನ್ನು ಕೊಡಲೇಬೇಕೆಂದು ಹಟ ತೊಡಿರಿ; ಇಲ್ಲವೆ ಯಾವನೆವವನ್ನೂ ಮುಂದುಮಾಡದೆ ಅಹಿಂಸೆಯನ್ನೆ ಹಟದಿಂದ ಜನತೆಗೆ ಸಾರಿರಿ; ಎಂದರೆ ಆ ಮಾತಿಗೆ ಅರ್ಥವಾಗುಗುವುದು. ಇಲ್ಲವಾದರೆ ಜನತೆ ಯಾವ ನಡತೆಯನ್ನು ಒಪ್ಪಬೇಕು ? ಹಿಂಸೆಯ ಶಸ್ತ್ರಶಿಕ್ಷಣವಿದ್ದರೆ ಅದನ್ನೆ ಪಡೆಯಬೇಕೆಂದೂ ? ಇಲ್ಲವೆ ಅನಿವಾರ್ಯವಾಗಿ ಅಹಿಂಸಾಮಯರಾಗಬೇಕೆಂದೊ ? ಹೇಗೆ ನಡೆದರೂ ಪರಿಸ್ಥಿತಿಗಾಗಿ ಧೈರ್ಯ, ಅಹಿಂಸೆಗಾಗಿ ವಿಶ್ವಾಸ ಕುಗ್ಗಿ ಹೃದಯದಲ್ಲಿ ಗೊಂದಲವೇಳದಿರದು.

(೧೮–೫–೪೨)

ಕ. ವಿ. ವಿ. ಪರಿಷತ್ತು

ಈ ಸಂಚಿಕೆ ಕೈಸೇರುವುದರೊಳಗಾಗಿ ಬೆಳಗಾಂವಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತಿನ ಅಧಿವೇಶನ ಮುಗಿದಿರುವುದು. ಎಲ್ಲ ಸಮ್ಮೇಳನಗಳಂತೆ ಈ ಸಮ್ಮೇಳನವು ಬರಿಯ 'ಯಶಸ್ವಿ'ಯಾಗಿ ಕೊನೆಗಾಣಲಿಕ್ಕಿಲ್ಲ ಎಂದು ಆಶಿಸುತ್ತೇವೆ. ಯಾವ ಕೆಲಸವಾದರೂ ಯಶಸ್ಸು ದೊರೆತಾಕ್ಷಣ ಕಸದ ಬುಟ್ಟಿಗೆ ಸೇರುವ ರೂಢಿಯಾಗಿದ್ದುದರಿಂದ, ಅಂತಹ ಯಶಸ್ಸು ಈ ಪರಿಷತ್ತಿಗೆ ಬೇಡ. ಅನೇಕ ವಿಚಾರವಂತರೂ ಅನುಭವಿಕರೂ ಸೇರಲಿರುವುದರಿಂದ ನಾವು ಈ ಪರಿಷತ್ತಿನ ಕಡೆ ಆಸೆಯ ಕಣ್ಣುಗಳಿಂದ ನೋಡುತ್ತಿದ್ದೇವೆ. ಸದ್ಯಕ್ಕೆ ಯಾವ ಪೂರ್ವವಿಮರ್ಶೆಯನ್ನೂ ಮಾಡದೆ ಈ ಕಾರ್ಯಕರ್ತರು ಕೆಳಗೆ ಕಾಣಿಸಿದ ಮಹತ್ತ್ವದ ಮಾತುಗಳನ್ನು ಲಕ್ಷ್ಯದಲ್ಲಿಡುವರೆಂದು ನಂಬಿದ್ದೇವೆ.

(೧) ಶಿಕ್ಷಣದ ವಿಷಯದಲ್ಲಿ ಪಕ್ಷ ಪಂಗಡಗಳ ದುರಭಿಮಾನವನ್ನು ತಾಳದೆ ಎಲ್ಲ ಮುಂದಾಳುಗಳು ಕಾರ್ಯತತ್ಪರರಾಗಬೇಕು.

(೨) ವಿಶ್ವವಿದ್ಯಾಲಯದ ಪ್ರಶ್ನೆಯನ್ನು ಕರ್ನಾಟಕದ ಏಕೀಕರಣವನ್ನು ಲಕ್ಷದಲ್ಲಿಟ್ಟುಕೊಂಡೇ ಬಿಡಿಸಬೇಕು ಆಗದಿದ್ದರೆ ಸದ್ಯಕ್ಕೆ ಅದನ್ನು ಬಿಟ್ಟೇಬಿಡಬೇಕು.

(೩) ಪ್ರಾಂತಭಾಷೆಯ (ಎಂದರೆ ಕನ್ನಡ) ಪೋಷಣೆಯನ್ನೂ ಪ್ರಥಮಸ್ಥಾನವನ್ನೂ ಕುರಿತು ನಮ್ಮ ಯೋಜನೆಯನ್ನು ಸಿದ್ಧಪಡಿಸಬೇಕು. ಮತ್ತು

(೪) ಯುದ್ಧದ ನಿಮಿತ್ತವಾಗಿ ಮುಂಬಯಿ-ಪುಣೆಗಳಂತ ನಗರಗಳ ಕಾಲೇಜುಗಳ ವಿದ್ಯಾರ್ಥಿಸಂಖ್ಯೆ ಮತ್ತ ಉಪಯುಕ್ತತೆ ಕಡಿಮೆಯಾಗಬಹುದಾದ ಪರಿಸ್ಥಿತಿಂ ಮಹತ್ತ್ವವನ್ನು ಲಕ್ಷ್ಯದಲ್ಲಿಟ್ಟು ಅಗತ್ಯವಿದ್ದುದನ ಕೂಡಲೆ ಕೈಕೊಳ್ಳಬೇಕು.

(೨೦-೫-೪.

ಜಯಂತಿ ಸಣ್ಣಕತೆಗಳ ಮೇಲಾಟ

(೫ ನೆಯ ವರ್ಷಕ್ಕಾಗಿ)

ಕಳೆದ ಸಲದಂತೆ ಈ ಸಲಕ್ಕೂ ಸಣ್ಣಕತೆಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.
ಕತೆಗಾರರೆಲ್ಲರೂ ಅವಶ್ಯವಾಗಿ ಭಾಗವಹಿಸಬೇಕು.

೨ ಬಹುಮಾನಗಳು

೧ ನೆಯದು ೧೦ ರೂಪಾಯಿ ; ೨ ನೆಯದು ೫ ರೂಪಾಯಿ !

೧೯೪೨ ಅಗಸ್ಟ್ ೨೦ ತಾರೀಖಿನೊಳಗಾಗಿ ಮೇಲಾಟದ ಕತೆಗಳು ಬರಬೇಕು.

‘ ಜಯಂತಿ ’ ಸಣ್ಣಕತೆಗಳ ಮೇಲಾಟದ ನಿಯಮಗಳು

೧. ಕತೆಯು ಸ್ವತಂತ್ರವಾಗಿದ್ದು ಸಾಮಾಜಿಕಸಂಗತಿಯಿಂದ ಕೂಡಿದುದಿರಬೇಕು. ಐತಿಹಾಸಿಕ ಕತೆಗೆ ಈ ಮೇಲಾಟದಲ್ಲಿ ಸ್ಥಾನವಿಲ್ಲ.

೨. ಜಯಂತಿಯ ೫ ಪುಟಗಳಿಗೆ ಮೀರದಷ್ಟು, ಎಂದರೆ ಕೈಬರೆಹದಲ್ಲಿ ಫೂಲ್ಸ್‌ಕ್ಯಾಪ್ ಅರ್ಧಹಾಳೆಗಳು ೧೦ಕ್ಕೆ ಮೀರದಷ್ಟು ಕತೆಯಿರಬೇಕು.

೩. ಅಂದವಾದ ಸ್ಪಷ್ಟವಾದ ಅಕ್ಷರಗಳಿರಬೇಕಲ್ಲದೆ, ಮಾರ್ಜಿನು ಬಿಟ್ಟ ಹಾಳೆಯಲ್ಲಿ ಒಂದೆ ಕಡೆಗೆ ಬರೆದಿರಬೇಕು.

೪. ವಯಸ್ಸಿನ ನಿರ್ಬಂಧವಿಲ್ಲ. ಸಣ್ಣವರು ದೊಡ್ಡವರು ಎಲ್ಲರೂ ಇದರಲ್ಲಿ ಭಾಗ ವಹಿಸಬಹುದು.

೫. “ ಜಯಂತಿ ಸಣ್ಣ ಕತೆಗಳ ಮೇಲಾಟಕ್ಕಾಗಿ ” ಎಂದು ಕೈಬರೆಹದ ಪ್ರತಿಗಳ ಮೇಲೆ ಸ್ಪಷ್ಟವಾಗಿ ಬರೆಯಬೇಕು.

೬. ಒಬ್ಬರೆ ಲೇಖಕರು ತಮ್ಮ ಎರಡು-ಮೂರು ಕತೆಗಳನ್ನೂ ಮೇಲಾಟಕ್ಕಾಗಿ ಕಳುಹಬಹುದು. ಆದರೆ ಎರಡೂ ಬಹುಮಾನಗಳು ಒಬ್ಬರಿಗೇ ದೊರೆಯಲಾರವು.

೭. ಕತೆಯನ್ನು ಕಳುಹಬೇಕಾದ ಕೊನೆಯ ದಿನವೆಂದರೆ ಅಗಸ್ಟ್ ೨೦ನೆಯ ತಾರೀಖು. ಸಪ್ಟಂಬರ್ ಸಂಚಿಕೆಯಲ್ಲಿ ಮೇಲಾಟದ ನಿರ್ಣಯವನ್ನೂ ಬಹುಮಾನ ಪಡೆದ ಕತೆಗಳನ್ನೂ ಪ್ರಕಟಿಸಲಾಗುವುದು.

೮. ಮಿಕ್ಕ ಕತೆಗಳಲ್ಲಿ ಪ್ರಕಟನಾರ್ಹವೆಂದು ಕಂಡುಬಂದ ಕತೆಗಳನ್ನು, ಲೇಖಕರ ಒಪ್ಪಿಗೆ ಪಡೆದು ಜಯಂತಿಯಲ್ಲಿ ಪ್ರಕಟಿಸಲಾಗುವುದು.

೯. ಬಹುಮಾನಕ್ಕೆ ತಕ್ಕ ಕತೆಗಳು ಬಾರದೆ ಇದ್ದಲ್ಲಿ, ಬಹುಮಾನ ಕೊಡದೆ ಇರುವುದಕ್ಕೂ ಬಂದ ಕತೆಗಳಲ್ಲಿ ಒಳ್ಳೆಯದೆಂದು ಎನಿಸಿದುದಕ್ಕೆ ತಕ್ಕ ಮನ್ನಣೆ ಸಲ್ಲಿಸುವುದಕ್ಕೂ ಜಯಂತಿಯ ಸಂಪಾದಕ ಮಂಡಲಿ ತನ್ನ ಕಡೆಗೆ ಅಧಿಕಾರವನ್ನು ಇರಿಸಿಕೊಂಡಿದೆ.

೧೦. ಮೇಲಾಟಕ್ಕಾಗಿ ಕತೆಗಳನ್ನು ಕಳುಹುವವರು ಪ್ರವೇಶಧನವನ್ನೇನೂ ಕೊಡಬೇಕಾಗಿಲ್ಲ. ಕತೆಗಳು ಮರಳಿ ಬೇಕಾದರೆ ಅದಕ್ಕೆ ಅವಶ್ಯವಿದ್ದ ಅಂಚೆಯ ಚೀಟಿ ಕಳುಹಬೇಕು.

ಸಂಪಾದಕರು : ‘ ಜಯಂತಿ ’ ಧಾರವಾಡ

ಮಗುವಿನ ಮೃದು ಚರ್ಮಕ್ಕೆ

★

ಬೇಕಾದುದು!

★

ಶುದ್ಧವಾದ ಮತ್ತು ಮೃದುವಾದ ಒಂದು ಸಾಬೂನು. ಮತ್ತು ಆ ಸಾಬೂನು ಪರಿಮಳಯುಕ್ತವಾಗಿಯೂ ಔಷಧಯುಕ್ತವಾಗಿಯೂ ಇರಬೇಕು. ಮೈಸೂರು ಗಂಧದ ಸಾಬೂನಿನಲ್ಲಿ ಇವೆರಡು ಗುಣಗಳೂ ಕೂಡಿವೆ. ಈ ಸಾಬೂನು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛ ಮಾಡುವುದಲ್ಲದೆ, ಕಾಂತಿಯನ್ನುಂಟು ಮಾಡುತ್ತದೆ.

★

ಮೈಸೂರು ಸ್ಯಾಂಡಲ್ ಸೋಪು



ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.



ಶಿಲಾಪ್ರವಂಗ

SHILAPRAVANG

★

ಯಾವುದೇ ವಿಧವಾದ ಉಷ್ಣತೆಯಿಂದ
ಬಳಲಿರುವ ನಿಮ್ಮ ಹೃದಯ, ಮಿದುಳು,
ರಕ್ತ, ವೀರ್ಯಗಳಿಗೆ, ಆಯಾಸವನ್ನು
ಹೋಗಲಾಡಿಸಿ, ತಂಪು ಕೊಟ್ಟು,
ಶರೀರದಲ್ಲಿ ನವಚೈತನ್ಯವನ್ನು ಹುಟ್ಟಿಸು
ವುದಕ್ಕೆ ಶ್ರೇಷ್ಠವಾದ ಔಷಧವು.

★

ಶ್ರೀಧೂತಪಾಪೇಶ್ವರ
ಪನವೇಲ, ಲಿಮಿಟೆಡ್.

ಪ ನ ವೇ ಲ ಕುಲಾಬಾ

★

**SHRI DHOOTAPAPESHWAR
PANVEL Ltd, PANVEL.**

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರು ವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿರಕ್ಕೆ ಬರೆಯಬೇಕು :—

ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ !
ಹಾಗೆ ಚೆನ್ನಾಗಿರುವುದೆಂದರೇನು ?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು !

ಹಾಗಾಗಬೇಕಾದರೆ ' **ಮುಕುಲ** ' ಉಪಯೋಗಿಸಿರಿ !

ತರುಣ-ತರುಣಿಯರು ಬರಿಯ ಕಣ್ಣು-ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆಯಿದ್ದರೂ ಅದು ವ್ಯರ್ಥವೆನಿಸುವುದು.
ಅದಕ್ಕಾಗಿಯೆ



ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿಯೆಣ್ಣೆಯಲ್ಲಿ ತಯಾರಿಸಲಾದ 'ಮುಕುಲ' ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗರ

ಕರ್ನಾಟಕ ಶಾಖೆ : ಸ್ಟೇಶನ್‌ರೋಡು, ಹುಬ್ಬಳ್ಳಿ.

Printed by V. Y. Jathar at the Karnatak Printing Works, Dharwar. Edited and Published by M. G. Patil at Jayanti Office, Dharwar